Kannada-Hindi Dictionary

A

Kannada - Hindi - Dictionary

Mv

A HINDI-KANNADA DICTIONARY

BY

M. V. JAMBUNATHAN, M.A., B.SC.
Lecturer, Mysore University

WITH A FOREWORD

BY

Hon. Sri. BALA GANGADHAR KHER
Chief Minister to the Government of Bombay

M. V. Seshadri & Co.,
Balepet, Bangalore City

Third Edition] 1951 [*Price Rs.* 7/8/-

PRINTED AT THE SESHADRI PRESS, MYSORE BY
M. V. PRANATHARTHIHARAN, PROPRIETOR.

हिन्दी कन्नड़ कोष
ಹಿಂದೀ ಕನ್ನಡ ನಿಘಂಟು

ಸಂಪಾದಕರು :

ರಾಷ್ಟ್ರಭಾಷಾ ವಿಶಾರದ

ಎಂ. ವಿ. ಜಂಬುನಾಥನ್, ಎಂ.ಎ., ಬಿ.ಎಸ್ಸಿ.

ಅಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ

ಬೊಂಬಾಯಿ ಸರ್ಕಾರದ ಪ್ರಧಾನ ಮಂತ್ರಿಗಳಾದ

ಮಾನ್ಯ ಶ್ರೀ ಬಾಲ ಗಂಗಾಧರ ಖೇರ್

ಇವರ ಮುನ್ನುಡಿಯೊಡನೆ

ಎಂ. ವಿ. ಶೇಷಾದ್ರಿ ಮತ್ತು ಕಂಪೆನಿ,

ಬಳೇಪೇಟೆ, ಬೆಂಗಳೂರು ಸಿಟಿ.

ತೃತೀಯ ಮುದ್ರಣ] 1951 [ಬೆಲೆ: ರೂ. 7-8-0

TO

HIS HIGHNESS

SIR SRI KRISHNARAJA WADIYAR BAHADUR

G. C. S. I., G. B. E.

MAHARAJA OF MYSORE

AND

CHANCELLOR OF THE UNIVERSITY OF MYSORE

THIS WORK IS MOST RESPECTFULLY

DEDICATED

WITH HIS HIGHNESS'S GRACIOUS PERMISSION

BY

The Author

AN ALUMNUS OF THE UNIVERSITY OF MYSORE

AS A HUMBLE TOKEN

OF HIS LOYALTY AND DEVOTION TO

HIS HIGHNESS

AND IN ADMIRATION OF

HIS HIGHNESS'S ABIDING INTEREST IN THE

CULTURAL UNITY OF INDIA

FOREWORD

Mr. M. V. Jambunathan of the University of Mysore has sent a copy of his HINDI-KANNADA DICTIONARY. I have glanced through it and think it will be an extremely useful guide for the Kannada people, who desire to learn Hindi. Mr. Jambunathan is a keen enthusiast of Hindi and has devoted great attention to the spread of the national language in Kannada.

BOMBAY,
4th October, 1939.

B. G. KHER.

ಮುನ್ನುಡಿ

ಬೊಂಬಾಯಿ,

೪ನೇ ಅಕ್ಟೋಬರ್, ೧೯೩೯.

ಮೈಸೂರು ವಿಶ್ವವಿದ್ಯಾನಿಲಯದ ಶ್ರೀಯುತ ಎಂ. ವಿ. ಜಂಬುನಾರ್ಥರವರು ತಮ್ಮ **ಹಿಂದೀ-ಕನ್ನಡ ನಿಘಂಟಿನ** ಒಂದು ಪ್ರತಿಯನ್ನು ನನಗೆ ಕಳುಹಿಸಿಕೊಟ್ಟಿರುವರು. ನಾನು ಅದನ್ನು ನೋಡಿದ್ದಲ್ಲಿ ಅದು ಹಿಂದೀ ಕಲಿಯಲು ಬಯಸುವ ಕನ್ನಡಿಗರಿಗೆ ಅತ್ಯಂತ ಉಪಯೋಗಕರವಾದ ನಿದರ್ಶನ ಗ್ರಂಥವಾಗಿರುವುದೆಂದು ಭಾವಿಸುತ್ತೇನೆ. ಶ್ರೀ ಜಂಬುನಾಥನ್ ರವರು ತೀವ್ರ ಹಿಂದೀ ಉತ್ಸಾಹಿಗಳು ಮತ್ತು ಕನ್ನಡನಾಡಿನಲ್ಲಿ ರಾಷ್ಟ್ರಭಾಷೆಯ ಪ್ರಚಾರಕ್ಕಾಗಿ ಬಹಳ ಶ್ರಮಪಟ್ಟಿರುವರು.

ಬಿ. ಜಿ. ಖೇರ್.

Select Opinions

Carlton House, Bangalore.
3rd December, 1939.

I am interested to learn that Messrs M. V. Seshadri and Company, Dealers in Hindi books in Bangalore City have arranged for a formal ceremony on the 5th instant to mark the publication of the 'HINDI-KANNADA DICTIONARY' of which Mr. M. V. Jambunathan of the Mysore University is the author.

I should like to congratulate the author upon the publication of his book which, I trust, will be found useful by all who are interested in Hindi.

I wish the book a wide circulation and Messrs Seshadri and Company much prosperity.

Mirza M. Ismail,
DEWAN OF MYSORE.

Rukn-ul-mulk **Abdul Wajid, Esq.,**
Revenue & Muzrai Commissioner in Mysore, and
President of the Hindi-Kannada Dictionary
Publication Sabha, says:-

I thank you sincerely for giving me an opportunity to express my high appreciation of the monumental work done by Mr. Jambunathan in encouraging the study of Hindi amongst the Kannada knowing people by the compilation of the HINDI-KANNADA DICTIONARY.

ಪರಿವಿಡಿ

ಪ್ರಸ್ತಾವನೆ

ಹಿಂದೂಸ್ಥಾನದ ರಾಷ್ಟ್ರಭಾಷೆಯಾದ ಹಿಂದಿಯ ಪ್ರಚಾರವು ಕರ್ನಾಟಕವಲ್ಲಿ ಪ್ರಬಲವಾಗಿ, ಈ ಭಾಷೆಯನ್ನು ಕಲಿಯುವ ಕನ್ನಡಿಗರ ಸಂಖ್ಯೆಯು ಹೆಚ್ಚಿದಹಾಗೆಲ್ಲಾ ಹಿಂದೀ-ಕನ್ನಡ ನಿಘಂಟಿನ ಆವಶ್ಯಕತೆಯೂ ಹೆಚ್ಚುತ್ತಲೇ ಬಂದಿದೆ. ಮೈಸೂರು ಸಂಸ್ಥಾನದ ವಿದ್ಯಾ ಸಂಸ್ಥೆಗಳಲ್ಲಿ ಹಿಂದೀ ಭಾಷೆಗೆ ಮೊದಲಿನಿಂದಲೂ ಆಶ್ರಯ ದೊರೆತಿದೆ. ಇತ್ತೀಚೆಗೆ ಬ್ರಿಟಿಷ್ ಕರ್ನಾಟಕದ ಶಾಲೆಗಳಲ್ಲಿ ಹಿಂದೀ ಭಾಷೆಯ ಶಿಕ್ಷಣವು ಅನಿವಾರ್ಯವಾಗಿದೆ. ಹಿಂದೀ ಮಾತುಗಳ ಅರ್ಥವನ್ನು ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲಿ ತಿಳುಹಿಸುವ ನಿಘಂಟುಗಳು ಈಗಾಗಲೇ ಹೊರಬಿದ್ದಿವೆ. ಆದರೆ ಕನ್ನಡದಲ್ಲಿ ಅಂತಹ ಬ್ದಕೋಶವು ಇಲ್ಲದಿದ್ದುದು ದೊಡ್ಡದೊಂದು ಕೊರತೆಯೇ ಸರಿ! ಈ ಕೊರತೆಯನ್ನು ನೀಗಿಸುವ ಸಲುವಾಗಿ ಹಿಂದೀ-ಕನ್ನಡ ನಿಘಂಟೊಂದನ್ನು ರಚಿಸಬೇಕೆಂದೆಣಿಸಿ ಎಂಟು ವರ್ಷಗಳ ಹಿಂದೆ (೧೯೩೧ರಲ್ಲಿ) ಈ ಉದ್ಯಮಕ್ಕುಪಕ್ರಮಿಸಿದೆನು.

ಮೊದಲು ಸುಮಾರು ೧೫ ಸಾವಿರ ಶಬ್ದಗಳನ್ನೊಳಗೊಂಡ ಒಂದು ಪುಟ್ಟಶಬ್ದಕೋಶವನ್ನು ೨-೩ ವರ್ಷಗಳಲ್ಲಿಯೇ ಸಿದ್ಧಪಡಿಸಿದೆನು. ನಿಘಂಟೇನೋ ಸಿದ್ಧವಾಯಿತು. ಆದರೆ ಅದು ಅಷ್ಟು ಸಮರ್ಪಕವಾಗಿರುವಂತೆ ಕಂಡುಬರಲಿಲ್ಲ. ಕೆಲವು ಹಿಂದೀ ಶಬ್ದಗಳಿಗೆ ಸರಿಯಾದ ಕನ್ನಡ ಮಾತುಗಳೇ ಸಿಕ್ಕುತ್ತಿರಲಿಲ್ಲ; ಇಂಗ್ಲಿಷ್-ಕನ್ನಡ ನಿಘಂಟುಗಳಿಂದ ಹೆಚ್ಚು ಸಹಾಯವೂ ದೊರೆಯಲಿಲ್ಲ; ಸೂಕ್ಷ್ಮಭೇದಗಳನ್ನು ಕನ್ನಡದಲ್ಲಿ ತೋರಿಸುವುದು ಅಸಾಧ್ಯವಾಯಿತು; ಕೆಲವು ಸಂದರ್ಭಗಳಲ್ಲಿ ಅರ್ಥವನ್ನು ಕನ್ನಡದಲ್ಲಿ ವಿವರಿಸುವುದೂ ಸಹ ಆಗದಂತಾಯಿತು.

ಕಾಲ ವಿಳಂಬವಾದರೂ ನಿಘಂಟು ಮಾತ್ರ ಪೂರ್ಣವಾಗಿಯೂ, ಪ್ರಾಮಾಣಿಕವಾಗಿಯೂ ಉಪಯೋಗಕರವಾಗಿಯೂ ಇರಬೇಕೆಂಬ ಉದ್ದೇಶವಿಂದ ಅದರ ಪ್ರಕಟಣೆಯನ್ನು ಸದ್ಯಃ ನಿಲ್ಲಿಸಿ, ಕನ್ನಡ ಮಾತುಗಳನ್ನು ಶೇಖರಿಸತೊಡಗಿದೆನು. ಇದಕ್ಕಾಗಿ ಕನ್ನಡನಾಡಿನ ಬೇರೆಬೇರೆ ಕಡೆಗಳಲ್ಲಿ ಪ್ರಕಟವಾದ ಪುಸ್ತಕಗಳು, ವೃತ್ತಪತ್ರಿಕೆಗಳು, ಜಾಹೀರಾತುಗಳು ಮೊದ

ಲಾದುವನ್ನು ಓದಿನೋಡಿ ಅವುಗಳಲ್ಲಿ ಬಳಸಿರುವ ಮಾತುಗಳ ಅರ್ಥವನ್ನು ವಿಮರ್ಶಿಸಿ, ತುಲನಮಾಡಿ ಯಾವ ಹಿಂದೀ ಶಬ್ದಗಳಿಗೆ ಅವು ಸರಿಗಟ್ಟುತ್ತವೆ ಎಂಬುದನ್ನು ಗೊತ್ತುಹಚ್ಚಬೇಕಾಯಿತು ಇಷ್ಟರಲ್ಲಿಯೇ "हिन्दी मुहावरा कोश", "तर्की-हिन्दी कोश" ಎಂಬ ಎರಡು ಹಿಂದೀ ನಿಘಂಟುಗಳನ್ನೂ "ಬಾಲ ತ್ರಿಕೋಣಮಿತಿ" ಎಂಬ ಕನ್ನಡ ಗ್ರಂಥವನ್ನೂ ರಚಿಸಿ ಪ್ರಕಟಗೊಳಿಸಿದೆನು. ಇದರಿಂದ ಪಡೆದ ಅನುಭವವನ್ನು ಈ ಹಿಂದೀ ಕನ್ನಡ ನಿಘಂಟಿನ ರಚನಾಕಾರ್ಯದಲ್ಲಿ ಪೂರ್ಣವಾಗಿ ಉಪಯೋಗಿಸಿಕೊಂಡಿದ್ದೇನೆ. ಇದರ ಫಲವಾಗಿ ಹಿಂದೀ ಶಬ್ದಗಳ ಆಯ್ಕೆಯೂ ಉಪಯೋಗಕರವಾಗಿರುವುದಲ್ಲದೆ ಕನ್ನಡ ಅರ್ಥಗಳೂ ಪ್ರಾಮಾಣಿಕವಾಗಿಯೂ, ಸಮುಚಿತವಾಗಿಯೂ ಇವೆಯೆಂದು ಭಾವಿಸುತ್ತೇನೆ ಮತ್ತು ಕನ್ನಡನಾಡಿನವರೆಲ್ಲರಿಗೂ ಅರ್ಥವಾಗುವಂತಿವೆಯೆಂದು ನಂಬಿದ್ದೇನೆ. ಇಷ್ಟು ದೊಡ್ಡ ಉದ್ಯಮದಲ್ಲಿ ಕೆಲವು ಕುಂದು ಕೊರತೆಗಳಿರಬಹುದು; ಮುದ್ರಣದ ತಪ್ಪುಗಳೂ ಹಲವು ಇರಬಹುದು. ವಾಚಕರು ದಯೆಯಿಟ್ಟು ನನಗೆ ತಿಳಿಯಪಡಿಸಿದರೆ ಅಂತಹ ತಪ್ಪುಗಳನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಲಾಗುವುದು.

ಈ ಗ್ರಂಥಕ್ಕೆ ಮುನ್ನುಡಿಯನ್ನು ಬರೆದು ದಯಪಾಲಿಸಿದ್ದಕ್ಕಾಗಿ ಬೊಂಬಾಯಿ ಸರ್ಕಾರದ ಪ್ರಧಾನ ಮಂತ್ರಿಗಳಾದ ಮಾನ್ಯ ಶ್ರೀ ಬಾಲ ಗಂಗಾಧರ ಖೇರ್ ಅವರಿಗೆ ನಾನು ಚಿರ ಋಣಿ. ರಾಜ್ಯಾಡಳಿತದ ಗುರುತರವಾದ ಕಾರ್ಯಗಳಲ್ಲಿ ಮುಳುಗಿರುವ ಮಂತ್ರಿವರ್ಯರು ನಾನು ಬೇಡಿದ ಕೂಡಲೆ ಒಪ್ಪಿ ಮುನ್ನುಡಿಯನ್ನಿತ್ತುದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ಹಿಂದೀ ಮತ್ತು ಕನ್ನಡಭಾಷೆಗಳೆರಡರಲ್ಲೂ ಪರಿಶ್ರಮವುಳ್ಳ ಕನ್ನಡನಾಡಿನ ಪ್ರಮುಖ ದೇಶಭಕ್ತರಾದ ಶ್ರೀ ಮೂರ್ಣ ಖೇರ್ ಅವರ ಆಶೀರ್ವಚನದೊಡನೆ ಈ ಗ್ರಂಥವು ಪ್ರಕಟವಾಗುತ್ತಿರುವುದೆಂಬ ಹೆಮ್ಮೆಯಿಂದಲೂ, ಸಂತೋಷದಿಂದಲೂ ಈ ಕೃತಿಯನ್ನು ಕನ್ನಡಮಾತೆಯ ಅಡಿದಾವರೆಗಳಲ್ಲಿ ಅರ್ಪಿಸುತ್ತೇನೆ.

ಅಕ್ಟೋಬರ್, 1939. **ಎಂ. ವಿ. ಜಂಬುನಾಥನ್**

ಉಪೋದ್ಘಾತ

ಹಿಂದೀ ಭಾಷೆ

ಹಿಂದೀ ಭಾಷೆಯು ಪ್ರಾಕೃತದ ಅಪಭ್ರಂಶಗಳಿಂದ ಹುಟ್ಟಿತೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ. ಈ ಭಾಷೆಯು ಹುಟ್ಟಿದಾಗ (ಅಂದರೆ ಸುಮಾರು ಕ್ರಿ. ಶ ೧೨ನೆಯ ಶತಮಾನದಲ್ಲಿ) ಇದನ್ನು "ಭಾಷೆ" ಎಂದೇ ಕರೆಯುತ್ತಿದ್ದರು. ಮುಸಲ್ಮಾನರು ಇಂಡಿಯಾ ದೇಶಕ್ಕೆ ಬಂದಮೇಲೆ ಈ ಭಾಷೆಗೆ "ಹಿಂದವಿ" (हिन्दवी, ಅಂದರೆ ಹಿಂದುಗಳ ಭಾಷೆ) ಎಂಬ ಹೆಸರನ್ನು ಕೊಟ್ಟರು. ಹಿಂದಿಯ ಪ್ರಾಚೀನ ಕವಿಯಾದ ಅಮೀರ್ ಖುಸ್ರೋ ಎಂಬಾತನೂ ತರುವಾಯ ಉದಯಿಸಿದ ಮಲಿಕ್ ಮಹಮ್ಮದ್ ಜಾಯಿಸಿ ಎಂಬ ಮುಸಲ್ಮಾನ್ ಕವಿಯೂ ಇದನ್ನು "ಹಿಂದವೀ" ಎಂತಲೇ ಕರೆಯುತ್ತಿದ್ದರೆಂಬುದಕ್ಕೆ ಪ್ರಮಾಣಗಳು ಸಾಕಷ್ಟಿವೆ.

ವಿದೇಶದಿಂದ ಬಂದ ಮಹಮ್ಮದೀಯರು (ಇವರಲ್ಲಿ ಅನೇಕರು ದಂಡಾಳುಗಳಿದ್ದರು) ತಮ್ಮ ನಿತ್ಯದ ವ್ಯವಹಾರಗಳಲ್ಲಿ ಈ ಹಿಂದೀ ಭಾಷೆಯನ್ನು ಬಳಸುತ್ತಿದ್ದರು. ಆ ಕಾಲದಲ್ಲಿ ಫಾರಸಿ ಭಾಷೆಯು ರಾಜಭಾಷೆಯಾಗಿದ್ದುದರಿಂದ ಹಲವಾರು ಫಾರಸಿ ಶಬ್ದಗಳೂ ಅವುಗಳ ಜೊತೆಯಲ್ಲೇ ಕೆಲವು ಅರಬ್ಬಿ ಮಾತುಗಳೂ ಅವರು ಆಡುತ್ತಿದ್ದ ಹಿಂದೀ ಭಾಷೆಯಲ್ಲಿ ಬೆರತುಹೋಗಿದ್ದುವು. ಹೀಗೆ ಫಾರಸಿ ಮತ್ತು ಅರಬ್ಬಿ ಮಾತುಗಳು ಬೆರತಿದ್ದ ಹಿಂದೀ ಭಾಷೆಗೆ "ಉರ್ದೂ" ಎಂಬ ಹೆಸರನ್ನು ಕೊಟ್ಟರು. "ಉರ್ದೂ" ಎಂಬ ಶಬ್ದಕ್ಕೆ ದಂಡು ಅಥವಾ ಪಾಳೆಯ ಎಂದರ್ಥ. ದಂಡಿನವರು ಆಡುತ್ತಿದ್ದ ಭಾಷೆಗೆ "ಉರ್ದೂ" ಎಂಬ ಹೆಸರಾಯಿತು.

ಫಾರಸಿ ಲಿಪಿಯು ಆಗ ಹೆಚ್ಚು ಪ್ರಚಾರದಲ್ಲಿದ್ದ ಕಾರಣ ಈ ಉರ್ದೂ ಭಾಷೆಯನ್ನು ಫಾರಸಿ ಲಿಪಿಯಲ್ಲಿಯೇ ಬರೆಯತೊಡಗಿದರು. ಬರವಣಿಗೆಯ ವ್ಯತ್ಯಾಸದಿಂದ ಹಿಂದೀ ಮತ್ತು ಉರ್ದೂ ಎಂಬ ಎರಡು ಪ್ರಭೇದಗಳಾದುವು. ಲಿಪಿ ಭೇದವನ್ನು ಬಿಟ್ಟರೆ ಹಿಂದೀ-ಉರ್ದೂಗಳಲ್ಲಿ ಮತ್ತಾವ ಬಗೆಯ ವ್ಯತ್ಯಾಸವೂ ಇಲ್ಲವೆನ್ನಬಹುದು. ವ್ಯಾಕರಣ, ಭಾಷಾಸಂಪ್ರದಾಯ, ಗಾದೆ ಮೊದಲಾದುವುಗಳು ಎರಡಕ್ಕೂ ಒಂದೇ. ಈ ಕಾರಣಗಳಿಂದ ಇವೆರಡೂ ಒಂದೇ ಭಾಷೆಯ ಎರಡು ರೂಪಗಳೆಂದು ಹೇಳಿದರೆ ತಪ್ಪಾಗಲಾರದು. ಫಾರಸಿ-ಅರಬ್ಬಿ ಶಬ್ದಗಳಾಗಲಿ, ಸಂಸ್ಕೃತ ಶಬ್ದಗಳಾಗಲಿ ಹೆಚ್ಚಾಗಿಲ್ಲದಿರುವ ಹಿಂದೀ ಅಥವಾ ಉರ್ದೂವನ್ನು ಇತ್ತೀಚೆಗೆ "ಹಿಂದುಸ್ತಾನಿ" ಎಂಬ ಹೆಸರಿನಿಂದ ಕರೆಯುವರು

ಈ ನಿಘಂಟಿನಲ್ಲಿ ಹಿಂದೀ, ಉರ್ದೂ ಇವೆರಡರಲ್ಲೂ ಉಪಯೋಗವಾಗುವ ಸಾಮಾನ್ಯ ಶಬ್ದಗಳನ್ನೆಲ್ಲಾ ಕೊಟ್ಟಿದೆ. ಆದಕಾರಣ ಇದನ್ನು ಹಿಂದೀ-ಕನ್ನಡ ನಿಘಂಟಾಗಿ ಮಾತ್ರವೇ ಅಲ್ಲದೆ ಉರ್ದೂ-ಕನ್ನಡ ನಿಘಂಟಾಗಿಯೂ ಸಹ ಬಳಸಬಹುದು.

ಹಿಂದೀ ಭಾಷೆಯ ವೈಶಿಷ್ಟ್ಯಗಳು

ಈ ನಿಘಂಟನ್ನು ಬಳಸುವವರು ಹಿಂದೀ ಭಾಷೆಯ ಕೆಲವು ವೈಶಿಷ್ಟ್ಯಗಳನ್ನು ನೆನಪಿನಲ್ಲಿಡಬೇಕಾಗುವುದು.

1. ಹಿಂದೀಭಾಷೆಯನ್ನಾಡುವವರ ಉಚ್ಚಾರಣೆಗೆ ಅನುಗುಣವಾಗಿ ಶಬ್ದಗಳ ಮೂಲರೂಪದಲ್ಲಿ ಕೆಲವು ಬದಲಾವಣೆಗಳಾಗುತ್ತವೆ. ಉದಾಹರಣೆಗಾಗಿ,

ಮೂಲರೂಪ– विदा योग ज़्यादह दुविधा

ಹಿಂದೀರೂಪ– बिदा जोग ज़्यादा दुबिधा, दुबधा.

2. ಕೆಲವು ಉರ್ದು ಶಬ್ದಗಳನ್ನು ಹಿಂದಿಯಲ್ಲಿ ಹಲವು ಬಗೆಯಾಗಿ ಬರೆಯುತ್ತಾರೆ. ಉದಾಹರಣೆಗಾಗಿ,

फ़वारा, फ़व्वारा, फ़ौवारा; फ़ज़ूल, फ़िज़ूल, फ़ुज़ूल
माफ़िक़, मुआफ़िक़, मुवाफ़िक़; इमतहान, इम्तहान, इम्तिहान;
एक़बाल, इक़बाल; बरकत, बर्कत.

ಪ್ರತಿಯೊಂದು ಶಬ್ದದ ಶುದ್ಧವಾದ ಅಥವಾ ಪ್ರಾಮಾಣ್ಯವಾದ ರೂಪವನ್ನು ಈ ನಿಘಂಟಿನಲ್ಲಿ ಕೊಟ್ಟಿದೆ. ಯಾವುದಾದರೊಂದು ಶಬ್ದವು ನಿಘಂಟಿನಲ್ಲಿ ಸಿಕ್ಕದಿದ್ದರೆ ಅದರ ಬೇರೆ ರೂಪವನ್ನು ನೋಡಿ ತಿಳಿಯಬಹುದು. ಉದಾಹರಣೆಗಾಗಿ मुआफ़ी ಶಬ್ದವನ್ನು ನೋಡಬೇಕಾದಾಗ ಅದರ ಸ್ಥಾನದಲ್ಲಿರುವ मुआफ़, वि. = माफ़ ಎಂಬ ಸೂಚನೆಯಿಂದ मुआफ़, मुआफ़िक़, मुआफ़ी ಇವುಗಳಿಗೆ ಬದಲಾಗಿ माफ़, माफ़िक़, माफ़ी ಎಂಬ ಶಬ್ದಗಳನ್ನು ನೋಡತಕ್ಕದ್ದು.

3. ಹಿಂದೀ ಭಾಷೆಯಲ್ಲಿ ಪ್ರೇರಣಾರ್ಥಕ ಮತ್ತು ದ್ವಿಪ್ರೇರಣಾರ್ಥಕ ಕ್ರಿಯೆಗಳು ಬಹಳವಾಗಿ ಉಪಯೋಗವಾಗುತ್ತವೆ. ಉದಾಹರಣೆಗಾಗಿ,

पढ़ना = ಓದು, पढ़ाना = ಓದಿಸು, पढ़वाना = ಓದಿಸುವಂತೆ ಮಾಡು.

पीना = ಕುಡಿ, पिलाना = ಕುಡಿಸು, पिलवाना = ಕುಡಿಸುವಂತೆ ಮಾಡು.

जीतना = ಜಯಿಸು, जिताना = ಜಯಿಸುವಂತೆ ಮಾಡು, जितवाना = ?

ಕನ್ನಡದಲ್ಲಿ ದ್ವಿಪ್ರೇರಣಾರ್ಥಕ ಕ್ರಿಯೆಗಳು ಇಲ್ಲವಾದ್ದರಿಂದ ಅಂತಹ ಹಿಂದೀ ಪದಗಳ ಅರ್ಥಗಳನ್ನು ಕನ್ನಡದಲ್ಲಿ ಕೊಡುವ ಸಾಹಸ ಮಾಡದೆ, ಇಂಥಿಂಥ ಕ್ರಿಯೆಗಳ ಪ್ರೇರಣಾರ್ಥಕರೂಪ ಎಂಬುವನ್ನು ಮಾತ್ರ ಸೂಚಿಸಿದೆ. ಇದರಿಂದ ಆ ಶಬ್ದಗಳ ಸರಿಯಾದ ಅರ್ಥಗಳನ್ನು ಓದುಗರು ಸುಲಭವಾಗಿ ತಿಳಿಯಬಹುದಾಗಿದೆ.

4. ಹಿಂದೀ ಭಾಷೆಯಲ್ಲಿ ನಪುಂಸಕಲಿಂಗವು ಇಲ್ಲವಾದುದರಿಂದ ಅಚೇತನ ವಸ್ತುಗಳ ಹೆಸರುಗಳಲ್ಲಿ ಕೆಲವು ಪುಲ್ಲಿಂಗದಲ್ಲೂ, ಕೆಲವು ಸ್ತ್ರೀಲಿಂಗದಲ್ಲೂ ಉಪಯೋಗವಾಗುತ್ತವೆ. ನಾಮಪದಗಳ ಲಿಂಗವನ್ನು ಸೂಚಿಸಲು ಶಬ್ದದ ಪಕ್ಕದಲ್ಲಿ ಪು. (= ಪುಲ್ಲಿಂಗ), ಸ್ತ್ರೀ. (= ಸ್ತ್ರೀಲಿಂಗ) ಎಂಬ ಸಂಕೇತಗಳನ್ನು ಸೇರಿಸಿದೆ.

5. ಕೆಲವು ಜಡಪದಾರ್ಥಗಳಿಗೆ ಹಿಂದಿಯಲ್ಲಿ ಎರಡೆರಡು ಹೆಸರುಗಳಿವೆ. ಆಕಾರದಲ್ಲಿ ದೊಡ್ಡದಕ್ಕೆ ಪುಲ್ಲಿಂಗ ಶಬ್ದವನ್ನೂ, ಕಿರಿಯದಕ್ಕೆ ಸ್ತ್ರೀಲಿಂಗ ಶಬ್ದವನ್ನೂ ಉಪಯೋಗಿಸುತ್ತಾರೆ. ಉದಾಹರಣೆಗಾಗಿ,

चिट्ठा, ಪು. ದೊಡ್ಡ ಕಾಗದ, ಖಾತೆ. चिट्ठी, ಸ್ತ್ರೀ. ಚಿಕ್ಕ ಕಾಗದ, ಚೀಟಿ.
रोट, ಪು. ದೊಡ್ಡ ರೊಟ್ಟಿ. रोटी, ಸ್ತ್ರೀ. ಚಿಕ್ಕ ರೊಟ್ಟಿ.
खाट, ಪು. ದೊಡ್ಡ ಮಂಚ. खटिया, ಸ್ತ್ರೀ. ಚಿಕ್ಕ ಮಂಚ.
कटोरा, ಪು. ದೊಡ್ಡ ಬಟ್ಟಲು, ಬೋಗುಣಿ. कटोरी, ಸ್ತ್ರೀ. ಚಿಕ್ಕ ಬಟ್ಟಲು.

6. ಮತ್ತೆ ಕೆಲವು ಕಡೆ, ಗಂಡಸರ ಉಪಯೋಗಕ್ಕಾದರೆ ಪುಲ್ಲಿಂಗ ರೂಪವನ್ನೂ, ಹೆಂಗಸರ ಉಪಯೋಗಕ್ಕಾದರೆ ಸ್ತ್ರೀಲಿಂಗರೂಪವನ್ನೂ ಬಳಸುವುದುಂಟು.

अंगा, ಪು. ನಿಲುವಂಗಿ, ಅಂಗರೇಖು. अंगिया, ಸ್ತ್ರೀ. ರವಿಕೆ, ಕುಪ್ಪಸ.
चोला, ಪು. ಉದ್ದವಾದ ಅಂಗಿ. चोली, ಸ್ತ್ರೀ. ರವಿಕೆ, ಕುಪ್ಪಸ.
सुथना, ಪು. ಷರಾಯಿ, ಇಜಾರು. सुथनी, ಸ್ತ್ರೀ. ಹೆಂಗಸರ ಷರಾಯಿ.
जूता, ಪು. ಜೋಡು. जूती, ಸ್ತ್ರೀ. ಹೆಂಗಸರ ಜೋಡು.

7. ಹಿಂದೀ ಭಾಷೆಯಲ್ಲಿ ಪುನರುಕ್ತ ಸಂಯುಕ್ತ ಕ್ರಿಯೆಗಳ ಪ್ರಯೋಗವು ಗಮನಾರ್ಹವಾದುದು. ಸಮಾನಾರ್ಥದ ಅಥವಾ ಸಮಾನಧ್ವನಿಯ ಎರಡು ಕ್ರಿಯೆಗಳು ಸೇರಿ ಒಟ್ಟಾಗಿ ಉಪಯೋಗಿಸಲ್ಪಡುತ್ತವೆ. ಉದಾಹರಣೆಗಾಗಿ,

मिलना जुलना, बोलना चालना, खाना पीना, घूमना फिरना, पूछना ताछना, मांगना तांगना, अछताना पछताना.

[ಈ ಉದಾಹರಣೆಗಳಲ್ಲಿ ताछना, तांगना, अछताना ಇವುಗಳಿಗೆ ಅರ್ಥವಿಲ್ಲ; ಕೇವಲ ಪ್ರಾಸಕ್ಕಾಗಿ ಸೇರಿಕೊಂಡಿವೆ]

ಇಂತಹ ಪುನರುಕ್ತ ಕ್ರಿಯೆಗಳಲ್ಲಿರುವ ಎರಡು ಕ್ರಿಯೆಗಳೂ (ಕಾಲ, ವಚನ ಮತ್ತು ಲಿಂಗಕ್ಕನುಸಾರವಾಗಿ) ರೂಪಾಂತರ ಹೊಂದುತ್ತವೆ. ಉದಾಹರಣೆಗಾಗಿ,

मिलता जुलता, बोलते चालते, खाता पीता, घूमती फिरती.

ಹಿಂದಿಯಲ್ಲಿ ಬರುವ ಪುನರುಕ್ತ ಸಂಯುಕ್ತ ಕ್ರಿಯೆಗಳನ್ನು ಕನ್ನಡಿಸ ಬೇಕಾದರೆ ಕೆಲವು ಸಂದರ್ಭಗಳಲ್ಲಿ ಆ ಕ್ರಿಯೆಗಳಲ್ಲೊಂದರ ಕನ್ನಡ ಅರ್ಥವನ್ನು ಬರೆದು, ಅದಕ್ಕೆ "ಆಡು" ಎಂಬ ಸಹಾಯಕ ಕ್ರಿಯೆಯನ್ನು ಸೇರಿಸಿದರೆ ಪೂರ್ಣ ಅರ್ಥ ಬರುವುದು. ಉದಾಹರಣೆಗಾಗಿ,

दौड़ना-धूपना = ಓಡಾಡು, उछलना-कूदना = ನೆಗೆದಾಡು,

हिलना-डुलना = ಅಲುಗಾಡು, खोजना-खाजना = ಹುಡುಕಾಡು.

ಈ ನಿಘಂಟಿನ ಕೆಲವು ವಿಶೇಷಾಂಶಗಳು

1. ಹಿಂದಿಯಲ್ಲಿ ಪ್ರಯೋಗವಾಗುವ ಕೆಲವು ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥವು ಬೇರೆಯಾಗಿರುವುದರಿಂದ ಅಂತಹ ಸಂಸ್ಕೃತ ಶಬ್ದಗಳನ್ನೂ ಈ ನಿಘಂಟಿನಲ್ಲಿ ಸೇರಿಸಿದೆ. ಉದಾಹರಣೆಗಾಗಿ,

संतोष ಶಬ್ದಕ್ಕೆ ಹಿಂದಿಯಲ್ಲಿ "ತೃಪ್ತಿ", ಕನ್ನಡದಲ್ಲಿ "ಆನಂದ" ಎಂದೂ, संप्रदाय ಶಬ್ದಕ್ಕೆ ಹಿಂದಿಯಲ್ಲಿ " ಜಾತಿ, ಕೋಮು " ಎಂದೂ, ಕನ್ನಡದಲ್ಲಿ " ಪದ್ಧತಿ " ಎಂದೂ ಅರ್ಥವಾಗುತ್ತದೆ.

2. ಕೆಲವು ಸಂಸ್ಕೃತ ಶಬ್ದಗಳಿಗೆ ಹಿಂದೀ ಕನ್ನಡ ಇವೆರಡರಲ್ಲೂ ಒಂದೇ ಅರ್ಥವಾದರೂ ಹಿಂದಿಯಲ್ಲಿ ಅವುಗಳ ಪ್ರಯೋಗವು ಯಾವ ಲಿಂಗದಲ್ಲಿ ಎಂಬುದನ್ನು ಸೂಚಿಸಲು ಆ ಶಬ್ದಗಳನ್ನೂ ಸಹ ಈ ನಿಘಂಟಿನಲ್ಲಿ ಸೇರಿಸಿದೆ. ಉದಾಹರಣೆಗಾಗಿ, तिमिंगिल, पु. लज्जा, स्त्री. पाठ, पु. विवाह, पु.

3. ಹಿಂದೀ ಭಾಷೆಯಲ್ಲಿ ಅನುಸ್ವಾರದ ಪ್ರಯೋಗದ ಬಗ್ಗೆ ಯಾವ ವಿಧವಾದ ವ್ಯವಸ್ಥೆಯೂ ಇರುವಂತೆ ತೋರುವುದಿಲ್ಲ. गूंथना, गूथना ಇವೆರಡೂ ಸಾಧುವೇ. ಇದರಂತೆಯೇ मुहांसा, मुहासा; गुंथना, गुथना; पाँव, पावँ ಮುಂತಾದುವು. ಈ ಸಂದರ್ಭಗಳಲ್ಲಿ ಸೌಕರ್ಯಕ್ಕಾಗಿ ಅಂತಹ ಶಬ್ದಗಳ ಎರಡು ರೂಪಗಳನ್ನೂ ನಿಘಂಟಿನಲ್ಲಿ ಕೊಟ್ಟಿದೆ.

4. ಹಿಂದೀ ಶಬ್ದಗಳ ಅರ್ಥಗಳನ್ನು ಮೊದಲು ಕನ್ನಡದಲ್ಲಿ ವಿವರಿಸಿ, ಅನಂತರ ಸಮೀಚೀನವಾದ ಕನ್ನಡ ಪದಗಳನ್ನು ಕೊಟ್ಟಿದೆ. ಉದಾಹರಣೆಗಾಗಿ,

अंगुश्ताना, पु. ಹೊಲಿಯುವಾಗ ಬೆರಳಿಗೆ ಹಾಕಿಕೊಳ್ಳುವ ಕಬ್ಬಿಣದ ಅಥವಾ ಹಿತ್ತಾಳೆಯ ಕವಚ, ಅಂಗುಲಿತ್ರಾಣ, ಅಂಗುಸ್ತಾನಿ, ಸೂಜಿಗಿತ್ತು.

केका, स्त्री. ನವಿಲಿನ ಕೂಗು, ಕೇಗು.

सिगी, स्त्री. ರಕ್ತ ಹೀರುವ ಕೊಳವೆ, ಉಸಿರು ಬುರುಡೆ, ಶೃಂಗ, ರಕ್ತಶೋಷಕ.

5. ಕನ್ನಡದಲ್ಲಿ ಅರ್ಥ ಬರೆಯುವಾಗ ಕನ್ನಡನಾಡಿನ ಬೇರೆಬೇರೆ ಕಡೆಗಳಲ್ಲಿ ಬಳಕೆಯಲ್ಲಿರುವ ಪರ್ಯಾಯ ಶಬ್ದಗಳನ್ನೆಲ್ಲಾ ಸೇರಿಸಿದೆ. ಉದಾಹರಣೆಗಾಗಿ,

क़िस्त, स्त्री. ಕಂತು, ಹಪ್ತೆ, ಕಿಸ್ತು.
नीलाम, पु. ಹರಾಜು, ಏಲಂ, ಲಿಲಾವು
बंधक, पु. ಒತ್ತೆ, ಅಡವು, ಈಡು, ದೀಡು, ಗಿರವಿ.

मवेशी, स्त्री. ದನಕರು, ಚತುಷ್ಪಾದಿ, ಕಾಲ್ನಡೆ, ದನಗಂಟೆ, ಗೋಕಾಯಿ, ಜಾನುವಾರು.
मुख़द्दमा, पु. ಮೊಕದ್ದಮೆ, ಖಟ್ಲೆ.

ಇದರಿಂದ ವಾಚಕರಿಗೆ ಕನ್ನಡದಲ್ಲಿಯ ಪರ್ಯಾಯ ಶಬ್ದಗಳ ಪರಿಚಯವಾಗುವುದಲ್ಲದೆ ಇಡೀ ಕರ್ಣಾಟಕದವರಿಗೆಲ್ಲ ಅರ್ಥವು ತಿಳಿಯುವಂತಿದೆ.

6. कुछ, कोई, सा, ही ಮುಂತಾದ ಕೆಲವು ಹಿಂದೀ ಶಬ್ದಗಳ ಅರ್ಥವನ್ನು ಸ್ಪಷ್ಟಪಡಿಸಲು ಅವುಗಳ ಪ್ರಯೋಗಗಳನ್ನೂ ಸಹ ತೋರಿಸಿದೆ.

7. ಹಿಂದಿಯಲ್ಲಿ ಉಪಯೋಗಿಸುವ ಅವಳಿ ನುಡಿಗಳನ್ನೂ ಅದಕ್ಕೆ ಸರಿಹೋಲುವ ಕನ್ನಡ ಅವಳಿ ನುಡಿಗಳನ್ನೂ ಕೊಡಲು ಪ್ರಯತ್ನಿಸಿದೆ. ಉದಾಹರಣೆಗಾಗಿ,

कपड़ा लत्ता = ಬಟ್ಟೆಬರೆ, ಉಡಿಗೆ ತೊಡಿಗೆ.
खेती बारी = ಸಾಗು ಸಂತು.
पूजा पाठ = ಪೂಜೆ ಪುರಸ್ಕಾರ.

घर बार = ಮನೆ ಮಠ, ಮನೆಮಾರು.
सौदा सूत = ವ್ಯಾಪಾರ ಸಾಪಾರ.
नाज़ नख़रा = ಬೆಡಗು ಬಿನ್ನಾಣ.
दाना दुनका = ಕಾಳುಕಡ್ಡಿ.

8. ಸಾಮಾನ್ಯವಾಗಿ ಹಿಂದಿಯಲ್ಲಿ ಬಳಸುವ ಪಡೆನುಡಿ ಅಥವಾ ಭಾಷಾರೂಢಿಯ ಮಾತು (मुहावरे) ಗಳನ್ನೂ ಅವಕ್ಕೆ ಸರಿಯಾದ ಕನ್ನಡ ಭಾಷಾರೂಢಿಯ ಮಾತುಗಳನ್ನೂ ನಿಘಂಟಿನಲ್ಲಿ ಕೊಟ್ಟಿದೆ. ಉದಾಹರಣೆಗಾಗಿ,

खाया पिया निकालना = ಹಣ್ಣುಗಾಯಿ ನೀರುಗಾಯಿ ಮಾಡು.
आड़े हाथों लेना = ತರಾಟೆಗೆ ತೆಗೆದುಕೊಳ್ಳು.
दुहाई तिहाई करना = ಕುಯ್ಯೋ ಮೊರ್ರೋ ಅನ್ನು.
नौ दो ग्यारह होना = ಕಾಲಿಗೆ ಬುದ್ಧಿ ಹೇಳು, ಕಂಬಿ ಕೀಳು.

9. ಹಿಂದೀ ಶಬ್ದಗಳ ಸರಿಯಾದ ಕನ್ನಡ ಅರ್ಥ ಬರೆಯಲು ಈಚೆಗೆ ಬಳಕೆಗೆ ಬಂದಿರುವ ಕೆಲವು ಹೊಸ ಶಬ್ದಗಳನ್ನೂ ಉಪಯೋಗಿಸಿದೆ. ಉದಾಹರಣೆಗಾಗಿ,

पेशाबख़ाना = ಮೂತ್ರಿ; मुतफ़र्रिक़ात = ಸಬ್ಬಂಡ; नेता = ಪ್ರಧಾರಿ.

10. ಮತ್ತೆ ಕೆಲವು ಕಡೆ ಒಂದೆರಡು ಹೊಸ ಶಬ್ದಗಳ ಕಲ್ಪನೆ ಮಾಡಿದೆ.

गश्ती = ಸುತ್ತೋಲೆ; सहरगही = ಮುನ್ನಾಟ; मस = ಮೊಗದುವಿನಾಲೆ
सौतेली बाप = ಮಲತಂದೆ; हाफ़िज़ = "ಕುರಾನ್" ಘನಪಾಠಿ

11. ಸಾಮಾನ್ಯವಾದ ಹೂ, ಹಣ್ಣು, ಕಾಯಿಪಲ್ಯ ಮೊದಲಾದವುಗಳ ಹಿಂದೀ ಹೆಸರುಗಳನ್ನೂ ಅವಕ್ಕೆ ಸರಿಯಾದ ಕನ್ನಡ ಹೆಸರುಗಳನ್ನೂ ಸಂಗ್ರಹಿಸಿ ಈ ನಿಘಂಟಿನಲ್ಲಿ ಸೇರಿಸಿದೆ. ಉದಾಹರಣೆಗಾಗಿ,

अडयाय, पु. ಸಂಜೆಮಲ್ಲಿಗೆ.
गुलहज़ारा, पु. ಕರ್ಣಕುಂಡಲ.
गदहपूना, पु. ಕೊಮ್ಮೆ.
ज़रदालू, पु. ಸಕ್ಕರೆ ಬಾದಾಮಿ.
हड़जोड़ा, पु. ಮಂಗರವಳ್ಳಿ.
कच्चू, पु. ಶಾಮೆಗಡ್ಡೆ, ಕೆಸು.

12. ಹಲವು ಹಿಂದೀ ಪಟ್ಟದ ಹೆಸರು(ಬಿರುದು)ಗಳ ಸ್ತ್ರೀಲಿಂಗ ರೂಪಗಳೂ ಈ ನಿಘಂಟಿನಲ್ಲಿ ಸೇರಿಸಲ್ಪಟ್ಟಿವೆ. ಉದಾಹರಣೆಗಾಗಿ,

मुल्लानी, मिसिराइन, सुकुलाइन, चौधरानी, पठकाइन.

13. ನಾಣ್ಯಗಳು, ತೂಕಗಳು, ಜಮೀನಿನ ಅಳತೆ ಮೊದಲಾದವುಗಳ ಕೋಷ್ಟಕಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

14. ಸಂಸ್ಕೃತ, ಹಿಂದೀ, ಫಾರಸಿ, ಮತ್ತು ಅರಬ್ಬಿ ಉಪಸರ್ಗ ಮತ್ತು ಪ್ರತ್ಯಯಗಳ ಪಟ್ಟಿಯೊಂದನ್ನು ನಿಘಂಟಿನಲ್ಲಿ ಸೇರಿಸಿದೆ. ಇವರ ಸಹಾಯದಿಂದ ನಿಘಂಟಿನಲ್ಲಿಲ್ಲದ ಇತರ ಕೆಲವು ಶಬ್ದಗಳ ಅರ್ಥವನ್ನೂ ಸಹ ತಿಳಿದುಕೊಳ್ಳಬಹುದು.

उपसर्ग

संस्कृत उपसर्ग

अ-, ಅಭಾವ, ನಿಷೇಧ, अन्याय, अटल
अन-, ಅಭಾವ; अनाचार, अनमोल
अप-, ಕೆಟ್ಟ, ವಿರುದ್ಧ; अपमान, अपजस
अव-, ಕೆಳಗೆ, ಹೀನ; अवगुण, अवगाह
कु-, ಕೆಟ್ಟ; कुख्याती, कुचाल.
न-, ಅಭಾವ; नगण्य, नपुंसक.
स-, ಸಹಿತ, ಕೂಡ; सजग, सरस, सचेत
सह-, ಜೊತೆಗೆ; सहमन, सहयोग
सु-, ಒಳ್ಳೆಯ, ಹೆಚ್ಚು; सुयोग, सुदूर.

हिन्दी उपसर्ग

अध-, ಅರ್ಧ, अधखिला, अधमरा.
उन-, ಊನ, ಕಡಿಮೆ; उन्नीस, उनचास, उनसठ.
औ-, ಹೀನ, ಅವ; औघड.
दु-, ಕೆಟ್ಟ, ಹೀನ; दुकाल, दुबला.
दु-, ಎರಡು, ದ್ವಿ; दुटूक, दुगुना.
नि-, ಇಲ್ಲದ, ರಹಿತ, निकम्मा, निडर.
बिन-, ಇಲ್ಲದ, ರಹಿತ; बिन-ब्याहा.
भर-, ತುಂಬ, ಪೂರ್ಣ; भरसक, भरपूर.

फारसी उपसर्ग

कम-, ಸ್ವಲ್ಪ, ಕಡಮೆ; कमज़ोर, कमसिन, कमबख़्त.

खुश-, ಒಳ್ಳೆಯ, ಸುಂದರ; खुशबू, खुशरंग.

दर-, ಒಳಗೆ, -ಲ್ಲಿ; दरपेश, दरमियान.

दु-, ಎರಡು; दुज़ानू, दुमजिला.

ना-, ಅಭಾವಸೂಚಕ; नालायक़, नासमझ.

ब-, ಮೇರೆಗೆ, ಅನುಸಾರವಾಗಿ; बदस्तूर, बमूजिब.

बद-, ಕೆಟ್ಟ; बदनाम, बदकार.

बर-, ಮೇಲೆ, बरज़बां, बरदाश्त.

बा-, ಸಹಿತ, ಜೊತೆಗೆ; बाक़ायदा, बाज़ाब्ता.

बे-, ವಿನಾ, ರಹಿತ; बेईमान, बेअदब, बेकाम.

सर-, ಮುಖ್ಯ, ಪ್ರಧಾನ; सरकार, सरदार.

हम-, ಸಮಾನ, ಸದೃಶ; हमनाम, हमसबक़.

अरबी उपसर्ग

अल-, ನಿಶ್ಚಿತವಾದ; अलगरज़, अलबत्ता.

ग़ैर-, ಬೇರೆ, ವಿರುದ್ಧ; ग़ैरहाज़िर, ग़ैरज़बान.

बिल-, ಸಹಿತ; बिलकुल, बिलमुक्ता.

बिला-, ವಿನಾ, ಹೊರತು; बिलाशक.

ला-, ವಿನಾ, ಇಲ್ಲದ, लावल्द, लाजवाब.

प्रत्यय

ಸಂಕೇತಾಕ್ಷರಗಳು

ಗು.ವಾ. = ಗುಣವಾಚಕ; ಭಾ.ವಾ = ಭಾವವಾಚಕ; ಕ.ವಾ. = ಕರ್ತೃವಾಚಕ; ಕರಣ = ಕರಣವಾಚಕ; ಬ.ವ. = ಬಹುವಚನ; ಅಲ್ಪ. = ಅಲ್ಪಾರ್ಥಕ, ಲಘುರೂಪ; ಕರ್ಮ = ಕರ್ಮವಾಚಕ; ಸಂ. = ಸಂಬಂಧಸೂಚಕ; ಸ್ಥಾ.ವಾ. = ಸ್ಥಾನವಾಚಕ.

संस्कृत प्रत्यय

-इल, ಗು.ವಾ; तुंदिल, फेनिल.

-कर, -कार, ಕ.ವಾ. हितकर, ग्रंथकार.

-ता, ಭಾ.ವಾ; गुरुता, समता.

हिन्दी प्रत्यय

-अंत, ಭಾ.ವಾ; लगंत, गढ़ंत, रटंत.

-अक्कड़, ಕ.ವಾ; पियक्कड़, बुझक्कड़.

-आ, ಗು.ವಾ; भूखा, मैला, ठंडा. ಭಾ.ವಾ; जोड़ा, झटका, टोटा.

-आइंध, ಭಾ.ವಾ; सड़ायंध.

-आई, ಭಾ.ವಾ; भलाई, चिकनाई, पंडिताई.

ಕೆಲಸ, ಕಸುಬು; लड़ाई, समाई, चढ़ाई, दिखाई.

ಬೆಲೆ, ಕೂಲಿ; लिखाई, पिलाई, बंधाई, छपाई.

-आऊ, ગુ.વા; घराऊ, पंडिताऊ, टिकाऊ.

-आक, आका, आकू, ક.વા; तैराक, लड़ाका, लड़ाकू, उड़ाकू.

-आका, आटा, શબ્દ, ધ્વનિ; भड़ाका, धमाका, घर्राटा.

-आन, ભા.વા; उठान, उड़ान, मिलान, चौड़ान.

-आना, સ્થાન, સ્થળ; सिरहाना, पैताना

-आप, -आपा, ભા.વા; मिलाप, जलापा.

-आयंध, ભા.વા; सड़ायंध.

-आयत, ભા વા; बहुतायत, तिसरायत.

-आर, ક.વા; सुनार, लुहार.

-आल, ઘરવાળા, વાસ; ससुराल, ननिहाल.

-आव, ભા.વા;चढ़ाव.लगाव.बहाव

-आवट, ભા.વા, सिखावट,थकावट, मिलावट.

-आवना, ગુ.વા;सुहावना,डरावना

-आवा, ભા.વા; पछतावा, भुलावा, चलावा.

-आस, ભા.વા;प्यास.मिठास.खटास

-आहट, શબ્દ; गड़गड़ाहट, झनझनाहट.

ભા.વા; गरमाहट, कड़वाहट, चिकनाहट.

-इन, સ્ત્રીલિંગ પ્રત્યય; सुनारिन, नाइन, पंडिताइन.

-इयल, ક વા; अड़ियल, सड़ियल, मरियल.

-इया, ક વા; अढ़तिया, दुखिया, धुनिया.

ગુ.વા; बढ़िया. घटिया.

અલ્પ; खटिहा हंडिया, फुडिया.

સં૦; ममिया. सौतिया, दुधिया.

-ई, ભા.વા; गरीबी तंगी. बोली, धमकी, महाजनी, चोरी, जुदाई.

ગુ.વા; सूती. देशी. गुलाबी.

અલ્પ; घाटी पहाड़ी.टोकरी,डोरी.

વ્યવસાય; तेली, धोबी, तमाली.

કરણ; चिमटा, रेती, कतरनी.

-ईला, ગુ.વા; रंगीला, जहरीला, चमकीला.

-ऊ, ગુ.વા; घडू, ढालू, टिकाऊ.

ક.વા; बिगाड़ू, दब्बू, लट्टू.

કરણ; झाड़ू

-एरा, ક વા; कमेरा. लुटेरा.

કસબવાળો सपेरा.कसेरा,चितेरा.

ભા.વા; बसेरा. निबटेरा.

સં૦; ममेरा. चचेरा.

ગુ.વા; अधूरा, अंधेरा.

-ऐत, ऐता, ક વા, बरछैत, अकड़ैत, दगैत, डकैत.

-ऐया, ક વા; चरैया. परखैया.

-ऐल, ક.વા; बुझैल, बिगडैल.

-ओड़, ओड़ा, ओरा, ક.વા; हंसोड़, भगोड़, चटोरा.

-ओला, ಅಲ್ಪ, संपोला खटोला घड़ोला
-औटा, ಅನಾದರ, ಜಡ, अंतरौटा
-औटी, ಆಧಾರ; चुनौटी, कजरौटी.
ಕರ್ಮ; कसौटी.
-औत, -औती, ಭಾ. ವಾ; समझौता, कटौती, बपौती.
-औना, -औनी, ಕರಣ; खिलौना, बिछौना, छावनी.
ಭಾ. ವಾ; ठहरौनी, मिचौनी.
-औवल, ಭಾ. ವಾ. बुझौवल, चमकौवल
-क, ಭಾ. ವಾ; चहक, छनक, ठिठक
ಸ್ಥಾ. ವಾ; बैठक, फाटक.
ಕ. ವಾ; मारक, घातक, घोलक.
-का, -की, ಅಲ್ಪ; अंगिका, मेंढकी, कनकी.
-घर, -घरा, ವಾಸ, ಸ್ಥಳ; डाकघर, अजायबघर, भुईंघरा.
-टा, ವಂಶ, ಪುತ್ರ; तुरकटा, बमलेटा, पठनेटा.
-टा, -टी, ಅಲ್ಪ; रोंगटा, चोट्टा, बहूटी.
-ट्टा, ಭಾ. ವಾ; झपट्टा, रपट्टा
-ड़ा, -ड़ी, ಅಲ್ಪ; बछड़ा, टुकड़ा, पंखड़ी, लालड़ी.
-त, ಭಾ. ವಾ; पड़त, बचत, लागत.
-ता, ಭಾ. ವಾ; सहायता
-ती, ಭಾ. ವಾ; बढ़ती, गिनती, कमती.
-दान, -दानी, ಆಧಾರ; पीकदान, फूलदान, चूहेदानी.
-नी, ಭಾ. ವಾ; करनी, भरनी.
ಕರ್ಮ; चटनी, सुंघनी.
ಕರಣ; धौंकनी, ढकनी, कतरनी.
-पन, ಸ್ವಭಾ., ಜಾತಿ, अचछापन, लड़कपन.
-पा, ಭಾ. ವಾ; बहनापा, बुढ़ापा.
-बाड़ा, ಸ್ಥಾನ इमामबाड़ा कसाईबाड़ा
-री, ಅಲ್ಪ; कोठरी, छतरी, बांसुरी.
-ला, ಗು. ವಾ, अगला, धुंधला, रसीला, तोतला.
-ली, ಅಲ್ಪ; टिकली खुजली, घंटाली.
-वां, ಗು. ವಾ; कटवां, चढ़वां.
-वाड़ा, ಸ್ಥಾನ; रजवाड़ा, अगवाड़ा.
-वाला, ಗು. ವಾ. पासवाला, बंबईवाला
ಕ. ವಾ, खानेवाला जानेवाला.
-वैया, ಕ. ವಾ; जंचवैया, गवैया, चढ़वैया.
-सार, ಗು. ವಾ; मिलनसार.
-हर, ವಾಸ, ಗೃಹ, पीहर, नैहर, खंडहर.
-हार, ಕ. ವಾ; लकड़हारा, मेटनहारा.
ಕಸಬುದಾರ; चुड़िहारा.
-हाल, ವಾಸ, ಸ್ಥಳ, ननिहाल, ददिहाल.

फारसी प्रत्यय

-आन, ಬ. ವ; दोस्तान, ज़नान, साहबान.
-आना, ಗು. ವಾ; दोस्ताना, बिरादराना, रोज़ाना.
ದಂಡ, ದಾನ; हरजाना, नज़राना, जुर्माना.
-आवर, ಉಳ್ಳವ; दिलावर, ज़ोरावर.
-इंदा, ಗು. ವಾ; शर्मिंदा, नुमाइंदा.
ಕ. ವಾ; परिंदा, बाशिंदा.

-इश, ಭಾ.ವಾ; परवरिश, फ़रमाइश.
-ईन, ಗು.ವಾ; रंगीन, शौक़ीन.
-ईना, ಗು.ವಾ; कमीना, पशमीना.
-कन, ತೋಡುವವ; कोहकन, गोरकन.
-कार, ಕ.ವಾ; पेशकार, काश्तकार, दस्तकार.
-ख़ाना, ಮನೆ, ಸ್ಥಳ; तोपख़ाना, दवाख़ाना.
-ख़्वार, -ख़ोर, ತಿನ್ನುವವ; मुफ़्तख़ोर, हलालख़ोर.
-गाह, ಜಾಗ, ಸ್ಥಳ, ईदगाह, चराहगाह.
-गी, ಭಾ.ವಾ; ताज़गी, अदायगी.
-गीर, ಉಳ್ಳವ, ಗಾರ; दावागीर, माहीगीर, राहगीर.
-गो, ಹೇಳುವವ; क़ानूनगो, रास्तगो.
-चा, ಅಲ್ಪ; देगचा, बागीचा.
ಸ್ಥಾನ; क़दमचा.
-ज़न, ಹೊಡೆಯುವವ; राहज़न, डाकाज़न.
-ज़ादा, ಹುಟ್ಟಿದವ; हरामज़ादा, शाहज़ादा.
-दान, ತಿಳಿದವ, ಪಾತ್ರ; उर्दूदान, हिसाबदान.
-दार, ಉಳ್ಳವ, ಗಾರ; ज़िम्मादार, किलादार.
-नवीस, ಬರೆಯುವವ; चिटनवीस.
-नशीन, ಕುಳಿತವ, ಆರೂಢ; परदानशीन, तख़्तनशीन.
-नाक, ಗು.ವಾ; दर्दनाक, ख़तरनाक.
-नामा, ಪತ್ರ; राज़ीनामा, इक़रारनामा, वसीयतनामा.
-नुमा, ಸದೃಶ, ಸಮ; कुतुबनुमा, क़िबलानुमा.
-परवर, ಪೋಷಕ; बंदापरवर.
-परस्त, ಪೂಜಕ, ಉಪಾಸಕ; बुतपरस्त, आगपरस्त.
-पोश, ಧರಿಸುವವ; सफ़ेदपोश, नक़ाबपोश.
ಆಚ್ಛಾದನ; तख़्तपोश, ज़ीनपोश.
-बंद, ಕಟ್ಟುವವ; नालबंद, जिल्दबंद.
ಕಟ್ಟುವ ಸಾಧನ, कमरबंद, इज़ारबंद.
-बर, ಒಯ್ಯುವವ; दिलबर, नामाबर.
-बरदार, ಹೊರುವವ, ಹಿಡಿಯುವವ; असाबरदार, हुक्मबरदार.
-बाज़, ಉಳ್ಳವ, ಆಡುವವ, ಶೋಕಿ ಮಾಡುವವ; नशेबाज़, चालबाज़, कबूतरबाज़, रंडीबाज़, इश्क़बाज़.
-बान, ಉಳ್ಳವ; दरबान, मेज़बान, बाग़बान.
-बीन, ನೋಡುವವ; तमाशबीन, बारीकबीन.
ನೋಡುವ ಸಾಧನ; दूरबीन, ख़ुर्दबीन.
-मंद, ಉಳ್ಳವ; अक़्लमंद, दौलतमंद.
-वर, वार, ಉಳ್ಳವ; कसूरवर, नामवर, उम्मीदवार, ज़िम्मावार.
-साज़, ಮಾಡುವವ; जालसाज़, ज़ीनसाज़.
-हा, ಬ.ವಾ; सदहा.

अरबी प्रत्यय

-अन्, ರೀತಿಯಾಗಿ, ವೇಳೆಗೆ; अंदाजन्, मसलन्

-आत, ಬ.ವ; कमालात, कागज़ात.

तुर्की प्रत्यय

-ची, ಮಾಡುವವ, ನಡೆಸುವವ; तोपची, मशालची, खजांची, ढिंढोरची.

ಸಂಕೇತಾಕ್ಷರಗಳ ಸೂಚಿ

अक्रि.	=	अकर्मक क्रिया	ಅಕರ್ಮಕ ಕ್ರಿಯೆ.
अव्य.	=	अव्यय	ಅವ್ಯಯ.
उप.	=	उपसर्ग	ಉಪಸರ್ಗ.
क्रि.	=	क्रियापद	ಕ್ರಿಯಾಪದ.
क्रिवि.	=	क्रियाविशेषण	ಕ್ರಿಯಾವಿಶೇಷಣ.
पु.	=	पुल्लिंग	ಪುಲ್ಲಿಂಗ.
प्रत्य.	=	प्रत्यय	ಪ್ರತ್ಯಯ.
प्रे.	=	प्रेरणार्थक	ಪ್ರೇರಣಾರ್ಥಕ.
ब.	=	बहुवचन	ಬಹುವಚನ.
लघु.	=	लघुरूप	ಲಘು.ರೂಪ.
वि.	=	विशेषण	ವಿಶೇಷಣ.
सक्रि.	=	सकर्मक क्रिया	ಸಕರ್ಮಕ ಕ್ರಿಯೆ.
सर्व.	=	सर्वनाम	ಸರ್ವನಾಮ
स्त्री.	=	स्त्रीलिंग	ಸ್ತ್ರೀಲಿಂಗ.
ಉದಾ:	=	ಉದಾಹರಣೆಗಾಗಿ.	

Select Opinions

This book supplies a long felt want. The exhaustive Canarese equivalents used to convey the meanings of the .. .. Hindi words contained in this book show that the author has done extensive research work on the various forms of Canarese language that are current in the different parts of the Kannada districts.

The author has proceeded in a systematic manner with an introduction consisting of the origin of Hindi, its pecularities, prefixes and suffixes etc. At the end are given tables of measures of weight, area, current money etc.

The 'HINDU', Madras.

.. ..

"....हिन्दी कन्नड़ कोष की आवश्यकता बहुत थी। श्री जम्बुनाथन जी ने उर्दू हिन्दी कोष, मुहावरा कोष आदि तैयार करके हिन्दी की अच्छी सेवा की है। अब यह कोष तैयार करके कन्नड़ भाषा की और राष्ट्रभाषा की उन्होंने कीमती सेवा की है।

"........मैं आपको प्रकाशक की हैसियत से बधाइयां देता हूं।"

वर्धा, ३-१२-३९ काका कालेलकर

॥ श्री ॥

हिन्दी कन्नड़ कोष

ಹಿಂದೀ ಕನ್ನಡ ನಿಘಂಟು

अ

अंक, पु. ಚಿಹ್ನೆ; ಸಂಖ್ಯೆ; ಬರಹ; ಹಣೆಬರಹ; ಚುಕ್ಕೆ, ಬೊಟ್ಟು; ದೃಷ್ಟಿ ಬೊಟ್ಟು; ನಾಟಕದ ಒಂದು ಭಾಗ; ಪಾಪ; ದುಃಖ; ಸಲ; ಸೊಂಟ. अंक भरना = ತಬ್ಬಿಕೊಳ್ಳು, ಆಲಿಂಗಿಸು.

अंककार, पु. ಮಧ್ಯಸ್ಥ ಮಾಡುವವ.

अंकटा, पु. **अंकटी**, स्त्री. ಸಣ್ಣ ಕಲ್ಲು, ಹರಳು.

अंकड़ी, स्त्री. ಕೊಂಡಿ, ದೋಟಿ; ದೋಟಿಗೋಲು; ಬಳ್ಳಿ, ಹಂಬು.

अंकन, पु. ಗುರುತು ಹಾಕುವಿಕೆ, ಬರವಣಿಗೆ, ಬರಹ; ಎಣಿಸುವಿಕೆ; ಮುದ್ರಾಧಾರಣ.

अंकना, अक्रि. ಗುರುತು ಹಾಕಲ್ಪಡು.

अंकपाली, स्त्री. ದಾದಿ.

अंकफुड़वा, पु. ಕುಂಟುಮಿಡತೆ.

अंकमाल, पु. ಆಲಿಂಗನ.

अंकरा, पु. ಒಂದು ಬಗೆ ಹುಲ್ಲು, ಕಳೆ.

अंकरोरी, स्त्री. ಕಲ್ಲು ಅಥವಾ ಹೆಂಚಿನ ಸಣ್ಣ ಚೂರು.

अंकवार, स्त्री. ವಕ್ಷಸ್ಥಳ, ಮಡಿಲು. अंकवार भरना=ಆಲಿಂಗನಮಾಡು; ಸಂತಾನ ಸಂಪತ್ತನ್ನು ಹೊಂದು.

अंकाई, स्त्री. ಅಂದಾಜು, ಡವುಲು, ಟೋಕುತಾಳೆ; ಬೆಳೆಯ ಹಂಚಿಕೆಯ ಬಗ್ಗೆ ಸಾಗುವಳಿದಾರನಿಗೂ ಜಮೀನುದಾರನಿಗೂ ಆಗುವ ಒಪ್ಪಂದ, ಹಸಿಗೆಯ ನಿಷ್ಕರ್ಷೆ.

अंकाव, पु. ಬೆಲೆ ಕಟ್ಟುವಿಕೆ, ಮದಿಪು.

अंकाना, सक्रि. ಅಂದಾಜು ಮಾಡಿಸು; ಬೆಲೆ ನಿಷ್ಕರ್ಷೆ ಮಾಡಿಸು; ಪರೀಕ್ಷಿಸು.

अंकित, वि. ಗುರುತು ಹಾಕಿದ, ಬರೆದ.

अंकुड़ा, पु. ಕಬ್ಬಿಣದ ಕೊಕ್ಕೆ, ಕೊಂಡಿ; ನಾಗವಾಸ; ಕೀಲು; (ದನಕರುಗಳ) ಹೊಟ್ಟೆ ಕಡಿತ.

अंकुड़ी, स्त्री. ಕೊಕ್ಕೆ; ದೋಟಿಗೋಲು; ನಾಗವಾಸ

अंकुड़ीदार, वि. ಕೊಕ್ಕೆಯುಳ್ಳ; ದೋಟಿಯು. पु. ಒಂದು ಬಗೆ ಕಸೂತಿ.

अंकुर, पु. ಮೊಳಕೆ, ಚಿಗುರು, ಕುಡಿ;

ಮೊಗ್ಗು; ರೋಮ; ರಕ್ತ; ಘಾಯ ಆರುವಾಗ ಕಾಣಿಸುವ ಮಾಂಸದ ರಕ್ತಾಣುಗಳು.

अंकुरना, सक्रि. ಮೊಳೆದೋರು, ಮೊಳೆ, ಚಿಗುರು, ಚಿಗಿ.

अंकुरित, वि. ಮೊಳಕೆ ಬಂದಿರುವ.

अंकुश, पु. ಅಂಕುಶ, ಅಂಕ.

अंकुसी, स्त्री. ಕೊಕ್ಕೆ, ಕೊಂಡಿ, ಕೊಕ್ಕೆ ಕೋಲು.

अंकोर, पु. ಸೊಂಟ, ವಕ್ಷಸ್ಥಳ; ಕಾಣಿಕೆ; ಲಂಚ; ಬುತ್ತಿ.

अंकोरी, स्त्री. ಸೊಂಟ; ವಕ್ಷಸ್ಥಳ; ಆಲಿಂಗನ.

अंखफूटा, वि. ಕಣ್ಣುಹೋದವ.

अंख-मिचली, स्त्री. ಕಣ್ಣುಮುಚ್ಚಾಲೆ.

अखिया, स्त्री. ನಕಾಸಿ ಕೆಲಸದ ಉಳಿ; ನೇತ್ರ, ಕಣ್ಣು

अंखुआ, पु. ಮೊಳಕೆ; ಚಿಗುರು.

अंखुआना, अक्रि. ಮೊಳೆದೋರು, ಮೊಳೆ, ಚಿಗುರು.

अंग, पु. ಶರೀರ; ಅವಯವ; ಅಂಶ; ತುಂಡು; ಬಗೆ; ಉಪಾಯ; ಪಕ್ಷ, ಪಕ್ಕ. अंग लगना = ಆಲಿಂಗಿಸು; ಉಪಯೋಗವಾಗು; ಮೈಹತ್ತು.

अंगऊं, पु. ಮುಡುಪು, ಮೀಸಲು.

अंगड़ खंगड़, वि. ಒಡಕಲು. ಆಳಿದುಳಿದ. पु. ಒಡಕು ಮುರುಕು ಸಾಮಾನು.

अंगड़ाई, स्त्री. ಮೈಮುರಿಯುವಿಕೆ. अंगड़ाई तोड़ना = ಸೋಮಾರಿಯಾಗಿ ಕುಳಿತಿರು.

अंगड़ाना, अक्रि. ಮೈಮುರಿಯು.

अंगद, पु. ತೋಳುಬಂದಿ, ವಂಕಿ, ಬಾಹುಪೂರ, ಬಾಪುರಿ.

अंगभंग, पु. ಅಂಗಭಂಗಿ, ಹಾವಭಾವ; ಬೆಡಗು. वि. ಅಂಗಹೀನ.

अंगभंगी, स्त्री. ಹಾವಭಾವ; ಥಳುಕು.

अंगमर्द, पु. ಮೈ ಕೈ ನೋವು.

अंगरखा, पु. ಉದ್ದವಾದ ಅಂಗಿ, ನಿಲುವಂಗಿ, ಅಂಗರೇಖು.

अंगरी, स्त्री. ಕವಚ, ಅಂಗುಸ್ತಾನಿ.

अंगरेज़, पु. ಇಂಗ್ಲೀಷ್ ಜನರು.

अंगरेज़ी, वि. ಇಂಗ್ಲೆಂಡ್ ದೇಶದ್ದು; ಇಂಗ್ಲಿಷ್ ಜನದ್ದು. स्त्री. ಇಂಗ್ಲೀಷ್ ಭಾಷೆ

अंगलेट, पु. ಮೈಕಟ್ಟು, ಆಕೃತಿ.

अंगवारा, पु. ಕೃಷಿ ಕೆಲಸದಲ್ಲಿ ಮಾಡುವ ಪರಸ್ಪರ ಸಹಾಯ; ಮಿಟ್ಟಾದಾರ್

अंगसिरही, स्त्री. ಜ್ವರ ಬರುವಾಗ ಆಗುವ ಶರೀರ ಕಂಪನ; ಚಳಿಜ್ವರ.

अंगा, पु. = **अंगरखा**.

अंगाकड़ी, स्त्री. ಕೆಂಡದಲ್ಲಿ ಸುಟ್ಟ ದಪ್ಪವಾದ ರೊಟ್ಟಿ.

अंगार, पु. ಕೆಂಡ. अंगारों पर लोटना = ಅತ್ಯಂತ ಕೋಪವನ್ನು ಪ್ರಕಟಿಸು; ಅಸೂಯೆಪಡು.

अंगारक, पु. ಕೆಂಡ; ಕುಜಗ್ರಹ; ಭೃಂಗ; ಗರುಗ ಮರ.

अंगारा, पु. = अंगार.

अंगारी, स्त्री. ಕಿಡಿ; ಅಗ್ಗಿಷ್ಟಿಕೆ; ಕಬ್ಬಿನ ಸೋಗೆ; ಕಬ್ಬಿನ ತುಂಡು.

अंगिका, अंगिया, स्त्री. ರವಿಕೆ, ಕುಪ್ಪಸ.

अंगीकार, पु. ಅಂಗೀಕಾರ, ಒಪ್ಪಿಕೆ.

अंगीठा, पु. ಅಗ್ಗಿಷ್ಟಿಕೆ, ಕುಂಪಟಿ.

अंगीठी, स्त्री. 'अंगीठा' का लघुरूप.

अंगुल, पु. ಅಂಗುಲ.

अंगुलित्राण, पु. ಸೂಜಿಕೊತ್ತು, ಅಂಗುಸ್ತ್ರಾನಿ.

अंगुली, स्त्री. ಬೆಟ್ಟು, ಬೆರಳು; ಸೊಂಡಲಿನ ತುದಿ.

अंगुश्त, पु. ಬೆರಳು, ಬೆಟ್ಟು.

अंगुश्तनुमा, वि. ಅಪಖ್ಯಾತಿಪಡೆದವ, ನಿಂದಿತ, ಲಾಂಛಿತ.

अंगुश्तनुमाई, स्त्री. ದೋಷಾರೋಪಣೆ; ದೂರು, ಲಾಂಛನ.

अंगुश्तरी, स्त्री. ಉಂಗುರ.

अंगुश्ताना, पु. ಹೊಲಿಯುವಾಗಬೆರಳಿಗೆ ಹಾಕಿಕೊಳ್ಳುವ ಕಬ್ಬಿಣದ ಅಥವಾ ಹಿತ್ತಾಳೆಯ ಕವಚ, ಅಂಗುಲಿತ್ರಾಣ, ಅಂಗುಸ್ತ್ರಾನಿ, ಸೂಜಿಕೊತ್ತು; ಹೆಬ್ಬೆಟ್ಟಿನ ಉಂಗುರ.

अंगुसी, स्त्री. ನೇಗಿಲಿನ ಗುಳ; ಬಗ್ಗಿದ ಊದುಗೊಳವಿ.

अंगूठा, पु. ಹೆಬ್ಬೆಟ್ಟು, ಹೆಬ್ಬೆರಳು. अंगूठा चूमना = ಮುಖಸ್ತುತಿ ಮಾಡು; ಸೇವೆಮಾಡು; ಅಧೀನನಾಗು.

अंगूठी, स्त्री. ಉಂಗುರ

अंगूर, पु. ದ್ರಾಕ್ಷಿ; ಹುಣ್ಣು ಆರುವಾಗ ಕಾಣಿಸುವ ಮಾಂಸದ ರಕ್ತಾಣುಗಳು; ಮೊಳಕೆ. अंगूर का मड़वा = ದ್ರಾಕ್ಷಿಯ ಹಂಬುಗಳಿಗೆ ಹಾಕಿದ ಚಪ್ಪರ; ಒಂದು ಬಗೆ ಬಾಣ ಬಿರುಸು.

अंगूरशेफा, पु. ಒಂದು ವನಸ್ಪತಿ.

अंगूरी, वि. ದ್ರಾಕ್ಷಿಯ; ದ್ರಾಕ್ಷಿ ಬಣ್ಣದ

अंगेजना, सक्रि. ಸಹಿಸು; ಒಪ್ಪು.

अंगोछना, अक्रि. ಒದ್ದೆ ಬಟ್ಟೆಯಿಂದ ಮೈ ಒರೆಸಿಕೊಳ್ಳು.

अंगोछा, पु. ಅಂಗವಸ್ತ್ರ, ಟವಲು, ಚೌಕ, ಮುಂಡು.

अंगोछी, स्त्री. 'अंगोछा' का लघुरूप.

अंगोरा, पु. ಸೊಳ್ಳೆ.

अंगौंगा, पु. ನೈವೇದ್ಯ; ಮೀಸಲು.

अंग्रेज़, पु. = **अंगरेज़.**

अंघड़ा, पु. ಕಂಚಿನ ಕಾಲುಂಗುರ.

अंघस, पु. ಪಾಪ, ಪಾತಕ.

अंघिया, स्त्री. ಹಿಟ್ಟಿನ ಜರಡಿ, ಒಂದರಿ.

अंचरा, पु. = **आंचल.**

अंचल, पु. ಸೀರೆಯ ತುದಿ, ಸೆರಗು; ಉಡಿ; ಸೀಮಾಪ್ರಾಂತ, ಗಡಿ; ದಡ.

अंचला, पु. ಸೆರಗು; ಸಾಧು ಸನ್ಯಾಸಿಗಳ ವಸ್ತ್ರ.

अंछर, पु. ಬಾಯಿಹುಣ್ಣು; ಅಕ್ಷರ; ಮಂತ್ರ, ಮಾಟ.

अंजन, पु. ಮಸಿ; ಕಾಡಿಕಪ್ಪು, ಕಾಡಿಗೆ; ಲೇಪ. वि. ಕಪ್ಪು ಬಣ್ಣದ.

अंजनहारी, स्त्री. ರೆಪ್ಪೆಯಲ್ಲಿ ಏಳುವ ಕುರು, ಕಣ್ಣುಚಿಟ್ಟೆ, ಕಣ್ಣುಕುಡಿಕೆ.

अंजनी, स्त्री. ಕಣ್ಣು ಚಿಟ್ಟೆ.

अंजबार, पु. ಒಂದು ವನಸ್ಪತಿ.

अंजरपंजर, पु. ಎಲುಬಿನ ಗೂಡು; ಮೂಳೆಯ ಸಂಧಿ. क्रिवि. ಅಕ್ಕಪಕ್ಕ

ದಲ್ಲಿ. अंजरपंजर ढीला होना = ಶಿಥಿಲವಾಗು.

अंजलि, स्त्री. ಅಂಜಲಿ, ಬೊಗಸೆ.

अंजवाना, सक्रि. ಕಪ್ಪು ಹಚ್ಚಿಸು.

अंजही, स्त्री. ಧಾನ್ಯದ ಮಂಡಿ, ದಿನಸಿ ಮಂಡಿ, ಜಿನಸಿ ಮಂಡಿ

अंजाना, सक्रि. ಕಪ್ಪು ಹಚ್ಚು

अंजाम, पु. ಕೊನೆ, ತುದಿ; ಸಮಾಪ್ತಿ; ಪರಿಣಾಮ. अंजाम देना = ಕೊನೆ ಮುಟ್ಟಿಸು, ಕೊನೆಗಾಣಿಸು, ಪೂರೈಸು.

अंजीर, पु. ಒಂದು ಜಾತಿಯ ಅತ್ತಿ ಹಣ್ಣು, ಅಂಜೂರ.

अंजुमन, स्त्री. ಕೂಟ, ಸಭೆ; ಸಂಸ್ಥೆ; ಸಮಾಜ.

अंझा, पु. ಅನಧ್ಯಯನ, ರಜಾ ದಿನ.

अंटना, अक्रि. ಒಪ್ಪು, ಒಪ್ಪುವಂತಿರು, ಸರಿಯಾಗಿರು, ಮುಚ್ಚು; ತುಂಬು, ಅಡಗು; ಸಾಕಾಗು; ಮುಗಿ.

अंटा, पु. ದೊಡ್ಡ ಗೋಲಿ; ದಾರದ ಉಂಡೆ; ಕವಡೆ; 'ಬಿಲಿಯರ್ಡ್ಸ್' ಎಂಬ ಆಟ.

अंटागुड़गुड़, वि. ಮದಿಸಿದ, ಮತ್ತ, ಅಮಲೇರಿದ.

अंटाघर, पु. ಗೋಲಿ ಆಡುವ ಸ್ಥಳ.

अंटाचित, क्रिवि. ಅಂಗತ್ತಲಾದ, ಅಂಗಾತ. अंटाचित होना = ಸ್ತಂಭಿತನಾಗು, ಬೆರಗಾಗು; ಪ್ರಜ್ಞೆತಪ್ಪು.

अंटाबंधू, पु. ದಾಳ, ಪಾಚಿಕೆ; ಕವಡೆ

अंटिया, स्त्री. ಹುಲ್ಲು ಅಥವಾ ಸೊಪ್ಪಿನ ಕಂತೆ, ಸಿವುಡು, ಪಿಂಡಿ.

अंटियाना, सक्रि. ಅಂಗೈಯಲ್ಲಿ ಮುಚ್ಚಿಟ್ಟುಕೊಳ್ಳು; ದಾರವನ್ನು ಉಂಡೆ ಮಾಡು; ಕಂತೆ ಕಟ್ಟು, ಪಿಂಡಿ ಕಟ್ಟು; ಅಪಹರಿಸು.

अंटी, स्त्री. ಬೆರಳು ಮಧ್ಯದ ತೆರಪು; ಉಡುವ ಪಂಚೆಯ ಗಂಟು, ಉಚ್ಚೆಯ; ದಾರದ ಉಂಡೆ; ದಾರ ಸುತ್ತುವ ಕಡ್ಡಿ, ಕದುರು; ಕಿವಿಮುರು; ಜಗಳ, ವಿರೋಧ; ಚಿನ್ನಿ.

अंटेरन, पु. ದಾರ ಸುತ್ತುವ ಕಡ್ಡಿ; ಕದುರು.

अंटौतल, पु. ಕುದುರೆ ಮೊದಲಾದವುಗಳಿಗೆ ಕಟ್ಟುವ ಕಣ್ಣುಮರೆ, ಕಣ್ಣುಕಪ್ಪಡಿ, ಕಣ್ಣುಪಟ್ಟಿ.

अंठई, स्त्री. ತೊಣಚಿ, ಉಣ್ಣೆ.

अंठी, स्त्री. ವಾಟೆ, ಗೊರಟು, ಬೀಜ; ಗಂಟು; ಮಾಂಸಗ್ರಂಥಿ.

अंड, पु. ಬ್ರಹ್ಮಾಂಡ, ವಿಶ್ವ; ಮೊಟ್ಟೆ; ವೃಷಣ; ವೀರ್ಯ; ಕಸ್ತೂರಿ ಮೃಗದ ಹೊಕ್ಕುಳು; ಕಟ್ಟಡದ ಮೇಲಿನ ಕುಂಭ ಅಥವಾ ಕಲಶ.

अंडबंड, स्त्री. ಅಸಂಬದ್ಧ ಮಾತು, ಗೊತ್ತುಗುರಿಯಿಲ್ಲದ ಮಾತು, ಬೊಗಳೆ; ಬೈಗಳು वि. ಅಸಂಬದ್ಧ, ಯದ್ವಾತದ್ವ

अंडरना, अक्रि. (ಧಾನ್ಯ) ತೆನೆಬಿಡು.

अंडस, स्त्री. ಸಂಕಟ, ತೊಂದರೆ.

अंडा, पु. ಮೊಟ್ಟೆ, ತತ್ತಿ; ದೇಹ. अंडा ढीला होना = ಆಯಾಸಪಡು, ಶಿಥಿಲವಾಗು, ಇಳಿದುಹೋಗು.

अंडाकार, वि. ಮೊಟ್ಟೆಯಂತಹ,

ಅಂಡಾಕಾರವಾದ.

अंडी, स्त्री. ಹರಳುಗಿಡ; ಒಂದು ತರದ ರೇಷ್ಮೆ ಬಟ್ಟೆ.

अंडुआ, पु. ವೃಷಣ; ಬೀಜ ಹೊಡೆಯದ ಎತ್ತು, ಗೂಳಿ; ಅಂಡವಾತ, ಬುಡ್ಡೆ; ಬುಡ್ಡೆಯವ; ಸೋಮಾರಿ.

अंडुआना, सक्रि. ಬೀಜ ಹೊಡೆ, ಹಿಡಿ ಮಾಡು; ನಪುಂಸಕನನ್ನಾಗಿ ಮಾಡು

अंडैल, वि. ಹೊಟ್ಟೆಯಲ್ಲಿ ಮೊಟ್ಟೆಗಳುಳ್ಳ (ಪಕ್ಷಿ).

अंत, पु. ಸಮಾಪ್ತಿ, ಕೊನೆ; ಮೇರೆ; ಮೃತ್ಯು; ಪರಿಣಾಮ.

अंतकाल, पु. ಮರಣಕಾಲ, ಸಾವು.

अंतडी, स्त्री. ಕರುಳು, ಆಂತ್ರ. अंतडी जलना = ಬಹಳ ಹಸಿವಾಗು.

अंतर, पु. ವ್ಯತ್ಯಾಸ; ದೂರ; ತೆರಪು.

अंतरपट, पु. ಮರೆ, ಪರದೆ; ಲೋಹಗಳ ಭಸ್ಮ ಮಾಡುವುದಕ್ಕಾಗಿ ಅವುಗಳನ್ನು ಮಣ್ಣು ಅಥವಾ ಬಟ್ಟೆಯಿಂದ ಸುತ್ತುವಿಕೆ.

अंतरा, पु. ಎಡೆ; ದಿನ ಬಿಟ್ಟು ದಿನ ಬರುವ ಜ್ವರ, ಮೊರೆಜ್ವರ; ಅಂತರದಿಕ್ಕು; ಹಾಡಿನ ಚರಣ. क्रिवि. ನಡುವೆ; ಹತ್ತಿರ; ಹೊರತು, ಬೇರೆ.

अंतरीप, पु. ಭೂಶಿರ.

अंतरीय, वि. ಒಳಗಿನ पु. ಪಂಚೆ.

अंतरौटा, पु. ಬೆಲೆ ಬಾಳುವ ಸೀರೆಯನ್ನುಡುವಾಗ ಅದು ಮಾಸದಂತೆ ಒಳಗೆ ಧರಿಸುವ ವಸ್ತ್ರ, ಹೆಂಗಸರ ಒಳ ಉಡುಪು, ಅಂಗವಸ್ತ್ರ, ಉಳ್ಳುಡೆ

अंतर्गत, वि. ಒಳಹೊಕ್ಕ; ಅಡಕವಾದ

अंतावरी, स्त्री. ಕರುಳು.

अंतिम, वि. ಕೊನೆಯ.

अंदर, क्रिवि. ಒಳಗೆ.

अंदरसा, पु. ಒಂದು ತರದ ಮಿಠಾಯಿ

अंदरी, वि. ಒಳಗಿನ, ಆಂತರ್ಯದ.

अंदरूनी, वि. ಒಳಗಿನ, ಅಂತರಂಗದ

अंदाज़, पु. ಊಹೆ, ಇಂಗಿತ; ರೀತಿ, ತರಹ; ಬೆಡಗು. अंदाज़ लगाना = ಊಹಿಸು.

अंदाज़न्, क्रिवि. ಊಹೆಯಿಂದ, ಅಂದಾಜಿನಿಂದ, ಸುಮಾರು, ಅಜಮಾಸು.

अंदाज़ना, सक्रि. ಅಂದಾಜುಹಾಕಿಸು, ಊಹಿಸು.

अंदाज़पट्टी, स्त्री. ಬೆಳೆಯ ಅಂದಾಜು, ಡವುಲು; ಪೈರುಗಳ ಬೆಲೆ ಕಟ್ಟುವಿಕೆ.

अंदाज़ा, पु. ಊಹೆ, ಅಂದಾಜು, ಅಜಮಾಸು, ಟೂಕಿ.

अंदु, अंदुक, पु. ಕಾಲಂದುಗೆ, ಪೈಜಣಿ, ಗೊಲಸು; ಆನೆಯ ಕಾಲಿಗೆ ಕಟ್ಟುವ ಹಗ್ಗ ಅಥವಾ ಸರಪಳಿ.

अंदुआ, पु. ಆನೆಯ ಹಿಂಗಾಲುಗಳಿಗೆ ಹಾಕುವ ಮರದ ಕೋಳ.

अंदेशा, पु. ಚಿಂತೆ; ಸಂಶಯ; ಭಯ; ಹಾನಿ, ಕೆಡಕು; ಚಂಚಲತೆ; ಇಬ್ಬಂದಿ.

अंदोह, पु. ವ್ಯಾಕುಲ, ವ್ಯಥೆ; ಭಯ.

अंध, वि. ಕುರುಡ; ಅವಿವೇಕಿ; ಅಜ್ಞಾನಗ್ರಸ್ತನಾಗಿರುವವನ, ಅಜ್ಞಾನರೂಪ; ಉನ್ಮತ್ತ. पु. ಕುರುಡ; ಗೂಗೆ; ಕತ್ತಲು; ತೊಗಲು ಬಾವಲಿ, ಗಬ್ಬಿಲ.

अंधकार, पु. ಕತ್ತಲೆ.

अंधड़, पु. ಬಿರುಗಾಳಿ, ಹುಚ್ಚುಗಾಳಿ.

अंधता, स्त्री. ಕುರುಡತನ; ಅಜ್ಞಾನ.

अंधपरंपरा, पु. ವಿವೇಕವಿಲ್ಲದ ಅನುಕರಣ; ಮೂಢಭಕ್ತಿ.

अंधबाई, स्त्री. **अंधवात**, पु. ಹುಚ್ಚುಗಾಳಿ, ಬಿರುಗಾಳಿ.

अंधरी, स्त्री. ಕುರುಡಿ; ಚಕ್ರದ ಎಲೆ.

अंधा, पु. ಕುರುಡ. वि. ಕುರುಡು; ಅವಿವೇಕಿ; ಕತ್ತಲೆಯಾದ.

अंधाकुप्प, स्त्री. ವಿಮಾನಧಾಳಿ ಮುಂಜಾಗ್ರತೆಗಾಗಿ ನಗರದ ದೀಪಗಳನ್ನು ಆರಿಸುವಿಕೆ

अंधाधुंध, स्त्री. ಕಗ್ಗತ್ತಲೆ; ಅನ್ಯಾಯ; ಹಾವಳಿ, ಅವಾಂತರ वि. ವಿವೇಚನೆಯಿಲ್ಲದ; ಸಿಕ್ಕಾಪಟ್ಟೆ, ಕಂಡಾಪಟ್ಟೆ.

अंधार, पु. ಹುಲ್ಲು ತುಂಬುವ ಬಲೆಯ ಚೀಲ.

अंधाहुली, स्त्री. ಚೋರಪುಷ್ಪಿ ಗಿಡ

अंधियाना, अक्रि. (ಕಣ್ಣು) ಕತ್ತಲೆ ಹಿಡಿ, ಕೋರೈಸು.

अंधियारा, वि. ಕತ್ತಲೆಯಾದ.

अंधियारी, स्त्री. ಕುದುರೆಯ ಕಣ್ಣಿಗೆ ಕಟ್ಟುವ ಪಟ್ಟಿ ಅಥವಾ ಮುಸುಕು, ಕಣ್ಣುಪಟ್ಟಿ, ಕಣ್ಣುಕಪ್ಪಡಿ, ಕಣ್ಕಾಪು. अंधियारी पाख = ಕೃಷ್ಣಪಕ್ಷ.

अंधेर, पु. ಅಕ್ರಮ; ಬಲಾತ್ಕಾರ; ಅವ್ಯವಸ್ಥೆ, ಅವಾಂತರ. अंधेर खाता = ಲೆಕ್ಕ ಮುಂತಾದುವುಗಳಲ್ಲಿ ಗಲಿಬಿಲಿ, ಅಬಂದರೆ.

अंधेरा, पु. ಕತ್ತಲೆ; ಮುಂಜುಮುಂಜಾಗಿ ಕಾಣುವಿಕೆ, ಮಬ್ಬು; ನೆರಳು; ವ್ಯಥೆ. वि. ಕತ್ತಲೆಯಾದ अंधेरे मुंह या मुंह अंधेरे = ಬೆಳಗಿನ ಜಾವ, ಮುಂಜಾನೆ, ನಸುಕಿನಲ್ಲಿ.

अंधेरिया, स्त्री. ಕತ್ತಲೆ; ಇರುಳು; ಕೃಷ್ಣಪಕ್ಷ; ತೋಡುವಿಕೆ, ಅಗತೆ.

अंधेरी, स्त्री. ಕತ್ತಲೆ; ಇರುಳು, ರಾತ್ರಿ; ಬಿರುಗಾಳಿ; ಕುದುರೆಯ ಕಣ್ಣುಪಟ್ಟಿ. वि. ಕತ್ತಲೆಯಾದ. अंधेरी डालना या देना = ಕಣ್ಣಿಗೆ ಮಣ್ಣು ಹಾಕು, ಮೋಸ ಮಾಡು.

अंधौटी, स्त्री. = **अंधियारी**.

अंब, पु. ಮಾವು; ಮಾವಿನ ಮರ.

अंबर, पु. ವಸ್ತ್ರ; ಆಕಾಶ; ಮೇಘ; ಹತ್ತಿ; ಅಭ್ರಕ.

अंबर डंबर, पु. ಸಂಜೆಯ ಕೆಂಬಾರ.

अंबराई, स्त्री. ಮಾವಿನ ತೋಪು.

अंबाड़ा, स्त्री. ಮಾಟೇಕಾಯಿ

अंबापोली, स्त्री. ಹೆಪ್ಪುಗಟ್ಟಿಸಿದ ಮಾವಿನ ರಸ.

अंबार, पु. ಗುಡ್ಡೆ, ರಾಶಿ; ಸಮೂಹ.

अंबारी, स्त्री. ಆನೆಯ ಮೇಲೆ ಕಟ್ಟುವ ಮಂಟಪ, ಅಂಬಾರಿ.

अंबिया, स्त्री. ಮಾವಿನ ಹೀಚು.

अंबोह, पु. ಗುಂಪು, ಸಂದಣಿ.

अंभौरी, स्त्री. ಬೆವರುಸಾಲೆ.

अंश, पु. ಭಾಗ, ಪಾಲು; ಚಂದ್ರನ ಕಲೆ; ವೀಸಪಾಲು; ಸಮಕೋಣದ ೯೦ನೆಯ ಒಂದು ಭಾಗ.

अंसुआना, अक्रि. ಕಂಬನಿಗೂಡು.

अंहड़ा, पु. ತೂಕದ ಬಟ್ಟು.

अऊत, वि. ಮಕ್ಕಳಿಲ್ಲದವ.

अकचकाना, अक्रि. ಕಕ್ಕಾಬಿಕ್ಕಿಯಾಗು, ದಿಗ್ಭ್ರಾಂತನಾಗು, ಬೆರಗಾಗು.

अकड़, स्त्री. ಬಿರುಸು; ಸೆಡಕು, ಸೆಡೆತ; ಅಹಂಕಾರ; ಹಠ; ಬಿಗುಮಾನ; ಬಿಂಕ

अकड़ना, अक्रि. ನಿಗರು, ಸೆಟೆ; ಜೋಮುಹಿಡಿ; ಜಂಭ ಮಾಡು; ಜಕ್ಕಿಸು, ಜಗ್ಗ ಹಾಕು; ಹಟ ಹಿಡಿ; ಸಿಡುಗುಟ್ಟು.

अकड़बाई, स्त्री. ನರಗಳ ಸೆಡೆತ, ಕೈಕಾಲು ಸೇದಿಹೋಗುವುದು.

अकड़बाज़, वि. ಸಿಡುಕುಮೋರೆಯವ, ಸಿಡುಕಲ; ಅಹಂಕಾರಿ.

अकड़बाज़ी, स्त्री. ಸಿಡುಕುತನ; ಅಹಂಕಾರ.

अकड़ाव, पु. ಸೆಡಕು, ಸೆಡೆತ.

अकड़ैत, वि. =अकड़बाज़.

अकथनीय, वि. ಹೇಳಲಾಗದ.

अकनना, सक्रि. ಕಿವಿಗೊಡು, ಆಲಿಸು.

अकना, अक्रि. ಬೇಸರಗೊಳ್ಳು.

अकबक, स्त्री. ಅಸಂಬದ್ಧ ಪ್ರಲಾಪ; ಗಾಬರಿ; ಉಪಾಯ, ತಂತ್ರ. वि. ಬೆಚ್ಚಿಬಿದ್ದ.

अकबकाना, अक्रि. ಬೆಚ್ಚಿಬೀಳು, ಗಾಬರಿಯಾಗು.

अकबर, वि. ಶ್ರೇಷ್ಠ, ಮಹಾನ್.

अक़बाल, पु. =इक़बाल.

अकरास, स्त्री. ಮೈಮುರಿಯುವಿಕೆ; ಸೋಮಾರಿತನ.

अकरासू, वि. ಗರ್ಭಿಣಿ.

अकरी, स्त्री. ಬಿತ್ತನೆ ಚೆಲ್ಲುವ ಮುಟ್ಟು, ಕೂರಿಗೆ.

अकलखुरा, वि. ಸ್ವಾರ್ಥಿ; ಸರಳಸ್ವಭಾವವಿಲ್ಲದವ; ಅಸೂಯೆಪಡುವವ.

अकवन, पु. ಎಕ್ಕದ ಗಿಡ.

अकस, पु. ದ್ವೇಷ, ಹಗೆ; ದುಷ್ಪ್ರೇರಣೆ.

अकसना, सक्रि. ದ್ವೇಷಿಸು; ಪೋಟಾಪೋಟಿ ಮಾಡು, ಸ್ಪರ್ಧಿಸು.

अकसर, क्रिवि. ಪ್ರಾಯಶಃ, ಬಹುಶಃ.

अकसीर, स्त्री. ಲೋಹಗಳನ್ನು ಚಿನ್ನಬೆಳ್ಳಿಯಾಗಿ ಮಾಡುವ ವಸ್ತು, ಸ್ಪರ್ಶವೇದಿ, ಚಿಂತಾಮಣಿ; ಸರ್ವರೋಗನಿವಾರಿಣಿ. वि. ಗುಣಕಾರಿ.

अकांड, क्रिवि. ಅಸಮಯ, ಆಕಸ್ಮಿಕ

अकांडतांडव, पु. ಅಪ್ರಕೃತ; ಅಸಂಗತ; ಅಡ್ಡಾತಿಡ್ಡಿ.

अकाज, पु. ಕಾರ್ಯನಾಶ; ತೊಡಕು; ಕೆಟ್ಟ ಕೆಲಸ.

अकाट्य, वि. ಖಂಡಿಸಲಾಗದ, ನಿಶ್ಚಿತ.

अक़ारिब, पु. ಹತ್ತಿರದವರು, ಬಂಧುಬಳಗ.

अकाल, वि. ಅಸಮಯ, ಕ್ಷಾಮ, ಬರ.

अकाली, पु. ಗುರು ನಾನಕರ ಅನುಯಾಯಿಗಳು, ಸಿಕ್ಖ ಸನ್ಯಾಸಿಗಳು.

अकास-दीया, पु. ಆಕಾಶದೀಪ.

अकासबेल, स्त्री. ಆಕಾಶಬಳ್ಳಿ.

अक़िलदाढ़, पु. ಸಿಂಗಹಲ್ಲು.

अकुलाना, अक्रि. ಕಾತರಿಸು, ತವಕ ಪಡು; ಗಾಬರಿಯಾಗು; ಮಗ್ನನಾಗು.

अकूत, वि. ಅಪರಿಮಿತ; ಅಳವಿಲ್ಲದ.

अकूड़ल, वि. ಹೆಚ್ಚು, ಹೇರಳ, ಶಾನೆ.

अकेला, वि. ಒಬ್ಬಂಟಿಗ; ಒಂಟಿ; ಅದ್ವಿತೀಯ. पु. ಏಕಾಂತ. अकेला दुकेला = ಒಬ್ಬಿಬ್ಬರು, ಒಂಟಿಸಂಟಿ.

अकेले, क्रिवि. ಒಬ್ಬಂಟಿಗನಾಗಿ, ಒಂಟಿಯಾಗಿ; ಮಾತ್ರ, ಕೇವಲ.

अकौआ, पु. ಎಕ್ಕದ ಗಿಡ; ಕಿರುನಾಲಿಗೆ

अक्खड़, वि. ಚಂಡಿ. ಹಟಮಾರಿ; ಜಗಳಗಂಟಿ; ಉದ್ಧಟ; ಅಸಭ್ಯ; ಮುಟ್ಠಾಳ; ಖಂಡಿತವಾದಿ.

अक्खड़पन, पु. ಅಸಭ್ಯತೆ. ಮೂರ್ಖತನ; ಜಗಳಗಂಟತನ; ನಿರ್ಭಯ; ಖಡಾಖಂಡಿತ.

अक्खा, पु. ಎತ್ತುಗಳ ಮೇಲೆ ಸಾಮಾನು ಹೇರುವ ಇಮ್ಮಗ್ಗಲು ಚೀಲ, ಹಸಿಬೆ ಚೀಲ, ಕಂಟಲೆ.

अक़्ल, स्त्री. ಬುದ್ಧಿ. ತಿಳಿವಳಿಕೆ.

अक़्लमंद, पु. ಬುದ್ಧಿವಂತ, ಜಾಣ.

अक़्लमंदी, स्त्री. ಬುದ್ಧಿವಂತಿಕೆ, ಜಾಣ್ಮೆ.

अक्स, पु. ಪ್ರತಿಬಿಂಬ, ಛಾಯೆ, ಫೋಟೋ. अक्स खींचना = ಫೋಟೋ ತೆಗೆ.

अक्सी, वि. ಛಾಯಾ ಸಂಬಂಧವಾದ. अक्सी तस्वीर = ಛಾಯಾ ಪಟ, "ಫೋಟೋ".

अक्सर, क्रिवि. = **अकसर**.

अखज, वि. ತಿನ್ನಬಾರದ, ಕೆಟ್ಟ.

अखड़ैत, पु. ಜಟ್ಟಿ, ಪೈಲ್ವಾನ್.

अख़नी, स्त्री. ಮಾಂಸದ ಸಾರು.

अख़बार, पु. ವೃತ್ತಪತ್ರಿಕೆ, ವರ್ತಮಾನಪತ್ರ, ವಾರ್ತಾ ಪತ್ರಿಕೆ.

अख़बारनवीस, पु. ಪತ್ರಿಕಾ ಸಂಪಾದಕ; ವಾರ್ತಾ ಲೇಖಕ.

अखरना, अक्रि. ಕೆಟ್ಟದನಿಸು, ಕಷ್ಟವಾಗಿ ತೋರು.

अखरा, वि. ಕೃತ್ರಿಮ. पु. ಜವೆ ಗೋಧಿಯ ಹಿಟ್ಟು.

अखरोट, पु. ಅಕ್ರೋಡ ಮರ.

अख़लाक़, पु. ಶಿಷ್ಟಾಚಾರ, ಶೀಲ, ನೀತಿ

अखाड़ा, पु. ಕುಸ್ತಿ ಅಥವಾ ಕಸರತ್ತು ಮಾಡುವ ಸ್ಥಳ, ಗರಡಿ ಸಾಧನೆಯ ಮನೆ; ಖಲೂರಿಕೆ; ಸಾಧುಗಳ ಮಂಡಲಿ; ಗಾಯಕರ ಮೇಳ; ಆಟಗಾರರ ಕೂಟ; ಸಭೆ; ರಂಗಭೂಮಿ.

अख़ीर, पु. ಕೊನೆ, ಸಮಾಪ್ತಿ.

अखूट, वि. ಅಕ್ಷಯ.

अखोर, वि. ಸಜ್ಜನ; ನಿರ್ದೋಷಿ; ನಿರರ್ಥಕ; ಕೆಟ್ಟ. पु. ಕಸಕಡ್ಡಿ; ಗಲೀಜು ಹುಲ್ಲು.

अखोह, पु. ಹಳ್ಳದಿಣ್ಣೆಗಳುಳ್ಳ ಭೂಮಿ, ಏರು ತಗ್ಗಾದ ಪ್ರದೇಶ.

अखौट, अखौटा, पु. ಬೀಸುವ ಕಲ್ಲಿನ ಗೂಟ; ಚಕ್ರದ ಅಚ್ಚು, ಇರಸು, ಇರ್ಚ

अख़्ख़ाह, अव्य. ಆಶ್ಚರ್ಯಸೂಚಕ ಶಬ್ದ.

अख़्ज़, पु. ಸ್ವೀಕರಿಸುವುದು.

अख़्तियार, पु. = **इख़्तियार**.

अगटना, अक्रि. ಒಂದಾಗು, ಸೇರು

अगड़धत्ता, वि. ಭಾರಿ, ಪ್ರಚಂಡ.

अगड़बगड़, वि. ಕ್ರಮವಲ್ಲದ, ವ್ಯವಸ್ಥೆಯಿಲ್ಲದ. पु. ವ್ಯರ್ಥ ಪ್ರಲಾಪ; ನಿರರ್ಥಕ ಕೆಲಸ.

अगडम बगडम, पु. ಗಡಿಬಿಡಿ, ಅವ್ಯವಸ್ಥೆ; ನಿರರ್ಥಕ ವಸ್ತು, ಮಣ್ಣು ಮಸಂಡಿ.

अगड़ा, पु. ತೆನೆ ಬಿಡಿಸಿದ ಧಾನ್ಯದ ಹೊಡೆ, ಕಂಕಿ, ಕಣಿಕೆ.

अगना, पु. ಮುಂಗಡ,

अगती, क्रिवि. ಮುಂಚಿತವಾಗಿ. पु. ಮುಂಗಡ.

अगमासी, स्त्री. =अगवांसी.

अगर, पु. ಒಂದು ಮರ (ಇದರ ಚಕ್ಕೆಯಿಂದ ಅಗ್ಗರುಬತ್ತಿ ಮಾಡುತ್ತಾರೆ). अव्य. ಒಂದು ವೇಳೆ; ಆದಲ್ಲಿ. अगर मगर करना =ತರ್ಕಿಸು; ಹಿಂದು ಮುಂದು ನೋಡು, ಹಿಂಜರಿ.

अगरचे, अव्य. ಯದ್ಯಪಿ, ಆದಾಗ್ಯೂ.

अगरबत्ती, स्त्री. ಗಂಧದ ಕಡ್ಡಿ, ಊದುಬತ್ತಿ.

अगरी, स्त्री. ಅಗಳಿ; ಒಂದು ಬಗೆಯ ಹುಲ್ಲು; ಹುಲ್ಲಿನಚಾವಣಿ; ಸಿಕ್ಕಾಪಟ್ಟೆ ಮಾತು.

अगलबगल, क्रिवि. ಅಕ್ಕಪಕ್ಕದಲ್ಲಿ.

अगला, वि. ಮುಂದಿನ, ಮೊದಲಿನ; ಪುರಾತನ; ಮುಂದೆ ಬರುವ, ಆಗಾಮಿ; ಮಾರನೆಯ, ಮರು. पु. ಮುಖಂಡ; ಗಟ್ಟಿಗ; (ಬಹುವಚನದಲ್ಲಿ) ಪೂರ್ವೀಕರು.

अगवना, अक्रि ಮುಂದುವರಿ.

अगवांसी, स्त्री. ನೇಗಿಲಿನ ಗುಳ, ಮೋಣಿ; ಬೆಳೆಯಲ್ಲಿ ಗೇಣಿಗೆದಾರನಿಗೆ ಸೇರುವ ಭಾಗ, ಮೋಣಿಪಾಲು.

अगवाई, स्त्री. ಎದುರುಗೊಳ್ಳುವುದು, ಸ್ವಾಗತ. पु ಮುಂದಾಳು, ನಾಯಕ.

अगवाड़ा, पु. ಮನೆಯ ಮುಂಭಾಗ, ಪ್ರಾಂಗಣ.

अगवान, पु. ಎದುರುಗೊಳ್ಳುವವ; ವಿವಾಹದಲ್ಲಿ ಬೀಗರನ್ನೆದುರುಗೊಳ್ಳುವವರು.

अगवानी, स्त्री. ಅತಿಥಿಗಳನ್ನು ಎದುರುಗೊಳ್ಳುವುದು, ಸ್ವಾಗತ; ವಿವಾಹದಲ್ಲಿ ಬೀಗರನ್ನು ಸ್ವಾಗತಿಸುವ ಸಂಪ್ರದಾಯ; ವರಪೂಜೆ. पु. ಮುಂದಾಳು.

अगवार, पु. ಸಾಗುವಳಿದಾರನಿಗೆ ಸೇರುವ ಬೆಳೆಯ ಪಾಲು, ಮೋಣಿಪಾಲು; ಕೇರುವಾಗ ಹೊಟ್ಟಿನೊಂದಿಗೆ ಬಿದ್ದು ಹೋಗುವ ಕಾಳುಗಳು; ಅಂಗಳ.

अगहन, पु. ಮಾರ್ಗಶೀರ್ಷ ಮಾಸ.

अगहनिया, वि. ಮಾರ್ಗಶೀರ್ಷ ಮಾಸದಲ್ಲಾದ (ಧಾನ್ಯ).

अगहनी, स्त्री. ಮಾರ್ಗಶೀರ್ಷ ಮಾಸದಲ್ಲಿ ಕೊಯ್ಯುವ ಬೆಳೆ.

अगहुंड, क्रिवि. ಮುಂದುಗಡೆ.

अगाऊ, क्रिवि. ಮುಂದಾಗಿ, ಪೂರ್ವಭಾವಿಯಾಗಿ. पुं. ಮುಂಗಡ. वि. ಮುಂದಿನ; ಪೂರ್ವದ.

अगाड़ा, पु. ಒಂದು ನೆಲ, ಮೊಕ್ಕಲು;

ಮುಂದಾಗಿ ಕಳುಹಿಸುವ ಪ್ರಯಾಣದ ಸಾಮಾನುಗಳು.

अगाड़ी, क्रिवि. ಮುಂದಾಗಿ; ಎದುರಿನಲ್ಲಿ; ಮುಂಚಿತವಾಗಿ, ಮುಂದೆ. पु. ಮುಂಭಾಗ, ಮುಂದು; ಕುದುರೆಯ ಮುಂಗಾಲುಗಳನ್ನು ಗೂಟಕ್ಕೆ ಕಟ್ಟಿ ಹಾಕುವ ಹಗ್ಗ, ಅಗಾಡಿ; ಸೇನೆಯ ಮೊಟ್ಟಮೊದಲಿನ ಆಕ್ರಮಣ.

अगाड़ू, क्रिवि. =अगाड़ी.

अगाध, वि. ಆಳವಾದ; ಆಳವಿಲ್ಲದ.

अगार, पु. ಗೃಹ; ಖಜಾನೆ. क्रिवि. ಮುಂದೆ.

अगाह, वि. =आगाह.

अगाही, स्त्री. ಮುನ್ನೆಚ್ಚರಿಕೆ.

अगिनबोट, पु. ಹೊಗೆ ದೋಣಿ, ಹೊಗೆ ಹಡಗು.

अगिया, स्त्री. ಅಗ್ನಿ, ಬೆಂಕಿ. अगिया बैताल=ಕೊಳ್ಳಿಪಿಶಾಚಿ, ಕೊಳ್ಳಿದೆವ್ವ.

अगियाना, अक्रि. ಮೈಯಲ್ಲಿ ಉರಿಯಾಗು.

अगियार, अगियारी, स्त्री. ಧೂಪಾರತಿ; ಹವನ, ಅಗ್ನಿಕುಂಡ.

अगुआ, पु. ಮುಂದಾಳು, ಪುಢಾರಿ; ಮುಖಂಡ, ಮುಖ್ಯಸ್ಥ; ಪುರೋಗಾಮಿ, ಮಾರ್ಗದರ್ಶಿ; ವಿವಾಹ ನಿಷ್ಕರ್ಷೆ ಮಾಡುವವ.

अगुआई, स्त्री. ಮುಂದಾಳುತನ, ಅಗ್ರಸ್ಥಾನ, ನಾಯಕತ್ವ; ದಾರಿ ತೋರಿಸುವಿಕೆ.

अगुआना, सक्रि. ಮುಂದಾಳನ್ನು ನಿಯಮಿಸು. अक्रि. ಮುಂದುವರಿ.

अगुवानी, स्त्री. =अगवानी.

अगुसरना, अक्रि. ಮುಂದುವರಿ.

अगूठना, सक्रि. ಮುತ್ತಿಕೊಳ್ಳು, ಆವರಿಸು, ಗೇರಾಯಿಸು; ಮುಚ್ಚು.

अगूठा, पु. ಮುತ್ತಿಗೆ.

अगूता, क्रिवि ಮುಂದುಗಡೆ.

अगोट, पु. ತಡೆ, ಮರೆ; ಆಶ್ರಯ.

अगोटना, सक्रि. ತಡೆಮಾಡು; ಮರೆಮಾಡು; ಪಹರೆಯಲ್ಲಿಡು; ಮುಚ್ಚಿಡು; ಮುತ್ತಿಕೊಳ್ಳು; ಸ್ವೀಕರಿಸು; ಆರಿಸು, ಆಯು, ಚುನಾಯಿಸು. अक्रि. ಅಡ್ಡಿಯಾಗು; ಸಿಕ್ಕಿಬೀಳು.

अगोरना, सक्रि. ಇದಿರು ನೋಡು, ನಿರೀಕ್ಷಿಸು; ಕಾಯು, ಕಾವಲಿರು; ತಡೆಮಾಡು.

अगोरिया, पु. ಕಾವಲುಗಾರ.

अगोरी, स्त्री. ಕಬ್ಬಿನ ಸೋಗೆ.

अगौड़ी, स्त्री. अगौढ़, पु. ಮುಂಗಡ.

अगौनी, स्त्री. =अगवानी.

अगौरा, पु. ಕಬ್ಬಿನ ಸಿಪ್ಪೆ, ಹೀದೆ.

अग्नि, स्त्री. ಅಗ್ನಿ, ಬೆಂಕಿ, ಉರಿ.

अग्यारी, स्त्री. ಅಗ್ನಿಕಾರ್ಯ, ಹವನ; ಅಗ್ನಿಕುಂಡ.

अग्रवाल, पु. (ಉತ್ತರದೇಶದ) ಸೆಟ್ಟಿಮಕ್ಕಳು.

अग्रसर, पु. ಮುಂದಾಳು; ಮೊದಲನೆಯವ; ಮುಖಂಡ.

अघट, वि. ಘಟಿಸದ, ಸಂಭವಿಸದ; ಕಡಿಮೆಯಾಗದ.

अघटित, वि. ಆಗದಿರುವ, ಸಂಭವಿಸದಿರುವ; ಅನುಚಿತ.

अघवाना, सक्रि. ಹೊಟ್ಟೆಯು ತುಂಬ ತಿನ್ನಿಸು; ತೃಪ್ತಿಪಡಿಸು.

अघाट, पु. ಪರಾಧೀನ ಮಾಡಲು ಹಕ್ಕಿಲ್ಲದ ಭೂಮಿ ಅಥವಾ ಆಸ್ತಿ.

अघाना, अक्रि. ಹೊಟ್ಟೆತುಂಬ ಊಟಮಾಡು, ಕಟರೆಯಾಗು; ದಣಿಯು, ತೃಪ್ತಿಹೊಂದು; ಸಂತುಷ್ಟನಾಗು.

अघोरपंथ, पु. ಶಿವೋಪಾಸಕರ ಒಂದು ಮತ.

अघोरपंथी, पु. ಮನುಷ್ಯನ ಮಾಂಸ ಮೊದಲಾದುವನ್ನು ತಿನ್ನುವ ಒಂದು ಬಗೆ ಶಿವೋಪಾಸಕರು.

अघोरिन, स्त्री. 'अघोरी' का स्त्री रूप.

अघोरी, पु. 'अघोरपंथ' ವನ್ನವಲಂಬಿಸುವವ; ಮನುಷ್ಯನ ಮಾಂಸ ಮೊದಲಾದ ಹೊಲಸು ಪದಾರ್ಥವನ್ನೂ ಸಹ ತಿನ್ನುವವ, ಭಕ್ಷ್ಯಾಭಕ್ಷ್ಯದ ವಿಚಾರವಿಲ್ಲದೆ ತಿನ್ನುವವ; ಹೇಸಿಗೆಯಿಲ್ಲದೆ ತಿನ್ನುವವ; ಹೊಟ್ಟೆಬಾಕ, ತಿಂಡಿಪೋತ, ತೀನಾಳಿ. वि. ಹೇಸಿಗೆಯುವ, ಹೊಲಸಿನವ.

अचंभा, पु. ಆಶ್ಚರ್ಯ, ವಿಸ್ಮಯ; ಆಶ್ಚರ್ಯಕರವಾದ ವಸ್ತು; ಸೋಜಿಗ

अचंभित, वि. ವಿಸ್ಮಿತ, ಚಕಿತ, ಆಶ್ಚರ್ಯಗೊಂಡ.

अचक, वि. ತುಂಬ, ಹೆಚ್ಚು. पु. ದಿಗಿಲು, ಬೆರಗು, ವಿಸ್ಮಯ.

अचकन, पु. ನಿಲುವಂಗಿ.

अचक्का, पु. ಅಜ್ಞಾನಿ, ತಿಳಿಯದವ.

अचपली, स्त्री. ವಿನೋದ, ಕ್ರೀಡೆ.

अचरज, पु. ಆಶ್ಚರ್ಯ, ಅಚ್ಚರಿ, ಸೋಜಿಗ.

अचवन, पु. ಬಾಯಿ ಮುಕ್ಕಳಿಸುವುದು; ಆಚಮನ.

अचवना, अक्रि. ಆಚಮನ ಮಾಡು; ಕೈಕಾಲು ತೊಳೆದು ಬಾಯಿ ಮುಕ್ಕಳಿಸು; ಕಳೆದುಕೊಳ್ಳು.

अचवाना, सक्रि. "**अचवना**" का प्रे. रूप.

अचाका, **अचानक**, क्रिवि. ಅಕಸ್ಮಾತ್ತಾಗಿ, ತಟ್ಟನೆ.

अचार, पु. ಉಪ್ಪಿನಕಾಯಿ, ಉಪ್ಪುಗಾಯಿ, ಊರುಗಾಯಿ.

अचारी, स्त्री. ಮಾವಿನ ಕಾಯಿಯ ಬಾಳಕ.

अचीता, वि. ಯೋಚನೆಯಿಲ್ಲದ; ಯದೃಚ್ಛೆಯಾದ; ಅಕಸ್ಮಾತ್ತಾದ.

अचूक, वि. ನಿಷ್ಫಲವಾಗದ, ತಪ್ಪದಿರುವ, ಅಮೋಘ; ಖಂಡಿತ, ಖಾತರಿ; ರಾಮಬಾಣ (ಔಷಧ). क्रिवि. ಚೆನ್ನಾಗಿ, ಖಂಡಿತವಾಗಿ.

अचेत, वि. ಪ್ರಜ್ಞೆ ಅಥವಾ ಚೇತನವಿಲ್ಲದ; ಎಚ್ಚರ ತಪ್ಪಿದ. वि. ಜಡತ್ವ.

अचैन, पु. ಅಸಮಾಧಾನ. वि. ನೆಮ್ಮದಿಯಿಲ್ಲದ, ವಿಹ್ವಲ.

अच्छ, वि. ಸ್ವಚ್ಛ, ಅಚ್ಛ.

अच्छर, पु. ಅಕ್ಷರ.

अच्छा, वि. ಒಳ್ಳೆಯ; ಮೇಲಾದ,

ಉತ್ತಮ; ಸ್ವಸ್ಥ. क्रिवि. ಚೆನ್ನಾಗಿ. अव्य. ಒಳ್ಳೆಯದು; ಶಹಭಾಸ್! ಭಲ! ಚೆನ್ನು!

अच्छा बिच्छा, वि. ಆರಿಸಿದ, ಆಯ್ದ.

अच्छाई, स्त्री. **अच्छापन**, पु. ಒಳ್ಳೆಯತನ; ಉತ್ಕೃಷ್ಟತೆ; ಮೇಲ್ಮೆ.

अछताना पछताना, अक्रि. ಪಶ್ಚಾತ್ತಾಪ ಪಡು.

अछरौटी, स्त्री. ಅಕ್ಷರಮಾಲೆ.

अछवाना, सक्रि. ಸರಿಪಡಿಸು.

अछवानी, स्त्री. ಬಾಣಂತಿ ಔಷಧ

अछूत, वि. ಮುಟ್ಟದಿರುವ; ಹೊಸ; ಅಸ್ಪೃಶ್ಯ(ಜನರು). पु. ಅಸ್ಪೃಶ್ಯರು.

अछूता, वि. =अछूत.

अजगर, पु. ಹೆಬ್ಬಾವು, ದಾಸರಹಾವು.

अजगरी, स्त्री. ಕಷ್ಟವಿಲ್ಲದ ಜೀವನ, ಸುಖಜೀವನ. वि. ಹೆಬ್ಬಾವಿನಂತಹ; ಕಷ್ಟವಿಲ್ಲದ.

अजगुत, वि. ಅಸಂಗತ; ಅಯುಕ್ತ.

अज़ग़ैब, पु. ಅಪ್ರತ್ಯಕ್ಷ, ಪರೋಕ್ಷ.

अजदहा, पु. ಹೆಬ್ಬಾವು.

अजनबी, वि. ಅಪರಿಚಯಸ್ಥ, ಅಪರಿಚಿತ; ಹೊಸಬ; ತಿಳಿಯದವ.

अजब, वि. ಅದ್ಭುತ, ವಿಚಿತ್ರ.

अज़ब, पु. ಕತ್ತಿ.

अज़मत, स्त्री. ಪ್ರತಾಪ; ಚಮತ್ಕಾರ.

अज़माना, सक्रि. =आज़माना.

अजमोद, पु. ಓಮ, ವಾದಕ್ಕಿ

अजया, स्त्री. ಬಂಗಿ.

अजल, स्त्री. ಮರಣ, ಸಾವು.

अज़ल, वि. ಅನಾದಿ.

अजवायन, स्त्री. ಓಮ, ವಾದಕ್ಕಿ.

अजस, पु. ಅಪಯಶಸ್ಸು.

अज़हद, क्रिवि. ಮೇರೆಯಿಲ್ಲದೆ, ಮಿತಿಮೀರಿ.

अज़ां, स्त्री. ಮುಸಲ್ಮಾನರು ನಮಾಜು ಅಥವಾ ಪ್ರಾರ್ಥನೆ ಮಾಡುವ ಧ್ವನಿ.

अजान, वि. ಅಜ್ಞಾನಿ, ತಿಳಿಯದವ; ಅಪರಿಚಿತ. पु. ಅಜ್ಞಾನ, ತಿಳಿವಳಿಕೆಯಿಲ್ಲದಿರುವಿಕೆ.

अजानपन, पु. ಅರಿಯದಿರುವಿಕೆ, ಬುದ್ಧಿಹೀನತೆ.

अज़ाब, पु. ಕಷ್ಟ; ಸಂಕಟ; ಪಾಪ.

अजायब, पु. (अजब का ब. रूप.) ವಿಚಿತ್ರ ವಸ್ತುಗಳು.

अजायबख़ाना, **अजायबघर**, पु. ವಿಚಿತ್ರ ವಸ್ತು ಸಂಗ್ರಹಾಲಯ, 'ತಮಾಷೆ ಬಂಗಲೆ', 'ಮ್ಯೂಜಿಯಂ'

अजारा, पु. =इजारा.

अजी, अव्य. ಸ್ವಾಮಿ, ಬುದ್ಧೀ, ರೀ! (ಸಂಬೋಧನ ಶಬ್ದ).

अज़ीज़, वि. ಪ್ರಿಯ, ಪ್ರೀತಿಯುಳ್ಳ. पु. ಪ್ರಿಯನು; ಹಿತೈಷಿ.

अजीब, वि. ವಿಚಿತ್ರ, ಅದ್ಭುತ.

अज़ीम, वि. ಶ್ರೇಷ್ಠ, ಮಹತ್ತರ.

अजूजा, पु. ಕಾಡು ಬೆಕ್ಕು

अजूबा, वि. ವಿಚಿತ್ರ.

अजोग, वि. ಯೋಗ್ಯವಲ್ಲದ.

अज्ञता, स्त्री. ಅಜ್ಞಾನ, ದಡ್ಡತನ

अज्ञान, पु. ಅಜ್ಞಾನ, ಮೂರ್ಖತನ.

अटंबर, पु. ರಾಶಿ, ಗುಡ್ಡೆ.

अट, स्त्री. ಪ್ರತಿಬಂಧ, ನಿಬಂಧನೆ.

अटक, स्त्री. ತಡೆ, ಅಡ್ಡಿ, ಅಡಚಣೆ; ಸಂಕೋಚ; ನಾಚಿಕೆ; ಹಾನಿ.

अटकन बटकन, पु. ಮಕ್ಕಳ ಒಂದು ಆಟ.

अटकना, अक्रि. ಅಡ್ಡವಾಗು; ತೊಡಕು ಬೀಳು, ಸಿಕ್ಕಿಬೀಳು; ಗಂಟು ಬೀಳು; ಜಗಳವಾಗು.

अटकल, स्त्री. ಅಂದಾಜು, ಊಹೆ.

अटकलना, अक्रि. ಊಹಿಸು.

अटकल पच्चू, पु. ಊಹೆ, ಊಹಾ ಪೋಹ; ಅಂದಾಜು, ಟೂಕಿ. वि. ಊಹೆಯ; ಕಾಲ್ಪನಿಕವಾದ. क्रिवि. ಊಹೆಯಿಂದ; ಸುಮಾರು, ಅಜಮಾಸು

अटकाना, सक्रि. ಅಡ್ಡಿಮಾಡು, ತಡೆ, ಅಡ್ಡಕಟ್ಟು; ಸಿಕ್ಕಿಸು.

अटकाव, पु. ಅಡ್ಡಿ, ತೊಡಕು, ವಿಘ್ನ.

अटन, पु. ಸಂಚಾರ, ತಿರುಗಾಟ.

अटना, अक्रि. ತಿರುಗಾಡು, ತಿರುಗು, ಸಂಚರಿಸು; ಮರೆಮಾಡು.

अटपट, वि. ಕಠಿಣ; ಗೂಢ; ಸಿಕ್ಕು ಬಿದ್ದ; ದಿಕ್ಕೆಟ್ಟ (ಮಾತು).

अटपटाना, अक्रि. ಸಿಕ್ಕು, ಸಿಕ್ಕಿಬೀಳು; ತಡಬಡಾಯಿಸು; ಗಾಬರಿಗೊಳ್ಳು; ಹಿಂಜರಿ.

अटपटी, स्त्री. ದಿಗಿಲು, ಗಾಬರಿ; ಕುಚೇಷ್ಟೆ.

अटंबर, पु. ಅಡಂಬರ; ಮನೆತನ, ಕುಲ.

अटर सटर, स्त्री. ವ್ಯರ್ಥಾಲಾಪ, ಹರಟೆ

अटल, वि. ಸ್ಥಿರ, ನಿಶ್ಚಲ; ಕಾಯಂ; ಖಂಡಿತ, ಖಾತ್ರಿ.

अटवाटी खटवाटी, स्त्री. ಸುಪ್ಪತ್ತಿಗೆ, ಮಂಚ. अटवाटी खटवाटी लेकर पड़ना = ಕೆಲಸ ಕಾರ್ಯಗಳನ್ನು ತೊರೆದು ಸುಮ್ಮನೆ ಬಿದ್ದಿರು.

अटहर, स्त्री. ಗುಡ್ಡೆ, ರಾಶಿ; ಪೇಟಾ, ಪಾವುಡ, ರುಮಾಲು, ಮುಂಡಾಸು. पु. ಕಷ್ಟ, ತೊಂದರೆ.

अटा, स्त्री. ಅಟ್ಟ, ಮಹಡಿ. पु. ರಾಶಿ, ಗುಡ್ಡೆ.

अटाट्ट, वि. ಪೂರಾ, ತುಂಬ; ಹೇರಳ.

अटारी, स्त्री. ಅಟ್ಟ, ಮಹಡಿ, ಉಪ್ಪರಿಗೆ

अटाल, पु. ಅಟ್ಟಳೆ, ಗೋಪುರ, ಬುರುಜು.

अटाला, पु. ರಾಶಿ, ಗುಡ್ಡೆ; ಸಾಮಾನು; ಕಟುಕರ ಬೀದಿ.

अट्ट, वि. ದೃಢ, ಗಟ್ಟಿ; ಎಡೆ ಬಿಡದ, ಅನವರತವಾದ; ಹೇರಳ.

अटेरन, पु. ದಾರ ಸುತ್ತುವ ಯಂತ್ರ, ಅರಟೆ; ಕುದುರೆಯನ್ನು ಸುತ್ತಿಸುವುದು

अटेरना, सक्रि. ದಾರದ ಲಡಿ ಮಾಡು; ರಾಟೆಯ ಮೇಲೆ ಸುತ್ತು, ದಾರ ತೋಡು; ಹೆಚ್ಚಾಗಿ ಮದ್ಯಪಾನ ಮಾಡು.

अट्टसट्ट, पु. ವ್ಯರ್ಥ ಪ್ರಲಾಪ, ತರಳೆ ಮಾತು, ಹುಚ್ಚು ಹರಟೆ.

अट्टहास, पु. ಗಟ್ಟಿಯಾದ ನಗೆ.

अट्टी, स्त्री. ದಾರದ ಉಂಡೆ, ಲಡಿ.

अट्टा, पु. (ಇಸ್ಪೀಟು ಆಟದಲ್ಲಿ)

ಎಂಟನೇ ಬಂದು.

अट्ठाईस, वि. ಇಪ್ಪತ್ತೆಂಟು.

अट्ठानबे, अट्ठानवे, वि. ತೊಂಭತ್ತೆಂಟು.

अट्ठावन, वि. ಐವತ್ತೆಂಟು.

अट्ठासी. वि. ಎಂಭತ್ತೆಂಟು.

अठइसी, स्त्री. ಇಪ್ಪತ್ತೆಂಟು ಪಂಟಿಗಳು ಅಂದರೆ ೧೪೦, (ಹಣ್ಣು ಮೊದಲಾದುವುಗಳ ಮಾರಾಟದಲ್ಲಿ).

अठईं, स्त्री. ಅಷ್ಟಮೀ.

अठकौसल, पु. ಪಂಚಾಯಿತಿ; ಆಲೋಚನಾಸಭೆ; ಮಂತ್ರಾಲೋಚನೆ.

अठखेली, स्त्री. ವಿನೋದ, ಕ್ರೀಡೆ; ಚಾಂಚಲ್ಯ, ಲೌಲ್ಯ; ಮದೋನ್ಮತ್ತತೆ

अठगुना, वि. ಎಂಟುಪಾಲು, ಎಂಟು ಮಡಿ, ಎಂಟರಷ್ಟು.

अठन्निया, वि. ಎಂಟಾಣೆಯ; ಎಂಟಾಣೆಯಷ್ಟು.

अठलान, स्त्री. ಬೆಡಗು, ಒಯ್ಯಾರ.

अठन्नी, स्त्री. ಎಂಟಾಣೆನಾಣ್ಯ, ಅಧೇಲಿ

अठपहला, वि. ಎಂಟು ಮಗ್ಗಲಿನ; ಎಂಟು ಮೂಲೆಯ.

अठमासा, पु. =अठवांसा.

अठमासी, स्त्री. ಎಂಟು "ಮಾಷ"ಗಳ ತೂಕವುಳ್ಳ ಚಿನ್ನದ ನಾಣ್ಯ, ಸವರ್ನ.

अठलाना, अक्रि. ಸೆಟಗೊಳ್ಳು; ಸೆಡೆ; ಮತ್ತನಾಗು; ಬೆಡಗು ತೋರಿಸು, ಲಾಲಿಸು, ಲಲ್ಲೈಸು.

अठवना, अक्रि. ನೆಲೆಗೊಳ್ಳು.

अठवांसा, वि. ಎಂಟು ತಿಂಗಳಿಗೆ ಹುಟ್ಟುವ. पु. ಸೀಮಂತೋತ್ಸವ; ಕಬ್ಬಿನ ಬೆಳೆಗೆ ಎಂಟು ತಿಂಗಳು ಕೃಷಿ ಮಾಡಿರುವ ಭೂಮಿ.

अठवारा, पु. ಎಂಟನೆಯ ದಿನ; ಎಂಟು ದಿನದ ಕಾಲ; ಒಂದು ವಾರ.

अठहत्तर, वि ಎಪ್ಪತ್ತೆಂಟು.

अठाईस, वि. ಇಪ್ಪತ್ತೆಂಟು.

अठानबे, वि. ತೊಂಭತ್ತೆಂಟು.

अठारह, वि. ಹದಿನೆಂಟು.

अठासी, वि. ಎಂಭತ್ತೆಂಟು.

अठोतरी, स्त्री. ನೂರ ಎಂಟು ಮಣಿಗಳ ಜಪಮಾಲೆ.

अडंगा, पु ಅಡಚಣೆ, ತೊಡರು, ವಿಘ್ನ

अड़, पु. ಮುಷ್ಕರ, ಹಟ.

अड़काना, सक्रि. =अड़ाना.

अड़गड़ा, पु. ಗಾಡಿಗಳು ನಿಲ್ಲುವ ಸ್ಥಳ, ಗಾಡೀಚೌಕ; ಕಾಲ್ನಡೆಗಳ ಸಂತೆ, ದನಗಳ ಜಾತ್ರೆ.

अड़गोड़ा, पु. ತೊಂಡು ದನಗಳ ಕುತ್ತಿಗೆಗೆ ಕಟ್ಟುವ ಮರದ ಕೊರಡು, ತೊಂಡುಮರ, ದಂಡಿ, ಗುದ್ದಿ, ಗೊದೆ.

अड़चन, अड़चल, स्त्री. ತೊಡಕು, ಅಡಚಣೆ; ತೊಂದರೆ.

अड़तल, पु. ಮರೆ; ಆಶ್ರಯ, ನೆಪ.

अड़तालीस, वि. ನಲವತ್ತೆಂಟು.

अड़तीस, वि. ಮೂವತ್ತೆಂಟು

अड़दार, वि. ಹಟಮಾರಿ, ಮೊಂಡ; ಚಂಡಿ; ಸೆಡಕಿನವ, ಅಹಂಕಾರಿ; ಸೊಕ್ಕಿದ.

अड़ना, अक्रि. ನಿಲ್ಲು, ನಿಂದಿರು; ಮೊಂ

ಜುಬೀಳು, ಹಟ ಹಿಡಿ, ಚಂಡಿಸು.

अड़बंग, अड़बड़, वि. ಕಠಿಣ, ಕಷ್ಟಸಾಧ್ಯ.

अड़सठ, वि. ಅರವತ್ತೆಂಟು.

अड़हुल, पु. ದಾಸವಾಳದ ಹೂ.

अड़ाड़, पु. ದೊಡ್ಡಿ, ಕೊಟ್ಟಿಗೆ, ರೊಪ್ಪ; ಸೌದೆಯ ರಾಶಿ; ಸೌದೆಯ ಅಂಗಡಿ.

अड़ान, स्त्री. ನಿಲ್ಲುವ ಸ್ಥಳ, ನಿಲ್ದಾಣ; ಪಾಳೆಯ, ಮೊಕ್ಕಾಂ.

अड़ाना, सक्रि. ನಿಲ್ಲಿಸು; ಅಡ್ಡಿಮಾಡು: ಅಟಕಾಯಿಸು; ತುಂಬು, ತುರುಕು; ತಡೆ, ಊರೆಕೊಡು, ಆಧಾರ ಕೊಡು. अक्रि. ಹಲಿವಿಳಿ. पु. ಆಧಾರ, ಊತು, ಊರೆ, ಒತ್ತುಗಂಬ.

अड़ायता, वि. ಮರೆ ಮಾಡುವ.

अड़ार, पु. ಗುಡ್ಡೆ, ರಾಶಿ; ಸೌದೆಯ ರಾಶಿ; ಸೌದೆಯ ಅಂಗಡಿ.

अड़ियल, वि. ಚಂಡಿ, ಹಠಮಾರಿ; ಮೊಂಡ; ಸೋಮಾರಿ.

अड़ी, स्त्री. ಹಟ, ಮುಷ್ಕರ; ತಡೆ, ನಿರ್ಬಂಧ; ಇಕ್ಕಟ್ಟಾದ ಪ್ರಸಂಗ, ಮುಗ್ಗಟ್ಟು.

अड़्लना, सक्रि. = उंडेलना.

अड़ूसा, पु. ಆಡು ಮುಟ್ಟದ ಸೊಪ್ಪು. ಆಡುಸೋಗೆ.

अड़ोस पड़ोस, पु. ನೆರೆಹೊರೆ, ಅಕ್ಕಪಕ್ಕ.

अड़ोसी पड़ोसी, पु. ನೆರೆಹೊರೆಯವರು, ನೆರೆಕರೆ.

अड्डा, पु. ತಂಗುವ ಸ್ಥಳ, ಬಿಡಾರ; ಠಿಕ್ಕೆ, ನೆಲೆ; ಪಕ್ಷಿಗಳು ಕುಳಿತುಕೊಳ್ಳುವುದಕ್ಕಾಗಿ ಹಾಕಿದ ಕೋಲು; ಪಾರಿವಾಳದ ಗೂಡು; ನೇಯುವಾಗ ಕಾಲಿಟ್ಟುಕೊಳ್ಳುವ ಕುಳಿ, ಮಗ್ಗದ ಕುಣಿ

अढ़तिया, पु. ತರಗುಗಾರ, ದಲ್ಲಾಳಿ, ದಳ್ಳಾಳಿ; ಮಧ್ಯಸ್ಥಗಾರ.

अढ़ाई, वि. ಎರಡೂವರೆ.

अढ़िया, स्त्री. ಮರಿಗೆ, ಕಲ್ಲುಗಡಿಗೆ.

अढुक, पु. ಪೆಟ್ಟು; ಢಿಕ್ಕಿ.

अढुकना, अक्रि. ಢಿಕ್ಕಿ ಹೊಡೆ, ಪೆಟ್ಟಾಗು.

अढ़ैया, पु. ಎರಡೂವರೆ ಸೇರು, ಅಡೀಸೇರು; ಎರಡೂವರೆ ಸೇರಿನ ಬಟ್ಟು; ಎರಡೂವರೆಯ ಮಗ್ಗಿ.

अतः, अतएव, क्रिवि. ಆದುದರಿಂದ

अतर, पु. ಅತ್ತರು, ಪನ್ನೀರು.

अतरदान, पु. ಅತ್ತರು ಇಡುವ ಪಾತ್ರೆ, ಪನ್ನೀರುದಾನಿ, ಅತ್ತರದಾನಿ.

अतरसों, क्रिवि. ಆಚೆಮೊನ್ನೆ; ಆಚೆನಾಡದ್ದು.

अतराफ़, क्रिवि. ನಾಲ್ಕು ಕಡೆಯಲ್ಲೂ, ಸುತ್ತಲೂ.

अतलस, स्त्री. ತೆಳುವಾದ ರೇಷ್ಮೆ ಬಟ್ಟೆ

अतसी, स्त्री. ಅಗಸೆ ಬೀಜ.

अता, स्त्री. ಕೊಡುವಳಿ, ಕೊಡಗೆ; ದಾನ

अताई, वि. ಪ್ರವೀಣ; ಜಾಣ; ಗಟ್ಟಿಗ

अति, वि. ಬಹಳ, ಹೆಚ್ಚು, ಅತಿ.

अतिरिक्त, क्रिवि. ಹೊರತು. वि. ಇತರ; ಉಳಿದ, ಬೇರೆಯಾದ, ಭಿನ್ನ.

अतिशय, वि. ಹೆಚ್ಚಾದ.

अतिसार, पु. ಹೊಟ್ಟೆ ಜಾಡಿಸುವ ರೋಗ, ಜಾಡಣೆ, ಉಟ್ಟಿಕೆ.

अतीस, पु. ಒಂದು ವನಸ್ಪತಿ, ಅತಿವಿಷ

अतुल, वि. ಅಳೆಯಲಾರದ; ಎಣಿಸಲಾರದ, ಹೆಚ್ಚಾದ; ಈಡಿಲ್ಲದ. पु. ಎಳ್ಳುಗಿಡ

अत्तार, पु. ಅತ್ತರು, ತೈಲ ಮುಂತಾದುವನ್ನು ಮಾರುವವ, ಸುಗಂಧ ವ್ಯಾಪಾರಿ; ಗಂಧಿಗೆಯಂಗಡಿಯವ; ಔಷಧ ಮಾಡುವವ ಅಥವಾ ಮಾರುವವ.

अत्यम्ल, वि. ಬಹಳ ಹುಳಿಯಾದ, ಹುಳಿಲೊಟ್ಟೆ. पु. ಹುಳಿ.

अत्याचार, पु. ದುರಾಚಾರ, ಅನ್ಯಾಯ; ಬಲಾತ್ಕಾರ

अथक, वि. ಆಲಸ್ಯಗೊಳ್ಳದ, ದಣಿಯದ.

अथच, अव्य. ಮತ್ತೂ, ಹಾಗೂ.

अथना, अक्रि. ಅಸ್ತವಾಗು.

अथमना, पु. ಪಡುವಲು, ಪಶ್ಚಿಮ.

अथरा, पु. अथरी, स्त्री. ಮಣ್ಣು ತೊಟ್ಟಿ, ಚರಣಿಗೆ.

अथवा, अव्य. ಅಥವಾ, ಇಲ್ಲವೇ.

अथाई, स्त्री. ಕುಳಿತುಕೊಳ್ಳುವ ಸ್ಥಳ, ವೇದಿಕೆ, ಜಗುಲಿ; ಸಭೆ, ಪಂಚಾಯಿತಿ.

अथान, अथाना, पु. ಉಪ್ಪಿನಕಾಯಿ.

अथाना, सक्रि. ಆಳ ನೋಡು.

अथाह, वि. ನೆಲೆಗಾಣದ, ಬಹಳ ಆಳವಾದ; ಗಭೀರ, ಅಗಾಧ; ಗೂಢ पु. ಆಳ.

अदंड, पु. ತೆರಿಗೆಯಿಲ್ಲದ್ದು, ಸರ್ವಮಾನ್ಯ.

अदग, वि. ನಿಷ್ಕಲಂಕವಾದ, ದೋಷವಿಲ್ಲದ; ಪವಿತ್ರ.

अदद, स्त्री. ಸಂಖ್ಯೆ, ಎಣಿಕೆ, ಅಂಕಿ.

अदन, पु. "ಆದಂ" ಮತ್ತು "ಈವೆ" ಇವರಿದ್ದ ಉಪವನ.

अदना, वि. ತುಚ್ಛ, ನಿಕೃಷ್ಟ; ಕೀಳು ತರದ, ಮಟ್ಟ.

अदब, पु. ವಿಧೇಯತೆ, ಅದಬ್ಬು, ಶಿಷ್ಟಾಚಾರ; ಸಾಹಿತ್ಯ. अदब कायदा = ಶಿಷ್ಟಾಚಾರ.

अदबदाना, अक्रि. ಕಳವಳಗೊಳ್ಳು, ತಲ್ಲಣಿಸು; ಹಿಂಜರಿ, ಹೊಯಿದಾಡು; ನಿರ್ವಾಹವಿಲ್ಲದಿರು, ಅಶಕ್ತನಾಗಿರು. अदबदाकर, अदबदाके = ನಿರ್ವಾಹವಿಲ್ಲದೆ; ಅನಿವಾರ್ಯವಾಗಿ, ಅಗತ್ಯವಾಗಿ, ಕಡ್ಡಾಯವಾಗಿ; ಖಂಡಿತವಾಗಿ

अदबियात, स्त्री. ಸಾಹಿತ್ಯ, ವಾಙ್ಮಯ

अदबी, वि. ಸಾಹಿತ್ಯದ.

अदम पैरवी, स्त्री. ಮೊಕದ್ದಮೆಯಲ್ಲಿ ಅಗತ್ಯವಾದ ಕ್ರಮ ನಡೆಸದಿರುವುದು; ಅಲಕ್ಷ್ಯ.

अदम हाज़िरी, स्त्री. ಗೈರು ಹಾಜರು.

अदरक, पु. ಹಸಿ ಶುಂಠಿ.

अदरकी, स्त्री. ಶುಂಠಿ ಬೆಲ್ಲ, ಶುಂಠಿ ಮುರಬ್ಬ.

अदराना, अक्रि. ಪ್ರತಿಷ್ಠೆ ತೋರಿಸು. सक्रि. ಪ್ರತಿಷ್ಠೆ ತೋರಿಸುವಂತೆ ಮಾಡು

अदल, पु. ನ್ಯಾಯ, ನ್ಯಾಯಸ್ಥ.

अदल बदल, अदला बदला, पु. ಅದಲು ಬದಲು, ಪರಿವರ್ತನೆ; ಬದಲಾಬದಲಿ

अदली, वि. ನ್ಯಾಯಸ್ಥ.

अदवान, स्त्री. ಮಂಚದ ಹೆಣಿಗೆಯನ್ನು ಬಿಗಿದು ಕಟ್ಟುವ ಹಗ್ಗ.

अदहन, पु. ಬೇಯಿಸಲು ಇಟ್ಟ ನೀರು, ಎಸರು.

अदांत, वि. ಹಲ್ಲು ಮೊಳೆಯದ (ಕರು); ವಿಷಯಾಸಕ್ತ; ಉದ್ದಂಡ.

अदा, वि. ಪೂರೈಸಿದ; ಚುಕ್ತಾಯವಾದ, ನಿಶ್ಶೇಷ, ಬೇಬಾಕು. स्त्री. ಪಾವತಿ, ಸಂದಾಯ; ಹಾವಭಾವ, ಬೆಡಗು. अदा करना = ಚುಕ್ತಾಯ ಮಾಡು, ಚುಕಾಯಿಸು; ನೆರವೇರಿಸು, ಸಲ್ಲಿಸು.

अदाई, वि. ತಂತ್ರಗಾರ, ‘ಘಾಟಿ’.

अदायगी, स्त्री. ಸಲ್ಲಿಸುವಿಕೆ; ಪಾವತಿ, ಸಂದಾಯ; ತೆರಾಣೆ.

अदाग, वि. ದೋಷರಹಿತ, ಸ್ವಚ್ಛ, ಪವಿತ್ರ.

अदालत, स्त्री. ನ್ಯಾಯಸ್ಥಾನ, ಕೋರ್ಟು; ನ್ಯಾಯ. अदालत खफीफा = ಸ್ಮಾಲ್ ಕಾಸ್ ಕೋರ್ಟ್. अदालत दीवानी = ಸಿವಿಲ್ ಕೋರ್ಟು. अदालत फौजदारी = ಕ್ರಿಮಿನಲ್ ಕೋರ್ಟು.

अदालती, वि. ನ್ಯಾಯಾಲಯದ; ವ್ಯಾಜ್ಯ ವ್ಯವಹಾರ ನಡೆಸುವವ, ಮೊಕದ್ದಮೆ ಹೂಡುವವ.

अदावँ, पु. ಸಂಕಟ, ಪೇಚಾಟ.

अदावत, स्त्री. ವಿರೋಧ, ವೈರ, ಹಗೆ.

अदावती, वि. ವಿರೋಧದ, ಹಗೆಯ.

अदाह, स्त्री. ಬೆಡಗು, ಒಯ್ಯಾರ.

अदू, पु. ಶತ್ರು, ವೈರಿ.

अदृष्ट, वि. ಕಣ್ಣಿಗೆ ಕಾಣದ; ಕಣ್ಮರೆಯಾದ. पु. ಭಾಗ್ಯ, ಅದೃಷ್ಟ, ನಸೀಬು

अदेखी, वि. ಅಸೂಯೆಪಡುವವ.

अदौरी, स्त्री. ಉದ್ದಿನ ಸಂಡಿಗೆ.

अद्धा, पु. ಅರ್ಧ, ಅರ್ಧ ಭಾಗ.

अद्धी, स्त्री. ಅರ್ಧ ದಮಡಿ, ಅರೆ ಕಾಸು; ಒಂದು ತೆರದ ತೆಳುವಾದ ಬಟ್ಟೆ.

अध, वि. ಅರ್ಧ, ಅರೆ (ಸಮಾಸದಲ್ಲಿ). ಉದಾ : अधखिला, अधसेरा.

अधकचरा, वि. ಚೆನ್ನಾಗಿ ಮಾಗದ; ಅಪೂರ್ಣ, ಅರ್ಧಂಬರ್ಧ; ದಪ್ಪವಾಗಿ ಬೀಸಿದ (ಅಕ್ಕಿ), ತರಿ.

अधकच्चा, वि. ಅರ್ಧ ಮಾಗದ, ಅರೆ ಹಣ್ಣಾದ.

अधकपारी, स्त्री. ಅರೆತಲೆನೋವು.

अधकरी, स्त्री. ಕಂದಾಯದ ಅರ್ಧ ಭಾಗದ ಕಿಸ್ತು, ಅರ್ಧ ಕಂತು.

अधखिला, वि. ಅರ್ಧ ಅರಳಿದ (ಹೂ), ಅರೆಬಿರಿದ.

अधखुला, वि. ಅರ್ಧ ತೆರೆದ, ಅರೆ ಬಿರಿದ.

अधजला, वि. ಅರ್ಧ ಸುಟ್ಟ; ಅರ್ಧ ಉರಿದ.

अधड़ा, वि. ಆಧಾರವಿಲ್ಲದ.

अधनिया, वि. ಅರ್ಧಾಣೆಯ.

अधन्ना, पु. ಅರ್ಧಾಣೆಯ ನಾಣ್ಯ.

अधपई, स्त्री. ಅರಪಾವು.

अधपका, वि. ಅರ್ಧ ಮಾಗಿದ; ಅರ್ಧ

ಬೆಂದ, ಅರ್ಧ ಸುಟ್ಟ.

अधबटाई, स्त्री. ಅರ್ಧ ಅರ್ಧ ಸರಿಯಾಗಿ ಹಂಚುವಿಕೆ, ಸಮಪಾಲು.

अधमरा, अधमुआ, वि. ಅರ್ಧ ಸತ್ತ, ಮೃತಪ್ರಾಯ.

अधर, पु. ಕೆಳದುಟಿ; ತುಟಿ; ಆಧಾರವಿಲ್ಲದ ಸ್ಥಾನ, ಅಂತರಾಳ; ಪಾತಾಳ. वि. ಚಂಚಲ, ನೀಚ.

अधरज, पु. ತುಟಿಗಳ ಕೆಂಪು; ತುಟಿಗಳ ಮೇಲಿನ (ಲೇಪ ಅಥವಾ ತಾಂಬೂಲ ಚರ್ವಣದಿಂದಾದ) ಕೆಂಪು ಗೆರೆ, ತಾಂಬೂಲರಾಗ.

अधरपान, पु. ತುಟಿಗಳ ಚುಂಬನ.

अधर्म, पु. ಧರ್ಮವಲ್ಲದ್ದು, ಅಧರ್ಮ

अधवा, स्त्री. ವಿಧವೆ, ರಂಡೆ.

अधसेरा, पु. ಅಚ್ಚೇರಿನ ತೂಕ.

अधावट, वि. ಅರ್ಧ ಕುದಿಸಿದ, ಅರ್ಧ ಕಾಯಿಸಿದ (ಹಾಲು)

अधारी, स्त्री. ಆಧಾರ, ಆಶ್ರಯ; ಯೋಗದಂಡ, ಸಾಮಾನುಗಳ ಚೀಲ, ಸಂಚಿ.

अधिक, वि. ಹೆಚ್ಚು; ಮಿಗಿಲಾದ.

अधिकता, स्त्री. ಹೇರಳತೆ, ಹೆಚ್ಚು.

अधिकांश, पु. ಹೆಚ್ಚಿನ ಭಾಗ. वि. ಹೆಚ್ಚು क्रिवि. ಹೆಚ್ಚಾಗಿ, ಬಹುಶಃ.

अधिकाई, स्त्री. ಹೆಚ್ಚು, ಹೆಚ್ಚುವಳಿ.

अधिकाना, अक्रि. ಹೆಚ್ಚಾಗು, ಬೆಳೆ.

अधिकार, पु. ಅಧಿಕಾರ, ಆಧಿಪತ್ಯ; ಸ್ವತ್ವ, ಬಾಧ್ಯತೆ; ವಶ, ಸ್ವಾಧೀನ; ಸಾಮರ್ಥ್ಯ, ಯೋಗ್ಯತೆ; ಪ್ರಕರಣ, ಅಧ್ಯಾಯ.

अधिकारिणी, स्त्री. ಅಧಿಕಾರವುಳ್ಳವಳು; ಯಜಮಾನಿ, ಒಡತಿ.

अधिकारी, पु. ಅಧಿಕಾರವುಳ್ಳವ, ಅಧಿಕಾರಿ; ಯಜಮಾನ, ಒಡೆಯ.

अधित्यका, स्त्री. ಬೆಟ್ಟದ ಮೇಲಿನ ಸಮಭೂಮಿ, ಸಾನು, ತಪ್ಪಲು.

अधिमास, पु. ಅಧಿಕಮಾಸ.

अधिया, स्त्री. ಅರ್ಧಭಾಗ, ಅರೆಪಾಲು; ಅರ್ಧಭಾಗದ ಹಿಸ್ಸೆ. ಅರೆಪಾಲು, ಅರೆಗೋರು; ವಾರದ ಸಾಗುವಳಿ, ಕೋರು

अधियाना, सक्रि. ಎರಡು ಸಮಭಾಗಗಳಾಗಿ ವಿಂಗಡಿಸು, ಅರ್ಧಿಸು.

अधियार, पु. ಅರ್ಧಭಾಗ; ಅರೆಪಾಲು; ಅರ್ಧಭಾಗಕ್ಕೆ ಬಾಧ್ಯಸ್ಥ, ಅರೆಪಾಲುಗಾರ.

अधियारी, स्त्री. ಪಾಲುಗಾರನ ಹಕ್ಕು.

अधिवास, पु. (ವಿವಾಹದಲ್ಲಿ) ಅರಿಸಿನ ಮತ್ತು ಎಣ್ಣೆಶಾಸ್ತ್ರ.

अधिवेशन, पु. ಸಭೆ ಸೇರುವಿಕೆ, ಕೂಟ, ಅಧಿವೇಶನ

अधिष्ठान, पु. ವಾಸಸ್ಥಾನ; ಬೀಡು, ಬಿಡದಿ; ಆಧಾರ; ಅಧಿಕಾರ; ಶಾಸನ.

अधीन, वि. ಒಳಪಟ್ಟ; ವಿವಶ. पु. ಒಳಪಟ್ಟವ, ಅಧೀನಸ್ಥ.

अधीनता, स्त्री. ಅಧೀನ; ವಿವಶತೆ; ದೀನತೆ, ದೈನ್ಯ.

अधीनना, अक्रि. ಅಧೀನನಾಗು, ಒಳಪಡು.

अधीर, वि. ಗಾಬರಿಯಾದ; ಅಧೀರ,

ವ್ಯಾಕುಲವುಳ್ಳ, ತಲ್ಲಣಿಸುವ; ಕಾತರಿಸುವ, ಆತುರಪಡುವ.

अधूरा वि. ಅಪೂರ್ಣ, ಅರೆಬರೆ, ಅರ್ಧಂಬರ್ಧ.

अधेड़, वि. ನಡುಪ್ರಾಯದ, ಮಧ್ಯವಯಸ್ಕ.

अधेला, पु. ಒಂದೂವರೆ ಕಾಸಿನ ನಾಣ್ಯ

अधेली, स्त्री. ಅರ್ಧರೂಪಾಯಿ ನಾಣ್ಯ.

अधोतर, पु. ಒಂದು ಬಗೆ ಒರಟು ಬಟ್ಟೆ

अधौड़ी, स्त्री. ಒರಟು ಚಕ್ಕಳ.

अध्यक्ष, पु. ಯಜಮಾನ, ಒಡೆಯ, ಮಾಲೀಕ; ಮುಖ್ಯಸ್ಥ, ಅಧ್ಯಕ್ಷ.

अध्ययन, पु. ಓದುವಿಕೆ, ಓದು; ವಿದ್ಯಾಭ್ಯಾಸ, ಅಧ್ಯಯನ.

अध्यवसाय, पु. ಸಂಕಲ್ಪ, ನಿಶ್ಚಯ, ಪ್ರಯತ್ನ.

अध्यापक, पु. ಉಪಾಧ್ಯಾಯ.

अध्यापकी, स्त्री. ಉಪಾಧ್ಯಾಯರ ಕೆಲಸ; ಅಧ್ಯಾಪಕ ವೃತ್ತಿ.

अध्यापन, पु. ಓದಿಸುವಿಕೆ, ಶಿಕ್ಷಣ.

अध्यापिका, स्त्री. ಉಪಾಧ್ಯಾಯಿನಿ.

अध्याय, पु. ಗ್ರಂಥದ ಒಂದು ಒಳವಿಭಾಗ, ಅಧ್ಯಾಯ, ಸರ್ಗ.

अनंदना, अक्रि. ಆನಂದಿಸು.

अनअहिवात, पु ವೈಧವ್ಯ.

अनइस, पु. ಕೆಡಕು.

अनकना, सक्रि. ಆಲಿಸು; ಹೊಂಚು ಕೇಳು.

अनक़रीब, क्रिवि. ಸುಮಾರಾಗಿ; ನಿಕಟ; ಹತ್ತಿರ.

अनकहा, वि. ಹೇಳದ. **अनकही देना** = ಸುಮ್ಮನಾಗು.

अनख, पु. ಕೋಪ, ಸಿಟ್ಟು; ದ್ವೇಷ; ವೈಮನಸ್ಯ; ದುಃಖ, ತಾಪತ್ರಯ; ದೃಷ್ಟಿ ಬೊಟ್ಟು. वि. ಉಗುರಿಲ್ಲದ.

अनखना, अक्रि. ರೇಗು, ಸಿಡುಗುಟ್ಟು, ಕೋಪಗೊಳ್ಳು.

अनखाना, अक्रि. ರೇಗು, ಸಿಟ್ಟಾಗು, ಕೋಪಗೊಳ್ಳು. सक्रि. ರೇಗಿಸು.

अनखावना, सक्रि. ಕೆಟ್ಟದೆನಿಸು; ಅಗದಿರು.

अनखाहट, स्त्री. ಸಿಟ್ಟು, ರೋಷ.

अनखी, वि. ಕೋಪಿಷ್ಠ, ಮುಂಗೋಪಿ.

अनगढ़, वि. ಅಂದಗೆಟ್ಟ, ಉದ್ದಂಡ, ವಿಲಕ್ಷಣ.

अनगना, वि. ಲೆಕ್ಕವಿಲ್ಲದ, ಬಹಳ. पु. ಗರ್ಭದ ಎಂಟನೆಯ ತಿಂಗಳು.

अनगवना, अनगाना, अक्रि. ತಡಮಾಡು, ಹೊತ್ತು ಮಾಡು.

अनगिन, अनगिनत, अनगिना, वि. ಅಸಂಖ್ಯ, ಅಗಣಿತ, ಬಹಳ.

अनचाहा, वि. ಅರುಚಿಕರ; ಅನಿಷ್ಟ.

अनजान, वि. ಅಪರಿಚಿತ; ತಿಳಿಯದವ, ಅಜ್ಞಾನಿ.

अनट, पु. ಅತ್ಯಾಚಾರ, ಅಕ್ರಮ.

अनति, वि. ಅಲ್ಪ, ಸ್ವಲ್ಪ. स्त्री. ಅಹಂಕಾರ.

अनदेखा, वि. ನೋಡದ, ಕಾಣದ.

अनधुला, वि. ತೊಳೆಯದ, ಒಗೆಯದ.

अनन्नास, पु. ಅನನಾಸು ಹಣ್ಣು, ಅನಾನಸು, ನೆಲಹಲಸು.
अनपच, पु. ಅಜೀರ್ಣ; ಅಗ್ನಿಮಾಂದ್ಯ.
अनपढ़, वि. ಓದದವ, ಅನಕ್ಷರಸ್ಥ, ನಿರಕ್ಷರಕುಕ್ಷಿ.
अनबन, पु. ವಿರೋಧ, ಮನಸ್ತಾಪ. वि. ವಿವಿಧ.
अनबिधा, वि. ಕೊರೆಯದ, ರಂಧ್ರವಿಲ್ಲದ (ಮುತ್ತು).
अनबोल, वि. ಮಾತನಾಡದವ, ಮೌನಿ; ಗುಮ್ಮನಗುಸಕ; ಮೂಕ (ಪ್ರಾಣಿ).
अनबोलता, वि. ಮೂಕ (ಪ್ರಾಣಿ).
अनब्याहा, वि. ಮದುವೆಯಾಗದವ, ಅವಿವಾಹಿತ.
अनबल, पु. ಅಮಂಗಳ, ಕೆಡಕು.
अनभिज्ञ, वि. ಅಪರಿಚಿತ, ಅರಿಯದವ
अनभिज्ञता, स्त्री. ಅಪರಿಚಯ.
अनभोरी, स्त्री. ಮೋಸ, ಕಪಟ.
अनभ्यस्त, वि. ಅಭ್ಯಾಸವಿಲ್ಲದ.
अनमन, अनमना, वि. ಮನಸ್ಸಿಲ್ಲದ, ಒಪ್ಪಿಕೆಯಿಲ್ಲದ; ಖಿನ್ನನಾದ.
अनमनस्क, वि. ಉದಾಸೀನ.
अनमिल, अनमेल, वि. ಹೋಲಿಕೆಯಿಲ್ಲದ, ಈಡಿಲ್ಲದ; ಬೆರಕೆಯಿಲ್ಲದ; ಸೇರದ, ಇಜ್ಜೋಡು.
अनमेली, स्त्री. ಹೊಂದಿಕೆಯಿಲ್ಲದವುಗಳು; ಒಂದು ಬಗೆ ಕವನ.
अनमोल, वि. ಅಮೂಲ್ಯವಾದ; ಬೆಲೆಬಾಳುವ, ಅನರ್ಘ್ಯವಾದ.

अनरस, पु. ನೀರಸತ್ವ; ಸಿಟ್ಟು; ಮನಸ್ತಾಪ, ವಿರಸ; ಶೋಕ.
अनराता, वि. ಬಣ್ಣ ಕಟ್ಟದ.
अनरीत, स्त्री. ದುರ್ಮಾರ್ಗ, ಕೆಟ್ಟ ನಡತೆ.
अनुरूप, वि. ಕುರೂಪಿಯಾದ; ಅಸದೃಶ.
अनर्गल, वि. ತಪ್ಪುತಡೆಯಿಲ್ಲದ, ಎಡೆಬಿಡದ; ವ್ಯರ್ಥಾಲಾಪದ.
अनर्थ, पु. ಕೇಡು; ಹಾಳು.
अनवट, पु. ಕಾಲುಂಗುರ; ಗಾಣದ ಎತ್ತುಗಳ ಕಣ್ಣಿಗೆ ಕಟ್ಟುವ ಪಟ್ಟಿ, ಕಣ್ಣುಕಪ್ಪಡಿ
अनवांसना, सक्रि. ಹೊಸ ಪಾತ್ರೆಗಳನ್ನು ಗಲಬರಿಸು; ಉಪಯೋಗಿಸು, ಬಳಸು.
अनवांसा, पु. ಕೊಯ್ದ ಬತ್ತ ಮುಂತಾದ ಪೈರುಗಳ ಕಟ್ಟು ಅಥವಾ ಹೊರೆ, ಛತ್ರದರಿ; ಸಿವುಡು.
अनवांसी, स्त्री. ಜಮೀನಿನ ಒಂದು ಅಳತೆ (೩೨೦ अनवांसी = ಒಂದು ಗುಂಟೆ) ನೋಡಿ-बीघा.
अनशन, पु. ಉಪವಾಸ.
अनसखरी, स्त्री. ತುಪ್ಪದಿಂದಲೇ ಮಾಡಿದ ಅಡಿಗೆ.
अनसुना, वि. ಕೇಳದ, ಅಶ್ರುತ. अनसुनी करना = (ಮಾತು) ಕೇಳಿಯೂ ಕೇಳದಿರು, ಉಪೇಕ್ಷೆ ಮಾಡು.
अनहित, पु. ಅಹಿತ; ಶತ್ರು, ಹಗೆ.
अनहोता, वि. ಅಸಂಭವ; ದರಿದ್ರ.

अनहोनी, वि. ಅಸಂಭವ, ಆಗಬಾರದ್ದು. स्त्री. ಅಸಂಭಾವ್ಯ.
अनकानी, स्त्री. =आनाकानी.
अनाज, पु. ದವಸ, ಧಾನ್ಯ, ಕಾಳು.
अनाड़ी, वि. ಅನುಭವವಿಲ್ಲದವ, ತಿಳಿಯದವ, ಅಡನಾಡಿ.
अनादर, पु. ಅನಾದರ, ಅಸಡ್ಡೆ, ತಿರಸ್ಕಾರ.
अनाना, सक्रि. ಬರಮಾಡು, ತರಿಸು.
अनाप शनाप, पु. ತಲೆಹರಟೆ, ವದರಾಟ, ವ್ಯರ್ಥಾಲಾಪ.
अनाम, वि. ಹೆಸರಿಲ್ಲದ; ಅಪ್ರಸಿದ್ಧ.
अनार, पु. ದಾಳಿಂಬೆ ಹಣ್ಣು.
अनारदाना, पु. ದಾಳಿಂಬೆ ಬಿತ್ತ, ರಾಮಫಲ.
अनारी, पु. ದಾಳಿಂಬೆ ಬಣ್ಣ, ಕೆಂಪು.
अनावश्य, वि. ಅಗತ್ಯವಲ್ಲದ, ನಿಷ್ಪ್ರಯೋಜಕ.
अनावश्यकता, स्त्री. ಅನಾವಶ್ಯಕತೆ; ನಿರರ್ಥಕತೆ.
अनाह, पु. ಹೊಟ್ಟೆಯುಬ್ಬರ.
अनाहन, वि. ಏಟು ತಗಲದವ.
अनियारा, वि. ಮೊನೆಯುಳ್ಳ, ಚೂಪಾದ, ತೀಕ್ಷ್ಣವಾದ.
अनिवार्य, वि. ನಿವಾರಿಸಲಾಗದ, ಅಗತ್ಯ, ಅತ್ಯಾವಶ್ಯಕ.
अनिष्ट, वि. ಇಚ್ಛಿಸದ, ಅವಾಂಛಿತ. पु. ಅನಿಷ್ಟ, ಕೆಡಕು.
अनी, स्त्री. ತುದಿ, ಮೊನೆ; ಗುಂಪು; ಪಡೆ, ಸೈನ್ಯ.
अनीक, पु. ಸಮೂಹ; ಸೈನ್ಯ, ಪಡೆ; ಯುದ್ಧ. वि. ಕೆಟ್ಟ.
अनीठ, वि. ಅನಿಷ್ಟ, ಕೆಟ್ಟ.
अनुकंपा, स्त्री. ದಯೆ, ಕನಿಕರ.
अनुकरण, पु. ಮೊದಲಿನವ ಮಾಡಿದಂತೆ ಮಾಡುವಿಕೆ, ಒಂದು ಕಾರ್ಯವನ್ನು ನೋಡಿ ಅದರಂತೆಯೆ ಮಾಡುವಿಕೆ, ಅನುಸರಣೆ, ಅನುಕರಣ.
अनुकारी, वि. ಹಿಂಬಾಲಿಸುವವ; ಅನುಚರ; ಸೇವಕ.
अनुकूल, वि. ಅನುಗುಣವಾದ, ಅನುಸಾರವಾದ; ಅನುಕೂಲ, ಹಿತ; ಹಿತೈಷಿ, ಅನುಕೂಲಸ್ಥ.
अनुकूलता, स्त्री. ಅನುಕೂಲ್ಯ, ಸೌಕರ್ಯ.
अनुगामी, वि. ಹಿಂಬಾಲಿಸುವವ, ಅನುಸರಿಸುವವ; ಅನುಚರ; ವಿಧೇಯ.
अनुग्रह, पु. ದಯೆ; ಅನುಗ್ರಹ, ರಿಯಾಯಿತಿ.
अनुग्राहक, वि. ಅನುಗ್ರಹಿಸುವವ, ಉಪಕಾರಿ.
अनुनय, पु. ಸಂತೈಸುವುದು; ಬೇಡಿಕೆ, ವಿನಂತಿ; ಗೋಗರೆಯುವಿಕೆ. अनुनय विनय करना = ಬಹಳವಾಗಿ ಬೇಡಿಕೊಳ್ಳು, ಅಂಗಲಾಚು.
अनुपस्थित, वि. ಗೈರುಹಾಜರಾದ.
अनुपस्थिति, स्त्री. ಗೈರುಹಾಜರು.
अनुपान, पु. ಔಷಧದ ಜೊತೆಯಲ್ಲಿ ತೆಗೆದುಕೊಳ್ಳುವ ವಸ್ತು, ಅನುಪಾನ.
अनुबंध, पु. ಬಂಧನ; ಪೂರ್ವಾಪರ;

ಪ್ರಾರಂಭ, ಶುರು.

अनुभव, पु. ಪರೀಕ್ಷೆಯಿಂದ ಮನಸ ಗಂಡದ್ದು, ಅನುಭವ.

अनुभवी, वि. ಅನುಭವವುಳ್ಳವ, ಅರಿತುನುರಿತ, ಅನುಭವಸ್ಥ.

अनुमति, स्त्री. ಅಪ್ಪಣೆ, ಒಪ್ಪಿಗೆ

अनुमान, पु. ಊಹೆ, ಹೇಷ್ಯ, ಟೂಕಿ.

अनुमोदन, पु. ಸಂತೋಷಪಡುವುದು; ಸಮರ್ಥನೆ.

अनुयायी, वि. ಹಿಂಬಾಲಿಸುವವ; ಅನುಕರಣ ಮಾಡುವವ. पु. ಸೇವಕ.

अनुराग, पु. ಪ್ರೇಮ, ಒಲವು, ಆಸ್ಥೆ.

अनुरोध, पु. ಅಡ್ಡಿ; ಒತ್ತಾಯ

अनुवाद, पु. ಪುನರುಕ್ತಿ; ಭಾಷಾಂತರ, ತರ್ಜುಮೆ.

अनुवादक, पु. ಭಾಷಾಂತರಕಾರ.

अनुवादित, वि. ತರ್ಜುಮೆ ಮಾಡಲ್ಪಟ್ಟ, ಭಾಷಾಂತರಿಸಿದ.

अनुशासन, पु. ಅಪ್ಪಣೆ, ಆಜ್ಞೆ, ಆದೇಶ; ಉಪದೇಶ, ಶಿಕ್ಷಣ; ಕಟ್ಟುಪಾಡು, ಶಿಷ್ಯಶಿಷ್ಟಿ, ಶಿಸ್ತು.

अनुसंधान, पु. ಹುಡುಕುವಿಕೆ, ಶೋಧನೆ.

अनुसारना, सक्रि. ಅನುಸರಿಸು, ಆಚರಿಸು.

अनूठा, वि. ವಿಚಿತ್ರ, ಅದ್ಭುತ; ಶ್ರೇಷ್ಠ

अनूठापन, पु. ವೈಚಿತ್ರ್ಯ, ಉತ್ಕೃಷ್ಟತೆ.

अनूदित, वि. ಹೇಳಲ್ಪಟ್ಟ; ಭಾಷಾಂತರಿಸಿದ.

अनेक, वि. ಹಲವು, ಅನೇಕ.

अनेरा, वि ವ್ಯರ್ಥ; ಸುಳ್ಳು; ಅಯೋಗ್ಯ. क्रिवि. ವ್ಯರ್ಥವಾಗಿ.

अनैठ, पु. ಸಂತೆ ನೆರೆಯದ ಇತರ ದಿನಗಳು.

अनैस, पु. ಕೆಡಕು वि. ಕೆಟ್ಟ.

अनैसना, अक्रि. ಸಿಟ್ಟಾಗು, ಮುನಿ.

अनोखा, वि. ವಿಚಿತ್ರ, ವಿಲಕ್ಷಣ, ಅದ್ಭುತ; ಸುಂದರ.

अनोखापन, पु. ವೈಚಿತ್ರ್ಯ; ನವೀನತೆ; ಅಂದ.

अन्न, पु. ದವಸ, ಧಾನ್ಯ, ಕಾಳು; ಅನ್ನ

अन्नकूट, पु. ಬನಶಂಕರೀ ಹಬ್ಬ.

अन्नजल, पु. ಅನ್ನಪಾನ, ತಿಂಡಿತೀರ್ಥ; ಜೀವನ, ಜೀವನೋಪಾಯ.

अन्नसत्र, पु. ಅನ್ನಛತ್ರ, ಸತ್ರ.

अन्ना, स्त्री. ದಾದಿ, ಧಾತ್ರಿ, "ನರಸಮ್ಮ"

अन्य, वि. ಇತರ, ಬೇರೆ, ಅನ್ಯ.

अन्यत्र, क्रिवि. ಇತರ ಕಡೆ, ಬೇರೆ ಕಡೆ

अन्यथा, वि. ಬೇರೆ; ಬೇರೆ ವಿಧವಾದ; ವಿರುದ್ಧ; ಸುಳ್ಳು अव्य. ಇಲ್ಲವಾದರೆ.

अन्याय, पु. ನ್ಯಾಯವಲ್ಲದ್ದು, ಅನ್ಯಾಯ; ಬಲಾತ್ಕಾರ.

अन्यायी, वि. ಅನ್ಯಾಯಮಾಡುವವ.

अन्वेषक, वि. ತತ್ತ್ವಶೋಧನೆ ಮಾಡುವವ.

अन्वेषण, पु. **अन्वेषणा**, स्त्री. ತತ್ತ್ವ ಶೋಧನೆ; ಹುಡುಕುವಿಕೆ.

अन्हवाना, सक्रि. ಸ್ನಾನಮಾಡಿಸು.

अन्हाना, अक्रि. ಸ್ನಾನ ಮಾಡು.

अपकाजी, वि. ಸ್ವಾರ್ಥಪರ.

अपकार, पु. ಅಹಿತ, ಹಾನಿ.

अपच, पु. ಅಜೀರ್ಣ, ಅಗ್ನಿಮಾಂದ್ಯ

अपजय, स्त्री. ಅಪಜಯ, ಸೋಲು.

अपजस, स्त्री. ಅಪಯಶಸ್ಸು.

अपड़ाना, अक्रि. ತಕರಾರು ಮಾಡು, ಜಗಳವಾಡು.

अपड़ाव, पु. ತಂಟೆ, ತಕರಾರು.

अपढ़, वि. ಓದದವ, ಅವಿದ್ಯಾವಂತ.

अपत, वि. ಪತ್ರ ಅಥವಾ ಎಲೆಗಳಿಲ್ಲದ (ಮರ); ಬೋಳಾದ, ಬರಿದಾದ; ನಿರ್ಲಜ್ಜ.

अपत्य, पु. ಮಗ.

अपदेखा, वि. ಆತ್ಮಶ್ಲಾಘನೆ ಮಾಡಿ ಕೊಳ್ಳುವವ; ಗರ್ವಿಷ್ಠ.

अपनपा, पु. ತಾನು ಅಥವಾ ತನ್ನದು ಎಂಬ ಭಾವ, ಆತ್ಮೀಯತೆ.

अपना, सर्व. ತನ್ನ. पु. ತಾನು. अपना सा करना = ಯಥಾಶಕ್ತಿ ಮಾಡು. अपने आप = ತನಗೆ ತಾನೆ, ತಾನೇ ತಾನಾಗಿ, ಸ್ವಯಂ.

अपनाना, सक्रि. ತನ್ನದಾಗಿ ಮಾಡಿ ಕೊಳ್ಳು; ಒಲಿಸಿಕೊಳ್ಳು; ದಕ್ಕಿಸಿ ಕೊಳ್ಳು.

अपनापन, पु. **अपनायत**, स्त्री. ತನ್ನತನ, ತನ್ನದೆಂಬುವ ಭಾವ, ಆತ್ಮೀಯತೆ.

अपमान, पु. ಅಗೌರವ, ಅವಮಾನ.

अपमानना, सक्रि. ಅಪಮಾನಮಾಡು

अपमानित, वि. ಅಪಮಾನ ಹೊಂದಿದ

अपमानी, वि. ಅವಮಾನ ಮಾಡುವವ

अपरंच, अव्य. ಮತ್ತೆ, ತಿರುಗಿ, ಪುನಃ.

अपरस, वि. ಯಾರೂ ಮುಟ್ಟದ; ಮುಟ್ಟಲನರ್ಹವಾದ पु. ಒಂದು ಚರ್ಮರೋಗ, ಇಸಬು.

अपराध, पु. ತಪ್ಪು, ತಪ್ಪಿತ, ಅಪರಾಧ

अपराधी, वि. ತಪ್ಪಿತಸ್ಥ, ತಪ್ಪುಗಾರ.

अपरिचित, वि. ಪರಿಚಯವಿಲ್ಲದ; ಹೊಸ.

अपसना, अक्रि. ಜಾರಿಕೊ; ಹೊರಟು ಹೋಗು.

अपसर, वि. ಇಷ್ಟಾನುಸಾರವಾದ.

अपशकुन, **अपसगुन**, **अपसगौन**, पु. ಕೆಟ್ಟ ಶಕುನ, ಅಪಶಕುನ.

अपस्मार, पु. ಮೂರ್ಛೆ ರೋಗ, ಅಪಸ್ಮಾರ.

अपहरण, पु. ಕದ್ದು ತೆಗೆದುಕೊಳ್ಳುವಿಕೆ, ಅಪಹರಣ.

अपहरना, सक्रि. ಕಸುಕೊಳ್ಳು; ಬಲಾತ್ಕಾರದಿಂದ ಒಯ್ಯು, ಅಪಹರಿಸು.

अपांग, पु. ಓರೆಗಣ್ಣು. वि. ಅಂಗಹೀನ

अपाय, पु. ವಿಯೋಗ; ಹಿಂದಕ್ಕೆ ಹೋಗುವುದು; ನಾಶ; ದುರಾಚಾರ. वि. ಕಾಲಿಲ್ಲದ; ದಿಕ್ಕಿಲ್ಲದ, ಗತಿಯಿಲ್ಲದ

अपाहिज, वि. ಕೈಕಾಲಿಲ್ಲದವ, ಹೆಳವ, ಮುರವ, ವಿಕಲಾಂಗರು; ಸೋಮಾರಿ

अपूत, वि. ಅಪವಿತ್ರ; ಮಕ್ಕಳಿಲ್ಲದವ.

अपूर, वि. ಪೂರ್ಣವಾದ, ತುಂಬಿದ.

अपूरना, सक्रि. ತುಂಬು, (ಶಂಖ)

ಪೂರಿಸು, ಊದು.

अपूरा, वि. ತುಂಬಿದ, ಹರಡಿದ.

अपेक्षा, स्त्री. ಅಭಿಲಾಷೆ, ಬಯಕೆ; ಇಚ್ಛೆ, ಆವಶ್ಯಕತೆ, ಅಗತ್ಯ; ತುಲನೆ, ಹೋಲಿಕೆ.

अप्रतिष्ठा, स्त्री. ಅಗೌರವ, ಅಪಕೀರ್ತಿ

अप्रसन्न, वि. ದುಃಖಿತ; ರೇಗಿದ.

अप्रसन्नता, स्त्री. ಅಸಮಾಧಾನ; ಕೋಪ; ದುಃಖ.

अप्रेल, पु. ಏಪ್ರಿಲ್ (ತಿಂಗಳು).

अफ़ई, स्त्री. ಕರಿನಾಗರ ಹಾವು, ಕೃಷ್ಣ ಸರ್ಪ.

अफ़ग़ान, पु. ಅಫ್ಗಾನಿಸ್ಥಾನದವ.

अफ़ज़ल, वि. ಸರ್ವೋತ್ತಮ.

अफ़ज़ूँ, पु. ಹೇರಳತೆ, ಬಾಹುಳ್ಯ.

अफ़यून, स्त्री. ಅಫೀಮು, ಅಫು.

अफरना, अक्रि. ಹೊಟ್ಟೆಯು ತುಂಬ ಊಟಮಾಡು, ಕಂಠಪೂರ್ತಿ ಊಟ ಮಾಡು, ಕಟರೆಯಾಗು; ಹೊಟ್ಟೆ ದಪ್ಪವಾಗು, ಉಬ್ಬರವಾಗು.

अफरा, पु. ಹೊಟ್ಟೆಯುಬ್ಬರ.

अफराना, अक्रि. ಹೊಟ್ಟೆ ತುಂಬ ಊಟ ಮಾಡಿಸು.

अफ़रीदी, पु. ಪಠಾಣರ ಒಂದು ಜಾತಿ.

अफ़वाह, स्त्री. ಜನಶ್ರುತಿ, ವದಂತಿ, ಗಲಕು, ಲೋಕವಾರ್ತೆ.

अफ़सर, पु. ಅಧಿಕಾರಿ, ಉದ್ಯೋಗಸ್ಥ, ಆಫೀಸರು.

अफ़सरी, स्त्री. ಅಧಿಕಾರ, ಉದ್ಯೋಗ, ಆಡಳಿತ.

अफ़साना, पु. ಕತೆ, ಆಖ್ಯಾಯಿಕೆ.

अफ़सुर्दा, पु. ಬಳಲಿದ, ದುಃಖಿತ.

अफ़सूँ, पु. ಮಾಟ, ಮಂತ್ರ.

अफ़सोस, पु. ದುಃಖ, ವಿಷಾದ; ಪಶ್ಚಾತ್ತಾಪ.

अफ़ीम, स्त्री. ಅಫೀಮು, ಅಫು.

अफ़ीमची, अफ़ीमी, पु. ಅಫೀಮು ಸೇವಿಸುವವ, ಅಫೀಮುಖೋರ.

अब, क्रिवि. ಈ ಸಮಯ, ಈಗ. अब के लिये = ಸದ್ಯಃ. अब तब लगना या होना = ಉತ್ಕ್ರಮಣಾವಸ್ಥೆಗೆ ಬರು.

अबख़ारा, पु. ಆವಿ, ಹಬೆ, ಉಗಿ.

अबतर, वि. ಕೆಟ್ಟುಹೋದ, ಹಾಳು.

अबतरी, स्त्री. ಕೇಡು, ಹಾಳು.

अबरक, पु. ಅಭ್ರಕ, ಕಾಗೆಬಂಗಾರ.

अबरा, पु. ಇಮ್ಮಡಿ ಬಟ್ಟೆಯ ಹೊರ ಮಡಿಕೆ; ಗಂಟು, ಸಿಕ್ಕು, ಗೋಜಲು.

अबतरी, स्त्री. ಒಂದು ಬಗೆಯ ನುಣುಪಾದ ಕಾಗದ; ಒಂದು ಬಗೆ ಕಲ್ಲು.

अबरू, स्त्री. ಹುಬ್ಬು.

अबलक़, वि. ಕೆಂಬಿಳುಪು ಅಥವಾ ಕೆಂಗಪ್ಪು ಬಣ್ಣ; ಇಬ್ಬಣ್ಣದ. पु. ಈ ಬಣ್ಣದ ಎತ್ತು ಅಥವಾ ಕುದುರೆ.

अबवाब, पु. ಅಧ್ಯಾಯಗಳು; ಕಂದಾಯದೊಂದಿಗೆ ವಸೂಲಾಗುವ ಹೆಚ್ಚಿನ ತೆರಿಗೆ; ತೆರಿಗೆಯ ಬಾಬುಗಳು.

अबा, पु. ಸಡಿಲವಾದ.

अबादान, वि. ಜನಭರಿತ.

अबादानी, स्त्री. ನೆರತೆ, ಜನಸಮೃದ್ಧಿ; ಶುಭಚಿಂತನೆ; ಸಂದಣಿ.

अबाबील, स्त्री. ಕಪ್ಪು ಬಣ್ಣದ ಒಂದು ಪಕ್ಷಿ.

अबीर, पु. ಕಾಮನ ಹಬ್ಬದಲ್ಲಿ ಒಬ್ಬರ ಮೇಲೊಬ್ಬರು ಎರಚಿ ಆಟವಾಡುವ ಬಣ್ಣದ ಪುಡಿ, ಅಭ್ರಕದ ಪುಡಿ, ಗುಲಾಲು.

अबीरी, पु. "ಅಬೀರಿ"ನ ಬಣ್ಣ.

अबूझ, पु. ತಿಳಿಯದ, ಅರಿಯದ.

अबे, अव्य. ಲೋ, ಎಲಾ, ಹೈದನೇ! अबे तबे करना = ಮರ್ಯಾದೆಯಿಲ್ಲದೆ ಮಾತುಗಳನ್ನಾಡು, ಎಲಾ ತಲಾ ಅನ್ನು.

अबेर, पु. ಅಸಮಯ; ಅವೇಳೆ; ವಿಳಂಬ

अबोध, वि. ತಿಳಿಯದವ. पु. ಅಜ್ಞಾನ.

अबोला, पु. ಮೌನ.

अब्जद, पु. ವರ್ಣಮಾಲೆ; ಓನಾಮ.

अब्जदी, वि. ವರ್ಣಮಾಲೆಗೆ ಸಂಬಂಧಿಸಿದ; ಅಕಾರಾದಿ.

अब्बा, पु. ತಂದೆ, ಅಪ್ಪ.

अब्बास, पु. ಸಂಜೆಮಲ್ಲಿಗೆ, ಬಯ್ಯಮಲ್ಲಿಗೆ.

अब्बासी, स्त्री. ಒಂದು ತರದ ಹತ್ತಿ; ಕೆಂಪು ಬಣ್ಣ.

अब्र, पु. ಮೋಡ, ಮುಗಿಲು, ಮೇಘ.

अभागा, वि ಭಾಗ್ಯವಿಲ್ಲದವ, ಭಾಗ್ಯಹೀನ, ನಿರ್ಭಾಗ್ಯ.

अभागी, वि. ಭಾಗ್ಯಹೀನ; ಆಸ್ತಿಯ ಹಕ್ಕಿಲ್ಲದವ.

अभाव, पु. ಇಲ್ಲದಿರುವಿಕೆ; ಅಭಾವ.

अभिज्ञ, वि. ತಿಳಿದವ, ನಿಪುಣ.

अभिनंदन, पु. ಆನಂದ; ಪ್ರಶಂಸೆ, ಮೆಚ್ಚುಗೆ. अभिनंदनपत्र = ಮಾನಪತ್ರ, ಬಿನ್ನವತ್ತಳೆ.

अभिनय, पु. ಸೋಗು, ಅಭಿನಯ, ನಟನೆ.

अभिनेता, पु. ಅಭಿನಯಕಾರ, ನಟ.

अभिनेत्री, स्त्री. ಅಭಿನಯಗಾರತಿ, ನಟಿ.

अभिप्राय, पु. ಆಶಯ, ತಾತ್ಪರ್ಯ.

अभिमान, पु. ಗರ್ವ, ಹೆಮ್ಮೆ; ಕೆಚ್ಚು

अभिमानी, वि. ಅಹಂಕಾರಿ, ಹೆಮ್ಮೆಗಾರ.

अभियुक्त, वि. ಆಪಾದಿತ.

अभियोग, पु. ಆಪಾದನೆ, ದಾವಾ.

अभिलाषा, स्त्री. ಇಚ್ಛೆ, ಬಯಕೆ.

अभिलाषी, वि. ಬಯಸುವವ, ಇಷ್ಟಪಡುವವ, ಇಚ್ಛುಕ.

अभिसंधि, स्त्री. ಕಪಟ, ಒಳಸಂಚು, ಪಿತೂರಿ.

अभी, क्रिवि. ಈಗತಾನೆ, ಈಗಲೆ. अभी अभी = ಇದೀಗ.

अभीर, पु. ಗೊಲ್ಲ, ಗವಳಿಗ.

अभीष्ट, पु. ಮನೋರಥ, ಹಾರೈಕೆ.

अभुआना, अक्रि. ದೆವ್ವ ಹಿಡಿದವನಂತೆ ಆಡು.

अभेरना, सक्रि. ಡಿಕ್ಕಿ ಹೊಡಿಸು; ಕಲಸು, ಬೆರಸು.

अभेरा, पु. ಢಿಕ್ಕಿ; ತಿಕ್ಕಾಟ, ಜಗಳ.

अभ्यर्थना, स्त्री. ಪ್ರಾರ್ಥನೆ; ಇದಿರುಗೊಳ್ಳುವಿಕೆ.

अभ्यस्त, वि. ಅಭ್ಯಾಸವಾದ, ಬಳಕೆಯಾದ; ಅಭ್ಯಾಸವುಳ್ಳ.

अभ्यास, पु. ರೂಢಿ, ಬಳಕೆ.

अमका, पु. = अमुक.

अमचूर, पु. ಒಣಗಿದ ಮಾವಿನಕಾಯಿ ಚೂರು ಮತ್ತು ಚೂರ್ಣ.

अमज़द, पु. ವೃದ್ಧರು, ಗುರುಹಿರಿಯರು.

अमड़ा, पु. ಅಮಟೆಕಾಯಿ.

अमन, पु. ಶಾಂತಿ, ನೆಮ್ಮದಿ; ರಕ್ಷಣೆ.

अमर, पु. ಆದೇಶ, ವಿಧಿ.

अमरस, पु. ಹೆಪ್ಪುಗಟ್ಟಿದ ಮಾವಿನ ಹಣ್ಣಿನ ರಸ.

अमरसी, वि. ಮಾವಿನಹಣ್ಣಿನ ರಸದ ಬಣ್ಣದ; ಹೊಂಬಣ್ಣದ.

अमराई, स्त्री. ಮಾವಿನ ತೋಪು.

अमरू, पु. ರೇಷ್ಮೆ ಬಟ್ಟೆ.

अमरूत, अमरूद, पु. ಸೀಬೆಹಣ್ಣು, ಚೇಪೆಹಣ್ಣು, ಪೇರಲಹಣ್ಣು.

अमल, वि. ನಿರ್ಮಲ. पु. ಕಾರ್ಯ, ಕರ್ಮ; ವ್ಯವಹಾರ, ನಡವಳಿಕೆ; ಅಧಿಕಾರ; ಅಮಲು, ಮದ, ಮತ್ತು; ಅಭ್ಯಾಸ, ಚಾಳಿ; ಪ್ರಭಾವ; ಭೋಗಕಾಲ, ಭುಕ್ತಿ (ಜ್ಯೋತಿಷ).

अमलदार, पु. ಒಬ್ಬ ಸರಕಾರಿ ಉದ್ಯೋಗಸ್ಥ, ತಹಸೀಲುದಾರ, ಅಮಲ್ದಾರ.

अमलदारी, स्त्री. ಅಧಿಕಾರ; ಜಮೀನಿನ ಸಾಗುವಳಿಯ ಒಂದು ಕ್ರಮ.

अमलपट्टा, पु. ಅಧಿಕಾರಪತ್ರ, ಮೊಕ್ತಿಯಾರ್ನಾಮು; ಪಟ್ಟಾ.

अमला, पु. ಉದ್ಯೋಗಸ್ಥ; ಸರಕಾರಿ ವಿಭಾಗ, ಖಾತೆ, ಇಲಾಖೆ.

अमली, वि. ವ್ಯಾವಹಾರಿಕ; ಮದ್ಯಸಂಬಂಧವಾದ; ಲಹರಿ ಅಥವಾ ಮಾದಕವಸ್ತು ಸೇದುವವ, ಅಮಲುಖೋರ.

अमलोनी, स्त्री. ಒಂದು ಬಗೆಯ ಬಚ್ಚಲೆ ಸೊಪ್ಪು; ನುಚ್ಚುಗೋಳಿ ಸೊಪ್ಪು; ದೊಡ್ಡಗೋಣೀಸೊಪ್ಪು.

अमहर, पु. ಮಾವಿನಕಾಯಿಬಾಳಕ.

अमान, पु. ರಕ್ಷಣೆ, ಕಾಪಾಡುವಿಕೆ; ಆಶ್ರಯ, ಶರಣು.

अमानत, स्त्री. ಅಮಾನತ್ತು, ನ್ಯಾಸ; ಅಮಾನತ್ತಾಗಿಟ್ಟ ವಸ್ತು, ಠೇವಣಾತಿ.

अमानतदार, पु. ಅಮಾನತ್ತು ಅಥವಾ ಠೇವಣಾತಿ ತಕ್ಕೊಳ್ಳುವವ.

अमाना, अक्रि. ತುಂಬಿ ಹೋಗು; ಉಬ್ಬು, ಹಿಗ್ಗು, ಗರ್ವಪಡು.

अमानी, स्त्री. ಸ್ವಂತ ಸಾಗುವಳಿಯ ಜಮೀನು, ಸಂದಾಯಿತ; ಸರಕಾರಿ ಜಮೀನು; ಕಂದಾಯದರಿಯಾಯಿತಿ

अमारी, स्त्री. ಆನೆ ಮೇಲಿನ ಮಂಟಪ, ಅಂಬಾರಿ; ಅಮಟೆಕಾಯಿ

अमावट, स्त्री. ಮಾವಿನಕಾಯನ್ನು ತಿರುವಿ ತಟ್ಟಿ ಒಣಗಿಸಿದ ಬಿಲ್ಲೆ, ಮಾವಿನ ಚಟ್ಟು.

अमाल, पु. ದೊರೆ, ಅಧಿಕಾರಿ.

अमालनामा, पु. ಉದ್ಯೋಗಸ್ಥರ ನೀತಿ ನಡತೆ, ಕೆಲಸ ಮುಂತಾದವನ್ನು

ಬರೆದಿಡುವ ಪುಸ್ತಕ.

अमिट, वि. ಅಳಿಯದ, ನಾಶವಾಗದ, ಅಕ್ಷಯ; ಅಳಿಸಲಾಗದ, ನಿಶ್ಚಯವಾಗಿ ಸಂಭವಿಸುವ.

अमिया, स्त्री. ಸಣ್ಣ ಮಾವಿನಕಾಯಿ.

अमीन, पु. ಕೋರ್ಟಿನ ಒಬ್ಬ ಉದ್ಯೋಗಸ್ಥ, ಅಮೀನ.

अमीर, पु. ದೊರೆ, ಅರಸ; ಪ್ರಭು, ಶ್ರೀಮಂತ; ಅಫ್ಘಾನಿಸ್ಥಾನದ ರಾಜನ ಬಿರುದು. अमीर गरीब = ಬಡವರು ಬಲ್ಲಿದರು.

अमीराना, वि. ಶ್ರೀಮಂತನಂಥ; ಉದಾರವಾದ.

अमीरी, स्त्री. ಸಂಪತ್ತು; ಶ್ರೀಮಂತಿಕೆ; ಔದಾರ್ಯ. वि. ಶ್ರೀಮಂತರಂತಹ.

अमुक, वि. ಇಂಥಿಂಥ, ಫಲಾನ.

अमृतदान, **अमृतबान**, पु. ಜಾಡಿ.

अमृतबूटी, स्त्री. ಸಂಜೀವಿನಿ ಮೂಲಿಕೆ

अमेजना, सक्रि. ಬೆರಸು, ಕಲಸು.

अमोल, **अमोलक**, वि. ಅಮೂಲ್ಯ.

अमोला, पु. ಮಾವಿನ ಸಸಿ.

अम्माँ, स्त्री. ಅಮ್ಮ, ತಾಯಿ.

अम्मामा, पु. ಪೇಟಾ, ಮುಂಡಾಸು.

अम्मारी, स्त्री. = **अंबारी**.

अम्ल, पु. ಹುಳಿ; ದ್ರಾವಕ. वि. ಹುಳಿಯಾದ.

अम्हौरी, स्त्री. ಬೆವರುಸಾಲೆ.

अयस्कांत, स्त्री. ಸೂಜಿಗಲ್ಲು.

अयां, वि. ಸ್ಪಷ್ಟವಾದ, ವಿದಿತ.

अयान, वि. ಪಾದಚಾರಿ.

अयानत, स्त्री. ದಯೆ, ಅನುಗ್ರಹ.

अयाल, पु. ಕುದುರೆ ಮತ್ತು ಸಿಂಹದ ಕತ್ತಿನ ಕೂದಲು, ಕೇಸರ, ಜೂಗು.

अरंड, पु. ಹರಳುಗಿಡ.

अरई, स्त्री. ಚಾವಟಿ, ಚಬುಕು.

अरकना, अक्रि. ಎಡವಿ ಬೀಳು; ಬಿರುಕು ಬಿಡು.

अरकना बरकना, अक्रि. ಎಳೆದಾಡು.

अरकाटी, पु. 'ಅರ್ಕಾಟು' ಜಿಲ್ಲೆಯವ; ಕಾಫಿ ತೋಟ ಮುಂತಾದುವುಗಳಲ್ಲಿ ಕೆಲಸ ಮಾಡಲು ಕೂಲಿಗಾರರನ್ನು ಹೊಂದಿಸಿಕೊಡುವವ, ಸೇರುವೆಗಾರ, ಸಾರೆಕಾರ.

अरगजा, पु. ಕೇಸರಿಗಂಧ.

अरगनी, स्त्री. = **अलगनी**.

अरगवानी, पु. ಕೆಂಪು ಬಣ್ಣ.

अरगला, पु. ಅಗಳಿ, ತಡೆ.

अरगाना, अक्रि. ಅಗಲು; ಮೌನವಾಗಿರು. सक्रि. ಆಯು, ಆರಿಸು; ವಿಂಗಡಿಸು.

अरघा, पु. ಅರ್ಘ್ಯಪಾತ್ರೆ; ಲಿಂಗದ ಪಾಣಿಬಟ್ಟಲು; ಬಾವಿಯ ಸುತ್ತಲೂ ಇರುವ ಕಾಲುವೆ, ಜಲದಾರಿ.

अरचना, सक्रि. ಅರ್ಚಿಸು.

अरज़, स्त्री. = **अर्ज़**.

अरज़ां, वि. ಅಗ್ಗವಾದ, ಸೋವಿ, ಚಾರಿ.

अरण्य, पु. ಕಾಡು, ಅಡವಿ, ವನ.

अरण्यरोदन, पु. ನಿರ್ಜನಸ್ಥಾನದಲ್ಲಿ ಅಳುವುದು; ವ್ಯರ್ಥವಾಗಿ ಅಳುವುದು;

ಯಾರೂ ಗಮನಿಸದ ಮಾತು.

अरथी, स्त्री. ಸಿದಿಗೆ, ಚಟ್ಟ.

अरदना, सक्रि. ತುಳಿಯು, ನಾಶ ಮಾಡು, ಹಾಳು ಮಾಡು.

अरदली, पु. ಹರಿಕಾರ, ಆಳು, ನೌಕರ.

अरदास, स्त्री. ಕಾಣಿಕೆ, ಮುಡುಪು.

अरना, पु. ಕಾಡುಕೋಣ, ಕಾಟಿ.

अरब, पु. ನೂರು ಕೋಟಿ; ಅರಬ್ಬಿ ದೇಶದವ.

अरबराना, अक्रि. ದಿಗಿಲು ಬೀಳು, ಗಾಬರಿಗೊಳ್ಳು; ತಡಬಡಿಸು.

अरबरी, स्त्री. ಗಾಬರಿ, ದಿಗಿಲು.

अरबी, स्त्री. ಅರಬ್ಬಿ ದೇಶದ. पु. ಅರಬ್ಬಿ ದೇಶದ ಕುದುರೆ ಅಥವಾ ಒಂಟೆ; ಒಂದು ಬಗೆಯ ವಾದ್ಯ.

अरबीला, वि. ನಿಷ್ಕಪಟವಾದ, ಭೋಳೆ.

अरमान, पु. ಅಭಿಲಾಷೆ, ಬಯಕೆ.

अरर, अव्य. ದಿಗಿಲು ಅಥವಾ ಆಶ್ಚರ್ಯವನ್ನು ಸೂಚಿಸುವ ಶಬ್ದ.

अरराना, अक्रि. ಅರರ ಎಂಬ ಶಬ್ದ ಮಾಡು, ಲಟಲಟನೆ ಮುರಿ.

अरवा, पु. ಬೆಣತಕ್ಕಿ, ಬೆಣತಿಗೆ; ಗೋಡೆಯಲ್ಲಿನ ಗೂಡು; ಕೆಸು.

अरवी, स्त्री. ಕೇಸುಗೆಡ್ಡೆ, ಕೆಸು.

अरस, पु. ಆಲಸ್ಯ; ಮಹಡಿ; ಮಹಡಿಯ ಮೆಟ್ಟಿಲು; ಉಪ್ಪರಿಗೆ.

अरसना, अक्रि. ಶಿಥಿಲವಾಗು.

अरसना परसना, अक्रि. ಆಲಿಂಗನ ಮಾಡು; ಸಂದರ್ಶಿಸು.

अरस परस, पु. ಕಣ್ಣುಮುಚ್ಚಾಲೆ ಆಟ; ನೋಡುವಿಕೆ; ಸ್ಪರ್ಶನ.

अरसा, पु. ಕಾಲ, ಹೊತ್ತು, ವಿಳಂಬ.

अरस्तू, पु. ಗ್ರೀಸ್ ದೇಶದ ಅರಿಸ್ಟಾಟಲ್ ಎಂಬ ತತ್ವಜ್ಞಾನಿ.

अरहट, पु. ಬಾವಿಯ ರಾಟೆ.

अरहन, पु. ಹುಳಿ, ಕೂಟು ಮುಂತಾದವಕ್ಕೆ ಸೇರಿಸುವ ಹಿಟ್ಟು, ಹೊಂದಿಟ್ಟು.

अरहर, स्त्री. ತೊಗರಿ, ತುವರಿ.

अराबा, पु. ಗಾಡಿ; ಫಿರಂಗಿಯ ಗಾಡಿ.

अरी, अव्य. ಎಲೇ, ಲೇ.

अरु, अव्य. ಮತ್ತು, ಹಾಗೂ.

अरुई, स्त्री. =अरवी.

अरुन, पु. ಕೆಂಪು.

अरुनारा, वि. ಕೆಂಪು ಬಣ್ಣದ.

अरुवा, पु. ಕೆಸುವಿನ ಗೆಡ್ಡೆ; ಗೂಗೆ.

अरूलना, अक्रि. ಗಾಯವಾಗು; ನೋವಾಗು, ನೋಯು.

अरूसा, पु. =अडूसा.

अरे, अव्य. ಎಲೋ, ಲೋ.

अरोचक, वि. ರುಚಿಯಿಲ್ಲದ, ಸಪ್ಪೆ.

अरोहना, अक्रि. ಏರು, ಹತ್ತು.

अर्क़, पु. ರಸ, ಸಾರ; ಕಷಾಯ, ಆಸವ; ಬೆವರು.

अर्क़नाना, पु. ಪುದಿನಾ ಎಣ್ಣೆ, ಪೆಪ್ಪರ್‌ಮಿಂಟ್ ಎಣ್ಣೆ.

अर्गल, पु. ಬಾಗಿಲಿನ ತಾಳ, ಅಗಳಿ; ತಡೆ, ಅಡ್ಡಿ; ಸೂರ್ಯನ ಉದಯಾಸ್ತಗಳಲ್ಲಿ ತೋರುವ ಬಣ್ಣವೇರಿದ ಮೋಡಗಳು; ಮಾಂಸ.

अर्गला, स्त्री. ಅಗಳಿ; ತಡೆ, ಅಡ್ಡಿ;

ಆನೆ ಕಟ್ಟುವ ಸರಪಣಿ.

अर्ज़, पु. ಭೂಮಿ; ಅಗಲ; ವೈಶಾಲ್ಯ. स्त्री. ವಿನಂತಿ, ಪ್ರಾರ್ಥನೆ. अर्ज़ करना = ಅರಿಕೆಮಾಡು, ವಿಜ್ಞಾಪಿಸು

अर्ज़दास्त, वि. ಪ್ರಾರ್ಥನಾಪತ್ರ.

अर्ज़ी, स्त्री. ಪ್ರಾರ್ಥನಾಪತ್ರ, ಮನವಿ, ಅರ್ಜಿ. वि. ಪ್ರಾರ್ಥಿಸಿಕೊಳ್ಳುವವ.

अर्ज़ीदावा, पु. ಫಿರ್ಯಾದು.

अर्थ, पु. ಶಬ್ದದ ಅಭಿಪ್ರಾಯ, ಮಾತಿನ ಅರ್ಥ; ಅಭಿಪ್ರಾಯ, ಉದ್ದೇಶ; ಹಣ; ಹಣಕಾಸು.

अर्थदंड, पु. ಧನದಂಡ, ಜುಲ್ಮಾನೆ, ಗುನ್ನೆಗಾರಿ.

अर्थी, वि. ಬಯಸುವವ, ಅಭಿಲಾಷಿ. पु. ಮನವಿಗಾರ; ಸೇವಕ; ಹಣವಂತ. स्त्री. ಚಟ್ಟ, ಸಿದಿಗೆ.

अर्द्धाली, स्त्री. ಚೌಪದಿ ವೃತ್ತದ ಎರಡು ಪಾದ, ಶ್ಲೋಕಾರ್ಧ.

अर्राटा, पु. ಎಡೆಬಿಡದೆ ಆಗುತ್ತಿರುವ ಗಟ್ಟಿಯಾದ ಶಬ್ದ, ಲೊಡಲೊಡ ಶಬ್ದ

अर्राना, अक्रि. ಎಡೆಬಿಡದೆ ಗಟ್ಟಿಯಾದ ಶಬ್ದಮಾಡು, ಲೊಡಲೊಡ ಅನ್ನು; ದುಡುಂ ಪ್ರವೇಶಮಾಡು.

अर्श, पु. ಮೂಲವ್ಯಾಧಿ; ಆಕಾಶ.

अलंग, पु. ದಿಕ್ಕು, ಕಡೆ.

अलक, पु. ಕುರುಳು, ಮುಂಗುರುಳು.

अलकतरा, पु. ಕೀಲೆಣ್ಣೆ, ಡಾಮರೆಣ್ಣೆ, "ಟಾರ್".

अलख, वि. ಕಣ್ಣಿಗೆ ಕಾಣದ, ಅಗೋಚರ; ಆಕಾರವಿಲ್ಲದ, ನಿರಾಕಾರ. अलख जगाना = ಈಶ್ವರನ ಹೆಸರಿನಲ್ಲಿ ಭಿಕ್ಷೆ ಬೇಡು.

अलखधारी, अलखनामी, पु. ಒಂದು ಬಗೆಯ ಸಾಧು.

अलग, वि. ಬೇರೆ, ಭಿನ್ನ, ಅಲಾಯಿದ. अलग अलग, अलग थलग = ಬೇರೆ ಬೇರೆ, ಬಿಡಿಬಿಡಿಯಾಗಿ.

अलगनी, स्त्री. ಬಟ್ಟೆ ಹರವುವ ಹಗ್ಗ ಅಥವಾ ಕೋಲು.

अलग़रज़, पु. ಭಾವಾರ್ಥ, ತಾತ್ಪರ್ಯ, ಆಶಯ; ಉಪಸಂಹಾರ.

अलग़रज़ी, वि. ಉದಾಸೀನವಾದ. स्त्री. ತಾತ್ಸಾರ.

अलगाना, सक्रि. ಬಿಡಿಸು, ಅಗಲಿಸು, ಪ್ರತ್ಯೇಕಿಸು; ಸರಿಸು, ನೀಗಿಸು.

अलगाव, पु. ಬೇರೆಯಾಗುವಿಕೆ, ಅಗಲುವಿಕೆ.

अलगोज़ा, पु. ಒಂದು ಬಗೆ ಕೊಳಲು, ಪಿಳ್ಳಂಗೋವಿ, ವೇಣು.

अलता, पु. ಓಕಳಿ, ಕಾಲುರಂಜಕ.

अलपाका, पु. ಅಮೆರಿಕದ (ಒಂಟೆಯಂತಹ) ಒಂದು ಮೃಗ; ಇದರ ಉಣ್ಣೆಯಿಂದ ನೆಯ್ದ ಬಟ್ಟೆ.

अलफ़, पु. ಕುದುರೆಯ ಮುಂಗಾಲುಗಳನ್ನು ಮೇಲಕ್ಕೆತ್ತಿ ಹಿಂಗಾಲುಗಳ ಮೇಲೆ ನಿಂತುಕೊಳ್ಳುವುದು.

अलफ़ा, पु. **अलफ़ी**, स्त्री. ಸನ್ಯಾಸಿಗಳ ತೋಳಿಲ್ಲದ ಉದ್ದವಾದ ಅಂಗಿ.

अलफ़ाज़, पु. "लफ़्ज़" का ब. रूप. ಶಬ್ದಗಳು, ಮಾತುಗಳು.

अलबत्ता, अव्य. ನಿಸ್ಸಂದೇಹವಾಗಿ; ಸರಿಯಷ್ಟೆ, ನಿಜ; ಆದರೆ.

अलबी तलबी, स्त्री. ಅರ್ಥವಾಗದ ಅರಬ್ಬಿ ಫಾರಸಿ ಮಾತುಗಳು.

अलबेला, वि. ಸೊಗಸಾದ, ಅಂದವಾದ; ಧೋರಣೆಯ, ಬೆಡಗಿನ. पु. ತೆಂಗಿನ ಕರಟದಿಂದ ಮಾಡಿದ ಹುಕ್ಕ.

अलबेलापन, पु. ಅಂದ, ಸೌಂದರ್ಯ, ಸೊಗಸು; ಧೋರಣೆ, ಒಯ್ಯಾರ, ಬೆಡಗು; ಅಲಕ್ಷ್ಯ.

अलम्, अव्य. ಪರ್ಯಾಪ್ತ, ಪೂರ್ಣ.

अलम, पु. ವ್ಯಾಕುಲ, ಶೋಕ; ಬಾವುಟ, ಧ್ವಜ.

अलमस्त, वि. ಅಮಲೇರಿದ, ಮತ್ತ; ಪ್ರಜ್ಞೆಯಿಲ್ಲದ, ನಿಶ್ಚಿಂತನಾದ.

अलमारी, स्त्री. ಕಪಾಟು, ಅಲಮಾರು

अलमास, पु. ವಜ್ರ, ಹೀರ.

अलल-टप्पू, वि. ಅಸಂಬದ್ಧ, ಯದ್ವಾತದ್ವಾ.

अलल-बछेडा, पु. ಕುದುರೆ ಮರಿ; ಧೋರಣೆಗಾರ, ಮೋಜುಗಾರ, ಖಯಾಲಿ ಮನುಷ್ಯ.

अलवांती, स्त्री. ಬಾಣಂತಿ.

अलवाई, स्त्री. ಕರು ಹಾಕಿದ ಹಸು ಅಥವಾ ಎಮ್ಮೆ.

अलवान, पु. ಕಂಬಳಿ, ಧಾವಳಿ.

अलविदा, अव्य. ಬೀಳ್ಕೊಳ್ಳೋಣ, ಬೀಳ್ !

अलस, वि. ಆಲಸ, ಸೋಮಾರಿ.

अलसाना, अक्रि. ಆಯಾಸಪಡು, ದಣಿಯು, ಆಲಸ್ಯಗೊಳ್ಳು.

अलसी, स्त्री. ಅಗಸೆ ಬೀಜ; ಅಗಸೆ ಗಿಡ.

अलसेट, स्त्री. ವಿಳಂಬ, ಸುಸ್ತಿ; ನೆಪ; ವಂಚನೆ; ಅಡಚಣೆ; ತಕರಾರು.

अलसेटिया, वि. ತಾಮಸ ಪ್ರಕೃತಿಯ, ಜೋಬದ್ರ ಮನುಷ್ಯ, ಸುಸ್ತಿಗಾರ; ಮೈಗಳ್ಳ, ನೆಪ ಹೇಳುವವ; ತಕರಾರು ಮಾಡುವವ.

अलहदा, वि. ಬೇರೆ, ಅಲಾಯಿದ.

अलहदी, पु. = अहदी.

अलाई, वि. ಸೋಮಾರಿ.

अलान, पु. ಆನೆ ಕಟ್ಟುವ ಗೂಟ, ಮುಂಡಿಗೆ; ಬಂಧನ, ಬೇಡಿ, ಕೋಳ; ಸರಪಳಿ.

अलानिया, क्रिवि. ಬಹಿರಂಗವಾಗಿ.

अलापना, अक्रि. ಅನ್ನು, ಹೇಳು; ಹಾಡು; ಆಲಾಪನೆ ಮಾಡು.

अलाम, पु. ಸುಳ್ಳುಗಾರ, ಸುಳ್ಳ.

अलामत, पु. ಚಿಹ್ನೆ, ಗುರುತು.

अलार, पु. ಬಾಗಿಲು; ಆವಿಗೆ, ಬಟ್ಟಿ.

अलालत, स्त्री. ರೋಗ, ಕಾಯಿಲೆ, ಜಡ್ಡು.

अलाव, पु. ಚಳಿಗಾಲದಲ್ಲಿ ಬೆಂಕಿ ಕಾಯಿಸುವ ಒಲೆ.

अलावा, क्रिवि. ಹೊರತು, ವಿನಾ; ಇದಲ್ಲದೆ.

अलिंद, पु. ಜಗಲಿ, ಕಟ್ಟೆ; ದುಂಬಿ.

अलीन, पु. ಗೋಡೆಗೆ ಸೇರಿದಂತಿರುವ ಕಂಬ; ಬಾಗಿಲುವಾಡ, ನಿಲು.

अलील, वि. ಅಸ್ವಸ್ಥ, ರೋಗಿ, ರುಗ್ಣ.

अलूला, पु. ನೀರು ಗುಳ್ಳೆ; ಅಗ್ನಿಜ್ವಾಲೆ.
अलोकना, सक्रि. ನೋಡು.
अलोना, वि. ಉಪ್ಪಿಲ್ಲದ, ಸಪ್ಪೆ; ನವೀನ.
अल्प, वि. ಕೊಂಚ, ತುಸ; ಚಿಕ್ಕ.
अल्पता, स्त्री. ಅಲ್ಪತ್ವ; ಕೊರತೆ.
अल्ल, पु. ಮನೆತನದ ಹೆಸರು.
अल्लम गल्लम, पु. ಗೊಡ್ಡು ಹರಟೆ.
अल्लामा, स्त्री. ಉದ್ದಾಮ ಪಂಡಿತ; ಗಂಡುಬೀರಿ.
अल्लाह, पु. ಮಹಮ್ಮದೀಯರು ಆರಾಧಿಸುವ ದೇವರು; ದೇವರು, ಭಗವಂತ. अल्लाहो अकबर = ಭಗವಂತನೇ ದೊಡ್ಡವನು.
अल्हज़ा, पु. ಗಪ್ಪೆ, ಹರಟೆ, ಜಲ್ಪ.
अल्हड़, वि. ಸ್ವೇಚ್ಛಾಚಾರಿ; ಲಕ್ಷ್ಯವಿಲ್ಲದವ; ಅನುಭವವಿಲ್ಲದ, ತಿಳಿವಳಿಕೆ ಇಲ್ಲದವ, ಹೆಡ್ಡ. पु. ಪಳಗಿಸದ ಹೋರಿ
अल्हड़पन, पु. ಸ್ವೇಚ್ಛಾಚಾರ; ತಾತ್ಸಾರ; ತಿಳಿವಳಿಕೆ ಅಥವಾ ಅನುಭವವಿಲ್ಲದಿರುವಿಕೆ; ಮಂಕುತನ.
अवकाश, पु. ಎಡೆ, ಅಂತರ; ಅಂತರಿಕ್ಷ; ಸಮಯ; ಪುರಸತ್ತು, ಬಿಡುವು.
अवगारना, मक्रि. ಬುದ್ಧಿ ಹೇಳು.
अवगाह, वि. ಆಳವಾದ. पु. ಆಳವಾದ ಸ್ಥಳ, ಗಹನ; ಪ್ರವೇಶ; ಸ್ನಾನ.
अवगाहन, पु. ಪ್ರವೇಶ; ಮುಳುಗುವಿಕೆ, ಮಿಾಯುವಿಕೆ; ಕಡೆಯುವುದು; ಹುಡುಕುವಿಕೆ; ಗಮನಿಸುವಿಕೆ, ನಿಗಾ.
अवगाहना, अक्रि. ಮುಳುಗು, ಮಿಾಯು; ಹೊಗು. सक्रि. ಹುಡುಕು; ಅಲ್ಲಾಡಿಸು; ಗಮನಿಸು, ನಿಗಾ ಇಡು.
अवघट, वि. ಅಗಮ್ಯ, ದುರ್ಗಮ; ಕಠಿಣ.
अवचट, पु. ಅಶಕ್ತ; ಅಜ್ಞಾನಿ; ತೊಡಕು क्रिवि. ಅಕಸ್ಮಾತ್ತಾಗಿ, ಥಟ್ಟನೆ.
अवज्ञा, स्त्री. ಅವಹೇಳನ, ತಿರಸ್ಕಾರ. अवज्ञा करना = ಕಡೆಗಾಣಿಸು.
अवटना, सक्रि. ಕಡೆಯು, ಮಥಿಸು; ಕುದಿಸು, ಹೊಂಗಿಸು. अक्रि. ತಿರುಗು
अवड़ेर, पु. ಗೋಜು, ತಂಟೆ, ವಿಘ್ನ.
अवड़ेरना, सक्रि. ಮರುಳುಗೊಳಿಸು; ಪೀಡಿಸು, ಗೋಳಾಡಿಸು.
अवड़ेरा, वि. ಸುತ್ತಾದ, ಬಳಸಾದ; ಗೊಂದಲದ, ತೊಡಕಿನ; ಅವಲಕ್ಷಣವಾದ, ಅಂದಗೆಟ್ಟ.
अवतरना, अक्रि. ಹುಟ್ಟು, ಅವತರಿಸು
अवतरनी, स्त्री. ಹೊಟ್ಟೆ ಕಡೆತಕ್ಕೆ ಔಷಧವಾಗುವ ಒಂದು ಮೂಲಿಕೆ.
अवतारना, सक्रि. ರಚಿಸು, ಹುಟ್ಟಿಸು
अवधि, स्त्री. ಕಾಲ; ವಾಯಿದೆ, ಗಡು; ಮೇರೆ, ಗಡಿ.
अवमान, पु. ಅವಮಾನ, ಮಾನ ಕಳೆಯುವುದು.
अवयव, पु. ಅಂಗ, ಅವಯವ.
अवरेब, पु. ವಕ್ರಗತಿ; ಬಟ್ಟೆಯಲ್ಲಿನ ಹರಕು; ಗೋಜಲು, ಸಿಕ್ಕು, ತೊಡಕು; ಕಷ್ಟ; ತಂಟೆ, ತಕರಾರು, ಜಗಳ.
अवलंबन, पु. ಆಶ್ರಯ, ಬೆಂಬಲ.
अवली, स्त्री. ಸುಗ್ಗಿಯ ಹಬ್ಬಕ್ಕಾಗಿ

ಮೊಟ್ಟಮೊದಲು ಕೊಯ್ದ ಅರಿ.

अवलेखना, सक्रि. ಕೆರೆ, ಕೆತ್ತು.

अवलेह, पु. ಲೇಹ್ಯ, ಚಟ್ನಿ.

अवलोकन, पु. ನೋಡುವಿಕೆ, ನೋಟ; ವಿಚಾರಣೆ.

अवलोकना, सक्रि. ನೋಡು; ಪರಿಶೀಲಿಸು.

अवश्य, क्रिवि. ಅಗತ್ಯವಾಗಿ, ಕಡ್ಡಾಯವಾಗಿ.

अवसर, पु. ಸಮಯ, ವೇಳೆ; ಅವಕಾಶ, ಸಂದರ್ಭ.

अवसेचन, पु. ಚಿಮುಕಿಸುವಿಕೆ; ಸುರಿಯುವಿಕೆ.

अवसेर, स्त्री. ಸಿಕ್ಕು, ಗೋಜಲು, ತೊಡಕು; ವಿಳಂಬ, ತಡ; ಕಳವಳ, ಪೇಚಾಟ.

अवसेरना, सक्रि. ಪೀಡಿಸು, ಸತಾಯಿಸು, ಗೋಳಾಡಿಸು.

अवस्था, स्त्री. ಸ್ಥಿತಿ; ಕಾಲ; ವಯಸ್ಸು.

अवहेलना, स्त्री. ತಿರಸ್ಕಾರ, ಅಸಡ್ಡೆ. सक्रि. ತಿರಸ್ಕರಿಸು, ಅಲ್ಲಗಳೆ.

अवाँ, पु. ಆವಿಗೆ, ಬಟ್ಟಿ.

अवांसी, स्त्री. = **अवली**.

अवाई, स्त्री. ಆಗಮನ, ಬರವು; ಆಳವಾಗಿ ಉಳುವಿಕೆ.

अवाक्, वि. ಮೌನವಾದ; ಮಾತಿಲ್ಲದ, ಮಾತನಾಡದ (ಚಲನಚಿತ್ರ).

अवाम, पु. ಸಾಮಾನ್ಯಜನರು, ಜನಸಾಮಾನ್ಯ.

अवार, पु. ನದಿಯ ಈ ದಡ.

अवारजा, पु. ಲೆಕ್ಕದ ಪುಸ್ತಕ, ಖಾತೆ.

अवारना, सक्रि. ತಡೆ, ತಡೆಗಟ್ಟು; ಆತ್ಮಸಮರ್ಪಣೆ ಮಾಡು. स्त्री. ಅಂಚು; ಮುಖ, ಬಾಯಿ.

अवेज़, पु. = एवज़.

अवैतनिक, वि. ಸಂಬಳವಿಲ್ಲದೆ ಕೆಲಸ ಮಾಡುವ, ಗೌರವಕ್ಕಾಗಿ ಸೇವೆ ಮಾಡುವ. अवैतनिक मंत्री = ಗೌರವ ಕಾರ್ಯದರ್ಶಿ.

अव्वल, वि. ಮೊದಲನೆಯ, ಉತ್ತಮವಾದ. पु. ಮೊದಲು, ಶುರು.

अशआर, पु. (शेर का ब. रूप) ಶ್ಲೋಕಗಳು.

अशकुन, पु. ಅಪಶಕುನ.

अशख़ास, पु. ("शख़्स" का ब. रूप.) ಜನರು.

अशार, वि. ಹತ್ತು पु. ಹತ್ತರಲ್ಲೊಂದು ಭಾಗ, ದಶಾಂಶ; ದಶಾಂಶದ ತೆರಿಗೆ.

अशराफ़, पु. ಉತ್ತಮರು, ಸಜ್ಜನರು.

अशर्फ़ी, स्त्री. ಒಂದು ಚಿನ್ನದ ನಾಣ್ಯ, ಮೊಹರು; ಹಳದಿ ಬಣ್ಣದ ಒಂದು ಬಗೆಯ ಹೂ.

अशिया, पु. ವಸ್ತು.

अश्क, पु. ಕಣ್ಣೀರು, ಕಂಬನಿ.

अश्लील, वि. ಅಶ್ಲೀಲ, ಬಂಡುಮಾತು.

असंतुष्ट, वि. ತೃಪ್ತಿಯಿಲ್ಲದವ, ಅತೃಪ್ತ

असंतुष्टि, स्त्री. असंतोष, पु. ಅತೃಪ್ತಿ

असकत, स्त्री. ಆಲಸ್ಯ, ಸುಸ್ತಿ.

असकताना, अक्रि. ಆಲಸ್ಯಪಡು; ಅಶಕ್ತನಾಗು.

असकन्ना, पु. ಕತ್ತಿ ಒರೆಯ ಒಳಗಿನ ಕೊಳೆಯನ್ನು ತೆಗೆಯುವ ಸಲಾಕಿ.

असगुन, पु. ಅಪಶಕುನ, ದುಶ್ಶಕುನ.

असबरग, पु. ರೇಷ್ಮೆಗೆ ಬಣ್ಣ ಕಟ್ಟಲು ಬಳಸುವ ಒಂದು ಮೂಲಿಕೆ, ಸೃಕ್ಕೆ.

असबाब, पु. ಸಾಮಾನು, ವಸ್ತು.

असभई, स्त्री. ಅಸಭ್ಯತೆ, ಅಶಿಷ್ಟತೆ.

असभ्य, वि. ಅನಾಗರಿಕ, ಅಸಭ್ಯ.

असभ्यता, स्त्री. ಅಸಭ್ಯತೆ, ಅಶಿಷ್ಟತೆ, ಅನಾಗರಿಕತೆ.

असमंजस, स्त्री. ಇಬ್ಬಂದಿ, ಪೇಚಾಟ.

असर, पु. ಪ್ರಭಾವ, ಪರಿಣಾಮ.

असल, वि. ವಾಸ್ತವವಾದ, ದಿಟ, ನಿಜ; ಶುದ್ಧ, ಸಾಚಾ, ಅಪ್ಪಟ पु. ಬುಡ, ತಳ; ಬಂಡವಾಳ, ಮೊದಲು, ಅಸಲು.

असलियत, स्त्री. ನಿಜವಾದುದು, ಯಥಾರ್ಥ; ಮೂಲ, ಸಾರ; ಸತ್ವ.

असली, वि. ವಾಸ್ತವವಾದ, ನೈಜ; ಮೂಲ, ಶುದ್ಧ, ಅಪ್ಪಟ.

असहनीय, वि. ಸಹಿಸಲಾಗದ, ಅಸಹ್ಯ

असहयोग, पु. ಸಹಕರಿಸದಿರುವಿಕೆ, ಅಸಹಕಾರ.

असा, पु. ದಂಡ, ದೊಣ್ಣೆ, ಬೆಳ್ಳಿ ಕಟ್ಟಿಗೆ. असाबरदार = ಬೆಳ್ಳಿಕಟ್ಟಿಗೆ ಹಿಡಿವ ಆಳು, ಕಟ್ಟಿಗೆಯವ, ಪ್ರತಿಹಾರಿ.

असाढ़, पु. ಆಷಾಢ ಮಾಸ.

असाढ़ी, वि. ಆಷಾಢದ. स्त्री. ಆಷಾಢ ಮಾಸದಲ್ಲಿ ಬಿತ್ತುವ ಪೈರು, ಮುಂಗಾರು ಬೆಳೆ.

असतीर, पु. ಕತೆಗಳು, ಕಥಾವಳಿ.

असामी, पु. ವ್ಯಕ್ತಿ; ಕಕ್ಷಿಗಾರ; ಗಿರಾಕಿ, ಗ್ರಾಹಕ; ಸಾಗುವಳಿದಾರ, ರೈತ; ಆಬಾದಿತ; ಕೆಲಸ ಸಾಧಿಸುವುದಕ್ಕೆ ಬೇಕಾದ ಮನುಷ್ಯ, ಆಸಾಮಿ, ಇಸಂ. स्त्री. ನೌಕರಿ, ಪದವಿ.

असालत, स्त्री. ಮೂಲ, ಉತ್ಪತ್ತಿ, ಹುಟ್ಟು; ಕುಲೀನತೆ; ತತ್ವ.

असालतन्, क्रिवि. ಸಹಜವಾಗಿ; ತಾನೇ, ಸ್ವಯಂ, ಖುದ್ದಾಗಿ.

असावधान, वि. ಅಜಾಗ್ರತೆಯಾದ, ಎಚ್ಚರವಿಲ್ಲದ, ಅಜಾಗರೂಕ.

असावधानी, स्त्री. ಅಜಾಗರೂಕತೆ, ಅಜಾಗ್ರತೆ, ಬೇಹುಷಾರು.

असास, पु. ತಳಹದಿ, ಬುಡ, ಮೂಲ; ಮೂಲಧನ.

असासा, पु. ಮೂಲಧನ, ಬಂಡವಾಳ.

असीर, पु. ಕೈದಿ, ಸೆರೆಯಾಳು, ಬಂದಿ.

असीस, स्त्री. ಆಶೀರ್ವಾದ, ಹರಕೆ.

असुबिधा, असुभीता, असुविधा, स्त्री. ಅನಾನುಕೂಲ, ಅಸೌಕರ್ಯ.

असूझ, वि. ಕಾಣದ, ಕತ್ತಲೆಯ; ಕಠಿಣ, ತೊಡಕಿನ.

असूया, स्त्री. ಹೊಟ್ಟೆಕಿಚ್ಚು, ಅಸೂಯೆ

असैला, वि. ಕ್ರಮವಿರುದ್ಧವಾದ, ಅನುಚಿತ.

असौध, पु. ದುರ್ಗಂಧ, ನಾತ.

अस्तबल, पु. ಕುದುರೆಲಾಯ, ತಬೇಲಿ

अस्तर, पु. ಬಟ್ಟೆಯ ಒಳಮಡಿಕೆ, ಒಳ ವಸ್ತ್ರ; ಅತ್ತರು ತಯಾರಿಸಲು ಮೂಲ ದ್ರವ್ಯವಾದ ಗಂಧದ ಎಣ್ಣೆ; ಹೆಂಗಸರ

ಒಳ ಉಡುಪು. ಸೀರೆಯೊಳಗೆ ಉಡುವ ಲಂಗ, ಅಂಗದಟ್ಟಿ.

अस्तरकारी, स्त्री. ಮೆತ್ತಿಗೆ ಕೆಲಸ, ಗಾರೆ ಗಚ್ಚು; ಸುಣ್ಣ ಬಳಿಯುವಿಕೆ.

अस्तव्यस्त, वि. ಛಿನ್ನ ಭಿನ್ನವಾದ, ದಿಕ್ಕಾಪಾಲಾದ.

अस्तित्व, पु. ಇರುವಿಕೆ, ಇರವು, ಅಸ್ತಿತ್ವ.

अस्तुरा, पु. ಕ್ಷೌರದ ಕತ್ತಿ.

अस्त्र, पु. ಆಯುಧ, ಕೈದು, ಅಸ್ತ್ರ.

अस्त्रशाला, अस्त्रागार, पु. ಆಯುಧಗಳನ್ನಿಡುವ ಸ್ಥಳ, ಆಯುಧಶಾಲೆ.

अस्नान, पु. ಸ್ನಾನ, ಜಳಕ.

अस्प, पु. ಅಶ್ವ, ಕುದುರೆ.

अस्पताल, पु. ಆಸ್ಪತ್ರೆ, ವೈದ್ಯಶಾಲೆ.

अस्ला, अव्य. ಎಂದಿಗೂ.

अस्सी, वि. ಎಂಭತ್ತು.

अहंकार, पु. ಗರ್ವ, ಹೆಮ್ಮೆ, ಅಹಂಕಾರ.

अहक, स्त्री. ಬಯಕೆ, ಇಚ್ಛೆ.

अहकाम, पु. ನಿಯಮಾವಳಿ; ಕಟ್ಟಳೆ.

अहटाना, अक्रि. ನೋವಾಗು, ವೇದನೆಯಾಗು, ನೋಯು; ಪತ್ತೆಯಾಗು, ಗೊತ್ತಾಗು. सक्रि. ಪತ್ತೆಹಚ್ಚು.

अहद, पु. ಪ್ರತಿಜ್ಞೆ, ಭಾಷೆ; ಕಾಲ.

अहदनामा, पु. ಪ್ರತಿಜ್ಞಾಪತ್ರ, ಕರಾರು ಪತ್ರ, ಒಡಂಬಡಿಕೆ.

अहदी, वि. ಸೋಮಾರಿಯಾದ. पु. ಸಮಯ ಒದಗಿದಾಗ ಕೆಲಸಕ್ಕಾಗಿ ಕಾದಿರಿಸಿದ ಸಿಪಾಯಿಗಳು, ಕಾದಿಟ್ಟ ಸೈನ್ಯ.

अहबाब, पु. ಮಿತ್ರವರ್ಗ.

अहमक वि. ಮೂರ್ಖ, ದಡ್ಡ.

अहमत्व, पु. 'ನಾನು' ಎಂಬ ಭಾವನೆ; ಅಹಂಭಾವ, ಅಹಮ್ಮತಿ.

अहम्मति, स्त्री. ಅಹಂಕಾರ, ಅಹಂಭಾವ.

अहरन, स्त्री. ಅಡಿಗಲ್ಲು, ಪಟ್ಟಡಿ, ಅದ್ಗಣಿ.

अहरना, सक्रि. ಹತ್ತರಿ ಹೊಡೆ; ನಯಮಾಡು, ರೂಪಿಸು.

अहरा, पु. ಸಗಣಿಯ ಗುಡ್ಡೆ; ಜನರು ತಂಗುವ ಸ್ಥಳ, ಬಿಡದಿ.

अहल, पु. ಕುಟುಂಬದವರು, ಪರಿವಾರ, ಸ್ವಜನ; ಯಜಮಾನ.

अहलकार, पु. ಕಾರ್ಯಸ್ಥ, ಗುಮಾಸ್ತೆ

अहलमद, पु. ಮೊಕದ್ದಮೆಗಳ ಕಾಗದಪತ್ರಗಳನ್ನು ನೋಡಿಕೊಳ್ಳುವ ಕೋರ್ಟಿನ ಉದ್ಯೋಗಸ್ಥ.

अहलिया, स्त्री. ಪತ್ನಿ, ಕುಟುಂಬ.

अहवाल, पु. ಸ್ಥಿತಿ, ಸ್ಥಿತಿಗತಿ, ವಿದ್ಯಮಾನ.

अहसान, पु. ಉಪಕಾರ; ಅನುಗ್ರಹ; ಕೃಪೆ.

अहह, अव्य. ಅಯ್ಯೋ! ಅಹಹ!

अहाता, पु. ಬೇಲಿ, ಪೌಳಿ, ಪ್ರಾಕಾರ.

अहि, पु. **अहिनी**, स्त्री. ಹಾವು.

अहिवात, पु ಮಾಂಗಲ್ಯ, ಸೌಭಾಗ್ಯ.

अहिवाती, स्त्री. ಸೌಭಾಗ್ಯವತಿ, ಮುತ್ತೈದೆ.

अहीर, पु. ಗೊಲ್ಲ, ಕವಾಡಿಗ, ಗೌಳಿಗ.

अहीरिन, अहीरी, स्त्री. ಗೊಲ್ಲತಿ, ಕವಾಡಗಿತ್ತಿ, ಗೌಳಿಗಿತ್ತಿ.

अहुटना, अक्रि. ಜರಗು, ಸರಿ.

अहुट, वि. ಮೂರೂವರೆ.

अहेर, पु. ಬೇಟೆ; ಬೇಟೆಯ ಮೃಗ.

अहेरी, पु. ಬೇಟೆಗಾರ, ವ್ಯಾಧ.

अहोर बहोर, क्रिवि. ಪದೇ ಪದೇ, ಪುನಃಪುನಃ.

अहोरा बहोरा, पु. ಮದವಣಗಿತ್ತಿ ಅತ್ತೆಮನೆಗೆ ಹೋಗಿ ಅದೇ ದಿವಸ ಹಿಂತಿರುಗಿ ಬರುವ ಒಂದು ಶಾಸ್ತ್ರ.

आ

आंक, पु. ಗುರುತು, ಚಿಹ್ನೆ; ಸಂಖ್ಯೆ, ಅಂಕೆ; ಗೆರೆ; ಅಕ್ಷರ; ಸೊಂಟ; ಅಳ್ಳೆ.

आंकड़ा, पु. ಅಂಕೆ; ಅಂಕೆಗಳ ಸಾಲು, ಕೋಷ್ಟಕ, ಗಣಿತ.

आंकड़ी, स्त्री. ಬಳ್ಳಿಯ ಕುಡಿ.

आंकना, सक्रि. ಗುರುತು ಹಾಕು, ಅಂಕಿಸು; ಅಂಕೆ ಹಾಕು; ಊಹಿಸು, ಬೆಲೆ ಕಟ್ಟು.

आंकर, वि. ಆಳವಾದ; ಹೆಚ್ಚಾದ; ಬೆಲೆಯೇರಿದ, ತಗ್ಗು, ತುಟ್ಟಿ.

आंकरी, स्त्री. ಬಾಣದ ಮೊನೆ; ಕೊಕ್ಕೆ, ಮುಳ್ಳು.

आंकुरी, स्त्री. ಅಗಳಿ, ಕೊಂಡಿ.

आंकुस, पु. ಅಂಕುಶ.

आंख, स्त्री ಕಣ್ಣು, ನೇತ್ರ; ದೃಷ್ಟಿ, ನೋಟ; ಗಮನ, ಲಕ್ಷ್ಯ, ನಿಗಾ. आंख आना = ಕಣ್ಣು ನೋಯು; ಕಣ್ಣು ಬರು. आंख गडना = ಕಣ್ಣೊತ್ತು; ದುರುಗುಟ್ಟಿ ನೋಡು; ಹಂಬಲಿಸು; ಕಣ್ಣಿಡು. आंख चुराना = ಜಾರಿಕೊ, ನುಸುಳಿಕೊ. आंख बचाना = ಜಾರಿಕೊ, ದೃಷ್ಟಿಗೆ ಬೀಳದಂತೆ ತಪ್ಪಿಸಿಕೊ. आंख भर आना = ಕಣ್ಣೀರು ತುಂಬು. आंख भर देखना = ಕಣ್ಣು ತುಂಬ ನೋಡು. आंख लगना = ನಿದ್ದೆ ಹತ್ತು; ಪ್ರೇಮ ಹುಟ್ಟು. आंखें चार करना या चार आंखें करना = ಪರಸ್ಪರ ನೋಡು; ಸಂದರ್ಶಿಸು, ಭೇಟಿಮಾಡು. आंखों देखना = ಕಣ್ಣಾರೆ ನೋಡು. आंखों में समाना = ಕಣ್ಣಿಗೆ ಕಟ್ಟಿದಂತಾಗು. आंखों से लगाकर रखना = ಬಲು ಪ್ರೀತಿ ಅಥವಾ ಆದರ ತೋರು.

आंख-मिचौली, आंख-मीचली, स्त्री. ಕಣ್ಣುಮುಚ್ಚಾಲೆಯಾಟ, ಕಣ್ಣುಮುಚ್ಚೆ ಆಟ, ಕಣ್ಣುಮುಚ್ಚಳಿಕೆ.

आंगन, पु. ಅಂಗಳ.

आंघी, स्त्री. ಸೋಸುವ ಅಥವಾ ವಸ್ತ್ರಗಾಯುದ ಜರಡಿ.

आंच, स्त्री. ಉಷ್ಣ, ಕಾವು; ಜ್ವಾಲೆ, ಬೆಂಕಿ; ಆಘಾತ, ಆಪತ್ತು.

आंचना, सक्रि. ಉರಿ ಹಾಕು, ಕಾವು ಕೊಡು.

आंचल, पु. ಬಟ್ಟೆಯ ಅಂಚು, ಸೆರಗು;

ಉಡಿ, ಮಡಿಲು; ಸಾಧುಗಳ ವಸ್ತ್ರ. आंचल देना = ಸ್ತನ್ಯ ಕೊಡು. आंचल पसारना = ಸೆರಗೊಡ್ಡು.

आंजना, सक्रि. ಕಪ್ಪು ಹಚ್ಚು.

आंट, स्त्री. ಗಣಿಕೆ, ಗಂಟು; ಕಟ್ಟು; ಪಣ, ಹಿಡಿತ; ವಿರೋಧ.

आंट सांट, स्त्री. ಒಳಸಂಚು; ಸ್ನೇಹ.

आंटी, स्त्री. ಕಟ್ಟು, ಕಂತೆ; ಹಿಡಿ, ದಾರದ ಲಡಿ, ಕಂಡಿಕೆ; ಪಂಚೆಯ ಗಂಟು, ಉಚ್ಚುಯು; ಚಿಹ್ನ.

आंठी, स्त्री. ಮುಂದವಿಸುವಿಕೆ, ಹೆಪ್ಪು ಕಟ್ಟುವಿಕೆ; ಮೊಸರಿನ ಗಡ್ಡೆ, ಗರಣೆ; ವಾಟೆ, ಗೊರಟು; ಗಂಟು.

आंड, पु. ಅಂಡಕೋಶ, ತರಡು.

आंड़ू, वि. ಅಂಡಕೋಶವುಳ್ಳ(ಎತ್ತು), ಗೂಳಿ.

आंत, स्त्री. ಕರುಳು, ಅಂತ್ರ. आंत उतरना = ಕರುಳು ಇಳಿ.

आंदू, पु. ಸರಪಳಿ, ಸಂಕೋಲೆ.

आंदोलन, पु. ಚಲಿಸುವಿಕೆ, ಚಳುವಳಿ.

आंधी, स्त्री. ಬಿರುಗಾಳಿ, ಹುಚ್ಚುಗಾಳಿ, ದೆವ್ವಗಾಳಿ. वि. ಪ್ರಚಂಡ.

आँय बाँय, स्त्री. ಗೊಡ್ಡು ಹರಟೆ.

आँव, पु. ಆಮ; ಆಮಶಂಕೆ.

आंवठ, पु. ದಡ, ಅಂಚು, ತೀರ.

आंवल, पु. ಗರ್ಭದಲ್ಲಿ ಶಿಶುವನ್ನು ಸುತ್ತಿರುವ ಪೊರೆ, ಗರ್ಭವೇಷ್ಟನ, ಸೆತ್ತೆ, ಮಾವಿ ಚೀಲ.

आंवलनाल, पु. ಹೊಕ್ಕುಳು ಬಳ್ಳಿ.

आंवला, पु. ನೆಲ್ಲಿಕಾಯಿ.

आंवाँ, पु. ಆವಿಗೆ, ಬಟ್ಟಿ.

आंस, स्त्री. ದಾರ; ನಾರು.

आंसू, पु. ಅಶ್ರು, ಕಣ್ಣೀರು, ಕಂಬನಿ. आंसू पीकर रह जाना = ಒಳಗೊಳಗೆ ಅಳು, ಕೊರಗು.

आँहड़, पु. ಪಾತ್ರೆ, ಭಾಂಡ.

आंहाँ, अव्य. ಇಲ್ಲ, ಊಹೂ.

आइंदा, पु. ಮುಂದೆ ಬರುವ, ಭವಿಷ್ಯದ, ಭಾವೀ. पु. ಭವಿಷ್ಯಕಾಲ. क्रिवि. ಮುಂದೆ, ಭವಿಷ್ಯದಲ್ಲಿ

आईन, पु. ನಿಯಮ, ಕಟ್ಟಳೆ, ವಿಧಿ; ಕಾನೂನು, ಶಾಸನ, ಕಾಯಿದೆ.

आईना, पु. ನಿಲುವುಗನ್ನಡಿ, ದರ್ಪಣ; ಬಾಗಿಲಿನ ಅಡ್ಡಪಟ್ಟಿ. आईना होना = ಸ್ಪಷ್ಟವಾಗು.

आईनाबंदी, स्त्री. ಲಸ್ತರು ಗುಳೋಪು ಮುಂತಾದ ಗಾಜಿನ ಸಾಮಾನುಗಳ ಕೆಲಸ; ಕನ್ನಡಿ ಅಥವಾ ಇಟ್ಟಿಗೆಯ ನೆಲಗಟ್ಟಿನ ಕೆಲಸ.

आईनासाज़, पु. ಕನ್ನಡಿಗೆ ರಸ ಹಾಕುವವ.

आईनासाज़ी, स्त्री. ಕನ್ನಡಿಗೆ ರಸ ಹಾಕುವಿಕೆ; ಕಲಾಯಿ ಮಾಡುವಿಕೆ.

आईनी, वि. ಕಾನೂನಿನ, ಕಾಯಿದೆಯ; ನಿಯಮಾನುಸಾರವಾದ.

आक, पु. ಎಕ್ಕದ ಗಿಡ.

आक़बत, स्त्री. ಪರಲೋಕ.

आकबाक, पु. ಅಸಂಬದ್ಧ ಮಾತು, ಹರಟೆ.

आकर, पु. ಗಣಿ; ಖಜಾನೆ, ಬೊಕ್ಕಸ;

ಒಂದು ಬಗೆಯ ಕತ್ತಿವರಸೆ.

आकरिक, पु. ಗಣಿ ತೋಡುವವ.

आकरी, स्त्री. ಗಣಿ ತೋಡುವುದು.

आकली, स्त्री. ಕಾತರತೆ, ತಲ್ಲಣ.

आक़ा, पु. ಯಜಮಾನ, ಒಡೆಯ; ಪ್ರಭು, ಶ್ರೀಮಂತ.

आकाश, पु. ಆಕಾಶ, ಅಂತರಿಕ್ಷ. आकाश पाताल एक करना = ಬಹಳ ಪ್ರಯತ್ನ ಮಾಡು, ಚಳುವಳಿ ನಡೆಸು. आकाश जनेऊ = ಆಕಾಶ ಗಂಗೆ, ಮಂದಾಕಿನಿ.

आकाशदीया, पु. ಆಕಾಶದೀಪ.

आकाशी, स्त्री. ಬಿಸಿಲು ಚಪ್ಪರ.

आक़िल, वि. ಬುದ್ಧಿವಂತ, ವಿವೇಕಿ.

आक़िला, स्त्री. ಬುದ್ಧಿವಂತಳು.

आकुल, वि. ಗಾಬರಿಯಾದ, ತವಕ ಪಡುವ, ಕಾತರ.

आकुलता, स्त्री. ಗಾಬರಿ; ತವಕ.

आक्रमण, पु. ಮೇಲೆಬೀಳುವಿಕೆ, ಧಾಳಿ; ಗೇರಾಯಿಸುವಿಕೆ.

आक्षेप, पु. ಉಪಹಾಸ, ಕೊರಚಾಟ; ದೋಷಾರೋಪಣೆ.

आखत, पु. ಅಕ್ಷತೆ, ಮಂತ್ರಾಕ್ಷತೆ.

आख़ता, वि. = आख़्ता.

आखना, सक्रि. ಹೇಳು; ನೋಡು; ಅಪೇಕ್ಷಿಸು.

आखा, पु. ಒಗಟು; ಒಂದರಿ, ಜರಡಿ; ಸಾಮಾನು ಹೇರುವ ಚೀಲ. वि. ಪೂರ್ತ.

आखा तीज, पु. ಅಕ್ಷಯ ತೃತೀಯೆ

आख़िर, वि. ಕೊನೆಯ, ಕಡೆಯ. पु. ಕೊನೆ, ಅಖೈರು; ಪರಿಣಾಮ. क्रिवि. ಕೊನೆಗೆ, ಕಡೆಗೆ.

आख़िरकार, क्रिवि. ಕಡೆಗೆ, ಕೊನೆಗೆ.

आख़िरत, स्त्री ಪರಿಣಾಮ; ಕೊನೆ; ಯುಗಾಂತ, ಪ್ರಳಯ.

आख़िरी, वि. ಕೊನೆಯ, ಕಡೆಯ.

आखु, पु. ಇಲಿ, ಮೂಷಕ.

आखेट, पु. ಬೇಟೆ, ಶಿಕಾರಿ.

आखेटक, आखेटी, पु. ಬೇಟೆಗಾರ.

आखोर, पु. ದನಕರುಗಳು ತಿಂದುಳಿದ ಹುಲ್ಲು; ನಿಷ್ಪ್ರಯೋಜಕ ವಸ್ತು; ತಿಪ್ಪೆ, ಕಸಕಡ್ಡಿ, ಗಲೀಜು. वि. ನಿರರ್ಥಕವಾದ; ಕೊಳೆತ; ಗಲೀಜಾದ.

आख़्ता, वि. ಬೀಜ ಹೊಡೆದ, ಹಿಡ ಮಾಡಿದ. पु. ಹಿಡ ಮಾಡುವಿಕೆ.

आगंतुक, वि. ಬರುವವ; ಬಂದವ.

आग, स्त्री. ಅಗ್ನಿ, ಬೆಂಕಿ, ಕಿಚ್ಚು, ಉರಿ; ಕಾವು, ತಾಪ; ಹೊಟ್ಟೆ ಕಿಚ್ಚು, ಅಸೂಯೆ. आग बबूला होना = ಕಿಡಿಕಿಡಿಯಾಗು. आग लगना = ಬೆಂಕಿ ಬೀಳು; ಬೆಲೆಯೇರು, ತುಟ್ಟಿಯಾಗು. आग लगाना = ಬೆಂಕಿ ಹೊತ್ತಿಸು; ಜಗಳ ಹುಟ್ಟಿಸು.

आगत, वि. ಬಂದ, ಬಂದಿರುವ.

आगत स्वागत, पु. ಆದರ ಸತ್ಕಾರ.

आगम, पु. ಆಗಮನ, ಬರವು; ಭವಿಷ್ಯ; ವರಮಾನ, ಹುಟ್ಟುವಳಿ. आगम करना = ಯುಕ್ತಿ, ಹುಡುಕು

आगमजानी, वि. ಭವಿಷ್ಯವನ್ನರಿತವ,

ಭವಿಷ್ಯ ತಿಳಿದವ, ಭವಿಷ್ಯಜ್ಞಾನಿ.

आगमन, पु. ಬರುವಿಕೆ, ಬರವು.

आगर, पु. ಉಪ್ಪಿನ ಮಡಿ.

आगरी, पु. ಉಪ್ಪು ತೆಗೆಯುವವ, ಉಪ್ಪಾರ, ತೊರೆಯ, ಉಪ್ಪಲಿಗ.

आगल, पु. ಅಗಳಿ, ತಾಪಾಳು.

आगा, पु. ಮುಂಭಾಗ, ಪೂರ್ವಭಾಗ; ವಕ್ಷಸ್ಥಳ, ಎದೆ; ಮುಖ, ಮೂತಿ; ಸೇನೆಯ ಮುಂಭಾಗ, ಮುಂದಳ, ಚೂಣಿ; ಭವಿಷ್ಯ. आगा पीछा = ಹಿಂದು ಮುಂದು. ಪೂರ್ವಾಪರ. आगा पीछा करना = ಹಿಂದು ಮುಂದು ನೋಡು; ಹಿಂಜರಿ, ಹಿಂತೆಗೆ.

आग़ा, पु. ಶ್ರೇಷ್ಠ; ಸ್ವಾಮಿ, ಒಡೆಯ; ಅಫ್ಘಾನಿಸ್ಥಾನದವ.

आग़ाज़, पु. ಪ್ರಾರಂಭ, ಮೊದಲು.

आगामी, वि. ಬರುವ, ಭಾವೀ.

आगार, पु. ಮನೆ; ಬೊಕ್ಕಸ.

आगाह, वि. ಪರಿಚಿತ. ತಿಳಿದವ; ವೇದ್ಯ. आगाह करना = ತಿಳಿಯಪಡಿಸು.

आगाही, स्त्री. ಪರಿಚಯ, ತಿಳಿವಳಿಕೆ.

आगे, क्रिवि. ಮುಂದೆ; ಎದುರಿನಲ್ಲಿ; ತರುವಾಯ, ಅನಂತರ; ಇನ್ನು ಮೇಲೆ; ಮುಂಚೆ. आगे बढना = ಮುಂದುವರಿ, ಮುಂದಾಗು, ಮುನ್ನಡೆ.

आगोश, स्त्री. ವಕ್ಷಸ್ಥಳ, ಎದೆ.

आग्रह, पु. ಒತ್ತಾಯ; ಹಟ, ಮುಷ್ಕರ.

आघात, पु. ಧಕ್ಕೆ, ಪೆಟ್ಟು; ಹೊಡೆತ.

आचमनी, स्त्री. ಉದ್ಧರಣೆ, ಚಮಚ.

आचरना, अक्रि. ಅಚರಿಸು.

आचार, पु. ನಡತೆ; ಅಚರಣೆ.

आच्छादन, पु. ಅವರಣ; ಮುಚ್ಚಳ.

आज, क्रिवि. ಈ ದಿನ, ಇಂದು.

आजकल, आजदिन, क्रिवि. ಈಗ್ಗೆ, ಈಗಿನ ಕಾಲದಲ್ಲಿ. आजकल करना = ನೆವ ಹೇಳಿ ಕಾಲ ಬೆಳಸು, ವಿಳಂಬಿಸು.

आज़म, वि. ದೊಡ್ಡ; ಮಹಾನ್.

आज़मा, पु. ಪರೀಕ್ಷಕ, ಶೋಧಕ.

आज़माइश, स्त्री. ಪರೀಕ್ಷೆ, ಶೋಧನೆ, ವಿಮರ್ಶೆ.

आज़माना, क्रिवि. ಪರೀಕ್ಷಿಸು, ವಿಮರ್ಶಿಸು, ಶೋಧಿಸು.

आज़मूदा, वि. ಪರೀಕ್ಷಿಸಿದ, ಪರೀಕ್ಷಿತ.

आजा, पु. ತಂದೆಯ ತಂದೆ, ಪಿತಾಮಹ

आज़ाद, वि. ಸ್ವತಂತ್ರ; ಬಿಡುಗಡೆಯಾದ, ಮುಕ್ತ; ನಿಶ್ಚಿಂತ, ನಿರ್ಭಯ; ಸ್ವೇಚ್ಛೆಯ.

आज़ादगी, स्त्री. ಸ್ವಾತಂತ್ರ್ಯ; ಮುಕ್ತಿ, ಬಿಡುಗಡೆ.

आज़ादा, वि. ಸ್ವತಂತ್ರ.

आज़ादी, स्त्री. ಸ್ವತಂತ್ರತೆ; ಬಿಡುಗಡೆ, ಮುಕ್ತಿ; ಸಲಿಗೆ.

आज़ाब, पु. ಪಾಪ, ಪಾಪಕರ್ಮ.

आज़ार, पु. ರೋಗ, ಜಡ್ಡು; ಸಂಕಟ.

आजिज़, वि. ದೀನ; ವ್ಯಾಕುಲನಾದ; ವಿಧೇಯ, ನಮ್ರ.

आजिज़ी, स्त्री. ದೈನ್ಯ; ವ್ಯಾಕುಲತೆ; ವಿನಯ, ನಮ್ರತೆ.

आजी, स्त्री. ತಂದೆಯ ತಾಯಿ, ಪಿತಾಮಹಿ.

आज़ुर्दगी, स्त्री. ವ್ಯಥೆ, ವಿಷಾದ.

आज़ुर्दा, वि. ದುಃಖಿತ, ವ್ಯಥಿತ.

आज्ञा, स्त्री. ಅಜ್ಞೆ, ಅಪ್ಪಣೆ, ಅಣತಿ.

आटा, पु. ಹಿಟ್ಟು; ಪುಡಿ. आटा गीला होना = ಪೇಚಾಟವಾಗು. आटे दाल की फ़िक्र = ಹೊಟ್ಟೆಪಾಡಿನ ಚಿಂತೆ.

आटोप, पु. ಆಡಂಬರ, ಅದ್ದೂರಿ.

आठ, वि. ಅಷ್ಟ, ಎಂಟು. आठ आठ आंसू रोना = ಬಹಳವಾಗಿ ಅಳು. आठों गांठ कुम्मैत = ಸರ್ವಾಂಗ ಸಂಪನ್ನ; ಚತುರ, ಗಟ್ಟಿಗ, ಜಾಣ

आडंबर, पु. ತುತ್ತೂರಿಯ ಶಬ್ದ; ಆನೆಯ ಗರ್ಜನೆ; ಜಂಬ, ಡಂಬ; ಗುಡಾರ, ಡೇರೆ; ನಗಾರಿ.

आडंबरी, वि. ಜಂಬಗಾರ, ಡಂಬಾಚಾರಿ

आड़, स्त्री. ಮರೆ; ಆಶ್ರಯ; ಅಡ್ಡಿ; ಆನಿಕೆ, ಊರೆ, ಆಧಾರ; ತಿಲಕ; ಚಮಕಿಬೊಟ್ಟು; ಬಾಸಿಂಗ. पु. ಚೇಳಿನ ಕೊಂಡಿ.

आड़न, स्त्री. ಗುರಾಣಿ, ಕಡಿತಲೆ, ಡಾಲು

आड़ना, सक्रि. ತಡೆ, ಅಡ್ಡಿ ಮಾಡು; ಆಧಾರ ಕೊಡು, ಊರೆಕೊಡು; ಆಸ್ತಿಯನ್ನು ಆಧಾರ ಮಾಡು.

आड़ा, पु. ಗೀರಿನ ಬಟ್ಟೆ, ಸೂಸಿಬಟ್ಟೆ; ಉದ್ದವಾದ ತೊಲೆ, ದೂಲ. वि. ಅಡ್ಡ, ಸೊಟ್ಟೆಯಾದ. आडे हाथों लेना = ಮೂದಲಿಸು, ಅಮರಿಸು, ತರಾಟೆಗೆ ತೆಗೆದುಕೊಳ್ಳು.

आड़ी, स्त्री. ಮೃದಂಗ ಬಾರಿಸುವ ಒಂದು ವರಸೆ; ಮೋಚಿಯ ಚಾಕು. पु. ಪಕ್ಷದವ, ಸಹಾಯಕ.

आड़ू, पु. ಪಿಚ್ಚೀಸು ಹಣ್ಣು, ಅರು.

आढ़, पु. ನಾಲ್ಕು ಸೇರಿನ ತೂಕ. वि. ನಿಪುಣ, ದಕ್ಷ.

आढ़क, पु. ನಾಲ್ಕು ಸೇರಿನ ತೂಕ; ನಾಲ್ಕು ಸೇರಿನ ಕೊಳಗ; ತೊಗರಿ.

आढ़त, स्त्री. ದಳ್ಳಾಳಿಯ ಕೆಲಸ ಮತ್ತು ಮಜೂರಿ; ವಟ್ಟ, ತರಗು, ದಲ್ಲಾಳಿ; ದಳ್ಳಾಳಿಯ ಅಂಗಡಿ.

आढ़तिया, पु. ದಳ್ಳಾಳಿ, ತರಗುಗಾರ.

आतंक, पु. ಭಯ, ಭೀತಿ.

आतश, स्त्री. ಬೆಂಕಿ, ಉರಿ; ಕೋಪ.

आतशक, पु. ಉಷ್ಣರೋಗ, ಮೇಹರೋಗ, ಬಿಳುಪು, ಪರಂಗಿ ರೋಗ.

आतशकी, वि. ಮೇಹರೋಗದ.

आतशख़ाना, पु. ಚಳಿಗಾಲದಲ್ಲಿ ಬೆಂಕಿ ಕಾಯಿಸಲು ಇಟ್ಟಿರುವ ಅಗ್ಗಿಷ್ಟಿಕೆ; ಪಾರ್ಸಿಯವರ ಅಗ್ನಿಶಾಲೆ; ಅಗ್ನಿಕುಂಡ

आतशज़न, पु. ಬೆಂಕಿ ಹಚ್ಚುವವ.

आतशज़नी, स्त्री. ಬೆಂಕಿ ಹೊತ್ತಿಸುವುದು, ಅಗ್ನಿಕಾರ್ಯ.

आतशदान, पु. ಅಗ್ನಿಕುಂಡ, ಅಗ್ಗಿಷ್ಟಿಕೆ

आतशपरस्त, पु. ಅಗ್ನಿ ಉಪಾಸಕ, ಅಗ್ನಿಪೂಜಕ, ಪಾರ್ಸಿಯರು

आतशबाज़, पु. ಬಾಣ ಬಿರುಸು ಮಾಡುವವ.

आतशबाज़ी, स्त्री. ಅಗ್ನಿಕ್ರೀಡೆ, ಬಾಣ ಬಿರುಸು; ಬಾಣಬಿರುಸುಗಳ ದೃಶ್ಯ.

आतशी, वि. ಅಗ್ನಿಸಂಬಂಧವಾದ, ಅಗ್ನಿಯ; ಅಗ್ನಿಬಾಧೆಯಿಲ್ಲದ (ವಸ್ತು)

आतशी शीशा = ಸೂರ್ಯಕಾಂತಮಣಿ

आतिश, स्त्री. = आतश.

आतुर, वि. ಆತುರವುಳ್ಳ, ತವಕವುಳ್ಳ; ವ್ಯಥಿತ, ಅಸ್ವಸ್ಥ; ಕಳವಳಗೊಂಡ, ಉದ್ವಿಗ್ನ.

आतुरता, स्त्री. ಆತುರ; ತ್ವರೆ; ತವಕ

आत्मा, स्त्री. ಆತ್ಮ, ಜೀವ. आत्मा ठंढी होना = ಹೊಟ್ಟೆ ತಣ್ಣಗಾಗು.

आत्माभिमान, पु. ಆತ್ಮಗೌರವ.

आत्मीय, वि. ತನ್ನ. ಸ್ವಂತ. पु. ನೆಂಟ, ಬಂಧು, ಬಳಗ.

आत्मीयता, स्त्री. ಬಂಧುತ್ವ.

आदत, स्त्री. ಸ್ವಭಾವ; ಅಭ್ಯಾಸ, ಬಳಕೆ, ವಾಡಿಕೆ, ರೂಢಿ.

आदतन्, क्रिवि. ವಾಡಿಕೆಯಾಗಿ, ರೂಢಿಯಾಗಿ.

आदम, पु. ಪಾಶ್ಚಾತ್ಯ ಮತಗಳಂತೆ ಸೃಷ್ಟಿಯ ಆದಿ ಮನುಷ್ಯ, ಆದಮ್; ಮೂಲ ಪುರುಷ

आदमज़ाद, पु. ಆದಿ ಪುರುಷನಾದ ಆದಮ್ಮನ ಸಂತಾನ; ಮನುಷ್ಯ.

आदमियत, स्त्री. ಮನುಷ್ಯತ್ವ, ಮಾನವ ಗುಣ, ಮಾನವೀಯತೆ.

आदमी, पु. ಮನುಷ್ಯ, ಮಾನವ, ಆಳು. आदमी बनना = ಸಭ್ಯನಾಗು.

आदर, पु. ಗೌರವ, ಸತ್ಕಾರ.

आदरना, सक्रि. ಗೌರವಿಸು, ಸತ್ಕರಿಸು.

आदर्श, पु ಕನ್ನಡಿ, ದರ್ಪಣ; ಆದರ್ಶ, ಮಾದರಿ, ನಮೂನೆ.

आदान प्रदान, पु. ಕೊಡುಕೊಳ್ಳುವುದು, ಕೊಳ್ಳುಕೊಡೆ, ತರುವುದು ಕೊಡುವುದು.

आदाब, पु. ನಿಯಮ, ಗೌರವ, ಮಾನ; ನಮಸ್ಕಾರ, ಸಲಾಂ.

आदिम, वि. ಮೊದಲಿನ, ಪ್ರಾರಂಭದ.

आदिल, वि. ನ್ಯಾಯವಂತ. ನ್ಯಾಯಪರ

आदी, वि. ಅಭ್ಯಾಸವುಳ್ಳವ, ರೂಢಿಯುಳ್ಳವ, ಅಭ್ಯಾಸಿ.

आदेश, पु. ಅಪ್ಪಣೆ, ಆಜ್ಞೆ.

आध, वि. ಅರ್ಧ, ಅರೆ (ಸಮಾಸದಲ್ಲಿ) एक आध = ಒಂದೋ ಅರ್ಧವೋ, ಒಂದೆರಡು, ಒಂದರೆ.

आधा, वि. ಅರ್ಧ, ಅರೆವಾಸಿ. आधो आध = ಸರಿಪಾಲು, ಸಮಾರ್ಧ.

आधासीसी, स्त्री. ಅರೆತಲೆನೋವು.

आधुनिक, वि. ಈಗಿನ, ನವೀನ.

आनंद बधाई, स्त्री. ಮಂಗಳ, ಶುಭ.

आन, स्त्री. ಮರ್ಯಾದೆ, ಗೌರವ; ವೈಖರಿ; ಶಪಥ; ಘೋಷಣೆ; ರೀತಿ; ಕ್ಷಣ. आन की आन में = ಒಂದೇ ಕ್ಷಣದಲ್ಲಿ, ತತ್ಕ್ಷಣ, ಕೂಡಲೆ.

आनन, पु. ಮುಖ.

आनन फ़ानन, क्रिवि. ಕೂಡಲೆ, ತತ್ಕ್ಷಣ

आन बान, स्त्री. ವಿಜೃಂಭಣೆ, ಸಂಭ್ರಮ, ವೈಖರಿ, ಸೊಬಗು; ಸ್ಥಾನಮಾನ.

आना, अक्रि. ಬರು; ಒದಗು; ಆಗು. आ धमकना = ಆಕಸ್ಮಾತ್ತಾಗಿ ಬರು. आ पड़ना = ಹಠಾತ್ತಾಗಿ ಬೀಳು; (ಕಷ್ಟ) ಬಂದೊದಗು. आ बनना = ಕೈಗೂಡು, ಲಾಭವಾಗು. आए दिन

=ಪ್ರತಿನಿತ್ಯ, ಬೇಗಾದರೆ.

आना, पु १ ಅಣೆ, ವೀಸ ರೂಪಾಯಿ; ವೀಸ, ಹದಿನಾರನೆಯ ಒಂದು ಭಾಗ.

आनाकानी, स्त्री. ಅಲಕ್ಷ್ಯ, ಅಸಡ್ಡೆ; ನೆವನ, ನೆಪ; ಗುಸುಗುಸು ಮಾತು.

आनुमानिक, वि. ಊಹೆಯ, ಕಾಲ್ಪನಿಕ

आप, सर्व. ತಾನು, ಸ್ವಯಂ; ತಾವು. आप आप की पड़ना = ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿರು. आपसे या आप ही = ತನ್ನಷ್ಟಕ್ಕೆ ತಾನೇ. आप ही आप = ತನಗೆ ತಾನೇ, ತಾನೇ ತಾನಾಗಿ.

आपकाज, पु. ಸ್ವಕಾರ್ಯ. आप-काज महाकाज = ಸ್ವಕಾರ್ಯವೇ ಮಹಾಕಾರ್ಯ.

आपकाजी, पु. ಸ್ವಕಾರ್ಯನಿರತ, ಸ್ವಾರ್ಥಿ.

आपडीला, क्रिवि. ತಾನೇ, ಖುದ್ದಾಗಿ.

आपत्ति, स्त्री. ದುಃಖ; ಸಂಕಟ, ವಿಪತ್ತು; ದೂರು, ದೋಷಾರೋಪಣೆ; ಆಕ್ಷೇಪಣೆ.

आपद्, आपदा, स्त्री. ವಿಪತ್ತು, ದುಃಖ; ಸಂಕಟ.

आपबीती, स्त्री. ಸ್ವಂತ ಅನುಭವ, ಆತ್ಮವೃತ್ತ.

आपरूप, सर्व. ಸಾಕ್ಷಾತ್.

आपस, स्त्री. ಸಂಬಂಧ, ಪರಸ್ಪರ.

आपसदारी, स्त्री. ಪರಸ್ಪರ ವರ್ತನೆ.

आपसी, वि. ತಮ್ಮ ತಮ್ಮೊಳಗಿನ, ಪರಸ್ಪರ.

आपा, पु. ಸ್ವರೂಪ; ಗರ್ವ; ಅಹಂಕಾರ; ಪ್ರಜ್ಞೆ. आपे में आना = ಚೇತರಿಸಿಕೊಳ್ಳು, ತೆಪ್ಪರಿಸಿಕೊಳ್ಳು. आपे में न रहना या आपे से बाहर होना = ವ್ಯೆಮರೆ; ದಿಗಿಲುಪಡು; ಅತ್ಯಂತ ಕೋಪಗೊಳ್ಳು. स्त्री. ಅಕ್ಕ.

आपाधापी, स्त्री. ತಮ್ಮದೇ ಚಿಂತೆ; ಎಳೆದಾಟ, ಜಗ್ಗಾಟ.

आफ़त, स्त्री. ಆಪತ್ತು, ಗಂಡಾಂತರ; ಕಷ್ಟ, ಸಂಕಟ, ಅಗಚಾಟಲು. आफ़त उठाना = ಕಷ್ಟಪಡು, ಸಂಕಟಪಡು; ಗದ್ದಲ ಮಾಡು, ಗಲಾಟೆ ಮಾಡು. आफ़त का परकाला = ಅತಿಜಾಗ್ರತೆಯಾಗಿ ಕೆಲಸ ಮಾಡುವವ, ಪಟು, ಪಿಡುಗ; ಬಹಳ ದುಡಿಯುವವ, ಪರಿಶ್ರಮಿ; ಗಲಾಟೆ ಮಾಡುವವ, ಗಲಾಟೆಖೋರ. आफ़त ढाना = ಗದ್ದಲ ಮಾಡು, ಗಲಾಟೆ ಎಬ್ಬಿಸು; ತೊಂದರೆ ಪಡಿಸು, ಕಾಡು. आफ़त मचाना = ಗದ್ದಲ ಎಬ್ಬಿಸು; ಕಲಹ ಮಾಡು; ಆತುರಪಡಿಸು, ತ್ವರೆಮಾಡು.

आफ़ताब, पु. ಸೂರ್ಯ, ನೇಸರು, ರವಿ; ಆತಪ, ಬಿಸಿಲು.

आफ़ताबा, वि. ಒಂದು ಬಗೆ ತಂಬಿಗೆ.

आफ़ताबी, वि. ಸೂರ್ಯನ; ಸೂರ್ಯನಂತಹ. स्त्री. ಉತ್ಸವಗಳಲ್ಲಿ ತರುವ ಅಲಂಕಾರದ ದೊಡ್ಡ ಬೀಸಣಿಗೆ, ಸೂರೆಪಾನ, ಆಲವಟ್ಟ; ಒಂದು ತರದ ಬಾಣಬಿರುಸು; ಬಿಸಿಲು ಮರೆಗಾಗಿ ಬಾಗಿಲು ಮತ್ತು ಕಿಟಕಿಯ ಮೇಲಿನ ಮರೆ, ಬಿಸಿಲು ಚಪ್ಪರ, ಚಾಟುಚಪ್ಪರ.

आफ़रीं, अव्य. ಶಹಬಾಸ್! ಫೇಸ್! ಸಾಧು! ಭಲಾಭಲಾ! ಭಳಿರೆ!

आफ़ाक़, पु. ದಿಗಂತ, ಕ್ಷಿತಿಜ.

आफ़ियत, स्त्री. ಕುಶಲ, ಕ್ಷೇಮ.

आफ़िस, पु. ಆಫೀಸು, ಕಛೇರಿ.

आफ़ू, स्त्री. ಅಫೀಮು, ಅಫು.

आब, स्त्री. ಕಾಂತಿ, ಹೊಳಪು; ರತ್ನ ಪ್ರಭೆ, ಹೊಳಕು. पु. ನೀರು.

आबकारी, स्त्री. ಸಾರಾಯಿ ತಯಾರಿಸುವ ಅಥವಾ ಮಾರುವ ಸ್ಥಳ, ಸೇಂದಿ ಅಂಗಡಿ, ಪಡಖಾನೆ; ಮಾದಕ ಪದಾರ್ಥಗಳ ಇಲಾಖೆ, ಸೇಂದಿ ಇಲಾಖೆ.

आबख़ोरा, पु. ಜಲಪಾತ್ರೆ, ಲೋಟಾ; ಬಟ್ಟಲು.

आबजोश, वि. ನೀರಿನಲ್ಲಿ ಕುದಿಸಿದ (ದ್ರಾಕ್ಷಿ ಹಣ್ಣು).

आबताब, स्त्री. ಹೊಳಪು, ಕಾಂತಿ.

आबदस्त, पु ನೀರುಮುಟ್ಟುವಿಕೆ, ಪ್ರಕ್ಷಾಳನೆ, ಶೌಚ.

आबदाना, पु. ಅನ್ನಪಾನ, ತಿಂಡಿ ತೀರ್ಥ; ಜೀವನೋಪಾಯ.

आबदार, वि. ಹೊಳೆಯುವ, ಕಾಂತಿಯುತ, ಮಿನುಗುವ, ಮಿಂಚುವ. पु. ನೀರು ತರುವ ಆಳು.

आबदारी, स्त्री. ಹೊಳಪು, ಕಾಂತಿ.

आबनाय, स्त्री. ಜಲಸಂಧಿ.

आबनूस, पु. ಕರೀಮರ, ಆಬನಾಸಿ, ಬೀಟೆ. आबनूस का कुंदा = ಕರಿ ಟೊಣೆಯು.

आबनूसी, वि. ಬಹಳ ಕಪ್ಪಾದ.

आबपाशी, स्त्री. ನೀರುಹಾಯಿಸುವಿಕೆ; ನೀರಾವರಿ, ಜಲಾಸರೆ.

आबरवां, स्त्री. ತೆಳುವಾದ ಒಂದು ಬಗೆ ಬಟ್ಟೆ.

आबरू, स्त्री. ಮಾನ, ಮರ್ಯಾದೆ, ಗೌರವ.

आबला, पु. ಗುಳ್ಳೆ, ಬೊಬ್ಬೆ.

आबशार, पु. ಜಲಪ್ರವಾಹ, ಝರಿ; ಜಲಪಾತ, ದಬದಬಿ, ತಡಸಲು.

आब हवा, स्त्री. ಶೀತೋಷ್ಣಸ್ಥಿತಿ, ವಾಯುಗುಣ, "ಹವ".

आबाद, वि. ವಾಸವಾಗಿರುವ, ಒಕ್ಕಲಿರುವ; ಜನಭರಿತ, ಸಾಗುವಳಿಗೆ ತಕ್ಕ; ಸಾಗುವಮಾಡಲ ಯೋಗ್ಯವಾದ, ಆಬಾದು; ಹರ್ಷಚಿತ್ತ, ಸಮೃದ್ಧ.

आबादकार, पु. ಪರದೇಶಕ್ಕೆ ಹೋಗಿ ಒಕ್ಕಲು ಮಾಡುವವ, ವಸಾಹತು ಮಾಡುವವ, ವಲಸೆ ಮಾಡುವವ.

आबादानी, स्त्री. ನೆಲಸುವಿಕೆ; ಜನಸಂದಣಿ, ಜನಸ್ತೋಮ.

आबादी, स्त्री. ವಾಸ, ವಸ್ತಿ; ಜನಸಂಖ್ಯೆ; ಸಾಗುವಳಿ ಜಮೀನು.

आबी, वि. ನೀರು ಸಂಬಂಧವಾದ; ನೀರಿನ; ನೀರಿನಲ್ಲಿರುವ. पु. ಸಮುದ್ರದ ಉಪ್ಪು. स्त्री. ನೀರಾವರಿ ಭೂಮಿ, ತರಿ ಜಮೀನು.

आभा, स्त्री. ಕಾಂತಿ, ದೀಪ್ತಿ.

आभार, पु. ಹೊರೆ; ಕೃತಜ್ಞತೆ.

आभारी, स्त्री. ಕೃತಜ್ಞ; ಉಪಕೃತ

आभास, पु. ಛಾಯೆ, ಜಾಡು.

आभीर, पु. ಗೊಲ್ಲ, ಗೌಳಿಗ.

आम, पु. ಮಾವು; ಮಾವಿನ ಕಾಯಿ ಅಥವಾ ಹಣ್ಣು; ಆಮಶಂಕೆ, ಆಮ. वि. ಹಸಿ; ಮಾಗದ, ಪಕ್ವವಾಗದ; ಸಾಧಾರಣ; ಜನಸಾಮಾನ್ಯ; ಸರ್ವ ವಿದಿತ; ಸರ್ವಸಾಮಾನ್ಯ, ಹುದುವು.

आमड़ा, पु. ಅಮಟೆಕಾಯಿ.

आमद, स्त्री. ಬರವು, ಆಗಮನ; ವರಮಾನ, ಹುಟ್ಟುವಳಿ.

आमदनी, स्त्री. ಆದಾಯ, ವರಮಾನ; ಜಮಾ; ವಿದೇಶದಿಂದ ತರಿಸಿದ ವಸ್ತು, ಆಮದು ಸರಕು.

आमना सामना, पु. ಸಂದರ್ಶನ, ಭೇಟಿ, ಮುಖಾಮುಖಿ.

आमने सामने, क्रिवि. ಎದುರು ಬದುರಾಗಿ, ಸಮ್ಮುಖ.

आमलक, पु. **आमलकी**, स्त्री. ನೆಲ್ಲಿ ಕಾಯಿ.

आमादगी, स्त्री. ಸನ್ನಾಹ, ಸಿದ್ಧತೆ, ತಯಾರಿ.

आमादा, वि. ಸನ್ನದ್ಧನಾದ, ಸಿದ್ಧವಾದ, ತಯಾರು.

आमाल, पु. ಕರ್ಮ, ಕೃತ್ಯ.

आमालनामा, पु. ಉದ್ಯೋಗಸ್ಥರ ಕೆಲಸ ನೀತಿನಡತೆ ಮುಂತಾದುವು ಗಳನ್ನು ಬರೆದಿಡುವ ಪುಸ್ತಕ.

आमाश, आमास, पु. ಉಬ್ಬರ, ಊದು, ಬಾವು, ಬೀಗು.

आमिल, पु. ಕೆಲಸ ಮಾಡುವವ, ಕೆಲಸ ಗಾರ; ಕರ್ತವ್ಯನಿಷ್ಠ; ಉದ್ಯೋಗಸ್ಥ, ಅಧಿಕಾರಿ; ದೆವ್ವಬಿಡಿಸುವವ, ಮಂತ್ರ ವಾದಿ, ಮಾಟಗಾರ; ಸಿದ್ಧಿಯುಳ್ಳ ಫಕೀರ. वि. ಹುಳಿಯಾದ.

आमी, स्त्री. ಮಾವಿನ ಹೀಚು; ಕೆಂಡ ದಲ್ಲಿ ಸುಟ್ಟ ರಾಗಿ ಜೋಳಗಳ ತೆನೆ.

आमीन, क्रिवि. ಹಾಗೆಯೇ ಆಗಲಿ! ತಥಾಸ್ತು! ಸ್ವಸ್ತಿ!

आमूदा, वि. ಅಲಂಕೃತ, ಸಿಂಗರಿಸಿದ.

आमेज़, वि. ಕಲಸಿದ, ಬೆರಸಿದ, ಬೆರೆದ.

आमेज़ना, सक्रि. ಕಲಸು, ಬೆರಸು.

आमेज़िश, स्त्री. ಕಲಬೆರಕೆ, ಮಿಶ್ರ.

आमोद, पु. ಆನಂದ, ಉಲ್ಲಾಸ.

आमोद प्रमोद, पु. ಸುಖಸಂತೋಷ, ಆನಂದ, ಉಲ್ಲಾಸ.

आयंती पायंती, स्त्री. ಹಾಸಿಗೆಯ ತಲೆ ಯ ಕಡೆ ಮತ್ತು ಕಾಲುಕಡೆ.

आय, स्त्री. ವರಮಾನ; ಲಾಭ.

आयत, वि. ವಿಶಾಲ, ವಿಸ್ತಾರವಾದ. स्त्री. ಕುರಾನಿನ ವಾಕ್ಯ; ವೇದವಾಕ್ಯ.

आयद, वि. ಆರೋಪಿಸಿದ; ಸಂಭವಿಸಿದ, ಗುರಿಯಾದ.

आय-व्यय, पु. ಜಮಾ ಖರ್ಚು.

आया, स्त्री. ಧಾತ್ರಿ, ದಾದಿ. अव्य. ಅಥವಾ; ಏನೋ.

आयात, पु. ಆಮದು ಸರಕು.

आयास, पु. ಪರಿಶ್ರಮ.

आयु, स्त्री. ವಯಸ್ಸು, ಆಯುಸ್ಸು.

आयोजन, पु. **आयोजना**, स्त्री. ಏರ್ಪಾಡು, ಯೋಜನೆ, ಹಂಚಿಕೆ, ಆಲೇಖ್ಯ.

आरंभ, पु. ಪ್ರಾರಂಭ, ಮೊದಲು, ಶುರು

आर, स्त्री. ಮುಳ್ಳು; ವಿಷದ ಮುಳ್ಳು, ಕೊಂಡಿ; ಮೋಚಿಯ ಸೂಜಿ; ತಿರಸ್ಕಾರ; ವೈರ, ವಿರೋಧ; ಲಜ್ಜೆ, ಭಿಡೆ, ಸಂಕೋಚ. पु. ದಡ, ಪಾರ್ಶ್ವ; ಚಕ್ರದ ಅರೆ, ಅರೆಕಾಲು.

आरज़ा, पु. ರೋಗ, ಕಾಯಿಲೆ.

आरज़ू, स्त्री. ಅಭಿಲಾಷೆ; ಬಯಕೆ, ಇಚ್ಛೆ, ಕೋರಿಕೆ, ವಿನಂತಿ.

आर पार, पु. ಈಚೆಯ ಮತ್ತು ಆಚೆಯ ದಡ, ಪಾರಾವಾರ; ಈ ಕಡೆ ಆ ಕಡೆ, ಇಬ್ಬದಿ. क्रिवि. ದಡದಿಂದ ದಡಕ್ಕೆ, ಒಂದು ಕಡೆಯಿಂದ ಮತ್ತೊಂದು ಕಡೆಗೆ; ತಟಾಯ್ದು. आर पार जाना = ಪಾರಾಗು, ತಟಹಾಯು; ಉಚಾಯಿಸು.

आरसी, स्त्री. ಕನ್ನಡಿ, ದರ್ಪಣ; ಹೆಂಗಸರು ಬಲಗೈ ಹೆಬ್ಬೆಟ್ಟಿಗೆ ಹಾಕಿಕೊಳ್ಳುವ ಒಂದು ಬಗೆ ಉಂಗುರ.

आरा, पु. ಕರಗಸ, ಗರಗಸ, ರಂಪ; ಮೋಚಿಯ ಸೂಜಿ, ರಂಪಿಗೆ; ಗಾಡಿ ಚಕ್ರದ ಎಲೆ.

आराइश, स्त्री. ಅಲಂಕಾರ, ಉದ್ಯಾನ.

आराकश, पु. ಗರಗಸ ಆಡಿಸುವವ, ಮರ ಸಿಗಿಯುವವ, ಗರಗಸಗಾರ.

आराजी, स्त्री. ಭೂಮಿ; ಜಮೀನು, ಗದ್ದೆ.

आराबा, पु. ಎತ್ತಿನ ಗಾಡಿ.

आराम, पु. ಉಪವನ, ನಂದನವನ; ನೆಮ್ಮದಿ, ಸುಖ, ಸೌಖ್ಯ; ವಿರಾಮ, ವಿಶ್ರಾಂತಿ. वि. ಸೌಖ್ಯ, ಸ್ವಸ್ಥ. आराम लेना = ವಿಶ್ರಮಿಸು, ವಿಶ್ರಾಂತಿಗೊಳ್ಳು.

आराम कुर्सी, स्त्री. ವಿಶ್ರಮಿಸಿಕೊಳ್ಳುವ ಉದ್ದವಾದ ಕುರ್ಚಿ, ಅರಾಮ ಕುರ್ಚಿ, ವಿರಾಮಕುರ್ಚಿ.

आराम-तलब, वि. ಸುಖವನ್ನಪೇಕ್ಷಿಸುವವ, ಸುಖಾಭಿಲಾಷಿ; ವಿಲಾಸಪ್ರಿಯ, ವಿಲಾಸಿ; ಸೋಮಾರಿ.

आराम-तलबी, स्त्री. ಸುಖಾಭಿಲಾಷೆ, ವಿಷಯಾಭಿಲಾಷೆ

आरामदेह, वि. ಸುಖಕೊಡುವ, ಸುಖಕರ, ಸುಖಪ್ರದ. ಸುಖದಾಯಕ.

आरास्तगी, स्त्री. ಸಜ್ಜುಗೊಳಿಸುವಿಕೆ, ಅಲಂಕಾರ.

आरास्ता, वि. ಸಜ್ಜುಗೊಳಿಸಿದ, ಸವಣಿಸಿದ, ಅಲಂಕೃತವಾದ; ಮೇಜು ಕುರ್ಚಿ ಮೊದಲಾದುವುಗಳಿಂದ ಸವಣಿಸಿದ (ಮನೆ).

आरी, स्त्री. ಸಣ್ಣ ಗರಗಸ, ಕೈಗರಗಸ; ಮೋಚಿಯರ ಕಂಟಾಣಿ, ರಂಪಿಗೆ; ದನಕರುಗಳನ್ನು ಅಟ್ಟಲು ಬಳಸುವ ಕಬ್ಬಿಣದ ಮುಳ್ಳು, ತಿವಿಗೋಲು, ಮುಳ್ಳುಗೋಲು.

आरोगना, सक्रि. ಆರೋಗಣೆ ಮಾಡು, ಭೋಜನ ಮಾಡು.

आर्थिक, वि. ಹಣದ, ಹಣಕಾಸಿನ.

आलंग, पु. ಕಾಮುಮದ, ಮಸ್ತಿ, ಬೆದೆ.

आल, पु. ಒಂದು ಖನಿಜ, ಅರಿದಳ; ಡೇರೆ, ಶಿಬಿರ; ಸೇಂದಿ; ಕೆಂಪು ಬಣ್ಣ

ತೆಗೆಯುವ ಒಂದು ಗಿಡ; ಕೆಂಪುಬಣ್ಣ. स्त्री. ಮಗಳ ಸಂತತಿ; ವಂಶ, ಕುಲ. आल औलाद = ಮಕ್ಕಳುಮರಿ.

आलथी पालथी, स्त्री. ಚಕ್ಕಳ ಬಕ್ಕಳ, ಚಕ್ಕಳು ಮುಕ್ಕಳು, ಚಪ್ಪಳ ಕಾಲು, ಪದ್ಮಾಸನ. आलथी पालथी मारना = ಚಪ್ಪಳ ಕಾಲು ಹಾಕಿ ಕೂಡು.

आलन, पु. = अरहन.

आलपीन, स्त्री. ಗುಂಡುಸೂಜಿ.

आलम, पु. ಪ್ರಪಂಚ, ಜಗತ್ತು; ಸ್ಥಿತಿ; ಜನಸಮೂಹ, ಜನಾಂಗ, ಕೋಮು. आलमगीर = ಜಗದ್ವಿಜಯಿ.

आलमनक, पु. ಪಂಚಾಂಗ.

आलमारी, स्त्री. ಅಲಮಾರು, ಕಪಾಟು.

आलवाल, पु. ಪಾತಿ, ಕಡಗು; ಜಲದಾರಿ.

आलस, वि. ಸೋಮಾರಿ, ಅಲಸ. पु. ಸೋಮಾರಿತನ.

आलसी, वि. ಸೋಮಾರಿ.

आलस्य, पु. ಸೋಮಾರಿತನ; ಅಲಸಿಕೆ.

आला, पु. ಗೋಡೆಯಲ್ಲಿನ ಗೂಡು, ಆಯುಧ. वि. ಪ್ರಶಸ್ತ, ಉತ್ಕೃಷ್ಟ, ಶ್ರೇಷ್ಠ; ಉಚ್ಚ, ಉದಾತ್ತ.

आलाइश, स्त्री. ಹೊಲಸು, ಗಲೀಜು; ಶರೀರದ ಮಲ.

आलाटाली, स्त्री. = टालमटूल.

आलान, पु. ಆನೆ ಕಟ್ಟುವ ಗೂಟ.

आलापन, सक्रि. ಹಾಡು; ಆಲಾಪನೆ ಮಾಡು.

आलिंगना, सक्रि. ಆಲಿಂಗಿಸು, ತಬ್ಬಿಕೊಳ್ಳು.

आलिम, वि. ವಿದ್ವಾಂಸ, ಪಂಡಿತ; ಜ್ಞಾನಿ.

आली, स्त्री. ಸಖಿ, ಗೆಳತಿ. वि. ಪ್ರಶಸ್ತವಾದ, ಶ್ರೇಷ್ಠ.

आलीशान, वि. ವಿಶಾಲ; ದಿವ್ಯ, ಭವ್ಯ.

आलू, पु. ಆಲೂಗೆಡ್ಡೆ, ಉರುಳುಗೆಡ್ಡೆ, ಬಟಾಟೆ.

आलूचा, आलूबुख़ारा, पु. ಒಂದು ಬಗೆ ಹಣ್ಣು.

आलूदा, वि. ಮೈಲಿಗೆಯಾದ, ಅಶುದ್ಧ; ಕೊಳೆಯಾದ.

आलू शफतालू, पु. ಮಕ್ಕಳ ಒಂದು ಆಟ.

आलोचक, वि. ನೋಡುವವ, ಟೀಕೆ ಮಾಡುವವ; ವಿಮರ್ಶಕ.

आलोचन, पु. ನೋಟ, ದರ್ಶನ; ವಿಮರ್ಶೆ.

आलोचना, स्त्री. ವಿಮರ್ಶೆ, ಟೀಕೆ ಟಿಪ್ಪಣಿ.

आलोचनात्मक, वि. ವಿಮರ್ಶಾತ್ಮಕ.

आलोड़न, पु. ಕಡೆಯುವಿಕೆ, ಮಥನ.

आलोड़ना, सक्रि. ಕಡೆಯು, ಮಥಿಸು, ಕೂಲಂಕಷವಾಗಿ ವಿಚಾರಮಾಡು.

आल्हा, पु. ವಿಸ್ತೃತವಾದ ವರ್ಣನೆ; ಆಕಾಶಪುರಾಣ, ಕಂತೆಪುರಾಣ.

आवभगत, स्त्री. ಆದರಸತ್ಕಾರ, ಉಪಚಾರ.

आवर्दा, वि. ಒಯ್ದ, ಮೇಲಕ್ಕೆ ತಂದ,

ಏರಿಸಿದ, ಉಪನೀತ.

आवली, स्त्री. ಪಂಕ್ತಿ, ಸಾಲು.

आवश्यक, वि. ಅಗತ್ಯವಾದ, ಬೇಕಾದ

आवश्यकता, स्त्री. ಅಗತ್ಯ, ಅವಶ್ಯಕತೆ

आवाँ, पु. ಆವಿಗೆ, ಬಟ್ಟಿ.

आवागमन, पु. ಹೋಗುವುದು ಬರುವುದು, ಗಮನಾಗಮನ; ಸಂಪರ್ಕ.

आवाज़, स्त्री. ಶಬ್ದ, ಧ್ವನಿ; ಸ್ವರ; ಕೂಗು. आवाज़ देना = ಗಟ್ಟಿಯಾಗಿ ಕರೆ, ಕೂಗುಹಾಕು. आवाज़ वैठना = ಗಂಟಲು ಕಟ್ಟು, ಗಂಟಲು ಕೂರು.

आवाज़ा, पु. ಪರಿಹಾಸ, ಎಗತಾಳ, ಗೇಲಿ.

आवाजाई, स्त्री. ಹೋಗುವಿಕೆ ಬರುವಿಕೆ, ಗಮನಾಗಮನ.

आवारगी, स्त्री. ತಿರುಕತನ; ಉಡಾಳತನ; ಪೋಕರಿತನ.

आवारजा, पु. ಲೆಕ್ಕದ ಪುಸ್ತಕ, ಖಾತೆ

आवारा, वि. ತಿರುಕ; ಉಡಾಳ; ಪೋಲಿ, ಪೋಕರಿ; ಲಂಪಟ

आवारागर्द, वि. ತೊಂಡ, ತಿರುಕ; ಪೋಲಿ.

आविष्कार, पु. ಹೊಸವಾಗಿ ನಿರ್ಮಿಸುವಿಕೆ; ಕಲ್ಪನೆ, ಹೊಸದಾದ ರಚನೆ

आवेजा, पु. ಬುಗುಡಿ, ಲೋಲಾಕು, ಚಳತುಂಬು; ಜುಮುಕಿ.

आवेदन, पु. ಅರಿಕೆ, ಅರ್ಜಿ.

आवेदनपत्र, पु. ಮನವಿ, ಅರ್ಜಿ, ಪ್ರಾರ್ಥನಾಪತ್ರ.

आशना, पु. ಪರಿಚಯಸ್ಥ, ಸ್ನೇಹಿತ; ಪ್ರೇಮಿ, ಇನಿಯ; ಇನಿಯಳು; ಉಪಪತಿ, ಮಿಂಡ.

आशनाई, स्त्री. ಪರಿಚಿತಿ, ಸ್ನೇಹ; ಪ್ರೀತಿ; ಅನುಚಿತ ಪ್ರೇಮ ಅಥವಾ ಸಂಬಂಧ; ಕೂಡಿಕೆ.

आशा, स्त्री. ಆಶೆ, ಹಾರೈಕೆ. आशा करना = ಆಶಿಸು, ಹಾರೈಸು.

आशिक़, पु. ಪ್ರೀತಿಸುವ ವ್ಯಕ್ತಿ, ಪ್ರೇಮಿ; ಇನಿಯಳು; ಮನದನ್ನ.

आशिक़ाना, वि. ಪ್ರೇಮಿಯಂತಹ; ಪ್ರಿಯನ

आशियाना, पु. ಪಕ್ಷಿಯ ಗೂಡು; ಪರ್ಣಶಾಲೆ, ಕುಟಿ.

आशिश, स्त्री. ಆಶೀರ್ವಾದ. आशिश देना = ಆಶೀರ್ವದಿಸು, ಹರಸು.

आशुफ़्तगी, स्त्री. ಪೇಚಾಟ, ಘಾಸಿ.

आशुफ़्ता, वि. ಪೇಚಾಡುವ.

आश्विन, पु. ಆಶ್ವಿಜ ಮಾಸ

आस, स्त्री. ಆಶೆ, ಭರವಸೆ; ಬೀಸುವ ಕಲ್ಲು.

आसकत, स्त्री. ನಿಶ್ಶಕ್ತಿ; ಸೋಮಾರಿತನ

आसकती, वि. ಸೋಮಾರಿ.

आसते, क्रिवि. ಮೆತ್ತಗೆ, ನಿಧಾನವಾಗಿ.

आसन, पु. ಆಸನ, ಪೀಠ; ಪೃಷ್ಠ; ಮಣೆ; ಬಿಡಾರ; ಕುಳಿತುಕೊಳ್ಳುವ ರೀತಿ, ಯೋಗಮುದ್ರೆ.

आसनी, स्त्री. ಚಿಕ್ಕ ಆಸನ.

आसपास, क्रिवि. ಸುತ್ತಮುತ್ತ, ಅಜುಬಾಜು, ಅಕ್ಕಪಕ್ಕದಲ್ಲಿ, ಹತ್ತಿರ.

आसमान, पु. ಆಕಾಶ; ಸ್ವರ್ಗ.

आसमान सिर पर उठाना = ಗದ್ದಲ ಮಾಡು, ಗಲಾಟೆ ಎಬ್ಬಿಸು, ಚಳುವಳಿ ಎಬ್ಬಿಸು.

आसमानी, वि. ಆಕಾಶದ; ಸ್ವರ್ಗದ; ಆಕಾಶ ಬಣ್ಣದ, ಆಕಾಶನೀಲಿ. स्त्री. ಹೆಂಡ, ಕಳ್ಳು; ಆಕಾಶಬಾಣ.

आसरा, पु. ಆಶ್ರಯ, ಆಸರೆ; ನೆರವು, ಆಧಾರ; ಭರವಸೆ, ನೆಚ್ಚಿಕೆ, ನಂಬಿಕೆ; ಆಶೆ; ನಿರೀಕ್ಷಣೆ. आसरा सहारा = ಬೆಂಬಲ, ದಿಕ್ಕು ದಿವಾಣ.

आसव, पु. ಒಂದು ಬಗೆಯ ಮದ್ಯ; ಔಷಧದ ಒಂದು ಬಗೆ, ಕಷಾಯ.

आसा, पु. = असा.

आसाइश, स्त्री. ಸುಖ, ಸೌಖ್ಯ; ಹರ್ಷ, ಆನಂದ; ಸಮೃದ್ಧಿ.

आसान, वि. ಸುಲಭ, ಸರಾಗ, ಸುಗಮ

आसानी, स्त्री. ಸುಲಭ, ಸೌಲಭ್ಯ, ಸರಾಗ.

आसार, पु. ಚಿಹ್ನೆ, ಲಕ್ಷಣ, ಕುರುಹು; ಅಸ್ತಿಭಾರ, ಪಾಯ; ಗೋಡೆಯ ಅಗಲ

आसी, पु. ವೈದ್ಯ. वि. ದುಃಖಿತ.

आसिया, स्त्री. ಬೀಸುವ ಕಲ್ಲು.

आसीस, स्त्री. ಆಶೀರ್ವಾದ, ಹರಕೆ.

आसूदगी, स्त्री. ತೃಪ್ತಿ; ಸಮೃದ್ಧಿ; ನಿಶ್ಚಿಂತೆ

आसूदा, वि. ತೃಪ್ತ; ಸಮೃದ್ಧ; ನಿಶ್ಚಿಂತ

आसेब, पु. ಭೂತಪ್ರೇತಗಳ ಬಾಧೆ, ದೆವ್ವ ಸೋಕು; ಕಷ್ಟ, ದುಃಖ.

आसेबी, वि. ಭೂತಪ್ರೇತಗಳ ಬಾಧೆಗೆ ಸಂಬಂಧಪಟ್ಟ; ದೆವ್ವ ಸೋಕಿದ.

आस्तान, पु. ಹೆಬ್ಬಾಗಿಲು, ತಲೆಬಾಗಿಲು; ಫಕೀರರ ಮಠ, ಆಸ್ಥಾನ.

आस्तीन, स्त्री. ಅಂಗಿಯ ತೋಳು.

आस्वाद, पु. ರುಚಿ, ಸವಿ; ಮಾಧುರ್ಯ.

आस्वादन, पु. ರುಚಿ ನೋಡುವುದು, ಸವಿ ನೋಡುವುದು.

आह, अव्य. ಅಯ್ಯೋ! स्त्री. ಸಂಕಟ ಧ್ವನಿ, ಆರ್ತನಾದ, ನಿಟ್ಟುಸಿರು, ನಿಡುಸುಯ್ಲು. आह भरना = ನಿಟ್ಟುಸಿರು ಬಿಡು, ನಿಡುಸುಯ್ಯು. आह लेना = ಪೀಡಿಸು, ಸತಾಯಿಸು, ಗೋಳಾಡಿಸು.

आहट, स्त्री. ಸದ್ದು, ಸಪ್ಪಳ; ಸೆಲೆ, ಸುಳಿವು.

आहन, पु. ಕಬ್ಬಿಣ.

आहनरुबा, पु. ಲೋಹಚುಂಬಕ, ಸೂಜಿಗಲ್ಲು.

आहरन, पु. ಅಡಿಗಲ್ಲು, ಅಡ್ಗಣಿ.

आहां, स्त्री. ಘೋಷಣೆ; ಕೂಗು, ಕರೆ.

आहा, अव्य. ಅಹಾ! ಭೇಷ್!

आहिस्तगी, स्त्री. ಸಾವಕಾಶ, ತಡ.

आहिस्ता, क्रिवि. ಮೆತ್ತ ಮೆತ್ತಗೆ, ನಿಧಾನವಾಗಿ.

आहू, पु. ಜಿಂಕೆ, ಎರಲೆ.

इ

इंगलिस्तान, पु. ಆಂಗ್ಲ ದೇಶ.

इंगुदी, स्त्री. ಹೊಂಗೆಯ ಮರ.

इंगुर, पु. ಇಂಗಲೀಕ.

इंगुरौटी, स्त्री. ಇಂಗಲೀಕದ ಡಬ್ಬಿ;

ಕುಂಕುಮದ ಭರಣಿ, ಕರಂಡಕ.

इंचना, अक्रि. = खिचना.

इंजील, स्त्री. ಕ್ರೈಸ್ತರ ಧರ್ಮಗ್ರಂಥ, ಕ್ರೈಸ್ತವೇದ, ಬೈಬಲ್.

इंडुरी, स्त्री. **इंडुवा,** पु. ಸಿಂಬಿ, ಸಿವುಡು

इंतक़ाल, पु. ಸ್ಥಾನಪರಿವರ್ತನೆ; ಪರಲೋಕಯಾನ, ಮರಣ; ಪರಭಾರೆ.

इंतख़ाब, पु. ಆಯ್ದುವಿಕೆ, ಆಯ್ಕೆ, ಚುನಾವಣೆ.

इंतज़ाम, पु. ಏರ್ಪಾಡು, ವ್ಯವಸ್ಥೆ.

इंतज़ामकार, पु. ಏರ್ಪಾಡು ಮಾಡುವವ, ವ್ಯವಸ್ಥಾಪಕ.

इंतज़ार, पु. ಇದಿರು ನೋಡುವಿಕೆ, ಇದಿರು ಕಾಯುವುದು, ನಿರೀಕ್ಷಣೆ.

इंतसार, पु. ಹರಡುವಿಕೆ, ಪ್ರಸಾರ.

इंतहा, पु. ಮುಕ್ತಾಯ, ಅಂತ, ಕೊನೆ; ಪರ್ಯವಸಾನ, ಪರಿಣಾಮ, ಎಲ್ಲೆ.

इंद्रधनुष, पु. ಕಾಮನ ಬಿಲ್ಲು, ಮಳೆಬಿಲ್ಲು.

इंद्रवधू, स्त्री. ಬೆಟ್ಟಬೆನಕ, ಒನಿಕೆ ಬಂಡೆ ಹುಳು; ಕಪ್ಪರಚಟ್ಟಿ, ಕಪ್ಪರ ಶುಂಠಿ, ಉಪ್ಪಂಜಿಗ; ಇಂದ್ರಗೋಪ.

इंद्रिय,स्त्री. ವಿಷಯಗಳನ್ನು ಅರಿಯುವ ಶಕ್ತಿ; ಇಂದ್ರಿಯಗಳು.

इंद्रिजुलाब, पु. ಮೂತ್ರವನ್ನು ಹೆಚ್ಚಿಸುವ ಔಷಧ.

इंधन, पु. ಕಟ್ಟಿಗೆ, ಸೌದೆ.

इंसाफ, पु. = इन्साफ़.

इक, वि. ಒಂದು (ಸಮಾಸದಲ್ಲಿ).

इकजोर, क्रिवि. ಒಟ್ಟಾಗಿ, ಒಟ್ಟಿಗೆ.

इकट्ठा, वि. ಒಂದಾದ, ಒಟ್ಟುಗೂಡಿದ, ಶೇಖರಿಸಿದ. इकट्ठा करना = ಒಂದುಗೂಡಿಸು, ಶೇಖರಿಸು, ಕೂಡಹಾಕು.

इकता, स्त्री. ಐಕ್ಯ, ಏಕಮತ್ಯ.

इकताई, स्त्री. ಏಕತ್ವ; ಏಕಾಂತ.

इकतार, वि. ಒಂದೇ ಸಮನಾದ. क्रिवि. ಒಂದೇಸಮನಾಗಿ, ಎಡೆಬಿಡದೆ

इकतारा, पु. ಒಂದೇ ತಂತಿಯ ತಂಬೂರಿ, ಚವಡಿಕೆ, ಏಕನಾದ; ಕೈಯಿಂದ ನೆಯ್ದ ಬಟ್ಟೆ.

इकतालीस, वि. ನಲವತ್ತೊಂದು.

इक़तिदा, स्त्री. ಹಿಂಬಾಲಿಸುವಿಕೆ, ಅನುಸರಣೆ.

इकतीस, वि. ಮೂವತ್ತೊಂದು.

इकदाम, पु. ಒಳಸಂಚು, ಕೂಟ, ಯುಕ್ತಿ; ದುರಾಲೋಚನೆ.

इक़बाल, पु. ಪ್ರತಾಪ; ಅಭ್ಯುದಯ; ಭಾಗ್ಯ; ತಪ್ಪು ಒಪ್ಪಿಕೊಳ್ಳುವಿಕೆ, ಅಂಗೀಕಾರ.

इक़बालमंद, वि. ಭಾಗ್ಯಶಾಲಿ; ಸಂಪನ್ನ.

इक़राम, पु. ಬಹುಮಾನ, ಪುರಸ್ಕಾರ, ಸನ್ಮಾನ.

इक़रार, पु. ಪ್ರತಿಜ್ಞೆ; ಒಪ್ಪಿಕೆ; ಒಡಂಬಡಿಕೆ.

इक़रारनामा, पु. ಪ್ರತಿಜ್ಞಾಪತ್ರ, ಕರಾರುಪತ್ರ, ಒಪ್ಪಂದ, ಕಟ್ಟಡಕ.

इकलई, स्त्री. ಒಂದೇ ಮಡಿಕೆಯ ದುಪ್ಪಟಿ; ಒಂಟಿತನ, ಏಕಾಂತ.

इकलौता, वि. ಏಕಮಾತ್ರ (ಪುತ್ರ).

इकला, वि. ಒಂಟಿ ಎಳೆಯು; ಒಂದೇ ಮಡಿಕೆಯು; ಒಂದು ಪದರಿನ; ಒಂಟಿ.

इकसठ, वि. ಅರವತ್ತೊಂದು.

इकहत्तर, वि. ಎಪ್ಪತ್ತೊಂದು.

इकहरा, वि. ಒಂದೆಳೆಯು; ಒಂದು ಮಡಿಕೆಯು.

इकाई, स्त्री. ಒಂದು, ಏಕ; ಮೂಲ ಮಾನ (ಗಣಿತದಲ್ಲಿ).

इकानवे, वि. ತೊಂಭತ್ತೊಂದು.

इकावन, वि. ಐವತ್ತೊಂದು.

इकासी, वि. ಎಂಭತ್ತೊಂದು.

इकौंज, स्त्री. ಒಂದೇ ಮಗುವಿನ ತಾಯಿ, ಕಾಕವಂಧ್ಯೆ.

इक्का, वि. ಒಂಟಿ; ಅದ್ವಿತೀಯ; ಈಡಿಲ್ಲದ. पु. ಒಂದು ಬಗೆಯ ಕಿವಿ ಮುರು; ಒಂಟಿಗ, ಸಲಗ; ಒಂದು ತರದ ಕುದುರೆ ಗಾಡಿ; ದಾಯ (ಕವಡೆ ಯಾಟದಲ್ಲಿ), ಪೊಗಡೆ, ಎಕ್ಕ. इक्का दुक्का = ಒಬ್ಬಿಬ್ಬರು, ಒಂಟಿಸಂಟಿ.

इक्कीस, वि. ಇಪ್ಪತ್ತೊಂದು.

इक्यानबे, वि. ತೊಂಭತ್ತೊಂದು.

इक्यावन, वि. ಐವತ್ತೊಂದು.

इक्यासी, वि. ಎಂಭತ್ತೊಂದು

इख़राज, पु. ಬಹಿಷ್ಕಾರ; ಹೊರಡಿಸುವಿಕೆ; ವೆಚ್ಚ, ಖರ್ಚು.

इख़लास, पु. ಸ್ನೇಹ, ಗೆಳೆತನ; ಪ್ರೇಮ, ಪ್ರೀತಿ; ಸಂಬಂಧ.

इख़्तियार, पु. ಅಧಿಕಾರ; ಪ್ರಭುತ್ವ; ಶಕ್ತಿ; ವಶ, ಸ್ವಾಧೀನ; ಆರಿಸುವಿಕೆ, ಆಯ್ಕೆ, ಚುನಾವಣೆ. इख़्तियार करना = ಸ್ವೀಕರಿಸು; ಚುನಾಯಿಸು.

इख़्तिलाफ, स्त्री. ಮತಭೇದ; ಜಗಳ.

इच्छा, स्त्री. ಆಶೆ, ಬಯಕೆ, ಇಚ್ಛೆ.

इच्छुक, वि. ಇಚ್ಛಿಸುವವ.

इज़तराब, पु. ಅಶಾಂತಿ; ಕಾತರತೆ.

इज़दिवाज, पु. ಮದುವೆ, ವಿವಾಹ.

इजमाल, पु. ಒಟ್ಟು, ಸಮಷ್ಟಿ; ಹಲವರಿಗೆ ಸಾಮಾನ್ಯವಾದ ಹಕ್ಕು ಬಾಧ್ಯತೆಗಳುಳ್ಳದ್ದು, ಹುದುವು; ಸಾರಾಂಶ.

इजमाली, वि. ಒಟ್ಟಿನ, ಊರೊಟ್ಟಿನ; ಸಮಷ್ಟಿಯು, ಹುದುವಿನ; ಸಂಕ್ಷಿಪ್ತ.

इज़राइल, पु. ಯಮದೂತ, ಯಮಕಿಂಕರ.

इजराय, पु. ಪ್ರಚಾರಕ್ಕೆ ತರುವುದು; ಜಾರಿಗೆ ತರುವುದು, ಅಪ್ಪಣೆಯ ಜಾರಿ.

इजलास, पु. ಸ್ಥಾನ, ಪೀಠ; ನ್ಯಾಯಸ್ಥಾನ.

इज़हार, पु. ಹೊರಬೀಳುವಿಕೆ, ಪ್ರಕಟಣೆ; ಹೇಳಿಕೆ, ವಾಜ್ಮೂಲ; ಸಾಕ್ಷ್ಯ.

इजाज़त, स्त्री. ಆಜ್ಞೆ, ಅಪ್ಪಣೆ; ಒಪ್ಪಿಕೆ, ಸಮ್ಮತಿ.

इज़ाफ़ा, पु. ವೃದ್ಧಿ, ಉನ್ನತಿ; ಮಿಗಿಲು, ಉಳಿತಾಯ.

इजाबत, स्त्री. ಸ್ವೀಕಾರ, ಒಪ್ಪಿಗೆ; ಮಲವಿಸರ್ಜನೆ, ವಿರೇಚನ.

इज़ार, स्त्री. ಷರಾಯಿ; ಪಾಯಜಾಮ, ಇಜಾರು. पु. ಗಲ್ಲ, ಕೆನ್ನೆ, ಮುಖ.

इज़ारबंद, पु. ಲಾಡಿ, ನವಾರು.

इज़ारदार, वि. ಬಾಡಿಗೆದಾರ; ಗುತ್ತಿಗೆದಾರ.

इज़ारा, पु. ಜಹಗೀರ ಅಥವಾ ಗುತ್ತಿಗೆ ಕೊಡುವಿಕೆ; ಗುತ್ತಿಗೆ; ಅಧಿಕಾರ, ವಶ.

इज़ारेदार, वि. ಗುತ್ತಿಗೆದಾರ.

इज़्ज़त, स्त्री. ಮಾನ, ಮರ್ಯಾದೆ, ಗೌರವ. इज्जत उतारना = ಮಾನ ಕೆಡಿಸು.

इज़्ज़तदार, वि. ಗೌರವಸ್ಥ, ಮಾನಸ್ಥ.

इठलाना, अक्रि. ನಿಗರು, ಸೆಟೆ; ಜಂಭ ಮಾಡು, ಬೆಡಗು ತೋರು, ಮೆರೆಯು

इठलाहट, स्त्री. ನಿಗರಾಟ; ಜಂಭ, ಬೆಡಗು; ಮೆರೆತ; ಪರಿಹಾಸ, ಗೇಲಿ.

इतना, वि. ಇಷ್ಟು, ಈಸು. इतने में = ಇಷ್ಟರಲ್ಲಿ.

इतबार, पु. = एतबार.

इतमाम, पु. ಪೂರಣ, ಮುಕ್ತಾಯ; ನೆರವೇರಿಸುವಿಕೆ.

इतमीनान, पु. ನಂಬಿಕೆ, ಭರವಸೆ, ತೃಪ್ತಿ; ನೆಮ್ಮದಿ, ಸಮಾಧಾನ.

इतर, वि. ಬೇರೆಯು, ಇತರ; ಸಾಮಾನ್ಯವಾದ.

इतराना, अक्रि. ನಿಗರು, ಸೆಟೆಗೊಳ್ಳು; ಜಂಭ ಮಾಡು, ವೈಯಾರ ಮಾಡು.

इतराहट, स्त्री. ಗರ್ವ, ಅಹಂಕಾರ.

इतवार, पु. ಭಾನುವಾರ, ರವಿವಾರ.

इताअत, स्त्री. ಆಜ್ಞಾಪಾಲನೆ.

इति, स्त्री. ಸಮಾಪ್ತಿ, ಮುಕ್ತಾಯ.

इतिहास, पु. ಚರಿತ್ರೆ, ಇತಿಹಾಸ.

इतो, वि. ಇಷ್ಟು.

इत्तफ़ाक़, पु. ಒಪ್ಪಿಗೆ, ಸಮ್ಮತಿ; ಹೊಂದಿಕೆ; ಸಂಯೋಗ, ಯದೃಚ್ಛೆ; ಸಂದರ್ಭ. इत्तफ़ाक़ पड़ना = ಸಂದರ್ಭ ಒದಗು.

इत्तफ़ाक़न्, क्रिवि. ಸಂಯೋಗದಿಂದ, ದೈವವಶಾತ್, ಯದೃಚ್ಛೆಯಾಗಿ.

इत्तला, स्त्री. ಅರಿಕೆ, ಸೂಚನೆ, ವರದಿ, "ಇತ್ತಿಲ್ಲೆ".

इत्तलानामा, पु. ಸೂಚನಾಪತ್ರ.

इत्तिहाद, पु. ಐಕ್ಯ; ಏಕೀಕರಣ.

इत्तिहाम, पु. ಗುಮಾನಿ; ಅಪಾದನೆ.

इत्र, पु. ಅತ್ತರು, ಪನ್ನೀರು.

इत्रदान, पु. ಅತ್ತರು ಇಡುವ ಪಾತ್ರೆ, ಪನ್ನೀರದಾನಿ, ಪನ್ನೀರುಗಿಂಡಿ.

इद्‌बार, पु. ದೌರ್ಭಾಗ್ಯ.

इद्‌आ, पु. ದಾವಾ ಮಾಡುವಿಕೆ.

इद्दत, स्त्री. ಪತಿಯು ಮರಣಾನಂತರ ನಾಲ್ಕು ತಿಂಗಳು ಹತ್ತು ದಿನಗಳ ಕಾಲ ಅಥವಾ ವಿವಾಹ ವಿಚ್ಛೇದವಾದನಂತರ ಮೂರು ಸಲ ರಜಸ್ವಲೆಯಾಗುವ ವರೆಗಿನ ಕಾಲ. (ಮುಹಮ್ಮದೀಯ ಸ್ತ್ರೀಯರು ಈ ಅವಧಿಯೊಳಗೆ ಬೇರೆ ಮದುವೆಯಾಗಕೂಡದು.)

इधर, क्रिवि. ಇಲ್ಲಿ, ಇತ್ತ; ಇತ್ತಲಾಗಿ; ಈಕಡೆ. इधर उधर करना या लगाना = ಚಾಡಿ ಹೇಳು, ಕಲಹ ಹುಟ್ಟಿಸು.

इन, सर्व. "ये" ಶಬ್ದಕ್ಕೆ ವಿಭಕ್ತಿ ಸೇರುವಾಗ ಆಗುವ ವಿಕೃತರೂಪ. ಉದಾ: ये + को = इनको.

इनकार, पु. ಅಸ್ವೀಕಾರ, ನಿರಾಕರಣ.

इनसान, पु. ಮನುಷ್ಯ, ಮಾನವ.

इनसानियत, स्त्री. ಮನುಷ್ಯತನ; ಸೌಜನ್ಯ.

इनाद, पु. ವೈರ, ವಿರೋಧ.

इनाम, पु. ಇನಾಮು, ಬಹುಮಾನ, ಪುರಸ್ಕಾರ; ಇನಾಮತಿ ಜಮೀನು.

इनामदार, पु. ಇನಾಮತಿ ಜಮೀನು ಪಡೆದವ, ಇನಾಮುದಾರ.

इनायत, स्त्री. ದಯೆ, ಕೃಪೆ; ಅನುಗ್ರಹ, ಉಪಕಾರ. इनायत करना = ದಯ ಪಾಲಿಸು.

इनारू, पु. ನಿರ್ಗುಂಡಿ, ಲಕ್ಕಿಗಿಡ.

इने गिने, वि. ಕೆಲವು; ಅಲ್ಪ ಸ್ವಲ್ಪ; ಆರಿಸಿ ತೆಗೆದ, ಆಯ್ದ.

इन्क़लाब, पु. ಭಾರಿ ಪರಿವರ್ತನೆ, ಬದಲಾವಣೆ; ವಿಪ್ಲವ; ರಾಜ್ಯವಿಪ್ಲವ, ಕ್ರಾಂತಿ.

इन्शा, स्त्री. ಪ್ರಬಂಧ, ರಚನೆ.

इन्साफ़, पु. ನ್ಯಾಯ; ನಿರ್ಣಯ, ತೀರ್ಪು.

इन्साफ़-पसंद, वि. ನ್ಯಾಯಪ್ರಿಯ, ನ್ಯಾಯಪರ; ಸಮವರ್ತಿ.

इन्हें, सर्व. “ये” ಶಬ್ದದ ದ್ವಿತೀಯಾ ಮತ್ತು ಚತುರ್ಥೀ ರೂಪ.

इन्होंने, सर्व. “ये” ಶಬ್ದದ ने ಪ್ರತ್ಯಯ ಸೇರಿದ ರೂಪ.

इफ़रात, स्त्री. ಹೇರಳ; ಹುಲುಸು; ಸಮೃದ್ಧಿ.

इफ़लास, पु. ದಾರಿದ್ರ್ಯ, ಬಡತನ.

इफ़शा, वि. ಪ್ರಕಟವಾದ, ಪ್ರಕಟ.

इफ़तखार, पु. ಹೆಮ್ಮೆ; ಗರ್ವ; ಗೌರವ

इफ़तार, पु. ಪಾರಣೆ.

इबरत, स्त्री. ಉಪದೇಶ; ಎಚ್ಚರಿಕೆ.

इबरा, पु. ತೊರೆಯುವಿಕೆ, ತ್ಯಾಗ.

इबरानामा, पु. ಖುಲಾಸಪತ್ರ, ಬಿಡುಗಡೆಪತ್ರ, ಪಾರಿಖತ್ತು.

इबरानी, वि. ಯಹೂದಿಯರ. स्त्री. ಯಹೂದಿಯರ ಭಾಷೆ.

इबादत, स्त्री. ಪೂಜೆ, ಪ್ರಾರ್ಥನೆ.

इबादतख़ाना, पु. ಪ್ರಾರ್ಥನಾಲಯ, ಪೂಜಾಗೃಹ.

इबारत, स्त्री. ಬರಹ; ಲೇಖನ; ಶೈಲಿ.

इब्तदा, स्त्री. ಆದಿ, ಆರಂಭ; ಉತ್ಪತ್ತಿ, ಹುಟ್ಟು.

इब्तदाई, वि. ಆದಿಯ, ಮೊದಲಿನ; ಪ್ರಾರಂಭಿಕ, ಪ್ರಾಥಮಿಕ.

इब्न, पु. ಪುತ್ರ, ಮಗ.

इब्नत, स्त्री. ಪುತ್ರಿ, ಮಗಳು.

इमकान, पु. ಶಕ್ತಿ, ಸಾಮರ್ಥ್ಯ.

इमदाद, स्त्री. ಒತ್ತಾಸೆ, ಸಹಾಯ; ದಾನ, ಸಹಾಯ ಧನ.

इमदादी, वि. ಸಹಾಯ ಪಡೆಯುವ.

इमरती, स्त्री. ಜಿಲೇಬಿ, ಜಾಂಗ್ರಿ.

इमरोज़, क्रिवि. ಈ ದಿವಸ, ಇಂದು.

इमला, पु. ಅಭ್ಯಾಸಕ್ಕಾಗಿ ಬರೆಯಿಸುವಿಕೆ; ಹೇಳಿ ಬರೆಯಿಸುವಿಕೆ, ಉಕ್ತಲೇಖನ. इमला बोलना = ಹೇಳಿ ಬರೆಯಿಸು.

इमली, स्त्री. ಹುಣಸೆ ಹಣ್ಣು.

इमसाल, पु. ಈ ವರ್ಷ, ಚಾಲ್ತಿ ವರ್ಷ.

इमाम, पु. ಮುಖಂಡ; ಗುರು;

ಮಹಮ್ಮದೀಯ ಪೂಜಾರಿ ಅಥವಾ ಪುರೋಹಿತ, ಮಹಂತ; ಹಾರದ ಮಧ್ಯಮಣಿ, ನಾಯಕ ಮಣಿ.

इमामदस्ता, पु. = हमामदस्ता.

इमामबाड़ा, पु. ಮೊಹರಂ ಹಬ್ಬದಲ್ಲಿ ಇಮಾಮ್ ಹುಸೇನಿನ ಸಮಾಧಿಯ ಪ್ರತಿರೂಪವನ್ನಿಡುವ ಚಪ್ಪರ.

इमारत, स्त्री. ದೊಡ್ಡ ಕಟ್ಟಡ; ಭವನ, ಉಪ್ಪರಿಗೆ, ಸೌಧ.

इम्तहान, पु. ಪರೀಕ್ಷೆ, ಶೋಧನೆ.

इम्तियाज़, पु. ವಿವೇಚನೆ; ವಿವೇಕ.

इयत्ता, स्त्री. ಮೇರೆ, ಎಲ್ಲೆ.

इरतिक़ा, पु. ಔನ್ನತ್ಯ; ಅಭ್ಯುದಯ, ಏಳಿಗೆ.

इरशाद, पु. ಆಜ್ಞಾಪಿಸುವಿಕೆ; ದಾರಿ ತೋರಿಸುವಿಕೆ, ರವಾನೆ; ಇರಸಾಲು.

इरसाल, पु. ಪತ್ರ ಅಥವಾ ಹಣ ಕಳುಹಿಸುವಿಕೆ.

इरसालनामा, पु ಕಳುಹಿಸಿದ ಹಣ ಅಥವಾ ಸಾಮಾನುಗಳ ಪಟ್ಟಿ.

इराक़ी, वि. ಇರಾಕ್ ದೇಶದ. पु. ಈ ದೇಶದ ಕುದುರೆ.

इरादत, स्त्री. ಉದ್ದೇಶ, ಅಭಿಪ್ರಾಯ.

इरादतन्, क्रिवि. ಉದ್ದೇಶ ಪೂರ್ವಕ

इरादा, पु. ವಿಚಾರ, ಅಭಿಪ್ರಾಯ; ಉದ್ದೇಶ.

इर्द गिर्द, क्रिवि. ಸುತ್ತಲೂ, ಸುತ್ತ ಮುತ್ತ, ನೆರೆಹೊರೆಯಲ್ಲಿ.

इलज़ाम, पु. ತಪ್ಪು, ತಪ್ಪಿತ; ಅಪರಾಧ; ಅಪವಾದನೆ. इलज़ाम लगाना = ತಪ್ಪುಹೊರಿಸು.

इलमास, पु. ವಜ್ರ, ಹೀರ.

इलहाक़, पु. ಕೂಡಿಸುವಿಕೆ, ಮಿಶ್ರಣ.

इलहाद, पु. ವಿಗ್ರಹಾರಾಧನೆ, ಮೂರ್ತಿಪೂಜೆ; ನಾಸ್ತಿಕತ್ವ.

इलहाम, पु. ದೇವವಾಣಿ, ಅಶರೀರ ವಾಣಿ.

इलाक़ा, पु. ಸಂಬಂಧ; ಸಂಪರ್ಕ; ಸಂಬಂಧಪಟ್ಟದ್ದು, ಸೇರಿದ್ದು; ಹಲವು ಗ್ರಾಮಗಳ ಗುಂಪು; ಕಾರ್ಯಕ್ಷೇತ್ರ.

इलाज, पु. ಔಷಧ, ಮದ್ದು; ಚಿಕಿತ್ಸೆ, ಇಲಾಜು; ಪರಿಹಾರ.

इलायची, स्त्री. ಏಲಕ್ಕಿ ಕಾಯಿ.

इलायचीदाना, पु. ಏಲಕ್ಕಿ ಕಾಳು; ಸಕ್ಕರೆ ಪಾಕದಲ್ಲಿ ಮಾಡಿದ ಏಲಕ್ಕಿ ಗಸಗಸೆ ಮುಂತಾದ್ದರ ಒಂದು ಭಕ್ಷ್ಯ.

इलाही, पु. ಈಶ್ವರ, ದೇವ. वि. ಈಶ್ವರೀಯ, ದೈವಿಕ. इलाही गज = ಅಕ್ಬರನ ಕಾಲದಲ್ಲಿ ಪ್ರಚಾರದಲ್ಲಿದ್ದ ೪೦ ಅಂಗುಲದ ಗಜ.

इल्तिजा, स्त्री. ಅರಿಕೆ, ಪ್ರಾರ್ಥನೆ.

इल्तिमास, पु. ಅರಿಕೆ.

इल्म, पु. ಜ್ಞಾನ, ಅರಿವು, ವಿದ್ಯೆ, ಓದು; ಶಾಸ್ತ್ರ; ವಿಜ್ಞಾನ.

इल्मदान, पु. ಜ್ಞಾನವಾನ್; ವಿದ್ಯಾವಂತ, ಪಂಡಿತ; ಶಾಸ್ತ್ರಜ್ಞ.

इल्मी, वि. ವೈಜ್ಞಾನಿಕ; ಶಾಸ್ತ್ರೀಯ; ವಿದ್ಯಾಸಂಬಂಧವಾದ.

इल्लत, स्त्री. ರೋಗ, ಬೇನೆ; ತಾಪತ್ರಯ; ದುರ್ನಡತೆ, ಚಾಳಿ; ದೋಷ,

ಅಪರಾಧ; ಕುಂದು, ಕೊರತೆ; ಕಚ್ಚಡ, ಕೊಳಕು; ಕಾರಣ, ಹೇತು; ನೆಪ.

इल्ला, पु. ಮುಡಿಬಟ್ಟೆ, ಮುಡಿಮೆ. क्रिवि. ಇಲ್ಲವಾದರೆ, ಅನ್ಯಥಾ.

इल्ली, स्त्री. ಮೊಟ್ಟೆಯಿಂದ ಆಗತಾನೇ ಹೊರಬಂದ ಹುಳು, ಕೀಟಕ.

इशरत, स्त्री. ಸುಖ, ಸೌಖ್ಯ; ಭೋಗ.

इशा, पु. ಮುಂಗತ್ತಲು, ರಾತ್ರಿಯ ಪ್ರಾರಂಭ.

इशारा, पु. ಸಂಕೇತ, ಸನ್ನೆ, ಸಂಜ್ಞೆ; ಜಾಡು, ಸುಳಿವು; ಪ್ರೇರೇಪಣೆ, ಚಿತಾವಣೆ.

इश्क़, पु. ಪ್ರೀತಿ, ಪ್ರೇಮ, ಅನುರಾಗ.

इश्क़बाज़, वि. ಪ್ರೇಮಲೀಲೆಯಾಡುವವ, ಪ್ರೇಮವಿಲಾಸಿ.

इश्क़बाज़ी, स्त्री. ಪ್ರೇಮಲೀಲೆಯಾಡುವಿಕೆ; ಪ್ರಣಯವಿಲಾಸ.

इश्तहार, पु. ಪ್ರಕಟಣೆ, ಜಾಹೀರಾತು.

इश्तियालक, स्त्री. ಪ್ರೇರೇಪಣೆ.

इष्ट, वि. ಇಷ್ಟವುಳ್ಳ; ಬಯಸಿದ, ಇಚ್ಛಿಸಿದ. पु. ಇಷ್ಟ, ಇಚ್ಛೆ, ಬಯಕೆ.

इस, सर्व. "यह" ಶಬ್ದದ ವಿಭಕ್ತಿ ಸೇರುವಾಗ ಆಗುವ ವಿಕೃತ ರೂಪ.

इसपंज, पु. ಸಮುದ್ರದ ಪಾಚಿ, ಸ್ಪಂಜು.

इसपात, पु. ಕಬ್ಬಿಣ, ಉಕ್ಕು.

इसरत, स्त्री. ಬಡತನ, ದಾರಿದ್ರ್ಯ.

इसलाम, पु. ಮುಹಮ್ಮದೀಯರ ಮತ, ಇಸ್ಲಾಂ.

इसलामिया, वि. ಮುಹಮ್ಮದೀಯ ಮತದ.

इसलाह, स्त्री. ತಿದ್ದುಪಡೆ, ತಿದ್ದುಪಾಟು, ಸಂಶೋಧನೆ; ಸುಧಾರಣೆ.

इसलिये, क्रिवि. ಅದುದರಿಂದ, ಅದಕಾರಣ.

इसारत, स्त्री. ಸಂಕೇತ, ಸನ್ನೆ.

इसे, सर्व. "यह" ಶಬ್ದದ ದ್ವಿತಿಯಾ ಮತ್ತು ಚತುರ್ಥೀ ರೂಪ.

इस्तमरार, पु. ನಿತ್ಯತ್ವ, ಶಾಶ್ವತತ್ವ.

इस्तमरारी, वि. ಶಾಶ್ವತ, ಕಾಯಂ.

इस्तिंजा, पु. ಅಲ್ಪಶಂಕೆಗೆ ಹೋದ ನಂತರ ಮಣ್ಣಿನ ಹೆಂಟೆಯಿಂದ ಇಂದ್ರಿಯ ಶುದ್ಧಿ ಮಾಡುವಿಕೆ, ಜಲಸ್ಪರ್ಶ

इस्तिक़बाल, पु. ಸ್ವಾಗತ; ಭವಿಷ್ಯ ಕಾಲ (ವ್ಯಾಕರಣ).

इस्तिक़बालिया, वि. ಸ್ವಾಗತಿಸುವ.

इस्तिरी, स्त्री. ಇಸ್ತ್ರೀಪೆಟ್ಟಿಗೆ; ಇಸ್ತ್ರೀ.

इस्तिलाह, स्त्री. ಭಾಷಾರೂಢಿ; ಪರಿಭಾಷೆ; ಪಾರಿಭಾಷಿಕ ಶಬ್ದ.

इस्तेदाद, स्त्री. ಯೋಗ್ಯತೆ; ನೈಪುಣ್ಯ.

इस्तेमाल, पु. ಉಪಯೋಗ, ಬಳಕೆ; ರೂಢಿ; ವಾಡಿಕೆ.

इस्तेमाली, वि. ಉಪಯೋಗಿಸಿದ, ಬಳಸಿದ; ಹಳೆಯ; ವಾಡಿಕೆಯ, ರೂಢಿಯ.

इस्पंद, पु. ನಾಗದಾಳಿ ಸೊಪ್ಪು.

इस्म, पु. ಹೆಸರು, ನಾಮ; ನಾಮಪದ. इस्मे फाइल = ಕರ್ತೃವಾಚಕ. इस्मे शरीफ़ = ನಾಮಧೇಯ.

इह्काम, पु. ಊರ್ಜಿತಪಡಿಸುವಿಕೆ,

ಸ್ಥಿರಪಡಿಸುವಿಕೆ.
इहतिमाम, पु. ಏರ್ಪಾಡು, ಆಡಳಿತ.
इहतियात, स्त्री. ಜಾಗರೂಕತೆ, ಎಚ್ಚರಿಕೆ; ಜೋಪಾನ, ಭದ್ರ.
इहतिशाम, पु. ವೈಭವ, ವಿಜೃಂಭಣೆ.
इहसान, पु. =एहसान.
इहाता, पु. ಬೇಲಿಹಾಕಿರುವ ಪ್ರದೇಶ, ಪಾಳಿ ಒಳಗಿನ ಪ್ರದೇಶ, ಅಂಗಣ; ಮನೆಯ ಮುಂದಿರುವ ಆವರಣ, ಪ್ರಾಂಗಣ, ಅಂಗಳ.

ई

ईंगुर, पु. ಇಂಗಳೀಕ.
ईंट, स्त्री. ಇಟ್ಟಿಗೆ, ಇಟ್ಟಂಗಿ; ಲೋಹಗಳ ಗಟ್ಟಿ, ಪಾಳ; ಇಸ್ಪೀಟಾಟದಲ್ಲಿ ಒಂದು ಬಣ್ಣ, ಡೈಮಂಡ. ईंट चुनना =ಗೋಡೆ ಎಬ್ಬಿಸಲು ಇಟ್ಟಿಗೆಗಳನ್ನು ಜೋಡಿಸು.
ईंडरी, स्त्री. ಸಿಂಬಿ, ಸಿವುಡು.
ईंधन, पु. ಸೌದೆ, ಕಟ್ಟಿಗೆ, ಉರುವಲು.
ईख, स्त्री. ಇಕ್ಷು, ಕಬ್ಬು, ಇಂಗೋಲ್.
ईखना, सक्रि. ನೋಡು, ದೃಷ್ಟಿಸು.
ईज़ा, स्त्री. ವೇದನೆ, ಪೀಡೆ, ಕಷ್ಟ.
ईज़ाद, स्त्री. ಹೊಸ ರಚನೆ, ಆವಿಷ್ಕಾರ.
ईठ, पु. ಇಷ್ಟಮಿತ್ರರು, ಹಿತೈಷಿ.
ईठना, सक्रि. ಇಚ್ಛಿಸು, ಇಷ್ಟಪಡು.
ईठि, स्त्री. ಪ್ರೀತಿ; ಗೆಳೆತನ; ಪ್ರಯತ್ನ.
ईती, स्त्री. ಉಪದ್ರವ, ಬಾಧೆ, ದುಃಖ.
ईद, स्त्री. ಮುಸಲ್ಮಾನರ ಒಂದು ಹಬ್ಬ; ಹಬ್ಬದದಿವಸ, ಶುಭದಿನ; ರಜಾದಿನ.
ईदगाह, पु. ईद ಹಬ್ಬದ ದಿನ ಮುಸಲ್ಮಾನರು ಒಂದಾಗಿ ನಮಾಜು ಮಾಡುವ ಸ್ಥಳ; ಇದಕ್ಕಾಗಿ ಕಟ್ಟಿದ ಎರಡು ಕಡೆಗಳಲ್ಲೂ ಶಿಖರಗಳುಳ್ಳ ಸಣ್ಣ ಗೋಡೆ, ನಮಾಜು ಕಟ್ಟೆ.
ईदबरात, स्त्री. ಹಬ್ಬ, ಹಬ್ಬಹರಿ.
ईची सीची, स्त्री. ಸಿಳ್ಳು ಹಾಕುವ ಶಬ್ದ; ಅಸಹ್ಯವಾಚಕ ಶಬ್ದ, ಅಸಿಸೀ.
ईमान, पु. ಆಸ್ತಿಕ್ಯ, ಧರ್ಮ ಬುದ್ಧಿ; ಸದ್ಭಾವನೆ, ಧರ್ಮ; ಪ್ರಾಮಾಣಿಕತೆ, ನಾಣ್ಯ; ಮಾನ, ಮರ್ಯಾದೆ.
ईमानदार, वि. ಆಸ್ತಿಕ, ಧರ್ಮಪರ; ಸತ್ಯನಿಷ್ಠ, ಸತ್ಯಸಂಧ; ನಂಬಿಗಸ್ತ; ಮಾನಸ್ಥ, ಮಾನವಂತ, ಮಾನಿ.
ईमानदारी, स्त्री. ಆಸ್ತಿಕತೆ; ಆರ್ಜವ, ಪ್ರಾಮಾಣಿಕತೆ; ನಂಬಿಗಸ್ತಿಕೆ.
ईरान, पु. ಪರ್ಷಿಯಾ ದೇಶ.
ईरानी, वि. ಪರ್ಷಿಯಾ ದೇಶದ್ದು; ಪರ್ಷಿಯಾದೇಶದವ.
ईसवी, वि. ಏಸು ಕ್ರಿಸ್ತನಿಗೆ ಸಂಬಂಧಪಟ್ಟ; ಕ್ರಿಸ್ತ (ಶಕ), ಇಸವಿ.
ईसपात, पु. ಉಕ್ಕು, ಕಬ್ಬಿಣ.
ईसा, पु. ಏಸು. ईसा मसीह= ಏಸು ಕ್ರಿಸ್ತ.
ईसाई, पु. ಕ್ರೈಸ್ತ ಮತಸ್ಥರು.
ईहाम, पु. ಸಂದಿಗ್ಧತೆ, ಶ್ಲೇಷ.

उ

उंगल, स्त्री. ಅಂಗುಲ.

उंगली, स्त्री. ಬೆರಳು, ಬೆಟ್ಟು, ಬೊಟ್ಟು. उंगली उठाना = ದೂರು.

उंघाई, **उंघास**, स्त्री. ತೂಕಡಿಕೆ; ಜಂಪು

उंचन, स्त्री. ಮಂಚದ ಹೆಣಿಗೆಯನ್ನು ಬಿಗಿದು ಕಟ್ಟುವ ಹಗ್ಗ, ಎಳ್ತು.

उंचना, सक्रि. ಮಂಚದ ಹೆಣಿಗೆಯನ್ನು ಬಿಗಿದು ಕಟ್ಟು, ಎಳೆದು ಕಟ್ಟು.

उंचाना, सक्रि. ಎತ್ತು, ಏರಿಸು.

उंचाव, **उंचास**, पु. ಎತ್ತರ, ಔನ್ನತ್ಯ.

उंडेलना, सक्रि. ನೀರು ತೋಡು, ಬಗ್ಗಿಸು, ಸುರಿ, ಹೊಯ್ಯು; ಬೋರಲಿಸು; ಬರಿದುಮಾಡು.

उंडेलवाना, सक्रि. "उंडेलना" का प्रे रूप.

उऋण, वि. ಋಣಮುಕ್ತನಾದ.

उकचना, अक्रि. ಅಗಲು; ಕಳಚಿ ಬೀಳು; ಕಡಿದು ಬೀಳು; ಪದರ ಪದರವಾಗಿ ಬಿದ್ದುಹೋಗು ಅಥವಾ ಕಿತ್ತುಹೋಗು.

उकटना, अक्रि. ತಾಳ ಹಾಕು; ಹಳೆಯ ಮಾತುಗಳನ್ನು ತಿರುಗಿ ಎತ್ತು; ತಾನು ಮಾಡಿದ ಉಪಕಾರ ಅಥವಾ ಇತರರ ಅಪರಾಧವನ್ನು ಪದೇ ಪದೇ ಹೇಳಿ ಮನನೋಯಿಸು, ಪರಿಹಾಸಮಾಡು; ಪಿಠ್ಯಾಪಟ್ಟಿ ಅನ್ನು, ಬೈಯು.

उकटा, पु. ತಾನು ಮಾಡಿದ ಉಪಕಾರವನ್ನೂ ಇತರರು ಮಾಡಿದ ಅಪರಾಧವನ್ನೂ ಪದೇ ಪದೇ ಹೇಳುವಿಕೆ.

उकटा पुरान, पु. ಕಂತೆಪುರಾಣ, ಕಗ್ಗ

उकठना, अक्रि. ಒಣಗು, ಬತ್ತಿಹೋಗು

उकठा, वि. ಒಣಗಿದ, ಬತ್ತಿದ, ತಾರಿದ.

उकड़ूं, पु. ಅಂಗೈ ಮತ್ತು ಅಂಗಾಲುಗಳನ್ನು ಪೂರ್ತಿಯಾಗಿ ನೆಲದ ಮೇಲೂರಿ ಕುಕ್ಕುರಗಾಲಾಗಿ ಕೂರುವಿಕೆ.

उकताना, अक्रि. ಆತುರ ಪಡು; ಸೀವರಿಸು, ಬೇಸರಪಡು, ಬೇಜಾರುಪಡು.

उक़दा, पु. ಗಂಟು, ಕಟ್ಟು.

उकलना, अक्रि. ಅಗಲು; ಕಿತ್ತುಹೋಗು; ತೆರೆದುಹೋಗು, ಬಿರಿ.

उकलाई, स्त्री. ವಾಕರಿಕೆ, ವಾಂತಿ.

उकलाना, अक्रि. ವಾಕರಿಸು, ವಾಂತಿ ಮಾಡು.

उकसना, अक्रि. ಏಳು, ಮೂಡು; ಬಿಚ್ಚಿಹೋಗು, ತೆರೆದುಹೋಗು.

उकसाना, सक्रि. ಎತ್ತು; ಉಬ್ಬಿಸು; ಎತ್ತಿಕಟ್ಟು; ಪ್ರೇರೇಪಿಸು, ಚಿತಾವಣೆ ಮಾಡು; ನೀಗಿಸು, ಬಿಡಿಸು; ಚುಡಾಯಿಸು; ದೀಪವನ್ನು ದೊಡ್ಡದು ಮಾಡು; ಉದ್ಧಾರ ಮಾಡು.

उकसाहट, स्त्री. ಉಬ್ಬಿಸುವಿಕೆ, ಚಿತಾವಣೆ.

उक़ाब, पु. ದೊಡ್ಡ ಹದ್ದು, ಗಿಡಗ.

उकासना, सक्रि. = उकलाना.

उकेलना, सक्रि. ಕೀಳು; ಸುಲಿ; ಬಿಚ್ಚು, ಬಿಡಿಸು.

उकौना, पु. ಬಯಕೆ, ದೋಹದ.

उखड़ना, अक्रि. ಕಿತ್ತುಹೋಗು, ಬಿಚ್ಚಿ ಹೋಗು; ಕಳಚಿ ಬೀಳು, ಕಡಿದು ಬೀಳು; ಅಗಲು, (ಮೂಳೆ) ಜಾರು; ತಾಳತಪ್ಪು. उखड़ना पुखड़ना = ಬುಡಸಹಿತ ಕಿತ್ತು ಹೋಗು, ನಿರ್ಮೂಲವಾಗು, ಅಳಿದು ಹೋಗು.

उखड़वाना, सक्रि. "उखाड़ना" का प्रे रूप.

उखली, स्त्री. = ओखली.

उखाड़, पु. ಕೀಳುವಿಕೆ; ಬಿಚ್ಚುವಿಕೆ; ಬಿಡಿಸುವಿಕೆ.

उखाड़ना, सक्रि. ಬಿಚ್ಚು. ಬಿಡಿಸು; ಅಗಿ, ತೋಡು. ಕೀಳು; ಅಗಲಿಸು, ಬೇರ್ಪಡಿಸು; ಪ್ರೇರೇಪಿಸು; ಹಾಳುಮಾಡು उखाड़ फेंकना = ಕಿತ್ತೊಗೆ.

उगना, अक्रि. ಮೊಳೆ, ತಲೆದೋರು; ಉದಯವಾಗು, ಮೂಡು, ಬೆಳೆಯು.

उगमना, पु. ಮೂಡಲು, ಪೂರ್ವ.

उगरना, अक्रि. ತುಳುಕು; ಚೆಲ್ಲು.

उगलना, सक्रि. ಉಗುಳು; ಉಗಿ, ಕಾರು; ಕಕ್ಕು; ಅಪಹರಿಸಿದ ವಸ್ತುವನ್ನು ವಿಧಿಯಿಲ್ಲದೆ ಹಿಂದಕ್ಕೆ ಕೊಡು.

उगलवाना, **उगलाना**, सक्रि. ಕಕ್ಕಿಸು; ಉಗುಳಿಸು.

उगसारना, सक्रि. ವಿವರಿಸು, ವರ್ಣಿಸು

उगाना, सक्रि. ಮೊಳೆಯಿಸು; ಬೆಳೆಸು, ಸಾಗುವಳಿ ಮಾಡು; ಹುಟ್ಟಿಸು.

उगार, **उगाल**, पु. ಉಗುಳು, ಎಂಜಲು

उगालदान, पु. ಉಗುಳುವ ಪಾತ್ರೆ, ಪೀಕದಾನಿ, ಪಡಿಗ, ಉಗುಳುಬುಡ್ಡಿ.

उगाहना, सक्रि. ವಸೂಲು ಮಾಡು, ತೆರಿಗೆ ಅಥವಾ ಚಂದಾ ಎತ್ತು.

उगाही, स्त्री. ವಸೂಲಾತಿ, ವಸೂಲಿ ಕೆಲಸ, ಚಂದಾ ಎತ್ತುವಿಕೆ; ವಸೂಲಿ ಹಣ, ಎತ್ತುವಳಿ; ಚಂದಾ, ವರ್ಗಣಿ.

उघटना, अक्रि. = उकटना.

उघटा, वि. ತಾನು ಮಾಡಿದ ಉಪಕಾರವನ್ನೇ ಹೇಳುತ್ತಿರುವವ. पु. ಉಪಕಾರವನ್ನೇ ಹೇಳುತ್ತಿರುವುದು.

उघड़ना, **उघरना**, सक्रि. ಬಿಚ್ಚಿ ಹೋಗು, ಬಿಟ್ಟು ಹೋಗು; ಕಿತ್ತುಕೊಳ್ಳು; ತೆರೆ; ಬಹಿರಂಗವಾಗು.

उघाड़ना, **उघारना**, सक्रि. ತೆರೆ; ಬಿಚ್ಚು, ಬಿಡಿಸು; ಬಹಿರಂಗಪಡಿಸು, ಹೊರಪಡಿಸು.

उघाड़ा, **उघारा**, वि. ಬಿಚ್ಚಿದ, ತೆರೆದ; ಬತ್ತಲೆಯಾದ.

उघारापन, पु. ನಗ್ನತೆ, ಬತ್ತಲೆ.

उचकन, पु. ಚಕ್ಕೆ, ಒತ್ತುಗಲ್ಲು.

उचकना, अक्रि. ಮುಂಡಿಗಾಲಿನ ಮೇಲೆ ನಿಲ್ಲು, ನೆಗೆಯು; ಕುಣಿ, ಹಾರಾಡು; ಜಾರಿಕೊಳ್ಳು. सक्रि. ಹಾರಿಹಿಡಿ. ಕಸುಕೊಳ್ಳು.

उचका, क्रिवि. ತಟ್ಟನೆ, ತಟಕ್ಕನೆ.

उचकाना, सक्रि. ಎತ್ತು, ಏರಿಸು; ಎಸೆ

उचक्का, पु. ಕಸುಕೊಳ್ಳುವವ, ಅಪಹರಿಸುವವ; ಕಳ್ಳ, ಕದಕ, ತುಡುಗ, ಚೋರ

उचटना, अक्रि. ಬೇರೆಯಾಗು; ಬಿಟ್ಟು ಹೋಗು; ಎದ್ದು ಬರು; ಬೇಜಾರು

ಪಡು, ಬೇಸರಗೊಳ್ಳು; ವಿರಕ್ತನಾಗು.

उचटाना, सक्रि. ಕೀಳು; ಬಿಡಿಸು; ಕೆದರು; ಪ್ರೇರೇಪಿಸು; ಬೇಸರಗೊಳಿಸು.

उचड़ना, अक्रि. ಕೆದರಿ ಹೋಗು, ಅಗಲು; ಓಡಿಹೋಗು.

उचरना, सक्रि. ಉಚ್ಚರಿಸು, ಅನ್ನು.

उचाट, पु. ಬೇಸರ, ಬೇಜಾರು, ಚಿಟ್ಟು.

उचाटना, सक्रि. ಬೇಸರಗೊಳಿಸು.

उचाटी, स्त्री. ಉದಾಸೀನತೆ, ಬೇಸರ.

उचाड़ना, सक्रि. ಕೀಳು; ಕೆದರು; ಬಿಡಿಸು, ಅಗಲಿಸು.

उचाना, सक्रि. ಎತ್ತರಿಸು, ಎತ್ತು.

उचापत, स्त्री. ಉಚಾಪತಿ, ಉದ್ದರಿ, ಉದ್ರಿ.

उचित, वि. ಉಚಿತವಾದ, ತಕ್ಕ.

उच्च, वि. ಮೇಲಾದ, ಶ್ರೇಷ್ಠ.

उच्चता, स्त्री. ಹೆಚ್ಚುಗಾರಿಕೆ, ಮೇಲ್ಮೆ, ಶ್ರೇಷ್ಠತೆ.

उच्चरना, सक्रि. ಉಚ್ಚರಿಸು, ಅನ್ನು.

उच्चाट, पु. ಕೀಳುವಿಕೆ; ಕೆದರುವಿಕೆ; ಬೇಸರ, ಚಿಟ್ಟು, ಜುಗುಪ್ಸೆ.

उच्चारना, सक्रि. ಉಚ್ಚರಿಸು, ಅನ್ನು.

उच्छू, स्त्री. ಗಂಟಲು ಕೆರೆತ ಅಥವಾ ಕಡಿತ, ಕಸರು.

उछंग, पु. ಮಡಿಲು; ಟೊಂಕ, ಸೊಂಟ; ಹೃದಯ; ಆವೇಶ, ಹುರುಪು.

उछकना, अक्रि. ಮದವಿಳಿ, ಚೇತರಿಸು

उछल, स्त्री. ಹಾರಿಕೆ, ಜಿಗಿತ.

उछल-कूद, स्त्री. ಕುಣಿದಾಟ, ಜಿಗಿದಾಟ, ಹಾರಾಟ; ಕಾತರತೆ.

उछलना, अक्रि. ಕುಣಿ, ನೆಗೆ; ಜಿಗಿ, ಕೊಣಕಿಡು; ಚಿಮ್ಮು, ಪುಟಹಾರು; ಹಿಗ್ಗು; ದಾಟು, ಪಾರಾಗು.

उछलवाना, सक्रि. "**उछलना**" का प्रे रूप.

उछलाना, सक्रि. "**उछालना**" का प्रे रूप.

उछांटना, सक्रि. ಬೇಸರಗೊಳಿಸು, ಜುಗುಪ್ಸೆಪಡಿಸು; ಆರಿಸು, ಸಂದಿಸು.

उछाल, स्त्री. ಹಾರಾಟ, ಕುಣಿದಾಟ; ನೆಗೆದಾಟ; ಎಟಕುವಷ್ಟು, ನಿಲುಕು; ವಾಂತಿ, ವಮನ; ತುಂತುರು, ಹನಿ.

उछालना, सक्रि. ಎಸೆ, ಒಗೆದಾಡು, ಬಿಸಾಡು, ಹಾರಿಸು; ಪ್ರಕಟಿಸು.

उछाला, पु. ಉಕ್ಕುವಿಕೆ, ಉತ್ಸಾಹ; ವಾಂತಿ, ವಮನ.

उछाह, पु. ಉತ್ಸಾಹ, ಸಂತೋಷ; ಜೈನರ ರಥಯಾತ್ರೆ; ಇಚ್ಛೆ, ಹಂಬಲ.

उछाही, वि. ಉತ್ಸಾಹಿ, ಸಂತೋಷಿ.

उछीनना, सक्रि. ಕೀಳು, ನಾಶಮಾಡು

उछीर, पु. ಅವಕಾಶ, ಎಡೆ, ಇಂಬು.

उजड़ना, अक्रि. ಹಾಳಾಗು, ನಾಶವಾಗು; ಪಾಳಾಗು, ನೆಲಸಮವಾಗು; ಅಳಿದುಹೋಗು. उजड़ा पुजड़ा = ಹಾಳುಬಿದ್ದ, ಪಾಳು.

उजड़वाना, सक्रि. "**उजाड़ना**" का प्रे रूप.

उजड्ड, वि. ದಡ್ಡ, ವಜ್ರಮೂರ್ಖ, ಶುಂಠ, ಗಗ್ಗ, ಮಂಕು.

उजड्डपन, पु. ದಡ್ಡತನ, ಮೂರ್ಖತನ.

उजबक, पु. ತುರುಕರ ಒಂದು ಜಾತಿ. वि. ದಡ್ಡ, ಹೆಡ್ಡ.

उजरत, स्त्री. ಕೂಲಿ, ಮಜೂರಿ; ಬಾಡಿಗೆ, ನೋರು.

उजरा, वि. = उजला.

उजलत, स्त्री. ಅತುರ, ತ್ವರೆ.

उजलवाना, सक्रि. "उजालना" का प्रे. रूप.

उजला, वि. ಬಿಳಿಯ, ಶುಭ್ರ.

उजलाना, सक्रि. ತೊಳೆಯಿಸು, ಬೆಳಗಿಸು.

उजागर, वि. ಜ್ವಲಿಸುವ, ಹೊಳೆವ, ಮಿಂಚುವ; ಪ್ರಸಿದ್ಧವಾದ.

उजाड़, वि. ಹಾಳುಬಿದ್ದ, ಅಳಿದು ಹೋದ. पु. ಹಾಳುಬಿದ್ದಸ್ಥಳ, ಪಾಳು

उजाड़ना, सक्रि. ಕೆಡಿಸು, ಹಾಳು ಮಾಡು; ನೆಲಸಮ ಮಾಡು.

उजान, पु. ಜಲಪ್ರವಾಹ; ಪ್ರವಾಹದ ಝುರಿ, ಸೆಳತ, ಹೊಯ್ಲು, ಓಘ; ಪ್ರವಾಹಕ್ಕೆದುರಾದ ದಿಕ್ಕು.

उजालना, सक्रि. ಮೆರುಗು ಕೊಡು, ಬೆಳಗು; ಹೊಳೆಯಿಸು, ಬೆಳಗಿಸು.

उजाला, पु. ಪ್ರಕಾಶ, ಬೆಳಕು. वि. ಪ್ರಕಾಶವಾದ.

उजाली, स्त्री. ಬೆಳದಿಂಗಳು

उजास, पु. ಬೆಳಕು, ಹೊಳಪು.

उजियारा, उजियाला, पु. ಬೆಳಕು.

उजेला, पु. ಬೆಳಕು, ಪ್ರಕಾಶ. वि. ಪ್ರಕಾಶವುಳ್ಳ.

उज्जल, क्रिवि. ಪ್ರವಾಹಕ್ಕೆದುರಾಗಿ.

उज्र, पु. ಆಕ್ಷೇಪಣೆ, ಅಡ್ಡಿ; ವ್ಯಾಜ, ನೆಪ; ಕ್ಷಮೆ.

उज्रदारी, स्त्री. ಆಕ್ಷೇಪಣೆ, ಅಡ್ಡ ಮಾತು, ಎದುರು ವಾದ.

उझकना, अक्रि. ಎಗರು, ನೆಗೆ; ಎಟಕಿ ನೋಡು; ಬೆಚ್ಚುಬೀಳು.

उझरना, अक्रि. ಮೇಲಕ್ಕೇಳು, ಏರು.

उझलना, सक्रि. ಹೊಯ್ಯು, ಸುರಿ, ಎರೆ. अक्रि. ಹೊಯ್ಯು, ಹರಿ.

उझांकना, सक्रि. ಇಣಕು, ಇಣಕಿ ನೋಡು, ಹಣಕಿ ನೋಡು.

उझालना, सक्रि. ಹೊಯ್ಯು, ಸುರಿ.

उटंग, वि. ಸುಕ್ಕುಹಿಡಿದ, ಮುರುಟಿದ.

उटंगन, पु. ಒಂದು ಬಗೆಯ ಸೊಪ್ಪು.

उटकना, सक्रि. ಅಂದಾಜು ಕಟ್ಟು, ಊಹಿಸು, ಅಜಮಾಯಿಸು.

उटज, पु. ಗುಡಿಸಲು, ಜೋಪಡಿ.

उट्ठी, स्त्री. ಸೋಲು, ಅಪಜಯ.

उठँगन, पु. ಊರೆ, ಆಧಾರ, ಆನಿಕೆ; ಒರಗುದಿಂಬು.

उठँगना, अक्रि. ಆನು, ಒರಗು; ಮಲಗು.

उठँगाना, सक्रि. ಆನಿಸು, ಒರಗಿಸು; (ಬಾಗಿಲು) ಮುಚ್ಚು.

उठना, अक्रि. ಏಳು, ಏರು; ಮೂಡು, ತಲೆದೋರು; ಮುಗಿದು ಹೋಗು, ಖರ್ಚಾಗು. उठते बैठते = ಅವಕಾಶ ದೊರಕಿದ ಹಾಗೆಲ್ಲ. ಕ್ರಮೇಣ.

उठबैठ, स्त्री. ಕೂತೇಳುವ ವ್ಯಾಯಾಮ, ಊಟುಬೈಸು, ಬೈಸಿಗೆ.

उठल्लू, वि. ತಿರುಕ, ನೆಲೆಯಿಲ್ಲದವ.

उठवाना, सक्रि. "**उठाना**" का प्रे. रूप.

उठाईगीरा, वि. ಕದಿಯುವವ, ಕಳ್ಳ, ಚೋರ, ಬಂದಿಕಾರ, ಕೈಗದಕ.

उठाऊ, वि. ಎತ್ತುವವ, ಏರಿಸುವವ; ದುಂದುಗಾರ, ದಂದರಹಾಳ.

उठान, स्त्री. ಏಳುವಿಕೆ, ಏರು; ಉದಯ, ತೋರಿಕೆ; ಹಾರಾಟ; ಮುಗಿದು ಹೋಗುವಿಕೆ; ವ್ಯೆಕಡ್ಡು; ಆಕೃತಿ, ಎತ್ತರ, ನಿಲುವು. पु. ಅಂಗಳ.

उठाना, सक्रि. ಎಬ್ಬಿಸು, ಏರಿಸು; ಎತ್ತು, ಎತ್ತರಿಸು; ಹೊರಡಿಸು; ಮುಗಿಸು; ನೀಗಿಸು. उठा रखना = (ಪ್ರಯತ್ನ) ಮಾಡದೆ ಬಿಡು. फसल उठाना = ಬೆಳೆ ತೆಗೆ.

उठाव, पु. = **उठान**.

उठौनी, स्त्री. ಎತ್ತುವಿಕೆ, ಎಬ್ಬಿಸುವಿಕೆ; ಎತ್ತುವುದರ ಕೂಲಿ; ಮುಂಗಡ, ತಕಾವಿ; ಉದ್ದರಿ, ಉಚ್ಚ್ಯಾಪತಿ; ಕನ್ಯಾ ಶುಲ್ಕ, ತೆರವು; ಮುಡುಪು; ಒಬ್ಬನ ಮರಣಾನಂತರ ಅವನ ಕುಟುಂಬದವರಿಗೆ ಬಂಧು ಬಳಗದವರು ಹಣ ಕಾಸು ಕೊಡುವ ಸಂಪ್ರದಾಯ

उठौवा, वि. ನೆಲೆಗೆಟ್ಟ, ಪದಚ್ಯುತ; ಎತ್ತುವ.

उडंक्कू, वि. ಹಾರುವ, ಎಗರುವ; ಅಲುಗಾಡುವ.

उड़द, पु. ಉದ್ದು, ಮಾಷ.

उड़न, स्त्री. ಹಾರುವಿಕೆ, ಉಡ್ಡಯನ.

उड़न-खटोला, पु. ಆಕಾಶಬುಟ್ಟಿ; ವಿಮಾನ.

उड़नछू, वि. ಮಾಯವಾದ, ಮಂಗಮಾಯ.

उड़नझांई, स्त्री. ಮೋಸ, ಠಕ್ಕು.

उड़ना, अक्रि. ಹಾರು, ಸಿಡಿ; ಚಿಮ್ಮು; ತೇಲಾಡು; ಎಗರು, ಮಾಯವಾಗು. सक्रि. ದಾಟು, ಹಾರು. उड़ चलना = ವೇಗವಾಗಿ ಓಡು, ವಿಹಾರಿಸು. वि. ಹಾರುವವ.

उड़व, पु. ಒಂದು ರಾಗ.

उड़वाना, सक्रि. "**उड़ाना**" का प्रे. रूप.

उड़स, पु. ತಿಗಣೆ, ತಗಣಿ, ಮತ್ಕುಣ.

उड़सना, अक्रि. ಮೂಟೆಯೆತ್ತು; ನಷ್ಟವಾಗು, ಹಾಳಾಗು.

उड़ाऊ, वि. ಹಾರಾಡುವ, ಹಾರುವ; ದುಂದುಗಾರ, ದಂದರಹಾಳ.

उड़ाक, **उड़ाका**, **उड़ाकू**, वि. ಹಾರುವವ.

उड़ान, स्त्री. ಹಾರುವಿಕೆ; ದೌಡು, ಓಟ.

उड़ाना, सक्रि. ಹಾರಿಸು; ಚಿಮ್ಮಿಸು; ಸಿಡಿಸು; ನೀಗಿಸು, ಹೋಗಲಾಡಿಸು; ಎಗುರಿಸು, ತಿಂದುಹಾಕು; ದುಂದು ಮಾಡು, ತೂರು; ಉಡಾಯಿಸು. उड़ाना पुड़ाना = ದುಂದು ಮಾಡು, ದುರ್ವ್ಯಯ ಮಾಡು.

उड़ासना, अक्रि. ಮೂಟೆ ಎತ್ತು, ಹಾಳಾಗು.

उड़िया, वि. ಒರಿಸ್ಸಾ ಪ್ರಾಂತದ.

उड़ियाना, पु. ಒರಿಸ್ಸ ಪ್ರಾಂತ.

उडुप, पु. ಚಂದ್ರ.

उडुस, पु. ತಿಗಣೆ, ತಗಣೆ.

उडेलना, सक्रि. ಹೊಯ್ಯು, ನೀರೆರೆ; ಸುರಿ, ಚೆಲ್ಲು.

उड़ैनी, स्त्री. ಮಿಂಚುಹುಳು, ದೀಪದ ಹುಳು.

उढ़कना, अक्रि. ತಗಲು, ಢಿಕ್ಕಿಹೊಡೆ; ಎಡವು, ಬೋರಲಿಸು; ಆನು, ಒರಗು

उढ़काना, सक्रि. ತಗಲಿಸು; ಆನಿಸು, ಒರಗಿಸು.

उढ़ना, पु. ಉಡಿಗೆ; ಹೊದಿಕೆ.

उढ़रना, अक्रि. ಉಪಪತಿಯೊಡನೆ ಪಲಾಯನ ಮಾಡು.

उढ़री, स्त्री. ಉಪಪತ್ನಿ, ಇಟ್ಟುಕೊಂಡವಳು; ಭೋಗಿನಿ.

उढ़ाना, सक्रि. ಉಡಿಸು, ಹೊದಿಸು.

उढ़ारना, सक्रि. ಪರಸ್ತ್ರೀಯೊಂದಿಗೆ ಪಲಾಯನ ಮಾಡು.

उढ़ौना, पु. ಹೊದಿಕೆ; ವಸ್ತ್ರ.

उतन, क्रिवि. ಆ ಕಡೆ, ಅತ್ತ.

उतना, वि. ಅಷ್ಟು.

उतरन, पु. ಕಳಚಿ ಬಿಸುಟ ಬಟ್ಟೆಬರೆ; ನಿರ್ಮಾಲ್ಯ. उतरन पुतरन = ಉಟ್ಟು ಕಳಚಿದ ಉಡಿಗೆ ತೊಡಿಗೆ, ಬೀಳುಡೆ.

उतरना, अक्रि. ಇಳಿ; ಕುಗ್ಗು; ಬೀಳು, ಎರಗು; ಮಟ್ಟಾಗು; ಹಳಸು. चित्र अच्छा उतरा है = ಚಿತ್ರ ಚೆನ್ನಾಗಿ ಬಿದ್ದಿದೆ, ಚೆನ್ನಾಗಿ ಬಂದಿದೆ. सक्रि. ದಾಟು, ಪಾರಾಗು.

उतरवाना, सक्रि. "**उतराना**" का प्रे. रूप.

उतराई, स्त्री. ಇಳಿಯುವಿಕೆ, ಇಳಿತ; ಇಳಕಲು, ಇಳಿಜಾರು; ಹೊಳೆ ದಾಟಿಸಲು ಕೊಡುವ ಕೂಲಿ, ಸೋರು, ತರಪಣ್ಯ; ಕೃತಜ್ಞತೆ.

उतराना, अक्रि. ತೇಲು, ಕುದಿ, ಮರಳು; ತೋರ್ಪಡು. सक्रि. "**उतारना**" का प्रे रूप.

उतराव, पु. ಇಳಿಜಾರು, ಇಳಕಲು.

उतला, वि. ಆಳವಿಲ್ಲದ, ಉತ್ತಾನ, ಗಾಧ

उतलाना, अक्रि. ತ್ವರೆ ಮಾಡು, ಆತುರಪಡು.

उतान, वि. ಅಂಗತ್ತಲಾದ, ಚಿತ್ತಾದ.

उतार, पु. ಇಳಿಯುವಿಕೆ, ಇಳಿಗೆ; ಇಳಕಲು, ಇಳಿತ; ಇಳಿವ ಸ್ಥಳ; ಹೊಳೆ ದಾಟುವ ಸ್ಥಳ, ಹಾಯ್ಗಡ; ಸಮುದ್ರದ ಇಳಿತ, ಇಳಿಪಾಟು; ದೃಷ್ಟಿ ಇಳಿಸುವಿಕೆ, ನಿವಾಳಿ; ಪರಿಹಾರ, ವಿಷ ಇಳಿಸುವ ಮದ್ದು, ಪ್ರತ್ಯೌಷಧ, ಕಟ್ಟು ಮದ್ದು, ವಿಷಮುರಕ. चढ़ाव उतार = ಏರಿಳಿತ. उतार घटाव = ಇಳಿಮೆ

उतारन, स्त्री. ಕಳಚಿ ಬಿಸುಟ ಬಟ್ಟೆ ಬರೆ, ಬೀಳುಡೆ; ದೃಷ್ಟಿ ಇಳಿಸುವ ಸಾಮಗ್ರಿ, ನಿವಾಳಿ.

उतारना, सक्रि. ಇಳಿಸು, ಇಳುಕು; ಕಳಚು, ಬಿಸಾಡು; ನಿವಾಳಿಸು; ಇಳಿತೆಗೆ; ಭಟ್ಟಿ ಇಳಿಸು; ಹೊಳೆ ದಾಟಿಸು. चित्र उतारना = ಚಿತ್ರ ಬರೆ.

उतारा, पु. ದಂಡು ಇಳಿಯುವಿಕೆ;

ಪಾಳೆಯು, ಮೊಕ್ಕಾಂ; ಹೊಳೆ ದಾಟು ವಿಕೆ; ನಿವಾಳಿ; ನಿವಾಳಿಯ ಸಾಮುಗ್ರಿ.

उतारू, वि. ತತ್ಪರ, ಉದ್ಯುಕ್ತ. उतारू होना = ಉದ್ಯುತನಾಗು.

उतावल, क्रिवि. ತ್ವರೆಯಾಗಿ, ಶೀಘ್ರ.

उतावला, वि. ಆತುರಪಡುವ, ಅವಸರದ; ದುಡುಕಿನ.

उतावली, स्त्री. ಆತುರ, ತ್ವರೆ; ಅವಸರ, ದುಡುಕು, ತರಾತುರಿ.

उतृण, वि. ಋಣಮುಕ್ತ.

उत्कंठा, स्त्री. ಬಯಕೆ, ಗೀಳು.

उत्कोच, पु. ಲಂಚ, ಕೈಕೂಲಿ.

उत्तर, पु. ಉತ್ತರ, ಜವಾಬು, ಪಡಿ ನುಡಿ; ಉತ್ತರ ದಿಕ್ಕು, ಬಡಗಲು.

उत्तरदाता, पु. ಜವಾಬ್ದಾರ, ಹೊಣೆ ಗಾರ, ಉತ್ತರವಾದಿ.

उत्तरदायित्व, पु. ಉತ್ತರವಾದಿತ್ವ. ಜವಾಬ್ದಾರಿ, ಹೊಣೆಗಾರಿಕೆ.

उत्तरदायी, वि. ಜವಾಬ್ದಾರ, ಹೊಣೆ ಗಾರ, ಉತ್ತರವಾದಿ.

उत्तरीय, पु. ಉತ್ತರೀಯ, ಅಂಗವಸ್ತ್ರ. वि. ಮೇಲಿನ, ಉತ್ತರ ದಿಕ್ಕಿನ, ಬಡಗಣ

उत्ता, वि. ಅಷ್ಟು.

उत्तान, वि. = उतान.

उत्तीर्ण, वि. ಪಾರಾದ, ತೇರ್ಗಡೆಯಾದ

उत्तू, पु. ಜರತಾರಿ ಬಟ್ಟೆಯ ಮಡಿಕೆ ಅಥವಾ ಪದರು. उत्तू करना = ಹಣ್ಣುಗಾಯಿ ನೀರುಗಾಯಿ ಮಾಡು, ಚೆನ್ನಾಗಿ ಹೊಡೆ.

उत्तूकश, पु. ಮಡಿಕೆ ಅಥವಾ ಪದರು ಮಾಡುವ ಯಂತ್ರ.

उत्तेजना, स्त्री. ಪ್ರೇರೇಪಣೆ, ಚಿತಾವಣೆ; ಹುರಿದುಂಬಿಸುವಿಕೆ, ಉದ್ದೀಪನ.

उत्तेजित, वि. ಹುರಿದುಂಬಿದ.

उत्पात, पु. ವಿಪತ್ತು, ಅನಾಹುತ; ಹಾವಳಿ; ಉಪದ್ರವ, ಉಪಟಳ.

उत्सर्ग, पु. ತ್ಯಾಗ, ಆತ್ಮಾರ್ಪಣೆ; ಬಲಿ.

उथलना, अक्रि. ಅಲ್ಲಾಡು, ಚಲಿಸು, ಅಲುಗಾಡು; ಕವುಚಿ ಬೀಳು, ಹೊರಳು, ಆಳ ಕಡಿಮೆಯಾಗು. सक्रि. ಹೊರ ಳಿಸು, ಮಗುಚು; ಬೋರಲಿಸು, ಡಬ್ಬ ಹಾಕು.

उथल पुथल, स्त्री. ತಲೆಕೆಳಗು, ತಿರುವು ಮುರುವು, ತಾರುಮಾರು; ವಿಪ್ಲವ. वि. ತಲೆಕೆಳಗಾದ, ಬುಡ ಮೇಲಾದ.

उथला, वि. ಆಳವಿಲ್ಲದ, ಉತ್ತಾನ, ಗಾಧ.

उदकना, अक्रि. ನೆಗೆ, ಕುಣಿದಾಡು.

उदगारना, अक्रि. ಹೊರಗೆಡವು; ಪ್ರೇರೇಪಿಸು.

उदघाटना, सक्रि. ತೆರೆ, ಉದ್ಘಾಟನೆ ಮಾಡು.

उदड़ा-गुदड़ा, पु. ಹರಕು ಬಟ್ಟೆ, ಚಿಂದಿ

उदबासना, सक्रि. ಕದಡಿಸು, ಕದಲಿ ಸು; ಅಟ್ಟು, ತರುಬು; ಪಾಳ್ಗೆಡಿಸು.

उदय, पु. ಮೂಡುವಿಕೆ, ಉದಯ.

उदर, पु. ಹೊಟ್ಟೆ, ಉದರ, ಜಠರ.

उदवना, अक्रि. ಬೆಳೆಯು, ಮೊಳೆ.

उदार, वि. ಉದಾರಿ, ಧಾರಾಳಿ, ಕೊಡಗೈ.

उदारता, स्त्री. ಧಾರಾಳ; ಔದಾರ್ಯ.

उदारना, सक्रि. ಸೀಳು, ಮುರಿ.

उदास, वि. ಉದಾಸೀನನಾದ; ಖಿನ್ನನಾದ, ವ್ಯಸನಪಡುವ.

उदासी, पु. ವಿರಕ್ತ. स्त्री. ಕ್ಲೇಶ, ವ್ಯಸನ, ಜೋಲು ಮುಖ.

उदाहरण, पु. ಉದಾಹರಣೆ, ಮಾದರಿ.

उदू, पु. ಶತ್ರು, ವಿರೋಧಿ.

उदूल, पु ಉಲ್ಲಂಘನೆ. उदूल हुक्मी = ಅಪ್ಪಣೆಯನ್ನು ಮೀರುವಿಕೆ, ಆಜ್ಞೋಲ್ಲಂಘನೆ.

उद्दोत, पु. ಪ್ರಕಾಶ, ಬೆಳಕು.

उद्गम, पु. ಉದಯ; ಉತ್ಪತ್ತಿ, ಹುಟ್ಟು.

उद्गार, पु. ಉಕ್ಕು, ಕುದಿ; ವಾಕರಿಕೆ; ಎಂಜಲು; ತೇಗು; ಹೇರಳ; ಕಟು ವಚನ; ಉದ್ವೇಗ.

उद्घाटन, पु. ತೆರೆಯುವಿಕೆ, ಉದ್ಘಾಟನೆ.

उद्दंड, वि. ಉದ್ಧಟ, ಉದ್ದುರುಟ.

उद्दंडता, स्त्री. ಉದ್ದುರುಟುತನ, ಉದ್ಧಟತನ.

उद्देश्य, पु. ಗುರಿ, ಉದ್ದೇಶ.

उद्धत, वि. ಮೂರ್ಖ, ಒರಟ.

उद्धरना, सक्रि. ಉದ್ಧಾರ ಮಾಡು. अक्रि. ಪಾರಾಗು, ಉದ್ಧಾರವಾಗು.

उद्धार, पु. ಬಿಡುಗಡೆ; ಉದ್ಧಾರ; ಮುಕ್ತಿ.

उद्धारना, सक्रि. ಉದ್ಧಾರ ಮಾಡು, ಕಾಪಾಡು, ರಕ್ಷಿಸು.

उद्धृत, वि. ಎತ್ತಿದ, ತೆಗೆದ. उद्धृत करना = ಉದ್ಧರಿಸು, ಎತ್ತಿ ಬರೆ.

उद्यत, वि. ಸಿದ್ಧನಾದ, ತಯಾರಾದ, ಸನ್ನದ್ಧ.

उद्यम, पु. ಪ್ರಯತ್ನ, ಕೆಲಸ, ಕಾರ್ಯ.

उद्यमी, वि. ಪರಿಶ್ರಮಪಡುವ, ದುಡಿಯುವ, ಉದ್ಯೋಗಶೀಲ.

उद्योग, पु. ಪ್ರಯತ್ನ; ಕೈಗಾರಿಕೆ.

उद्योगी, वि. ಪ್ರಯತ್ನಶೀಲ, ಪರಿಶ್ರಮಿ.

उधड़ना, अक्रि. ತೆರೆದುಕೊಳ್ಳು; ಬಿಚ್ಚಿಹೋಗು, ಕಳಚಿಕೊಳ್ಳು, ಬಿದ್ದುಹೋಗು.

उधर, क्रिवि ಅತ್ತ, ಆಕಡೆ; ಅತ್ತಲಾಗಿ.

उधरना, सक्रि. ಉದ್ಧಾರ ಮಾಡು, ಪಾರು ಮಾಡು. अक्रि. ಬಿಡುಗಡೆ ಹೊಂದು; ಬಿಚ್ಚಿ ಹೋಗು, ಬಿಚ್ಚು; ಕಿತ್ತುಹೋಗು

उधराना, सक्रि. ಚದರಿ ಹೋಗು, ಚೆಲ್ಲು; ದೊಂಬಿ ಮಾಡು, ಧಾಂದಲೆ ಮಾಡು.

उधार, पु. ಸಾಲ, ಕಡ; ಎರವಲು, ಎರವು; ಉದ್ಧಾರ.

उधारना, सक्रि. ಉದ್ಧಾರ ಮಾಡು.

उधेड़, पु. ಸಿಪ್ಪೆ ಸುಲಿಯುವಿಕೆ.

उधेड़ना, सक्रि. ಸಿಪ್ಪೆ ತೆಗೆ, ಸುಲಿ, ಎಡೆ; ಬಿಡಿಸು, ಬಿಚ್ಚು; ಕೆದರು.

उधेड़बुन, स्त्री. ಊಹಾಪೋಹ; ಆಲೋಚನೆ, ಚಿಂತೆ.

उन, सर्व. "वे" ಶಬ್ದಕ್ಕೆ ವಿಭಕ್ತಿ ಸೇರುವಾಗ ಆಗುವ ರೂಪ.

उनक्का, पु. ಒಂದು ಕಲ್ಪಿತ ಪಕ್ಷಿ.
उनचास, वि. ನಲವತ್ತೊಂಭತ್ತು.
उनतालीस, वि. ಮೂವತ್ತೊಂಭತ್ತು.
उनतीस, वि. ಇಪ್ಪತ್ತೊಂಭತ್ತು.
उनमाथना, सक्रि. ಕಡೆ, ಮಥಿಸು.
उनमाथी, वि. ಕಡೆಯುವವ.
उनमान, पु. ಅನುಮಾನ, ಊಹೆ.
उनमानना, सक्रि. ಅನುಮಾನಿಸು, ಊಹಿಸು.
उनमूलना, सक्रि. ಕಿತ್ತೊಗೆ.
उनमेखना, सक्रि. ಕಣ್ದೆರೆ; ಅರಳು.
उनरना, अक्रि. ಪುಟಹಾರು, ನೆಗೆ.
उनवना, अक्रि. ಬಗ್ಗು, ಎರಗು; ಮುತ್ತು, ಕವಿ.
उनवान, पु. ಅಭಿಧಾನ, ಶಿರೋನಾಮೆ, ಶಿರೋಲೇಖ.
उनसठ, वि. ಐವತ್ತೊಂಭತ್ತು,
उनसुर, पु. ಪಂಚಭೂತ.
उनहत्तर, वि. ಅರವತ್ತೊಂಭತ್ತು.
उनहार, वि. ಸಮಾನ, ಸದೃಶ.
उनाना, सक्रि. ಬಗ್ಗಿಸು, ಒಲಿಸು; ಹತ್ತಿಸು. अक्रि. ಬಗ್ಗು, ವಿಧೇಯನಾಗು.
उनींदा, वि. ತೂಕಡಿಸುವ, ನಿದ್ರಾಲು.
उन्नाब, पु. ಎಲಚೀಹಣ್ಣಿನ ಒಂದು ಜಾತಿ, ಒಂದು ಬಗೆ ಬೋರೆಹಣ್ಣು.
उन्नाबी, वि. ಎಲಚೀಹಣ್ಣಿನ ಬಣ್ಣದ, ಕಂದುಬಣ್ಣದ.
उन्नासी, वि. ಎಪ್ಪತ್ತೊಂಭತ್ತು.
उन्नीस, वि. ಹತ್ತೊಂಭತ್ತು. उन्नीस बिस्वे = ಮುಕ್ಕಾಲು ಮೂರುವೀಸ ಪಾಲು.
उन्मत्त, वि. ಹುಚ್ಚ; ಮರುಳ.
उन्मत्तता, स्त्री. ಹುಚ್ಚು; ಮರುಳು.
उन्माद, पु. ಮರುಳು, ಹುಚ್ಚು.
उपकरना, सक्रि. ಉಪಕಾರ ಮಾಡು.
उपकार, पु. ಉಪಕಾರ, ಹಿತ; ಲಾಭ, ಪ್ರಯೋಜನ.
उपज, स्त्री. ಉತ್ಪತ್ತಿ, ಹುಟ್ಟುವಳಿ; ಫಸಲು; ಕಲ್ಪನೆ; ಕಟ್ಟುಕತೆ.
उपजना, अक्रि. ಉತ್ಪತ್ತಿಯಾಗು, ಹುಟ್ಟು, ಮೊಳೆ; ಬೆಳೆಯು.
उपजाऊ, वि. ಫಲವತ್ತಾದ, ಸಾರವತ್ತಾದ.
उपजाना, सक्रि. ಬೆಳೆಯಿಸು; ಉತ್ಪತ್ತಿ ಮಾಡು, ಹುಟ್ಟಿಸು.
उपटन, पु. ತೈಲ; ಬಾಸುಂಡೆ, ಗಾದರಿ, ಬಾಸಾಳ, ದಡಿಕೆ.
उपटना, अक्रि. ಗಾದರಿ ಅಥವಾ ಬಾಸುಂಡೆ ಏಳು; ಕಿತ್ತು ಹೋಗು.
उपटना, सक्रि. ಕೀಳು, ಕಳಚು; ತೈಲ ಸವರು.
उपटारना, सक्रि. ಕಳಚು, ಅಗಲಿಸು.
उपड़ना, अक्रि. ಸುಲಿದು ಹೋಗು, ಕಿತ್ತು ಹೋಗು; ಅಂಕಿತವಾಗು, ಕಲೆಯಾಗು.
उपत्यका, स्त्री. ತಪ್ಪಲು, ಕಿಬ್ಬಿ.
उपदेश, पु. ಉಪದೇಶ, ಬುದ್ಧಿವಾದ.
उपदेशक, पु. ಉಪದೇಶ ಮಾಡುವವ; ಆರ್ಯ ಸಮಾಜ ಧರ್ಮೋಪದೇಶಕ,

ಆರ್ಯಧರ್ಮ ಪ್ರಚಾರಕ.

उपदेसना, सक्रि. ಉಪದೇಶಿಸು.

उपद्रव, पु. ತೊಂದರೆ, ಉಪಟಳ; ದೊಂಬಿ, ಧಾಂದಲೆ.

उपद्रवी, वि. ತೊಂದರೆ ಪಡಿಸುವ, ಪೀಡಿಸುವ; ದೊಂಬಿ ಮಾಡುವವ, ದಂಗೆಖೋರ.

उपनिवेश, पु. ಪರದೇಶಕ್ಕೆ ಹೋಗಿ ಒಕ್ಕಲು ಮಾಡುವುದು, ವಲಸೆ ಹೋಗಿ ನೆಲಸುವುದು; ವಲಸೆ ಮಾಡಿದ ದೇಶ, ವಸಾಹತು.

उपन्यास, पु. ಕಟ್ಟುಕತೆ, ಕಾದಂಬರಿ.

उपन्यासकार, पु. ಕಾದಂಬರಿಕಾರ.

उपमंत्री, पु. ಸಹಾಯ ಕಾರ್ಯದರ್ಶಿ.

उपमा, स्त्री. ಹೋಲಿಕೆ, ತುಲನೆ; ಉಪಮೆ.

उपयुक्त, वि. ತಕ್ಕ, ಉಚಿತ; ಅರ್ಹ.

उपयोग, पु. ಉಪಯೋಗ; ಲಾಭ; ಪ್ರಯೋಜನ, ಫಲ.

उपयोगिता, स्त्री. ಉಪಯೋಗಕರವಾಗಿರುವಿಕೆ.

उपयोगी, वि. ಉಪಯೋಗವುಳ್ಳ; ಪ್ರಯೋಜನಕರವಾದ.

उपरना, पु. ದುಪ್ಪಟಿ, ಹೊದಿಕೆ; ಉತ್ತರೀಯ, ಮೇಲ್ಪಂಚೆ.

उपरफट, उपरफट्टू, वि. ಹೆಚ್ಚಿನ, ಅತ್ಯಧಿಕ; ಗೊತ್ತು ಗುರಿಯಿಲ್ಲದ.

उपरला, वि. ಮೇಲಿನ, ಹೊರಗಿನ. पु. ಮೇಲ್ಮೈ, ಹೊರಮೈ.

उपरा-चढ़ी, स्त्री. ಪೋಟಾ ಪೋಟಿ, ಮೇಲಾಟ, ಸ್ಪರ್ಧೆ.

उपराज, पु. ರಾಜ ಪ್ರತಿನಿಧಿ.

उपराना, अक्रि. ಮೇಲಕ್ಕೆ ಬರು; ಹೊರಬೀಳು, ಬಯಲಾಗು. सक्रि. ಎತ್ತು, ಎಬ್ಬಿಸು.

उपराला, पु. ನೆರವು, ಒತ್ತಾಸೆ.

उपराहना, अक्रि. ಹೊಗಳು, ಪ್ರಶಂಸಿಸು, ಸ್ತುತಿಸು.

उपरी-उपरा, पु. ಪೋಟಾ ಪೋಟಿ, ಮೇಲಾಟ, ಸ್ಪರ್ಧೆ.

उपरैना, पु. ಹೊದೆವ ವಸ್ತ್ರ, ದುಪ್ಪಟಿ.

उपरैनी, स्त्री. ಮೇಲುಸೆರಗು, ಮೇಲು ಹೊದಿಕೆ.

उपरौटा, पु. ಮೇಲಿನ ಪದರ.

उपलब्धी, स्त्री. ಅರ್ಜನೆ, ಗಳಿಕೆ.

उपला, पु. **उपली**, स्त्री. ಬೆರಣಿ, ಕುಳ್ಳು.

उपल्ला, पु. **उपल्ली**, स्त्री. ಮೇಲಿನ ಪದರ, ಹೊರಮೈ.

उपस, स्त्री. ದುರ್ಗಂಧ, ನಾತ.

उपसना, अक्रि. ನಾರು; ಕೊಳೆಯು; ಮುಗ್ಗು ಹಿಡಿಸು.

उपस्थित, वि. ಹತ್ತಿರವಿರುವ; ಹಾಜರಿರುವ; ಒದಗಿದ. उपस्थित होना = ಒದಗು.

उपस्थिति, स्त्री. ಹಾಜರು.

उपहार, पु. ಬಹುಮಾನ. ಸಂಭಾವನೆ, ಪಾರಿತೋಷಿಕ; ಉಡುಗೊರೆ, ಕಾಣಿಕೆ, ಉಪಾಯನ.

उपाधि, स्त्री. ಸಂಕಟ, ಬಾಧೆ, ಉಪದ್ರವ;

ಬಿರುದು, ಪಟ್ಟ.

उपाध्याय, पु. ಅಧ್ಯಾಪಕ; ಉಪಾಧ್ಯಾಯ; ಶಾಸ್ತ್ರಿ, ಉಪಾಧ್ಯ.

उपाना, सक्रि. ಹುಟ್ಟಿಸು; ಒದಗಿಸು; ಕಲ್ಪನೆಮಾಡು, ಕಲ್ಪಿಸು.

उपाय, पु. ಉಪಾಯ, ಯುಕ್ತಿ.

उपायन, पु. ಕಾಣಿಕೆ, ಉಡುಗೊರೆ.

उपालंभ, पु. ದೂರು, ನಿಂದೆ.

उपासना, पु. ಆರಾಧನೆ, ಪೂಜೆ. सक्रि. ಪೂಜಿಸು, ಭಜಿಸು. अक्रि. ಉಪವಾಸ ಮಾಡು.

उपेक्षा, स्त्री. ಉದಾಸೀನ, ತಾತ್ಸಾರ.

उपैना, वि. ಬೆತ್ತಲೆ, ತೆರೆದ. अक्रि. ಮಾಯವಾಗು, ಹಾರಿ ಹೋಗು.

उफ़, अव्य. ಅಯ್ಯೋ, ಉಹ್!

उफ़क़, पु. ಕ್ಷಿತಿಜ, ದಿಗಂತ, ಹರಿಜ.

उफ़ड़ना, अक्रि. ಕುದಿ, ಮರಳು.

उफ़तादा, पु. ಪಡಬಿದ್ದ ಭೂಮಿ, ಬೀಳುಜಮೀನು, ಬಂಜರು, ಹಡಿಲು.

उफनना, उफनाना, अक्रि. ಕುದಿ, ಕಾಯು, ಮರಳು; ಉಕ್ಕು.

उफ़ान, पु. ಕುದಿ, ಉಕ್ಕು.

उबकना, अक्रि. ವಾಕರಿಸು.

उबका, पु. ಸರಗುಣಿಕೆ, ಉರುಲು.

उबकाई, स्त्री. ವಾಕರಿಕೆ.

उबट, वि. ಕರಡು, ಮುರುಡು, ಒರಟು.

उबटन, पु. ತೈಲ, ಲೇಪ, ಅಂಗರಾಗ.

उबटना, अक्रि. ಎಣ್ಣೆ ಒತ್ತು, ತೈಲ ಸವರು, ಲೇಪ ಹಚ್ಚು.

उबना, अक्रि. ಅಂಕುರಿಸು, ಮೊಳೆ.

उबरना, अक्रि. ಮಿಗು, ಉಳಿ.

उबरा, पु. ಹೆಚ್ಚು, ಮಿಗಿಲು.

उबलना, अक्रि. ಕುದಿ, ಮರಳು, ಉಕ್ಕು.

उबलाना, सक्रि. ಕುದಿಸು, ಮರಳಿಸು.

उबसन, पु. = **उसकन.**

उबसना, अक्रि. ಹಳಸು, ಕೊಳೆ.

उबहना, सक्रि. ಒರೆಯಿಂದ ಎಳೆ, ಉಚ್ಚು; ನೀರುತೋಡು, ಹಾಯಿಸು; ಉಳು. वि. ಬರಿಕಾಲಿನ, ಬರಿಗಾಲಾದ.

उबांत, स्त्री. ವಾಂತಿ, ವಾಕರಿಕೆ.

उबार, पु. ಬಿಡುಗಡೆ, ಉದ್ಧಾರ; ಪಲ್ಲಕ್ಕಿ ಮುಚ್ಚುವ ವಸ್ತ್ರ, ಪರದೆ.

उबारना, सक्रि. ಬಿಡುಗಡೆ ಮಾಡು, ಕಾಪಾಡು; ಉದ್ಧಾರಮಾಡು.

उबाल, पु. ಉಕ್ಕು, ಕುದಿ; ಉದ್ವೇಗ, ಆವೇಶ.

उबालना, सक्रि. ಕುದಿಸು, ಮರಳಿಸು, ಕುಚ್ಚು, ಉಕ್ಕಿಸು.

उबासी, स्त्री. ಆಕಳಿಕೆ.

उबाहना, सक्रि. = **उबहना.**

उबीटना, अक्रि. ತಿಂದು ಬೇಸರವಾಗು, ಕಟರೆಯಾಗು.

उबूर, वि. ದಾಟಿದ, ಪಾರಾದ. उबूर करना = ದಾಟಿಸು, ಪಾರಾಗಿಸು.

उबेहना, सक्रि. ಕೂಡಿಸು, ಪೋಣಿಸು, ಕೋದು, ಹೆಣೆ.

उभड़ना, उभरना, अक्रि. ಉಬ್ಬು, ಊದು; ಉಕ್ಕು, ಏಳು; ಏಳಿಗೆಗೆ ಬರು; ಹರಿಯು, ಹೊಮ್ಮು; ಹಿಗ್ಗು;

ಬೆದೆಗೊಳ್ಳು; ಅಗಲು, ಕಳಚಿಬೀಳು.

उभराई, स्त्री. ಉಬ್ಬರ; ಏರು; ಉಬ್ಬು

उभराना, सक्रि. ಹೊಮ್ಮಿಸು; ಉಬ್ಬಿಸು.

उभरौंहा, वि. ಉಬ್ಬಿದ; ವೃದ್ಧಿಪಡೆದ

उभाड़, उभार, पु. ಉಬ್ಬು, ಉಬ್ಬರ; ಬಾವು, ವಾಳ, ಬಗುಡು; ವೃದ್ಧಿ.

उभाड़ना, उभारना, सक्रि. ಎಬ್ಬಿಸು; ಉಬ್ಬಿಸು; ಪ್ರೇರೇಪಿಸು, ಹುರಿದುಂಬಿಸು; ಅಪಹರಿಸು.

उभिटना, अक्रि. ಹಿಂಜರಿ, ಹಿಂತೆಗೆ.

उमंग, स्त्री. ಆನಂದ, ಉಲ್ಲಾಸ; ಜೋಶು, ಮೋಜು; ಉಕ್ಕು, ಹಿಗ್ಗು; ಹುರುಪು; ಹೇರಳ; ಸಂಪೂರ್ಣ.

उमक़, पु. ಆಳ, ಗಹನ.

उमगना, अक्रि. ಉಕ್ಕು; ಉಬ್ಬು, ಹಿಗ್ಗು; ಆನಂದಿಸು, ಮಜಾಮಾಡು, ಜೋಶು ಮಾಡು.

उमचना, अक्रि. ತುಳಿ, ಮೆಟ್ಟು; ಎಚ್ಚರಗೊಳ್ಳು.

उमड़, स्त्री. ಪ್ರವಾಹ, ಪೂರ, ನೆರೆ; ಮುತ್ತಿಗೆ, ಕವಿಯುವಿಕೆ.

उमड़ना, अक्रि. ಉಕ್ಕು; ತುಳುಕು, ಹೊಮ್ಮು, ಸೂಸು, ಹೊಂಗು; ಕವಿದುಕೊಳ್ಳು; ಹುರಿದುಂಬು, ಹುರುಪಿನಿಂದೇಳು. उमडना घुमडना = ಮೋಡಕವಿ, ಮೋಡ ಕಟ್ಟು.

उमड़ाना, सक्रि. "**उमड़ना**" का प्रे. रूप.

उमदा, वि. = **उम्दा.**

उमर, स्त्री ವಯಸ್ಸು; ಆಯುಸ್ಸು, ಜೀವಮಾನ.

उमरा, पु. ರಾಜ ಮನೆತನದವರು; ದೊರೆಗಳು, ಪ್ರಭುಗಳು; ದೊಡ್ಡ ಮನುಷ್ಯರು.

उमस, स्त्री. ಧಗೆ, ಸೆಕೆ, ಝಳ.

उमाकना, सक्रि. ಕಿತ್ತೊಗೆ.

उमाचना, सक्रि. ಕೀಳು, ತೆಗೆ.

उमाह, पु. ಉತ್ಸಾಹ, ಆವೇಶ.

उमाहना, अक्रि. ಉಕ್ಕು, ಸೂಸು, ಹೊಮ್ಮು. सक्रि. ತುಳುಕಿಸು, ಹೊಮ್ಮಿಸು.

उमाहल, वि. ಉತ್ಸಾಹವುಳ್ಳ.

उमूम, वि. ಸಾಧಾರಣ, ಸಾಮಾನ್ಯ.

उमूर, उमूरात, पु. ಕೆಲಸ ಕಾರ್ಯಗಳು, ನಡವಳಿಕೆ, ಕಾರ್ಯಕಲಾಪ.

उमेठ, स्त्री. ಮುರವು, ನುಲಿ.

उमेठन, स्त्री. ಡೊಂಕು, ತಿರುಚು.

उमेठना, सक्रि. ತಿರುಗಿಸು; ಹೊಸೆ, ನುಲಿ, ತಿರುಚು. कान उमेठना = ಕಿವಿ ಹಿಂಡು.

उमेठवां, वि. ತಿರುಚಿದ, ಕುಟಿಲವಾದ, ಡೊಂಕಾದ.

उमेद, स्त्री. = **उम्मेद.**

उमेलना, सक्रि. ತೆರೆ, ಪ್ರಕಟಿಸು.

उम्दगी, स्त्री. ಒಳ್ಳೇತನ, ಉತ್ತಮತೆ; ಅಂದ, ಮೇಲು.

उम्दा, वि. ಒಳ್ಳೆಯ, ಉತ್ತಮ; ಪ್ರಶಸ್ತ, ಹರ್ಷ, ಮೇಲುತರದ.

उम्मत, स्त्री. ಸಮುದಾಯ; ಶಿಷ್ಯ

ವರ್ಗ, ಮಂಡಲಿ; ಅನುಯಾಯಿಗಳು; ಮಕ್ಕಳು ಮರಿ.

उम्मीद, उम्मेद, ಸ್ತ್ರೀ. ಆಶೆ, ಅಪೇಕ್ಷೆ; ನೆಚ್ಚಿಕೆ, ಭರವಸೆ.

उम्मेदवार, पु. ಆಶೆಯುಳ್ಳವ; ಭರವಸೆಯುಳ್ಳವ; ಕೆಲಸ ಕಲಿಯುವವ, ಉದ್ಯೋಗಾರ್ಥಿ, ಕಲಿಕೆಯವ; ಚುನಾವಣೆಗೆ ನಿಂತುಕೊಳ್ಳುವವ, ಉಮೇದುವಾರ, ಅಪೇಕ್ಷಕ.

उम्मेदवारी, ಸ್ತ್ರೀ. ಆಶೆ, ಭರವಸೆ; ಕೆಲಸಕಲಿಯಲು ಸಂಬಳವಿಲ್ಲದೆ ಕೆಲಸ ಮಾಡುವಿಕೆ; ಚುನಾವಣೆಗೆ ಉಮೇದುವಾರನಾಗಿ ನಿಂತುಕೊಳ್ಳುವಿಕೆ, ಉಮೇದುವಾರಿಕೆ.

उम्र, ಸ್ತ್ರೀ. ವಯಸ್ಸು; ಆಯುಸ್ಸು, ಜೀವಮಾನ.

उर, पु. ಎದೆ, ಹೃದಯ; ಮನಸ್ಸು

उरगना, सक्रि. ಸ್ವೀಕರಿಸು, ವಹಿಸು.

उरण, पु. "ಯುರನೆಸ್" ಎಂಬ ಗ್ರಹ.

उरद, पु. **उरदी,** ಸ್ತ್ರೀ. ಉದ್ದು.

उरधारना, सक्रि. = उधेड़ना.

उरबसी, ಸ್ತ್ರೀ. ಉಗುರಡ್ಡಿಗೆ, ಪದಕ.

उरमना, अक्रि. ನೇತಾಡು, ಜೋಲು.

उरमाल, पु. ಕರವಸ್ತ್ರ; ಸಣ್ಣ ಶಾಲು.

उरला, वि. ಹಿಂದಿನ; ಇಲ್ಲಿಯ, ಇತ್ತಣ; ವಿರಳ, ಅಪರೂಪ.

उरस, वि. ಸಪ್ಪೆ. पु. ಹೃದಯ; ಎದೆ, ವಕ್ಷಸ್ಥಳ.

उरसना, सक्रि. ಕವುಚಿಹಾಕು, ಬುಡ ಮೇಲಾಗಿಸು, ಬೋರಲಿಸು.

उराव, पु. ಉತ್ಸಾಹ, ಲವಲವಿಕೆ.

उराहना, पु. = उलाहना.

उरूज, पु. ಔನ್ನತ್ಯ; ಏಳಿಗೆ.

उरूस, ಸ್ತ್ರೀ. ಮದುವೆ ಹೆಣ್ಣು, ವಧು.

उरूसाना, वि. ಮದು ಮಗಳಂತಹ.

उरूसी, वि. ಮಧುಮಗಳ, ವಧುವಿನ.

उरेब, ಸ್ತ್ರೀ. ಮೋಸ, ಠಕ್ಕು.

उरेह, पु. ಚಿತ್ರಕಲೆ, ಚಿತ್ರಗಾರಿಕೆ.

उरेहना, सक्रि. ಚಿತ್ರ ಬರೆ, ಚಿತ್ರಿಸು.

उर्दू, ಸ್ತ್ರೀ. ಪಾಳ್ಯ, ಚಾವಣಿ; ದಂಡು; ದಂಡಿನಪೇಟೆ; ದಂಡಿನ ಭಾಷೆ; ಅರಬ್ಬಿ ಫಾರಶಿ ಮಿಶ್ರಿತವಾದ ಹಿಂದುಸ್ತಾನಿ ಭಾಷೆ. उर्दू बाज़ार = ದಂಡಿನ ಅಂಗಡಿ ಬೀದಿ, ಪೇಟೆ.

उर्फ़, पु. ಅಡ್ಡ ಹೆಸರು, ಕರೆಯುವ ಹೆಸರು, ಉರುಫ್.

उर्स, पु. ಫಕೀರರ ನಿರ್ವಾಣ ತಿಥಿ, ತದ್ದಿನ.

उलचना, सक्रि. ಚಿಮುಕಿಸು, ನೀರೆರೆ, ಸಿಂಪಡಿಸು.

उलझन, ಸ್ತ್ರೀ. ಗಂಟು, ಸಿಕ್ಕು; ಕಗ್ಗಂಟು, ಗೋಜಲು; ತೊಡರು, ಅಡಚಣೆ, ತೊಡಕು; ಒಗಟು, ಸಮಸ್ಯೆ.

उलझना, अक्रि. ಸಿಕ್ಕಿಕೊಳ್ಳು, ಸಿಕ್ಕಿಬೀಳು, ತೊಡಕಾಗು; ಪೇಚಾಟವಾಗು, ರಗಳೆಯಾಗು. उलझना पुलझना = ಪೇಚಾಟದಲ್ಲಿ ಸಿಕ್ಕು.

उलझाना, सक्रि. ಸಿಕ್ಕಿಸು; ಗಂಟು ಹಾಕು; ತೊಡಕುಮಾಡು.

उलझाव, पु ತೊಡರು, ಗಂಟು, ಸಿಕ್ಕು.

ಪೇಚಾಟ, ಪೀಕಲಾಟ; ರಗಳೆ, ತಂಟೆ.

उलझेड़ा, पु. ಸಿಕ್ಕು, ರಗಳೆ; ಎಳೆದಾಟ

उलझौहाँ, वि. ಸಿಕ್ಕಿಸುವ; ಮರುಳುಗೊಳಿಸುವ.

उलटना, अक्रि. ತಿರುಗು, ಹೊಡಮರಳು; ಕೂಲಿಹೋಗು, ಬುಡಮೇಲಾಗು, ಕವುಚಿಬೀಳು, ಕೆಡವಿಬೀಳು; ಪಲ್ಲಟವಾಗು. सक्रि. ತಿರುಗಿಸು; ಬೋರಲಿಸು, ಮಗುಚು, ಕವುಚು; ಚದರಿಸು, ಸದೆಬಡಿ; ಹೇಳಿದ್ದನ್ನೇ ಹೇಳು; ವಾಂತಿ ಮಾಡು, ವಾಕರಿಸು; ಸುರಿ, ಹೊಯ್ಯು; ನಾಶಮಾಡು.

उलट पुलट, स्त्री. ತಿರುಗು ಮುರುಗು, ತಾರುಮಾರು, ಗಲಿಬಿಲಿ, ಗೊಂದಲ. उलट पुलट करना = ಬುಡಮೇಲು ಮಾಡು; ತಿರುಗು ಮುರುಗು ಮಾಡು.

उलट-फेर, पु. ಮಾರ್ಪಾಟು, ಪರಿವರ್ತನೆ; ಪಲ್ಲಟ, ವ್ಯತಿಕ್ರಮ.

उलटा, वि. ತಲೆಕೆಳಕಾದ, ಬುಡಮೇಲಾದ, ಬೋರಲಾದ; ತಿರುಗಿದ, ತಿರುಗು ಮುರುಗಾದ; ಹಿಂದು ಮುಂದಾದ; ವ್ಯತಿಕ್ರಮವಾದ; ವಿಪರೀತವಾದ. क्रिवि. ತಿರುಗು ಮುರುಗಾಗಿ, ಗೊತ್ತುಗುರಿಯಿಲ್ಲದೆ, ಕ್ರಮತಪ್ಪಿ. पु. ಕಡಲೆ ಹಿಟ್ಟಿನ ಕಜ್ಜಾಯ. उलटा पलटा = ಗೊತ್ತು ಗುರಿಯಿಲ್ಲದ, ಅಸಂಬದ್ಧ; ತಿರುಗು ಮುರುಗಾದ, ಉಲ್ಟಾ ಪಲ್ಟಾ. उलटी सांस लेना = ಮೇಲುಸಿರು ಬಿಡು, ಏದು. उलटी सीधी सुनाना = ಬಾಯಿಗೆ ಬಂದ ಹಾಗೆಲ್ಲ ಅನ್ನು; ಹಂಗಿಸು, ಗದರಿಸು.

उलटाऊ, वि. ಬೋರಲ ಬೀಳುವ, ಕವುಚಿ ಬೀಳುವಂಥ.

उलटाना, सक्रि. ತಿರುಗಿಸು; ವಾಪಸು ಮಾಡು, ಪರತ ಮಾಡು; ವ್ಯತಿಕ್ರಮವಾಗಿಸು; ಬೋರಲಿಸು, ಕವುಚು.

उलटा पलटी, स्त्री. ಪಲ್ಲಟ, ಮಾರ್ಪಾಟು, ಪರಿವರ್ತನೆ; ಅದಲು ಬದಲು.

उलटाव, पु. ಬದಲಾವಣೆ, ತಿರುಗಿಸುವಿಕೆ, ಪಲ್ಲಟ.

उलटी, स्त्री. ವಾಂತಿ; ಲಾಗ, ಪಲ್ಟಿ.

उलटी सरसों, स्त्री. ಮಾಟ ಮಂತ್ರಗಳಲ್ಲಿ ಉಪಯೋಗಿಸುವ ಒಂದು ಬಗೆ ಸಾಸಿವೆ.

उलटे, क्रिवि. ವಿಪರ್ಯಯವಾಗಿ, ಎದುರಾಗಿ, ವಿರುದ್ಧವಾಗಿ.

उलथना, अक्रि. ಅಲುಗಾಡು, ಅಲ್ಲಾಡು, ಚಲಿಸು; ಮಗುಚಿ ಬೀಳು. सक्रि. ಮಗುಚು, ಬೋರಲಿಸು.

उलथा, पु. ನರ್ತನ, ನಾಟ್ಯ, ಕುಣಿತ; ಲಾಗ, ಪಲ್ಟಿ; ಹೊರಳುವಿಕೆ; ಭಾಷಾಂತರ, ತರ್ಜುಮೆ.

उलदना, सक्रि. ಹೊಯ್ಯು, ಸುರಿ. अक्रि. ಮಳೆ ಹೊಯ್ಯು, ಮಳೆಗರೆ.

उलमना, अक्रि. ನೇತಾಡು, ಜೋಲು.

उलमा, पु. ವಿದ್ವಾಂಸರು, ಪಂಡಿತರು.

उलरना, अक्रि. ಮಲಗು; ತಳಾರಿಸು.

उललना, अक्रि. ಇಳಿ, ಜಾರು; ಹೊರಳು.

उलसना, अक्रि. ಶೋಭಿಸು, ಮೆರೆ.

उलहना, अक्रि. ಮೊಳೆ, ಚಿಗುರು; ಅರಳು; ಹಿಗ್ಗು. पु. ನಿಂದೆ, ದೂರು.

उलार, वि. ಹಿಂಭಾರವಾದ.

उलारना, सक्रि. ಎಸೆ, ಹಾರಿಸು; ಮಲಗಿಸು, ಒರಗಿಸು.

उलाहना, पु. ದೂರು, ನಿಂದೆ.

उलीचना, अक्रि. ನೀರೆರೆ, ಹೊಯ್ಯು; ಸುರಿ.

उलूक, पु. ಗೂಗೆ, ಗೂಬೆ; ಜ್ವಾಲೆ.

उलूखल, पु. ಒರಳು; ಗುಗ್ಗುಳ.

उलूफ़ह, पु. ಸಂಬಳ, ತಲಬು; ದಿನವಹಿ ಭತ್ಯ, ಪಡಿ; ಎಡೆ, ಉಲುಫೆ.

उलूम, पु. ಶಾಸ್ತ್ರಗಳು.

उलेड़ना, अक्रि. ಹೊಯ್ಯು, ಸುರಿ.

उलेल, स्त्री. ಕುಣಿತ; ಪ್ರವಾಹ वि. ಧೋರಣೆಗಾರ, ಪಡಪೋಸಿ ಮನುಷ್ಯ.

उलथा, पु. ಭಾಷಾಂತರ, ತರ್ಜುಮೆ.

उल्फ़त, स्त्री. ಸ್ನೇಹ, ಪ್ರೀತಿ; ಪ್ರೇಮ.

उल्फ़ती, वि. ಸ್ನೇಹದ; ಪ್ರೀತಿಯ.

उल्लंघन, पु. ದಾಟುವಿಕೆ, ಮೀರುವಿಕೆ.

उल्लन, पु. ಹೆಣ್ಣು ಗೂಗೆ, ಹೆಣ್ಣು ಗೂಬೆ.

उल्लसन, पु. ಉಲ್ಲಾಸ, ಸಂತೋಷ; ರೋಮಾಂಚ.

उल्लू, पु. ಗೂಗೆ, ಗೂಬೆ; ಮೂರ್ಖ, ದಡ್ಡ. उल्लू का पट्ठा = ಗೂಗೆ ಮರಿ, ಗಗ್ಗ; ಗೂಷಲು, ಮಂಕ. उल्लू बनाना = ವಂಚಿಸು, ಠಕ್ಕಿಸು. अपना उल्लू सीधा करना = ಸ್ವಪ್ರಯೋಜನವನ್ನು ಸಾಧಿಸಿಕೊಳ್ಳು.

उल्लेख, पु. ಬರವಣಿಗೆ, ಲೇಖನ; ಪ್ರಸ್ತಾಪ, ವರ್ಣನೆ.

उल्लेखनीय, वि. ಹೇಳತಕ್ಕ.

उल्ब, पु. ಗರ್ಭದಲ್ಲಿ ಶಿಶುವನ್ನು ಸುತ್ತಿರುವ ಪೊರೆ, ಮಾಸು ಚೀಲ, ಗರ್ಭವೇಷ್ಟನ, ಸೆತ್ತೆ.

उशबा, पु. ಸೊಗದೇ ಬೇರು, ನನ್ನಾರಿ.

उशीर, पु. ಲಾವಂಚ, ಮುಡಿವಾಳ, ಬಾಳ.

उस, सर्व. 'वह' ಶಬ್ದಕ್ಕೆ ವಿಭಕ್ತಿ ಸೇರುವಾಗ ಆಗುವ ರೂಪ.

उसकन, पु. ಮುಸರೆ ಬೆಳಗಲು ಬಳಸುವ ಗುಂಜು, ನಾರು ಮುಂತಾದುವು.

उसकना, अक्रि. = उकसना.

उसकाना, सक्रि. = उकसाना.

उसता, पु. ನಾಪಿತ, ಕ್ಷೌರಿಕ, ಹಜಾಮ

उसनना, अक्रि. ಕುದಿಸು; ಬೇಯಿಸು.

उसनाना, सक्रि. उसनना का प्रे. रूप.

उसबू, पु. ಸಪ್ತಾಹ, ಒಂದು ವಾರ.

उसमा, पु. = उबटन.

उसरत, स्त्री. ಬಡತನ; ದೈನ್ಯ.

उसरना, अक्रि. ಅಗಲು, ಹಿಂತೆಗೆ; ವ್ಯತೀತವಾಗು, ಕಳೆ; ಮರೆತುಬಿಡು; ಪೂರೈಸು.

उसांस, पु. ಶ್ವಾಸ, ಉಸಿರು.

उसाना, सक्रि. ಕೇರು, ಒನೆ; ಗಾಳಿಸು.

उसारना, सक्रि. ಅಗಲಿಸು; ಕೀಳು; ತಳ್ಳು; ಪೂರೈಸು; ಸಿದ್ಧಪಡಿಸು.

उसारा, पु. ಕೈಸಾಲೆ, ಪಡಸಾಲೆ, ತಾಳ್ವಾರ.

ಪಡಸಾಲೆ; ಮುಖಮಂಟಪ, ದೇವಡಿ.

उसास, स्त्री. ಶ್ವಾಸ, ಉಸಿರು; ನಿಟ್ಟುಸಿರು.

उसीनाना, सक्रि. = उसनाना.

उसीसा, पु. ತಲೆಯ ಕಡೆ; ತಲೆ ದಿಂಬು

उसूल, पु. ಸಿದ್ಧಾಂತ, ತತ್ವ.

उसेवना, सक्रि. ಗಂಜಿ ಬಸಿ, ಸುರಿ.

उस्तरा, पु. ಕ್ಷೌರದ ಕತ್ತಿ, ಕ್ಷುರ.

उस्ताज़, वि. ಪ್ರವೀಣ.

उस्ताद, पु. ಶಿಕ್ಷಕ, ಉಪಾಧ್ಯಾಯ, ಕಲ್ಲಾಯ್ತು; ಗುರು, ಆಚಾರ್ಯ. वि. ನಿಪುಣ, ದಕ್ಷ; ತಂತ್ರಗಾರ, ಘಾಟಿ.

उस्तादी, स्त्री. ಶಿಕ್ಷಕರ ಕೆಲಸ, ಉಪಾಧ್ಯಾಯರ ಪದವಿ; ಸಾಮರ್ಥ್ಯ, ದಕ್ಷತೆ; ಪಾಂಡಿತ್ಯ; ಚಾತುರ್ಯ; ಕಪಟ.

उस्तानी, स्त्री. ಗುರುಪತ್ನಿ; ಉಪಾಧ್ಯಾಯಿನಿ; ವಂಚಕ ಸ್ತ್ರೀ.

उस्तुख़्वां, पु. ಎಲುಬು, ಮೂಳೆ; ಖರ್ಜೂರದ ಕುಸುರಿ.

उस्तुरलाब, पु. ನಕ್ಷತ್ರಯಂತ್ರ.

उस्तुरा, पु. ಕ್ಷೌರದ ಕತ್ತಿ, ಹಜಾಮತಿ ಕತ್ತಿ, ಕ್ಷುರ.

उस्तुवार, वि. ಬಲವಂತನಾದ, ಬಲಿಷ್ಠ, ದೃಢ; ಗಟ್ಟಿ.

उस्तुवारी, स्त्री. ಬಲ, ಶಕ್ತಿ, ಪುಷ್ಟಿ; ದೃಢತೆ, ಸ್ಥೈರ್ಯ.

उहदा, पु. = ओहदा.

उहरना, अक्रि. ತಗ್ಗು, ಮಟ್ಟಾಗು.

उहां, क्रिवि. ಅಲ್ಲಿ.

उहारा, पु. ಪರದೆ, ತೆರೆ.

ऊ

ऊंघ, ऊंघन, स्त्री. ಅರೆನಿದ್ದೆ, ತೂಕಡಿಕೆ, ಜೊಂಪು.

ऊंघना, अक्रि. ತೂಕಡಿಸು, ಜೂಗಳಿಸು.

ऊंच, वि. ಉಚ್ಚ, ಉನ್ನತ; ಮೇಲು; ಉಚು. ऊंच नीच = ಉಚ್ಚ ನೀಚ, ಮೇಲು ಕೀಳು, ಏರು ತಗ್ಗು; ಕಷ್ಟ ಸುಖ.

ऊंचा, वि. ಎತ್ತರವಾದ, ಉನ್ನತ; ಶ್ರೇಷ್ಠ, ದೊಡ್ಡ, ತಾರ(ಧ್ವನಿ). ऊंचा सुननेवाला = ಕಿವಿಮಂದವಾದವನು; ಕೆಪ್ಪ, ಕಿವುಡ.

ऊंचाई, ऊंचान, स्त्री. ಔನ್ನತ್ಯ; ಎತ್ತರ; ದೊಡ್ಡತನ.

ऊंचे, क्रिवि. ಎತ್ತರವಾಗಿ, ಮೇಲಕ್ಕೆ; ತಾರ ಸ್ವರದಲ್ಲಿ.

ऊंछना, अक्रि. ಬಾಚು, ಹಿಕ್ಕು.

ऊंजरी, स्त्री. ಸುಗ್ಗಿಯಲ್ಲಿ ಸಾಧು ಸಂತರಿಗೆ ದಾನ ಕೊಡುವ ಧಾನ್ಯ.

ऊंट, पु. ಒಂಟೆ, ಒಟ್ಟೆ, ಉಷ್ಟ್ರ.

ऊंटकटारा, पु. ಒಂಟೆಗಳು ತಿನ್ನುವ ಒಂದು ಮುಳ್ಳುಗಿಡ, ಗೊಳಗೊಳಿಕೆ.

ऊंटनी, स्त्री. ಹೆಣ್ಣೊಂಟೆ, ಉಷ್ಟ್ರಿಕೆ.

ऊंटवान, पु. ಒಂಟೆಗಾರ, ಸಾರವಾನ.

ऊंडा, पु. ನಿಧಿ, ನಿಕ್ಷೇಪ; ಹಣ ಹೂಳುವ ಪಾತ್ರೆ, ಹೂತ ಕೊಪ್ಪರಿಗೆ; ನೆಲಮನೆ. वि. ಆಳವಾದ.

ऊंहूं, अव्य. ಅಲ್ಲ, ಇಲ್ಲ, ಊಹೂ.

ऊआबाई, स्त्री. ಅಸಂಬದ್ಧ ಮಾತು, ಬೊಗಳೆ.

ऊक, स्त्री. ತಪ್ಪು, ಲೋಪ, ತಪ್ಪಿತ.

ऊकना, अक्रि. ತಪ್ಪಾಗು; ಗುರಿತಪ್ಪು. सक्रि. ಮರೆತು ಬಿಡು, ತಪ್ಪುಮಾಡು.

ऊख, पु. ಕಬ್ಬು, ಇಕ್ಷು; ಸೆಕೆ, ಧಗೆ.

ऊखल, पु. ಒರಳು, ಒರಳು ಕಲ್ಲು.

ऊखाड़ी, स्त्री. ಕಬ್ಬಿನ ಗದ್ದೆ.

ऊगना, अक्रि. =उगना.

ऊजड़, वि. ಹಾಳುಬಿದ್ದ, ಪಾಳು; ಬೆಂಗಾಡಾದ, ಬರಡಾದ.

ऊटक नाटक, पु. ನಿರರ್ಥಕ ಕೆಲಸ, ಅಡ್ಡಾತಿಡ್ಡಿ ಕೆಲಸ, ಬರಡು ಕೆಲಸ.

ऊटपटांग, वि. ಗೊತ್ತು ಗುರಿಯಿಲ್ಲದ, ಯದ್ವಾತದ್ವ, ಅಸಂಬದ್ಧ; ನಿರರ್ಥಕ, ಬರಡು. पु. ಇಲ್ಲದ ಸಲ್ಲದ ಮಾತು, ಉಚ್ಚಾವಚ್ಚ; ಅಸಂಬದ್ಧ ಪ್ರಲಾಪ.

ऊटपटांगी, वि. ಯದ್ವಾತದ್ವಾ ಮಾತ ನಾಡುವವ.

ऊठा, पु. ಮೂರುವರೆಯ ಮಗ್ಗಿ.

ऊढ़ा, पु. ಕುಂದು, ಕೊರತೆ; ಬರ, ಕ್ಷಾಮ; ನಾಶ.

ऊढ़ी, स्त्री. ಮುಳುಗುವಿಕೆ; ಗೋತ, ಮುಳುಗು, ಕಂತು.

ऊत, वि. ಮಕ್ಕಳಿಲ್ಲದ, ಬರಡ; ದಡ್ಡ, ಮಂಕ.

ऊद, पु. ಅಗರು ಮರ; ಅಗರು ಚಕ್ಕೆ; ನೀರು ಬೆಕ್ಕು, ನೀರು ನಾಯಿ.

ऊदबत्ती, स्त्री. ಊದುಬತ್ತಿ, ಅಗರು ಬತ್ತಿ, ಊದಿನಕಡ್ಡಿ, ಗಂಧದಕಡ್ಡಿ.

ऊदबिलाव, पु. ನೀರುಬೆಕ್ಕು, ನೀರು ನಾಯಿ.

ऊदसोज़, पु. ಊದುಬತ್ತಿ ಚುಚ್ಚುವ ಆಧಾರ, ಊದುಬತ್ತಿ ಗಿಡ, ಊದು ದಾನಿ.

ऊदा, वि. ಊದಾ ಬಣ್ಣದ, ನೇರಳೆ ಬಣ್ಣದ, ಜಾಂಬಳಿ ಬಣ್ಣದ.

ऊधम, पु. ಉಪದ್ರವ, ಗಲಾಟೆ; ರಚ್ಚೆ, ಗದ್ದಲ, ಗಲಭೆ; ಧಾಂದಲೆ, ಹಾವಳಿ.

ऊधमी, वि. ಗಲಭೆ ಮಾಡುವವ, ಧಾಂದಲೆಗಾರ, ಹಾವಳಿ ಮಾಡುವವ.

ऊधो, पु. ಶ್ರೀ ಕೃಷ್ಣನ ಮಂತ್ರಿಯಾ ಗಿದ್ದ ಉದ್ಧವನೆಂಬ ಯಾದವ.

ऊन, पु. ಉಣ್ಣೆ, ಬೊಚ್ಚು, ತುಪ್ಪಟ; ಸಣ್ಣ ಕತ್ತಿ. वि. ನ್ಯೂನ್ಯವಾದ, ಕೊರೆ.

ऊना, वि. ಕಡಿಮೆ, ಅಲ್ಪ. पु. ದುಃಖ, ದುಗುಡ, ವ್ಯಸನ.

ऊनी, स्त्री. ವ್ಯಥೆ, ದುಃಖ. वि. ಉಣ್ಣೆಯ, ತುಪ್ಪಟದ, ಬೊಚ್ಚಿನ.

ऊपर, क्रिवि. ಮೇಲಕ್ಕೆ, ಮೇಲೆ; ಹೊರ ಗಡೆ. पु. ಮೇಲ್ಗಡೆ; ಹೊರಗಡೆ.

ऊपरी, वि. ಮೇಲಿನ; ಹೊರಗಿನ; ತೋರಿಕೆಯ. पु. ಹೊರಗಿನವ.

ऊब, स्त्री. ಬೇಸರ, ಬೇಜಾರು, ಜುಗುಪ್ಸೆ, ಚಿಟ್ಟು, ಹೇವರಿಕೆ.

ऊबट, पु. ಕರಡು ದಾರಿ. वि. ಕರಡು, ತರಕಲು, ಮುರುಸು.

ऊबड़ खाबड़, वि. ಕರಡು, ಮುರುಡು, ಮುರುಸು.

ऊबना, अक्रि. ಬೇಜಾರುಪಡು, ಬೇಸರಗೊಳ್ಳು, ಹೇವರಿಸು, ಚಿಟ್ಟು ಹಿಡಿ.

ऊभना, अक्रि. ಬೇಗೆಯಾಗು, ಬೇಗುದಿಗೊಳ್ಳು.

ऊम, पु. **ऊमस**, स्त्री. ಧಗೆ, ಸೆಕೆ, ಝಳ.

ऊमी, स्त्री. ಗದ್ದಲು, ಒರಲೆ.

ऊलजलूल, वि. ಗೊತ್ತುಗುರಿಯಿಲ್ಲದ, ಅಸಂಬದ್ಧ; ತಿಳುವಳಿಕೆಯಿಲ್ಲದವ; ಅಡನಾಡಿ; ಹೆಡ್ಡ.

ऊसर, पु. ಚೌಳುಮಣ್ಣಿನ ಭೂಮಿ; ಬರಡು ನೆಲ; ಬೆಂಗಾಡು, ಅರಗಾಡು.

ऊह, अव्य. ಅಯ್ಯೋ, ಅಹಹಾ, ಹಾ. पु. ಅಂದಾಜು, ಊಹೆ.

ऊहापोह, पु. ಊಹೆ, ಊಹಾಪೋಹ, ಅಂದಾಜು, ಅಡಸಟ್ಟು.

ऋ

ऋण, **ऋन**, पु. ಸಾಲ, ಕಡ, ಋಣ.

ऋणी, वि. ಸಾಲಗಾರ, ಋಣಿ.

ऋतुराज, पु. ವಸಂತ ಋತು.

ऋद्धि, स्त्री. ಸಮೃದ್ಧಿ, ಐಶ್ವರ್ಯ.

ऋनिया, वि. ಸಾಲಗಾರ, ಋಣಿ.

ऋषी, पु. ಋಷಿ, ಮುನಿ; ತಪಸ್ವಿ.

ए

एंच-पेंच, पु. ಸಿಕ್ಕು, ತೊಡಕು, ಪೇಚಾಟ, ಪೀಕಲಾಟ; ಕುಟಿಲತೆ, ವಕ್ರತೆ; ಕುಟಿಲಯುಕ್ತಿ, ಕುತಂತ್ರ.

एंडा-बेंडा, वि. ಸಿಕ್ಕಾಪಟ್ಟೆ, ಯದ್ವಾತದ್ವಾ; ಅಪಕ್ರಮವಾದ.

एंडी, स्त्री. ಒಂದು ಬಗೆ ರೇಷ್ಮೆ ಹುಳು; ರೇಷ್ಮೆ ಬಟ್ಟೆ; ಹಿಮ್ಮಡಿ.

एंडुआ, पु. **एंडुई**, स्त्री. ಸಿಂಬಿ, ಸುರುಳಿ, ಸಿವುಡು.

ए, अव्य. ಓ, ಎಲೈ.

एआनत, स्त्री. ಸಹಾಯ, ಅನುಗ್ರಹ.

एकंग, वि. ಏಕಾಂಗಿ; ಒಬ್ಬಂಟಿಗ.

एकंगा, वि. ಒಂದು ಪಕ್ಷದ, ಒಂದು ಕಡೆಯ.

एक, वि. ಒಂದು, ಒಂಟಿ; ಅದ್ವಿತೀಯ, ಸಾಟಿಯಿಲ್ಲದ. एक आध = ಒಂದರೆ, ಒಂದೆರಡು, ಸ್ವಲ್ಪ. एक टक = ರೆಪ್ಪೆ ಹೊಡೆಯದೆ, ದುರದುರನೆ. एक दम = ಒಂದೇ ಉಸುರಿನಲ್ಲಿ, ಒಮ್ಮೆಲೆ.

एकछत्र, वि. ಸ್ವತಂತ್ರ (ರಾಜ್ಯ). पु. ಏಕಾಧಿಪತ್ಯ.

एकजद्दी, वि. ದಾಯಾದಿ, ಸಗೋತ್ರ.

एकजी, वि. ಒಂದೇ ಪ್ರಾಣವುಳ್ಳ; ಗರ್ಭಿಣಿ.

एकटकी, स्त्री. ದುರುಗುಟ್ಟಿ ನೋಡುವಿಕೆ; ನೆಟ್ಟ ನೋಟ, ಬಿರುನೋಟ.

एकट्ठा, वि. = इकट्ठा.

एकड़, पु. ಎಕರೆ, ೪೦ ಗುಂಟೆ.

एकडाल, पु. ಖಡ್ಗವಿಶೇಷ.

एकतरफ़ा, वि. ಒಂದು ಪಕ್ಷದ, ಒಂದು

ಮುಗ್ಗಲಿನ; ಪಕ್ಷಪಾತದ.

एकता, स्त्री. ಐಕ್ಯ, ಒಗ್ಗಟ್ಟು; ಸಮಾನತೆ. वि. ಅದ್ವಿತೀಯ, ಅನನ್ಯಾದೃಶ.

एकतान, वि. ಸಮ್ಮಿಳಿತ, ಸಂಯುಕ್ತ; ಲೀನ. पु. ಏಕತಾನ; ಸ್ವರಮೇಳ.

एकतारा, पु. ಒಂದೇ ತಂತಿಯ ತಂಬೂರಿ, ಏಕನಾದ, ಚವಡಿಕೆ.

एकतालीस, वि. ನಲವತ್ತೊಂದು.

एकतीस, वि. ಮೂವತ್ತೊಂದು.

एकत्र, क्रिवि. ಒಟ್ಟಾಗಿ, ಒಂದುಗೂಡಿ; ಒಂದೆಡೆ.

एकत्रित, वि. ಒಂದುಗೂಡಿದ, ಒಟ್ಟು ಸೇರಿದ, ಶೇಖರಿಸಿದ.

एकदम, क्रिवि. ಒಂದೇ ಉಸಿರಿನಲ್ಲಿ; ಒಮ್ಮೆಲೆ. वि. ತೀರ, ಅಗದಿ.

एकदस्त, वि. ಒಟ್ಟಾದ, ಒಟ್ಟಾರೆ; ಮೊತ್ತ, ಠೋಕು.

एकदिल, वि. ಒಮ್ಮತದ.

एकदीगर, क्रिवि. ಒಬ್ಬರನ್ನೊಬ್ಬರು.

एकन्नी, स्त्री. ಒಂದಾಣೆ ನಾಣ್ಯ.

एक-बएक, **एकबारगी**, क्रिवि. ಒಂದೇ ಸಾರಿ, ಒಮ್ಮೆಲೆ, ಏಕದಂ; ತಟಕ್ಕನೆ, ಅಕಸ್ಮಾತ್ತಾಗಿ; ಪೂರ್ತಿಯಾಗಿ.

एक़बाल, पु. ಪ್ರತಾಪ; ಭಾಗ್ಯ; ತಪ್ಪು ಒಪ್ಪಿಕೊಳ್ಳುವಿಕೆ, ಅಂಗೀಕಾರ.

एक़बालमंद, वि. ಪ್ರತಾಪಿ; ಭಾಗ್ಯವಂತ.

एक़रार, पु. = इक़रार.

एकलौता, वि. ಏಕಮಾತ್ರ (ಪುತ್ರ).

एकवांज, स्त्री. ಒಂದೇ ಮಗುವಿನ ತಾಯಿ, ಕಾಕವಂಧ್ಯೆ.

एकसठ, वि. ಅರವತ್ತೊಂದು.

एकसर, वि. ಒಂಟಿ; ಸಮಸ್ತ, ಇಡೀ.

एकसां, वि. ಒಂದೇ ಸಮನಾದ; ಸಮಾನವಾದ.

एकसार, वि. ಸಮಾನವಾದ; ಅನುಗುಣವಾದ.

एकहत्तर, वि. ಎಪ್ಪತ್ತೊಂದು.

एकहत्था, वि. ಒಬ್ಬನದೇ ಕೈವಾಡದ; ಏಕಾಧಿಕಾರದ.

एकहरा, वि. ಒಂಟಿ ಎಳೆಯ; ಒಂದೇ ಪದರದ; ಒಂದೇ ಮಡಿಕೆಯ; ಒತ್ತರ. एकहरा आदमी = ಸಣಕಲು ಮನುಷ್ಯ, ನರಪೇತಲ.

एकांत, पु. ಯಾರೂ ಇಲ್ಲದ ಸ್ಥಳ; ನಿರ್ಜನ ಪ್ರದೇಶ, ಏಕಾಂತ.

एकांतवास, पु. ಒಬ್ಬಂಟಿಗನಾಗಿರುವಿಕೆ; ಏಕಾಂತದಲ್ಲಿ ವಾಸಿಸುವಿಕೆ.

एकांतवासी, पु. ಒಬ್ಬಂಟಿಗನಾಗಿ ಅಥವಾ ಏಕಾಂತದಲ್ಲಿ ವಾಸಿಸುವವ.

एका, पु. ಐಕ್ಯ, ಒಗ್ಗಟ್ಟು.

एकाई, स्त्री. ಐಕ್ಯ, ಏಕತ್ವ; ಒಂದರ ಎಣಿಕೆ, ಏಕ.

एकाएक, क्रिवि. ಏಕಾಏಕೀ, ತಟಕ್ಕನೆ, ಅಕಸ್ಮಾತ್ತಾಗಿ, ಒಮ್ಮಿಂದೊಮ್ಮೆ.

एकाएकी, क्रिवि. ಅಕಸ್ಮಾತ್ತಾಗಿ, ಥಟ್ಟನೆ. वि. ಒಂಟಿ, ಏಕಾಂತವಾದ.

एकाकार, पु. ಏಕೀಕರಣ, ಒಕ್ಕೂಟ. वि. ಒಂದೇ ಆಕಾರದ.

एकाकी, वि. ಒಂಟಿ, ಏಕಾಂಗಿಯಾದ.

एकाक्ष, वि. ಒಂದೇ ಕಣ್ಣಿನವ, ಒಕ್ಕಣ್ಣ. पु. ಕಾಗೆ.

एका, वि. ಒಂಟಿ; ಅದ್ವಿತೀಯ, ಸಾಟಿಯಿಲ್ಲದ. पु. ಒಂಟಿಗ; ಒಂದು ಬಗೆ ಕುದುರೆ ಗಾಡಿ; ದಾಯ (ಪಗಡೆಯಾಟದಲ್ಲಿ), ಎಕ್ಕ, ಪೊಗಡೆ एक्का दुक्का = ಒಂಟಿ ಸಂಟಿ.

एक्कावान, वि. एक्का ಗಾಡಿಯವ.

एकी, स्त्री. ಒಂಟೆತ್ತಿನ ಗಾಡಿ; ದಾಯ (ಪಗಡೆಯಾಟದಲ್ಲಿ), ಎಕ್ಕ.

एक्यानबे, वि. ತೊಂಭತ್ತೊಂದು.

एक्यावन, वि. ಐವತ್ತೊಂದು.

एक्यासी, वि. ಎಂಭತ್ತೊಂದು.

एख़नी, स्त्री. ಮಾಂಸದ ಸಾರು.

एगाना, वि. = यगाना.

एजाज़, पु. ಅದ್ಭುತ; ಪವಾಡ.

एज़ाज़, पु. ಗೌರವ, ಮರ್ಯಾದೆ.

एड़, स्त्री. ಹಿಮ್ಮಡಿ, ಹಿಂಬುಡ.

एड़ी, स्त्री. ಹಿಮ್ಮಡಿ, ಹಿಂಬುಡ, ಹಿಂಗುದಿ. एड़ी घिसना या रगडना = ಪದೇ ಪದೇ ಹೋಗಿಬರು, ಎಡತಾಕು; ಕಷ್ಟಪಡು.

एढ़ा टेढ़ा, वि. ಡೊಂಕು ಡೊಸಕು, ವಕ್ರ

एतक़ाद, पु. ನಂಬಿಕೆ, ನೆಚ್ಚಿಕೆ.

एतदाल, पु. ಮಿತವರ್ತನೆ, ಸಂಯಮ; ಸಮತೆ, ಸಾಮಾರಸ್ಯ.

एतज़ाल. पु. ಮತಭೇದ; ವಿರೋಧ.

एतबार, पु. ನಂಬಿಕೆ, ನೆಚ್ಚಿಕೆ.

एतबारी, वि. ನಂಬಿಗಸ್ತ.

एतमाद, पु. ನಂಬಿಕೆ, ಭರವಸೆ.

एतराज़, पु. ಆಕ್ಷೇಪಣೆ, ಅಡ್ಡಿ; ಟೀಕೆ, ಟಿಪ್ಪಣಿ.

एतवार, पु. ಭಾನುವಾರ.

एरंड, पु. ಹರಳು ಗಿಡ.

एराज़, स्त्री. ಹೇಸಿಗೆ, ಜಿಗುಪ್ಸೆ.

एराब, पु. ಹಡಗಿನ ಅಡಿತಟ್ಟು.

एराफेर, पु. **एराफेरी**, स्त्री. ಬದಲಾಬದಲಿ, ಪರಿವರ್ತನೆ.

एलची, पु. ರಾಯಭಾರಿ, ರಾಜದೂತ.

एलचीगरी, स्त्री. ದೂತನ ಕೆಲಸ, ದೌತ್ಯ; ರಾಯಭಾರ.

एलवा, पु. ಲೋಳೆಸರ.

एला, पु. ಏಲಕ್ಕಿ, ಯಾಲಕ್ಕಿ.

एलान, पु. ಘೋಷಣೆ, ನಿರೂಪ; ಪ್ರಕಟಣೆ, ಜಾಹಿರಾತು.

एलुवा, पु. ಕತ್ತಾಳೆ, ಲೋಳೆಸರ.

एवं, क्रिवि. ಇದೇ ಪ್ರಕಾರವಾಗಿ, ಹೀಗೆಯೇ.

एवज़, पु. ಪ್ರತಿಫಲ; ಪರಿವರ್ತನೆ; ಸ್ಥಾನಾಪನ್ನ, ಬದಲಿಯವ; ಪ್ರತಿನಿಧಿ.

एवज़ी, वि. ಸ್ಥಾನಾಪನ್ನ; ಬದಲಿ ಕೆಲಸ ನೋಡುವವ, ಹಂಗಾಮಿ.

एवमस्तु, अव्य. ಹೀಗೆಯೇ ಆಗಲಿ, ತಥಾಸ್ತು.

एहतमाम, पु. ಪ್ರಯತ್ನ; ಏರ್ಪಾಡು, ವ್ಯವಸ್ಥೆ.

एहतीयात, स्त्री. ಜಾಗರೂಕತೆ, ಎಚ್ಚರಿಕೆ; ಪಥ್ಯ, ಸಂಯಮ; ರಕ್ಷಣೆ.

एहसान, पु. ಉಪಕಾರ, ಕೃತಜ್ಞತೆ; ದಾಕ್ಷಿಣ್ಯ, ಹಂಗು; ಮುಲಾಜು.

एहसान-फ़रामोश, वि. ಉಪಕಾರವನ್ನು ಸ್ಮರಿಸದ, ಕೃತಘ್ನ.

एहसान-फ़रामोशी, स्त्री. ಕೃತಘ್ನತೆ.

एहसानमंद, वि. ಕೃತಜ್ಞ, ಆಭಾರಿ.

एहसानमंदी, स्त्री. ಕೃತಜ್ಞತೆ.

एहसास, पु. ಸ್ಪರ್ಶ, ಮುಟ್ಟುವಿಕೆ; ಅನುಭವ; ತಿಳಿಯುವಿಕೆ.

एहो, अव्य. ಹೇ, ಎಲೈ.

ऐ

ऐं, अव्य. ಹಾಂ, ಏನು!

ऐंच, स्त्री. ಎಳೆಯುವಿಕೆ, ಎಳೆತ; ಸಂಕೋಚ.

ऐंचखैंच, पु. **ऐंचाखैंची**, स्त्री. ಎಳೆದಾಟ, ಜಗಳ.

ऐंचना, सक्रि. ಎಳೆ, ಸೆಳೆ; ವಹಿಸಿಕೊ, ಸಾಟಿ ಮಾಡು, ಪೀಟಿ ಮಾಡು.

ऐंचाताना, वि. ಮಾಲುಗಣ್ಣಿನವ, ಮೆಳ್ಳೆಗಣ್ಣಿನವ, ಕೋಸುಗಣ್ಣು.

ऐंचातानी, स्त्री. ಎಳೆದಾಟ, ಜಗ್ಗಾಟ.

ऐंछना, सक्रि. ಝಾಡಿಸು, ಗುಡಿಸು; ಸಿಕ್ಕು ಬಿಡಿಸು, ಬಾಚು.

ऐंटा, पु. ಬಸವನ ಹುಳು.

ऐंठ, स्त्री. ಮುರಿಗೆ, ನುಲಿಕೆ; ಸೆಟೆದ ನಡಿಗೆ, ಕೊಂಕು, ಸೆಡಕು; ಗರ್ವ; ವಕ್ರತೆ.

ऐंठन, स्त्री. ಮುರಿಗೆ, ಹುರಿ, ನುಲಿಕೆ; ಗಂಟು; ಡೊಂಕು, ಸೆಡಕು; ವಕ್ರ; ಸೆಡೆತ; ಬಿಗುಮಾನ, ಒಯ್ಯಾರ, ಬಿಂಕ; ಹೊಟ್ಟೆ ಕಡತ, ನುಲಿ.

ऐंठना, सक्रि. ತಿರುಗಿಸು, ತಿರುಚು; ಕೊಂಕು ಮಾಡು; ಸಿಕ್ಕಿಸು. अक्रि. ಗಂಟು ಬೀಳು; ಡೊಂಕಾಗು; ಮುಖ ಗಂಟಿಕ್ಕು; ಕುಲುಕಿ ನಡೆ, ನಿಗರು, ಸೆಟೆ; ಜಕ್ಕಿಸು, ನಿಕ್ಕುಳಿಸು; ಸೆಡೆ, ಬಿರುಸಾಗು.

ऐंठवाना, सक्रि. "ऐंठना" का प्रे रूप.

ऐंठा, पु. ದಾರ ಸುತ್ತುವ ರಾಟೆ, ಅರಟೆ.

ऐंठू, वि. ಗಂಟು ಮೋರೆಯು, ಸೆಡಕಿನ, ಸಿಡುಕಲು.

ऐंड, पु. ಗರ್ವ, ಅಹಂಕಾರ; ಬಿಗುಮಾನ; ನೀರಿನ ಸುಳಿ. वि. ನಿರರ್ಥಕ.

ऐंडदार, वि. ಗರ್ವಿ; ಒಯ್ಯಾರಿ.

ऐंडना, अक्रि ಹೊರಳು, ತಿರುಚು; ಮೈಮುರಿ, ಸೆಟೆ; ಗರ್ವಿಸು. सक्रि. ತಿರುಚು; ಸೊಟ್ಟಾಗಿ ತಿರುಗಿಸು.

ऐंड-बैंड, वि. ಸೊಟ್ಟಾದ, ಡೊಂಕು ಡೊಸರಾದ, ವಕ್ರ.

ऐंडा, वि. ಗಂಟುಮೋರೆಯು, ಸಿಡುಕಿನ

ऐंडाना, अक्रि. ಮೈಮುರಿ; ನಿಗರು, ಸೆಟೆ.

ऐ, अव्य. ಎಲೈ!

ऐकमत्य, पु. ಒಮ್ಮತ; ಒಕ್ಕೊರಲು.

ऐज़न, वि. ಮೇಲೆ ಹೇಳಿದ, ಉಪರೋಕ್ತ, ಸದರಿ.

ऐतिहासिक, वि. ಚರಿತ್ರೆಗೆ ಸಂಬಂಧಪಟ್ಟ, ಚಾರಿತ್ರಿಕ, ಐತಿಹಾಸಿಕ. पु. ಚರಿತ್ರಕಾರ, ಇತಿಹಾಸಕಾರ.

ऐन, वि. ಸರಿಯಾದ; ನೇರವಾದ; ಐನು, ಐನಾತಿ. स्त्री. ಕಚ್ಚಲು; ಕಣ್ಣು.

ऐनक, स्त्री. ಕನ್ನಡಕ, ಸುಲೋಚನ, ಚಾಳೀಸು, ಚಷ್ಮ.

ऐन-मैन, क्रिवि. ಇದ್ದದ್ದು ಇದ್ದಹಾಗೆ; ತದ್ರೂಪವಾಗಿ, ಥೇಟು.

ऐपन, पु. ಶುಭಕಾರ್ಯಗಳಲ್ಲಿ ಬಳಸುವ ಅರಿಸಿನ ಪುಡಿ ಬೆರತ ಅಕ್ಕಿಹಿಟ್ಟಿನ ಲೇಪನ ದ್ರವ್ಯ, ಸೇಸೆ.

ऐब, पु. ದೋಷ, ಕುಂದು, ಐಬು.

ऐबजोई, स्त्री. ದೋಷ ಹುಡುಕುವಿಕೆ, ಛಿದ್ರಾನ್ವೇಷಣ.

ऐबी, वि. ಕೆಟ್ಟ, ದೋಷವುಳ್ಳ, ದುಷ್ಟ; ಮೆಳ್ಳಗಣ್ಣಿನ, ಮಾಲುಗಣ್ಣಿನ.

ऐया, स्त्री. ಅಜ್ಜಿ; ದಾದಿ.

ऐयाम, पु. ದಿನ; ಕಾಲ; ಋತು.

ऐयार, पु. ತಂತ್ರಗಾರ, ಮೋಸಗಾರ.

ऐयारी, स्त्री. ತಂತ್ರ, ಕಪಟ, ಠಕ್ಕು.

ऐयाश, वि. ಸೊಗಸುಗಾರ; ವಿಲಾಸಿ; ವಿಷಯ ಲಂಪಟ, ವಿಟ.

ऐयाशी, स्त्री. ವಿಲಾಸ; ವಿಷಯಾಸಕ್ತಿ.

ऐरा-ग़ैरा, वि. ಹೊಸಬ, ಅಪರಿಚಿತ; ನೀಚ.

ऐश, पु. ನೆಮ್ಮದಿ, ಸುಖ; ವಿಲಾಸ.

ऐसा, वि. ಈ ಪ್ರಕಾರದ, ಇಂತಹ. ऐसा-वैसा = ಅಂಥಿಂಥ; ಸಾಮಾನ್ಯ.

ऐसे, क्रिवि. ಈ ಪ್ರಕಾರವಾಗಿ, ಹೀಗೆ, ಈ ತೆರನಾಗಿ.

ओ

ओंइछना, सक्रि. ಇಳಿತೆಗೆ, ನಿವಾಳಿಸು; ಬಲಿ ಕೊಡು.

ओंगना, सक्रि. ಎರೆಯೆಣ್ಣೆ ಸವರು, ಹೆರೆ ಹಚ್ಚು

ओंठ, पु. ತುಟಿ, ಅಧರ.

ओंड, पु. ಮಣ್ಣು ತೋಡುವವ, ಮಣ್ಣೊಡ್ಡ.

ओंडा, वि. ಆಳವಾದ. पु. ಕುಳಿ, ಗುಣಿ; ರಂಧ್ರ, ಕಂಡಿ, ಕನ್ನ.

ओ, अव्य. ಮತ್ತು, ಹಾಗೂ.

ओक, पु. ನಿವಾಸ, ಸ್ಥಾನ; ಆಶ್ರಯ; ಅಂಜಲಿ. स्त्री. ವಾಕರಿಕೆ, ಕೇಕರಿಕೆ.

ओकना, अक्रि. ವಾಕರಿಸು, ಕೇಕರಿಸು, ಒಗಡಿಸು.

ओकाई, स्त्री. ವಾಕರಿಕೆ, ವಾಂತಿ.

ओखली, स्त्री. ಒರಳು.

ओखा, पु. ನೆಪ, ನೆವ. वि. ಶುಷ್ಕ; ವಿರಳವಾದ; ಬೆರಿಕೆಯಾದ.

ओग, पु. ಚಂದಾ, ವರ್ಗಣಿ, ವಂತಿಗೆ.

ओगनी. स्त्री. ಚಿನ್ನದ ಒಂದು ಆಭರಣ.

ओगरना, सक्रि. ಹಿಸುಕು, ಕಿವುಚು, ಹಿಂಡು.

ओगरा, पु. ಅಂಬಲಿ, ಗಂಜಿ.

ओगराना, सक्रि. ಗೋಡು ತೆಗೆ; ಕದಡು, ಕಲಕು.

ओघ, पु. ರಾಶಿ, ಗುಡ್ಡೆ; ಪ್ರವಾಹ; ಸೆಳೆತ, ಹೊಯಿಲು.

ओछा, वि. ಅಲ್ಪನಾದ, ನೀಚ; ಕೀಳು

ತರದ, ನಿಕೃಷ್ಟ.

ओछाई, स्त्री. **ओछापन**, पु. ನೀಚತನ; ಅಲ್ಪತನ.

ओज, पु. ಪ್ರತಾಪ, ಬಲ; ಪ್ರಕಾಶ.

ओझ, पु. ಹೊಟ್ಟೆ; ಕರುಳು.

ओझडी, स्त्री. ಕೊಳೆತಮಾಂಸ, ಹಪ್ಪು; ಮಾಸು, ಮಾವಿಚೀಲ.

ओझल, पु. ಮರೆ, ಕಣ್ಮರೆ.

ओझा, पु. ದೆವ್ವ ಬಿಡಿಸುವವ, ಮಾಟಗಾರ; ಬ್ರಾಹ್ಮಣರ ಒಂದು ಒಳಜಾತಿ.

ओझाइन, स्त्री. ओझा का स्त्री. रूप.

ओझाई, स्त्री. ದೆವ್ವ ಬಿಡಿಸುವಿಕೆ.

ओट, स्त्री. ಮರೆ; ತಟ್ಟಿ, ತಡಿಕೆ, ನೆರಕೆ; ತೆರೆ, ಪರದೆ; ಆಶ್ರಯ.

ओटना, सक्रि. ಹತ್ತಿ ಬಿಡಿಸು, ಹಿಂಜು; ಸಹಿಸು; ತನ್ನ ಮಾತನ್ನೇ ಹೇಳುತ್ತಿರು.

ओटनी, ओटी, स्त्री. ಹತ್ತಿ ಬೀಜ ಬಿಡಿಸುವ ಯಂತ್ರ, ಕಿರುಕು ರಾಟೆ.

ओटा, पु. ಗೋಡೆ; ನೆರಕೆ, ತಡಿಕೆ.

ओठंगाना, अक्रि. ಆನಿಸು, ಒರಗು; ವಿಶ್ರಮಿಸು.

ओठँगना, सक्रि. ಆಧಾರ ಕೊಡು; ಒರಗಿಸು.

ओठ, पु. ತುಟಿ, ಅಧರ.

ओड़ना, सक्रि. ತಡೆ, ನಿವಾರಿಸು; ಕೈಚಾಚು, ಕೈಯೊಡ್ಡು.

ओड़ा, पु. ಕುಳಿ; ಕನ್ನ; ಮುಕ್ಕರಿ, ಗೂಡೆ; ಕುಂದು, ಕೊರತೆ.

ओढ़ना, सक्रि. ಉಡು, ತೊಡು, ಹೊದಿ; ಜವಾಬ್ದಾರಿ ವಹಿಸು, ಹೊಣೆ ಹೊರು. पु. ಹೊದಿಕೆ.

ओढ़नी, स्त्री. ಮೇಲು ಸೆರಗು, ಮೇಲುದು; ಹೊದಿಕೆ.

ओढ़र, पु. ನೆಪ, ವ್ಯಾಜ, ಸಬೂಬು.

ओढ़ाना, सक्रि. ಹೊದಿಸು, ಹೊಚ್ಚು.

ओत, स्त्री. ಸುಖ, ಸೌಖ್ಯ; ನೆಮ್ಮದಿ; ಮಿತವ್ಯಯ; ಲಾಭ. वि. ನೆಯ್ದ.

ओत-प्रोत, पु. ಹಾಸು-ಹೊಕ್ಕು. वि. ಬಹಳ ಒತ್ತಾದ, ಘನಿಷ್ಠ.

ओद, पु. ಜೌಗು, ತೇವ. वि. ಒದ್ದೆಯಾದ, ನೆನೆದ.

ओदरना, अक्रि. ಹರಿ, ಸೀಳು, ಛಿನ್ನಭಿನ್ನವಾಗು.

ओदा, वि. ಒದ್ದೆಯಾದ, ತೇವವಾದ.

ओदारना, सक्रि. ಹರಿ, ಸೀಳು; ಸುಲಿ; ಚದರಿಸು.

ओनचन, स्त्री. = उंचन.

ओना, पु. ಕೆರೆಯ ತೂಬು, ಕೋಡಿ.

ओनाना, सक्रि. ಕಿವಿಗೊಡು, ಆಲಿಸು.

ओनामासी, स्त्री. ಅಕ್ಷರಾಭ್ಯಾಸ, ಓನಾಮ; ಪ್ರಾರಂಭ, ಷುರು, ಆದಿ.

ओप, स्त्री. ಹೊಳಪು, ಕಾಂತಿ; ಮಿರುಗು, ಮಿರಿ ಮಿರಿಪು, ಒಪ್ಪ, ಪಾಲಿಷ್.

ओपची, वि. ಕವಚಧಾರಿ, ಶಸ್ತ್ರಧಾರಿ.

ओपना, सक्रि. ಬೆಳಗಿಸು, ಮಿರುಗಿಡು, ಮಿರುಗಿಸು. अक्रि. ಹೊಳೆಯು, ಮಿರುಗು.

ओफ़, अव्य. ದುಃಖ ಸೂಚಕ ಶಬ್ದ.

ओयना, पु. ದಾರ ಸುತ್ತುವ ರಾಟೆ, ಅಟಿ.

ओर, स्त्री. ದಿಶೆ, ದಿಕ್ಕು; ಕಡೆ, ಪಕ್ಕ, ಕಲ. इस ओर = ಈಕಡೆ, ಈ ತಟ್ಟು. पु. ತುದಿ, ಕೊನೆ. ओर निभाना = ಕೊನೆ. ಮುಟ್ಟಿಸು, ನೆರವೇರಿಸು.

ओरमा, पु. ಹೊಲಿಗೆ, ತಿಬ್ಬಿ, ಟಾಕಾ.

ओरहा, पु. ಕಡಲೆ ಗಿಡ.

ओराना, अक्रि. ಕೊನೆಗಾಣು, ಮುಗಿ.

ओरी, **ओरौती**, स्त्री. ಸೂರು, ಲೋವೆ

ओलंबा, पु. ದೂರು, ನಿಂದೆ.

ओल, पु. ಸ್ವರ್ಣಗೆಡ್ಡೆ. स्त्री. ಟೊಂಕ, ಸೊಂಟ; ಮರೆ, ಆಶ್ರಯ; ಶರಣು; ಹೊಣೆ; ಓಲು, ಜಾಮೀನು; ಹೊಣೆಗಾರ; ನೆಪ, ವ್ಯಾಜ. वि. ಒದ್ದೆ.

ओलती, स्त्री. ಸೂರು, ಲೋವೆ.

ओलना, सक्रि. ಮುಚ್ಚಿಡು, ಬಚ್ಚಿಡು; ತಡೆ; ವಹಿಸಿಕೊಳ್ಳು; ತಿವಿ, ತುರುಕು.

ओलरना, अक्रि. ಮಲಗು, ಒರಗು.

ओला, पु. ಆನೆಕಲ್ಲು, ಆಲಿಕಲ್ಲು; ಕಲ್ಲು ಸಕ್ಕರೆಯಿಂದ ಮಾಡಿದ ಲಾಡು, ಚಿಕ್ಕ ಲಾಡು; ಮರೆ, ಪರದೆ; ಗುಟ್ಟು. ओला पड़ना = ತಣ್ಣಗಾಗು; ಹಾಳಾಗು.

ओलारना, सक्रि. ಮಲಗಿಸು, ಒರಗಿಸು

ओलाहना, पु. ದೂರು, ಪುಕಾರು.

ओलियाना, सक्रि. ಉಡಿಯಲ್ಲಿ ಕಟ್ಟಿಕೊಳ್ಳು; ತುರುಕು, ಅಡಚು.

ओली, स्त्री. ಸೊಂಟ; ಮಡಿಲು, ಸೋಗಿಲು, ಉಡಿ; ಸೆರಗು; ಜೋಳಿಗೆ. ओली ओडना = ಸೆರಗೊಡ್ಡು.

ओवरा, पु. ಕಿರುಮನೆ; ಕತ್ತಲೆ ಕೋಣೆ

ओस, स्त्री. ಮಂಜು, ಇಬ್ಬನಿ. ओस पडना = ಮಂದವಾಗು; ಕಂಗೆಡು, ಕಳೆಗುಂದು.

ओसर, स्त्री. ಕಡಸು, ಮಣಕ.

ओसरा, पु. ಬಾರಿ, ಸರದಿ, ಸರ್ತಿ; ಪಲ್ಲಟ, ಕಾಲಭೇದ. ओसरा ओसरी = ಬಾರಿಬಾರಿಯಾಗಿ, ಸರದಿಯ ಮೇಲೆ; ಕಿತ್ತಾವಾರು.

ओसाई, स्त्री. ತೂರುವುದು; ಕೇರುವುದು; ತೂರುವುದರ ಕೂಲಿ.

ओसाना, सक्रि. ತೂರು, ಕೇರು.

ओसार, पु. ಅಗಲ, ವಿಸ್ತಾರ.

ओसारा, पु. **ओसारी**, स्त्री. ಕೈಸಾಲೆ, ಪಸಾರೆ, ಒಪ್ಪಾರು, "ವರಾಂಡ".

ओसीसा, पु. ತಲೆ ಕಡೆ; ತಲೆದಿಂಬು.

ओह, अव्य. ಓಹ್.

ओहट, स्त्री. = ओट.

ओहदा, पु. ಪದವಿ; ಸ್ಥಾನ; ಹುದ್ದೆ.

ओहदेदार, पु. ಹುದ್ದೆದಾರ, ಅಧಿಕಾರಿ.

ओहना, सक्रि. ತೆನೆ ಬಡಿ, ಒಕ್ಕು.

ओहार, पु. ಗಾಡಿ ಅಥವಾ ಪಲ್ಲಕ್ಕಿಯ ಮೇಲೆ ಹಾಕಿರುವ ಬಟ್ಟೆ, ಚತ್ತು; ಪರದೆ, ಮರೆ.

ओहो, अव्य. ಓಹೋ!

औ

औंगना, अक्रि. = **ओंगना**.

औंगा, वि. ಮೂಕ, ಮೂಗ.

औंगी, स्त्री. ಮೂಗತನ; ಮೌನ.

औंघना, औंघाना, अक्रि. ತೂಕಡಿಸು, ಜೂಗಳಿಸು.

औंघाई, स्त्री. ತೂಕಡಿಕೆ, ಜೊಂಪು.

औंजना, अक्रि. ಬೇಸರಗೊಳ್ಳು, ಚಿಟ್ಟು ಹಿಡಿ. सक्रि. ಎರೆ, ಸುರಿ.

औंठ, स्त्री. ಅಂಚು, ದಡ; ಏರಿ, ಕಟ್ಟೆ; ಪಾತ್ರೆಯ ಕಂಠ, ಅರುಗು.

औंड, पु. ಗುದ್ದಲಿ ಕೆಲಸ ಮಾಡುವವ, ಮಣ್ಣೊಡ್ಡ.

औंडा, वि. ಆಳವಾದ, ಗಂಭೀರ.

औंदना, अक्रि. ವ್ಯಾಕುಲನಾಗು, ಕಾತರಿಸು.

औंधना, अक्रि. ಕವುಚಿ ಬೀಳು; ಕವಿ. सक्रि. ಬೋರಲಿಸು, ಮಗುಚು.

औंधा, पु. ಕಡಲೆ ಹಿಟ್ಟಿನಿಂದ ಮಾಡಿದ ಕಜ್ಜಾಯ. वि. ಮಗುಚಿ ಬಿದ್ದ, ಬೋರಲು ಬಿದ್ದ; ಕೆಳಗಿನ. औंधा पडना = ಬೋರಲು ಬೀಳು, ಮುಖ ಕೆಳಗಾಗಿ ಬೀಳು, ಮುಖಡಿ ಬೀಳು.

औंधाना, सक्रि. ಮಗುಚು, ಬೋರಲಿಸು; ಕವುಚು, ಹೊರಳಿಸು.

औंला जौंला, पु. ಅವಳಿ ಜವಳಿ ಮಕ್ಕಳು, ಯುಮಳರು.

औंसा, पु. = अनवांसा.

औ, अव्य. = और.

औक़ात, पु. ಕಾಲ, ಸಮಯ; ಕಾಲಕ್ಷೇಪ. स्त्री. ಸ್ಥಿತಿ; ಅಂತಸ್ತು, ಪದವಿ.

औगी, स्त्री. ಚಾವಟಿ, ಚಬುಕು, ಕಶೆ, ಕೊರಡ, ಬಾರುಗೋಲು; ಅಂಕುಶ, ಮೃಗಗಳನ್ನು ಹಿಡಿಯಲು ಮುಚ್ಚಿದ ಕುಳಿ, ಕಡ್ಡ, "ಕೆಡ್ಡಾ"; ಪಾದರಕ್ಷೆಗಳಿಗೆ ಕಟ್ಟುವ ಗೋಟು, ಅಂಚು.

औगुन, पु. ಅವಗುಣ, ದೋಷ, ದುರ್ಗುಣ.

औघट, वि. ಕಠಿಣವಾದ, ವಿಕಟ; ಅಂದಗೆಟ್ಟ.

औघड़, पु. ಅಘೋರ ಪಂಥದವ, (=अघोरी), ಸ್ವೇಚ್ಛಾಚಾರಿ. वि. ಅಸಂಬದ್ಧ, ಅಡ್ಡಾತಿಡ್ಡಿ.

औघड़िन, स्त्री. "औघड़" का स्त्री. रूप.

औघर, वि. ಅಂದಗೆಟ್ಟ; ಹೊಲಸು; ವಿಲಕ್ಷಣವಾದ, ವಿರೂಪವಾದ.

औचक, क्रिवि. ಅಕಸ್ಮಾತ್ತಾಗಿ.

औचट, स्त्री. ತೊಂದರೆ, ಸಂಕಟ. क्रिवि. ಅಕಸ್ಮಾತ್ತಾಗಿ; ತಪ್ಪಿನಿಂದ, ಕೈತಪ್ಪಿ.

औज, स्त्री. ಔನ್ನತ್ಯ, ಎತ್ತರ.

औज़ार, पु. ಸಲಕರಣೆ, ಆಯುಧ, ಮುಟ್ಟು, ಹತ್ಯಾರು; ಪಾಪ, ಅಪರಾಧ

औझड़, औझर, क्रिवि. ಎಡೆಬಿಡದೆ, ನಿರಂತರವಾಗಿ. स्त्री. ಢಿಕ್ಕಿ, ಧಕ್ಕೆ, ನುಗ್ಗು.

औटना, सक्रि. ಕಾಯಿಸು (ಹಾಲು), ಕಾಸು. अक्रि. ಕಾಯು (ಹಾಲು), ಕುದಿ.

औटाना, सक्रि. (ಹಾಲು) ಕಾಯಿಸು.

औठपाव, पु. ಉಪದ್ರವ, ಕಿರುಕುಳ.

औढर, वि. ಸ್ವೇಚ್ಛಾಚಾರಿ, ನಿರಂಕುಶ.

औदसा, स्त्री. ಅಪದೆಶೆ, ಕೆಟ್ಟಕಾಲ.
औद्योगिक, वि. ಕೆಲಸಗಾರಿಕೆಯ, ವೃತ್ತಿಯ, ಕೈಗಾರಿಕೆಯ, ಕಾಮಕಾರಿಯ, ಹೋರೆಯ. औद्योगिक शिक्षण = ವೃತ್ತಿ ಶಿಕ್ಷಣ.
औना पौना, वि. ಅರ್ಧಂಬರ್ಧ, ಕೊಂಚ. क्रिवि. ಹೆಚ್ಚು ಕಡಿಮೆ. औने पौने बेचना = ಅರರದು ಮೂರಕ್ಕೆ ಮಾರು, ಅರರದು ಮೂರಕ್ಕೆ ಸೀದು ಬಿಡು, ಅಡಾತೀಡಾ ಮಾರು.
औपनिवेशक, वि. ವಸಾಹತಿನ, ವಲಸೆಗೆ ಸಂಬಂಧಪಟ್ಟ.
औपन्यासिक, वि. ಕಾದಂಬರಿಯ; ಅದ್ಭುತವಾದ. पु. ಕಾದಂಬರಿ ಬರೆಯುವವ, ಕಾದಂಬರಿಕಾರ.
औबाश, पु. ಉಂಡಾಡಿ, ಲಂಪಟ, ಪಟಿಂಗ, ಪೋಕರಿ, ಕಾಕಪೋಕರು.
औबाशी, स्त्री. ಪಟಿಂಗತನ, ಪೋಕರಿತನ, ತುಂಟತನ.
औरंग, पु. ಸಿಂಹಾಸನ; ಬುದ್ಧಿ, ತಿಳಿವು; ಮೋಸ, ದಗ; ಗೆದ್ದಲು.
और, अव्य. ಮತ್ತು, ಹಾಗೂ, ಇನ್ನೂ. वि. ಇತರ, ಬೇರೆಯ; ಹೆಚ್ಚು, ಅಧಿಕ. और ही = ಬೇರೆ, ಪ್ರತ್ಯೇಕ.
औरत, स्त्री. ಸ್ತ್ರೀ, ಹೆಂಗಸು; ಮಡದಿ, ಹೆಂಡತಿ, ಪತ್ನಿ, ಕುಟುಂಬ.
औरब, पु. ವಕ್ರಗತಿ; ತೊಡಕು, ಸಿಕ್ಕು; ಕಪಟ.
औला, वि. ಉತ್ತಮ, ಶ್ರೇಷ್ಠ.
औलाद, स्त्री. ಸಂತಾನ, ಮಕ್ಕಳುಮರಿ; ವಂಶ; ವಂಶಪರಂಪರೆ.
औला मौला, वि. ಸ್ವೇಚ್ಛಾಚಾರಿ.
औलिया, पु. ಸಿದ್ಧಿ ಹೊಂದಿದ ಫಕೀರರು.
औवल, वि. ಮೊದಲನೆಯವ; ಉತ್ತಮವಾದ. पु. ಪ್ರಾರಂಭ, ಮೊದಲು.
औसत, वि. ಮಧ್ಯಮವಾದ, ನಡುತರ, ಸಾಧಾರಣ. पु. ಮಧ್ಯಮಾನ, ಸರಾಸರಿ.
औसती, वि. ಮಧ್ಯಮ; ಸುಮಾರಾದ, ನಡುತರದ.
औसर, पु. ಸಮಯ; ಅವಕಾಶ; ಸಂದರ್ಭ.
औसना, अक्रि. ಸೆಕೆಯಾಗು; ಹಳಸು, ಕೊಳೆ, ಮುಗ್ಗು.
औसान, पु. ಕೊನೆ, ಪರಿಣಾಮ; ಪ್ರಜ್ಞೆ, ಚೇತರಣೆ; ಧೈರ್ಯ.
औसाफ़, स्त्री. ಗುಣಗಳು; ಯೋಗ್ಯತಾಂಶಗಳು.
औसेर, पु. ಚಿಂತೆ, ವ್ಯಾಕುಲ, ವಿಳಂಬ.

क

कंकड़, पु. ಕಲ್ಲು; ಹರಳು; ಚಿಣಚುಕಲ್ಲು; ಜಲ್ಲಿ, ನೊರಜುಗಲ್ಲು; ಒಣಗಿದ ಹೊಗೆಸೊಪ್ಪು. कंकड़ पत्थर = ನುರುಜು ಗಲ್ಲು.
कंकड़ी, स्त्री. "कंकड़" का अल्प रूप.
कंकड़ीला, वि. ಜಲ್ಲಿಕಲ್ಲುಮಯವಾದ,

ನುರುಜಾದ, ಗರಸು (ನೆಲ).

कंकण, कंकन, पु. ಕಂಕಣ; ಕಡಗ; ಚಿನ್ನದ ಬಳೆ; ಕಂಕಣ ಸೂತ್ರ.

कंकर, पु. =कंकड़.

कंकाल, पु. ಎಲುಬಿನ ಗೂಡು, ಅಸ್ಥಿ ಪಂಜರ.

कंकोल, पु. ಒಂದು ಬಗೆಯ ಗಂಧ ಮೆಣಸು.

कंकवारी, स्त्री. ಕಂಕುಳು ಕುರು.

कंखौरी, स्त्री. ಕಂಕುಳು; ಕಂಕುಳಲ್ಲಿನ ಕುರು, ಕಂಕುಳು ಕುರು.

कंगन, कंगना, पु. ಕಂಕಣ.

कंगनी, स्त्री. ಸಣ್ಣ ಕಂಕಣ; ಗೋಡೆಯ ಕುಂಬೆ, "ಕಾರ್ನಿಸ್"; ಹಲ್ಲುಗಳುಳ್ಳ ಚಕ್ರ; ನವಣೆ, ನವಣೆಯಕ್ಕಿ.

कंगरोड, पु. ಬೆನ್ನು ಹುರಿ, ಕಶೇರುಕ; ನೀರು ಕೋಳಿ.

कंगाल, वि. ಬಡವ, ದರಿದ್ರ.

कंगाली, स्त्री. ಬಡತನ, ದಾರಿದ್ರ್ಯ.

कंगूड़ी, स्त्री. ಕಿವಿಯ ಆಲೆ, ಕಿವಿಯ ತಮ್ಮೆ, ಕರ್ಣಪಾಲಿ.

कंगूरा, पु. ಶಿಖರ, ತುದಿ; ಕೋಟೆಯ ತೆನೆ, ಗೋಡೆಯ ಕುಂಬೆ, ಕಂಗೋರೆ, ಕಪಿಶೀರ್ಷ; "ಕಾರ್ನಿಸ್"; ಕಲಶ; ಕಪಿಶೀರ್ಷಗಳುಳ್ಳ ಗೋಡೆ.

कंघा, पु. ಬಾಚಣಿಗೆ, ಹಣಿಗೆ; ನೆಯ್ಗೆಯವರ ಕುಂಚ, ಕುಂಚಿಗೆ.

कंघी, स्त्री. ಬಾಚಣಿಗೆ, ಹಣಿಗೆ; ಕುಂಚ, ಕುಂಚಿಗೆ. कंघी करना = ಬಾಚು, ಹಿಕ್ಕು.

कंघी चोटी, स्त्री. ಜಡೆಯ ಸಿಂಗಾರ.

कंघेरा, पु. ಬಾಚಣಿಗೆ ಮಾಡುವವ ಅಥವಾ ಮಾರುವವ.

कंघेरिन, पु. ಬಾಚಣಿಗೆ ಮಾರುವವಳು.

कंचन, पु. ಬಂಗಾರ, ಚಿನ್ನ; ನಾಯಕಸಾನಿಯರ ಒಂದು ಒಳಜಾತಿ. कंचनचूर = ಭಂಗಾರಕಡ್ಡಿ ಅಕ್ಕಿ.

कंचनी, स्त्री. ನಾಯಕಸಾನಿ, ನರ್ತಕಿ.

कंचुक, पु. **कंचुकी**, स्त्री. ರವಿಕೆ, ಕುಪ್ಪಸ.

कंचेरा, पु. ಕಂಚುಗಾರ, ಬೋಗಾರ.

कंचेरिन, स्त्री. ಕಂಚುಗಾತಿ.

कंजई, वि. ಕಂದು ಬಣ್ಣದ.

कंजड़, कंजर, पु. ಕೊರಮ.

कंजड़िन, कंजड़ी, कंजरी, स्त्री. ಕೊರವಿತಿ, ಕೊರವಂಜಿ.

कंजा, पु. ಹೊಂಗೆ ಮರ, ಹುಲಿಗಿಲು. वि. ಖಾಕಿ ಬಣ್ಣದ; ಕಂದು ಬಣ್ಣದ.

कंजिया, स्त्री. ಕಣ್ಣು ಕುಟಿಕೆ.

कंजूस, पु. ಲೋಭಿ, ಜಿಪುಣ, ಕೃಪಣ, ಜೀನ. कंजूस मक्खीचूस = ಅತಿ ಜಿಪುಣ, ಕಲ್ಲಿನಲ್ಲಿ ನಾರು ತೆಗೆಯುವವ.

कंजूसी, स्त्री. ಕೃಪಣತ್ವ, ಜಿಪುಣತನ.

कंटक, पु. ಮುಳ್ಳು; ಬಾಧಕ.

कंटकारी, स्त्री. ನೆಲಗುಳ್ಳ, ಹೆಗ್ಗುಳ್ಳ; ಎಲವ ಮರ, ಬೂರುಗ, ದೂದಿ ಹತ್ತಿ.

कंटर, पु. ದೊಡ್ಡ ಗಾಜಿನ ಪಾತ್ರೆ. वि. ಲೋಭಿ.

कंटिया, स्त्री. ಚಿಕ್ಕ ಮುಳ್ಳು, ಕೊಕ್ಕೆ;

ಮೀನು ಹಿಡಿಯುವ ಕೊಕ್ಕೆ, ಗಾಳ, ಬಡಿಶ; ಪಾತಾಳಗರಡಿ; ತಿರುಪಿನ ಹೂ (ಆಭರಣ); ಎಣ್ಣೆಯ ಪಾತ್ರೆ

कंटीला, वि. ಮುಳ್ಳಿನ; ಮುಳ್ಳುಳ್ಳ.

कंठ, पु. ಕಂಠ, ಗಂಟಲು, ಕೊರಳು; ಗಂಟಲು ಮಣಿ, ಗೋಮಾಳೆ; ಧ್ವನಿ, ಸ್ವರ, ಶಾರೀರ; ದಡ; ಅಂಚು. कंठ फूटना = ಗಂಟಲು ಒಡೆ.

कंठमाला, पु. ಕಂಠಮಾಲೆ, ಹಾರ; ಗಂಟ್ಲುಮಾಳ, ಗಂಡಮಾಲೆ.

कंठला, पु. ಕಂಠಮಾಲೆ, ಕಂಠೀ, ಟೀಕೆ.

कंठा, पु. ಕಂಠಹಾರ, ಕಂಠಮಾಲೆ; ಪಕ್ಷಿಗಳ ಕಂಠದ ಸುತ್ತಲೂ ಇರುವ ಗೆರೆ

कंठाग्र, वि. ಕಂಠಸ್ಥ, ಬಾಯಿಪಾಠವಾದ

कंठी, स्त्री. ಸಣ್ಣ ಮುತ್ತಿನ ಹಾರ; ತುಲಸಿ ಮಣಿಗಳ ಮಾಲೆ, ಕಂಠಿಕೆ; ಪಕ್ಷಿಗಳ ಕಂಠದಲ್ಲಿರುವ ವರ್ತುಲ. कंठी बांधना = ಶಿಷ್ಯನಾಗಿ ಮಾಡಿಕೊಳ್ಳು; ಗುಲಾಮನಾಗಿ ಮಾಡು.

कंडरा, पु. ರಕ್ತನಾಳ, ಧಮನಿ.

कंडा, पु. ಬೆರಣಿ, ಕುರುಳು, ಕುಳ್ಳು; ಒಣಗಿದ ವಿಷ್ಠೆ.

कंडारी, पु. ಅಂಬಿಗ, ದೋಣಿಯವ.

कंडाल, स्त्री. ಒಂದು ವಾದ್ಯ, ಸನಾದಿ; ನೀರಿನ ದೊಡ್ಡ ಪಾತ್ರೆ, ಗಂಗಾಳ.

कंडी, स्त्री. ಬೆರಣಿ; ಒಣಗಿದ ಮಲ.

कंडील, स्त्री. ಲಾಂದರ, ಕಂದೀಲು, ಲಾಟೀನು.

कंडु, स्त्री. ಕಜ್ಜಿ, ತುರಿ.

कंडेरा, पु. ಅರಳೆ ಎಕ್ಕುವವ.

कंडौर, पु. ಬೆರಣಿ ತಟ್ಟುವ ಸ್ಥಳ; ಬೆರಣಿಯ ರಾಶಿ, ಕುಳ್ಳಿನ ರಾಶಿ.

कंथा, पु. ಕಂಥೆ, ಚಿಂದಿ, ಬೊಂತೆ.

कंथी, पु. ಬೊಂತೆಗ; ಜೋಗಿ.

कंद, पु. ಕಂದ, ಗೆಡ್ಡೆ.

क्रंद, पु. ಕಲ್ಲುಸಕ್ಕರೆ.

कंदर, कंदरा, स्त्री. ಗುಹೆ, ಗವಿ.

कंदल, पु. ಹಗಿನು, ಗೋಂದು, ಅಂಟು.

कंदला, पु. ಗವಿ, ಗುಹೆ; ಕೊರಕಲು, ದರಿ; ಬಂಗಾರ ಬೆಳ್ಳಿ ಮುಂತಾದುವುಗಳ ಗಟ್ಟಿ, ಪಾಳ; ಬಂಗಾರದ ಕಂಬಿ.

कंदसार, पु. ಜಿಂಕೆ, ಚಿಗರಿ, ಎರಲೆ.

कंदा, पु. ಗೆಡ್ಡೆ; ಗೆಣಸು; ಕೆಸುಗೆಡ್ಡೆ. वि. ಕೆತ್ತಿದ, ಕೊರೆದ. कंदा करना = ಕೆತ್ತು; ನಕಾಸಿ ಮಾಡು.

कंदाकार, पु. ಕೆತ್ತುವವ; ನಕಾಸಿ ಕೆಲಸ ಮಾಡುವವ.

कंदासा, पु. ಶಿಲಾಸ್ತಂಭ, ಕಂಬ.

कंदील, पु. ಲಾಂದ್ರ, ಕಂದೀಲು, ಲಾಟೀನು.

कंदीलिया, स्त्री. ದೀಪಸ್ತಂಭ, ಬೆಳಕು ಗೂಡು.

कंदुक, पु. ಚೆಂಡು; ಅಡಕೆ; ದಿಂಬು.

कंदैल, वि. ಮಲಿನವಾದ, ಮಾಸಿದ.

कंदोरा, पु. ಉಡದಾರ.

कंधनी, स्त्री. ಉಡದಾರ, ನೇವಳ; ಒಡ್ಯಾಣ, ಡಾಬು.

कंधा, पु. ಹೆಗಲು; ಬಾಹು, ಭುಜ. कंधा देना = ಹೆಣ ಹೊರು; ಸಹಾಯ ಮಾಡು, ಹೆಗಲುಕೊಡು.

कंधावर, स्त्री. ಎತ್ತಿನ ಕುತ್ತಿಗೆಯ ಮೇಲಿಡುವ ನೊಗದ ಭಾಗ; ಹೆಗಲ ಮೇಲೆ ಹಾಕಿಕೊಳ್ಳುವ ವಸ್ತ್ರ.

कंधेला, पु. ಅರ್ಧ ಸೆರಗು, ಮೇಲು ಸೆರಗು.

कंधेली, स्त्री. ಸಬರ, ಜೀನು, ತಡಿ.

कंप, पु. **कंपकंपी**, स्त्री. **कंपन**, पु. ನಡುಗುವಿಕೆ; ನಡುಕ, ಕಂಪನ.

कंपना, सक्रि. ನಡುಗು, ಕಂಪಿಸು, ಅದುರು, ತತ್ತರಿಸು.

कंपहा, वि. ನಡುಗುವ, ಕಂಪಿಸುವ.

कंपा, पु. ಪಕ್ಷಿಗಳನ್ನು ಹಿಡಿವ ಅಂಟು ಸವರಿದ ಕೋಲು.

कंपाना, सक्रि. ನಡುಗಿಸು, ಅದುರಿಸು.

कंपित, वि. ನಡುಗಿದ; ನಡುಗುವ, ಕಂಪಿಸುವ.

कंपू, पु. ದಂಡು ಇಳಿಯುವ ಸ್ಥಳ, ಬೀಡು, ಪಾಳ್ಯ; ಶಿಬಿರ, ಡೇರೆ.

कंबल, पु. ಕಂಬಳಿ; ಕಂಬಳಿ ಹುಳು.

कंवल, पु. ತಾವರೆ, ಕಮಲ; ಕಾಮಾಲೆ

कंवलगट्टा, पु. ತಾವರೆ ಬೀಜ.

कंवलबाई, **कंवलबाद**, स्त्री. ಕಾಮಾಲೆ.

कंस, पु. ಕಂಚು; ಕಂಚಿನ ಪಾತ್ರೆ; ತಾಳ, ಕೈತಾಳ.

कई, वि. ಅನೇಕ, ಹಲವು, ಬಹಳ. कई एक=ಬಹುತೇಕ, ಹಲವಾರು, ಕೆಲವು.

ककड़ी, स्त्री. ಸೌತೆಕಾಯಿ.

ककौंदा, पु. ಒಂದು ಹಣ್ಣು.

ककहरा, पु. ಕಕಾರದಿಂದ ಹಕಾರದ ವರೆಗಿನ ಅಕ್ಷರಗಳು, ವ್ಯಂಜನಾಕ್ಷರ ಗಳು, ಹಲ್; ಅಕ್ಷರಗಳು, ವರ್ಣ ಮಾಲೆ; ಅಕ್ಷರಾಭ್ಯಾಸ.

कका, पु. ಚಿಕ್ಕಪ್ಪ, ಕಕ್ಕ.

ककी, स्त्री. ಚಿಕ್ಕಮ್ಮ, ಕಕ್ಕಿ.

ककुद, पु. ರಾಜ ಚಿಹ್ನೆ; ಶಿಖರ, ತುದಿ; ಎತ್ತಿನ ಬೆನ್ನಿನ ಮೇಲಿನ ಗೋಪುರ, ಗುಬ್ಬ, ಅಂಸಕೂಟ, ಹಿಳಿಲು.

ककेड़ा, पु. ಪಡವಲಕಾಯಿ.

ककेरा, वि.=चचेरा.

ककोड़ा, पु.=खेखसा.

ककोरना, सक्रि. ತೋಡು; ಹೆರೆ; ಕೆದಕು, ಕೆದರು, ಪರಚು.

कक्कड़, पु. ಹುಕ್ಕಾವಿಗೆ ಉಪಯೋಗಿಸುವ ಹೊಗೆಸೊಪ್ಪಿನ ಪುಡಿ.

कक्का, पु. ನಗಾರಿ, ಭೇರಿ; ಚಿಕ್ಕಪ್ಪ, ಕಕ್ಕ.

कक्ष, स्त्री. ತರಗತಿ, ವರ್ಗ, ಶ್ರೇಣಿ; ಕಂಕುಳು; ಗ್ರಹಪಥ; ಪರಿಧಿ.

कखरी, **कखौरी**, पु. ಕಂಕುಳು; ಕಂಕುಳಿನ ಕುರು.

कगर, पु. ದಡ, ಗದ್ದೆ ಬದುವು, ತೆವರು; ಏರಿ, ಅಂಚು; ಗೋಡೆ ಕಂಕಣ, ಗೋಲು; ಚುಂಚು ಲೋವೆ; ಗೋಡೆಯ ಕುಂಟೆ.

कगार, पु. ಎತ್ತರವಾದ ದಡ, ಏರಿ; ತೆವರು, ಮುರಡಿ, ದಿನ್ನೆ.

कच, पु. ಕೂದಲು; ಒಣಗಿದ ಹುಣ್ಣು, ಹಕ್ಕಳೆ, ಹಕ್ಕು.

कचक, स्त्री. ಕುಲುಕಾಟ, ಉಳುಕು.

कचकच, कचकिच, स्त्री. ಲೊಚ ಲೊಚ ಮಾತು, ಒದರಾಟ; ವಾಗ್ವಾದ.

कचकचाना, अक्रि. ಜಲ್ಲು ಕಡಿ; ಸುತ್ತಿಕೊಳ್ಳು, ಮುತ್ತಿಕೊಳ್ಳು.

कचकचाहट, स्त्री. ಲೊಚ ಲೊಚ ಮಾತು, ಒದರಾಟ.

कचकड़ा, पु. ಆಮೆಯ ಚಿಪ್ಪು.

कचकना, अक्रि. ತಿರುಗು, ಹೊರಳು; ಉಳುಕು; ನೋಯು.

कचकाना, सक्रि. ಉಳುಕಿಸು; ನೋಯಿಸು.

कचकोल, पु. ಭಿಕ್ಷಾಪಾತ್ರೆ, ಕಪಾಲ.

कचड़ा, पु. =कचरा.

कचड़िला, वि. ಅಂಜುಬುರುಕ, ಪುಕ್ಕಲು

कचनार, पु. ಕೋವಿದಾರ, ಕಂಚಿವಾಳ ಮರ.

कचपच, पु. ಗುಂಪು, ಸಂದಣಿ, ಜಂಗುಳಿ; ಒದರಾಟ, ವಾಗ್ವಾದ. वि. ಒತ್ತಾದ, ದಟ್ಟ, ನಿಬಿಡ.

कचपचिया, पु. ಕೃತ್ತಿಕಾ ನಕ್ಷತ್ರ.

कचपची, स्त्री. ಕೃತ್ತಿಕಾ ನಕ್ಷತ್ರ; ಚಮಕಿ ಬೊಟ್ಟು.

कचपन, पु. ಅಪಕ್ವ, ಹಸಿ, ಆಮ.

कचर-कचर, स्त्री. ಲೊಚ ಲೊಚ ಶಬ್ದ; ಕಚಪಿಚಿ.

कचरकूट, पु. ಬಡಿಯುವಿಕೆ, ಹೊಡೆತ, ಬಡಿತ; ಕಂಠ ಪೂರ್ತಿ (ಊಟ).

कचरा, पु. ಕಕ್ಕರಿಕೆ ಕಾಯಿ, ಎಳೆ ಸೌತೆಕಾಯಿ; ಕಸಕಡ್ಡಿ, ಕಚರಾ, ಕಚಡ; ಸಮುದ್ರದ ಪಾಚಿ.

कचरी, स्त्री. ಒಂದು ಜಾತಿಯ ಕಕ್ಕರಿಕೆ ಹಣ್ಣು; ಬಾಳಕ; ಉಪ್ಪೇರಿ; ಹೊಟ್ಟೆನೊಂದಿಗಿರುವ ಬೇಳೆ.

कचली, स्त्री. ಹೇಡಿ ಮಣ್ಣು; ಕುಂಬಾರ ಮಣ್ಣು.

कचलोन, पु. ಒಂದು ಬಗೆ ಉಪ್ಪು, ಕಾಚ ಲವಣ.

कचलोहिया, कचलोही, स्त्री. ಹದ ಮಾಡದ ಕಬ್ಬಿಣ.

कचलोहू, पु. ಕೀವಿನೊಂದಿಗೆ ಬಸಿವ ರಸಿಕೆ, ಲಸಿಕೆ.

कचवांसी, स्त्री. ಜಮೀನಿನ ಒಂದು ಅಳತೆ. ನೋಡಿ - **बीघा**.

कचहरी, स्त्री. ಸಭೆ, ಕೂಟ; ಒಡ್ಡೋಲಗ, ರಾಜಸಭೆ; ನ್ಯಾಯಾಸ್ಥಾನ, ಕೋರ್ಟು; ಆಫೀಸು, ಕಛೇರಿ, ಕಾರ್ಯಾಲಯ.

कचाई, स्त्री. ಅಪಕ್ವ, ಹಸಿ; ಅಜೀರ್ಣ; ಅನುಭವವಿಲ್ಲದಿರುವಿಕೆ.

कचाकची, स्त्री. ಜಗ್ಗಾಟ, ಕಚ್ಚಾಟ.

कचाना, अक्रि. ಹಿಮ್ಮೆಟ್ಟು, ಹೆದರು.

कचायंध, स्त्री. ಕಚ್ಚಾ ವಸ್ತುವಿನ ವಾಸನೆ.

कचारना, सक्रि. ಬಟ್ಟೆ ಒಗೆ.

कचालू, पु. ಶ್ಯಾವೆ ಗೆಡ್ಡೆ, ಕೆಸು; ಒಂದು ಬಗೆಯ ಕಾರದ ತಿಂಡಿ.

कचिया, पु. ಕುಡುಗೋಲು.

कचूमर, पु. ಒಂದು ಬಗೆಯ ಕಹಿಹಣ್ಣು; ಉಪ್ಪಿನ ಕಾಯಿಗೆ ಹೆಚ್ಚಿದ ಮಾವಿನ ಕಾಯಿ ಹೋಳು. ಅಥವಾ ಇತರ

ಕಾಯಿ ಚೂರು; ಉಪ್ಪಿನಕಾಯಿ. कचूमर निकालना = ಉಪ್ಪಿನ ಕಾಯಿಗೆ ಹೆಚ್ಚು; ಚೂರು ಚೂರಾಗಿ ಹೆಚ್ಚು; ಚೆನ್ನಾಗಿ ಬಡಿ.

कचोना, सक्रि. ಚುಚ್ಚು, ತಿವಿ.

कचोरा, पु. ಬಟ್ಟಲು.

कचौड़ी, कचौरी, स्त्री. ಒಂದು ವಿಧದ ಪೂರಿ, ಕರ್ಜಿಕಾಯಿ, ಕರಿಗಡುಬು.

कच्चा, वि. ಕಚ್ಚಾ, ಹಸಿ, ಮಾಗದ; ಅಪಕ್ವವಾದ; ಬೇಯದ; ಅಪೂರ್ಣವಾದ; ಅನುಭವವಿಲ್ಲದ; ಮಣ್ಣಿನಿಂದಾದ (ಮನೆ); ಕಡಮೆಯಾದ, ಪಿಚ್ಚೆ (ಸೇರು); ಅಪ್ಪಟವಲ್ಲದ, ಮಟ್ಟ (ಬೆಳ್ಳಿ). पु. ದೂರ ದೂರವಾಗಿ ಎಳೆ ಹಾಕಿದ ಹೊಲಿಗೆ, ದಾಟು ಹೊಲಿಗೆ, ಟಾಕಾ; ಪಡಿಯಚ್ಚು, ಮಾದರಿ; ದವಡೆ.

कच्चा चिट्ठा, पु. ಒಳಗಣ ವೃತ್ತಾಂತ, ಗುಟ್ಟು, ರಹಸ್ಯ.

कच्चा बच्चा, पु. ಮಕ್ಕಳು ಮರಿ; ಪಿಂಡ, ಭ್ರೂಣ.

कच्ची बही, स्त्री. ಕರಡು ಲೆಕ್ಕದ ಪುಸ್ತಕ.

कच्ची रसोई, स्त्री. ಹಾಲು ಅಥವಾ ತುಪ್ಪ ಸೇರಿಸದ ಅಡಿಗೆ, ಕದನ್ನ.

कच्ची सड़क, स्त्री. ಮಣ್ಣು ರಸ್ತೆ.

कच्चू, स्त्री. ಶ್ಯಾವೆ ಗಡ್ಡೆ, ಕೆಸುವು; ಮರಸಣಿ

कच्छ, पु. ದಡ; ಸಮುದ್ರದತೀರ; ಕರಾವಳಿ; ಕಚ್ಚೆ.

कच्छा, पु. ಒಟ್ಟಾಗಿ ಸೇರಿಸಿ ಕಟ್ಟಿದ ಎರಡು ದೋಣಿಗಳು, ಜಾಗಾಲು.

कच्छू, स्त्री. ಕಜ್ಜಿ, ತುರಿ. पुं. ಆಮೆ.

कछनी, स्त्री. ಕಚ್ಚೆ; ಪುಟಗೋಸಿ, ಲಂಗೋಟಿ; ಕಾಚಾ, ಚಡ್ಡಿ.

कछना, कछाना, अक्रि. ಕಚ್ಚೆ ಕಟ್ಟು.

कछार, पु. ಕರಾವಳಿ, ಮೆಕ್ಕಲು; ದಡ.

कछारना, सक्रि. ಒಗೆ, ತೊಳೆ; ಗಲಬರಿಸು; ಜಾಲಾಡು.

कछारी, स्त्री. ಮಡಕೆ, ಬಾನೆ.

कछुआ, पु. **कछुई,** स्त्री. ಆಮೆ, ಆವೆ.

कछौटा, कछौटी, स्त्री. ಲಂಗೋಟಿ, ಪುಟಗೋಸಿ, ಕಾಚಾ; ಕಚ್ಚೆ ಸೀರೆ

कज, पु. ಡೊಂಕು, ವಕ್ರ; ದೋಷ, ಕೊರತೆ. कज चश्म = ಮೆಳ್ಳೆಗಣ್ಣ.

कज़, पु. ರೇಷ್ಮೆ, ರೇಶಿಮೆ, ಪಟ್ಟೆ.

कजई, पु. ಲಗಾಮು, ಕಡಿವಾಣ, ಬಾಯಿ ಕಡಾಣಿ.

कजक, स्त्री. ಅಂಕುಶ.

कजदुम, पु. ವಕ್ರಪುಚ್ಛ, ಚೇಳು.

कजबहस, स्त्री. ಕುತರ್ಕ, ವಿತಂಡಾವಾದ.

कजरा, पु. ಕಾಡಿಗೆ, ಕಪ್ಪು, ಕುಡಿಕಪ್ಪು.

कजरारा, वि. ಕಪ್ಪಾದ; ಕರಿಯ.

कजरी, स्त्री. ಒಂದು ಬಗೆ ಹಾಡು.

कजरौटी, स्त्री. ಕಾಡಿಗೆಯ ಡಬ್ಬಿ.

कजलाना, अक्रि. ಕಪ್ಪಾಗು; ಆರು, ನಂದು. सक्रि. ಕಪ್ಪು ಹಚ್ಚು.

कजली, स्त्री. ಮಸಿ; ಕಪ್ಪುಗಣ್ಣಿನ ಹಸು; ಒಂದು ಹಬ್ಬ; ಒಂದು ತರಹದ ಹಾಡು; ಕಬ್ಬು; ರಸಕರ್ಪೂರ.

कजलौटा, पु. **कजलौटी,** स्त्री.

ಕಾಡಿಗೆಯ ಡಬ್ಬಿ, ಕಾಡಿಗೆ ಭರಣಿ.

क़ज़ा, स्त्री. ಮೃತ್ಯು, ಸಾವು, ನಿಧನ.

कज़ाक, पु. ದರೋಡೆಗಾರ, ಸುಲಿಗೆ ಕಾರ, ಕೊಳ್ಳೆಗಾರ, ಕಾಟಕ.

कज़ाकी, स्त्री. ದರೋಡೆ, ಸುಲಿಗೆ, ಲೂಟಿ; ಮೋಸ.

कज़ात, स्त्री. ಅಪಮಾನ; ಕಲಂಕ.

कजावह, **कजावा**, पु. ಒಂಟೆಯ ತಡಿ ಅಥವಾ ಜೀನು.

क़ज़िया, पु. ತರ್ಕ; ಜಗಳ, ಕಲಹ, ವ್ಯಾಜ್ಯ. कज़िया दल्लाल = ಕಲಹ ಹುಟ್ಟಿಸುವವ.

कजी, स्त्री. ಡೊಂಕು, ವಕ್ರ; ದೋಷ, ಐಬು.

कज्जल, पु. ಕಾಡಿಗೆ, ಕಪ್ಪು; ಅಂಜನ

क़ज़्ज़ाक, पु. ಸುಲಿಗೆಕಾರ, ದರೋಡೆ ಗಾರ, ಕೊಳ್ಳೆಗಾರ.

क़ज़्ज़ाक़ी, स्त्री. ಸುಲಿಗೆ, ದರೋಡೆ, ಲೂಟಿ; ಮೋಸ.

कट, पु. ಗಂಡಸ್ಥಳ, ಕಣ್ತಲೆ; ಕಪ್ಪು ಬಣ್ಣ; ನೊದೆ ಹುಲ್ಲು, ಚೇಣ ಹುಲ್ಲು; ಮಂದಳಿಕೆ; ಹೆಣ; ಸುಡುಗಾಡು.

कटक, पु. ಸೇನೆ, ಪಡೆ; ಶಿಬಿರ; ಹುಲ್ಲು ಚಾಪೆ; ಕಡಗ; ಅಣಸು.

कटकई, स्त्री. ದಂಡು, ಪಡೆ, ಸೇನೆ.

कटकट, स्त्री. ಕಟಕಟ ಶಬ್ದ; ಲಟಾಪಟಿ, ಜಗಳ.

कटकटाना, अक्रि. ಹಲ್ಲು ಕಡಿ.

कटकटी, स्त्री. ವ್ಯಸನ; ಸಂಕಟ.

कटकना, पु. ಚೌಕಟ್ಟು, ಮಾದರಿ, ರೂಪು, ಹಂಚಿಕೆ.

कटखना, वि. ಕಡಿಯುವ, ಕಚ್ಚುವ (ನಾಯಿ). पु. ಉಪಾಯ, ತಂತ್ರ.

कटखने, पु. ಮಾದರಿಯ ಅಕ್ಷರ, ಮಾನೆ, ಮೇಲ್ಪಂಕ್ತಿ; ಚಿತ್ರ ಕಲೆ; ಕೋಮು, ಪಂಗಡ.

कटखाना, सक्रि. ಕಚ್ಚು. ಕಡಿ; ಅಗಿ, ಮೆಲ್ಲು.

कटघरा, पु. ಮರದ ಪಂಜರ; ಕಟಕಟಿ, ಕಟಾಂಜನ.

कटजीरा, पु. ಕರೀ ಜೀರಿಗೆ, ಕಡ ಜೀರಿಗೆ.

कटड़ा, पु. ಎಮ್ಮೆ ಕರು.

कटती, स्त्री. ಮಾರಾಟ, ಕರಗುಪಡಿ; ವಜಾ; ರಿಯಾಯಿತಿ.

कटना, अक्रि. ಕತ್ತರಿಸಿ ಹೋಗು, ಕಿತ್ತು ಹೋಗು; ಕಟಿಕು, ಕಡಿ; ತೀರಿ ಹೋಗು; ಮಡಿ; (ಹೊತ್ತು) ಕಳೆ; ನಲಿದಾಡು; ದೊರಕು; ಗಿಟ್ಟು; ನಿಶ್ಶೇಷವಾಗಿ ಭಾಗಿಸಲ್ಪಡು.

कटनास, पु. ಚಾಷ ಪಕ್ಷಿ, ಕಿಕೀದಿವ.

कटनी, स्त्री. ಕಡಕತ್ತಿ, ಕತ್ತರಿ; ಕೊಯಿತ, ಕೊಯಿಲು, ಕಟಾವು.

कटफल, पु. ಒಂದು ಹಣ್ಣು, ಕಾಯ ಫಲ

कटर, वि. ಕಟು, ಕಡದು, ಕ್ರೂರ. पु. ಪಾಪಿ; ಒಂದು ಬಗೆ ದೋಣಿ; ಹಡಗು.

कटरा, पु ಅಂಗಡಿ ಬೀದಿ, ಸಂತೆಪೇಟೆ.

कटल्लू, पु. ಕಟುಕ, ಕಸಾಯಿ.

कटवाँ, वि. ಕತ್ತರಿಸಿದ, ಕಡಿದ.

कटवाना, सक्रि. "कटना" का प्रे. रूप.

कटहर, कटहल, पु. ಹಲಸಿನ ಮರ ಮತ್ತು ಹಣ್ಣು.

कटहरा, पु. =कटघरा.

कटहा, वि. ಕಚ್ಚುವ (ನಾಯಿ).

कटा, स्त्री. ಕೊಲೆ, ಹತ್ಯ, ಖೂನಿ.

कटाई, स्त्री. ಕತ್ತರಿಸುವಿಕೆ, ಕಡತ; ಕೊಯಿಲು, ಕಟಾವು, ಸುಗ್ಗಿ; ಕಡಿಯುವುದರ ಕೂಲಿ; ಕೊಯ್ಯುವುದರ ಕೂಲಿ.

कटाकट, पु. ಕಟಕಟ ಶಬ್ದ; ಹೊಡೆದಾಟ; ಕಚ್ಚಾಟ. क्रिवि. ಕಟಕಟ ಎನ್ನುತ್ತಾ.

कटाकटी, स्त्री. ಹೊಡೆದಾಟ, ಮಾರಾಮಾರಿ, ಲಟಾಪಟಿ; ನರಹತ್ಯ.

कटाक्ष, स्त्री. ಓರೆಗಣ್ಣಿನ ನೋಟ, ಕುಡಿನೋಟ; ಆಕ್ಷೇಪಣೆ; ಜರಿಯುವಿಕೆ, ಕೊರಚಾಟ, ಗೇಲಿ.

कटान, पु. ಕಡಿಯುವಿಕೆ, ಕಡಿತ; ಕೊಯ್ಯುವುದು, ಕೊಯ್ಲು, ಕಟಾವು; ತಿವಿಗೋಲು, ಅಂಕುಶ.

कटाना, सक्रि. "काटना" का प्रे. रूप.

कटार, पु. ಕಠಾರಿ, ಸುರಗಿ, ಬಾಕು; ಕಾಡು ಬೆಕ್ಕು.

कटारिया, पु. ಕಠಾರಿ ಆಕಾರದ ಪಟ್ಟಿಗಳುಳ್ಳ ರೇಷ್ಮೆ ವಸ್ತ್ರ.

कटारी, स्त्री. ಸಣ್ಣ ಖಡ್ಗ, ಸಣ್ಣ ಕಠಾರಿ.

कटाल, पु. ಜಲಪ್ರವಾಹ, ಹೊಯಿಲು.

कटाव, पु. ದಡ, ಏರಿ, ಕಟ್ಟೆ; ಡೊಗರು, ಕೊರಕಲು; ಕೆತ್ತುವಿಕೆ, ಕತ್ತರಿಸುವಿಕೆ; ಕೆತ್ತನೆ ಕೆಲಸ; ಕಸೂತಿ ಕೆಲಸ.

कटावन, पु. ಕೊಯ್ಯುವಿಕೆ, ಕೊಯ್ದ ಅಥವಾ ಕತ್ತರಿಸಿದ ಚೂರು, ಚಕ್ಕೆ.

कटास, पु. ಕಾಡು ಬೆಕ್ಕು.

कटाह, पु. ಕಡಾಯಿ, ಕಳಸಿಗೆ, ಕೊಪ್ಪರಿಗೆ; ಬಾಣಲಿ; ಗುಡಿಸಲು; ಬಾವಿ; ಎಮ್ಮೆಕರು; ಆಮೆಯ ಚಿಪ್ಪು.

कटि, स्त्री. ನಡು, ಸೊಂಟ, ಟೊಂಕ; ಗಂಡಸ್ಥಲ.

कटिबंध, पु. ನಡುಕಟ್ಟು; ಉಷ್ಣವಲಯವೇ ಮೊದಲಾದ ಭೂಮಿಯ ವಿಭಾಗಗಳು, ಭೂಕಟಿಬಂಧ.

कटिबद्ध, वि. ಟೊಂಕ ಕಟ್ಟಿದ, ಸಿದ್ಧ.

कटिया, स्त्री. =कंटिया.

कटीला, वि. ಮುಳ್ಳು ಮುಳ್ಳಾದ; ಚುಚ್ಚುವ, ಕಡು; ಚುರುಕಾದ; ರಮ್ಯವಾದ; ಧೈರ್ಯವಾದ.

कटु, वि. ಖಾರವಾದ; ತೀಕ್ಷ್ಣವಾದ; ಕ್ರೂರವಾದ.

कटुता, स्त्री. ಖಾರ; ತೀಕ್ಷ್ಣತೆ.

कटूसी, स्त्री. ಅಶ್ಲೀಲತೆ.

कटेरी, स्त्री. ಗೊಳಗೊಳಿಕೆ.

कटैया, पु. ಕಡಿಯುವವ, ಕಟುಕ. स्त्री. ಒಂದು ಬಗೆ ಹುಲ್ಲು.

कटोरदान, पु. ಮುಚ್ಚಳದ ಹಿತ್ತಾಳೆ ಪಾತ್ರೆ; ಕೊಳಗದಪ್ಪಲೆ, ಕವಳಿಗೆ.

कटोरना, अक्रि. ದುರುಗುಟ್ಟಿ ನೋಡು.

कटोरा, पु. ಬೋಗುಣಿ; ಕೊಳಗದಪ್ಪಲೆ, ಡಬರಿ.

कटोरी, स्त्री. ಬಟ್ಟಲು, ಬೋಗುಣಿ; ಲೋಟಾ; ಕತ್ತಿಯ ಹಿಡಿಯ ಮೇಲಿನ

ದುಂಡಾದ ಭಾಗ; ಸ್ತನವನ್ನು ಮುಚ್ಚುವ ರವಿಕೆಯ ಭಾಗ.

कटोल, पु. ತುರಚಿ ಗಿಡ, ನಸುಗುನ್ನಿ.

कटौती, स्त्री. ಉತ್ತಾರ, ಕಳೆತ; ವಟ್ಟ, ವಜಾ.

कट्टर, वि. ಕಚ್ಚುವ; ಮತಾಂಧನಾದ; ಛಲವಾದಿ. पु. ದವಡೆ.

कट्टा, वि. ಬಲಿಷ್ಠ; ದೃಢಗಾತ್ರ; ಕಟ್ಟುಮಸ್ತಾದ. पु. ಹೇನು; ಕುಚ್ಚು; ಕಟ್ಟು, ಕಂತೆ.

कट्ठा, पु. ಜಮೀನಿನ ಒಂದು ಅಳತೆ (=बिस्वा); ಐದು ಸೇರಿನ ಕೊಳಗ; ದಪ್ಪ ಗೋಧಿ, ಹೊಟ್ಟೆ ಗೋಧಿ.

कठंदर, पु. ಹೊಟ್ಟೆಯುಬ್ಬರ; ಮಹೋದರ; ಶೋಭೆ.

कठकड़, पु. ಬಾವಿಯ ಮೇಲಿನ ಚೌಕಟ್ಟು.

कठकेला, पु. ಕಲ್ಲು ಬಾಳೆ.

कठगुलाब, पु. ಕಾಡು ಗುಲಾಬಿ ಹೂ.

कठघरा, पु. =कटघरा.

कठजामुन, पु. ನಾಯಿನೇರಲೆ.

कठड़ा, पु. ಮರದ ಗೂಡು, ಪಂಜರ; ಮರದ ಪೆಟ್ಟಿಗೆ; ಮರದ ತೊಟ್ಟಿ, ಮರಿಗೆ; ಮರದ ತಟ್ಟೆ, ಪರಾತ.

कठपुतली, स्त्री. ಮರದ ಗೊಂಬೆ, ಪುತ್ಥಳಿ; ಸೂತ್ರದ ಬೊಂಬೆ.

कठफोड़वा, कठफोड़ा, पु. ಮರಕುಟಿಗನ ಹಕ್ಕಿ, ಬಡಗಿ ಹಕ್ಕಿ.

कठबंधन, पु. ಆನೆಯ ಕಾಲಿಗೆ ಕಟ್ಟುವ ಮರದ ಬಳೆ, ಕೋಳ; ಕಾಲುಕಟ್ಟು.

कठबगड़ा, पु. ದಡ್ಡ, ಗಮಾರ.

कठबिल्की, स्त्री. ಕಪ್ಪೆ.

कठबाप, पु. ಮಲತಂದೆ, ಬಲತಂದೆ.

कठबेल, पु. ಬೇಲದ ಹಣ್ಣು.

कठबेला, पु. ಕಾಡು ಮಲ್ಲಿಗೆ.

कठमलिया, पु. ಮರದಿಂದ ಮಾಡಿದ ಜಪಮಾಲೆ ಧರಿಸುವವ; ವೇಷಧಾರಿ ಸಾಧು, ಆಷಾಢಭೂತಿ.

कठमस्त, वि. ಗಟ್ಟಿಮುಟ್ಟಾದ, ಕಟ್ಟುಮಸ್ತಾದ, ಸೊಕ್ಕಿದ, ಮದಿಸಿದ.

कठमस्ती, स्त्री. ಕಟ್ಟುಮಸ್ತು; ಮದ.

कठरा, पु. =कठड़ा.

कठला, पु. ಕಂಠೀ, ಜೋಮಾಲೆ.

कठवैद्य, पु. ಅಳಲೆಕಾಯಿ ಪಂಡಿತ, ಅರೆ ವೈದ್ಯ.

कठहंसी, स्त्री. ಒಣ ನಗು, ಕಪಟ ನಗು.

कठार, पु. =कटार.

कठारी, कठाली, स्त्री. ಕೂವೆ, ಮೂಸೆ.

कठिन, वि. ಕಠಿಣ, ಕಷ್ಟ; ಗಟ್ಟಿ.

कठिनता, स्त्री. ಕಷ್ಟ, ಕಾಠಿಣ್ಯ; ಗಟ್ಟಿ.

कठिनाई, स्त्री. ಕಷ್ಟ, ತೊಂದರೆ.

कठिनी, स्त्री. ಲೇಖಣಿ, ಲೆಕ್ಕಣಿಕೆ.

कठिया, वि. ಕಠಿಣವಾದ, ಗಟ್ಟಿಯಾದ, ಗಟ್ಟಿಯಾದಸಿಪ್ಪೆಯುಳ್ಳ(ಬಾದಾಮಿ) पु. ಮರದ ತಟ್ಟೆ; ಬೋನು.

कठियाना, अक्रि. ಒಣಗಿ ಗಟ್ಟಿಯಾಗು.

कठुआना, अक्रि. ಒಣಗಿ ಗಟ್ಟಿಯಾಗು; ಬಿರುಸಾಗು, ಸೆಟೆ.

कठूमर, पु. ಕಾಡತ್ತಿ.

कठेठ, कठेठा, वि. ಗಟ್ಟಿಯಾದ;

ಗಟ್ಟಿ ಮಾಡಲ್ಪಟ್ಟ, ಬಲಿಷ್ಠ; ಕಟು.

कठोर, वि. ಕಠಿಣ; ಕ್ರೂರ; ಗಡುಸಾದ.

कठोरता, स्त्री. **कठोरपन**, पु. ಕಾಠಿಣ್ಯ; ಕ್ರೌರ್ಯ; ಗಡುಸು.

कठौता, पु. ಮರದ ತೊಟ್ಟಿ.

कठौती, स्त्री. ಮರದ ತೊಟ್ಟಿ, ಮರಿಗೆ; ಮರದ ತಟ್ಟೆ.

कड़, स्त्री. ಕುಸುಂಬೆ ಬೀಜ.

कड़क, स्त्री. ಕಡಕಡ ಶಬ್ದ, ಕಠೋರ ಶಬ್ದ; ಗರ್ಜನೆ; ಗುಡುಗು; ಗಡುಸು, ವೇದನೆ, ಪೀಡೆ; ತಳಮಳ; ಉರಿ.

कड़कड़, पु. ಛಿಕ್ಕಿ ಹೊಡೆಯುವ ಶಬ್ದ; ಘರ್ಷಣದ ಶಬ್ದ; ಮುರಿಯುವ ಶಬ್ದ.

कड़कड़ाना, अक्रि. ಕಡಕಡ ಅನ್ನು, ಸಿಡಿ; ಮುರಿ; ಹಲ್ಲು ಕಡಿ.

कड़कड़ाहट, स्त्री. ಕಡಕಡ ಶಬ್ದ; ಗರ್ಜನೆ

कड़कना, अक्रि. ಪಟಪಟ ಶಬ್ದ ಮಾಡು; ಮುರಿ; ಬಿರುಕು ಬಿಡು; ಹಂಗಿಸು, ಗದರಿಸು, ಜಬರಿಸು. कड़ककर बोलना = ಕಡುದಾಗಿ ಮಾತಾಡು, ಬಿರುಮಾತಾಡು.

कड़कनाल, पु. ದೊಡ್ಡ ಬಾಯಿಯ ತುಪಾಕಿ, ಫಿರಂಗಿ.

कड़क बिजली, स्त्री. ಕಿವಿಯ ಒಂದು ಆಭರಣ, ಚಂದ್ರಮುರು; ಜಾವಿಗೆ ತುಪಾಕಿ.

कड़का, **कड़खा**, पु. ಕಾಳಗದ ಕೂಗು, ರಣಗೀತೆ.

कड़खैत, पु. ಯುದ್ಧದಲ್ಲಿ ಸೈನಿಕರಿಗೆ ಹುರಿದುಂಬಿಸಲು ಪದಗಳನ್ನು ಹಾಡುವವ; ಪಾವಡಿಗ, ಮಾಗಧ.

कड़बी, **कड़वी**, स्त्री. ಜೋಳದ ಕೂಳೆ, ಜೋಳದ ಕಾಂಡ.

कड़ा, पु. ಕಡಗ; ಕಬ್ಬಿಣದ ಬಳೆ, ಕಡೆ; ಪಾರಿವಾಳ. वि. ಕಠಿಣ, ಗಡುಸಾದ; ದೃಢ; ಕ್ರೂರ; ತೀಕ್ಷ್ಣ; ಕಟು. कड़ी धूप = ಕಡು ಬಿಸಿಲು. कड़ी निगाह= ಬಿರುನೋಟ,

कड़ाई, स्त्री. ಕಾಠಿಣ್ಯ; ಗಡುಸು, ಗಟ್ಟಿ.

कड़ाकड़, पु. ಸಿಡಿಯುವ ಶಬ್ದ, ಸಿಡಿತ. क्रिवि. ಸಿಡಿಯುತ್ತ.

कड़ाका, पु. ಕಡಕಡ ಶಬ್ದ; ಮುರಿಯುವ ಶಬ್ದ; ಉಪವಾಸ.

कड़ाड़ा, पु. ಕಡಿದಾದ ನದಿಯ ದಡ.

कड़ापन, पु. ಕ್ರೂರತನ; ಗಡುಸು; ಬಿರುಸು.

कड़ाबीन, स्त्री. ಒಂದು ಬಗೆ ಬಂದೂಕು, ತುಪಾಕಿ.

कड़ाह, **कड़ाहा**, पु. ದೊಡ್ಡ ಬಾಣಲಿ, ಹುರಿಗಾವಲಿ; ಕಡಾಯಿ.

कड़ाही, स्त्री. "कड़ाह" का अल्प रूप.

कड़ी, स्त्री. ಕೊಂಡಿ, ಗೊಣಸು; ನಾಗವಾಸ, ಕೊಕ್ಕೆ; ಸಂಕಟ; ತೊಲೆ, ಸರ, ದೂಲ; ಪದ್ಯದ ಒಂದು ಚರಣ, ನುಡಿ.

कड़ीदार, पु. ಕೊಂಡಿ ಅಥವಾ ಗೊಣಸುಗಳುಳ್ಳ.

कड़ुआ, वि. ಕಹಿಯಾದ, ಕಟು; ಒಗರಾದ, ಕ್ರೂರ; ಸಿಡುಕಲ; ಕಷ್ಟವಾದ. कड़ुए कसैले दिन=ಬಲು ಕಷ್ಟ ಕಾಲ.

कड़ुआतेल, पु. ಸಾಸಿವೆ ಎಣ್ಣೆ.

कड़ुआना, कड़ुवाना, अक्रि. ಕಹಿಯಾಗು; ಕಂಡರೆ ಆಗದಿರು; ಒಗರಾಗು; ದ್ವೇಷಿಸು; (ಕಣ್ಣು) ಬತ್ತು.

कड़ुआपन, पु. **कड़ुआहट, कड़ुवाहट,** स्त्री. ಕಹಿ, ಒಗರು.

कढ़ना, अक्रि. ಹಿಂಡಲ್ಪಡು, ಎಳೆಯಲ್ಪಡು; ಬಸಿ; ಹೊರಡು; ಮೂಡು, ತೋರು; ಮುಂದುವರಿ; ತಪ್ಪಿಸುಕೊಳ್ಳು; ಉಪಪತಿಯೊಡನೆ ಪಲಾಯನ ಮಾಡು; ಗಟ್ಟಿಯಾಗು (ಹಾಲು), ಕೆನೆಗಟ್ಟು.

कढ़वाना, सक्रि. "**कढ़ना**" का प्रे. रूप.

कढ़ाई, स्त्री. ಹಿಂಡಲ್ಪಡುವುದು; ಮೂಡುವಿಕೆ; ತೋರಿಕೆ.

कढ़ाना, सक्रि. ಬಣ್ಣ ಹಾಕು; ಹೊರಡಿಸು, ಹೊರತೆಗೆ, ಹಿಂಡು.

कढ़ाव, पु. ಬುಟ್ಟಾ ಕೆಲಸ, ಕಸೂತಿ.

कढ़ी, स्त्री. ಒಂದು ಬಗೆಯ ಪಳದ್ಯ.

कढ़ुआ, पु. ಸಾಲ, ಕಡ; ಪಟ್ಟಿ, ಉತ್ತಾರ.

कढैया, वि. ತೆಗೆಯುವವ; ಉದ್ಧಾರ ಮಾಡುವವ.

कढोरना, सक्रि. ಎಳೆ; ಹಿಂಡು.

कण, पु. ಸಣ್ಣ ಚೂರು, ಕಣ; ಧಾನ್ಯದ ಕಾಳು.

क़त, पु. ಲೇಖಣಿಯ ಮೊನೆ, ಟಾಕು; ಲೆಕ್ಕಣಿಕೆ; ಸಮಾಪ್ತಿ, ಮುಕ್ತಾಯ.

क़तअ, पु. ರೂಪ, ಆಕಾರ; ತರಹ, ಚಾಳಿ; ಷೋಕಿ, ರೀತಿ; ಅಡ್ಡಡ್ಡ ಕತ್ತರಿಸುವಿಕೆ.

क़तअदार, वि. ಷೋಕಿನ, ರೀತಿಯ.

क़तई, क्रिवि. ಪೂರ್ತಿಯಾಗಿ, ಸುತರಾಂ.

कतनई, स्त्री. ನೂಲುವುದು.

कतना, अक्रि. ನೂಲು ತೆಗೆಯಲ್ಪಡು; ನೂಲು ಬರು, ನೂಲಾಗು.

कतरन, पु. ಕತ್ತರಿಸಿದ ತುಂಡು, ತುಣುಕು; ಚೂರು, ಚಕ್ಕೆ.

कतरना, सक्रि. ಕತ್ತರಿಸು, ಹೆಚ್ಚು; ಕೊರೆ; ಖೋತ ಮಾಡು; ತುಂಡು ಮಾಡು. पु. ದೊಡ್ಡ ಕತ್ತರಿ, ಗಂಡುಗತ್ತರಿ.

कतरनी, स्त्री. ಕತ್ತರಿ.

कतर-ब्योंत, स्त्री. ಕತ್ತರಿಸುವಿಕೆ, ಕಡಿತ; ಕತ್ತರಿ ಪ್ರಯೋಗ, ಖೋತ; ಆಲೋಚನೆ, ಚಿಂತೆ; ಯುಕ್ತಿ, ಉಪಾಯ, ಎತ್ತುಗಡೆ.

कतरवाना, सक्रि. कतरना का प्रे. रूप.

कतरा, पु. ಕತ್ತರಿಸಿದ ತುಂಡು, ತುಣುಕು, ಚೂರು; ಬಿಂದು, ಬೊಟ್ಟು.

कतराई, स्त्री. ಕತ್ತರಿಸುವಿಕೆ; ಕತ್ತರಿಸುವುದರ ಮಜೂರಿ.

कतराना, अक्रि. ತಲೆ ಮರಸಿಕೊಂಡು ಹೋಗು; ಜಾರಿಕೊಳ್ಳು, ನುಣುಚಿಕೊಳ್ಳು. सक्रि. **कतरना** का प्रे. रूप.

कतरी, स्त्री. ಗಾಣದ ಕತ್ತರಿ ಮರ, ಬವರಿ; ಹಿತ್ತಾಳೆಯ ಕಡಗ.

क़तल, पु. = क़त्ल.

कतली, स्त्री. ಮಿಠಾಯಿಯ ಚಚ್ಚೌಕವಾದ ಚೂರು.

कतवाना, सक्रि. **कातना** का प्रे. रूप.

कतवार, पु. ಕೆಲಸಕ್ಕೆ ಬಾರದ ವಸ್ತುಗಳು, ಕಸಕಡ್ಡಿ, ತಿಪ್ಪೆ.

कतवारख़ाना, पु. ತಿಪ್ಪೆ ಗುಂಡಿ.

क़ता, स्री. कतअ.

कताई, स्री. ನೂಲುವುದು; ನೂಲುವುದರ ಕೂಲಿ, ನೂತಕೂಲಿ.

कतान, पु. ಒಂದು ಬಗೆ ನಾರು ಬಟ್ಟೆ.

कताना, सक्रि. "कातना" का प्रे. रूप.

कतार, स्री. ಪಂಕ್ತಿ, ಸಾಲು, ವರಿಸೆ, ಶ್ರೇಣಿ; ಗುಂಪು, ಸಮೂಹ. कतार बांधना = ಸಾಲುಗಟ್ಟು.

कतारा, पु. केतारी, स्री. ಒಂದು ಜಾತಿಯ ಕಬ್ಬು, ಕಾಂತಾರ ಕಬ್ಬು.

कतिपय, वि. ಕೆಲವು, ಒಂದಿಷ್ಟು.

कतीरा, पु. ಒಂದು ಬಗೆ ಗೋಂದು.

कतौनी, स्री. ನೂಲುವಿಕೆ, ನೂಲುವುದರ ಕೂಲಿ; ಎಳೆದಾಟ, ಕಾಲಹರಣ.

कत्तल, स्री. ಇಟ್ಟಿಗೆ ಚೂರು, ಇಟ್ಟಂಗಿ ಚೂರು; ಕಲ್ಲು, ಹಳುಕು.

कत्ता, पु. ಮಚ್ಚುಕತ್ತಿ, ಬಾಗಿದ ಕತ್ತಿ, ಕೈಬಾಳು.

कत्ती, स्री. ಚಿಕ್ಕ ಕತ್ತಿ, ಚಾಕು, ಚೂರಿ; ಬಟ್ಟೆಯನ್ನು ಹೊಸೆದು ಸುತ್ತಿದ ತಲೆ ಪಾಗು.

कत्थई, वि. ಕಾಚಿನ ಬಣ್ಣದ.

कत्था, पु. ಖದಿರ, ಕಾಚು.

क़त्ल, पु. ಕೊಲೆ, ಖೂನಿ.

क़त्लबाज़, पु. ಕೊಲೆಗಾರ, ಕೊಲೆಘಾತಕ

कथक, **कथक्कड़**, पु. ಕತೆಗಾರ, ಪುರಾಣ ಹೇಳುವವ, ಪುರಾಣೀಕ.

कथन, पु. ಹೇಳಿಕೆ, ವಚನ, ಮಾತು.

कथना, सक्रि. ಹೇಳು; ಅನ್ನು.

कथनीय, वि. ಹೇಳಲು ಯೋಗ್ಯವಾದ, ಹೇಳತಕ್ಕ.

कथड़ी, **कथरी**, स्री. ಹಳೆಯ ಚಿಂದಿಗಳಿಂದ ಹೊಲಿದ ಹಾಸಿಗೆ, ಬೊಂತೆ.

कथा, स्री. ಕಥೆ, ಕತೆ; ಚರಿತ್ರೆ, ಪುರಾಣ. कथा बैठाना = ಪುರಾಣ ವಚನಕ್ಕೆ ಏರ್ಪಾಡು ಮಾಡು.

कथानक, पु. ಕತೆ; ಕಥಾವಸ್ತು.

कथावाचक, पु. ಭಾರತ ಮೊದಲಾದ ಕಾವ್ಯ ಪಠನ ಮಾಡುವವ, ಗಮಕಿ.

कथोपकथन, पु. ಮಾತುಕತೆ, ಸಂಭಾಷಣೆ.

कद, क्रिवि. ಯಾವಾಗ ? स्री. ದ್ವೇಷ, ಹಗೆ; ಹಠ. पु. ಗುಹೆ, ಗವಿ; ಗೃಹ, ಮನೆ. कदखुदा = ಮನೆಯ ಯಜಮಾನ, ಗೃಹಸ್ಥ. कदबानू = ಮನೆಯ ಯಜಮಾನಿ, ಗರತಿ.

क़द, पु. ಆಕಾರ, ಆಕೃತಿ; ಎತ್ತರ, ಶರೀರದ ನಿಲುವು, ನಿಲುವಿಕೆ. क़द-ओ-क़ामत = ಆಕೃತಿ, ರೂಪ, ಮೈಕಟ್ಟು.

कदखुदाई, स्री. ವಿವಾಹ; ಗೃಹಸ್ಥನಾಗುವಿಕೆ; ಗೃಹಸ್ಥಧರ್ಮ.

क़दद़ार, वि. ಎತ್ತರವಾದ ನಿಲುವಿನ, ಸುಂದರಆಕಾರವುಳ್ಳ, ಆಜಾನುಬಾಹು

कदन, पु. ಮಾರಣ, ಕೊಲೆ; ಯುದ್ಧ; ದುಃಖ.

कदन्न, पु. ಕೀಳುತರದ ಧಾನ್ಯಗಳು.

क़दम, पु. ಅಡಿ, ಪಾದ; ಹೆಜ್ಜೆ, ದಾಪು, ಜಂಗೆ; ಕುದುರೆಯ 'ಕದಂ' ನಡಿಗೆ;

ಬಿರುನಡೆ, ದೊಡ್ಡ ನಡೆ. क़दम बढ़ाना = ಮುಂದುವರಿ; ಅತಿಕ್ರಮಿಸು. क़दम-ब-क़दम = ಮೆಟ್ಟಿಲು ಮೆಟ್ಟಿಲಾಗಿ, ಕ್ರಮೇಣ.

क़दमचा, पु. ಹೆಜ್ಜೆ ಇಡುವ ಸ್ಥಳ; ಪಾಯಖಾನೆ ಮನೆಯ ಕಾಲಿಡುವ ಕಲ್ಲು

क़दमबाज़, वि. ತೀವ್ರವಾಗಿ ನಡೆಯುವ, 'ಕದಂ' ನಡಿಗೆ ನಡೆಯುವ(ಕುದುರೆ).

क़दमबोसी, स्त्री. ಪಾದಚುಂಬನ; ನಮಸ್ಕಾರ, ವಂದನೆ; ಪಾದಸೇವೆ.

कदर, पु. ಕೊಳೆ; ಬುರುದೆ, ಬದಿ, ಕಷ್ಟ; ಒಂದು ರೋಗ.

क़दर, स्त्री. ಪರಿಮಾಣ, ಮಟ್ಟು; ಯೋಗ್ಯತೆ, ಮನ್ನಣೆ, ಬೆಲೆ, ಮಹಿಮೆ; ಗೌರವ, ಮರ್ಯಾದೆ; ಹಣೆಬರಹ, ವಿಧಿ. क़दर करना = ಗೌರವಿಸು, ಮನ್ನಿಸು. इस क़दर = ಈ ತೆರನಾಗಿ, ಇಷ್ಟರ ಮಟ್ಟಿಗೆ.

क़दरदान, पु. ಗುಣಜ್ಞ, ಗುಣಗ್ರಾಹಿ, ಮಹತ್ವವನ್ನು ತಿಳಿದವ.

क़दरदानी, स्त्री. ಮಹತ್ವವನ್ನು ತಿಳಿಯುವಿಕೆ, ಗುಣಜ್ಞತೆ, ಗುಣಗ್ರಾಹಕತೆ.

क़दरशिनास, पु. = क़दरदान.

कदराई, स्त्री. ಹೇಡಿತನ, ಪುಕ್ಕತನ; ಭಯ, ಅಂಜಿಕೆ.

कदराना, अक्रि. ಹೆದರು, ಅಂಜು.

क़द्रे, क्रिवि. ಸ್ವಲ್ಪ ಮಟ್ಟಿಗೆ, ಕೊಂಚ.

क़दह, पु. ಬಟ್ಟಲು, ಲೋಟ; ಕವಚ; ಖಂಡನೆ.

कदा, क्रिवि. ಯಾವಾ[illegible] पु. ಗೃಹ; ಮಂದಿರ, ಆಲಯ.

कदाकार, वि. ಕುರೂಪವಾದ, ಅಂದಗೆಟ್ಟ.

कदाचार, पु. ದುರಾಚಾರ, ಕೆಟ್ಟ ನಡತೆ.

कदाचित्, क्रिवि. ಒಂದು ವೇಳೆ; ಯಾವಾಗಲಾದರೂ.

क़दामत, स्त्री. ಪ್ರಾಚೀನತೆ, ಪುರಾತನತ್ವ, ಹಳಮೆ.

क़दावर, वि. ಎತ್ತರವಾದ ನಿಲುವಿನ; ಎತ್ತರವಾದ, ಉದ್ದವಾದ.

कदी, वि. ಹಟಮಾರಿ, ಚಂಡಿ.

क़दीम, वि. ಪ್ರಾಚೀನ, ಪುರಾತನ.

क़दीमा, पु. ಕುಂಬಳ ಕಾಯಿ; ಹಾರೆ, ಗಡಾರಿ.

क़दीमी, वि. ಹಳೆಯ; ಪೂರ್ವದಿಂದ ನಡೆದು ಬಂದಿರುವ, ಪ್ರಾಚೀನ

क़दीर, वि. ಬಲವುಳ್ಳ, ಶಕ್ತಿಯುತ.

कदूरत, स्त्री. ಕೊಳೆ, ಮಾಲಿನ್ಯ; ಮನಸ್ತಾಪ, ವೈಮನಸ್ಯ.

कदेवर, पु. ತೋಟಗಾರ, ತೋಟಿಗ, ಮಾಲಿ.

क़द्दावर, वि. ಎತ್ತರವಾದ ನಿಲುವಿನ, ಉದ್ದವಾದ, ಆಜಾನುಬಾಹು, ದೊಡ್ಡ ಆಕಾರದ

कद्दू, पु. ಕುಂಬಳಕಾಯಿ

कद्दूकश, पु. ಕುಂಬಳಕಾಯಿ ತುರಿಯುವ ಮಣೆ. ಹೆರೆಮಣೆ, ಕೊಬ್ಬರಿ ಮಣೆ

कद्दाना, पु. ಹೊಟ್ಟೆಯಿಂದ ಮಲದೊಡನೆ ಬೀಳುವ ಸಣ್ಣ ಕ್ರಿಮಿಗಳು, ಕಿಲಿಬಿ ಹುಳು.

कधी, क्रिवि. = **कभी**.

कन, पु. ಬೆಲೆ ಕಟ್ಟುವುದು; ನುಸಿಹುಳು, ಅಂದಿ ಹುಳು; ಕಣ; ಅಣು, ಕಾಳು, ಹರಳು, ರವೆ; ದೇಹಬಲ.

कनई, स्त्री. ಚಿಗುರು, ಕೊನರು; ಜೇಡಿ ಮಣ್ಣು.

कनक, पु. ಚಿನ್ನ; ದತ್ತೂರಿ; ಉಮ್ಮತ್ತಗಿಡ; ಗೋಧಿ.

कनककली, स्त्री. ಹತ್ತಕಡಕು.

कनकचंपा, पु. ಬೆಟ್ಟದಾವರೆ.

कनकटा, वि. ಕಿವಿ ಹರಿದುಹೋದವ, ಕಿವಿ ಹರಕ. पु. ಕಿವಿಯನ್ನು ಕತ್ತರಿಸುವವ; ಗುಮ್ಮ, ಬೂಚಿ, ಗೊಗ್ಗಯ್ಯ; ಒಂದು ಬಗೆ ಜೋಗಿ.

कनकटी, स्त्री. ಕಿವಿ ನೋವು.

कनकना, वि. ಬೇಗನೆ ಒಡೆಯುವ; ನಾಜೂಕಾದ, ಪೆಡಸಾದ; ಸಿಡುಕಲ.

कनकनाना, अक्रि. ಗಂಟಲು ಕೆರೆ, ಕಸರು; ಅಸಹ್ಯವಾಗು; ಎಚ್ಚರಗೊಳ್ಳು; ರೋಮಾಂಚವಾಗು.

कनकनाहट, स्त्री. ಗಂಟಲು ಕೆರತ, ಕಸರು; ಅಪ್ರಿಯ.

कनकी, स्त्री. ಅಕ್ಕಿ ನುಚ್ಚು, ತರಿ.

कनकूत, पु. ಪೈರಿನ ಬೆಲೆ ಕಟ್ಟುವಿಕೆ, ಬೆಳೆಯ ಅಂದಾಜು, ಕಣಡೌಲು.

कनकौआ, पु. ದೊಡ್ಡ ಗಾಳಿಪಟ.

कनखजूरा, पु. ಸಾವಿರಕಾಲು, ಜರಿ, ಲಕ್ಷ್ಮೀ ಚೇಳು.

कनखा, पु. ಚಿಗುರು, ಕೊನರು, ತಳಿರು.

कनखियाना, सक्रि. ಓರೆಗಣ್ಣಿನಿಂದ ನೋಡು; ಕಣ್ಣು ಮಿಟಕಿಸು; ಕಣ್ಣುಸನ್ನೆ ಮಾಡು.

कनखी, स्त्री. ಕಡೆಗಣ್ಣಿನ ನೋಟ, ಓರೆನೋಟ, ಕುಡಿನೋಟ; ಕಣ್ಣುಸನ್ನೆ.

कनखोदनी, स्त्री. ಗುಗ್ಗೆ ಕಡ್ಡಿ.

कनगुरिया, स्त्री. ಕಿರುಬೆರಳು, ಕನಿಷ್ಠಿಕೆ.

कनछेदन, पु. ಕಿವಿ ಚುಚ್ಚುವುದು, ಕರ್ಣವೇಧ.

कनटोप, पु. ಕಿವಿಗಳನ್ನೂ ಮುಚ್ಚುವ ಕುಲಾವಿ, ಕಿವಿ ಟೊಪ್ಪಿಗೆ, ಕೊಂಚಿಗೆ.

कनडी, स्त्री. ಒಂದು ರಾಗ, ಕಾನಡ.

कनपटी, स्त्री. ಕಣ್ತಲೆ, ಗಂಡಸ್ಥಲ.

कनपेड़ा, पु. = **कनफेड़**.

कनफटा, पु. ಸೀಳಿದ ಕಿವಿಯುಳ್ಳವ; ಸೀಳಿದ ಕಿವಿಯುಳ್ಳ ಜೋಗಿ.

कनफुंकवा, **कनफुंका**, वि. ಕಿವಿಯಲ್ಲಿ ಊದುವವ; ಉಪದೇಶ ಮಾಡುವವ.

कनफुसकी, स्त्री. ಗುಸುಗುಸು ಮಾತು.

कनफेड़, पु. ಕಣ್ತಲೆಯ ಬಾವು.

कनमनाना, अक्रि. ಎಚ್ಚರಗೊಳ್ಳು, ಜಾಗೃತನಾಗು.

कनरस, पु. ಕರ್ಣಾನಂದ; ಸಂಗೀತದ ಸವಿ.

कनरसिया, पु. ಸಂಗೀತದಲ್ಲಿ ಅಭಿರುಚಿಯುಳ್ಳವ, ಗಾನ ರಸಿಕ.

कनवाई, स्त्री. ಕರ್ಣವೇಧ.

कनसलाई, स्त्री. ಲಕ್ಷ್ಮೀ ಚೇಳು, ಜರಿ.

कनसाक, पु. ಮಂಚದ ಕಾಲಿನಲ್ಲಿ ಕೊರೆದ ರಂಧ್ರ ಅಥವಾ ಗುಣಿ.

कनसुई, स्त्री. ಸದ್ದು, ಸಲೆ, ಸುಳಿವು.

कनस्तर, पु. ಸಣ್ಣ ಡಬ್ಬಿ.

कनहर, पु. ಹಡಗು ನಡಿಸುವ ಯಂತ್ರ, ಚುಕ್ಕಾಣಿ, ಸುಂಕಾಣಿ.

कनहरा, पु. ಗಮನ ಕೊಡುವಿಕೆ, ಅವಧಾನ.

कनहरीला, कनहार, पु. ಹಡಗು ನಡಿಸುವವ, ಚುಕ್ಕಾಣಿಗಾರ, ಕರ್ಣಧಾರ.

कनहा, पु. ಫಸಲನ್ನು ಅಂದಾಜು ಮಾಡುವ ಅಧಿಕಾರಿ.

क़नाअत, स्त्री. ತುಷ್ಟಿ, ತೃಪ್ತಿ, ನೆಮ್ಮದಿ.

कनाखी, स्त्री. ಓರೆನೋಟ, ಕಟಾಕ್ಷ

कनागत, पु. ಪಿತೃಪಕ್ಷದಲ್ಲಿ ಮಾಡುವ ಶ್ರಾದ್ಧ, ಪಕ್ಷ

क़नात, स्त्री. ಪರದೆ, ತೆರೆ, ತೆರೆಪಟ.

क़नारा, पु. ಕಟುಕನ ಅಂಗಡಿ.

कनिक, पु. ಗೋಧಿಯ ರವೆ.

कनिका, स्त्री. ಧಾನ್ಯದ ಕಾಳು; ಕಣ.

कनिगर, पु. ಗೌರವಸ್ಥ, ಮಾನಿ.

कनियां, स्त्री. ಟೊಂಕ, ಸೊಂಟ.

कनियाना, अक्रि. ತಪ್ಪಿಸಿಕೊಳ್ಳು, ಜಾರಿಕೊಳ್ಳು, ನುಣುಚಿಕೊಳ್ಳು; ದ್ವೇಷಿಸು; ಒಂದು ಕಡೆಗೆ ವಾಲು, ಓಸರಿಸು; ದತ್ತು ಸ್ವೀಕರಿಸು.

कनियार, पु. ಬೆಟ್ಟದಾವರೆ.

कनियाहट, स्त्री. ನಾಚಿಕೆ, ಸಂಕೋಚ.

कनिश, पु. ಕೃಪಣ, ಜಿಪುಣ; ಧಾನ್ಯದ ತೆನೆ.

कनी, स्त्री. ವಜ್ರದ ಚೂರು; ಕಣ, ಅಣು; ನುಚ್ಚು; ಕಡಿಯಕ್ಕಿ.

कनीज़, कनीज़क, स्त्री. ದಾಸಿ, ಚೇಟಿ; ಸೇವಕಿ, ತೊತ್ತು.

कनीज़की, कनीज़ी, स्त्री. ದಾಸ್ಯ.

कनीरा, पु. ಅಂಬು ಬಿಲ್ಲು ಮೊದಲಾದವನ್ನು ಮಾಡುವ ಜಾತಿಯವರು.

कने, क्रिवि. ಹತ್ತಿರ, ನೆರೆಯಲ್ಲಿ, ಪಕ್ಕದಲ್ಲಿ

कनेठा, वि. ಒಕ್ಕಣ್ಣ, ಕಾಣ; ಮೆಳ್ಳೆಗಣ್ಣನವ, ಮಾಲುಗಣ್ಣನವ.

कनेठी, स्त्री. ಕಿವಿ ಹಿಂಡುವುದು.

कनेर, कनेल, स्त्री. ಕಣಗಲೆ, ಕರವೀರ.

कनेरिया, वि. ಕಣಗಲೆ ಹೂವಿನ ಬಣ್ಣದ, ಸಿಂದೂರ ವರ್ಣದ

कनेव, पु. ಮಂಚದ ವಕ್ರತೆ.

कनौजिया, पु. ಕನೋಜ್ ನಗರದವ; ಬ್ರಾಹ್ಮಣರ ಒಂದು ಒಳಜಾತಿ, ಕಾನ್ಯಕುಬ್ಜರು. तीन कनौजिया तेरह चूल्हा = ಅರಾಳು ಮೂರು ಫೌಜು.

कनौटी, स्त्री. ಕುದುರೆಯ ಕಿವಿ.

कनौठा, पु. ಮೂಲೆ, ಸಂದು.

कनौड़, पु. ಲಜ್ಜೆ, ನಾಚಿಕೆ.

कनौड़ा, वि. ನಾಚಿಕೆಯುಳ್ಳ, ಲಜ್ಜಾಳು; ಅಂಗಹೀನ; ಅಪಮಾನಿತ; ಕೃತಜ್ಞ. पु. ಗುಲಾಮ, ಅಡಿಯಾಳು.

कनौड़ी, स्त्री. ದಾಸಿ, ಸೇವಕಿ.

कनौती, स्त्री. ಕಿವಿಯ ತುದಿ; ಕಿವಿಯನ್ನು ನಿಗುರಿಸುವಿಕೆ; ಬುಗುಡಿ.

कन्ना, पु. ಬೂಟ್ಸಿನ ದಾರ ಕಟ್ಟುವ ಗುಂಡು ರಂಧ್ರ; ಗಾಳಿಪಟದ ಸೂತ್ರ;

ಬಾಣಲೆಯ ಕಿವಿ; ಅಕ್ಕಿನುಚ್ಚು.

कन्नादार, पु. ಒಂದು ವಿಧದ ಜೋಡು.

कन्नास, पु. ಗುಡಿಸುವವ, ಝಾಡ ಮಾಲಿ.

कन्नी, पु. ಕರಣಿ, ಕರಣಿಗೆ. स्त्री. ದಡ, ಅಂಚು; ಗಾಳಿಪಟದ ಬಾಲಂಗಚ್ಚಿ; ಹೊಗೆಸೊಪ್ಪಿನ ಪುಡಿ. कन्नी खाना =ಗೋತ ಹೊಡೆ (ಗಾಳಿಪಟ).

कन्नीदार, वि. ಗೋಟು ಕಟ್ಟಿದ, ಅಂಚುಳ್ಳ.

कन्या, स्त्री. ಕನ್ಯೆ, ಕುವರಿ.

कन्हाई, स्त्री. ಪೈರುಗಳ ಬೆಲೆ ಕಟ್ಟು ವಿಕೆ, ಡೌಲು; ಶ್ರೀ ಕೃಷ್ಣನ ಹೆಸರು.

कन्हैया, पु. ಶ್ರೀ ಕೃಷ್ಣ.

कपट, पु. ಕಪಟ, ಮೋಸ.

कपटना, सक्रि. ಕತ್ತರಿಸು, ತುಂಡರಿಸು, ಕಟಕರಿಸು.

कपटिन, वि. स्त्री. **कपटी**, वि. पु. ಕಪಟವುಳ್ಳ; ಕಪಟಿ.

कपड, पु. ಬಟ್ಟೆ (ಸಮಾಸದಲ್ಲಿ).

कपड़कोठा, पु. ಡೇರೆ, ಗುಡಾರ.

कपड़छन, **कपड़छान**, पु. ಬಟ್ಟೆಯಿಂದ ಹಿಟ್ಟನ್ನು ಶೋಧಿಸುವಿಕೆ, ಸೋಸು ವಿಕೆ, ವಸ್ತ್ರಗಾಯ; ಕೂಲಂಕಷವಾದ ವಿಮರ್ಶೆ.

कपड़धूल, पु **कपड़धूली**, स्त्री ಒಂದು ವಿಧದ ರೇಷ್ಮೆ ಬಟ್ಟೆ; ದುಕೂಲ.

कपड़फूल, पु. ಜರಿ ಕೆಲಸ ಮಾಡಿದ ರೇಷ್ಮೆ ಬಟ್ಟೆ.

कपड़मिट्टी, स्त्री. ಪುಟಪಾಕ ಮಾಡುವ ಔಷಧಗಳನ್ನು ಸಂಪ್ರುಟದಲ್ಲಿಟ್ಟು ಬಟ್ಟೆ ಯಿಂದ ಇದರ ಬಾಯನ್ನು ಕಟ್ಟಿ ಮಣ್ಣು ಮೆತ್ತುವಿಕೆ, ಚೀರು ಮಾಡು ವಿಕೆ.

कपड़ा, पु. ಬಟ್ಟೆ, ಅರಿವೆ, ಉಡಿಗೆ. कपड़ा चुनना=ಬಟ್ಟೆ ನಿರಿಗೆ ಹಿಡಿ. कपड़ा लत्ता=ಬಟ್ಟೆ ಬರೆ, ಉಡಿಗೆ ತೊಡಿಗೆ. कपड़ों से होना=ರಜಸ್ವಲೆ ಯಾಗು, ಮುಟ್ಟಾಗು, ಬಹಿಷ್ಠೆ ಯಾಗು.

कपड़ायंध, स्त्री. ಸುಟ್ಟ ಬಟ್ಟೆಯ ನಾತ; ಕಮರು ನಾತ, ಕವುರು.

कपड़ौटी, स्त्री. =**कपड़मिट्टी**.

कपाट, पु. ಬಾಗಿಲು, ಕದ, ಕವಾಟ.

कपाल, पु. ತಲೆಬುರುಡೆ, ಕಪಾಲ; ತಲೆಯೋಡು; ಓದು, ಭಿಕ್ಷಾಪಾತ್ರೆ, ಕಪ್ಪರ.

कपालिका, स्त्री. ತಲೆಬುರುಡೆ, ಡವುಗೆ.

कपाली, पु. ಭಿಕ್ಷುಕ; ಕಪ್ಪರ ಕಾಯಕ.

कपास, स्त्री. ಹತ್ತಿ ಗಿಡ, ಹತ್ತಿ, ಅರಳೆ.

कपासी, वि. ಹತ್ತಿಯ ಹೂವಿನ ಬಣ್ಣದ, ನಸು ಹಳದಿ. स्त्री. ಒಂದು ಬಗೆ ಹಣ್ಣು.

कपूत, पु. ಕುಪುತ್ರ.

कपूर, पु. ಕರ್ಪೂರ.

कपूरकचरी, स्त्री. ಕರ್ಪೂರ ಪಚ್ಚೆಗಿಡ.

कपूरी, पु. ಒಂದು ಜಾತಿಯ ವೀಳ್ಯ ದೆಲೆ, ಕರ್ಪೂರ ವೀಳ್ಯ. वि. ಕರ್ಪೂರ ದಿಂದಾದ; ಸುವಾಸನೆಯುಳ್ಳ.

कपोत, पु. ಪಾರಿವಾಳ, ಹಾರಿವಾಣ; ಸಾವೀರ.

कपोतिका, कपोती, स्त्री. ಹೆಣ್ಣು ಪಾರಿವಾಳ.

कपोल, पु. ಕೆನ್ನೆ, ಕಪಾಳ, ಕದಪು, ಗಲ್ಲ. कपोल कल्पना = ಅಬದ್ಧ ಕಥೆ, ಸುಳ್ಳು ಮಾತು, ಕರಟು ಪುರಾಣ.

कफ, पु. ಕಫ, ಶ್ಲೇಷ್ಮ, ಶೊಂಟಿ.

कफ़, पु. ನೊರೆ, ಬುರುಗು; ಕರತಲ, ಅಂಗೈ; ಅಂಗಾಲು.

कफ़क, पु. ಕೈ ಅಥವಾ ಕಾಲಿನಲ್ಲಿ ಅಲಂಕಾರಕ್ಕಾಗಿ ಬಣ್ಣ ಹಚ್ಚಿಕೊಳ್ಳುವ ಭಾಗ.

कफ़गीर, पु. ನೊರೆ ಜಾಲಿಸುವ ಸೌಟು; ಜಾರಣಿ, ಜಾಲಿ ಸೌಟು.

कफ़चा, पु. ಚಮಚ; ಸರ್ಪದ ಹೆಡೆ.

कफ़तार, पु. ಕತ್ತೆ ಕಿರುಬ, ನಾಯಿ ಹುಲಿ.

कफ़न, पु. ಶವಕ್ಕೆ ಹೊದಿಸುವ ಬಟ್ಟೆ, ಹೆಣದ ಬಟ್ಟೆ, ಪ್ರೇತವಸ್ತ್ರ. कफ़न फाड़ के बोलना = ಸುಮ್ಮನಿರಲಾರದೆ ಗಟ್ಟಿಯಾಗಿ ಕೂಗಾಡು.

कफ़न-खसोट, पु. ಪ್ರೇತವಸ್ತ್ರವನ್ನೂ ಕಸುಕೊಳ್ಳುವವ; ಪರಮ ಲೋಭಿ.

कफ़न-खसोटी, स्त्री. ಸುಡುಗಾಡು ಕಾಯುವವನಿಗೆ ಕೊಡುವ ರುಸುಂ, ಶವ ಮುಹಸೂಲು; ಹೇಗಾದರೂ ಮಾಡಿ ಹಣ ಗಳಿಸುವಿಕೆ; ಜಿಪುಣತೆ.

कफ़नाना, सक्रि. ಪ್ರೇತವಸ್ತ್ರ ಹೊದಿಸು; ಹೂಳಿಡು, ಒಪ್ಪ ಮಾಡು.

कफ़नी, स्त्री. ಪ್ರೇತವಸ್ತ್ರ; ಫಕೀರರು ಧರಿಸುವ ತೋಳಿಲ್ಲದ ಒಂದು ಬಗೆ ಅಂಗಿ; ಲಂಗೋಟಿ.

कफ़श, स्त्री. ಎಕ್ಕಡ, ಪಾಪಾಸು, ಜೋಡು

क़फ़स, पु. ಗೂಡು, ಪಂಜರ; ಸೆರೆಮನೆ, ಬಂದೀಖಾನೆ; ಇಕ್ಕಟ್ಟಾದ ಸ್ಥಳ.

कफ़ा, स्त्री. ಹಿಂಭಾಗ, ಹಿಂಬದಿ, ಬೆಂಗಡೆ.

कफ़ाफ़, वि. ಸಾಕಾದ; ತಕ್ಕ. पु. ಭಿಕ್ಷೆ; ದಿನದ ಭತ್ಯ, ಪಡಿ; ಜೀವನೋಪಾಯ.

कफ़ारा, पु. ಪರಿಹಾರ, ವಿಮೋಚನೆ, ಪ್ರಾಯಶ್ಚಿತ್ತ.

कफ़ालत, स्त्री. ಹೊಣೆ, ಜಾಮೀನು.

कफ़ालतनामा, पु. ಜಾಮೀನು ಪತ್ರ, ಹೊಣೆ ಪತ್ರ.

कफ़ील, पु. ಜಾಮೀನುದಾರ, ಹೊಣೆಗಾರ.

कफ़शख़ाना, पु. ಗುಡಿಸಲು, ಮನೆ.

कब, क्रिवि. ಯಾವಾಗ ?

कबड्डी, स्त्री. ಗುಡುಗಿನಾಟ, ಹುಡುತುತ್ತು ಆಟ.

कबर, पु. = कब्र.

कबरा, वि. ಬೂದಿ ಬಣ್ಣದ; ವಿವಿಧ ಬಣ್ಣದ.

क़बल, वि. ಮೊದಲಿನ; ಪೂರ್ವದ. क्रिवि. ಮೊದಲು; ಪೂರ್ವದಲ್ಲಿ, ಮುಂಚೆ

कबरिस्तान, पु. = कब्रिस्तान.

क़बा, पु. ಉದ್ದಂಗಿ, ನಿಲುವಂಗಿ.

कबाड़, पु. ಕೆಲಸಕ್ಕೆ ಬಾರದ್ದು; ನಿರರ್ಥಕ ಕೆಲಸ; ಜುಜುಬಿ ಕೆಲಸ; ಗುಜರಿ ಕೆಲಸ.

कबाड़ा, पु. ನಿಷ್ಪ್ರಯೋಜಕ ಮಾತು, ಗಜರಗಳೆ; ತಕರಾರು, ಗಲಾಟೆ.

कबाड़िया, कबाड़ी, पु. ಒಡಕು

ಮುದುಕು ಸಾಮಾನು ಮಾರುವವ, ಗುಜರಿ ವ್ಯಾಪಾರಗಾರ; ರಗಳೆ ಮನುಷ್ಯ.

कबादह, पु. ಬಿಲ್ಲು, ಧನುಸ್ಸು.

कबाब, पु. ಕೆಂಡದಲ್ಲಿ ಸುಟ್ಟ ಮಾಂಸ, ಸುಡುಬಾಡು.

कबाबचीनी, स्त्री. ಗಂಧ ಮೆಣಸು, ಬಾಲ ಮೆಣಸು.

कबाबी, पु. "कबाब" ಮಾರುವವ ಅಥವಾ ತಿನ್ನುವವ.

कबाय, पु. ಬೆಚ್ಚಗಿರುವ ಬಟ್ಟೆ.

क़बायल, पु. ಕುಟುಂಬ, ಹೆಂಡತಿ ಮಕ್ಕಳು.

कबार, पु. ವೃತ್ತಿ, ಕಸಬು, ಉದ್ಯೋಗ.

कबारना, सक्रि. ಕೀಳು, ಕಿತ್ತೊಗೆ.

कबारी, पु.=**कबाड़ी**.

कबाला, पु. ಕ್ರಯಪತ್ರ, ಶಾಸನಪತ್ರ, ದಸ್ತಾವೇಜು.

कबाहत, स्त्री. ಕೆಡಕು, ಅಮಂಗಲ; ಕುಂದು; ಅಡಚಣೆ, ತೊಡಕು.

कबीर, पु. ಕಾಮನ ಹಬ್ಬದಲ್ಲಿ ಹಾಡುವ ಒಂದು ತರಹದ ಅಶ್ಲೀಲ ಗೀತೆ; ಒಬ್ಬ ಸಂತನ ಹೆಸರು. वि. ಶ್ರೇಷ್ಠ, ದೊಡ್ಡ.

कबीरपंथी, पु. ಕಬೀರನ ಅನುಯಾಯಿಗಳು.

क़बील, पु. ಜಾತಿ; ವಂಶ, ಕುಲ.

क़बीला, स्त्री. ಕುಟುಂಬ, ಪತ್ನಿ.

कबीह, वि. ಕೆಟ್ಟ, ಅಶುಭ; ಕುರೂಪ.

क़बुलवाना, **कबुलाना**, सक्रि. ಒಡಂಬಡಿಸು, ಒಪ್ಪಿಸು.

कबुली, स्त्री. ಕಾಬೂಲು ಕಡಲೆ.

कबूतर, पु. ಪಾರಿವಾಳ, ಕಪೋತ.

कबूतरख़ाना, पु. ಪಾರಿವಾಳದ ಗೂಡು, ಕಪೋತಪಾಲಿಕೆ, ಹೆಟ್ಟಿಗೆ.

कबूतरबाज़, वि. ಪಾರಿವಾಳ ಸಾಕುವವ

कबूतरी, स्त्री. ಹೆಣ್ಣು ಪಾರಿವಾಳ.

कबूद, वि. ಆಕಾಶ ಬಣ್ಣದ, ನೀಲಿ.

क़बूल, पु. ಸಮ್ಮತಿ, ಸ್ವೀಕಾರ, ಒಪ್ಪಿಕೆ.

क़बूलना, सक्रि. ಒಪ್ಪು, ಸಮ್ಮತಿಸು, ಒಡಂಬಡು.

क़बूलियत, स्त्री. ಕರಾರುಪತ್ರ, ಒಡಂಬಡಿಕೆ, ಕಟ್ಟುಡಕ.

कबूली, स्त्री. ಕಡಲೆಬೇಳೆ ಹುಗ್ಗಿ.

क़बूली, स्त्री. ಸಮ್ಮತಿಸುವಿಕೆ, ಸ್ವೀಕಾರ, ಅಂಗೀಕಾರ; ಒಪ್ಪಿಕೆ.

क़ब्ज़, पु. ಮಲಬದ್ಧತೆ, ಗ್ರಹಣ; ಕೈವಶ, ಹಿಡಿತ.

क़ब्ज़ा, पु. ಹಿಡಿತ, ಗ್ರಾಸ; ಕೈಪಿಡಿ, ಹಿಡಿಕೆ, ಹಿಡಿ; ಕೀಲು, ತಿರುಗಣೆ ಮೊಳೆ; ವಶ, ಸ್ವಾಧೀನ; ಹಿಡುವಳಿ, ಅನುಭೋಗ; ಭುಕ್ತಿ. क़ब्ज़ा करना =ಹಿಡಿದುಕೊಳ್ಳು.

क़ब्ज़ादार, पु. ಹಿಡುವಳಿದಾರ, ಅನುಭೋಗಸ್ಥ.

क़ब्ज़ादारी, स्त्री. ಹಿಡುವಳಿದಾರನ ಹಕ್ಕು; ಹಿಡುವಳಿದಾರಿಕೆ.

क़ब्ज़ियत, स्त्री. ಮಲಬದ್ಧತೆ; ಹಿಡಿತ.

क़ब्र, पु. ಶವವನ್ನು ಹೂಳಿಡುವ ಸ್ಥಳ, ಹೆಣದ ಕುಣಿ; ಸಮಾಧಿ, ಗೋರಿ.

क़ब्र के मुर्दे उखाड़ना = ಹಳೆಯ ವ್ಯಾಜ್ಯಗಳನ್ನು ಪುನಃ ಎತ್ತು.

क़ब्रकन, पु. ಹೆಣದ ಕುಳಿ ತೋಡುವವ.

क़ब्रगाह, क़ब्रिस्तान, पु. ಶವಗಳನ್ನು ಹೂಳಿಡುವ ಸ್ಥಳ, ಸಮಾಧಿ ಭೂಮಿ; ಸ್ಮಶಾನ, ಮಸಣ.

क़ब्ल, वि. ಪೂರ್ವದ, ಮೊದಲಿನ.

कभी, क्रिवि. ಎಂದೋ, ಯಾವಾಗಲೋ. कभी कभी = ಆಗಾಗ್ಯೆ. कभी न कभी = ಯಾವಾಗಲಾದರೂ, ಎಂದಾದರೂ. कभी नहीं = ಎಂದಿಗೂ ಇಲ್ಲ

कमंगर, पु. ಬಿಲ್ಲು ಮಾಡುವವ; ಉಳುಕು ಸರಿಪಡಿಸುವವ; ಚಿತ್ರಕಾರ वि. ದಕ್ಷ, ನಿಪುಣ.

कमंगरी, स्त्री. ಬಿಲ್ಲು ತಯಾರಿಸುವಿಕೆ; ಉಳುಕು ಸರಿಪಡಿಸುವಿಕೆ; ಚಿತ್ರಕಲೆ.

कमंडल, पु. ಸನ್ಯಾಸಿಗಳ ಜಲಪಾತ್ರೆ, ಕಮಂಡಲ.

कमंद, स्त्री. ಲಗ್ಗೆ ಹತ್ತುವ ಏಣಿ, ನೂಲೇಣಿ; ಉರ್ಲು, ಪಾಶ.

कम, वि. ಅಲ್ಪ, ಸ್ವಲ್ಪ; ಕಡಿಮೆ; ಕಮ್ಮಿ; ಅರಿದಾದ; ಹೀನ.

कमअक़्ल, वि. ಬುದ್ಧಿಹೀನ, ತಿಳಿಗೇಡಿ.

कमअसल, वि. ವರ್ಣಸಂಕರ.

कमक़दम, वि. ಮೆತ್ತಗೆ ನಡೆಯುವ, ಮಂದಗತಿಯುಳ್ಳ.

कमक़द्र, वि. ಬೆಲೆಯಿಲ್ಲದ; ಅಲ್ಪ, ನೀಚ

कमक़द्री, स्त्री. ಅಪಮಾನ, ಅವನತಿ.

कमख़र्च, वि. ಮಿತವಾಗಿ ಖರ್ಚು ಮಾಡುವ, ಮಿತವ್ಯಯಿ; ಜಿಪುಣ.

कमख़र्ची, स्त्री. ಮಿತವ್ಯಯ, ಕೈಹಿಡಿತ; ಲೋಭಿತನ.

कमख़ाब, पु. ಸರಿಗೆ ಬೂಟಾಗಳುಳ್ಳ ರೇಷ್ಮೆ ಬಟ್ಟೆ, ಕಿನಕಾಬು.

कमची, स्त्री. ಬೆತ್ತ, ಸೆಳೆ, ದೆಬ್ಬೆ.

कमज़र्फ़, कमज़ात, वि. ನೀಚ ಕುಲದ, ಕುಲಹೀನ, ಕೀಳುತರದ.

कमज़ोर, वि. ಬಲಹೀನ, ದುರ್ಬಲ, ಅಶಕ್ತ.

कमज़ोरी, स्त्री. ಬಲಹೀನತೆ, ನಿಶ್ಶಕ್ತಿ, ದೌರ್ಬಲ್ಯ.

कमठ, पु. ಆಮೆ, ಆವೆ; ಬಿದಿರು; ಕಮಂಡಲ.

कमठा, पु. ಬಿಲ್ಲು, ಧನುಸ್ಸು.

कमठी, स्त्री. ಬಿದಿರಿನ ಸೀಳು, ದೆಬ್ಬೆ, ಸೀಬು; ಹೆಣ್ಣು ಆಮೆ.

कमतर, वि. ನೀಚತರ, ಕೀಳುತರ.

कमतरीन, वि. ನೀಚತಮ.

कमती, स्त्री. ಕೊರತೆ, ಕಡಿಮೆ, ನ್ಯೂನತೆ. वि. ಕೊರೆ, ಕೊಂಚ, ಕಮ್ಮಿ.

कमनसीब, वि. ಅದೃಷ್ಟವಿಲ್ಲದ, ದುರ್ಭಾಗ್ಯ.

कमनसीबी, स्त्री. ದುರದೃಷ್ಟ; ದೌರ್ಭಾಗ್ಯ.

कमनैत, पु. ಬಿಲ್ಲುಗಾರ, ಬಿಲ್ಲಾಳು, ಧನುರ್ಧರ.

कमनैती, स्त्री. ಧನುರ್ವಿದ್ಯೆ, ಬಿಲ್ಲಾಳುತನ.

कमबख़्त, वि. ಅದೃಷ್ಟಹೀನ, ದುರ್ಭಾಗ್ಯ; ಪಾಪಿಷ್ಠ, ಖೋಡಿ.

कमबख़्ती, स्त्री. ದುರದೃಷ್ಟ, ದೌರ್ಭಾಗ್ಯ.
कमयाब, वि. ಅಪರೂಪ, ಅರಿದು.
कमयाबी, स्त्री. ಅಪರೂಪದ ವಸ್ತು.
कमर, स्त्री. ಸೊಂಟ, ಟೊಂಕ, ನಡುವು, ಕಟಿ; ಟಾಕು, ಕಮಾನು. कमर कसना या बांधना = ಟೊಂಕ ಕಟ್ಟು, ಸಿದ್ಧನಾಗು.
क़मर, पु. ಚಂದ್ರ, ತಿಂಗಳು.
कमरकश, वि. ವೀರ, ಕಡುಗಲಿ.
कमरकोट, कमरकोटा, पु. ಕೈಪಿಡಿ ಗೋಡೆ, ಅರ್ಧಗೋಡೆ; ಆಳುವೇರಿ.
कमरख, पु. ಒಂದು ಬಗೆಯ ಹಣ್ಣು.
कमरपेच, पु. ನಡುಕಟ್ಟು, ಕಮರ್ಬಂದು.
कमरबंद, पु. ನಡುಕಟ್ಟು, ಕಮ್ಮರ್ ಬಂದು; ಲಾಳಿ, ನವಾರ. वि. ಕಟಿಬದ್ಧ, ಆಯತ್ತವಾದ, ಸಿದ್ಧ.
कमरबंदी, स्त्री. ಸಿದ್ಧತೆ, ಸನ್ನಾಹ.
कमरबल्ला, पु. ಚಾವಣಿಯ ಅಡ್ಡದೆಬ್ಬೆ, ರೀಪು; ಅರ್ಧಗೋಡೆ.
कमरबस्ता, वि. ಕಟಿಬದ್ಧ, ಸಂಸಿದ್ಧ.
कमरसाल, पु. ಒಡ್ಯಾಣ, ಡಾಬು.
कमरा, पु. ಕೊಠಡಿ, ಕೋಣೆ, ಕಿರುಮನೆ, ಖೋಲಿ.
कमरिया, पु. ಒಂದು ಬಗೆ ಗಿಡ್ಡಾನೆ.
कमरी, स्त्री. ಸಣ್ಣ ಅಂಗಿ, ಗಿಡ್ಡಂಗಿ.
क़मरी, वि. ಚಂದ್ರನಿಗೆ ಸಂಬಂಧಪಟ್ಟ, ಚಾಂದ್ರಮಾಸ.
कमरू, वि. ವಿಕಾರವಾದ, ಕುರೂಪ.
कमल, पु. ಕಮಲ, ತಾವರೆ; ಕಾಮಾಲೆ.
कमलगट्टा, पु. ತಾವರೆ ಬೀಜ.
कमलबाई, स्त्री. ಕಾಮಾಲೆ ರೋಗ.
कमला, पु. ಕಂಬಳಿ ಹುಳು; ನುಸಿ, ಅಂದಿ ಹುಳು. स्त्री. ಕಿತ್ತಳೆ ಹಣ್ಣು.
कमली, स्त्री. ಕಂಬಳಿ, ಧಾವಳಿ.
कमलो, पु. ಒಂಟೆ.
कमवाना, सक्रि. कमाना का प्रे. रूप.
कमसखुन, वि. ಮಟ್ಟಾಗಿ ಮಾತನಾಡುವವ, ಮಿತಭಾಷಿ.
कमसिन, वि. ಚಿಕ್ಕವಯಸ್ಸಿನ, ಅಲ್ಪವಯಸ್ಕ, ಕಿರಿಯ.
कमसिनी, स्त्री. ಬಾಲ್ಯ, ಚಿಕ್ಕಂದು.
कमाई, स्त्री. ಸಂಪಾದನೆ, ದುಡಿತ, ಗಳಿಕೆ; ದುಡಿಮೆ, ಸಂಪಾದ್ಯ; ಕೆಲಸ, ಕಸಬು.
कमाऊ, वि. ಸಂಪಾದಿಸುವವ, ದುಡಿದು ಹಣ ಗಳಿಸುವವ.
कमाच, पु. ಒಂದು ಬಗೆ ರೇಷ್ಮೆ ಬಟ್ಟೆ.
कमाची, स्त्री. ತೆಳುವಾದ ಸೀಳು, ದೆಬ್ಬೆ; ಬಿಲ್ಲಿನಂತೆ ಬಗ್ಗಿದ ಸಲಾಕಿ.
कमान, स्त्री. ಅಪ್ಪಣೆ; ಸೈನ್ಯದಲ್ಲಿ ನೌಕರಿ; ಬಿಲ್ಲು, ಧನುಸ್ಸು; ಇಂದ್ರಧನುಸ್ಸು, ಕಾಮನ ಬಿಲ್ಲು; ಧನುರ್ರಾಶಿ; ಬಿಲ್ಲಿನ ಆಕಾರದ ವಸ್ತು; ಕಮಾನು ಕಟ್ಟಡ; ಪಿಟೀಲು ಬಾರಿಸುವ ಕೋಲು, ವಾದನ ದಂಡ, ಕುಡುಪು; ಗಡಿಯಾರದ ಕೀಲಿ, "ಸ್ಪ್ರಿಂಗು"; ಕೋವಿ, ತುಪಾಕಿ, ಬಂದೂಕು.
कमानगर, पु. ಬಿಲ್ಲು ತಯಾರಿಸುವವ; ಹೊರಳಿ ಹೋದ ಮೂಳೆಗಳನ್ನು ಸರಿಯಾಗಿ ಕಟ್ಟಿ ಸರಿಪಡಿಸುವವ; ಚಿತ್ರಕಾರ

कमानगरी, स्त्री. ಬಿಲ್ಲುಗಳನ್ನು ಮಾಡುವ ಕೆಲಸ; ಮೂಳೆಗಳನ್ನು ಸ್ವಸ್ಥಾನಕ್ಕೆ ತಂದಿಡುವ ಕೆಲಸ; ಚಿತ್ರಗಾರಿಕೆ.

कमानचा, पु. ಸಣ್ಣ ಬಿಲ್ಲು; ಕಮಾನು ಕೋಲು, ಕುಡುಪು.

कमानदार, पु. ಬಿಲ್ಲುಗಾರ, ಬಿಲ್ಲಾಳು; ದಳಪತಿ.

कमाना, सक्रि. ಸಂಪಾದಿಸು, ಗಳಿಸು; ಸಾಧಿಸು, ಬಳಕೆ ಮಾಡು; (ಪಾಪ) ಕಟ್ಟಿಕೊ; (ಪಾಯಖಾನೆ) ಬಳಿ. कमाना धमाना = ದುಡುಕೊಳ್ಳು, ಸಂಪಾದಿಸು. अक्रि. ದುಡಿ, ಗೇಯು; ವೇಶ್ಯಾವೃತ್ತಿಯಲ್ಲಿ ತೊಡಗು.

कमानिया, पु. ಬಿಲ್ಲುಗಾರ, ಅಂಬುಗಾರ.

कमानी, स्त्री. ಧನುಸ್ಸಿನ ಆಕಾರದ ವಸ್ತು; ಅದುಮಿದರೆ ಪುಟಿಯುವಂತೆ ಮಾಡಿರುವ ಕಂಬಿ ಮೊದಲಾದುವು; ಗಾಡಿ, ಗಡಿಯಾರ ಮುಂತಾದುವುಗಳ ಕಮಾನು ಅಥವಾ ಬಿಲ್ಲು, ಸೂತ್ರದ ತಂತಿ; ಕೀಲಿ; ಕಟ್ಟಡದ ಕಮಾನು.

कमाल, पु. ಪೂರ್ಣತೆ, ನೆರತೆ; ಮೇಲ್ಮೆ, ಶ್ರೇಷ್ಠತೆ; ನಿಪುಣತೆ, ಕಲಾಕೌಶಲ್ಯ, ಕೈಮಾಟ; ಅದ್ಭುತ ಕಾರ್ಯ, ಪ್ರಾತಿಹಾರ್ಯ, ಮಹಿಮೆ, ಪವಾಡ. वि. ಪೂರ್ಣ; ಶ್ರೇಷ್ಠ, ಉತ್ತಮ; ಅತ್ಯಂತ. कमाल करना = ಮೀರಿಸು; ಅದ್ಭುತ ಕೆಲಸ ಮಾಡು; ಮಹಿಮೆ ತೋರು.

कमालियत, स्त्री. ಪರಿಪೂರ್ಣತೆ; ನಿಪುಣತೆ, ಕುಶಲತೆ.

कमासुत, पु. ಕೆಲಸ ಮಾಡುವವ, ದುಡಿಯುವವ; ಕೂಲಿಗಾರ, ಶ್ರಮಜೀವಿ.

कमी, स्त्री. ಕುಂದು, ಕೊರತೆ, ಅರಕೆ, ನ್ಯೂನತೆ, ಕಮ್ಮಿ.

क़मीज़, स्त्री. ಒಂದು ಬಗೆ ಅಂಗಿ.

कमीन, स्त्री. ಹೊಂಚು ಹಾಕುವಿಕೆ, ಪಾಳತಿ; ಹೊಂಚು ಹಾಕುವ ಸ್ಥಳ. पु. ಮನೆ ಆಳು; ಕೀಳು ಜಾತಿಯವ. वि. ನೀಚ.

कमीनगाह, स्त्री. ಹೊಂಚು ಹಾಕಿಕೊಂಡಿರುವ ಸ್ಥಳ, ಹೊಂಚು ಜಾಗ.

कमीनगी, स्त्री. ನೀಚತನ, ಕೀಳುತನ.

कमीना, वि. ನೀಚ, ಕೀಳಾದ; ಹೀನಾಯವಾದ.

कमीनापन, पु. ನೀಚತನ, ಕೀಳುತನ.

कमूद, पु. ಒಂದು ಮೂಲಿಕೆ.

कमेरा, पु. ಕೆಲಸಗಾರ, ಕೂಲಿಗಾರ.

कमेला, पु. ವಧೆ ಮಾಡುವ ಸ್ಥಳ, ಬಲಿಪೀಠ.

कमोरा, पु. **कमोरिया**, **कमोरी**, स्त्री. ಮಡಕೆ, ಗಡಿಗೆ.

क़याम, पु. ತಂಗುವ ಸ್ಥಳ, ಠಾಣ್ಯ; ನೆಲೆ, ಬೀಡು.

क़यामगाह, स्त्री. ತಂಗುವ ಸ್ಥಳ, ಬಂದರು, ರೇವು.

क़यामत, पु. ದೇವರ ಮುಂದೆ ಕರ್ಮವಿಚಾರಣೆಯ ದಿನ, ಲೋಕಾಂತ ದಿನ, ಪ್ರಳಯ; ಅನಾಹುತ, ಅನರ್ಥ; ಅಲ್ಲೋಲ ಕಲ್ಲೋಲ. कयामत का = ಅಸಾಧ್ಯವಾದ.

क़यास, पु. ಅಂದಾಜು, ಅನುಮಾನ; ಯೋಚನೆ.

क़यासी, वि. ಅಂದಾಜಿನ, ಊಹೆಯ.

करंक, पु. ತೆಂಗಿನ ಚಿಪ್ಪು, ಕರಟ; ಕಪಾಲ

करंज, पु. ಒಂದು ಮರ; ಒಂದು ಬಗೆ ಬಾಣಬಿರುಸು; ಕೋಳಿ, ಹುಂಜ.

करंजा, पु. ಹೊಂಗೆ ಮರ, ಹುಲಿಗಿಲು.

करंजुवा, पु. ಒಂದು ಬಗೆಯ ಮರ; ಒಂದು ಬಗೆ ಬಾಣಬಿರುಸು; ಖಾಕಿ ಬಣ್ಣ. वि. ಖಾಕಿ ಬಣ್ಣದ.

करंड, स्त्री. ಜೇನು ಗೂಡು, ರಾಡೆ; ಕತ್ತಿ; ಮಕ್ಕರಿ, ಬುಟ್ಟಿ; ಕುರುವಿಂದ ಕಲ್ಲು, ಕುರಂಜಿ.

करंब, पु. ಕೋಸು ಗೆಡ್ಡೆ.

क़रंबीक़, पु. ಭಟ್ಟಿ, ಬಕಯಂತ್ರ.

कर, पु. ಕರ, ಕೈ, ಹಸ್ತ; ಸೊಂಡಿಲು; ತೆರಿಗೆ, ವರಿ, ಸುಂಕ, ಕಂದಾಯ; ಕಪ್ಪ ಕಾಣಿಕೆ, ಪೊಗದಿ. कर लगाना = ತೆರಿಗೆ ವಿಧಿಸು.

करक, पु. ಕಮಂಡಲ; ಒಂದು ಮರ. स्त्री. ಕೊಡೆಯುವ ನೋವು, ದುಡಿತ, ಕೊಡತ; ಉರಿಮೂತ್ರ, ಮೂತ್ರ ಕೃಚ್ಛ್ರ; ಬಾಸುಂಡೆ, ಗಾದರಿ.

करकच, पु. ಕಡಲುಪ್ಪು.

करकट, पु. ಕಸ, ಕಡ್ಡಿ, ತಿಪ್ಪೆ. कूडा करकट = ಕಚಡ.

करकना, अक्रि. = कड़कना. वि. ಮೊರಡಾದ.

करकराना, अक्रि. ಕಿರಕಿರ ಎನ್ನು.

करकराहट, स्त्री. ಒರಟು, ಕರಡು; ಅರಿಗಣ್ಣು.

करखा, पु. = कड़खा.

करख़्त, वि. ಕಠಿಣ, ಗಟ್ಟಿಯಾದ; ಒಣಗಿದ; ಗಡುಸಾದ, ಬಿರುಸಾದ.

करख़्तगी, स्त्री. ಕಾಠಿಣ್ಯ; ಒರಟು; ಬಿರುಸು, ಗಡುಸು.

करग, पु. ಖಡ್ಗಮೃಗ, ಗೇಂಡಾಮೃಗ.

करगता, करगद्दा, पु. ಉಡದಾರ.

करगस, पु. ಗಿಡಗ, ಹದ್ದು.

करगह, पु. ಮಗ್ಗ; ಮಗ್ಗದ ಕುಣಿ.

करगहना, पु. ಬಾಗಿಲ ಮೇಲಿನ ಕಮಾನು; ದಾರವಂದದ ಪಟ್ಟಿ, ಉತ್ತರಂಗಿ, ಉತ್ತರಾಸು; ಕಮಾನಿನ ಅಣಕಲ್ಲು.

करघा, पु. = करगह.

करचंग, पु. ತಮಟೆ, ಡಬ್ಬು.

करछा, पु. ದೊಡ್ಡ ಸೌಟು, ಸಟ್ಟುಗ.

करछाल, स्त्री. ನಾಗಾಲೋಟ, ದೌಡು, ಹಾರಿಗ್ಗಾಲು.

करछी, स्त्री. ಸೌಟು; ಚಮಚ.

करछुला, पु. ದೊಡ್ಡ ಸೌಟು.

करणधार, पु. ಹಡಗಿನ ಗುಮಾಸ್ತೆ; ಹಡಗು ನಡಿಸುವವ, ಚುಕ್ಕಾಣಿಗಾರ; ಕಾರಭಾರಿ, ಚಾಲಕ.

करतब, पु. ಕಾರ್ಯ, ಕೆಲಸ; ಹಸ್ತ ಕೌಶಲ್ಯ, ಚಮತ್ಕಾರ; ಜಾಲ, ಮಾಟ.

करतबी, वि. ಕೆಲಸದ; ಕೈಗಾರಿಕೆಯ; ಹಸ್ತಕುಶಲ, ಸಮರ್ಥ; ಜಾಲಗಾರ, ಮಾಟಗಾರ.

करतल, पु. ಅಂಗೈ, ಕರತಲ, ಅಡಿಗೈ.

करतली, स्त्री. ಕೈಚಪ್ಪಾಳೆ.

करता, वि. ತರಬೇತಾದ, ಅನುಭವಿ, ನುರಿತ. पु. ಗುಂಡು ಹಾರಿಸುವಷ್ಟು ದೂರ; ಮಾಡುವವ, ಕರ್ತ; ಕೆಲಸ ನಡೆಸುವವ, ಚಾಲಕ; ಕಾರಭಾರಿ; ಒಡೆಯ. करता धरता = ಕಾರಣ ಕರ್ತ, ಸಂಚಾಲಕ, ಆಡಳಿತಗಾರ.

करतार, पु. ಕರ್ತೃ; ಕರ್ತ; ಸೃಷ್ಟಿ ಕರ್ತ; ಭಗವಂತ, ಈಶ್ವರ.

करताल, पु. **करताली**, स्त्री. ಕರ ತಾಡನ, ಚಪ್ಪಾಳೆ; ಕರತಾಳ, ಕೈತಾಳ, ಕಂಸತಾಲ, ಝುಲ್ಲರಿ.

करती, स्त्री. ಕರು ಸತ್ತ ಹಸುವಿನ ಹಾಲು ಕರೆವಾಗ ಉಪಯೋಗಿಸುವ ಕರುವಿನ ಪ್ರತಿರೂಪ, ಹುಸಿಕರು.

करतूत, स्त्री. ಕಾರ್ಯ, ಕೃತ್ಯ; ಮಾಟ; ನಡತೆ.

करद, पु. ಕರ ತೆರುವವ, ಕಂದಾಯ ತೆರುವವ, ಕರದಾತ, ತೆರಿಗೆದಾರ.

करदा, पु. ಮಾರುವ ದವಸದಲ್ಲಿರುವ ಕಸಕಡ್ಡಿ ಮೊದಲಾದುವು, ಕಸರು; ಇದಕ್ಕಾಗಿ ಅಳತೆಯಲ್ಲಿ ಮಾಡುವ ವಜಾ, ಉತ್ತಾರ.

करधनी, करधमनी, स्त्री. ಉಡದಾರ; ನಡುಕಟ್ಟು; ಮೇಖಲೆ, ಡಾಬು, ಒಡ್ಯಾಣ.

करन, पु. ಕುಲಾವಿಯ ಜರಿ, ಕುಚ್ಚು, ಗೊಂಚಲು; ಚುಕ್ಕಾಣಿ.

करनफूल, पु. ತಾಟಂಕ, ಕಿವಿಯ ಓಲೆ.

करनहार, वि. ಮಾಡುವವ, ಕರ್ತ.

करना, पु. ಒಂದು ಬಗೆ ಮರ; ಕಹಳೆ, ತುತ್ತೂರಿ. सक्रि. ತಯಾರಿಸು; ಮಾಡು; ರೂಪಿಸು; ಏರ್ಪಡಿಸು; ಆಗಿಸು; ಬೆಳೆಯಿಸು (ಪ್ರಯಾಣ); ದೊಡ್ಡದು ಮಾಡು (ದೀಪ), ಆರಿಸು. कोशिश करना = ಪ್ರಯತ್ನ ಪಡು. ठीक करना = ಸರಿಪಡಿಸು. मालूम करना = ತಿಳಿದುಕೊಳ್ಳು. मोहित करना = ಮೋಹಗೊಳಿಸು.

करनाय, स्त्री. ತುತ್ತೂರಿ, ಕೊಂಬು.

करनाल, पु. ತುತ್ತೂರಿ, ಕೊಂಬು; ಡೋಲು; ಒಂದು ತರಹದ ತುಪಾಕಿ.

करनी, स्त्री. ಮಾಡುವಿಕೆ; ಕರ್ಮ, ಕಾರ್ಯ; ಉತ್ತರಕ್ರಿಯೆ; ಕರಣೆ, ಕರಣಿಕೆ, ತಾಪಿ.

करपत्र, पु. ಗರಗಸ, ರಂಪ; ಚೀಟಿ, ಜಾಹಿರಾತಿನ ಚೀಟಿ, ಜನಗಳಲ್ಲಿ ಹಂಚುವ ನೋಟೀಸು, ಹಸ್ತಪತ್ರಿಕೆ.

करपीड़न, पु. ಪಾಣಿಗ್ರಹಣ, ವಿವಾಹ.

करपृष्ठ, पु. ಹೊರಗೈ.

करब, पु. ಪೇಚಾಟ, ತಾಪತ್ರಯ.

करबरना, अक्रि. ಹಾರಾಡು; ಚಿಲಿಪಿಲಿಗುಟ್ಟು.

करबला, पु. ಹುಸ್ಸೇನ್ ಮರಣಹೊಂದಿದ ಅರಬ್ಬಿ ದೇಶದ ಮರುಭೂಮಿ, ಹುಸೇನಿನ ಗೋರಿ.

करबूस, पु. ಕತ್ತಿ ತಗುಲಿಹಾಕುವ ಕುದುರೆ ಜೀನಿನ ಬಳೆ ಅಥವಾ ಬಾರು, ಈಟಿ ತಗುಲಿಸುವ ಬಾರು.

करम, पु. ಕೆಲಸ, ಕರ್ಮ; ವಿಧಿ, ಭಾಗ್ಯ;

ದ್ವಿತಿಯಾ ವಿಭಕ್ತಿ; ಅನುಗ್ರಹ, ಕೃಪೆ; ಔದಾರ್ಯ.

करमकल्ला, पु. ಕೋಸು ಗೆಡ್ಡೆ.

करमठ, वि. ಕರ್ಮನಿಷ್ಠ, ಕರ್ಮಠ.

करमाला, पु. ಜಪಮಾಲೆ, ಜಪಸರ.

करमुहा, वि. ಕಲಂಕಿತ.

करर, पु. ವಿಷವುಳ್ಳ ಒಂದು ಹುಳು.

कररना, अक्रि. ಚರಮುರವೆನ್ನುತ್ತ ಮುರಿ

करल, पु. ಹಂಡೆ, ಕಡಾಯಿ.

करलगुआ, वि. ಹೆಂಡತಿ ವಶನಾದವ, ಹೆಂಡತಿಯನ್ನು ಅತಿಯಾಗಿ ಪ್ರೀತಿಸುವವ, ಸ್ತ್ರೀ ಮರುಳ.

करलाना, सक्रि. ಬಗೆಹರಿಸು, ಇತ್ಯರ್ಥ ಮಾಡು. अक्रि. ಕೂಗಾಡು, ಕಿರಿಚು.

करवट, स्त्री. ಮಗ್ಗಲು, ಪಕ್ಕ. करवट बदलना या लेना = ಮಗ್ಗಲು ಬದಲಾಯಿಸು; ಕವುಚಿ ಬೀಳು.

करवत, पु. ಗರಗಸ, ರಂಪ.

करवा, पु. ಮೂಗಿನ ಮಡಕೆ, ಗಿಂಡಿ. करवा चौथ = ಕಾರ್ತೀಕ ಮಾಸದ ಗೌರೀ ವ್ರತ.

करवाना, सक्रि. "कराना" का प्रे. रूप.

करवारा, करवाला, पु. ಕತ್ತಿ; ಜಲ್ಲೆ, ದೋಣಿ ಒತ್ತುವ ಕೋಲು, ಹುಟ್ಟು.

करवाली, स्त्री. ಸಣ್ಣ ಕತ್ತಿ, ಸುರಗಿ.

करवीर, पु. ಕತ್ತಿ; ಸುಡುಗಾಡು.

करवैया, वि. ಮಾಡುವವ, ಕಾರಕ.

करश्मा, पु. ಚಮತ್ಕಾರ; ಅದ್ಭುತ ಕಾರ್ಯ, ಪವಾಡ, ಪ್ರಾತಿಹಾರ್ಯ.

करषना, सक्रि. ಎಳೆ; ಆಕರ್ಷಿಸು; ಉಳು

करसी, स्त्री. ಒಣ ಸಗಣಿ, ಕಾಕುಳ್ಳು; ಸಲಿಕೆ, ಮಮಟಿ.

करह, स्त्री. ಹೇವರಿಕೆ, ಜುಗುಪ್ಸೆ.

करहा, पु. ಒಂಟೆ; ಮೊಗ್ಗು. स्त्री. ಹೆಣ್ಣು ಸಿಂಹ.

क़रां, पु. ದಡ, ತೀರ.

करांकुल, पु. ನೀರೆ ಹಕ್ಕಿ.

करांत, पु. ಗರಗಸ, ರಂಪ.

करांती, पु. ಗರಗಸದ ಕೆಲಸ ಮಾಡುವವ, ರಂಪಗಾರ.

कराइत, स्त्री. ಒಂದು ಬಗೆ ಹಾವು.

कराई, स्त्री. ಮಾಡುವಿಕೆ, ಮಾಡಿಸುವಿಕೆ; ಮಾಡಿಕೆ, ಮಾಡಾಟ, ಮಾಟ; ಹೊಟ್ಟು, ಬೂಸ.

क़रात, पु. ರತ್ನ ಮುಂತಾದವುಗಳನ್ನು ತೂಕ ಮಾಡುವ ಒಂದು ಭಾರ, ರತ್ತಿ, ಮಂಜಡಿ.

कराना, सक्रि. "करना" का प्रे. रूप.

क़राबत, स्त्री. ನೆಂಟತನ, ಬಾಂಧವ್ಯ; ಸಂಬಂಧ, ಸನ್ನಿಕರ್ಷ.

क़राबतदार, पु. ನೆಂಟ, ಸಂಬಂಧಿಕ, ಬಂಧುಬಳಗ.

क़राबतदारी, स्त्री. ನೆಂಟಸ್ತಿಕೆ.

क़राबती, वि. ಸಂಬಂಧದ, ಬಳಗದ.

क़राबा, पु. ಗಾಜಿನ ದೊಡ್ಡ ಪಾತ್ರೆ, ಗಾಜಿನ ಬುದ್ದಲಿ.

क़राबीन, स्त्री. ಸಣ್ಣ ತುಪಾಕಿ.

करामत, स्त्री. ಅನುಗ್ರಹ; ಅದ್ಭುತ ಕೆಲಸ.

करामात, स्त्री. ಚಮತ್ಕಾರ; ಅದ್ಭುತ

ಕಾರ್ಯ, ಪವಾಡ, ಪ್ರಾತಿಹಾರ್ಯ.

करामाती, वि. ಅದ್ಭುತ ಕಾರ್ಯ ಮಾಡುವವ, ಸಿದ್ಧ, ಪವಾಡ ಪುರುಷ.

करायल, पु. ರಾಳ, ಗುಗ್ಗುಳ.

क़रार, पु. ಸ್ಥೈರ್ಯ; ನೆಮ್ಮದಿ, ವಿಶ್ರಾಂತಿ; ವಚನ, ಪ್ರತಿಜ್ಞೆ.

क़रारदाद, स्त्री. ಸ್ತ್ರೀಧನ, ತೆರವು.

क़रारनामा, पु. ಕಟ್ಟುಡಕ, ಕರಾರುಪತ್ರ.

करारा, पु. ನದಿಯ ಎತ್ತರವಾದ ದಡ, ಏರಿ; ದಿನ್ನೆ. वि. ಗಟ್ಟಿಯಾದ, ಕಠಿಣವಾದ; ಗಡುಸು; ಗರುಗು.

कराल, वि. ಭಯಂಕರ, ಘೋರ.

कराव, पु. ಅಣ್ಣ ಸತ್ತ ಮೇಲೆ ಅತ್ತಿಗೆಯನ್ನು ಮದುವೆಯಾಗುವ ಸಂಪ್ರದಾಯ; ಕೂಡುವಳಿ, ಕೂಡಿಕೆ.

क़रावल, पु. ದಂಡಿನ ಮುಂಭಾಗ, ದಳಮುಖಿ, ಚೂಣಿ; ಮುಂಗಾವಲು; ಪಹರೆಯವ.

कराह, स्त्री. ನಿಟ್ಟುಸಿರು, ಮುಲುಕು.

कराहत, स्त्री. ಹೇಸಿಗೆ, ಜುಗುಪ್ಸೆ.

कराहना, अक्रि. ನಿಟ್ಟುಸಿರು ಬಿಡು, ಸುಯ್ಯು, ನರಳು.

कराहियत, स्त्री. ತಿರಸ್ಕಾರ; ಜುಗುಪ್ಸೆ.

क़रिया, पु. ಗ್ರಾಮ, ಹಳ್ಳಿ.

करिल, पु. ಚಿಗುರು, ತಳಿರು.

करिहांव, स्त्री. ಕಟಿ, ಸೊಂಟ; ನಿತಂಬ.

क़रिन, वि. ಸೇರಿದ, ಕೂಡಿದ, ಸಹಿತ

क़रीना, पु. ಕ್ರಮ, ರೀತಿ, ಸಿರಣಿ; ಜೋಡಿಕೆ, ಒಪ್ಪ; ಅಂಗಸಂಯೋಗ; ಯೋಗ್ಯತೆ, ದಕ್ಷತೆ.

क़रीब, क्रिवि. ಸಮೀಪವಾಗಿ, ಹತ್ತಿರ; ಸುಮಾರು, ಅಜಮಾಸು, ಹೆಚ್ಚು ಕಡಿಮೆ.

करीम, वि. ಕೃಪಾಳು, ದಯಾನಿಧಿ. पु. ಈಶ್ವರ, ಭಗವಂತ.

करीमन, पु. ಚಿನ್ನದ ಮುಲಾಮು.

करीर, पु. ಬಿದಿರಿನ ಕುಡಿ, ಕಳಲೆ.

करील, पु. ಒಂದು ಮುಳ್ಳು ಗಿಡ.

करुआर, पु ದೋಣಿಯ ಹಲ್ಲೆ, ಹುಟ್ಟು.

करुणा, स्त्री. ಕರುಣೆ, ಕನಿಕರ.

करूला, पु. ಕೈಗಡಗ, ಬಳೆ.

करेब, पु. ಒಂದು ಬಗೆ ರೇಷ್ಮೆ ಬಟ್ಟೆ.

करेला, पु. ಹಾಗಲಕಾಯಿ; ಕಂಠಿಸರದ ಒಂದು ಬಗೆ ಮಣಿ, ಕರಿಮಣಿ.

करेली, स्त्री. ಕಾಡು ಹಾಗಲಕಾಯಿ.

करैत, पु. ಕರಿ ನಾಗರಹಾವು.

करैल, स्त्री. ಕರಿ ಮಣ್ಣು. पु. ಬಿದಿರ ಕುಡಿ, ಕಳಲೆ; ಹೊಲೆಯರ ಕಾಗೆ.

करैला, पु. ಹಾಗಲಕಾಯಿ.

करोचना, सक्रि. = **करोदना.**

करोड़, पु. ನೂರು ಲಕ್ಷ, ಕೋಟಿ. करोड़ों = ಕೋಟ್ಯಂತರ.

करोड़पति, पु. ಕೋಟೀಶ್ವರ, ಹಣವಂತ, ಧನಿಕ.

करोड़ा, करोडी, पु. ತೆರಿಗೆ ಎತ್ತುವವ; ತಪಸೀಲುದಾರ; ಖಜಾನ್ಚಿ.

करोदना, करोना, सक्रि. ತುರಿ, ಕೆರೆ, ಹೆರೆ.

करोनी, स्त्री. ಕೆರೆದದ್ದು, ಕೆರಕಲು.

करौंछा, वि. ಶ್ಯಾಮಲ ವರ್ಣದ.

करौंदा, पु. ಕರಮಂದಿಗೆ, ಕವಳೆಕಾಯಿ.
करौत, पु. ಗರಗಸ, ರಂಪ. स्त्री. ಇಟ್ಟುಕೊಂಡವಳು, ಉಪಪತ್ನಿ.
करौता, पु. **करौती**, स्त्री. ಗರಗಸ, ಕೈಗರಗಸ; ಗಾಜಿನಪಾತ್ರೆ.
करौला, पु. ಬೇಟೆಗಾರ.
करौली, स्त्री. ಚಾಕು, ಚೂರಿ.
कर्कर, पु. ಕುರುವಿಂದ ಕಲ್ಲು. वि. ಒರಟು, ಮುರುಸು.
कर्कश, वि. ಕಠೋರ; ಉಗ್ರ, ಕ್ರೂರ; ಮುರುಸು; ಬಿರುಸಾದ.
क़र्ज़, **क़र्ज़ा**, पु. ಋಣ, ಸಾಲ, ಕಡ.
क़र्ज़दार, वि. ಸಾಲ ತೆಗೆದುಕೊಂಡವ, ಸಾಲಗಾರ, ಋಣಿ.
क़र्ज़दारी, स्त्री. ಋಣ, ಸಾಲಗಾರಿಕೆ.
कर्ण, पु. ಕರ್ಣ, ಕಿವಿ; ಹಡಗಿನ ಚುಕ್ಕಾಣಿ; ಕರ್ಣರೇಖೆ.
कर्णगूत, पु. ಗುಗ್ಗೆ.
कर्णधार, पु. ಹಡಗು ನಡೆಸುವವ, ಚುಕ್ಕಾಣಿಗಾರ; ಕಾರಣಕರ್ತ; ವ್ಯವಸ್ಥಾಪಕ.
कर्णफूल, पु. ಹತ್ತು ಕಡಕು.
कर्णलतिका, स्त्री. ಕಿವಿಯ ಆಲೆ.
कर्णाट, पु. ಕರ್ಣಾಟಕ ದೇಶ.
कर्णाटी, स्त्री. ಒಂದು ರಾಗ.
कर्त्तरी, पु. ಕತ್ತರಿ.
कर्त्तव्यमूढ़, वि. ಏನುಮಾಡುವುದೆಂದು ತೋಚದವ; ಕಕ್ಕಾಬಿಕ್ಕಿಯಾದವ.
कर्त्ता, पु. ಮಾಡುವವ; ರಚಿಸುವವ; ಸೃಷ್ಟಿಸುವವ; ಈಶ್ವರ; ಮಾಲೀಕ, ಯಜಮಾನ; ಗಂಡ.
कर्त्ताधर्त्ता, पु. ಕಾರಣಕರ್ತ; ಮನೆತನ ನಡೆಸುವವ; ಆಡಳಿತಗಾರ.
कर्त्तार, पु. ಕರ್ತೃ; ಸೃಷ್ಟಿಕರ್ತ.
कर्त्री, स्त्री. "कर्त्ता" का स्त्री. रूप.
कर्दम, पु. ಕೆಸರು; ಪಾಪ; ಮಾಂಸ.
कर्पास, पु. ಕಾರ್ಪಾಸ, ಅರಳೆ.
कर्बी, स्त्री. ಜೋಳದ ಕಡ್ಡಿ.
कर्म, पु. ಕರ್ಮ; ಕಾರ್ಯ; ಕರ್ತವ್ಯ; ಉದ್ಯೋಗ; ಕರ್ಮಪದ; ದ್ವಿತೀಯಾವಿಭಕ್ತಿ; ಭಾಗ್ಯ, ವಿಧಿ; ಕರ್ಮಾಂತರ.
कर्मकार, पु. ಕೆಲಸಗಾರ; ಕರ್ಮಕಾರ, ಕಮ್ಮಾರ.
कर्मकारक, पु. ದ್ವಿತೀಯಾವಿಭಕ್ತಿ.
कर्मचारी, पु. ಕೆಲಸ ಮಾಡುವವ, ಕಾರ್ಯಕರ್ತ; ಉದ್ಯೋಗಸ್ಥ, ಅಧಿಕಾರಿ.
कर्मरेखा, स्त्री. ಹಣೆಬರಹ.
कर्महीन, वि. ಭಾಗ್ಯಹೀನ, ನಿರ್ಭಾಗ್ಯ.
कर्मी, वि. ಕೆಲಸದ; ಕರ್ಮಶೀಲ; ಅದೃಷ್ಟವಂತ.
कर्रा, वि. ಮೊರಡು; ಬಿರುಸು.
कलंक, पु. ಚಿತ್ತು; ಕಲಂಕ; ದೋಷ.
क़लंदर, पु. ಮುಹಮ್ಮದೀಯ ಬೈರಾಗಿ; ಗುಡಾರದ ಬಟ್ಟೆ, ಪಡಮು; ಕೋತಿ ಮುಂತಾದುವುಗಳನ್ನಾಡಿಸುವವ.
क़लंदरा, पु. ರೇಷ್ಮೆ ಬಟ್ಟೆ.
कल, पु. ನಿನ್ನೆ; ನಾಳೆ. स्त्री. ಪಾರ್ಶ್ವ, ಪಕ್ಕ, ಮಗ್ಗಲು; ಯಂತ್ರ, ಕೀಲು;

ತುಪಾಕಿ ಚಾಪು, ತುಪಾಕಿಯ ಕುದುರೆ; ಬೋನು; ಸೌಖ್ಯ, ನೆಮ್ಮದಿ, ಶಾಂತಿ. कल कारख़ाना = ಗಿರಣಿ, ಕಾರಖಾನೆ.

क़लई, स्त्री. ಕಲಾಯಿ; ಮುಲಾಮು ಗಿಲಾವು, ಗಿಲೀಟು; ಥಳುಕು; ಸುಣ್ಣ ಬಳಿಯುವುದು. क़लई खुलना = ಗುಟ್ಟು ಬಟ್ಟ ಬಯಲಾಗು.

क़लईगर, पु. ಕಲಾಯಿ ಮಾಡುವವ.

क़लईगरी, स्त्री. ಕಲಾಯಿ ಮಾಡುವ ಕೆಲಸ, ಗಿಲೀಟು ಕೆಲಸ.

क़लईदार, वि. ಮುಲಾಮು ಅಥವಾ ಗಿಲೀಟು ಹಚ್ಚಿದ.

क़लक़, पु. ವ್ಯಾಕುಲ, ವಿಷಾದ; ದಿಗಿಲು.

कलकल, स्त्री. ಜಗಳ, ವಾಗ್ವಾದ, ರಗಳೆ. पु. ನೀರು ಹರಿಯುವ ಶಬ್ದ; ಕೋಲಾಹಲ.

कलगट, पु. ಗುದ್ದಲಿ, ಪಿಕಾಸಿ.

कलगा, पु. ಕಲ್ಲಿಗೆ ಹೂ.

कलग़ी, स्त्री. ಹಕ್ಕಿಗಳ ಶಿಖೆ, ಜುಟ್ಟು; ತುರಾಯಿ; ಪಕ್ಷಿ ರೆಕ್ಕೆಯಿಂದ ಮಾಡಿದ ತಲೆಕುಚ್ಚು, ಕೊಂಡೆ; ಕಟ್ಟಡಗಳ ಶಿಖರ; ಕಲಶ; ಒಂದು ತರದ ಲಾವಣಿ.

कलग़ीबाज़, पु. ಲಾವಣಿಗಾರ.

कलछा, पु. ದೊಡ್ಡ ಸೌಟು, ಸಟ್ಟುಗ.

कलछी, **कलछुल**, स्त्री. ಸೌಟು.

कलजिभा, **कलजीभा**, **कलजीहा**, वि. ಕೆಟ್ಟನಾಲಗೆಯ, ಹೊಲ್ಲ ನಾಲಗೆಯವ; ಅಮಂಗಲವಾದ ಮಾತುಗಳನ್ನಾಡಿದರೆ ಫಲಿಸುವಂಥ ಗುಣವುಳ್ಳ ನಾಲಗೆಯವ, ದುರ್ನಾಲಗೆಯವ, ಮಚ್ಚೆನಾಲಗೆಯವ.

कलजुग, पु. ಕಲಿಯುಗ.

कलझंवा, वि. ಕಪ್ಪಾದ, ಶ್ಯಾಮಲ.

कलटना, सक्रि. ಆಸೆ ತೋರಿಸಿ ನಿರಾಶೆಪಡಿಸು, ಹಿಂಸಿಸು, ಸತಾಯಿಸು.

कलदार, वि. ಯಂತ್ರದಿಂದ ಕೂಡಿದ. पु. ಸರಕಾರಿ ರೂಪಾಯಿ.

कलप, पु. ಗಂಜಿ, ಅಂಬಲಿ; ನರೆಗೂದಲನ್ನು ಕಪ್ಪಾಗಿಸುವ ಔಷಧ, ಕೇಶಕಲ್ಪ, ತಳಪ.

कलपना, अक्रि. ವೇದನೆಯಿಂದ ಕೂಗು, ನರಳು, ಪ್ರಲಾಪಿಸು, ಗೋಳಿಡು.

कलपाना, सक्रि. ದುಃಖಗೊಳಿಸು, ಸತಾಯಿಸು, ಗೋಳಾಡಿಸು.

कलफ़, पु. ಬಟ್ಟೆಗೆ ಹಾಕುವ ಗಂಜಿ; ಕಲೆ; ಮಡಿಬಕ್ಕೆ, ಮಡಿಮೆ, ಮುದ್ದಣ.

कलबल, पु. ಯುಕ್ತಿ, ತಂತ್ರ; ಗದ್ದಲ, ಗುಲ್ಲು. वि. ಗೊಜಗು (ಮಾತು).

कलबूत, पु. = कालबुद.

क़लम, पु. (स्त्री.) ಲೇಖಣಿ, ಪೇನಾ, ಲೆಕ್ಕಣಿಕೆ; ಕೂರ್ಚ, ತೂಲಿಕೆ; ಕಸಿ ಮಾಡಲು ಕೊಯ್ದ ಮರದ ಶಾಖೆ; ಒಂದು ತರಹದ ಬಾಣಬಿರುಸು; ನಕಾಸಿ ಮಾಡುವ ಉಳಿ; ಕ್ಷೌರ ಮಾಡದೆ ಬಿಟ್ಟಿರುವ ಕಣ್ತುಲೆಯ ಕೂದಲು; ಸ್ಫಟಿಕ, ಹರಳು. क़लम करना = ಕಡಿ ಕತ್ತರಿಸು; ಕಸಿ ಮಾಡು. क़लम तोड़ना = ರಸವತ್ತಾಗಿ ಬರೆ, ಬಲು ಸ್ವಾರಸ್ಯವಾಗಿ ಬರೆ.

कल-मकल, स्त्री. ಸಂಕಟ, ಕಷ್ಟ;

ತಾಪತ್ರಯ; ಗೋಟಾಳ.
क़लमकार, पु. ಕೆತ್ತುವವ, ಚಿತ್ರಗಾರ.
क़लमकारी, स्त्री. ಕೆತ್ತನೆಯ ಕೆಲಸ, ನಕಾಷಿ ಕೆಲಸ; ಚಿತ್ರಕಲೆ.
कलमज़द, वि. (ಬರೆದದ್ದನ್ನು) ಹೊಡೆದು ಹಾಕಿದ, ವಜಾಮಾಡಿದ; ರದ್ದಾದ.
क़लमतराश, पु. ಸಣ್ಣ ಚೂರಿ, ಚಾಕು.
क़लमदान, पु. ಮಸಿಕುಡಿಕೆ ಮತ್ತು ಲೇಖಣಿಯನ್ನಿಡುವ ಪೆಟ್ಟಿಗೆ, ಕಲಮುದಾನಿ.
कलमना, सक्रि. ಕತ್ತರಿಸು, ತುಂಡರಿಸು.
क़लमबंद, वि. ಬರೆಯಲ್ಪಟ್ಟ, ಲಿಪಿಬದ್ಧ, ಲಿಖಿತ.
कलमल, पु. ಗಾಬರಿ, ಒದ್ದಾಟ.
कलमलाना, अक्रि. ಒದ್ದಾಡು, ಪೇಚಾಡು, ಸಂಕಟಪಡು.
क़लमा, पु. ವಾಕ್ಯ; ವೇದವಾಕ್ಯ, ಕುರಾನಿನ ವಾಕ್ಯ; ಮುಹಮ್ಮದೀಯ ಮತದ ಮೂಲಮಂತ್ರ ಅಥವಾ ವಿಶ್ವಾಸ ಪ್ರಮಾಣ, (ಅಂದರೆ ला इलाह इल्लिल्लाह, मुहमद उर रसूल अल्लाह = ಅಲ್ಲಾ ವಿನಹ ಮತ್ತಾರೂ ಇಲ್ಲ; ಮುಹಮ್ಮದನೇ ಆತನ ದೂತ.) क़लमा पढ़ना = ಕಲಮಾ ಮಂತ್ರವನ್ನು ಪಠಿಸು; ಮುಸಲ್ಮಾನನಾಗು.
कलमी, स्त्री. ಒಂದು ತರಕಾರಿ, ಕಲಂಬಿ.
क़लमी, वि. ಬರೆದ, ಬರವಣಿಗೆಯಲ್ಲಿರುವ, ಲಿಖಿತ; ಕಸಿಮಾಡಿದ.
कलमुंहा, वि. ಕಪ್ಪು ಮೋರೆಯುಳ್ಳ; ಕಳಂಕಿತ; ನತದೃಷ್ಟ.
कलरव, पु. ಕಲಕಲ ಧ್ವನಿ, ಝೇಂಕಾರ; ಪಾರಿವಾಳ.
कलवरिया, पु. ಹೆಂಡದ ಅಂಗಡಿ, ಸೇಂದಿ ಅಂಗಡಿ, ಪಡಖಾನೆ.
कलवार, पु. ಹೆಂಡ ಇಳಿಸುವವ, ಈಡಿಗ; ಸಾರಾಯಿ ಮಾರುವವ, ಕಲಾಲ, ಶೌಂಡಿಕ.
कलश, कलस, कलसा, पु. ಕೊಡಪಾನೆ, ಬಿಂದಿಗೆ; ದೇವಸ್ಥಾನದ ಶಿಖರ, ಕಲಶ.
कलशी, कलसी, स्त्री. ಸಣ್ಣ ಬಿಂದಿಗೆ; ಸಣ್ಣ ಕಲಶ.
कलसिरा, स्त्री. ಕರಿಯ ತಲೆಯ; ಖೋಡಿ, ಕೂಳ.
कलह, स्त्री. ಕಲಹ, ಜಗಳ.
कलहारा, वि. ಜಗಳಗಂಟ.
कलहारी, स्त्री. ಜಗಳಗಂಟಿ, ತಾಟಕಿ.
कलही, स्त्री. ಜಗಳಗಂಟಿ; ಗಯ್ಯಾಳಿ.
कलाँ, वि. ದೊಡ್ಡ, ಹಿರಿಯ.
कला, स्त्री. ಕಲೆ; ಭಾಗ; ಚಮತ್ಕಾರ, ತಂತ್ರ; ವಿದ್ಯೆ; ಯಂತ್ರ; ಮುಗ್ಗರಿಸುವಿಕೆ; ಪೈಟ, ಪಲ್ಟಿ, ಲಾಗ, ಕರಣ. कला खाना = ಮುಗ್ಗರಿಸು, ಲಾಗ ಹೊಡೆ.
कलाई, स्त्री. ಕೈ ಹರಡು, ಮಣಿಕಟ್ಟು; ಒಂದು ತರಹದ ದ್ವಿದಳ ಧಾನ್ಯ; ದಾರದ ಉಂಡೆ, ಕಂಡಿಕೆ; ಆನೆಯ ಕೊರಳಿನ ಮಿಳಿ, ಹೊರಜಿ. कलाई की घड़ी = ಕೈ ಗಡಿಯಾರ.
कलाकंद, पु. ಕಲ್ಲುಸಕ್ಕರೆಯ ಬರ್ಫಿ.
कलाकार, पु. ಕಲಾವಿದ, ಕಲಾಕಾರ.

कलाजंग, पु. ಕುಸ್ತಿ ವರಸೆ, ಪಟ್ಟು.

कलादा, पु. ಆನೆ ಮೇಲೆ ಮಾವಟಿಗನು ಕೂಡುವ ಸ್ಥಳ.

कलाना, सक्रि. ಕಾಳು ಹುರಿ; ಕಲಸು; ಕಲಕು, ಕದಡು.

कलाप, पु. ಗುಂಪು, ಸಮೂಹ; ನವಿಲ ಗರಿ.

कलाबत्तू, **कलाबत्तून**, पु. ಸರಿಗೆ, ಜರಿ, ಜರತಾರಿ, ಕಲಾಬತ್ತು.

कलाबत्तूनी, वि. ಕಲಾಬತ್ತಿನ, ಜರತಾರಿಯು.

कलाबा, पु. ದಾರದ ಉಂಡೆ, ಕಂಡಿಕೆ.

कलाबाज़, वि. ಲಾಗ ಹೊಡೆಯುವವ, ಕೊಲ್ಲಟಿಗ.

कलाबाज़ी, स्त्री. ಲಾಗ ಹೊಡೆಯುವುದು; ಪಂಟಿಲಾಗ, ಪೈಟಿ, ಕೊಲ್ಲಣಗೆ. कलाबाज़ी खाना = ಲಾಗಹೊಡೆ.

कलाम, पु. ಮಾತು, ವಚನ; ವಾಣಿ; ಸಂಭಾಷಣೆ; ಪ್ರತಿಜ್ಞೆ, ಆಕ್ಷೇಪಣೆ.

कलाम अल्लाह, पु. ದೇವವಾಣಿ; ಕುರಾನು.

कलार, **कलाल**, पु. ಹೆಂಡ ಮಾರುವವ, ಕಲಾಲ, ಶೌಂಡಿಕ, ಈಡಿಗ.

कलारिन, **कलाली**, स्त्री. ಹೆಂಡ ಮಾರುವವಳು, ಈಡಿಗಿತ್ತಿ.

कलालख़ाना, पु. ಹೆಂಡದ ಅಂಗಡಿ, ಸೇಂದಿ ಅಂಗಡಿ, ಪಡಖಾನೆ.

कलावंत, पु. ಸಂಗೀತಗಾರ; ಗಾಯಕ; ನಟ.

कलावा, पु. ನೂಲಿನುಂಡೆ, ಕಂಡಿಕೆ; ರಕ್ಷಾಬಂಧನ, ಆನೆ ಕೊರಳಿನ ಮಿಣಿ.

कलिंदा, पु. ತರಬೂಜು, ಕಲ್ಲಂಗಡಿ ಹಣ್ಣು.

कलिका, स्त्री. ಮೊಗ್ಗು, ಮುಗುಳು, ಅರುಂಬು.

कलिया, पु. ಅಟ್ಟ ಮಾಂಸ, ಬಾಡು.

कलियान, पु. ಹೊಗೆಸೊಪ್ಪಿನ ಸಣ್ಣ ಚಿಲುಮೆ.

कलियाना, अक्रि. ಮೊಗ್ಗೆ ಬಿಡು, ಮುಗುಳೊಗು; ಕೊನರು, ಚಿಗುರು.

कलियारी, स्त्री. ಅಗ್ನಿಶಿಖೆ ಎಂಬ ಗಿಡ, ಲಾಂಗಲಿಕ.

कली, स्त्री. ಮೊಗ್ಗು, ಅರುಂಬು, ಮುಗುಳು; ಹೊಸದಾಗಿ ಹೊರಡುವ ಪಕ್ಷಿಗಳ ರೆಕ್ಕೆ; ಚಿಪ್ಪಿನ ಸುಣ್ಣ; ಬಿಸಿ ಸುಣ್ಣ

कलीद, स्त्री. ಬೀಗದಕೈ, ಕೀಲಿಕೈ.

कलीदार, पु. ಒಂದು ಬಗೆ ಇಜಾರು.

कलीम, पु. ಮಾತಾಡುವವ, ಸಂಭಾಷಿಸುವವ. कलीम अल्लाह = ದೇವರೊಡನೆ ಮಾತಾಡುವವ.

कलीरा, पु. ಖರ್ಜೂರದ ಮಾಲೆ.

क़लील, वि. ಸ್ವಲ್ಪ, ಕೊಂಚ; ವಿರಳ.

कलीसा, पु. ಕ್ರೈಸ್ತರ ದೇವಾಲಯ.

कलीसिया, पु. ಕ್ರೈಸ್ತರ ಮಂಡಲಿ.

कलूख़, पु. ಮಣ್ಣಿನ ಹೆಂಟೆ.

कलूटा, वि. ಕಪ್ಪು ಬಣ್ಣದ, ಕರಿಯ.

कलेऊ, पु. ಬೆಳಗಿನ ಊಟ, ನೇರೆ.

कलेजा, पु. ಯಕೃತ್ತು, ಕಾಳಜ, ಬುಕ್ಕೆ; ಹೃದಯ, ಗುಂಡಿಗೆ, ಎದೆ; ಸಾಹಸ, ಛಾತಿ, ಧೈರ್ಯ, ಔದಾರ್ಯ.

कलेजा टूकटूक होना = ಎದೆ ಒಡೆದು ಹೋಗು, ಗುಂಡಿಗೆ ಬಿರಿ. कलेजा धड़कना = ಗುಂಡಿಗೆ ಬಡಿ, ಎದೆ ಹಾರು. कलेजे पर सांप लोटना = ಹೊಟ್ಟೆಕಿಚ್ಚುಪಡು, ಅಸೂಯೆಪಡು; ಪ್ರೀತಿಸು, ಮೋಹಗೊಳ್ಳು. कलेजे से लगाना = ಆಲಿಂಗಿಸು, ಅಪ್ಪಿಕೊಳ್ಳು, ತಬ್ಬಿಕೊಳ್ಳು.

कलेजी, स्त्री. ಪ್ರಾಣಿಗಳ ಬುಕ್ಕೆ, ಹೀರಿ.

कलेवर, स्त्री. ದೇಹ, ಶರೀರ, ಒಡಲು; ಆಕಾರ, ರೂಪ.

कलेवा, पु. ಬೆಳಗಿನ ಊಟ, ಪ್ರಾತರ್ಭೋಜನ, ನೇರೆ; ಬುತ್ತಿ; ವಿವಾಹದಲ್ಲಿ ವರನಿಗೆ ಹುಗ್ಗಿ ಬಡಿಸುವ ಒಂದು ಸಂಪ್ರದಾಯ, ಹುಗ್ಗಿಶಾಸ್ತ್ರ.

कलैया, स्त्री. ಲಾಗ, ಪಂಟಿಲಾಗ, ಪಲ್ಟಿ, ಕೊಲ್ಲಣಿಗೆ.

कलोर, स्त्री. ಕಡಸು, ಮಣಕ.

कलोल, स्त्री. ಕುಣಿದಾಟ; ಉಲ್ಲಾಸ; ವಿಲಾಸ, ಕೇಲಿ.

कलौंजी, स्त्री. ಒಂದು ಬಗೆ ಜೀರಿಗೆ.

कलौंस, वि. ಕಪ್ಪಾದ, ಕರಿಯ; ಕಪ್ಪು ಮಿಶ್ರಿತ (ಬಣ್ಣ).

कल्क, पु. ಗಸಿ, ಮುದ್ದಿ, ರಾಡಿ, ಮಷ್ಟು; ಮಲ, ಗುಗ್ಗೆ; ಪಾಪ; ಮೋಸ.

कल्पना, स्त्री. ಕಲ್ಪನೆ; ಯುಕ್ತಿ, ಹಂಚಿಕೆ; ಸೃಷ್ಟಸೆ.

कल्पित, वि. ಕಲ್ಪಿಸಿದ, ಕಲ್ಪಿಸಲ್ಪಟ್ಟ; ಸೃಷ್ಟನೆಯ, ಖೋಟಾ, ಖೊಟ್ಟಿ.

क़ल्ब, पु. ಮನಸ್ಸು, ಹೃದಯ; ತಿರುಳು; ಮಜ್ಜೆ, ನೆಣ; ಸೇನೆಯ ಮಧ್ಯಭಾಗ. वि. ತಲೆಕೆಳಗಾದ; ಹೊಲಸು; ಖೋಟಾ, ಖೊಟ್ಟಿ; ಕಳವಿ, ಕಳಪೆ.

क़ल्बसाज़, पु. ಕಳಪೆ ನಾಣ್ಯ ಮಾಡುವವ, ಖೋಟಾ ನಾಣ್ಯ ಮಾಡುವವ.

क़ल्बसाज़ी, स्त्री. ಕಳಪೆ ನಾಣ್ಯ ತಯಾರಿಸುವಿಕೆ, ಖೊಟ್ಟಿ ನಾಣ್ಯದ ತಯಾರಿಕೆ.

क़ल्बी, स्त्री. ಹಾರ್ದಿಕ, ಮನಃಪೂರ್ವಕವಾದ; ಸೃಷ್ಟನೆ, ಕಳವಿ, ಖೋಟಾ.

कल्य, पु. ಅರುಣೋದಯ.

कल्याण, पु. ಮಂಗಳ, ಕಲ್ಯಾಣ; ಸುಖ.

कल्लर, वि. ಗೊಡ್ಡು, ಬರಡು, ಬಂಜರು. पु. ಬಂಜರು ಜಮೀನು; ಬೆಂಗಾಡು; ಉಪ್ಪುನೆಲ.

कल्लांच, वि. ನೀಚ, ಹೀನ, ದರಿದ್ರ.

कल्ला, पु. ಮೊಳಕೆ; ಚಿಗುರು; ತಲೆ; ದವಡೆ, ಕದಪು, ಕೆನ್ನೆ; ಮೀನುಗಳ ಶ್ವಾಸಕೋಶ, ಕಿವಿರು. कल्लातोड़ = ಮುಖ ಮುರಿಯುವ (ಮಾತು).

कल्लादराज़, वि. ಕೂಗಾಡುವವ, ಗದ್ದಲ ಮಾಡುವವ.

कल्लादराज़ी, स्त्री. ಕೂಗಾಟ, ಕಿರಿಚಾಟ.

कल्लाना, अक्रि. ಉರಿ, ನವೆಯಾಗು.

कल्लापरवर, पु. ಒಂದು ಮಿಠಾಯಿ.

कल्लोल, पु. ಆಟ, ಆನಂದ; ನೀರಿನ ಅಲೆ, ಕಲ್ಲೋಲ.

कल्हारना, सक्रि. ಬೆಂಕಿಯಲ್ಲಿ ಹುರಿ; ಎಣ್ಣೆಯಲ್ಲಿ ಕರಿ. अक्रि. ಕೂಗಾಡು, ನರಳು.

कवक, पु. ಅಣಬೆ, ನಾಯಿಕೊಡೆ.

कवच, पु. ಕವಚ, ತನುತ್ರಾಣ; ರಕ್ಷೆ, ತಾಯಿತಿ; ರಣಭೇರಿ.

कवयी, स्त्री. ಒಂದು ಜಾತಿ ಮೀನು.

कवर, पु. ಕವಳ, ತುತ್ತು; ಜುಟ್ಟು; ಜಡೆ.

कवरी, स्त्री. ಕೂದಲು; ಜುಟ್ಟು.

कवल, पु. ಕವಳ, ತುತ್ತು, ಗುಕ್ಕು; ಒಂದು ಜಾತಿ ಮೀನು; ಬಾಯಿ ಮುಕ್ಕಳಿಸುವ ಔಷಧ; ಬಾಯಿ ತುಂಬ ಸುರಿದುಕೊಳ್ಳುವಷ್ಟು ನೀರು, ಮುಕ್ಕಳು; ಒಂದು ಪಕ್ಷಿ; ಒಂದು ಜಾತಿ ಕುದುರೆ; ಹುಗ್ಗಿಯ ಹಬ್ಬಕ್ಕಾಗಿ ಮೊಟ್ಟಮೊದಲು ಕೊಯ್ದ ಭತ್ತದರಿ.

क़वाम, पु. ಸಕ್ಕರೆ ಪಾಕ, "ಕ್ಷೀರಾ".

क़वायद, पु. (क़ायदा का ब. रूप.) ನಿಯಮಾವಳಿ, ನಿಬಂಧನೆಗಳು; ವಿಧಿ, ಕಟ್ಟಳೆ; ವ್ಯಾಕರಣ ಸೂತ್ರ, ವ್ಯಾಕರಣ; ಕವಾತು, ಯೋಗ್ಯ.

कविता, कविताई, स्त्री. ಕವನ; ಕವಿತೆ.

कविराज, पु. ದೊಡ್ಡ ಕವಿ; ವೈದ್ಯ, ಆಯುರ್ವೇದ ವೈದ್ಯ, ಪಂಡಿತ.

कवेलू, पु. ಹೆಂಚು.

कवेला, पु. ಕಾಗೆ ಮರಿ.

कश, पु. ಕಶೆ, ಕೊರಡೆ, ಚಬುಕು; ಎಳೆದಾಟ; ಎಳತ; ಸೇದುವಿಕೆ. कशम-कश = ಎಳದಾಟ; ಧಕ್ಕಾಮುಕ್ಕಿ, ನೂಕು ನುಗ್ಗು; ಹಿಂಜರಿಯುವಿಕೆ.

कशा, स्त्री. ಕಶೆ, ಚಾವುಟಿ, ಚಬುಕು.

कशाकश, पु. ಎಳೆಯುವಿಕೆ; ಎಳತ; ಆಕರ್ಷಣ; ನಚ್ಚುಮೆಚ್ಚು; ಎಳದಾಟ, ಹೋರಾಟ; ಒದ್ದಾಟ, ಪೇಚಾಟ.

कशिश, स्त्री. ಆಕರ್ಷಣೆ, ಎಳತ.

कशीदगी, स्त्री. ಎಳೆಯುವಿಕೆ; ವೈಮನಸ್ಯ.

कशीदह, कशीदा, वि. ಎಳೆಯಲ್ಪಟ್ಟ; ಕಸೂತಿ ಕೆಲಸ ಮಾಡಿದ. पु. ಕಸೂತಿ ಕೆಲಸ, ಹೂಗೆಲಸ.

कश्ती, स्त्री. ದೋಣಿ, ನಾವೆ; ತಾಂಬಾಣ, ತಟ್ಟೆ, ಹರಿವಾಣ; ಚದುರಂಗದ ಆನೆ.

कश्फ़, पु. ತೆರೆಯುವಿಕೆ, ಸ್ಪಷ್ಟೀಕರಣ; ಪ್ರವಚನ.

कष्ट, पु. ಕಷ್ಟ, ತೊಂದರೆ. कष्ट उठाना = ಪ್ರಯಾಸಪಡು, ಪಾಡುಪಡು.

कस, पु. ಪರೀಕ್ಷೆ; ಬಲ; ವಶ, ಅಧೀನ; ಅಡಚಣೆ; ಕಷಾಯ, ರಸ, ಸಾರ; ಕತ್ತಿಯ ಬಾಗು; ಮನುಷ್ಯ, ವ್ಯಕ್ತಿ.

कसक, पु. ವೇದನೆ, ನೋವು; ಹಗೆ, ದ್ವೇಷ; ಬಯಕೆ, ಅಭಿಲಾಷೆ, ಹಂಬಲ; ಸಹಾನುಭೂತಿ.

कसकना, अक्रि. ನೋಯು, ದುಡಿ; ವೇದನೆಯಾಗು.

कसकसा, वि. ಮರಳು ಮರಳಾದ, ತರಿ.

कसकसाना, अक्रि. ಮರಳು ಮರಳಾಗಿರು.

कसकुट, कसकूत, पु. ಕಂಚು.

कसगर, पु. ಕುಂಬಾರ; ಲೆಪ್ಪಗಾರ.

कसन, स्त्री. ಬಿಗಿಯುವಿಕೆ, ಬಿಗಿತ; ಬಿಗಿಯುವ ಹಗ್ಗ; ಕಪಿಲೆ ಬಾನೆಯ ತೊಗಲಿನ ಬಾರು; ಚಿತ್ರವಧೆ, ಹಿಂಸೆ; ಕಿಸಿಗೋಳ.

कसना, सक्रि. ಬದ್ಧಿಸು, ಕಟ್ಟು; ಬಿಗಿ; ಸಿದ್ಧಪಡಿಸು; ಪರೀಕ್ಷಿಸು, ಒರೆಹಚ್ಚು; ತುರುಕು, ಜಡಿ; ತುಪಾಕಿಯನ್ನು ಬಾರು ಮಾಡು; ತುಪ್ಪದಲ್ಲಿ ಕರಿ. अक्रि. ಬಿಗಿಯಾಗು, ಗುಪ್ತವಾಗು, ಹಿಡಿ; ತುಂಬು; ಸಿದ್ಧವಾಗು. पु. ಕಟ್ಟು, ಕಂತೆ; ಜೋಳಿಗೆ, ಹಸಿಬೆ ಚೀಲ; ತೊಗಲಿನ ಬಾರು; ಒಂದು ಬಗೆ ಜೇಡರ ಹುಳು.

कसनी, स्त्री. ಬಿಗಿದು ಕಟ್ಟುವ ದಾರ, ಮಿಳಿ; ಕಟ್ಟುವ ಬಟ್ಟೆ, ಕಟ್ಟುವಾಸ; ಬಿಗಿಯಾದ ಅಂಗಿ; ರವಿಕೆ; ಒರೆಗಲ್ಲು; ಪರೀಕ್ಷೆ.

कसब, पु. ಪರಿಶ್ರಮ, ಮೆಹನತ್ತು; ಕಸಬು, ಉದ್ಯೋಗ, ವೃತ್ತಿ; ವೇಶ್ಯಾ ವೃತ್ತಿ, ಸೂಳೆಗಾರಿಕೆ.

कसबल, पु. ಶಕ್ತಿ, ಬಲ; ಸಾಹಸ.

क़सबा, पु. ದೊಡ್ಡ ಗ್ರಾಮ, ಊರು, ಚಿಕ್ಕ ಪಟ್ಟಣ, ಕಸಬೆ.

क़सबाती, वि. ಪಟ್ಟಣದವ, ನಾಗರಿಕ.

कसबिन, **कसबी**, स्त्री. ವೇಶ್ಯೆ, ಗಂಡು ಸೆಟ್ಟು, ಸೂಳೆ.

क़सम, स्त्री. ಶಪಥ, ಪ್ರತಿಜ್ಞೆ; ಆಣೆ, ಪ್ರಮಾಣ. क़सम खाना = ಶಪಥ ಮಾಡು, ಆಣೆಯಿಡು, ಪ್ರಮಾಣ ಮಾಡು. क़सम खाने को = ಹೆಸರಿಗೆ, "ನಾಮಕೇವಾಸ್ತೆ".

कसमसाना, अक्रि. ಓಲಾಡು; ಚಡ ಪಡಿಸು, ತಲ್ಲಣಿಸು.

कसमसाहट, स्त्री. ಒದ್ದಾಟ, ಓಲಾಟ; ತಲ್ಲಣ.

कसर, स्त्री. ಕುಂದು, ಕೊರತೆ, ಲೋಪ; ಕುಂದಕ, ನಷ್ಟ; ತರಗಡೆ, ತೇಮಾನ; ಅಜೀರ್ಣ; ವೈಮನಸ್ಯ, ಮನಸ್ತಾಪ. कसर निकालना = ನಷ್ಟ ಕೈಗೂಡು ಮಾಡು; ಸೇಡು ತೀರಿಸು.

कसरत, स्त्री. ಕಸರತ್ತು, ವ್ಯಾಯಾಮ; ಗರಡಿ ಸಾಧನೆ, ಅಂಗಸಾಧನೆ, ಸಾಮು; ಹೇರಳ, ಆಧಿಕ್ಯ, ಬಾಹುಳ್ಯ. कसरतराय = ಬಹುಮತ.

कसरती, स्त्री. ಕಸರತ್ತು ಮಾಡುವವ, ಗರಡಿಸಾಧನೆ ಮಾಡುವವ; ಬಲಿಷ್ಠ.

कसल, पु. ಆಲಸ್ಯ, ಸೋಮಾರಿತನ; ಜಡ್ಡು, ಜಾಡ್ಯ.

कसवाना, सक्रि. कसना का प्रे. रूप.

कसा, वि. ಬಿಗಿಯಾದ, ಬಿಮ್ಮನಿರುವ; ನೆಟ್ಟಗಾದ.

क़साइन, स्त्री. ಕಟುಕರವಳು; ಘಾತಕಿ.

कसाई, स्त्री. ಬಿಗಿಯುವಿಕೆ, ಬಿಗಿತ.

क़साई, पु. ಕಟುಕ, ಕಸಾಯಿ; ಘಾತಕ. वि. ದಯೆಯಿಲ್ಲದವ, ಕ್ರೂರಿ.

कसाईख़ाना, **क़साईबाड़ा**, पु. ಕಟುಕನ ಅಂಗಡಿ; ವಧ್ಯಸ್ಥಾನ.

कसा जाना, अक्रि. ಕಿಲುಬು.

कसाना, सक्रि. ಬಿಗಿಸು, ಬಿಗಿ ಮಾಡು; ಒರೆ ಹಚ್ಚಿಸು, ಪರೀಕ್ಷಿಸುವಂತೆ ಮಾಡು; ಕಿಲುಬು ಹಿಡಿಸು.

कसाया, वि. ಬಿಗಿದ, ಸಂಸಿದ್ಧವಾದ.

कसार, पु. ಗೋಧಿ ಹಿಟ್ಟು ಅಥವಾ ರವೆ ಯನ್ನು ತುಪ್ಪದಲ್ಲಿ ಕರಿದು ಮಾಡುವ

ಒಂದು ಸಿಹಿ ತಿಂಡಿ, ರವೆ ಉಂಡೆ.

कसाला, पु. ಪ್ರಯಾಸ, ಪರಿಶ್ರಮ, ಕಷ್ಟ; ತೊಂದರೆ, ತಾಪತ್ರಯ, ಗಾಸಿ.

कसाव, पु. **कसावट**, **कसाहट**, स्त्री. ಬಿಗಿಯುವಿಕೆ, ಬಿಗಿತ; ಒಗರು; ಕಿಲುಬು, ಚಿಲುಮು; ಪರೀಕ್ಷೆ, ಶೋಧನೆ.

क़सावत, स्त्री. ದುಃಖ, ಸಂತಾಪ.

कसियाना, अक्रि. ಒಗರಾಗು, ಕಿಲುಬು.

कसी, स्त्री. ಆರು ಅಡಿಯ ಒಂದು ಅಳತೆ; ಬಾಯಿ ಗುದ್ದಲಿ, ಮಮ್ಮಟಿ.

कसीदा, पु. ಹೊಲಿಗೆಯ ಹೂಗೆಲಸ, ಕಸೂತಿ ಕೆಲಸ, ಬೂಟಾ ಕೆಲಸ.

क़सीदा, पु. ಒಂದು ಬಗೆ ನಿಂದಾಸ್ತುತಿ, ವ್ಯಾಜಸ್ತುತಿಯ ಕವಿತೆ.

कसीफ़, वि. ದಟ್ಟವಾದ, ಸಾಂದ್ರ; ಅಪ್ರಿಯ, ವಿರಸವಾದ.

कसीर, वि. ಅನೇಕ; ಹೇರಳ; ಸಮೃದ್ಧ.

कसीला, वि. ಬಲಿಷ್ಠ, ಗಟ್ಟಿಗ.

क़सीर, पु. ಅಪರಾಧಿ, ತಪ್ಪಿತಸ್ಥ.

कसीला, वि. ಕಸುವುಳ್ಳ, ಬಲವುಳ್ಳ.

कसीस, पु. ಅನ್ನಭೇದಿ, ಹಿರೇಕಸ.

क़सूर, पु. ಅಪರಾಧ, ತಪ್ಪು; ತಪ್ಪಿತ.

क़सूरमंद, **क़सूरवार**, वि. ತಪ್ಪಿತಸ್ಥ, ಅಪರಾಧಿ.

क़सूरी, स्त्री. = क़सूर.

कसेरहट्टा, पु. ಕಂಚುಗಾರರ ಅಂಗಡಿ.

कसेरा, पु. ಕಂಚುಗಾರ, ಬೋಗಾರ.

कसेरिन, स्त्री. ಕಂಚುಗಾತಿ.

कसेरू, पु. ಒಂದು ಬಗೆ ಸಿಹಿ ಗೆಡ್ಡೆ, ಗಾಂಗೇಯ ಗೆಣಸು.

कसेला, **कसैला**, वि. ಒಗರಾದ, ಕಟು, ಕಹಿಯಾದ.

कसैली, स्त्री. ಅಡಕೆ.

कसोरा, पु. ಮಣ್ಣಿನ ಬಟ್ಟಲು, ಶರಾವೆ, ಹಣತೆ.

कसौंदी, स्त्री. ಒಂದು ಬಗೆ ಉಪ್ಪಿನ ಕಾಯಿ; ಕಾಸಮರ್ದ ಗಿಡ.

कसौटी, स्त्री. ಒರೆಗಲ್ಲು, ನಿಕಷ; ಪರಕಾವಣೆ, ಪರೀಕ್ಷೆ.

कस्तूरा, पु. ಮುತ್ತಿನ ಚಿಪ್ಪು, ಶುಕ್ತಿಕೆ; ಕಸ್ತೂರಿ ಮೃಗ.

कस्तूरिया, पु. ಕಸ್ತೂರಿ ಮೃಗ वि. ಕಸ್ತೂರಿ ಮಿಶ್ರಿತ; ಕಸ್ತೂರಿಯ ಬಣ್ಣದ.

कस्तूरी, स्त्री. ಕಸ್ತೂರಿ; ಕಸ್ತೂರಿ ಮೃಗ.

क़स्द, पु. ಉದ್ದೇಶ, ಅಭಿಪ್ರಾಯ; ಯೋಜನೆ, ಹಂಚಿಕೆ.

क़स्दन्, क्रिवि. ಉದ್ದೇಶಪೂರ್ವಕವಾಗಿ, ತಿಳಿತಿಳಿದು, ಬೇಕೆಂದು.

क़स्साब, वि. ಕಟುಕ, ಕಸಾಯಿ.

कहकशां, पु. ಆಕಾಶಗಂಗೆ.

क़हक़हा, पु. ಅಟ್ಟಹಾಸ, ಪಗಪಗನೆ ನಗುವುದು.

कहगिल, पु. ಮಣ್ಣುಗಾರೆ.

क़हत, स्त्री. ಬರಗಾಲ, ಕ್ಷಾಮ, ದುರ್ಭಿಕ್ಷ. क़हतसाली = ಕ್ಷಾಮಕಾಲ.

कहता, वि. ಹೇಳುವವ.

कहन, पु. ಹೇಳಿಕೆ, ಕಥನ; ಮಾತು; ಗಾದೆ; ಕವನ.

कहना, पु. ಮಾತು; ವಚನ; ಅಪ್ಪಣೆ. सक्रि. ಹೇಳು, ಅನ್ನು; ನುಡಿ; ಕವನ

ಮಾಡು. कहना बदना=ನಿಶ್ಚಯಿಸು. कहना सुनना = ಬುದ್ಧಿ ಹೇಳು. कहने को = ಹೇಳುವುದಕ್ಕೆ, ಹೆಸರಿಗೆ, "ನಾಮ್ ಕಾವಾಸ್ತೆ".

कहनावत, कहनूत, स्त्री. ಸಾಮತಿ, ಗಾದೆ; ವಚನ; ಉಕ್ತಿ.

कहनी, वि. ಹೇಳತಕ್ಕ, ಕಥನೀಯ.

कहफ़, पु. ದೊಡ್ಡ ಗವಿ, ಗುಹೆ.

कह-मुकरी, स्त्री. = मुकरी.

क़हर, पु. ವಿಪತ್ತು, ಆಪತ್ತು, ಅಪಾಯ; ದಂಡನೆ. वि. ಭಯಂಕರವಾದ.

कहरना, अक्रि. ನರಳು, ನಿಡುಸುಯ್ಯು.

कहरवा, पु. ಒಂದು ರಾಗ; ಒಂದು ನೃತ್ಯ.

कहराना, अक्रि. ನರಳು, ನಿಡುಸುಯ್ಯು.

क़हरी, वि. ವಿಪತ್ತು ತಂದೊಡ್ಡುವವ, ಉಪದ್ರವಿ.

कहरुबा, पु. ಒಂದು ಬಗೆ ಗೋಂದು, ಶಿಲಾರಾಳ; ಅಂಬರು, ತೃಣಗ್ರಾಹಿ.

कहल, पु. ಉರಿ, ಉಷ್ಣ; ಧಗೆ, ಝಳ, ಬೇಗೆ.

कहलना, अक्रि. ವ್ಯಾಕುಲಪಡು; ಬೆಂದು ಹೋಗು, ಬೇಗುದಿಗೊಳ್ಳು.

कहलवाना, सक्रि. ಹೇಳಿಸು, ಅನ್ನಿಸು.

कहलाना, सक्रि. ಹೇಳಿಸು, ಅನ್ನಿಸು; ಕರೆಕಳುಹಿಸು, ಹೇಳಿ ಕಳುಹಿಸು. अक्रि. ಕರೆಯಲ್ಪಡು, ಅನ್ನಿಸಿಕೊಳ್ಳು, ಎನಿಸು; ಬೆಂಕಿಯ ತಾಪದಿಂದ ಬೇಗುದಿಗೊಳ್ಳು, ತಪಿಸು. कहला भेजना =ಹೇಳಿ ಕಳುಹಿಸು, ವರ್ತಮಾನ ಕಳುಹಿಸು.

क़हवा, पु ಕಾಫಿ ಬೀಜ, ಬೂಂದು.

कहवाना, सक्रि. ಹೇಳಿಸು, ಅನ್ನಿಸು.

कहवैया, पु. ಹೇಳುವವ, ಅನ್ನುವವ.

कहाँ, क्रिवि. ಎಲ್ಲಿ.

कहा, पु. ಮಾತು; ಹೇಳಿಕೆ; ಅಪ್ಪಣೆ. क्रिवि. ಯಾವ ಬಗೆ, ಹೇಗೆ.

कहाकही, स्त्री. ವಾಗ್ವಾದ, ಚರ್ಚೆ.

कहाना, सक्रि. ಹೇಳಿಸು, ಅನ್ನಿಸು.

कहानी, स्त्री. ಕಥೆ, ಕಟ್ಟು ಕತೆ. रामकहानि=ಪುರಾಣ, ಗೋಳು.

कहानीकार, पु. ಕತೆಗಾರ.

कहार, पु. ನೀರು ಹೊರುವವ; ಪಲ್ಲಕ್ಕಿ ಹೊರುವವ, ಬೋಯಿ, ಬೋವಿ; ಆಳು. नाई कहार=ಆಳು ಕಾಳು, ಆಳು ಹೋಳು.

कहारिन, स्त्री. "कहार" का स्त्री. रूप.

कहालत, स्त्री. ಸೋಮಾರಿತನ, ಆಲಸ್ಯ.

कहावत, स्त्री. ಸಾಮತಿ, ನಾಣ್ಣುಡಿ, ಗಾದೆ; ಹೇಳಿದ ಮಾತು, ಉಕ್ತಿ.

कहासुना, पु. ಹೇಳಿದ್ದು ಮಾಡಿದ್ದು; ಅನುಚಿತ ಮಾತು.

कहासुनी, स्त्री. ವಾಗ್ವಾದ, ಜಗಳ; ಮಾತು ಕತೆ.

कहीं, क्रिवि. ಎಲ್ಲಾದರೂ, ಎಲ್ಲೋ. कहीं कहीं=ಅಲ್ಲಲ್ಲಿ, ಒಂದೊಂದೆಡೆ. कहीं का = ಎಲ್ಲಿಯದೋ. कहीं न कहीं = ಎಲ್ಲಾದರೂ ಒಂದು ಕಡೆ.

कही, स्त्री. ಗೋಗ್ರಾಸ, ಮೇವು.

कहुं, कहूं, क्रिवि. =कहीं.

कहूआ, पु. ಹುಣಸೆ, ಹುಣಸೆ ಹಣ್ಣು.

कँइयां, पु. ಧೂರ್ತ, ಠಕ್ಕ, ಕಳಿಂಗ, ಚತುರ; ಚುರುಕು; ನಿಪುಣ; ಮಾರ್ವಾಡಿಯರ ಒಂದು ಜಾತಿ.

कँइयांपन, कँइयांपना, पु. ಧೂರ್ತತನ, ಠಕ್ಕು, ಚಾತುರ್ಯ; ಚಮತ್ಕಾರ; ಚುರುಕುತನ; ಚುರುಕು ಬುದ್ಧಿ.

कांई, सर्व. ಏನು.

कांकर, पु. **कांकरी**, स्त्री. = कंकर.

कांख, स्त्री. ಕಂಕುಳು.

कांखना, सक्रि. ಮುಲುಕು, ಮುಕ್ಕರಿ, ತಿಣುಕು.

कांखसोती, स्त्री. ಉತ್ತರೀಯವನ್ನು ಎಡತೋಳಿನ ಮೇಲೂ ಬಲಗೈಯ ಕೆಳಗೂ ಬರುವಂತೆ ಧರಿಸುವುದು, ಬಲಂದೊಡುವಿಕೆ, ಉಪವೀತ.

कांखा, पु. ಮುಲುಕುವಿಕೆ, ತಿಣುಕುವಿಕೆ

कांगड़ी, स्त्री. ಚಿಕ್ಕ ಅಗ್ಗಿಷ್ಟಿಕೆ.

कांच, पु. ಗಾಜು; ಕಚ್ಚೆ, ಕಾಸೆ; ಗುದ; ಗುದಭ್ರಂಶ, ಗೂದೆ.

कांचुली, स्त्री. ರವಿಕೆ, ಕುಪ್ಪಸ; ಹಾವಿನ ಪರೆ, ಹೆರೆ.

कांजी, स्त्री. ತಂಗುಳನ್ನದ ಹುಳಿರಸ; ಹುಳಿ ಅಂಬಲಿ; ಗಂಜಿ; ನೀರು ಮಜ್ಜಿಗೆ. कांजी हाउस=ತೊಂಡು ದನಗಳನ್ನು ಹಿಡಿದು ಹಾಕುವ ಸರಕಾರಿ ದೊಡ್ಡಿ, "ಪೌಂಡ್", ಕೊಂಡವಾಡ.

कांटा, पु. ಕಂಟಕ; ಮುಳ್ಳು; ಗಾಳ; ಮೃಗಪಕ್ಷಿಗಳ ನಖ, ಕೊಂಕುಗುರು; ಹಿಮ್ಮಡಿ ಮುಳ್ಳು, ಮುಮ್ರೋಜು; ತಕ್ಕಡಿ ಮುಳ್ಳು; ತಕ್ಕಡಿ, ತರಾಸು; ಕೊಂಡಿ, ಕೊಕ್ಕೆ; ಪಾತಾಳ ಗರಡಿ, ಪಾತಾಳಭೇದಿ; ಗಡಿಯಾರದ ಮುಳ್ಳು; ನಾಲಿಗೆಯಲ್ಲಿ ಏಳುವ ಸಣ್ಣ ಗುಳ್ಳೆ.

कांटी, स्त्री. ಸಣ್ಣ ಮುಳ್ಳು; ಚಿಕ್ಕ ತಕ್ಕಡಿ; ಕೊಕ್ಕೆ, ಕೊಂಡಿ; ಹತ್ತಿಯಲ್ಲಿ ಇರುವ ಕಸಕಡ್ಡಿ.

कांठा, वि. ಹತ್ತಿರವಾದ, ಸಮೀಪದ. पु. ಕೊರಳು; ಪಕ್ಷಿಗಳ ಕೊರಳಿನ ವರ್ತುಲ.

कांड, पु. ಗಣೆ, ಜಲ್ಲೆ; ದಂಟು; ಭಾಗ; ಪರಿಚ್ಛೇದ; ಆಟ, ಪ್ರದರ್ಶನ; ಘಟನೆ.

कांडना, सक्रि. ತುಳಿ, ಮಿದಿ; ಭತ್ತ ಕುಟ್ಟು.

कांडली, स्त्री. ನುಚ್ಚುಗೋಳೀ ಸೊಪ್ಪು, ಬಚ್ಚಲೆ ಸೊಪ್ಪು.

कांडी, स्त्री. ತೊಲೆ, ಜಂತೆ; ಒರಳು.

कांडूर, वि. ಹೇಡಿ, ಭೀರು, ಪುಕ್ಕಲ.

कांति, स्त्री. ಕಾಂತಿ, ಹೊಳಪು.

कांतू, स्त्री. ಎಲುಬು, ಅಸ್ಥಿ.

कांदा, पु. ನೀರುಳ್ಳಿ, ಈರುಳ್ಳಿ, ಉಳ್ಳಿಗೆಡ್ಡೆ.

कांदी, स्त्री. ೨೦ ಮಣದ ತೂಕ, ಖಂಡಿ

कांदू, पु. ಹುರಿಗಡಲೆ ಮೊದಲಾದವು ಮಾರುವವ; ಮಿಠಾಯಿ ಮಾರುವವ.

कांदो, पु. ಕೆಸರು, ಬದಿ, ಕೊಚ್ಚೆ.

कांधना, सक्रि. ಹೆಗಲು ಕೊಡು; ಒತ್ತಾಸೆ ಮಾಡು; ಭಾರ ವಹಿಸು; ಸವರಿಸು, ನಿಬಾಯಿಸು.

कांधिया, कांधी, पु. ಹೆಣ ಹೊರುವವ

कांप, स्त्री. ಹಂದಿಯ ಕೋರೆಹಲ್ಲು; ಆನೆಯ ದಂತ; ಗಾಳಿಪಟದ ಬಿಲ್ಲು; ಕಿವಿಯ ಓಲೆ. पु. ದೌರ್ಭಾಗ್ಯ.
कांपना, अकि. ಕಂಪಿಸು, ಅಲ್ಲಾಡು, ನಡುಗು, ಅದುರು.
काँय काँय, काँव काँव, स्त्री. ಕಾಗೆಯ ಕೂಗು; ಗದ್ದಲ, ರಂಪು.
काँवर, पु. ಅಡ್ಡೆ, ಕಾವಡಿ.
काँवरा, वि. ದಿಗಿಲುಗೊಂಡ, ಗಾಬರಿಬಿದ್ದ.
काँवरिया, काँवरी, पु. ಕಾವಡಿ ಹೊರುವವ; ಅಡ್ಡೆಕಾರ.
कांवारथी, पु. ಹರಕೆ ಸಲ್ಲಿಸಲು ಕಾವಡಿ ಹೊತ್ತು ಪುಣ್ಯಕ್ಷೇತ್ರಕ್ಕೆ ಹೋಗುವವ, ಕಾವಡಿಯ ಸೇವಾರ್ಥಿ.
कांस, स्त्री. ಜಗಳ; ಕಾಕಬ್ಬು, ಕಾಶ.
कांसा, पु. ಕಾಂಸ್ಯ, ಕಂಚು; ಭಿಕ್ಷಾಪಾತ್ರೆ, ಬವನಾಸಿ, ಕಪ್ಪರ.
कांसागर, पु. ಕಂಚುಗಾರ, ಬೋಗಾರ.
कांसी, वि. ಕಂಚಿನಿಂದಾದ, ಕಂಚಿನ.
का, प्रत्य. ಷಷ್ಠೀ ವಿಭಕ್ತಿ ಪ್ರತ್ಯಯ.
काइनात, स्त्री. ಸರ್ವಸ್ವ, ಸಮಸ್ತ.
काई, स्त्री. ಪಾಚಿ, ಹಾವಸೆ, ಕಲ್ಲುಹೂ, ಬೂಸವಿಗೆ.
काक, पु. ಕಾಗೆ; ಬೆಂಡು, ಬಿರಟುಮರ.
काकड़ा, पु. ಚರ್ಮ, ಚಕ್ಕಳ; ದೀಪದ ಬತ್ತಿ.
काकपक्ष, पु. ಕುರುಳು, ಮುಂಗುರುಳು.
काकपद, पु. ಬಿಟ್ಟುಹೋದ ಅಕ್ಷರವನ್ನು ತೋರಿಸುವ ಗುರುತು, ಹಂಸಪಾದ.
काकरेज, पु. ನೇರಳೆಬಣ್ಣ, ಜಾಂಬಳಿ.
काकरेज़ा, पु. ನೇರಳೆ ಬಣ್ಣದ ವಸ್ತ್ರ.
काकरेज़ी, वि. ನೇರಳೆ ಬಣ್ಣದ. पु. ನೇರಳೆ ಬಣ್ಣ, ಜಾಂಬಳಿ, ಊದಾ.
काकली, स्त्री. ಮಧುರ ಧ್ವನಿ; ಕನ್ನಗತ್ತರಿ.
काका, पु. ತಂದೆಯ ಸಹೋದರ, ದೊಡ್ಡಪ್ಪ ಅಥವಾ ಚಿಕ್ಕಪ್ಪ, ಕಕ್ಕಾ.
काकाकौआ, काकातूआ, पु. ಬಿಳೀ ಗಿಳಿ
काकी, स्त्री. ದೊಡ್ಡಪ್ಪ ಅಥವಾ ಚಿಕ್ಕಪ್ಪನ ಹೆಂಡತಿ, ಕಕ್ಕಿ; ಹೆಣ್ಣು ಕಾಗೆ.
काकु, पु. ವ್ಯಂಗ್ಯ; ಕೊರಚಾಟ.
काकुन, पु. ಒಂದು ಧಾನ್ಯ.
काकुल, पु. ಗುಂಗುರುಗೂದಲು; ಜುಟ್ಟು
काग, पु. ಕಾಗೆ; ಬಿರಟು ಮರ, ಬೆಂಡು; ಬಿರಡೆ, ದಿಬ್ಬಣ, ಬೂಚು, ಬೆಣೆ.
काग़ज़, पु. ಕಾಗದ, ಪತ್ರ, ಪತ್ರಿಕೆ.
काग़ज़ात, पु. (काग़ज़ का ब. रूप.) ಕಾಗದ ಪತ್ರಗಳು, ದಸ್ತಾವೇಜು.
काग़ज़ी, वि. ಕಾಗದದಿಂದ ಮಾಡಿದ; ಲಿಖಿತವಾದ; ತೆಳುವಾದ ಸಿಪ್ಪೆಯ (ಬಾದಾಮಿ); ಕಾಗದ ಮಾರುವವ. काग़ज़ी घोड़े दौड़ाना = ಪತ್ರವ್ಯವಹಾರ ನಡೆಸುತ್ತಿರು.
कागर, पु. ಪಕ್ಷಿಗಳ ತುಪ್ಪಳ.
कागद, पु. ಕಾಗದ.
कागा, पु. ಕಾಗೆ.
कागाबासी, स्त्री. ಬೆಳಗ್ಗೆ ಬಂಗಿ ಸೇದುವುದು; ಕರಿಯ ಮುತ್ತು.

कागारोल, पु. ಗದ್ದಲ, ಗುಲ್ಲು, ರಂಪ, ರಾದ್ಧಾಂತ.

कागौर, पु. ಕಾಕಬಲಿ, ವಾಯಸ ಪಿಂಡ.

काच, पु. =कांच.

काची, स्त्री. ಹಾಲಿನ ಪಾತ್ರೆ; ಹಲ್ವ.

काछ, पु. ಕಚ್ಚೆ; ವೇಷ, ಸೋಗು.

काछन, स्त्री. =काछिन.

काछना, सक्रि. ಕಚ್ಚೆಕಟ್ಟು; ಮುದುರಿಕೊಳ್ಳು; ಬಳಿದು ತೆಗೆ, ಜಾಲಿಸು, ಬಗಿ; ಗೋರು, ಬಾಚು.

काछनी, स्त्री. **काछा**, पु. ಕಚ್ಚೆ; ಕಾಸಿ ಕಂಚಡಿ, ಕಾಚಾ, ಹನುಮಾನ್ ಚಡ್ಡಿ.

काछरा, पु. ಚಡ್ಡಿ, ಕಾಸೆ.

काछिन, स्त्री. ತೋಟಗಾತಿ.

काछी, पु. ತೋಟಗಾರ, ಮಾಲಿ.

काछे, क्रिवि. ಹತ್ತಿರ, ಬಳಿಯಲ್ಲಿ.

काज, पु. ಕೆಲಸ, ಕಾರ್ಯ; ಕಸಬು, ಉದ್ಯೋಗ; ಉದ್ದೇಶ; ವಿವಾಹ; ಗುಂಡಿ ತಗುಲಿಸುವ ರಂಧ್ರ, ಗುಂಡಿ ಮನೆ, ಕಾಜಾ. काम काज = ಕೆಲಸ ಕಾರ್ಯ, ಕೆಲಸ ಬೊಗಸೆ.

काजर, काजल, पु. ಕಾಡಿಗೆ, ಕಜ್ಜಳ, ಕುಡಿ ಕಪ್ಪು.

क़ाज़िब, वि. ಸುಳ್ಳುಹೇಳುವವ, ಸುಳ್ಳು; ಸುಳ್ಳಾದ, ಹುಸಿ.

काजी, वि. ಕೆಲಸಗಾರ; ಉದ್ಯೋಗಶೀಲ, ಪರಿಶ್ರಮಿ.

क़ाज़ी, पु. ಮಹಮ್ಮದೀಯ ಮತದ ನ್ಯಾಯವಿಧಾಯಕ, ನ್ಯಾಯಾಧಿಪತಿ.

काजू, पु. ಗೇರು ಬೀಜ, ಗೋಡಂಬಿ.

काजू भोजू, पु. ಬಾಳಿಕೆ ಬಾರದ ತೋರಿಕೆಯ ವಸ್ತು.

काट, स्त्री. ಹೊಡೆತ; ಕಡಿತ; ಕಚ್ಚು; ಗಾಯ; ಸೀಳು; ಕಪಟ, ಮೋಸ; ಕುಸ್ತಿಯಲ್ಲಿ ಎದುರು ವರಸೆ. काट खाना = ಕಚ್ಚು, ಕಡಿ; ಕುಟುಕು. काट-कूट करना = ಕತ್ತರಿಸು; ತುಂಡರಿಸು; ಕೆತ್ತಿ ತೆಗೆ. काट छांट = ಕಡಿಯುವಿಕೆ, ಕತ್ತರಿಸುವಿಕೆ; ಕಿತ್ತು ಹಾಕುವಿಕೆ.

काटना, सक्रि. ಕಡಿ, ಕಚ್ಚು; ಕುಟುಕು; ಕತ್ತರಿಸು; ಕಡಿಮೆ ಮಾಡು; ಸೀಳು; ಕೊಚ್ಚು; ಕೊಯ್ಯು, ಕಟಾಯಿಸು; ಹೊಡೆದು ಹಾಕು, ವಜಾ ಮಾಡು, ರದ್ದು ಮಾಡು; ಕಾಲ ತಳ್ಳು, ಹೊತ್ತು ಕಳೆ; ದಾಟು, ಪಾರಾಗು, ಹಾಯು. काटना छांटना = ಕತ್ತರಿಸು; ತೆಗೆದು ಹಾಕು; ಕಡಿಮೆ ಮಾಡು.

काटू, पु. ಕತ್ತರಿಸುವವ; ಕಚ್ಚುವವ.

काठ, पु. ಮರ; ಸೌದೆ, ಕಟ್ಟಿಗೆ; ದಿಮ್ಮಿ, ನಾಟ; ತೊಲೆ; ಕೋಳ; ಒರೆ. काठ कठंबर, काट कबाड़ = ಮರಮುಟ್ಟು, ಒಡಕು ಮುರುಕು ಸಾಮಾನುಗಳು. काठ का उल्लू = ವಜ್ರಮುಂಠ, ಮುಟ್ಠಾಳ, ಗುಗ್ಗು.

काठड़ा, पु. **काठड़ी**, स्त्री. ಮರದ ಪಾತ್ರೆ, ಮರಿಗೆ.

काठी, स्त्री. ಕತ್ತಿಯ ಒರೆ; ಆಕಾರ, ಮೈಕಟ್ಟು; ತಡಿ, ಸಬರ, ಜೀನು; ಜೀನಿನ ಚೌಕಟ್ಟು.

काढ़, पु. =कूढ़.

काड़ा, पु. ಹೋರಿ, ಹೋರಿಗರು.

काड़ी, स्त्री. ಕಡ್ಡಿ, ದೀಪದ ಕಡ್ಡಿ.

काढ़ना, सक्रि. ಎಳೆ, ತೆಗೆ; ಕಳಚು, ಬಿಡಿಸು; ಡೊಗೆ, ಕೊರೆ, ಕೆತ್ತು; ಕೆತ್ತನೆ ಕೆಲಸ ಮಾಡು; ಕಸೂತಿ ಮಾಡು, ಚಿತ್ರಿಸು; ಸಾಲ ತಕೊಳ್ಳು.

काढ़ा, पु. ಕಷಾಯ, ಕಾಡೆ, ಸ್ವರಸ.

कात, स्त्री. ಹುಂಜದ ಮುಳ್ಳು, ಹಾರಿ.

कातनहारा, पु. ನೂಲುವವ.

कातनहारी, स्त्री. ನೂಲುವವಳು.

कातना, सक्रि. ನೂಲು ತೆಗೆ, ನೂಲು, ಹೊಸೆ.

कातर, वि. ಬೆದರಿದ, ದಿಗಿಲುಗೊಂಡ; ಪುಕ್ಕಲ; ತಲ್ಲಣಿಸುವ, ದುಃಖಿತ. पु. ಗಾಣದ ಕತ್ತರಿಮರ, ಬವರಿ.

कातरता, स्त्री. ದಿಗಿಲು, ತಲ್ಲಣ; ಭಯ, ಪುಕ್ಕತನ, ಪುಕ್ಕಲು.

काता, पु. ನೂತದ್ದು; ನೂಲು, ಎಳೆ, ದಾರ. बुढ़िया का काता = ಎಳೆ ಎಳೆಯಾಗಿರುವ ಒಂದು ತರದ ಮಿಠಾಯಿ, "ಲಾಲಿ ಗುಲಾಲ್".

कातिक, पु. ಕಾರ್ತಿಕ ಮಾಸ.

कातिब, पु. ಲೇಖಕ, ಬರಹಗಾರ.

क़ातिल, पु. ಕೊಲೆಗಾರ, ಘಾತಕ.

काती, स्त्री. ಕತ್ತರಿ; ಚಾಕು; ಕತ್ತಿ.

काथा, पु. ನೇಗಿಲಿನ ಗುಳದ ಕಬ್ಬಿಣದ ಬಿಲ್ಲೆ.

कादंबरी, स्त्री. ಕೋಗಿಲೆ; ಸಾರಾಯಿ, ಶೇಂದಿ.

कादर, वि. ಅಂಜಿದ, ವ್ಯಾಕುಲನಾದ.

कादरी, स्त्री. ರವಿಕೆ, ಕುಪ್ಪಸ.

कान, पु. ಕಿವಿ, ಕರ್ಣ; ಶ್ರವಣಶಕ್ತಿ; ಪಾತ್ರೆಗಳ ಹಿಡಿ; ಹಡಗಿನ ಚುಕ್ಕಾಣಿ; ತುಪಾಕಿಯಲ್ಲಿ ಮದ್ದಿಡುವ ಬಟ್ಟಲು, ತುಪಾಕಿ ಕಿವಿ. स्त्री. ನಾಚಿಕೆ, ಮಾನ, ಲಜ್ಜೆ. कान काटना = ಕಿವಿ ಕತ್ತರಿಸು, ಮೀರಿಸು. कान पकड़ना = ತನ್ನ ಪರಾಜಯವನ್ನು ಒಪ್ಪಿಕೊ. कान फूँकना = ಕಿವಿಯಲ್ಲುಸಿರು, ಕಿವಿಯೂದು; ಚಾಡಿ ಹೇಳು; ಜಗಳ ಹುಟ್ಟಿಸು. कान भरना = ಚಾಡಿಹೇಳು; ಚಾಡಿ ಹೇಳಿ ಜಗಳ ಹಚ್ಚಿಸು. कान लगाना = ಕಿವಿಗೊಟ್ಟು ಕೇಳು, ಆಲಿಸು. कान का कचा = ಹೇಳಿದ್ದನ್ನೆಲ್ಲಾ ನಂಬುವವ, ಸತ್ಯಂಭಟ್ಟ, ಯಥಾಶ್ರುತ. कान मैल = ಗುಗ್ಗೆ. कान मैलिया = ಗುಗ್ಗೆ ತೆಗೆಯುವವ.

कानकन, पु. ಗಣಿ ತೋಡುವವ.

कानन, पु. ಕಾಡು, ಅಡವಿ, ವನ.

कानसलाई, स्त्री. ಒಂದು ಹುಳು.

काना, पु. ಒಕ್ಕಣ್ಣ, ಕಾಣ; ಹುಳು ಬಿದ್ದ, ಹುಳಕಲು; ಓರೆಯಾದ. पु. ದಾಳದ ಚುಕ್ಕೆ.

कानाकानी, कानाफूसी, कानाबाती, स्त्री. ಕಿವಿಮಾತು, ಕುಸುಕುಸು ಮಾತು, ಪಿಸುಪಿಸು, ಬಿನುಗು ನುಡಿ.

कानि, स्त्री. ಲಜ್ಜೆ, ಮಾನ, ಸಂಕೋಚ; ತಡೆ, ಅಡ್ಡಿ, ಅಡಚಣೆ.

कानी, वि. ಒಂದು ಕಣ್ಣು ಕುರುಡಾದ

ಹೆಣ್ಣು, ಒಕ್ಕಣ್ಣು. क़ानी उंगली = ಕಿರುಬೆರಳು. कानी हाउस = ಸರಕಾರಿ ದೊಡ್ಡಿ.

क़ानून, पु. ಕಾನೂನು, ಕಾಯಿದೆ; ಕಟ್ಟಳೆ, ವಿಧಿ, ಶಾಸನ, ನಿಯಮ; ನ್ಯಾಯಶಾಸ್ತ್ರ. क़ानून छांटना = ತರ್ಕ ವಿತರ್ಕ ಮಾಡು.

क़ानूनगो, पु. ಶಾನುಭೋಗರ ಲೆಕ್ಕ ಮೊದಲಾದವನ್ನು ಪರೀಕ್ಷಿಸುವ ಉದ್ಯೋಗಸ್ಥ.

क़ानूनदां, पु. ಕಾನೂನು ತಿಳಿದವ, ನ್ಯಾಯವಿದ, ವಕೀಲ.

क़ानूनन्, क्रिवि. ಕಾನೂನಿನಂತೆ, ಕಾಯಿದೆಯ ಮೇರೆಗೆ, ಕಾನೂನಿನ ಪ್ರಕಾರ.

क़ानूनिया, वि. ಕಾನೂನುಗಳನ್ನರಿತವ; ನ್ಯಾಯಶಾಸ್ತ್ರಜ್ಞ; ತರ್ಕ ಮಾಡುವವ.

क़ानूनी, वि. ಕಾನೂನಿನ ಪ್ರಕಾರವಾದ, ನ್ಯಾಯವಾದ; ನ್ಯಾಯವನ್ನು ಅರಿತವ; ತರ್ಕ ಮಾಡುವವ.

कान्यकुब्ज, पु. ಕನೌಜ್ ದೇಶ; ಬ್ರಾಹ್ಮಣರ ಒಂದು ಒಳಜಾತಿ.

कान्ह, पु. ಶ್ರೀಕೃಷ್ಣನ ಹೆಸರು.

क़ाफ़िया, पु. ಪ್ರಾಸ, ಅನುಪ್ರಾಸ; ಅಂತ್ಯಾನುಪ್ರಾಸ.

क़ाफ़ियाबंदी, स्त्री. ಪ್ರಾಸ ಜೋಡಿಸುವಿಕೆ.

काफ़िर, पु. ಮೂರ್ತಿಪೂಜಕ; ಮುಸಲ್ಮಾನನಲ್ಲದವ, ಮುಸಲ್ಮಾನೇತರ.

क़ाफ़िला, पु. ಮರುಭೂಮಿಯಲ್ಲಿ ಪ್ರಯಾಣ ಮಾಡುವ ಯಾತ್ರಿಕರ ಅಥವಾ ವ್ಯಾಪಾರಗಾರರ ಗುಂಪು, ಯಾತ್ರೀದಳ, ಸಾರ್ಥ.

काफ़ी, वि. ಸಾಕಾದ, ಬೇಕಾದಷ್ಟು, ಸಾಕಷ್ಟು, ಯಥೇಷ್ಟ, ಪರ್ಯಾಪ್ತ.

काफ़ूर, पु. ಕರ್ಪೂರ. काफ़ूर होना = ಮಾಯವಾಗು, ಕಣ್ಮರೆಯಾಗು; ಪಲಾಯನ ಮಾಡು.

काफ़ूरी, वि. ಕರ್ಪೂರದಿಂದಾದ, ಕರ್ಪೂರದ; ಕರ್ಪೂರದ ಬಣ್ಣದ.

काब, स्त्री. ದೊಡ್ಡ ತಟ್ಟೆ, ಹರಿವಾಣ; ನೇಗಿಲ ಸಾಲು; ಕುಳಿ; ಗವಿ.

काबर, वि. ವಿವಿಧ ಬಣ್ಣದ.

काबा, पु. ಮಹಮ್ಮದೀಯರ ತೀರ್ಥಸ್ಥಾನವಾದ ಮಕ್ಕೆಯ ದೇವಾಲಯ; ಚಚ್ಚೌಕವಾದ ಕಟ್ಟಡ.

क़ाबिज़, वि. ಹೊಂದಿದವ; ಹಿಡುವಳಿದಾರ, ಸ್ವಾಧೀನವುಳ್ಳವ; ಮಲವನ್ನು ಕಟ್ಟುವ. पु. ಸ್ವಂತಗಾರ; ಹಿಡುವಳಿದಾರ, ಅನುಭೋಗದಾರ.

क़ाबिल, वि. ಯೋಗ್ಯ, ಅರ್ಹ, ತಕ್ಕ; ಪಂಡಿತ, ವಿದ್ವಾಂಸ.

क़ाबिलियत, स्त्री. ಯೋಗ್ಯತೆ, ಅರ್ಹತೆ; ಪಾಂಡಿತ್ಯ, ವಿದ್ವತ್ತು.

काबिस, पु. ಆವಿಗೆಯಲ್ಲಿಡುವ ಮುನ್ನ ಹಸಿ ಮಡಕೆಗೆ ಹಚ್ಚುವ ಬಣ್ಣ.

काबीन, पु. ಕನ್ಯಾಶುಲ್ಕ, ತೆರವು.

काबुल, स्त्री. ಪಾರಿವಾಳದ ಗೂಡು, ಹೆಟ್ಟಿಗೆ.

क़ाबू, पु. ಅಧಿಕಾರ, ಅಂಕೆ; ವಶ,

ಹತೋಟಿ, ಸ್ವಾಧೀನ.

काम, पु. ಕಾಮ; ಇಚ್ಛೆ, ಆಶೆ; ಕೆಲಸ, ಕಾರ್ಯ, ಉಸಾಬರಿ; ಪ್ರಯೋಜನ, ಉಪಯೋಗ. काम आना = ಉಪಯೋಗವಾಗು; ಯುದ್ಧದಲ್ಲಿ ಮಡಿ. काम तमाम होना = ಸಾಯು. काम बनना = ಸಫಲವಾಗು, ಆಗಿಬರು, ಕೈಗೂಡು. काम निकलना = ಉದ್ದೇಶ ಪೂರ್ತಿಯಾಗು, ಕೆಲಸ ಸಾಗು. काम धंधा, काम धाम = ಕೆಲಸ ಕಾರ್ಯ; ಉದ್ಯೋಗ; ವ್ಯಾಪಾರ ಸಾಪಾರ.

कामकाज, पु. ಕೆಲಸ ಕಾರ್ಯ, ಕೆಲಸ ಬೊಗಸೆ.

कामकाजी, कामकाजू, वि. ದುಡಿಯುವವ, ಉದ್ಯೋಗಶೀಲ.

कामकेलि, स्त्री. ಕಾಮಕ್ರೀಡೆ, ರತಿಕ್ರೀಡೆ.

कामगार, पु. ಕೆಲಸಗಾರ, ಕಾರ್ಮಿಕ; ಕಾರ್ಯಸ್ಥ, ವ್ಯವಸ್ಥಾಪಕ.

काम-चलाऊ, वि. ಕೆಲಸ ನಡೆಸತಕ್ಕ; ಒಂದು ಕೆಲಸಕ್ಕೆ ಸಾಕಾದ; ತಕ್ಕಮಟ್ಟಿಗೆ ಸಾಕಾದ.

कामचोर, पु. ಕೆಲಸದಿಂದ ತಪ್ಪಿಸಿಕೊಳ್ಳುವವನು, ಕೆಲಸಗಳ್ಳ, ಮೈಗಳ್ಳ.

क़ामत, पु. ಎತ್ತರ, ನಿಲುವು.

कामदानी, स्त्री. ಕಲಾಬತ್ತಿನ ಕಸೂತಿ ಕೆಲಸ, ಹೊಲಿಗೆ ಕೆಲಸ.

कामदार, वि. ಕೆಲಸಗಾರ, ಕಾರ್ಮಿಕ; ಕಾರ್ಯಸ್ಥ; ವ್ಯವಸ್ಥಾಪಕ; ಕೆಲಸ ಮಾಡಿದ; ಹೂಗೆಲಸ ಮಾಡಿದ, ಕಸೂತಿ ಮಾಡಿದ.

कामना, स्त्री. ಕೋರಿಕೆ, ಬಯಕೆ.

कामयाब, वि. ಸಫಲ, ಕೃತಕಾರ್ಯ, ಕೃತಾರ್ಥ.

कामयाबी, कामरानी, स्त्री. ಸಫಲತೆ, ಕಾರ್ಯಸಿದ್ಧಿ.

कामरिया, पु. ಚಮ್ಮಾರ ಜಾತಿಯವರಾದ ಸ್ವಾಮಿ ರಾಮದೇವರ ಅನುಯಾಯಿಗಳು.

कामरी, स्त्री. ಕಂಬಳಿ.

कामल, कामला, स्त्री. ಕಾಮಾಲೆ.

कामाटी, पु. ಇಟ್ಟಿಗೆ ಕೆಲಸದವ, ತರಗಾರ, ಉಪ್ಪಾರ, ಕಾಮಾಟಿಗ.

कामिल, वि. ಪೂರ್ತ, ಪೂರಾ, ಇಡೀ, ಸಮಸ್ತ; ಶಾಸ್ತ್ರಜ್ಞ, ವಿದ್ಯಾವಂತ; ಜ್ಞಾನಿ; ಋಷಿ.

कामी, वि. ಇಚ್ಛುಕ, ಕಾಮುಕ.

कामूस, पु. ಸಮುದ್ರ, ಕಡಲು.

काय, स्त्री. ದೇಹ, ಮೈ; ಮೂಲಧನ, ಬಂಡವಾಳ.

कायजा, पु. ಕುದುರೆಯ ಲಗಾಮಿನ ಬಾರು.

क़ायदा, पु. ತಳಹದಿ; ನಿಯಮ, ವಿಧಿ; ಪದ್ಧತಿ, ಸಂಪ್ರದಾಯ, ಕ್ರಮ; ವ್ಯಾಕರಣ ನಿಯಮ; ಅಕ್ಷರಗಳನ್ನು ಕಲಿಸುವ ಪುಸ್ತಕ, ಅಕ್ಷರ ಬೋಧಿನಿ, ಬಾಲಬೋಧೆ.

क़ायम, वि. ನಿಂತಿರುವ, ನೆಟ್ಟಗೆ ನಿಂತ; ಸ್ಥಿರವಾದ, ಊರ್ಜಿತವಾದ,

ದೃಢವಾದ; ಸ್ಥಾಯಿ, ಸ್ಥಾಪಿತವಾದ; ನಿಯಾಮಕವಾದ, ನಿಗದಿ. क़ायम करना = ಸ್ಥಾಪಿಸು, ನೆಲೆಗೊಳಿಸು क़ायम रखना = ಕಾಪಾಡು, ಸಾಗಿಸು. क़ायम होना = ನೆಲಸು.

क़ायम मुक़ाम, वि. ಮತ್ತೊಬ್ಬನ ಸ್ಥಾನದಲ್ಲಿ ನಿಯಮಿತನಾದ, ಬದಲಿ ಕೆಲಸ ನೋಡುವವ, ಸ್ಥಾನಾಪನ್ನ, ಹಂಗಾಮಿ.

कायर, वि. ಪುಕ್ಕ, ಹೇಡಿ; ಭೀರು.

कायरता, स्त्री. ಪುಕ್ಕತನ, ಹೇಡಿತನ.

क़ायल, वि. ಒಪ್ಪಿಕೊಳ್ಳುವವ, ಮನಗಂಡವ; ಪರರ ಮಾತಿನ ಸತ್ಯತೆಯನ್ನು ಮನಗಂಡು ಒಪ್ಪಿಕೊಳ್ಳುವವ. क़ायल करना = ಮನಗಾಣುವಂತೆ ತೋರಿಸು.

कायस्थ, पु. ಉತ್ತರ ದೇಶದ ಒಂದು ಜಾತಿ.

काया, स्त्री. ದೇಹ, ಕಾಯ, ಮೈ.

कायकल्प, पु. ಮುದುಕರು ಔಷಧದಿಂದ ಪುನಃ ಯೌವನವನ್ನು ಹೊಂದುವಿಕೆ, ಪುನರ್ಯೌವನವನ್ನು ಪಡೆಯುವಿಕೆ, ಕಾಯಕಲ್ಪ.

कायापलट, पु. (स्त्री.) ರೂಪಾಂತರ, ರೂಪ ಪಲ್ಲಟ; ಮಾರು ರೂಪ, ಪರಕಾಯ ಪ್ರವೇಶ; ಜನ್ಮಾಂತರ.

कायफल, पु. ಕಾಯಫಲ, ಕಟ್ಫಲ.

कायिक, वि. ದೇಹ ಸಂಬಂಧವಾದ, ದೈಹಿಕ, ಶಾರೀರಕ.

कार, पु. ಕೆಲಸ, ಕಾರ್ಯ; ಮಾಡುವವ, ಕರ್ತ.

क़ार, पु. ಕೊಳ್ಳಿ, ಖಾರಿ; ಕಂದರ, ದರಿ, ಕೊರಕಲು; ಬಾವಿಯ ತಳ.

कारक, वि. ಮಾಡುವವ. पु. ವಿಭಕ್ತಿ (ವ್ಯಾಕರಣದಲ್ಲಿ).

कारकुन, पु. ಸಂಚಾಲಕ, ಅಡಳಿತಗಾರ; ಗುಮಾಸ್ತೆ, ಕಾರ್ಯಸ್ಥ.

कारख़ाना, पु. ಕಾರಖಾನೆ, ಗಿರಣಿ; ಶಿಲ್ಪಶಾಲೆ; ಬಂಡಸಾಲೆ, ವರ್ತಕಸಾಲೆ, ಕೋಠಿ; ವ್ಯಾಪಾರ; ಕೆಲಸ.

कारगर, वि. ಕಾರ್ಯಸಾಧಕವಾದ, ಫಲಪ್ರದ; ಉಪಯೋಗವುಳ್ಳ.

कारगुज़ार, पु. ಕಾರ್ಯ ಸಾಗಿಸುವವ, ಕಾರ್ಯದಕ್ಷ; ಕರ್ತವ್ಯಪರಾಯಣ.

कारगुज़ारी, स्त्री. ಕರ್ತವ್ಯ ನಿಷ್ಠೆ, ಕಾರ್ಯ ಪರಾಯಣತೆ; ಕಾರ್ಯ ಕುಶಲತೆ.

कारचोब, पु. ಕಸೂತಿ ತೆಗೆಯುವಾಗ ಬಟ್ಟೆಯನ್ನು ಬಿಗಿದು ಕಟ್ಟುವ ಮರದ ಚೌಕಟ್ಟು; ಕಸೂತಿ ತೆಗೆಯುವವ.

कारचोबी, स्त्री. ಕಸೂತಿ ಕೆಲಸ. वि. ಕಸೂತಿ ಕೆಲಸ ಮಾಡಿದ (ಬಟ್ಟೆ).

कारज, पु. ಕಾರ್ಯ, ಕೆಲಸ.

कारण, पु. ಕಾರಣ, ಹೇತು.

कारतूस, पु. ಸಿಡಿಮದ್ದಿನ ತೋಟೆ, ತುಪಾಕಿಯ ತೋಟಾ.

कारदार, पु. ಕೆಲಸಗಾರ, ಕಾರ್ಮಿಕ; ಕಾರ್ಯಸ್ಥ; ಅಧಿಕಾರಿ.

कारन, पु. ಕಾರಣ, ಹೇತು.

कारनामा, पु. ಸಾಧಿಸಿದ ಕಾರ್ಯಗಳ

ವರ್ಣನೆ, ಪರಾಕ್ರಮ ಕೃತ್ಯಗಳ ವಿವರಣೆ.

कारनी, पु. ಭೇದೋಪಾಯ ಮಾಡುವವ; ಮಾಡಿಸುವವ, ಪ್ರೇರಕ.

कारपरदाज़, पु. ವ್ಯವಸ್ಥಾಪಕ, ಕಾರ್ಯಸ್ಥ; ಗುಮಾಸ್ತೆ; ಏಜೆಂಟು.

कारबरदार, वि. ಕಾರ್ಯಭಾರವನ್ನು ಹೊತ್ತವ, ಕಾರ್ಯನಿರ್ವಾಹಕ.

कारबरदारी, स्त्री. ಕಾರ್ಯಭಾರವನ್ನು ಹೊರುವಿಕೆ; ಕಾರ್ಯನಿರ್ವಹಣ.

कारबार, पु. ಕೆಲಸ, ಕಾರ್ಯ, ವೃತ್ತಿ, ವ್ಯಾಪಾರ; ಕಾರ್ಯಭಾರ, ವಹಿವಾಟು, ಕಾರಬಾರು.

कारबारी, वि. ಉದ್ಯೋಗಿ. पु. ಗುಮಾಸ್ತೆ; ಏಜಂಟು; ಕಾರ್ಯಸ್ಥ.

कार-रवाई, स्त्री. ಕಾರ್ಯ, ಕಾರ್ಯವಾಹಿ, ಕಾರ್ಯಕಲಾಪ; ನಡವಳಿಕೆ; ಕಾರ್ಯತತ್ಪರತೆ; ಒಳಸಂಚು.

कारवाँ, पु ಮರಳು ಕಾಡಿನ ಯಾತ್ರಿಕರ ಗುಂಪು, ಯಾತ್ರೀದಳ, ಸಾರ್ಥ.

कारवाँ-सराय, स्त्री. ಚಾವಡಿ, ಛತ್ರ.

कारसाज़, वि. ಕಾರ್ಯವನ್ನು ನಿಭಾಯಿಸುವವ, ಕಾರ್ಯದಕ್ಷ.

कारसाज़ी, स्त्री. ಕಾರ್ಯಸಾಧನೆ; ಕಪಟ ಪ್ರಯತ್ನ, ಸಂಚು.

कारस्तानी, स्त्री. ಕೆಲಸಗಾರಿಕೆ, ಮಾಟ; ಕಪಟಯುಕ್ತಿ, ಕಾರಸ್ಥಾನ.

कारा, वि. ಕಪ್ಪು. पु. ಬಂಧನ, ಸೆರೆ; ವೇದನೆ.

कारागार, पु. ಕಾರಾಗೃಹ, ಸೆರೆಮನೆ.

कारामद, वि. ಪ್ರಯೋಜನಕರವಾದ, ಸಾರ್ಥಕ.

कारिंदगी, स्त्री. ಗುಮಾಸ್ತೆ ಕೆಲಸ.

कारिंदा, पु. ಗುಮಾಸ್ತೆ; ಕಾರ್ಯಸ್ಥ.

क़ारिक़, पु. ಜಪ್ತಿ ಮಾಡುವವ.

कारीगर, पु. ಕೆಲಸಗಾರ, ಶಿಲ್ಪಿ. वि. ದಕ್ಷಹಸ್ತ, ನಿಪುಣ.

कारीगरी, स्त्री. ಶಿಲ್ಪಕಲೆ, ಕೆಲಸಗಾರಿಕೆ, ಹಸ್ತಕೌಶಲ್ಯ, ಕೈಮಾಟ.

कारूं, पु. ಅರಬ್ಬಿ ದೇಶದ ಸುಪ್ರಸಿದ್ಧ ಧನಿಕನಾದ ಒಬ್ಬ ಲೋಭಿ; ಜಿಪುಣ. कारूं का ख़ज़ाना=ಕುಬೇರಸಂಪತ್ತು

कारूनी, स्त्री. ಒಂದು ಬಗೆ ಕುದುರೆ.

क़ारूरा, पु. ರೋಗಿಯ ಮೂತ್ರವನ್ನಿಡುವ ಸೀಸೆ; ಮೂತ್ರ, ಉಚ್ಚೆ. क़ारूरा मिलाना = ಹೊಂದಿಕೆಯಿಂದಿರು, ಬಹಳ ಅನ್ಯೋನ್ಯವಾಗಿರು.

कारेज़, स्त्री. ಕಾಲುವೆ, ಜಲದಾರಿ.

कारोबार, पु.=कारबार.

कार्य, पु. ಕೆಲಸ, ಕಾರ್ಯ; ವೃತ್ತಿ; ವರ್ತನೆ, ಪರಿಣಾಮ.

कार्यकर्ता, पु. ಕೆಲಸಗಾರ, ಕಾರ್ಮಿಕ; ಕಾರ್ಯಸ್ಥ, ಕಾರ್ಯಕರ್ತ.

कार्यवाही, **कार्यवाई**, स्त्री. = कार-रवाई.

कार्यालय, पु. ಕಾರ್ಯಾಲಯ, ಕಚೇರಿ.

काल, पु. ಕಾಲ, ಸಮಯ; ಮೃತ್ಯು, ಸಾವು; ಕ್ಷಾಮ, ಬರಗಾಲ. काल पड़ना = ಬರ ಬೀಳು. काल पाकर

= ಕಾಲಾಂತರದಲ್ಲಿ.

कालक, स्त्री. ಕಪ್ಪು, ಮಸಿ.

कालकिल, पु. ಗದ್ದಲ, ಗುಲ್ಲು.

कालकूट, पु. ಸರ್ಪದ ವಿಷ, ನಂಜು.

कालकोठरी, स्त्री. ಕತ್ತಲೆ ಕೋಣೆ.

कालक्षेप, पु. ಕಾಲ ಕಳೆಯುವಿಕೆ, ಕಾಲಯಾಪನೆ.

कालख, पु. ಮಚ್ಚೆ, ಕಲೆ, ಕಲಂಕ.

कालबंजर, पु. ಬಹುಕಾಲದಿಂದ ಪಡ ಬಿದ್ದ ಬೀಳು ಜಮೀನು; ಬಂಜರು, ತರಸು.

कालबुद, **कालबूत**, पु. ಗೂಡು, ಚೌಕಟ್ಟು; ಜೋಡು ಹೊಲಿಯಲು ಪಾದದಂತೆ ಮಾಡಿದ ಮರದ ತುಂಡು, ಸಾಚ, ಕರವಾಯಿ.

काला, वि. ಕರಿಯ, ಕಪ್ಪು; ಕೆಟ್ಟ; ಭಾರಿ. पु. ಕರಿಯ ಹಾವು. काला कलूटा = ಕಪ್ಪಾದ, ಕಾಗೆ ಕಪ್ಪಾದ. काले कौवे खाना = ಬಹಳ ಕಾಲದ ವರೆಗೆ ಜೀವಂತನಾಗಿರು.

काला कोयल, वि. ಕಾಗೆ ಕಪ್ಪು.

काला चोर, पु. ದೊಡ್ಡಕಳ್ಳ, ಐನಾತಿ ಕಳ್ಳ; "ಘಾಟಿ", ಪಕ್ಕಾ, ಪಾಕಡ.

काला जीरा, पु. ಕರಿ ಜೀರಿಗೆ.

कालापत्ती, स्त्री. ಹಳೆಯ ಹಗ್ಗಗಳ ಕಾತಿ ಮುಂತಾದವುಗಳಿಂದ ದೋಣಿಯ ಸಂದಿ ಬಿರುಕುಗಳನ್ನು ಮುಚ್ಚುವಿಕೆ, ಚೋಪಟ್ಟ್.

कालापन, पु. ಕಪ್ಪಾಗಿರುವಿಕೆ, ಕಪ್ಪು.

कालापानी, पु. ಕರಿನೀರು; ಗಡೀಪಾರು, ಕರಿನೀರ ಶಿಕ್ಷೆ; ಅಂಡಮಾನು ದ್ವೀಪಗಳು; ಸಾರಾಯಿ, ಸುರೆ.

कालिख, पु. ಕಾಡಿಗೆ, ಕುಡಿಕಪ್ಪು.

क़ालिब, पु. ದೇಹ, ಶರೀರ; ನಮೂನೆ, ಮಾದರಿ; ಟೋಪಿ ಮೊದಲಾದವನ್ನು ತಯಾರಿಸಲು ಉಪಯೋಗಿಸುವ ಮರದ ಚೌಕಟ್ಟು, ಸಾಚ; ಪಡಿಯಚ್ಚು

कालिमा, स्त्री. ಕಪ್ಪು; ಕಳಂಕ; ದೋಷ; ಕತ್ತಲೆ; ಮೈಲಿಗೆ; ಕೊಳಕು.

काली, स्त्री. ಕಾಳಿ, ಮಾರಿ; ಮಸಿ, ಶಾಯಿ, ಸ್ಯಾಹಿ. वि. ಕಪ್ಪಾದ. काली घटा = ಕಾರ್ಮೋಡ. काली पीली चिली चिली = ಮಕ್ಕಳ ಒಂದು ಆಟ.

काली, ज़बान, स्त्री. ಕೆಟ್ಟ ನಾಲಗೆ, ಮಚ್ಚೆ ನಾಲಿಗೆ.

कालीन, वि. ಕಾಲಕ್ಕೆ ತಕ್ಕ; ಕಾಲ ಸಂಬಂಧವಾದ; ಕಾಲದ.

क़ालीन, पु. ರತ್ನಗಂಬಳಿ, ಜಮಖಾನೆ, ತಿವಾಸಿ.

क़ालीन-बाफ़, पु. ಜಮಖಾನೆ ನೇಯುವವ.

कालीबला, स्त्री. ಮುದಿಗೂಬೆ.

काली मिर्च, स्त्री. ಮೆಣಸು.

कालौंछ, स्त्री. ಕಪ್ಪು, ಕಾಡಿಗೆ.

कालपनिक, वि. ಕಲ್ಪಿಸಿದ, ಕಲ್ಪಿತ.

कावड़, पु. ಕಾವಡಿ, ಅಡ್ಡೆ, ಕಾಗಡಿ.

कावर, पु. ಕಾಶಿಕಾವಡಿ; ಕಾಶಿಸ್ಥಾಲಿ.

कावा, पु. ಕುದುರೆಯನ್ನು ಸುತ್ತಿಸುವುದು; ಮೋಸ. कावा काटना =

ಸುತ್ತಿ ಸುತ್ತಿ ಬರು, ಸುಳಿದಾಡು; ಕಣ್ಣಿಗೆ ಬೀಳದೆ ಜಾರಿಕೊಂಡು ಹೋಗು.

काव्य, पु. ಕವಿತೆ, ಕಾವ್ಯ.

काश, पु. ಕೆಮ್ಮು, ಕಾಶ; ಒಂದು ಬಗೆ ದರ್ಭೆ. अव्य. ಭಗವಂತನು ಅನುಗ್ರಹಿಸಲಿ, ದೇವರ ದಯೆಯಿಂದಾಗಲಿ.

काशाना, पु. ಗುಡಿಸಲು, ಜೋಪಡಿ.

काशीफल, पु. ಕುಂಬಳಕಾಯಿ.

काश्त, स्त्री. ಕೃಷಿ, ಆರಂಬ, ಸಾಗುವಳಿ, ಬೇಸಾಯು; ಹಿಡುವಳಿ.

काश्तकार, पु. ಕೃಷಿಕ, ಬೇಸಾಯುಗಾರ, ರೈತ; ಹಿಡುವಳಿದಾರ.

काश्तकारी, स्त्री. ಕೃಷಿ, ಒಕ್ಕಲುತನ, ರೈತತನ; ಹಿಡುವಳಿದಾರನ ಹಕ್ಕು ಬಾಧ್ಯತೆ.

काश्मीरा, पु. ಒಂದು ಬಗೆ ಉಣ್ಣೆಬಟ್ಟೆ

कास, पु. ಕೆಮ್ಮು, ಕಾಸ.

कासनी, पु. ಒಂದು ಮೂಲಿಕೆ.

कासबी, पु. ನೆಯ್ಗೆಯುವ, ನೇಕಾರ.

कासा, पु. ಬಟ್ಟಲು, ತಳಿಗೆ; ಪೇಲೆ; ತಟ್ಟೆ; ತೆಂಗಿನ ಕರಟದ ಪಾತ್ರೆ.

कासार, पु. ಸಣ್ಣ ಕೆರೆ, ಕೊಳ.

कासालु, पु. ಒಂದು ಬಗೆ ಗೆಣಸು.

क़ासिद, पु. ದೂತ, ಹರಿಕಾರ; ಪತ್ರವಾಹಕ, ಓಲೆಕಾರ; ನೇರವಾಗಿ ಹೋಗುವವ.

क़ासिम, वि. ವಿಂಗಡಿಸುವವ, ಹಂಚುವವ.

काह, सर्व. ಯಾವುದು, ಆವುದು ?

काहकशां, पु. ಆಕಾಶಗಂಗೆ.

काहण, पु. ೧೬ ಎಲೆಗಳ ಕೌಳಿಗೆ.

काहल, वि. ತುಂಟ, ಚೇಷ್ಟೆಗಾರ.

काहिन, पु. ಪುರೋಹಿತ; ಜೋಯಿಸ; ಮಂತ್ರವಾದಿ.

काहिल, वि. ಮಂದವಾದ, ಜಡ್ಡು; ಸೋಮಾರಿಯಾದ, ಆಲಸ.

काहिली, स्त्री. ಆಲಸ್ಯ, ಸೋಮಾರಿತನ; ಜಾಡ್ಯ.

काहिश, पु. ಕ್ಷೀಣ, ಕ್ಷಯ; ಆಳಿತ.

काही, वि. ಪಚ್ಚೆ, ಎಲೆಹಸುರು. सर्व. ಯಾರಿಗೆ; ಯಾರನ್ನು ?

काहू, वि. ಆವುದೋ, ಒಂದಾನೊಂದು. पु. ಹಾಲು ಹಕ್ಕರಿಕೆ, ಹಾಲು ಮೂಲಂಗಿ.

काहे, सर्व. ಯಾವುದು, ಏನು ? काहे का = ಯಾವುದರ ? काहे को = ಯಾವುದಕ್ಕೆ, ಏತಕ್ಕೆ ?

किंकर्तव्यविमूढ़, वि. ಏನು ಮಾಡುವುದೆಂದು ತಿಳಿಯದ, ದಿಕ್ಕು ತೋಚದ, ದಿಙ್ಮೂಢ; ಗಾಬರಿಯಾದ, ಕಕ್ಕಾಬಿಕ್ಕಾದ.

किंगरी, स्त्री. ಸಣ್ಣ ತಂಬೂರಿ, ಕಿಂದರಿ.

किंगाइश, स्त्री. ಕಾರ್ಪಣ್ಯ, ಜಿಪುಣತನ.

किंचित्, वि. ಸ್ವಲ್ಪ, ತುಸ.

किंतु, क्रिवि. ಆದರೆ, ಪರಂತು.

किंवदंती, स्त्री. ಜನ ಶ್ರುತಿ, ಗಾಳಿ ಸುದ್ದಿ, ಗಲಕು.

किंवा, अव्य. ಇಲ್ಲದಿದ್ದರೆ, ಇಲ್ಲವೇ.

कि, अव्य. ಏನೆಂದರೆ; ಇಲ್ಲವೇ, ಅಥವಾ, ಇಷ್ಟರಲ್ಲಿ.

किकियाना, अक्रि. ಅರಚು, ಕಿರಿಚು.

किचकिच, स्त्री. ವ್ಯರ್ಥ ವಾಗ್ವಾದ, ಗಳಪ.

किचकिचाना, अक्रि. ಹಲ್ಲು ಕಡಿ, ಹಲ್ಲು ಮೊರೆ; ಹರಟು.

किचकिचाहट, स्त्री. ಹಲ್ಲು ಕಡಿಯುವಿಕೆ, ಹಲ್ಲುಮೊರೆತ; ಹರಟೆ.

किचकिची, स्त्री. ಹಲ್ಲು ಕಡಿಯುವಿಕೆ.

किचड़ा, पु. ಕಣ್ಣು ಪಿಸರು, ಕಣ್ಣು ಕಿಸುರು, ಪಿಳ್ಳೆ, ಪಿಚ್ಚು.

किचड़ाना, अक्रि. ಪಿಸರು ಬರು, ಕಣ್ಣು ಕಿಸುರು ಸುರಿ.

किचपिच, पु. ಕೆಸರು, ಬದಿ, ಕೊಚ್ಚೆ.

किचरपिचर, वि. ಕೆಸರಾದ, ಕೊಚ್ಚೆಯಾದ, ಬದಿಯಾದ.

किटकिट, पु. ವಾಗ್ವಾದ, ಗಳಪ.

किटकिटाना, अक्रि. ಹಲ್ಲು ಕಡಿ; ಅಸಮಾಧಾನಪಡು.

किटकिना, पु. ಗೇಣಿ ಚೀಟಿ, ಗುತ್ತಿಗೆ ಚೀಟಿ; ತಂತ್ರ, ಚಾಲಾಕು.

किट्ट, पु. ಗಸಿ, ರಾಡಿ, ಮಷ್ಟು, ತುಕ್ಕು

किड़, पु. ಹುಳು, ಕೀಟ.

किड़किड़ाना, अक्रि. ಹಲ್ಲು ಕಡಿ

किड़हा, वि. ಹುಳುಬಿದ್ದ, ಹುಳುಕು

कित, क्रिवि. ಎಲ್ಲಿ, ಎಲ್ಲಿಗೆ ? वि. ಎಷ್ಟು ?

कितना, वि. ಎಷ್ಟು ?

क़िता, पु. ಹೊಲಿಯುವದಕ್ಕಾಗಿ ಬಟ್ಟೆಯನ್ನು ಕತ್ತರಿಸುವಿಕೆ; ತುಂಡು; ವಿಧ, ತರಹ; ಸಂಖ್ಯೆ; ತುಂಡು ನೆಲ.

किताब, स्त्री. ಗ್ರಂಥ, ಪುಸ್ತಕ; ಖಾತೆ; ಬರವಣಿಗೆ.

किताबख़ाना, पु. ಪುಸ್ತಕಾಲಯ, ಪುಸ್ತಕ ಭಾಂಡಾರ.

किताबत, पु. ಬರೆಯುವಿಕೆ; ಶಾಸನ; ಬರಹ. ख़त-ओ-किताबत = ಪತ್ರ ವ್ಯವಹಾರ.

किताबिया, स्त्री. ಸಣ್ಣ ಪುಸ್ತಕ.

किताबी, वि. ಪುಸ್ತಕದ, ಹೊತ್ತಗೆಯ; ಪುಸ್ತಕಾಕಾರದ.

कितेक, वि. ಹಲವು, ಅನೇಕ.

कितो, **कित्ता**, वि. ಎಷ್ಟು ?

किदारा, पु. ಒಂದು ರಾಗ.

किधर, क्रिवि. ಎತ್ತ, ಯಾವ ಕಡೆ ?

किन, सर्व. 'कौन' ಶಬ್ದಕ್ಕೆ ಬಹುವಚನದಲ್ಲಿ ವಿಭಕ್ತಿ ಸೇರುವಾಗ ಆಗುವ ವಿಕೃತರೂಪ. ಉದಾ:-कौन+को =किनको.

किनका, पु. ಅಕ್ಕಿ ನುಚ್ಚು, ತರಿ.

किनकी, स्त्री. "किनका" का लघु रूप.

किनना, सक्रि. ಕೊಂಡುಕೊಳ್ಳು.

किनवानी, स्त्री. ಸೋನೆ.

किनवैया, पु. ಕೊಂಡುಕೊಳ್ಳುವವ.

किनहा, वि. ಹುಳುಬಿದ್ದ, ಹುಳುಕಲು.

किनायतन्, क्रिवि. ಸಂಕೇತದಿಂದ, ಸಾಂಕೇತಿಕವಾಗಿ, ಲಕ್ಷಣೆಯಿಂದ.

किनाया, पु. ಸಂಕೇತ, ಲಕ್ಷಣೆ; ಚಿಹ್ನೆ; ಮರ್ಮ, ರಹಸ್ಯ.

किनारदार, वि. ಅಂಚು ಕಟ್ಟಿದ, ಗೋಟು ಕಟ್ಟಿದ.

किनारा, पु. ಸೆರಗು, ಏಣು, ಅಂಚು, ಕರೆ; ದಂಡೆ, ಮಗ್ಗಲು, ಪಕ್ಕ; ದಡ, ತೀರ. किनारा खींचना = ಅಗಲು, ದೂರವಾಗಿರು. किनारा लगना = ದಡ ಸೇರು.

किनाराकश, वि. ದೂರವಾಗಿರುವವ, ತಟಸ್ಥನಾಗಿರುವವ.

किनारी, स्त्री. ಸರಿಗೆ ಅಂಚು; ನಕ್ಕಿ, ಗೋಟು.

किनारे, क्रिवि. ಪಕ್ಕದಲ್ಲಿ, ದಡದಲ್ಲಿ; ಒಕ್ಕಡೆ, ಒತ್ತಟ್ಟಿಗೆ.

किन्हीं, सर्व. ಬಹುವಚನದಲ್ಲಿ 'कोई' ಶಬ್ದಕ್ಕೆ ವಿಭಕ್ತಿ ಸೇರುವಾಗ ಆಗುವ ವಿಕೃತ ರೂಪ.

किफ़ायत, स्त्री. ಸಾಕಾದಷ್ಟು, ಪರ್ಯಾಪ್ತ; ಕಡಮೆ ವೆಚ್ಚ, ಮಿತವ್ಯಯ, ಮಿತ ವ್ಯಯ; ಮಿಗಿಲು, ಉಳಿತಾಯ; ನಫೆ; ಲಾಭ; ಯೋಗ್ಯತೆ.

किफ़ायतशार, वि. ಮಿತವ್ಯಯಿ.

किफ़ायती, वि. ಮಿತವ್ಯಯ ಮಾಡುವವ; ಕಡಿಮೆವೆಚ್ಚದ, ಮಿತವ್ಯಯದ.

क़िबला, पु. ಪಶ್ಚಿಮ ದಿಕ್ಕು; ಮಕ್ಕಾ ನಗರ; ಪೂಜ್ಯರು; ತೀರ್ಥರೂಪರು, ತಂದೆ.

क़िबलागाह, पु. ಮಕ್ಕಾ ಪಟ್ಟಣ; ಪೂಜ್ಯರು; ತೀರ್ಥರೂಪರು, ತಂದೆ.

क़िबलानुमा, पु. ಪಶ್ಚಿಮ ದಿಕ್ಕನ್ನು ತೋರಿಸುವ ಯಂತ್ರ, ದಿಕ್‌ಚಕ್ರ, ದಿಗ್ದರ್ಶಕ ಯಂತ್ರ, ಪಶ್ಚಿಮಮುಖಿ.

किब्र, पु. ಮಹತ್ವ, ವೈಭವ; ಗರ್ವ.

किब्रिया, स्त्री. ಮಹತ್ವ, ಹಿರಿಮೆ; ಶಕ್ತಿ.

किमाम, पु. ಸಕ್ಕರೆ ಪಾಕ, "ಕ್ಷೀರಾ".

क़िमार, पु. ಜೂಜು, ಪಂದ್ಯ, ಜುಗಾರು.

किमारख़ाना, पु. ಜೂಜಾಡುವ ಸ್ಥಳ, ಜೂಜು ಮನೆ, ಜೂಜಿನ ಕಟ್ಟೆ, ದ್ಯೂತ ಗೃಹ.

क़िमारबाज़, वि. ಜುಗಾರಾಡುವವ, ಜೂಜುಗಾರ, ಜೂದಾಳಿ, ಜೂಜಾಳಿ, ಜೂಜುಕೋರ.

क़िमारबाज़ी, स्त्री. ಜುಗಾರಾಡುವಿಕೆ, ಜೂಜಾಡುವಿಕೆ; ಜೂಜುಕೋರತನ.

क़िमाश, पु. ಮಾದರಿ, ರೀತಿ, ತರಹ; ಗಂಜೀಫಿನ ಒಂದು ರಂಗು.

किया, पु. ಕಾರ್ಯ, ವರ್ತನೆ.

कियारी, स्त्री. ಪಾತಿ, ಮಡಿ; ಉಪ್ಪಿನ ಕಟ್ಟೆ, ಉಪ್ಪು ಮಡಿ.

किरंटा, पु. ಚಟ್ಟೆಗಾರ, ಚೊಟ್ಟೆ.

क़िरअत, स्त्री. ಕುರಾನನ್ನು ಓದುವಿಕೆ, ಕುರ್ರಾನ ಪಠನ.

किरका, पु. ಚೂರು, ಕಣ.

किरकिटी, स्त्री. ಕಣ್ಣಲ್ಲಿ ಬಿದ್ದ ಧೂಳು.

किरकिरा, वि. ಮರಳು ಮರಳಾದ, ತರಿತರಿಯಾದ. किरकिरा हो जाना = ಪುಡಿಪುಡಿಯಾಗು; ಭಂಗವಾಗು; ನಷ್ಟವಾಗು.

किरकिराना, अक्रि. ಪುಡಿಪುಡಿಯಾಗು; ಸವೆದು ಹೋಗು; ಕಣ್ಣು ಉರಿ, ಒತ್ತುವ ನೋವಾಗು.

किरकिरी, स्त्री. ಕಣ್ಣಲ್ಲಿ ಬಿದ್ದ ಧೂಳು; ಕಣ್ಣುರಿ, ಕಣ್ಣೊತ್ತು; ಅಪಮಾನ.

किरच, स्त्री. ಸಣ್ಣ ಕತ್ತಿ, ಖಡ್ಗ; ಸಸೀನು; ಗಾಜಿನ ಚೂರು.

किरण, किरन, स्त्री. ಕಿರಣ, ರಶ್ಮಿ. किरन फूटना = ಸೂರ್ಯೋದಯವಾಗು.

किरतिया, पु. ಕುಣಿಯುವವ, ನಾಟ್ಯಗಾರ.

किरपान, किरवान, स्त्री. ಕತ್ತಿ, ಕರವಾಲ, ಕೃಪಾಣ.

किरमिच, पु. ಕಿತ್ತಾನಾರಿನ ದಪ್ಪವಾದ ಬಟ್ಟೆ, ರಟ್ಟು ಬಟ್ಟೆ; ಪೀರಪಾಟು, ಪಟವು.

किररना, अक्रि. ಹಲ್ಲು ಕಡಿ; ಕೋಪಗೊಳ್ಳು, ರೇಗು.

किरांची, स्त्री. ಸಾಮಾನು ಹೇರುವ ದೊಡ್ಡ ಗಾಡಿ, ಚಕ್ಕಡಿ; ಸಾಮಾನು ಒಯ್ಯುವ ರೈಲು ಗಾಡಿಯ ಡಬ್ಬಿ; ಸಾರಟು.

किरात, पु. ಕಿರಾತ, ಬೇಡ, ಬೇಟೆಗಾರ.

क़िरात, पु. = क़रात.

किरातिन, किरातिनी, किराती, स्त्री. ಕಿರಾತ ಜಾತಿಯ ಹೆಂಗಸು; ಬೇಡಿತಿ.

किराना, पु. ಮಸಾಲೆ ಸಾಮಾನು, ಸಂಬಾರ, ಕಿರಾಣಿ. सक्रि. ಗಾಳಿಸು, ಕೇರು; ಸರಿಪಡಿಸು.

किरानी, पु. = केरानी.

किराया, पु. ಬಾಡಿಗೆ; ಗುತ್ತಿಗೆ, ಗೇಣಿ; ಹಾಸಲು, ಸೋರು, "ಛಾರ್ಜ". किराये का टट्टू = ಹಣದ ಆಸೆಗೆ ಕೆಲಸ ಮಾಡುವವ; ನೀಚ.

किरायादार, पु. ಬಾಡಿಗೆಗೆ ತಕೊಳ್ಳುವವ, ಬಾಡಿಗೆದಾರ; ಗುತ್ತಿಗೆದಾರ.

किरायानामा, पु. ಗುತ್ತಿಗೆ ಚೀಟಿ; ಬಾಡಿಗೆ ಕರಾರು.

किरायेदार, पु. = किरायादार.

किराव, पु. ಸಣ್ಣ ಬಟಾಣಿ.

किरासन, पु. ಸೀಮೆ ಎಣ್ಣೆ, ಕಲ್ಲೆಣ್ಣೆ.

किरिया, स्त्री. ಆಣೆ; ಕರ್ತವ್ಯ, ಕರ್ಮ; ಕರ್ಮಾಂತರ.

किरूलना, किरोलना, सक्रि. ಕೆರೆ, ಹೆರೆ.

किर्म, स्त्री. ಕ್ರಿಮಿ, ಹುಳು.

किलक, स्त्री. ಕಿಲಕಿಲನೆ ನಗುವಿಕೆ, ಹರ್ಷಧ್ವನಿ; ಒಂದು ಬಗೆ ಲಾಳದ ಕಡ್ಡಿ; ರತ್ನಪ್ರಭೆ, ಹೊಳಕು.

किलकना, अक्रि. ಹರ್ಷಧ್ವನಿ ಮಾಡು, ಕಿಲಕಿಲಗುಟ್ಟು, ಕೆಲೆ.

किलकार, स्त्री. ಹರ್ಷಧ್ವನಿ, ಕಿಲಕಿಲ ಧ್ವನಿ.

किलकारी, स्त्री. ಹರ್ಷ ಧ್ವನಿ, ಕಿಲಕಿಲ. किलकारी मारना = ಕಿಲಕಿಲಗುಟ್ಟು.

किलकिल, स्त्री. ಜಗಳ. किलकिल कांटा = ಒಂದು ತರದ ಆಟ.

किलकिला, स्त्री. ಹರ್ಷಧ್ವನಿ, ಕಿಲಕಿಲ ಧ್ವನಿ; ಒಂದು ಬಗೆ ಮಿಂಚುಳ್ಳಿ. पु. ಕೋಪ, ರೇಗಾಟ, ಸಿಡುಕು.

किलकिलाना, अक्रि. ಹರ್ಷದಿಂದ ಕೂಗಾಡು, ಕಿಲಕಿಲಗುಟ್ಟು, ಕೆಲೆ; ಕಿರಿಚು; ಜಗಳವಾಡು; ರೇಗು.

किलकिलाहट, स्त्री. ಕಿಲಕಿಲನೆ ನಗುವಿಕೆ, ಹರ್ಷಧ್ವನಿ; ರೇಗಾಟ.

किलन, अक्रि. ಜಡಿಯಲ್ಪಡು, ಹೊಡೆಯಲ್ಪಡು; ಕಟ್ಟುಬೀಳು, ವಶವಾಗು; ಕೀಲಿಹೋಗು, ಕುಗ್ಗು; ನರಳು.

किलनी, स्त्री. ನಾಯಿತೊಣಚಿ, ಉಣ್ಣೆ.

किलबिलाना, अक्रि. ತೆವಳು, ದೇಕು, ಹರಿದಾಡು; ವ್ಯಾಕುಲಪಡು.

किलवाना, अक्रि. ಜಡಿಸು, ಕೀಲಿಸು; ಮಂತ್ರದಿಂದ ಕಟ್ಟಿಸು; ಕುಗ್ಗಿಸು.

किलवारी, स्त्री. ದೋಣಿ ಹೋಗುವ ದಿಕ್ಕನ್ನು ತಿರುಗಿಸಲು ಉಪಯೋಗಿಸುವ ಜಲ್ಲೆ, ಹುಟ್ಟು.

किलहँटा, पु. ಒಂದು ಪಕ್ಷಿ.

क़िला, पु. ಕೋಟೆ, ದುರ್ಗ, ಕಿಲ್ಲೆ; ವ್ಯೂಹ.

क़िलादार, पु. ಕೋಟೆಯ ಅಧಿಪತಿ, ದುರ್ಗರಕ್ಷಕ, ಕಿಲ್ಲೇದಾರ.

किलाना, सक्रि. ತೂರು, ಕೇರು, ಒನೆ; ಗುದ್ದು, ಗುಮ್ಮು; ಜಡಿ.

क़िलाबंदी, स्त्री. ಕೋಟೆ ಕಟ್ಟುವಿಕೆ, ವ್ಯೂಹ ರಚನೆ; ಚದುರಂಗದಲ್ಲಿ ಅರಸನನ್ನು ಸುರಕ್ಷಿತ ಮನೆಯಲ್ಲಿರಿಸುವಿಕೆ

किलावा, पु. ಆನೆಯ ಕೊರಳಿನ ಹಗ್ಗ, ಹೊ[illegible]

क़िलिक, स्त्री. ಲೇಖದ ಕಡ್ಡಿ, ಗಲಗು.

क़िलेदार, पु. = क़िलादार.

किलोल, पु. ಅಲ್ಲೋಲಕಲ್ಲೋಲ.

क़िल्लत, स्त्री. ಕುಂದು ಕೊರತೆ, ಲೋಪ, ಅಭಾವ; ಬಡತನ.

किल्ला, पु. ಮೊಳೆ, ಗೂಟ.

किल्लाना, अक्रि. ಕಿರಚು, ಬೊಬ್ಬಿಡು.

किल्ली, स्त्री. ಬೀಗದ ಕೈ, ಕೀಲಿ ಕೈ; ಅಗಳಿ, ಮೊಳೆ; ಕೂಗಾಟ, ಬೊಬ್ಬೆ; ತೊಣಚಿ, ಉಣ್ಣೆ.

किवाड़, पु. ಕದ, ಬಾಗಿಲು. किवाड़ देना या लगाना = ಕದ ಹಾಕು, ಮುಚ್ಚು.

किवाड़ी, स्त्री. "किवाड़" का लघुरूप.

क़िवाम, पु. = क़वाम.

किशमिश, स्त्री. ದ್ವೀಪ ದ್ರಾಕ್ಷಿ, ಒಣ ದ್ರಾಕ್ಷಿ; ಬೀಜವಿಲ್ಲದದ್ರಾಕ್ಷಿ, ಬೇದಾಣ.

किशमिशी, वि. ದ್ವೀಪದ್ರಾಕ್ಷಿಯ, ದ್ವೀಪ ದ್ರಾಕ್ಷಿ ಬಣ್ಣದ, ಕಂದು ಬಣ್ಣದ.

किशोर, पु. ಯುವಕ, ತರುಣ, ಕುವರ.

किशोरी, स्त्री. ತರುಣಿ, ಯುವತಿ. वि. ಪ್ರಾಯದ, ಯೌವನದ.

किश्त, स्त्री. ಚದುರಂಗದಲ್ಲಿ "ಷಹ", ಕಟ್ಟು; ಸಾಗುವಳಿ ಜಮೀನು; ಪೈರು, ಬೆಳೆ.

किश्ती, स्त्री. ದೋಣಿ, ಓಡ, ನೌಕೆ; ತಟ್ಟೆ, ಪರಾತ; ಚದುರಂಗದ ಆನೆ.

किस, सर्व. 'क्या' ಮತ್ತು 'कौन' ಇವುಗಳಲ್ಲಿ ಏಕವಚನದಲ್ಲಿ ವಿಭಕ್ತಿ ಸೇರುವಾಗ ಆಗುವ ವಿಕೃತ ರೂಪ.

किसनई, स्त्री. ಕೃಷಿ, ಬೇಸಾಯ.

क़िसबत, पु. ನಾಪಿತನ ಸಂಚಿ, ಹಡಪ.

किसान, पु. ರೈತ, ಬೇಸಾಯಗಾರ, ಕೃಷೀವಲ, ಕೃಷಕ, ಒಕ್ಕಲಿಗ.

किसानिन, स्त्री. ರೈತರ ಹೆಂಗಸು, ಒಕ್ಕಲಗಿತ್ತಿ.

किसानी, स्त्री. ಕೃಷಿ, ಬೇಸಾಯ.

किसी, सर्व. ಏಕವಚನದಲ್ಲಿ 'कोई' ಶಬ್ದಕ್ಕೆ ವಿಭಕ್ತಿ ಸೇರುವಾಗ ಆಗುವ ವಿಕೃತ ರೂಪ.

किसे, सर्व. ಯಾರಿಗೆ, ಯಾರನ್ನು, ಯಾವುದಕ್ಕೆ, ಯಾವುದನ್ನು ?

क़िस्त, स्त्री. ಕಂತು, ಹಪ್ತೆ, ಕಿಸ್ತು.

क़िस्तबंदी, स्त्री. ಕಂದಾಯ ಅಥವಾ ಸಾಲವನ್ನು ಕೆಲವು ಕಂತುಗಳಲ್ಲಿ ಸಲ್ಲಿಸುವುದು.

क़िस्तवार, क्रिवि. ಕಂತು ಕಂತಾಗಿ; ಹಲವು ಕಿಸ್ತುಗಳಲ್ಲಿ; ಪ್ರತಿ ಕಂತಿಗೂ.

किस्बत, स्त्री ನಾಪಿತನ ಚೀಲ, ಹಡಪ; ಅಡ್ಡೆಕಾರರು ಅಡ್ಡೆ ಹೊರುವಾಗ ಹೆಗಲಮೇಲಿಟ್ಟುಕೊಳ್ಳುವ ಚರ್ಮದ ಬಿಲ್ಲೆ.

क़िस्म, स्त्री. ವಿಧ, ಬಗೆ, ತರಹ, ರೀತಿ

क़िस्मत, स्त्री. ಭಾಗ್ಯ, ದೆಸೆ; ವಿಧಿ; ರಾಜ್ಯದ ಒಂದು ಪ್ರಾಂತ್ಯ. क़िस्मत करना = ವಿಂಗಡಿಸು, ಪಾಲುಮಾಡು.

क़िस्मतवर, वि. ಭಾಗ್ಯವಂತ, ದೆಸೆಗಾರ, ದಶಾವಂತ, ಅದೃಷ್ಟಶಾಲಿ.

क़िस्सा, पु. ಕಥೆ, ಕತೆ; ಕಾದಂಬರಿ; ವೃತ್ತಾಂತ; ಜಗಳ.

की, प्रत्य. ಷಷ್ಠೀ ವಿಭಕ್ತಿ ಪ್ರತ್ಯಯ (ಸ್ತ್ರೀಲಿಂಗ ರೂಪ).

कीक, पु. ಚೀತ್ಕಾರ, ಕೂಗಾಟ.

कीकड़, **कीकर**, पु. ಜಾಲಿ ಗಿಡ.

कीकना, अक्रि. ಕಿರಿಚು, ಅರಚು.

कीकान, पु. ಕುದುರೆ.

कीच, **कीचड़**, स्त्री. ಕೊಳೆ, ಕೆಸರು, ಬದಿ; ಬುರುದೆ, ಕೊಚ್ಚೆ.

कीट, पु. ಹುಳು, ಕ್ರಿಮಿ, ಕೀಟ; ಕೊಳೆ, ಕೊಳಕು.

कीड़ा, पु. ಕ್ರಿಮಿ, ಹುಳು; ಹಾವು; ತಿಗಣೆ; ಹೇನು. कीड़ा पड़ना = ಹುಳುಕು ಬೀಳು, ಹುಳು ಹತ್ತು. कीड़े मकोड़े = ಹುಳಹುಪ್ಪಡಿ, ಹುಳುಹುಪ್ಪಟೆ.

कीड़ी, स्त्री. ಹುಳು; ಇರುವೆ.

कीन, पु. ಅಸೂಯೆ, ವಿದ್ವೇಷ.

कीनना, सक्रि. ಕೊಂಡುಕೊಳ್ಳು.

कीना, पु. ದ್ವೇಷ, ಜಿದ್ದು, ಹಗೆತನ; ಚೋಡಿ, ಮತ್ಸರ.

कीनावर, वि. ದ್ವೇಷವುಳ್ಳ, ಮತ್ಸರವುಳ್ಳ.

कीप, **कीफ़**, स्त्री. ಲಾಳಿಕೆ, ಆಲ್ಕಿ, ಬುದ್ದಿವಂತ, ಪನ್ನಾಳೆ.

क़ीमत, स्त्री. ಬೆಲೆ, ಕ್ರಯ, ಕಿಮ್ಮತ್ತು. क़ीमत ठहराना = ಬೆಲೆ ಕಟ್ಟು.

क़ीमती, वि. ಬೆಲೆ ಬಾಳುವ, ಬಹುಮೂಲ್ಯವಾದ; ಹೆಚ್ಚು ಬೆಲೆಯ, ದುಬಾರಿ.

क़ीमा, पु. ಮಾಂಸದ ಚೂರು.

कीमिया, पु. ರಸವಾದ, ರಸಾಯನಶಾಸ್ತ್ರ.

कीमियागर, पु. ರಸವಾದ ಬಲ್ಲವ, ರಸವಾದಿ, ರಸಾಯನಜ್ಞ.

कीमियागरी, स्त्री. ರಸವಾದ, ರಸಸಿದ್ಧಿ, ರಸಾಯನ ವಿದ್ಯೆ.

कीमुख़्त, पु. ಕುದುರೆ ಅಥವಾ ಕತ್ತೆಯ ತೊಗಲು; ಗುಳ್ಳೆಗುಳ್ಳೆಯಾಗಿರುವ ಚಕ್ಕಳ.

कीमुख़्ती, वि. ಕತ್ತೆಯ ಚರ್ಮದ, ಕುದುರೆಯ ಚರ್ಮದಿಂದ ಮಾಡಿದ.

कीर, पु. ಗಿಳಿ, ಶುಕ; ಬೇಟೆಗಾರ.

कीरत, कीरती, स्त्री. ಕೀರ್ತಿ.

कीर्त्तन, पु. ಗುಣಕಥನ, ಕೀರ್ತನೆ.

कीर्त्तनिया, पु. ಕೀರ್ತನಕಾರ.

कीर्त्ति, स्त्री. ಕೀರ್ತಿ, ಯಶಸ್ಸು, ಖ್ಯಾತಿ, ಹೆಸರುವಾಸಿ, ಪ್ರಸಿದ್ಧಿ.

कील, स्त्री. ಆಣಿ, ಮೊಳೆ; ಗೂಟ; ದಶಿ, ಬೆಣೆ; ತಿಗುರಿ ಅಥವಾ ಬೀಸುವ ಕಲ್ಲಿನ ಗೂಟ; ಮಡಿಬಕ್ಕೆ, ಮಡಿಮೆ; ಮೂಗುತಿ. कील कांटा = ಉಪಕರಣ, ಮುಟ್ಟು, ಆಯುಧ.

कीलक, पु. ಗೂಟ, ಮೊಳೆ.

कीलन, पु. ಬಂಧನ, ಕಟ್ಟು.

कीलना, सक्रि. ಮೊಳೆ ಅಥವಾ ಗೂಟ ಹೊಡೆ, ಜಡಿ; ಬಿಗಿಸು, ಕೀಲಿಸು, ಬದ್ಧಿಸು, ಕಟ್ಟು; ಮಂತ್ರ ಹಾಕು, ವಶಪಡಿಸು.

कीला, पु. ಮೊಳೆ; ಗರಗಸ ಮುಂತಾದವುಗಳ ಹಲ್ಲು, ಕಸ್ಸು; ದವಡೆ ಹಲ್ಲು.

कीली, स्त्री. ತಿರುಗಣೆ ಮೊಳೆ, ಮರಸುತ್ತು; ಕೀಲಿ; ಅಚ್ಚು, ಅಚ್ಚುಮರ, ಇರ್ಚ; ಬೀಗದ ಕೈ, ಕೀಲಿ ಕೈ.

कीसा, पु. ಚೀಲ, ಸಂಚಿ; ಕಿಸೆ

कीसी, स्त्री. ಚಿಕ್ಕ ಚೀಲ, ಸಣ್ಣ ಕಿಸೆ.

कुँअर, पु. ಕುಮಾರ, ಕುವರ; ರಾಜಕುಮಾರ, ಅರಸು ಮಗ.

कुँअरी, स्त्री. ಕುಮಾರಿ, ಕುವರಿ; ರಾಜಪುತ್ರಿ.

कुँआं, पु. ಬಾವಿ, ಕೂಪ.

कुँआर, पु. ಆಶ್ವೀಜ ಮಾಸ.

कुँआरपन, पु. ಬ್ರಹ್ಮಚರ್ಯ.

कुँआरा, वि. ಕುವರ; ಅವಿವಾಹಿತ, ಬ್ರಹ್ಮಚಾರಿ.

कुँआरी, स्त्री. ಕನ್ಯೆ, ಮಗಳು; ರಾಜಕುಮಾರಿ; ಅವಿವಾಹಿತಳು.

कुँई, स्त्री. ಕನ್ನೈದಿಲೆ, ನೀಲೋತ್ಪಲ.

कुंकुमा, पु. ಓಕಳಿ ಅಥವಾ ಗುಲಾಲು ಇಡುವ ಪಾತ್ರೆ.

कुंगड़ा, वि. ಗಟ್ಟಿಮುಟ್ಟಾದ, ಬಲಿಷ್ಠ.

कुंगड़ाई, स्त्री. ಬಲ, ದಾರ್ಢ್ಯ.

कुंचन, पु. ನಲುಗುವಿಕೆ, ಸುಕ್ಕು.

कुंज, पु. ಲತಾಗೃಹ, ನಿಕುಂಜ; ಮೂಲೆ; ಶಾಲುಗಳ ಮೂಲೆಗಳಲ್ಲಿ ಮಾಡಿರುವ ಕಸೂತಿ ಕೆಲಸ.

कुंजड़ा, पु. ತರಕಾರಿ ಬೆಳೆಯುವವ; ಕಾಯಿಪಲ್ಯ ಮಾರುವವ, ತರಕಾರಿ ಮಾರುವವ. कुंजड़ा क़साई = ನೀಚಜಾತಿಯವರು.

कुंजड़िन, कुंजड़ी, स्त्री. ಕಾಯಿಪಲ್ಯ ಮಾರುವವಳು. कुंजड़ी का स्वांग = ಒಂದು ಆಟ.

कुंजी, स्त्री. ಬೀಗದಕೈ, ಕೀಲಿಕೈ, ಚಾವಿ; ಟೀಕೆಯ ಪುಸ್ತಕ; ಪ್ರಕಾಶಿಕೆ.

कुंठ, वि. ಮಂದ; ಮೊಂಡು; ದಡ್ಡ.

कुंड, पु. ಕೊಳಗ; ಹೋಮ ಕುಂಡ,

ಅಗ್ನಿಕುಂಡ; ಹೊಂಡ, ಕೊಳ; ಜಾರಜ ಪುತ್ರ; ಅಂಬಾರಿ.

कुंडल, पु. ಕಿವಿಯ ಕುಂಡಲ; ಕಡಗ; ಬಳೆ, ಅಣಸು; ದಾರದುಂಡೆ, ಕಂಡು; ತೇಜೋಮಂಡಲ; ಸೂರ್ಯ ಅಥವಾ ಚಂದ್ರನ ಸುತ್ತಲು ಗುಡಿ ಕಟ್ಟುವಿಕೆ.

कुंडलिया, स्त्री. ಒಂದು ಛಂದಸ್ಸು.

कुंडली, स्त्री. ಜಿಲೇಬಿ; ಸುರುಳಿ, ಸಿಂಬೆ, ಸುತ್ತು; ಹಾವು ತೆಕ್ಕೆಗಟ್ಟುವಿಕೆ; ರಾಶಿ ಕುಂಡಲಿ, ಜಾತಕ.

कुंडा, पु. ಗಡಿಗೆ; ಕಡಾಯಿ; ಬಾಗಿಲಿನ ಚಿಲಕವನ್ನು ಸಿಕ್ಕಿಸುವ ಕೊಂಡಿ.

कुंडी, स्त्री. ಸಣ್ಣ ಗಡಿಗೆ; ಚಿಲಕದ ಕೊಂಡಿ; ಗೊಣಸು.

कुंत, पु. **कुंती**, स्त्री. ಈಟಿ, ಭರ್ಜಿ.

कुंथना, अक्रि. ತಟ್ಟಲ್ಪಡು.

कुंद, वि. ಕುಂಠಿತ; ಮಂದ; ಮೊಂಡಾದ. पु. ಒಂದು ಬಗೆ ಮಲ್ಲಿಗೆ, ಕೋಲು ಮಲ್ಲಿಗೆ.

कुंदज़ेहन, वि. ಮಂದಬುದ್ಧಿ, ದಡ್ಡ, ಮಂಕ.

कुंदन, पु. ಕುಂದಣದ ಚಿನ್ನ, ಅಪರಂಜಿ. वि. ಶುದ್ಧವಾದ, ಚೊಕ್ಕ.

कुंदनसाज़, पु. ಕುಂದಣದ ಕೆಲಸ ಮಾಡುವವ, ಕುಂದಣಗಾರ.

कुंदनकूट, पु. ಸೀಮೆ ಸಾಂಬ್ರಾಣಿ.

कुंदरा, पु. ಹುಲ್ಲಿನ ಬಣವೆ, ಮೆದೆ.

कुंदरू, पु. ತೊಂಡೆಕಾಯಿ.

कुंदला, पु. ಒಂದು ತರದ ಗುಡಾರ, ಡೇರೆ.

कुंदा, पु. ಮರದ ಕೊರಡು, ಮೊದ್ದು, ದಿಮ್ಮಿ; ಅಡಿ ತುಂಡು; ತುಪಾಕಿಯ ಹಿಂಭಾಗ, ಕುಂದೆ; ಹಿಡಿ; ನಾಗವಾಸ; ಕೋಳ; ಇಸ್ತ್ರಿ ಮಾಡುವ ಕೊಡತಿ, ಇಸ್ತ್ರೀ ಮಣೆ; ರೆಕ್ಕೆ; ಹಾಲುಖೋವ; ಒಂದು ಕುಸ್ತಿ ವರಸೆ, ಗುದ್ದು.

कुंदी, स्त्री. ಇಸ್ತ್ರಿ ಮಾಡುವುದು; ಬಡಿಯುವುದು; ಧಮ್ಮಸು ಮಾಡುವುದು.

कुंदीगर, पु. ಇಸ್ತ್ರಿ ಮಾಡುವವ; ಧಮ್ಮಸು ಮಾಡುವವ.

कुंदेरना, सक्रि. ಕೆರೆ, ಕೀರು, ಹೆರೆ.

कुंदेरा, पु. ಕೆರೆಯುವವ, ಹೆರೆಯುವವ

कुंभकार, पु. ಕುಂಬಾರ; ಹುಂಜ.

कुंभमेला, पु. ಹರಿದ್ವಾರ, ಪ್ರಯಾಗ, ಉಜ್ಜೈನಿ ಮುಂತಾದ ಸ್ಥಳಗಳಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಜಾತ್ರೆ.

कुंभस्थल, पु. ಆನೆಯ ತಲೆಗುಪ್ಪೆ.

कुंभी, स्त्री. ಆರು ವರ್ಷಕ್ಕೊಂದಾವರ್ತಿ ನಡೆಯುವ ಒಂದು ಜಾತ್ರೆ.

कुंभीर, पु. ಮೊಸಳೆ.

कुंवर, पु. =कुँअर.

कुंवरानी, स्त्री. "कुंवर" का स्त्री. रूप.

कुंवरेटा, पु. ಚಿಕ್ಕ ಹುಡುಗ, ಪೋರ.

कुंवारी, स्त्री. =कुंआरी.

कुआं, **कुआ**, पु. ಕೂಪ, ಭಾವಿ. कुआं चलाना = ಭಾವಿಯಿಂದ ನೀರು ಹಾಯಿಸು, ನೀರು ಕಟ್ಟು. कुआं टूटना = ನೀರು ಬತ್ತಿ ಹೋಗು.

कुआर, पु. ಆಶ್ವೀಜ ಮಾಸ.

कुइयाँ, कुईं, स्त्री. ನೀಲೋತ್ಪಲ, ಕನ್ನೈದಿಲೆ; ಸಣ್ಣ ಭಾವಿ. कठ कुइयाँ = ಹಲಗೆ ಅಥವಾ ಓಡೆಗಳಿಂದಾದ ಭಾವಿ, ಓಡೆ ಭಾವಿ.

कुकड़ना, अक्रि. ಮುದುರಿ ಹೋಗು, ಸುಕ್ಕು ಹಿಡಿ.

कुकड़ी, स्त्री. ಕೋಳಿ, ಹೆಂಟೆ; ನೂಲಿನ ಕಂಡು.

कुकड़ूंकूं, स्त्री. ಕೊಕ್ಕೊರ್ ಎಂಬ ಶಬ್ದ.

कुकनू, पु. ಒಂದು ಕಲ್ಪಿತ ಪಕ್ಷಿ

कुकरी, पु. ಬಾಗಿದ ಚೂರಿ.

कुकुर, पु. ನಾಯಿ

कुकुरखांसी, स्त्री. ನಾಯಿಕೆಮ್ಮು, ಎಪ್ಪತ್ತರ ಕೆಮ್ಮು, ಕಪ್ಪೆ ಕೆಮ್ಮು.

कुकुरदांत, पु. ಶೂಲದ ಹಲ್ಲು.

कुकुरमाछी, स्त्री. ನಾಯಿ ನೊಣ.

कुकुरमुत्ता, पु. ನಾಯಿಕೊಡೆ, ಅಣಬೆ.

कुकुरी, स्त्री. ಹೆಣ್ಣು ನಾಯಿ.

कुख्याति, स्त्री. ಅಪಯಶಸ್ಸು; ನಿಂದೆ.

कुघात, पु. ಅವೇಳೆ, ಅಸಮಯ; ಕಪಟ.

कुच, स्त्री. ಸ್ತನ, ಮೊಲೆ.

कुचकुचाना, सक्रि. ಕೆದಕು, ಕುಡುಕು; ಕೊಡಚು.

कुचक्र, पु. ಒಳಸಂಚು, ಪಿತೂರಿ.

कुचक्री, वि. ಒಳಸಂಚು ನಡೆಸುವವ.

कुचना, अक्रि. ಸಂಕೋಚಪಡು; ಸಂಕುಚಿತವಾಗು.

कुचलना, सक्रि. ಮೆಟ್ಟು, ತುಳಿ; ಹಿಸುಕು, ಜಜ್ಜು, ನಜುಗು.

कुचलवाना, कुचलाना, सक्रि. "कुचलना" का प्रे. रूप.

कुचला, पु. ವಿಷಮುಷ್ಟಿ, ಕಾಸರಿಕೆ; ಚಟ್ನಿ, ಹಿಂಡಿ.

कुचली, स्त्री. ದವಡೆ ಹಲ್ಲು.

कुचाग्र, पु. ಮೊಲೆಯ ತುದಿ, ಮೊಲೆ ತೊಟ್ಟು, ಚೂಚುಕ.

कुचाल, पु. ದುರಾಚಾರ, ಕೆಟ್ಟ ನಡತೆ.

कुचाली, स्त्री. ಕೆಟ್ಟ ನಡತೆಯುಳ್ಳವ, ದುರಾಚಾರಿ, ದುಷ್ಟ.

कुचेष्ट, वि. ಕುಚೇಷ್ಟೆಗಾರ.

कुचेष्टा, स्त्री. ಕುಚೇಷ್ಟೆ, ಕೀಟಲೆ.

कुचैन, वि. ನೆಮ್ಮದಿಯಿಲ್ಲದ, ಅಶಾಂತ.

कुचैल, पु. ಕೊಳಕು ಬಟ್ಟೆ, ಮೈಲಿಗೆ.

कुचैला, वि. ಕೊಳಕು ಬಟ್ಟೆ ಧರಿಸಿದವ; ಚಿಂದಿ ಬಟ್ಟೆಯುಟ್ಟವ, ಕುಚೇಲ.

कुछ, वि. ಸ್ವಲ್ಪ, ಕೊಂಚ, ಕೆಲವು. सर्व. ಏನೋ, ಏನಾದರೂ, ಅವುದೋ. कुछ का कुछ होना = ಏನೇನೋ ಆಗಿ ಹೋಗು, ಪಲ್ಲಟವಾಗು. कुछ न कुछ = ಏನಾದರೂ, ಸ್ವಲ್ಪವಾದರೂ. कुछ हो = ಏನೇ ಆಗಲಿ. बहुत कुछ = ಬಹಳ, ತುಂಬ. सब कुछ = ಸಮಸ್ತ, ಎಲ್ಲ, ಇಡೀ, ಅಶೇಷ.

कुज, पु. ಕುಜ ಗ್ರಹ, ಅಂಗಾರಕ.

कुजना, अक्रि. ನಶಿಸು, ಕ್ಷೀಣಿಸು; ಸವೆ.

कुजा, क्रिवि. ಎಲ್ಲಿ?

कुजात, वि. ಕೀಳು ಜಾತಿಯ, ನೀಚ.

कुजाति, स्त्री. ನೀಚ ಜಾತಿ, ಕೀಳು

ಜಾತಿ.

कुजाना, सक्रि. ಸವೆಯಿಸು.

कुज्जा, पु. ಮಣ್ಣಿನ ಬಟ್ಟಲು, ಹಣತೆ, ಮಣ್ಣಿನ ಹೆಂಟೆ.

कुटंत, स्त्री. ಕುಟ್ಟುವಿಕೆ.

कुट, पु. ಮನೆ; ದುರ್ಗ; ಕುಟ್ಟಿದವಸ್ತು, ಪುಡಿ; ಕುಷ್ಠದ ಗಿಡ; ರಟ್ಟಿನ ಕಾಗದ

कुटका, पु. ಚಿಕ್ಕ ಚೂರು.

कुटकी, स्त्री. ಒಂದು ವನಸ್ಪತಿ; ಗುಂಗಾಡು, ಚಿಗಟ; ವಿಯೋಗ, ವಿರಹ; ನವಣೆ; ಚೂರು, ಪುಡಿ.

कुटकुट, पु. ನವೆ, ತಿಂಡಿ; ತೀಟೆ, ತುರಿ.

कुटकुटाना, अक्रि. ಕೊಕ್ಕಿನಿಂದ ಕುಕ್ಕು, ಕುಡುಕು.

कुटनपन, **कुटनपेशा**, पु. ಕುಂಟಣಗಿತ್ತಿಯ ಕೆಲಸ; ದೌತ್ಯ.

कुटनहारी, स्त्री. ಕುಟ್ಟುವವಳು, ಕೊಟ್ಟಣಗಿತ್ತಿ.

कुटना, अक्रि. ಪುಡಿಯಾಗು; ಕುಟ್ಟಲ್ಪಡು, ಇಡಿ; ಪಾಡು ಪಡು, ದುಡಿ. पु. ಕುಟ್ಟಣಿಗೆ, ಒನಕೆ; ಕುಂಟಣಿಗ, ದೂತ; ಜಗಳ ಹುಟ್ಟಿಸುವವ.

कुटनाना, सक्रि. ಹೆಂಗಸರನ್ನು ಮರುಳುಗೊಳಿಸಿ ದುರ್ಮಾರ್ಗಕ್ಕೆ ಒಯ್ಯು, ಬುಲ್ಲವಿಸು; ಇಡಿಸು, ಕುಟ್ಟಿಸು.

कुटनापा, पु. ಕುಂಟಣಗಿತ್ತಿಯ ಕೆಲಸ.

कुटनी, स्त्री. ಕುಂಟಣಗಿತ್ತಿ, ತಲೆಹಿಡಕಿ; ಕಲಹ ಹಚ್ಚುಸುವ ಸ್ತ್ರೀ.

कुटवाना, सक्रि. "कूटना" का प्रे. रूप.

कुटाई, स्त्री. ಕುಟ್ಟುವಿಕೆ, ಕೊಟ್ಟಣ; ಕುಟ್ಟುವುದಕ್ಕೆ ಕೂಲಿ.

कुटाना, सक्रि. ಕುಟ್ಟಿಸು, ವಿಂದಿಸು.

कुटार, पु. ಟಾಕಣ, ತಟ್ಟು.

कुटास, पु. ಮಾರಾಮಾರಿ, ಹೊಡೆದಾಟ.

कुटिया, स्त्री. ಗುಡಿಸಲು, ಜೋಪಡಿ.

कुटिल, वि. ಡೊಂಕಾದ, ವಕ್ರ; ಕೆಟ್ಟ; ಕ್ರೂರ; ಧೂರ್ತ, ಕಪಟಿ.

कुटिलता, स्त्री. **कुटिलपन**, पु. ವಕ್ರತೆ, ಡೊಂಕು; ದುಷ್ಟತನ, ಧೂರ್ತತನ, ಕಪಟ.

कुटी, स्त्री. **कुटीर**, पु. ಸಣ್ಣ ಮನೆ, ಗುಡಿಸಲು, ಗುಡಿಲು, ಜೋಪಡಿ.

कुटुंब, पु. ಕುಟುಂಬ, ಸಂಸಾರ.

कुटुंबी, पु. ಗೃಹಸ್ಥ, ಸಂಸಾರಿಕ; ಬಂಧು ಬಳಗ.

कुटेक, स्त्री. ಹಟ, ಮುಷ್ಕರ.

कुटेव, स्त्री. ಕೆಟ್ಟವಾಡಿಕೆ, ದುರಭ್ಯಾಸ.

कुटोनी, **कुटौनी**, स्त्री. ಕುಟ್ಟುವಿಕೆ; ಕೊಟ್ಟಣ; ಕುಟ್ಟುವುದರ ಕೂಲಿ.

कुट्टा, पु. ರೆಕ್ಕೆ ಕತ್ತರಿಸಿದ ಪಾರಿವಾಳ; ತೋಹಿನ ಹಕ್ಕಿ, ದೀಹದ ಪಕ್ಷಿ.

कुट्टी, स्त्री. ಜೋಳದ ಕಡ್ಡಿಯನ್ನು ಕತ್ತರಿಸುವಿಕೆ; ಕತ್ತರಿಸಿದ ಜೋಳದ ಕಡ್ಡಿ, ತುಂಡು; ರೆಕ್ಕೆ ಕತ್ತರಿಸಿದ ಪಾರಿವಾಳ; ನೆನೆಹಾಕಿ ಕುಟ್ಟಿದ ಕಾಗದ; ಸ್ನೇಹ ಭಂಗ (ಮಕ್ಕಳಾಟದಲ್ಲಿ), ಠೂಠೂ.

कुठला, पु. **कुठली**, स्त्री. ಕಣಜ, ಓಡೆ, ಹಗೇವು, ಕುಸಾಲ.

कुठाँव, स्त्री. ಕೆಟ್ಟ ಸ್ಥಳ.

कुठाकु, पु. ಬಡಗಿ ಹಕ್ಕಿ, ಮರಕುಟಿಗ,

ಮರಕುಟಿಗನ ಹಕ್ಕಿ.

कुठाट, पु. ಕುಪ್ರಬಂಧ; ದುರಾಲೋಚನೆ.

कुठार, पु. ಕೊಡಲಿ, ಪರಶು, ಕುಠಾರ.

कुठारी, स्त्री. ಕೈಗೊಡಲಿ.

कुठाली, स्त्री. ಮೂಸೆ, ಕೂವೆ; ಚಿಕ್ಕ ಕೊಡಲಿ.

कुठियार, पु. ಉಗ್ರಾಣ, ಕಣಜ.

कुठियारी, पु. ಉಗ್ರಾಣಿಕ, ಕೊಟ್ಟಾರಿ.

कुठौर, पु. ಕೆಟ್ಟ ಸ್ಥಳ; ಅಸಮಯ.

कुड़क, स्त्री. ಒಡಕು.

कुड़कना, अक्रि. ಒಡೆ, ಬಿರಿ, ಚೂರುಚೂರಾಗು; ಮುಕ್ಕು, ತಿನ್ನು.

कुड़कुड़ाना, कुड़बुड़ाना, सक्रि. ಗೊಣಗುಟ್ಟು, ಮುಸುಗುಟ್ಟು; ಕೆರಳು, ಕನಲು.

कुड़कुड़ी, स्त्री. ಅಜೀರ್ಣದಿಂದ ಹೊಟ್ಟೆಯಲ್ಲಾಗುವ ಶಬ್ದ, ಗುಳುಕು, ಗುಡುಗುಡು ಶಬ್ದ.

कुड़ता, पु. ಅಂಗಿ, ಕುಡತಾ, ಜುಬ್ಬ.

कुड़ती, स्त्री. ದನಗಳಿಗೆ ನೀರು ಕುಡಿಸುವ ಪಾತ್ರೆ; ರವಿಕೆ, ಕುಪ್ಪಸ.

कुड़मा, पु. ಕುಲ, ವಂಶ, ಬುಡಕಟ್ಟು.

कुड़ल, स्त्री. कुड़ला, पु. ಸಂಧಿವಾತ.

कुड़व, पु. ಬೊಗಸೆ, ಕೊಳಗ.

कुडुक, पु. ಹೆಂಟೆಯ ಕೂಗು.

कुडौल, वि. ಕುರೂಪ, ಅಂದಗೆಟ್ಟ.

कुढंग, पु. ದುರ್ವ್ಯವಹಾರ, ಕೆಟ್ಟ ನಡತೆ; ಒರಟುತನ. वि. ಕೆಟ್ಟ, ಕುರೂಪ, ಅಂದಗೆಟ್ಟ.

कुढंगा, वि. ಮರ್ಯಾದೆಗೆಟ್ಟ ನಡತೆಯುಳ್ಳವ, ಒಡ್ಡ, ಒರಟ.

कुढ़न, स्त्री. ಆಂತರಿಕ ದುಃಖ ಅಥವಾ ಕೋಪ; ರೇಗು, ಮುನಿಸು, ಸಿಟ್ಟು.

कुढ़ना, अक्रि. ಒಳಗೊಳಗೆ ರೇಗು ಅಥವಾ ದುಃಖಿಸು, ಕೊರಗು; ಮುಸುಗುಟ್ಟು; ಸೀವರಿಸು; ಅಸೂಯೆಪಡು.

कुढ़ब, वि. ಅಂದಗೆಟ್ಟ; ಕಠಿಣವಾದ, ದುಸ್ತರ.

कुढ़ाना, सक्रि. ಚಿಡಾಯಿಸು, ಕೆರಳಿಸು, ರೇಗಿಸು; ದುಃಖಗೊಳಿಸು, ಸತಾಯಿಸು

कुतका, पु ಕೋಲು, ದೊಣ್ಣೆ, ದಂಡ; ಭಂಗಿ ಅರೆಯುವ ಕೋಲು.

कुतना, अक्रि. ಬೆಲೆ ಕಟ್ಟಲ್ಪಡು; ಎಣಿಸಲ್ಪಡು, ಎಣಿಕೆಯಾಗು.

कुतबा, पु. ಬರೆದದ್ದು; ಲೇಖ.

कुतरन, पु. ಹಲ್ಲುಗಳಿಂದ ಸಿಗಿದದ್ದು, ಕಡಿದದ್ದು, ಚೂರು.

कुतरना, सक्रि. ಹಲ್ಲಿನಿಂದ ಕಡಿ; ಸಿಗಿ; ಕೊತ್ತು, ಕುಡುಕು; ತುಂಡರಿಸು.

कुतरू, पु. ನಾಯಿಮರಿ, ಕುನ್ನಿ; ಕಡಿಯುವವ.

कुतर्क, पु. ಕುತರ್ಕ, ವಿತಂಡವಾದ.

कुतवाल, पु.=कोतवाल.

कुतिया, स्त्री. ಹೆಣ್ಣುನಾಯಿ; ಹಾದರಗಿತ್ತಿ.

कुतुब, पु. (किताब का ब. रूप.) ಪುಸ್ತಕಗಳು, ಗ್ರಂಥಗಳು.

कुतुब, पु.=कुत्ब.

कुतुबख़ाना, पु. ಪುಸ್ತಕ ಭಂಡಾರ,

ಪುಸ್ತಕಾಲಯು.

कुतुबफ़रोश, पु. ಪುಸ್ತಕ ಮಾರುವವ, ಪುಸ್ತಕ ವಿಕ್ರೇತ, ಪುಸ್ತಕ ವ್ಯಾಪಾರಿ.

कुतुर, पु. ವೃತ್ತದ ವ್ಯಾಸರೇಖೆ.

कुत्ता, पु. ನಾಯಿ, ಶುನಕ, ಕುನ್ನಿ; ತುಪಾಕಿ ಚಾಪಿನ ಕೀಲು, ತುಪಾಕಿಯ ಕುದುರೆ; ತಿರುಡಿ, ಹಿಡಿಚಿರಾಯಿ; ಅಂಟುಪುರುಳೆ. कुत्ते खसी = ತುಚ್ಛ ಕೆಲಸ.

कुत्ताख़ाना, पु. ನಾಯಿಯು ಗೂಡು, ನಾಯಿಕೊಟ್ಟಿಗೆ.

कुत्तामुत्ता, पु. ನಾಯಿಕೊಡೆ, ಅಣಬೆ.

कुत्ती, स्त्री. ಹೆಣ್ಣುನಾಯಿ; ಹಾದರಗಿತ್ತಿ

कुतब, पु. ಧ್ರುವನಕ್ಷತ್ರ, ಅಕ್ಷ, ಅಚ್ಚು; ಮುಖಂಡ, ನಾಯಕ.

कुतबनुमा, पु. ಉತ್ತರಮುಖಿ; ದಿಗ್ದರ್ಶಕ ಯಂತ್ರ, ದಿಕ್ಸೂಚಿ.

कुदकना, अक्रि. ಕುಣಿ, ಹಾರಾಡು, ಕುಪ್ಪಳಿಸು.

कुदक्कड़, वि. ಕುಣಿಯುವವ, ಹಾರಾಡುವವ.

कुदका, पु. ಕುಣಿದಾಟ, ನೆಗೆದಾಟ.

क़ुदरत, स्त्री. ಶಕ್ತಿ; ಸಹಜ ಗುಣ, ಸ್ವಭಾವ, ಪ್ರಕೃತಿ; ದೈವಿಕ ಶಕ್ತಿ; ಮಾಯೆ; ಸೃಷ್ಟಿ.

क़ुदरती, वि. ಸ್ವಾಭಾವಿಕವಾದ; ನೈಸರ್ಗಿಕ; ಪ್ರಾಕೃತಿಕ; ದೈವಿಕವಾದ.

कुदलाना, अक्रि. ಕುಣಿ, ಕುಪ್ಪಳಿಸು, ನೆಗೆ.

कुदवाना, सक्रि. ಕುಣಿಸು, ನೆಗೆಸು, ಹಾರಾಡಿಸು.

कुदांव, पु. ದುಃಸ್ಥಿತಿ, ದುರವಸ್ಥೆ; ವಿಶ್ವಾಸಘಾತ, ಮೋಸ.

कुदान, स्त्री. ಕುಣಿತ, ಕುಣಿದಾಟ; ಹಾರಾಟ, ನೆಗೆತ, ನೆಗೆತ, ಗಂತು.

कुदाना, सक्रि. ಕುಣಿಸು, ನೆಗೆಸು; ರೇಗಿಸು.

कुदाया, पु. ಒಂದು ಬಗೆ ಪಾರಿವಾಳ.

कुदारी, स्त्री. कुदाल, पु. कुदाली, स्त्री. ಗುದ್ದಲಿ, ಮೊನೆಗುದ್ದಲಿ, ಪಿಕಾಸಿ.

कुद्दाल, पु. ಕರಿ ಕೋವಿದಾರ ಮರ; ಮೊನೆಗುದ್ದಲಿ.

क़ुद्दूस, वि. ಪವಿತ್ರ, ಪಾವನ.

क़ुद्दूसियत, स्त्री. ಪವಿತ್ರತೆ.

कुद्रव, पु. ಕೋದ್ರುವ, ಹಾರಕದಕ್ಕಿ; ಒಂದು ಕತ್ತಿ, ಪರಸೆ.

कुनकुना, वि. ಉಗುರು ಬೆಚ್ಚಗಾದ, ಕವೋಷ್ಣ, ಮಂದೋಷ್ಣ.

कुनना, सक्रि. ಕೆತ್ತು, ಕೀಸು, ಕೆರೆ.

कुनबा, पु. ಪರಿವಾರ, ಕುಟುಂಬ; ಒಕ್ಕಲು; ಕುಲ, ವಂಶ, ಬುಡಕಟ್ಟು.

कुनबी, पु. ಕೃಷಿಕ, ರೈತ; ಒಂದು ಜಾತಿ ಒಕ್ಕಲಿಗರು.

कुनवा, पु. ಪಾತ್ರೆ ಕಡೆಚಲು ಹಿಡಿವವ, ತರಣಿ ಹಿಡಿಯುವವ, ಕಡೆಯುವವ.

कुनह, स्त्री. ದ್ವೇಷ, ಮತ್ಸರ.

कुनही, वि. ದ್ವೇಷಿಸುವವ.

कुनाई, स्त्री. ಕೆತ್ತಿದ ಅಥವಾ ಕೆರೆದ ಚೂರು; ಚಕ್ಕೆ ಪುಡಿ, ರಂಪದ ಧೂಳು; ಕೆತ್ತುವಿಕೆ ಅಥವಾ ಕೆರೆಯುವಿಕೆ;

ಕೆತ್ತಿದ ಅಥವಾ ಕೆರೆದ ಕೂಲಿ.

कुनिंदा, वि. ಮಾಡುವವ.

कुनीन, स्त्री. ಕೊಯ್ನಾ.

कुनेरा, वि. ಕೆತ್ತುವವ; ಕೆರೆಯುವವ.

कुन्नस, स्त्री. ಪ್ರಾರ್ಥನೆ; ವಿನಂತಿ.

कुप्पा, पु. ಎಣ್ಣೆ ಇಡುವ ತೊಗಲಿನ ಪಾತ್ರೆ, ಚರ್ಮದ ಸಿದ್ದಿಗೆ, ದುಬ್ಬಿ; ಕುಪ್ಪಿ, ಬುಡ್ಡಿ. कुप्पा होना = ಉಬ್ಬು; ಹಿಗ್ಗು; ಬಾತುಹೋಗು; ಸಿಟ್ಟಿಗೇರು.

कुप्पामल, पु. ಕೊಬ್ಬಿದವ, ಟೊಣಪ, ಟೊಣೆಯ, ದುಬ್ಬ.

कुप्पी, स्त्री. ಸಣ್ಣ ಸಿದ್ದಿಗೆ, ಬುದ್ದಲಿ, ಬುದ್ದಣಿಗೆ; ಕುಪ್ಪಿ, ಬುಡ್ಡಿ; ಹಣತೆ.

कुफ़र, **कुफ़ुर**, **कुफ़्र**, पु. ಮುಹಮ್ಮದೀಯ ಮತವಲ್ಲದ ಬೇರೆ ಮತ; ಇಸ್ಲಾಂ ಧರ್ಮಕ್ಕೆ ವಿರುದ್ಧವಾದದ್ದು.

कुफ़्ल, पु. ಬೀಗ, ಕೀಲಿ.

कुब, **कुबुड़**, पु. ಗೂನು, ಡುಬ್ಬ; ಹಿಳಿಲು

कुबड़ा, पु. ಗೂನುಳ್ಳವ, ಕುಬ್ಜ, ಗೂನ. वि. ಗೂನುಳ್ಳ; ಬಗ್ಗಿದ, ವಕ್ರ.

कुबड़ी, **कुबरी**, स्त्री. ಕುಬ್ಜೆ, ಗೂನಿ; ತುದಿಯಲ್ಲಿ ಡೊಂಕಾದ ಸನ್ಯಾಸಿಗಳ ದಂಡ.

कुबेला, पु. ಅವೇಳೆ, ಅಸಮಯ.

कुब्ज, वि. ಗೂನುಳ್ಳವ, ಗೂನ.

कुब्जा, स्त्री. ಗೂನುಬೆನ್ನಿನವಳು, ಕುಬ್ಜೆ, ಗೂನಿ; ಗೂನು; ಎತ್ತಿನ ಭುಜದ ಮೇಲಿನ ಗೋಪುರ, ಹಿಳಿಲು.

कुब्बा, पु. ಗೂನು, ಡೊಂಕು.

कुमक, स्त्री. ಸಹಾಯ, ಒತ್ತಾಸೆ; ಕುಮ್ಮಕು, ನೆರವು; ಆಶ್ರಯ; ಪಾರಪಕ್ಷ.

कुमकी, वि. ಸಹಾಯದ, ಆಶ್ರಯದ. स्त्री. ಆನೆಗಳನ್ನು ಹಿಡಿಯಲು ನೆರವಾಗುವ ಪಳಗಿಸಿದ ಹೆಣ್ಣಾನೆ, ತೋಹಿನ ಹಿಡಿಯಾನೆ, ಒತ್ತಾನೆ, ಕುಮುಕಿ.

कुमक़ुमा, पु. ಗುಲಾಲಿನಪುಡಿ ತುಂಬಿಸಿ ಎರಚಾಡಲು ಉಪಯೋಗಿಸುವ ಅರಗಿನ ಡಬ್ಬಿ, ಕುಡಿಕೆ; ಅಲಂಕಾರಕ್ಕಾಗಿ ತೇಲಾಡಿಸುವ ವಿವಿಧ ಬಣ್ಣದ ಗಾಜಿನ ಪೊಳ್ಳು ಗುಂಡುಗಳು, ರಸಬುರುಡೆ, ರಸಗುಂಡು; ಚಿಕ್ಕಲಾಟೀನು, ದೀಪದ ಬಲ್ಬು.

कुमरिया, पु. ಒಂದು ಬಗೆ ಆನೆ.

कुमरी, स्त्री. ಒಂದು ಪಕ್ಷಿ.

कुमलाना, अक्रि = कुम्हलाना.

कुमाच, पु. ಒಂದು ಬಗೆ ರೇಷ್ಮೆ ಬಟ್ಟೆ; ರೊಟ್ಟಿ.

कुमार, पु. ಮಗ, ಕುಮಾರ; ರಾಜಕುಮಾರ; ಯುವರಾಜ; ಅವಿವಾಹಿತ, ಬ್ರಹ್ಮಚಾರಿ, ವಟು.

कुम्मल, पु. ಕನ್ನ. कुम्मल देना = ಕನ್ನ ಹಾಕು.

कुम्मैत, पु. ಕೆಂಗಪ್ಪು ಬಣ್ಣ, ಅರಗಿನ ಬಣ್ಣ; ಅರಗಿನ ಬಣ್ಣದ ಕುದುರೆ. आठों गांठ कुम्मैत = ಸರ್ವಾಂಗ ಸಂಪನ್ನ; ಚತುರ, ಗಟ್ಟಿಗ.

कुम्हड़ा, पु. ಸಿಹಿ ಕುಂಬಳಕಾಯಿ. कुम्हड़े की बतिया = ಕುಂಬಳಕಾಯಿ ಹೀಚು; ಶಕ್ತಿಯಿಲ್ಲದವ, ಪುಕ್ಕಲು.

कुम्हड़ौरी, स्त्री. ಕುಂಬಳಕಾಯಿಸಂಡಿಗೆ

कुम्हलाना, अक्रि. ಬಾಡು, ಸೊರಗು, ಬಳಲು; ಒಣಗು; ಕಳೆಗುಂದು.

कुम्हार, पु. ಕುಂಬಾರ, ಕುಲಾಲ.

कुम्हारनी, कुम्हारिन, स्त्री. ಕುಂಬಾರನ ಹೆಂಡತಿ, ಕುಂಬಾರಗಿತ್ತಿ.

कुम्हारी, स्त्री. ಕುಂಬಾರಗಿತ್ತಿ; ಕುಂಬಾರ ಹುಳು.

कुरंग, पु. ಜಿಂಕೆ, ಹುಲ್ಲೆ. वि. ವಿವರ್ಣ

कुरंड, पु. ಕುರುವಿಂದ ಕಲ್ಲು, ಸಾಣೆ ಕಲ್ಲು, ಮಸೆಗಲ್ಲು.

कुरकुरा, वि. ಪೆಡಸಾದ, ಗರಗು.

कुरकुरी, स्त्री. ಹೊಟ್ಟೆಯಲ್ಲಿನ ಶಬ್ದ, ಗುಳುಕು; ಎಳೆಯ ಎಲುಬು, ಕೋಮಲಾಸ್ಥಿ.

कुरता, पु. ಒಳ ಅಂಗಿ, ಜುಬ್ಬ; ಕುಡತ, "ಷರಟು".

कुरती, स्त्री. ರವಿಕೆ, ಕುಪ್ಪಸ.

कुरपान, पु. ಕೃಪಾಣ, ಚಿಕ್ಕ ಕತ್ತಿ; ಚಾಕು; ಸಿಕ್ಖರು ಯಾವಾಗಲೂ ಧರಿಸುತ್ತಿರುವ ಚಾಕು.

क़ुरब, पु. ಹತ್ತಿರ, ನೆರೆ, ಸಮೀಪ, ಬಳಿ; ಸಂಬಂಧ. क़ुरब-ओ-जवार = ನೆರೆಹೊರೆ, ಅಕ್ಕಪಕ್ಕ.

कुरबत, स्त्री. ಸಾಮೀಪ್ಯ; ಬಾಂಧವ್ಯ.

क़ुरबान, पु. ಬಲಿ, ಬಲಿದಾನ; ಯಜ್ಞ; ಆಹುತಿ.

क़ुरबानगाह, स्त्री. ಬಲಿಪೀಠ.

क़ुरबानी, स्त्री. ಬಲಿ; ಯಜ್ಞಪಶು; ಆಹುತಿ.

कुरमी, पु. ರೈತ, ಒಕ್ಕಲಿಗ.

कुररा, पु. कुररी, स्त्री. ಚಿಬಕಳಿಹಕ್ಕಿ.

कुरवना, सक्रि. ರಾಶಿಮಾಡು, ಒಟ್ಟು.

कुरसी, स्त्री. = कुर्सी.

कुरह, कुरा, पु. ಕೀವುಗಟ್ಟಿದ ಹುಣ್ಣು; ಬೀಲಿ.

क़ुरा, पु. ಪಗಡೆ, ದಾಳ; ಗರ.

क़ुरान, पु. ಮುಸಲ್ಮಾನರ ಧರ್ಮಗ್ರಂಥ. क़ुरान उठाना = ಪ್ರಮಾಣ ಮಾಡು, ಆಣೆಯಿಡು.

कुराय, पु. ಕೊರಕಲು, ಕಮರಿ, ದರಿ.

कुराह, स्त्री. ಕುಮಾರ್ಗ, ದುರ್ಮಾರ್ಗ.

कुराही, वि. ದುರಾಚಾರಿ.

कुरिया, स्त्री. ಗುಡಿಸಲು, ಗುಡಿಲು, ಕುಟಿ; ಕುಗ್ರಾಮ.

कुरियाल, स्त्री. = कुर्याल.

कुरी, स्त्री. ಮಣ್ಣುದಿಣ್ಣೆ, ದಿಬ್ಬ, ತೆವರು; ಚೂರು, ತುಂಡು; ಒಂದು ಬಗೆ ಹುಲ್ಲು; ಕುಲ, ವಂಶ.

कुरुई, स्त्री. ಪುಟ್ಟಿ, ಬುಟ್ಟಿ, ಸಂಬಳಿಗೆ.

कुरुज, पु. ಪಕ್ಷಿಗಳ ಗರಿ ಉದುರಿಸುವಿಕೆ.

कुरूप, वि. ಅಂದಗೆಟ್ಟ, ಕುರೂಪಿ.

कुरूपता, स्त्री. ಕೆಟ್ಟ ರೂಪದಿಂದಿರುವಿಕೆ, ಅಂದಗೇಡು, ಕುರೂಪತೆ.

कुरूपी, वि. ಕೆಟ್ಟ ರೂಪದವ, ಅಂದಗೇಡಿ.

कुरेदना, सक्रि. ಕದಡು, ಕೆದರು; ಕೆರೆ, ಹೆರೆ; ದೂಡು, ದಬ್ಬು.

कुरेदनी, स्त्री. ಹೆರೆ ಮಣೆ

कुरेलना, सक्रि. ನೂಕು, ದೂಡು,

ದಬ್ಬು; ತುರುಕು.

कुरैया, स्त्री. ಹೆಮ್ಮುಷ್ಟಿಗೆ, ಇಂದ್ರಜವಿ ಗಿಡ, ಕೊಡಸಿಗೆ, ಕುಟಜ.

कुर्क़, वि. ಜಪ್ತಿಯಾದ, ಮುಟ್ಟುಗೋಲಾದ. कुर्क़ करना = ಜಪ್ತಿಮಾಡು, ಮುಟ್ಟುಗೋಲು ಹಾಕು.

कुर्क़-अमीन, पु. ಜಪ್ತಿ ಮಾಡುವ ಉದ್ಯೋಗಸ್ಥ, ಅಮೀನ.

कुर्क़-नामा, पु. ಜಪ್ತಿಯ ಆಜ್ಞೆ, ಜಪ್ತಿ ವಾರಂಟು.

कुर्क़ी, स्त्री. ಜಪ್ತಿ, ಮುಟ್ಟುಗೋಲು.

कुर्मी, पु. = कुनबी.

कुर्याल, स्त्री. ಪಕ್ಷಿಯು ತನ್ನ ಗೂಡಿನಲ್ಲಿ ಸುಖವಾಗಿರುವಿಕೆ; ನೊಚ್ಚೆಗಿರುವಿಕೆ, ಹಾಯಾಗಿರುವಿಕೆ.

कुर्री, स्त्री. ಎಳೆಯ ಎಲುಬು, ಕೋಮಲಾಸ್ಥಿ.

कुरन्द, पु. ಶೋಧಿಸಿದ ಸಕ್ಕರೆ, ನಾಟಸಕ್ಕರೆ.

कुर्सी, स्त्री. ಕುರ್ಚಿ, ನಾಗಾಲಿ; ಗದ್ದುಗೆ, ಸಿಂಹಾಸನ, ಪೀಠ; ಗದ್ದಿಗೆ ಕಲ್ಲು, ತಳಪದಿ, ಪಾಯ; ವಂಶಾವಳಿ, ಪೀಳಿಗೆ. कुर्सीनशीन = ಸಿಂಹಾಸನಾರೂಢ.

कुर्सीनामा, पु. ವಂಶವೃಕ್ಷ.

कुलंग, पु. ಕೊಕ್ಕರೆ.

कुल, पु. ಕುಲ, ವಂಶ; ಬುಡಕಟ್ಟು; ಜಾತಿ, ಸಮುದಾಯ, ಬಂಧುಬಳಗ; ಒಟ್ಟು; ಮೊತ್ತ. वि. ಎಲ್ಲಾ, ಒಟ್ಟು, ಪೂರಾ, ಒಟ್ಟಾರೆ. कुलजमा = ಎಲ್ಲಾ ಕೂಡಿ, ಒಟ್ಟುಗೂಡಿ.

कुलकना, अक्रि. ಕಿಲಕಿಲನೆ ನಗು, ಕೆಲೆ.

कुलकुलाना, अक्रि. ಕುಲುಕುಲು ಶಬ್ದ ಮಾಡು; ತುರಿಸು, ನವೆಯಾಗು.

कुलकुली, स्त्री. ನವೆ, ತುರಿ, ತೀಟೆ.

कुलचा, पु. ಮೂಲಧನ, ಬಂಡವಾಳ; ಒಂದು ಬಗೆ ಚಪಾತಿ.

कुलट, वि. ವ್ಯಭಿಚಾರಿ, ಜಾರ, ವಿಟ.

कुलटा, स्त्री. ವ್ಯಭಿಚಾರಿಣಿ, ಜಾರೆ; ಹಾದರಗಿತ್ತಿ, ಬೊಡ್ಡಿ, ಗುಡಿಸೆಟ್ಟಿ.

कुलटी, स्त्री. ಇಲಿ ಪಾಷಾಣ.

कुलत्तन, वि. ಕೆಟ್ಟ, ದುಷ್ಟ.

कुलथी, स्त्री. ಹುರುಳಿ, ಹುಲುವರ.

कुलन, स्त्री. ನವೆ, ತಿಂಡಿ, ತುರಿ.

कुलना, अक्रि. ತುರಿ, ನವೆಯಾಗು.

कुलफ़त, स्त्री. ದುಃಖ, ವ್ಯಥೆ, ವ್ಯಸನ.

कुलफ़ा, पु. ಒಂದು ಬಗೆ ಬಚ್ಚಲೆ ಸೊಪ್ಪು, ನುಚ್ಚುಗೋಳಿ ಸೊಪ್ಪು.

कुलफ़ी, स्त्री. ಹುಕ್ಕದ ನಾಳಕ್ಕೆ ಸೇರಿಸುವ ತಾಮ್ರದ ನಳಿಗೆ; ಮಂಜುಗಡ್ಡೆಯಿಂದ ಹೆಪ್ಪುಗಟ್ಟಿಸುವುದಕ್ಕೆ ಹಾಲನ್ನು ತುಂಬುವ ತಗಡಿನ ಕೊಳವೆ; ಈ ಕೊಳವೆಯಲ್ಲಿಟ್ಟು (ನೀರ್ಗಲ್ಲು) ಮಂಜುಗಡ್ಡೆಯಿಂದ ಹೆಪ್ಪುಗಟ್ಟಿಸಿದ ಹಾಲುಖೋವಾ, ಐಸ್‌ಕ್ರೀಮ್.

कुलबा, पु. ಮನೆ; ಗುಡಿಸಲು, ಕುಟಿ.

कुलबुला, पु. ಹುಳುಗಳ ಹಾರಾಡುವಿಕೆ, ಮುಲುಗುಟ್ಟುವಿಕೆ.

कुलबुलाना, अक्रि. ಹಾರಾಡು, ಮುಲುಗುಟ್ಟು, ಒದ್ದಾಡು, ಅಕ್ಕಳಿಸು, (ಹೊಟ್ಟೆ).

कुलबुलाहट, स्त्री. ಹಾರಾಡುವಿಕೆ, ಮುಲುಗುಟ್ಟುವಿಕೆ.

कुलबोड़, कुलबोर, कुलबोरन, वि. ಕುಲವನ್ನು ಮುಳುಗಿಸುವವ, ಕುಲಗೇಡಿ.

कुलमा, पु. ಮಾಂಸದ ಪಳದ್ಯ.

कुलह, स्त्री. कुलहा, पु. ಟೋಪಿ, ಕುಲಾವಿ; ಕಿರೀಟ; ಕಣ್ಣುಪಟ್ಟಿ.

कुलही, स्त्री. ಕಿವಿಗಳನ್ನೂ ಮುಚ್ಚುವ ಮಕ್ಕಳ ಕುಲಾವಿ, ಕೊಂಚಿಗೆ.

कुलांगार, पु. ಕುಲಗೇಡಿ.

कुलांच, स्त्री. ಕುಣಿದಾಟ, ನೆಗೆತ; ನಾಗಾಲೋಟ, ದೌಡು.

कुलाग़, पु. ಕಾಡು ಕಾಗೆ.

कुलाबा, पु. ನಾಗವಾಸ, ಕೊಂಡಿ; ತಿರುಗಣೆ ಮೊಳೆ; ಬಿಜಾಗರಿ; ಮೋರಿ, ಚರಂಡಿ

कुलाल, पु. ಕುಂಬಾರ; ಗೂಬೆ.

कुलालचक्र, पु. ಕುಂಬಾರನ ತಿಗುರಿ.

कुलाह, स्त्री. ಅಫ್ಘಾನಿಸ್ಥಾನದವರು ಧರಿಸುವ ಟೋಪಿ, ಕುಲಾವಿ; ಒಂದು ಬಗೆ ಕುದುರೆ.

कुली, पु. ಕೂಲಿಯವ, ಕೂಲಿಗಾರ, ಹಮಾಲ. कुली कबाड़ी = ಕೀಳು ಜಾತಿಯ ಜನರು.

कुलेल, स्त्री. ಆಟ, ಕ್ರೀಡೆ.

कुल्ह, पु. = कूह्ह.

कुल्फ़, पु. ಬೀಗ, ಕೀಲಿ.

कुल्फ़ी, स्त्री. = कुलफ़ी.

कुल्या, स्त्री. ಕಾಲುವೆ, ನಾಲಾ, ತೋಡು

कुल्ला, पु. कुल्ली, स्त्री. ಬಾಯಿ ಮುಕ್ಕಳಿಸುವುದು; ಒಂದು ಬಗೆ ಕುದುರೆ; ಗುಂಗುರು ಕೂದಲು, ಕುರುಳು.

कुल्लियात, स्त्री. ಗ್ರಂಥಕರ್ತನು ಸಮಸ್ತ ಲೇಖನಗಳು, ಕೃತಿಗಳ ಸಂಗ್ರಹ.

कुल्हड़, पु. ಮಣ್ಣಿನ ಚೆಂಬು, ಹೂಜಿ; ಒಂದು ಬಗೆ ಬಾಣಬಿರುಸು, ಕುಡಿಕೆ ಬಾಣ.

कुल्हाड़ा, पु. कुल्हाड़ी, स्त्री. ಕೊಡಲಿ

कुल्हिया, स्त्री. ಮಣ್ಣಿನ ಚೆಂಬು, ಕುಡಿಕೆ. कुल्हिया में गुड़ फोड़ना = ಗುಪ್ತವಾಗಿ ಒಂದು ಕೆಲಸ ನಡೆಸು. कुल्हिया लगाना = ಬಟ್ಟಲು ಕಟ್ಟಿಸಿ ರಕ್ತ ತೆಗೆ.

कुवाँ, पु. = कुआँ.

कुवार, पु. ಆಶ್ವೀಜ ಮಾಸ.

कुवारी, स्त्री. ಆಶ್ವೀಜ ಮಾಸದಲ್ಲಿ ಕೊಯ್ಯುವ ಬೆಳೆ, ಕಾರು ಬೆಳೆ.

कुव्वत, स्त्री. ಶಕ್ತಿ, ಬಲ, ಸಾಮರ್ಥ್ಯ.

कुश, पु. ದರ್ಭೆ.

कुशल, वि. ದಕ್ಷ, ಪ್ರವೀಣ; ಕ್ಷೇಮ, ಕುಶಲ.

कुशलता, स्त्री. ದಕ್ಷತೆ, ಸಾಮರ್ಥ್ಯ.

कुशा, पु. ಬೀರುವ, ವಿಸ್ತರಿಸುವ.

कुशादगी, स्त्री. ವಿಸ್ತಾರ, ವೈಶಾಲ್ಯ.

कुशादा, वि. ವಿಸ್ತೃತವಾದ, ತೆರೆದ.

कुश्तमकुश्ता, पु. ಮಲ್ಲಾಮಲ್ಲಿ, ಮಲ್ಲಕಾಳಗ, ಕುಸ್ತಿ.

कुश्ता, पु. ಭಸ್ಮ; ಬೂದಿ.

कुश्ती, स्त्री. ಕುಸ್ತಿ, ಮಲ್ಲಯುದ್ಧ.

कुश्तीबाज़, पु. ಜಟ್ಟಿ, ಪೈಲವಾನ, ಮಲ್ಲ.

कुसंग, पु. ದುಷ್ಟ ಸಹವಾಸ.

कुस, कुसी, स्त्री. ನೇಗಿಲಿನ ಮೊಳೆ, ಗುಳ.

कुसली, स्त्री. ಕರಿಗಡಬು, ಕರ್ಜಿಕಾಯಿ; ಮಾವಿನ ಓಟೆ, ಗೊರಟು.

कुसवारी, स्त्री. ರೇಷ್ಮೆ ಹುಳು.

कुसाइत, स्त्री. ಕೆಟ್ಟವೇಳೆ, ಅಸಮಯ.

कुसीद, पु. ಬಡ್ಡಿ, ಬಡ್ಡಿಗೆ ಕೊಟ್ಟ ಹಣ.

कुसीदा, कुसीदिक, वि. ಲೇವಾದೇವಿ ಮಾಡುವವ, ಕುಸೀದಗಾರ.

कुसुंभा, पु. ಕುಸುಂಬೆ ಬಣ್ಣ; ಭಂಗಿಯ ಕಷಾಯ.

कुसुंभी, पु. ಕುಸುಂಬೆ ಬಣ್ಣ ಹಾಕಿದ ಬಟ್ಟೆ.

कुसुम, पु. ಪುಷ್ಪ, ಹೂವು; ಕುಸುಂಬೆ.

कुसूफ़, पु. ಗ್ರಹಣ; ಗ್ರಹಚಾರ.

कुसूर, पु. = क़सूर.

कुहक, पु. ಮೋಸ, ಬೂಟಾಟಿಕೆ; ಜಾಲ, ಗಾರುಡಿ ವಿದ್ಯೆ; ಮೋಸಗಾರ, ಜಾಲಗಾರ; ಕೋಳಿಯ ಕೂಗು.

कुहकना, अक्रि. ಚಿಲಿಪಿಲಿಗುಟ್ಟು, ಉಲಿ.

कुहनी, स्त्री. ಮೊಣಕೈ, ಕಫೋಣಿ.

कुहर, पु. ಗವಿ, ಗುಹೆ; ದರಿ, ಕೊರಕಲು, ಕಮರಿ; ಗಂಟಲ ದ್ವಾರ; ಮಂಜು.

कुहरा, पु. ಮಂಜು, ಇಬ್ಬನಿ.

कुहराम, पु. ಅಳು, ವಿಲಾಪ; ಗೋಳಾಟ, ಬೊಂಬ್ಡಿ; ಗದ್ದಲ.

कुहाना, अक्रि. ಸಿಟ್ಟಾಗು, ರೇಗು.

कुहासा, पु. ಮಂಜು, ಇಬ್ಬನಿ; ಅಪಹಾಸ.

कुही, स्त्री. ಒಂದು ಬಗೆ ಗಿಡಗ; ತಟ್ಟು, ಟಾಕಣ.

कुहुक, स्त्री. ಕಲಕಲ ಧ್ವನಿ, ಪಕ್ಷಿಗಳ ಚಿಲಿಪಿಲಿ, ಕೂಜನ.

कुहुकना, अक्रि. ಕೋಗಿಲೆಯಂತೆ ಕೂಗು; ಚಿಲಿಪಿಲಿಗುಟ್ಟು, ಉಲಿ.

कूँकूँ, पु. ನಾಯಿಮರಿಯ ಕೀಚುಧ್ವನಿ.

कूँच, पु. ಗುಲಗಂಜಿ; ಹಿಮ್ಮಡಿ ನರ.

कूँचना, सक्रि. ಇರಿ, ತಿವಿ; ಕಚ್ಚು; ಅಗಿ.

कूँचा, पु. ಕಸಬರಿಕೆ, ಬರ್ಲು; ಬೀದಿ.

कूँची, स्त्री. ಸಣ್ಣ ಬರ್ಲು; ತೂಲಿಕೆ, ಕೂರ್ಚ, "ಬ್ರಷ್"; ಕುಂಚ.

कूँज, पु. ಕ್ರೌಂಚ ಪಕ್ಷಿ, ನೀರೆ ಹಕ್ಕಿ.

कूँड, पु. ಶಿರಸ್ತ್ರಾಣ, ಕವಚ; ನೀರು ಸೇದುವ ಬಾನೆ, ಏತದ ಬಾನೆ, ಮಟ್ಟೆ; ನೇಗಿಲ ಸಾಲು.

कूँडा, पु. ಹರವಿ, ಬಾನೆ; ಗಿಡಗಳನ್ನಿಡುವ ಕುಂಡ; ಕಲ್ಲು ಅಥವಾ ಮರದ ತೊಟ್ಟಿ, ಮರಿಗೆ; ಗುಳುವು.

कूँडी, स्त्री. ಕಲ್ಲಿನ ತೊಟ್ಟಿ, ಕಲ್ಲು ದೋಣಿ.

कूँथना, अक्रि. ನರಳು, ಮುಲುಕು, ಮುಕ್ಕರಿ; (ಪಾರಿವಾಳದಂತೆ) ಕೂಗು. सक्रि. ತಟ್ಟು, ಬಡಿ.

कूँदला, पु. ಗುಡಾರ, ಡೇರೆ.

कू, स्त्री. ಗಲ್ಲಿ, ಬೀದಿ.

कूआँ, पु. = कुआँ.

कूई, स्त्री. ನೈದಿಲೆ.

कूईरी, स्त्री. ಕಾಲ್ಪಿಲ್ಲಿ.

कूक, पु. ಕೋಗಿಲೆಯ ಕೂಗು, ಕೂಜನ, ಬಗ್ಗಣೆ; ಗಡಿಯಾರ ಮೊದಲಾದವುಗಳಿಗೆ ಕೀಲಿ ಕೊಡುವುದು

कूकना, सक्रि. ಗಡಿಯಾರಕ್ಕೆ ಕೀಲಿ ಕೊಡು; ಬಿಗಿಸು. अक्रि. ಚಿಲಿಪಿಲಿ ಗುಟ್ಟು, ಕೂಗು(ಕೋಗಿಲೆ), ಕೇಗು.

कूकर, पु. **कूकरी,** स्त्री. ನಾಯಿ.

कूच, पु. ಪ್ರಯಾಣ, ಪಯಣ, ಪ್ರವಾಸ. कूच बोलना = ಪಯಣ ಹೊರಡು.

कूचा, पु. ಸಂದು, ಗಲ್ಲಿ, ಓಣಿ; ಬಲರ್ಽ.

कूचागर्द, पु. ಗಲ್ಲಿ ತಿರುಗುವವ, ತಿರುಕ

कूचागर्दी, स्त्री. ಗಲ್ಲಿ ತಿರುಗುವುದು; ತಿರುಗಾಟ, ತಿರುಕತನ.

कूज़, पु. ಗೂನು, ಡುಬ್ಬ.

कूजन, पु. ಕೋಗಿಲೆಯ ಕೂಗು.

कूज़-पुश्त, वि. ಗೂನು ಬೆನ್ನಿನವ.

कूजना, अक्रि. ಮಧುರಧ್ವನಿ ಮಾಡು.

कूज़ा, पु. ಹೂಜಿ, ಕೂಜ; ಕಲ್ಲುಸಕ್ಕರೆ.

कूट, पु. ಪರ್ವತದ ಶಿಖರ; ಕೊಂಬು; ಧಾನ್ಯದ ರಾಶಿ; ಗುಟ್ಟು, ರಹಸ್ಯ; ಗೂಢಾರ್ಥ; ಮೋಸ, ಕಪಟ, ಸುಳ್ಳು. स्त्री. ಬಡಿಯುವಿಕೆ; ಕುಟ್ಟುವಿಕೆ; ಇರಿಯುವಿಕೆ.

कूटता, स्त्री. ಮೋಸ, ಠಕ್ಕು; ಕಷ್ಟ.

कूटना, सक्रि. ಕುಟ್ಟು, ಇಡಿ, ಕುಮ್ಮು; ಜಡಿ, ಬಡಿ; ಕಲ್ಲುಮುಳ್ಳು ಹುಯ್ಯು; ಕಲ್ಲು ಕಟಿ. कूट कूटकर भरना = ಇಡಿದು ತುಂಬು, ಅದಚಿ ತುಂಬು.

कूटनीति, स्त्री. ಕಪಟಾಚಾರ, ಠಕ್ಕು, ಮೋಸದ ನಡವಳಿಕೆ.

कूटनीतिज्ञ, पु. ಕಪಟತಂತ್ರವನ್ನರಿತವ, ಮೋಸದಿಂದ ಕಾರ್ಯ ಸಾಧಿಸಿಕೊಳ್ಳುವವ, ಕಪಟೋಪಾಯಗಾರ.

कूटी, स्त्री. ಪರಿಹಾರ, ಕೊರಚಾಟ.

कूट्टू, पु. ಒಂದು ಬಗೆ ಧಾನ್ಯ.

कूड़ा, पु. ಕಸ, ಕಡ್ಡಿ, ತಿಪ್ಪೆ; ನಿರರ್ಥಕ ವಸ್ತು. कूड़ा कचरा, कूड़ा करकट = ಕಸಕಡ್ಡಿ, ಕಸಕಂಟಿ, ಸೆತ್ತೆಸದೆ.

कूड़ाख़ाना, पु. ತಿಪ್ಪೆ ಗುಂಡಿ.

कूढ़, वि. ದಡ್ಡ, ಮಂಕ. पु. ಕೂರಿಗೆ ಹೊಡೆಯುವಿಕೆ, ಬಿತ್ತನೆ.

कूढ़-मग़ज़, वि. ಮಂಕ, ಬೆಪ್ಪ.

कूत, पु. ಅಳತೆ, ಅಂದಾಜು, ಪೈಮಾಷಿ; ಬೆಲೆ ಕಟ್ಟುವಿಕೆ; ಕಣಡಾಲು.

कूतक, पु. ದೊಣ್ಣೆ, ದಡಿ.

कूतना, सक्रि. ಅಂದಾಜು ಹಾಕು; ಪೈಮಾಷಿ ಮಾಡು; ಬೆಲೆ ಕಟ್ಟು.

कूद, स्त्री. ಕುಣಿದಾಟ, ಕುಣಿತ, ನೆಗೆತ. कूद फांद = ನೆಗೆದಾಟ; ಹಾರಾಟ.

कूदना, सक्रि. ಉಲ್ಲಂಘಿಸು. अक्रि. ಕುಣಿ, ಜಿಗಿ, ಚಿಮ್ಮು; ಧುಮುಕು, ಹಾರಾಡು; ಆನಂದಪಡು. कूदना फांदना = ಸಂತೋಷದಿಂದ ಹಾರಾಡು; ನೆಗೆದು ಬೀಳು.

कूप, पु. ಬಾವಿ, ಕೂಪ.

कूबड़, पु. ಗೂನು, ಡುಬ್ಬ; ಡೊಂಕು.

कूमांछ, पु. ಒಂದು ಬಗೆ ರೊಟ್ಟಿ.

कूम्हल, स्त्री. ಕನ್ನ, ಕನ್ನಗಳವು. कूम्हल देना = ಕನ್ನಹಾಕು.

कूर, वि. ಕ್ರೂರ; ಒರಟು, ಒಡ್ಡು.
कूरनी, स्त्री. ದೊಡ್ಡ ಸೌಟು.
कूरा, पु. ರಾಶಿ, ಕುಪ್ಪೆ; ಭಾಗ, ಹಿಸ್ಸೆ
कूल, पु. ದಡ, ತೀರ; ಹೊಂಡ, ಕೊಳ; ಕಾಲುವೆ; ಸೇನೆಯ ಹಿಂಭಾಗ.
कूली, पु. ಕೂಲಿಗಾರ, ಕೂಲಿಯವ, ಹಮಾಲ.
कूल्हा, पु. ಟೊಂಕ; ನಿತಂಬ, ಪಿರ್ರೆ.
कूवत, स्त्री. ಶಕ್ತಿ, ಬಲ.
कूवर, पु. ರಥದ ಮುಂಭಾಗ, ಸಾರಥಿ ಕುಳಿತುಕೊಳ್ಳುವ ಪೀಠ.
कृत, वि. ಮಾಡಲ್ಪಟ್ಟ, ಮಾಡಿದ.
कृतघ्न, वि. ಮಾಡಿದ ಉಪಕಾರವನ್ನು ಸ್ಮರಿಸದವ.
कृतज्ञ, वि. ಮಾಡಿದ ಉಪಕಾರವನ್ನು ಸ್ಮರಿಸುವವ, ಆಭಾರಿ.
कृतज्ञता, स्त्री. ಮಾಡಿದ ಉಪಕಾರವನ್ನು ನೆನಸುವಿಕೆ, ಉಪಕಾರ ಸ್ಮರಣೆ.
कृपण, पु. ಜಿಪುಣ, ಲೋಭಿ.
कृपया, क्रिवि. ದಯೆಯಿಂದ, ದಯವಿಟ್ಟು.
कृपा, स्त्री. ಕೃಪೆ, ದಯೆ.
कृपाण, पु. ಚಿಕ್ಕ ಕತ್ತಿ, ಬಾಕು; ಸಿಕ್ಖರು ಯಾವಾಗಲೂ ಧರಿಸುತ್ತಿರುವ ಬಾಕು, ಕುರ್ಪಾನ್.
कृपाल, कृपालु, वि. ಕೃಪೆ ತೋರುವವ, ಕೃಪಾಳು, ದಯಾಳು.
कृमि, पु. ಹುಳು, ಕ್ರಿಮಿ, ಕೀಟ.
कृषि, स्त्री. ಕೃಷಿ, ಆರಂಬ, ಬೇಸಾಯ.
केंचुआ, पु. ಮಣ್ಣುಹುಳು, ಮಣ್ಣಣೆ; ಹೊಟ್ಟೆಯಲ್ಲಿನ ಜಂತು ಹುಳು.
केंचुली, स्त्री. ಹಾವಿನ ಪರೆ, ಹೆರೆ, ಸೋಲೆ.
केंडा, पु. ಮಾದರಿ, ಪಡಿಯಚ್ಚು.
केंद्र, पु. = केन्द्र.
के, प्रत्य. ಷಷ್ಠೀ ವಿಭಕ್ತಿ ಪ್ರತ್ಯಯ (ಬಹುವಚನ ರೂಪ).
केकड़ा, पु. ಏಡಿಕಾಯಿ, ಏಡಿ, ನಳ್ಳಿ.
केकर, वि. ಮೆಳ್ಳೆಗಣ್ಣನವ.
केका, स्त्री. ನವಿಲಿನ ಕೂಗು, ಕೇಗು.
केकी, पु. ನವಿಲು, ಮಯೂರ.
केचित, वि. ಕೆಲವು, ಕೊಂಚ.
केड़ा, पु. ಚಿಗುರು, ಕೊನರು.
केतकी, स्त्री. ತಾಳೆ ಹೂವು, ಕೇದಗೆ.
केतना, केता, वि. ಎಷ್ಟು ?
केतली, स्त्री. ಹಿಡಿಯುಳ್ಳ ಸಣ್ಣ ಕಡಾಯಿ, "ಕೆಟಲು".
केन्द्र, पु. ಮಧ್ಯ, ನಡು; ಮಧ್ಯಬಿಂದು; ನಾಭಿ.
केन्द्रस्थान, पु. ಕೇಂದ್ರವಾಗಿರುವ ಸ್ಥಳ; ನಡು ಪ್ರದೇಶ, ಮಧ್ಯಸ್ಥಾನ, ಮಧ್ಯರಾಷ್ಟ್ರ.
केराना, पु. = **किराना**.
केरानी, पु. ಚಟ್ಟಿಗಾರ, "ಆಂಗ್ಲೋ ಇಂಡಿಯರ್", ಚೊಟ್ಟಿ.
केराव, पु. ಬಟಾಣಿ.
केरी, स्त्री. ಮಾವಿನ ಹೀಚು.
केलन, स्त्री. ಮಗನ ಹೆಂಡತಿ, ಸೊಸೆ.
केला, पु. ಬಾಳೆ, ಬಾಳೆ ಹಣ್ಣು.
केलि, केली, स्त्री. ಚಲ್ಲಾಟ, ಚಕ್ಕಂದ,

ಪ್ರಣಯ ಸಲ್ಲಾಪ; ರತಿ ಕ್ರೀಡೆ.

केवका, पु. ಬಾಣಂತಿ ಔಷಧ.

केवट, पु. ಅಂಬಿಗ, ಓಡಗಾರ.

केवड़ई, वि. ತಾಳೆ ಹೂ ಬಣ್ಣದ.

केवड़ा, पु. ಬಿಳೀ ತಾಳೆ ಹೂವು; ತಾಳೆ ಹೂವಿನ ಆಸವ.

केवल, वि. ಕೇವಲ, ಮಾತ್ರ, ಬರಿಯ.

केवांच, स्त्री.=कौंच.

केवा, पु. ತಾವರೆ; ತಾಳೆ ಹೂವು, ಕೇದಗೆ; ನೆಪ, ವ್ಯಾಜ.

केवाड़, पु.=किवाड़.

केश, पु. ಕೂದಲು, ಜುಟ್ಟು.

केशरी, पु. ಸಿಂಹ.

केशाकेशी, स्त्री. ಜುಟ್ಟು ಹಿಡಿದು ಜಗಳ ಮಾಡುವಿಕೆ, ಕೇಶಾಕೇಶಿ.

केसर, पु. ಹೂವಿನೊಳಗಿನ ಸಣ್ಣ ಎಳೆ, ಹೂವಿನ ರೇಕು, ಕೇಸರ ತಂತು; ಕುಂಕುಮದ ಹೂ, ಕೇಸರಿ; ಸಿಂಹ ಅಥವಾ ಕುದುರೆಯ ಕುತ್ತಿಗೆಯ ಮೇಲಿನ ಕೂದಲು, ಕೇಸರ; ಜೂಗು; ನಾಗ ಕೇಸರ ಗಿಡ.

केसरिया, वि. ಕೇಸರಿ ಬಣ್ಣದ, ಹಳದಿ; ಕೇಸರಿ ಮಿಶ್ರಿತವಾದ.

केसरी, केहरी, पु. ಸಿಂಹ; ಕುದುರೆ.

केसारी, स्त्री. ಒಂದು ಬಗೆ ಬಟಾಣಿ.

केसू, पु. ಪಲಾಶ, ಮುತ್ತುಗ.

केहू, सर्व. ಯಾವುದೋ, ಯಾರೋ.

कैंचा, वि. ಮೆಳ್ಳೆಗಣ್ಣನವ, ಮಾಲುಗಣ್ಣನವ. पु. ಗಂಡುಗತ್ತರಿ.

कैंची, स्त्री. ಕತ್ತರಿ; ಅಡ್ಡಗತ್ತರಿ.

कैंड़ा, पु. ಮಾನ, ಪ್ರಮಾಣ, ಅಳತೆ, "ಸ್ಕೇಲು"; ಚಾತುರ್ಯ, ತಂತ್ರ.

कै, वि. ಎಷ್ಟು, ಏನು. अव्य. ಅಥವಾ.

क़ै, स्त्री. ವಾಕರಿಕೆ, ವಾಂತಿ, ಕಾರಿಕೆ.

क़ैतून, स्त्री. ಸರಿಗೆಯಂಚು, ಗೋಟು, ನಕ್ಕಿ.

कैथा, पु. ಬೇಲದ ಹಣ್ಣು.

कैथिन, स्त्री. "कायस्थ" का स्त्री. रूप.

क़ैद, स्त्री. ಕೈದು, ದಸ್ತಗಿರಿ; ಬಂಧನ, ಕಾರಾವಾಸ; ಸಜಾ; ಕಟ್ಟು, ನಿರ್ಬಂಧ, ಪ್ರತಿಬಂಧ. क़ैद सख़्त = ಕಠಿಣ ಸಜಾ. क़ैद महज़ = ಸಾದಾ ಸಜಾ.

क़ैदक, स्त्री. ಕಾಗದ ಪತ್ರಗಳ ಕಟ್ಟು, "ಫೈಲ್".

क़ैदख़ाना, पु. ಸೆರೆಮನೆ, ಕಾರಾಗೃಹ.

क़ैदी, पु. ಕೈದಿ, ಬಂದೀವಾನ, ಸೆರೆಯಾಳು; ಸಜಾ ಹೊಂದಿದವ.

कैन, स्त्री. ಬಿದಿರಿನ ರೆಂಬೆ

कैफ़, पु. ಮದ, ಮತ್ತು, ಅಮಲು; ಮಾದಕ ಪದಾರ್ಥ.

कैफ़ियत, स्त्री. ವೃತ್ತಾಂತ, ವಿವರ; ವರ್ಣನೆ; ಪರಿಸ್ಥಿತಿ; ಆಶ್ಚರ್ಯಕರವಾದ ದೃಶ್ಯ ಅಥವಾ ಘಟನೆ, ಡಾಮರ; ಪರಿ, ವಿಧ, ರೀತಿ; ವಾಜ್ಮೂಲ, ಹೇಳಿಕೆ; ಸಮಜಾಯಿಷಿ. कैफ़ियत तलब करना = ಕಾರಣ ಕೇಳು; ವಾಜ್ಮೂಲ ಕೇಳು; ಸಮಜಾಯಿಷಿ ಕೇಳು.

कैफ़ी, वि. ಮದಿಸಿದ, ಮದೋನ್ಮತ್ತ.

कैबर, पु. ಇಳಕಲು, ಇಳಿಜಾರು.

स्त्री. ಬಾಣದ ಅಲಗು.

कैरा, वि. ಕಂಬಿಳುಪು, ಕಂದು ಬಣ್ಣ.

कैरी, स्त्री. ಮಾವಿನ ಹೀಚು.

कैल, पु. ಚಿಗುರು, ಕೊನರು; ರೆಂಬೆ.

क़ैसर, पु. ಚಕ್ರವರ್ತಿ, ಸಾರ್ವಭೌಮ.

कैसा, वि. ಎಂಥ, ಯಾವ ತರಹದ.

कैसे, कैसो, क्रिवि. ಹೇಗೆ, ಎಂತು? ಯಾವ ಪ್ರಕಾರ?

कोंच, स्त्री. ತಿವಿಯುವ ನೋವು, ಶೂಲೆ.

कोंचना, सक्रि. ತಿವಿ, ಇರಿ, ಚುಚ್ಚು.

कोंचला, पु. ಹಂದಿಯ ಕೋರೆ ಹಲ್ಲು.

कोंचा, पु. ಪಕ್ಷಿಗಳನ್ನು ಹಿಡಿಯುವ ಅಂಟಿನ ಕೋಲು; ಮಗುಚುವ ಕೈ; ಕಿವಿಯಿರುವ ಬಾಣಲಿ.

कोंछ, पु. **कोंछी**, स्त्री. ಸೀರೆಯ ನಿರಿಗೆ

कोंछना, कोंछियाना, सक्रि. ನಿರಿಗೆ ಹಿಡಿ; ನಿರಿಗೆ ಸೀರೆ ಉಡು; ಉಡಿಯಲ್ಲಿ ಕಟ್ಟಿಕೊಳ್ಳು.

कोंढा, पु. **कोंढी**, स्त्री. ಕೊಕ್ಕೆ, ಕೊಂಡಿ; ಗೊಣಸು, ಬಳೆ; ಆಭರಣಗಳಲ್ಲಿನ ತೂತು ಕೊರೆದ ನಾಣ್ಯಗಳು.

कोंपर, पु. ಗಿಡದಲ್ಲೇ ಮಾಗಿದ ಮಾವಿನ ಹಣ್ಣು.

कोंपल, स्त्री. ಚಿಗುರು, ತಳಿರು.

कोंहड़ा, पु. ಸಕ್ಕರೆಗುಂಬಳ ಕಾಯಿ.

को, सर्व. ಯಾರು, ಯಾವುದು? अव्य. ದ್ವಿತೀಯಾ ಮತ್ತು ಚತುರ್ಥೀ ವಿಭಕ್ತಿ ಪ್ರತ್ಯಯ; -ಅನ್ನು, -ಗೆ.

कोआ, पु. ಕಡೆಗಣ್ಣು; ಕಣ್ಣು ಗುಡ್ಡೆ; ರೇಷ್ಮೆ ಹುಳುವಿನ ಗೂಡು; ಹಲಸಿನ ತೊಳೆ; ಹಿಪ್ಪೆ ಹಣ್ಣು.

कोइरी, पु. ತರಕಾರಿ ಬೆಳೆಯುವವ, ತೋಟಗಾರ.

कोइली, स्त्री. ಮಾವಿನ ಕಾಯಿ; ಮಾವಿನ ಓಟೆ, ಗೊರಟು.

कोईं, स्त्री. ನೈದಿಲೆ.

कोई, सर्व. ಒಂದು, ಯಾವುದೋ, ಯಾವನೋ; ಒಂದಾನೊಂದು. कोई न कोई = ಯಾವನಾದರೂ ಒಬ್ಬನು, ಯಾವುದಾದರೂ ಒಂದು. कोई पचास = ಒಂದು ಐವತ್ತು. कोई है = ಯಾರೋ ಅಲ್ಲಿ? कोई हो = ಯಾರೇ ಆಗಲಿ.

कोकई, कोकची, वि. ಸ್ವಲ್ಪ ಕಪ್ಪು ಮಿಶ್ರಿತವಾದ ಬಿಳುಪು ಬಣ್ಣದ.

कोकनी, वि. ಚಿಕ್ಕ, ಕಿರಿಯ.

कोका, पु. ದಾದಿಯ ಮಗ; ಸಾಕುತಾಯಿಯ ಮಕ್ಕಳು; "ಕೋಕೋ" (ಪಾನೀಯ); ದಾಟು ಹೊಲಿಗೆ, ಟಾಕಾ; ನೈದಿಲೆ.

कोकिल, कोकिला, स्त्री. ಕೋಗಿಲೆ.

कोको, स्त्री. ಕಾಗೆ.

कोख, स्त्री. ಹೊಟ್ಟೆ, ಜಠರ; ಅಳ್ಳೆ; ಬಸುರು, ಗರ್ಭಕೋಶ; ಅಜೀರ್ಣ. कोख मारी जाना = ಬಂಜೆಯಾಗು; ಗರ್ಭಸ್ರಾವವಾಗು. कोख खुलना = ಮಕ್ಕಳಾಗು. कोख बंद = ಗೊಡ್ಡು, ಬಂಜೆ.

कोगी, पु. = सोनहा.

कोच, पु. ಕೋಚುಬಂಡಿ, ಸಾರೋಟ್

कोचकी, वि. = कोकची.

कोचना, सक्रि. ತಿವಿ, ಇರಿ, ಚುಚ್ಚು.

कोचवान, पु. ಕೋಚುಬಂಡಿ ಅಥವಾ ಸಾರೋಟ್ ಹೊಡೆಯುವವ, ಸಾರಥಿ

कोचा, पु. ಕತ್ತಿಯ ಗಾಯ; ಚುಚ್ಚುವ ಮಾತು.

कोछा, स्त्री. ವಕ್ಷಸ್ಥಳ; ಮಡಿಲು.

कोजागर, पु. ಶರತ್ಪೂರ್ಣಿಮೆಯಲ್ಲಾಗುವ ಲಕ್ಷ್ಮೀಪೂಜೆ ಮತ್ತು ಜಾಗರಣೆ.

कोट, पु. ಕೋಟೆ, ದುರ್ಗ; ಪ್ರಾಕಾರ, ಗೋಡೆ, ಸುತ್ತಾಲೆ, ಆಲಂಗ; ಅರಮನೆ; ಕೋಟು, ಅಂಗಿ.

कोटपाल, पु. ದುರ್ಗರಕ್ಷಕ, ಕೋಟೆಯ ಅಧಿಕಾರಿ, ಕಿಲ್ಲೆದಾರ.

कोटर, पु. ಮರದ ಡೊಗರು, ಪೊಟ್ರೆ.

कोटापिली, स्त्री. ಮರದ ಸುತ್ತಿಗೆ, ಕೊಡತಿ.

कोटि, स्त्री. ವರ್ಗ, ಶ್ರೇಣಿ, ತರಗತಿ. वि. ನೂರು ಲಕ್ಷ, ಕೋಟಿ.

कोट्ट, पु. = कुट्ट.

कोठ, वि. ಹುಳಿಯಿಂದ ಜಳಿತ (ಹಲ್ಲು), ಕೊಳಚಿಹೋದ (ಹಲ್ಲು).

कोठड़ी, कोठरी, स्त्री. ಕೊಠಡಿ, ಕೋಣೆ

कोठा, पु. ದೊಡ್ಡ ಕೋಣೆ; ಮನೆ; ಭಂಡಾರ, ಉಗ್ರಾಣ; ಉಪ್ಪರಿಗೆ, ಮಹಡಿ; ಹೊಟ್ಟೆ; ಬಸುರು, ಗರ್ಭಾಶಯ; ಮಗ್ಗಿ ಕೋಷ್ಟಕ; ಶರೀರದೊಳಗಿನ ಕೋಶ (ಪಿತ್ತಕೋಶ, ಶ್ವಾಸಕೋಶ ಆದಿ). कोठेवाली = ವೇಶ್ಯೆ, ಸೂಳೆ.

कोठार, पु. ಭಂಡಾರ, ಉಗ್ರಾಣ.

कोठारी, पु. ಉಗ್ರಾಣಿಕ, ಭಂಡಾರಿ, ಕೊಟ್ವಾರಿ.

कोठी, स्त्री. ಉಪ್ಪರಿಗೆ, ಸೌಧ; ಬಂಗ್ಲೆ; ಮಳಿಗೆ; ಉಗ್ರಾಣ; ಕಣಜ, ಹಗೇವು; ಕಾರ್ಖಾನೆ, ಕೋಠಿ; ಹುಂಡೀಶಾಲೆ, ಬ್ಯಾಂಕು; ಕೌಳಿಗೆ; ಕೊಳಗದಪ್ಪಲೆ; ಗರ್ಭಾಶಯ; ಬಿದಿರಿನ ಮೆಳೆ; ನೀರು ಮಟ್ಟಕ್ಕೆ ಕೆಳಗೆ ಇರುವ ಬಾವಿಯ ಕಲ್ಲು ಕಟ್ಟಡ.

कोठीवाल, पु. ವ್ಯಾಪಾರಿ, ಸಾಹುಕಾರ; ಒಂದು ಬಗೆ ಮೋಡಿ ಅಕ್ಷರ.

कोठीवाली, स्त्री. ವ್ಯಾಪಾರ ನಡೆಸುವಿಕೆ; ಒಂದು ಬಗೆ ಮೋಡಿ ಅಕ್ಷರ.

कोड़ना, सक्रि. ಅಗಿ, ತೋಡು, ಅಗತೆ ಮಾಡು.

कोड़ा, पु. ಕಶೆ, ಚಬುಕು, ಚಾವುಟಿ, ಬಾರುಗೋಲು; ಚುಚ್ಚುವ ಮಾತು; ಎಚ್ಚರಿಕೆ; ವಕ್ಷಸ್ಥಳ.

कोड़ाना, सक्रि. ಅಗತೆ ಮಾಡಿಸು.

कोड़ी, स्त्री. ಇಪ್ಪತ್ತು, ಬೀಸನೆ; ಕೆರೆಯ ಕೋಡಿ.

कोढ़, पु. ಕುಷ್ಠ. कोढ़ चूना या टपकना = ಕುಷ್ಠ ಹಿಡಿ, ತೊನ್ನು ಹತ್ತು. कोढ़ में खाज निकलना = ಕಷ್ಟದ ಮೇಲೆ ಕಷ್ಟ ಬರು.

कोढ़ना, सक्रि. ಕಾಡು, ಪೀಡಿಸು.

कोढ़िन, स्त्री. ಕುಷ್ಠ ಹಿಡಿದವಳು.

कोढ़ी, पु. ಕುಷ್ಠರೋಗಿ.

कोण, पु. ಕೋಣ, ಕೋನ, ಮೂಲೆ.

कोतमीर, पु. ಕೊತ್ತುಂಬರಿ ಬೀಜ, ಧನಿಯ.

कोतल, पु. ಪ್ರದರ್ಶನಕ್ಕಾಗಿ ನಡೆಸಿ ಕೊಂಡು ಬರುವ ಕುದುರೆ, ಹಿಡಿ ಕುದುರೆ, ಪಟ್ಟದ ಕುದುರೆ; ಅರಸನ ಸವಾರಿಯ ಕುದುರೆ; ವಿಶಾಸಲು ಕುದುರೆ. वि. ಬರಿಯ, ಖಾಲಿ.

कोतलकश, पु. ಕುದುರೆಗೆ ಬಿಗಿಯುವ ಬಾರು, ತಂಗುವಾರು.

कोतवाल, पु. ಠಾಣೆಯ ಅಧಿಕಾರಿ, ಕೊತ್ವಾಲ; "ಪೋಲೀಸ್ ಇನ್ಸ್ಪೆಕ್ಟರ್"; ಮೇಲ್ವಿಚಾರಕ.

कोतवाली, स्त्री. ಠಾಣೆ, "ಪೋಲೀಸ್ ಸ್ಟೇಷನ್"; ಕೊತ್ವಾಲನ ಕೆಲಸ ಅಥವಾ ಪದವಿ.

कोता, कोताह, वि. ಸಣ್ಣ, ಅಲ್ಪ, ನೀಚ.

कोताहबीन, वि. ದೂರದೃಷ್ಟಿ ಇಲ್ಲದ.

कोताही, स्त्री. ಕೊರತೆ, ಲೋಪ; ಕಡಮೆ ಮಾಡುವಿಕೆ, ಸಂಕ್ಷೇಪಣ.

कोथ, पु. ಕಣ್ಣುರಿ.

कोथला, पु. ಚೀಲ, ಥೈಲಿ; ಹೊಟ್ಟೆ.

कोथली, स्त्री. ಸಣ್ಣ ಚೀಲ; ಸೊಂಟಕ್ಕೆ ಕಟ್ಟುವ ಹಣದ ಚೀಲ, ಹಿಮ್ಮಣಿ ಚೀಲ.

कोदों, कोद्रो, पु. ಒಂದು ಬಗೆ ಧಾನ್ಯ, ಕೋದ್ರವ, ಹಾರಕದಕ್ಕಿ. छाती पर कोदों दलना = ಹಿಂಸಿಸು, ಪೀಡಿಸು.

कोन, पु. ಕೋಣ, ಮೂಲೆ.

कोना, पु. ಕೋಣ, ಮೂಲೆ; ಏಕಾಂತ ಸ್ಥಳ. कोना कुथरा = ಸಂದಿಗೊಂದಿ, ಇರಕು ಮುರಕು.

कोनिया, स्त्री. ಮೂಲೆದಂಡಿಗೆ.

कोप, पु. ಕೋಪ, ಸಿಟ್ಟು.

कोपना, अक्रि. ಕೋಪಿಸು, ಮುನಿಸು.

कोपीन, स्त्री. ಕೌಪೀನ, ಲಂಗೋಟಿ.

कोफ़्त, स्त्री. ದುಃಖ, ಸಂಕಟ, ಕಷ್ಟ, ತಾಪತ್ರಯ; ಚಿನ್ನಬೆಳ್ಳಿಯ ಪಚ್ಚಿಯ ಕೆಲಸ.

कोफ़्तगर, वि. ಚಿನ್ನಬೆಳ್ಳಿಯ ಪಚ್ಚಿಯ ಕೆಲಸ ಮಾಡುವವ.

कोफ़्ता, वि. ಅರೆದ, ಜಜ್ಜಿದ; ಕುಟ್ಟಿದ. पु. ಚೆನ್ನಾಗಿ ಕುಟ್ಟಿ ಸುಟ್ಟ ಮಾಂಸ.

कोबा, पु. ಗಟ್ಟಿಣಿ ಮಣೆ, ಧಮ್ಮಸು.

कोबी, स्त्री. ಒಂದು ಬಗೆ ಕೋಸು ಹೂವು, ಹೂಗೋಸು.

कोमल, वि. ಮೃದುವಾದ, ಕೋಮಲ.

कोमलता, स्त्री. ಮೃದುತ್ವ, ಕೋಮಲತೆ.

कोयर, पु. ಸೊಪ್ಪು ಪಲ್ಯ; ಸೊಪ್ಪು ಸದೆ; ಹಸಿಹುಲ್ಲು.

कोयल, स्त्री. ಕೋಗಿಲೆ, ಅಪರಾಜಿತೆ.

कोयला, पु. ಇದ್ದಲು; ಕಲ್ಲಿದ್ದಲು.

कोया, पु. ಕಡೆಗಣ್ಣು; ಕಣ್ಣು ಗುಡ್ಡೆ; ಹಲಸಿನ ತೊಳೆ.

कोरंगी, स्त्री. ಏಲಕ್ಕಿ.

कोरंजा, पु. ಕೂಲಿ, ಕಂಬಳ.

कोर, पु. ದಡ, ಅಂಚು, ಕರೆ; ಕೊನೆ, ತುದಿ; ದೋಷ, ಕುಂದು; ಮನಸ್ತಾಪ; ಪಂಕ್ತಿ, ಸಾಲು; ಕೆಲಸಗಾರರು ಜತೆಯಲ್ಲಿ ತರುವ ಊಟ, ಬುತ್ತಿ. कोर

कसर = ಕುಂದು ಕೊರತೆ, ನ್ಯೂನಾಧಿಕ್ಯಗಳು.

कोरक, पु. ಮೊಗ್ಗು, ಕಲಿಕೆ, ಅರುಂಬು.

कोरनिश, कोरनिशात, स्त्री. ಬಗ್ಗಿ ಸಲಾಮು ಮಾಡುವಿಕೆ, ಕೊರ್ನಿಸಾತು

क़ोरमा, पु. ಕೆಂಡದಲ್ಲಿ ಸುಟ್ಟ ಮಾಂಸ.

कोरा, वि. ಹೊಸ; ತಿದ್ದದ; ಸಲವೆ ಮಾಡದ; ಕೋರಾ; ಹದ ಮಾಡದ; ಖಾಲಿಯಾದ, ಶೂನ್ಯವಾದ, ಬರಿಯ. पु. ಅಂಚಿಲ್ಲದ ವಸ್ತ್ರ, "ಮಲ್ಲು"; ಸೋಗಿಲು, ಮಡಿಲು.

कोरापन, पु. ನವೀನತೆ, ಹೊಸದು.

कोरिन, स्त्री. ನೆಯಿಗೆಯವಳು.

कोरी, पु. (ಹಿಂದುಗಳಲ್ಲಿ) ನೆಯಿಗೆಯವ, ಸಾಲೆಯವ; ಜಾಡ.

कोरो, पु. ಜಂತಿ, ಸರ; ಅಡ್ಡಜಂತೆ.

कोल, पु. ಒಂದು ಜಾತಿಯ ಕಾಡು ಮನುಷ್ಯರು; ಕುನ್ನಿನರಿ, ಬಳ್ಳು; ಕೊಲ್ಲಿ, ಖಾರಿ; ಸಂದಿ; ಬೀದಿ.

कोला, पु. ಕುನ್ನಿನರಿ, ಬಳ್ಳು.

कोलाहल, पु. ಗದ್ದಲ, ಸಂದಣಿ.

कोलिया, स्त्री. ಸಂದಿ, ಓಣಿ.

कोली, पु. ನೆಯಿಗೆಯವ. स्त्री. ಮಡಲು

कोलैंदा, पु. ಹಿಪ್ಪೆ ಹಣ್ಣು.

कोल्हू, पु. ಗಾಣ, ಆಲೆ, ಆಲೆಗಾಣ.

कोवली, स्त्री. ಹೆಂಚು.

कोविद, पु. ಪಂಡಿತ, ವಿದ್ವಾಂಸ.

कोश, पु. ಮೊಟ್ಟೆ; ಸಂಪುಟ; ಮೊಗ್ಗು; ತಾಮ್ರದ ಪಂಚಪಾತ್ರೆ; ಕತ್ತಿಯ ಒರೆ; ಚೀಲ; ಖಜಾನೆ, ಬೊಕ್ಕಸ; ನಿಘಂಟು; ರೇಷ್ಮೆ ಹುಳುವಿನ ಗೂಡು; ತೊಳೆ (ಹಣ್ಣಿನ).

कोशकार, पु. ಕತ್ತಿಯ ಒರೆ ಮಾಡುವವ; ನಿಘಂಟು ಬರೆದವ, ನಿಘಂಟುಕಾರ; ರೇಷ್ಮೆ ಹುಳು.

कोशिश, स्त्री. ಯತ್ನ, ಪ್ರಯತ್ನ.

कोष, पु. = कोश.

कोषाध्यक्ष, पु. ಕೋಶಾಧ್ಯಕ್ಷ, ಖಜಾಂಚಿ.

कोष्ठक, पु. ಆವರಣ, ಕಂಸ, ಆವರಣ ಚಿಹ್ನೆ.

कोस, पु. ಕ್ರೋಶ, ಕೋಸು ದೂರ, ಹರಿದಾರಿ. कोसों दूर = ಬಹಳ ದೂರ

कोसना, सक्रि. ಶಾಪಕೊಡು, ಶಪಿಸು. कोसना काटना = ಶಪಿಸು, ಬೈಯು.

कोसली, स्त्री. ಚಿಗುರು, ತಳಿರು.

कोसा, पु. ಶಾಪ, ಬೈಗಳು; ಒಂದು ಬಗೆಯ ರೇಷ್ಮೆ; ದೊಡ್ಡ ಹಣತೆ, ಶರಾವೆ. कोसा काटी = ಬೈಗಳು.

कोसिया, स्त्री. ಪಣತೆ, ಹಣತೆ.

कोहँडौरी, स्त्री. ಕುಂಬಳಕಾಯಿ ಸಂಡಿಗೆ

कोह, पु. ಪರ್ವತ, ಬೆಟ್ಟ, ಮಲೆ.

कोहकन, वि. ಬೆಟ್ಟ ತೋಡುವವ.

कोहड़, पु. ಬಾವಿಯ ಬಾಯ ಚೌಕಟ್ಟು

कोहनी, स्त्री. = कुहनी.

कोहनूर, पु. ಬೆಳಕಿನ ಬೆಟ್ಟ, ತೇಜಃಪುಂಜ; ಒಂದು ದೊಡ್ಡ ವಜ್ರದ ಹೆಸರು, ಕೊಹಿನೂರು.

कोहान, पु. ಒಂಟೆಯ ಡುಬ್ಬ.

कोहिस्तान, पु. ಗುಡ್ಡಗಾಡು, ಬೆಟ್ಟದ

ಸೀಮೆ, ಮಲೆನಾಡು.

कोहिस्तानी, वि. ಮಲೆನಾಡಿನ, ಬೆಟ್ಟದ पु. ಮಲೆನಾಡಿನವ, ಗಟ್ಟದವ

कोही, वि. ಕೋಪಿಷ್ಠ; ಬೆಟ್ಟಗುಡ್ಡಗಳುಳ್ಳ; ಬೆಟ್ಟದ, ಮಲೆನಾಡಿನ.

कौंच, पु. ಒಂದು ಬಳ್ಳಿ, ಕಪಿಕಚ್ಚು.

कौंध, स्त्री. ಮಿಂಚಿನ ಹೊಳಪು, ಮಿಂಚು

कौंधना, अक्रि. ಹೊಳೆ, ಮಿಂಚು.

कौंधा, पु. ಮಿಂಚು.

कौंला, पु. ಒಂದು ಬಗೆ ಕಿತ್ತಳೆ ಹಣ್ಣು

कौआ, पु. ಕಾಗೆ; ಕಿರುನಾಲಗೆ, ಅಣ್ಣಾಲಿಗೆ; ಹೆಂಚಿನ ಚಾವಣಿಯ ಅಡ್ಡದಬ್ಬೆ, ರೀಪು.

कौआ-ठोंठी, स्त्री. ಕಾಕತುಂಡಿ ಗಿಡ, ಕಾಕನಾಸಿಕೆ.

कौआना, अक्रि. ಬೆಚ್ಚು, ಒಟಗುಟ್ಟು.

कौड़ा, पु. ದೊಡ್ಡ ಕವಡೆ; ಚಳಿಗಾಲದಲ್ಲಿ ಬೆಂಕಿ ಕಾಯುವ ಒಲೆ.

कौड़िया, वि. ಕವಡೆಯ ಬಣ್ಣದ, ತುಸ ಕಪ್ಪು ಮಿಶ್ರಿತ ಬಿಳುಪು. पु. ಮಿಂಚುಳ್ಳಿ, ಜಾಲಗಾರನ ಹಕ್ಕಿ.

कौड़ियाला, वि. ಕವಡೆಯ ಬಣ್ಣದ; ಕಪ್ಪುಮಿಶ್ರಿತವಾದ ಬಿಳುಪು; ಜಿಪುಣನಾದ ಹಣವಂತ; ಶಂಖಪುಷ್ಪ ಬಳ್ಳಿ; ಒಂದು ಬಗೆ ಮಿಂಚುಳ್ಳಿ, ಜಾಲಗಾರನ ಹಕ್ಕಿ; ಒಂದು ಬಗೆ ಹಾವು.

कौड़िल्ला, पु. ಒಂದು ಬಗೆ ಮಿಂಚುಳ್ಳಿ, ಜಾಲಗಾರನ ಹಕ್ಕಿ.

कौड़ी, स्त्री. ಸಣ್ಣ ಚಿಪ್ಪು; ಕವಡೆ, ಕವಡಿ; ಕಾಸು, ಚಿಕ್ಕಾಸು; ಧನ; ಪೊಗದಿ, ಕಪ್ಪ; ಕಣ್ಣುಗುಡ್ಡೆ; ಮಾಂಸಗ್ರಂಥಿ; ಎದೆಹುರಿ; ಕಠಾರಿಯ ತುದಿ, ಮೊನೆ. कौड़ी कौड़ी जोड़ना = ಕಾಸಿಗೆ ಕಾಸು ಕೂಡಹಾಕು. दो कौड़ी का = ಬೆಲೆಯಿಲ್ಲದ, ತುಚ್ಛ.

कौतुक, पु. ಕುತೂಹಲ, ಆಶ್ಚರ್ಯ; ವಿನೋದ, ತಮಾಷೆ.

कौतुकिया, कौतुकी, पु. ವಿನೋದಗಾರ, ತಮಾಷೆ ಮಾಡುವವ; ವಿವಾಹ ಮಾಡಿಸುವ ಪುರೋಹಿತ; ನಾಪಿತ, ಕ್ಷೌರಕ.

कौतूहल, पु. ಕುತೂಹಲ; ಸಂತೋಷ.

कौथ, स्त्री. ಯಾವ ತಾರೀಖು? ಯಾವತ್ತು?

कौन, सर्व. ಯಾರು, ಯಾವ, ಯಾವುದು? कौन सा = ಎಂತಹ?

क़ौम, पु. ಜಾತಿ, ಕೋಮು; ಬುಡಕಟ್ಟು, ಜನಾಂಗ, ಪಂಗಡ.

कौमरी, स्त्री. ಬೇಯಿಸಿದ ಕಾಳು, ಉಸಲಿ.

क़ौमियत, स्त्री. ಜಾತೀಯತೆ, ರಾಷ್ಟ್ರೀಯತೆ.

क़ौमी, वि. ಜಾತಿಸಂಬಂಧವಾದ, ಜಾತೀಯ, ರಾಷ್ಟ್ರೀಯ. क़ौमी जबान = ರಾಷ್ಟ್ರಭಾಷೆ. क़ौमी मजलिस = ರಾಷ್ಟ್ರೀಯ ಮಹಾಸಭೆ, ರಾಷ್ಟ್ರಕೂಟ, ಕಾಂಗ್ರೆಸ್ಸು.

कौर, पु. ತುತ್ತು, ಗುಕ್ಕು, ಕವಳ; ಹಿಡಿ. कौर ग्रास न करना = ಉಪವಾಸ ಮಾಡು.

कौरना, सक्रि. ಬೆಂಕಿಯಲ್ಲಿ ಸುಡು, ಕಾಯಿಸು.

कौरी, स्त्री. ಗೋರಿಕಾಯಿ, ಚವಳಿ ಕಾಯಿ; ವಕ್ಷಸ್ಥಳ; ಮಡಿಲು, ಉಡಿ.

कौल, वि. ಉತ್ತಮ ಕುಲದ, ಒಳ್ಳೇ ವಂಶದ, ಕುಲೀನ. पु. ಕವಳ.

क़ौल, पु. ಮಾತು, ವಚನ; ಪ್ರತಿಜ್ಞೆ, ಶಪಥ; ವಾಗ್ದಾನ; ಒಪ್ಪಂದ, ಕೌಲು. क़ौल करार = ಕೌಲು ಕರಾರು, ಒಡಂಬಡಿಕೆ, ಸಂಧಿ.

कौला, पु. ಮೂಲೆ; ಪಕ್ಕ ಗೋಡೆ; ಒಂದು ಬಗೆ ಕಿತ್ತಳೆಹಣ್ಣು; ಆಲಿಂಗನ, ತೆಕ್ಕೆ.

कौलियाना, सक्रि. ಆಲಿಂಗಿಸು.

कौली, स्त्री. ಆಲಿಂಗನ. कौली भरना = ಆಲಿಂಗಿಸು; ಅಪ್ಯಾಸೆಪಡು.

कौवा, पु. = कौआ.

क़ौवाल, पु. ಪದ ಹೇಳುವವ, ಕೀರ್ತನಕಾರ.

क़ौवाली, स्त्री. ದೇವರನಾಮ, ಕೀರ್ತನೆ, ದಾಸರಪದ; ಈ ಪದ ಹಾಡುವವ.

कौवी, स्त्री. ಹೆಣ್ಣು ಕಾಗೆ.

क़ौस, स्त्री. ಬಿಲ್ಲು, ಧನಸ್ಸು; ವೃತ್ತದ ಒಂದು ಭಾಗ, ಕಂಸ, ಚಾಪ. क़ौस कुज़ह = ಇಂದ್ರಚಾಪ, ಮಳೆಬಿಲ್ಲು, ಕಾಮನಬಿಲ್ಲು, ಬಾನಬಿಲ್ಲು.

कौहा, पु. ಚಾವಣಿಯ ಅಡ್ಡ ದಬ್ಬೆ, ರೀಪು.

क्या, सर्व. ಏನು? वि. ಎಂಥಾ, ಎಷ್ಟು? क्रिवि. ಏತಕ್ಕೆ?

क्यारी, स्त्री. = कियारी.

क्यों, क्रिवि. ಏತಕ್ಕೆ, ಯಾಕೆ; ಯಾವ ಕಾರಣದಿಂದ; ಏತರಿಂದ.

क्योंकर, क्रिवि. ಹೇಗೆ; ಏತಕ್ಕೆ, ಏಕೆ.

क्योंकि, अव्य. ಏತಕ್ಕೆಂದರೆ, ಏಕೆಂದರೆ.

क्योड़ा, पु. ತಾಳೆ ಹೂ, ಕೇದಗೆ.

क्रंदन, पु. ಅಳು, ಪ್ರಲಾಪ.

क्रम, पु. ಕ್ರಮ, ಅಣಿಪಾಟು; ನಿಯಮ.

क्रमशः, क्रिवि. ಕ್ರಮವಾಗಿ.

क्रय, पु. ಕೊಂಡುಕೊಳ್ಳುವಿಕೆ; ಕ್ರಯ, ಖರೀದಿ. क्रय विक्रय = ಕೊಳ್ಳುವುದು ಮಾರುವುದು, ಕ್ರಯ ವಿಕ್ರಯ; ವ್ಯಾಪಾರ.

क्रांति, स्त्री. ಸೂರ್ಯನ ಪಥ, ಕ್ರಾಂತಿ ವೃತ್ತ; ಬದಲಾವಣೆ, ಮಾರ್ಪಾಟು, ಪಲ್ಲಟ; ರಾಜ್ಯಕ್ರಾಂತಿ.

क्रांतिकारी, वि. ದೇಶದಲ್ಲಿ ದೊಡ್ಡ ಮಾರ್ಪಾಟನ್ನುಂಟುಮಾಡುವ; ರಾಜ್ಯಕ್ರಾಂತಿಯುಂಟುಮಾಡುವ; ಕ್ರಾಂತಿಕರ

क्रिया, स्त्री. ಕ್ರಿಯೆ, ಕೆಲಸ, ಕಾರ್ಯ. क्रिया कर्म = ಕರ್ಮಾಂತರ.

क्रिस्तान, पु. ಕ್ರೈಸ್ತ ಮತದವ.

क्रिस्तानी, स्त्री. ಕ್ರೈಸ್ತ ಮತ.

क्रीड़ा, स्त्री. ಆಟ, ಕ್ರೀಡೆ, ವಿನೋದ.

क्रीत, वि. ಬೆಲೆಗೆ ಕೊಂಡ.

क्रुद्ध, वि. ಕೋಪಗೊಂಡ, ಸಿಟ್ಟಾದ.

क्रूर, वि. ಕ್ರೂರ, ನಿರ್ದಯ.

क्रूरता, स्त्री. ಕ್ರೂರತನ, ಕ್ರೌರ್ಯ.

क्रोड़पत्र, पु. ಪರಿಶಿಷ್ಟ, ಪುರವಣಿ.

क्रोध, पु. ಕೋಪ, ಸಿಟ್ಟು.
क्रोधित, वि. ಕೋಪಗೊಂಡ, ರೇಗಿದ.
क्लांत, वि. ಆಯಾಸಹೊಂದಿದ, ದಣಿದ.
क्लांति, स्त्री. ಆಯಾಸ, ದಣಿವು.
क्लिष्ट, वि. ದುಃಖಿತ; ಕಷ್ಟ, ಕಠಿಣ.
क्लीव, पु. ನಪುಂಸಕ, ಪುಕ್ಕ, ಹೇಡಿ.
क्लेश, पु. ದುಃಖ, ವ್ಯಸನ, ಕ್ಲೇಶ.
क्वार, पु. ಆಶ್ವೀಜ ಮಾಸ.
क्वारपन, **क्वारापन**, पु. ಬ್ರಹ್ಮಚರ್ಯ.
क्वारा, वि. ಬ್ರಹ್ಮಚಾರಿ.
क्वारी, स्त्री. ಕನ್ಯೆ, ಬ್ರಹ್ಮಚಾರಿಣಿ.
क्षण, पु. ಕ್ಷಣ, ನಿಮಿಷ.
क्षति, स्त्री. ಕೆಡಕು, ಹಾನಿ.
क्षम, वि. ಶಕ್ತ, ತಕ್ಕ; ಅರ್ಹತೆಯುಳ್ಳ.
क्षमता, स्त्री. ಶಕ್ತಿ, ಸಾಮರ್ಥ್ಯ, ಯೋಗ್ಯತೆ.
क्षमा, स्त्री. ಕ್ಷಮೆ, ಮನ್ನಣೆ, ಮಾಫಿ.
क्षितिज, पु. ಆಕಾಶವೂ ಭೂಮಿಯೂ ಸೇರುವಂತೆ ಕಾಣುವ ಸ್ಥಳ, ದಿಗಂತ, ಕ್ಷಿತಿಜ, ಹರಿಜ.
क्षीण, वि. ಕ್ಷೀಣವಾದ, ಕುಗ್ಗಿದ.
क्षीणता, स्त्री. ಕ್ಷೀಣತೆ, ಬಲಹೀನತೆ.

ख

खंक, वि. ನಿರ್ಬಲ, ಅಶಕ್ತ. स्त्री. ಬಿರುಗಾಳಿ.
खंख, वि. ಶೂನ್ಯವಾದ, ಬರಿದು; ಬೆಂಗಾಡಾದ, ಬಂಜರು.
खंखड़, वि. ಒಣಗಿದ, ಗಟ್ಟಿಯಾದ.
खंखरा, पु. ತಾಮ್ರದ ಬೋಸಿ, ತಪ್ಪಲೆ. वि. ತೂತುಗಳುಳ್ಳ, ತೆರಪುಳ್ಳ; ಚಳತಿ ನೆಯಿಗೆಯ, ಜರಗು; ಜಾಳು (ಬಟ್ಟೆ).
खंखा, स्त्री. ದುಷ್ಟ ಸ್ತ್ರೀ, ತಾಟಕಿ.
खंखार, पु. ಕಫ, ಶ್ಲೇಷ್ಮ, ತೊಂಟೆ; ಉಗುಳು.
खंखारना, अक्रि. ಕೆಮ್ಮು, ಕೇಕರಿಸು, ಕ್ಯಾಕರಿಸು; ಉಗುಳು.
खंग, पु. ಕತ್ತಿ, ಖಡ್ಗ; ಗೇಂಡಾಮೃಗ.
खंगना, अक्रि. ಕಡಿಮೆಯಾಗು, ತಗ್ಗು.
खंगर, पु. ಒಂದು ಬಗೆ ಇಟ್ಟಿಗೆ.
खंगहा, वि. ಕೋರೆ ಹಲ್ಲುಳ್ಳ. पु. ಗೇಂಡಾಮೃಗ.
खंगालना, **खंगारना**, सक्रि. ತೊಳೆ, ಗಲಬರಿಸು; ಕುಕ್ಕು, ಕುಸುಬು.
खंगी, स्त्री. ಕಡಿಮೆ, ಕೊರತೆ, ನ್ಯೂನತೆ.
खंचना, अक्रि. ಅಂಕಿತವಾಗು.
खंचाना, सक्रि. ಅಂಕಿತ ಮಾಡು; ಗೀಚು.
खंज, पु. ಕುಂಟ, ಹೆಳವ.
खंजड़ी, स्त्री. = **खंजरी**.
खंजन, पु. ಖಂಜರೀಟ, ಗವುಜು ಹಕ್ಕಿ.
खंजर, पु. ಕಠಾರಿ.
खंजरी, स्त्री. ಒಂದು ವಾದ್ಯ, ಖಂಜರ; ಒಂದು ತರದ ತಮಟೆ; ಬಟ್ಟೆಯಲ್ಲಿನ ಗೆರೆ; ಪಟ್ಟೆಪಟ್ಟೆಯಾದ ಬಟ್ಟೆ, ಪಟಾವಳಿ ಬಟ್ಟೆ.
खंजरीट, पु. ಗವುಜು ಹಕ್ಕಿ, ಮಡಿವಾಳ ಹಕ್ಕಿ.

खंड, पु. ತುಂಡು; ಭಾಗ; ಹಿಸ್ಸೆ; ದೇಶ; ಸಕ್ಕರೆ; ಕಲ್ಲುಸಕ್ಕರೆ.

खंडकाव्य, पु. ಕಥಾತ್ಮಕವಾದ ಸಣ್ಣ ಪ್ರಬಂಧಕಾವ್ಯ.

खंडन, पु. ಕಡಿಯುವುದು, ತುಂಡರಿಸುವಿಕೆ; ಖಂಡನೆ.

खंडनी, स्त्री. ಕಂದಾಯ, ಕಿಸ್ತು.

खंडपूरी, स्त्री. ಸಕ್ಕರೆ ಪೂರಿ, ಹೂರಣ ಹೋಳಿಗೆ.

खंडबरा, पु. ಸಿಹಿ ವಡೆ.

खंडरा, पु. ಒಂದು ಬಗೆ ವಡೆ.

खंडरीच, पु. ಖಂಜನ, ಗವುಜು ಹಕ್ಕಿ.

खंडला, पु. ತುಂಡು, ತುಣಕು, ಚೂರು

खंडवानी, स्त्री. ಸಕ್ಕರೆ ಪಾನಕ, ವರ ಪೂಜೆಗೆ ಮೊದಲು ಪಾನಕ ಮೊದಲಾದವನ್ನು ಕೊಟ್ಟು ಬೀಗರನ್ನು ಸ್ವಾಗತಿಸುವಿಕೆ, ಪಾನಕಶಾಸ್ತ್ರ.

खंडसाल, पु. ಸಕ್ಕರೆ ಕಾರ್ಖಾನೆ.

खंडहर, पु. ಹಾಳುಬಿದ್ದ ಮನೆ, ಪಾಳು; ಭಗ್ನಾವಶೇಷ.

खंडित, वि. ತುಂಡುಬಿದ್ದ, ಅಪೂರ್ಣ.

खंडिया, स्त्री. ಸಣ್ಣ ಚೂರು.

खंड़ीरा, पु. ಕಲ್ಲುಸಕ್ಕರೆಯಿಂದ ಮಾಡಿದ ಲಾಡು, ಚಿಲ್ಮ ಲಾಡು.

खंतरा, पु. ಬಿರುಕು; ಕಮರಿ; ಕೊಳ್ಳ.

खंता, पु. खंती, स्त्री. ಮಮ್ಮಟಿ, ಎಲೆಗುದ್ದಲಿ, ಎಲೆಕೋಟು.

ख़ंदक़, पु. ಕಂದಕ, ಅಗಳು, ಜಿಗಳು, ಅಗಳತೆ; ಕೊಳ್ಳ, ಕಮರಿ.

खंदल, पु. ಬಯಲು, ಮೈದಾನ.

ख़ंदाँ, पु. ನಗು, ಹಾಸ್ಯ. ख़ंदाँ पेशानी = ನಗು ಮೊಗ.

खंदाना, पु. ಮರದಲ್ಲಿನ ಕಚ್ಚು; ಇಟ್ಟಿಗೆಗಾಗಿ ಮಣ್ಣು ತೋಡಿದ ಗುಳಿ.

खंधवाना, सक्रि. ಖಾಲಿ ಮಾಡಿಸು, ಬರಿದು ಮಾಡಿಸು.

खंधियाना, सक्रि. ಹೊರಗೆಡವು; ಖಾಲಿ ಮಾಡು, ತೆರವು ಮಾಡು.

खंभ, खंभा, पु. ಕಂಬ, ಸ್ತಂಭ.

खंभिया, स्त्री. 'खंभा' का लघु रूप.

खकेड़, स्त्री. ಕಷ್ಟ, ಸಂಕಟ.

खक्खा, पु. ಪಕಪಕ ನಗು, ಅಟ್ಟಹಾಸ; ಒಂದು ಜಾತಿ, ಖತ್ರಿ, ಕ್ಷತ್ರಿಯ

खखार, पु. ಕಫ, ಶ್ಲೇಷ್ಮ, ತೊಂಟೆ; ಉಗುಳು.

खखारना, अक्रि. ಕೆಮ್ಮು, ಕೇಕರಿಸು; ಉಗುಳು.

खखेटना, सक्रि. ಅಟ್ಟು, ತಗುಳಿಸು.

खखोड़ल, स्त्री. ಪೊಳ್ಳು, ಟೊಳ್ಳು.

खखोड़ना, खखोरना, सक्रि. ಹುಡುಕು; ಅರಿಸು; ಜಾಲಿಸು.

खग, पु. ಪಕ್ಷಿ; ಅಂಬು; ನಕ್ಷತ್ರ; ಮೋಘ

खगना, अक्रि. ಚುಚ್ಚು; ನಾಟು; ಅಂಟು.

खगहा, पु. ಗೇಂಡಾಮೃಗ.

खगेश, पु. ಗರುಡ; ಹದ್ದು.

खगोल, पु. ಆಕಾಶಮಂಡಲ.

खचन, पु. (ರತ್ನ) ಕೆತ್ತುವಿಕೆ, ಕಟ್ಟುವಿಕೆ; ಕುಂದಣ; ಅಂಕಿತ ಮಾಡುವುದು.

खचना, अक्रि. ಕೆತ್ತಲ್ಪಡು (ರತ್ನ),

ಖಚಿತವಾಗು. सक्रि. ಕೆತ್ತು, ಪಚ್ಚೆಯ ಕೆಲಸ ಮಾಡು.

खचरा, वि. ವರ್ಣಸಂಕರ, ಇಬ್ಬಂದಿ, ಅದಜಾತಿಯವ; ನೀಚ.

खचा, **खचित**, वि. ರತ್ನಖಚಿತ.

खचाखच, वि. ದಟ್ಟವಾದ, ಕಿಕ್ಕಿರಿದ. खचाखच भरना = ಅಡಚಿ ತುಂಬು, ಕಿಕ್ಕಿರಿಯುವಂತೆ ತುಂಬು.

खचिया, स्त्री. ಸಣ್ಣ ಕುಕ್ಕೆ, ಬುಟ್ಟಿ.

खच्चर, पु. ಹೇಸರಗತ್ತೆ, ಅಶ್ವತರ.

खच्चरी, स्त्री. ಹೆಣ್ಣು ಹೇಸರಗತ್ತೆ.

खजला, पु. ಕಜ್ಜಾಯ, ಪಣ್ಯಾರ.

ख़ज़ानची, पु. ಖಜಾಂಚಿ, ಬೊಕ್ಕಸದವ, ಕೋಶಾಧಿಕಾರಿ, ಕೋಶಾಧ್ಯಕ್ಷ.

ख़ज़ानचीगरी, स्त्री. ಕೋಶಾಧಿಕಾರಿಯ ಉದ್ಯೋಗ.

ख़ज़ाना, पु. ಖಜಾನೆ, ಬೊಕ್ಕಸ, ರಾಜಕೋಶ; ಭಂಡಾರ; ತೆರಿಗೆ.

ख़जिल, वि. ಭಿಡೆಯುಳ್ಳವ, ಸಿಗ್ಗಾಳಿ; ಲಜ್ಜೆಯುಳ್ಳವ.

ख़ज़ीना, पु. ಖಜಾನೆ, ಬೊಕ್ಕಸ.

खजुआ, पु. ಕಜ್ಜಾಯ.

खजुरा, पु. ಹೆರಳಿಗೆ ಕಟ್ಟುವ ದಾರ.

खजुली, स्त्री. = खुजली.

खजूर, पु. ಖರ್ಜೂರ, ಉತ್ತುತ್ತೆ; ಒಂದು ಮಿಠಾಯಿ. खजूर छड़ी = ಒಂದು ತರದ ರೇಷ್ಮೆ ಬಟ್ಟೆ.

खजूरा, पु. ಶ್ರಾವಣಿಯ ಬೆಲಗು, ಬೆಂತೊಲೆ.

खजूरिया, स्त्री. ಖರ್ಜೂರ.

खजूरी, वि. ಖರ್ಜೂರದ; ಖರ್ಜೂರದಂಥ; ಮೂರು ಕಾಲು ಹಾಕಿ ಹೆಣೆದ (ಹೆರಳು).

खट, पु. ಹೊಡೆಯುವ ಅಥವಾ ಮುರಿಯುವ ಶಬ್ದ. खट से = ತಕ್ಷಣ.

खटक, स्त्री. ಶಂಕೆ, ಭಯ; ಚಿಂತೆ, ತಳ್ಳಂಕ; ತಲ್ಲಣ.

खटकना, अक्रि. ಪಟಪಟ ಅನ್ನು; ಅನುಮಾನವಾಗು; ಭಯವಾಗು; ಅಸಹ್ಯಕರವಾಗು; ವ್ಯಥೆಯಾಗು; ಕೆಟ್ಟದನಿಸು, ಒತ್ತು, ಅನಿಷ್ಟದೋರು.

चालनी, स्त्री. ಜರಡಿ, ಒಂದರಿ, ಸಾಣಿಗೆ

चालबाज़, वि. ಮೋಸಗಾರ, ಕಪಟಿ.

चालबाज़ी, स्त्री. ಮೋಸಗಾರಿಕೆ, ಕಪಟ

चाला, पु. ಪ್ರಯಾಣ, ನಿರ್ಗಮನ; ಶುಭ ಮುಹೂರ್ತ; ಮೊದಲನೆಯ ಸಾರಿ ಅತ್ತೆ ಮನೆಗೆ ಸೊಸೆಯು ಬರುವಿಕೆ.

चालाक, वि. ಚತುರ, ದಕ್ಷ, ಸಮರ್ಥ; ಗಟ್ಟಿಗ, ಜಾಣ; ಉಪಾಯಗಾರ, ತಂತ್ರಗಾರ; ಕಪಟಿ.

चालाकी, स्त्री. ತಂತ್ರ, ಉಪಾಯ, ಯುಕ್ತಿ; ಚಾತುರ್ಯ, ಚಾಕಚಕ್ಯ; ಕಪಟ, ಮೋಸ.

चालान, पु. ಹಣ ಕಳುಹಿಸುವಿಕೆ; ಸಾಮಾನು ಕಳುಹಿಸುವಿಕೆ, ರವಾನೆ; ರವಾನಿಸಿದ ಸರಕುಗಳ ಪಟ್ಟಿ, ಜಾಬಿತ; ಅಪ್ಪಣೆ ಚೀಟಿ, ರಹದಾರಿ; ಪೋಲೀಸಿಗೆ ಅಥವಾ ನ್ಯಾಯಸ್ಥಾನಕ್ಕೆ ಕಳುಹಿಸುವಿಕೆ

चालित, वि. ನಡೆಸಲ್ಪಟ್ಟ; ಸಂಚಾಲಿತ

चालिया, चाली, वि. ಮೋಸಗಾರ; ತಂತ್ರಗಾರ, ಕಳಿಂಗ, ಠಕ್ಕ.

चालीस, वि. ನಲವತ್ತು.

चालीसवां, वि. ನಲವತ್ತನೆಯ. पु. ಸತ್ತ ನಲವತ್ತನೇ ದಿವಸದ ಶ್ರಾದ್ಧ.

चालीस-सेरा, पु. ಪೂರ್ತ ನಲವತ್ತು ಸೇರಿನ ತೂಕ; ಚೊಕ್ಕ, ಅಪ್ಪಟ; ದಡ್ಡ, ಮುಟ್ಠಾಳ.

चालीसा, पु. **चालीसी**, स्त्री. ನಲವತ್ತು ವಸ್ತುಗಳ ಸಮೂಹ; ನಲವತ್ತು ದಿವಸಗಳ ಅವಧಿ; ನಲವತ್ತು ದಿವಸಗಳವರೆಗಿನ ಅಶೌಚ.

चालू, वि. ಬಳಕೆಯಲ್ಲಿರುವ, ಪ್ರಚಲಿತ

चाल्ह, पु. = **चेल्हा**.

चाव, पु. ಅಭಿಲಾಷೆ, ಬಯಕೆ, ಗೀಳು; ತವಕ, ಭರವು; ಅಭಿರುಚಿ; ಅಕ್ಕರೆ, ಆಸಕ್ತಿ; ಲಾಲನೆ, ಮುದ್ದಾಟ, ಲಲ್ಲೆ.

चावल, पु. ಅಕ್ಕಿ, ಅಕ್ಕಿ ಕಾಳು; ಅನ್ನ.

चाशनी, स्त्री. ಬೆಲ್ಲದ ಪಾಕ, ಸಕ್ಕರೆ ಪಾಕ; ಸವಿ, ರುಚಿ; ಅಭಿರುಚಿ; ಕಹಿ ಮತ್ತು ಸಿಹಿಯ ಮಿಶ್ರಣ; ಕಬ್ಬಿನ

ಹಾಲನ್ನು ಕಾಯಿಸುವ ಕಡಾಯಿ; ಸರಿ ನೋಡುವುದಕ್ಕೆ ಅಥವಾ ಮಾದರಿ ಗಾಗಿ ಇಟ್ಟುಕೊಂಡ ಚಿನ್ನದ ತುಂಡು, ಮುಚ್ಚು, ನಮೂನೆ.

चासना, सक्रि. ಉಳು, ನೇಗಿಲು ಹೊಡೆ.

चासा, पु. ಉಳುವವ, ಅರಂಬಗಾರ, ರೈತ

चाह, स्त्री. ಇಚ್ಛೆ, ಬಯಕೆ; ಆಶೆ, ಹಾರೈಕೆ; ಪ್ರೀತಿ, ಪ್ರೇಮ; ಅಕ್ಕರೆ, ಆದರ; ಅಗತ್ಯ. पु. ಬಾವಿ.

चाहत, स्त्री. ಇಷ್ಟ; ಪ್ರೀತಿ; ಅಗತ್ಯ.

चाहना, सक्रि. ಇಚ್ಛಿಸು; ಪ್ರೀತಿಸು; ಬಯಸು, ಬಗೆ; ಬೇಡು, ಅಪೇಕ್ಷಿಸು, ಕೋರು; ಯತ್ನಿಸು स्त्री. ಅಗತ್ಯ, ಜರೂರು; ಇಚ್ಛೆ; ಪ್ರೀತಿ.

चाहिता, वि. ಇಷ್ಟದ; ಆರಿಸಿದ.

चाहिये, क्रिवि. ಬೇಕು, ತಕ್ಕುದು.

चाहे, अव्य. ಬೇಕಾದರೆ, ಬೇಕೆಂದರೆ. जैसा चाहे = ಬೇಕಾದ ಹಾಗೆ. चाहे जो हो = ಏನು ಬೇಕಾದರೂ ಆಗಲಿ.

चिआँ, पु. ಹುಣಸೆ ಬೀಜ, ಹುಣಸೆ ಬಿತ್ತ.

चिउँटा, पु. ದೊಡ್ಡ ಇರುವೆ.

चिउँटी, स्त्री. ಇರುವೆ.

चिगना, पु. ಕೋಳಿಯ ಮರಿ.

चिंघाड़, स्त्री. ಕೂಗಾಟ, ಅರಚುವಿಕೆ; ಆನೆಯ ಗರ್ಜನೆ, ಘೀಂಕಾರ.

चिंघाड़ना, अक्रि. ಗರ್ಜಿಸು, ಅರಚು; ಗೀಳಿಡು, ಘೀಂಕರಿಸು.

चिंतन, पु. ಯೋಚನೆ; ಧ್ಯಾನ.

चिंतना, सक्रि. ವ್ಯಾಸಂಗ ಮಾಡು; ಯೋಚಿಸು. पु. ಧ್ಯಾನ; ಯೋಚನೆ

चिंता, स्त्री. ಚಿಂತೆ; ಯೋಚನೆ; ಕಾತರ.

चिंतित, वि. ಚಿಂತೆಯುಳ್ಳ; ಚಿಂತಾ ಯುಕ್ತ.

चिंदी, स्त्री. ತುಂಡು, ಚೂರು. हिन्दी की चिंदी निकालना = ಅಲ್ಪವಾದ ತಪ್ಪುಗಳನ್ನು ಹುಡುಕು.

चिउड़ा, पु. ಅವಲಕ್ಕಿ.

चिक, स्त्री. ಸೊಂಟದ ನೋವು; ಬಿದಿರಿನ ತಡಿಕೆ, ನೆರಕೆ, ತಟ್ಟಿ. पु. ಕಸಾಯಿ, ಕಟುಕ.

चिकटना, अक्रि. ಅಂಟು ಅಂಟಾಗಿರು; ಕೊಳಕಾಗಿರು; ಜಿಡ್ಡಾಗಿರು.

चिकटा, वि. ಅಂಟುಳ್ಳ, ಜಿಗಟಾದ; ಜಿಡ್ಡಾದ; ಕೊಳೆಯಾದ.

चिकन, स्त्री. ಕಸೂತಿ ಕೆಲಸ, ಬೂಟಾ ಕೆಲಸ; ಕಸೂತಿ ಕೆಲಸ ಮಾಡಿದ ಬಟ್ಟೆ.

चिकनदोज़, पु. ಕಸೂತಿ ಕೆಲಸ ಮಾಡುವವ.

चिकना, पु. ಜಿಡ್ಡಿನ ಪದಾರ್ಥ; ನೆಣ, ಮೇದಸ್ಸು, ಚರಬಿ. वि. ಜಿಡ್ಡಿನ, ಸ್ನಿಗ್ಧ; ಜಿಗಟಾದ, ನುಣುಪಾದ; ಜಾರುವ; ಮೃದುವಾದ; ನವಿರು; ಚೊಕ್ಕಟ, ಅಂದವಾದ; ನಯವಾದ; ಮುಖಸ್ತುತಿ ಮಾಡುವ. चिकना घड़ा = ನಾಚಿಕೆಗೇಡಿ. चिकनी चुपड़ी बात = ನಯವಾದ ಮಾತು; ಬೆಣ್ಣೆ ಹಚ್ಚಿದ ಮಾತು; ಮುಖಸ್ತುತಿ, ಗೋರ್ಲೆ.

चिकनाई, स्त्री. ಜಿಡ್ಡು, ಸ್ನಿಗ್ಧತೆ; ಮೃದುತ್ವ; ನುಣುಪು; ನಯ; ಮಿರುಗು.

चिकनाना, सक्रि. ಮೃದು ಮಾಡು;

ನಯ ಮಾಡು; ಮೆರುಗು ಕೊಡು. अक्रि. ಜಿಡ್ಡಾಗು; ಕೊಬ್ಬು.

चिकनापन, पु. **चिकनाहट**, स्त्री. ಜಿಡ್ಡು, ಸ್ನಿಗ್ಧತೆ; ನುಣುಪು; ನಯ; ಮೃದುತ್ವ

चिकनिया, पु. ಸೊಗಸುಗಾರ, ನಯಗಾರ.

चिकरना, **चिकारना**, अक्रि. ಅರಚು, ಗರ್ಜಿಸು; ಘೀಂಕರಿಸು, ಗೀಳಿಡು

चिकारा, पु. **चिकारी**, स्त्री. ಚಿಗರಿ, ಜಿಂಕೆ; ಒಂದು ಬಗೆ ಪಿಟೀಲು ವಾದ್ಯ.

चिकित्सा, स्त्री. ಚಿಕಿತ್ಸೆ, ಇಲಾಜು; ವೈದ್ಯರ ಕೆಲಸ.

चिकुर, पु. ಕೂದಲು, ಉರಗಮುನಿ.

चिकोटी, स्त्री. ಚಿಟಿಕೆ; ಜಿಗುಟುವಿಕೆ.

चिक्कट, पु. ಗಸಿ, ರಾಡಿ; ಬಗ್ಗಡ; ಕೊಳಕು. वि. ಕೊಳಕಾದ.

चिक्कन, वि. = **चिकना**.

चिखुरी, स्त्री. ಅಳಿಲು, ಇಣಚಿ.

चिचड़ा, पु. ಅಪಾಮಾರ್ಗ, ಉತ್ತರಣೆ; ಉಣ್ಣೆ, ತೊಣಚಿ.

चिचड़ी, स्त्री. ಉಣ್ಣೆ, ತೊಣಚಿ.

चिचिंडा, पु. ಪಡವಲಕಾಯಿ.

चिचियाना, अक्रि. ಅರಚು, ಕಿರಚು

चिजारा, पु. ಗಾರೆ ಕೆಲಸದವ, ಕಾಮಾಟಿಗ, ಉಪ್ಪಾರ.

चिट, स्त्री. ಚೂರು; ಚೀಟಿ; ಕೈಕಾಗದ.

चिटकना, अक्रि. ಬಿರಿ, ಬಿರುಕು ಬಿಡು; ರೇಗು.

चिटकाना, सक्रि. ಮುರಿ; ರೇಗಿಸು, ಚಿಡಾಯಿಸು.

चिटखनी, स्त्री. ಚಿಲುಕ, ಅಗುಳಿ.

चिटनवीस, पु. ಬರಹಗಾರ; ಗುಮಾಸ್ತ; ಕಾರಕೂನ; ಕರ್ಣಿಕ.

चिट्टा, वि. ಬಿಳಿಯ, ಸುಂದರವಾದ. पु. ಸುಳ್ಳು ಪ್ರೋತ್ಸಾಹ, ದುಷ್ಪ್ರೇರಣೆ; ರೂಪಾಯಿ.

चिट्टी, स्त्री. ಒಂದು ಬಗೆ ಹಕ್ಕಿ.

चिट्ठा, पु. ಲೆಕ್ಕದ ಪುಸ್ತಕ, ಖಾತೆ, ಚಟ್ಟಾ; ಲಾಭ ನಷ್ಟದ ತಃಖ್ತೆ, ಹಣದ ಲೆಕ್ಕ, ಪಟ್ಟಿ; ಸಂಬಳ ಬಟವಾಡೆ ಹಣ.

चिट्ठी, स्त्री. ಕಾಗದ, ಚೀಟಿ, ಚೀಟು. चिट्ठीपत्री, चिट्ठीपाती = ಕಾಗದ ಪತ್ರ; ಪತ್ರವ್ಯವಹಾರ.

चिट्ठीरसां, पु. ಕಾಗದಗಳನ್ನು ಬಟವಾಡೆ ಮಾಡುವವ, ಓಲೆಕಾರ, ಹರಿಕಾರ, ಪತ್ರವಾಹಕ; ಅಂಚೆಯವ.

चिड़चिड़ा, वि. ಮುಂಗೋಪಿ, ಸಿಡುಕ, ಶೀಘ್ರಕೋಪಿ. पु. ಅಪಾಮಾರ್ಗ.

चिड़चिड़ाना, अक्रि. ಬಿರಿ, ಸಿಡಿ; ರೇಗು, ಸಿಡುಗುಟ್ಟು; ಸೀವರಿಸು.

चिड़चिड़ाहट, स्त्री. ಸಿಟ್ಟು, ಸಿಡುಕು.

चिड़वा, पु. ಅವಲಕ್ಕಿ.

चिड़ा, पु. ಗುಬ್ಬಚ್ಚಿ.

चिड़िया, स्त्री. ಹಕ್ಕಿ; ಗುಬ್ಬಚ್ಚಿ, ಗುಬ್ಬಿ; ಗಂಜೀಫಿನ ಒಂದು ಬಣ್ಣ.

चिड़ियाख़ाना, पु. ಹಕ್ಕಿಮನೆ, ಪಕ್ಷಿಶಾಲೆ.

चिड़ी, स्त्री. ಪಕ್ಷಿ, ಹಕ್ಕಿ; ಹೆಣ್ಣು ಗುಬ್ಬಚ್ಚಿ, ಚಟಕೆ.

चिड़ीमार, पु. ಹಕ್ಕಿ ಬೇಟೆಗಾರ.

चिढ़, स्त्री. ಸಿಟ್ಟು, ಸಿಡುಕು; ಅಸಹ್ಯ, ಚಿಟ್ಟು.

चिढ़ना, अक्रि. ರೇಗು, ಮುನಿ, ಕೆರಳು

चिढ़ाना, सक्रि. ಚಿಡಾಯಿಸು, ರೇಗಿಸು, ಸಿಟ್ಟಿಗೆಬ್ಬಿಸು; ಅಣಕಿಸು; ಏಳಿದಮಾಡು

चित, पु. ಮನಸ್ಸು; ಚಿತ್ತ; ಗಮನ; ನೋಟ, ಕಟಾಕ್ಷ. वि. ಅಂಗಾತ; ಅಂಗತ್ತಲಾದ, ಚಿತ್ತು.

चितकबरा, चितला, वि. ವಿವಿಧ ಬಣ್ಣದ, ಬಟ್ಟು, ಶಬಲ.

चितपट, पु. ಕುಸ್ತಿಯಲ್ಲಿ ಒಂದು ಆಟ.

चितवन, स्त्री. ಕಡೆಗಣ್ಣು, ಕುಡಿಗಣ್ಣು; ಕಡೆಗಣ್ಣೋಟ, ಕುಡಿನೋಟ, ಕಟಾಕ್ಷ

चिता, स्त्री. ಚಿತೆ

चिताना, सक्रि. ಎಚ್ಚರಿಸು; ಜ್ಞಾಪಿಸು; ಉಪದೇಶಿಸು; (ಬೆಂಕಿ) ಹೊತ್ತಿಸು. पु. ಎಚ್ಚರಿಕೆ.

चितावनी, स्त्री. ಎಚ್ಚರಿಕೆ, ಜೋಕೆ; ಎಚ್ಚರಿಕೆಯ ಮಾತು.

चितेरा, पु. ಚಿತ್ರಗಾರ, ಶಿಲ್ಪಿ.

चितौन, स्त्री. = चितवन.

चित्त, पु. ಮನಸ್ಸು, ಚಿತ್ತ; ಮನೋವೃತ್ತಿ.

चित्ती, स्त्री. ಚುಕ್ಕೆ, ಬೊಟ್ಟು, ಚಿತ್ತು; ಕವಡೆ, ಪಾಚಿಕೆ.

चित्र, पु. ಚಿತ್ರ; ತಿಲಕ, ಬೊಟ್ಟು; ಕುಷ್ಠರೋಗ. वि. ಅದ್ಭುತ, ವಿಚಿತ್ರ; ವಿವಿಧ ಬಣ್ಣದ.

चित्रकार, पु. ಚಿತ್ರಗಾರ.

चित्रकारी, स्त्री. ಚಿತ್ರಕಲೆ.

चित्रपट, पु. ಚಿತ್ರ ಬರೆಯುವ ಬಟ್ಟೆ ಅಥವಾ ಕಾಗದ; ಚಿತ್ರದ ತೆರೆ; ಚಲನ ಚಿತ್ರ; ಚೀಟೀ ಬಟ್ಟೆ.

चित्रसारी, स्त्री. ಚಿತ್ರಗಳಿಡುವ ಮನೆ, ಚಿತ್ರಶಾಲೆ.

चित्रहस्त, पु. ಲಾಠಿಯ ಒಂದು ವರಿಸೆ.

चित्रित, वि. ಚಿತ್ರಿಸಿದ; ಕಸೂತಿ ಕೆಲಸ ಮಾಡಿರುವ; ಚುಕ್ಕೆ ಚುಕ್ಕೆಯಾದ; ಚೀಟೀ (ಬಟ್ಟೆ).

चिथड़ा, पु. ಹರಕುಬಟ್ಟೆ, ಚಿಂದಿ, ಕಂಥೆ

चिथाड़ना, सक्रि. ಹರಿ, ಸೀಳು; ಚೂರು ಚೂರು ಮಾಡು; ಮಾನ ಕೆಡಿಸು.

चिनक, स्त्री. ನವೆ, ಉರಿ, ತೀಟೆ.

चिनकबाई, स्त्री. ಸಂಧಿವಾತ.

चिनगना, अक्रि. ನೋವಾಗು, ಕೊಡೆಯು.

चिनगारी, स्त्री. ಅಗ್ನಿಕಣ, ಕಿಡಿ.

चिनगी, स्त्री. ಕಿಡಿ.

चिनिया, वि. ಬಿಳಿಯ; ಚೀನಾದೇಶದ. चिनिया बादाम = ನೆಲಗಡಲೆ.

चिन्हारी, स्त्री. ಗುರುತು, ಪರಿಚಯ.

चिपकना, अक्रि. ಅಂಟಿಕೊಳ್ಳು; ಅಪ್ಪಿಕೊಳ್ಳು; ಅವುಚಿಕೊಳ್ಳು.

चिपकाना, सक्रि. ಅಂಟಿಸು, ಹಚ್ಚಿಸು, ಚಿಗಟಾಯಿಸು; ಅವುಚು.

चिपचिपा, वि. ಜಿಗಟಾದ, ಅಂಟಾದ.

चिपचिपाना, अक्रि. ಜಿಗಟಾಗಿರು, ಅಂಟು ಅಂಟಾಗಿರು; ಅಂಟಿಕೊ.

चिपचिपाहट, स्त्री. ಅಂಟು ಅಂಟಾಗಿರುವಿಕೆ, ಜಿಗಟು

चिपटना, अक्रि. = चिपकना.
चिपटा, वि. ಚಪ್ಪಟೆಯಾದ, ಸಪಾಟ
चिपटाना, सक्रि. ಅಂಟಿಸು; ತೇಪೆ ಹಾಕು.
चिपड़ी, चिपरी, स्त्री. ಬೆರಣಿ, ಕುರುಳು.
चिप्पड़, पु. ಚಪ್ಪಟೆಯಾದ ಚೂರು, ಚಕ್ಕೆ; ಬಿಲ್ಲೆ; ಬಚ್ಚು.
चिप्पी, स्त्री. ಸಣ್ಣ ಚೂರು; ಬೆರಣಿ.
चिबिल्ला, वि. ಹುಡುಗತನದ; ತಿಳಿಯದ.
चिबुक, पु. ಚಿಬುಕ, ಗಡ್ಡ, ಗಲ್ಲ
चिमटना, अक्रि. ಅಂಟಿಕೊ; ಅಪ್ಪಿಕೊ; ತಬ್ಬಿಕೊ; ಕಚ್ಚಿಕೊ; ಬೆನ್ನಟ್ಟು.
चिमटा, पु. ಇಕ್ಕಳ, ಪಟಕಾರು; ಚಿಮುಟ
चिमटाना, सक्रि. ಅಂಟಿಸು, ಹತ್ತಿಸು, ಚಿಗಟಾಯಿಸು. अक्रि. ಅಂಟು.
चिमटी, स्त्री. ಸಣ್ಣ ಇಕ್ಕಳ; ಚಿಮುಟ
चिमड़ा, वि. = चीमड़.
चियां, पु. ಹುಣಸೇ ಬೀಜ, ಹುಣಸೇ ಬಿತ್ತು; ಬೀಜ, ವಾಟೆ, ಗೊರಟೆ.
चिरक, पु. ಕೊಳೆ; ಕೊಳಕು; ಮಲ.
चिरकना, अक्रि. ಸ್ವಲ್ಪ ಸ್ವಲ್ಪವಾಗಿ ಅಥವಾ ತಿಣಿಕಿ ತಿಣಿಕಿ ಪಾಯಖಾನೆ ಮಾಡು.
चिरकीन, वि. ಕೊಳಕಾದ; ಮಾಸಿದ. पु. ಸಗಣಿ.
चिरकुट, पु. ಹರಕುಬಟ್ಟೆ, ಚಿಂದಿ, ಕಂಥೆ
चिरजीवी, वि. ಚಿರಂಜೀವಿ, ಅಮರ.
चिरना, अक्रि. ಬಿರಿ; ಹರಿ; ಸೀಳು.
चिरम, पु. ಚರ್ಮ; ತೊಗಲು; ಚಕ್ಕಳ.
चिरमी, वि. ಚರ್ಮದ, ಚಕ್ಕಳದ.
चिरमिटी, स्त्री. ಗುಲಗಂಜಿ.
चिरवाई, स्त्री. ಸೀಳುವಿಕೆ; ಸೀಳುವುದರ ಕೂಲಿ.
चिरवाना, सक्रि. चीरना का प्रे. रूप.
चिराई, स्त्री. ಸೀಳುವಿಕೆ; ಹರಿಯುವಿಕೆ; ಸೀಳುವುದರ ಕೂಲಿ.
चिराग़, पु. ದೀಪ, ಸೊಡರು.
चिराग़दान, पु. ದೀಪದ ಕಂಬ, ಸಮೆ.
चिराग़बत्ती, स्त्री. ದೀಪ; ದೀಪದ ಬತ್ತಿ.
चिराग़ी, स्त्री. ಗೋರಿಯ ಮುಲ್ಲಾಗೆ ದೀಪ ಹಚ್ಚುಸುವುದಕ್ಕಾಗಿ ಕೊಡುವ ಕಾಣಿಕೆ.
चिराना, सक्रि. ಸೀಳಿಸು; ಸಿಗಿಸು, ಹರಿಸು. वि. ಪುರಾತನ, ಹಳೆಯ.
चिरायंध, स्त्री. ಉರಿಯುವ ಕೂದಲು ಮಾಂಸ ಮುಂತಾದವುಗಳ ದುರ್ಗಂಧ; ಕಮಟು ನಾತ, ಕಮರು.
चिरायता, स्त्री. ಒಂದು ಮೂಲಿಕೆ.
चिराव, पु. ಸೀಳುವಿಕೆ; ಸೀಳು.
चिरारी, चिरौंजी, स्त्री. ಒಂದು ಮರ.
चिरौटा, पु. ಗಂಡು ಗುಬ್ಬಚ್ಚಿ.
चिरौरी, स्त्री. ವಿನಂತಿ, ಪ್ರಾರ್ಥನೆ, ಬೇಡಿಕೆ.
चिलक, स्त्री. ಹೊಳಪು, ಕಾಂತಿ; ನೋವು, ಚಳುಕು.
चिलकना, अक्रि. ಹೊಳೆಯು; ಮಿನುಗುಟ್ಟು; ನೋಯು, ದುಡಿ.
चिलकाना, सक्रि. ಹೊಳಪಿಸು, ಮಿನುಗಿಸು.
चिलग़ोज़ा, पु. ದಾರು ಹಣ್ಣು.

चिलचिलाता, वि. ದಹಿಸುವ, ಉರಿಯುವ. चिलचिलाती धूप = ಕಡು ಬಿಸಿಲು, ಉರಿ ಬಿಸಿಲು.

चिलचिलाना, अक्रि. ಅರಚು; ಕಿರಚು; ಚೀರು.

चिलड़ा, पु. ಎರೆಯಪ್ಪ; ದೋಸೆ.

चिलता, पु. ಯುದ್ಧ ಕವಚ

चिलबिला, वि. ಚಪಲವುಳ್ಳ; ಚಂಚಲ

चिलम, स्त्री. ಹುಕ್ಕಾದಲ್ಲಿ ಹೊಗೆಸೊಪ್ಪನ್ನಿಟ್ಟು ಹೊತ್ತಿಸುವ ಕುಡಿಕೆ, ಚಿಲಿಮೆ.

चिलमची, स्त्री. ದೊಡ್ಡ ಡಬರಿ, ಬೇಸಿನ್

चिलमन, स्त्री. ಬಿದಿರಿನ ತಡಿಕೆ, ತಟ್ಟಿ.

चिलवन, पु. ತಡಿಕೆ, ನೆರಕೆ; ಕಿಟಕಿಯ ಪಡಕು, ಪುಟೀಪು.

चिल्लड़, पु. ಹೇನು; ಸೀರು; ಕೂರೆ.

चिल्ल-पों, स्त्री. ಗದ್ದಲ, ಕೂಗಾಟ.

चिल्ला, पु. ನಲವತ್ತು ದಿವಸಗಳ ಸಮಯ; ನಲವತ್ತು ದಿವಸಗಳ ಸೂತಕ ಅಥವಾ ವ್ರತ, ತೊಗರಿ ಅಥವಾ ಉದ್ದಿನಿಂದ ಮಾಡಿದ ರೊಟ್ಟಿ; ಎರೆಯಪ್ಪ, ದೋಸೆ; ಬಿಲ್ಲಿನ ಹಗ್ಗ, ಹೆದೆ.

चिल्लाना, अक्रि. ಕೂಗಾಡು, ಅರಚು, ಬೊಬ್ಬೆಯಿಡು. चिल्लाना बिल्लाना = ಕೂಗಾಡು, ಅಲು ಅಬ್ಬರಿಸು

चिल्लाहट, स्त्री. ಅರಚುವಿಕೆ, ಕೂಗಾಟ; ಗದ್ದಲ.

चिल्ली, स्त्री. ಚಿಪ್ಪಿ, ಝಿಲ್ಲಿಕೆ; ಸಿಡಿಲು.

चिहुँकना, अक्रि. = चौंकना.

चिहुँटना, अक्रि. ಚಿಟಕೆ ಮುರಿ.

चिहुँटी, स्त्री. ಚಿಟಕೆ, ಜಿಗುಟುವಿಕೆ.

चीं, स्त्री. ಕೀಚು ಧ್ವನಿ; ಸುಕ್ಕು, ತೆರೆ.

चींचीं, स्त्री. ಕೀಚಲು ಧ್ವನಿ.

चीं-चपड़, स्त्री. ಆಕ್ಷೇಪಣೆ, ತಕರಾರು.

चींटा, पु. ದೊಡ್ಡ ಇರುವೆ, ಗೊದ್ದ.

चींटी, स्त्री. ಇರುವೆ.

चीक, स्त्री. ಅರಚುವಿಕೆ; ಕೂಗಾಟ, ಬೊಬ್ಬೆ.

चीकट, स्त्री. ಎಣ್ಣೆಗಸಿ; ಚರಟ, ಬಂಡು; ಜಿಗಟು ಮಣ್ಣು. वि. ಕೊಳೆಯಾದ, ಮಾಸಿದ. पु. ಒಂದು ಬಗೆ ಬಟ್ಟೆ.

चीकना, अक्रि. = चीख़ना.

चीख़, स्त्री. ಅರಚುವಿಕೆ; ಕೂಗಾಟ.

चीखना, सक्रि. ರುಚಿನೋಡು, ಸವಿ.

चीख़ना, अक्रि. ಅರಚು, ಕಿರಚು; ಚೀರು; ಕೂಗಾಡು, ಕಿರುಗುಟ್ಟು.

चीखर, चीखल, पु. ಕೆಸರು; ಬುರದೆ, ಬದಿ, ಕೊಚ್ಚೆ.

चीज़, स्त्री. ವಸ್ತು; ಪದಾರ್ಥ; ಸರಕು, ಮಾಲು; ಒಡವೆ; ಗೀತ, ಪದ; ವಿಷಯ चीज़-बस्त = ಪಾತ್ರೆ ಭಾಂಡೆ; ಗಂಟು ಮೂಟೆ; ಮನೆ ಸಾಮಾನು.

चीठी, स्त्री. ಚೀಟಿ, ಕಾಗದ.

चीढ़, स्त्री ದಾರುಮರ.

चीतना, सक्रि. ಯೋಚಿಸು; ನೆನೆಸು, ಸ್ಮರಿಸು; ಚಿತ್ರಿಸು.

चीतल, पु. ಚುಕ್ಕೆಗಳುಳ್ಳ ಮೃಗ, ಚುಕ್ಕೆದುಪ್ಪಿ, ಸಾರಂಗ; ಚುಕ್ಕೆಗಳುಳ್ಳ ಹಾವು, ಚುಕ್ಕೆ ಹಾವು.

चीता, पु. ಚಿರತೆ, ಚಿರ್ಚ, ಕಿರುಬ, ಸಿವಂಗಿ; ಸಂಕುದಾಳಿ ಗಿಡ.

चीत्कार, पु. ಕೂಗಾಟ, ಗದ್ದಲ.

चीथड़ा, पु. ಹರಕು ಬಟ್ಟೆ, ಚಿಂದಿ, ಕೋರಿ.

चीथना, सक्रि. ಹರಿ, ಸೀಳು, ಸಿಗಿ.

चीन, पु. ಬಾವುಟ, ಧ್ವಜ; ಸೀಸ; ನೂಲು; ಚೀನಾದೇಶ.

चीनांशुक, पु. ಚೀನಾದೇಶದ ರೇಷ್ಮೆ ಬಟ್ಟೆ, ಚೀನಾಂಬರ; ಬನಾತು.

चीना, वि. ಚೀನಾ ದೇಶದವ.

चीनिया, वि. ಚೀನಾದೇಶದ. चीनिया बादाम = ನೆಲಗಡಲೆ, ಶೇಂಗಾ.

चीनी, स्त्री. ಸಕ್ಕರೆ; ಚೀನಾ ಸಕ್ಕರೆ. वि. ಚೀನಾ ದೇಶದ. चीनी मिट्टी = ಚೀನೀ ಮಣ್ಣು, ಪಿಂಗಾಣಿ ಪಾತ್ರೆ ಮಾಡುವ ಮಣ್ಣು. शीतल चीनी = ಗಂಧ ಮೆಣಸು.

चीन्ह, पु. ಕಲೆ, ಗುರುತು, ಚಿಹ್ನೆ; ರುಜು, ಸಹಿ.

चीन्हना, सक्रि. ಗುರುತು ಹಿಡಿ.

चीमड़, वि. ಅದುಮಿದರೆ ಮುರಿಯದೆ ಬಾಗುವ, ಬಳುಕುವ; ಸ್ಥಿತಿಸ್ಥಾಪಕ.

चीर, पु. ಸೀರೆ; ವಸ್ತ್ರ; ಬಟ್ಟೆಯ ಚೂರು; ಆಕಳ ಕೆಚ್ಚಲು; ಧೂಪದ ಮರ. स्त्री. ಸೀಳುವಿಕೆ; ಸೀಳು, ಹರಕು.

चीरघर, पु. ಮರದ ತೊಲೆ ಮೊದಲಾದುವನ್ನು ಕೊಯ್ಯುವ ಕಾರ್ಖಾನೆ

चीरना, सक्रि. ಸೀಳು, ಹರಿ; ಸಿಗಿ; ಕೊಯ್ಯು; ಕೊರೆ.

चीरफाड़, स्त्री. ಸೀಳುವಿಕೆ, ಕೊಯ್ಯುವಿಕೆ; ಶಸ್ತ್ರಕ್ರಿಯೆ.

चीरा, पु. ಗೆರೆಗಳುಳ್ಳ ಪೇಟಾ; ಮೇರೆ ಗಲ್ಲು; ಗಾಯ, ಕಚ್ಚು; ಸೀಳು.

चीरादस्ती, स्त्री. ಅತ್ಯಾಚಾರ, ಬಲಾತ್ಕಾರ, ಜುಲುಂ.

चील, स्त्री. ಹದ್ದು, ಗಿಡಗ.

चीलर, पु. ಬಟ್ಟೆಯ ಹೇನು, ಕೂರೆ.

चीला, पु. ದೋಸೆ; ಎರೆಯಪ್ಪ.

चील्ही, स्त्री. ದೃಷ್ಟಿ ಇಳಿಸುವಿಕೆ, ನಿವಾಳಿ

चीस, स्त्री. ನೋವು, ವೇದನೆ, ಚಳುಕು

चुंगल, पु. ಪಕ್ಷಿ ಅಥವಾ ಮೃಗದ ನಖ, ಪಂಜ; ಹಿಡಿ, ಪಟ್ಟು; ಹಿಡಿತ; ಮುಷ್ಟಿ.

चुंगी, स्त्री. ಒಂದು ಮುಷ್ಟಿ, ಹಿಡಿ; ಸುಂಕ, ಮಹಸೂಲು, "ಅಕ್ಟ್ರಾಯಿ".

चुंघाना, सक्रि. ಹೀರುವಂತೆ ಮಾಡು, ಕುಡಿಸು, ಹೀರಿಸು.

चुंडा, पु. **चुंडी**, स्त्री. ಬಾವಿ.

चुंदी, स्त्री ಜುಟ್ಟು, ಶಿಖೆ.

चुंधलाना, चुंधियाना, अक्रि. ಕಣ್ಣು ಕುಕ್ಕು, ಕೋರೈಸು.

चुंधा, वि. ಮಂದ ದೃಷ್ಟಿಯ, ಕಿರಿಗಣ್ಣಿನ. पु. ಕುದುರೆಯ ಕಣ್ಣುಪಟ್ಟಿ, ಕಣ್ಕಾಪು.

चुंबक, पु. ಮುತ್ತಿಕ್ಕುವವ; ಕಾಮುಕ; ಗ್ರಂಥಗಳನ್ನು ಮೇಲು ಮೇಲಾಗಿ ನೋಡುವವ; ಸೂಜಿಕಲ್ಲು, ಲೋಹ ಚುಂಬಕ.

चुंबन, पु. ಚುಂಬನ, ಮುತ್ತಿಕ್ಕುವಿಕೆ.

चुंबना, सक्रि. ಮುದ್ದಿಡು, ಮುತ್ತಿಕ್ಕು.

चुआई, स्त्री. ಹನಿಹನಿಯಾಗಿ ಬೀಳಿಸುವಿಕೆ, ತೊಟ್ಟಿಕ್ಕಿಸುವಿಕೆ.

चुआती, स्त्री. ಉರಿವ ಕಟ್ಟಿಗೆ, ಕೊಳ್ಳಿ.

चुआन, पु. ತೊಟ್ಟಿಕ್ಕುವಿಕೆ; ಒಸರುವಿಕೆ; ಚವಂಡಿಯ ನೀರು ಬೀಳುವ ಹಳ್ಳ; ಹೊಂಡ; ನಾಲೆ; ಮೋರಿ.

चुआन-खाई, स्त्री. ಹೆಬ್ಬಳ್ಳ.

चुआना, सक्रि. ತಟತಟ ಬೀಳಿಸು; ಬಸಿ, ತೊಟ್ಟಿಕ್ಕಿಸು, ಹನಿಸು; ಭಟ್ಟಿ ಇಳಿಸು.

चुकंदर, पु. ಒಂದು ಬಗೆ ಗೆಣಸು, ಗಾಜಿನ ಗೆಡ್ಡೆ.

चुक, पु. ಹುಳಿರಸ, ಕಾಡಿ.

चुकचुकाना, अक्रि. ಸೋರು, ಒಸರು; ಹನಿ, ಬಸಿ.

चुकता, चुकती, वि. ಋಣಮುಕ್ತ. ಬಗೆಹರಿಸಿದ; ತೀರಿದ; ಸಂದಾಯವಾದ, ಚುಕ್ತ. पु. ಒಂದು ಹಿಡಿ.

चुकना, अक्रि. ಮುಕ್ತಾಯವಾಗು, ಬಗೆಹರಿ; ಸಂದಾಯವಾಗು; ಮುಗಿ, ಪೂರೈಸು; ಒಪ್ಪಿಕೆಯಾಗು. कर चुकना = ಮಾಡಿ ಮುಗಿಸು.

चुकरैंड, स्त्री. = गुंगी.

चुकाई, स्त्री. ಬಗೆಹರಿಸುವಿಕೆ; ತೀರಿಸುವಿಕೆ, ಪೂರೈಸುವಿಕೆ; ಸಂದಾಯ.

चुकाना, सक्रि. ಸಲ್ಲಿಸು, ಚುಕಾಯಿಸು, ತೀರಿಸು; ತೆರು; ಬಗೆಹರಿಸು, ಪೂರೈಸು; ಮುಗಿಸು; ಬೆಲೆಕಟ್ಟು.

चुकौता, पु. **चुकौती**, स्त्री. ಸಾಲ ತೀರಿಸುವಿಕೆ, ಸಂದಾಯ, ಪಾವತಿ; ಚುಕಾಯಿಸುವಿಕೆ, ಚುಕ್ತಾಯ.

चुक्कड़, पु. ಮಣ್ಣಿನ ಬಟ್ಟಲು, ಕುಡಿಕೆ.

चुक्की, स्त्री. ಮೋಸ, ಠಕ್ಕು.

चुक्र, पु. ಹುಳಿ ಹಚ್ಚಿ ಸೊಪ್ಪು; ಹುಳಿರಸ.

चुग़द, पु. ಗೂಬೆ; ದಡ್ಡ, ಹೆಡ್ಡ.

चुगना, सक्रि. ಕೊಕ್ಕಿನಿಂದ ಆಯ್ದು ತಿನ್ನು, ಹೆಕ್ಕಿ ತಿನ್ನು.

चुग़ल, चुग़लखोर, पु. ಚಾಡಿಕೋರ, ಚಾಡಿ ಹೇಳುವವ, ಇಲ್ಲಾಮಲ್ಲಿ, ಪಿಶುನ.

चुग़लख़ोरी, स्त्री. ಚಾಡಿ ಹೇಳುವಿಕೆ. ಹಿಂದಾಡುವಿಕೆ, ಇಲ್ಲಾಮಲ್ಲಿತನ.

चुग़ली, स्त्री. ಚಾಡಿ, ದೂರು, ತಳ್ಳಿ, ಕೊಂಡೆಯ.

चुगाई, स्त्री. ಕೊಕ್ಕಿನಿಂದ ತಿನ್ನುವಿಕೆ ಅಥವಾ ತಿನ್ನಿಸುವಿಕೆ, ಗುಟುಕು ಕೊಡುವಿಕೆ.

चुगाना, सक्रि. ಹಕ್ಕಿಗಳಿಗೆ ಕಾಳು ತಿನ್ನಿಸು, ಗುಟುಕು ಕೊಡು.

चुचकारना, सक्रि. ಮುಂಡಾಡು, ಲಲ್ಲೆಗೈಯು, ಮುದ್ದಾಡು, ಮುದ್ದಿಸು; ತುಟಿ ಚಪ್ಪರಿಸು.

चुचकारी, स्त्री. ಮುದ್ದಾಟ, ಲಲ್ಲೆ.

चुचाना, अक्रि. ಸೋರು; ಒಸರು; ಹನಿ; ತೊಟ್ಟಿಕ್ಕು.

चुचुआना, अक्रि. (ಬಣ್ಣ)ಪ್ರಕಾಶಿಸು; ಬಣ್ಣ ಕಟ್ಟು; ಹಾಡು; ಸಿಳ್ಳು ಹಾಕು.

चुटक, पु. ಚಾವಟಿ, ಕೊರಡ, ಚಬುಕು. स्त्री. ಚಿಟಿಕೆ.

चुटकना, सक्रि. ಚಾವಟಿಯಿಂದ ಹೊಡೆ; ಚಿವುಟು, ಚಿಗಟು; (ಹಾವು) ಕಚ್ಚು.

चुटका, पु. ದೊಡ್ಡ ಚಿಟಿಕೆ.

चुटकियाना, अक्रि. ಚಿಟಿಕೆ ಹೊಡೆ.

चुटकी, स्त्री. ಚಿಟಿಕೆ; ಚಿಟಿಕೆ ಹೊಡೆಯುವಿಕೆ; ಚಿವುಟುವಿಕೆ, ಗಿಂಡುವಿಕೆ, ಜಿಗಟುವಿಕೆ; ಭಿಕ್ಷೆ, ತಿರುಪೆ; ಒಂದು ಬಗೆ ಜರತಾರಿ, ಸರಿಗೆ. चुटकी बजाना = ಚಿಟಿಕೆ ಮುರಿ.

चुटकुला, पु. ಚಮತ್ಕಾರದ ಮಾತು; ಮದ್ದಿನ ಗುಳಿಗೆ, ಸಿದ್ಧೌಷಧ.

चुटपुट, चुटफुट, स्त्री. ಚಿಲ್ಲರೆ ಖರ್ಚು; ಚಿಲ್ಲರೆ ಸಾಮಾನು.

चुटपुटाना, सक्रि. ಹುರಿ

चुटिया, स्त्री. ಜುಟ್ಟು, ಶಿಖೆ.

चुटियाना, सक्रि. ಗಾಯಪಡಿಸು; ನೋಯಿಸು; ಜುಟ್ಟು ಹಿಡಿ.

चुटीला, वि. ಗಾಯಹೊಂದಿದ; ಜಜ್ಜಿದ; ಉತ್ಕೃಷ್ಟ. पु. ಹೆಣೆದ ಕೂದಲು, ಹೆರಳು.

चुटैल, वि. ಗಾಯಹೊಂದಿದ.

चुड़िहारा, पु. ಬಳೆ ಮಾಡುವವ ಅಥವಾ ಮಾರುವವ, ಬಳೆಗಾರ.

चुड़िहारिन, स्त्री. ಬಳೆ ಮಾಡುವವಳು ಅಥವಾ ಮಾರುವವಳು, ಬಳೆಗಾತಿ.

चुड़ैल, स्त्री. ಪಿಶಾಚಿನಿ, ಡಾಕಿನಿ, ಮಾರಿ; ಕುರೂಪಿನಿ; ಕ್ರೂರ ಸ್ವಭಾವದವಳು.

चुनचुना, वि. ತುರಿಸುವ, ನವೆಯಾಗುವ. पु. ಹೊಟ್ಟೆಯಲ್ಲಿರುವ ಸಣ್ಣ ಕ್ರಿಮಿ, ಕಿಲಿಬಿಟೆ ಹುಳು.

चुनचुनाना, अक्रि. ತೀಟೆಯಾಗು, ತುರಿಸು, ನವೆಯಾಗು.

चुनचुनाहट, स्त्री. ತೀಟೆ, ನವೆ; ಕಸರು.

चुनट, चुनन, स्त्री. ನಿರಿಗೆ, ಮಡಿಕೆ, ಗಳಿಗೆ, ಮಡಿಪು.

चुननदार, वि. ನಿರಿಗೆಗಳುಳ್ಳ. चुननदार पायजामा = ನಿರಿ ಚಲ್ಲಣ.

चुनना, सक्रि. ಆಯು. ಆಯ್ದುಕೊ; ಹೆಕ್ಕು; ಆರಿಸು, ಚುನಾಯಿಸು; ಶೇಖರಿಸು; ಜೋಡಿಸು; ಮಡಿಸು, ನಿರಿಗೆ ಹಿಡಿ; (ಗೋಡೆ) ಎಬ್ಬಿಸು.

चुनरी, स्त्री. ನಡುನಡುವೆ ಚುಕ್ಕೆಗಳುಳ್ಳ ಬಣ್ಣದ ಬಟ್ಟೆ, "ಚುನಡಿ" ಬಟ್ಟೆ; ರತ್ನದ ಸಣ್ಣ ಕಲ್ಲು.

चुनवां, वि. ಆರಿಸಿದ, ಆಯ್ದ; ಚುನಾಯಿಸಿದ, ಚುನಾಯಿತ.

चुनवाई, स्त्री. ಇಟ್ಟಿಗೆ ಕೆಲಸದ ಕೂಲಿ.

चुनवाना, सक्रि. "चुनना" का प्रे. रूप.

चुनां, अव्य. ಹೀಗೆ, ಇಂತು.

चुनांचे, क्रिवि. ಈ ಪ್ರಕಾರ, ಹಾಗೆಯೆ, ಅದರಂತೆಯೆ; ಇದರಿಂದ.

चुनाई, स्त्री. ಆರಿಸುವಿಕೆ; ಆಯ್ಕೆ, ಚುನಾಯಿಸುವಿಕೆ; ಗೋಡೆ ಕಟ್ಟುವ ರೀತಿ; ಆರಿಸುವುದರ ಕೂಲಿ; ಗೋಡೆ ಕಟ್ಟುವುದರ ಕೂಲಿ.

चुनाना, सक्रि. "चुनना" का प्रे. रूप.

चुनाव, पु. ಆರಿಸುವಿಕೆ, ಚುನಾವಣೆ, ಆಯ್ಕೆ.

चुनिंदा, चुनीदा, वि. ಆರಿಸಿದ, ಚುನಾಯಿಸಿದ; ಉತ್ಕೃಷ್ಟ.

चुनियाना, सक्रि. ನಿರಿ ಹಿಡಿ; ಮಡಿಸು.

चुनीं, क्रिवि. ಈ ತೆರನಾಗಿ, ಇಂತು.

चुनी, स्त्री. = चुन्नी.

चुनौटी, स्त्री. ಸುಣ್ಣದ ಡಬ್ಬಿ, ಸುಣ್ಣ

ಕಾಯಿ.

चुनौती, स्त्री. ದುರ್ಬೋಧನೆ; ಪ್ರೇರಣೆ; ಯುದ್ಧಕ್ಕೆ ಕರೆಯುವಿಕೆ. चुनौती का पत्र = ಕಡೆಯ ತೀರ್ಮಾನದ ಪತ್ರ; ಎದುರಾಳಿಗೆ ಕಳುಹಿಸುವ ಆಖೈರು ಪತ್ರ, ಕಟ್ಟಕಡೆಯ ಪತ್ರ.

चुन्नी, स्त्री. ಸಣ್ಣ ಕೆಂಪು ಕಲ್ಲು, ಮಾಣಿಕ್ಯ; ಪುಡಿ, ಚಕ್ಕೆ ಪುಡಿ; ಕಾಗೆ ಬಂಗಾರ, ಚಮಕಿ, ಗುನ್ನಾಂಪಟ್ಟೆ, ಬೇಗಡೆ.

चुप, वि. ಮೌನ; ಸುಮ್ಮಗಿರುವ, ಗುಮ್ಮನಿರುವ; ನಿಶ್ಶಬ್ದ. स्त्री. ಮೌನ, ನಿಶ್ಶಬ್ದತೆ. अव्य. ಸದ್ದು, ಖಾಮೋಷ್

चुपका, वि. ಮೌನವಾದ, ಗುಮ್ಮನಾದ, ಸುಮ್ಮನಿರುವ. चुपके से = ಮೌನವಾಗಿ, ಗುಮ್ಮನೆ, ಸದ್ದಿಲ್ಲದೆ, ಗುಟ್ಟಾಗಿ

चुपकाना, अक्रि. ಸುಮ್ಮನಿರು, ಮೌನವಾಗಿರು.

चुपकी, स्त्री. ಮೌನ, ನಿಶ್ಶಬ್ದತೆ, ಗಪ್‌ಚಿಪ್.

चुपचाप, क्रिवि. ಮೌನವಾಗಿ, ಸುಮ್ಮನೆ; ಮೆತ್ತಗೆ; ಗುಟ್ಟಾಗಿ.

चुपचुपाना, अक्रि. ಸುಮ್ಮನಿರು, ಮೌನ ತಾಳು.

चुपड़ना, सक्रि. ಸವರು, ಬಳಿ, (ಬೆಣ್ಣೆ) ಹಚ್ಚು; ಗೋಲ್ ಮಾಡು, ಮುಖಸ್ತುತಿ ಮಾಡು.

चुपड़ा, वि. ಎಣ್ಣೆ ಹಚ್ಚಿದ; ಜಿಡ್ಡಾದ; ನಯವಾದ.

चुप्पा, वि. ಮೌನಿ.

चुप्पी, स्त्री. ಮೌನ, ಸುಮ್ಮನಿರುವಿಕೆ.

चुबलाना, अक्रि. ಲೊಚಗುಟ್ಟು, ಚಪ್ಪರಿಸು, ಜಬ್ಬು.

चुभकना, अक्रि. ನೀರಿನಲ್ಲಿ ಮುಳುಗು.

चुभकी, स्त्री. ಮುಳುಗುವಿಕೆ, ಗೋತ.

चुभना, अक्रि. ಚುಚ್ಚು; ಬೆಟ್ಟು, ಹೊಗು, ತಾಗು; ಕುಕ್ಕು.

चुभलाना, अक्रि. ಲೊಚಗುಟ್ಟು, ಚಪ್ಪರಿಸು.

चुभाना, चुभोना, सक्रि. ಚುಚ್ಚು; ಇರಿ, ತಿವಿ; ನೋಯಿಸು.

चुमकार, स्त्री. ತುಟಿ ಚಪ್ಪರಿಸುವಿಕೆ; ಮುದ್ದಾಟ, ಲಲ್ಲೆ.

चुमकारना, सक्रि. ತುಟಿ ಚಪ್ಪರಿಸು; ಪ್ರೀತಿ ತೋರಿಸು; ಮುದ್ದಿಸು, ಲಲ್ಲೆಗೈಯು, ಮುದ್ದಾಡು; ಸಂತವಿಸು.

चुमाना, सक्रि. ಮುತ್ತಿಕ್ಕಿಸು.

चुम्मक, पु. ಲೋಹಚುಂಬಕ.

चुम्मा, पु. ಚುಂಬನ, ಮುತ್ತಿಕ್ಕುವಿಕೆ.

चुर, पु. ಕಾಡು ಮೃಗಗಳ ಇಕ್ಕೆ, ಗುಹೆ, ಗವಿ.

चुरकना, अक्रि. ತೊದಲು, ಗೊಜಗು; ಮುರಿ, ಒಡಿ.

चुरकी, स्त्री. ಜುಟ್ಟು, ಶಿಖೆ.

चुरकुट, चुरकुस, वि. ಪುಡಿಪುಡಿಯಾದ, ನುಚ್ಚುನೂರಾದ. पु. ಪುಡಿ, ಚೂರ್ಣ.

चुरनहार, स्त्री. ಗೋಕರ್ಣ.

चुरना, अक्रि. ಬೇಯು; ಪಕ್ವವಾಗು.

चुरमुर, स्त्री. ಪುಡಿ ಮಾಡುವಿಕೆ.

चुरमुरा, वि. ಪೆಡಸಾದ, ಗರಗು.

चुरमुराना, अक्रि. ಚರಚರನೆ ಮುರಿ.

चुरवाना, सकि. "चुराना" का प्रे. रूप.
चुराना, सकि. ಕದಿ, ಅಪಹರಿಸು; ತಪ್ಪಿಸಿಕೊಳ್ಳು, ಮೈಗಳ್ಳತನವಾಡು, ಬೇಯಿಸು.
चुरुट, पु. ಹೊಗೆಸುತ್ತು, ಚುರುಟು, ಹೊಗೆಬತ್ತಿ, ಚುಟ್ಟಾ.
चुर्री, स्त्री. ಸುಡುಸುಡಿ; ಮೂದಲಿ.
चुल, स्त्री. ನವೆ, ತುರಿ; ತೀಟೆ, ತಿಂಡಿ.
चुलचुलाना, अक्रि. ನವೆಯಾಗು, ತುರಿಸು; ತೀಟೆಹತ್ತು; ಒಯ್ಯಾರವಾಡು.
चुलचुली, स्त्री. ನವೆ, ತೀಟೆ; ಚಪಲ; ಒಯ್ಯಾರ.
चुलबुला, वि. ಒಯ್ಯಾರದ; ಚಂಚಲದ.
चुलबुलाना, अक्रि. ಒಯ್ಯಾರವಾಡು; ಚಂಚಲಪಡು; ಚಡಪಡಿಸು, ಹಾರ್‍ಯಾಡು.
चुलबुलापन, पु. **चुलबुलाहट**, स्त्री. ಒಯ್ಯಾರ, ಬಿಂಕ; ಚಪಲತೆ.
चुलाना, सकि. = चुआना.
चुल्लू, पु. ಅಂಗೈ; ಅಂಗೈಯ ತಗ್ಗು, ಕುಡಿತೆ, ಚುಲುಕ.
चुवाना, सकि. = चुआना.
चुसकी, स्त्री. ಗುಟುಕು, ಹೀರು.
चुसना, अक्रि. ಹೀರಲ್ಪಡು; ಹಿಂಡಿ ಹೋಗು, ಹಿಂಡಲ್ಪಡು; ಇಂಗಿ ಹೋಗು; ನಿಸ್ಸಾರವಾಗು.
चुसनी, स्त्री. ಮಕ್ಕಳಿಗೆ ಹಾಲು ಕುಡಿಸುವ ಕೊಳವೆ; ಮಕ್ಕಳು ಬಾಯಲ್ಲಿಟ್ಟುಕೊಂಡು ಚೀಪುವ ಆಟದ ಸಾಮಾನು.
चुसाना, सकि. "चूसना" का प्रे. रूप.
चुस्त, वि. ಬಿಗಿಯಾದ, ಬಿಗುವಾದ, ಬಿಮ್ಮನಿರುವ; ಚುರುಕಾದ, ಸೂಟಿ; ಗಟ್ಟಿಯಾದ.
चुस्ती, स्त्री. ಬಿಗುವು, ಬಿಗಿ; ಚಟುವಟಿಕೆ, ಚುರುಕು; ದೃಢತೆ.
चुहचुहा, **चुहचुहाता**, वि. ರಸ ಸುರಿಯುವ; ಸರಸ, ರಸಿಕ.
चुहचुहाना, अक्रि. ರಸ ಸುರಿಯು, ರಸ ತುಳುಕು; ಪಕ್ಷಿಗಳಂತೆ ಕೂಗು.
चुहचुही, स्त्री. ಒಂದು ಬಗೆ ಹಕ್ಕಿ.
चुहटना, सकि. ತುಳಿ, ಮೆಟ್ಟು.
चुहल, स्त्री. ವಿನೋದ, ಚಲ್ಲಾಟ; ಹಾಸ್ಯ; ಉಲ್ಲಾಸ.
चुहलबाज़, वि. ಹಾಸ್ಯಗಾರ, ನಕಲಿ ಮಾಡುವವ, ವಿನೋದಗಾರ.
चुहिया, स्त्री. ಚಿಕ್ಕ ಇಲಿ; ಹೆಣ್ಣಿಲಿ.
चूं, पु. ಹಕ್ಕಿಗಳ ಧ್ವನಿ, ಉಲಿತ. अव्य. ಅದುದರಿಂದ, ಆದರೆ. चूं करना = ವಿರೋಧಿಸು, ಆಕ್ಷೇಪಿಸು. चूं-चारा = ಜಗಳ, ತಕರಾರು.
चूंकि, क्रिवि. ಏಕೆಂದರೆ, ಈ ಕಾರಣದಿಂದ.
चूंदरी, स्त्री. = चुनरी.
चूक, पु. ನಿಂಬೆ ಹುಣಸೆ ಮುಂತಾದ ಹಣ್ಣುಗಳಿಂದ ತಯಾರಾದ ಹುಳಿ ರಸ, ಕಾಡಿ, ಹುಳಿ ಹಬ್ಬೆ. वि. ಬಹಳ ಹುಳಿಯಾದ. स्त्री. ತಪ್ಪು, ಅಶುದ್ಧ; ತಪ್ಪಿತ; ದೋಷ; ಮೋಸ; ಅಜೀರ್ಣಕ್ಕೆ ಔಷಧ. भूल चूक = ತಪ್ಪುನೆಪ್ಪು.
चूकना, अक्रि. ತಪ್ಪಾಗು, ತಪ್ಪು; ತಪ್ಪಿಸು; ನುಣುಚು; ಕಳೆದುಹೋಗು.

चूका, पु. ಹುಳಿ ಹಚ್ಚಿ.
चूची, स्त्री. ಮೊಲೆ; ಮೊಲೆಯ ತೊಟ್ಟು, ಚೂಚುಕ.
चूज़ा, पु. ಕೋಳಿ ಮರಿ.
चूड़ा, स्त्री. ಜುಟ್ಟು. ಶಿಖೆ; ಚೌಲ ಕರ್ಮ; ಬಾವಿ; ಗುಲಗಂಜಿ. पु. ಕಂಕಣ, ಕಡಗ; ಚೂಡಾಬಳೆ; ಆನೆಯ ಕೋರೆ ಹಲ್ಲಿಗೆ ಹಾಕುವ ಬಳೆ, ಅಣಸು.
चूड़िया, स्त्री. ಬಳೆ; ಗೀರಿನ ಬಟ್ಟೆ.
चूड़ी, स्त्री. ವಲಯ; ಬಳೆ, ಕಡಗ; "ಗ್ರಾಮಫೋನ್ ಪ್ಲೇಟು".
चूड़ीदार, वि. ನಿರಿಗೆ ಹಿಡಿದ, ಮಡಿಕೆ ಗಳುಳ್ಳ.
चूत, पु. ಮಾವಿನ ಮರ. स्त्री. ಉಪಸ್ಥ, ಭಗ.
चूतड़, पु. ಪೃಷ್ಠ, ನಿತಂಬ; ಪಿರ್ರೆ, ಕುಂಡೆ.
चूतिया, वि. ದಡ್ಡ, ಮೂಢ.
चून, पु. ಪುಡಿ, ಹಿಟ್ಟು; ಅರೆದ ಬೇಳೆ.
चूना, अक्रि. ತೊಟ್ಟುತೊಟ್ಟಾಗಿ ಬೀಳು, ತೊಟ್ಟಿಕ್ಕು, ಹನಿ; ಸೋರು, ಒಸರು; ಉಗು, ಜೋರು; ಗರ್ಭಸ್ರಾವವಾಗು; ಉದುರು. पु. ಸುಣ್ಣ.
चूनाकारी, स्त्री. ಸುಣ್ಣ ಬಳಿಯುವಿಕೆ, ಸುಣ್ಣದ ಕೆಲಸ.
चूनादानी, स्त्री. ಸುಣ್ಣಕಾಯಿ, ಸುಣ್ಣದ ಡಬ್ಬಿ.
चूनी, स्त्री. ನುಚ್ಚು, ರವೆ; ಸಣ್ಣ ರತ್ನ.
चूमना, सक्रि. ಮುದ್ದಿಡು, ಚುಂಬಿಸು.
चूमा, पु. ಚುಂಬನ, ಮುದ್ದಾಟ.
चूमाचाटी, स्त्री. ಮುದ್ದಾಟ, ಅಲ್ಲೆ, ಮುದ್ದು; ಚಕ್ಕಂದ.
चूर, वि. ಮುಳುಗಿದ, ತನ್ಮಯನಾದ; ಅಮಲೇರಿದ, ಮದಿಸಿದ; ನೈಮರೆತ. पु. ಪುಡಿ, ಚೂರ್ಣ; ಮುರ.ಕು; ಹುಡಿ. चूर चार = ಚೂರು ಪಾರು, ತುಂಡು ತುಣುಕು.
चूरन, पु. ಚೂರ್ಣ; ಕಾಲು ಕಡಗ.
चूरमा, पु. ತುಪ್ಪ ಮತ್ತು ಸಕ್ಕರೆ ಬೆರಸಿದ ಗೋಧಿಯ ರೊಟ್ಟಿ ಅಥವಾ ಪೂರಿಯ ಚೂರು, ಮಾಲೀದಿ.
चूरा, पु. ಪುಡಿ, ಚಕ್ಕೆ; ರಂಪದ ಧೂಳು.
चूर्ण, पु. ಚೂರ್ಣ, ಪುಡಿ, ಹುಡಿ.
चूल, पु. ಜುಟ್ಟು, ಕೂದಲು. स्त्री. ಕೂಲು, ನ್ಯಂಬು; ಕೀಲು, ತಿರುಗಣೆ, ಬಿಜಾಗರಿ.
चूल्हा, पु. ಒಲೆ, ಬೆಂಕಿಗೂಡು.
चूसना, सक्रि. ಹೀರು, ಚೀಪು.
चूहड़ा, पु. ಗುಡಿಸುವವ, ಝಾಡಮಾಲಿ
चूहा, पु. ಇಲಿ. पेट में चूहे कूदना = ಹೊಟ್ಟೆಯಲ್ಲಿ ಕಾಗೆಯಾಡು, ಬಹಳ ಹಸಿವೆಯಾಗು.
चूहिया, चूही, स्त्री. ಸಣ್ಣ ಇಲಿ, ಹೆಣ್ಣಿಲಿ
चूहेदान, चूहेदानी, स्त्री. ಇಲಿ ಬೋನು
चूहेमार, पु. ಇಲಿಗಳನ್ನು ಹಿಡಿಯುವವ; ಗಿಡಗ.
चें, चेंचें, स्त्री. ಪಕ್ಷಿಗಳ ಧ್ವನಿ, ಉಲಿ; ಗೊಡ್ಡು ಹರಟೆ, ವಾದಹರಟೆ.
चेंटुआ, पु. ಹಕ್ಕಿಯ ಮರಿ.
चेचक, पु. ಸಿಡುಬು, ಅಮ್ಮ, ಮಸೂರಿಕೆ
चेचकरू, वि. ಸಿಡುಬು ಮೋರೆಯ.

चेट, पु. ನೌಕರ, ಆಳು; ಗಂಡ; ಕುಂಟಣಿಗ, ಡಾಫರ್, ಭಡವಾ.

चेटक, पु. ದಾಸ; ದೂತ; ಇಂದ್ರಜಾಲ, ಬೆಡಗು, ಒಯ್ಯಾರ,

चेटी, स्त्री. ದಾಸಿ, ತೊತ್ತು.

चेत, पु. ಸ್ಮರಣೆ, ನೆನಪು; ಪ್ರಜ್ಞೆ, ಜ್ಞಾನ; ಎಚ್ಚರಿಕೆ; ಜಾಗರೂಕತೆ. स्त्री. ಪ್ರಜ್ಞೆ, ಎಚ್ಚರ, ಚೈತನ್ಯ.

चेतन, पु. ಬುದ್ಧಿ; ಆತ್ಮ; ವಿವೇಕ.

चेतना, अक्रि. ಪ್ರಜ್ಞೆಬರು, ಎಚ್ಚರಗೊಳ್ಳು; ಸಲಹೆಕೊಡು. सक्रि. ತಿಳಿ, ಅರಿ; ವಿಚಾರ ಮಾಡು.

चेता, पु. ಸಲಹೆಕಾರ; ಉಪದೇಶಕ.

चेतावनी, स्त्री. ಎಚ್ಚರಿಕೆ, ಜೋಕೆ.

चेना, पु. ಸಾವೆ, ಸಾವೆಯಕ್ಕಿ.

चेप, पु. ಬಂಕೆ, ಗೋಂದು, ಅಂಟು; ಪಕ್ಷಿಗಳನ್ನು ಹಿಡಿಯಲು ಉಪಯೋಗಿಸುವ ಸರಿ.

चेपदार, वि. ಅಂಟುಅಂಟಾದ, ಬಂಕೆಯಾದ, ಜಿಡ್ಡಾದ.

चेपना, सक्रि. ಅಂಟಿಸು, ಚಿಗಟಾಯಿಸು

चेमीगोई, स्त्री. ಜನಶ್ರುತಿ, ಕಿಂವದಂತಿ

चेल, पु. ವಸ್ತ್ರ, ಶ್ಯಾಲೆ.

चेलकाई, चेलहाई, स्त्री. ಶಿಷ್ಯವರ್ಗ.

चेला, पु. ಶಿಷ್ಯ, ವಿದ್ಯಾರ್ಥಿ; ಆಳು.

चेलिन, चेली, स्त्री. ಶಿಷ್ಯೆ, ವಿದ್ಯಾರ್ಥಿನಿ; ಸೇವಕಿ.

चेल्हवा, पु. ಒಂದು ಬಗೆ ಮೀನು.

चेष्टा, स्त्री. ಅಂಗಚೇಷ್ಟೆ; ಪ್ರಯತ್ನ, ಪ್ರಯಾಸ; ಇಚ್ಛೆ.

चेहरा, पु. ಮುಖ, ಮೋರೆ, ಮೂರ್ತಿ; ಮುಖಭಂಗಿ, ಚಹರೆ, ಮುಖಾಕೃತಿ. चेहरा लिखना = ತಲೆ ತಪ್ಪಿಸಿಕೊಂಡವನ ರೂಪ ಮುಖಾಕೃತಿಗಳ ವರ್ಣನೆ ಬರೆ

चेहरानवीसी, स्त्री. ತಲೆತಪ್ಪಿಸಿಕೊಂಡವನ ಮುಖಾಕೃತಿಗಳ ವರ್ಣನೆ, ಚಹರೆಪಟ್ಟಿ.

चैत, पु. ಚೈತ್ರಮಾಸ.

चैतन्य, पु. ವಿವೇಕ; ಅರಿವು; ಬುದ್ಧಿ; ಆತ್ಮ; ಭಗವಂತ.

चैती, वि. ಚೈತ್ರದ, ಚೈತ್ರಮಾಸಕ್ಕೆ ಸಂಬಂಧಪಟ್ಟ. स्त्री. ಚೈತ್ರಮಾಸದಲ್ಲಿ ಕೊಯ್ಲಿಗೆಬರುವ ಬೆಳೆ,ಹಯುನು ಬೆಳೆ

चैन, पु. ಸುಖ; ಸೌಖ್ಯ; ನೆಮ್ಮದಿ.

चैला, पु. ಕಟ್ಟಿಗೆ, ಸೌದೆ.

चैली, स्त्री. ಕಟ್ಟಿಗೆಯ ಸೀಳು, ಚಕ್ಕೆ.

चोंगला, पु. ಬಿದಿರಿನ ಗಣಿಕೆ.

चोंगा, पु. ಗವಸಣಿಗೆ; ಗೊಟ್ಟ, ಕೊಳವಿ, ಅಂಡೆ; ಆಲಿಕೆ.

चोंच, स्त्री. ಪಕ್ಷಿಯ ಮೂಗು, ಕೊಕ್ಕು, ಚುಂಚು.

चोंडा, पु. ಸಣ್ಣಬಾವಿ; ತುರುಬು, ಹೆರಳು

चोंथ, पु. ಸಗಣಿ; ತೊಪ್ಪೆ.

चोंथना, सक्रि. ಕೆದಕು, ಕೆದರು, ಪರಚು.

चोंधर, वि. ಕಿರುಗಣ್ಣಿನ; ಮಂದ ದೃಷ್ಟಿಯ; ದಡ್ಡ.

चोआ, पु. ಒಂದು ಪರಿಮಳ ದ್ರವ್ಯ, ಗಂಧಸಾರ; ಮರದಿಂದುದುರಿದ ಹಣ್ಣು

चोकर, पु. ನುಚ್ಚು, ತವುಡು, ಹೊಟ್ಟು;

ಕೊಬ್ಬೊಟ್ಟು, ಗೊಳಲಿ.

चोखा, वि. ಬೆರಕೆ ಇಲ್ಲದ, ಅಪ್ಪಟ; ಶುದ್ಧ, ಒಳ್ಳೆಯ; ಸಾಚಾ, ಪ್ರಾಮಾಣಿಕ; ನಂಬಿಕೆಯಾದ; ಮೊನಚಾದ, ಹರಿತವಾದ. पु. ಆಲುಗೆಡ್ಡೆಯ ಬಜ್ಜಿ.

चोगा, पु. ಪಕ್ಷಿಗಳ ಆಹಾರ.

चोग़ा, पु. ಉದ್ದವಾದ ಅಂಗಿ, ನಿಲುವಂಗಿ, ಝುಗೆ, ಚೊಗೆ.

चोचला, पु. ಬೆಡಗು, ಥಳುಕು, ಹಾವಭಾವ, ಒಯ್ಯಾರ.

चोचलेबाज़, वि. ಬೆಡಗಿನವ, ಒಲಪುಗಾರ.

चोचलेबाज़ी, स्त्री. ಥಳುಕು ಮಾಡುವಿಕೆ, ಒಯ್ಯಾರ, ಬೆಡಗು.

चोज, पु. ನಕಲಿ, ಪರಿಹಾಸ, ವಿನೋದ, ರೋಡಾಟ.

चोट, स्त्री. ಧಕ್ಕೆ, ಢಿಕ್ಕಿ; ಹೊಡೆತ, ಪೆಟ್ಟು; ಏಟು, ಗಾಯ; ಮೇಲೆ ಬೀಳುವಿಕೆ, ಧಾಳಿ, ಎರಗುವಿಕೆ; ಕೆಡಕು; ಉಪಹಾಸ, ಗೇಲಿ, ರೋಡಾಟ, ಎಗತಾಳ; ಮೋಸ; ಬಾರಿ, ಸರ್ತಿ, ಸಾರೆ, ಸಲ. चोट चपेट = ಘಾಯ, ಜಖಂ.

चोटा, पु. ಕಾಕಂಬಿ; ವಟ್ಟ, ಸೋಡಿ; ಮುಂಗಡ.

चोटी, स्त्री. ಜುಟ್ಟು, ಶಿಖೆ; ಮುಡಿ, ತುರುಬು; ಹೆರಳು, ಜಡೆ; ಜಡೆ ಕಟ್ಟುವ ದಾರ; ಜಡೆ ಬಿಲ್ಲೆ, ನಾಗರ; ಪಕ್ಷಿಗಳ ಜುಟ್ಟು, ತುಪ್ಪಳ; ಶಿಖರ, ತುದಿ.

चोटीदार, वि. ತುದಿ ಕಡೆಗೆ ಸಣ್ಣದಾಗುವ, ಗೋಪುರಾಕಾರದ.

चोट्टा, पु. ಕಳ್ಳ, ಚೋರ.

चोड़, पु. ಉತ್ತರೀಯ, ಅಂಗವಸ್ತ್ರ.

चोदना, स्त्री. ವಿಧಿ, ಅಜ್ಞೆ; ಪ್ರೇರಣೆ; ಯೋಗಾಭ್ಯಾಸ. सक्रि. ಮೈಥುನ ಮಾಡು, ಸಂಭೋಗಮಾಡು, ಹಡು.

चोप, पु. ಆಸೆ, ಬಯಕೆ; ಅಭಿರುಚಿ; ಚಟ; ಉತ್ಸಾಹ, ಜೋಕು.

चोब, स्त्री. ಸ್ತಂಭ, ಕಂಬ; ಕೋಲು; ನಗಾರಿ ಕೋಲು; ರಾಜದಂಡ, ಬೆಳ್ಳಿ ಕಟ್ಟಿಗೆ.

चोबकारी, स्त्री. ಒಂದು ಬಗೆ ಕಸೂತಿ ಕೆಲಸ.

चोब-चीनी, स्त्री. ಒಂದು ಮೂಲಿಕೆ.

चोबदार, पु. ದಂಡ ಹಿಡಿಯುವವ, ದಂಡಧರ, ಕಂಚುಕಿ, ಕಟ್ಟಿಗೆಯವ.

चोबा, पु. ಮೊಳೆ; ಗೂಟ; ಕಂಬ.

चोभा, पु. ನಖ; ತೂತು; ಆಹಾರ, ಎರೆ; ಆಹುತಿ, ಹವನ.

चोर, पु. ಕಳ್ಳ, ಚೋರ. वि. ಕಪಟದ, ಮೋಸದ; ಕಳ್ಳ.

चोरकट, चोरटा, पु. ಕಳ್ಳ, ಕದಕ.

चोरख़ाना, पु. ಕಳ್ಳಕೋಣೆ.

चोरटी, स्त्री. ಕಳ್ಳಿ, ಕಳ್ಳತಿ.

चोरदरवाज़ा, पु. ಕಳ್ಳ ಕಂಡಿ, ದಿಡ್ಡೀ ಬಾಗಿಲು.

चोरनी, स्त्री. ಕಳ್ಳಿ, ಕಳ್ಳತಿ, ಕಳ್ಳಿ.

चोरबालू, पु. ಕಳ್ಳುಸುಬು.

चोरमहल, पु. ಉಪಪತ್ನಿಗಳನ್ನಿರಿಸುವ ಗುಪ್ತವಾದ ಮನೆ.

चोरमीचनी, स्त्री. = आंख-मीचली.

चोरी, स्त्री. ಕದಿಯುವಿಕೆ, ಕಳವು, ಕಳ್ಳತನ, ಚೋರಿ, ತುಡುಗು.

चोल, पु. ಚೋಳದೇಶ; ಚೋಳದೇಶದವರು.

चोला, पु. ಸನ್ಯಾಸಿಗಳ ಉದ್ದವಾದ ಅಂಗಿ; ದೇಹ, ಶರೀರ, ಮೈ.

चोली, स्त्री. ರವಿಕೆ, ಕುಪ್ಪಸ. चोली दामन का साथ = ಬಹಳ ಘನಿಷ್ಠ ಸ್ನೇಹ, ಗಲಸ್ಯ ಕಂಠಸ್ಯ.

चौंक, स्त्री. ಬೆಚ್ಚುಬೀಳುವಿಕೆ, ಬೆರಗು.

चौंकना, अक्रि. ಬೆಚ್ಚು, ತಬ್ಬಿಬ್ಬುಗೊಳ್ಳು, ಬೆರಗಾಗು, ಅಡಬಡಿಸು; ತೆಪ್ಪರಿಸು; ಎಚ್ಚರಗೊಳ್ಳು.

चौंकाना, सक्रि. चौंकना का प्रे. रूप.

चौंतरा, पु. = चबूतरा.

चौंतीस, वि. ಮೂವತ್ತನಾಲ್ಕು.

चौंध, स्त्री. ಕಣ್ಣು ಕುಕ್ಕುವಿಕೆ, ಕೋರೈಸುವಿಕೆ.

चौंधियाना, अक्रि. ಕಣ್ಣು ಕುಕ್ಕು; ದೃಷ್ಟಿ ಮಂದವಾಗು.

चौंर, पु. ಚಾಮರ.

चौंरी, स्त्री. ಚಾಮರ, ಚವುರಿ; ಜಡೆ ಹಾಕಿ ಕಟ್ಟುವ ದಾರ.

चौंसठ, वि. ಅರವತ್ತನಾಲ್ಕು.

चौ, वि. ನಾಲ್ಕು (ಸಮಾಸದಲ್ಲಿ). पु. ನೇಗಿಲಿನ ಮೊಳೆ, ಗುಳ; ದವಡೆಹಲ್ಲು.

चौअन्नी, स्त्री. ನಾಲ್ಕಾಣೆಯ ನಾಣ್ಯ, ಪಾವಲಿ.

चौआ, पु. = चौवा.

चौक, पु. ಅಂಗಳ; ವೇದಿಕೆ; ಹಸೆಜಗಲಿ, ಹಸೆ; ಊರಂಗಳ, ಚೌಕ; ಮುಂದಿನ ನಾಲ್ಕು ಹಲ್ಲುಗಳು; ಪಗಡೆಯಾಟದ ಹಲಗೆ, ಹಾಸಂಗಿ.

चौकड़, वि. ಉತ್ತಮವಾದ; ಉತ್ಕೃಷ್ಟವಾದ; ಗಟ್ಟಿಯಾದ.

चौकड़ा, पु. ಎರಡೆರಡು ಮುತ್ತುಗಳುಳ್ಳ ಚಳತುಂಬು.

चौकड़ी, स्त्री. ನಾಗಾಲೋಟ, ನೆಗತ; ಕೊಣಕು; ನಾಲ್ಕು ಜನರ ಕೂಟ; ಜುಮುಕಿ; ಚತುರ್ಯುಗ; ಚಪ್ಪಣಕಾಲು ಹಾಕಿ ಕೂಡುವಿಕೆ, ಪದ್ಮಾಸನ; ನಾಲ್ಕು ಕುದುರೆ ಸಾರೋಟ್. चौकड़ी भरना = ನೆಗೆ, ಜಿಗಿ. चौकड़ी भूलना = ದಿಗ್ಭ್ರಾಂತನಾಗು; ಕಕಮಕ ಬೀಳು.

चौकन्ना, वि. ಎಚ್ಚರಿಕೆಯುಳ್ಳ, ಜಾಗರೂಕ, ತೆಪ್ಪರಿಸಿದ, ಹುಷಾರಾದ.

चौकस, वि. ಜಾಗರೂಕ, ಹುಷಾರಾದ; ಸರಿಯಾದ; ಚುರುಕಾದ.

चौकसाई, स्त्री. ಎಚ್ಚರಿಕೆ; ಜೋಕೆ.

चौकसी, पु. ಪರೀಕ್ಷಕ; ಮೇಲ್ವಿಚಾರಕ. स्त्री. ಜಾಗರೂಕತೆ; ಎಚ್ಚರಿಕೆ; ಜೋಕೆ, ಹುಷಾರು; ಕಾವಲು.

चौका, पु. ಚೌಕವಾದ ಕಲ್ಲು, ಚಪ್ಪಡಿ ಕಲ್ಲು; ಹಪ್ಪಳ ಲಟ್ಟಿಸುವ ಹಲಗೆ; ಮುಂದಿನ ನಾಲ್ಕು ಹಲ್ಲುಗಳು; ಅಂಗಳ; ಮನೆಯ ತೊಟ್ಟಿ; ಅಡಿಗೆ ಮನೆ; ಸಗಣಿಯಿಂದ ಸಾರಿಸುವಿಕೆ, ಸಾರಣೆ; ನಾಲ್ಕರ ಸಮೂಹ, ಚೌಕ; ಒಂದು ಆಭರಣ; (ಇಸ್ಪೀಟಾಟದಲ್ಲಿ) ನಾಲ್ಕನೆಯ ಒಂದು. चौका बरतन करना =

ಅಡಿಗೆ ಮಾಡಿ ಮುಸರೆ ಪಾತ್ರೆ ತಿಕ್ಕು.

चौकी, स्त्री. ನಾಲ್ಕು ಕಾಲುಗಳುಳ್ಳ ಆಸನ, ನಾಗಾಲಿ, ಕುರ್ಚಿ; ಕಾಲುಮಣೆ; ಪೀಠ; ದೇವಸ್ಥಾನದ ಬಾಗಿಲು; ನೈವೇದ್ಯ, ಬಲಿ; ಅಡ್ಡಿಕೆ; ತಂಗುವ ಸ್ಥಳ, ಬಿಡಾರ; ಪಾಳೆಯ, ಬೀಡು; ಪಹರೆಯುವರು ಇರುವ ಸ್ಥಳ, ಠಾಣೆ, ಚಾವಡಿ; ಸುಂಕದ ಕಟ್ಟೆ; ಕಾವಲು, ಪಾರಾ; ಹಪ್ಪಳ ಲಟ್ಟಿಸುವ ಹಲಗೆ.

चौकीदार, पु. ಕಾವಲುಗಾರ, ಊರುಗಾವಲಿನವ, ಪಹರೆಯುವ, ಚೌಕಿದಾರ.

चौकीदारी, स्त्री. ಕಾವಲು, ಪಹರೆ; ಕಾವಲುಗಾರನ ಪದವಿ; ಕಾವಲಿಗಾಗಿ ಎತ್ತುವ ತೆರಿಗೆ.

चौकीमार, वि. ಸುಂಕ ಕೊಡದೆ ಸರಕುಗಳನ್ನು ಕದ್ದು ತರುವವ, ಸುಂಕಗಳ್ಳ.

चौकोना, चौकोर, वि. ನಾಲ್ಕು ಮೂಲೆಗಳುಳ್ಳ, ಚತುಷ್ಕೋಣವಾದ; ಚಚ್ಚೌಕ, ಚದರ.

चौखट, चौखटबाज़्, स्त्री. ಚೌಕಟ್ಟು; ನಿಲುವು, ದಾರವಂದ, ಬಾಗಿಲುವಾಡ.

चौखटा, पु. ಚೌಕಟ್ಟು.

चौखूट, पु. ನಾಲ್ಕು ದಿಕ್ಕುಗಳು. क्रिवि. ನಾಲ್ಕು ಕಡೆಯೂ, ಸುತ್ತಲೂ.

चौखूटा, वि. ಚಚ್ಚೌಕವಾದ, ಚದರ.

चौगड़ा, पु. ಮೊಲ.

चौगान, पु. ಕೋಲು, ದಾಂಡು; ಕುದುರೆ ಚೆಂಡಿನಾಟ, ಪೋಲೋ; ಚೆಂಡಾಡುವ ಮೈದಾನ; ಮೈದಾನ, ಬಯಲು; ನಗಾರಿ ಕೋಲು.

चौगानगाह, स्त्री. ಕುದುರೆ ಚೆಂಡಾಡುವ ಮೈದಾನ.

चौगानबाज़, वि. ಕುದುರೆ ಚೆಂಡಿನ ಆಟಗಾರ.

चौगानबाज़ी, स्त्री. ಕುದುರೆ ಚೆಂಡಾಡುವಿಕೆ.

चौगिर्द, क्रिवि. ನಾಲ್ಕು ಕಡೆಯಲ್ಲೂ. पु. ನೆರೆಹೊರೆ; ಅಕ್ಕಪಕ್ಕದ ಪ್ರದೇಶ.

चौगुना, वि. ನಾಲ್ಕರಷ್ಟು, ನಾಲ್ಮಡಿ.

चौगोड़िया, स्त्री. ಕಾಲುಮಣೆ; ಹಾಸುಮಣೆ.

चौगोशिया, वि. ನಾಲ್ಕು ಮೂಲೆಗಳುಳ್ಳ, ಚಚ್ಚೌಕ. स्त्री. ಒಂದು ಬಗೆ ಟೋಪಿ. पु. ತುರ್ಕಿ ದೇಶದ ಕುದುರೆ; ಸೀಳು ಕಿವಿಯ ಪ್ರಾಣಿ.

चौगोशी, स्त्री. ಮೊಲ.

चौघड़, पु. ದವಡೆ ಹಲ್ಲು.

चौघड़ा, चौघरा, पु. ನಾಲ್ಕು ಖಾನೆಗಳ ಸಂಬಾರದ ಪೆಟ್ಟಿಗೆ, ಪಂಚವಾಳ; ನಾಲ್ಕು ಮಡಕೆ ಅಥವಾ ಪಿಪಾಯಿಗಳಿಂದ ಕಟ್ಟಿದ ತೆಪ್ಪ.

चौघर, पु. ಕುದುರೆಯ ಓಟ, ದೌಡು.

चौड़ा, वि. ಅಗಲವಾದ, ವಿಸ್ತೃತ; ಹಾಳಾದ. चौड़ा चकरा = ವಿಸ್ತಾರವಾದ, ದೇಶೋವಿಶಾಲವಾದ.

चौड़ाई, चौड़ान, स्त्री. ಅಗಲ; ವಿಸ್ತಾರ; ಬಡಾಯಿ, ಬಡಿವಾರ.

चौड़ाना, सक्रि. ಅಗಲಮಾಡು; ಹರವು; ಹಾಳು ಮಾಡು.

चौड़ापन, पु. ಅಗಲ; ವಿಶಾಲತೆ.

चौड़ोल, पु. ಒಂದು ಬಗೆ ಪಲ್ಲಕ್ಕಿ.
चौतनियां, चौतनी, स्त्री. ನಾಲ್ಕು ಮಡಿಕೆಗಳ ಟೋಪಿ
चौतरा, पु. = चबूतरा.
चौतही, स्त्री. ಒರಟು ಬಟ್ಟೆ.
चौथ, स्त्री. ಚೌತಿ; ಕಾಲುಭಾಗ; ಕಾಲು ಭಾಗದ ತೆರಿಗೆ, ಚೌತಾಯಿ.
चौथा, वि. ನಾಲ್ಕನೆಯ.
चौथाई, पु. ನಾಲ್ಕನೆಯ ಭಾಗ, ಕಾಲು ಭಾಗ, ಚತುರ್ಥಾಂಶ.
चौथिया, पु. ನಾಲ್ಕು ದಿವಸಗಳಿಗೊಂದಾವರ್ತಿ ಬರುವ ಮೊರೆ ಜ್ವರ, ಸರದಿ ಜ್ವರ; चौथ ತೆರಿಗೆಯನ್ನು ವಸೂಲು ಮಾಡುವವ.
चौथी, स्त्री. ವಿವಾಹದ ನಾಲ್ಕನೆಯ ದಿವಸದಲ್ಲಾಗುವ ಕಂಕಣ ವಿಸರ್ಜನ; ಕಾಲುಪಾಲು ಗುತ್ತಿಗೆ ಕೊಡುವ ವಾರದ ಸಾಗುವಳಿ.
चौदस, स्त्री. ಚತುರ್ದಶಿ.
चौदिस, क्रिवि. ನಾಲ್ಕು ಕಡೆಯೂ, ಸುತ್ತಲೂ.
चौदह, वि. ಹದಿನಾಲ್ಕು.
चौधराई, चौधरायत, स्त्री. चौधरी ಉದ್ಯೋಗ, ಕೆಲಸ ಅಥವಾ ಹಕ್ಕು.
चौधरानी, स्त्री. चौधरी का स्त्री. रूप.
चौधरी, पु. ಯಜಮಾನ, ನಾಯಕ, ಗೌಡ, ಹೆಗ್ಗಡೆ.
चौपट, वि. ತೆರೆದ, ಬೈಲಾದ; ನಿರ್ಜನ, ಚಪ್ಪಟೆ; ಹಾಳಾದ, ನಾಶವಾದ.
चौपटा, वि. ಹಾಳು ಮಾಡುವವ.
चौपड़, स्त्री. ಪಗಡೆಯಾಟ.
चौपड़बाज़, पु. ಪಗಡೆಯಾಡುವವ.
चौपड़-बाज़ार, पु. ಪಗಡೆಯ ಹಾಸಂಗಿಯಂತೆ ಅಡ್ಡವಾಗಿ ಕತ್ತರಿಸುವ ಎರಡು ರಸ್ತೆಗಳುಳ್ಳ ಅಂಗಡಿ ಬೀದಿ.
चौपतिया, स्त्री. ಒಂದು ಸೊಪ್ಪು.
चौपत्ती, स्त्री. ಚಿಕ್ಕ ಪುಸ್ತಕ, ಸಂಚಿಕೆ.
चौपहल, वि. ನಾಲ್ಕು ಪಕ್ಕಗಳುಳ್ಳ; ಚದರ.
चौपाई, स्त्री. ಒಂದು ಛಂದಸ್ಸು, ಚೌಪದಿ; ಮಂಚ.
चौपाया, पु. ದನಕರು, ಕಾಲ್ನಡೆ, ಚತುಷ್ಪದಿ.
चौपाल, पु. ಪಡಸಾಲೆ, ಅಂಗಳ; ಮನೆಯ ತೊಟ್ಟಿ; ಪಲ್ಲಕ್ಕಿ, ಶಿಬಿಕೆ.
चौफाल, स्त्री. ಕುದುರೆಯ ಓಟ, ದೌಡು
चौबंदी, स्त्री. ಅಂಗಿ, ಬನೀನು; ಲಾಳ ಕಟ್ಟುವಿಕೆ.
चौबग़ला, पु. ಅಂಗಿಗಳಿಗೆ ಕಂಕುಳಿನ ಕೆಳಭಾಗದಲ್ಲಿ ಹಾಕುವ ತೇಪೆ; ಒಂದು ಬಗೆ ಜುಬ್ಬ.
चौबच्चा, पु. ಸಣ್ಣ ತೊಟ್ಟಿ, ನೀರಿನ ಹೌದ
चौबाइन, स्त्री. "चौबे" का स्त्री. रूप.
चौबाई, स्त्री. ನಾಲ್ಕು ಕಡೆಯಿಂದಲೂ ಬೀಸುವ ಗಾಳಿ; ಗಾಳಿ ಸುದ್ದಿ, ವದಂತಿ.
चौबारा, पु. ಪ್ರಗ್ರೀವ, ಮೇಲಿನ ಕೈಸಾಲೆ; ಮಂಟಪ. क्रिवि. ನಾಲ್ಕನೇ ಬಾರಿ.
चौबीस, वि. ಇಪ್ಪತ್ತನಾಲ್ಕು.
चौबे, पु. ನಾಲ್ಕು ವೇದಗಳನ್ನರಿತ ಬ್ರಾಹ್ಮಣ, ಚತುರ್ವೇದಿ.

चौबोला, पु. ಒಂದು ಛಂದಸ್ಸು.
चौभड़, स्त्री. =चौघड़.
चौमंजिला, वि. ನಾಲ್ಕು ಮಹಡಿಯ.
चौमग़्ज़ा, वि ನಾಲ್ಕು ಬೀಜಗಳುಳ್ಳ; ಅಕ್ರೋಡ (ಹಣ್ಣು); ದೊಡ್ಡ ತಲೆಯುಳ್ಳವನು.
चौमसिया, वि. ನಾಲ್ಕು ಮಾಸಗಳಲ್ಲಿ ಆಗುವ (ಪೈರು).
चौमासा, पु ಚಾತುರ್ಮಾಸ್ಯ ವ್ರತ.
चौमुख, क्रिवि. ನಾಲ್ಕು ಕಡೆಯಲ್ಲೂ.
चौमुखा, वि. ನಾಲ್ಕು ಮುಖವುಳ್ಳ. पु. ನಾಲ್ಕು ಮುಖವುಳ್ಳ ದೀಪ ಅಥವಾ ಸವೆ; ಬ್ರಹ್ಮ.
चौमुहानी, स्त्री. ನಾಲ್ಕು ರಸ್ತೆಗಳು ಸೇರುವ ಸ್ಥಳ, ಚೌಕ, ಚಾವಟ.
चौरंग, पु. ಕತ್ತಿಯ ಒಂದು ವರಸೆ.
चौरस, वि. ಸಮತಲ, ಸಪಾಟ; ಚದರ, ಚಚ್ಚೌಕ. क्रिवि. ನಾಲ್ಕು ಕಡೆಯೂ.
चौरसा, पु. =चौमुहानी.
चौरसाई, स्त्री. ಸಮತಲ.
चौरसी, स्त्री. ಸಮತಲ ಮಾಡುವಿಕೆ.
चौरा, पु. ಜಗಲಿ, ವೇದಿಕೆ; ಪೀಠ; ಒಂದು ಬಗೆ ಅವರೆಕಾಯಿ; ಸತಿಯರ ಚಿತೆ.
चौराई, स्त्री. ಕೀರೆ ಸೊಪ್ಪು.
चौरानबे, वि. ತೊಂಭತ್ತನಾಲ್ಕು.
चौरासी, वि. ಎಂಭತ್ತನಾಲ್ಕು. पु. ಗೆಜ್ಜೆ, ಗೆಜ್ಜೆಯ ಸರ.
चौरास्ता,चौराहा,पु. =चौमुहानी.
चौरी, स्त्री. ಸಣ್ಣ ಜಗಲಿ, ವೇದಿಕೆ; ಚವುರಿ.
चौरेठा, पु. ತಿರುವಿದ ಅಕ್ಕಿಹಿಟ್ಟು, ರುಬ್ಬಿದ ಅಕ್ಕಿಹಿಟ್ಟು.
चौलड़ा, पु. चौलड़ी, स्त्री. ನಾಲ್ಕು ಸರಗಳ ಹಾರ.
चौला, पु. =लोबिया.
चौलाई, स्त्री. ಕೀರೆಸೊಪ್ಪು.
चौवन, वि. ಐವತ್ತನಾಲ್ಕು.
चौवा, पु. ಕೈಯ ನಾಲ್ಕು ಬೆಟ್ಟುಗಳು, ನಾಲ್ಕು ಬೆಟ್ಟುಗಳಲ್ಲಿ ಸುತ್ತಿದ ದಾರ; ನಾಲ್ಕು ಬೆಟ್ಟುಗಳ ಅಳತೆ, ಚೌವಾ, ಜಂಪೆ; ಇಸ್ಪೀಟಿನ ನಾಲ್ಕನೇ ಒಂದು.
चौवालीस, वि. ನಲವತ್ತನಾಲ್ಕು.
चौसर, पु. ಪಗಡೆಯಾಟ; ಪಗಡೆಯಾಟದ ಹಲಗೆ, ಹಾಸಂಗಿ; ನಾಲ್ಕು ಸರಗಳ ಹಾರ.
चौहट्टा, पु. =चौमुहानी.
चौहत्तर, पु. ಎಪ್ಪತ್ತನಾಲ್ಕು.
चौहद्दी, स्त्री. ನಾಲ್ಕು ಮೇರೆಗಳು; ಚತುರ್ಗಡಿ, ಚಕ್ಕುಬಂದಿ.
चौहारा, वि. ನಾಲ್ಕು ಮಡಿಕೆ ಅಥವಾ ಪದರುಗಳುಳ್ಳ, ನಾಲ್ಮಡಿ.
चौहान, पु. ರಾಜಪುತ್ರರ ಒಂದು ಒಳ ಜಾತಿ.
चौहाशिया, वि. ನಾಲ್ಕು ಗಡಿಗಳುಳ್ಳ.

छ

छंगा, वि. ಆರು ಬೆರಳುಗಳುಳ್ಳ.
छंगुली, स्त्री. ಕಿರುಬೆರಳು.
छंछौरी, स्त्री. ಮೊಸರು ವಡೆ.
छटना, अक्रि. ಕತ್ತರಿಸಿ ಹೋಗು; ಬೇರೆ

ಯಾಗು, ಅಗಲು; ಬಿಡಿಸಲ್ಪಡು; ಆರಿಸಲ್ಪಡು; ಶುದ್ಧವಾಗು; ಕ್ಷೀಣವಾಗು, ಬಡವಾಗು.

छंटवाना, सक्रि. छांटना का प्रे. रूप.

छंटाई, स्त्री. ಬಿಡಿಸುವಿಕೆ; ಕತ್ತರಿಸುವಿಕೆ; ಆಯುವಿಕೆ; ಆರಿಸುವಿಕೆ; ಶುದ್ಧಿ; ಬಿಡಿಸುವುದಕ್ಕೆ ಕೊಡುವ ಕೂಲಿ, ಶುದ್ಧಿ ಮಾಡುವುದರ ಕೂಲಿ.

छंटाव, पु. ಹಕ್ಕಲಾಯುವಿಕೆ, ಆಯ್ಕೆ; ಕಡಮೆ, ಒಳಪಡಿ, ಖೋತ; ಕುಟ್ಟುವಿಕೆ

छंद, पु. ಛಂದಸ್ಸು, ವೃತ್ತ; ಇಚ್ಛೆ; ಗಂಟು; ಗುಂಪು; ಕಪಟ, ಮೋಸ, ತಂತ್ರ; ಒಂದು ಆಭರಣ.

छंदरना, अक्रि. ಅರಿಯದವನಂತೆ ನಟಿಸು.

छंदराना, सक्रि. ಮೋಸಮಾಡು.

छः, वि. ಆರು. छः सात = ಮೋಸ, ತಟವಟ.

छकड़ा, पु. ಎತ್ತಿನ ಗಾಡಿ, ಚಕ್ಕಡಿ.

छकड़ी, स्त्री. ಆರರ ಸಮೂಹ; ಆರು ಬೋಯಿಗಳು ಹೊರುವ ಪಲ್ಲಕ್ಕಿ; ಆರು ಕುದುರೆಗಳ ಸಾರೋಟ್; ಪಗಡೆ ಅಥವಾ ಕವಡೆಯಾಟದಲ್ಲಿ ಒಂದು ಗರ, ಇತ್ತಿಗ, ಛಕ್ಕ.

छकना, अक्रि. ತೃಪ್ತಿಹೊಂದು, ತಣಿ; ಸಂತೋಷಿಸು; ಕಟರೆಹಿಡಿ, ವೆಗಟು; ಮತ್ತನಾಗು; ವಿಸ್ಮಿತನಾಗು; ಬೆಚ್ಚಿಬೀಳು, ಬೆರಗಾಗು.

छकाई, स्त्री. ತೃಪ್ತಿ, ತಣಿವು, ಕಟರೆ

छकाना, सक्रि. ತುಂಬಿಸು; ತಣಿಸು, ತೃಪ್ತಿಪಡಿಸು; ಕಟರೆ ಹಿಡಿಸು, ವೆಗಟಿಸು; ಮದ ಹುಟ್ಟಿಸು; ಬೆಚ್ಚಿಸು, ಬೆರಗಾಗಿಸು; ಗೋಳಾಡಿಸು; ದಂಡಿಸು.

छक्का, पु. ಆರರ ಸಮೂಹ; ಪಗಡೆಯ ಆರರ ಗರ, ಇತ್ತಿಗ; ಇಸ್ಪೀಟಿನಲ್ಲಿ ಆರನೇ ಬಂದು; ಜೂಜು; ಪ್ರಜ್ಞೆ, ಸ್ಮೃತಿ. छक्का पंजा = ಮೋಸ, ಕಪಟ; ಸಂಚು छक्का छूटना = ಪ್ರಜ್ಞೆತಪ್ಪು, ಮತಿಭ್ರಾಂತನಾಗು.

छग. छगड़ा, पु. ಗಂಡಾಡು, ಹೋತ.

छगन, पु. ಮಗು, ಕಂದ, ವತ್ಸ.

छगल, पु. ಗಂಡಾಡು; ಮೂತಿಯುಳ್ಳ ಚರ್ಮದ ಬುದ್ದಲಿ.

छगुनी, स्त्री. ಕಿರು ಬೆರಳು.

छछिया, स्त्री. ಮೊಸರಿನ ಪಾತ್ರೆ.

छछूंदर, पु. ಚಿಟ್ಟಿಲಿ, ಚುಚುಂದರ, ಇಲಿ ಸುಂಡ; ಯಂತ್ರ, ತಾಯಿತಿ; ಪಟಾಕಿ, ಪಟಾಸು; ಮದ್ದಿನ ಬಾಣ.

छजना, अक्रि. ಅಂದವಾಗಿರು, ಒಪ್ಪು, ಶೋಭಿಸು, ಸೊಗಯಿಸು.

छजा, पु. ಲೋವೆ, ಸೂರು; ಪ್ರಗ್ರೀವ, ಮುಂಚಾಚಿದ ಮಹಡಿ, ಮೊಗಸಾಲೆ.

छजेदार, पु. ಅಗಲವಾದ ಅಂಚಿನ ತಲೆವಾಗು.

छटकना, अक्रि. ಹಾರು, ಪುಟಿ; ಹಾರಿ ಹೋಗು, ಎಗರು; ಹಿದುಕಿಕೊಳ್ಳು; ತಪ್ಪಿಸಿಕೊಳ್ಳು.

छटकाना, सक्रि. ಹಾರಿಸು; ಜಟಕಾಯಿಸು, ಕೊಡವು; ಬಿಡಿಸು, ಎಗರಿಸು, ಹಿದುಕು.

छटपटाना, अक्रि. ಚಡಪಡಿಸು; ಹಾರಾಡು, ಒದ್ದಾಡು; ತಾಟಾಡು, ಮರುಗು.

छटपटाहट, स्त्री. ಚಡಪಡಿಕೆ, ಒದ್ದಾಟ.

छटपटी, स्त्री. ಒದ್ದಾಟ, ಹಾರಾಟ; ಕಾತರತೆ, ಲವಲವಿಕೆ, ಗೀಳು; ತ್ವರೆ.

छटवां, वि. ಆರನೆಯ.

छटांक, छटांकी, स्त्री. ಕಾಲು ಪಾವು, ಚಟಾಕು.

छटा, स्त्री. ಹೊಳಪು, ಕಾಂತಿ; ಸೌಂದರ್ಯ, ಸೊಬಗು; ಮಿಂಚು.

छठ, स्त्री. ಷಷ್ಠೀ.

छठा, वि. ಆರನೆಯ.

छठी, स्त्री. ಮಗು ಹುಟ್ಟಿದ ಆರನೆಯ ದಿವಸದ ಒಂದು ಸಂಸ್ಕಾರ छठी का दूध याद आना=ಪೇಚಾಡು, ಕಂಗೆಡು

छठे छमाहे, क्रिवि. ಆರು ತಿಂಗಳಿಗೆ; ಯಾವಾಗಲೋ ಒಮ್ಮೆ, ಎಂಟರಲ್ಲಿ ಹತ್ತರಲ್ಲಿ; ಬಹಳ ದಿವಸದಲ್ಲಿ, ಅಪರೂಪವಾಗಿ.

छड़, स्त्री. ಕೋಲು; ಸಲಾಕಿ, ಸರಳು.

छड़ना, सक्रि. ಭತ್ತ ಕುಟ್ಟು; ಅಕ್ಕಿ ತೊಳಸು.

छड़ा, पु. ಕಾಲು ಬಳೆ. वि. ಒಂಟಿಯಾದ, ಏಕಾಂಗಿಯಾದ

छड़ियां, स्त्री. ದೇವಸ್ಥಾನದ ಧ್ವಜ.

छड़िया, पु. ಕಟ್ಟಿಗೆಯವ, ದಂಡಧರ

छड़ी, स्त्री. ವೇತ್ರ, ಬೆತ್ತ; ಕೋಲು; ಸೆಳೆ, ಛಡಿ; ಛಡಿ ಏಟು; ಫಕೀರರ ಸಮಾಧಿಗಳ ಮೇಲಿನ ಬಾವುಟ.

छत, स्त्री. ಒಳಮಾಳಿಗೆ, ಮಹಡಿ, ಛಾವಣಿ; ಅಟ್ಟ; ಮೇಲ್ಕಟ್ಟು, ಚಾಂದಣಿ.

छतगीर, छतगीरी, स्त्री. ಮೇಲ್ಕಟ್ಟು, ಆಸಮಾನಗಿರಿ, ಉಲ್ಲಡೆ, ವಿತಾನ.

छतनारा, वि. ಹಬ್ಬಿದ, ಹರಡಿದ.

छतरी, स्त्री. ಚಪ್ಪರ, ಹಂದರ; ಮಂಟಪ; ಕೊಡೆ, ಛತ್ರಿ; ವಿಮಾನದಿಂದ ಧುಮುಕಲು ಬಳಸುವ ಛತ್ರಿ; ಪಾರಿವಾಳಗಳು ಕುಳಿತುಕೊಳ್ಳಲು ಕಟ್ಟಿದ ಬಿದಿರು; ನಾಯಿಕೊಡೆ, ಅಣಬೆ.

छतियाना, सक्रि. ಎದೆಗೆ ಅವುಚಿಕೊಳ್ಳು; ಎದೆಗೆ ಒತ್ತಿಕೊಳ್ಳು.

छतिवन, पु. ಏಳೆಲೆ ಬಾಳೆ, ಸಪ್ತಪರ್ಣ.

छत्ता, पु. ಮಂಟಪ; ಜೇನುಗೂಡು, ಹುಟ್ಟು, ರಾಡೆ; ಕೊಡೆ, ಛತ್ರಿ; ಛತ್ರಿಯಂತೆ ನಾಲ್ಕು ಕಡೆಯೂ ಹರವಿದ ವಸ್ತು; ತಾವರೆ ಬೀಜ.

छत्तीस, वि. ಮೂವತ್ತಾರು.

छत्तीसा, वि. ಚತುರ, ಗಟ್ಟಿಗ; ಕಪಟಿ.

छत्तीसापन, पु. ತಂತ್ರ; ಕಪಟ, ಠಕ್ಕು.

छत्तीसी, वि. ತಂತ್ರಗಾರ; ಕಪಟಿ.

छत्र, पु. ಛತ್ರಿ, ಕೊಡೆ; ಶ್ವೇತಛತ್ರ; ನಾಯಿ ಕೊಡೆ, ಅಣಬೆ.

छत्रक, पु. ನಾಯಿಕೊಡೆ; ಮಂಟಪ; ಜೇನುಗೂಡು.

छत्रछांह, छत्रछाया, स्त्री. ಶರಣು, ಆಶ್ರಯ; ಮರೆ.

छत्रपति, पु. ರಾಜ.

छदाम, पु. ಮುಕ್ಕಾಲು ಕಾಸಿನ ನಾಣ್ಯ, ಬೆಲೆಯಿಲ್ಲದ ವಸ್ತು; ನೋಡಿ - पैसा.

छद्म, पु. ಬಚ್ಚಿಡುವುದು; ಮರೆ; ನೆಪ;

कಪಟ, ಮೋಸ; ಛದ್ಮನೆ.

छद्मवेश, पु. ಮಾರುವೇಷ, ಸೋಗು; ಕಪಟ.

छद्मवेशी, छद्मी, वि. ವೇಷಧಾರಿ, ಸೋಗಿನವ; ಕಪಟಿ.

छन, पु. ಕ್ಷಣ; ರೂಪಾಯಿಯ ಶಬ್ದ; ಒಂದು ಆಭರಣ.

छनक, पु. ಝೇಂಕಾರ; ಬೆದರಿಕೆ; ಅರೆ ಮರುಳು.

छनकना, अक्रि. ಚೊಯ್ಗುಟ್ಟು; ಛನ ಗುಟ್ಟು; ಬೆದರಿ ಓಡು; ಚದರು, ಹಾರಿ ಹೋಗು.

छनकाना, सक्रि. ಓಡಿಸು; ಅಟ್ಟು; ಚೊಯ್ ಚೊಯ್ ಶಬ್ದ ಮಾಡು.

छनछनाना, अक्रि. ಚೊಯ್‌ಗುಟ್ಟು; ಛನಛನ ಶಬ್ದವಾಗು, ಝೇಂಕರಿಸು. सक्रि. ಚೊಯ್ ಚೊಯ್ ಶಬ್ದ ಮಾಡು, ಝಣಝಣ ಶಬ್ದ ಮಾಡು.

छनछनाहट, स्त्री. ಛಣಛಣ ಶಬ್ದ.

छनना, अक्रि. ಸೋಸಲ್ಪಡು, ಇಳಿ; ಮದ್ಯ ಸೇವಿಸಲ್ಪಡು; ಬಹಳ ರಂಧ್ರ ಗಳಾಗು; ಬಹಳ ಗಾಯವಾಗು; ಬಾ ಣಲಿಯಲ್ಲಿ ಕರಿದು ತೆಗೆಯಲ್ಪಡು; ಶೋಧನೆಯಾಗು. पु. ಸಾಣಿಗೆ; ಒಂ ದರಿ; ಸೋಸುವ ಪಾತ್ರೆ ಅಥವಾ ಬಟ್ಟೆ. गहरी छनना = ಘನಿಷ್ಠ ಸ್ನೇಹವಾ ಗು; ಜಗಳವಾಗು.

छननी, स्त्री. "छनना" का लघु रूप.

छनवाना, सक्रि. "छानना" का प्रे. रूप.

छनाना, सक्रि. "छनना" का प्रे. रूप.

छप, स्त्री. ನೀರು ಸಿಡಿಯುವ ಶಬ್ದ.

छपका, स्त्री. ಒಂದು ಶಿರೋಭೂಷಣ; ನೀರು ಸಿಡಿಯುವಿಕೆ; ನೀರಿನಲ್ಲಿ ಕೈ ಕಾಲು ಬಡಿದಾಡುವ ಶಬ್ದ.

छपछपाना, अक्रि. ನೀರಿನಲ್ಲಿ ಡೊಬ್ ಡೊಬ್ ಶಬ್ದ ಮಾಡು.

छपद, पु. ದುಂಬಿ.

छपन, पु. ನಾಶ, ಸಂಹಾರ.

छपना, अक्रि. ಅಚ್ಚಾಗು, ಮುದ್ರಿತ ವಾಗು; ಗುರುತಾಗು; ಅಂಕಿತವಾಗು.

छपरखट, छपरखाट, स्त्री. ಸೊಳ್ಳೆ ಪರದೆ ಕಟ್ಟಿದ ಮಂಚ.

छपवाना, सक्रि. "छापना" का प्रे. रूप.

छपाई, स्त्री. ಮುದ್ರಣ; ಅಚ್ಚು ಕೂಲಿ, ಮುದ್ರಣದ ಖರ್ಚು.

छपाका, पु. ನೀರನ್ನು ಹೊಡೆವ ಶಬ್ದ.

छपाना, सक्रि. ಅಚ್ಚುಹಾಕಿಸು.

छपेरा, पु. ಅಚ್ಚುಹಾಕುವವ, ಮುದ್ರಕ.

छप्पन, वि. ಚಪ್ಪನ್ನ, ಐವತ್ತಾರು.

छप्पय, पु. ಷಟ್ಪದಿ (ಛಂದಸ್ಸು).

छप्पर, पु. ಚಪ್ಪರ, ಹಂದರ; ಸಣ್ಣ ಹೊಂಡ, ಕೊಳ.

छप्परबंद, वि. ಚಪ್ಪರ ಕಟ್ಟುವವ.

छप्परबंदी, स्त्री. ಚಪ್ಪರ ಕಟ್ಟುವಿಕೆ.

छबि, स्त्री. ಕಾಂತಿ, ಸೌಂದರ್ಯ, ಸೊಬಗು.

छबीला, वि. ಸುಂದರವಾದ; ಸೊಬಗಿನ.

छब्बीस, वि. ಇಪ್ಪತ್ತಾರು.

छब्बे, पु. ಆರು ವೇದಗಳನ್ನರಿತವ, (ವೇದಗಳು ನಾಲ್ಕೇಯಾದರೂ ಬಹಳ ಪಾಂಡಿತ್ಯ ಹೊಂದಿದವನೆನ್ನುವ

ವ್ಯಂಗ್ಯಾರ್ಥದ ಶಬ್ದ), "ಪದ್ಯೇದಿ".

छम, स्त्री. ಗೆಜ್ಜೆಯ ಶಬ್ದ; ಗಿಲುಗಿಲು ಶಬ್ದ; ಮಳೆಯ ಶಬ್ದ.

छमकना, अक्रि. ಗಣಗಣ ಅನ್ನು; ಗಿಲುಗಿಲುಗುಟ್ಟು.

छमछम, स्त्री. ಗೆಜ್ಜೆಯ ಗಣಗಣ ಶಬ್ದ; ಮಳೆ ಹೊಯ್ಯುವ ಶಬ್ದ. क्रिवि. ಗಣಗಣ ಅನ್ನುತ್ತಾ.

छमछमाना, अक्रि. ಗಣಗಣ ಶಬ್ದ ಮಾಡು, ಗಲಗಲಿಸು.

छमाछम, क्रिवि. ಗಣಗಣ ಅನ್ನುತ್ತ, ಝುಮಝುಮ ಶಬ್ದದೊಂದಿಗೆ.

छय, पु. ಕ್ಷಯ, ಕ್ಷೀಣ; ನಾಶ.

छर, पु. =छल.

छरछर, पु. ಚರಚರ ಶಬ್ದ.

छरछराना, सक्रि. ಉರಿಯಾಗು, ನವೆಯಾಗು; ಉರಿ.

छरछराहट, स्त्री. ಉರಿ, ನವೆ.

छरनना, अक्रि. ಒಸರು, ಸ್ರವಿಸು, ಹನಿ.

छरहरा, वि. ಚುರುಕಾದ; ನಾಜೂಕಿನ; ಹಗುರವಾದ.

छरा, पु. ಗೊಣಸು, ಕೊಂಡಿ; ಲಡಿ, ದಾರ; ಲಾಡಿ, ನವಾರು.

छरिंदा, वि. ಒಂಟಿಯಾದ, ಏಕಾಂಗಿ.

छरीला, पु. ಒಂದು ಬಗೆಯ ಪಾಚಿ, ಹಾವಸೆ, ಕಲ್ಲು ಹೂ.

छर्दन, पु. **छर्दि**, स्त्री. ವಾಂತಿ, ವಾಕರಿಕೆ

छर्रा, पु. ಚಿಲ್ಲಿ, ಹರಳು; ಸಣ್ಣ ಗುಂಡು, ಗೋಲಿ, ರವೆ.

छल, पु. ನೆಪ; ಸೋಗು, ಕಪಟ, ಮೋಸ, ಠಕ್ಕು; ಬೂಟಾಟಿಕೆ. छल कपट = ಗಾಪುಗತಕ, ತಾರತಕ್ಕಡಿ, ಠಕ್ಕುಟವಳಿ.

छलक, छलकन, स्त्री. ತುಂಬಿ ತುಳುಕುವಿಕೆ, ಸೂಸಿ ಹರಿಯುವಿಕೆ.

छलकना, अक्रि. ತುಂಬಿ ತುಳುಕು, ಸೂಸಿ ಹರಿ, ಸೂಸು.

छलकाना, सक्रि. ತುಳುಕಿಸು, ಚೆಲ್ಲು.

छलछंद, पु. ಮೋಸ, ಕಪಟ, ಠಕ್ಕುಟವಳಿ.

छलछलाना, अक्रि. ನೀರು ಸುರಿ, ಸೂಸು; ಸರಸರಿಸು.

छलछिद्र, पु. ಕಪಟ, ದಗ, ಮೋಸ; ಬೂಟಾಟಿಕೆ, ತಟವಟ; ಸಂಚು.

छलना, सक्रि. ಮೋಸಮಾಡು, ವಂಚಿಸು, ಠಕ್ಕಿಸು; ಏಮಾರಿಸು. स्त्री. ಮೋಸ, ಠಕ್ಕು.

छलनी, स्त्री. ಜಲ್ಲಡೆ, ವಂದರಿ, ಜರಡಿ, ಸಾಣಿಗೆ.

छलबल, पु. ಬಲಾತ್ಕಾರ ಮತ್ತು ಕಪಟ.

छलांग, स्त्री. ಜಿಗಿತ, ಗಂತು, ನೆಗೆತ.

छलांगना, अक्रि. ನೆಗೆ, ಜಿಗಿ.

छलाना, सक्रि. ಮೋಸಮಾಡಿಸು.

छलावा, पु. ಕೊಳ್ಳಿ ಪಿಶಾಚಿ; ಕೊಳ್ಳಿ ದೆವ್ವ; ಮಾಟ, ಮಂತ್ರ; ಮೋಸ, ಠಕ್ಕು.

छलिया, छली, वि. ಮೋಸಗಾರ, ಠಕ್ಕ, ಕಪಟ.

छलौरी, स्त्री. ಉಗುರು ಸುತ್ತು.

छल्ला, पु. ಉಂಗುರ; ಬಳೆ. छल्ला छिपौवल=ಕಬ್ಬಿಣದ ಬಳೆಯ ಒಂದು ಆಟ.

छली, स्त्री. ತೊಗಟೆ, ತಿಗುಡು; ಬಳೆ.

छलेदार, वि. ಉಂಗುರದಂತಹ; ದುಂಡಾದ; ಬಳೆಗಳುಳ್ಳ.

छवा, पु. ಹಿಮ್ಮಡಿ.

छवाई, स्त्री. ಹರವುವಿಕೆ; ಹುಲ್ಲು ಹೊಚ್ಚುವಿಕೆ; ಹಾಸುವಿಕೆ; ಹುಲ್ಲು ಹೊಚ್ಚುವುದರ ಅಥವಾ ಹಾಸುವುದರ ಕೂಲಿ.

छवाना, सक्रि. छाना का प्रे. रूप.

छवि, स्त्री. ಕಾಂತಿ, ಸೌಂದರ್ಯ, ಸೊಬಗು

छवैया, पु. ಹುಲ್ಲು ಹೊಚ್ಚುವವ.

छहराना, अक्रि. ಚೆಲ್ಲು, ಚದರು. सक्रि. ಚದರಿಸು.

छांगना, सक्रि. ಮರದ ಕೊಂಬೆಗಳನ್ನು ಕಡಿದುಹಾಕು, ಸವರು.

छांगुर, पु. ಕೈಯಲ್ಲಿ ಆರು ಬೆರಳುಗಳುಳ್ಳವ.

छांछ, स्त्री. ಮಜ್ಜಿಗೆ, ಅಳೆ, ತಕ್ರ

छांट, स्त्री. ಕತ್ತರಿಸುವಿಕೆ, ಕಡಿಯುವಿಕೆ; ಕಡಿತ; ರೀತಿ; ಆಯ್ಕೆ; ಚಕ್ಕೆ; ತುಂಡು; ಚೂರು; ಚರಟ; ವಾಂತಿ

छांटन, पु. ಸಿಪ್ಪೆ; ಚಕ್ಕೆ; ಚೂರು; ಚರಟ.

छांटना, सक्रि. ಕೆತ್ತಿ, ತೆಗೆ, ಕಡಿ; ಸವರು, ಕತ್ತರಿಸು; ಬಡಿ; ಛತ್ರ ಕುಟ್ಟು; ಚುನಾಯಿಸು, ಆಯು; ಅಗಲಿಸು, ಪ್ರತ್ಯೇಕಿಸು; ತೆಗೆದುಹಾಕು; ಶುದ್ಧಪಡಿಸು, ಸಂಕ್ಷೇಪಿಸು; ತಪ್ಪು ಹುಡುಕು.

छांद, स्त्री. ದನಗಳ ಕಾಲುಗಳನ್ನು ಕಟ್ಟುವ ಹಗ್ಗ, ತಳೆ.

छांदना, सक्रि. ಕುದುರೆಯ ಹಿಂಗಾಲುಗಳನ್ನು ಸೇರಿಸಿ ಕಟ್ಟು; ಹಗ್ಗದಿಂದ ಕಟ್ಟು; ಬಿಗಿಸು, ಬಂಧಿಸು.

छांवँ, छांह, स्त्री. ನೆರಳು, ಛಾಯೆ; ಚಪ್ಪರ; ಆಶ್ರಯ; ಪ್ರತಿಬಿಂಬ; ಭೂತಪ್ರೇತಗಳ ಬಾಧೆ, ದೆವ್ವ ಸೋಕು.

छांहगीर, पु. ಛತ್ರಿ, ಕೊಡೆ; ದರ್ಪಣ.

छाक, पु. ತುಷ್ಟಿ, ತೃಪ್ತಿ; ಕೆಲಸಗಾರರ ಮಧ್ಯಾಹ್ನದ ಭೋಜನ, ಕಟ್ಟನ್ನ, ಬುತ್ತಿ; ಮದ, ಮತ್ತು.

छाकना, सक्रि. ತಿಂದು ತೃಪ್ತಿಪಡು, ತಣಿ, ವೆಗಟು, ಕಟರೆಯಾಗು; ಮದ್ಯಪಾನದಿಂದ ಮತ್ತನಾಗು; ಬೆರಗಾಗು.

छाग, पु. ಗಂಡಾಡು, ಹೋತ.

छागल, पु. ಗಂಡಾಡು, ಹೋತ; ಆಡಿನ ಚರ್ಮದಿಂದ ಮಾಡಿದ ವಸ್ತು. स्त्री. ನೂಪುರ, ಕಾಲಂದುಗೆ.

छाछ, स्त्री. ಮಜ್ಜಿಗೆ, ಅಳೆ, ಶಿವದಾನ.

छाज, पु. ಮೊರ, ಮುಚ್ಚಲು; ಚಪ್ಪರ; ಹುಲ್ಲುಮಾಳಿಗೆ.

छाजन, पु. ಬಟ್ಟೆ, ವಸ್ತ್ರ. स्त्री. ಮೇಲುಹೊದಿಕೆ; ಛಾವಣಿ; ಮಾಳಿಗೆ; ಹುಲ್ಲು ಅಥವಾ ಹೆಂಚು ಹೊಚ್ಚುವಿಕೆ.

छाजना, अक्रि. ಅಂದವಾಗಿರು, ಶೋಭಿಸು, ಒಪ್ಪು. सक्रि. ಮುಚ್ಚು; ಹುಲ್ಲು ಹೊಚ್ಚು.

छाता, पु. ಛತ್ರಿ, ಕೊಡೆ.

छाती, स्त्री. ವಕ್ಷಸ್ಥಳ, ಎದೆ; ಸ್ತನ; ಹೃದಯ; ಮನಸ್ಸು; ಧೈರ್ಯ, ಸಾಹಸ, ಛಾತಿ, ಎದೆ ಕೆಚ್ಚು. छाती पर कोदो या मूंग दलना = ಇತರರ ಮನಸ್ಸನ್ನು ನೋಯಿಸುವಂತೆ ಅವರ ಮುಂದೆ

ಒಂದು ಕೆಲಸ ಮಾಡು. छाती से लगाना = ಆಲಿಂಗನ ಮಾಡು.

छात्र, पु. ವಿದ್ಯಾರ್ಥಿ, ಶಿಷ್ಯ.

छात्रवृत्ति, स्त्री. ವಿದ್ಯಾರ್ಥಿವೇತನ, "ಸ್ಕಾಲರ್ಷಿಪ್".

छात्रालय, पु. ವಿದ್ಯಾರ್ಥಿನಿಲಯ.

छादन, पु. ಹಾಸುವ ಅಥವಾ ಹೊದಿಸುವ ಕೆಲಸ; ಆವರಣ, ಆಚ್ಛಾದನ; ಹೊದಿಕೆ; ವಸ್ತ್ರ; ಮರೆ.

छान, पु. ಛಾವಣಿ, ಚಪ್ಪರ, ಮಾಳಿಗೆ; ಶೋಧನೆ.

छानना, सक्रि. ಶೋಧಿಸು, ಸೋಸು; ಗಾಲಿಸು; ಆರಿಸು, ಆಯು; ಪ್ರತ್ಯೇಕಿಸು; ಪರಿಶೋಧಿಸು; ಹುಡುಕು; ಹೊಗು, ಭೇದಿಸು; ಮಾದಕ ದ್ರವ್ಯವನ್ನು ಸೇವಿಸು, ಮದ್ಯಪಾನ ಮಾಡು.

छानबीन, स्त्री. ತನಿಖೆ, ಶೋಧನೆ.

छानस, स्त्री. ಹೊಟ್ಟು, ಉಬ್ಬಲು, ತವುಡು.

छाना, सक्रि. ಹಾಸು, ಹೊದಿಸು; ಹರಡು, ಹರವು; ಹೊಚ್ಚು; ಮಾಳಿಗೆ ಕಟ್ಟು, ಛಾವಣಿ ಹಾಕು; ಆಶ್ರಯ ಕೊಡು. अक्रि. ಹರಡು, ಹಬ್ಬು; ಕವಿದುಕೊ; ದಂಡಿಳಿ, ಬೀಡು ಬಿಡು.

छाप, स्त्री. ಠಸ್ಸೆ, ಮೊಹರು; ಅಚ್ಚು, ಮುದ್ರಣ; ಮುದ್ರೆ; ರಾಜಮುದ್ರೆ; ಕವಿಗಳ ಉಪನಾಮ, ಅಂಕಿತ

छापना, सक्रि. ಠಸ್ಸೆಹಾಕು, ಮೊಹರು ಹಾಕು; ಮುದ್ರೆ ಒತ್ತು; ಮುದ್ರಿಸು, ಅಚ್ಚು ಹಾಕು, ಛಾಪಿಸು.

छापा, पु. ಮುದ್ರೆ, ಮೊಹರು; ಠಸ್ಸೆ; ಅಚ್ಚು; ಮುದ್ರಣದ ಆವೃತ್ತಿ; ರಾತ್ರಿಯಲ್ಲಿ ಶತ್ರುಗಳ ಮೇಲಿನ ಆಕ್ರಮಣ; ಧಾಳಿ; ಅರಿಸಿನ ಹಚ್ಚಿದ ಬೆರಳ ಗುರುತು

छापाख़ाना, पु. ಮುದ್ರಣಾಲಯ, ಛಾಪಾಖಾನೆ, ಅಚ್ಚುಕೂಟ, ಪ್ರೆಸ್.

छापेवाला, पु. ಮುದ್ರಣಕಾರ.

छाबड़ा, पु. ಮಂಕ್ಕರಿ, ಗೂಡೆ.

छाया, स्त्री. ನೆರಳು, ಛಾಯೆ; ಕತ್ತಲೆ; ಪ್ರತಿಬಿಂಬ; ಪ್ರತಿಮೆ; ಅನುಕರಣ, ನಕಲು; ಕಾಂತಿ; ಶರಣು, ಆಶ್ರಯ; ಭೂತಪ್ರೇತಗಳ ಬಾಧೆ, ದೆವ್ವಸೋಕು.

छार, पु. ಬೂದಿ, ಭಸ್ಮ, ಧೂಳಿ.

छाल, स्त्री. ಸಿಪ್ಪೆ, ತೊಗಟೆ; ಬೊಬ್ಬಡೆ, ವಲ್ಕಲ; ಪಟ್ಟೆ, ತಿಗುಡು; ಅಲೆ, ತರಂಗ.

छालना, सक्रि. ಶೋಧಿಸು, ಸೋಸು; ತೂತು ಕೊರೆ.

छाला, पु. ತೊಗಲು, ಚರ್ಮ; ಗುಳ್ಳೆ, ಬೊಬ್ಬೆ; ಹುಗುಳು, ಹೊಪ್ಪಳೆ.

छालिया, छाली, स्त्री. ಅಡಕೆ.

छावना, सक्रि. = **छाना**.

छावनी, स्त्री. ಹುಲ್ಲುಮಾಳಿಗೆ, ಛಾವಣಿ, ಚಪ್ಪರ; ದಂಡಿಳಿಯುವ ಸ್ಥಳ, ಬೀಡು, ಪಾಳೆಯ; ಡೇರಾ; ಬಿಡಾರ.

छावा, पु. ಮಗು; ಮರಿ.

छितंकी, स्त्री. ಸಣ್ಣ ಇರುವೆ; ಚಿಟಕೆ; ಗಿಂಡುವಿಕೆ.

छिकाई, स्त्री. ಸೀನುವಿಕೆ; ಸೀನು.

छिगुली, स्त्री. ಕಿರುಬೆರಳು.

छिडाना, सक्रि. ಕಿತ್ತುಕೊ, ಕಸುಕೊ.

छि, अव्य. ಛೀ, ಛೀಛೀ !

छिकुनी, स्त्री. ಕೋಲು, ದೊಣ್ಣೆ.

छिगुनी, स्त्री. ಕಿರುಬೆರಳು.

छिछड़ा, पु. ಹುಣ್ಣಿನ ಪೊರೆ, ಹಕ್ಕಳೆ.

छिछला, वि. ಆಳವಿಲ್ಲದ, ಉತ್ತಾನ.

छिछली, स्त्री. ನೀರಿನ ಮೇಲೆ ತೇಲುತ್ತ ಹಾರಿಹಾರಿ ಹೋಗುವಂತೆ ಕಲ್ಲನ್ನೆಸೆವ ಆಟ, ನೀರಿನ ಮೇಲೆ ಹಲ್ಲೆ ಎಸೆವ ಆಟ, ರೊಟ್ಟಿಯಾಟ, ಕಪ್ಪೆ ಕಲ್ಲಿನಾಟ.

छिछोरपन, पु. ನೀಚತನ, ಅಲ್ಪತನ.

छिछोड़ा, छिछोरा, वि. ನೀಚ, ಅಲ್ಪ, ಕೀಳುತರದ; ಗಾಳಿಯಂತಹ.

छिछोरापन, पु. ನೀಚತನ, ಅಲ್ಪತನ.

छिटकना, अक्रि. ಚದರು, ಹರಡು; ಹೊಮ್ಮು, ಪಸರು.

छिटकनी, स्त्री. ಅಗುಳಿ, ತಾಪಾಳು.

छिटकाना, सक्रि. ಚದರಿಸು; ಹರಡಿಸು, ಪಸರಿಸು; ಬೀರು.

छिटकी, स्त्री. ಚುಕ್ಕೆ, ಬೊಟ್ಟು.

छिड़क, पु. ನೀರು ಚಿಮುಕಿಸುವಿಕೆ; ನೋನೆ, ಹನಿ, ತುಂತುರು.

छिड़कना, सक्रि. ಚಿಮುಕಿಸು, ಸಿಂಪಡಿಸು; ಪ್ರೋಕ್ಷಿಸು, ಎರಚು.

छिड़कवाना, सक्रि. "छिड़कना" का प्रे. रूप.

छिड़काई, स्त्री. ಚಿಮುಕಿಸುವಿಕೆ; ಎರಚುವಿಕೆ; ಚಿಮುಕಿಸುವುದರ ಕೂಲಿ.

छिड़काना, सक्रि. "छिड़कना" का प्रे. रूप.

छिड़काव, पु. ಚಿಮುಕಿಸುವಿಕೆ, ಸೇಕ, ಪ್ರೋಕ್ಷಣೆ.

छिड़ना, अक्रि. ಪ್ರಾರಂಭವಾಗು, ತೊಡಗು, ಹತ್ತು.

छितनी, स्त्री. ಬುಟ್ಟಿ, ಮುಕ್ಕರಿ.

छितराना, अक्रि. ಚೆಲ್ಲಿಹೋಗು; ಚದರಿ ಹೋಗು. सक्रि. ಚೆಲ್ಲು, ಚೆಲ್ಲಾಡು; ಚದರಿಸು; ಎರಚು, ಈಡಾಡು.

छितराव, पु. ಚದರಿಕೆ; ಹರಡುವಿಕೆ; ಎರಚುವಿಕೆ.

छिदना, अक्रि. ತೂತಾಗು, ತೂತು ಬೀಳು; ಚುಚ್ಚು; ಗಾಯವಾಗು.

छिदाई, स्त्री. ಎಜ್ಜ ಹಾಕಲು ಕೂಲಿ.

छिदाना, सक्रि. ತೂತುಕೊರೆ, ತೂತು ಮಾಡು; ಚುಚ್ಚು; ಎಜ್ಜ ಹಾಕು.

छिद्र, पु. ತೂತು, ಎಜ್ಜ, ರಂಧ್ರ; ಬಿಲ; ಸ್ಥಳ, ಅವಕಾಶ; ದೋಷ, ಕುಂದಕ; ಹೋಕು, ಕುಂದು.

छिनकना, सक्रि. ಸೀನು; ತುಮ್ಮು.

छिनना, अक्रि. ಅಪಹರಿಸಲ್ಪಡು, ಸುಲಿಯಲ್ಪಡು, ಕಸಿಯಲ್ಪಡು; ಹರಿ.

छिनवाना, छिनाना, सक्रि. छीनना का प्रे. रूप.

छिनाल, स्त्री. ವ್ಯಭಿಚಾರಿಣಿ, ಹಾದರಗಿತ್ತಿ, ಬೊಡ್ಡಿ; ಜಾರೆ, ಛಿನಾಲಿ.

छिनाला, पु. ವ್ಯಭಿಚಾರ, ಹಾದರ.

छिन्न, वि. ಕತ್ತರಿಸಿದ, ತುಂಡಾದ; ಕೊರೆದ.

छिन्नभिन्न, वि. ಒಡಕು ಮುರುಕಾದ; ಹಾಳಾದ; ಕೆಟ್ಟುಹೋದ; ಚದರಿದ, ದಿಕ್ಕಾಪಾಲಾದ.

छिपकली, स्त्री. ಹಲ್ಲಿ, ಗವುಳಿ.

छिपटी, स्त्री. ಚಕ್ಕೆ ಪುಡಿ; ಸಿಬರು.

छिपन, पु. ಮುಚ್ಚುಮರೆ, ಗೋಪ್ಯ.

छिपना, अक्रि. ಮರೆಯಾಗು; ಅಡಗಿಕೊಳ್ಳು, ಹುದುಗು; ಅವಿತುಕೊಳ್ಳು.

छिपा, वि. ಹತ್ತಿರ; ಮುಚ್ಚಿದ, ಮರೆಯಾದ; ಬಚ್ಚಿಟ್ಟ. छिपाछिपी = ಮುಚ್ಚುಮರೆಯಾಗಿ, ಗುಟ್ಟಾಗಿ, ಗೋಪ್ಯವಾಗಿ.

छिपाना, सक्रि. ಹುದುಗಿಸು; ಮರೆಮಾಡು; ಬಚ್ಚಿಡು; ಮುಚ್ಚಿಡು.

छिपाव, पु. ಬಚ್ಚಿಡುವಿಕೆ; ಮುಚ್ಚುಮರೆ, ರಹಸ್ಯ.

छिया, स्त्री. ನಿಕೃಷ್ಟವಸ್ತು; ಗಲೀಜು; ಮಲ; ಹುಡುಗಿ. वि. ಕೊಳೆಯಾದ, ಹೊಲಸಾದ.

छियानवे, वि. ತೊಂಭತ್ತಾರು.

छियालीस, वि. ನಲವತ್ತಾರು.

छियासठ, वि. ಅರವತ್ತಾರು.

छियासी, वि. ಎಂಭತ್ತಾರು.

छिरकना, सक्रि. = छिड़कना.

छिलका, पु. ಹೊಟ್ಟು; ಸಿಪ್ಪೆ; ಹೊರಿಕೆ; ವಲ್ಕಲ, ತೊಗಟೆ; ಚಿಪ್ಪು.

छिलना, अक्रि. ಸಿಪ್ಪೆ ಏಳು; ಸುಲಿದುಹೋಗು.

छिलवाई, स्त्री. ಸಿಪ್ಪೆ ಸುಲಿಯುವಿಕೆ; ಸಿಪ್ಪೆ ಬಿಡಿಸುವುದಕ್ಕೆ ಕೊಡುವ ಕೂಲಿ.

छिलवाना, सक्रि छिलना का प्रे. रूप.

छिहत्तर, वि. ಎಪ್ಪತ್ತಾರು.

छींक, स्त्री. ಸೀನುವಿಕೆ; ಸೀನು.

छींकना, अक्रि. ಸೀನು, ಸೀನುಬರು.

छींट, स्त्री. ತೊಟ್ಟು, ಹನಿ, ತುಂತುರು; ಚೀಟೀ ಬಟ್ಟೆ.

छींटना, सक्रि ಚಿಮುಕಿಸು; ಎರಚು; ಚೆಲ್ಲು

छींटा, पु. ತೊಟ್ಟು; ಹನಿ, ತುಂತುರು, ಸೋನೆ; ಚುಕ್ಕೆ, ಬೊಟ್ಟು; ಗೇಲಿ, ನಗಚಾಟಿಕೆ; ಬಂಗಿಯ ಒಂದು ಗುಳಿಗೆ. छींटा मारना = ಚಿಮುಕಿಸು; ನೀರು ಉಗ್ಗು, ನೀರು ಚಲ್ಲು.

छी, अव्य. ಛೀ, ಥೂ.

छीका, पु. ನೆಲವು, ಶಿಕ್ಯ, ಕಲ್ಲಿ; ಹಗ್ಗದ ಉಯ್ಯಾಲೆ ಅಥವಾ ಸೇತುವೆ; ದನಕರುಗಳ ಬಾಯಿಗಲ್ಲಿ. ಬಾಯಿಬುಟ್ಟಿ.

छीछड़ा, पु. ಮಾಂಸದ ನಿಷ್ಪ್ರಯೋಜಕ ಚೂರು; ತೆಳುವಾದ ಹೊರಿಕೆ.

छीज, स्त्री. ಕಡಮೆ, ಕೊರತೆ; ತರಗಡೆ, ತೇವಮಾನ; ಕ್ಷಯ; ನಾಶ.

छीजना, अक्रि. ಕುಗ್ಗು; ಕ್ಷಯಿಸು.

छीदा, वि. ತೆಳುವಾದ, ಜಾಳು(ಬಟ್ಟೆ).

छीनना, सक्रि. ಕಿತ್ತುಕೊಳ್ಳು, ಕಸುಕೊಳ್ಳು; ಅಪಹರಿಸು; ಕಲ್ಲುಮುಳ್ಳು ಹುಯ್ಯು, ಕಲ್ಲು ಕಟಿ.

छीना, सक्रि. ಮುಟ್ಟು; ಸವರು, ಬಳಿ.

छीना-छानी, छीना-झपटी, स्त्री. ಒಬ್ಬರ ಮೇಲೊಬ್ಬರು ಬಿದ್ದು ಕಸುಕೊಳ್ಳುವಿಕೆ; ಕಿತ್ತಾಟ, ಕಚ್ಚಾಟ.

छीप, स्त्री. ಚಿತ್ತು, ಕಲೆ, ಚುಕ್ಕೆ; ಒಂದು ಬಗೆ ಚರ್ಮ ರೋಗ, ತಾವರೆ; ಮೀನು ಹಿಡಿಯುವ ಕೋಲು, ಗಾಳ.

छीपना, सक्रि ಬಣ್ಣದ ಮುದ್ರೆ ಹೊತ್ತೆ,

ಬಟ್ಟೆಗೆ ಅಚ್ಚು ಹಾಕು.

छीपी, पु. ಬಟ್ಟೆಗೆ ಬಣ್ಣದ ಮುದ್ರೆ ಹಾಕುವವ.

छीबर, स्त्री. ದೊಡ್ಡ ಹನಿ.

छीमी, स्त्री. ಧಾನ್ಯದ ತೊಗಟೆ; ಶಿಂಬೆ, ಶಮಿ, ಬೀಜಕೋಶ.

छीर, पु. ಕ್ಷೀರ, ಹಾಲು. स्त्री. ಅಂಚು, ಕರೆ.

छील-छाल, पु. ಸಿಪ್ಪೆ ಸುಲಿಯುವಿಕೆ, ಉರಿಚುವಿಕೆ.

छीलन, स्त्री. ಸಿಪ್ಪೆ; ಹೊರಿಕೆ; ತೊಗಟೆ.

छीलना, सक्रि. ಸಿಪ್ಪೆ ತೆಗಿ, ಎಡೆ, ಸುಲಿ; ಕತ್ತಿ ತೆಗೆ, ಹೆರೆ; ಬಗರು; ಚಿವುರು.

छीलर, पु. ಸಣ್ಣ ಕೆರೆ, ಕೊಳ.

छुआ-छुई, स्त्री. ಕಣ್ಣು ಮುಚ್ಚಾಲೆ ಆಟ

छुआ-छूत, स्त्री. ಅಸ್ಪೃಶ್ಯರ ಸ್ಪರ್ಶ, ಮೈಲಿಗೆ, ಹೊಲೆ; ಅಸ್ಪೃಶ್ಯತೆ, ಮುಟ್ಟುಚಿಟ್ಟು.

छुआना, सक्रि. = छुलाना.

छुईमुई, स्त्री. ಮುಟ್ಟಿದರೆ ಮುನಿ, ನಾಚಿಕೆ ಬಳ್ಳಿ.

छुगनूं, पु. ಗುಂಗುರು ಗೂದಲು, ಸುರುಳು ಗೂದಲು.

छुच्छी, स्त्री. ಸಣ್ಣ ಕೊಳವೆ; ಮುರುವು; ಮೂಗುತಿ.

छुटकारना, सक्रि. ಸಿಳ್ಳುಹಾಕು; ಹುರಿದುಂಬಿಸು; ಓಡಿಸು, ತರುಬು; ತಗುಳಿಸು

छुट, अव्य. ಹೊರತು, ವಿನಾ.

छुटका, वि. ಸಣ್ಣ, ಕಿರಿಯ; ಚುಟುಕ.

छुटकाना, सक्रि. ಬಿಡಿಸು; ಬಿಡುಗಡೆ ಮಾಡು.

छुटकारा, पु. ಬಿಡುಗಡೆ, ಖುಲಾಸೆ; ವಿಮೋಚನೆ; ನಿವಾರಣೆ.

छुटना, अक्रि. = छूटना.

छुटपन, पु. ಅಲ್ಪತನ; ಚಿಕ್ಕತನ, ಎಳೆತನ; ಬಾಲ್ಯ, ಚಿಕ್ಕಂದು.

छुटभैया, पु. ತಮ್ಮ; ಸಣ್ಣವರು; ಬಡಜನರು; ಸಾಮಾನ್ಯ ಜನರು.

छुटहरा, वि. ಮುಟ್ಟಿದ್ದರಿಂದ ಮೈಲಿಗೆಯಾದ.

छुटाना, सक्रि. ಬೇರೆಮಾಡು; ತಪ್ಪಿಸು, ಉಳಿಸು.

छुटापा, पु. ಚಿಕ್ಕತನ, ಕಿರಿಯತನ.

छुट्टा, वि. ಬಿಡಿ, ಬಿಚ್ಚಿದ, ಬಿಡಿಬಿಚ್ಚಲು; ಒಂಟಿಯಾದ.

छुट्टी, स्त्री. ಬಿಡುಗಡೆ; ಬಿಡುವು, ತೆರಪು; ಸಾವಕಾಶ, ಬಿಡುಹೊತ್ತು, ಪುರುಸತ್ತು; ರಜಾ; ಹೋಗುವುದಕ್ಕೆ ಅನುಮತಿ, ಅನುಜ್ಞೆ; ಬೀಳ್ಕೊಳ್ಳುವಿಕೆ.

छुड़वाना, सक्रि. छोड़ना का प्रे. रूप.

छुड़ाना, सक्रि. ಬಿಡಿಸು, ತಪ್ಪಿಸು, ನೀಗಿಸು; ಬೇರೆಮಾಡು; ಬಿಡುಗಡೆ ಮಾಡು; ಕೆಲಸದಿಂದ ತೆಗೆದುಹಾಕು; ನಿವೃತ್ತಿಗೊಳಿಸು; ತಳ್ಳಿಹಾಕು. सक्रि. "छोड़ना" का प्रे. रूप.

छुड़ावा, पु. ಬಿಡುಗಡೆ, ಬಿಡಿಸುವಿಕೆ.

छुड़ौती, स्त्री. ಬಿಡುಗಡೆಗಾಗಿ ಕೊಡುವ ಹಣ, ಓಲು; ಮಜಾ ಮಾಡಿದ ಹಣ, ತಳ್ಳುಪಡಿ; ಸೋಡಿ, ಉತ್ತಾರ.

छुहा, पु. ಅಪರಾಧ, ದೋಷ.

छुपना, अक्रि. = छिपना.

छुपाना, सक्रि. = छिपाना.

छुरा, पु. ದೊಡ್ಡ ಚೂರಿ, ಚಾಕು; ಕತ್ತಿ; ಕ್ಷೌರದ ಕತ್ತಿ, ಕ್ಷುರ.

छुरी, स्त्री. ಚೂರಿ, ಚಾಕು; ಸಣ್ಣ ಕತ್ತಿ.

छुलवाना, सक्रि. छुलाना का प्रे. रूप.

छुलाई, स्त्री. ಮುಟ್ಟುವಿಕೆ; ಸ್ಪರ್ಶನ. छुलाई देना = ಮುಟ್ಟಿಸಿಕೊಳ್ಳು.

छुलाना, **छुवाना**, सक्रि. ತಗುಲಿಸು, ಸ್ಪರ್ಶ ಮಾಡಿಸು.

छुहाना, सक्रि. ಸವರು, ಬಣ್ಣ ಬಳಿ.

छुहारा, पु. ಖರ್ಜೂರ, ಉತ್ತುತ್ತೆ.

छूंछा, वि. ಬರಿಯ, ಶೂನ್ಯ; ಖಾಲಿ; ತಿರುಳಿಲ್ಲದ, ಟೊಳ್ಳು; ಬಡವಾದ.

छू, पु. ಮಂತ್ರ ಹಾಕುವ ಶಬ್ದ, ಛೂ. छू मंतर होना = ಹಾರಿ ಹೋಗು, ಅದೃಶ್ಯವಾಗು, ಮಾಯವಾಗು.

छूआनी, स्त्री. ಬಾಣಂತಿ ಔಷಧ, ಬಾಣಂತಿ ಕಾರ.

छूई, स्त्री. ಸೀಮೆ ಸುಣ್ಣ, ಖಡಿಕೆ.

छूकी, स्त्री. ಸೊಳ್ಳೆ, ಚಿಗಟ

छूछ, स्त्री. ಕಬ್ಬಿನ ಸಿಪ್ಪೆ, ಹಿಪ್ಪೆ, ಹೀದೆ.

छूट, स्त्री. ಬಿಡುಗಡೆ, ಖುಲಾಸೆ; ವಜಾ ಮಾಡಿದ ಹಣ, ತಳ್ಳುಪಡಿ; ಸೋಡಿ; ಮಾಫಿ, ವಿನಾಯಿತಿ; ಬಿಡುವು, ಸಾವಕಾಶ; ವಿಸ್ಮರಣ, ಮರವು; ಸ್ವಾತಂತ್ರ್ಯ; ಬೈಗಳು.

छूटना, अक्रि. ಬಿಚ್ಚಿಹೋಗು; ಬಿಡುಗಡೆಯಾಗು; ಬೇರೆಯಾಗು; ಹೊರಡು; ಹಾರು; ಅಗಲು, ನೀಗು; ತಪ್ಪಿಹೋಗು; ಬಿಟ್ಟುಹೋಗು, ಬಿಡು; ನಿಂತುಹೋಗು, ಉಳಿದುಹೋಗು; ನಿವೃತ್ತಿಗೊಳ್ಳು.

छूत, स्त्री. ಸ್ಪರ್ಶ, ಮುಟ್ಟು; ಹೊಲೆ, ಮೈಲಿಗೆ, ಅಶೌಚ; ಅಸ್ಪೃಶ್ಯತೆ, ಮುಟ್ಟುಚಿಟ್ಟು; ದೆವ್ವಸೋಕು.

छूती-कलम, स्त्री. "ಫೌಂಟೆನ್‌ಪೆನ್", ಅಕ್ಷಯಲೇಖನಿ, ಚಿಲುಮೆಲೇಖನಿ.

छूना, अक्रि. ತಗಲು, ತಾಗು; ಮುಟ್ಟು; ತಟ್ಟು, ಅಂಟು. सक्रि. ಮುಟ್ಟು, ಸ್ಪರ್ಶಿಸು; ಎಟಕು; ಸವರು, ಬಳಿ.

छेंक, पु. ತಡೆ, ನಿರೋಧ; ಜಪ್ತಿ, ಮುಟ್ಟುಗೋಲು.

छेंकना, सक्रि. ಮುತ್ತಿಕೊಳ್ಳು, ಸುತ್ತುಗಟ್ಟು; ತಡೆ, ನಿಲ್ಲಿಸು, ಅಡ್ಡಿಮಾಡು; ಮುಟ್ಟುಗೋಲು ಹಾಕು.

छेंकवैया, पु. ಮುಟ್ಟುಗೋಲು ಹಾಕುವವ, ಜಪ್ತಿ ಮಾಡುವವ.

छेक, पु. ತೂತು, ರಂಧ್ರ; ತುಂಡು, ಹೋಳು.

छेकना, सक्रि. ಹೊರಕ್ಕೆ ತೆಗೆ; ಅಡ್ಡಬರು, ತಡೆ, ಅಟಕಾಯಿಸು; ಮುಟ್ಟುಗೋಲು ಹಾಕು.

छेड़, स्त्री. ಚಲ್ಲಾಟ, ನಗಚಾಟಿಕೆ, ಗೇಲಿ; ಅಣಕ; ರೇಗಿಸೋಣ; ರೇಗಿಸುವ ಮಾತು; ತಿಕ್ಕಾಟ.

छेड़-खानी, स्त्री. = छेड़छाड़.

छेड़छाड़, स्त्री. ಸರಸ, ಚಕ್ಕಂದ; ಚಲ್ಲಾಟ, ನಗಚಾಟಿಕೆ, ಪರಿಹಾಸ. छेड़छाड़ करना = ಕೈಸರಸವಾಡು, ಕಟ್ಟಾಡಿಸು; ಚಕ್ಕಂದವಾಡು; ಕೆಣಕು, ರೇಗಿಸು.

छेड़ना, सक्रि. ಅಮುಕು; ಅಂಗಸ್ಪರ್ಶದಿಂದತೊಂದರೆಪಡಿಸು; ಹಿಂಸಿಸು; ಕೆಣಕು, ರೇಗಿಸು; ಪರಿಹಾಸಮಾಡು; ಪ್ರಾರಂಭಿಸು, ಹೂಡು; (ವಾದ್ಯ)ಮೀಟು, ಬಾಜಿಸು; ಶಸ್ತ್ರಕ್ರಿಯೆ ಮಾಡು.

छेड़वाना, सक्रि. **छेड़ना** का प्रे. रूप.

छेद, पु. ಕಡಿಯುವಿಕೆ; ಕೊರೆಯುವಿಕೆ; ನಾಶ, ಧ್ವಂಸ; (ಗಣಿತದಲ್ಲಿ) ಭಾಜಕ; ಛೇದ; ರಂಧ್ರ, ತೂತು; ಬಿಲ; ದೋಷ, ಐಬು.

छेदक, वि. ಕಡಿಯುವವ; ನಾಶಕಾರಿ; ವಿಭಾಜಕ.

छेदन, पु. ಕೊಯ್ಯುವಿಕೆ; ನಾಶ; ತೂತು ಕೊರೆಯುವ ಯಂತ್ರ, ಬೈರಿಗೆ, ಬರಮ

छेदना, सक्रि. ತೂತು ಕೊರೆ, ರಂಧ್ರ ಹಾಕು; ಚುಚ್ಚು, ತಿವಿ; ಗಾಯಮಾಡು.

छेना, पु. ಒಡೆದ ಹಾಲಿನಿಂದ ಮಾಡಿದ ಒಂದು ಮಿಠಾಯಿ, ಹಾಲುಖೋವಾ.

छेनी, स्त्री. ಚಾಣ, ಕಲ್ಲುಳಿ, ಟಂಕ.

छेम, पु. ಕ್ಷೇಮ, ಕುಶಲ.

छेरी, स्त्री. ಹೆಣ್ಣಾಡು, ಮೇಕೆ.

छेव, पु. ಗಾಯ, ಕಚ್ಚು; ರೂಢಿ, ಪದ್ಧತಿ

छेवना, स्त्री. ಹೆಂಡ, ಕಳ್ಳು. सक्रि. ಕಡಿ; ಗುರುತುಮಾಡು; ಎಸೆ, ಹಾಕು.

छैना, पु. ಚಾಕಟ್ಟು, ಗೂಡು

छैल, **छैल चिकनियां**, **छैल छबीला**, **छैला**, वि. ಸುಂದರ, ಚೆಲುವ; ಸೊಗಸುಗಾರ, ಮೋಜುಗಾರ, ಷೋಕಿನವ, ಷೋಕಿಲಾಲ, ಒಲವುಗಾರ.

छैलापन, पु. ಷೋಕಿ, ಮೋಜು.

छोंकना, सक्रि. = **छौंकना**.

छोंछी, स्त्री. ದಬ್ಬಳ; ಸೂಜಿಗಳಿಡುವ ಪೆಟ್ಟಿಗೆ; ಸಣ್ಣ ಮಕ್ಕಳ ಬಟ್ಟಲು.

छोंड़ा, पु. ಕಡೆಗೋಲು, ಮಂತು.

छोक, पु. ಪ್ರೀತಿ; ಕೋಪ, ಸಿಟ್ಟು.

छोकड़ा, **छोकरा**, पु. ಹುಡುಗ, ಪೋರ.

छोकड़ी, **छोकरी**, स्त्री. ಹುಡುಗಿ ಪೋರಿ.

छोछो, स्त्री. ಹಾಲು ಕುಡಿಸುವ ದಾದಿ.

छोटा, वि. ಸಣ್ಣ, ಚಿಕ್ಕ; ಕಿರಿಯ; ಅಲ್ಪ; ತುಚ್ಛ; ನೀಚ. छोटा मोटा = ಚಿಕ್ಕ ಪುಟ್ಟ; ಸಾಧಾರಣದ, ಸಾಮಾನ್ಯವಾದ

छोटाई, स्त्री. ಅಲ್ಪತನ; ಚಿಕ್ಕತನ; ನೀಚತನ.

छोटापन, पु. ಅಲ್ಪತನ; ಬಾಲ್ಯ.

छोटाहाज़िरी, स्त्री. ಬೆಳಗಿನ ಊಟ (ಆಂಗ್ಲೋ ಇಂಡಿಯನರ ಮಾತು).

छोड़ना, सक्रि. ಹೋಗಗೊಡು, ಬಿಡು; ಬಿಡುಗಡೆ ಮಾಡು; ಮಾಫಿ ಮಾಡು, ಮನ್ನಿಸು; ಬಿಟ್ಟು ಬಿಡು, ತ್ಯಜಿಸು, ಕೈಬಿಡು, ತೊರೆ; ಹಾರಿಸು, ಎಸೆ; ಬೆನ್ನಟ್ಟಿಸು, ಛೂ ಬಿಡು; ಮುಂದುವರಿಸು, ತಳ್ಳು, ದಬ್ಬು, ದೂಡು; ಉಳಿಸು, ಉಳಿಸಿಡು, ಹಾಕು.

छोड़वाना, सक्रि. **छोड़ना** का प्रे. रूप.

छोड़ाना, सक्रि. = **छोड़ना**.

छोप. पु. ಲೇಪ ಹಚ್ಚುವಿಕೆ, ಲೇಪನ; ಗಾರೆ ಬಳಿಯುವಿಕೆ; ಏಟು, ಪೆಟ್ಟು; ಮರೆ, ಮುಚ್ಚುಮರೆ.

छोपना, सक्रि. ಲೇಪಹಚ್ಚು, ಲೇಪಿಸು; ಬಳಿ, ಹಚ್ಚು, ಸವರು; ಅಮುಕು,

ದಬಾಯಿಸು; ಮುಚ್ಚಿಸು; ರಕ್ಷಿಸು.

छोर, पु. ಅಂಚು, ಕರೆ; ದಡ, ಎಲ್ಲೆ; ತುದಿ. ओर छोर = ತುದಿಮೊದಲು, ಆದಿ ಅಂತ.

छोरा, पु. ಹುಡುಗ, ಪೋರ

छोरा छोरी, स्त्री. ಎಳೆದಾಟ, ಕಚ್ಚಾಟ.

छोलदारी, स्त्री. ಡೇರೆ, ಗುಡಾರ.

छोलना, सक्रि. ಸುಲಿ. ಎಡೆ; ಪರಚು, ಗೀಚು

छोला, पु. ಕಡಲೆ.

छोह, पु. ಪ್ರೀತಿ; ದಯೆ.

छोहना, सक्रि. ಪ್ರೀತಿಸು; ದಯೆ ತೋರು

छोहारा, पु. = छुहारा.

छौंक, स्त्री. ಒಗ್ಗರಣೆ.

छौंकन, पु. ಒಗ್ಗರಣೆ ಸಾಮಾನು.

छौंकना, सक्रि. ಒಗ್ಗರಣೆ ಹಾಕು, ಒಗ್ಗರಿಸು, ತಾಳಿಸು.

छौकना, अक्रि. ಹಾರು, ನೆಗೆ, ಹಾಯು

छौना, पु. ಮರಿ.

छौलदारी, स्त्री. ಗುಡಾರ, ಡೇರೆ.

ज

जंग, पु. ಎತ್ತಿನ ಗಾಡಿಗಳಿಗೆ ಕಟ್ಟಿ ನೇತಾಡಿಸುವ ಹಿತ್ತಾಳೆ ಗಂಟೆಗಳು. स्त्री. ಯುದ್ಧ, ಕಾಳಗ, ಸಮರ. जंग-ओ जदल = ಜಗಳ, ಕಚ್ಚಾಟ. मैदाने जंग = ಸಮರಾಂಗಣ, ಯುದ್ಧಕ್ಷೇತ್ರ.

ज़ंग, पु. ತುಕ್ಕು. ಕಿಲುಬು, ಕಿಟ್ಟ, ಜಂಗು

जंगल, पु. ಕಾಡು, ವನ; ಮರುಭೂಮಿ; ಬೀಳು ಜಮೀನು.

जंगला, पु. ಸಣ್ಣ ಗಿಡಗಳ ಪೊದೆ, ಪೊದೆಗಳುಳ್ಳ ಅಡವಿ, ಕುಚ್ಚುಕಾಡು; ಸಲಾಕಿಗಳುಳ್ಳ ಕಿಟಕಿ, ಕಟಾಂಜನ, ಕಟಕಟೆ; ಪಂಜರ, ಗೂಡು.

जंगली, वि. ಅಡವಿಯ, ಕಾಡಿನ; ಪಳಗಿಸದ; ಒರಟಾದ; ಅನಾಗರಿಕ. जंगली पेड़ = ಕಾಡು ಮರ. जंगली बिल्ली = ಕಾಡು ಬೆಕ್ಕು.

ज़ंगार, ज़ंगाल, पु. ತಾಮ್ರದ ಕಿಲುಬು, ತುತ್ತು; ಮೈಲುತುತ್ತು; ತುಕ್ಕು.

ज़ंगारी, वि. ತುತ್ತದ; ನೀಲಿ ಬಣ್ಣದ.

ज़ंगालूद, वि. ತುಕ್ಕು ಹಿಡಿದ.

जंगावर, वि. ಯುದ್ಧ ಮಾಡುವವ, ಯೋಧ.

जंगी, वि. ಯುದ್ಧದ; ಸೈನ್ಯಸಂಬಂಧವಾದ, ರಾಣುವೆಯ; ರಣವೀರನಾದ; ದೊಡ್ಡ. जंगी जहाज़ = ಯುದ್ಧನಾವೆ

ज़ंगी वि. ನೀಗ್ರೋ; ಕರಿಯ.

जंघा, स्त्री. ತೊಡೆ.

जंचना, अक्रि. ಪರೀಕ್ಷಿಸಲ್ಪಡು; ನೋಡಲ್ಪಡು; ಸರಿದೋರು, ಕಾಣು.

जंचवैया, पु. ಪರೀಕ್ಷಕ, ಪರಿಶೋಧಕ

जंचा, वि. ಪರೀಕ್ಷಿಸಲ್ಪಟ್ಟ; ಮನಗಂಡ

जंचावट, स्त्री. ಪರೀಕ್ಷೆ. ಶೋಧನೆ.

जंजबील, स्त्री. ಒಣ ಶುಂಠಿ

जंजाल, पु. ತೊಂದರೆ; ಜೊಂಜಾಟ, ರಗಳೆ; ಗೋಜಲು; ಮಾಯಾಜಾಲ; ಸುಳಿ; ದೊಡ್ಡ ಫಿರಂಗಿ

जंजाली, पु. ಜಗಳಗಂಟ; ರಗಳೆಯುವ; ದೊಡ್ಡ ಬಾಯಿಯ ಫಿರಂಗಿ.

ज़ंजीर, स्त्री. ಸಂಕೋಲೆ, ಸರಪಣಿ; ಬೇಡಿ, ಕೈಕೋಳ; ಚಿಲಕ.

जंजीरा, पु. ಚಿಮ್ಮಂಡಿ, ಝಿಲ್ಲಿಕೆ, ಜಿಟ್ಟೆ.

ज़ंजीरा, पु. ಕಂಠಿಯ ಸರ; ಒಂದು ಬಗೆ ಹೊಲಿಗೆ.

जंतर, पु. ಯಂತ್ರ; ಸಾಧನ; ರಕ್ಷೆ, ತಾಯಿತಿ. जंतर मंतर = ಮಾಟ ಮಂತ್ರ, ಯಂತ್ರತಂತ್ರ; ವೇಧಶಾಲೆ, ನಕ್ಷತ್ರಶಾಲೆ.

जंतरी, स्त्री. ತಂತಿ ಎಳೆಯುವ ಯಂತ್ರ, ಕಂಬಚ್ಚು; ಪಂಚಾಂಗ. पु. ಮಾಟಗಾರ; ವಾದ್ಯಗಾರ.

जंतसार, पु. ಯಂತ್ರದ ಮನೆ, ಯಂತ್ರಶಾಲೆ.

जंता, पु. ಯಂತ್ರ; ತಂತಿ ಎಳೆಯುವ ಸಲಕರಣೆ, ಕಂಬಚ್ಚು. वि. ಶಾಸನ ಮಾಡುವವ, ಆಳುವವ.

जंताना, सक्रि. ಕಿವುಚು, ಒತ್ತು.

जंती, स्त्री. ತಂತಿ ಎಳೆಯುವ ಸಲಕರಣೆ, ಕಂಬಚ್ಚು; ತಾಯಿತಿ.

जंत्र, पु. = जंतर.

जंत्री, स्त्री. ವಾದ್ಯ, ಬಾಜಾ ಬಜಂತ್ರಿ; ಪಂಚಾಂಗ, ಪಂಜಿಕೆ.

ज़ंद, पु. ಪಾರ್ಸಿಯರ ಧರ್ಮಗ್ರಂಥ; ಈ ಗ್ರಂಥದ ಭಾಷೆ.

जंदरा, जंदा, पु. ಯಂತ್ರ; ಬೀಸುವ ಕಲ್ಲು; ಕೀಲಿ, ಬೀಗ.

जंपति, पु. ದಂಪತಿ, ಗಂಡಹೆಂಡತಿ.

* 18

जंपना, अक्रि. ಹೇಳು, ಅನ್ನು.

जंबीर, पु. ಒಂದು ಬಗೆ ನಿಂಬೆ; ಮರುಗ.

जंबीरी नीबू, पु. ಒಂದು ಬಗೆ ನಿಂಬೆ, ಜಂಬೀರ

जंबूर, पु. जंबूरक, स्त्री. ಒಂದು ಬಗೆ ತುಪಾಕಿ; ಫಿರಂಗಿಯ ಗಾಡಿ; ಕೀಲು, ತಿರುಗಣೆ, ಬಿಜಾಗರಿ.

जंबूरची, पु. ತುಪಾಕಿ ಹೊಡೆಯುವವ.

जंबूरा, पु. ತುಪಾಕಿಯ ಬಂಡಿ; ತಿರುಗಣೆ, ಕೀಲು; ಅಕ್ಕಸಾಲೆಯ ಇಕ್ಕಳ, ಶ್ರವಣ, ತಂಡಸ.

जंभ, पु. ದವಡೆ ಹಲ್ಲು; ಆಕಳಿಕೆ.

जंभाई, स्त्री. ಆಕಳಿಕೆ.

जंभाना, अक्रि. ಆಕಳಿಸು; ಬಾಯಿ ತೆರೆ.

जंभीरी, स्त्री. ಒಂದು ಬಗೆ ನಿಂಬೆ ಹಣ್ಣು.

जंई, स्त्री. ತೋಕೆ ಗೋಧಿ; ಮೊಳಕೆ; ಎಳೆಯ ಕುಂಬಳ ಕಾಯಿ; ಮಿಡಿಗಾಯಿ, ಮಿಡಿ, ಮೊಗರು.

ज़ईफ़, वि. ಮುದಿ; ವೃದ್ಧ, ಮುದುಕ.

ज़ईफ़ी, स्त्री. ಮುದಿತನ; ವಾರ್ಧಕ್ಯ, ಮುಪ್ಪು.

जकंद, स्त्री. ನೆಗೆತ, ಕುಣಿತ.

जकंदना, अक्रि. ನೆಗೆ, ಹಾರು; ಹಾಯು

जक, पु. ನಿಧಿ ನಿಕ್ಷೇಪಗಳನ್ನು ಕಾಯುವ ಭೂತ; ಕೃಪಣ. स्त्री. ಹಟ; ಹುಚ್ಚು; ಉರು.

ज़क, स्त्री. ಅಪಜಯ, ಸೋಲು; ನಷ್ಟ, ಹಾನಿ; ಮಾನ ನಷ್ಟ, ಅವಮಾನ.

जकड़, स्त्री. ಬಿಗಿಯುವಿಕೆ, ಕಟ್ಟುವಿಕೆ.

जकड़ना, सक्रि. ಕಟ್ಟು, ಬಂಧಿಸು;

ಬಿಗಿ, ಬಿಗಿದು ಕಟ್ಟು अक्रि. ಕೈಕಾಲು ಸೆಳೆ, ಸೇದು; ಜೋಮು ಹಿಡಿ.

जकड़बंद, वि. ಬಿಗಿಯಾದ, ಬಂದೋಬಸ್ತಾದ.

जक़न, पु. ಚಿಬುಕ, ಗಡ್ಡ, ಗಲ್ಲ.

ज़का, पु. ಚಾತುರ್ಯ; ಜಾಣತನ.

ज़कात, पु. ಕುರಾನಿನ ಪ್ರಕಾರ ಧರ್ಮಕ್ಕಾಗಿ ವೆಚ್ಚಮಾಡತಕ್ಕ ವರಮಾನದ ನಲವತ್ತನೆಯ ಭಾಗ, ಜಕಾತಿ; ದಾನಧರ್ಮ; ತೆರಿಗೆ, ಸುಂಕ.

ज़क़ावत, स्त्री. ಬುದ್ಧಿವಂತಿಕೆ; ಜಾಣ್ಮೆ.

ज़क़ी, वि. ಬುದ್ಧಿವಂತ; ಜಾಣ.

जख़मा, पु. = मिज़राब.

ज़ख़ामत, स्त्री. ದಪ್ಪ, ಸ್ಥೂಲತೆ.

ज़ख़ीरा, पु. ಬೊಕ್ಕಸ, ಭಂಡಾರ; ರಾಶಿ, ಕುಪ್ಪೆ; ಗಿಡಮತ್ತುಬೀಜಮಾರುವಸ್ಥಳ

ज़ख़्म, पु. ಗಾಯ, ಹುಣ್ಣು; ಜಖಂ.

ज़ख़्मी, वि. ಗಾಯ ಹೊಂದಿದ; ನೊಂದ

जग, पु. ಜಗತ್ತು, ಪ್ರಪಂಚ.

जगजगा, वि. ಜಗಜಗಿಸುವ, ಹೊಳೆಯುವ; ಥಳಥಳಿಸುವ.

जगजगाना, अक्रि. ಜಗಜಗಿಸು, ಗಜಗಲಿಸು; ಮಿಣುಕು, ಥಳಥಳಿಸು.

जगजगाहट, स्त्री. ಹೊಳಪು, ಮಿಂಚು.

जगजाना, वि. ಲೋಕಕ್ಕೆಲ್ಲಾ ತಿಳಿದ, ಲೋಕವಿದಿತ, ಲೋಕಪ್ರಸಿದ್ಧ.

जगड्वाल, पु. ಆಡಂಬರ, ಡಾಂಭಿಕ.

जगत, पु. ಜಗತ್ತು, ಪ್ರಪಂಚ; ಭಾವಿಯ ಸುತ್ತಲೂ ಕಟ್ಟಿದ ಜಗಲಿ.

जगत्सेठ, पु. ದೊಡ್ಡ ಸಾಹುಕಾರ, ಕೋಟೀಶ್ವರ.

जगती, स्त्री. ಲೋಕ, ಭೂಮಿ.

जगना, अक्रि. ಎಚ್ಚತ್ತಿರು; ನಿದ್ದೆಬಿಟ್ಟು ಏಳು, ಎಚ್ಚರಗೊಳ್ಳು, ಹುರಿದುಂಬು; ರೇಗು; ಜ್ವಾಲೆ ಎದ್ದು ಉರಿ; ಹೊಳೆಯು; ಹೊಮ್ಮು, ಉಕ್ಕು; ಮೂಡು.

जगमग, जगमगा, वि. ಹೊಳೆಯುವ, ಥಳಗುಟ್ಟುವ, ಮಿನುಗುಟ್ಟುವ.

जगमगाना, अक्रि. ಹೊಳೆಯು, ಥಳಥಳಿಸು, ಮಿನುಗುಟ್ಟು, ಮೆರೆ.

जगमगाहट, स्त्री. ಹೊಳಪು, ಕಾಂತಿ, ಮಿಂಚು.

जगरमगर, वि. = जगमगा.

जगवाना, सक्रि. जगाना का प्रे. रूप.

जगह, स्त्री. ಜಾಗ, ಸ್ಥಾನ, ಸ್ಥಳ; ಎಡೆ, ಅವಕಾಶ; ತೆರಪು.

जगहर, पु. ಜಾಗರೂಕತೆ; ಜಾಗರಣೆ.

ज़गात, पु. = ज़कात.

जगाना, सक्रि. ಎಚ್ಚರಗೊಳಿಸು; ಎಬ್ಬಿಸು; ಹೊಮ್ಮಿಸು, ಮೂಡಿಸು; ಹುರಿದುಂಬಿಸು; ರೇಗಿಸು.

जगार, जगाहट, स्त्री. ಜಾಗರಣೆ.

जघन, पु. ನಿತಂಬ, ಪೃಷ್ಠ.

जचना, अक्रि. = जंचना.

ज़च्चा, स्त्री. ಪ್ರಸೂತೆ, ಬಾಣಂತಿ.

ज़च्चाख़ाना, पु. ಸೂತಿಕಾಗೃಹ, ಹೆರಿಗೆಮನೆ.

जजमान, पु. ಬ್ರಾಹ್ಮಣರಿಗೆ ದಾನ ಕೊಡುವವ; ಗೃಹಸ್ಥ; ಗ್ರಾಹಕ, ಕುಳ

जजमानी, स्त्री. ಉದಾರಾಶ್ರಯ.

जज़्र, पु. ಮೂಲ, ವರ್ಗಮೂಲ; ಸಮುದ್ರದ ಇಳಿತ.

ज़जर, पु. ಗದರಿಕೆ, ಜಂಕಣೆ.

जज़ा, पु. ಪ್ರತಿಕ್ರಿಯೆ; ಪ್ರತಿಫಲ, ಫಲಿತಾಂಶ.

जज़िया, पु. ತಲೆ ತೆರಿಗೆ; ಮುಸಲ್ಮಾನ ರಾಜರು ಹಿಂದುಗಳ ಮೇಲೆ ವಿಧಿಸುತ್ತಿದ್ದ ತಲೆಗಂದಾಯ.

जज़ीरा, पु. ದ್ವೀಪ, ಕುದುರು, ನಡುಗಡ್ಡೆ.

जज़ीरा-नुमा, पु. ದ್ವೀಪಕಲ್ಪ, ಅರ್ಧದ್ವೀಪ, ಪರ್ಯಾಯದ್ವೀಪ.

जज़्ब, पु. ಆಕರ್ಷಣೆ, ಎಳೆತ.

जज़्बा, पु. ಮನೋಭಾವ; ಆವೇಶ; ಬಯಕೆ, ಗೀಳು; ಈಶ್ವರನಲ್ಲಿ ತಲ್ಲೀನತೆ; ಲಯ; ಪರವಶತೆ; ಸಮಾಧಿ ಸ್ಥಿತಿ.

जटना, सक्रि. ಮೋಸದಿಂದ ತೆಗೆದುಕೊಳ್ಳು; ಅಪಹರಿಸು, ಠಕ್ಕಿಸು.

जटल, स्त्री. ಹುಚ್ಚು ಹರಟೆ, ಗಪ್ಪು, ವದರಾಟ. जटल काफ़िया = ಅಸಂಬದ್ಧ ಪ್ರಲಾಪ.

जटल्ली, पु. ಹರಟೆ ಮಲ್ಲ, ಗಳಪ.

जटा, स्त्री. ಜಡೆಗಟ್ಟಿದ ಕೂದಲು, ಜಟೆ, ಜಡೆ, ಮುಣುಕು; ಜುಟ್ಟು, ಶಿಖೆ; ಆಲದ ಬಿಳಲು; ಜಟಾಮಾಂಸಿ ಗಿಡ.

जटाना, अक्रि. ಮೋಸ ಹೋಗು. सक्रि. "जटना" का प्रे. रूप.

जटाला, स्त्री. ಜಟಾಮಾಂಸಿ ಗಿಡ.

जटित, वि. ರತ್ನಖಚಿತ, ಕೆತ್ತಿದ.

जटिल, पु. ಸಿಂಹ. स्त्री. ಹಿಪ್ಪಲಿ. वि. ಜಡೆಗಟ್ಟಿದ ಕೂದಲುಳ್ಳ; ತೊಡಕಾದ, ಸಿಕ್ಕುಬಿದ್ದ; ಕಠಿಣವಾದ

जटिलता, स्त्री. ಸಿಕ್ಕು; ಗೊಂದಲ; ತೊಡಕು.

जटवा, पु. 'ಜಾಟ್' ಎಂಬ ಜಾತಿಯವರು.

जट्टी, स्त्री. "जाट" का स्त्री. रूप.

जट्ठा, पु. ಹುಕ್ಕದ ಸುಟ್ಟ ಹೊಗೆ ಸೊಪ್ಪಿನ ಭಾಗ; ಹೊಗೆಸೊಪ್ಪಿನ ಬೂದಿ.

जठर, पु. ಜಠರ, ಹೊಟ್ಟೆ. वि. ಕಠಿಣ.

जठराम, पु. ಜಲೋದರ.

जड़, वि. ಅಚೇತನವಾದ, ಜಡ. स्त्री. ಬೇರು, ಮೂಲ; ಅಸ್ತಿಭಾರ, ತಳಹದಿ; ಬುಡ, ಆಧಾರ. जड़ उखाड़ना = ಬುಡಮುಟ್ಟ ಕಿತ್ತು ಬಿಡು; ನಿರ್ಮೂಲ ಮಾಡು. जड़ जमना = ನೆಲೆಗೊಳ್ಳು, ಬೇರೂರು.

जड़ता, स्त्री. ಜಡತ್ವ; ಮೂರ್ಖತನ.

जड़न, स्त्री. ರತ್ನ ಕೆತ್ತುವ ಕೆಲಸ, ಪಚ್ಚಿಯ ಕೆಲಸ; ಕುಂದಣದ ಕೆಲಸ.

जड़ना, सक्रि. ರತ್ನ ಕೆತ್ತು, ಪಚ್ಚಿಯ ಕೆಲಸ ಮಾಡು, ಖಚಿತ ಮಾಡು; ಹದಿಕಟ್ಟು; ನೆಡು; ಬೆಸಗೆ ಹಾಕು; ಜಡಿ, ಬಡಿ; ಚಾಡಿ ಹೇಳು.

जड़वाना, सक्रि. जड़ना का प्रे. रूप.

जड़हन, पु. ನಾಟಿ ಹಾಕಿದ ಭತ್ತದ ಬೆಳೆ; ಸುಗ್ಗಿ ಭತ್ತ.

जड़ाई, स्त्री. ಕುಂದಣದ ಕೆಲಸ; ಕೆತ್ತುವಿಕೆ; ನಾಟುವಿಕೆ; ನಾಟುವುದಕ್ಕೆ ಅಥವಾ ಕುಂದಣದ ಕೆಲಸಕ್ಕೆ ಕೊಡುವ ಕೂಲಿ

जड़ाऊ, वि. ರತ್ನಖಚಿತ, ಕುಂದಣದ ಕೆಲಸ ಮಾಡಿದ, ರತ್ನಪಡಿ.

जड़ाना, अक्रि ನೆಗಡಿಯಾಗು. सक्रि. जड़ना का प्रे. रूप.

जड़ाव, पु. जड़ावट, स्त्री. ರತ್ನಗಳನ್ನು ಕೆತ್ತುವಿಕೆ, ಕುಂದಣದ ಕೆಲಸ.

जड़वार, जड़ावल, पु. ಚಳಿಗಾಲದ ಉಡಿಗೆ, ಬೆಚ್ಚಗಿರುವ ಬಟ್ಟೆ.

जड़ित, वि. =जड़ाऊ.

जड़िया, पु. ರತ್ನಕೆತ್ತುವವ, ಕುಂದಣದ ಕೆಲಸ ಮಾಡುವವ, ಕುಂದಣಗಾರ.

जड़ी, स्त्री. ಮೂಲಿಕೆ, ವನಸ್ಪತಿ

जड़ीबूटी, स्त्री. ವನೌಷಧಿ, ಗಿಡಮೂಲಿಕೆ

जड़ुआ, वि. =जड़ाऊ.

जड़ैया, स्त्री. ಚಳಿಜ್ವರ.

जतन, पु. ಯತ್ನ; ಉಪಾಯ; ದಾರಿ.

जतनी, वि. ಚತುರ; ಉಪಾಯಗಾರ.

जतलाना, जताना, सक्रि. ಸೂಚಿಸು, ತಿಳಿಸು; ವ್ಯಕ್ತಪಡಿಸು; ತೋರ್ಪಡಿಸು.

जती, पु. ಯತಿ, ಸನ್ಯಾಸಿ.

जतुक, पु. ಹಿಂಗು; ಅರಗು; ಮುಚ್ಚೆ, ಕಲೆ

जत्रु, पु. ಕುತ್ತಿಗೆಯ ಎಲುಬು, ಜತ್ರು

जत्था, पु. ಗುಂಪು, ಹಿಂಡು, ತಂಡ.

जथा, क्रिवि. ಯಥಾ, ಹೇಗೆ, ಯಾವ ಪ್ರಕಾರವಾಗಿ. स्त्री. ಮೂಲಧನ, ಬಂಡವಾಳ. पु. ಗುಂಪು, ಹಿಂಡು, ತಂಡ; ರಾಶಿ, ಸಮೂಹ; ಬಲ.

जथार्थ, वि. ಯಥಾರ್ಥ, ನಿಜ.

जद, क्रिवि. ಯಾವಾಗ. अव्य. ಯದಿ, ಆದರೆ, ಒಂದುವೇಳೆ. स्त्री. ಗುಂಗುರು ಗೂದಲು.

ज़द, पु. ಏಟು, ಪೆಟ್ಟು, ನಷ್ಟ, ಹಾನಿ; ಗುರಿ, ಲಕ್ಷ್ಯ. ज़द-ओ-कोब = ಹೊಡೆದಾಟ.

ज़दगी, स्त्री. ಉಪದ್ರವ, ಉಪಟಳ.

जदपि, क्रिवि. ಯದ್ಯಪಿ, ಆದರೂ.

जदल, पु. ಯುದ್ಧ, ಕದನ.

जदवार, स्त्री. ಒಂದು ವಿಷನಾಶಕ ಮೂಲಿಕೆ, ನಿರ್ವಿಷೀ.

ज़दा, वि. ಹೊಡೆಯಲ್ಪಟ್ಟ, ಆಹತ; ತೊಂದರೆಗೆ ಗುರಿಯಾದ, ಪೀಡಿತ; ಅಲಂಕೃತವಾದ; ಹಳೆಯ, ಪುರಾತನ.

जदीद, वि. ಹೊಸ, ನವ; ನವೀನ.

जद्द, पु. ಪಿತಾಮಹ, ಅಜ್ಜ.

जद्दी, वि. ಪೈತೃಕವಾದ.

जन पु. ಮನುಷ್ಯ, ಜನ; ಆಳು; ಕಟ್ಟುಡ; ಕೂಲಿ, ಮಜೂರಿ.

ज़न, स्त्री. ಮಹಿಳೆ, ಮಡದಿ; ಸ್ತ್ರೀ, ಪತ್ನಿ. ज़न-मुरीद = ಸ್ತ್ರೀವಶನಾದ (ಗಂಡ).

ज़नख़, पु. ಚಿಬುಕು, ಗಡ್ಡ.

ज़नख़दां, पु. ಚಿಬುಕದ ತಗ್ಗು.

ज़नख़ा, वि. ಹೆಣ್ಣಿಗ; ಹೇಡಿ; ನಪುಂಸಕ

जनता, स्त्री. ಜನಸಾಮಾನ್ಯ, ಜನಪದ.

जनन, पु. ಜನನ, ಹುಟ್ಟು, ಜನ್ಮ.

जनना, सक्रि. ಹೆರು, ಹಡೆ; ಪ್ರಸವಿಸು; ಈನು, ಹುಟ್ಟಿಸು. अक्रि. ಹುಟ್ಟು.

जनम, पु. ಜನ್ಮ, ಹುಟ್ಟು; ಜೀವ, ಬಾಳು

जनमघूटी, स्त्री. ಎಳೆಯ ಕೂಸುಗಳಿಗೆ ಕುಡಿಸುವ ಒಂದು ಭೇದಿಯ ಔಷಧ, ಬಜೆ ಬೆಣ್ಣೆ

जनमना, अक्रि. ಜನ್ಮವೆತ್ತು; ಹುಟ್ಟು.

जनमाना, सक्रि. ಹುಟ್ಟಿಸು, ಹೆರಿಗೆ ಮಾಡು.

जनवाई, स्त्री. = जनाई.

जनवाना, सक्रि. ಪ್ರಸವ ಮಾಡಿಸು, ಹೆರಿಗೆ ಮಾಡಿಸು; ಸೂಚನೆ ಕೊಡು; ತಿಳಿಯಪಡಿಸು.

जनवास, जनवासा, पु. ಮದುವೆಯಲ್ಲಿ ಬೀಗರು ತಂಗುವ ಮನೆ, ಬಿಡದಿ.

जना, पु. ಪುರುಷ; ವ್ಯಕ್ತಿ; ಮಗ.

जनाई, स्त्री. ಸೂಲಗಿತ್ತಿ; ಸೂಲಗಿತ್ತಿಗೆ ಕೊಡುವ ರುಸುಂ.

जनाज़ा, पु. ಹೆಣ, ಶವ; ಶವದ ಪೆಟ್ಟಿಗೆ ಅಥವಾ ಚಟ್ಟ.

ज़नानख़ाना, पु. ಹೆಣ್ಣು ಮಕ್ಕಳಿರುವ ಸ್ಥಳ; ಅಂತಃಪುರ, ಕನ್ನೆಮಾಡ.

जनाना, सक्रि. ತಿಳಿಸು, ಅರುಹು; ತಿಳಿಯಪಡಿಸು; ಎಚ್ಚರಿಸು; ಸೂಚಿಸು; ಪ್ರಸವ ಮಾಡಿಸು, ಹೆರಿಗೆ ಮಾಡಿಸು.

ज़नाना, वि. ಸ್ತ್ರೀಯರ, ಹೆಂಗಸರ; ಹೆಣ್ಣಿಗ, ನಪುಂಸಕ; ಹೇಡಿ, ಪುಕ್ಕ. पु. ಹೆಂಗಸು; ಹೆಣ್ಣಿಗ, ನಪುಂಸಕ; ಕನ್ನೆಮಾಡ, ಅಂತಃಪುರ; ಪತ್ನಿ, ಕುಟುಂಬ.

ज़नानापन, पु. ಸ್ತ್ರೀತ್ವ; ನಪುಂಸಕತ್ವ

जनाब, पु. ಸ್ವಾಮಿ, ಮಹಾಶಯ. जनाब आली = ಘನ ಹೊಂದಿದ ಮಹಾಶಯರು, ಸಾಹೇಬರು. जनाब मन = ಪ್ರಿಯ ಮಹಾಶಯರೆ !

जनाव, पु. ತಿಳುವಳಿಕೆ, ಸೂಚನೆ.

जनियां, स्त्री. ಸ್ತ್ರೀ; ತಾಯಿ, ಅಮ್ಮ; ದಾಸಿ.

जनु, क्रिवि. ಅಂತೆ, ಅನ್ನುವಂತೆ.

जनून, पु. ಹುಚ್ಚು; ಪೈತ್ಯ

जनूनी, वि. ಹುಚ್ಚ, ಹುಚ್ಚುಹಿಡಿದ.

जनूब, पु. ದಕ್ಷಿಣ ದಿಕ್ಕು, ತೆಂಕಲು.

जनूबी, वि. ದಕ್ಷಿಣದ, ದಾಕ್ಷಿಣಾತ್ಯ.

जनेऊ, पु. ಜನಿವಾರ; ಮುಂಜಿ, ಉಪನಯನ; ರತ್ನಗಳಲ್ಲಿ ಒಂದು ದೋಷ.

जनेत, स्त्री. ಮದುವಣಿಗನ ಮೆರವಣಿಗೆ, ದಿಬ್ಬಣ; ಬೀಗರು.

जनैया, वि. ಅರಿತವ, ತಿಳಿವಳಿಕಸ್ಥ.

जन्नत, स्त्री. ಸ್ವರ್ಗ, ವೈಕುಂಠ.

जन्नती, वि. ಸ್ವರ್ಗದ, ಸ್ವರ್ಗೀಯ.

जन्म, पु. ಜನ್ಮ; ಹುಟ್ಟು; ಬಾಳು.

जन्मना, अक्रि. ಜನಿಸು, ಹುಟ್ಟು.

जन्माना, सक्रि. ಹೆರು; ಹುಟ್ಟಿಸು; ಉತ್ಪನ್ನಮಾಡು.

जप, पु. ಜಪ; ದೇವರ ಸ್ತೋತ್ರ. जपजी = ಸಿಕ್ಖರ ಪಾರಾಯಣ ಪುಸ್ತಕ.

जपतप, पु. ನೇಮ ನಿಷ್ಠೆ; ಪೂಜೆ ಪುರಸ್ಕಾರ.

जपना, सक्रि. ಜಪಿಸು, ಉರುಹಾಕು; ತಿಂದುಬಿಡು, ನುಂಗು.

जपनी, स्त्री. ಜಪಮಾಲೆ; ಜಪಮಾಲೆಯನ್ನು ಮುಚ್ಚಿಕೊಳ್ಳುವ ಚೀಲ.

जपा, स्त्री. ದಾಸವಾಳದ ಹೂ. पु. ಜಪಿಸುವವ.

ज़फ़र, स्त्री. ಜಯ, ಗೆಲುವು; ಸಫಲತೆ; ಲಾಭ.

ज़फ़रयाब, वि. ಜಯಪಡೆದವ, ವಿಜಯಿ

ज़फ़रमंद, वि. ಜಯಶಾಲಿ, ವಿಜಯಿ.

जफ़ा, स्त्री. ಕಾಠಿಣ್ಯ, ಕ್ರೌರ್ಯ; ಅತ್ಯಾಚಾರ; ಕಷ್ಟ, ಸಂಕಟ.

जफ़ाकश, वि. ಸೈರಿಸುವವ, ತಾಳ್ಮೆಯುಳ್ಳವ; ಸಹಿಷ್ಣು.

जफ़ीरी, जफ़ील, स्त्री. ಸಿಳ್ಳು; ಸಿಳ್ಳು ಹಾಕುವ ಶಬ್ದ; ಪೀಪಿ, ಶಿಲಿಪೆ.

जब, क्रिवि. ಯಾವಾಗ, ಯಾವ ಸಮಯದಲ್ಲಿ; ಆವಲ್ಲಿ, ಆದಾಗ್ಯೆ. जब कभी = ಯಾವಾಗಲಾದರೂ.

जबड़ा, पु. ದವಡೆ.

जबर, पु. = जब्र.

ज़बर, वि. ಮೇಲಿನ; ಉಚ್ಚ; ಉತ್ತಮ; ಹಿರಿಯ; ಬಲಿಷ್ಠ; ಗಟ್ಟಿಮುಟ್ಟಾದ; ದೃಢ.

ज़बरजद, पु. ಪುಷ್ಯರಾಗ.

ज़बरदस्त, वि. ಬಲಯುತ, ಬಲಿಷ್ಠ; ಬಲವತ್ತರ, ದೃಢವಾದ; ಕಠೋರ.

ज़बरदस्ती, स्त्री. ಬಲವಂತ, ಬಲಾತ್ಕಾರ; ದಬ್ಬಾಳಿಕೆ, ಜುಲುಂ. क्रिवि. ಬಲವಂತವಾಗಿ; ಬಲಾತ್ಕಾರದಿಂದ; ಹಠಾತ್ತಾಗಿ.

जबरन्, क्रिवि. = जब्रन्.

ज़बरा, पु. ಕಾಡುಕತ್ತೆ, ಪಟಪಟಿ ಕತ್ತೆ, ಜಮಖಾನೆ ಕುದುರೆ, "ಜೀಬ್ರಾ".

जबल, पु. ಬೆಟ್ಟ, ಗುಡ್ಡ.

ज़बह, पु. ಕೊರಳನ್ನು ಹಿಸುಕಿ ಕೊಲ್ಲುವಿಕೆ, ಉಸಿರುಕಟ್ಟಿಸಿ ಕೊಲ್ಲುವಿಕೆ; ಬಲಿ.

ज़बहा, पु. ಸಾಹಸ, ಕೆಚ್ಚು, ಧೈರ್ಯ.

ज़बां, ज़बान, स्त्री. ನಾಲಿಗೆ; ವಾಣಿ, ಮಾತು; ವಚನ; ಭಾಷೆ; ಬೆಂಕಿಯ ನಾಲಿಗೆ, ಉರಿ, ಅಗ್ನಿಯ ಜ್ವಾಲೆ. बे-ज़बान = ಮಾತಿಲ್ಲದೆ; ನೆಟ್ಟಗೆ.

ज़बान-ज़द, वि. ಹೇಳಲ್ಪಟ್ಟ, ಹೇಳಲಾಗುವ; ಪ್ರಸ್ತಾಪಿಸಿದ; ಪ್ರಚಲಿತ.

ज़बानदराज़, वि. ಅಧಿಕಪ್ರಸಂಗಿ, ತಲೆಹರಟೆಯುವ.

ज़बानदराजी, स्त्री. ಅಧಿಕಪ್ರಸಂಗ, ಎಟ್ಟತನ; ತಲೆಹರಟೆ.

ज़बानबंद, वि. ಮೌನವಾದ.

ज़बानबंदी, स्त्री. ಮೌನ; ಬರೆದಿಟ್ಟ ಹೇಳಿಕೆ, ವಾಙ್ಮೂಲ.

ज़बानी, वि. ಬಾಯಿಮಾತಿನ; ಬಾಯಿಂದ ಹೇಳಿದ, ಮೌಖಿಕ, ವಾಚಾ; ಬರಿಯ. ज़बानी जमाख़र्च = ಬರೀ ಬಾಯಿ ಮಾತು. ज़बानी याद = ಬಾಯಿಪಾಠ, ಕಂಠಸ್ಥ.

जबीं, स्त्री. ಲಲಾಟ, ಹಣೆ, ನೊಸಲು.

ज़बून, वि. ಬಲಹೀನ, ನಿರ್ಬಲ; ಕೆಟ್ಟ; ಅಶುಭ.

ज़बूनी, स्त्री. ಕೇಡು, ಅಮಂಗಲ.

ज़ब्त, पु. ರಕ್ಷಣೆ; ಕಾನೂನು, ಕಟ್ಟು; ಸ್ವಾಧೀನ, ವಶ; ತಡೆ; ಹಿಡಿತ. वि. ಜಪ್ತಿಯಾದ, ಮುಟ್ಟುಗೋಲು ಹಾಕಲ್ಪಟ್ಟ; ಸ್ವಾಧೀನಪಡಿಸಿಕೊಂಡ.

ज़ब्ती, स्त्री. ಮುಟ್ಟುಗೋಲು ಹಾಕುವಿಕೆ, ಜಪ್ತಿ.

जब्बार, पु. ವಿಜಯಿ; ಅತ್ಯಾಚಾರಿ.

जब्र, पु. ಬಲಾತ್ಕಾರ, ಬಲವಂತ; ಅತ್ಯಾಚಾರ.

जबई, स्त्री. ಬಲಾತ್ಕಾರ.

जब्रन्, जब्रिया, क्रिवि. ಬಲವಂತವಾಗಿ, ಬಲಾತ್ಕಾರದಿಂದ.

जम, पु. ಯಮ.

जमकना, अक्रि. ಒಟ್ಟುಗೂಡು, ನೆರೆ.

जमघट, पु ಗುಂಪು, ಜನಸಮೂಹ, ಕೂಟ

जमजम, क्रिवि. ಯಾವಾಗಲೂ, ಸದಾ.

ज़मज़म, पु. ಮಕ್ಕಾಪಟ್ಟಣದ ಒಂದು ಪವಿತ್ರವಾದ ಭಾವಿ.

ज़मज़मा, पु. ಹಾಡುವಿಕೆ; ರಾಗದ ಆಲಾಪನೆ; ತಗ್ಗಿಸ್ವರ.

जमडाढ़, जमधर, पु. ಕಠಾರಿ, ಬಾಕು.

जमना, स्त्री. ಯಮುನೆ. अक्रि. ಮೊಳೆ, ಅಂಕುರಿಸು; ಹೆಪ್ಪುಗಟ್ಟು, ಗಡ್ಡೆಕಟ್ಟು; ಗುಂಪುಗಟ್ಟು; ಒಟ್ಟುಗೂಡು, ನೆರೆ; ಮಿಳಿತವಾಗು, ಸೇರು; ಅಂಟಿಕೊ; ಮುಷ್ಕರ ಹಿಡಿ; ನೆಲೆಗೊಳ್ಳು, ಬೇರೂರು; ಕುದುರು, ಸರಿಬರು; ಚಲೋವಾಗಿರು, ಕಳೆಕಟ್ಟು; ಹೊಂದಿಕೆಯಾಗಿರು, ಒಪ್ಪು.

जमवट, स्त्री. ಭಾವಿಯ ತಳದಲ್ಲಿ ಕೂಡಿಸುವ ಮರದ ಚೌಕಟ್ಟು, ಗೋಂಡ ಭಾವಿ ಚಕ್ರ.

जमहाई, स्त्री. ಆಕಳಿಕೆ.

जमहाना, अक्रि. ಆಕಳಿಸು.

जमहूर, पु. ಜನಾಂಗ; ರಾಷ್ಟ್ರ; ಜನತೆ, ಪ್ರಜಾವರ್ಗ, ಮಹಾಜನರು

जमहूरियत, स्त्री. ಪ್ರಜಾಸತ್ತೆ, ಪ್ರಜಾಪ್ರಭುತ್ವ.

जमहूरी, वि. ಮಹಾಜನರ, ಸಾರ್ವಜನಿಕ; ಪ್ರಜಾವರ್ಗಕ್ಕೆ ಸೇರಿದ; ಪ್ರಜಾತಂತ್ರದ, ಪ್ರಜಾ ಪ್ರಭುತ್ವದ.

जमा. वि. ಕೂಡಿದ, ಸಂಕಲಿತ; ಮಿಳಿತವಾದ; ಕೂಡಿಟ್ಟ; ಗಳಿಸಿದ, ಸಂಗ್ರಹಿಸಿದ; ಲೆಕ್ಕದಲ್ಲಿ ಜಮಾ ಮಾಡಿದ, ಜಮಾವಣೆಯಾದ. स्त्री. ಕೂಡಲು; ಕೂಡುವಿಕೆ, ಸಂಕಲನ; ಮೊತ್ತ, ಜುಮ್ಲ; ಮೊಬಲಗು; ಬಂಡವಾಳ; ಕಂದಾಯ, ಶೇರೀಜು; ಬಹುವಚನ.

जमाअत, स्त्री. ಕೂಟ, ಗುಂಪು; ಸಭೆ, ಮಂಡಲಿ; ಸಮಾಜ; ಶ್ರೇಣಿ, ತರಗತಿ.

जमाई, पु. ಅಳಿಯ.

जमाख़र्च, पु. ಆದಾಯ ವೆಚ್ಚ, ಜಮಾ ಖರ್ಚು, ಆಯವ್ಯಯ, ಆವಕಜಾವಕ.

जमा-जथा, पु. ಹಣಕಾಸು, ಆಸ್ತಿಪಾಸ್ತಿ.

जमात, स्त्री. =जमाअत.

जमादात, स्त्री. ಅಚೇತನ ವಸ್ತು, ಜಡ ಪದಾರ್ಥ; ಲೋಹಗಳು.

जमादार, पु. ಸಿಪಾಯಿಗಳ ನಾಯಕ, ಜಮಾದಾರ.

जमादारी, स्त्री. ಜಮೇದಾರನ ಉದ್ಯೋಗ ಅಥವಾ ಹುದ್ದೆ.

ज़मानत, स्त्री. ಜಾಮೀನು; ಈಡು, ಹೊಣೆ.

ज़मानतनामा, पु. ಜಾಮೀನು ಪತ್ರ, ಹೊಣೆ ಪತ್ರ, ಮುಚ್ಚಳಿಕೆ.

ज़मानती, वि. ಜಾಮೀನುದಾರ, ಹೊಣೆಗಾರ.

जमाना, सक्रि. ಕೂಡಿಸು, ಸೇರಿಸು; ಜಮಾಯಿಸು, ಶೇಖರಿಸು, ಸಂಗ್ರಹಿಸು; ಹೆಪ್ಪುಗಟ್ಟಿಸು, ಗಡ್ಡೆಕಟ್ಟಿಸು.

ज़माना, पु. ಸಮಯ, ಕಾಲ; ಬಹಳ ಕಾಲ, ಲಾಗಾಯಿತು; ದೆಸೆ, ಯೋಗ; ಪ್ರಪಂಚ, ಲೋಕ.

ज़मानासाज़, पु. ಸಮಯಕ್ಕೆ ತಕ್ಕಂತೆ ವರ್ತಿಸುವವ; ಕಾರ್ಯ ಕುಶಲ.

ज़मानासाज़ी, स्त्री. ಸಮಯಕ್ಕೆ ತಕ್ಕ ಹಾಗೆ ನಡೆಯುವಿಕೆ, ಸಮಯೋಚಿತ ಕೆಲಸ ಮಾಡುವಿಕೆ.

जमाबंदी, स्त्री. ಕಂದಾಯದ ಲೆಕ್ಕ, ಕಂದಾಯದ ಪಟ್ಟಿ; ಜಮಾಬಂದಿ, ಬೇರೀಜು; ಮುಗುವಳಿ.

जमामार, वि. ಪರರ ಧನವನ್ನಪಹರಿಸುವವ, ಕವಡಗಂಟಕ.

जमाल, पु. ಸೌಂದರ್ಯ, ಚೆಲುವು.

जमालगोटा, पु. ಜಾಪಾಳದ ಗಿಡ; ನೇರ್ವಾಳ.

जमाव, पु. ಕೂಟ, ಗುಂಪು; ಹೆಪ್ಪುಗಟ್ಟುವಿಕೆ; ಕಳೆಕಟ್ಟುವಿಕೆ, ಅಂದ.

जमावट, स्त्री. ಹೆಪ್ಪುಗಟ್ಟುವಿಕೆ, ಗಡ್ಡೆಕಟ್ಟುವಿಕೆ; ಮಿಳಿತ

जमावड़ा, पु. ಸಮೂಹ, ಗುಂಪು, ಸಂದಣಿ, ನೆರವಿ.

ज़मींकंद, पु. ಸ್ವರ್ಣಗೆಡ್ಡೆ.

ज़मींदार, पु.=ज़मीनदार.

ज़मीन, स्त्री. ಪೃಥ್ವಿ, ಭೂಮಿ; ಜಮಿನು; ನೆಲ; ತಳ; ಸೀರೆಯ ಒಡಲು; ಆಧಾರ, ಮೂಲವಸ್ತು; ಆಯೋಜನೆ, ಹಂಚಿಕೆ; ಛಂದಸ್ಸು. ज़मीन आसमान एक करना = ವಿಶ್ವಪ್ರಯತ್ನಮಾಡು. ज़मीन आसमान का फ़र्क़=ಭೂಮ್ಯಾಕಾಶದ ಅಂತರ, ಅಜಗಜಾಂತರ.

ज़मीनदार, पु. ಜಮೀನುದಾರ, ಭೂಸ್ವಾಮಿ, ಭೂಮಿವಾಳ, ಪಟ್ಟೇದಾರ.

ज़मीनदारनी, स्त्री. "ज़मीनदार" का स्त्री. रूप.

ज़मीनदारी, स्त्री. ಭೂಸ್ಥಿತಿ, ಭೂಮಿಕಾಣಿ; ಜಹಗೀರು; ಜಮೀನುದಾರನ ಅಂತಸ್ತು.

ज़मीनी, वि. ಭೂಮಿಯ; ಇಹಲೋಕದ, ಲೌಕಿಕ.

जमीमा, पु. ಕ್ರೋಡಪತ್ರ, ಪರಿಶಿಷ್ಟ, ಪುರವಣಿ.

ज़मीर, पु. ಮನಸ್ಸು; ವಿಚಾರ; ಅಂತಃಕರಣ. स्त्री. ಸರ್ವನಾಮ.

जमीला, स्त्री. ಸುಂದರಿ, ಚಲುವೆ.

जमुकना, अक्रि. ತಗಲು, ಅಂಟಿಕೊ.

जमुना, स्त्री. ಯಮುನಾ ನದಿ.

जमुरका, पु. ತಿರುಗಣಿ, ಬಿಜಾಗರಿ, ಕೀಲು

ज़मुर्रद, पु. ಮರಕತ, ಪಚ್ಚೆ.

जमूरक, जमूरा, पु. ಸಣ್ಣ ತುಪಾಕಿ.

जमोगना, सक्रि. ಪರೀಕ್ಷಿಸು; ಝಡತಿ ನೋಡು; ಇತ್ಯರ್ಥ ಮಾಡು, ಬಗೆಹರಿಸು; ಒಪ್ಪಿಸು; ಸಾಟಿ ಮಾಡು, ಪೀಟಿ ಮಾಡು.

जमुहाई, जम्हाई, स्त्री. ಆಕಳಿಕೆ.

जम्हाना, अक्रि. ಆಕಳಿಸು

जय, स्त्री. ಜಯ, ಗೆಲುವು. अव्य. ಜಯತ್, ಜೈ, ಉಘೆ !

जयकार, पु. ಜಯಜಯ ಘೋಷ, ಜಯಕಾರ.

जयपाल, पु. ಜಾಪಾಳದ ಗಿಡ.

जर, स्त्री. ಮೂಲ, ಬುಡ; ಬೇರು. पु. ಉಪಸರ್ಗ.

ज़र, पु. ಸ್ವರ್ಣ, ಬಂಗಾರ; ಹಣ; ಐಶ್ವರ್ಯ

जरई, स्त्री. ಮೊಳಕೆ ಎದ್ದಿರುವ ಬೀಜ.

ज़रकश, ज़रकशी, स्त्री. ಜರತಾರಿಯ ಗೋಟು ಕಟ್ಟಿದ, ಕಲಾಬತ್ತಿನ.

जरख़ेज़, वि. ಪುಷ್ಕಲ, ಫಲವತ್ತಾದ.

ज़रगर, पु. ಸ್ವರ್ಣಕಾರ, ಅಕ್ಕಸಾಲೆ

जरगा, पु. ದಳ, ಮಂಡಲಿ, ಗೋಷ್ಠಿ.

ज़रतार, पु. ಚಿನ್ನದ ಸರಿಗೆ, ಜರತಾರಿ, ಕಲಾಬತ್ತು.

ज़रतुश्त, पु. ಪಾರ್ಸಿ ಧರ್ಮಸ್ಥಾಪಕ.

ज़रद, पु. = ज़र्द.

ज़रदार, वि. ಧನಿಕ; ಸಮೃದ್ಧ.

ज़रदालू, पु. ಸಕ್ಕರೆ ಬಾದಾಮಿ, ಜಲ್ದರು

ज़रदोज़, पु. ಕಲಾಬತ್ತಿನ ಕೆಲಸಗಾರ.

ज़रदोज़ी, स्त्री. ಕಲಾಬತ್ತಿನ ಕೆಲಸ.

जरनी, स्त्री. ಕಟ್ಟಿಗೆ, ಸೌದೆ, ಅಡುಗಬ್ಬು.

ज़रब, स्त्री. ಪೆಟ್ಟು; ಹೊಡೆತ; ಗುಣನ, ಗುಣಾಕಾರ; ನಾಣ್ಯ ಮುದ್ರಿಸುವಿಕೆ, ಟಂಕ; ಕತ್ತಿಯ ಗಾಯ. ज़रब देना = ಗುಣಿಸು.

ज़र-बफ़्त, पु. ಕಲಾಬತ್ತಿನ ಕೆಲಸ ಮಾಡಿದ ರೇಷ್ಮೆ ಬಟ್ಟೆ.

ज़रबाफ़, पु. ಕಲಾಬತ್ತಿನ ಕೆಲಸಗಾರ

ज़रबाफ़ी, वि. ಕಲಾಬತ್ತಿನ (ಬಟ್ಟೆ). स्त्री. ಕಲಾಬತ್ತಿನ ಕೆಲಸ

ज़रर, पु. ಕೆಡುಕು, ಹಾನಿ; ನಷ್ಟ; ಪೆಟ್ಟು; ಖೋತ, ಒಳಪಡಿ; ಬಡತನ.

जरह, स्त्री. ಗಾಯಪಡಿಸುವಿಕೆ; ಆಕ್ಷೇಪಣೆ; ಅಡ್ಡಪರೀಕ್ಷೆ.

जरा, स्त्री. ಮುದಿತನ, ಮುಪ್ಪು.

ज़रा, वि. ಕೊಂಚ, ಸ್ವಲ್ಪ, ಇಂಕ್ರು. क्रिवि. ಒಸಿ, ಕೊಂಚ, ತುಸ.

जराना, सक्रि. = जलाना.

ज़राफ़त, स्त्री. ಸೌಂದರ್ಯ, ಅಂದ; ಬುದ್ಧಿಚಾತುರ್ಯ; ಸ್ವಾರಸ್ಯ; ಹಾಸ್ಯ.

ज़रायत, स्त्री. ಆರಂಬ, ವ್ಯವಸಾಯ, ಬೇಸಾಯ, ಜಿರಾಯಿತು.

ज़रिया, पु. ಸಂಬಂಧ, ಸಾಧನ; ಹೇತು, ಕಾರಣ. ज़रिये से = ಮುಖಾಂತರ, ದ್ವಾರಾ, ಮೂಲಕ.

ज़रीं, वि. ಸ್ವರ್ಣದ, ಚಿನ್ನದ; ಸ್ವರ್ಣದಂತಹ.

ज़री, स्त्री. ಕಲಾಬತ್ತಿನ ಬಟ್ಟೆ; ಕಲಾಬತ್ತಿನ ಕೆಲಸ; ಜರತಾರಿ.

जरीदा, पु. ಲೆಕ್ಕದ ಪುಸ್ತಕ.

ज़रीफ़, वि. ಚತುರ; ನಯಗಾರ; ಸರಸಗಾರ; ಹಾಸ್ಯಗಾರ.

जरीब, स्त्री. ಭೂಮಿಯನ್ನಳೆಯುವ ಸರಪಣಿ.

ज़रीब, स्त्री. ಹೊಡೆಯುವಿಕೆ, ಹೊಡೆತ; ನಾಣ್ಯ ಮುದ್ರಿಸುವಿಕೆ.

जरीबकश, पु. ಜಮೀನನ್ನಳೆಯುವವ; ಮೋಜಣಿದಾರ.

जरीह, वि. ಗಾಯಹೊಂದಿದ.

ज़रूर, क्रिवि. ಅಗತ್ಯವಾಗಿ, ಅವಶ್ಯ; ಜರೂರಾಗಿ; ಖಂಡಿತವಾಗಿ; ಕಡ್ಡಾಯ

ज़रूरत, स्त्री. ಆವಶ್ಯಕತೆ, ಅಗತ್ಯ;

ಅನಿವಾರ್ಯ, ಕಡ್ಡಾಯ.

ज़रूरत-मंद, वि. ಅಗತ್ಯವುಳ್ಳವ.

ज़रूरतन्, क्रिवि. ಅಗತ್ಯವಾಗಿ, ಅವಶ್ಯ

ज़रूरियात, स्त्री. ಅವಶ್ಯಕತೆಗಳು, ಅಗತ್ಯವಾದ ವಸ್ತುಗಳು.

ज़रूरी, वि. ಅವಶ್ಯಕವಾದ, ಅಗತ್ಯವಾದ, ಅನಿವಾರ್ಯವಾದ.

जरोखा, पु. ಕಿಟಕಿ, ಜಾಳಂಧ್ರ.

ज़र्क़, पु. ಮೋಸ, ಕಪಟ.

ज़र्क़ बर्क़, वि. ಥಳುಕಿನ, ಠೀವಿಯ; ಆಡಂಬರದ.

ज़र्क़बाज़ी, स्त्री. ಥಳುಕು; ಆಡಂಬರ.

जर्जर, वि. ಸವೆದ, ಜೀರ್ಣವಾದ; ಕ್ಷಯಿಸಿಹೋದ; ಮುದಿ.

ज़र्द, वि. ಹಳದಿಬಣ್ಣದ; ವಿವರ್ಣವಾದ, ಕಂದಿದ; ಕಳೆಗುಂದಿದ.

ज़र्दा, पु. ಒಂದು ಬಗೆ ಕಲಸನ್ನ, ಕೇಸರಿಭಾತು; ಪರಿಮಳ ದ್ರವ್ಯ ಬೆರೆತ ಹೊಗೆಸೊಪ್ಪು; ಹಳದಿ ಬಣ್ಣದ ಕುದುರೆ.

ज़र्दी, स्त्री. ಹಳದಿ ಬಣ್ಣ; ಕಳೆಗುಂದುವಿಕೆ; ಮೊಟ್ಟೆಯ ಹಳದಿ, ಲೋಳೆ, ಜನೆ.

ज़र्फ़, पु. ಪಾತ್ರೆ.

ज़र्रा, पु. ಚಿಕ್ಕ ಚೂರು; ಕಣ, ಅಣು.

जर्राह, पु. ಶಸ್ತ್ರ ಚಿಕಿತ್ಸೆ ಮಾಡುವವ, ರಣ ವೈದ್ಯ, ಶಸ್ತ್ರವೈದ್ಯ.

जर्राही, स्त्री. ಶಸ್ತ್ರ ಚಿಕಿತ್ಸೆ; ಶಸ್ತ್ರವೈದ್ಯಶಾಸ್ತ್ರ, ಶಲ್ಯತಂತ್ರ.

जलंधर, पु. ಜಲೋದರ ರೋಗ.

जल, पु. ಜಲ, ನೀರು.

ज़लक़, स्त्री. ಹಸ್ತ ಮೈಥುನ, ಮುಷ್ಟಿಮೈಥುನ.

जलक्रीड़ा, स्त्री. ನೀರಿನಲ್ಲಾಡುವ ಆಟ, ನೀರಾಟ

जलखावा, पु. ತಿಂಡಿ ತೀರ್ಥ, ತಿನಸು; ಉಪಾಹಾರ, ನಾಶ್ತಾ, ನಾಷ್ಟ.

जलचर, पु. ನೀರಿನಲ್ಲಿರುವ ಜಂತು.

जलचरी, स्त्री. ಜಲಜಂತುಗಳನ್ನಿಡುವ ಮನೆ, ಮತ್ಸ್ಯಾಲಯ, ಮೀನು ಬಂಗಲೆ.

ज़लज़ला, पु. ಭೂಕಂಪ.

जलजलाना, अक्रि. ಸಿಟ್ಟಾಗು, ರೇಗು.

जलजलाहट, स्त्री. ಕೋಪ, ಸಿಟ್ಟು.

जल-डमरूमध्य, पु. ಜಲಸಂಧಿ.

जलथल, पु. ಜೌಗು ನೆಲ, ಹುದಿಲು.

जलन, पु. ಉರಿ, ಕಿಚ್ಚು; ಮತ್ಸರ, ಅಸೂಯೆ, ಹೊಟ್ಟೆಕಿಚ್ಚು; ಉದ್ವೇಗ; ಬೇಗುದಿ, ಸಂತಾಪ.

जलना, अक्रि. ಉರಿ, ಹತ್ತಿಕೊಳ್ಳು; ಸುಟ್ಟುಹೋಗು, ಸುಡು; ಹೊಟ್ಟೆಕಿಚ್ಚುಪಡು, ಕರುಬು. जली कटी बात = ಚುಚ್ಚುವ ಮಾತು. जले पर नोन छिड़कना = ಉರಿಯುವುದರ ಮೇಲೆ ಉಪ್ಪು ಎರಚು, ಗಾಯದಲ್ಲಿ ಕಾರ ಕಲಸು.

जलपाटल, पु. ಕಾಡಿಗೆ, ಕಾಡಿ ಕಪ್ಪು.

जलपान, पु. ಉಪಾಹಾರ, ಪಾನಕ ಪನಿವಾರ, ನಾಶ್ತಾ.

जलप्रपात, पु. ಜಲಪಾತ, ಜೋಗು.

जलबही, स्त्री. ಈಜುವಿಕೆ, ಈಜು.

जलभंवरा, पु. ನೀರಿನ ಮೇಲೆ ಅತಿ

ವೇಗವಾಗಿ ಸುತ್ತಾಡುವ ಒಂದು ಬಗೆ ಕರಿಯ ಜಲಜಂತು.

जलमानुष, पु. ಸೊಂಟಕ್ಕೆ ಕೆಳಗೆ ಮೀನಾಗಿಯೂ ಸೊಂಟಕ್ಕೆ ಮೇಲೆ ಮನುಷ್ಯನಾಗಿಯೂ ಇರುವ ಒಂದು ಕಲ್ಪಿತ ಜಲಜಂತು, ಮತ್ಸ್ಯಪುರುಷ.

जलयान, पु. ನಾವೆ, ಹಡಗು.

जलवा, पु. ವೈಭವ, ಅದ್ದೂರಿ, ಠೀವಿ, ವಿಜೃಂಭಣೆ; ಚೆಲುವು; ಮದುಮಗಳು ಮುಸುಕನ್ನು ತೆರೆದು ತನ್ನ ಮುಖವನ್ನು ಮೊಟ್ಟಮೊದಲು ಮದವಣಿಗನಿಗೆ ತೋರಿಸುವಿಕೆ, ಮುಖದರ್ಶನ.

जलवाना, सक्रि. जलाना का प्रे. रूप.

जलवैया, वि. ಸುಡುವವ.

जलसा, पु. ಹಬ್ಬ, ಉತ್ಸವ; ಸಮಾರಂಭ, ಅಧಿವೇಶನ; ನಾಟ್ಯ, ಕುಣಿತ.

जला, वि. ಸುಟ್ಟುಹೋದ, ಉರಿದ.

जलाऊ, वि. ಉರಿಯುವ, ಉರಿಯುತಕ್ಕ

जलाजल, पु. ಗೋಟು, ಜಾಲರಿ.

जलातन, वि. ಕೋಪವುಳ್ಳ, ಉರಿಯುವ; ಮಾತ್ಸರ್ಯದ.

जलादत, स्त्री. ಚಟುವಟಿಕೆ, ಚುರುಕು; ಸಾಮರ್ಥ್ಯ.

जलाना, सक्रि. ಉರಿಸು, ಸುಡು; ಬೆಂಕಿ ಹಚ್ಚು, ಹೊತ್ತಿಸು; ಹೊಟ್ಟೆಕಿಚ್ಚು ಹುಟ್ಟಿಸು; ಸಂತಾಪವುಂಟುಮಾಡು, ಉದ್ರೇಕಿಸು.

जलापा, पु. ಹೊಟ್ಟೆಕಿಚ್ಚು; ಕೋಪ.

जलाबला, जलाभुना, वि. ಉರಿದು ಬಿದ್ದ; ರೇಗಿದ, ಮುಂಗೋಪಿಯಾದ; ಸುಟ್ಟ, ಕಂದಿದ.

जलाल, पु. ಪ್ರಕಾಶ, ಜ್ಯೋತಿ; ವೈಖರಿ, ಪ್ರಭಾವ; ಕೋಪ.

जलालत, पु. ಮಹತ್ವ, ದೊಡ್ಡತನ, ವೈಭವ.

जलाली, वि. ದಿವ್ಯವಾದ; ಭಯಂಕರ.

जलावतन, वि. ದೇಶಭ್ರಷ್ಟ, ಗಡೀಪಾರಾದ, ನಿರ್ವಾಸಿತ.

जलावतनी, स्त्री. ಗಡೀಪಾರು, ದೇಶಭ್ರಷ್ಟತೆ, ನಿರ್ವಾಸನ.

जलावन, स्त्री. ಕಟ್ಟಿಗೆ, ಸೌದೆ, ಅಡುಗಬ್ಬು, ಉರುವಲು.

जली, वि. ವಿಶದವಾದ, ಸ್ಪಷ್ಟ.

ज़लील, वि. ದೊಡ್ಡ, ಶ್ರೇಷ್ಠ.

जलील, वि. ನೀಚ, ತುಚ್ಛ; ಅಪಮಾನಿತ; ನಾಚಿಕೆಗೇಡಿ, ನಿರ್ಲಜ್ಜ.

जलीस, पु. ಜೊತೆಗಾರ, ಗೆಳೆಯ.

जलूस, पु. =जुलूस.

जलेबी, स्त्री. ದುಂಡಗಿರುವ ಒಂದು ಬಗೆ ಮಿಠಾಯಿ, ಜಿಲೇಬಿ; ಸುರುಳಿ; ಒಂದು ಬಗೆ ಬಾಣ ಬಿರುಸು

जलैया, वि. ಎದೆ ಉರಿಸುವವ; ಪ್ರಿಯ

जलौका, स्त्री. ಜಿಗಣೆ, ಅಟ್ಟೆ, ಜಲೂಕೆ

जल्द, क्रिवि. ಶೀಘ್ರ, ಬೇಗನೆ, ಜಲ್ದಿ, ಸತ್ವರನೆ.

जल्दबाज़, वि. ಅವಸರವಾದ; ಆತುರದ, ದುಡುಕಿನವ; ತ್ವರೆಗಾರ, ತರಾತುರಿ ಮಾಡುವವ.

जल्दबाज़ी, स्त्री. ಅವಸರ, ಆತುರ; ದುಡುಕು, ತರಾತುರಿ.

जल्दी, स्त्री. ತ್ವರೆ, ಶೀಘ್ರ, ಭರ.
जल्प, पु. ಮಾತು; ವಾಗ್ವಾದ, ಬಡಬಡಿಕೆ.
जल्पन, पु. ಹರಟೆ, ಜಲ್ಪ; ಜಂಭ.
जल्पना,अकि. ಹರಟು, ಜಂಬಕೊಚ್ಚು
जल्लाद, पु. ಕಟುಕ, ಕೊಲೆಗಡುಕ, ಕೊಲೆಗಾರ; ಘಾತುಕ, ಕ್ರೂರಿ.
जव, पु. ಜವೆಗೋಧಿ; ಬೆರಳು ಸಂಧಿಯ ಮೇಲಿನ ರೇಖೆ.
जवन, पु. ಯವನ, ಗ್ರೀಕ್ ದೇಶದವ; ಮುಸಲ್ಮಾನ; ವೇಗವಾಗಿ ಓಡುವ ಕುದುರೆ.
जवनिका, स्त्री. ಯವನಿಕೆ, ನಾಟಕದ ಪರದೆ, ತೆರೆ.
जवाँमर्द, वि. ಧೈರ್ಯಶಾಲಿ, ಶೂರ, ಗಂಡುಗಲಿ.
जवाँमर्दी, स्त्री. ಧೈರ್ಯ, ಶೌರ್ಯ, ವೀರತನ, ಪರಾಕ್ರಮ.
जवा, पु. ಬೆಳ್ಳುಳ್ಳಿ; ಒಂದು ಬಗೆಯ ಹೊಲಿಗೆ; ದಾಸವಾಳದ ಹೂ.
जवाई, स्त्री. ಹೋಗುವಿಕೆ, ನಿರ್ಗಮನ.
जवाखार, **जवासार**, पु. ಯವಕ್ಷಾರ, ಪೆಟ್ಲುಪ್ಪು.
जवान, वि. ಪ್ರಾಯದ, ತರುಣ; ವೀರ. पु. ಯುವಕ,ತರುಣ;ಆಳು; ಸಿಪಾಯಿ.
जवान-बख़्त, वि. ಭಾಗ್ಯವಂತ.
जवान-मर्द, वि. ಶೂರ; ಉದಾರ ಹೃದಯದ.
जवानी, स्त्री. ಯೌವನ, ಪ್ರಾಯ, ತಾರುಣ್ಯ.
जवाब, पु. ಉತ್ತರ, ಜವಾಬು; ಪ್ರತಿವಾದ; ಎಣೆ; ಈಡುಜೋಡು; (ಕೆಲಸದಿಂದ) ನಿವೃತ್ತಿ. जवाब देना = ಕೈಕಾಲು ಸೋತು ಹೋಗು, ಸತ್ತು ಹೋಗು जवाब सवाल = ಪ್ರಶ್ನೋತ್ತರ.
जवाबदावा, पु. ಪ್ರತಿವಾದಿಯ ಉತ್ತರ, ಪ್ರತಿವಾದ.
जवाबदेह, वि. ಜವಾಬ್ದಾರ, ಉತ್ತರವಾದಿ, ಹೊಣೆಗಾರ; ಪ್ರತಿವಾದಿ.
जवाबदेही, स्त्री. ಜವಾಬ್ದಾರಿ, ಉತ್ತರವಾದಿತ್ವ, ಹೊಣೆಗಾರಿಕೆ; ಭಾರ.
जवाबी, वि. ಉತ್ತರವನ್ನಪೇಕ್ಷಿಸುವ, ಜವಾಬಿನ. जवाबी कार्ड = "ರಿಪ್ಲೈ ಕಾರ್ಡ್".
जवार, पु. ಸಮೀಪ, ಪಕ್ಕ, ನೆರೆ. कुर्ब-ओ-जवार = ಅಕ್ಕಪಕ್ಕ, ನೆರೆಹೊರೆ
जवारा, पु. ಜೋಳದ ತೆನೆ.
जवारी, स्त्री. ವೀಣೆಯ ಅಥವಾ ತಂಬೂರಿಯ ಮೆಟ್ಟಲು, ಪಿಟೀಲು ಕುದುರೆ.
ज़वाल, पु. ಅವನತಿ, ಇಳಿತ; ಅಸ್ತಮನ; ನಷ್ಟ; ವಿಪತ್ತು, ಅನಾಹುತ.
जवास, **जवासा**, पु. ಬೇಲಿ ಹಾಕುವ ಒಂದು ಮುಳ್ಳು ಗಿಡ.
जवाहर, **जवाहिर**, पु. ಮಣಿ, ರತ್ನ.
जवाहिरात, पु. ಬಹುಮೂಲ್ಯ ರತ್ನಗಳು
जश्न, पु. ಜಾತ್ರೆ, ಉತ್ಸವ; ಹಬ್ಬ, ಸಮಾರಂಭ; ಹರ್ಷ.
जस, पु. ಯಶಸ್ಸು; ಖ್ಯಾತಿ; ಗುಣ.
जसवंत, वि. ಯಶಸ್ವಿ; ಸುಪ್ರಸಿದ್ಧ.
जसामत, स्त्री. ಪ್ರಮಾಣ, ಅಳತೆ; ಗಾತ್ರ, ಸ್ಥೂಲತೆ.

जसारत, स्त्री. ಸಾಹಸ, ಹುಮ್ಮಸ್ಸು.

जसीम, वि. ಸ್ಥೂಲ ಶರೀರ.

जसूधा, पु. ಹಡಗಿನ ತೆರೆ ಚಾಪೆಯನ್ನು ಬಿಗಿದು ಕಟ್ಟುವ ಅಡ್ಡಮರ.

जसोदा, स्त्री. ಯಶೋದೆ.

जस्ता, पु. ಸತುವು, "ಜಿಂಕ್"ಲೋಹ.

जहंडना, अक्रि. ನಷ್ಟ ಹೊಂದು, ಮೋಸಹೋಗು.

ज़ह, पु. ಪ್ರಸವ, ಹೆರಿಗೆ.

जहगीर, स्त्री. = जागीर.

जहद, स्त्री. ಪ್ರಯತ್ನ, ಪ್ರಯಾಸ, ಪರಿಶ್ರಮ.

जहदना, अक्रि. ಕೆಸರಾಗು, ಶಿಥಿಲವಾಗು; ಬಳಲು.

जहदा, पु. ಜೌಗು ನೆಲ; ಕೊಳಚೆ.

ज़हन, पु. = ज़िहन.

जहन्नुम, पु. ನರಕ, ಪಾತಾಳ.

ज़हमत, स्त्री. ನೋವು; ಕಷ್ಟ, ಸಂಕಟ, ತಾಪತ್ರಯ.

ज़हर, पु. ವಿಷ, ನಂಜು.

ज़हरदार, वि. ವಿಷವುಳ್ಳ. ನಂಜಿನ.

ज़हरबाद, पु. ಪ್ರಾಣಾಂತಕವಾದ ಒಂದು ತರದ ಗುಳ್ಳೆ

ज़हरमोहरा, पु. ವಿಷವನ್ನಿಳಿಸುವ ಔಷಧ, ಕಟ್ಟುಮದ್ದು, ವಿಷಪುರಕ, ವಿಷಹಾರಿ.

ज़हरालूदा, ज़हरीला, वि. ವಿಷವುಳ್ಳ.

जहां, पु. ಜಗತ್ತು, ಪ್ರಪಂಚ, ಲೋಕ. क्रिवि. ಎಲ್ಲಿ. जहां का तहां = ಇದ್ದ ಕಡೆಯಲ್ಲೇ, ಎಲ್ಲೆಲ್ಲೂ.

जहांगीर, वि. ಜಗತ್ತನ್ನು ಗೆದ್ದವನು, ಜಗದ್ವಿಜಯೀ.

जहांगीरी, स्त्री. ರತ್ನಖಚಿತ ಕಡಗ.

जहांदीद, जहांदीदा, वि ನಾಡರಿತ, ಲೋಕಾನುಭವವುಳ್ಳ, ಅರಿತುನುರಿತ.

जहांपनाह, पु. ಲೋಕಶರಣ್ಯ; ರಾಜಾಧಿರಾಜ.

जहाज़, पु. ಹಡಗು, ಜಹಜು.

जहाज़ी, वि. ಹಡಗಿನ, ಜಹಜಿನ; ಜಹಜು ನಡೆಸುವವ, ನಾವಿಕ. जहाज़ी डाकू = ಸಮುದ್ರಕಳ್ಳ.

जहाद, पु. ಧರ್ಮಯುದ್ಧ.

जहान, पु. ಜಗತ್ತು, ಪ್ರಪಂಚ.

जहालत, स्त्री. ಅಜ್ಞಾನ; ಅಲ್ಪಜ್ಞಾನ.

जहीं, क्रिवि. ಎಲ್ಲೆಲ್ಲಿ.

ज़हीन, वि. ಬುದ್ಧಿವಂತ, ವಿವೇಕಿ.

ज़हूर, पु. ಪ್ರಕಟವಾಗುವಿಕೆ; ಹೊರಬೀಳುವಿಕೆ.

जहेज़, पु. ವಿವಾಹದಲ್ಲಿವರನಿಗೆಕೊಡುವ ಒಡವೆ ಹಣ ಪಾತ್ರೆ ಮೊದಲಾದುವು, ಬಳುವಳಿ, ಹರಣ, ವರದಕ್ಷಿಣೆ.

जांगड़ा, पु. ವಂದಿಮಾಗಧ.

जांगर, पु. ಅಂಗ; ಬಲ, ಶಕ್ತಿ.

जांगल, पु. ಕವುಜು ಹಕ್ಕಿ, ತಿತ್ತಿರಿ; ಮಾಂಸ; ಉಸುಬು ನೆಲ.

जांगला, वि. ದೊಗಲೆ.

जांगली, जांगलू, वि. ಅಡವಿಯ; ಪಳಗಿಸದ; ಒರಟಾದ.

जांघ, स्त्री. ತೊಡೆ.

जांघिया, पु. ಕಾಚಾ, ಚಡ್ಡಿ.

जांच, स्त्री. ಪರೀಕ್ಷೆ, ಪರಿಶೋಧನೆ; ಅಂದಾಜು. जांच पड़ताल = ಮೇಲ್ವಿಚಾರಣೆ, ಪರಾಂಬರಿಕೆ.

जांचक, वि. ಪರೀಕ್ಷಿಸುವವ; ಪರಿಶೋಧಕ.

जांचना, सक्रि. ಪರೀಕ್ಷಿಸು; ಪರಿಶೋಧಿಸು; ವಿಮರ್ಶಿಸು.

जांत, जांता, पु. ಬೀಸುವ ಕಲ್ಲು.

जांफिशानी, स्त्री. ದುಡಿಯುವಿಕೆ, ಪರಿಶ್ರಮ; ಸ್ವಾರ್ಥತ್ಯಾಗ.

जा, वि. ಯುಕ್ತ, ಉಚಿತ. पु. ಜಾಗ, ಸ್ಥಳ, ಎಡೆ. जा बजा = ಅಲ್ಲಲ್ಲಿ, ಎಡೆಗೆಡೆಗೆ.

जाई, स्त्री. ಮಗಳು; ಜಾಜಿ ಹೂ.

जाकड़, पु. ಮಾರಾಟವಾಗದಿದ್ದರೆ ಅಥವಾ ಒಪ್ಪಿಗೆಯಾಗದಿದ್ದರೆ ಹಿಂದಕ್ಕೆ ಕಳುಹಿಸುವ ನಿಬಂಧನೆಯ ಮೇರೆಗೆ ಸರಕುಗಳನ್ನು ಕೊಳ್ಳುವಿಕೆ; ಷರತ್ತು ಬಂದಿಯಾಗಿ ಕೊಂಡುಕೊಳ್ಳುವಿಕೆ; ಅಜಮಾಯಿಷಿಗಾಗಿ ಅಥವಾ ಅನಾಮತ್ತಿನಲ್ಲಿ ಸಾಮಾನು ತರುವಿಕೆ.

जाग, स्त्री. ಜಾಗರಣೆ.

ज़ाग़, पु. ಕಾಗೆ.

जागना, अक्रि. ಎಚ್ಚರಗೊಳ್ಳು; ನಿದ್ರೆಯಿಂದ ಏಳು, ಉಪ್ಪವಡಿಸು; ಜಾಗರಣೆ ಮಾಡು; ಎಚ್ಚರಿಕೆಯಾಗಿರು; ಮೂಡು, ಉದಯಿಸು; ಪ್ರಕಾಶಿಸು; ಏಳಿಗೆಗೆ ಬರು. जागते स्वप्न देखना = ಹಗಲು ಕನಸು ಕಾಣು.

जागरण, पु. ಜಾಗರಣೆ.

जागीर, स्त्री. ಇನಾಮು ಜಮೀನು, ಜಹಗೀರು, ಉಂಬಳಿ, ಶ್ರೋತ್ರಿಯ.

जागीरदार, पु. ಜಹಗೀರುದಾರ, ಇನಾಮುದಾರ, ಉಂಬಳಿದಾರ.

जाचक, पु. ಯಾಚಕ.

जाज़रूर, पु. ಪಾಯಖಾನೆಮನೆ, ಕಕ್ಕಸು

जाज़िब, वि. ಎಳೆಯುವ, ಆಕರ್ಷಕ.

जाजिम, पु. ಜಮಖಾನೆ, ರತ್ನಗಂಬಳಿ.

जाट, पु. ರಾಜಪುತ್ರರ ಒಂದು ಒಳಜಾತಿ

जाटनी, स्त्री. "जाट" का स्त्री. रूप.

जाठ, पु. ಗಾಣದ ಕಣೆ, ಯಷ್ಟಿ; ಹೊಕ್ಕರಣೆಯ ನಡುವಿನ ಕಂಬ.

जाड़ा, पु. ಚಳಿಗಾಲ, ಮಾಗಿಕಾಲ; ಚಳಿ, ಶೀತ.

जात, पु. ಮಗು; ಮರಿ; ಜನ್ಮ, ಹುಟ್ಟು; ಜೀವ, ಪ್ರಾಣ. वि. ಹುಟ್ಟಿದ. स्त्री. ಜಾತಿ, ಕೋಮು.

ज़ात, स्त्री. ದೇಹ, ಶರೀರ; ಜಾತಿ; ವಿಧ; ಒಡೆಯ.

जातक, पु. ಮಗು; ಬೌದ್ಧ ಸನ್ಯಾಸಿ, ಭಿಕ್ಷು; ಜಾತಕ, ಜನ್ಮ ಕುಂಡಲಿ.

जातपांत, जातिपांति, स्त्री. ಜಾತಿಮತ, ಕುಲಗೋತ್ರ.

जाति, स्त्री. ಜಾತಿ, ಹುಟ್ಟು; ಕುಲ, ವಂಶ.

जाती, स्त्री. ಜಾಜಿ ಹೂ; ಮಾಲತಿ; ಕಿರುನೆಲ್ಲಿ.

ज़ाती, वि. ನಿಜವಾದ; ತನ್ನ; ಸ್ವಂತ; ವ್ಯಕ್ತಿಗತ.

जातीय, वि. ಜಾತಿಸಂಬಂಧವಾದ.

जात्रा, स्त्री. ಯಾತ್ರೆ, ಪಯಣ; ಮೆರ

ವಣಿಗೆ, ಶಬಗಸ್ತು; ಜಾತ್ರೆ, ಉತ್ಸವ.

जादू, पु. ಇಂದ್ರಜಾಲ; ಕಣ್ಣುಕಟ್ಟು ವಿದ್ಯೆ; ಮಾಟ, ಮಂತ್ರ जादू टोना = ಮಂತ್ರ ಮೋಡಿ, ಮಾಟಮಂತ್ರ.

जादूगर, पु. ಮಂತ್ರವಾದಿ, ಮಾಟಗಾರ

जादूगरनी, स्त्री. ಮಾಟಗಾತಿ.

जादूगरी, स्त्री. ಇಂದ್ರಜಾಲ, ಗಾರುಡಿ ವಿದ್ಯೆ; ಮೋಡಿ, ಮಾಟ.

जान, स्त्री. ಜ್ಞಾನ; ತಿಳುವಳಿಕೆ, ತಿಳಿವು; ಜೀವ; ಶಕ್ತಿ; ಚೈತನ್ಯ; ಪ್ರಾಣ; ಪ್ರಣಯಿನಿ, ಪ್ರೇಯಸಿ; ಜೀವಾಳ, ಸತ್ವ जान जोखिम में होना = ಜೀವಕ್ಕೆ ಸಂಚಕಾರ ಬರು. जान पर आना = ಜೀವದ ಮೇಲೆ ಬರು, ಜೀವಕ್ಕೆ ಅಪಾಯ ಸಂಭವಿಸು. जान पर खेलना = ಪ್ರಾಣವನ್ನು ಲೆಕ್ಕಿಸದೆ ಸಾಹಸ ಕೆಲಸಮಾಡು, ಜೀವದ ಹಂಗು ತೊರೆ. जान से जाना = ಜೀವ ಕಳಕೊಳ್ಳು, ಸಾಯು. जान से मारना = ಕೊಂದುಹಾಕು, ಬಲಿಹಾಕು. जान से हाथ धो बैठना, जान के लाले पड़ना = ಜೀವದ ಆಸೆ ತೊರೆ.

जानकार, वि. ಅರಿತವ, ತಿಳಿದವ; ಬಲ್ಲವ, ಜಾಣ.

जानकारी, स्त्री. ತಿಳುವಳಿಕೆ; ಪರಿಚಯ

जानदार, वि. ಜೀವವುಳ್ಳ, ಸಜೀವ; ಶಕ್ತ, ಸಬಲ; ಚಟುವಟಿಕೆಯ.

जानना, सक्रि. ಅರಿ, ತಿಳಿ; ನೆನಸು जान पड़ना = ತೋರು, ಕಾಣಿಸು. जान बूझकर = ತಿಳಿತಿಳಿದು, ಬುದ್ಧಿಪುರಸ್ಸರವಾಗಿ.

जान-पहचान, पु. ಪರಿಚಯ; ಗುರುತು

जान-बख़्शी, स्त्री. ಜೀವದಾನ, ಪ್ರಾಣದಾನ.

जानबाज़, वि. ಧೀರ; ಸಾಹಸಿ, ಎದೆಗಾರ

जान-बीमा, पु. ಜೀವ ವಿಮೆ.

जा-नमाज़, पु. ನಮಾಜು ಮಾಡುವಾಗ ಹಾಸಿಕೊಳ್ಳುವ ಜಮಖಾನೆ ಅಥವಾ ಚಾಪೆ; ಪೀಠ, ಆಸನ.

जानवर, पु. ಪಶು, ಪ್ರಾಣಿ, ಮೃಗ.

जा-नशीन, पु. ಉತ್ತರಾಧಿಕಾರಿ; ವಾರಸುದಾರ, ರಾಜಪ್ರತಿನಿಧಿ.

जा-नशीनी, स्त्री. ಉತ್ತರಾಧಿಕಾರ; ಉತ್ತರಾಧಿಕಾರಿಯ ಪದವಿ, ರಾಜಪ್ರತಿನಿಧಿಯ ಪದವಿ.

जानहार, जान-जुइया, वि. ಹೋಗತಕ್ಕ, ಹೋಗುವ; ಕಳೆದುಹೋಗುವಂತಹ; ತಿಳಿದವ, ಅರಿತವ.

जाना, अक्रि. ಹೋಗು; ಹೊರಡು; ಅಗಲು. कहा जाता है = ಹೇಳಲಾಗುತ್ತೆ, ಹೇಳಲ್ಪಡುತ್ತೆ.

जानिब, पु. ದಿಶೆ, ದಿಕ್ಕು; ಪಕ್ಕ, ಕಡೆ.

जानिबदार, वि. ಪಕ್ಷಪಾತದ, ಪಾರಪಕ್ಷದ.

जानिबदारी, स्त्री. ಪಕ್ಷಪಾತ, ಪಾರಪಕ್ಷ

जानिबैन, पु. ಎರಡು ಕಡೆಯೂ, ಉಭಯಪಕ್ಷದವರು.

जानी, स्त्री. ಪ್ರಿಯೆ, ಇನಿಯಳು; ಪ್ರೇಮಪಾತ್ರ वि. ಪ್ರಾಣದ जानी दुश्मन = ಪ್ರಾಣಶತ್ರು.

ज़ानी, पु. ವ್ಯಭಿಚಾರಿ, ಲಂಪಟ.

जानु, **जानू**, **ज़ानू**, पु. ಮೊಳಕಾಲು.

जानो, अव्य. = मानो.

जाप, पु. ಜಪ; ಜಪಮಾಲೆ.

जापा, पु. ಪ್ರಸವಗೃಹ, ಹೆರಿಗೆಮನೆ; ಪ್ರಸವ, ಹೆರಿಗೆ

ज़ाफ़रान, पु. ಕುಂಕುಮದಹೂ, ಕೇಸರಿ

ज़ाफ़रानी, वि. ಕೇಸರಿಯ; ಕೇಸರಿ ಬಣ್ಣದ.

जाबिर, वि. ಬಲಾತ್ಕಾರ ಮಾಡುವ, ಅತ್ಯಾಚಾರಿ.

ज़ाब्ता, पु. ನಿಯಮ, ಕಾನೂನು; ವಿಧಿ, ಕ್ರಮ.

जाम, पु. ಮೂರು ಘಂಟೆಯ ಕಾಲ, ಜಾವ; ಗಡಿಯಾರ; ನೇರಳೆ ಹಣ್ಣು; ಪೇರಲ ಹಣ್ಣು, ಚೇಪೆ ಹಣ್ಣು; ಮಗ; ಬಟ್ಟಲು.

जामगी, पु. ತುಪಾಕಿಯ ಜಾವಿಗೆ, ಸರಬತ್ತಿ.

जामदानी, स्त्री. ಕಸೂತಿ ಹಾಕಿದ ಬಟ್ಟೆ

जामन, पु. ಹೆಪ್ಪು ಹಾಕುವ ಮೊಸರು, ಹೆಪ್ಪು, ಕಿಣ್ವ; ನೇರಳೆ ಹಣ್ಣು.

जामना, अकि. ಹುಟ್ಟು, ಉಂಟಾಗು, ಆಗು.

जामा, पु. ವಸ್ತ್ರ, ಉಡಿಗೆ, ಪಜಾಯಿ. वि. ಸಮಸ್ತ, ಒಟ್ಟಾರೆ. जामा मसजिद = ಪ್ರಧಾನವಾದ ಮಸೀದಿ.

जामाता, पु. ಅಳಿಯ.

जामिद, वि. ಗಟ್ಟಿಯಾದ, ಬಿರುಸು; ದೇಶ್ಯ; ಮೂಲ (ಶಬ್ದ).

ज़ामिन, **ज़ामिनदार**, पु. ಜಾಮೀನುದಾರ, ಹೊಣೆಗಾರ.

ज़ामिनी, स्त्री. ಜಾಮೀನು, ಹೊಣೆ.

जामुन, पु. ನೇರಳೆ ಹಣ್ಣು; ಒಂದು ಮಿಠಾಯಿ, ಜಾಮೂನು.

जामेवार, पु. ಒಂದು ವಿಧದ ಶಾಲು; ಚೀಟಿ ಬಟ್ಟೆ.

जाय, स्त्री. ಸ್ಥಳ, ಎಡೆ, ಜಾಗ. वि. ಸರಿ, ಉಚಿತ, ಯುಕ್ತ.

ज़ायक़ा, पु. ರುಚಿ, ಸವಿ; ಇಂಪು.

ज़ायक़ादार, वि. ರುಚಿಕರವಾದ, ಸವಿಯಾದ.

ज़ायचा, पु. ಜನ್ಮಪತ್ರಿಕೆ, ಜಾತಕ.

जायज़, वि. ಯುಕ್ತ, ಸರಿಯಾದ; ತಕ್ಕ

जायज़रूर, पु. ಪಾಯಖಾನೆ ಮನೆ, ಕಕ್ಕಸು.

जायज़ा, पु. ಪರೀಕ್ಷೆ, ಶೋಧನೆ; ತನಿಖೆ, ಝಡ್ತಿ; ಹಾಜರಿ ತಕ್ಕೊಳ್ಳುವಿಕೆ.

ज़ायद, वि. ಹೆಚ್ಚು, ಹೇರಳ, ನಿರರ್ಥಕ

जायदाद, स्त्री. ಸಂಪತ್ತು, ಆಸ್ತಿಪಾಸ್ತಿ, ಆಯಿವಜು, ಸ್ವತ್ತು.

जायनमाज़, पु. = जा-नमाज़.

जायपत्री, स्त्री. ಜಾಪತ್ರೆ.

जायफल, पु. ಜಾಯಿಕಾಯಿ.

जायल, वि. ಹಾಳಾದ, ನಾಶವಾದ.

जाया, स्त्री. ಹೆಂಡತಿ. वि. ಹುಟ್ಟಿದ, ಸಂಜಾತ; ಪುತ್ರ. मां जाया = ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ, ಒಡಹುಟ್ಟಿದ.

ज़ाया, वि. ಕಳೆದುಹೋದ, ಹಾಳಾದ,

ಪೋಲಾದ, ಕೆಟ್ಟುಹೋದ.

जार, पु. ಜಾರಪತಿ, ಮಿಂಡ, ಕಳ್ಳಗಂಡ.

ज़ार, स्त्री. ಅಳು, ವಿಲಾಪ; ಇಚ್ಛೆ, ಬಯಕೆ; ನಂದನವನ, ತೋಟ. वि ಸಣಕಲಾದ, ಬಡಕಲ. ज़ार ज़ार रोना = ಬಹಳವಾಗಿ ಅಳು.

जारना, सक्रि. ಉರಿಸು, ಹಚ್ಚಿಸು.

जारी, वि. ಹರಿಯುವ, ಪ್ರವಹಿಸುವ; ಸಾಗುವ, ಜರುಗುವ; ಪ್ರಚಲಿತ, ಜಾರಿಯಲ್ಲಿರುವ.

ज़ारी, स्त्री. ಅಳು, ವಿಲಾಪ; ಶೋಕಿಸುವಿಕೆ, ಹಲುಬುವಿಕೆ.

जाल, पु. ಬಲೆ, ಜಾಳಿಗೆ; ಜೇಡರ ಹುಳುವಿನ ಬಲೆ; ಪೊರೆ, ಸಮೂಹ; ಮಾಯಾಜಾಲ; ಮೋಸ, ಠಕ್ಕು; ಒಂದು ಬಗೆ ತುಪಾಕಿ.

जालदार, वि. ಬಲೆಬಲೆಯಾದ, ಜಾಳು.

जालसाज़, पु. ಮೋಸಗಾರ; ಠಕ್ಕ; ಜಾಲಗಾರ.

जालसाज़ी, स्त्री. ಮೋಸಗಾರಿಕೆ; ಬೂಟಾಟಿಕೆ.

जाला, पु. ಜೇಡನ ಬಲೆ, ಇಲ್ಲಣ; ಪೊರೆ, ಕಣ್ಣು ಪೊರೆ; ಬಲೆ, ಕಲ್ಲಿ; ಮಣ್ಣಿನ ಹೂಜಿ.

ज़ालिम, वि. ಅತ್ಯಾಚಾರಿ, ನಿರಂಕುಶ ಪ್ರಭು.

जालिया, पु. ಮೋಸಗಾರ; ಜಾಲಗಾರ

जाली, स्त्री. ಜಲ್ಲಡೆ, ಜಲ್ಲಡಿ; ಬಲೆ; ಜಾಳು ಬಟ್ಟೆ; ಒಂದು ಬಗೆ ಕಸೂತಿ ಕೆಲಸ; ಮಾವಿನ ಹಣ್ಣಿನ ನಾರು, ಜುಂಗು.

वि. ಸೃಷ್ಟನೆಯು; ಠಕ್ಕಿನ, ಕೃತಕ.

जावक, पु. ಕಾಲುರಂಜಕ.

जावित्री, स्त्री. ಜಾಪತ್ರೆ.

जाविया, पु. ಮೂಲೆ; ಕೋನ; ಏಕಾಂತ ಸ್ಥಳ.

जावेद, वि. ಶಾಶ್ವತ; ಅಮರ; ಚಿರಂಜೀವಿ, ಚಿರಾಯು

जासूस, पु. ಚಾರ, ಬೇಹುಕಾರ; ಪತ್ತೆದಾರ, ತುಬ್ಬುಗಾರ.

जासूसी, स्त्री. ಬೇಹು ನೋಡುವಿಕೆ; ಪತ್ತೇದಾರಿ, ತುಬ್ಬುಗಾರಿಕೆ. वि. ಪತ್ತೇದಾರಿ.

जाह, स्त्री. ಮಾನ, ಗೌರವ, ಮಹತ್ವ.

ज़ाहिद, वि. ತ್ಯಾಗಿ; ವಿರಕ್ತ.

ज़ाहिर, वि. ಪ್ರಕಟವಾದ, ಹೊರಬಿದ್ದ; ಬಯಲಾದ, ವ್ಯಕ್ತವಾದ.

ज़ाहिरदार, वि. ತೋರಿಕೆಯ, ಹೊರವೇಷದ.

ज़ाहिरदारी, स्त्री. ಸೋಗು, ಹೊರವೇಷ; ಡಬಡ್ಡಾಳಿಕೆ, ತೋರಿಕೆ.

ज़ाहिरा, वि. ತೋರಿಕೆಯ, ಬಾಹ್ಯ, ಹೊರ. क्रिवि. ತೋರಿಕೆಗೆ, ಹೊರಕ್ಕೆ; ಬಹಿರಂಗವಾದ.

ज़ाहिल, वि. ಮೂರ್ಖ, ಹೆಡ್ಡ, ದಡ್ಡ; ಅವಿದ್ಯಾವಂತ.

जाही, स्त्री. ಜಾಜಿ ಹೂ.

ज़िंदगानी, ज़िंदगी, स्त्री. ಜೀವನ, ಬಾಳು, ಜೀವಿತ, ಜೀವಮಾನ.

ज़िंदा, वि. ಜೀವವುಳ್ಳ, ಬದುಕಿರುವ, ಜೀವಂತ.

ज़िंदादिल, वि. ವಿನೋದಪ್ರಿಯ, ಹರ್ಷಚಿತ್ತದ; ಚಟುವಟಿಕೆಯುಳ್ಳ.

ज़िंदादिली, स्त्री. ಹರ್ಷಚಿತ್ತ; ವಿನೋದಪ್ರಿಯತೆ.

ज़िंदान, पु. ಕಾರಾಗೃಹ, ಬಂದೀಖಾನೆ.

ज़िंदानी, पु. ಸೆರೆಯಾಳು, ಕೈದಿ.

जितकिया, पु. ಸಂಪಾದಿಸುವವ.

ज़िक्र, पु. ಹೇಳುವಿಕೆ, ಉಲ್ಲೇಖ, ಪ್ರಸ್ತಾಪ, ಪ್ರಸಕ್ತಿ.

जिगर, पु. ಯಕೃತ್ತು, ಕಾಳಜಿ; ಹೃದಯ; ಚಿತ್ತ, ಮನಸ್ಸು; ಸಾಹಸ; ತಿರುಳು, ಸಾರ.

जिगरा, पु. ಸಾಹಸ, ಧೈರ್ಯ.

जिगरी, वि. ಅಂತರಂಗದ, ಆಂತರಿಕ, ಹೃತ್ಪೂರ್ವಕವಾದ; ಆಪ್ತ, ಘನಿಷ್ಠ.

ज़िच, **ज़िच्च**, स्त्री. ವಿವಶತೆ, ನಿರ್ಬಂಧ; ಚದುರಂಗದಾಟದಲ್ಲಿ ಕಾಯಿಗಳನ್ನು ಕಟ್ಟಿ ಬಿಡುವಿಕೆ, ಕಟ್ಟು. वि. ವಿವಶ; ಕಟ್ಟುಬಿದ್ದ, ನಿರ್ವಾಹವಿಲ್ಲದ.

ज़िजिया, स्त्री. ಸಹೋದರಿ; ಸ್ತನ, ಕೆಚ್ಚಲು.

जिज़िया, पु. = जज़िया.

जिठानी, स्त्री. = जेठानी.

जितना, वि. ಎಷ್ಟು क्रिवि. ಎಷ್ಟರ ಮಟ್ಟಿಗೆ, ಎಷ್ಟು.

जितवाना, **जिताना**, सक्रि. जीतना का प्रे. रूप.

ज़िद, **ज़िद्द**, स्त्री. ವಿರೋಧ; ಹಗೆ; ಜಿದ್ದು, ಛಲ; ಹಟ, ಮುಷ್ಕರ; ವಿಪರೀತ, ವೈಪರೀತ್ಯ.

ज़िद्दी, वि. ಹಟಮಾರಿ, ಛಲವಾದಿ.

जिधर, क्रिवि. ಯಾವ ಕಡೆ, ಎಲ್ಲಿ.

जिन, सर्व. 'जो' ಶಬ್ದಕ್ಕೆ ಬಹುವಚನದಲ್ಲಿ ವಿಭಕ್ತಿ ಸೇರುವಾಗ ಆಗುವರೂಪ. पु. ಭೂತ, ಬೇತಾಳ; ಪಿಶಾಚಿ, ಹೇದೆ.

ज़िनहार, पु. ಆಶ್ರಯ क्रिवि. ಖಂಡಿತವಾಗಿ, ಶೀಘ್ರ. अव्य. ಎಚ್ಚರಿಕೆ, ಜೋಕೆ.

ज़िना, पु. ವ್ಯಭಿಚಾರ, ಹಾದರ. ज़िना बिल जब्र = ಹಠಸಂಭೋಗ.

ज़िनाकार, वि. ವ್ಯಭಿಚಾರಿ, ವಿಟ.

ज़िनाकारी, स्त्री. ವ್ಯಭಿಚಾರ, ಹಾದರ.

जिन्स, स्त्री. ರೀತಿ, ವಿಧ; ವಸ್ತು, ಸರಕು; ಧಾನ್ಯ, ದವಸ, ದಿನಸಿ.

जिन्सवार, पु. ಗ್ರಾಮದಲ್ಲಿ ಬೆಳಸುವ ಧಾನ್ಯಗಳ ಪಟ್ಟಿ, ಶಾನುಭೋಗರ ತರದೂದು ಪಟ್ಟಿ.

जिबह, स्त्री. ಕೊಲೆ, ಹತ್ಯೆ.

जिभिया, स्त्री. जीभ का लघु रूप.

जिमा, पु. ಸಂಭೋಗ, ಮೈಥುನ.

ज़िमाद, पु. ಮುಲಾಮು, ಲೇಪ.

जिमाना, सक्रि. ಊಟಮಾಡಿಸು, ಊಡಿಸು.

ज़िम्मा, पु. ಭಾರ, ವಶ, ಸುಪರ್ದು; ಜವಾಬುದಾರಿ, ಉತ್ತರವಾದಿತ್ವ.

ज़िम्मादार, **ज़िम्मावार**, पु. ಜವಾಬುದಾರ, ಉತ್ತರವಾದಿ, ಹೊಣೆಗಾರ.

ज़िम्मादारी, **ज़िम्मावारी**, स्त्री. ಜವಾಬುದಾರಿಕೆ, ಉತ್ತರದಾಯಿತ್ವ, ಹೊಣೆಗಾರಿಕೆ.

जिया, पु. ಉಸಿರು, ಶ್ವಾಸ; ಜೀವ, ಪ್ರಾಣ
ज़िया, स्त्री. ಪ್ರಕಾಶ; ಹೊಳಪು.
ज़ियादा, वि. = ज़्यादा.
ज़ियान, पु. ನಷ್ಟ, ಹಾನಿ, ಕುಂದಕ.
जियाना, सक्रि ಬದುಕಿಸು, ಕಾಪಾಡು
ज़ियाफ़त, स्त्री. ಆತಿಥ್ಯ, ಊಟ ಉಪಚಾರ, ಔತಣ.
ज़ियारत, स्त्री. ದೇವರ ದರ್ಶನ; ತೀರ್ಥಯಾತ್ರೆ.
जियारा, पु. ಜೀವನ, ಬಾಳು; ಜೀವ, ಆತ್ಮ.
जिरगा, पु. ಗುಂಪು, ದಳ, ಮಂಡಲಿ.
जिरह, स्त्री. ಸಾಕ್ಷಿಗಳ ಅಡ್ಡಪರೀಕ್ಷೆ, ಪಾಟೀ ಸವಾಲು.
ज़िरह, स्त्री. ಯುದ್ಧ ಕವಚ.
ज़िरहपोश, ज़िरही, वि. ಕವಚಧಾರಿ; ದಂಡಾಳು.
जिराअत, स्त्री. ಆರಂಬ, ಜಿರಾಯಿತಿ, ಕೃಷಿ.
जिराअती, वि. ಆರಂಬಗಾರ, ರೈತ.
जिराफ़ा, पु. = जुराफ़ा
जिरियाना, पु. ಮೇಹಸ್ರಾವ, ಪ್ರಮೇಹ
जिला, स्त्री. ಹೊಳಪು, ಮೆರುಗು, ಕಾಂತಿ, ಪಾಲಿಷ್.
ज़िला, पु. ಪ್ರಾಂತ್ಯ, ಮಾಗಣಿ; ಜಿಲ್ಲೆ, ಡಿಸ್ಟ್ರಿಕ್ಟ್.
जिलाकार, पु. ಸಾಣೆ ಹಿಡಿಯುವವ; ಮೆರುಗು ಕೊಡುವವ.
ज़िलादार, पु. ಜಿಲ್ಲಾಧಿಕಾರಿ, ಕಲೆಕ್ಟರ್
जिलाना, सक्रि. ಬದುಕಿಸು, ಉಜ್ಜೀವಿಸು; ಕಾಪಾಡು; ಸಾಕು, ಸಲಹು.
जिलासाज़, पु = जिलाकार.
जिल्द, स्त्री. ಚರ್ಮ, ತೊಗಲು; ಗವಸಣಿಗೆ; ಪುಸ್ತಕದ ರಟ್ಟು, ಬೈಂಡು; ಪುಸ್ತಕದ ಒಂದು ಪ್ರತಿ; ದೊಡ್ಡ ಗ್ರಂಥದ (ಬೇರೆಬೇರೆಯಾಗಿ ಬೈಂಡು ಮಾಡಿರುವ) ಭಾಗಗಳು, ಸಂಪುಟ, "ವಾಲ್ಯೂಮ್".
जिल्दगर, जिल्दबंद, जिल्दसाज़, पु. ಪುಸ್ತಕಗಳನ್ನು ಹೊಲಿಯುವವ, ಬೈಂಡು ಮಾಡುವವ, ಬೈಂಡರ್.
जिल्दबंदी, जिल्दसाज़ी, स्त्री. ರಟ್ಟು ಹಾಕಿ ಪುಸ್ತಕವನ್ನು ಹೊಲಿಯುವಿಕೆ, ಪುಸ್ತಕದ ಹೊಲಿಗೆ, ಬೈಂಡಿಂಗು; ಬೈಂಡರ ಕೆಲಸ.
ज़िल्लत, स्त्री. ಅವಮಾನ, ಅಗೌರವ; ದುರವಸ್ಥೆ.
जिवकिया वि. ನೀರಲ್ಲಿ ಮುಳುಗುವವ.
जिवाना, सक्रि. ತಿನ್ನಿಸು; ಊಟ ಮಾಡಿಸು; ಬದುಕಿಸು; ಕಾಪಾಡು.
जिस, सर्व. 'जो' ಶಬ್ದಕ್ಕೆ ಏಕವಚನದಲ್ಲಿ ವಿಭಕ್ತಿ ಸೇರುವಾಗ ಆಗುವ ರೂಪ
जिस्म, पु. ದೇಹ, ಒಡಲು, ಶರೀರ, ಮೈ.
जिस्मानी, वि. ಶಾರೀರಕ, ದೈಹಿಕ.
जिस्मी, वि. ವ್ಯಕ್ತಿಗತ, ವೈಯಕ್ತಿಕ.
जिहत, स्त्री. ಕಾರಣ; ಹೇತು.
ज़िहन, पु. ಗ್ರಹಣಶಕ್ತಿ; ಸ್ಮೃತಿಶಕ್ತಿ; ಬುದ್ಧಿ; ಪ್ರತಿಭೆ. जिहन नशीन करना = ಜ್ಞಾಪಕದಲ್ಲಿಡು.
जिहाद, पु. ಧರ್ಮಯುದ್ಧ.

जी, पु. ಮನಸ್ಸು, ಚಿತ್ತ; ಚೈತನ್ಯ; ಜೀವ; ಆತ್ಮ; ಧೈರ್ಯ, ಧೃತಿ; ಆರೋಗ್ಯ. अव्य. ಗೌರವದ ಶಬ್ದ, ಶ್ರೀ, ಜೀಯ, ಜೀ, ಬುದ್ಧೀ. जी चुराना = ಮೈಗಳ್ಳತನ ಮಾಡು. जी में जी आना = ಜೀವ ಬರು, ಚೈತನ್ಯ ಬರು. जी चला = ಧೀರ; ಉದಾರ.

जीगन, पु. ಮಿಂಚು ಹುಳು.

जीजा, पु. ಅಕ್ಕನ ಗಂಡ, ಭಾವ.

जीजी, स्त्री. ಅಕ್ಕ.

जीत, स्त्री. ಜಯ, ಗೆಲುವು; ಸಿದ್ಧಿ; ಏಳಿಗೆ.

जीतना, सक्रि. ಗೆಲ್ಲು, ಗೆದಿ, ಜಯಿಸು

जीता, वि. ಜೀವಿಸುತ್ತಿರುವ, ಬದುಕಿರುವ; ಮಿಗಿಲಾದ; ಸರಿಯಾದ ಅಳತೆಗಿಂತ ಸ್ವಲ್ಪ ಹೆಚ್ಚಾದ. जीते जी = ಜೀವಿತದಲ್ಲಿ, ಜೀವದಿಂದಿರುವಾಗ.

जीतू, वि. ಗೆದ್ದವ, ವಿಜಯಿ.

जीदार, वि. ಸಾಹಸಿ, ಎದೆಗಾರ.

ज़ीन, पु. ಜೀನು, ಸಬರ, ತಡಿ, ಹಲ್ಲಣ ಕವುದಿ; ಒಂದು ವಿಧದ ಒರಟು ಬಟ್ಟೆ.

ज़ीनगर, पु. ಜೀನುಗಾರ, ಹಲ್ಲಣಗಾರ.

ज़ीनत, स्त्री. ಲಕ್ಷಣ, ಕಳೆ; ಸೌಂದರ್ಯ, ಅಂದ.

ज़ीनतदार, वि. ಸೊಬಗಿನ, ಸುಂದರ.

ज़ीनपोश, पु. ಜೀನಿನ ಮೇಲೆ ಹಾಸುವ ಬಟ್ಟೆ.

ज़ीनसवारी, स्त्री. ಜೀನಿನ ಮೇಲೆ ಹತ್ತುವಿಕೆ, ಸವಾರಿ.

ज़ीनसाज़, पु. ಕುದುರೆ ಜೀನು ತಯಾರಿಸುವವ, ಜೀನುಗಾರ, ಸಮುಗಾರ.

ज़ीनसाज़ी, स्त्री. ಜೀನುಗಾರನ ಕೆಲಸ, ಜೀನುಗಾರಿಕೆ.

ज़ीनहार, क्रिवि. ಎಂದೆಂದಿಗೂ, ಯಾವಾಗಲೂ.

जीना, अक्रि. ಜೀವಿಸು, ಬದುಕು; ಬಾಳು; ಹರ್ಷಿಸು.

ज़ीना, पु. ಏಣಿ, ನಿಚ್ಚಣಿಗೆ.

जीभ, स्त्री. ನಾಲಿಗೆ.

जीभी, स्त्री. ನಾಲಿಗೆಯನ್ನು ಒರೆಸುವ ತಂತಿ; ಕಿರುನಾಲಿಗೆ; ನಾಲಿಗೆಯಂತಹ ವಸ್ತು; ಲೇಖನಿಯ ಮೊನೆ, ನಿಬ್ಬು.

जीमना, सक्रि. ಊಟಮಾಡು, ಭುಜಿಸು.

जीयट, पु. = जीवट.

जीर, जीरा, पु. ಜೀರಿಗೆ; ಪುಷ್ಪರೇಣು, ಪರಾಗ.

जीर्ण, वि. ಬಹಳ ಹಳೆಯ; ಹರಕು, ಒಡಕು; ಅರಗಿದ, ಜೀರ್ಣವಾದ.

जीवट, पु. ಧೈರ್ಯ, ಸಾಹಸ.

जीवन, पु. ಜೀವನ, ಜೀವಮಾನ, ಜೀವಂತ; ಬಾಳು; ವೃತ್ತಿ.

जीवनबूटी, स्त्री. ಸಂಜೀವಿನಿ.

जीवनहार, वि. ಜೀವವುಳ್ಳ, ಸಜೀವ.

जीवनी, स्त्री. ಜೀವನ ಚರಿತ್ರೆ.

जीविका, स्त्री. ಜೀವನೋಪಾಯ, ಹೊಟ್ಟೆಪಾಡು, ಉಪಜೀವನ.

जीस्त, स्त्री. ಜೀವನ, ಬಾಳು.

जुंग, स्त्री. ಉದ್ವೇಗ; ಹುರುಪು.

जुंबिश, स्त्री. ಗತಿ, ಚಲನೆ; ಕಂಪನ, ಅಲುಗಾಡುವಿಕೆ.

जुआं, पु. ಹೇನು.

जुआ, पु. ದ್ಯೂತ, ಜೂಗಾರಾಟ; ನೊಗ.

जुआठा, पु. ನೊಗ.

जुआचोर, पु. ಮೋಸಗಾರ, ಠಕ್ಕ.

जुआरी, पु. ಜೂಜುಗಾರ, ಜೂದಾಳಿ.

जुई, स्त्री. ಸಣ್ಣ ಹೇನು

जुकाम, पु. ನೆಗಡಿ, ಶೀತ. मेंडकी को जुकाम होना = ಬಹಳ ದೊಡ್ಡವನಂತೆ ಕಾಣಿಸಿಕೊಳ್ಳಬೇಕೆಂಬ ಜಂಭದಿಂದ ಅಲ್ಪ ವಿಷಯವನ್ನೂ ಸಹ ದೊಡ್ಡದಾಗಿ ಮಾಡು.

जुग, पु. ಯುಗ; ಯುಗಳ, ಜೋಡಿ, ಜತೆ; ಪೀಳಿಗೆ, ತಲೆಮಾರು.

जुगजुगाना, अक्रि. ಮಿನುಗು, ಹೊಳೆ; ಏಳಿಗೆಗೆ ಬರು.

जुगत, स्त्री. ಜುಕುತಿ, ಯುಕ್ತಿ, ಉಪಾಯ; ಚಾತುರ್ಯ; ಒಪ್ಪಿಕೆ.

जुगतबाज़, वि. ತಂತ್ರಗಾರ.

जुगतबाज़ी, स्त्री. ತಂತ್ರಗಾರಿಕೆ.

जुगनी, जुगनूं, पु. ಮಿಂಚು ಹುಳು, ಹೊನ್ನೆಹುಳು; ಅಡ್ಡಿಕೆ, ಪದಕ.

जुग़राफ़िया, पु. ಭೂಗೋಳಶಾಸ್ತ್ರ, ಭೂವಿವರಣೆ

जुगल, वि. ಯುಗಳ, ಜೋಡಿ, ಜೊತೆ

जुगवाना, जुगाना, सक्रि. ಕೂಡಿ ಹಾಕು; ಮಿಾಸಲು ಕಟ್ಟು; ಶೇಖರಿಸು

जुगाड़, स्त्री. ಸೌಕರ್ಯ, ಅನುಕೂಲ.

जुगाल, पु. ಮೆಲುಕು; ಚರ್ವಣ, ಮೆಲುಕಾಡುವ ಮೇವು.

जुगालना, अक्रि. ನವಲು ಹಾಕು, ಮೆಲುಕು ಹಾಕು; ಚರ್ವಿಸು.

जुगाली, स्त्री. ಮೆಲುಕು ಹಾಕುವಿಕೆ, ಮೆಲುಕು; ಚರ್ವಣ.

जुज़, पु. ವಿಭಾಗ, ಖಂಡ; ತುಂಡು, ಅಂಶ; ಮಡಿಸಿದರೆ ೮ (ಅಥವಾ ೧೬) ಪುಟಗಳಾಗುವ ಅಚ್ಚಿನ ಕಾಗದದ ಹಾಳೆ, "ಫಾರಂ".

जुज़दान, पु. ಪುಸ್ತಕಗಳನ್ನು ಕಟ್ಟಿ ಇಡುವ ಬಟ್ಟೆ, ಪುಸ್ತಕಗಳ ಚೀಲ.

जुज़बंदी, स्त्री. ಪುಸ್ತಕದ ಫಾರಮ್ಮುಗಳನ್ನು ಬೇರೆ ಬೇರೆ ಹೊಲಿದು ರಟ್ಟು ಕಟ್ಟುವಿಕೆ (ಈ ಪುಸ್ತಕವನ್ನು ಹೊಲಿದಿರುವಂತೆ), "ಸೆಕ್ಷನ್ ಬೈಂಡು".

जुज़वी, वि. ಅತ್ಯಲ್ಪ, ತುಸ.

जुझ, पु. ಯುದ್ಧ, ಕದನ.

जुझाऊ, वि. ಯುದ್ಧ ಸಂಬಂಧವಾದ; ಜಗಳವಾಡುವ, ಹೋರಾಡುವ.

जुझार, वि. ಯೋಧ, ವೀರ.

जुट, स्त्री. ಜೋಡಿ, ಜತೆ; ಮಂಡಲಿ, ಗೋಷ್ಠಿ.

जुटना, अक्रि. ಮಿಳಿತವಾಗು, ಕೂಡು, ಸೇರು; ಅಪ್ಪಿಕೊಳ್ಳು; ಜಂಟಿಯಾಗು.

जुटली, वि. ಜುಟ್ಟುಳ್ಳ.

जुटाना, सक्रि. ಸೇರಿಸು, ಕೂಡಿಸು; ಹವಣಿಸು; ಜೋಡಿಸು; ಜಂಟಿಹಾಕು.

जुट्टी, स्त्री. ಚಿಗುರು, ಮೊಳಕೆ; ಕಟ್ಟು, ಕಂತೆ; ಒಂದರಮೇಲೊಂದಾಗಿ ಜೋಡಿಸಿದವಸ್ತುಗಳು; ಅಡಕು, ಸಮೂಹ, ಗುಡ್ಡೆ. वि. ಸೇರಿದ, ಕೂಡಿಸಿದ; ಜೊತೆ ಮಾಡಿದ; ಜಂಟಿಯಾದ.

जुठारना, सक्रि. ಎಂಜಲು ಮಾಡು.

जुठिहारा, वि. ಎಂಜಲು ತಿನ್ನುವವ.

जुड़ना, अक्रि. ಸೇರು, ಒಟ್ಟುಗೂಡು; ಕಲೆ, ಬೆರೆ; ಗಂಡು ಹೆಣ್ಣು ಕೂಡು, ನೆರೆ, ಹಡು.

जुड़पत्ती, स्त्री. ಒಂದು ಚರ್ಮರೋಗ.

जुड़वाँ, पु. ಅವಳಿ ಜವಳಿ (ಮಕ್ಕಳು).

जुड़वाना, सक्रि. जोड़ना का प्रे. रूप; जुड़ाना का प्रे. रूप.

जुड़ाई, स्त्री. ಕೂಡಿಸುವಿಕೆ, ಜೋಡಿಸುವಿಕೆ; ಜೋಡಿಸುವುದರ ಕೂಲಿ.

जुड़ाना, अक्रि. ತಣ್ಣಗಾಗು, ಶಾಂತವಾಗು, ತಣಿ. सक्रि. ಜೊತೆ ಸೇರಿಸು; ತಣ್ಣಗೆ ಮಾಡು; ಶಾಂತಪಡಿಸು, ತಣಿಸು

जुड़ाव, पु. ಸೇರಿಸುವಿಕೆ; ಜೋಡಣೆ

जुतना, अक्रि. ಗಾಡಿಗೆ ಅಥವಾ ನೊಗಕ್ಕೆ ಕಟ್ಟಲ್ಪಡು; ಕೆಲಸಕ್ಕೆ ತೊಡಗು, ಎಸಗು; ಉಳಲ್ಪಡು, ಉಕ್ಕೆಯಾಗು.

जुतवाना, सक्रि जोतना का प्रे. रूप.

जुताई, स्त्री. = जोताई.

जुतियाना, सक्रि. ಜೋಡಿನಿಂದ ಹೊಡೆ; ತುಚ್ಛೀಕರಿಸು.

जुदा, वि. ಪ್ರತ್ಯೇಕ, ಬೇರೆ, ವಿಭಿನ್ನ.

जुदाई, स्त्री. ಬೇರೆಯಾಗುವಿಕೆ, ಅಗಲುವಿಕೆ; ವಿಯೋಗ.

जुनून, पु. ಹುಚ್ಚು.

जुनूनी, वि. ಹುಚ್ಚು.

जुनूब, पु. ದಕ್ಷಿಣ ದಿಕ್ಕು, ತೆಂಕಲು.

जुनूबी, वि. ದಕ್ಷಿಣದ, ತೆಂಕಲ.

ज़ुन्नार, पु. ಜನಿವಾರ, ಯಜ್ಞೋಪವೀತ

जुन्हाई, जुन्हैया, स्त्री. ಚಂದ್ರಿಕೆ, ಬೆಳದಿಂಗಳು.

ज़ुफ़ाफ़, पु. ನಿಷೇಕ ಪ್ರಸ್ತ.

जुफ़्त, वि. ಯುಗ್ಮ, ಸಮ (ಸಂಖ್ಯೆ), ಸಂ जुफ़्त ताक = ಸಂ ಬೆಸದ ಆಟ.

ज़ुबान, स्त्री. = ज़बान.

जुब्बा, पु. ಒಂದು ಬಗೆ ಉದ್ದಂಗಿ.

ज़ुमरा, पु. ಗುಂಪು, ಪಡೆ, ದಳ.

जुमला, वि. ಎಲ್ಲಾ, ಒಟ್ಟು, ಸಕಲ. पु. ವಾಕ್ಯ.

जुमा, पु. ಶುಕ್ರವಾರ.

ज़ुमुर्रद, पु. ಮರಕತ, ಪಚ್ಚೆ.

जुमेरात, पु. ಗುರುವಾರ.

जुरअत, स्त्री. ಸಾಹಸ, ಛಾತಿ; ಜೂರತ್ತು

जुरझुरी, स्त्री ಜ್ವರ, ತಾಪ.

जुरमान, पु. ದಂಡ, ಜುಲ್ಮಾನೆ.

जुरवा, स्त्री. ಹೆಂಡತಿ.

जुराफ़ा, पु. ಒಂಟೆಯಂತಹ ಎತ್ತರವಾದ ಒಂದು ಮೃಗ, ಜಿರಾಫೆ.

जुर्म, पु. ಅಪರಾಧ, ತಪ್ಪು, ತಕ್ಸೀರು.

जुर्रा, पु. ಡೇಗೆ, ಗಿಡಗ; ವೀರ, ಪರಾಕ್ರಮಿ.

जुर्राब, स्त्री. ಕಾಲುಚೀಲ, ಮೇಜೋಡು

जुल, पु. ಮೋಸ, ಠಕ್ಕು.

जुलबाज़, वि. ಮೋಸಗಾರ, ಠಕ್ಕ.

जुलबाज़ी, स्त्री. ಮೋಸಗಾರಿಕೆ.

जुलाब, पु. ಭೇದಿ; ಭೇದಿಯ ಔಷಧ, ಜುಲಾಬು.

जुलाहा, पु. ನೆಯ್ಯುವ, ಸಾಲೆಯವ, ಜಾಡ; ನೀರಿನ ಮೇಲೆ ವೇಗವಾಗಿ ಸುತ್ತುತ್ತಿರುವ ಒಂದು ಹುಳು.

जुलाहिन, स्त्री. ನೆಯ್ಯುವವಳು.

ज़ुल्फ़, स्त्री. ಕುರುಳು, ಅಲಕ, ಕೇಶ.

ज़ुल्म, पु. ಬಲಾತ್ಕಾರ, ಅತ್ಯಾಚಾರ; ದಬ್ಬಾಳಿಕೆ; ಅನ್ಯಾಯ. ज़ुल्म ढाना =ಅತ್ಯಾಚಾರ ಮಾಡು.

जुलूस, पु. ಪಟ್ಟಾಭಿಷೇಕ; ಉತ್ಸವ; ಸಮಾರಂಭ; ಮೆರವಣಿಗೆ, ಶಬಗಸ್ತು.

जुलाब, पु. =जुल्लाब.

जुस्त, पु. ದೇಹ, ಮೈ, ಶರೀರ. स्त्री. ಹುಡುಕುವಿಕೆ.

जुस्तजू, स्त्री. ಶೋಧನೆ, ತಲಾಶಿ; ವಿಚಾರಣೆ.

जुहाना, सक्रि. ಕೂಡಹಾಕು, ಶೇಖರಿಸು

जुहार, स्त्री. ನಮಸ್ಕಾರ, ವಂದನೆ.

जुहारना, सक्रि. ಸಹಾಯ ಬೇಡು.

जुही, स्त्री. =जूही.

जूं, स्त्री. ಹೇನು.

जूआ, पु. ನೊಗ; ಬೀಸುವ ಕಲ್ಲನ್ನು ತಿರುಗಿಸುವ ಗೂಟ, ಹಿಡಿಕೆ; ಜೂಜು.

जूजू, पु. ಬೂಚಿ, ಗುಮ್ಮ, ಗೊಗ್ಗಯ್ಯ.

जूझना, अक्रि. ಯುದ್ಧಮಾಡು, ಕಾದು

जूट, पु. ಜಡೆಮುಡಿ, ತುರುಬು; ಗೋಣಿನಾರು.

जूठन, स्त्री. ಎಂಜಲು, ಉಚ್ಛಿಷ್ಟ.

जूठा, वि. ಎಂಜಲಾದ, ಉಚ್ಛಿಷ್ಟ.

जूड़, पु. ಶೀತ, ಚಳಿ.

जूड़ा, पु. ಜಡೆ, ತುರುಬು; ಮುಡಿ, ಜುಟ್ಟು; ಊಬು, ಸುಂಕು.

जूड़ी, स्त्री. ಚಳಿ ಜ್ವರ, ಕಂಪಜ್ವರ.

जूता, पु. ಎಕ್ಕಡ, ಮೆಟ್ಟು, ಜೋಡು. जूतों दाल बंटना=ಪರಸ್ಪರ ಜಗಳವಾಗು, ಮಾರಾಮಾರಿಯಾಗು

जूताख़ोर, वि. ಎಕ್ಕಡದೇಟು ತಿನ್ನುವವ; ನಿರ್ಲಜ್ಜ.

जूती, स्त्री. ಹೆಂಗಸರ ಜೋಡು, ಕೆರ, ಮೆಟ್ಟು.

जूती पैज़ार, स्त्री. ಎಕ್ಕಡದ ಏಟು; ಮಾರಾಮಾರಿ, ಜಗಳ.

जून, पु. ಸಮಯ, ಕಾಲ; ಹುಟ್ಟು.

जूप, पु. ಜೂಜು, ವಿವಾಹದಲ್ಲಿ ವಧೂವರರಿಬ್ಬರೂ ಕವಡೆಯಾಡುವ ಒಂದು ಶಾಸ್ತ್ರ.

जूरा, पु. =जूड़ा.

जूरी, स्त्री. ಮೊಳಕೆ, ಚಿಗುರು; ಒಂದು ಬಗೆಯ ಪಣ್ಯಾರ.

जूस, पु. ಬೇಳೆಯ ಕಟ್ಟು, ಎಸರು, ಸಾರು; ರಸ; ಕಷಾಯ. पु. ಸಮಸಂಖ್ಯೆ, ಯುಗ್ಮ. जूस ताक=ಸರಿಬೆಸದ ಆಟ.

जूसी, स्त्री. ಕಾಕಂಬಿ.

जूही, स्त्री. ಸಣ್ಣ ಜಾಜಿ; ಮಲ್ಲಿಗೆ; ಒಂದು ಬಗೆ ಬಾಣಬಿರುಸು.

जेठ, पु. ಜ್ಯೇಷ್ಠಮಾಸ; ಗಂಡನ ಅಣ್ಣ, ಮೈದುನ. वि. ಜ್ಯೇಷ್ಠ, ಹಿರಿಯ.

जेठा, वि. ಜ್ಯೇಷ್ಠ, ಹಿರಿಯ; ಶ್ರೇಷ್ಠ.

जेठाई, स्त्री. ಹಿರಿಯತನ, ಜ್ಯೇಷ್ಠತ್ವ.

जेठानी, स्त्री. ಓರಗಿತ್ತಿ, ನೆಗೆಣ್ಣಿ.

जेठापन, पु. ಹಿರಿಯತನ.

जेठी, वि. ಜ್ಯೇಷ್ಠ, ಹಿರಿಯ.

जेठीमधु, स्त्री. ಅತಿಮಧುರ.

जेठौत, जेठौता, पु. ಗಂಡನ ಅಣ್ಣನ

ಮಗ, ಓರಗಿತ್ತಿಯ ಮಗ.

जेता, वि. ಎಷ್ಟು. पु. ಗೆದ್ದವ.

जेब, पु. ಕಿಸೆ, ಜೇಬು, ಬೊಕ್ಕಣ. जेबकट, जेबकतरा = ಕಿಸೆಗಳ್ಳ.

ज़ेब, स्त्री. ಸೌಂದರ್ಯ, ಲಾವಣ್ಯ, ಚೆಲುವು

ज़ेबख़र्च, पु. ಚಿಲ್ಲರೆ ಖರ್ಚು.

ज़ेबा, वि. ಅಂದವಾದ, ಸುಂದರ.

ज़ेबाइश, स्त्री. ಅಲಂಕಾರ.

ज़ेबी, वि. ಜೇಬಿನಲ್ಲಿಟ್ಟುಕೊಳ್ಳುವಂಥ, ಸಣ್ಣ, ಚಿಕ್ಕದಾದ.

जेर, पु. ಗರ್ಭವೇಷ್ಟನ, ಮಾವಿಚೀಲ, ಮಾಸು, ಸೆತ್ತೆ.

ज़ेर, वि. ಕೆಳಗೆ, ಕೆಳಗಡೆ; ಕೆಳಗಿನ, ನಿಮ್ನ; ಪತಿತ. ज़ेर-ओ-ज़बर = ಪಲ್ಲಟ; ತಾರು ಮಾರು.

ज़ेरपाई, स्त्री. ಜೋಡು, ಎಕ್ಕಡ.

जेरबंद, पु. ಕುದುರೆಯ ಜೀನನ್ನು ಬಿಗಿದು ಕಟ್ಟುವ ಬಾರು, ಜೇರುಬಂದು

जेरबार, वि. ದುಃಖಿತ, ದುಃಖಪೀಡಿತ; ದೀನ

जेरबारी, स्त्री. ಖರ್ಚು; ಭಾರ; ದುಃಖ, ತಾಪತ್ರಯ; ದೈನ್ಯ.

जेरी, स्त्री. ಗರ್ಭವೇಷ್ಟನ, ಮಾವಿಚೀಲ; ದೊಣ್ಣೆ, ಕೋಲು.

जेल, स्त्री. ಹಗ್ಗ, ದಾರ; ಸೆರೆಮನೆ, ಜೈಲು

जेलख़ाना, पु. ಕಾರಾಗೃಹ, ಸೆರೆಮನೆ, ಕಾರಂಗ, ಜೈಲು, ಬಂದೀಖಾನೆ.

जेली, स्त्री. ಹುಲ್ಲು ಬಾಚಿ.

जेवना, सक्रि. ಊಟಮಾಡು.

जेवनार, स्त्री. ಔತಣ, ಮೇಜವಾನಿ; ಭೋಜನ.

जेवाना, सक्रि. ಊಡು, ಊಡಿಸು

ज़ेवर, पु. ಆಭರಣ, ನಗ, ಒಡವೆ.

जेवरी, स्त्री. ಹಗ್ಗ, ಹುರಿ, ಹಾವು.

जेह, स्त्री. ಬಿಲ್ಲಿನ ತುದಿ, ಕೊಪ್ಪು; ಗೋಡೆಯ ಮುಂಗಟ್ಟು, ಕಂಟು.

जेहड़, स्त्री. ನೀರಿನ ಕೊಡಪಾನೆ; ಕಲಶ; ಕಲಶಗಳನ್ನು ಒಂದರ ಮೇಲೊಂದು ಅಡಕಿ ಮಾಡುವ ಪೂಜೆ, ಕಲಶಪೂಜೆ.

ज़ेहन, पु. = ज़िहन.

जेहर, स्त्री. ನೂಪುರ, ಕಾಲಂದುಗೆ.

जै, स्त्री. ಜಯ.

जैब, स्त्री. ಎದೆ; ಹೃದಯ; ಜೇಬು.

जैमाल, स्त्री. ಹಾರ, ಕಂಠಿಯ ಸರ.

जैयद, वि. ಬಲಿಷ್ಠ, ಗಟ್ಟಿಯಾದ; ಉತ್ಕೃಷ್ಟವಾದ; ವಿಶಾಲವಾದ.

जैल, पु. ಸೆರಗು, ಅಂಚು; ಕೆಳಭಾಗ.

जैसा, क्रिवि. ಹೇಗೆ, ಯಥಾ.

जैसे, क्रिवि. ಯಾವ ಪ್ರಕಾರ, ಹೇಗೆ. जैसे तैसे = ಹೇಗೋ, ಹೇಗಾದರೂ. जैसे को तैसे = ಪ್ರತಿಗೆ ಪ್ರತಿ, ಸರಿಮಿಾರಿ

जोंक, स्त्री. ಜಲೂಕ, ಜಿಗಣೆ.

जोंधरी, स्त्री. ಜೋಳ.

जोंधैया, स्त्री. ಬೆಳದಿಂಗಳು.

जो, सर्व. ಯಾರು (ಸಂಬಂಧವಾಚಕ) ಯಾವ. अव्य. ಒಂದು ವೇಳೆ, ಆದಲ್ಲಿ, ಯದಿ. जो हो = ಏನೇ ಆಗಲಿ. जो हुआ सो हुआ = ಆದದ್ದಾಯಿತು.

जोख, पु. ತೂಕ; ೪ ಕ್ರೋಶದ ದೂರ.

जोखना, सक्रि. ತೂಕಮಾಡು, ಪರೀಕ್ಷಿಸು

जोखा, जोखाई, पु. ತೂಕಮಾಡುವಿಕೆ; ಲೆಕ್ಕ, ತನಿಖೆ.

जोखिम, जोखों, स्त्री. ಆಪತ್ತು, ಅಪಾಯ; ಎರವು, ಗಂಡಾಂತರ. जान जोखिम में होना=ಪ್ರಾಣಕ್ಕೆ ಅಪಾಯ ಬರು, ಜೀವಕ್ಕೆ ಸಂಚಕಾರ ಬರು.

जोग, पु. ಯೋಗ; ಮಿಳಿತ; ಸಹಯೋಗ; ಸಂಯೋಗ; ಸಂಕಲನ; ಮೊತ್ತ, ತೇರೀಜು. वि. ಯೋಗ್ಯವಾದ; ತಕ್ಕ, ಸರಿಯಾದ.

जोगड़ा, पु. ಕಪಟಸನ್ಯಾಸಿ, ಆಷಾಢಭೂತಿ.

जोगिन, स्त्री. ಜೋಗಿಣಿ; ಜೋಗತಿ; ಪಿಶಾಚಿನಿ.

जोगिनी, स्त्री. ಯೋಗಿನಿ; ಜೋಗತಿ.

जोगिया, वि. ಸನ್ಯಾಸಿಯ; ಕಾವಿ ಬಣ್ಣದ. पु. ಕಪಟ ಸನ್ಯಾಸಿ.

जोगी, पु. ಯೋಗಿ, ಸನ್ಯಾಸಿ; ಒಂದು ಬಗೆಯ ಭಿಕ್ಷುಕ, ಜೋಗಿ.

जोगीड़ा, पु. ಒಂದು ತರಹದ ಹಾಡು; ಸಂಗೀತಗಾರರ ಗೋಷ್ಠಿ.

जोड़, पु. ಕೂಡುವಿಕೆ, ಸಂಕಲನ; ಮೊತ್ತ, ಜುಮ್ಲಾ, ಇತ್ತಣೆ; ಕೂಟ; ಪೋಟಿ; ಜೋಡಣೆ; ಸಂಧಿ, ಕೀಲು; ಜೋಡಿ, ಜತೆ; ಉಡಿಗೆಯ ದುಸ್ತು; ಸಮಾನತೆ; ಸಾಟಿ, ಎಣೆ, ಈಡು; ಮೋಸ, ತಂತ್ರ; ಕಟ್ಟುಕತೆ. जोड़ जाड़=ಗಳಿಸಿಟ್ಟ ಅಲ್ಪ ಸ್ವಲ್ಪ ಹಣ. जोड़तोड़=ತಂತ್ರ, ಹೊರಳೆ, ಉಪಾಯ

जोड़ती, स्त्री. ಸಂಕಲನ; ಲೆಕ್ಕ.

जोड़न, पु. ಹೆಪ್ಪು ಹಾಕುವ ಮೊಸರು, ಹೆಪ್ಪು; ಬೆಸಗೆ.

जोड़ना, सक्रि. ಸೇರಿಸು; ಕೂಡಿಸು; ಜೋಡಿಸು; ತೇಪೆ ಹಾಕು; ಒಟ್ಟುಗೂಡಿಸು; ಕೂಡಿಡು; ಹಚ್ಚಿಡು; ನೊಗಕ್ಕೆ ಕಟ್ಟು; ಸಂಖ್ಯೆಗಳನ್ನು ಕೂಡು; ಬೆಸು; ಸಂಬಂಧಿಸು. हाथ जोड़ना=ಕೈಮುಗಿ

जोड़वाँ, वि. ಅವಳಿ ಜವಳಿ.

जोड़वाना, सक्रि. जोड़ना का प्रे.रूप.

जोड़ा, पु. ಜೊತೆಯ ವಸ್ತು, ಜೋಡಿ; ಮೆಟ್ಟು, ಜೋಡು; ಒಂದು ಸಲಕ್ಕೆ ಬೇಕಾಗುವ ಉಡಿಗೆ ತೊಡಿಗೆ, ದುಸ್ತು; ಗಂಡುಹೆಣ್ಣು, ಮಿಥುನ, ದಂಪತಿ; ಈಡು, ಎಣೆ, ಸಾಟಿ. जोड़ा खाना =(ಗಂಡು ಹೆಣ್ಣು) ಕೂಡು, ನೆರೆ, ಮೈಥುನಮಾಡು.

जोड़ाई, स्त्री. ಸೇರಿಸುವಿಕೆ; ಕೂಡಿಸುವಿಕೆ; ಜೋಡಿಸುವಿಕೆ; ಜೋಡಣೆ; ಈ ಕೆಲಸಗಳಿಗೆ ಕೊಡುವ ಕೂಲಿ.

जोड़ी, स्त्री. ಜೋಡಿ, ಜತೆ; ಜೋಡೆತ್ತಿನ ಗಾಡಿ; ಜೋಡು ಕುದುರೆ ಗಾಡಿ.

जोत, स्त्री. ಜ್ಯೋತಿ; ದೀಪ; ಉಳುವಿಕೆ, ಉಕ್ಕೆ; ನೊಗಪಟ್ಟಿ, ಹೊತ್ತಿಗೆ, ಬಾರುಕಾಣಿ; ತಕ್ಕಡಿಯ ದಾರ.

जोतना, सक्रि. ನೊಗಕ್ಕೆ ಕಟ್ಟು, ಬಂಡಿಗೆ ಕಟ್ಟು, ಹೂಡು; ಉಳು; ಸಾಗುವಳಿ ಮಾಡು.

जोता, पु. ಎತ್ತುಗಳ ಕುತ್ತಿಗೆಯನ್ನು ನೊಗಕ್ಕೆ ಕಟ್ಟುವ ಹಗ್ಗ, ನೊಗಪಟ್ಟಿ, ಜೊತ್ತಿಗೆ, ಬಾರುಕಾಣಿ; ಉಳುವವ,

ರೈತ; ತೊಲೆ, ಮರದ ದಿಮ್ಮಿ, ನಾಟ; ಅಡ್ಡಗೋಡೆ.

जोताई, स्त्री. ಬಂಡಿಗೆ ಕಟ್ಟುವಿಕೆ, ಹೂಡುವಿಕೆ; ಉಳುವಿಕೆ, ಉಕ್ಕೆ; ಸಾಗುವಳಿ; ಈ ಕೆಲಸಗಳಿಗೆ ಕೊಡುವ ಕೂಲಿ.

जोतार, पु. ಉಳುವವ, ರೈತ.

जोती, स्त्री. ದೀಪ, ಜ್ಯೋತಿ; ತಕ್ಕಡಿಯ ಹಗ್ಗ; ಉಕ್ಕೆ ಮಾಡಿದ ಜಮೀನು.

जोफ़, पु. ಮುದಿತನ, ದೌರ್ಬಲ್ಯ

जोबन, पु. ಪ್ರಾಯ, ಯೌವನ; ಸೌಂದರ್ಯ, ಚೆಲುವು; ಸೊಬಗು.

ज़ोम, पु. ಉದ್ರೇಕ, ಬೆದೆ; ಉತ್ಸಾಹ; ಆವೇಶ, ಗರ್ವ.

जोय, स्त्री. ಪತ್ನಿ, ಹೆಂಡತಿ; ಹೊಳೆ, ನಾಲೆ

जोयां, जोया, वि. ಹುಡುಕುವವ.

ज़ोर, पु. ಬಲ, ಶಕ್ತಿ, ಬಲುಮೆ; ಕಸುವು, ಜೋರು; ಒತ್ತರ, ಭರ; ವೇಗ; ಪ್ರಾಬಲ್ಯ, ಮೇಲುಗೈ; ಕಸರತ್ತು, ವ್ಯಾಯಾಮ. क्रिवि. ಬಲವಾಗಿ; ಬಲವಂತದಿಂದ. ज़ोर पकड़ना = ಜೋರಾಗು, ಪ್ರಬಲವಾಗು, ಬಲಪಡು. ज़ोर देकर कहना = ಊದಿ ಹೇಳು, ಒತ್ತಿ ಹೇಳು.

ज़ोरदार, वि. ಬಲಿಷ್ಠ, ಬಲಯುತ; ಶಕ್ತಿಯುಳ್ಳ.

ज़ोरशोर, पु. ಬಲು ಜೋರು, ಸಡಗರ, ಸಂಭ್ರಮ, ಭರ್ಜರಾಟ.

ज़ोराज़ोरी, स्त्री. ಬಲಾತ್ಕಾರ, ಬಲವಂತ. क्रिवि. ಬಲಾತ್ಕಾರದಿಂದ.

ज़ोराना, अक्रि. ಬಲಿಷ್ಠನಾಗು; ಸಬಲನಾಗು; ಜೋರಾಗು.

ज़ोरावर, वि. ಬಲಿಷ್ಠ. ಶಕ್ತಿವಂತ.

ज़ोरावरी, स्त्री. ಬಲ, ಶಕ್ತಿ; ಬಲಾತ್ಕಾರ

जोरू, स्त्री. ಪತ್ನಿ, ಹೆಂಡತಿ.

जोली, पु. ಸಂಗಾತಿ, ಗೆಳೆಯ.

जोवना, सक्रि. ನೋಡು, ನಿರೀಕ್ಷಿಸು.

जोश, पु. ಕುದಿ, ಉಕ್ಕುವಿಕೆ; ಉದ್ವೇಗ, ಆವೇಶ; ಹುರುಪು, ಹುಮ್ಮಸ್ಸು; ಕಾಮೋದ್ದೀಪನ, ಬೆದೆ. जोश देना = ಕುದಿಸು, ಮರಳಿಸು. जोश दिलाना = ಹುರಿದುಂಬಿಸು.

जोश-ख़रोश, पु. ಗರ್ಜನೆ, ಅಬ್ಬರ.

जोशन, पु. ತೋಳುಬಂದಿ, ವಂಕಿ; ಒಂದು ಬಗೆ ಕವಚ.

जोशांदा, पु. ಕಷಾಯ, ಕ್ವಾಥ, ಕಾಡೆ.

जोशी, पु. ಜ್ಯೋತಿಷ್ಯ, ಜೋಯಿಸ.

जोशीला, वि. ಆವೇಶವುಳ್ಳ, ಹುರಿದುಂಬಿಸುವ.

जोहना, सक्रि. ನೋಡು, ನಿರೀಕ್ಷಿಸು.

जोहर, पु. ಬೆನ್ನು; ಮೇಲ್ಭಾಗ.

जोहार, स्त्री. ನಮಸ್ಕಾರ, ವಂದನೆ.

जौंरा-भौंरा, पु. ನೆಲಮಾಳಿಗೆ; ಇಬ್ಬರು ಹುಡುಗರ ಜೋಡಿ.

जौ, पु. ಜವೆ ಗೋಧಿ, ಯವೆ; ಅರು ಗುಲಗಂಜಿಯ ತೂಕ.

जौआं, पु. ಅವಳಿ ಮಕ್ಕಳು.

जौआला, पु. ಜವೆ ಗೋಧಿ ಮತ್ತು ಬೇರೆ ಧಾನ್ಯದ ಬೆರಕೆ.

ज़ौक़, पु. ರುಚಿ, ಇಷ್ಟ; ಕುಶಾಲು.

जौख़, पु. ಗುಂಪು, ದಳ; ಪಕ್ಷಿಗಳ ಸಾಲು.

जौज़, पु. ಜಾಯಿಕಾಯಿ.

ज़ौज, पु. ಜೊತೆ; ಗಂಡ, ಪತಿ.

ज़ौजा, स्त्री. ಹೆಂಡತಿ, ಪತ್ನಿ.

जौज़ा, पु. ಮಿಥುನರಾಶಿ.

जौतुक, पु. ವರಶುಲ್ಕ, ವರದಕ್ಷಿಣೆ

जौन, सर्व. ಯಾರು, ಅವುದು, ಯಾವ.

जौधिक, पु. ಕತ್ತಿಯ ಒಂದು ವರಸೆ.

जौर, पु. ಅತ್ಯಾಚಾರ, ಜುಲುಮು.

जौलान, स्त्री. ಕೈಕೋಳ, ಬೇಡಿ

जौलानी, स्त्री. ತ್ವರೆ, ವೇಗ; ಬಲ, ಶಕ್ತಿ

जौहर, पु. ರತ್ನ, ಮಣಿ; ಸಾರಾಂಶ, ತಿರುಳು; ಆಯುಧಗಳ ಹೊಳಪು, ಕಾಂತಿ; ವಿಶೇಷ ಗುಣ, ವೈಶಿಷ್ಟ್ಯ; ಸ್ವಭಾವ; ದಕ್ಷತೆ; ಉತ್ಕೃಷ್ಟತೆ; ಶತ್ರುಗಳ ಕೈಗೆ ಸಿಕ್ಕದಿರಲು ರಾಜಪುತ್ರ ಮಹಿಳೆಯರೆಲ್ಲರೂ ಬೆಂಕಿಯಲ್ಲಿ ಬಿದ್ದು ಜೀವವನ್ನು ತೊರೆಯುವ ಪದ್ಧತಿ, ಜೌಹರ್ ವ್ರತ; ಅಗ್ನಿಪ್ರವೇಶ; ಅಗ್ನಿಕುಂಡ; ಅತ್ಮಹತ್ಯೆ.

जौहरी, पु. ರತ್ನಪರೀಕ್ಷೆ ಮಾಡುವವ; ರತ್ನಪಡಿ ವ್ಯಾಪಾರಿ; ಗುಣಪರೀಕ್ಷಕ; ಗುಣದೋಷಗಳನ್ನರಿತವ.

ज़्यादती, स्त्री. ಹೇರಳ, ಹೆಚ್ಚು; ಅತ್ಯಾಚಾರ.

ज़्यादह, ज़्यादा, वि. ಹೆಚ್ಚು, ಅಧಿಕ, ಶಾನೆ, ಜಾಸ್ತಿ, ತುಂಬ, ಹೇರಳ.

ज्यों, क्रिवि. ಹೇಗೆ, ಯಾವ ಪ್ರಕಾರ; ಯಾವಾಗ. ज्यों का त्यों = ಅದೇ ಪ್ರಕಾರ, ತದ್ವತ್ತಾಗಿ; ಇದ್ದದ್ದಿದ್ದ ಹಾಗೆ; ಅನಾಮತ್ತಾಗಿ. ज्यों त्यों = ಹೇಗಾದರೂ, ಏನಕೇನ ಪ್ರಕಾರೇಣ

ज्योनार, स्त्री. = जेवनार.

ज्योरी, स्त्री. ಹಗ್ಗ.

ज्वार, स्त्री. ಜೋಳ; ಸಮುದ್ರದ ಭರತ, ಉಬ್ಬರ, ಏರು. ज्वार भाटा = ಸಮುದ್ರದ ಏರಿಳಿತ, ಉಬ್ಬರವಿಳಿತ.

झ

झंकार, स्त्री. ಜೀರುಧ್ವನಿ; ಝೇಂಕಾರ

झंकारना, अक्रि. ಝೇಂಕರಿಸು.

झंकृत, वि. ಝೇಂಕಾರವಾಗುವ. झंकृत होना = ಝೇಂಕರಿಸು.

झंखना, अक्रि. = झींखना.

झंखाड़, पु. ಮೆಳೆ, ಪೊದೆ, ಒಬ್ಬೆ; ಎಲೆಗಳಿಲ್ಲದಮರ, ಬೋಳುಮರ; ಗೊಡ್ಡು

झंझट, स्त्री. ಜೊಂಜಾಟ, ಜಂಜಡ; ಗೊಂದಲ, ತೊಡಕು, ಗೋಜಲು; ರಗಳೆ, ಕಿರಿಕಿರಿ.

झंझनाना, अक्रि. ಝಣಝಣ ಶಬ್ದವಾಗು, ಝೇಂಕರಿಸು.

झंझनाहट, स्त्री. ಝಣತ್ಕಾರ.

झंझरा, वि. ರಂಧ್ರಮಯ, ಜಾಳಾದ.

झंझरी, स्त्री. ಬಲೆ; ಜಾಳು ಪದಾರ್ಥ; ಜಾಳಂಧ್ರ; ಕಟಾಂಜನ, ಕಟಕಟೆ.

झंझा, झंझावात, पु. ಬಿರುಗಾಳಿ, ಸುಂಟರಗಾಳಿ.

झंझी, स्त्री. ಕುರುಡು ಕವಡೆ.

झंझोड़ना, सक्रि. ಝಾಡಿಸು, ಕೊಡವು,

ಜಟಕಾಯಿಸು; ಅಲ್ಲಾಡಿಸು, ಕುಲುಕು, ಗಲ್ಲಿಸು; ಸಿಗಿ, ಕುರುಕು.

झंडा, पु. ಬಾವುಟ, ಧ್ವಜ.

झंडी, स्त्री. ಸಣ್ಣ ಬಾವುಟ.

झंडूला, वि. ದಟ್ಟವಾದ ತಲೆಗೂದಲುಳ್ಳ; ದಟ್ಟವಾದ ಎಲೆಗಳುಳ್ಳ, ದಳಸು.

झंप, पु. ನೆಗೆದಾಟ, ಕುಣಿತ; ಕುದುರೆ ಕತ್ತಿನ ಆಭರಣ.

झंपना, अक्रि. ಮರೆಯಾಗು, ಅವಿತುಕೊಳ್ಳು; ನೆಗೆ, ಹಾಯು, ಧುಮುಕು; ಲಜ್ಜಿಸು, ನಾಚು.

झंपरी, स्त्री. ಪಲ್ಲಕ್ಕಿಯನ್ನು ಮುಚ್ಚುವ ವಸ್ತ್ರ, ಚತ್ತ್ರ, ಪರದೆ.

झंपान, पु. ಮೇನ, ಡೋಲಿ.

झंपोला, पु. ಮುಕ್ಕರಿ, ಗೂಡೆ.

झंपोलिया, झंपोली, स्त्री. ಕುಕ್ಕೆ.

झंवराना, अक्रि. ಬಾಡು; ಕಪ್ಪೇರು.

झंवा, पु. ಹೆಚ್ಚಾಗಿ ಸುಟ್ಟ ಇಟ್ಟಿಗೆ.

झंवाना, अक्रि. ಕಂದು, ಬಾಡು; ಬಣ್ಣಗುಂದು, ಕಪ್ಪೇರು; ಉರಿ ಅಡಗು; ಇಳಿಯು; ಸುಟ್ಟ ಇಟ್ಟಿಗೆಯಿಂದ ಉಜ್ಜಲ್ಪಡು. सक्रि. ಕಪ್ಪುಮಾಡು; ಬಣ್ಣಗುಂದಿಸು; ಕಂದಿಸು; ಬೆಂಕಿ ಆರಿಸು; ಸುಟ್ಟ ಇಟ್ಟಿಗೆಯಿಂದ ಉಜ್ಜು.

झंसना, सक्रि. ಎಣ್ಣೆ ಸವರು; ನೀವು, ಉಜ್ಜು; ಠಕ್ಕಿಸಿ ಹಣವನ್ನಪಹರಿಸು.

झक, वि. ಮಿರುಗುವ; ಸ್ವಚ್ಛವಾದ, ಶುಭ್ರ; ಬಿಳಿಯ; ಸುಣ್ಣ ನೀರು ಬಳಿದ. स्त्री. ಮರುಳು, ಹುಚ್ಚು; ಆವೇಗ, ಬೇಗುದಿ. झक मारना = ಹುಚ್ಚುಚ್ಚಾಗಿ ಮಾತಾಡು.

झकझक, स्त्री. ವಾಗ್ವಾದ, ಲೊಡಲೊಡ ಮಾತು, ಒಣರಗಳೆ.

झकझका, वि. ಮಿಂಚುವ, ಮಿರುಗುವ.

झकझकाहट, स्त्री. ಹೊಳಪು, ಮಿಂಚು.

झकझेलना, सक्रि. = झकझोरना.

झकझोर, पु. ಅಲ್ಲಾಟ, ಕುಲುಕಾಟ. वि. ಪ್ರಚಂಡ.

झकझोरना, सक्रि. ತದುಗು, ಕುಲುಕು, ಹಂದಾಡಿಸು, ಕೊಡವು.

झकझोरा, पु. ಅಲ್ಲಾಟ, ಕುಲುಕಾಟ, ಜಗ್ಗಾಟ.

झकझोल, पु. ಕಲಕಿದ ನೀರು; ಜಗಳ.

झकना, अक्रि. ಒಟಗುಟ್ಟು, ಹರಟು, ಬಡಬಡಿಸು; ಶೋಕಿಸು, ಹಲುಬು.

झकरा, पु. ಮಡಕೆ, ಗಡಿಗೆ; ಮುಳ್ಳು; ಮುಳ್ಳುಗಿಡ.

झकाझक, वि. ಮಿಂಚುವ, ಹೊಳೆಯುವ, ಝಗಝಗಿಸುವ.

झकुराना, अक्रि. ತೂಗಾಡು, ಓಲಾಡು. सक्रि. ತೂಗಾಡಿಸು, ಓಲಾಡಿಸು.

झकोर, पु. ಗಾಳಿಯ ಬಡಿತ; ಧಕ್ಕೆ, ದೆಬ್ಬೆ; ಕುಲುಕಾಟ; ಅಲೆ.

झकोरना, अक्रि. ಗಾಳಿ ಬಡಿ; ಜೋರಾಗಿ ಬೀಸು; ಹಳಚು.

झकोरा, पु. ಗಾಳಿಯ ಬಡಿತ; ದೆಬ್ಬೆ.

झकोला, स्त्री. ಅಲೆ, ತರಂಗ.

झक्कड़, पु. ಬಿರುಗಾಳಿ, ಸುಂಟರಗಾಳಿ; ಗಾಳಿಯ ಹೊಡೆತ. वि. ಹರಟೆಮಲ್ಲ.

झक्की, वि. ಹರಟೆ ಬಡಿಯುವವ, ಹರಟೆ

ಮಲ್ಲ; ಬಡಬಡಿಸುವವ, ಬಾಯಿಬಡಕ

झख, स्त्री. ಹಲುಬುವಿಕೆ, ಕೊರಗುವಿಕೆ; ಗರವಟಿಕೆ. झख मारना = ಹುಚ್ಚು ಹುಚ್ಚಾಗಿ ಆಡು; ಗರವಟಿಸು.

झखना, अक्रि. ಹಲುಬು; ಬಡಬಡಿಸು, ಗರವಟಿಸು.

झगड़ना, अक्रि. ಜಗಳವಾಡು, ಕಚ್ಚಾಡು

झगड़ा, पु. ಜಗಳ, ಕಚ್ಚಾಟ; ವಿವಾದ, ತಕರಾರು; ವ್ಯಾಜ್ಯ. झगड़ा झांसा = ತಂಟೆ ತಕರಾರು.

झगड़ालिन, स्त्री. ಜಗಳಗಂಟಿ.

झगड़ालू, वि. ಜಗಳಗಂಟ.

झगर, पु. ಗಿಡಗ, ಡೇಗೆ.

झगा, पु. ಸಣ್ಣ ಮಕ್ಕಳ ಅಂಗಿ, ಲಂಗ; ಝಗಾ.

झज्झर, स्त्री. ಮಡಕೆ, ಚರಿಗೆ.

झज्झी, स्त्री. ಕುರುಡು ಕವಡೆ

झझक, स्त्री. ಬೆದರಿಕೆ, ಅಂಜಿಕೆ; ಸಿಡುಕು; ನಾತದ ಹೊಡೆತ.

झझकना, अक्रि. ಬೆಚ್ಚಿಬೀಳು; ಅಂಜು; ಸಿಡುಗುಟ್ಟು, ರೇಗು.

झझकारना, सक्रि. ಗದರಿಸು, ದಟ್ಟಿಸು; ಹೀಯಾಳಿಸು, ಅಲ್ಲಗಳೆ, ತುಚ್ಛೀಕರಿಸು

झट, क्रिवि. ತಕ್ಷಣ, ಕೂಡಲೆ स्त्री. ತ್ವರೆ

झटक, स्त्री. ಜಕ್ಕಿಸುವಿಕೆ.

झटकना, सक्रि. ಬಲವಾಗಿ ಅಲ್ಲಾಡಿಸು, ಜಕ್ಕಿಸು, ಕುಲುಕು; ಕೈಯೊದರು, ಜಟಕಾಯಿಸು, ಕೊಡವು; ಉದುರಿಸು; ಕೆಡವು; ಕಿತ್ತುಕೊಳ್ಳು, ಕಸಕೊಳ್ಳು. अक्रि. ಸೊರಗು, ಕ್ಷೀಣಿಸು.

झटका, पु. ಹೊಡೆತ; ಕಡಿತ; ಬಡಿತ; ಹಾರಿ ಹಿಡಿಯುವಿಕೆ; ಉದ್ರೇಕ; ಕುಲುಕಾಟ.

झटकारना, सक्रि. = झटकना.

झटपट, क्रिवि. ತಟ್ಟನೆ, ಚಟಃಪುಟನೆ.

झटास, स्त्री. ತುಂತುರು, ಸೋನೆ.

झड़, स्त्री. = झड़ी.

झड़का-झड़की, स्त्री. ಪರಸ್ಪರ ಜಗಳ.

झड़ती, स्त्री. ಲೆಕ್ಕ ಪರೀಕ್ಷೆ, ಝಡ್ತಿ.

झड़न, स्त्री. ಉದುರುವಿಕೆ; ಉದುರಿದ ವಸ್ತು; ಮರದಿಂದ ಬಿದ್ದ ಹಣ್ಣು.

झड़ना, अक्रि. ಉದುರು; ಕಿತ್ತುಕೊಂಡು ಬೀಳು, ಕೆಡೆ; ತಸ ಬಳಿ; ನಗಾರಿ ಬಜಾಯಿಸು.

झड़प, स्त्री. ಎದುರಿಸುವಿಕೆ; ಕಾದಾಟ; ಕೋಪ; ಆವೇಶ; ಉರಿ; ಕಾರ, ಘಾಟು.

झड़पना, अक्रि. ಎರಗು, ಮೇಲ್ಹಾಯು; ಕಾದಾಡು; ಕಸುಕೊಳ್ಳು, ಆಕ್ರಮಿಸು.

झड़पा-झड़पी, स्त्री. ಜಗಳ; ಕಾದಾಟ.

झड़पाना, सक्रि. ಜಗಳವಾಡಿಸು.

झड़बतास, स्त्री. ಗಾಳಿ ಮಳೆ.

झड़बेरी, स्त्री. ಕಾಡು ಎಲಚಿ ಹಣ್ಣು.

झड़वाना, सक्रि. झाड़ना का प्रे. रूप.

झड़ाझड़, क्रिवि. ಚಟುಪುಟನೆ; ಎಡೆ ಬಿಡದೆ, ನಿರಂತರವಾಗಿ.

झड़ी, स्त्री. ತೆರಪಿಲ್ಲದೆ ಬೀಳುವಿಕೆ; ಜಡಿಮಳೆ; ಸಿಡಿಸೋನೆ; (ಉಪನ್ಯಾಸ) ಜಾಡಿಸುವಿಕೆ; ಬೀಗದ ಒಳಗಡೆಯ ಕೀಲು.

झन, झनक, स्त्री. ಝಣಝಣ ಶಬ್ದ.

झनकना, अक्रि. ಝಣಝಣಿಸು;

ಕೋಪದಲ್ಲಿ ಕೈಕಾಲುಗಳನ್ನು ಒದರು; ಹಿಡುಗುಟ್ಟು.

झनकबाई, स्त्री. ವಾತಶೂಲೆ.

झनकार, स्त्री. = झंकार.

झनझनाना, अक्रि. ಝಣಝಣ ಶಬ್ದವಾಗು. सक्रि. ಝಣತ್ಕಾರ ಮಾಡು.

झनझनाहट, स्त्री. ಝಣಝಣ ಶಬ್ದ, ಝಣತ್ಕಾರ.

झनाझन, स्त्री. ಝಣತ್ಕಾರ, ಝಣಝಣ ಶಬ್ದ. क्रिवि. ಝಣಝಣ ಅನ್ನುತ್ತ.

झनिया, वि = झीना.

झन्नाहट, स्त्री. ಝಣತ್ಕಾರ.

झप, क्रिवि. ತ್ವರೆಯಿಂದ, ಸರಬರನೆ

झपक, स्त्री. ನಿಮಿಷ, ಕ್ಷಣ; ಎವೆಯಿಕ್ಕುವಿಕೆ; ತೂಕಡಿಕೆ, ಅರೆನಿದ್ದೆ; ನಾಚಿಕೆ.

झपकना, अक्रि. ಎವೆಯಿಕ್ಕು. ಮಿಟುಕಿಸು; ಜೂಗಳಿಸು, ತೂಕಡಿಸು; ಲಜ್ಜಿಸು, ನಾಚು.

झपकाना, सक्रि. ರೆಪ್ಪೆಬಡಿ, ಪಿಳಕಿಸು.

झपकी, स्त्री. ಅರೆನಿದ್ದೆ, ತೂಕಡಿಕೆ; ಎವೆಯಿಕ್ಕುವಿಕೆ; ಮೋಸ, ಠಕ್ಕು.

झपट, स्त्री. ಹಾಯುವಿಕೆ, ನೆಗೆತ; ಎರಗುವಿಕೆ; ಆಕ್ರಮಣ

झपटना, अक्रि. ಮೇಲ್ಹಾಯು, ಎರಗು; ಹಾರಿ ಹಿಡಿ, ತುಡುಕು.

झपटाना, सक्रि झपटना का प्रे. रूप.

झपट्टा, पु. ನೆಗೆತ, ಹಾರುವಿಕೆ. झपट्टा मारना = ನೆಗೆ; ಮೇಲ್ಹಾಯು; ಎರಗು.

झपना, अक्रि. ರೆಪ್ಪೆ ಮುಚ್ಚಿಕೊಳ್ಳು; ಬಗ್ಗು; ಲಜ್ಜಿಸು; ಮೇಲ್ಹಾಯು.

झपस, स्त्री. ದಟ್ಟವಾಗಿರುವಿಕೆ, ದಳಸು.

झपसना, अक्रि. ದಟ್ಟವಾಗಿ ಬೆಳೆಯು, ದಳಸರವಾಗಿ ಬೆಳೆ.

झपाना, सक्रि. ರೆಪ್ಪೆ ಮುಚ್ಚು; ತೂಕಡಿಸು; ಬಗ್ಗಿಸು.

झपेट, स्त्री. ಧಕ್ಕೆ, ಢಿಕ್ಕಿ.

झपेटना, सक्रि. ಜಬರಿಸು, ಹಂಗಿಸು, ಅಮರಿಸು, ದಬಾಯಿಸು; ಢಿಕ್ಕಿಹೊಡೆ.

झपेटा, पु. ಹಾಯುವಿಕೆ, ಎರಗುವಿಕೆ; ದೆವ್ವದ ಬಡಿತ.

झप्पान, पु. ಮೇನ, ಡೋಲಿ.

झबरा, वि. ಉದ್ದವಾದ ಕೂದಲುಳ್ಳ.

झबरीला, वि. ಕೆದರಿದ (ಕೂದಲು), ಜುಂಜುರು.

झबा, पु. ಕುಚ್ಚು, ಗೊಂಡೆ.

झबार, झबारी, स्त्री. ಜಗಳ, ಕಲಹ.

झबिया, स्त्री. ಸಣ್ಣ ಕುಚ್ಚು, ಗೊಂಡೆ.

झबुआ, वि. ಉದ್ದವಾದ ಕೂದಲುಳ್ಳ.

झबूकना, अक्रि. ಬೆಚ್ಚಿಬೀಳು, ಅಂಜು.

झब्बा, पु. ಗೊಂಚಲು, ಕುಚ್ಚು, ಗೊಂಡೆ.

झमक, स्त्री. ಹೊಳಪು, ಪ್ರಕಾಶ; ಥಳುಕು; ಒಯ್ಯಾರ.

झमकड़ा, पु. ಕಾಂತಿ, ಹೊಳಪು.

झमकना, अक्रि. ಹೊಳೆ, ಮಿಂಚು; ಹಾಯು, ಹಬ್ಬು, ಝೇಂಕರಿಸು; ಬೆಡಗು ತೋರು, ಸೆಡೆ, ಸೆಟೆ.

झमकाना, सक्रि. ಹೊಳಪಿಸು, ಜಳಪಿಸು

झमकारा, वि. ಮಳೆ ಹೊಯಿಸುವ (ಮೋಡ).

झमकी, स्त्री. ಬೆಳಕು; ಪ್ರಕಾಶ.

झमझम, **स्त्री**. ಗೆಜ್ಜೆಯ ಶಬ್ದ, ಝಣ ಝಣ ಶಬ್ದ; ಮಳೆ ಹೊಯ್ಯುವ ಶಬ್ದ. वि. ಹೊಳೆಯುವ; ಮಿಂಚುವ. क्रिवि. ಹೊಳಪಿನಿಂದ; ಝಣಝಣ ಶಬ್ದದೊಂದಿಗೆ.

झमर-झमर, क्रिवि. ತೊಟ್ಟು ತೊಟ್ಟಾಗಿ.

झमना, अक्रि. ಬಗ್ಗು, ಬಳುಕು

झमाका, पु. ಮಳೆ ಹೊಯ್ಯುವ ಶಬ್ದ; ಗಾಜು ಬೀಳುವ ಶಬ್ದ; ಒಡವೆಗಳ ಝಣಝಣ ಶಬ್ದ, ಝಣತ್ಕಾರ; ಒಯ್ಯಾರ, ಥಳುಕು.

झमाझम, क्रिवि. ಹೊಳಪಿನಿಂದ; ಝಣ ಝಣ ಶಬ್ದದಿಂದ

झमाट, पु. = **झुरमुट**.

झमाना, अक्रि. ಸುತ್ತಿಕೊಳ್ಳು, ಕವಿ; ಕಪ್ಪೇರು, ಕಳೆಗುಂದು; ಕುಗ್ಗು.

झमूरा, पु. ಉದ್ದವಾದ ಕೂದಲುಳ್ಳ ಮೃಗ; ಜೂಲುನಾಯಿ.

झमेला, पु. ರಗಳೆ, ಜೊಂಜಾಟ; ಗಲಾಟೆ, ದೊಂಬಿ; ಸಂದಣಿ.

झमेलिया, पु. ರಗಳೆಯವ; ಗಲಾಟೆಯವ; ಜಗಳಗಂಟ.

झर, **स्त्री**. ಜಲಪಾತ, ಝರಿ, ಜೋಗು; ಬುಗ್ಗೆ; ಜಡಿಮಳೆ; ಬೇಗೆ, ಧಗೆ.

झरझर, **स्त्री**. ನೀರು ಹರಿಯುವ ಅಥವಾ ಗಾಳಿ ಬೀಸುವ ಶಬ್ದ.

झरन, **स्त्री**. ಒಸರುವಿಕೆ, ಬಸಿಯುವಿಕೆ; ಹರಿಯುವಿಕೆ; ಉದುರುವಿಕೆ.

झरना, अक्रि. ಹರಿ; ಸುರಿ; ಇಳಿ; ಬೀಳು; ಉದುರು पु. ಝರಿ, ಜಲಪಾತ, ಅಬ್ಬಿ, ಜೋಗು; ಜಲ್ಲಡೆ, ಸಾಣಿಗೆ; ಜಾಲಿಸೌಟು. वि. ಹರಿಯುವ; ಒಸರುವ.

झरहराना, अक्रि. ಗಾಳಿಯಿಂದ ಎಲೆಗಳ ಶಬ್ದವಾಗು सक्रि. ಜಕ್ಕಿಸು, ಜಾಡಿಸು.

झराझर, क्रिवि. ಝರಝರ ಶಬ್ದದಿಂದ; ಎಡೆಬಿಡದೆ; ವೇಗವಾಗಿ.

झरी, **स्त्री**. ಝರಿ, ಜಲಪಾತ, ಜೋಗು; ಬುಗ್ಗೆ; ಸಂತೆಯ ಅಂಗಡಿಯ ಸುಂಕ; ಜಡಿಮಳೆ.

झरोखा, पु. ಗವಾಕ್ಷ, ಬೆಳಕಂಡಿ.

झल, पु. ಉರಿ, ಧಗೆ; ಆವೇಗ, ಕೋಪ; ಹಂಬಲ.

झलक, **स्त्री**. ಹೊಳಪು, ಹೊಳೆತ, ಮಿಂಚು; ಛಾಯೆ; ಝಳ; ಸುಳಿವು.

झलकदार, वि. ಹೊಳೆಯುವ, ಮಿಣುಕುವ.

झलकना, अक्रि. ಹೊಳೆ, ಮಿಣುಕು, ಮಿಂಚು; ಛಾಯೆ ತೋರು, ಸುಳಿವು ಕಾಣು.

झलका, पु. ಬೊಬ್ಬೆ, ಗುಳ್ಳೆ, ಹುಗುಳು, ಹೊಪ್ಪಳೆ.

झलकाना, सक्रि. ಹೊಳಪಿಸು, ಬೆಳಗಿಸು; ಛಾಯೆ ತೋರಿಸು.

झलकी, **स्त्री**. ಹೊಳಪು, ಮಿಂಚು.

झलझल, **स्त्री**. ಮಿಂಚು, ಹೊಳಪು. क्रिवि. ಮಿನುಗುಟ್ಟುವ.

झलझलाना, अक्रि. ಹೊಳೆ. सक्रि. ಹೊಳಪಿಸು, ಬೆಳಗಿಸು.

झलझलाहट, **स्त्री**. ಹೊಳಪು, ಮಿಂಚು; ಸೆಳೆತ, ಚಳುಕು.

झलना, सक्रि. ಹಾಳಿಸು, (ಬೀಸಣಿಗೆ) ಬೀಸು; ಜಾಡಿಸು. अक्रि. ಅಲುಗಾಡು, ಮಿಸುಕಾಡು; ಜಂಭ ಕೊಚ್ಚಿಕೊಳ್ಳು; ಬೆಸಿಯಲ್ಪಡು; ತಂಪಾಗು, ಆರು...

झलमल, पु. ಮಿಣುಕು; ಹೊಳಕು; ಅರೆಬೆಳಕು.

झलमला, वि. ಮಿನುಗುಟ್ಟುವ, ಥಳಥಳಿಸುವ, ಹೊಳೆಯುವ.

झलमलाना, अक्रि. ಮಿನುಗುಟ್ಟು, ಮಿನುಗು, ಮಿಂಚು. सक्रि. ಮಿನುಗಿಸು.

झलरा, पु. ಒಂದು ಬಗೆಯ ಕಜ್ಜಾಯ.

झलवाई, स्त्री. ಬೆಸಿಗೆಯ ಕೂಲಿ.

झलवाना, सक्रि. झालना का प्रे. रूप.

झलाझल, वि. ಹೊಳೆವ, ಮಿರುಗುವ.

झलाझली, वि. ಹೊಳೆಯುವ, ಮಿನುಗುಟ್ಟುವ. स्त्री. ಹೊಳಪು, ಕಾಂತಿ

झलाबोर, पु. ಸೀರೆಯ ಅಗಲವಾದ ಕಲಾಬತ್ತಿನ ಅಂಚು; ಕಸೂತಿ. वि. ಹೊಳೆಯುವ. ಮಿಂಚುವ.

झलामल. स्त्री. ಹೊಳಪು वि. ಹೊಳಪಿನ.

झल्ल, स्त्री. ಹುಚ್ಚು, ಭ್ರಾಂತಿ.

झल्ला, पु. ದೊಡ್ಡ ಮಕ್ಕರಿ, ಮಳೆ. वि. ಹುಚ್ಚ; ಮಂಕ, ದಡ್ಡ.

झल्लाना, अक्रि. ರೇಗು, ಸಿಡುಗುಟ್ಟು सक्रि. ರೇಗಿಸು, ಚಿಡಾಯಿಸು.

झहनना, अक्रि ಝುಣಝುಣ ಶಬ್ದವಾಗು; ರೋಮಾಂಚವಾಗು.

झहनाना, अक्रि. ಝುಣಝುಣ ಶಬ್ದವಾಗು; ಬೆರಗಾಗು; ರೋಮಾಂಚವಾಗು

झहरना, **झहराना**, अक्रि. ಝುರ ಝುರ ಶಬ್ದಮಾಡು; ಸಡಿಲವಾಗು; ಶಿಥಿಲವಾಗು. सक्रि. ರೇಗಿಸು.

झांई, स्त्री. ನೆರಳು, ಛಾಯೆ; ಕತ್ತಲೆ; ಮಚ್ಚೆ, ಕಲೆ; ಮೋಸ; ಪ್ರತಿಧ್ವನಿ.

झांक, स्त्री. ಇಣಿಕಿ ನೋಡುವಿಕೆ, ಮರದ ಕೊಂಬೆ; ತೊಡೆ.

झांकना, अक्रि. ಹಣಿಕಿ ನೋಡು, ಇಣಿಕಿ ನೋಡು, ತೊಂಗಿ ನೋಡು.

झांका, पु. ಬೆಳಕಂಡಿ.

झांका-झोंकी, स्त्री. ಇಣಿಕಿ ನೋಡುವಿಕೆ, ಹಣಿಕೆ ಹಾಕುವಿಕೆ.

झांकी, स्त्री. ಇಣಿಕಿ ನೋಡುವಿಕೆ, ಹಣಿಕೆ; ನೋಟ, ದೃಶ್ಯ; ಕಂಡಿ.

झांख, पु. ಜಿಂಕೆ.

झांखर, पु. ಪೊದರು, ಪೊದೆ, ಮೆಳೆ.

झांगला, वि. ಅಳ್ಳಕ, ಸಡಿಲವಾದ; ದೊಗಲೆ, ಅಬಾಡು (ಅಂಗಿ).

झांझ, स्त्री. ಕೈತಾಳ, ಕಂಸಾಳ, ಕಂಸತಾಳ, ಝಲ್ಲರಿ; ಕೋಪ; ದುರುಳತನ, ದುಷ್ಟತನ; ನೂಪುರ.

झांझन, स्त्री. ನೂಪುರ, ಕಾಲಂದುಗೆ.

झांझर, स्त्री. ನೂಪುರ; ಜಲ್ಲಡೆ, ಜರಡಿ. वि. ಜರ್ಜರ, ಜೀರ್ಣವಾದ; ತೂತುಬಿದ್ದ.

झांझरी, स्त्री. ಕರತಾಳ, ಕಂಸತಾಳ; ನೂಪುರ, ಅಂದುಗೆ.

झांप, स्त्री. ಮುಚ್ಚಳ, ಮರೆ; ಕಣ್ಣು ಮುಚ್ಚುವಿಕೆ, ಅರೆನಿದ್ದೆ; ತೆರೆ, ಪರದೆ. पु. ಹಾರಾಟ, ನೆಗೆದಾಟ.

झांपना, सक्रि. ತುಡುಕು, ಬಿಮ್ಮನೆ ಹಿಡಿ, ಹಿಡಿದುಕೊಳ್ಳು; ಮುಚ್ಚು,

ಮರೆಮಾಡು; ಲಜ್ಜೆಪಡಿಸು.

झांपा, पु. ದೊಡ್ಡ ಗೂಡೆ, ಮಕ್ಕರಿ; ಹಂಜರ.

झांपी, स्त्री. ಗೂಡೆ, ಮಕ್ಕರಿ; ಖಂಜರೀಟ, ದಾಸರಿ ಹಕ್ಕಿ.

झांवना, सक्रि. ಸುಟ್ಟ ಇಟ್ಟಿಗೆಯಿಂದ ಮೈ ಉಜ್ಜು; ಮೈ ತೊಳೆ.

झांवला, वि. ಉಷ್ಣದಿಂದ ಕಂದಿದ; ಕಪ್ಪೇರಿದ.

झांवली, स्त्री. ಛಾಯೆ; ಜಾಡು, ಸುಳಿವು; ಓರೆಗಣ್ಣು; ಒಯ್ಯಾರ.

झांवां, पु. ಸುಟ್ಟುಹೋದ ಇಟ್ಟಿಗೆ; ಜ್ವಾಲಾಮುಖಿ ಪಾಷಾಣ.

झांसना, सक्रि. ವಂಚಿಸು, ಠಕ್ಕಿಸು.

झांसा, पु. ಮೋಸ, ಮೋಸಕೃತ್ಯ, ವಂಚನೆ, ಠಕ್ಕು. झांसा पट्टी = ಬೂಟಾಟಿಕೆ, ಮೋಸಗಾರಿಕೆ. झांसा बताना = ಮೋಸಮಾಡು.

झांसी, स्त्री. ಒಂದು ಹುಳು.

झांसू, वि. ಮೋಸದ; ಮೋಸಗಾರ.

झाऊ, पु. ಸಣ್ಣ ಪೊದರು, ಮೆಳೆ; ಜಗಳ, ಕಲಹ.

झाग, पु. ನೊರೆ, ಬುರುಗು.

झाड़, पु. ಮೆಳೆ, ಪೊದೆ, ಹೊದರು; ಅಲಂಕಾರಕ್ಕಾಗಿ ಇಡುವ ದೀಪಧ್ವಜ, ಸಮೆ; ರೆಂಬೆಗಳುಳ್ಳ ಗಾಜಿನ ದೀಪದ ಕಂಬ. स्त्री. ಜಾಡಿಸುವಿಕೆ; ಗದರಿಕೆ; ಮಂತ್ರ ಹಾಕುವಿಕೆ; ದೆವ್ವ ಬಿಡಿಸುವಿಕೆ. झाड़ फूंक = ದೆವ್ವ ಬಿಡಿಸಲು ಮಂತ್ರ ಜಪಿಸುವಿಕೆ, ಅಭಿಮಂತ್ರಣ; ಮಾಟ ಮಂತ್ರ.

झाड़खंड, पु. ಕಾಡು, ಅಡವಿ.

झाड़-झंखाड़, पु. ಪೊದೆಗಳ ಕಾಡು, ಕುಚ್ಚುಕಾಡು; ಮುಳ್ಳುಗಂಟಿ; ಕಸಕಡ್ಡಿ.

झाड़न, स्त्री. ಹೊಡೆದು ಅಥವಾ ಒರೆಸಿ ತೆಗೆದ ವಸ್ತು; ಧೂಳು ಒರೆಸುವ ಬಟ್ಟೆ, ಧೂಳಿ ಬಟ್ಟೆ, ಮಾರ್ಜನಿ, ಧೂಳೊರೆಸಿ.

झाड़ना, सक्रि. ಒರೆಸು, ಸೀಟು; ತೊಡೆ; ಧೂಳು ಹೊಡೆ; ಜಾಡಿಸು, ಕೊಡವು; ಜಕ್ಕಿಸು, ಜಟಕಾಯಿಸು; ಗದರಿಸು; ಮಂತ್ರ ಹಾಕು, ಅಭಿಮಂತ್ರಿಸು. झाड़ना बुहारना = ಕಸಬಳಿ, ಗುಡಿಸು

झाड़फानूस, पु. ಮೇಣದ ಬತ್ತಿ ಇಟ್ಟು ಉರಿಸುವ ಗಾಜಿನ ಸಮೆ, ಲೋಟಿ, ಗೋಳ ಮುಂತಾದ ಅಲಂಕಾರದ ವಸ್ತುಗಳು; ಕವಲೊಡೆದ ಕಂದೀಲು, ಲಸ್ತರು ಗುಳೋಪು.

झाड़बुहार, स्त्री. ಕಸ ಬಳಿಯುವಿಕೆ, ಗುಡಿಸುವಿಕೆ.

झाड़ा, पु. ಅಭಿಮಂತ್ರಣ, ಮಂತ್ರಗಾರಿಕೆ; ಹುಡುಕುವಿಕೆ, ತಲಾಶಿ; ಕೊಳಕು; ಮಲ, ಪಾಯಖಾನೆ. झाड़ा फिरना = ಪಾಯಖಾನೆ ಮಾಡು.

झाड़ी, स्त्री. ಸಣ್ಣ ಪೊದರು. ಪೊದೆ; ಕಾಡು.

झाड़ू, पु. ಪೊರಕೆ, ಬಲ್ರ್, ಹಿಡಿಲು; ಧೂಮಕೇತು, ಬಾಲ ಚುಕ್ಕಿ. झाड़ू देना = ಕಸ ಬಳಿ, ಗುಡಿಸು.

झाड़ूकश, पु. ಕಸ ಬಳಿಯುವವ

झापड़, पु. ಏಟು, ತಪರಾಕು.

झाबर, झाबा, पु. ಮಕ್ಕರಿ, ಗೂಡೆ;

ಚರ್ಮದ ಚೀಲ, ಪಕಾಲಿ; ಗೊಂಚಲು, ಕುಚ್ಚು, ಗೊಂಡೆ.

झाम, पु. ಕುಚ್ಚು; ಗದರಿಕೆ; ಠಕ್ಕು; ಒಂದು ಬಗೆ ಗುದ್ದಲಿ; ಎಲೆ ಕೋಟು.

झामर, पु. ಸಾಣೆ ಕಲ್ಲು; ಒರೆಗಲ್ಲು.

झामा, पु. = **झांवा**.

झामी, पु. ಮೋಸಗಾರ, ಠಕ್ಕ.

झायँ झायँ, स्त्री. ಝುಣಝುಣ ಶಬ್ದ; ಗಾಳಿಯ ಶಬ್ದ.

झावँ झावँ, स्त्री. ಹುಚ್ಚು ಹರಟೆ, ವಾಗ್ವಾದ, ಒದರಾಟ.

झार, वि. ಕೇವಲ, ಮಾತ್ರ; ಎಲ್ಲಾ, ಸಮಸ್ತ. पु. ಗುಂಪು, ಹಿಂಡು. स्त्री. ಹೊಟ್ಟೆಕಿಚ್ಚು; ಉರಿ; ತಾಪ, ಉಷ್ಣ; ಖಾರ.

झारना, सक्रि. ಬಾಚು, ಹಿಕ್ಕು; ಕೇರು; ಆರಿಸು; ಜಾಡಿಸು.

झारी, स्त्री. ಮೂಗಿನ ಲೋಟ, ಗಿಂಡಿ.

झाल, पु. ಕರತಾಳ, ಝಲ್ಲರಿ, ಕಂಸತಾಳ; ಬೆಸಿಗೆ ಹಾಕುವಿಕೆ, ಬೆಸಿಗೆ. स्त्री. ಖಾರ; ರುಚಿ, ಸ್ವಾದು; ತರಂಗ; ನೀರಿನ ಸುರಿತ; ಮಳೆ.

झालदार, वि. ಖಾರವಾದ.

झालना, सक्रि. ಬೆಸಿಗೆಹಾಕು, ಬೆಸೆಯು, ಅಪ್ಪಿಗೆ ಹಾಕು; ತಂಪಿಸು, ತಣಿಸು, ಆರಿಸು; ಉನಿಯ ಹಾಕು; ಒಗ್ಗರಣೆ ಹಾಕು.

झालर, पु. ಒಂದು ಪಣ್ಯಾರ. स्त्री. ಅಂಚಿನಲ್ಲಿ ಅಲಂಕಾರಕ್ಕಾಗಿ ನೇತಾಡಿಸುವ ಕುಚ್ಚು ಅಥವಾ ಝುಲ್ಲಿ, ಜಾಲರಿ; ಗಂಗೆಗೂದಲು; ಕರತಾಳ, ಝಲ್ಲರಿ.

झालरना, अक्रि. ಹಬ್ಬು, ಹರಡು.

झालरा, पु. ಬುಗ್ಗೆ, ಊಟೆ.

झिंगवा, स्त्री. ಒಂದು ಬಗೆ ಮೀನು.

झिकझिक, स्त्री. ಜಗಳ, ವಿವಾದ.

झिझक, स्त्री. ಹಿಂಜರಿಯುವಿಕೆ, ಗಾಬರಿ, ತಳ್ಳಂಕ.

झिझकना, अक्रि. ಹಿಂಜರಿ, ಮೆಟ್ಟಿಬೀಳು, ಬೆಚ್ಚಿಬೀಳು, ಅಡಬಡಿಸು.

झिझकारना, सक्रि. ಗದರಿಸು, ಜಬರಿಸು, ಜಟಿಕಾಯಿಸು, ಕುಲುಕು, ಅಲ್ಲಾಡಿಸು.

झिझिया, स्त्री. ಕಾರ್ತಿಕಮಾಸದಲ್ಲಿ ದೀಪ ಹಚ್ಚಿಸಿ ಇಟ್ಟು ತಿರುಗಿಸುವ ಮಡಕೆ.

झिड़क, स्त्री. ಗದರಿಕೆ, ಜಂಕಣೆ.

झिड़कना, सक्रि. ಗದರಿಸು, ಜಬರಿಸು, ಜಂಕಿಸು, ದಟ್ಟಿಸು.

नदिया, नदी, नद्दी, स्त्री. ತೊರೆ, ನದಿ, ಹೊಳೆ.

नदीम, पु. ಜೊತೆಗಾರ; ಗೆಳೆಯ; ಆಪ್ತ; ಸಭಾಸದ; ಸಚಿವ.

नदोला, पु. ಮಣ್ಣಿನ ತಟ್ಟೆ, ಶ್ರಾವೆ.

नद्दाफ़, पु ಅರಳೆ ಎಕ್ಕುವವ, ಪಿಂಜಾರ.

नद्दाफ़ी, स्त्री. ಅರಳೆ ಎಕ್ಕುವಿಕೆ; ಪಿಂಜಾರನ ಕೆಲಸ ಅಥವಾ ಕಸಬು.

नधना, अक्रि. ನೊಗಕ್ಕೆ ಅಥವಾ ಗಾಡಿಗೆ ಕಟ್ಟಲ್ಪಡು, ಹೂಡಲ್ಪಡು; ಕೆಲಸ ಪ್ರಾರಂಭವಾಗು.

ननंद, ननद, ननदी, स्त्री. ಗಂಡನ ಸೋದರಿ, ನಾದಿನಿ, ನನಂದೆ.

ननका, पु. ಮಗು, ಹುಡುಗ.

ननदोई, पु. ನಾದಿನಿಯ ಗಂಡ.

ननसार, स्त्री. = ननिहाल.

ननिया, वि. ತಾಯಿಯ ತಂದೆಗೆ ಸಂಬಂಧಪಟ್ಟ, ಮಾತಾಮಹರ. ननिया ससुर = ಹೆಂಡತಿ ಅಥವಾ ಗಂಡನ ಮಾತಾಮಹ, ಅತ್ತೆಯ ತಂದೆ.

ननिहाल, पु. (स्त्री.) ತಾಯಿಯ ತವರುಮನೆ, ಮಾತಾಮಹರ ಮನೆ; ತಾಯಿಯ ಸಂಬಂಧದವರು.

ननु-नच, पु. = नाह-नूह.

नन्हा, वि. ಚಿಕ್ಕ, ಪುಟ್ಟ, ಕಿರಿಯ.

नन्हाई, स्त्री. ಚಿಕ್ಕತನ, ಕಿರಿಯತನ.

नन्ही, स्त्री. ಚಿಕ್ಕ ಹುಡುಗಿ.

नन्हू, पु. ಚಿಕ್ಕ ಹುಡುಗ; ಪುಟ್ಟಾರಿ.

नपत, स्त्री. ಅಳೆಯುವಿಕೆ; ಅಳತೆ.

नपना, अक्रि. ಅಳೆಯಲ್ಪಡು; ಅಳತೆಯಾಗು; ಜಗಳವಾಡು. पु. ಒಂದು ಅಳತೆ.

नपाई, स्त्री. ಅಳೆಯುವಿಕೆ; ಅಳೆಯುವುದಕ್ಕೆ ಕೊಡುವ ಕೂಲಿ.

नपुंसक, पु. ಪೌರುಷವಿಲ್ಲದವ, ನಪುಂಸಕ; ಹೇಡಿ; ಅಶಕ್ತ.

नपुंसकता, स्त्री. ನಪುಂಸಕತನ.

नफ़र, पु ಸೇವಕ, ಆಳು; ಕಾಸದಾರ; ಒಬ್ಬ, ಒಬ್ಬಾತ, ವ್ಯಕ್ತಿ, ಇಸಂ, ನಫರ.

नफ़रई, स्त्री. ಸೇವೆ, ಶುಶ್ರೂಷೆ

नफ़रत, स्त्री. ಪಲಾಯನ; ಭಯ; ಜುಗುಪ್ಸೆ, ಅಸಹ್ಯ, ಹೇಸಿಗೆ; ತಿರಸ್ಕಾರ.

नफ़रानी, स्त्री. ಸೇವಕಿ, ತೊತ್ತು.

नफ़री, स्त्री. ಒಬ್ಬ ಕೂಲಿಯಾಳಿನ ಒಂದು ದಿವಸದ ಕೆಲಸ, ಆಳುಗೆಲಸ; ಒಂದು ದಿವಸದ ಕೂಲಿ, ದಿನಗೂಲಿ.

नफ़रीन, स्त्री. ಹೇಸಿಗೆ, ಅಸಹ್ಯ; ನಿಂದೆ; ಶಾಪ; ಅಪಹಾಸ್ಯ; ಭಯ.

नफ़ल, पु. ಸೂರೆ; ಲೂಟಿ.

नफ़स, पु. ಶ್ವಾಸ, ಉಸಿರು.

नफ़ा, पु. ಲಾಭ, ನಫೆ; ಆದಾಯ; ಬಡ್ಡಿ.

नफ़ासत, स्त्री. ಉತ್ಕೃಷ್ಟತೆ, ಮೇಲ್ಮೆ.

नफ़ीर, नफ़ीरी, स्त्री. ಕೊಳಲು; ಮೌರಿ, ಸನಾದಿ; ತುತ್ತೂರಿ, ಕಹಳೆ.

नफ़ीस, वि. ಉತ್ಕೃಷ್ಟ; ಮೇಲು; ಸ್ವಚ್ಛ; ಸುಂದರ.

नफ़्स, पु. ಜೀವ; ಆತ್ಮ; ಅಸ್ತಿತ್ವ, ಸತ್ತ್ವ; ಸಾರ; ಒಬ್ಬ ವ್ಯಕ್ತಿ; ಕಾಮ, ಇಚ್ಛೆ; ವಿಲಾಸ; ವೀರ್ಯ, ಇಂದ್ರಿಯ. नफ़्सकश, नफ़्सकुश = ಇಂದ್ರಿಯ ನಿಗ್ರಹ ಮಾಡಿದವ.

नफ़्सानियत, स्त्री. ಇಂದ್ರಿಯಸುಖ, ವಿಷಯಸುಖ; ಭೋಗ, ವಿಲಾಸ; ಆಡಂಬರ; ಜಂಭ, ಗರ್ವ; ಅಹಂಕಾರ.

नफ़्सानी, वि. ಇಂದ್ರಿಯ ಸಂಬಂಧವಾದ, ವಿಷಯ ವಿಲಾಸದ.

नफ़्सी, वि. ಆತ್ಮಕ್ಕೆ ಸಂಬಂಧಿಸಿದ; ವಿಲಾಸದ.

नबर्द, स्त्री. ಯುದ್ಧ, ಕದನ, ಕಾಳಗ.

नबर्दगाह, स्त्री. ಯುದ್ಧಸ್ಥಳ, ರಣಕ್ಷೇತ್ರ

नबात, स्त्री. ಪೈರುಪಚ್ಚೆ; ಹಸುರುವಾಣಿ; ತರಕಾರಿ, ಕಾಯಿಪಲ್ಯ; ಗಿಡ; ಹುಲ್ಲು; ಕಲ್ಲುಸಕ್ಕರೆ; ಸಕ್ಕರೆ; ಸಿಹಿತಿಂಡಿ, ಮಿಠಾಯಿ.

नबी, पु. ಈಶ್ವರನ ದೂತ, ಪೈಗಂಬರ, ನಬೀ; ಭವಿಷ್ಯವಾದಿ.

नबीरा, पु. ಮೊಮ್ಮಗ.

नबीरी, स्त्री. ಮೊಮ್ಮಗಳು.

नबेड़ना, सक्रि. ಫೈಸಲು ಮಾಡು, ಬಗೆಹರಿಸು, ತೀರಿಸು; ಬಿಡಿಸು,

ವಿಂಗಡಿಸು; ವಿಾಯು

नवेड़ा, पु. ಫೈಸಲು, ಇತ್ಯರ್ಥ, ತೀರ್ಮಾನ.

नब्ज़, स्त्री. ನಾಡಿಯ ಚಲನೆ; ನಾಡಿ.

नब्बाज़, पु. ನಾಡಿ ಪರೀಕ್ಷೆ ಮಾಡು ವವ; ವೈದ್ಯ, ಹಕೀಮ.

नब्बे, वि. ತೊಂಭತ್ತು.

नभ, पु. ಆಕಾಶ, ಅಂತರಿಕ್ಷ

नम, वि. ತೋಯ್ದು, ಒದ್ದೆ, ತೇವ ವಾದ, ನೆನೆದ.

नमक, पु. ಉಪ್ಪು, ಲವಣ; ರುಚಿ, ಸವಿ; ಲಾವಣ್ಯ, ಸೊಬಗು. नमक मिर्च लगाना = ಉಪ್ಪು ಖಾರ ಹಚ್ಚಿ ವರ್ಣಿಸು.

नमकख़्वार, वि. ಉಪ್ಪುಣ್ಣುವವ, ಪೋಷಿತ. पु. ಸೇವಕ, ಆಳು.

नमकदान, पु. ಉಪ್ಪಿನ ಪಾತ್ರೆ.

नमकसार, पु. ಉಪ್ಪಿನ ಕಟ್ಟೆ, ಉಪ್ಪು ಮಡಿ, ಅಗರ

नमकहराम, पु. ಉಂಡಮನೆಗೆ ಎರಡು ಬಗೆಯುವವ, ದ್ರೋಹಿ; ಕೃತಘ್ನ.

नमकहरामी, स्त्री. ದ್ರೋಹ;ಕೃತಘ್ನತೆ

नमकहलाल, पु. ಕೃತಜ್ಞ; ಸ್ವಾಮಿ ನಿಷ್ಠ; ಸ್ವಾಮಿಭಕ್ತ; ವಿಧೇಯ.

नमकहलाली, स्त्री. ಕೃತಜ್ಞತೆ; ಸ್ವಾಮಿ ನಿಷ್ಠೆ.

नमकीन, वि. ಉಪ್ಪು ಹಚ್ಚಿದ, ಉಪ್ಪಿನ; ಉಪ್ಪಾದ, ಚವುಳು; ಲಾವಣ್ಯ ವುಳ್ಳ, ಅಂದವಾದ, ಸೊಗಸಾದ; ಶ್ಯಾಮಲವರ್ಣದ. पु. ಉಪ್ಪುಖಾರ ಹಾಕಿದ ತಿಂಡಿ, 'ಖಾರ'.

नमकीनी, स्त्री. ಉಪ್ಪು, ಖಾರ; ಸವಿ, ರುಚಿ; ಶ್ಯಾಮಲವರ್ಣ.

नमगीरा, पु. ವಿತಾನ, ಉಲ್ಲಡೆ, ಮೇಲ್ಕಟ್ಟು, ಅಸಮಾನಗಿರಿ.

नमद, नमदा, पु. ಒತ್ತಿ ಕ್ಕಿ ಗಟ್ಟಿಸಿದ ಉಣ್ಣೆಬಟ್ಟೆ, ಉಣ್ಣೆಗಂಬಳಿ.

नमदीदा, वि. ಕಂಬನಿ ತುಂಬಿದ ಕಣ್ಣು ಗಳುಳ್ಳ.

नमन, पु. ಎರಗುವಿಕೆ, ಬಾಗುವಿಕೆ, ನಮಸ್ಕಾರ. वि. ಬಗ್ಗಿದ, ಬಾಗಿದ.

नमना, अक्रि. ಎರಗು, ಬಾಗು, ನಮಿಸು, ನಮಸ್ಕರಿಸು.

नमनाक, वि. ನೆನೆದ, ಒದ್ದೆಯಾದ; ಇಬ್ಬನಿಯಲ್ಲಿ ನೆನೆದ

नमस्कार, नमस्ते. पु ನಮಸ್ಕಾರ.

नमाज़, स्त्री. ಮುಸಲ್ಮಾನರ ದೇವತಾ ಪ್ರಾರ್ಥನೆ. ನಮಾಜು; ಪೂಜೆ. नमाज़ पढ़ना=ದೇವತಾ ಪ್ರಾರ್ಥನೆ ಮಾಡು.

नमाज़गाह, स्त्री. ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುವ ಸ್ಥಳ.

नमाज़बंद, पु. ಕುಸ್ತಿಯ ಒಂದು ವರಸೆ.

नमाज़ी, पु. ದೇವತಾಪ್ರಾರ್ಥನೆಮಾಡು ವವ; ಭಕ್ತ; ನಮಾಜು ಮಾಡುವಾಗ ನೆಲದ ಮೇಲೆ ಹಾಸಿಕೊಳ್ಳುವ ವಸ್ತ್ರ.

नमिल, वि. ಚುರುಕಾದ, ಚಟುವಟಿಕೆ ಯುಳ್ಳ.

नमिश, स्त्री. ಹಾಲುಖೋವಾ, ಪನೀರು.

नमी, स्त्री. ಒದ್ದೆ; ತೇವ, ವಸ್ತಿ; ಥಂಡಿ.

नमूद, स्त्री. ಮೂಡುವಿಕೆ, ಪ್ರಕಟವಾ ಗುವಿಕೆ; ಪ್ರಸಿದ್ಧಿ; ಗುರುತು, ಚಿಹ್ನೆ;

ಜಂಭ, ಡಂಭ, ಆಡಂಬರ.

नमूदार, वि. ಮೂಡಿದ, ಪ್ರಕಟವಾದ; ಹೆಸರುವಾಸಿಯಾದ, ವಿಖ್ಯಾತ; ಆಡಂಬರದ, ಡಂಬದ. पु. ನಮೂನೆ, ಮಾದರಿ; ಚಿಹ್ನೆ; ರುಜುವಾತು, ಪ್ರಮಾಣ; ಪ್ರತಿರೂಪ, ಪ್ರತಿಕ್ರಿಯೆ.

नमूदारी, स्त्री. ಪ್ರಸಿದ್ಧಿ; ತೋರಿಕೆ, ಡಂಬ.

नमूना, पु. ಮಾದರಿ, ನಮೂನೆ; ಮಾನೆ, ಪಡಿಕಟ್ಟು; ರೀತಿ, ತರಹ; ಮಾದರಿಗಾಗಿ ಇಟ್ಟುಕೊಂಡಿರುವ ಚಿನ್ನದ ತುಂಡು, ಮುಚ್ಚು.

नम्र, वि. ಬಗ್ಗಿದ; ವಿನಯವುಳ್ಳ, ನಮ್ರ; ಮೃದು.

नम्रता, स्त्री. ನಮ್ರತೆ; ವಿನಯ; ನಯ

नय, पु. ನೀತಿ; ವಿನಯ, ನಯ.

नयन, नयना, पु. ಕಣ್ಣು, ನಯನ.

नयनी, स्त्री. ಕಣ್ಣುಗೊಂಬೆ, ಪಾಪೆ.

नयर, पु. ನಗರ, ಪಟ್ಟಣ.

नया, वि. ನವೀನ, ಹೊಸ, ನೂತನ.

नयापन, पु. ನವೀನತೆ, ಹೊಸದು.

नयाम, पु. ಖಡ್ಗಕೋಶ, ಒರೆ.

नर, पु. ಪುರುಷ, ಗಂಡಸು; ಗಂಡು; ಛಾಯಾ ಯಂತ್ರದ ಶಂಕು; ನೀರಿನ ಕೊಳಾಯಿ, ನಲ್ಲಿ वि. ಗಂಡು.

नरक, पु. ನರಕ.

नरकट, नरकल, पु. ಲಾಳದ ಕಡ್ಡಿ, ಗಲಗು.

नरकस, पु. ಕಂಠನಾಳ, ಗಂಟಲು.

नरखड़ा, पु. **नरखड़ी**, स्त्री. ಕಂಠ.

नरगा, पु. ಗುಂಪು, ತಂಡ; ಆಪತ್ತಿನ ಸ್ಥಳ.

नरगिस, स्त्री. ಕುಮುದ, ನೈದಿಲೆ.

नरगिसी, वि. ನೈದಿಲೆಯಂತಹ; ನೈದಿಲೆಯ. स्त्री. ಒಂದು ಬಗೆ ಬಟ್ಟೆ; ಒಂದು ಬಗೆ ಊಟ.

नरद्न, स्त्री. ಗರ್ಜನೆ, ಗಡಾವಣೆ.

नरदारा, पु. ನಪುಂಸಕ; ಹೇಡಿ, ಪುಕ್ಕ.

नरबदा, स्त्री. ನರ್ಮದಾ ನದಿ.

नरम, स्त्री. ಮೃದು, ಮೆದು; ನಿಧಾನ, ಮಂದ; ಮೆತ್ತನೆ; ನವುರು; ನಯ; ಕೋಮಲ.

नरमक, वि. ಮೃದುವಾದ; ಕೋಮಲ; ನಾಜೂಕಾದ.

नरम-गरम, वि. ಉಗುರುಬೆಚ್ಚಗಾದ; ಹೊಸ ಮತ್ತು ಹಳೆಯ; ಒಳ್ಳೆಯ ಕೆಟ್ಟ.

नरम-चारा, पु. ಎಳೆಯ ಹುಲ್ಲು.

नरम-दिल, वि. ಕೋಮಲ ಹೃದಯದ

नरमा, पु. ಎಲವ, ಬೂರುಗ, ದೂದಿ ಹತ್ತಿ; ಕಿವಿಯ ಆಲೆ, ತಮ್ಮೆ; ಒಂದು ಬಗೆ ನಯವಾದ ಬಟ್ಟೆ.

नरमाई, स्त्री. ಮೃದುತ್ವ; ಕೋಮಲತೆ.

नर-मादगी, स्त्री. **नर-मादा**, पु. ಗಂಡು ಹೆಣ್ಣು; ಒಂದು ಜತೆ ಕೀಲು.

नरमाना, सक्रि. ಮೃದುಮಾಡು, ಶಾಂತಪಡಿಸು. अक्रि. ಮೆತ್ತಗಾಗು; ಸಡಿಲವಾಗು; ಶಾಂತವಾಗು; ತಣ್ಣಗಾಗು.

नरमी, स्त्री. ಮೃದುತ್ವ, ಸೌಮ್ಯತ್ವ, ಕೋಮಲತೆ, ನುಣುಪು, ನಯ.

नरमियत, स्त्री. ಮೃದುತ್ವ.

नरमेध, पु. ನರಬಲಿ ಕೊಡುವ ಯಾಗ.

नरमेश, पु. ಮೇಷ, ಟಗರು.

नरसल, पु. = नरकट.

नरसिंघ, नरसिंह, पु. ನರಸಿಂಹ; ಶೂರವೀರ.

नरसिंघा, नरसिंहा, पु. ಕಹಳೆ, ಕೊಂಬು ಕಾಳೆ, ಸಿಂಗನಾದ.

नरसिंघिया, नरसिंहिया, पु. ಕಹಳೆ ಕಾರ, ಕಹಳೆಯುವ.

नरसों, क्रिवि. ಬರುವ ಅಥವಾ ಕಳೆದು ಹೋದ ನಾಲ್ಕನೆಯ ದಿವಸ.

नरहर, पु. ಮೊಣಕಾಲು, ಕಣಕಾಲು.

नरहरी, पु. ಒಂದು ಛಂದಸ್ಸು.

नरहाई, स्त्री. ಎತ್ತುಗಳ ಮಂದೆ.

नराच, पु. ಬಾಣ, ಅಂಬು.

नरिया, पु. ಬಿಲ್ಲೆಹೆಂಚು, ದೋಣಿಹೆಂಚು

नरी, स्त्री. ಹದಮಾಡಿದ ತೊಗಲು, ಕುರಿಯ ಚರ್ಮ; ನೇಕಾರನ ಲಾಳಿ, ಅಟ್ಟೆ, ನಳಿಗೆ; ಪುರುಷೇಂದ್ರಿಯ; ಒಂದು ಬಗೆ ಬಾಣ ಬಿರುಸು.

नरेंद्र, पु. ಅರಸ, ರಾಜ; ವಿಷವೈದ್ಯ

नरेट, नरेटा, पु. नरेटी, स्त्री. ಕುತ್ತಿಗೆ, ಕೊರಳು; ಗಂಟಲು.

नरेश, पु. ಅರಸ, ರಾಜ, ದೊರೆ.

नर्त्तक, पु. ನರ್ತಕ; ಹಾಸ್ಯಗಾರ

नर्त्तकी, स्त्री. ನರ್ತಕಿ; ಪಾತರದವಳು.

नर्त्तन, पु. ನರ್ತನ, ನೃತ್ಯ, ಕುಣಿತ.

नर्द, स्त्री. ಪಗಡೇಕಾಯಿ, ಆಟಗಾಯಿ; ಕಾಯಿ ನಡೆಸುವ ಆಟ.

नर्दबाज़ी, स्त्री. ಪಗಡೆಯಾಟ.

नर्दबान, पु. ಏಣಿ, ನಿಚ್ಚಣಿಕೆ.

नर्म, वि. = नरम. पु. ಹಾಸ್ಯ, ಪರಿಹಾಸ.

नर्मद, पु. ಹಾಸ್ಯಗಾರ, ವಿದೂಷಕ.

नल, पु. ಕೊಳವೆ, ನಳಿಗೆ, ನಾಳ; ಕೊಳಾಯಿ, ನಲ್ಲಿ; ಜಲದಾರಿ, ಬಚ್ಚಲು, ಚರಂಡಿ; ಮೂತ್ರವಾಹಿನಿ, ಮೂತ್ರನಾಳ

नलवा, पु. ಕೊಳವೆ; ಬಿದಿರಿನ ಅಂಡೆ.

नला, पु. ಮೂತ್ರನಾಳ, ಮೂತ್ರ ವಾಹಿನಿ; ಕೈಕಾಲುಗಳ ಎಲುಬಿನ ದಂಟು; ಎಲುಬು, ಅಸ್ಥಿ; ದೊಡ್ಡನಳಿಗೆ

नलाई, स्त्री. ಕಳೆ ಕೀಳುವಿಕೆ; ಕಳೆ ಕೀಳುವುದಕ್ಕೆ ಕೊಡುವ ಕೂಲಿ

नलिका, स्त्री. ನಾಳ, ಕೊಳವೆ; ಒಂದು ಬಗೆ ಪರಿಮಳ ದ್ರವ್ಯ; ಬತ್ತಳಿಕೆ.

नलिया, पु. ಹಕ್ಕಿ ಬೇಟೆಗಾರ.

नली, स्त्री. ಚಿಕ್ಕ ಕೊಳವೆ; ಕಾಲಿನ ಎಲುಬು; ಮೊಣಕಾಲಿನ ಕೆಳಭಾಗ, ಮೊಣಕಂಡ, ಕಣಕಾಲು; ನೇಕಾರನ ಲಾಳಿ, ಅಟ್ಟೆ; ತುಪಾಕಿಯ ಕೊಳವಿ.

नलुवा, पु. = नलवा.

नव, वि. ಒಂಭತ್ತು; ನವ, ನವೀನ, ಹೊಸ; ತರುಣ.

नवक, पु. ಒಂಭತ್ತರ ಸಮೂಹ, ನವಕ.

नवजात, वि. ಈಗ ಹುಟ್ಟಿದ, ಹೊಸ ದಾಗಿ ಹುಟ್ಟಿದ.

नवद, वि. ತೊಂಭತ್ತು.

नवनी, स्त्री. नवनीत, पु. ಬೆಣ್ಣೆ.

नवना, अक्रि. ಬಾಗು, ಮಣಿ; ಎರಗು

नवम, वि. ಒಂಭತ್ತನೆಯ.

नवयुवक, पु. ತರುಣ, ಯುವಕ.

नवयौवना, स्त्री. ತರುಣಿ, ಯುವತಿ.

नवरंग, वि. ಸುಂದರ, ಚೆಲುವಾದ;

ನವೀನ, ಹೊಸ.

नवल, वि. ನವ, ಹೊಸ; ಚಲೋೀವಾದ; ಸುಂದರ; ಯುವಕ, ತರುಣ; ಉಜ್ಜ್ವಲ; ಅಪರೂಪವಾದ.

नवल-किशोर, पु. ನವ ಯುವಕ, ನವ ತರುಣ; ಶ್ರೀಕೃಷ್ಣ.

नवला, स्री. ಯುವತಿ, ತರುಣಿ; ಸುಂದರಿ.

नवली, स्री. ಹೊಸದು, ನವೀನತೆ; ತಾರುಣ್ಯ, ಯೌವನ; ಶುಭ್ರತೆ; ಬೆಳಗು.

नवशिक्षित, वि. ಹೊಸದಾಗಿ ಕಲಿತವ; ಆಧುನಿಕ ಶಿಕ್ಷಣ ಹೊಂದಿದವ.

नवसर, पु. ಒಂಭತ್ತು ಲಡಿಗಳ ಹಾರ.

नवसिखुआ, वि. = नौसिखुआ.

नवां, वि. ಒಂಭತ್ತನೆಯ.

नवाई, स्री. ಬಾಗುವಿಕೆ, ಎರಗುವಿಕೆ; ವಂದನೆ.

नवाज़, वि. ಮಾಡುವವ.

नवाज़िश, स्री. ದಯೆ, ಕೃಪೆ; ಅಭಿಮಾನ.

नवाड़ा, पु. ದೋಣಿ, ಓಡ.

नवाना, सक्रि. ಬಾಗು, ಬಗ್ಗಿಸು, ಮಣಿಸು.

नवान्न, पु. ಹೊಸ ಧಾನ್ಯ; ಸುಗ್ಗಿಯ ಹಬ್ಬ.

नवाब, पु. ಮೊಗಲಾಯಿ ಕಾಲದ ರಾಜಪ್ರತಿನಿಧಿ, ಪ್ರಾಂತೀಯ ಶಾಸಕ, ನವಾಬ; ರಾಜಕುಮಾರ; (ಮುಸಲ್ಮಾನ) ದೊರೆ; ಪ್ರಭು. वि. ದೊರೆಯಂಥ ಬಹಳ ವೈಭವದಿಂದಿರುವ, ದೌಲತ್ತಿನಿಂದಿರುವ; ಶ್ರೀಮಂತ. नवाबजादा = ನವಾಬನ ಮಗ. नवाबजादी = ನವಾಬನ ಮಗಳು.

नवाबी, स्री. ನವಾಬರ ಕೆಲಸ ಅಥವಾ ಪದವಿ, ನವಾಬಗಿರಿ; ನವಾಬರ ಆಳಿಕೆ, "ನವಾಬು ದರ್ಬಾರು"; ದೌಲತ್ತು, ಶ್ರೀಮಂತಿಕೆ.

नवारना, अक्रि. ತಿರುಗಾಡು, ಸುತ್ತು, ಸಂಚರಿಸು.

नवाला, पु. ಕವಳ, ತುತ್ತು, ಗ್ರಾಸ.

नवासा, पु. ಮಗಳ ಮಗ, ದೌಹಿತ್ರ, ಮೊಮ್ಮಗ.

नवासी, स्री. ಮಗಳ ಮಗಳು, ಮೊಮ್ಮಗಳು. वि. ಎಂಭತ್ತೊಂಭತ್ತು.

नवाह, पु. ಒಂಭತ್ತು ದಿವಸ; ಒಂಭತ್ತು ದಿನಗಳಲ್ಲಿ ಭಾರತ ಮೊದಲಾದುವುಗಳ ಪಠನ. स्री. ಕಡೆ, ಪಕ್ಕ; ಅಕ್ಕಪಕ್ಕ.

नविश्त, स्री ಬರವಣಿಗೆ; ಪತ್ರ, ಕಾಗದ.

नविश्ता, वि. ಬರೆದ; ಬರೆದಿರುವ, ಲಿಖಿತ. पु. ಕಾಗದ, ಪತ್ರ.

नवी, स्री. ಹಾಲು ಕರೆಯುವಾಗ ಹಸುವಿನ ಹಿಂಗಾಲುಗಳನ್ನು ಕಟ್ಟುವ ಹಗ್ಗ, ದಳಿ, ಸರಹಗ್ಗ.

नवीन, वि. ನವ, ಹೊಸ; ನೂತನ; ತರುಣ

नवीनता, स्री. ಹೊಸದು, ನವೀನತೆ.

नवीस, पु. ಲೇಖಕ, ಬರೆಹಗಾರ.

नवीसी, स्री. ಬರೆಯುವಿಕೆ, ಲೇಖನ, ಬರಹ.

नवेद, पु. ಶುಭವಾರ್ತೆ; ಆಹ್ವಾನಪತ್ರ.

नवेला, वि. ನವ, ಹೊಸ; ಪ್ರಾಯದ, ತರುಣ; ವಿರಳ, ಅಪರೂಪವಾದ.

पु. ಸುಂದರ ಯುವಕ, ಚೆಲುವ.

नवेली, स्त्री. ಚೆಲುವೆ, ಸುಂದರಿ.

नशस्त, स्त्री. ಕುಳಿತುಕೊಳ್ಳುವಿಕೆ.

नशस्तगाह, स्त्री. ಕುಳಿತುಕೊಳ್ಳುವ ಕೋಣೆ, ಬೈಠಕ್ ಖಾನೆ.

नशा, पु. ಮತ್ತು, ಅಮಲು; ಮೈಕ, ಸುಂದು; ಮಾದಕ, ಮದ್ಯ; ಮದ, ಸೊಕ್ಕು.

नशाख़ोर, वि. ಮದ್ಯಪಾನ ಮಾಡುವವ, ಕುಡುಕ, ಅಮಲುಖೋರ.

नशात, स्त्री. ದೃಷ್ಟಿ. पु. ಆನಂದ, ಖುಷಿ.

नशादार, वि. ಮದ ಅಥವಾ ಮತ್ತನ್ನುಂಟುಮಾಡುವ, ಮಾದಕ.

नशापानी, पु. ಮಾದಕಪದಾರ್ಥ, ಸುರೆ.

नशास्ता, पु. ಪಿಷ್ಟಪದಾರ್ಥ.

नशीन, वि. ಇರುವ, ಆರೂಢನಾದ (ಯೌಗಿಕದಲ್ಲಿ). ಉದಾ:- तख़्त नशीन = ಸಿಂಹಾಸನಾರೂಢ

नशीमन, पु. ನಿವಾಸ, ಬಿಡದಿ, ಬಿಡಾರ.

नशीला, वि. ಮಾದಕ; ಮದಹಿಡಿದ, ಮತ್ತೇರಿದ, ಸೊಕ್ಕಿದ.

नशेब, वि. ಕೆಳಗಿನ; ತಗ್ಗಿನ पु. ಹಳ್ಳ.

नशेबाज़, वि. = नशाख़ोर.

नश्तर, पु. ಹುಣ್ಣುಗಳನ್ನು ಸೀಳಿ ರಕ್ತ ತೆಗೆಯುವ ಚಿಕ್ಕ ಶಸ್ತ್ರ, ವೇಧನಿ.

नश्व, पु. ಉದ್ಭವ, ವೃದ್ಧಿ. नश्व ओ-नमा = ಅಭಿವೃದ್ಧಿ, ಅಭ್ಯುದಯ, ಏಳಿಗೆ.

नश्वर, वि. ನಾಶವಾಗುವ, ನಶಿಸುವ

नश्वा, पु. ಮತ್ತು, ಅಮಲು.

नष्ट, वि. ನಷ್ಟವಾದ; ನಾಶವಾದ, ಹಾಳಾದ; ಕಳೆದುಹೋದ.

नष्ट-भ्रष्ट, वि. ತೀರ ಕೆಟ್ಟುಹೋದ, ಪೂರ್ಣವಾಗಿ ಹಾಳಾದ.

नस, स्त्री. ಸ್ನಾಯು, ಸಿರೆ, ನರ; ರಕ್ತವಾಹಿನಿ, ಧಮನಿ; ಎಲೆಗಳ ತಂತು, ನಾರು. नस नस में = ಮೈಯೆಲ್ಲಾ; ಸಂಪೂರ್ಣವಾಗಿ.

नसक़, पु. ಅನುಪೂರ್ವಿ; ಕ್ರಮ; ರೀತಿ, ತರಹ.

नसक़ची, पु. ಕ್ರಮಪಡಿಸುವವ; ಅರಮನೆ ಬತ್ತಿ.

नसतरंग, पु. ಒಂದು ಬಗೆ ತುತ್ತೂರಿ.

नसतालीक़, पु. ಮೋಡಿ ಅಲ್ಲದ ಬರಹ, ಮುದ್ದು ಬರವಣಿಗೆ; ಅಚ್ಚುಕಟ್ಟಾದವ.

नसब, पु. ವಂಶ, ಕುಲ.

नसबनामा, पु. ವಂಶಾವಳಿ, ಪ್ರವರ.

नसबी, वि. ಸಂಬಂಧಿಕ, ಬಂಧು, ಬಳಗ.

नसर, स्त्री. ಗದ್ಯ, ವಚನ; ಸಹಾಯ.

नसरानियत, स्त्री. ಕ್ರೈಸ್ತಮತ.

नसरानी, वि. ಕ್ರೈಸ್ತಮತದ, ಕ್ರೈಸ್ತರ. पु. ಕ್ರೈಸ್ತಮತಸ್ಥ.

नसरीन, पु. ಒಂದು ಬಗೆ ಹೂವು.

नसवार, स्त्री. ಹೊಗೆಸೊಪ್ಪಿನಪುಡಿ, ನಸ್ಯ

नसाना, सक्रि. ನಾಶಮಾಡು, ಹಾಳುಮಾಡು.

नसारा, पु. ಕ್ರೈಸ್ತ ಮತಸ್ಥ.

नसावन, स्त्री. ನಾಶ, ಅಳಿವು.

नसी, स्त्री. ನೇಗಿಲಿನ ಮೊಳೆ, ಗುಳ.

नसीठ, वि. ಅಪಶಕುನವಾದ.

नसीब, पु. ಭಾಗ್ಯ, ಅದೃಷ್ಟ, ಲಭ್ಯ, ನಸೀಬು; ಪಾಲು, ಹಿಸ್ಸೆ. नसीब होना = ಲಭ್ಯವಾಗು, ಲಭಿಸು.

नसीबवर, वि. ಭಾಗ್ಯವಂತ, ಅದೃಷ್ಟಶಾಲಿ

नसीबा, पु ಅದೃಷ್ಟ, ಭಾಗ್ಯ.

नसीबी, वि. ವಿಧಿಯ, ಭಾಗ್ಯದ.

नसीम, स्त्री. ನಸುಗಾಳಿ, ಮಂದಮಾರುತ

नसीर, वि. ಸಹಾಯಕ; ರಕ್ಷಕ; ಮಿತ್ರ.

नसीला, वि. ಉತ್ತಮ ಕುಲದ, ಒಳ್ಳೆಯ ತಳಿಯ; ಬಲಿಷ್ಠ.

नसीहत, स्त्री. ಉಪದೇಶ, ಬುದ್ಧಿವಾದ; ಒಪ್ಪಿಕೆ, ಮೆಚ್ಚುಗೆ; ಶಿಕ್ಷೆ, ದಂಡನೆ.

नसेनी, स्त्री. ಏಣಿ, ನಿಚ್ಚಣಿಕೆ.

नस्ता, पु. ಮೂಗು ಚುಚ್ಚಿದ ರಂಧ್ರ

नस्य, पु. ನಾಸಿಕಾಚೂರ್ಣ, ನಸ್ಯ; ಮೂಗೊಳಗೆ ಹಚ್ಚುವ ಔಷಧದಪುಡಿ

नस्ल, स्त्री. ವಂಶ, ವಂಶ ಪರಂಪರೆ; ಸಂತತಿ, ತಳಿ.

नस्लदार, वि. ಸತ್ಕುಲದ, ಕುಲೀನ.

नस्लन्, क्रिवि. ವಂಶಪರಂಪರೆಯಾಗಿ.

नस्ली, वि. ವಂಶದ, ಕುಲದ.

नस्साज, पु. ನೆಯ್ಗೆಯವ; ಜಾಡ.

नस्सार, पु. ಗದ್ಯ ಲೇಖಕ.

नह, पु. ನಖ, ಉಗುರು.

नहक, वि. ಸಣಕಲು.

नहछू, पु. ಮದುವೆ ಗಂಡಿನ ಕೈಬೆರಳುಗಳಿಗೆ ಮದರಂಗಿ ಹಚ್ಚುವ ಒಂದು ಸಂಪ್ರದಾಯ, ಮದರಂಗಿ ಶಾಸ್ತ್ರ.

नहज़त, स्त्री. ಏಳುವಿಕೆ, ಉತ್ಥಾನ; ಹೊರಡುವಿಕೆ.

नहट्टा, पु. ನಖಕ್ಷತ, ಪರಚುವಿಕೆ.

नहन, पु. ಕಪಿಲೆ ಎಳೆಯುವ ಹಗ್ಗ.

नहना, सक्रि. ಉಳು, ಹೂಡು; ಕೆಲಸ ಹಚ್ಚಿಸು.

नहन्ना, पु. नहन्नी, स्त्री. = नहरनी.

नहर, स्त्री. ಕಾಲುವೆ, ನಾಲೆ, ತೋಡು.

नहरनी, स्त्री. ಉಗುರು ತೆಗೆಯುವ ಹಜಾಮರ ಸಲಕರಣೆ, ಉಗುರುಕಡ್ಡಿ.

नहरुआ, पु. ಹುಳುಗಳು ಏಳುವ ಒಂದು ಚರ್ಮರೋಗ, ನಾರು ಹುಣ್ಣು.

नहलवाना, क्रिवि. ಸ್ನಾನಮಾಡಿಸು, ಮೈತೊಳೆಸು; ಅಭಿಷೇಕಮಾಡಿಸು.

नहला, पु. ಇಸ್ಪೇಟಾಟದಲ್ಲಿ ಒಂಭತ್ತನೆಯ ಬಂದು, "ನೈಲಾ".

नहलाई, स्त्री. ಸ್ನಾನ ಮಾಡಿಸುವಿಕೆ; ಸ್ನಾನ ಮಾಡಿಸುವುದಕ್ಕೆ ಕೊಡುವ ಕೂಲಿ, ಸ್ನಾನದ ಖರ್ಚು; ಅಭಿಷೇಕದ ಖರ್ಚು.

नहलाना, सक्रि. ಸ್ನಾನ ಮಾಡಿಸು, ಮೀಯಿಸು; ಅಭಿಷೇಕ ಮಾಡು. नहलाना धुलाना = ಸ್ನಾನಮಾಡಿಸು, ಮೈತೊಳೆಸು.

नहस, वि. ಅಶುಭ, ಅಮಂಗಳ; ನಿರ್ಭಾಗ್ಯ.

नहसुत, पु. ಉಗುರಿನ ಗೀರು ಅಥವಾ ಗುರುತು.

नहान, पु. ಸ್ನಾನ, ಮೀಯುವಿಕೆ, ಜಳಕ

नहाना, अक्रि. ಮೀಯು, ಸ್ನಾನ

ಮಾಡು; ಅಭಿಷೇಕ ಮಾಡಿಕೊಳ್ಳು.

नहाफ़त, स्त्री. ಸಣಕಲು, ಬಡಕಲು

नहार, पु. ದಿವಸ, ದಿನ.

नहार-मुंह, वि. ಬೆಳಗ್ಗಿನಿಂದ ಆಹಾರವಿಲ್ಲದಿರುವ, ಉಪವಾಸವಿರುವ.

नहारी, स्त्री. ಉಪಾಹಾರ, ನಾಶ್ತ; ಲಗಾಮು.

नहिं, क्रिवि. ಇಲ್ಲ.

नहियर, पु.=नैहर.

नहीं, क्रिवि. ಇಲ್ಲ, ಅಲ್ಲ. नहीं तो= ಇಲ್ಲವಾದರೆ, ಅನ್ಯಥಾ.

नही, क्रिवि. ಇಲ್ಲ, ಅಲ್ಲ. स्त्री. ನಿಷೇಧ, ತಡೆ, ನಿರೋಧ.

नहीफ़, वि. ಸಣಕಲಾದ, ಬಡಕಲ; ನಿರ್ಬಲ.

नहूसत, स्त्री. ವ್ಯಸನ, ವಿಷಾದ; ದುಶ್ಶಕುನ, ಅಶುಭ.

नांघना, सक्रि. ದಾಟು, ಲಂಘಿಸು; ಉಲ್ಲಂಘಿಸು.

नांद, स्त्री. ದನಗಳಿಗೆ ನೀರು ಕುಡಿಸುವ ತೊಟ್ಟಿ, ಬಕೀಟು, ಚರಣಿಗೆ.

नांदना, सक्रि. ಸದ್ದುಮಾಡು; ಸೀನು; ಆನಂದಿಸು, ನಲಿದಾಡು; ಧಗಧಗನೆ ಉರಿ.

नांदिया, पु. ನಂದಿ, ನಂದಿಕೇಶ್ವರ

नांदी, स्त्री. ಆನಂದ; ಸಂತೋಷ; ಮಂಗಳ; ಸ್ತೋತ್ರ, ಸ್ತುತಿ.

नांदीमुख, पु. ಶುಭ ಸಂದರ್ಭಗಳಲ್ಲಿ ಮಾಡುವ ಪಿತೃಶ್ರಾದ್ಧ. ನಾಂದೀಶ್ರಾದ್ಧ

नांधना, सक्रि. ಪ್ರಾರಂಭಿಸು, ಹೂಡು.

ना, क्रिवि. ಇಲ್ಲ, ಅಲ್ಲ. ಉಪ. ಅಭಾವ ಸೂಚಕ ಉಪಸರ್ಗ. ಉದಾ:- नालायक़=ಅಯೋಗ್ಯ, ಅನರ್ಹ.

नाइत्तिफ़ाक़ी, स्त्री. ಒಪ್ಪದಿರುವಿಕೆ, ಮತಭೇದ, ಭಿನ್ನಾಭಿಪ್ರಾಯ.

नाइन, स्त्री. ಹಜಾಮರವಳು, ನಾಪಿತನ ಸ್ತ್ರೀ, ನಾಪಿತಿ.

नाइन्साफ़, वि. ಅನ್ಯಾಯಿ.

नाइन्साफ़ी, स्त्री. ಅನ್ಯಾಯ.

नाईं, स्त्री. ಸಮಾನತೆ. क्रिवि. ಸಮಾನವಾಗಿ.

नाई, पु. ಕ್ಷೌರಿಕ, ನಾಪಿತ, ಹಜಾಮ.

नाउड़ा, पु. ಹಜಾಮರ ಹುಡುಗ; ಹಜಾಮ, ಕ್ಷೌರಿಕ.

नाउम्मेद, वि. ನಿರಾಶೆಯಾದ, ಹತಾಶ, ಭಗ್ನಾಶ.

नाउम्मेदी, स्त्री. ನಿರಾಶೆ, ಆಶಾಭಂಗ.

नाऊ, पु. ನಾಯಿಂದ, ನಾಪಿತ.

नाकंद, वि. ಪಳಗಿಸದ(ಎತ್ತು); ಒರಟು

नाक, पु. ಮೊಸಳೆ; ಸ್ವರ್ಗ. स्त्री. ಮೂಗು, ನಾಸಿಕೆ; ಸಿಂಬಳ, ಗೊಣ್ಣೆ; ಮಾನ, ಮರ್ಯಾದೆ; ಪ್ರಸಿದ್ಧಪುರುಷ; ಅಂದ; ಸೊಬಗು. नाक कटना= ಮಾನಹೋಗು. नाक में दम करना=ಸತಾಯಿಸು, ಗೋಳಾಡಿಸು. नाक रगड़ना=ಅಂಗಲಾಚಿ ಬೇಡು, ಗೋಗರೆ, ಬೇಡಿಕೊ.

नाकड़ा, नाकरा, पु. ಮೂಗಿನ ಬಾವು

नाक़दर, वि. ಆದರವಿಲ್ಲದ, ಗೌರವವಿಲ್ಲದ

नाक़दरी, स्त्री. ಅನಾದರ, ಅಗೌರವ.

नाकस, वि. ಯೋಗ್ಯವಲ್ಲದ, ಅನರ್ಹ; ನೀಚ, ಹಲ್ಕ; ಅಪರಿಚಿತ; ಅನಾಮಧೇಯ.

नाकसी, स्त्री. ನಿಕೃಷ್ಟತೆ; ನೀಚತನ; ಅಲ್ಪತನ.

नाका, पु. ರಸ್ತೆಯ ತುದಿ; ದಾರಿ, ಬಾಗಿಲು; ನಾಲ್ಕು ರಸ್ತೆಗಳು ಕೂಡುವ ಸ್ಥಳ, ಚೌಕ; ಎಲ್ಲೆ. ಮೇರೆ; ಠಾಣೆ, ಚಾವಡಿ; ದ್ವಾರ; ಸೂಜಿಯ ಕಣ್ಣು; ಮೊಸಳೆ.

नाक़ा, स्त्री. ಹೆಣ್ಣು ಒಂಟೆ.

नाकाबंदी, स्त्री. ರಸ್ತೆ ಕಟ್ಟುವಿಕೆ, ದಾರಿ ಕಟ್ಟುವಿಕೆ.

नाक़ाबिल, वि. ಯೋಗ್ಯತೆಯಿಲ್ಲದ, ಅನರ್ಹ; ನಿರರ್ಥಕ.

नाक़ाबिलियत, स्त्री. ಅಯೋಗ್ಯತೆ, ಅನರ್ಹತೆ.

नाकाम, वि. ನಿರರ್ಥಕ, ಅಪ್ರಯೋಜಕ; ಅಸಫಲ; ನಿರಾಶನಾದ, ಭಗ್ನಾಶ.

नाकामयाब, वि. ಅಸಫಲ, ವಿಫಲ.

नाकामी, स्त्री. ನೈರಾಶ್ಯ, ನಿರಾಶೆ.

नाकारा, वि. ಕೆಲಸಕ್ಕೆ ಬಾರದ, ನಿಷ್ಪ್ರಯೋಜಕ

नाक़िद, पु. ರತ್ನಪರೀಕ್ಷಕ.

नाक़िल, पु. ಹೇಳುವವ, ವರ್ಣಿಸುವವ; ನಕಲು ಬರೆಯುವವ; ಚಿತ್ರ ಬರೆಯುವವ.

नाक़िस, वि. ದೋಷವುಳ್ಳ, ಕುಂದುಳ್ಳ; ಕೆಟ್ಟ.

नाक़ूस, पु. ಶಂಖ.

नाकेदार, पु. ಬಾಗಿಲಲ್ಲಿರುವ; ಠಾಣೆ ಅಥವಾ ಚಾವಡಿಯ ಉದ್ಯೋಗಸ್ಥ; ಸುಂಕದ ಕಟ್ಟೆಯ ಅಧಿಕಾರಿ. वि. ರಂಧ್ರಗಳುಳ್ಳ, ತೂತುಳ್ಳ.

नाख़ुदा, पु. ನಾಸ್ತಿಕ; ಅಧರ್ಮಿ; ಜಹಜಿನ ಯಜಮಾನ; ಮಾಲೀಮು, ತಂಡೇಲ; ನಾವಿಕ; ಹಡಗಿನಲ್ಲಿ ಹೇರುವ ಸರಕುಗಳ ಮೇಲ್ವಿಚಾರಕ.

नाख़ुना, नाख़ूना, पु. ಕಣ್ಣಿನ ಪರೆ, ಕಣ್ಣು ಕುಡಿಕೆ; ಪಿಟೀಲು ಬಾರಿಸುವ ಕೋಲು, ಕಮಾನು.

नाख़ुश, वि. ಅತೃಪ್ತ, ಅಸಂತುಷ್ಟ; ಅಸ್ವಸ್ಥ; ವ್ಯಥಿತ.

नाख़ुशी, स्त्री. ಅಸಂತೋಷ, ಅತೃಪ್ತಿ.

नख़ुन, नाख़ून, पु. ನಖ, ಉಗುರು.

नाख़ूनगीर, नाख़ून-तराश, पु. ಉಗುರುಕಡ್ಡಿ.

नाख़्वांदा, वि. ಅಶಿಕ್ಷಿತ, ಅನಕ್ಷರಸ್ಥ.

नाख़्वाह, वि. ಇಷ್ಟವಿಲ್ಲದ; ಇಷ್ಟ ವಿರುದ್ಧವಾದ; ನಿರ್ಬಂಧದ.

नाग, पु. ಸರ್ಪ, ನಾಗರಹಾವು; ಆನೆ; ಸೀಸ.

नाग-केसर, पु. ನಾಗಕೇಸರ ಗಿಡ, ಬಕುಳ.

नाग-दांत, पु. ಆನೆ ದಂತ.

नाग-दौना, पु. ದವನ.

नागफनी, स्त्री. ಪಾಪಾಸ್ ಕಳ್ಳಿ, ಡಬ್ಬಳ್ಳಿ; ಕಿವಿಯ ಕುಂಡಲ.

नाग-फांस, पु. ಶತ್ರುಗಳನ್ನು ಬಿಗಿದು ಕಟ್ಟುವ ಒಂದು ಗಂಟು; ನಾಗಪಾಶ.

नाग-बला, पु. ನಾಗವಲೆ, ಗಾಂಗೇರುಕಿ, ಬಟ್ಟೆಗರುಕೆ, ತುರುಬೆ ಗಿಡ

नागबेल, स्त्री. ನಾಗವಲ್ಲಿ, ವೀಳ್ಯದೆಲೆ.

नागरंग, पु. ಕಿತ್ತಳೆ ಹಣ್ಣು.

नागर, वि. ನಗರದ, ಪಟ್ಟಣದ. पु. ನಗರವಾಸಿ, ನಾಗರಿಕ; ಚತುರ, ಜಾಣ; ಗುಜರಾತಿ ಬ್ರಾಹ್ಮಣರ ಒಂದು ಜಾತಿ.

नागरता, स्त्री. ನಾಗರೀಕತೆ, ಚತುರತೆ

नागर-पान, नागर-बेल, पु. ಒಂದು ಬಗೆ ವೀಳ್ಯದೆಲೆ.

नागरमस्ता, नागरमोथा, पु. ನಾಗಮುಸ್ತಕ, ಕೈವರ್ತ.

नागरा, वि. ಜಾಣ, ಚತುರ.

नागरिक, वि. ನಗರದ, ನಾಗರಿಕ, ಪಟ್ಟಣಿಗ; ಚತುರ, ಜಾಣ; ಗಟ್ಟಿಗ.

नागरिकता, स्त्री. ನಗರವಾಸಿಯ ಹಕ್ಕು ಬಾಧ್ಯತೆ; ನಾಗರಿಕತನ, ಪಟ್ಟಣವಾಸ.

नागरी, स्त्री. ನಗರವಾಸಿ ಸ್ತ್ರೀ; ಚತುರ ಸ್ತ್ರೀ; ದೇವನಾಗರಿ ಅಕ್ಷರ.

नागल, पु. ನೇಗಿಲು, ಹಲ, ಲಾಂಗಲ

नागवार, वि. ಜೀರ್ಣವಾಗದ; ಅಪ್ರಿಯ; ಅಸಹ್ಯ, ಹೇಯ; ದುಃಖದಾಯಿ

नागहां, क्रिवि. ದುಡುಮ್ಮನೆ, ತಟಕ್ಕನೆ, ಗಕ್ಕನೆ; ಅಕಸ್ಮಾತ್ತಾಗಿ.

नागहानी, वि. ಅಕಸ್ಮಾತ್ತಾದ, ಆಕಸ್ಮಿಕ. स्त्री. ಯದೃಚ್ಛೆ.

नागा, पु. ದಿಗಂಬರ ಸನ್ಯಾಸಿ.

नाग़ा, वि. ಬರಿಯ, ಖಾಲಿ; ಶೂನ್ಯ; ಅನುಪಸ್ಥಿತ. पु. ಅವಕಾಶ, ಬಿಡುವು; ರಜ, ಸೂಟಿ; ಕಾಲಾಂತರ, ಕಾಲಾತೀತ; ಮುಂದಕ್ಕೆ ಹಾಕುವಿಕೆ.

नागिन, स्त्री. ಹೆಣ್ಣು ಸರ್ಪ; ಬೆನ್ನಿನ ಮೇಲಿನ ಸುಳಿ

नागोद, पु. ಎದೆ ಮರೆ, ಕವಚ.

नाच, पु. ನಾಟ್ಯ, ತಾಂಡವ; ನೃತ್ಯ, ನರ್ತನ; ಕುಣಿತ, ನಾಚು; ಗಂತು, ಆಟ. नाच नचाना = ಆಟವಾಡಿಸು, ಕುಣಿಸು; ಗೋಳಾಡಿಸು.

नाचकूद, स्त्री. ನಾಟ್ಯ, ಕುಣಿದಾಟ, ತಾಂಡವ; ಹಾರಾಟ, ಪ್ರಯತ್ನ; ಆಡಂಬರ; ಕೋಪಾವೇಶ.

नाचगीत, पु. ಆಟಪಾಟ; ನೃತ್ಯ; ಮೇಳವಣೆ, ಲಾಸ್ಯ.

नाचघर, नाचमहल, पु. ನಾಟ್ಯದ ಸ್ಥಳ, ನೃತ್ಯಶಾಲೆ, ನಾಟ್ಯಶಾಲೆ.

नाचना, अक्रि ನಾಟ್ಯವಾಡು, ಕುಣಿ; ನರ್ತಿಸು; ತಾಂಟು, ಗಂತು ಹಾಕು; ಕುಣಿದಾಡು, ಹಾರಾಡು, ಪರಿದಾಡು.

नाच-रंग, पु. ಕೇಲಿ, ವಿಲಾಸ; ಉಲ್ಲಾಸ, ಗಮ್ಮತ್ತು; ಆನಂದೋತ್ಸವ.

नाचाक़, वि. ವಿರಸವಾದ, ಸಪ್ಪೆ.

नाचाक़ी, स्त्री. ವೈಮನಸ್ಯ, ವಿರಸ.

नाचार, वि. = लाचार.

नाचारी, स्त्री. = लाचारी.

नाचीज़, वि. ತುಚ್ಛ; ನಿಕೃಷ್ಟ; ನೀಚ; ಅಲ್ಪವಸ್ತು.

नाज, पु. ದವಸ, ಧಾನ್ಯ.

नाज़, पु. ಬೆಡಗು, ಕುಲುಕು, ಒಲಪು, ಒಯ್ಯಾರ; ಬಿಂಕ, ಬಿಗುಮಾನ; ಗರ್ವ. नाज़ नख़रा = ಒಲಪು ಒಯ್ಯಾರ,

ಬೆಡಗು ಬಿನ್ನಾಣ; ಹಾವಭಾವ.

नाज़नीं, वि. ಕೋಮಲವಾದ; ಮನೋಹರವಾದ, ಚೆಲುವಿನ; ಪ್ರಿಯ. स्त्री. ಕೋಮಲಾಂಗಿ; ಚೆಲುವಿ, ಸುಂದರಿ; ಪ್ರೇಮಿಕೆ

नाज़बरदार, पु. ಮರ್ಜಿ ಅನುಸರಿಸುವವ; ಮುಖಸ್ತುತಿ ಮಾಡುವವ.

नाज़बरदारी, स्त्री. ಮುಖಸ್ತುತಿ.

नाज़रत, स्त्री. ನಾಜರನ ಕೆಲಸ ಅಥವಾ ಪದವಿ.

नाज़ां, वि. ಒಯ್ಯಾರದ; ವಿಲಾಸಿ; ಬಿಗುಮಾನದ; ಗರ್ವಿಷ್ಠ.

नाज़-बालिश, पु. ಚಿಕ್ಕ ದಿಂಬು.

नाजायज़, वि. ಯೋಗ್ಯವಿಲ್ಲದ; ಅನುಚಿತ, ಅನುಪಯುಕ್ತ; ನಿಯಮವಿರುದ್ಧ; ನೀಚ.

नाज़िम, पु. ಏರ್ಪಾಟು ಮಾಡುವವ, ವ್ಯವಸ್ಥಾಪಕ; ಚಾಲಕ, ಆಡಳಿತಗಾರ; ಶಾಸಕ; ಹಾಡುಕಟ್ಟುವವ, ಕವಿ.

नाज़िर, पु. ನಿರೀಕ್ಷಕ, ಮುಣೇಗಾರ; ಮೇಲ್ವಿಚಾರಣೆ ಮಾಡುವವ, ಪಾರುಪತ್ಯಗಾರ; ಕೋರ್ಟಿನ ನಾಜಿರು; ಅಂತಃಪುರದ ಸೇವಕ; ನಪುಂಸಕ, ಕೊಜ್ಜೆ; ನರ್ತಕಿಯರ ಮಧ್ಯಸ್ಥಗಾರ, ನಟ್ಟುವ, "ಡಾಫರು".

नाज़िरात, स्त्री. ಡಾಫರನಿಗೆ ನರ್ತಕಿಯರಿಂದ ದೊರಕುವ ದಲ್ಲಾಳಿ ಅಥವಾ ತರಗು, ವಟ್ಟ.

नाज़िरा, नाज़िरीन, पु. ನೋಡುವವರು, ಪ್ರೇಕ್ಷಕರು.

नाज़िरी, स्त्री. ಮೇಲ್ವಿಚಾರಣೆ, ಉಸ್ತುವಾರಿ; ನಾಜಿರನ ಕೆಲಸ ಅಥವಾ ಉದ್ಯೋಗ.

नाज़िल, वि. ಇಳಿಯುವ; ಧುಮುಕುವ

नाज़िला, पु. ಆಪತ್ತು, ವಿಪತ್ತು.

नाज़िश, स्त्री. ಬಿಗುಮಾನ, ಗರ್ವ.

नाज़ी, वि. ಬಿಡುಗಡೆಯಾದ, ವಿಮುಕ್ತ; ಕ್ಷಮಿಸಿದ, ಮಾಫಿ ಮಾಡಿದ.

नाज़ुक, वि. ಕೋಮಲ, ಸುಕುಮಾರ; ನಳನಳಿಸುವ; ಸೂಕ್ಷ್ಮ; ನುಣುಪಾದ; ಸ್ವಲ್ಪ ತಗುಲಿದರೂ ಮುರಿದು ಹೋಗುವ ಅಥವಾ ಕೆಟ್ಟು ಹೋಗುವ, ನಾಜೂಕಾದ; ಶಂಕಾಸ್ಪದವಾದ; ದಯಾಳು. नाज़ुक दिल= ಕೋಮಲ ಮನಸ್ಸಿನ; ಎಳೆ ಮನಸ್ಸಿನ; ಸಿಡುಕ.

नाज़ुकी, स्त्री. ಸೂಕ್ಷ್ಮತೆ, ನುಣುಪು; ನಾಜೂಕುತನ; ಮೆಲ್ಪು, ಕೋಮಲತೆ.

नाज़ेब, नाज़ेबा, वि. ಸಾಧಾರಣ, ಸಾದಾ; ಕುರೂಪಿ; ಅವಲಕ್ಷಣವಾದ, ಅಂದಗೆಟ್ಟ.

नाज़ेबाइश, नाज़ेबाई, स्त्री. ಅವಲಕ್ಷಣ; ಸರಳತೆ; ಸಾದಾತನ.

नाज़ो, स्त्री. ಸುಕುಮಾರಿ, ಕೋಮಲಾಂಗಿ; ಮುದ್ದು ಹುಡುಗಿ.

नाज़ोर, वि. ಬಲಹೀನ, ನಿರ್ಬಲ.

नाज़ोरी, स्त्री. ಬಲಹೀನತೆ.

नाट, पु. ನಾಟ್ಯ, ಸೋಗು; ಕಂಬ.

नाटक, पु. ನಾಟಕ, ಅಭಿನಯ; ನಟ.

नाटकशाला, पु. ನಾಟಕಶಾಲೆ, ರಂಗಭೂಮಿ.

नाटकिया, पु. ಅಭಿನಯಕಾರ.

नाटकी, नाटिका, स्त्री. ಅಭಿನಯಗಾತಿ, ಆಟಗಾತಿ, ನಟಿ.

नाटकीय, वि. ನಾಟಕಸಂಬಂಧವಾದ.

नाटना, अक्रि. ಮಾತು ತಪ್ಪು. सक्रि. ಮಾತು ಹೊರಳಿಸು, ನಿರಾಕರಿಸು.

नाटा, वि. ಕುಳ್ಳ, ಗಿಡ್ಡ, ಗುಜ್ಜಾರಿ. पु. ಹೋರಿ.

नाठ, पु. ನಷ್ಟ; ನಾಶ; ಅಭಾವ.

नाठना, अक्रि. ನಾಶವಾಗು; ತೊಲಗು; ಓಡಿಹೋಗು.

नाठा, पु. ವಾರಸು ಇಲ್ಲದವ; ಸಂತಾನವಿಲ್ಲದವ.

नाठिया, वि. ಪೋಲಿ, ತೊಂಡು.

नाड़, स्त्री. ಕಂಠ, ಕೊರಳು; ನಾಡಿ.

नाड़ा, पु. ನಾಡೆ, ಲಾಡಿ, ನವಾರ.

नाड़ी, स्त्री. ರಕ್ತನಾಳ, ಧಮನಿ; ನಾಡಿ; ವ್ರಣದ ರಂಧ್ರ; ತುಪಾಕಿಯ ಕೊಳವಿ; ಒಂದು ಘಳಿಗೆ; ದಂಟು; ಕರುಳು.

नाड़ीमंडल, पु. ವಿಷುವದ್ರೇಖೆ, ಭೂಮಧ್ಯರೇಖೆ, ನಿರಕ್ಷವೃತ್ತ.

नात, पु. ಜ್ಞಾತಿ; ನೆಂಟ, ಬಂಧು

ना-तज़रिबा, ना-तज़रिबाकार, वि. ಅನುಭವವಿಲ್ಲದವ, ಅನನುಭವಿ.

नातमाम, वि. ಅಪೂರ್ಣ; ಅರ್ಧಂಬರ್ಧ; ಕಡಮೆಯಾದ.

नातमामी, स्त्री. ಅಪೂರ್ಣತೆ; ಕೊರತೆ

नातरबियत, नातराश, वि. ಅಶಿಕ್ಷಿತ; ಅಸಭ್ಯ.

नातवां, वि. ದುರ್ಬಲ, ಅಶಕ್ತ; ನಿರ್ವೀರ್ಯ.

नातवानी, स्त्री. ಅಶಕ್ತತೆ, ಬಲಹೀನತೆ; ಅನಾರೋಗ್ಯ, ಜಾಡ್ಯ.

नाता, पु. ಬಂಧುತ್ವ, ಬಾಂಧವ್ಯ, ಸಂಬಂಧ. नाता रिश्ता = ಬಂಧುಬಳಗ, ಬೀಗರು ಬಿಜ್ಜರು; ವಾವಿವರಸೆ.

नाताक़त, वि. ಬಲಹೀನ, ನಿರ್ಬಲ.

नाताक़ती, स्त्री. ಬಲಹೀನತೆ, ದೌರ್ಬಲ್ಯ

नातिक़, वि. ಮಾತನಾಡುವ; ವಿವೇಕಯುತ, ಯುಕ್ತಿಯುತ; ಖಂಡಿತ, ನಿಶ್ಚಯವಾದ.

नातिक़न्, क्रिवि. ಖಡಾಖಂಡಿತವಾಗಿ, ಜರೂರಾಗಿ, ನಿಶ್ಚಯವಾಗಿ.

नातिक़ा, वि. ಮಾತನಾಡುವವ. पु. ಮಾತನಾಡುವಿಕೆ, ಮಾತನಾಡುವ ಶಕ್ತಿ, ಭಾಷಣ ಶಕ್ತಿ.

नातिन, नातिनी, स्त्री. ಮೊಮ್ಮಗಳು.

नाती, पु. ಮೊಮ್ಮಗ, ದೌಹಿತ್ರ.

नाते, क्रिवि. ನಿಮಿತ್ತ, ಸಲುವಾಗಿ, ಓಸ್ಕರ.

नातेदार, पु. ನೆಂಟ, ಬಂಧು, ಬಳಗ.

नातेदारी, स्त्री. ಬಂಧುತ್ವ, ಬಾಂಧವ್ಯ; ನೆಂಟಸ್ತಿಕೆ.

नाथ, पु. ಪತಿ; ಸ್ವಾಮಿ, ಯಜಮಾನ; ಮೂಗುದಾರ. स्त्री. ಮೂಗುದಾರ ಹಾಕುವಿಕೆ.

नाथना, सक्रि. ಮೂಗುದಾರ ಹಾಕು; ವಶಪಡಿಸು; ಪೋಣಿಸು, ಲಗತ್ತಿಸು, ಸೂತ್ರಿಸು.

नाद, पु. ಶಬ್ದ, ಧ್ವನಿ, ನಾದ; ಬಾನೆ, ದೋಣಿ.

नादना, अक्रि. ಶಬ್ದಮಾಡು, ಕೂಗಾಡು; ಚಿಗುರು, ಕೊನರು, ಕಳಕಳಿಸು.

नाद्ली, स्त्री. ರೋಗದ ಬಾಧೆಯುನ್ನು ನಿವಾರಿಸಲು ರಕ್ಷೆಯಾಗಿ ಧರಿಸುವ संग-यशब ಎಂಬ ಪಚ್ಚೆಕಲ್ಲಿನ ಬಿಲ್ಲೆ.

नादान, वि. ತಿಳಿವಳಿಕೆಯಿಲ್ಲದವ, ಅರಿಯದವ; ಅಜ್ಞಾನಿ, ದಡ್ಡ, ಪೆದ್ದ.

नादानिस्ता, वि. ತಿಳಿಯದೆ, ಅರಿಯದೆ.

नादानी, स्त्री. ಅಜ್ಞಾನ; ದಡ್ಡತನ.

नादार, वि. ನಿರಾಧಾರಿ, ನಾದಾರಿ, ನಿರ್ಧನ.

नादारी, स्त्री. ದಿವಾಳಿಖೋರತನ; ಬಡತನ, ದಾರಿದ್ರ್ಯ.

नादिम, वि. ಲಜ್ಜಿತ, ನಾಚಿಕೆಪಡುವ; ಪಶ್ಚಾತ್ತಾಪಪಡುವ.

नादिया, पु. ನಂದಿ, ಬಸವ; ಕಪಿಲೆ ಬಸವ, ಕವಲೆತ್ತು, ಕೋಲೆ ಬಸವ.

नादिर, वि. ಅದ್ಭುತ; ವಿಲಕ್ಷಣ; ಅಪರೂಪ; ಬಹುಮೂಲ್ಯವಾದ; ಆರಿಸಿದ, ಉತ್ಕೃಷ್ಟ. पु. ಕಾಣಿಕೆ, ಮುಯ್ಯಿ, ಬಹುಮಾನ.

नादिरगर्दी, स्त्री. ಕೆಟ್ಟ ಆಡಳಿತ, ಕೆಟ್ಟ ಆಳ್ವಿಕೆ.

नादिरशाही, स्त्री. ಗೊತ್ತುಗುರಿಯಿಲ್ಲದ ಆಡಳಿತ; ಅತ್ಯಾಚಾರ; ಜುಲುಂ. वि. ಕಡುದಾದ, ಉಗ್ರ.

नादिरा, पु. ಅಪರೂಪದ ವಸ್ತು; ಅನ್ಯಾದೃಶವಾದ ವಸ್ತು ಅಥವಾ ಮನುಷ್ಯ.

नादिरी, स्त्री. ಅಪರೂಪ; ಉತ್ತಮ, ಉತ್ಕರ್ಷ; ಒಂದು ಬಗೆ ಜುಬ್ಬ.

नादिहंद, वि. ಕೊಡದಿರುವವ; ಬಾಕಿದಾರ; ಲೋಭಿ, ಜುಗ್ಗ.

नादिहंदी, स्त्री. ಕೊಡದಿರುವಿಕೆ.

नादीदनी, वि. ನೋಡಲಾರದ, ನೋಡಲಾಗದ.

नादुरुस्त, वि. ಅಶುದ್ಧವಾದ, ಸರಿಯಿಲ್ಲದ; ಅಯುಕ್ತ; ವಕ್ರ.

नादुरुस्ती, स्त्री. ಅಶುದ್ಧ, ತಪ್ಪು; ವಕ್ರತೆ; ಅಕ್ರಮ.

नाधना, सक्रि. ನೊಗಕ್ಕೆ ಕಟ್ಟು, ಜೋಡಿಸು, ಹೂಡು; ತೊಡಗು, ಉಪಕ್ರಮಿಸು, ಪ್ರಾರಂಭಿಸು.

नां, क्रिवि. ಇಲ್ಲ, ಅಲ್ಲ.

नान, स्त्री. ಗೋಧಿರೊಟ್ಟಿ, ಚಪಾತಿ.

नानक-पंथ, पु. ಸಿಕ್ಖರ ಮತ.

नानकपंथी, नानकशाही, पु. ಗುರು ನಾನಕ್ ಇವರ ಅನುಯಾಯಿಗಳು, ಸಿಕ್ಖರು.

नानकार, पु. ಕಂಬಳ, ಆಯ, ಮಾನ್ಯ, ಉಂಬಳಿ; ಜೀವನಾಂಶ.

नान-खताई, स्त्री. ಬೆಣ್ಣೆ ಬಿಸ್ಕೀಟು.

नान-पज़, नानबा, नानबाई, पु. ರೊಟ್ಟಿ ಬಿಸ್ಕೀಟು ಮಾಡುವವ.

नानस, स्त्री. ಅತ್ತೆಯ ತಾಯಿ.

नानसा, पु. ಅತ್ತೆಯ ತಂದೆ.

नाना, वि. ಬಹುವಿಧವಾದ, ವಿವಿಧ पु. ತಾಯಿಯ ತಂದೆ, ಮಾತಾಮಹ, ಅಜ್ಜ; ಪುದಿನಾ ಸೊಪ್ಪು. सक्रि. ಬಾಗಿಸು, ಬಗ್ಗಿಸು; ಇಡು; ತುರುಕು; ಮಡಿಸು.

नानिगर, पु. ನೇಗಿಲು, ಲಾಂಗಲ.

नानिहाल, पु. =ननिहाल.

नानी, स्त्री. ತಾಯಿಯ ತಾಯಿ, ಮಾತಾಮಹಿ. नानी मर जाना=ಫಜೀತಿಯಾಗು, ಪೇಚಾಟವಾಗು.

ना-नुकर, पु. ಒಲ್ಲೆ.ಊಹೂ;ನಿರಾಕರಣೆ

नानू, पु. ಜೋಗುಳ, ಲಾಲಿ.

नान्ह, वि. ಚಿಕ್ಕ, ಸಣ್ಣ; ಕಿರಿಯ.

नाप, स्त्री. ಅಳತೆ; ಪರಿಮಾಣ, ಅಳತ; ವಿಸ್ತೀರ್ಣ; ಅಳೆಯುವಿಕೆ; ಅಳತೆಯ ಮಾನ; ಅಳೆಯುವ ಸಾಧನ; ಅಳೆಯುವ ಕೋಲು. नाप-जोख, नाप-तौल=ಅಳತೆ ತೂಕ, ಪರಿಮಾಣ.

नापना, सक्रि. ಅಳೆ, ಅಳತೆ ಮಾಡು.

नापसंद, नापसंदीदा, वि. ಪಸಂದಿಲ್ಲದ, ಇಷ್ಟವಿಲ್ಲದ; ಅಪ್ರಿಯ, ಮನಸ್ಸಿಗೆ ಒಪ್ಪದ.

नापसंदगी, नापसंदी, स्त्री. ಅರುಚಿ, ಅಪ್ರಿಯತೆ, ಮನಸ್ಸಿಗೆ ಒಪ್ಪದಿರುವಿಕೆ.

नापाक, वि. ಅಪವಿತ್ರ, ಅಶುದ್ಧ; ಕೊಳಕಾದ, ಮಲಿನ; ಲಂಪಟ.

नापाकी, स्त्री. ಅಪವಿತ್ರತೆ, ಅಶುದ್ಧತೆ; ಕೊಳಕು, ಮೈಲಿಗೆ; ಮಲ, ಗ್ರಾಮಸಾರ; ಪಟಿಂಗತನ.

नापायदार, वि. ಆಧಾರವಿಲ್ಲದ, ಬುಡವಿಲ್ಲದ; ಅಸ್ಥಿರ, ಚಂಚಲ.

नापायदारी, स्त्री. ಬುಡವಿಲ್ಲದಿರುವಿಕೆ; ಅಸ್ಥಿರತೆ, ಚಾಂಚಲ್ಯ.

नापास, वि. ತೇರ್ಗಡೆ ಹೊಂದದ, ಉತ್ತೀರ್ಣವಾಗದ, "ಪ್ಯಾಸ್" ಆಗದ, ನಪಾಸು.

नापित, पु. ನಾಪಿತ, ಕ್ಷೌರಕ, ಕೆಲಸಿಗ.

नापिती, स्त्री. ನಾಪಿತನ ಹೆಂಡತಿ.

नाफ़, स्त्री. ನಾಭಿ, ಹೊಕ್ಕಳು; ಮಧ್ಯ.

नाफ़रमां, वि. ಅವಿಧೇಯ; ಚಂಡಿ, ಹಠವಾದಿ; ಊದಾಬಣ್ಣದ ಹೂ.

नाफ़रमानी, स्त्री. ಅವಿಧೇಯತೆ; ಕಾನೂನುಭಂಗ; ಊದಾ ಬಣ್ಣ.

नाफ़हम, वि. ಅರಿಯದವ, ಅಜ್ಞಾನಿ; ತಿಳಿಯಲಾಗದ.

नाफ़हमी, स्त्री. ಅಜ್ಞಾನ, ಅವಿವೇಕ.

नाफ़ा, पु. ಕಸ್ತೂರಿ ಮೃಗದ ಹೊಕ್ಕುಳಿನ ಚೀಲ, ಮೃಗ ನಾಭಿ; ಕಸ್ತೂರಿ

नाफ़िस, वि. ಒಳಹೊಗುವ; ಭೇದಿಸುವ; ಮುಟ್ಟುವ, ತಗಲುವ; ಪ್ರಭಾವವುಳ್ಳ.

नाफ़ी, वि. ಉಪಯೋಗಕರ, ಪ್ರಯೋಜನವುಳ್ಳ; ಲಾಭಕರ, ಹಿತಕರ.

नाब, पु. ಸಂದುಗೆರೆ, ಪರಿಖೆ; ತೂಬು, ನಾಳ; ಕಾಲುವೆ. वि. ಶುದ್ಧ; ಅಪ್ಪಟ, ಅಚ್ಚ.

नाबकार, वि. ಕೆಲಸಕ್ಕೆ ಬಾರದ, ನಿರರ್ಥಕ; ತುಚ್ಛ, ನೀಚ; ದುಷ್ಟ, ಕೆಟ್ಟ; ನಿಷ್ಪ್ರಯೋಜಕ ವಸ್ತು ಅಥವಾ ಮನುಷ್ಯ.

नाबकारी, स्त्री. ನಿಷ್ಪ್ರಯೋಜಕತೆ; ನಿಕೃಷ್ಟತನ; ದುಷ್ಟತನ.

नाबलद, वि. ಪರದೇಶದವ, ವಿದೇಶಿ.

नाबदान, पु. ಚರಂಡಿ, ಮೋರಿ, ಜಲದಾರಿ, ಬಚ್ಚಲುಪರಿ.

नाबालिग़, वि. ಎಳೆಯ ವಯಸ್ಸಿನವ;

ಪೋಗಂಡ; ಅಪ್ರಾಪ್ತವಯಸ್ಕ, ಮೈನರ್; ಕಚ್ಚಾ.

नाबालिग़ी, स्त्री. ಚಿಕ್ಕ ವಯಸ್ಸು.

नाबीना, वि. ಕಣ್ಣಿಲ್ಲದವ, ಕುರುಡ.

नाबीनाई, स्त्री. ಕುರುಡು, ಕುರುಡತನ.

नाबूद, वि. ನಿರ್ಮೂಲವಾದ, ನಾಶವಾದ; ಅಳಿದ; ಅದೃಶ್ಯವಾದ

नाबूदी, स्त्री. ನಿರ್ನಾಮವಾಗುವಿಕೆ; ನಾಶ, ಅಳಿವು.

नाभक, पु. ಅಳಲೆಕಾಯಿ.

नाभि, स्त्री. ನಾಭಿ, ಹೊಕ್ಕಳು; ಚಕ್ರದ ಕುಂಭ, ಕೂಲುದುಂಬು; ಮಧ್ಯ, ಕೇಂದ್ರ; ಮುಖ್ಯಸ್ಥ; ಕಸ್ತೂರಿ.

नामंजूर, वि. ಒಪ್ಪಿಕೆಯಾಗದ, ಮಂಜೂರಾಗದ; ನಿರಾಕರಿಸಿದ; ಅಸ್ವೀಕೃತ.

नामंजूरी, स्त्री. ಅಸ್ವೀಕಾರ; ನಿರಾಕರಣೆ

नाम, पु. ನಾಮ, ನಾಮಧೇಯ, ಹೆಸರು; ಹೆಸರುವಾಸಿ, ಪ್ರಸಿದ್ಧಿ, ಯಶಸ್ಸು; ಮಾನ. क्रिवि. ಒಬ್ಬನ ಹೆಸರಿನಲ್ಲಿ; ಒಬ್ಬನ ಪರವಾಗಿ. नाम-ओ-निशान = ತಪಶೀಲು; ಗುರುತು; ಪತ್ತೆ, ತುಬ್ಬು. नाम लेना = ಹೆಸರೆತ್ತು, ಪ್ರಸ್ತಾಪವೆತ್ತು; ಜಪಿಸು. नाम लेवा = ಹೆಸರೆತ್ತಿ ಹೇಳುವವ, ಸ್ಮರಿಸುವವ; ವಂಶಸ್ಥ, ವಂಶಜ; ಉತ್ತರಾಧಿಕಾರಿ, ವಾರಸುದಾರ.

नामक, वि. ಹೆಸರುಳ್ಳ, ಹೆಸರಿನ.

नामकरण, पु. ಹೆಸರಿಡುವಿಕೆ, ನಾಮಕರಣ.

नामज़द, वि. ಹೆಸರು ಹೇಳಿದ, ಹೆಸರು ಕೊಟ್ಟ; ವಾಚಾದತ್ತ ಮಾಡಿದ; ಚುನಾವಣೆಗೆ ಹೆಸರು ಸೂಚಿಸಿದ; ಸದಸ್ಯನಾಗಿ 'ನಾಮಕರಣ' ಮಾಡಲ್ಪಟ್ಟ; ನೇಮಕವಾದ, ನಿಯೋಜಿತ; ಪ್ರಸಿದ್ಧ, ವಿಖ್ಯಾತ.

नाम-ठाम, पु. ಹೆಸರು ಮತ್ತು ವಿಳಾಸ; ತಪಶೀಲು, ವಿವರ.

नामदार, वि. ಹೆಸರುವಾಸಿಯಾದ.

नामदारी, स्त्री. ಹೆಸರುವಾಸಿ; ಖ್ಯಾತಿ.

नामधराई, स्त्री. ನಾಮಕರಣ; ಅಪಕೀರ್ತಿ, ಅಪಯಶಸ್ಸು, ಅಪಖ್ಯಾತಿ.

नामधाम, पु. ಹೆಸರು ಮತ್ತು ಸ್ಥಳ; ಪತ್ತೆ, ವಿಳಾಸ.

नामधारी, वि. ಹೆಸರುಳ್ಳ, ಹೆಸರಿನ.

नाम-निहाद, वि. ಹೆಸರಿಟ್ಟ; ಹೆಸರು ಹೇಳಿದ; ಮುಡುಪಿಟ್ಟ, ಮೀಸಲಾಗಿಟ್ಟ

नामर्द, वि. ಹೇಡಿ, ಪುಕ್ಕ, ನಪುಂಸಕ; ಹೆಣದತ್ತ, ನಾಮರ್ದ.

नामर्दगी, नामर्दी, स्त्री. ನಪುಂಸಕತನ, ಸೂಗ; ಪುಕ್ಕತನ, ಹೇಡಿತನ.

नामवर, नामावर, वि. ಹೆಸರುವಾಸಿಯಾದ, ವಿಖ್ಯಾತ.

नामवरी, नामावरी, स्त्री. ಹೆಸರುವಾಸಿ, ವಿಖ್ಯಾತಿ.

नामशेष, वि. ಹೆಸರು ಮಾತ್ರ ಉಳಿದಿರುವ; ಗತಿಸಿದ, ದಿವಂಗತ.

नामहदूद, वि. ಮೇರೆಯಿಲ್ಲದ, ಅಪರಿಮಿತ.

नामा, पु. ಪತ್ರ, ಓಲೆ, ಕಾಗದ; ನಿರೂಪ; ಪುಸ್ತಕ, ಗ್ರಂಥ; ವೃತ್ತಾಂತ, ಜೀವನ ಚರಿತ್ರ.

नामाकूल, वि. ಅನರ್ಹ, ಅನುಚಿತ; ಅನುಪಯುಕ್ತ; ಅಪ್ರಾಸಂಗಿಕ.

नामाबर, पु. ಪತ್ರವಾಹಕ, ಹರಿಕಾರ.

नामालूम, वि. ತಿಳಿಯದ, ಅರಿಯದ; ಅಪರಿಚಿತ; ಅನಿಶ್ಚಿತ.

नामावली, स्त्री. ಅಂಚಿನಲ್ಲಿ ದೇವರ ನಾಮ ಅಂಕಿತವಾದ ವಸ್ತ್ರ, ರಾಮ ನಾಮದ ವಸ್ತ್ರ.

नामिया, पु. ಬೆಳವಣಿಗೆ; ಪೈರುಪಚ್ಚೆ; ಪ್ರಾಣಿ; ದಂಟು, ಕಾಂಡ.

नामी, वि. ಹೆಸರಿನ; ಹೆಸರುವಾಸಿಯಾದ, ವಿಖ್ಯಾತ नामी गरामी=ಸುಪ್ರಸಿದ್ಧ.

नामुनासिब, वि. ಸರಿಯಲ್ಲದ, ಅನುಚಿತ; ಅಯುಕ್ತ; ಅವಲಕ್ಷಣವಾದ; ಅಸಂಗತ.

नामुनासिबत, स्त्री. ಅನುಚಿತ, ಅಸಂಗತ.

नामुबारक, वि. ಅಶುಭ; ಅಮಂಗಲ.

नामुमकिन, वि. ಅಸಂಭಾವ್ಯ, ಆಗದ.

नामुयस्सर, स्त्री. ಬಡತನ; ಕಷ್ಟ.

नामुराद, वि. ನಿಷ್ಫಲ, ಅತೃಪ್ತ; ವ್ಯರ್ಥ; ಅದೃಷ್ಟಹೀನ; ದುರದೃಷ್ಟ.

नामुरादी, स्त्री. ಅಸಫಲತೆ; ನೈರಾಶ್ಯ

नामुवाफ़िक़, वि. ವಿರುದ್ಧ, ಪ್ರತಿಕೂಲ; ಅನರ್ಹ; ಅಯುಕ್ತ.

नामुवाफ़िक़त, स्त्री. ವಿರೋಧ, ವೈಪರೀತ್ಯ; ಅನರ್ಹತೆ; ಅನುಪಯುಕ್ತತೆ

नामूस, स्त्री. ಖ್ಯಾತಿ; ಗೌರವ, ಮಾನ; ಸತೀತ್ವ, ಪಾತಿವ್ರತ್ಯ; ಅವಮಾನ.

नामूसी, स्त्री. ಅಪಯಶಸ್ಸು; ಅವಮಾನ

नामोनिशान, पु. ಗುರುತು, ಪತ್ತೆ, ಜಾಡು. नामो निशान न रहना = ನಿರ್ನಾಮವಾಗು, ನಿರ್ಮೂಲವಾಗು.

नायक, पु. ಮಾರ್ಗದರ್ಶಕ; ಮುಖಂಡ, ಮುಂದಾಳು; ಅಧಿಪತಿ, ನಾಯಕ; ಕುಣಿತ ಕಲಿಸುವವ, ನಟ್ಟುವಗಾರ; ಸಂಗೀತಗಾರ, ಕಲಾವಂತ, ಸಂಗೀತಜ್ಞ; ಸೈನ್ಯದಲ್ಲಿ ಕೆಳಗಿನ ದರ್ಜೆಯ ಒಬ್ಬ ಉದ್ಯೋಗಸ್ಥ, ನಾಯಕ್.

नायब, पु. ಒಬ್ಬನ ಪ್ರತಿಯಾಗಿ ಕೆಲಸ ಮಾಡುವವ, ಪ್ರತಿಹಸ್ತಕ; ಬದಲಿ; ಸಹಾಯಕ, ನಾಯಬ.

नायाब, वि. ದೊರಕದ, ಅಪ್ರಾಪ್ಯ.

नायिबी, स्त्री. नायब ನ ಸ್ಥಾನ ಅಥವಾ ಕೆಲಸ

नायिका, स्त्री. ಮುಖಂಡಳು; ಸುಂದರ ಸ್ತ್ರೀ; ಕಥಾನಾಯಕಿ; ನಾಯಕನ ಹೆಂಡತಿ; ಪತ್ನಿ, ಹೆಂಡತಿ; ಮಹಿಳೆ, ಸ್ತ್ರೀ; ಕುಂಟಣಗಿತ್ತಿ, ತಲೆಹಿಡಕಿ; ಸಂಗೀತಗಾತಿ.

नारंगी, नारंज, स्त्री. ಕಿತ್ತಳೆ ಹಣ್ಣು, ನಾರಂಗ; ಕಿತ್ತಳೆ ಬಣ್ಣ. वि. ಕಿತ್ತಳೆ ಬಣ್ಣದ.

नार, स्त्री. ಕಂಠ, ಕೊರಳು; ನೇಯಿಕಾರನ ಲಾಳಿ, ಅಟ್ಟೆ. पु. ನಾಡೆ, ಲಾಡಿ, ನವಾರ; ಹಗ್ಗ, ಮಿಣಿ; ನೊಗಪಟ್ಟಿ, ಜೊತ್ತಿಗೆ; ನಾಳ; ಹೊಕ್ಕಳು ಕುಡಿ; ಬೆಂಕಿ; ನರಕದ ಉರಿ; ನರಕ.

नारकी, वि. ನರಕಕ್ಕೆ ತಕ್ಕ; ಪಾಪಿ.

नारज़ामंद, वि. ಅಸಂತುಷ್ಟ; ಕುಪಿತ;

ಇಷ್ಟವಿಲ್ಲದ.

नारजीन, पु. ತೆಂಗು, ತೆಂಗಿನ ಮರ.

नारद, पु. ನಾರದ ಮುನಿ; ಕಲಹ ಹುಟ್ಟಿಸುವವ; ನಾಯಿ ತೊಣಚಿ; ಕೃಪಣ, ಲೋಭಿ.

नारना, सक्रि. ಅಳೆ ನೋಡು.

नार-बिवार, पु. ಗರ್ಭವೇಷ್ಟನ, ಮಾವಿ ಚೀಲ, ಮಾಸು.

ना-रवा, वि. ಅನುಚಿತ; ಅಯುಕ್ತ; ಚಾಲ್ತಿಯಲ್ಲಿಲ್ಲದ; ಬಿಕರಿಯಾಗದ.

नारवान, पु. ದಾಳಿಂಬೆ ಮರ.

ना-रसा, वि. ಅನರ್ಹ; ಅಸಮರ್ಥ; ಶೀಲವಿಲ್ಲದ.

ना-रसाई, स्त्री. ಅನರ್ಹತೆ; ಅಸಮರ್ಥತೆ; ಕೆಟ್ಟ ಶೀಲ.

नारा, पु. ನಾಡೆ, ಲಾಡಿ; ಹೊಕ್ಕಳು ಬಳ್ಳಿ; ಗೆಜ್ಜೆ ವಸ್ತ್ರ; ನೊಗಪಟ್ಟಿ, ಮಿಳಿ, ಜೊತ್ತಿಗೆ; ಕೂಗು, ಅಬ್ಬರ, ಘೋಷ

नाराच, पु. ಉಕ್ಕಿನ ಬಾಣ, ಅಂಬು.

नाराज़, वि. ಅಪ್ರಸನ್ನ; ಸಿಟ್ಟಾದ, ರೇಗಿದ. नाराज़ होना = ಸಿಟ್ಟಾಗು, ರೇಗು, ಕನಲು.

नाराज़गी, नाराज़ी, स्त्री. ಅಸಮಾಧಾನ; ಸಿಟ್ಟು, ಕೋಪ.

नारियल, पु. ತೆಂಗು; ತೆಂಗಿನ ಕಾಯಿ; ತೆಂಗಿನ ಕರಟದ ಹುಕ್ಕಾ; ಒಂದು ಬಗೆ ಬಾಣಬಿರುಸು.

नारियली, स्त्री. ತೆಂಗಿನ ಕರಟದ ಸವುಟು, ಅಗಪೆ; ತೆಂಗಿನ ಗಿಟಕು, ಕೊಬ್ಬರಿ; ತೆಂಗಿನ ಕರಟದ ಹುಕ್ಕಾ.

नारी, स्त्री. ಹೆಂಗಸು, ಸ್ತ್ರೀ, ನಾರಿ; ಮಡದಿ, ಪತ್ನಿ. वि. ಬೆಂಕಿಯ, ಅಗ್ನಿಯ; ಬೆಂಕಿ ತುಂಬಿದ; ನರಕದ.

नारू, पु. ಹೇನು; ನಾರುಹುಣ್ಣು.

नाल, पु. ದಂಟು, ತೊಟ್ಟು; ನಾಳ, ಕೊಳವಿ; ಊದುಗೊಳವಿ, ಕೋವಿ; ನೇಕಾರನ ಲಾಳಿ, ಅಟ್ಟೆ; ಹೊಕ್ಕಳು ಬಳ್ಳಿ; ನಾಭಿ; ನಾಲ; ಮೋರಿ, ಜಲದಾರಿ; ಗೊರಸು; ಲಾಳ, ಹಲ್ಲೆ; ಕತ್ತಿಯ ಒರೆಯ ತುದಿಯಲ್ಲಿರುವ ಅಣಸು ಅಥವಾ ಬಳೆ; ವ್ಯಾಯಾಮಕ್ಕಾಗಿ ಹಿಡಿ ಹಾಕಿದ ವರ್ತುಲಾಕಾರದ ಕಲ್ಲು, ಸಾಂಗ್ರಾಣೆ; ಬಾವಿಯ ತಳದಲ್ಲಿರುವ ಚೌಕಟ್ಟು, ಗೊಂಡಭಾವಿ ಚಕ್ರ; ಜೂಜುಗಾರರು ಜೂಜಿನ ಮನೆಗೆ ಕೊಡುವ ಬಾಡಿಗೆ ಹಣ.

नालकटाई, स्त्री. ಹುಟ್ಟಿದ ಕೂಸಿನ ಹೊಕ್ಕಳು ಬಳ್ಳಿ ಕೊಯ್ಯುವಿಕೆ.

नालकी, स्त्री. ಎರಡು ಪಕ್ಕಗಳಲ್ಲೂ ತೆರೆದಿರುವ ಪಲ್ಲಕ್ಕಿ, ಬಿಚ್ಚುಪಲ್ಲಕ್ಕಿ.

नालना, अक्रि. ಅಳು, ಹಲುಬು.

नालबंद, पु. ಲಾಳ ಕಟ್ಟುವವ, ನಾಲಬಂದಿ, ಲಾಳಕ, ಹಲ್ಲೆಕಾರ.

नालबंदी, स्त्री. ಲಾಳ ಕಟ್ಟುವಿಕೆ; ನಾಲಬಂದಿಯ ಕೆಲಸ.

नाला, पु. ಚರಂಡಿ, ಮೋರಿ; ನಾಲ, ಕಾಲುವೆ; ಜಲಪ್ರವಾಹ, ಹೊಳೆ; ಆರ್ತಧ್ವನಿ, ಅಳು; ದೂರು, ಫಿರ್ಯಾದು

नालायक़, वि. ಅಯೋಗ್ಯ, ಅನರ್ಹ; ಅನುಪಯುಕ್ತ; ಅನುಚಿತ.

नालायक़ी, स्त्री. ಅನರ್ಹತೆ, ಅಯೋಗ್ಯತೆ.

नालिका, स्त्री. ದಂಟು, ತೊಟ್ಟು; ಚಿಕ್ಕ ನಾಲ, ನಳಿಗೆ.

नालिश, स्त्री. ದೂರೆ, ದೂರು, ಫಿರ್ಯಾದು, ದೊಕದ್ದಮೆ, ಕಟ್ಲೆ.

नालिशी, पु. ದೂರಿಯಿಡುವವ; ಫಿರ್ಯಾದಿದಾರ, ವಾದಿ.

नाली, स्त्री. ನಾಲ, ದೋಣಿ, ಜಿಗಳು, ಚರಂಡಿ; ಕುದುರೆಯ ಬೆನ್ನಿನ ಕುಳಿ; ನಳಿಗೆ, ಗೊಟ್ಟು; ರಕ್ತನಾಳ, ಧಮನಿ.

नाव, स्त्री. ನಾವೆ, ದೋಣಿ, ನೌಕ.

नावक, पु. ತೀಕ್ಷ್ಣವಾದ ಚಿಕ್ಕ ಬಾಣ; ಜೇನು ಹುಳುವಿನ ಕೊಂಡಿ, ಮುಳ್ಳು; ನಳಿಗೆ; ನಾವಿಕ, ಓಡಗಾರ.

नावना, सक्रि. ಬಗ್ಗಿಸು; ಇಳಿಸು, ಅಂಸು.

नावर, स्त्री. ದೋಣಿ, ತೆಪ್ಪ; ತೆಪ್ಪೋತ್ಸವ

नावाक़िफ़, वि. ಅನಭಿಜ್ಞ, ಅಪರಿಚಿತ.

नावाजिब, वि. ಸರಿಯಿಲ್ಲದ; ಅನುಚಿತ

नावारिस, वि. ವಾರಸಿಲ್ಲದ, ಬೇವಾರಿಸಿ.

नाविक, पु. ನಾವಿಕ, ನಾವಾಡಿಗ, ಓಡಗಾರ; ಚುಕ್ಕಾಣಿಗಾರ.

नाश, पु. ನಾಶ; ಕೇಡು; ಅಳಿವು.

नाशक, वि. ನಾಶಮಾಡುವ; ವಿನಾಶಕ.

नाशपाती, स्त्री. ಮರಸೇಬು, ಬೇರಿಕಾಯಿ.

नाशाद, वि. ಅಪ್ರಸನ್ನ; ದುಃಖಿತ.

नाशाइस्तगी, स्त्री. ಅಸಭ್ಯತೆ, ಅಶಿಷ್ಟತೆ.

नाशाइस्ता, वि. ಅಶಿಷ್ಟ; ಅಸಭ್ಯ.

नाशुक्र, वि. ಕೃತಘ್ನ.

नाशुक्री, स्त्री. ಕೃತಘ್ನತೆ

नाश्ता, पु. ನಾಷ್ಟಾ, ನಾಶ್ತ, ನ್ಯಾರಿ, ಫಲಾಹಾರ, ಫರಾಳ, ಉಪಾಹಾರ.

नास, स्त्री. ನಾಸಿಕಾ ಚೂರ್ಣ, ನಸ್ಯ, ನಶ್ಯ; ನಾಶ, ಪೋಲು.

नासदान, पु. नासदानी, स्त्री. ನಶ್ಯದ ಡಬ್ಬಿ, ಹುಡಿಬುರುಡೆ.

नासबूरी, नासब्र, वि. ಅಸಹಿಷ್ಣು, ತಾಳ್ಮೆಯಿಲ್ಲದ.

नासमझ, वि. ಬುದ್ಧಿಯಿಲ್ಲದವ, ದಡ್ಡ.

नासमझी, स्त्री. ಅವಿವೇಕ, ದಡ್ಡತನ.

नासा, पु. ನಾಸಿಕೆ, ಮೂಗು; ಮೂಗಿನ ರಂಧ್ರ, ಹೊಳ್ಳೆ; ಮೂಗಿನ ಬಾವು.

नासाज़, वि. ಅಸ್ವಸ್ಥ, ಜಡ್ಡುಗೊಂಡ, ಹುಷಾರಿಲ್ಲದ; ವಿರುದ್ಧವಾದ; ಒರಟು.

नासापुट, पु. ಮೂಗಿನ ಹೊಳ್ಳೆ.

नासिका, स्त्री. ಮೂಗಿನ ಹೊಳ್ಳೆ; ಸೊಂಡಿಲು.

नासिख़, पु. ನಕಲು ಬರೆಯುವವ; ಹೊಡೆದು ಹಾಕುವವ, ರದ್ದುಗೊಳಿಸುವವ.

नासिज़, पु. ನೆಯಿಗೆಯವ, ಜಾಡ; ಕವನ ಮಾಡುವವ.

नासिया, पु. ಹಣೆ, ಲಲಾಟ

नासिर, पु. ಕಾಪಾಡುವವ, ರಕ್ಷಕ; ಸಹಾಯಕ; ಜೊತೆಗಾರ; ಗದ್ಯ ಲೇಖಕ.

नासूत, स्त्री. ಮನುಷ್ಯತನ; ಮನುಷ್ಯ, ಮಾನವ.

नासूर, पु. ಸೋರುವ ಹುಣ್ಣು, ನಾಡೀವ್ರಣ; ಭಂಗದರ.

नासिह, नासेह, पु. ಉಪದೇಶ, ಬೋಧನೆ; ಉಪದೇಶಕ, ಬೋಧಕ.

नास्तिक, पु. ದೇವರಲ್ಲಿ ನಂಬಿಕೆಯಿಲ್ಲದವ, ನಾಸ್ತಿಕ.

नास्तिकवाद, पु. ನಾಸ್ತಿಕರ ಮತ.

नाहंजार, वि. ಅಸಮ; ಹೆಚ್ಚು ಕಡಿಮೆಯಾದ; ಒರಟಾದ; ದುಷ್ಟ, ದುರುಳ; ದುರ್ಮಾರ್ಗಿ; ಭಾಗ್ಯಹೀನ.

नाहंजारी, स्त्री. ದುರ್ಮಾರ್ಗ; ದುರುಳತನ; ಒರಟುತನ; ಅಶಿಷ್ಟತೆ, ಅಸಭ್ಯತೆ

नाह, पु. ನಾಥ, ಯಜಮಾನ; ಪತಿ; ಗಾಡಿ ಚಕ್ರದ ಗುಮ್ಮ, ಗಾಡಿ ಚಕ್ರದ ತುಮುರು. क्रिवि. ಅಲ್ಲ; ಇಲ್ಲ, ಊಹೂ.

नाहक़, वि. ನ್ಯಾಯವಲ್ಲದ; ಕ್ರಮವಲ್ಲದ; ಅನಧಿಕೃತ; ಅನ್ಯಾಯವಾದ. क्रिवि. ಅನ್ಯಾಯವಾಗಿ; ಅಕ್ರಮವಾಗಿ; ವ್ಯರ್ಥವಾಗಿ. पु. ಅನ್ಯಾಯ; ಅಪದ್ಧ, ಸುಳ್ಳು.

नाह-नूह, स्त्री. ಒಲ್ಲೆ ಅನ್ನುವಿಕೆ, ಊಹೂ. नाह नूह करना = ಒಲ್ಲೆ ಅನ್ನು, ಊಹೂ ಅನ್ನು, ನಿರಾಕರಿಸು.

ना-हमवार, वि. ತರಕಲಾದ, ದರಕು.

नाहर, पु. ಸಿಂಹ, ಹುಲಿ

नाहरू, पु. ನಾರುಹುಣ್ಣು.

नाहीं, क्रिवि. ಇಲ್ಲ, ಅಲ್ಲ.

निंगलना, सक्रि. = निगलना.

निंगलाना, सक्रि. = निगलाना.

निंदक, वि. ನಿಂದೆಮಾಡುವವ, ನಿಂದಕ

निंदन, पु. ನಿಂದಿಸುವಿಕೆ, ನಿಂದೆ.

निंदना, सक्रि. ನಿಂದಿಸು, ಬಯ್ಯು.

निंदा, स्त्री. ನಿಂದೆ, ದೂಷಣೆ.

निंदास, स्त्री. ತೂಕಡಿಕೆ, ಜೊಂಪು.

निंदासा, वि. ತೂಕಡಿಸುವ.

निंदिया, स्त्री. ನಿದ್ರೆ, ನಿದ್ದೆ.

निंबू, पु. ನಿಂಬೆಹಣ್ಣು.

निःशंक, वि. ನಿರ್ಭಯವಾದ; ಸಂಕೋಚವಿಲ್ಲದ.

निःसंदेह, वि. ಸಂದೇಹವಿಲ್ಲದ, ಸಂಶಯವಿಲ್ಲದ. क्रिवि. ನಿಸ್ಸಂದೇಹವಾಗಿ, ಖಂಡಿತ.

निःस्वार्थ, वि. ಸ್ವಾರ್ಥವಲ್ಲದ.

निअराना, अक्रि. = नियराना.

निआन, पु. ಅಂತ, ಕೊನೆ. अव्य. ಕೊನೆಗೆ, ಕಡೆಗೆ.

निकंटक, वि. ಅಭ್ಯಂತರವಿಲ್ಲದ, ನಿರ್ವಿಘ್ನ.

निकट, वि. ಹತ್ತಿರದ, ಸಮೀಪದ; ಸೇರಿದ, ನೆರೆಯ. क्रिवि. ಹತ್ತಿರ, ಬಳಿ, ಸಮೀಪದಲ್ಲಿ.

निकटता, स्त्री. ಸಾಮೀಪ್ಯ; ಹತ್ತಿರ, ನೆರೆ

निकटवर्त्ती, वि. ಹತ್ತಿರದಲ್ಲಿರುವ.

निकती, स्त्री. ಸಣ್ಣ ತಕ್ಕಡಿ; ಒಂದು ಮಿಠಾಯಿ.

निकम्मा, वि. ಕೆಲಸವಿಲ್ಲದ; ಕೆಲಸಕ್ಕೆ ಬಾರದ, ನಿರರ್ಥಕ; ನಿಷ್ಪ್ರಯೋಜಕ; ನೀಚ; ದರಿದ್ರ, ಬಡ.

निकर, पु. ಸಮೂಹ, ಸಮುದಾಯ; ರಾಶಿ, ಕುಪ್ಪೆ; ನಿಧಿ; ಸಾರ.

निकर्मा, वि. ಸೋಮಾರಿ, ಮೈಗಳ್ಳ.

निकल, पु. ಹೊರಡುವಿಕೆ, ಹೊರ ಬೀಳುವಿಕೆ.

निकलना, सक्रि. ಹೊರಡು; ಹೊರ ಪಡು; ಉಗು; ಏಳು, ಹುಟ್ಟು; ಮೂಡು; ಪರಿಣಮಿಸು; ಸಿದ್ಧವಾಗು, ಸಲ್ಲು; ಪಾರಾಗು, ತೀರ್ಗಡೆಹೊಂದು; ಒಗ್ಗು, ಪಳಗು.

निकलवाना, सक्रि. निकालना का प्रे. रूप.

निकसना, अक्रि. = निकलना.

निकाई, स्त्री. ಸೌಂದರ್ಯ, ಚೆಲುವು, ಚಂದ; ಒಳ್ಳೆಯತನ, ನಲ್ಮೆ; ಕಳೆ ಕೀಳುವಿಕೆ; ಕಳೆ ಕೀಳುವುದರ ಕೂಲಿ.

निकाज, वि. ಕೆಲಸವಿಲ್ಲದವ.

निकाना, सक्रि. ಕಳೆ ತೆಗೆ, ಕಳೆ ಕೀಳು.

निकाम, वि. ಕೆಲಸವಿಲ್ಲದ; ಕೆಲಸಕ್ಕೆ ಬಾರದ, ವ್ಯರ್ಥ; ನಿರರ್ಥಕ. क्रिवि ವ್ಯರ್ಥವಾಗಿ, ಸುಮ್ಮನೆ

निकास, पु. ಹೊರಡಿಸುವಿಕೆ ಬಹಿಷ್ಕರಣ; ಸಾಗಿಸುವಿಕೆ; ಉಪಾಯ; ದಾರಿ.

निकासन, स्त्री. ತೆಗೆಯುವಿಕೆ, ಹೊರ ಗೆಡವುವಿಕೆ.

निकालना, सक्रि. ಹೊರಡಿಸು; ಹೊರ ಪಡಿಸು; ಪ್ರಕಟಿಸು; ತೆಗೆ, ತೆಗೆದು ಹಾಕು; ಆಯು; ಬಿಡಿಸು; ಗೊತ್ತು ಮಾಡು, ನಿರ್ಧಾರಮಾಡು; ಕಲ್ಪಿಸು, ಹುಟ್ಟಿಸು; ಒದಗಿಸು; ಕುದುರೆಯನ್ನು ಪಳಗಿಸು; ಕಸೂತಿಹಾಕು; ಮೊಟ್ಟೆಗೆ ಕಾವು ಕೊಡು. जवाब निकालना = ಉತ್ತರ ಕಂಡುಹಿಡಿ, ಗೊತ್ತು ಮಾಡು. हिसाब निकालना = ಲೆಕ್ಕ ನೋಡಿ ನಿಲುವು ಬಾಕಿ ಗೊತ್ತುಮಾಡು.

निकाला, पु. ಹೊರಡಿಸುವಿಕೆ, ಬಹಿಷ್ಕರಣ; ಗಡೀಪಾರು, ದೇಶಭ್ರಷ್ಟತೆ.

निकास, पु. ಹೊರಡುವಿಕೆ; ಉತ್ಪತ್ತಿ, ಹುಟ್ಟುವಳಿ; ಹುಟ್ಟು, ಉತ್ಪತ್ತಿ ಸ್ಥಾನ; ಮೂಲಸ್ಥಾನ; ಪ್ರವೇಶ, ದ್ವಾರ; ತೂಬು, ಕೋಡಿ; ಮೇರೆ, ಸರಹದ್ದು, ಗಡಿ, ಬಯಲು; ಬಿಕರಿ; ಮಹಸೂಲು

निकासना, सक्रि. = निकालना.

निकासी, स्त्री. ಹೊರಡುವಿಕೆ, ನಿರ್ಗಮನ; ಹುಟ್ಟುವಳಿ, ವರಮಾನ; ಮಾರಾಟ; ಸರಕು ಕಳುಹಿಸುವಿಕೆ, ರಫ್ತು; ಸರಕಿನ ಮೇಲಿನ ಸುಂಕ; ಸುಂಕದ ಚೀಟಿ, ರಹದಾರಿ ಚೀಟಿ; ಜಾಬಿತ

निकास्ता, पु. ಕಂಬ, ಊರೆ, ಊತು, ಆಧಾರ.

निकाह, पु. ಮಹಮ್ಮದೀಯರ ವಿವಾಹ, ಮದುವೆ

निकाही, वि. ಮದುವೆಯಾದ (ಸ್ತ್ರೀ)

निकियाई, स्त्री. ಸೀಳುವಿಕೆ; ಸೀಳುವುದರ ಕೂಲಿ.

निकियाना, सक्रि. ಹರಿ, ಸೀಳು; ಕಿತ್ತು ಹಾಕು, ಸಿಗಿ.

निकी, स्त्री. ಸಣ್ಣ ತಕ್ಕಡಿ

निकुंज, पु. ಲತಾಮಂಟಪ, ನಿಕುಂಜ.

निकृष्ट, वि. ನೀಚ, ನಿಕೃಷ್ಟವಾದ.

निकृष्टता, स्त्री. ನೀಚತನ, ಹೀನತನ.

निको, वि. ಸುಂದರವಾದ, ಒಳ್ಳೆಯ.

निकोई, स्त्री. ಒಳ್ಳೆಯತನ; ಸೌಂದರ್ಯ;

ಆರೋಗ್ಯ, ಸ್ವಾಸ್ಥ್ಯ.

निकोनाम, वि. ಒಳ್ಳೆಯ ಹೆಸರುಪಡೆದ; ವಿಖ್ಯಾತ.

निकोसना, सक्रि. ಹಲ್ಲು ಕಿಸಿ. ಹಲ್ಲುಕಿರಿ

निकौड़िया, वि. ಕಾಸಿಲ್ಲದವ; ದರಿದ್ರ, ಬಡವ, ಗರೀಬ.

निक्का, वि. ಚಿಕ್ಕ, ಸಣ್ಣ; ಪುಟ್ಟ.

निक्षेप, पु. ಎಸೆಯುವಿಕೆ; ತ್ಯಜಿಸುವಿಕೆ; ಇಡುವಿಕೆ, ಠೇವಣಾತಿ; ನಿಧಿ

निखंग, पु. ನಿಷಂಗ, ಬತ್ತಳಿಕೆ, ಮೂಡಿಗೆ, ತೂಣೀರ.

निखंड, वि. ಸರಿಮಧ್ಯ, ನಡು.

निखट्टू, वि. ಕೆಲಸವಿಲ್ಲದವ; ಕೆಲಸಕ್ಕೆ ಬಾರದವ; ಉಂಡಾಡಿ; ಸೋಮಾರಿ; ದುಂದುಗಾರ.

निखद, वि. ಅನಿಷ್ಟ, ಅಶುಭ; ಕೆಟ್ಟ.

निखरना, अक्रि. ನಿರ್ಮಲವಾಗು; ತಿಳಿಗಟ್ಟು, ತಿಳಿ; ಹೊಳೆಯು; ಕುದುರು.

निखरवाना, **निखराना**, सक्रि. ತಿಳಿಗಟ್ಟಿಸ; ಕುದುರಿಸು, ಶುಭ್ರಮಾಡು.

निखरा, वि. ಶುದ್ಧವಾದ, ಶುಭ್ರ.

निखरी, स्त्री. ತುಪ್ಪದಲ್ಲಿ ಮಾಡಿದ ಅಡಿಗೆ, ಘೃತಪಕ್ವ.

निखार, पु. ನಿರ್ಮಲತೆ; ತಿಳಿ; ಸ್ವಚ್ಛತೆ; ಪರಿಷ್ಕಾರ

निखारना, सक्रि. ತೊಳೆ; ನಿರ್ಮಲಮಾಡು, ಶುದ್ಧಿಮಾಡು; ಪರಿಷ್ಕರಿಸು; ಸುಲಿ.

निखालिस, वि. ಅಪ್ಪಟ, ಅಚ್ಚ.

निखिल, वि. ಸಮಸ್ತ, ಸರ್ವ.

निखेद, वि. ದುಃಖರಹಿತ. पु. ನಿಷೇಧ, ನಿರೋಧ, ತಡೆ.

निखोट, वि. ದೋಷ ಅಥವಾ ಕಲಂಕ ವಿಲ್ಲದ; ಶುದ್ಧ, ನಿರ್ಮಲ; ಪವಿತ್ರ; ನಿಷ್ಕಪಟ, ಸರಳ. क्रिवि. ನಿಷ್ಕಪಟವಾಗಿ, ನಿರಾತಂಕವಾಗಿ.

निखोरना, सक्रि. ಸುಲಿ, ಸಿಪ್ಪೆ ತೆಗಿ.

निखोरा, वि. ದಯಾರಹಿತ, ಕ್ರೂರ.

निगंदना, सक्रि. ಸುಪ್ಪತ್ತಿಗೆಗೆ ಟಾಕ ಹಾಕು, ತಡೀ ಹೊಲಿ.

निगंदा, पु. **निगंदाई**, स्त्री. ರಜಾಯಿ ಅಥವಾ ತಡೀ ಹೊಲಿಯುವಿಕೆ.

निगड़, स्त्री. ಸರಪಣಿ, ಸಂಕೋಲೆ, ಬೇಡಿ

निगर, वि. ಗಟ್ಟಿ, ದೃಢ. पु. ನುಂಗುವಿಕೆ

निगराँ, पु. ರಕ್ಷಕ; ಸಂರಕ್ಷಕ, ಪಾಲಕ; ಮೇಲ್ವಿಚಾರಕ.

निगरानी, स्त्री. ಕಣ್ಣೋಟ, ಕಣ್ಗಾವಲು; ಮೇಲ್ವಿಚಾರಣೆ, ಪಾರುಪತ್ಯ; ಪರಾಂಬರಿಕೆ, ಉಸ್ತುವಾರಿ.

निगरू, वि. ಹಗುರ, ಲಘು.

निगलना, सक्रि. ನುಂಗು, ನೊಣೆ, ಕಬಳಿಸು.

निगह, स्त्री. = **निगाह**.

निगहबान, पु. ಕಾಯುವವ, ಕಾಪಾಡುವವ; ಸಂರಕ್ಷಕ, ಪಾಲಕ.

निगहबानी, स्त्री. ಮೇಗಾವಲು, ಸಂರಕ್ಷಣೆ, ಪರಾಂಬರಿಕೆ.

निगार, स्त्री. ಚಿತ್ರ; ಹೂವಿನ ಕೆಲಸ, ಕಸೂತಿ; ನಕಾಸಿ; ಗೋರಂಟಿ, ಮದರಂಗಿ; ಸಿಂಗಾರ; ಸುಂದರಿ, ಚೆಲುವಿ;

ಪ್ರೀತಿಸಿಕೆ, ಪ್ರಿಯೆ.

निगारी, स्त्री. ಚಿತ್ರ; ಅಲಂಕಾರ, ಸಿಂಗಾರ.

निगारीन, वि. ಅಲಂಕೃತ, ಸಿಂಗರಿಸಿದ

निगाली, स्त्री. ಹುಕ್ಕಾವಿನ ಕೊಳವೆ.

निगाह, स्त्री. ದೃಷ್ಟಿ, ನೋಟ; ನೋಡುವಿಕೆ, ವೀಕ್ಷಣ; ಕೃಪಾದೃಷ್ಟಿ; ಪರಾಂಬರಿಕೆ; ಗಮನ, ನಿಗಾ.

निगाही, वि. ದೃಷ್ಟಿಯ, ನೋಟದ.

निगूढ़, वि. ಗೂಢ, ಗುಪ್ತ, ರಹಸ್ಯ.

निगून, वि. ಬಾಗಿದ, ಬಗ್ಗಿದ; ತಲೆ ಕೆಳಕಾದ, ಬುಡಮೇಲಾದ.

निगोड़ा, वि. ಕುಂಟ, ಹೆಳವ; ಅಶಕ್ತ; ದಿಕ್ಕಿಲ್ಲದವ. निगोड़ा नाठा = ಅನಾಥ, ದಿಕ್ಕಿಲ್ಲದವ; ಒಬ್ಬಂಟಿಗ, ಅಣ್ಣಾ ಒಂಟಿಗಾರ; ನಿರ್ಭಾಗ್ಯ; ಪೋಕರಿ, ದುರುಳ.

निग्रह, पु. ತಡೆ; ಅಡಗಿಸುವಿಕೆ, ದಮನ, ನಿಗ್ರಹ; ದಂಡನೆ.

निघंटु, पु. ಶಬ್ದಕೋಶ, ನಿಘಂಟು.

निघटना, अक्रि. ಕಡಮೆಯಾಗು, ಇಳಿ, ಕುಗ್ಗು.

निघर-घट, वि. ಮನೆಮಠವಿಲ್ಲದ, ದಿಕ್ಕಿಲ್ಲದ; ನಿರ್ಲಜ್ಜ, ನಾಚಿಕೆಗೇಡಿ.

निघरा, निघरू, वि. ದಿಕ್ಕು ದಿವಾಳವಿಲ್ಲದ, ಬೇವಾರಸಿ; ಉಂಡಾಡಿ.

निघाति, स्त्री. ಕಬ್ಬಿಣದ ಗದೆ.

निचय, पु. ನಿಶ್ಚಯ; ಸಮೂಹ, ಗುಂಪು

निचला, वि. ಕೆಳಗಿನ, ಕೆಳಗಣ.

निचाई, स्त्री. ತಗ್ಗು; ಆಳ; ಕೆಳಗಾಗುವಿಕೆ; ಕೀಳಾತನ, ನೀಚತನ.

निचाट, वि. ಬೆಂಗಾಡಾದ, ಅರಗಾಡು

निचान, स्त्री. ತಗ್ಗು; ಹಳ್ಳ; ಇಳಕಲು, ಇಳಿಜಾರು.

निचिंत, वि. ನಿಶ್ಚಿಂತೆಯಾದ.

निचडना, निचुडना, अक्रि. ಒಸರು, ಸೋರು, ಜಿನಿ; ನಿಸ್ಸಾರವಾಗು, ಬತ್ತಿ ಹೋಗು, ಸೊರಗು.

निचड़वाना, निचुड़वाना, सक्रि. "निचड़ना" का प्रे. रूप.

निचोड़, पु. ಹಿಂಡಿದ್ದು; ರಸ, ಸತ್ವ; ತಿರುಳು, ಸಾರ, ಸಾರಾಂಶ; ಮುಕ್ತಾಯ

निचोड़ना, सक्रि. ಹಿಂಡು, ಕಿವುಚು; ಹಿಂಡಿತೆಗೆ, ಸಾರತೆಗೆ; ದೋಚಿಕೊಳ್ಳು

निचोड़वा, निचोड़ू, वि. ಹಿಂಡುವವ; ಅಪಹರಿಸುವವ; ದೋಚಿಕೊಳ್ಳುವವ; ಲೋಭಿ.

निचोल, पु. ಹೆಂಗಸರ ವಸ್ತ್ರ, ಅಡ್ಡ ಸೆರಗು; ಮುಸುಕು; ಹೊದಿಕೆ.

निचोवना, सक्रि. = निचोड़ना.

निचौहाँ, वि. ಬಗ್ಗಿದ, ಬಾಗಿದ.

निचौहें, क्रिवि. ಕೆಳಗಡೆ.

निछक्का, वि. ದೋಷರಹಿತ; ಶುದ್ಧವಾದ, ಅಪ್ಪಟ; ಪ್ರತ್ಯೇಕವಾದ, ಏಕಾಂತ.

निछत्र, वि. ಛತ್ರಿ ಅಥವಾ ರಾಜಚಿಹ್ನೆಗಳಿಲ್ಲದ.

निछनियां, क्रिवि. ಸಂಪೂರ್ಣವಾಗಿ; ಒಂದೇ ಸಾರಿ.

निछल, वि. ನಿಷ್ಕಪಟ, ಯಥಾರ್ಥ;

ಶುದ್ಧ, ಅಪ್ಪಟ, ಸಾಚಾ.

निछान, वि. ಶುದ್ಧ, ಅಚ್ಚ. क्रिवि. ಪೂರ್ತಿಯಾಗಿ, ಒಟ್ಟಿಗೆ.

निछावर, स्त्री. ದೃಷ್ಟಿ ಇಳಿಸುವಿಕೆ, ಇಳಿ ತೆಗೆಯುವಿಕೆ, ನಿವಾಳಿ; ಕರಿ ಹರಿಯುವಿಕೆ; ನಿವಾಳಿಗೆ ಉಪಯೋಗಿಸಿದ ವಸ್ತು; ನಿವಾಳಿ ತೆಗೆದ ವಸ್ತುವನ್ನು ದಾನ ಕೊಡುವಿಕೆ, ವಿನಿಯೋಗ; ಧಾರೆಯೆರೆಯುವಿಕೆ, ದಾನ; ಆಹುತಿ, ಬಲಿ. निछावर होना = ಆಹುತಿಯಾಗು, ಬಲಿಯಾಗು.

निछोह, निछोही, वि. ಪ್ರೀತಿಯಿಲ್ಲದ; ನಿರ್ದಯ.

निज, वि. ತನ್ನ, ಸ್ವಂತ; ಸ್ವಕೀಯ; ವೈಯಕ್ತಿಕ; ನಿಜ, ಯಥಾರ್ಥ; ನಿಶ್ಚಯ; ಮುಖ್ಯವಾದ.

निजतिज, पु. ಔಚಿತ್ಯ; ಸುಧಾರಣೆ, ತಿದ್ದುಪಾಟು

निजा, स्त्री. ಧರ್ಮಪತ್ನಿ; ಸತಿ.

निज़ाम, पु. ಮುತ್ತಿನ ಸರ; ರೂಢಿ, ವಾಡಿಕೆ; ಅಸ್ತಿವಾರ; ಕ್ರಮ, ಕಟ್ಟುಪಾಡು; ವ್ಯವಸ್ಥೆ, ಏರ್ಪಾಟು; ಕವನ ಕಟ್ಟುವಿಕೆ; ಶಾಸಕ, ಮಾಂಡಲಿಕ; ಹೈದರಾಬಾದಿನ ನವಾಬರ ಬಿರುದು.

निज़ामत, स्त्री. ವ್ಯವಸ್ಥೆ; ಆಡಳಿತ; ವ್ಯವಸ್ಥಾಪಕರ ಉದ್ಯೋಗ ಅಥವಾ ಕಛೇರಿ.

निज़ार, वि. ಸಣಕಲ, ಬಡಕಲ.

निज़ारी, स्त्री. ಸಣಕಲು, ಬಡಕಲು.

निज़ी, निजू, वि. ತನ್ನ, ಸ್ವಂತ; ಸ್ವಕೀಯ; ಆತ್ಮೀಯ.

निज्झर, पु. ಜಲಪಾತ, ಜೋಗು; ಸಣ್ಣ ಹೊಳೆ, ಝರಿ.

निझतिझ, पु ಹೊಂದಿಕೆ, ಔಚಿತ್ಯ; ಸುಧಾರಣೆ, ತಿದ್ದುಪಾಟು.

निझरना, अक्रि. ಉದುರಿಹೋಗು, ತೊಳ್ಳೆಯಾಗು; ನಿಸ್ಸಾರವಾಗು; ಒಣಗಿ ಹೋಗು; ದೋಷಮುಕ್ತನಾಗು.

निझाना, सक्रि. ನೋಡು; ಹೊಂಚು ನೋಡು.

निझोटना, सक्रि. ಹರಿ, ಕೀಳು, ಸೆಳೆ.

निझोल, वि. ನಿಧಾನವಾಗಿ ಹೋಗುವ.

निटारा, पु. = **निबटेरा**.

निटोल, पु. ಪಟ್ಟಣದ ಒಂದು ಭಾಗ, ಮೊಹಲ್ಲ.

निठल्ला, निठल्लू, वि. ಕೆಲಸವಿಲ್ಲದವ; ನಿರುದ್ಯೋಗಿ; ವ್ಯರ್ಥವಾದ.

निठाला, पु. ತೆರಪು; ಬಿಡುವು, ಪುರಸತ್ತು; ಪರಮಾನವಿಲ್ಲದ ಕಾಲ ಅಥವಾ ಸ್ಥಿತಿ, ಮಂದ.

निठुर, वि. ನಿಷ್ಠುರ; ಕ್ರೂರ; ಕಠಿಣ.

निठुरता, निठुराई, स्त्री. ಕ್ರೂರತನ, ಕ್ರೌರ್ಯ; ಕಲ್ಲೆದೆ.

निठौर, पु. ಕೆಟ್ಟ ಸ್ಥಾನ; ದುರ್ದೆಶೆ.

निडर, वि. ಹೆದರದ; ನಿರ್ಭೀತ; ಸಾಹಸಿ, ಎದೆಗಾರ, ದಿಟ್ಟ.

निडरता, निडरताई, निडरी, स्त्री. **निडरपन**, पु. ನಿರ್ಭಯತೆ; ಸಾಹಸ.

निढाल, वि. ಆಯಾಸಪಟ್ಟ, ದಣಿದ; ಉತ್ಸಾಹಗುಂದಿದ, ತಣ್ಣಗಾದ.

निढिल, वि. ಬಿಗಿ, ಗುತ್ತ, ಗಟ್ಟಿ.

नितंब, पु. ಪೃಷ್ಠ, ಪಿರ್ರೆ; ಉಬ್ಬು; ಹೆಗಲು.

नित, क्रिवि. ಸದಾ, ಯಾವಾಗಲೂ, ನಿತ್ಯ. नित नित=ಪ್ರತಿ ನಿತ್ಯ.

नितांत, वि. ಬಹಳ, ತುಂಬ, ಹೆಚ್ಚು.

नित्य, वि. ನಿತ್ಯವಾದ, ಶಾಶ್ವತ; ಪ್ರತಿದಿವಸದ, ನಿತ್ಯ. क्रिवि. ಪ್ರತಿನಿತ್ಯ; ಯಾವಾಗಲೂ, ಸದಾ.

नित्यता, स्त्री. ನಿತ್ಯತ್ವ, ಶಾಶ್ವತತ್ವ.

नित्यनियम, पु. ನಿತ್ಯಗಟ್ಟಳೆ.

निथरना, अक्रि. ತಿಳಿಗಟ್ಟು, ತಿಳಿ, ತೇಟೆಯಾಗು.

निथरा, वि. ತಿಳಿಗಟ್ಟಿದ; ಶುದ್ಧವಾದ.

निथार, पु. ತಿಳಿಗಟ್ಟಿದ ನೀರು; ಕಟ್ಟು; ಗಸಿ, ರಾಡಿ; ಮಷ್ಟು, ಬಂಡು

निथारना, सक्रि. ತಿಳಿಯಿಡು, ತೇರಿಕ್ಕು, ತೇಟೆ ಮಾಡು; ಬಸಿ, ತಿಳಿಸುರಿಸು.

निदना, अक्रि. ನಿದ್ದೆಹೋಗು, ನಿದ್ರಿಸು

निदरना, सक्रि. ಅನಾದರಮಾಡು; ತಿರಸ್ಕರಿಸು; ಭಂಗಪಡಿಸು, ಸೋಲಿಸು.

निदर्शन, पु. ತೋರಿಸುವಿಕೆ; ನಿದರ್ಶನ, ತಾರ್ಕಣೆ.

निदहना, सक्रि. ಉರಿಸು, ಸುಡು

निदा, स्त्री. ಕೂಗುವಿಕೆ; ಕರೆ; ಸಾರುವಿಕೆ, ಘೋಷಣೆ; ಶಬ್ದ, ಧ್ವನಿ; ಆಕಾಶವಾಣಿ

निदाई, स्त्री. ಕಳೆಕೀಳುವಿಕೆ; ಕೊಯ್ಲು

निदाघ, पु. ಉಷ್ಣ; ಧಗೆ, ಝಳ; ಬಿಸಿಲು, ಬೇಸಗೆ.

निदान, पु. ಮೂಲ, ಕಾರಣ; ರೋಗಲಕ್ಷಣ, ರೋಗಪರೀಕ್ಷಣ. क्रिवि. ಕೊನೆಗೆ, ಕಡೆಗೆ, ಕಡೆಯದಾಗಿ; ಕನಿಷ್ಠಪಕ್ಷ वि. ಕಡೆಯದು; ಕೀಳಾದ.

निदाना, सक्रि. ಕಳೆ ಕೀಳು, ಕಳೆ ತೆಗೆ; ಕೊಯ್ಯು, ಕಟಾಯಿಸು.

निद्रालू, वि. ನಿದ್ರಿಸುವ; ಜೂಗಳಿಸುವ, ಸೋಮಾರಿ.

निदेश, पु. ಶಾಸನ, ಆಜ್ಞೆ, ಅಣತಿ; ಕಥನ, ಹೇಳಿಕೆ; ಉಪದೇಶ; ಪಕ್ಕ, ನೆರೆ

निद्रा, स्त्री. ನಿದ್ರೆ, ನಿದ್ದೆ.

निधड़क, वि. ಹೆದರದ, ನಿರ್ಭೀತ. क्रिवि. ಅಭ್ಯಂತರವಿಲ್ಲದೆ, ತಡೆಯಿಲ್ಲದೆ; ನಿಶ್ಚಿಂತೆಯಾಗಿ, ದುಡುಮ್ಮನೆ.

निधन, पु. ಕೊನೆ, ಮುಕ್ತಾಯ, ನಾಶ, ಅಳಿವು; ಸಾವು, ನಿಧನ; ಕುಲ, ಕುಲಪತಿ. वि. ನಿರ್ಧನ; ಬಡ.

निधनता, स्त्री. ಬಡತನ, ದಾರಿದ್ರ್ಯ.

निधनी, वि. ನಿರ್ಧನ, ಬಡ, ಗರೀಬ.

निधान, पु. ಆಧಾರ, ಆಶ್ರಯ; ಭಂಡಾರ, ಬೊಕ್ಕಸ, ನಿಧಿ.

निधि, स्त्री. ಭಂಡಾರ; ನಿಧಿ, ಇಡಿಗಂಟು

निनरा, वि. ಪ್ರತ್ಯೇಕ, ಬೇರೆ.

निनाद, पु. ನಾದ, ಶಬ್ದ.

निनादी, वि. ಶಬ್ದಮಾಡುವ.

निनान, क्रिवि. ಕೊನೆಯಲ್ಲಿ, ಕೊನೆಗೆ. वि. ಪೂರ್ಣ, ತೀರ; ಕೀಳಾದ.

निनाया, पु. ತಿಗಣೆ, ಮತ್ಕುಣ.

निनारा, वि. ಪ್ರತ್ಯೇಕ, ಭಿನ್ನ, ಬೇರೆ.

निनावाँ, पु. ಬಾಯೊಳಗೆ ಏಳುವ ಚಿಕ್ಕ ಗುಳ್ಳೆಗಳು, ಗಂಟಲು ಹುಣ್ಣು.

निनौना, सक्रि. ಜಿಗ್ಗಿಸು, ಬಾಗಿಸು.

निन्नानबे, **निन्नानवे**, **निन्यानवे**, वि. ತೊಂಭತ್ತೊಂಭತ್ತು.

निपंग, वि. ಕುಂಟ, ಮುರವ, ಹೆಳವ.

निपजना, अक्रि. ಹುಟ್ಟು, ಮೊಳೆ; ಬೆಳೆ, ಬಲಿ; ಆಗು

निपजी, स्त्री. ಹುಟ್ಟುವಳಿ, ಉತ್ಪತ್ತಿ.

निपट, क्रिवि. ಶುದ್ಧ; ಮಾತ್ರ, ಕೇವಲ; ಅತಿ, ಬರೀ, ತೀರ; ಸುತರಾಂ.

निपटना, अक्रि. = **निबटना**.

निपटाना, सक्रि. = **निबटाना**.

निपटारा, पु. = **निबटेरा**.

निपात, पु. ಪತನ; ನಾಶ; ಸಾವು. वि. ಎಲೆಗಳಿಲ್ಲದ.

निपाती, वि. ಬೀಳಿಸುವವ; ವಿನಾಶಕ.

निपान, पु. ನೀರಿನ ತೊಟ್ಟಿ, ಹೌದ; ಕುಡಿಯುವಿಕೆ, ಪಾನ.

निपीड़न, पु. ಪೀಡಿಸುವಿಕೆ; ಕಾಟ, ಹಿಂಡುವಿಕೆ, ಹಿಸುಕುವಿಕೆ.

निपीड़ना, सक्रि. ಹಿಂಡು, ಹಿಸುಕು; ಅದುಮು; ಪೀಡಿಸು.

निपुण, वि. ನಿಪುಣ; ಗಟ್ಟಿಗ.

निपुणता, स्त्री. ನಿಪುಣತೆ, ಸಾಮರ್ಥ್ಯ.

निपूत, **निपूता**, वि. ಪುತ್ರಸಂತಾನವಿಲ್ಲದ, ಮಕ್ಕಳಿಲ್ಲದವ.

निपोड़ना, सक्रि. ಹಲ್ಲು ಕಿಸಿ.

निफन, वि. ಪೂರಾ, ಪೂರ್ತಿ. क्रिवि. ಪೂರ್ತಿಯಾಗಿ, ತೀರ.

निफरना, अक्रि. ಹೊಗು, ಭೇದಿಸಿಕೊಂಡು ಹೋಗು; ಸ್ಪಷ್ಟವಾಗು, ಸ್ಫುಟವಾಗು.

निफ़ाक़, स्त्री. ವಿರೋಧ, ಹಗೆ; ವೈಮನಸ್ಯ; ಭಿನ್ನಾಭಿಪ್ರಾಯ. पु. ಜಾಲ, ಠಕ್ಕು.

निफ़ास, पु. ಪ್ರಸವ.

निपोट, वि. ಸ್ಪಷ್ಟ, ವಿಶದ.

निबंध, पु. ತಡೆ, ಬಂಧನ; ಕಟ್ಟು; ಕೈಕೋಳ, ಬೇಡಿ; ಲೇಖನ, ಪ್ರಬಂಧ.

निबकौरी, स्त्री. ಬೇವಿನ ಹಣ್ಣು.

निबख़्ता, वि. ನಿರ್ಭಾಗ್ಯ.

निबटना, अक्रि. ವಿಮುಕ್ತನಾಗು; ಮುಕ್ತಾಯವಾಗು, ತೀರು; ಇತ್ಯರ್ಥವಾಗು, ತೀರ್ಮಾನವಾಗು; ಬಗೆಹರಿ.

निबटाना, सक्रि. ಮುಗಿಸು, ತೀರಿಸು; ಸಂದಾಯ ಮಾಡು, ಸಲ್ಲಿಸು; ತೀರ್ಮಾನಿಸು; ಇತ್ಯರ್ಥ ಮಾಡು, ಬಗೆಹರಿಸು.

निबटाव, **निबटेरा**, पु. ಮುಕ್ತಾಯ, ತೀರುಪಾಟು; ಇತ್ಯರ್ಥ, ತೀರ್ಮಾನ; ನಿರ್ಣಯ, ಫೈಸಲು.

निबड़ना, अक्रि. = **निबटना**.

निबद्ध, वि. ತಡೆದ; ಕಟ್ಟಿದ; ಸೇರಿಸಿದ; ಪೋಣಿಸಿದ.

निबरना, अक्रि. ಮುಕ್ತಾಯವಾಗು; ಬಗೆ ಹರಿಯು, ಇತ್ಯರ್ಥವಾಗು; ಬೇರೆಯಾಗು, ಅಗಲು; ಬಿಟ್ಟುಹೋಗು; ಕಳಚು, ಬಿಡು.

निबल, वि. ನಿರ್ಬಲ, ಬಲಹೀನ.

निबलाई, स्त्री. ಬಲಹೀನತೆ, ನಿಶ್ಯಕ್ತಿ.

निबह, पु. ಸಮುದಾಯ, ಗುಂಪು.

निबहना, अक्रि. ನೆರವೇರು, ಈಡೇರು;

ಸಾಗು, ಪೂರೈಸು, ಪಾರಾಗು.

निबहुर, पु. ಯಮಪುರಿ.

निबहुरा, वि. ಹಿಂತಿರುಗಿ ಬಾರದವ, (ಶಪಿಸುವಾಗ ಹೇಳುವುದು).

निबाड़ा, पु. ಬೇರೆಯಾಗುವಿಕೆ.

निबाह, पु. ನಿರ್ವಹಿಸುವಿಕೆ, ನಿರ್ವಹಣ; ಕಾಲಕ್ಷೇಪ; ಸಫಲತೆ; ಸಾಗಿಸುವಿಕೆ; ಪರಿಪಾಲನೆ, ಕಾಪಾಡುವಿಕೆ; ನಿರ್ವಾಹ

निबाहना, सक्रि ನೆರವೇರಿಸು, ಈಡೇರಿಸು; ನಿರ್ವಹಿಸು; ಪರಿಪಾಲಿಸು; ಸಾಗಿಸು, ನೀಸು, ನಿಭಾಯಿಸು, ಸಂಭಾಳಿಸು; ಸಾಧಿಸು; ಕೊನೆಗಾಣಿಸು; ಸುಧಾರಿಸಿ ಕೊಂಡು ಹೋಗು.

निबाहू, वि. ನಿಭಾಯಿಸುವುದಕ್ಕೆ ಬೇಕಾದಷ್ಟು; ಸಾಕಷ್ಟು. पु. ಸಾಗಿಸುವವ, ನಿಭಾಯಿಸುವವ.

निबिड़, वि. ಘನ, ದಟ್ಟ, ನಿಬಿಡ.

निबुआ, पु. ನಿಂಬೆ.

निबुकना, अक्रि. ಬಿಡುಗಡೆಯಾಗು; ಮುಕ್ತನಾಗು. सक्रि. ಬಿಡು, ಬಿಡಿಸು.

निबेड़ना, सक्रि. ಬಿಡುಗಡೆ ಮಾಡು, ಖುಲಾಸೆ ಮಾಡು; ಚುನಾಯಿಸು, ಆಯು, ಬಿಡಿಸು; ಬಗೆಹರಿಸು, ನಿರ್ಣಯ ಮಾಡು; ಪೂರೈಸು, ನೆರವೇರಿಸು.

निबेड़ा, पु. ಆಯುವಿಕೆ; ಬಿಡಿಸುವಿಕೆ; ಬಿಡುಗಡೆ; ಮುಕ್ತಾಯ; ನಿರ್ಣಯ, ಇತ್ಯರ್ಥ.

निबेरना, सक्रि. = निबेड़ना.

निबेरा, पु. = निबेड़ा.

निबौरी, **निबौली**, स्त्री. ಬೇವಿನಹಣ್ಣು

निभना, अक्रि. ಪಾರಾಗು; ಪೂರೈಸು, ನೆರವೇರು; ಸಾಗು, ಸಲ್ಲು; ಕೈಸಾರು, ಕೈಗೂಡು.

निभाग, वि. ನಿರ್ಭಾಗ್ಯ, ನತದೃಷ್ಟ.

निभाना, सक्रि. ನಿರ್ವಹಿಸು; ಪಾಲಿಸು, ನೆರವೇರಿಸು; ಸಾಗಿಸು; ಪೂರೈಸು; ನೀಸು, ನಿಭಾಯಿಸು, ಏಗು.

निभाव, पु. ನಿರ್ವಾಹ; ನಿಭಾಯಿಸುವಿಕೆ, ಸಾಗಿಸುವಿಕೆ; ಪರಿಪಾಲನೆ.

निमंत्रण, पु. ಆಹ್ವಾನ, ಕರೆ; ಊಟಕ್ಕೆ ಕರೆಯುವಿಕೆ, ಆಮಂತ್ರಣ.

निमंत्रणपत्र, पु. ಆಹ್ವಾನ ಪತ್ರಿಕೆ.

निमंत्रना, सक्रि. ಆಹ್ವಾನಿಸು, ಕರೆ.

निमक, पु. = नमक.

निमकी, स्त्री. ನಿಂಬೆ ಹಣ್ಣಿನ ಉಪ್ಪಿನ ಕಾಯಿ; ಮೈದಾಹಿಟ್ಟಿನಿಂದ ಮಾಡಿದ ಉಂಡಲಿಗೆ, ಚೀಡೆ.

निमकौड़ी, स्त्री. ಬೇವಿನ ಹಣ್ಣು.

निमग्न, वि. ಮುಳುಗಿದ; ತನ್ಮಯ.

निमजन, पु. ಸ್ನಾನ, ಜಳಕ, ವಿಹಾರ.

निमटना, अक्रि. = निबटना.

निमन, वि. ಬಿಗಿ, ಗಟ್ಟಿ, ಗಡುತರ.

निमनाई, स्त्री. ಬಲ, ಶಕ್ತಿ.

निमनाना, सक्रि. ಬಲಪಡಿಸು.

निमाना, वि. ಇಳಿಕಲಾದ, ತಗ್ಗಾದ; ನಮ್ರ, ವಿನಯವುಳ್ಳ; ಮೆತ್ತಗಿರುವ, ವಶವರ್ತಿ; ನಿಷ್ಕಪಟ, ಯಥಾರ್ಥವಾದ

निमिख, पु. = निमिष.

निमित्त, पु. ನಿಮಿತ್ತ, ಹೇತು, ಕಾರಣ.

निमिष, **निमेष**, पु. ರೆಪ್ಪೆ ಬಡಿಯುವಿಕೆ;

ನಿಮಿಷ, ಕ್ಷಣ.
निमूद, वि. ಮುಗಿದ, ಮುಚ್ಚಿದ.
निमेट, वि. ಅಳಿಯದ, ನಾಶವಿಲ್ಲದ.
निमोना, पु. ಕಡಲೆಬೇಳೆ ಸಾರು.
निम्न, वि. ಕೆಳಗಿನ.
निम्नलिखित, वि. ಕೆಳಗೆ ಬರೆದಿರುವ, ಕೆಳಗೆ ಕಂಡ.
नियंता, पु. ನಿಯಮ ವಿಧಿಸುವವ, ಕಟ್ಟು ಮಾಡುವವ.
नियंत्रण, पु. ನಿಯಮ, ಕಟ್ಟು.
नियत, वि. ನಿರ್ದಿಷ್ಟ, ಗೊತ್ತಾದ; ನಿಯಂತ, ನೇಮಕವಾದ.
नियती, स्त्री. ನೇಮಕ; ವಿಧಿ; ಭಾಗ್ಯ.
नियम, पु. ಕಟ್ಟು, ತಡೆ; ವಿಧಿ, ನಿಬಂಧನೆ, ನಿಯಮ; ವ್ರತ.
नियमबद्ध, वि. ನಿಯಮಗಳಿಗೊಳಗಾದ, ಕಟ್ಟಿಗೊಳಗಾದ.
नियर, क्रिवि. ಹತ್ತಿರ, ಸಮೀಪ, ಬಳಿ.
नियराई, स्त्री. ಸಾಮೀಪ್ಯ; ಹತ್ತಿರ, ನೆರೆ.
नियराना, अक्रि. ಬಳಿ ಸಾರು, ಸಮೀಪಿಸು, ಅಯ್ದು, ತಲಪು.
नियाज़, स्त्री. ಪ್ರೀತಿ, ವಿನಂತಿ; ವಿನಯ, ನಮ್ರತೆ; ಪ್ರಸಾದ; ಸಮಾರಾಧನೆ; ನಿವೇದನ, ಕಾಣಿಕೆ; ಸಂದರ್ಶನ, ಭೇಟಿ, ಭೆಟ್ಟಿ.
नियाज़मंद, वि. ವಿನೀತ, ನಮ್ರ.
नियाबत, स्त्री. ಪ್ರಾತಿನಿಧ್ಯ, ಬದಲಿ.
नियाम, पु. ಖಡ್ಗಕೋಶ, ಒರೆ.
नियामत, स्त्री. ಅಪರೂಪದ ವಸ್ತು; ಉತ್ತಮವಾದ ಭೋಜನ, ಭರ್ಜರಿ ಊಟ; ಐಶ್ವರ್ಯ, ಸಂಪತ್ತು; ನಿಧಿ.
नियार, पु. ಅಕ್ಕಸಾಲೆಯ ಅಂಗಡಿಯ ಕಸ, ಚಿನ್ನದ ಪುಡಿ ಸೇರಿದ ಮಣ್ಣು.
नियारना, सक्रि. (ಚಿನ್ನದ ಧೂಳು ಬೆರತ) ಮಣ್ಣಿನಿಂದ ಚಿನ್ನತೆಗೆ.
नियारा, स्त्री. ಬೇರೆಯಾದ, ಭಿನ್ನವಾದ.
नियारिया, पु. ಚಿನ್ನದ ಧೂಳು ಬೆರತ ಮಣ್ಣಿನಿಂದ ಚಿನ್ನ ತೆಗೆಯುವವನು, ಜಲಗಾರ; ಚತುರ; ಠಕ್ಕ, ಜಾಲಗಾರ.
नियुक्त, वि. ನೇಮಕವಾದ; ಪ್ರೇರಿತ; ಸ್ಥಾಪಿತ.
नियुक्ति, स्त्री. ಸ್ಥಾಪನೆ; ನೇಮಕ.
नियोग, पु. ನೇಮಿಸುವಿಕೆ, ನೇಮಕ, ನೇಮಣೂಕಿ; ಪ್ರೇರಣೆ; ಅಪ್ಪಣೆ; ಕ್ರಿಯಾಪದದ ವಿಧಿರೂಪ.
नियोगी, पु. ನೇಮಕವಾದವ; ಅಧಿಕಾರಿ, ಉದ್ಯೋಗಸ್ಥ; ಮಂತ್ರಿ, ಸಚಿವ; ಕಾರ್ಯಸ್ಥ.
नियोजक, पु. ನೇಮಕ ಮಾಡುವವ.
नियोजन, पु. ನೇಮಕ, ನಿಯುಕ್ತಿ.
नियोजित, वि. ನೇಮಕವಾದ, ನಿಯುಕ್ತ.
निरंकुश, वि. ಅಂಕೆಯಿಲ್ಲದ, ಕಟ್ಟಿಲ್ಲದ.
निरंतर, वि. ತೆರಪಿಲ್ಲದ; ದಟ್ಟವಾದ, ಗುತ್ತ; ನಿರಂತರವಾದ, ಸ್ಥಾಯಿ क्रिवि. ಸದಾ, ಯಾವಾಗಲೂ, ನಿರಂತರವಾಗಿ
निरक्ष, वि. ಅಕ್ಷಾಂಶವಿಲ್ಲದ. निरक्ष रेखा=ನಿರಕ್ಷರೇಖೆ, ಭೂಮಧ್ಯರೇಖೆ.
निरक्षर, वि. ಅಕ್ಷರಶೂನ್ಯ, ಅಕ್ಷರ ತಿಳಿಯದವ, ಅನಕ್ಷರಸ್ಥ, ನಿರಕ್ಷರ ಕುಕ್ಷಿ

निरखना, सक्रि. ನೋಡು.

निरचू, वि. ವಿರಾಮವಾಗಿರುವ, ನೆಮ್ಮದಿಯಾದ.

निरच्छ, वि. ಕಣ್ಣಿಲ್ಲದವ, ಕುರುಡ.

निरजोस, पु. ರಸ, ಸಾರ; ನಿರ್ಣಯ.

निरजोसी, वि. ರಸ ಹಿಂಡುವವ, ಸಾರ ತೆಗೆಯುವವ; ನಿರ್ಣಯ ಮಾಡುವವ.

निरन्न, वि. ಅನ್ನವಿಲ್ಲದ, ನಿರಾಹಾರ.

निरपना, वि. ತನ್ನದಲ್ಲದ, ಪರಾಯಿ, ಪರರ

निरपराध, वि. ಅಪರಾಧವಿಲ್ಲದ, ನಿರ್ದೋಷ. क्रिवि. ನಿರಪರಾಧಿಯಾಗಿ.

निरबंसी, वि. ಸಂತಾನವಿಲ್ಲದ.

निरबेट, पु. ವೈರಾಗ್ಯ.

निरभिमान, वि. ಅಹಂಕಾರವಿಲ್ಲದವ, ನಿಗರ್ವಿ.

निरमोल, वि. ಅಮೂಲ್ಯ, ಉತ್ತಮ

निरर्थक, वि. ಅರ್ಥವಿಲ್ಲದ; ಪ್ರಯೋಜನವಿಲ್ಲದ, ವ್ಯರ್ಥ; ನಿಷ್ಫಲ.

निरवार, पु. ತಪ್ಪಿಸಿಕೊಳ್ಳುವಿಕೆ, ನಿವಾರಣೆ

निरवारना, सक्रि. ತಳ್ಳು, ದೂಡು; ಬಿಡಿಸು, ಬಿಚ್ಚು; ನಿಷ್ಕರ್ಷೆ ಮಾಡು

निरशन, पु. ಉಪವಾಸ, ಅನಶನ.

निरस, वि. ರಸವಿಲ್ಲದ. ನೀರಸ, ಸಪ್ಪೆ.

निरसन, पु. ದೂಡುವಿಕೆ; ಮೂಲೆಗೆ ಒತ್ತುವಿಕೆ; ರದ್ದು ಮಾಡುವಿಕೆ, ತಳ್ಳುಹಡಿ; ನಿವಾರಣೆ, ನಾಶ.

निरहंकार, वि. ಅಹಂಕಾರವಿಲ್ಲದ, ನಿರಹಂಕಾರಿ.

निरा, वि. ಶುದ್ಧ. ಕೇವಲ, ಮಾತ್ರ, ಬರಿಯ.

निराई, स्त्री. ಸಸಿಗಳ ಕಳೆ ತೆಗೆಯುವಿಕೆ; ಕಳೆ ಕೀಳುವುದರ ಕೂಲಿ.

निराट, वि. ಬರಿಯ, ಕೇವಲ.

निरादर, पु. ನಿರಾದರಣೆ, ಅವಮರ್ಯಾದೆ; ಅಸಡ್ಡೆ

निराधार, वि. ಆಧಾರವಿಲ್ಲದ; ಪ್ರಮಾಣವಿಲ್ಲದ.

निराना, सक्रि. ಕಳೆ ತೆಗೆ, ಕಳೆ ಕೀಳು; ಕಟಾಯಿಸು.

निरापद, वि. ಸುರಕ್ಷಿತ. ಜೋಪಾನ, ಭದ್ರ

निरामय, वि. ರೋಗವಿಲ್ಲದ, ಆರೋಗ್ಯವಾದ; ಸ್ವಚ್ಛವಾದ.

निरामिष, वि. ಮಾಂಸಭಕ್ಷಣಮಾಡದ, ಸಸ್ಯಾಹಾರಿ.

निरायास, वि. ಅನಾಯಾಸ; ಸುಲಭ; ಸರಾಗ.

निरारा, वि. ಬೇರೆ, ಪ್ರತ್ಯೇಕ

निरालस्य, वि. ಆಲಸ್ಯವಿಲ್ಲದ; ಚುರುಕು, ಸೂಟಿ

निराला, पु. ಪ್ರತ್ಯೇಕಸ್ಥಾನ, ಏಕಾಂತ ಸ್ಥಾನ. वि. ಏಕಾಂತ, ಪ್ರತ್ಯೇಕ; ವಿಲಕ್ಷಣ, ಅದ್ಭುತ; ಅಪೂರ್ವ, ತನಿ.

निरावना, सक्रि. = निराना.

निराश, वि. ನಿರಾಶೆಯಾದ, ಹತಾಶ.

निराशा, स्त्री. ನಿರಾಶೆ, ಆಶಾಭಂಗ.

निराशी, वि. ನಿರಾಶೆಯಾದ, ಉದಾಸೀನ. स्त्री. ನಿರಾಶೆ, ನೈರಾಶ್ಯ.

निराश्रय, वि. ಆಶ್ರಯವಿಲ್ಲದ, ಅಸಹಾಯ; ದಿಕ್ಕಿಲ್ಲದ, ದೀನ.

निराहार, वि. ಆಹಾರವಿಲ್ಲದ, ಉಪವಾಸದ.

निरीक्षक, पु. ನೋಡುವವ; ಮೇಲ್ವಿಚಾರಕ, ಪಾರುಪತ್ಯಗಾರ.

निरीक्षण, पु. ನೋಡುವಿಕೆ; ಕಣ್ಗಾವಲು, ಮೇಲ್ವಿಚಾರಣೆ; ನೋಟ.

निरीह, वि. ಪ್ರಯತ್ನವಿಲ್ಲದ; ದುಡಿಯದ; ಉದಾಸೀನ; ಶಾಂತಿಪ್ರಿಯ.

निरीहता, स्त्री. ಔದಾಸೀನ್ಯ; ಶಾಂತಿಪ್ರಿಯತೆ.

निरुत्तर, वि. ಉತ್ತರವಿಲ್ಲದ; ಉತ್ತರಕೊಡಲಾಗದ, ನಿರುತ್ತರ.

निरुत्साह, वि. ಉತ್ಸಾಹವಿಲ್ಲದ.

निरुद्ध, वि. ತಡೆಯಲ್ಪಟ್ಟ; ಕಟ್ಟಲ್ಪಟ್ಟ.

निरुद्यम, वि. ಕೆಲಸವಿಲ್ಲದ; ನಿರುದ್ಯೋಗಿ

निरुद्योग, वि. ಕೆಲಸ ಅಥವಾ ಉದ್ಯೋಗವಿಲ್ಲದ.

निरुपम, वि. ಈಡಿಲ್ಲದ, ಅನುಪಮ.

निरुपयोगी, वि. ಉಪಯೋಗವಿಲ್ಲದ.

निरुपाय, वि. ದಿಕ್ಕಿಲ್ಲದ; ನಿರ್ವಾಹವಿಲ್ಲದ

निरू, पु. ಶಕ್ತಿ, ಬಲ.

निरूप, वि. ರೂಪವಿಲ್ಲದ.

निरूपण, पु. ಪ್ರಕಾಶ; ವಿವೇಚನೆ; ನಿರ್ಣಯ; ತೋರಿಸುವಿಕೆ.

निरेखना, सक्रि. ನೋಡು.

निरोग, **निरोगी**, वि. ರೋಗವಿಲ್ಲದ, ಸ್ವಸ್ಥ.

निरोध, पु. ನಿರೋಧ; ನಿಲ್ಲಿಸುವಿಕೆ; ತಡೆ, ಕಟ್ಟು; ನಾಶ.

निरोधक, वि. ತಡೆಯುವ, ನಿಲ್ಲಿಸುವ.

निर्ख़, पु. ಧಾರಣೆ, ದರ, ಬೆಲೆ; ನಿರಖು, ಧಾರಣೆವಾಸಿ.

निर्ख़नामा, पु. ಧಾರಣೆಪಟ್ಟಿ, ನಿರಖುಪಟ್ಟಿ, ಬೆಲೆಪಟ್ಟಿ.

निर्ख़बंदी, स्त्री. ಬೆಲೆ ಕಟ್ಟುವಿಕೆ.

निर्ख़ी, पु. ಬೆಲೆ ಕಟ್ಟುವವನು.

निर्गम, पु. ಹೊರಡುವಿಕೆ, ನಿರ್ಗಮನ.

निर्जन, वि. ಜನರಿಲ್ಲದ; ಶೂನ್ಯಸ್ಥಾನ.

निर्जल, वि. ನೀರಿಲ್ಲದ, ಒಣ; ಗೊಟ್ಟು; ನೀರು ಸಹ ಇಲ್ಲದಿರುವ (ಉಪವಾಸ). निर्जला एकादशी = ಜ್ಯೇಷ್ಠ ಶುದ್ಧ ಏಕಾದಶಿ. (ಈ ದಿವಸ ನಿರ್ಜಲ ಉಪವಾಸವನ್ನು ಆಚರಿಸುವರು).

निर्जीव, वि. ಜೀವವಿಲ್ಲದ, ಸತ್ತುಹೋದ.

निर्झर, पु. ಝರಿ, ಊಟೆ.

निर्णय, चि. ನಿರ್ಣಯ, ನಿಷ್ಕರ್ಷೆ.

निर्णीत, वि. ನಿರ್ಣಯವಾದ, ತೀರ್ಮಾನವಾದ.

निर्त, पु. ನೃತ್ಯ, ಕುಣಿತ.

निर्दय, वि. ದಯೆಯಿಲ್ಲದ, ಕ್ರೂರ.

निर्दयता, स्त्री. ಕ್ರೌರ್ಯ, ನಿರ್ದಯತ್ವ.

निर्दर, पु. ಗವಿ, ಗುಹೆ.

निर्दिष्ट, वि. ಗೊತ್ತುಮಾಡಿದ, ನಿಶ್ಚಯವಾದ; ನಮೂದಿಸಿದ.

निर्देश, पु. ತೋರಿಸುವಿಕೆ; ಕಥನ, ಹೇಳಿಕೆ; ಆಜ್ಞೆ, ಅಪ್ಪಣೆ

निर्दोष, **निर्दोषी**, वि. ನಿರ್ದೋಷ, ದೋಷವಿಲ್ಲದ.

निर्धन, वि. ಹಣವಿಲ್ಲದ, ದರಿದ್ರ.

निर्धनता, स्त्री. ದಾರಿದ್ರ್ಯ, ಬಡತನ.

निर्धार, निर्धारण, पु. ನಿಶ್ಚಯಿಸುವಿಕೆ; ಗೊತ್ತುಪಳಿ, ಇತ್ಯರ್ಥ.

निर्धारना, सक्रि. ಗೊತ್ತುಮಾಡು, ನಿಶ್ಚಯಿಸು.

निर्बंध, पु. ತಡೆ, ನಿರ್ಬಂಧ.

निर्बल, वि. ಬಲವಿಲ್ಲದ, ನಿಶ್ಶಕ್ತ.

निर्बलता, स्त्री. ಬಲಹೀನತೆ, ನಿಶ್ಶಕ್ತಿ.

निर्बस, वि. ವಶವಿಲ್ಲದ; ಶಕ್ತಿಯಿಲ್ಲದ

निर्बूझ, वि. ತಿಳಿಯಲಾಗದ, ಗೂಢ.

निर्बोध, वि. ತಿಳಿವಳಿಕೆಯಿಲ್ಲದ, ಅರಿಯದ.

निर्भय, वि. ಭಯವಿಲ್ಲದ, ನಿರ್ಭೀತ.

निर्भयता, स्त्री. ಭಯವಿಲ್ಲದಿರುವಿಕೆ.

निर्भर, वि. ಭರಿತ, ತುಂಬಿದ; ಸೇರಿದ, ಮಿಶ್ರಿತ; ಆಶ್ರಿತ; ಅವಲಂಬಿತ.

निर्भीक, वि. ಭಯವಿಲ್ಲದ, ನಿರ್ಭೀತ.

निर्भीकता, स्त्री. ಭಯವಿಲ್ಲದಿರುವಿಕೆ.

निर्मल, वि. ಕೊಳೆಯಿಲ್ಲದ; ಸ್ವಚ್ಛ, ಶುದ್ಧ.

निर्मलता, स्त्री. ಸ್ವಚ್ಛತೆ, ಶುದ್ಧತೆ.

निर्मला, पु. ಸಿಖ್ಖರಲ್ಲಿ ಒಂದು ಜಾತಿ.

निर्माण, पु. ನಿರ್ಮಾಣ, ರಚನೆ.

निर्माता, पु. ನಿರ್ಮಿಸುವವ; ರಚಿಸುವವ; ಸೃಷ್ಟಿಸುವವ.

निर्माना, सक्रि. ನಿರ್ಮಿಸು, ರಚಿಸು.

निर्मूल, वि. ಮೂಲವಿಲ್ಲದ, ಬುಡವಿಲ್ಲದ, ನಿರ್ಮೂಲ; ಬುಡಸಹಿತ ಕಿತ್ತುಹಾಕಿದ.

निर्लज्ज, वि. ಲಜ್ಜೆಯಿಲ್ಲದ; ನಾಚಿಕೆಗೇಡಿ, ನಾಣಿಲಿ.

निर्लज्जता, स्त्री. ನಾಚಿಕೆಗೇಡಿತನ, ನಾಣಿಲಿತನ.

निर्वहना, अक्रि. ನೆರವೇರು, ಸಾಗು.

निर्वाचक, वि. ಚುನಾಯಿಸುವವ.

निर्वाचन, पु. ಆರಿಸುವಿಕೆ, ಚುನಾವಣೆ.

निर्वासन, पु. ಗಡೀಪಾರು, ದೇಶಭ್ರಷ್ಟಮಾಡುವಿಕೆ; ಹೊರಪಡಿಸುವಿಕೆ.

निर्वाह, पु. ನಿರ್ವಾಹ, ಪಾಲನೆ; ಪೂರೈಸುವಿಕೆ; ಜೀವನೋಪಾಯ.

निर्वाहना, सक्रि. ನಿರ್ವಹಿಸು, ನಿಭಾಯಿಸು; ನೆರವೇರಿಸು, ಸಾಗಿಸು.

निर्विघ्न, वि. ವಿಘ್ನವಿಲ್ಲದ, ಅಭ್ಯಂತರವಿಲ್ಲದ. क्रिवि. ಅಡ್ಡಿಯಿಲ್ಲದೆ.

निर्विवाद, वि. ವಿವಾದವಿಲ್ಲದ; ಆಕ್ಷೇಪಣೆಯಿಲ್ಲದ.

निलहा, वि. ನೀಲಿ ಬಣ್ಣದ, ನೀಲಿ.

निवाई, वि. ಹೊಸ, ನೂತನ; ಅಪೂರ್ವ. स्त्री. ಗಾಳಿಯ ನಿಶ್ಶಬ್ದತೆ; ಹರಾರತ್ತು, ಸೆಕೆ.

निवाजना, सक्रि. ಅನುಗ್ರಹಿಸು, ಕರುಣಿಸು, ದಯಪಾಲಿಸು.

निवाड़, पु. = निवार.

निवाड़ा, पु. ದೋಣಿ, ತೆಪ್ಪ.

निवार, स्त्री. ಅಗಲವಾದ ಲಾಡಿ, ಪಟ್ಟಿ; ಕಸೆ, ನಾಡೆ, ನವಾರ.

निवारण, पु. ನಿವಾರಣೆ, ಪರಿಹಾರ; ನಿವೃತ್ತಿ, ತಡೆ.

निवारना, सक्रि. ನಿವಾರಿಸು, ಪರಿಹರಿಸು; ನಿಷೇಧಿಸು, ಅಡ್ಡಮಾಡು.

निवारा, पु. ತಡೆ, ಕಾಪು; ರಕ್ಷೆ.

निवारी, स्त्री. ಕಾಡುಮಲ್ಲಿಗೆ.

निवाला, पु. ತುತ್ತು, ಕವಳ; ತೆರಳೆ.
निवास, पु. ವಾಸ; ವಾಸಸ್ಥಾನ.
निवासी, वि. ವಾಸವಾಗಿರುವವ, ನಿವಾಸಿ.
निवासिनी, स्त्री. ವಾಸವಾಗಿರುವವಳು
निवेदक, वि. ಬೇಡುವವ, ಪ್ರಾರ್ಥಿಸುವವ.
निवेदन, पु. ಪ್ರಾರ್ಥನೆ; ಅರಿಕೆ, ಬಿನ್ನಹ; ಸಮರ್ಪಣೆ
निवेदनपत्र, पु. ಪ್ರಾರ್ಥನಾಪತ್ರ, ಅರ್ಜಿ
निशस्त, स्त्री. ಕುಳಿತುಕೊಳ್ಳುವಿಕೆ; ತರಹ, ರೀತಿ.
निशस्तगाह, पु. ಕುಳಿತುಕೊಳ್ಳುವ ಸ್ಥಳ; ಬೈಠಕಖಾನೆ.
निशा, स्त्री. ರಾತ್ರಿ, ಇರುಳು; ಅರಿಸಿನ; ನಂಬಿಕೆ, ಭರವಸೆ.
निशा-खातिर, स्त्री. ತೃಪ್ತಿ, ಖಾತ್ರಿ.
निशान, पु ಲಕ್ಷಣ; ಚಿಹ್ನೆ, ಗುರುತು; ಅಚ್ಚು, ಠಸ್ಸೆ; ಮಚ್ಚೆ, ಕಲೆ; ಜಾಡು, ಕುರುಹು; ತುಬ್ಬು, ಪತ್ತೆ; ವಿಳಾಸ; ಬಾವುಟ, ಧ್ವಜ, ನಿಶಾನಿ; ಬಿರುದಿನ ಬಿಲ್ಲೆ, ಕಚ್ಚುಳಿ; ನಗಾರಿ, ಭೇರಿ; ಈಟಿ, ಭರ್ಜಿ; ಲಕ್ಷ್ಯ, ಗುರಿ; ಆಜ್ಞೆ, ನಿರೂಪ. निशान देना = ಗುರುತು ಹಚ್ಚುಸು, ಗುರುತಿಸು.
निशानदार, वि. ಗುರುತು ಹಾಕಿದ; ಚಿಹ್ನೆಯುಳ್ಳ. पु. ಬಾವುಟ, ಧ್ವಜ; ಬಾವುಟಗಾರ.
निशानदेही, स्त्री. ಒಬ್ಬನನ್ನು ಇಂತಹವನೇ ಎಂದು ಗುರುತಿಸಿ ತೋರಿಸಿಕೊಡುವಿಕೆ.
निशानची, निशान-बरदार, पु. ಧ್ವಜಧಾರಿ, ಬಾವುಟಗಾರ.
निशाना, पु. ಗುರುತು, ಚಿಹ್ನೆ; ಗುರಿ, ಲಕ್ಷ್ಯ, ವೇಧ್ಯ; ಉದ್ದೇಶ. निशाना बांधना = ಗುರಿಯಿಡು, ಲಕ್ಷ್ಯವಿಡು.
निशानी, स्त्री. ಜ್ಞಾಪಕಾರ್ಥವಾಗಿ ಕೊಟ್ಟ ಅಥವಾ ಏರ್ಪಡಿಸಿದ ವಸ್ತು, ಸ್ಮಾರಕ, ನೆನಪಿನ ಗುರುತು; ಹೆಗ್ಗುರುತು, ಕುರುಹು; ಚಿಹ್ನೆ.
निशास्ता, पु. ಗೋಧಿಯ ಅಂಬಲಿ, ಗಂಜಿ; ಹಿಟ್ಟಿನ ಸರಿ.
निशि, स्त्री. ರಾತ್ರಿ, ನಿಶಿ, ಇರುಳು.
निशीद, पु. ಸಂಗೀತದ ಶಬ್ದ.
निशीन, वि. ಕುಳಿತಿರುವ, ಆರೂಢ.
निशेब, पु. ಇಳಿತ, ಇಳಕಲು; ತಗ್ಗುನೆಲ
निश्चय, पु. ನಿಶ್ಚಯ, ಖಂಡಿತ, ಖಾತ್ರಿ.
निश्चल, वि. ಅಲ್ಲಾಡದ, ಕದಲದ.
निश्चलता, स्त्री. ಕದಲದಿರುವಿಕೆ.
निश्चित, वि. ನಿಶ್ಚಯವಾದ, ದೃಢ.
निश्छल, वि. ಮೋಸವಿಲ್ಲದ, ನಿಷ್ಕಪಟ.
निश्रेणी, स्त्री. ಏಣಿ, ನಿಚ್ಚಣಿಕೆ; ಸೋಪಾನಟಿಗೆ, ಸೋಪಾನ; ಮುಕ್ತಿ.
निश्शेष, वि. ಶೇಷವಿಲ್ಲದ, ಪೂರ್ಣ.
निष्कंटक, वि. ಅಭ್ಯಂತರವಿಲ್ಲದ.
निष्कपट, वि. ಕಪಟವಿಲ್ಲದ, ಸರಳ ಸ್ವಭಾವದ.
निष्कपटता, स्त्री. ಸರಳ ಸ್ವಭಾವ.
निष्कर्ष, पु. ನಿಷ್ಕರ್ಷೆ, ನಿಶ್ಚಯ; ಸಾರ, ಸಾರಾಂಶ.

निष्कारण, वि. ಕಾರಣವಿಲ್ಲದ, ವ್ಯರ್ಥ.

निष्क्रिय, वि. ಪ್ರತೀಕಾರವಿಲ್ಲದ.

निष्ठा, स्त्री. ನಂಬಿಕೆ, ನಿಷ್ಠೆ.

निष्ठुर, वि. ಕ್ರೂರ, ನಿಷ್ಠುರ, ಕಡದು.

निष्ठुरता, स्त्री. ಕ್ರೂರತನ, ಕಾಠಿಣ್ಯ.

निष्प्रयोजन, वि. ಪ್ರಯೋಜನವಿಲ್ಲದ, ವ್ಯರ್ಥ. क्रिवि. ವ್ಯರ್ಥವಾಗಿ, ಸುಮ್ಮನೆ.

निष्फल, वि. ಲಾಭವಿಲ್ಲದ; ನಿರರ್ಥಕ.

निसंठ, वि. ಬಡವ, ನಿರ್ಧನ.

निसबत, स्त्री. ಸಂಬಂಧ, ಅನುಷಂಗ; ವಿವಾಹದವಾಙ್ನಿಶ್ಚಯ, ನಿಶ್ಚಿತಾರ್ಥ. ವೀಳೆಯಶಾಸ್ತ್ರ; ವಿವಾಹದ ಮೂಲಕ ಆಗುವ ಸಂಬಂಧ, ಬಳಗ; ಹೋಲಿಕೆ, ತುಲನೆ.

निसबती, वि. ವಿವಾಹದ ಮೂಲಕದ ಸಂಬಂಧಿಕ, ಬೀಗರು निसबती भाई = ಭಾವನೆಂಟ, ಭಾವಮೈದ, ಮೈದುನ.

निसरना, अक्रि. = निकलना.

निसवां, स्त्री. ಹೆಂಗಸರು, ಮಹಿಳೆಯರು. वि. ಸ್ತ್ರೀಸಂಬಂಧವಾದ, ಮಹಿಳೆಯರ

निसांस, निसास, पु. ನಿಟ್ಟುಸಿರು. वि. ಉಸಿರಾಡದ; ಮೃತಪ್ರಾಯವಾದ.

निसा, स्त्री. ಹೆಂಗಸು, ಸ್ತ್ರೀಜಾತಿ.

निसाब, स्त्री. ಬಂಡವಾಳ, ಮೂಲಧನ

निसार, पु. ಆಹುತಿ, ಬಲಿ; ಪರಿತ್ಯಾಗ

पाकीज़गी, स्त्री. ಸ್ವಚ್ಛತೆ, ನೈರ್ಮಲ್ಯ; ಪವಿತ್ರತೆ.

पाकीज़ा, वि. ಶುದ್ಧ; ನಿರ್ಮಲ, ಸ್ವಚ್ಛ; ಪವಿತ್ರ.

पाखंड, पु. ಕಪಟಾಚಾರ, ಬೂಟಾಟಿಕೆ.

पाखंडी, वि. ಕಪಟಿ, ವೇಷಧಾರಿ.

पाख, पु. ಪಕ್ಷ, ೧೫ ದಿವಸ; ಬೆಂತೊಲೆ ಯಿಡುವ ಗೋಡೆಯ ಭಾಗ.

पाखर, पु. ಆನೆ ಅಥವಾ ಕುದುರೆಗಳಿಗೆ ಧರಿಸುವ ಕಬ್ಬಿಣದ ಕವಚ.

पाखा, पु. ಮೂಲೆ, ಕೊನೆ; ಬೆಂತೊಲೆ ಯಿಡುವ ಗೋಡೆಯ ಭಾಗ

पाख़ाना, पु. ಕಕ್ಕಸು, ಕಾಲುಗುಣಿ, ಮೆಟ್ಟುಗುಣಿ; ಪಾಯಖಾನೆ, ಮಲ.

पाग, स्त्री. ಪಾಗು, ಪೇಟಾ, ರುಮಾಲು, ಮುಂಡಾಸು. पु. ಸಕ್ಕರೆ ಪಾಕ, "ಶೀರ"; ಪಾಕದಲ್ಲಿ ತಯಾರಾದ ಭಕ್ಷ್ಯ, ಅಥವಾ ಔಷಧ, ಮುರಬ್ಬ.

पागना, सक्रि. ಪಾಕದಲ್ಲಿ ಅದ್ದು. अक्रि ಅನುರಕ್ತನಾಗು.

पागल, वि. ಹುಚ್ಚ, ಮರುಳ; ಪೆದ್ದ.

पागलख़ाना, पु. ಹುಚ್ಚಾಸ್ಪತ್ರೆ, ಮರುಳರ ಆಸ್ಪತ್ರೆ.

पागलपन, पु. ಹುಚ್ಚುತನ. ಹುಚ್ಚು, ಪೈತ್ಯ, ಹೇಕುಳಿ, ಮರುಳು.

पागा, पु. ಕುದುರೆ ಪಟಾಲಂ, ರಾವುತರ ಪಡೆ. वि. ಪಕ್ವವಾದ, ಹಣ್ಣಾದ.

पागुर, पु. ಮೆಲುಕು ಹಾಕುವಿಕೆ; ಮೆಲುಕು, ಚರ್ವಣ.

पागुराना, सक्रि. =पगुराना.

पाचक, वि. ಅಡಿಗೆ ಮಾಡುವ; ಪಚನ ಮಾಡುವ, ಜೀರ್ಣಕಾರಿ.

पाचन, पु. ಅಡಿಗೆ ಮಾಡುವಿಕೆ; ಜೀರ್ಣಿಸುವಿಕೆ, ಅರಗಿಸುವಿಕೆ.

पाछ, पु. ಮರಗಿಡಗಳ ಅಥವಾ ಶರೀರದ ಚರ್ಮವನ್ನು ಸ್ವಲ್ಪವಾಗಿ ಸೀಳುವಿಕೆ, ಮರದ ಹಾಲು ಅಥವಾ ಸೊನೆ ಸುರಿಸುವಿಕೆ; ಕಚ್ಚು, ಗಾಯ; ಹಿಂಗಾಲೇಟು

पाछना, सक्रि. ಸೀಳು, ಸಿಗಿ; ಸೀಳಿ ರಕ್ತ ತೆಗೆ.

पाज, पु. =पांजर.

पाजामा, पु. ಸರಾಯಿ, ಇಜಾರು, ಪಾಯಿಜಾಮೆ, ಚಲ್ಲಣ.

पाजी, वि. ದುಷ್ಟ, ಪುಂಡ; ನೀಚ, ಬಿಕನಾಸಿ, ಪಾಜಿ.

पाजीपन, पु. ದುಷ್ಟತನ, ನೀಚತನ.

पाज़ेब, पु. ನೂಪುರ, ಅಂದುಗೆ.

पाट, पु. ರೇಷ್ಮೆ, ಪಟ್ಟೆವಸ್ತ್ರ; ಸಣಬು, ಪುಂಡಿನಾರು, ಗೋಣಿನಾರು; ನಾರು ಮಡಿ; ಸಿಂಹಾಸನ, ಪಟ್ಟವಣೆ, ಗದ್ದುಗೆ; ಪೀಠ, ಮಣೆ; ಹಾಸುಗಲ್ಲು, ಚಪ್ಪಡಿ ಕಲ್ಲು; ಬೀಸುವ ಕಲ್ಲು; ಬಾಗಿಲಿನ ಕದ; ಧಾನ್ಯದ ಚೀಲ, ಮೂಟೆ; ಪಾಠಿ, ಗುಡಿ; ಭಾವಿಯ ಸುತ್ತಲೂ ಕಟ್ಟಿದ

ಜಗಲಿ; ಅಗಲ, ವಿಸ್ತಾರ.

पाटन, पु. ಹುಲ್ಲು ಹೊಚ್ಚುವಿಕೆ, ಹೊದಿಸುವಿಕೆ; ಮುಚ್ಚುವಿಕೆ; ಮಾಳಿಗೆ, ಮಹಡಿ, ಮುಚ್ಚು, ಉಪ್ಪರಿಗೆ; ವಿಷ ಇಳಿಸುವ ಮಂತ್ರ; ಪಟ್ಟಣ

पाटना, सक्रि. ಹೂಳು, ಮುಚ್ಚು; ಭಾವಣಿ ಹಾಕು, ಹುಲ್ಲು ಹೊಚ್ಚು; ನೀರು ಹಾಯಿಸು; ಕೊಡು, ತೆರು.

पाटल, पु. ಗುಲಾಬಿ ಬಣ್ಣ.

पाटला, पु. ಬಂಗಾರ, ಅಪರಂಜಿ.

पाटव, पु. ದಕ್ಷತೆ, ಕುಶಲತೆ; ದಾರ್ಢ್ಯ

पाटवी, वि. ಪಟ್ಟದ ರಾಣಿಗೆ ಹುಟ್ಟಿದವ

पाटा, पु. ಪೀಠ, ಮಣೆ, ಆಸನ.

पाटी, स्त्री. ಪರಿಪಾಟಿ, ಪದ್ಧತಿ; ಹಲಗೆ; ಕಪ್ಪು ಹಲಗೆ; ಪಾಠ; ಚಪ್ಪಡಿ ಕಲ್ಲು; ದೋಣಿ ಹಂಚು, ಓಡು; ಚಾಪೆ; ಮಂಚದ ಪಟ್ಟಿ; ಬೈತಲೆ; ಒಂದು ಸಿಹಿ ತಿಂಡಿ

पाटूनी, पु. ದೋಣಿಗಾರ, ಅಂಬಿಗ

पाठ, पु. ಪಾಠ, ಪಠನ. स्त्री. ಪಾಠಶಾಲೆ

पाठक, पु. ಓದುವವ, ಪಾಠಕ; ಶಿಕ್ಷಕ

पाठकी, स्त्री. ಶಿಕ್ಷಕಿ.

पाठशाला, पु. ಪಾಠಶಾಲೆ, ವಿದ್ಯಾಲಯ

पाठा, वि. ಕೊಬ್ಬಿದ, ಬಲಿತ, ದಡುಮ

पाठ्य, वि. ಓದತಕ್ಕ; ಓದಬೇಕಾದ.

पाड़, पु. ಧೋತ್ರದ ಅಂಚು, ಕರೆ; ಭಾವಿಯ ಚೌಕಟ್ಟು, ಕಟ್ಟೆ; ಅಟ್ಟ, ಮಂಚಿಗೆ; ಗಲ್ಲಿನ ಅಟ್ಟ, ಗಲ್ಲುಮರ.

पाड़ना, सक्रि. ಬೀಳಿಸು; ಈಡೇರಿಸು, ಸಾಗಿಸು; ಮುಗಿಸು.

पाड़वा, पु. ಹುಣ್ಣಿಮೆ.

पाड़ा, पु. ಮೊಹಲ್ಲೆ, ಪೇಟೆ; ಗದ್ದೆ ಬದು, ತೆವರು; ಎಮ್ಮೆ ಕರು.

पाढ़, पु. ಪೀಠ, ಮಣೆ; ಅಟ್ಟ, ಮಂಚಿಗೆ

पाढ़त, स्त्री. ಓದುವಿಕೆ; ಮಂತ್ರಪಠನ.

पाढर, **पाढल**, पु. ಪಾದರಿ ಮರ.

पाढ़ा, पु. ಸಾರಂಗ, ಎರಳೆ.

पाढ़ी, स्त्री. ಹೊಳೆ ದಾಟುವಿಕೆ.

पाणि, पु. ಕೈ, ಪಾಣಿ, ಹಸ್ತ.

पाणिग्रहण, पु. ಕೈಹಿಡಿಯುವಿಕೆ, ಪಾಣಿಗ್ರಹಣ, ಮದುವೆ.

पात, पु. ಬೀಳುವಿಕೆ, ಪತನ; ಪತ್ರ, ಎಲೆ, ತೊಪ್ಪಲು; ಓಲೆ, ಬೆಂಡೋಲೆ.

पातकी, पु. ಪಾಪಿ, ಪಾತಕಿ.

पातगोभी, स्त्री. ಕೋಸುಗೆಡ್ಡೆ.

पातर, स्त्री. ಎಲೆ; ಪಾತರಗಿತ್ತಿ, ನರ್ತಕಿ. वि. ತೆಳುವಾದ, ಸಣಕಲಾದ.

पाता, पु. ಎಲೆ, ಪತ್ರ; ಓಲೆ, ಬೆಂಡೋಲೆ. गहना पाता = ನಗನಟ್ಟು, ದಾಗೀನು

पाताबा, पु. ಕಾಲುಚೀಲ, ಮೇಜೋಡು

पाती, स्त्री. ಎಲೆ, ಪತ್ರ; ಚೀಟು.

पात्र, पु. **पात्री**, स्त्री. ಪಾತ್ರೆ, ಭಾಂಡ.

पाथना, सक्रि. ತಟ್ಟು, ಸಗಣಿ ತಟ್ಟು.

पाद, पु. ಪಾದ, ಕಾಲು, ಅಡಿ; ಶ್ಲೋಕದ ಒಂದು ಚರಣ; ಅಪಾನವಾಯು, ಹೂಸು. पादटीका = ಪುಟದ ಕೆಳಗೆ ಬರೆದಿರುವ ಟಿಪ್ಪಣಿ, ಅಡಿ ಟಿಪ್ಪಣಿ.

पादना, अक्रि. ಹೂಸು ಬಿಡು, ಹೂಸು.

पादपद्म, पु. ಅಡಿದಾವರೆ.

पादशाह, पु. ಬಾದಶಹ, ಚಕ್ರವರ್ತಿ.

पादाश, **पादाइत**, स्त्री. ಪ್ರತಿಫಲ,

ಫಲಿತಾಂಶ.

पादी, वि. ಕಾಲುಳ್ಳ, ಪಾದವುಳ್ಳ. पु ಕಾಲುಭಾಗಕ್ಕೆ ಹಕ್ಕುದಾರ; ಛತ್ರ.

पादुका, स्त्री. ಪಾದುಕೆ, ಹಾವುಗೆ.

पाधा, पु. ಉಪಾಧ್ಯಾಯ, ಅಧ್ಯಾಪಕ.

पान, पु. ಗಂಜಿ, ಅಂಬಲಿ; ಪಾನ, ಕುಡಿತ; ಪಾನೀಯ; ಪ್ರಾಣ; ಎಲೆ, ವೀಳ್ಯದೆಲೆ; ಇಸ್ಪೀಟಾಟದಲ್ಲಿ ಒಂದು ಬಣ್ಣ; ಇಸ್ಪೀಟು; ಬುಟ್ಟಾ ಕೆಲಸ; ಎಕ್ಕಡದ ಹಿಮ್ಮಡಿಯ ಕೆಳಗಣ ಅಟ್ಟೆ; ಎಳೆ; ಲಡಿ; ಹೊಸ ಬಟ್ಟೆಯ ನೇಯದಿರುವ ಎಳೆಗಳು. वि. (=पांच), ಐದು ಉದಾ:- पान सेर = ಐದು ಸೇರು.

पानड़ी, पु. ಒಂದು ಬಗೆ ಸೊಪ್ಪು.

पानदान, पु. ವೀಳ್ಯದೆಲೆಯ ಪೆಟ್ಟಿಗೆ, ಅಡಪ, ಸಂಬಳಿಗೆ.

पान-फूल, पु. ಎಲೆ ಹೂ ಮುಂತಾದ ಸ್ವಾಗತದ ಸಾಮಗ್ರಿಗಳು.

पाना, सक्रि. ಪಡೆ, ಹೊಂದು; ದೊರಕಿಸಿಕೊಳ್ಳು, ಗಳಿಸು; ಅಯ್ದು, ತಲಪು; ಕಂಡುಕೊಳ್ಳು. पु. ಬರಬೇಕಾದ ಹಣ, ಬಾಕಿ.

पानी, पु. ನೀರು, ಜಲ; ಮಳೆ; ರತ್ನಗಳ ಹೊಳಪು, ಪೊಗರ್, ಹೊಳಕು; ತಳಿ; ಮಾನ, ಮರ್ಯಾದೆ. पानी देवा = ತರ್ಪಣ ಕೊಡುವವ; ವಂಶಸ್ಥ.

पानीदार, वि. ಮಾನಸ್ಥ; ಎದೆಗಾರ

पानिफल, पु. ಶೃಂಗಾಟಕ ಬಳ್ಳಿ.

पानौरा, पु. ವೀಳ್ಯದೆಲೆಯಿಂದ ಮಾಡುವ ಒಂದು ಭಕ್ಷ್ಯ.

पाप, पु. ಪಾಪ, ದುಷ್ಕರ್ಮ.

पापड़, पु. ಹಪ್ಪಳ; ಹೊರಿಕೆ, ಪೊರೆ.

पापड़ा, पु. ಒಂದು ಮರ.

पापा, पु. ಅಂದು ಹುಳು, ನುಸಿ; ಅಪ್ಪ, ತಂದೆ.

पापोश, स्त्री. ಪಾದರಕ್ಷೆ, ಪಾಪಾಸು, ಎಕ್ಕಡ, ಮೆಟ್ಟು.

पाबंद, वि. ಬದ್ಧನಾದ, ಕಟ್ಟಲ್ಪಟ್ಟ; ವಿವಶ.

पाबंदी, स्त्री. ಬದ್ಧತೆ, ಕಟ್ಟು; ವಿವಶತೆ.

पामड़ा, पु. = पांवड़ा.

पामाल, वि. = पायमाल.

पायंचा, पु. ಪಾಯಖಾನೆ ಮನೆಯಲ್ಲಿ ಕಾಲಿಡುವ ಕಲ್ಲು, ಕಾಲುಗುಣಿ; ಷರಾಯಿಯ ಕಾಲುಗಳು; ಷರಾಯಿಯ ಜಾಮ.

पायंता, पु. ಮಂಚದ ಕಾಲುಕಡೆ.

पायंदाज़, पु. ಕಾಲಿನ ಧೂಳು ಒರೆಸಲು ಬಾಗಿಲಲ್ಲಿ ಹಾಸಿರುವ ಗೋಣಿ ತಟ್ಟು, ಮೆಟ್ಟುಗಂಬಳಿ, ಕಾಲೊರೆಸಿ.

पाय, पु. ಕಾಲು, ಪಾದ, ಅಡಿ.

पायक, पु. ಕಾಲಾಳು, ಪದಾತಿ; ದಾಸ; ದೂತ

पायख़ाना, पु. ಕಕ್ಕಸು, ಪಾಯಖಾನೆ ಮನೆ; ಪಾಯಖಾನೆ, ಮಲ.

पायगी, स्त्री. ದರ್ಜೆ, ಅಂತಸ್ತು.

पायजा, पु. ನಾಗವಾಸ, ಕೊಂಡಿ; ತಿರುಗಣೆ ಮೊಳೆ, ಬಿಜಾಗರಿ.

पायजामा, पु. ಷರಾಯಿ, ಇಜಾರು, ಪಾಯಜಾಮೆ, ಚಲ್ಲಣ.

पायज़ेब, पु. ನೂಪುರ, ಕಾಲಂದುಗೆ.

पायठ, पु. ಅಟ್ಟ, ಮಂಚಿಗೆ.

पायतख़्त, पु. ರಾಜಧಾನಿ, ರಾಜನಗರ

पायता, पु. ಹಾಸಿಗೆಯ ಕಾಲುಕಡೆ.

पायताबा, पु. ಕಾಲುಚೀಲ, ಮೋಜೋಡು.

पायदान, पु. = पांवदान.

पायदार, वि. ಬಾಳಿಕೆ ಬರುವ, ತಾಳಿಕೆಯ; ಗಟ್ಟಿಯಾದ; ಸ್ಥಿರವಾದ.

पायदारी, स्त्री. ಬಾಳಿಕೆ, ಗಟ್ಟಿ.

पायमाल, वि. ತುಳಿಯಲ್ಪಟ್ಟ, ಧ್ವಂಸವಾದ; ಹಾಳಾದ, ನಷ್ಟವಾದ.

पायमाली, स्त्री. ಧ್ವಂಸ; ಹಾಳು; ನಾಶ

पायरा, पु. = पाइरा.

पायल, स्त्री. ನೂಪುರ, ಕಾಲಂದುಗೆ; ಏಣಿ

पायस, पु. ಪಾಯಸ, ಖೀರು.

पाया, पु. ಮಂಚದ ಕಾಲು; ಆಧಾರ; ಅಸ್ತಿಭಾರ, ತಳಹದಿ; ಅಂತಸ್ತು, ದರ್ಜೆ, ಪದವಿ; ಏಣಿ; ಸೋಪಾನ.

पायाब, पु. ಕಾಲುಹೊಳೆ, ಹಾಯ್ಗಡ.

पार, पु. ಆಚೆಯ ದಡ; ದಡ, ಕಟ್ಟೆ, ಏರಿ; ಕಡೆ, ಕೊನೆ. क्रिवि. ದಾಟಿ, ಕಡೆಹಾಯ್ದು; ದೂರವಾಗಿ. पार होना = ಪಾರಾಗು, ತಡಹಾಯು; ಉತ್ತೀರ್ಣನಾಗು, ತೇರ್ಗಡೆಹೊಂದು

पारखी, वि. ಪರೀಕ್ಷಿಸುವವ, ಪರೀಕ್ಷಕ

पारचा, पु. ಬಟ್ಟೆ; ಬಟ್ಟೆ ಚೂರು, ತೇಪೆ

पारण. पु. ಪೂರೈಸುವಿಕೆ; ಪಾರಣೆ.

पारद, पु. ಪಾದರಸ.

पारना, अक्रि. ಉದ್ಯಾಪನೆ ಮಾಡು; ಪಾರಣೆ ಮಾಡು. सक्रि. ಬೀಳಿಸು; ಇರಿಸು; ಎರಕ ಹೊಯ್ಯು.

पारस, पु. ಪಾರಸೀಕ ದೇಶ, ಪರ್ಷಿಯಾ ದೇಶ; ಸ್ಪರ್ಶಮಣಿ; ಬಡಿಸಿದ ಊಟ, ಊಟದ ಪದಾರ್ಥ, ಎಡೆ.

पारसा, पु. ಶ್ರೇಷ್ಠ, ಆರ್ಯ, ಪವಿತ್ರ.

पारसाई, स्त्री. ಪವಿತ್ರತೆ, ಶ್ರೇಷ್ಠತೆ.

पारसी, वि. ಪರ್ಷಿಯಾದೇಶದ. पु. ಪರ್ಷಿಯಾ ದೇಶದವ, ಪಾರಸೀಕ; ಪಾರಸೀಕ ಭಾಷೆ; ಪಾರ್ಸಿಯರು.

पारा, पु. ಪಾದರಸ; ಹಣತೆ, ದೀಪ; ಚೂರು, ತುಂಡು; ಇಟ್ಟಿಗೆಯ ಚಿಕ್ಕ ಗೋಡೆ; ಬಹುಮಾನ, ಉಪಾಯನ, ಕಾಣಿಕೆ.

पारितोषिक, पु. ಬಹುಮಾನ, ಇನಾಮು

पारिंदा, पु. ಸಿಂಹ; ಹೆಬ್ಬಾವು.

पारी, स्त्री. ಸರದಿ, ಸರ್ತಿ, ಒಂತು; ಕ್ರಮ; ಚಕ್ಕಳದ ದೊಡ್ಡ ಚೀಲ; ಕಟ್ಟೆ, ಏರಿ.

पार्श्व, पु. ಪಕ್ಕ, ಪಾರ್ಶ್ವ; ಅಳ್ಳೆ, ಬಗಲು, ಮಗ್ಗುಲು.

पारीना, वि. ಆಗಿಹೋದ, ಕಳೆದುಹೋದ.

पाल, पु. ಹಡಗಿನ ಪಟ, ತೆರೆಚಾಪೆ, ಹಾಯಿ; ಕಟ್ಟುವಾಸ, ಮೇಲ್ಕಟ್ಟು, ಚತ್ರ; ಪರದೆ, ತೆರೆ; ಡೇರೆ, ಗುಡಾರ. स्त्री. ಕಾಯಿಗಳನ್ನು ಹುಲ್ಲು ಎಲೆಗಳ ಮೇಲೆ ಹಾಸಿ ಹಣ್ಣಿಗೆ ಹಾಕುವಿಕೆ; ಅಣೆ, ಅಣೆಕಟ್ಟು; ಕಟ್ಟೆ, ಒಡ್ಡು; ಮರೆ, ಆಸರೆ.

पालक, पु. ಸಾಕುವವ, ಪಾಲಕ; ಸಾಕು ಮಗ; ಒಂದು ತರಕಾರಿ; ಮಂಚ.

पालकरी, स्त्री. ಮರದ ದಿಂಬು.

पालकी, स्त्री. ಪಲ್ಲಕ್ಕಿ, ಡೋಲಿ, ಅಂದಳ, ದಂಡಿಗೆ; ಚಟ್ಟ; ಒಂದು ತರಕಾರಿ.

पालतू, वि. ಸಾಕುವ, ಪೋಷಿತ; ಸಾಕು (ಪ್ರಾಣಿ).

पालथी, स्त्री. ಚಪ್ಪಳಕಾಲು ಹಾಕಿ ಕೂಡುವಿಕೆ, ಚಕ್ಕಳಬಕ್ಕಳ, ಪದ್ಮಾಸನ. आलथी पालथी मारना = ಚಪ್ಪಳಕಾಲು ಹಾಕಿ ಕೂಡು.

पालन, पु. ಸಾಕುವಿಕೆ, ಸಲಹುವಿಕೆ; ಸಂರಕ್ಷಣೆ, ಪಾಲನೆ.

पालनहार, पु. ಸಾಕುವವ, ಪಾಲಕ.

पालना, पु. ತೂಗುಮಂಚ, ತೊಟ್ಟಿಲು, ಕಾಗಡಿ. सकि. ಸಾಕು, ಸಲಹು; ಸಂರಕ್ಷಿಸು, ಹೊರೆ, ಪೊರೆ. पालना पोसना = ಸಾಕು ಸಲಹು; ಲಾಲಿಸು ಪಾಲಿಸು, ಆರೈಕೆಮಾಡು.

पाला, पु. ಮಂಜು, ಇಬ್ಬನಿ; ಗಿಡಗಳ ಒಂದು ರೋಗ, ಕಾಡಿಗೆ, ಜಿಗಿ; ಪ್ರಸಂಗ, ಸಂದರ್ಭ, ಪ್ರಮೇಯ; ಸರದಿ; ಮುಖ್ಯಸ್ಥಾನ, ನೆಲೆ; ಗದ್ದೆ ಬದು, ತೆವರು; ಗಡಿ, ಸರಹದ್ದು; ಹಗೇವು, ಓಡೆ; ಮಲ್ಲಭೂಮಿ, ಅಖಾಡಾ; ಪಾಲನೆ; ಸಂರಕ್ಷಣೆ.

पालागन, पु. ಕಾಲಿಗೆ ಬೀಳುವಿಕೆ, ಅಡಿಗೆರಗುವಿಕೆ, ನಮಸ್ಕಾರ.

पालान, पु. ಜೀನು, ಹಲ್ಲಣ, ಕವುದಿ.

पालानी, वि. ಜೀನುಳ್ಳ, ಹಲ್ಲಣ ಹಾಕಿದ; ಹಲ್ಲಣ ಮಾಡುವವ, ಜೀನುಗಾರ.

पालित, वि. ಸಾಕಿದ, ಸಾಕುತ್ತಿರುವ.

पाली, स्त्री. ಮುಚ್ಚಳ; ಮೊಣಕಾಲು ಚಿಪ್ಪು; ಕಿವಿಯ ತುದಿ; ಕತ್ತಿಯ ಅಲಗು; ಒಡ್ಡು, ಕಟ್ಟೆ.

पालू, वि. = पालतू.

पावँ, पु. = पाँव.

पाव, पु. ಕಾಲುಭಾಗ, ಹಾಗ; ಪಾವು. पाव रोटी = ಫರಂಗಿಯವರು ಮಾಡುವ ರೊಟ್ಟಿ.

पावती, स्त्री. ವರಮಾನ, ಆದಾಯ; ಲಾಭ.

पावदान, पु. = पाँवदान.

पावन, वि. ಪವಿತ್ರವಾದ, ಪುನೀತ.

पावना, सकि. ಹೊಂದು, ಪಡೆ, ದೊರಕಿಸಿಕೊಳ್ಳು. पु. ಪಡೆಯಬೇಕಾದ ಹಣ, ಬರತಕ್ಕ ಹಣ; ಅತಿಥಿ, ಬಿದ್ದಿನ.

पावली, स्त्री. ನಾಣ್ಯದ ಕಾಲುಭಾಗ; ಕಾಲು ರೂಪಾಯಿ ನಾಣ್ಯ, ಪಾವಲಿ.

पावस, स्त्री. ವರ್ಷಾಕಾಲ, ಮಳೆಗಾಲ.

पाश, पु. ಪಾಶ, ಹಗ್ಗ; ಸರಗುಣಿಕೆ; ಒಡೆಯುವಿಕೆ; ಚೂರು, ತುಂಡು.

पाशविकता, स्त्री. ಪಶುತ್ವ; ಪಶುಪ್ರಾಯ.

पाशवी, वि. ಪಶು ಸಂಬಂಧವಾದ; ಪಶುಪ್ರಾಯದ. पाशवी बल = ಮೃಗಬಲ.

पाशा, पु. ಪಾಚಿಕೆ, ದಾಳ; ಮರ ಹತ್ತುವವರು ಕಾಲಿಗೆ ಕಟ್ಟಿಕೊಳ್ಳುವ ಹಗ್ಗ; ತುರ್ಕಿ ರಾಜರ ಬಿರುದು.

पासंग, पु. ಪೇರು ಕಟ್ಟುವಿಕೆ, ದಡೆ ಕಟ್ಟುವಿಕೆ; ಏರುಪೇರು, ಓರಡಿ.

पास, पु. ಪಕ್ಕ, ದಂಡೆ; ಸಮೀಪ, ಹತ್ತಿರ, ಸನಿಯ, ನೆರೆ; ರಕ್ಷಣೆ, ಕಾವಲು, ಪಹರೆ; ಜಾವ, ೩ ಗಂಟೆ ಕಾಲ. क्रिवि. ಬದಿಗೆ; ಬಳಿ, ಹತ್ತಿರ, ಸಮೀಪದಲ್ಲಿ. पास पड़ोस = ಅಕ್ಕ ಪಕ್ಕ, ನೆರೆಹೊರೆ.

पासना, सक्रि. (ಹಾಲು) ಸೊರೆಬಿಡು.

पासनी, स्त्री. ಅನ್ನಪ್ರಾಶನ.

पासबां, पासबान, पु. ಕಾವಲುಗಾರ, ಪಹರೆಯವ.

पासा, पु. ಪಗಡೆಯ ದಾಳ, ಪಾಚಿಕೆ, ನೆತ್ತ; ಪಗಡೆಯಾಟ, ನೆತ್ತದಾಟ; ಉರುಳುಕಲ್ಲು, ಕೊರಡ; ಬೊಗಸೆ; ಚಿನ್ನದ ಕಂಬಿ.

पासी, स्त्री. ಸರಗುಣಿಗೆ; ಕುದುರೆಯ ಹಿಂಗಾಲುಗಳನ್ನು ಕಟ್ಟುವ ಹಗ್ಗ, ಪಿಚಾಡಿ. पु. ಬಲೆ ಬೀಸುವವ, ಹಕ್ಕಿ ಬೇಟೆಗಾರ.

पाहँ, क्रिवि. ಹತ್ತಿರ, ಬಳಿ.

पाहन, पु. ಕಲ್ಲು.

पाहुन, पाहुना, पु. ಅತಿಥಿ, ಬಿದ್ದಣಿಗ; ಅಳಿಯ.

पाहुनी, स्त्री. ಅತಿಥಿ; ಆತಿಥ್ಯ

पाहुर, पु. ಕಾಣಿಕೆ, ಉಪಾಯನ, ಉಡುಗೊರೆ.

पाहू, पु. ಒಬ್ಬ ಮನುಷ್ಯ, ವ್ಯಕ್ತಿ.

पिंगल, पु. ಕಪಿಲವರ್ಣ, ನಸ್ಯದ ಬಣ್ಣ; ಛಂದಶ್ಶಾಸ್ತ್ರ.

पिंगूरा, पु. ತೂಗುಮಂಚ, ತೊಟ್ಟಿಲು.

पिंजन, पु. ಅರಳೆ ಎಕ್ಕುವ ಬಿಲ್ಲು.

पिंजड़ा, पिंजर, पिंजरा, पु. ಗೂಡು, ಬೋನು. पिंजरा पोल = ಪಶುಶಾಲೆ, ಗೋಶಾಲೆ.

पिंजरी, स्त्री. ಸಣ್ಣ ಗೂಡು.

पिंजारी, पु. ಅರಳೆ ಎಕ್ಕುವವ, ಪಿಂಜಾರ.

पिंजिराना, सक्रि. ಸೇರಿಸು, ಕೂಡಿಸು.

पिंड, पु. ಉಂಡೆ, ಮುದ್ದೆ, ಪಿಂಡ; ಭೋಜನ; ದೇಹ, ಶರೀರ; ಉರುಳಿಕ.

पिंडखजूर, पु. ಒಂದು ಬಗೆ ಖರ್ಜೂರ.

पिंडली, स्त्री. ಕಣಕಾಲು, ಮೀನಖಂಡ.

पिंडवाही, स्त्री. ಒಂದು ಬಗೆ ಬಟ್ಟೆ.

पिंडा, पु. ಪಿಂಡ, ಉಂಡೆ; ಮುದ್ದೆ, ತೆರಳೆ; ತುತ್ತು; ಲಾಡು; ಮನುಷ್ಯ, ವ್ಯಕ್ತಿ; ಶರೀರ, ದೇಹ.

पिंडारा, पिंडारी, पु. ಸುಲಿಗೆಕಾರ, ದರೋಡೆಗಾರ.

पिंडालू, स्त्री. ಒಂದು ಬಗೆ ಗೆಣಸು.

पिंडिका, स्त्री. ಚಿಕ್ಕ ಉಂಡೆ, ಮುದ್ದೆ; ಮೀನಖಂಡ; ಪೀಠ, ವೇದಿಕೆ.

पिंडिया, स्त्री. ಉದ್ದವಾದ ಉಂಡೆ, ಮುದ್ದೆ, ಕರಣೆ; ಬೆಲ್ಲದ ಉಂಡೆ; ದಾರದ ಕಂಡು, ಕಂಡಿಕೆ; ತಿರಿ.

पिंडी, स्त्री. ಮುದ್ದೆ, ಉಂಡೆ, ತೆರಳೆ; ಕರಣೆ, ಹಳುಕು; ಒಂದು ಬಗೆ ಕುಂಬಳಕಾಯಿ; ಬಲಿಪೀಠ, ವೇದಿಕೆ; ದಾರದ ಕಂಡು; ಕಟ್ಟು, ಪಿಂಡಿ.

पिंडोल, पु. ಗೋಪಿಮಣ್ಣು.

पिअरी, स्त्री. ಅರಸಿನದ ವಸ್ತ್ರ.

पिऊ, पु. ಪ್ರಿಯ, ಇನಿಯ.

पिक, पु. ಕೋಗಿಲೆ.

पिकवयनी, पिकबैनी, स्त्री. ಕೋಗಿಲೆ ಯಂತಹ ಮಧುರವಾಣಿಯುಳ್ಳವಳು

पिघलना, अक्रि. ಕರಗು, ಜಿನುಗು; ದ್ರವಿಸು; ಮೆದುವಾಗು.

पिघलवाना, पिघलाना, सक्रि. ಕರಗಿಸು; ಜಿನುಗಿಸು; ಮೆದುಮಾಡು.

पिघलाव, पु. ಕರಗುವಿಕೆ.

पिचकना, अक्रि. ನಗ್ಗು, ಅದುಗು; ಉಡುಗು; ಕುಸಿ.

पिचकाना, सक्रि. ನಗ್ಗಿಸು, ಅದುಗಿಸು; ಅದುಮು, ನಜುಗು; ಉಡುಗಿಸು.

पिचकारी, स्त्री. ಜೀರ್ಕೊಳವಿ, ಪಿಚಕಾರಿ, ಚಿಮ್ಮುಗೊಳವಿ.

पिचना, अक्रि. ತುಳಿಯಲ್ಪಡು.

पिचपिचा, वि. ಮೆದುವಾದ; ಗಿಜಿಬಿಜಿ; ಜಿಗಟಾದ, ಜಿಡ್ಡಾದ; ಜಾರುವ; ತೇವ

पिचुका, पु. ಪಿಚಕಾರಿ; ಒಂದು ಬಗೆ ಪೂರಿ.

पिचैत, पु. ಮಲ್ಲ, ಕುಸ್ತಿಗಾರ; ಜಟ್ಟಿ.

पिचैती, स्त्री. ಮಲ್ಲಯುದ್ಧ, ಕುಸ್ತಿ.

पिच्चित, पिच्ची, वि. ಅದುಗಿದ, ನಗ್ಗಿದ, ಜಜ್ಜಿದ.

पिच्छ, पु. ಬಾಲ, ಪುಚ್ಛ; ನವಿಲ ಪುಚ್ಛ.

पिच्छल, पु. ಗೋಂದು, ಹಗಿನು. वि. ಜಿಡ್ಡಾದ, ಜಾರುವ.

पिछड़ना, अक्रि. ಹಿಂದುಳಿ, ಹಿಂಚು

पिछलगा, पिछलग्गू, पु. ಒಬ್ಬನ ಹಿಂದೆ ಹೋಗುವವ; ಹಿಂಬಾಲಿಸುವವ, ಹಿಂಬಾಲಕ; ಅನುಯಾಯಿ.

पिछलना, अक्रि. ಜಾರು, ನುಣುಚು, ಸರಿ.

पिछलपाई, स्त्री. ಪಿಶಾಚಿನಿ, ಡಾಕಿನಿ.

पिछला, वि. ಹಿಂದುಗಡೆಯ, ಹಿಂಬದಿಯ, ಹಿಂದಣ; ಕಳೆದ.

पिछवा, पु. ಜೀನಿನ ಹಿಂಭಾಗ.

पिछवाई, स्त्री. ಹಿಂಭಾಗದ ಪರದೆ, ತೆರೆ

पिछवाड़ा, पु. **पिछवाड़ी**, स्त्री. ಹಿಂಭಾಗ, ಹಿಂಬದಿ, ಹಿಂಗಡೆ; ಮನೆಯ ಹಿಂಭಾಗದ ತೋಟ, ಹಿತ್ತಲು.

पिछाड़ना, सक्रि. ಹಿಮ್ಮೆಟ್ಟಿಸು, ಹಿಂದೂಡು.

पिछाड़ी, स्त्री. ಹಿಂಭಾಗ, ಹಿಂಗಡೆ; ಹಿಂಗಟ್ಟು; ಹಿಂಗಾಲನ್ನು ಕಟ್ಟುವ ಹಗ್ಗ, ನಿಗಡ, ಪಿಚಾಡಿ. क्रिवि. ಹಿಂದುಗಡೆ.

पिछैत, पिछैती, वि. ಹಿಂಭಾಗದ; ಕೊನೆಯ.

पिछौरा, पु. **पिछौरी**, स्त्री. ಹೊದಿಯುವ ವಸ್ತ್ರ, ದುಪ್ಪಟಿ; ಕರವಸ್ತ್ರ.

पिटंत, स्त्री. ಹೊಡೆಯುವಿಕೆ, ಹೊಡೆತ

पिटक, पु. ಬುಟ್ಟಿ; ಕುರು, ಗುಳ್ಳೆ; ಪುಸ್ತಕದ ಒಂದು ಭಾಗ, ಖಂಡ.

पिटना, अक्रि. ಬಡಿಯಲ್ಪಡು; ಕುಟ್ಟಲ್ಪಡು; ಪೆಟ್ಟು ತಿನ್ನು, ಏಟು ತಿನ್ನು. पु. ಪೆಟ್ಟಣಿಗೆ, ದಮ್ಮಸ್ಸು; ಜಗಳ; ಅಳು, ಗೋಳು.

पिटपिटिया, पु. ಅರಳೆ ಎಕ್ಕುವವ.

पिटवाना, सक्रि. पीटना का प्रे. रूप.

पिटाई, स्त्री. ಬಡಿಯುವಿಕೆ, ಕುಟ್ಟುವಿಕೆ; ಹೊಡೆತ, ಪೆಟ್ಟು; ಬಡಿಯುವುದರ

ಕೂಲಿ, ಕುಟ್ಟುವುದಕ್ಕೆ ಮಜೂರಿ.
पिटाना, सक्रि. "पीटना" का प्रे. रूप.
पिटारा, पु. ಬಿತ್ತದ ಪೆಟ್ಟಿಗೆ; ಬುಟ್ಟಿ, ಪೆಟಾರಿ, ಹೆಡಿಗೆ.
पिटारी, स्त्री. "पिटारा" का अल्प रूप.
पिट्टक, पु. ದಂತಮಲ, ಹಲ್ಲುಗಾರೆ.
पिट्ठू, पु. ಹಿಂಬಾಲಿಸುವವ, ಅನುಗಾಮಿ; ಸಹಾಯಕ; ತನ್ನ ಪಕ್ಷದವ ಯಾರೂ ಇಲ್ಲದಿರುವಾಗ ಅವನ ಆಟವನ್ನೂ ತಾನೇ ಆಡುವಿಕೆ.
पिठवन, पिठौनी, स्त्री ಪೃಷ್ಠಪರ್ಣಿ ಗಿಡ
पिठौरी, स्त्री. ಅಂಬಡೆ, ಬೋಂಡ.
पिड़वाना, सक्रि. ಇಡಿಸು, ಕುಟ್ಟಿಸು.
पितपापड़ा, पु. ಪರ್ಪಟಕ ಗಿಡ.
पितर, पु. ಪೂರ್ವಿಕರು, ಪಿತೃಗಳು.
पितराई, पितरायंध, स्त्री. ಕಿಲುಬು, ಚಿಲುಮು.
पितराना, पितलाना, अक्रि. ಕಿಲುಬು, ಕಿಲುಬು ಹಿಡಿ.
पिता, पु. ತಂದೆ, ಪಿತಾ, ಅಪ್ಪ.
पितारी, स्त्री. ಅಕ್ಕಿಯಲ್ಲಿರುವ ಒಂದು ಹುಳು.
पितिया, पु. ಚಿಕ್ಕಪ್ಪ.
पित्तल, पु. ಪಿತ್ತ ಪದಾರ್ಥ; ಬಡಿಸಿದ ಎಲೆ, ಎಡೆ; ಹಿತ್ತಾಳೆ.
पित्ता, पु. ಪಿತ್ತಕೋಶ; ಧೈರ್ಯ, ಸಾಹಸ; ಕೋಪ.
पित्ती, स्त्री. ಗುಳ್ಳೆ, ಕುರು; ಬೆವರುಗುಳ್ಳೆ, ಬೆವರುಸಾಲೆ.
पिद्दी, स्त्री. ಒಂದು ಪಕ್ಷಿ, ಗೊಂಗೆ, ಗೊನಗಾ; ಕೆಲಸಕ್ಕೆ ಬಾರದ ವಸ್ತು, ತುಚ್ಛ ವಸ್ತು; ತುಚ್ಛ ಮನುಷ್ಯ.
पिदर, पु. ಪಿತಾ, ತಂದೆ.
पिदराना, वि. ತಂದೆಯಂತಹ.
पिदरी, वि. ತಂದೆಯ, ಪೈತೃಕ.
पिद्दा, पु. पिद्दी, स्त्री. = पिद्दी.
पिन, पु. ಸೀಟಿ, ಶಿಲಿಪೆ, ಸಿಳ್ಳು.
पिनक, स्त्री. ಮದ, ಸುಂದು.
पिनकना, अक्रि. ಜೋಂಪಿಸು, ತೂಕಡಿಸು, ಸುಂದುಗೊಳ್ಳು.
पिनकी, स्त्री. ಸುಂದು, ಮದ, ಮೈಕ; ಅಫೀಮು ಸೇವಿಸುವವ.
पिनपिनहां, वि. ಕೆಟ್ಟ; ಅಸಹ್ಯ.
पिनपिनाना, अक्रि. ಗೊಣಗು, ಝೇಂಕರಿಸು.
पिनपिनाहट, स्त्री. ಝೇಂಕಾರ, ಝಣತ್ಕಾರ.
पिनहां, वि. ಗುಟ್ಟಾದ, ಗುಪ್ತ; ಅದೃಶ್ಯ
पिन्ना, पु. ಹಿಂಡಿ, ಪಿಣ್ಯಾಕ; ದಾರದ ಉಂಡೆ.
पिन्नी, स्त्री. ಒಂದು ಮಿಠಾಯಿ.
पिन्हाना, सक्रि. ಉಡಿಸು, ತೊಡಿಸು.
पिपड़ी, स्त्री. ಸಣ್ಣ ಇರುವೆ.
पिपरामूल, पु. ಹಿಪ್ಪಲಿ ಬೇರು.
पिपला, पु. ಕತ್ತಿಯ ಮೊನೆ.
पिप्पल, पु. ಅಶ್ವತ್ಥಮರ.
पिप्पी, स्त्री. ಗಸಿ, ಚರಟ.
पिय, पिया, पु. ಪ್ರಿಯ, ಇನಿಯ, ಪತಿ.
पियक्कड़, पु. ಸುರಾಪಾನ ಮಾಡುವವ, ಕುಡುಕ.

पिराई, स्त्री. ಹಳದಿ ಬಣ್ಣ, ಹಳದಿ.

पियराना, अक्रि. ವಿವರ್ಣನಾಗು, ಕಳೆಗುಂದು.

पियरी, स्त्री. ಅರಿಸಿನದ ವಸ್ತ್ರ.

पियल्ला, पु. ಹಾಲುಣ್ಣುವ ಮಗು.

पियाज़, स्त्री. =प्याज़.

पियाना, सक्रि. ಕುಡಿಸು; ನೀರುಹಾಯಿಸು.

पियार, पु. ಒಂದು ಮರ, ಮೊರಲೆ. वि. ಪ್ರಿಯ, ಪ್ರೀತಿಯುಳ್ಳ. स्त्री. ಪ್ರಿಯ, ಪ್ರೀತಿ.

पिराक, पु. ಕರಿಗಡುಬು, ಕರ್ಜಿಕಾಯಿ

पिराना, अक्रि. ನೋಯು, ನೋವಾಗು

पिरोजा पु. =फ़ीरोजा.

पिरोना, सक्रि. ಪವಣಿಸು, ಪೋಣಿಸು.

पिलई, स्त्री. ಪ್ಲೀಹ, ಗುಲ್ಮ, ತೊರಳೆ.

पिलचना, अक्रि. ಅಂಟಿಕೊ, ಕಚ್ಚಿಕೊ

पिलड़ी, स्त्री. ಮಾಂಸದ ಚೂರು; ಹಿಟ್ಟು ಮುದ್ದೆ, ಉಂಡೆ.

पिलना, अक्रि. ಎರಗು, ಅಡರು; ಮೇಲೆ ಬೀಳು; ಅಪ್ಪಿಕೊ, ಕಚ್ಚಿಕೊ; ದುಡಿ, ನುರಿ, ಅರೆ; ಜಜ್ಜಿಹೋಗು.

पिलपिला, वि. ಮೆದುವಾದ, ಅಳ್ಳಾದ; ಗಿಜಿಗಿಜಿ, ಗಿಜಟೆ.

पिलपिलाना, अक्रि. ಮೆದುವಾಗು; ಗಿಜಟೆಯಾಗು सक्रि. ನಜುಗು, ಅದುಗು; ಹಿಸುಕು, ಹಿಂಡು; ಮೆದುಮಾಡು.

पिलपिलाहट, स्त्री. ಮೃದುತ್ವ; ಸಡಿಲತೆ

पिलवाना, सक्रि. ಕುಡಿಸು; ನೀರು ಕಟ್ಟು; ನೂಕಿಸು, ದೂಡಿಸು; ಅದುಗಿಸು

पिलही, स्त्री. ಪ್ಲೀಹ, ಗುಲ್ಮ; ಮೀನಿನ ನಡ್ಡಿ; ಸೊಂಟ.

पिलाई, स्त्री. ಕುಡಿಸುವಿಕೆ; ಪಸಿವು, ಕಣಿವು; ಕುಡಿಸುವುದಕ್ಕೆ ಕೊಡುವ ಕೂಲಿ; ಪಾನದ ಖರ್ಚು; ಹಳದಿಬಣ್ಣ

पिलवाना, पिलाना, सक्रि. ಕುಡಿಸು; ಕುಡಿಯಲು ಕೊಡು, ಪಾನಮಾಡಿಸು; ನೀರು ತೋರಿಸು; ನೀರು ಹಾಯಿಸು.

पिलाऊ, पु =पीलू.

पिलाहट, स्त्री. ವಿವರ್ಣತೆ, ಬಣ್ಣಗುಂದುವಿಕೆ.

पिलास, पु. =प्यास.

पिलुआ, पिल्लू, पु. ಒಂದು ಹುಳು.

पिल्ला, पु. ನಾಯಿ ಮರಿ, ಕುನ್ನಿ.

पिवाना, सक्रि. = पिलाना.

पिशाच, पु. ಪಿಶಾಚಿ; ದೆವ್ವ.

पिशाचिन, पिशाचिनी, स्त्री. ಹೆಣ್ಣು ಪಿಶಾಚಿ.

पिशुन, वि. ಕ್ರೂರ; ಚಾಡಿಖೋರ; ಮೋಸಗಾರ; ನೀಚ; ಕೆಟ್ಟ.

पिष्ट, पु. ಹಿಟ್ಟು, ಪಿಷ್ಟ.

पिष्टपेषण, पु. ಹಿಟ್ಟನ್ನು ಬೀಸುವಿಕೆ; ಹೇಳಿದ್ದನ್ನೇ ಹೇಳುವಿಕೆ.

पिसनहारी, स्त्री. ಹಿಟ್ಟು ಬೀಸುವವಳು

पिसना, पु. ಬೀಸುವ ಕಾಳು. अक्रि. ಪುಡಿಯಾಗು, ಹಿಟ್ಟಾಗು; ಅರೆ, ದುಡಿ, ಕಷ್ಟಪಡು; ಸತ್ತು ಸುಣ್ಣವಾಗು; ಅನುರಕ್ತನಾಗು.

पिसर, पु. ಪುತ್ರ, ಮಗ.

पिसरज़ादा, पु. ಮಗನ ಮಗ, ಪೌತ್ರ.

पिसवाना, सक्रि. पीसना का प्रे. रूप.

पिसवाई, पिसाई, स्त्री. ಹಿಟ್ಟು ಬೀಸುವಿಕೆ, ಅರೆಯುವಿಕೆ; ಅರೆಯುವುದರ ಕೂಲಿ.

पिसान, पु. ಬೀಸಿದ್ದು, ಹಿಟ್ಟು, ಹುಡಿ

पिसौनी, स्त्री. ಅರೆಯುವ ಕೆಲಸ, ಬೀಸುವುದು; ಕಠಿಣವಾದ ಕೆಲಸ.

पिस्तई, वि. ಹಸುರು ಮಿಶ್ರಿತ ಹಳದಿ.

पिस्तां, पु. ಸ್ತನ, ಕುಚ; ಕುಚಾಗ್ರ.

पिस्ता, पु. ಒಂದು ಹಣ್ಣು.

पिस्तौल, स्त्री. ಕೈ ತುಪಾಕಿ, ಪಿಸ್ತೂಲು

पिस्सू, पु. ಚಿಗಟ, ಚಿಕ್ಕಾಡು.

पिह्कना, अक्रि ಚಿಲಿಪಿಲಿಗುಟ್ಟು.

पींजना, सक्रि. ಹಿಂಜು, ಸಸಿ, ಬಿಡಿಸು

पींड, पु. = पिंड.

पी, पु ಚಾತಕಪಕ್ಷಿಯ ಕೂಗು. स्त्री. ಕೊಬ್ಬು, ಚರಬಿ.

पीक, स्त्री. ಅಗಿದ ತಾಂಬೂಲದ ರಸ.

पीकदान, पीकदानी, पु. ತಾಂಬೂಲವನ್ನು ಅಗಿದು ಉಗುಳುವ ಪಾತ್ರೆ, ಪಡಿಗ, ಡವಕೆ, ಕಾಳಂಜಿ, ಪೀಕದಾನಿ

पीकना, अक्रि. ಚಿಲಿಪಿಲಿಗುಟ್ಟು.

पीका, पु. ಚಿಗುರು, ತಳಿರು, ಕೊನರು.

पीच, पीछ, पु. ಗಂಜಿ, ಅಂಬಲಿ.

पीचना, सक्रि. ಒದೆ, ತುಳಿ, ಮೆಟ್ಟು.

पीछा, पु. ಹಿಂಭಾಗ, ಹಿಂಗಡೆ; ಅನಂತರ; ಹಿಂಬಾಲಿಸುವಿಕೆ, ಅನುಗಮನ; ಅನುಪಸ್ಥಿತಿ. पीछा करना = ಹಿಂಬಾಲಿಸು; ಬೆನ್ನುಹತ್ತು, ಬೆನ್ನಟ್ಟು; ಗೋಳಾಡಿಸು. पीछा छुड़ाना = ತಪ್ಪಿಸಿಕೊಳ್ಳು, ಬಿಡುಗಡೆ ಹೊಂದು.

पीछे, क्रिवि. ಹಿಂದೆ, ಹಿಂದುಗಡೆ; ಬಳಿಕ, ಪಶ್ಚಾತ್, ತರುವಾಯ, ಅನಂತರ; ಒಬ್ಬನ ಅನುಪಸ್ಥಿತಿಯಲ್ಲಿ.

पीट, स्त्री. ಹೊಡೆಯುವಿಕೆ; ಬಡಿಯುವಿಕೆ

पीटना, सक्रि. ಹೊಡೆ, ಹುಯ್ಯು, ಬಡಿ; ಕುಟ್ಟು, ಮಿದಿ; ಚಚ್ಚು. पु. ಬಡಿದುಕೊಳ್ಳುವಿಕೆ; ಮೃತ್ಯುಶೋಕ; ಕಷ್ಟ.

पीठ, पु. ಪೀಠ, ಆಸನ, ಮಣೆ, ಗದ್ದುಗೆ. स्त्री. ಪೃಷ್ಠ; ಬೆನ್ನು; ಬೆಂಬಲ. पीठ दिखाना = ಬೆಂಗೊಡು, ಬೆನ್ನು ತೋರಿಸಿ ಓಡು. पीठ तोड़ना = ನಿರುತ್ಸಾಹ ಪಡಿಸು.

पीठा, पु. ಕಜ್ಜಾಯ, ಹಿಟ್ಟಡಿಗೆ; ಬುಡ, ಮೂಲ; ಒಂದು ಬಗೆ ಆಭರಣ.

पीठी, स्त्री. ಬೇಳೆಯನ್ನು ನೆನೆ ಹಾಕಿ ತಿರುವಿದ ಹಿಟ್ಟು, ಅರೆದ ಹಿಟ್ಟು, ರುಬ್ಬಿದ ಹಿಟ್ಟು.

पीठौता, पु. ಪುಸ್ತಕದ ಪುಟ, ಪಾನು.

पीड़, स्त्री. ನೋವು, ವೇದನೆ; ಕರುಣೆ, ಕನಿಕರ; ಜಡೆ ಕುಚ್ಚು.

पीड़क, पु. ನೋವನ್ನುಂಟು ಮಾಡುವ, ನೋವು ಕೊಡುವ.

पीड़न, पु. ಅಮುಕುವಿಕೆ, ಒತ್ತುವಿಕೆ, ಪೀಡಿಸುವಿಕೆ, ಕಾಟ.

पीड़ा, स्त्री. ಬಾಧೆ, ನೋವು; ಬೇನೆ; ದುಃಖ; ಕಾಟ.

पीड़ित, वि. ಪೀಡಿಸಲ್ಪಟ್ಟ; ದುಃಖಿತ.

पीढ़ा, पु. ಕಾಲುಮಣೆ, ಪೀಠ, ಮಣೆ.

पीढ़ाबंद, पु. ಭೂಮಿಕೆ, ಪ್ರಸ್ತಾವನೆ.

पीढ़ी, स्त्री. ಪೀಳಿಗೆ, ವಂಶ ಪರಂಪರೆ; ತಲಾಂತರ, ತಲೆಮಾರು; ಚಿಕ್ಕ ಮಣೆ, ಪೀಠ.

पीढ़ीनामा, पु. ವಂಶಾವಳಿ, ವಂಶವೃಕ್ಷ

पीत, वि. ಹಳದಿ. पु. ಪ್ರೀತಿ.

पीतम, वि. ಪ್ರಿಯತಮ, ಇನಿಯ.

पीतल, पु. ಹಿತ್ತಾಳೆ.

पीतला, पु. ಹಿತ್ತಾಳೆಯ.

पीदड़ी, स्त्री. = पिद्दड़ी.

पीन, वि. ಕೊಬ್ಬಿದ; ದಪ್ಪ; ಭಾರಿ.

पीनक, स्त्री. ಸುಂದು, ಮೈಮರೆ, ಜೋಂಪು

पीनता, स्त्री. ದಪ್ಪ, ಗಾತ್ರ.

पीनना, सक्रि. ಬಾಚು, ಹಿಕ್ಕು, ಎಕ್ಕು.

पीनस, पु. ಮೂಗಿನ ಒಂದು ರೋಗ. स्त्री. ಪಲ್ಲಕ್ಕಿ, ಡೋಲಿ.

पीना, पु. ಕುಡಿಯುವವಸ್ತು, ಪಾನೀಯ; ಹಿಂಡಿ. सक्रि. ಕುಡಿ, ಈಂಟು, ಸೆಡ್ಡು; ಪಾನ ಮಾಡು; ಸೇದು. बीड़ी पीना = ಬೀಡಿ ಸೇದು.

पीपल, पु. ಅಶ್ವತ್ಥಮರ. स्त्री. ಹಿಪ್ಪಲಿ

पीपा, पु. ಪೀಪಾಯಿ

पीप, पीब, स्त्री. ಹುಣ್ಣಿನ ಕೀವು

पीर, स्त्री. ನೋವು, ಬೇನೆ, ವೇದನೆ; ಸಹವೇದನೆ, ಸಹಾನುಭೂತಿ पु. ಗುರು, ಆಚಾರ್ಯರು; ಮಹಾತ್ಮ; ಗುರು ಹಿರಿಯರು; ವೃದ್ಧ; ಸೋಮವಾರ.

पीरमुरशिद, पु. ಪೂಜ್ಯರು, ಮಹಾತ್ಮರು.

पीराई, पु. ಮುಹಮ್ಮದೀಯ ದಾಸಯ್ಯ

पीराना, वि. ದೊಡ್ಡ; ವೃದ್ಧರಂತಹ; ಮಹಾತ್ಮರಂತಹ.

पीरी, स्त्री. ಆಚಾರ್ಯರ ಕೆಲಸ ಅಥವಾ ಪದವಿ; ಶಿಷ್ಯಾರ್ಜನೆ; ವಾರ್ಧಕ್ಯ, ಮುಪ್ಪು; ಹಿರಿಮೆ; ಅಪ್ಪಣೆ, ಅಣತಿ; ಗುತ್ತಿಗೆ, ಕರಾರು.

पील, पु. ಆನೆ, ಗಜ; ಚದುರಂಗದ ಆನೆ

पीलतन, वि. ದೊಡ್ಡ, ಭಾರಿ.

पीलपांव, पु. ಆನೆಗಾಲು, ಶ್ಲೀಪದ, ಹುತ್ತುಗಾಲು, ಒರಲುಗಾಲು

पीलपाया, पु. ಆನೆಯ ಕಾಲು; ಶ್ಲೀಪದ, ಹುತ್ತುಗಾಲು; ದೊಡ್ಡ ಕಂಬ.

पीलवान, पु. ಆನೆಗಾರ, ಮಾವಟಿಗ.

पीलसाज़, पु. ದೀಪದ ಕಂಬ, ಸಮೆ.

पीला, पु. ಆನೆ. वि. ಹಳದಿ; ವಿವರ್ಣನಾದ, ಕಳೆಗುಂದಿದ. पीला पड़ना = ಕಳೆಗುಂದು, ಬಿಳಚಿಕೊಳ್ಳು.

पीलाई स्त्री. **पीलापन**, पु, ಹಳದಿ; ವಿವರ್ಣತೆ.

पीलाम, पु. ವಸ್ತ್ರವಿಶೇಷ, ಕುತಣಿ.

पीलिया, स्त्री. ಅರಿಸಿನ ಕಾಮಾಲೆ.

पीली, स्त्री. ಚಿನ್ನದ ನಾಣ್ಯ, ಮೊಹರು.

पीलू, पु. ಒಂದು ಮರ; ಒಂದು ಹುಳು; ಬಾಣ, ಅಂಬು; ಆನೆ; ಕಾಮಾಲೆ.

पीसना, सक्रि. ಬೀಸು, ಅರೆ; ಇಡಿ, ಕುಟ್ಟು; ದುಡಿ. ಪಾಡುಪಡು; ಹಲ್ಲು ಕಿಸಿ. पु. ಬೀಸುವ ಕಾಳು; ಬೀಸಲಿಕ್ಕೆ ಕೊಟ್ಟದ್ದು.

पीह, स्त्री. ನೆಣ, ವಸೆ, ಕೊಬ್ಬು.

पीहर, पु. ತಂದೆಯ ಮನೆ, ತವರುಮನೆ

पीहान, पु. ಬೆಣೆ, ಬಿರಡೆ.

पीहू, पु. ಚಿಗಟ, ಚಿಕ್ಕಾಡು.
पुंगरा, पु. ಹುಡುಗ, ಬಾಲಕ.
पुंगी, स्त्री. ಕೊಳಲು; ಪುಂಗೀವಾದ್ಯ.
पुंछड़, वि. ಬಾಲವುಳ್ಳ, ಪುಚ್ಛವುಳ್ಳ.
पुंछना, अक्रि. ಒರೆಸಲ್ಪಡು, ಸೀಟಲ್ಪಡು
पुंछाला, पु. ಪುಚ್ಛ, ಬಾಲ; ಬಾಲಂಗಚ್ಚಿ.
पुंज, पु. ರಾಶಿ, ಪುಂಜ.
पुआ, पु. ಕಜ್ಜಾಯ, ಅಪೂಪ.
पुआल, पु = पयाल.
पुकार, स्त्री. ಕೂಗು, ಕರೆ; ಕೂಗಾಟ; ದೂರು, ಪುಕಾರು; ದರ್ದು.
पुकारना, सक्रि. ಕೂಗು, ಕರೆ; ಘೋಷಿಸು; ಕೂಗು ಹಾಕು; ಮೊರೆಯಿಡು, ದೂರು ಹೇಳು. पु. ಕೂಗುವಿಕೆ; ಕೂಗಾಟ.
पुखराज, पु. ಪುಷ್ಯರಾಗ, ಪುಷ್ಪರಾಗ
पुख़्तगी, स्त्री. ಪಕ್ವವಾಗುವಿಕೆ; ಪಕ್ವ; ಗಟ್ಟು; ಬಲುಮೆ; ಅನುಭವ.
पुख़्ता, वि. ಪರಿಪಕ್ವವಾದ; ಮಾಗಿದ; ಬಲಿತ, ಪಕ್ಕಾ; ಗಟ್ಟಿಗ, ಚತುರ; ದೃಢ.
पुगना, अक्रि. ತುಂಬು, ನೆರೆ; ಪೂರೈಸು.
पुगाना, सक्रि. ತುಂಬಿಸು, ಭರ್ತಿಮಾಡಿಸು.
पुचकार, पुचकारी, स्त्री. ತುಟಿ ಚಪ್ಪರಿಸುವಿಕೆ; ಮುದ್ದಾಟ; ಬೆನ್ನು ತಟ್ಟುವಿಕೆ.
पुचकारना, सक्रि. ತುಟಿ ಚಪ್ಪರಿಸು; ಬೆನ್ನುತಟ್ಟು; ಮುದ್ದಾಡು, ಲಲ್ಲೆಮಾಡು
पुचारा, पु. ಮೆತ್ತುವಿಕೆ, ಬಳಿಯುವಿಕೆ; ಸುಣ್ಣ ತೊಡಸುವಿಕೆ; ಲೇಪನ, ಲೇಪ; ಬಳಿಯುವ ಬಟ್ಟೆ; ಕುಚ್ಚು ಮಟ್ಟೆ; ಸುಣ್ಣದ ನೀರು; ತುಪಾಕಿಯ ಕೋವಿಯನ್ನು ತಣ್ಣಗೆ ಮಾಡಲು ಒರೆಸುವ ಒದ್ದೆಬಟ್ಟೆ.
पुच्छ, स्त्री. ಪುಚ್ಛ, ಬಾಲ.
पुच्छल, वि. ಪುಚ್ಛವುಳ್ಳ, ಬಾಲವುಳ್ಳ. पुच्छल तारा = ಬಾಲಚುಕ್ಕಿ.
पुच्छल्ला, पु. ಪುಚ್ಛ, ಬಾಲ; ಬಾಲಂಗಚ್ಚಿ; ಹಿಂಬಾಲಿಸುವವ, ಹಿಂಬಾಲಕ.
पुछवाना, सक्रि. ಪ್ರಶ್ನೆ ಮಾಡಿಸು, ಕೇಳಿಸು.
पुछवैया, पुछार, पु. ಕೇಳುವವ.
पुजना, अक्रि. ಪೂಜಿಸಲ್ಪಡು, ಸನ್ಮಾನಿಸಲ್ಪಡು; ತುಂಬು; ಪೂರ್ಣವಾಗು; ತೃಪ್ತನಾಗು.
पुजवाना, सक्रि. ಪೂಜೆ ಮಾಡಿಸು, ಪೂಜಿಸಿಕೊಳ್ಳು; ತುಂಬಿಸು; ಪೂರೈಸು.
पुजाई, स्त्री. ಪೂಜಿಸುವಿಕೆ; ಆರಾಧನೆ, ಪೂಜೆ.
पुजाना, सक्रि. ಪೂಜೆಮಾಡಿಸು; ಪೂಜಿಸಿಕೊಳ್ಳು; ಹಣ ವಸೂಲು ಮಾಡು; ತುಂಬಿಸು, ಭರ್ತಿ ಮಾಡು; ಪೂರ್ತಿ ಮಾಡು.
पुजापा, पु. ಪೂಜೆ, ಆರಾಧನೆ; ಪೂಜಾಸಾಮಗ್ರಿ; ಗಲಿಬಿಲಿ, ಗೊಂದಲ.
पुजारिन, पुजारिनी, स्त्री. ಪೂಜೆ ಮಾಡುವವಳು; ಪೂಜಾರಿಯ ಹೆಂಡತಿ; ಪೂಜಾರಿಣಿ.
पुजारी, पु. ಪೂಜಿಸುವವ, ಪೂಜಾರಿ, ತಮ್ಮಡಿ.

पुजैया, पु. ಪೂಜಿಸುವವ, ತುಂಬುವವ. स्त्री. ಪೂಜೆ.

पुजौरा, पु ನೈವೇದ್ಯ; ಮುಡುಪು, ಮೀಸಲು; ಪ್ರಸಾದ.

पुट, पु. ಬೆರಸುವುದಕ್ಕೆ ಚಿಮಿಕಿಸಿದ ದ್ರವ ಪದಾರ್ಥ; ಬಣ್ಣ ಕಟ್ಟುವಿಕೆ; ಅದ್ದುವಿಕೆ; ಮುಚ್ಚಳ; ಸಂಪುಟ; ದೊನ್ನೆ; ಬಣ್ಣ; ಸುಳಿವು, ಕುರುಹು.

पुटकी, स्त्री. ಚಿಕ್ಕ ಗಂಟು, ಪೊಟ್ಟಣ; ಅವಘಡ, ಅನಾಹುತ; ಅನರ್ಥ; ಕೂಟು ಅಥವಾ ಹುಳಿಗೆ ಸೇರಿಸುವವ ಅಕ್ಕಿ ಹಿಟ್ಟು. ಹೊಂದಿಟ್ಟು.

पुटरी, स्त्री. ಸಣ್ಣ ಗಂಟು, ಪಿಂಡಿ.

पुटी, स्त्री. ದೊನ್ನೆ, ಪೊಟ್ಟಣ.

पुट्ठा, पु. ಪೃಷ್ಠ, ಪಿರ್ರೆ; ಬೆನ್ನುಕಡೆ.

पुट्ठी, स्त्री. ಚಕ್ರದ ಕುಂಬಕಟ್ಟು.

पुठवाल, पु. ಹಿಂದಿರುವವ; ಸಹಾಯಕ.

पुड़ा, पु. ಪೊಟ್ಟಣ; ಪೃಷ್ಠ

पुड़िया, स्त्री. ಪೊಟ್ಟಣ; ಔಷಧದ ಪೊಟ್ಟಣ; ಔಷಧದ ಒಂದು ಹೊತ್ತು.

पुड़ी, स्त्री. ಪೊಟ್ಟಣ; ಚರ್ಮ, ಚಕ್ಕಳ.

पुण्य, पु. ಪುಣ್ಯ, ಸುಕೃತ.

पुतना, अक्रि. ಮೆತ್ತಲ್ಪಡು; ಸಾರಿಸಲ್ಪಡು.

पुतला, पु. ಬೊಂಬೆ; ವಿಗ್ರಹ.

पुतली, स्त्री. ಬೊಂಬೆ, ಗೊಂಬೆ; ಕಣ್ಣು ಪಾಪೆ, ಪುತ್ಥಳಿ, ಕನೀನಿಕೆ; ಕುದುರೆಯ ಗೊರಸಿನ ಗುರುತು; ನೇಯುವ ಯಂತ್ರ; ಗಿರಣಿ.

पुतलीघर, पु. ನೆಯ್ಗೆಯ ಕಾರಖಾನೆ, ಗಿರಣಿ

पुताई, स्त्री. ಸುಣ್ಣ ಬಳಿಯುವಿಕೆ; ಗಿಲಾವು; ತೊಡೆಸುವಿಕೆ, ಸಾರಣೆ; ಈ ಕೆಲಸಗಳಿಗೆ ಕೊಡುವ ಕೂಲಿ.

पुताना, सक्रि. "पोतना" का प्रे. रूप.

पुती, वि. ಕೊಳೆತ; ನಾರುವ.

पुत्र, पु. ಮಗ, ಪುತ್ರ.

पुत्रिका, स्त्री. ಮಗಳು; ಗೊಂಬೆ.

पुत्री, स्त्री. ಪುತ್ರಿ, ಮಗಳು.

पुदीना, पु. ಪುದೀನಾ ಸೊಪ್ಪು.

पुन, पु. = पुण्य.

पुनना, अक्रि. ಬೈಯು, ನಿಂದಿಸು.

पुनवाना, पुनाना, सक्रि. ಬೈಯಿಸು.

पुनश्च, क्रिवि. ಮತ್ತೆ, ತಿರುಗಿ, ಪುನಃ, ಹಿಂದಿನಿಂದ.

पुनसलाई, स्त्री. ರಾಟೆಯ ಕದುರು.

पुपलाना, अक्रि. ಗೊಣಗುಟ್ಟು; ಅಗಿ.

पुपली, स्त्री. ಬಿದಿರಿನ ನಳಿಗೆ, ಗೊಟ್ಟ.

पुमबा, पु. ಹತ್ತಿ.

पुमबाई, वि. ಹತ್ತಿಯಿಂದ ಮಾಡಿದ, ಹತ್ತಿಯ.

पुमबा-दहन, वि. ಮಿತಭಾಷಿ; ಮೌನಿ.

पुमबा-दोज़, पु. ಅರಳೆ ಎಕ್ಕುವವ.

पुर, पु. ಪುರ, ನಗರ; ಕಪಿಲೆಯ ಬಾನೆ. वि. ತುಂಬಿದ, ಭರ್ತಿ; ಪೂರ್ತಿ. पुर जोश = ಹುರಿದುಂಬಿದ, ಉತ್ಸಾಹ ಭರಿತ.

पुरइन, पु. ತಾವರೆ, ಕಮಲ.

पुरकार, वि. ಚತುರ, ಜಾಣ; ದಟ್ಟ, ನಿಬಿಡ.

पुरकारी, स्त्री. ನಿಬಿಡತೆ, ದಟ್ಟ.
पुरखा, पु. ಪೂರ್ವಿಕರು; ಹಿರಿಯರು.
पुरचक, स्त्री. ಪ್ರೈದಡವುವಿಕೆ; ಮುದ್ದಾಟ; ಸಲಿಗೆ; ಮುಖಸ್ತುತಿ; ಮೋಸ, ಠಕ್ಕು. पु. ಚಿಹ್ನೆ, ಗುರುತು; ಮುಖ, ಮೋರೆ; ಪ್ರೋತ್ಸಾಹ; ಸಹಾಯ.
पुरज़ा, पु. ತುಂಡು, ತುಣುಕು, ಚೂರು; ಭಾಗ, ಅಂಗ; ಬಟ್ಟೆಯ ಚೂರು; ಹಕ್ಕಿಗಳ ರೆಕ್ಕೆ. चलता पुरज़ा = ಕಾರ್ಯದಕ್ಷ, ಗಟ್ಟಿಗ, ಘಾಟಿ.
पुरज़ोर, वि. ಶಕ್ತಿಪೂರ್ಣ, ಬಲಿಷ್ಠ.
पुरट, पु. ಚಿನ್ನ, ಬಂಗಾರ, ಹೊನ್ನು.
पुरदर्द, वि. ನೋವುಳ್ಳ, ವೇದನಾಪೂರ್ಣ.
पुरदिल, वि. ಎದೆಗಾರ, ಧೀರ.
पुरदिली, स्त्री. ಎದೆಗಾರಿಕೆ, ಧೀರತನ.
पुरनिया, पु. ವೃದ್ಧ; ಹಿರಿಯವ.
पुरबला, वि. ಪೂರ್ವದ, ಹಿಂದಿನ.
पुरबिया, वि. ಪೂರ್ವದಿಕ್ಕಿನ, ಮೂಡಣ
पुरमज़ाक, वि. ಹಾಸ್ಯಪೂರ್ಣವಾದ.
पुरवट, पु. ಕಪಿಲೆಯ ಬಾನೆ.
पुरवा, पु. ಸಣ್ಣ ಗ್ರಾಮ; ಮೂಡಣ ಗಾಳಿ; ಮಣ್ಣಿನ ಬಟ್ಟಲು.
पुरवाई, पुरवैया, स्त्री. ಮೂಡಣಗಾಳಿ.
पुरवाना, सक्रि. ಪೂರ್ತಿ ಮಾಡಿಸು, ತುಂಬಿಸು.
पुरविया, वि. ಪೂರ್ವದ, ಮೂಡಣ
पुरसा, पु. ಒಂದು ಪೌರುಷ, ಆಳುದ್ದ.
पुरस्कार, पु. ಸನ್ಮಾನ, ಬಹುಮಾನ, ಇನಾಮು, ಪುರಸ್ಕಾರ.

पुरा, पु. ದೊಡ್ಡ ಊರು, ಪಟ್ಟಣ.
पुराण, पु. ಪುರಾಣ; ಹಳೆಯದು.
पुराणी, पु. ಪುರಾಣ ಹೇಳುವವ, ಪುರಾಣಿಕ.
पुरातत्व, पु. ಪ್ರಾಚೀನ ಕಾಲ ಸಂಬಂಧವಾದ ಶಾಸ್ತ್ರ.
पुरातन, वि. ಪುರಾತನವಾದ, ಹಳೆಯ.
पुराना, सक्रि. ತುಂಬಿಸು, ಭರ್ತಿಮಾಡು; ಪೂರೈಸು. वि. ಪುರಾತನ, ಪ್ರಾಚೀನ; ಹಳೆಯ; ಸನಾತನ. पुराना धुराना = ಹಳೆಯ ಪಳೆಯ.
पुरी, स्त्री. ತುಂಬಿಸುವಿಕೆ, ಭರ್ತಿ; ನಗರ.
पुरुखा, पु. = पुरखा.
पुरुखिन, स्त्री. "पुरखा" का स्त्री. रूप.
पुरुष, पु. ಪುರುಷ, ಮನುಷ್ಯ.
पुरोसा, पु. ಕ್ಷೌರಿಕ ಅಗಸ ಮೊದಲಾದವರಿಗೆ ವಿವಾಹ ಕಾಲದಲ್ಲಿ ಕೊಡುವ ಇನಾಮು ಆದಿ.
पुरोहित, पु. ಪುರೋಹಿತ, ಶಾಸ್ತ್ರಿ.
पुरोहिताई, स्त्री. ಪುರೋಹಿತನ ಕೆಲಸ ಅಥವಾ ವೃತ್ತಿ, ಪೌರೋಹಿತ್ಯ; ಪುರೋಹಿತರ ರುಸುಂ ಅಥವಾ ದಕ್ಷಿಣೆ.
पुरोहितानी, स्त्री. "पुरोहित" का स्त्री. रूप.
पुर्त्तगाली, स्त्री. ಪೋರ್ಚುಗೀಸರು; ಪೋರ್ಚುಗೀಸರ ಭಾಷೆ.
पुर्स, पु. ಕೇಳುವಿಕೆ; ಪ್ರಶ್ನಿಸುವಿಕೆ.
पुर्सां, वि. ಕೇಳುವವ, ವಿಚಾರಿಸುವವ; ಪ್ರಶ್ನಿಸುವವ.
पुर्सिश, स्त्री. ಕೇಳುವಿಕೆ; ಪ್ರಶ್ನಿಸುವಿಕೆ.

ವಿಚಾರಿಸುವಿಕೆ.

पुर्सी, ಸ್ತ್ರೀ. ಕೇಳುವಿಕೆ; ಉಪಚಾರ ಕೇಳುವಿಕೆ.

पुल, पु. ಸೇತುವೆ, ಸಂಕ, ಪಾಲ. पुल टूटना = ಗುಂಪು ಕಟ್ಟು, ಸಂದಣಿಯಾಗು.

पुलक, पु. ರೋಮಾಂಚ, ಪುಲಕ.

पुलकना, अक्रि. ಪುಲಕಿತನಾಗು.

पुलकाना, सक्रि. ರೋಮಾಂಚಗೊಳಿಸು; ಸಂತೋಷಪಡಿಸು.

पुलकित, वि. ರೋಮಾಂಚವಾದ, ಪುಲಕಿತ; ಹರ್ಷಿತ.

पुलट, स्त्री. =पलट.

पुलपुला, वि. ಮೆತ್ತಗಾದ; ಬಳುಕುವ.

पुलपुलाना, सक्रि. ಅದುಗು, ನಗ್ಗಿಸು; ಹೀರು, ಸೀಪು; ಮೊಮ್ಮು; ಅಗಿ अक्रि. ಹೆದರು.

पुलपुलाहट, स्त्री. ಭಯ, ಹೆದರಿಕೆ; ಅಗಿಯುವಿಕೆ, ಮೊಮ್ಮುವಿಕೆ.

पुलहाना, सक्रि. ಒಡಂಬಡಿಸು, ಒಪ್ಪಿಸು

पुलाव, पु. ಮಾಂಸ ಸೇರಿಸಿದ ಕಲಸನ್ನ, ಮಾಂಸದ ಹುಗ್ಗಿ.

पुलिंदा, पु. ಕಾಗದಗಳ ಕಟ್ಟು; ಕಂತೆ. ತೋಟಿ; ಭಾಂಗಿ

पुलिज, पु. ಪ್ರತಿಯೊಂದು ಬೆಳೆಯೂ ತೆಗೆಯಬಹುದಾದ ಜಮೀನು.

पुलिया, स्त्री. ಸಣ್ಣ ಸೇತುವೆ, ಸಂಕ.

पुलिस, पु. ಪೋಲೀಸಿನವ, ಠಾಣೆಯವ.

पुलिहोरा, पु. ಹುಳಿಯನ್ನ, ಪುಳಿಹೋರೆ.

पुवार, पुवाल, पु. ಹುಲ್ಲುಕಡ್ಡಿ.

पुश्त, स्त्री. ಹಿಂಭಾಗ, ಬೆನ್ನು; ಬೆಂಬಲ, ಒತ್ತಾಸೆ; ಸಹಾಯಕ, ಆಶ್ರಯದಾತ; ವಂಶಪರಂಪರೆ, ತಲಾಂತರ; ಪೀಳಿಗೆ, ತಲೆಮಾರು; ಸಂತತಿ. पुश्त दर पुश्त = ತಲತಲಾಂತರ. पुश्त देना = ಓಡಿಹೋಗು.

पुश्तक, स्त्री. ಹಿಂಗಾಲೇಟು, ಲತ್ತೆ.

पुश्तनामा, पु. ವಂಶಾವಳಿ, ವಂಶವೃಕ್ಷ.

पुश्त-पनाह, स्त्री. ಬೆಂಬಲ, ಆಸರೆ; ಆಶ್ರಯದಾತ.

पुश्ता, पु. ಒತ್ತುಗೋಡೆ, ಮುಟ್ಟುಗೋಡೆ; ಗೋಡೆ ಅಥವಾ ಏರಿಗೆ ಒದೆಕೊಡುವಿಕೆ, ಪುಸ್ತಿಬಂದಿ; ಆಧಾರ; ಏರಿ, ಕಟ್ಟೆ, ಒಡ್ಡು; ಪುಸ್ತಕದ ರಟ್ಟಿನ ಹಿಂಭಾಗ, ಬೆನ್ನು; ರಾಶಿ; ಗಂಟು, ಕಟ್ಟು.

पुश्तारा, पु. ಬೆನ್ನಿನ ಮೇಲೆ ಹೊರು ವಸ್ತು, ಭಾರ.

पुश्ती, स्त्री. ಸಹಾಯ, ನೆರವು; ಪುಸ್ತಕದ ರಟ್ಟು.

पुश्तैनी, वि. ಪರಂಪರಾಗತವಾದ, ಪೈತೃಕ; ಸನಾತನ, ಬಹು ಕಾಲದ.

पुष्ट, वि. ಪುಷ್ಟನಾದ; ಬಲಿಷ್ಠ; ಪೌಷ್ಟಿಕವಾದ. पुष्ट करना=ಪುಷ್ಟೀಕರಿಸು.

पुष्टई, स्त्री. ಪೌಷ್ಟಿಕ ವಸ್ತು, ಬಲವರ್ಧಕ ಔಷಧ.

पुष्टि, स्त्री. ಪೋಷಣೆ, ಪುಷ್ಟಿ; ದೃಢತೆ; ಸಮರ್ಥನೆ; ಪುಷ್ಟೀಕರಿಸುವಿಕೆ.

पुष्प, पु. ಪುಷ್ಪ, ಹೂ.

पुस्तक, स्त्री. ಪುಸ್ತಕ, ಹೊತ್ತಗೆ.

पुस्तकालय, पु. ಪುಸ್ತಕ ಭಂಡಾರ, ಪುಸ್ತಕಾಲಯು

पुस्तिका, स्त्री. ಚಿಕ್ಕ ಪುಸ್ತಕ.

पुहुप. पु. ಪುಷ್ಪ. ಹೂ.

पूंगी, स्त्री. ಪುಂಗಿ ವಾದ್ಯ; ಕೊಳಲು

पूंछ, स्त्री. ಪುಚ್ಛ. ಬಾಲ; ಬಾಲಂಗಚ್ಚಿ.

पूंछार, वि. ಬಾಲವುಳ್ಳ.

पूंजी, स्त्री. ರಾಶಿ, ಸಮೂಹ; ಭಂಡಾರ; ನಿಧಿ, ಧನ; ಮೂಲಧನ, ಬಂಡವಾಳ.

पूंजीदार, पूंजीपति, पु. ಬಂಡವಾಳಗಾರ; ರೊಕ್ಕವಾಳ.

पूआ, पु. ಹೋಳಿಗೆ, ಒಬ್ಬಟ್ಟು.

पूग, पु. ಸಭೆ, ಕೂಟ; ರಾಶಿ, ಕುಪ್ಪೆ; ಸ್ವಭಾವ; ಅಡಕೆ.

पूगना, अक्रि. ಪೂರ್ತಿಯಾಗು, ತುಂಬು

पूच, वि. ಅಲ್ಪ; ತುಚ್ಛ; ನಿಕೃಷ್ಟ; ಅಶ್ಲೀಲ.

पूछ, स्त्री. ಕೇಳುವಿಕೆ, ಪ್ರಶ್ನಿಸುವಿಕೆ; ಹುಡುಕುವಿಕೆ, ಪರೀಕ್ಷೆ; ಆದರ, ಕೇಳಿಕೆ.

पूछगाछ, पूछताछ, पूछपाछ, पूछाताछी, पूछापाछी, स्त्री. ಕೇಳುವಿಕೆ, ವಿಚಾರಿಸುವಿಕೆ, ತಣಿಕಾಯಿಸುವಿಕೆ; ತನಿಖೆ

पूछन, पु. ಕೇಳುವಿಕೆ, ಪ್ರಶ್ನಿಸುವಿಕೆ.

पूछना, सक्रि. ಕೇಳು, ಪ್ರಶ್ನಿಸು, ಬೆಸಗೊಳ್ಳು; ವಿಚಾರಿಸು पूछना ताछना, पूछना पाछना = ವಿಚಾರಿಸು, ತಣಿಕಾಯಿಸು.

पूजक, वि. ಪೂಜಿಸುವವ, ಪೂಜಕ.

पूजन, पु. ಪೂಜಿಸುವಿಕೆ, ಉಪಾಸನೆ.

पूजना, सक्रि. ಪೂಜಿಸು, ಆರಾಧಿಸು; ಗೌರವಿಸು; ಹಾಳುಮಾಡು. अक्रि. ಪೂರ್ತಿಯಾಗು, ತುಂಬು, ನೆರೆ; ಹೂಳು; ಪೂರೈಸು, ತೀರು.

पूजा, स्त्री. ಪೂಜೆ; ಆರಾಧನೆ; ದಂಡನೆ. पूजा पाठ = ಪೂಜೆ ಪುನಸ್ಕಾರ.

पूट, पु. ಹಸುವಿನ ಬಾಲದ ಮೇಲುಗಡೆ ಇರುವ ಎಲುಬು

पूठ, पु. ಪೃಷ್ಠ, ಹಿಂಭಾಗ.

पूठा, पु. ಪುಸ್ತಕದ ರಟ್ಟಿನ ಹಿಂಭಾಗ.

पूड़ा, पु. = पूआ.

पूड़ी, स्त्री. ಪೂರಿ.

पूत, वि. ಪವಿತ್ರ, ಪೂತ. पु. ಪುತ್ರ, ಮಗ.

पूतला, पु. **पूतली**, स्त्री. = पुतली.

पूती, स्त्री. ಗಣಿಕೆ, ಗಿಣ್ಣು.

पूनी, स्त्री. ಅರಳೆಯ ಬತ್ತಿ, ಹಂಜಿ.

पूनो, स्त्री. ಪೂರ್ಣಿಮಾ, ಹುಣ್ಣಿಮೆ.

पूरंपूर, वि. ಭರ್ತಿಯಾದ.

पूर, पु. ತುಂಬುವಿಕೆ; ಪೂರ; ಹೂರಣ. वि. ಪೂರ್ತಿಯಾದ, ತುಂಬಿದ.

पूरक, वि. ಪೂರ್ತಿಗೊಳಿಸುವ, ಪೂರಕ.

पूरन, वि. ಪೂರ್ಣವಾದ.

पूरनपूरी, स्त्री. ಹೂರಣ ಹೋಳಿಗೆ.

पूरना, सक्रि. ಪೂರ್ತಿಮಾಡು, ಭರ್ತಿಮಾಡು; ಪೂರೈಸು; ಈಡೇರಿಸು, ನೆರವೇರಿಸು; ಹೆಣೆ, ಮೊಡರು; ನೂಲು ತುಂಬಿಸು, ಹೊಲಿ; ಶಂಖ ಪೂರಿಸು, ಊದು अक्रि. ತುಂಬು, ಭರ್ತಿಯಾಗು.

पूरब, पु. ಪೂರ್ವ, ಮೂಡಲು.

पूरबी, वि. ಪೂರ್ವದಿಕ್ಕಿನ, ಮೂಡಣ. पु. ಒಂದು ಬಗೆ ಹಾಡು.

पूरा, वि. ಪೂರ್ತಿಯಾದ; ಭರ್ತಿ; ತುಂಬಿದ; ಪೂರಾ; ಪೂರೈಸಿದ; ಸಿದ್ಧಿಹೊಂದಿದ. पूरा करना = ನೆರವೇರಿಸು; ಈಡೇರಿಸು; ಪೂರ್ತಿಗೊಳಿಸು.

पूराई, स्त्री. **पूरापन**, पु. ಪೂರ್ತಿ, ಪೂರ್ಣತೆ; ಸಿದ್ಧಿ.

पूरी, स्त्री. ಪೂರ್ತಿಮಾಡುವಿಕೆ; ಪೂರ್ಣತೆ; ಕರಿದ ಕಡುಬು, ಪೂರಿ; ಮದ್ದಲೆ ಅಥವಾ ಮೃದಂಗದ ಚರ್ಮ.

पूर्ण, वि. ಪೂರ್ಣವಾದ, ಪೂರ್ತಿಯಾದ; ತುಂಬಿದ; ಪೂರೈಸಿದ.

पूर्णतया, क्रिवि. ಪೂರ್ತಿಯಾಗಿ, ಸಂಪೂರ್ಣವಾಗಿ.

पूर्ति, स्त्री. ಪೂರ್ತಿ; ಮುಕ್ತಾಯ.

पूर्व, पु. ಪೂರ್ವ, ಮೂಡಲು. वि. ಪೂರ್ವದ; ಹಿಂದಿನ ಕಾಲದ. क्रिवि. ಪೂರ್ವದಲ್ಲಿ; ಮುಂದೆ; ಮೊದಲು.

पूर्वज, पु. ಹಿರಿಯರು; ಪೂರ್ವಿಕರು.

पूला, पु **पूली**, स्त्री. ಹುಲ್ಲಿನ ಕಟ್ಟು, ಕಂತೆ, ಪಿಂಡಿ.

पूस, पु. ಪುಷ್ಯಮಾಸ.

पृथक, वि. ಬೇರೆ, ಭಿನ್ನವಾದ.

पृथ्वी, स्त्री. ಭೂಮಿ, ಜಮೀನು, ನೆಲ.

पृष्ठ, पु. ಪೃಷ್ಠ; ಹಿಂಭಾಗ; ಬೆನ್ನು; ಪುಟ, ಪಾನು, ಪೇಜು.

पृष्ठभूमि, स्त्री. ಹಿನ್ನೆಲೆ.

पेंग, स्त्री. ಹೊಯಿದಾಟ, ಜೋಲಾಡುವಿಕೆ, ಆಂದೋಳನ; ಒಂದು ಹಕ್ಕಿ.

पेंगना, अक्रि. ಹೊಯಿದಾಡು, ಜೋಲಾಡು, ಓಲಾಡು, ತೂಗಾಡು.

पेंच, पु. = पेच.

पेंठ, स्त्री. ಸಂತೆ; ಸಂತೆಯ ದಿನ.

पेंडुकी, स्त्री. ಪಾರಿವಾಳ; ಊದುಗೊಳವಿ; ಕರ್ಜಿಕಾಯಿ.

पेंदा, पु. **पेंदी**, स्त्री. ಬುಡ, ತಳ, ಅಡಿ; ಪಾತ್ರೆಗಳ ಅಂಡು.

पेई, स्त्री. ಸಣ್ಣ ಕುಕ್ಕೆ, ಬುಟ್ಟಿ.

पेउसी, स्त्री. = पेवसी.

पेखना, पु. ಗೊಂಬೆ, ಬೊಂಬೆ; ಆಟ; ಆಟದ ಸಾಮಾನು, ಆಟಿಗೆ. सक्रि. ಪ್ರೇಕ್ಷಿಸು, ನೋಡು; ಆಶಿಸು, ಬಯಸು

पेच, पु. ಸುತ್ತು; ತಿರುವು, ಮುರುವು; ಮುರಿಗೆ, ಪೇಚು; ಸಿಕ್ಕು, ತೊಡಕು, ಗೋಜಲು; ಮರಸುತ್ತು, ಸ್ಕ್ರೂ; ಕೀಲುಮೊಳೆ, ಮುರು; ಒಂದು ಆಭರಣ, ಕಿವಿ ಮುರು; ಸಿರ್ಪೇಚ್; ಕುಸ್ತಿಯ ಒಂದು ವರಸೆ; ತಂತ್ರ; ಕೂಟಯುಕ್ತಿ, ಮೋಸ, ತಾರತಕ್ಕಡಿ, ತಿರುಗಂಟಿ ಮರಗಂಟಿ

पेचक, स्त्री. ದಾರದ ಬಳೆ, ಕಂಡಿಕೆ, ಲಡಿ. पु. ಗೂಬೆ; ಹೇನು; ಮಂಚ

पेचकश, पु. ಬಿರಡೆಯನ್ನು ಕಳಚುವ ಮರಸುತ್ತು; ತಿರುಗುಳಿ, ತಿರುಪುಳಿ.

पेचताब, पु. ಮನಸ್ಸಿನಲ್ಲೇ ಅಡಗಿಸಿಟ್ಟ ಕೋಪ; ಕಾತರತೆ; ತಲ್ಲಣ.

पेचदार, वि. ಸುತ್ತುಳ್ಳ; ಕೀಲುಳ್ಳ; ಸಿಕ್ಕಿನ; ತೊಡಕಿನ; ಠಕ್ಕಿನ; ಮೋಸದ

पेचवान, पु. ಹುಕ್ಕಾವಿನ ಉದ್ದವಾದ

ನಳಿಗೆ; ಹುಕ್ಕಾ, ಗುಡುಗುಡಿ.
पेचा, पु. ಗೂಬೆ, ಗೂಗೆ.
पेचिश, स्त्री. ಹೊಟ್ಟೆ ಕಡತ, ಹೊಟ್ಟೆ ನುಲಿ; ಸಂಗ್ರಹಣಿ, ಶೀತಭೇದಿ; ಗೋಜಲು, ಗೊಂದಲ; ತೊಡಕು; ತಟವಟ.
पेचीद्‌गी, स्त्री. ಸಿಕ್ಕು ತೊಡಕು; ಕಷ್ಟ.
पेचीदा, पेचीला, वि. ಸುತ್ತಿನ; ತೊಡಕಿನ, ಸಿಕ್ಕಿನ; ಕಠಿನವಾದ.
पेज, स्त्री. ಗಡ್ಡೆ ಕಟ್ಟಿಸಿದ ಹಾಲು.
पेट, पु. ಹೊಟ್ಟೆ, ಉದರ; ಗರ್ಭ; ಬಸಿರು; ಸ್ಥಳ, ಇಂಬು; ಬಂದೂಕದ ಕೊಳವೆ; ಹಸಿವು; ಹೊಟ್ಟೆಯ ಪಾಡು. पेट चलना=ಹೊಟ್ಟೆ ಕಳೆ, ಭೇದಿಯಾಗು पेटवाली = ಬಸುರಿ, ಗರ್ಭಿಣಿ. पेट पीठ से लग जाना = ಹಸಿವಿನಿಂದ ಹೊಟ್ಟೆ ಬೆನ್ನಿಗೆ ಹತ್ತು. पेट में चूहे कूदना = ಹೊಟ್ಟೆಯಲ್ಲಿರುವ ಕಿಲುಬೆ ಹುಳು ಸತ್ತು ಹೋಗು, ಹೊಟ್ಟೆಯಲ್ಲಿ ಕಾಗೆಯಾಡು, ಬಹಳ ಹಸಿವಾಗು
पेटक, पु. ಪೆಟ್ಟಿಗೆ; ಗುಂಪು, ಸಂದಣಿ.
पेटल, वि. ಹೊಟ್ಟೆಯುವ, ಬೊಜ್ಜ.
पेटा, पु. ಹೊಟ್ಟೆ; ನಡು, ಮಧ್ಯ; ತಪಶೀಲು, ವಿವರ, ಮಾಹಿತಿ. स्त्री. ದೊಡ್ಡ ಬುಟ್ಟಿ, ಪೆಟಾರಿ.
पेटारा, पु. = पिटारा.
पेटार्थू, वि. ಹೊಟ್ಟೆಬಾಕ, ತಿನಾಳಿ.
पेटिका, स्त्री. ಚಿಕ್ಕ ಪೆಟ್ಟಿಗೆ, ಕೈಪೆಟ್ಟಿಗೆ.
पेटिया, स्त्री. ಅಶನ, ಪಡಿ; ವರ್ಷಾಶನ.
पेटी, स्त्री. ಪೆಟ್ಟಿಗೆ, ಮಂದಾಸ; ಹೊಟ್ಟೆ, ಕಿಬ್ಬೊಟ್ಟೆ; ನಡುಕಟ್ಟು, ಕಮ್ಮರ್ ಬಂದು; ನವಾರ, ಡವಾಲಿ; ಹಡಪ.
पेटू, वि. ಹೊಟ್ಟೆಬಾಕ, ತಿಂಡಿಬಾಕ.
पेटूनी, स्त्री. ಗರ್ಭಿಣಿ, ಬಸುರಿ.
पेठा, पु. ಸಿಹಿ ಕುಂಬಳಕಾಯಿ, ಒಂದು ಮಿಠಾಯಿ.
पेड़, पु. ಮುದ್ದೆ; ಮರ, ವೃಕ್ಷ; ಗಿಡ. पेड़ पौधा = ಗಿಡಗೆಂಟೆ, ಗಿಡಮರ.
पेड़ा, पु. ಒಂದು ಮಿಠಾಯಿ, "ದೂದ್ ಪೇಡಾ"; ಹಪ್ಪಳದ ಕಣಕದ ಬಿಲ್ಲೆ.
पेड़ी, स्त्री. ಅಡಿಮರ, ಬಡ್ಡೆ; ವೀಳೆಯದೆಲೆಯ ತಾಯಿ ಬಳ್ಳಿ; ಇದರಿಂದ ಕೊಯ್ದ ವೀಳೆಯದೆಲೆ; ಮರಗಳ ಮೇಲಿನ ತೆರಿಗೆ; ಮರವಳಿ ಗುತ್ತಿಗೆ.
पेडू, पु. ಹೊಕ್ಕಳಿನ ಕೆಳಗಿನ ಭಾಗ, ಕಿಬ್ಬೊಟ್ಟೆ, ಕಿಬ್ಬಸುರು.
पेन्हाना, अक्रि. ಹಾಲಿನ ಸೊರೆ ಬಿಡು.
पेड़ना, पेरना, सक्रि. ಹಿಸುಕು, ಹಿಂಡು, ಒತ್ತು; ತಿಪ್ಪಲುಪಡಿಸು, ಚಲಿಸು.
पेरू, पु. ಸೀಮೆ ಕೋಳಿ.
पेल, पु. ನೂಕಾಟ; ನೂಕು ನುಗ್ಗು, ನುಗ್ಗಲು; ಸಂದಣಿ. स्त्री. ಹೇರಳ, ದಂಡಿ. रेल पेल = ಸಮೃದ್ಧಿ; ಸುಗ್ಗಿ, ದಂಡಿ.
पेलना, सक्रि. ಒತ್ತು, ಅಮುಕು; ದೂಡು, ತಳ್ಳು, ನೂಕು; ಬಲವಂತಪಡಿಸು; ಅಡಚು; ತುರುಕು.
पेला, पु. ದೂಡುವಿಕೆ, ತಳ್ಳುವಿಕೆ; ಜಗಳ; ಅಪರಾಧ; ರೇಷ್ಮೆಹುಳು; ರೇಷ್ಮೆಗೂಡು.
पेल्रू, वि. ದೂಡುವವ, ನೂಕುವವ;

ಕುಸ್ತಿ ಮಾಡುವವ, ಜಟ್ಟಿ.

पेवस, पेवसी, ಸ್ತ್ರೀ. ಗಿಣ್ಣು ಹಾಲು; ಗಿಣ್ಣು ಹಾಲಿನಿಂದ ತಯಾರಾದ ಹಾಲು ಖೋವಾ.

पेश, वि. ಮುಂಭಾಗ, ಪೂರ್ವಭಾಗ; ಮುಂದುವರಿದ; ಗೌರವಿಸಿದ, ಮಾನ್ಯ; ನಂಬಿಕೆಯುಳ್ಳ, ವಿಶ್ವಸ್ತ. क्रिवि. ಮುಂದೆ, ಮುಂದುಗಡೆ, ಎದುರಿನಲ್ಲ. पेश आना = ಮುಂದೆ ಬರು; ಒದಗು; ವರ್ತಿಸು. पेश करना = ಮುಂದುವರಿಸು; ಮುಂದಿಡು; ಸಮರ್ಪಿಸು.

पेश-क़दमी, ಸ್ತ್ರೀ. ಮುಂದುವರಿಯುವಿಕೆ; ಪೂರ್ವಾಲೋಚನೆ, ಮುಂದೃಷ್ಟಿ; ಚುರುಕು, ಚಟುವಟಿಕೆ; ಮುಂದಾಳುತನ, ನೇತೃತ್ವ.

पेशक़ब्ज़, ಸ್ತ್ರೀ. ಕಠಾರಿ, ಬಾಕು

पेशकश, पु. ಕಪ್ಪ, ಕಾಣಿಕೆ; ಜಮೀನಿನ ಲಾವಣಿ, ಕಂದಾಯ.

पेशकार, पु. ಕಾರ್ಯಸ್ಥ; ಬಕ್ಷಿ; ಪೇಷ್ಕಾರ.

पेशकारी, ಸ್ತ್ರೀ. ಕಾರ್ಯಸ್ಥನ ಕೆಲಸ; ಪೇಷ್ಕಾರನ ಉದ್ಯೋಗ.

पेशख़ेमा, पु. ಪೂರ್ವಭಾವಿಯಾಗಿ ರವಾನಿಸುವದಂಡಿನ ಸಾಮಾನು; ಮುಂದಳ, ದಳಮುಖ; ಪೂರ್ವಲಕ್ಷಣ; ಅಗ್ರದೂತ.

पेशगाह, ಸ್ತ್ರೀ. ಮೊಗಸಾಲೆ.

पेशगी, ಸ್ತ್ರೀ. ಮುಂಗಡ; ಸಂಚಕಾರ.

पेशतर, वि. ಪೂರ್ವದ, ಮೊದಲಿನ. क्रिवि. ಪೂರ್ವದಲ್ಲಿ, ಮೊದಲು.

पेशदस्त, वि. ಪೂರ್ವಭಾವಿಯಾಗಿಯೇ ವ್ಯವಸ್ಥೆ ಮಾಡುವವ; ಉತ್ಕೃಷ್ಟವಾದ, ಶ್ರೇಷ್ಠ. पु. ಸಹಾಯಕ; ಸಂಚಕಾರ.

पेशदस्ती, ಸ್ತ್ರೀ. ಮೊದಲೇ ಮಾಡುವ ಏರ್ಪಾಡು, ಪೂರ್ವಸಿದ್ಧತೆ; ಬಲಾತ್ಕಾರ; ಶ್ರೇಷ್ಠತೆ, ಉತ್ಕೃಷ್ಟತೆ; ಮುಂಗಡವಾಗಿ ಕೊಡುವಿಕೆ.

पेशनामा, पु ಭೂಮಿಕೆ, ಮುನ್ನುಡಿ.

पेशबंद, पु. ಜೀನನ್ನು ಕಟ್ಟುವ ಮುಂದುಗಡೆಯ ಹಗ್ಗ.

पेशबंदी, ಸ್ತ್ರೀ. ಪೂರ್ವವ್ಯವಸ್ಥೆ; ಪೂರ್ವಸಿದ್ಧತೆ; ಭೂಮಿಕೆ, ಪೀಠಿಕೆ.

पेशबीन, वि. ಮುಂದಾಲೋಚನೆಯುಳ್ಳವ; ಜಾಣ.

पेशबीनी, ಸ್ತ್ರೀ. ಮುಂದಾಲೋಚನೆ, ಪೂರ್ವಾಲೋಚನೆ; ಜಾಣತನ.

पेशरफ़्त, वि. ಸಫಲವಾದ; ಗುಣಕಾರಿ

पेशरौ, पु. ಮುಂದೆಹೋಗುವವ, ಮಾರ್ಗದರ್ಶಿ; ಮುಂದಳ.

पेशराज़, पु. ಕಲ್ಲು ಹೊರುವ ಆಳು.

पेशवा, पु. ಆದರ್ಶಪುರುಷ; ಮಾದರಿ; ದಳಪತಿ, ನಾಯಕ; ಗುರು, ಆಚಾರ್ಯ; ಮಹಂತ; ಮುಂದಾಳು, ಪುಢಾರಿ; ಮರಾಟರ ಸಾಮ್ರಾಜ್ಯದ ಪ್ರಧಾನ ಮಂತ್ರಿಯ ಬಿರುದು, ಪೇಷ್ವೆ.

पेशवाई, ಸ್ತ್ರೀ. ಮುಂದಾಳುತನ; ನಾಯಕತ್ವ; ಶ್ರೇಷ್ಠತೆ; ಎದುರುಗೊಳ್ಳುವಿಕೆ, ಸ್ವಾಗತ; ಪೇಷ್ವೆಯರ ಪದವಿ ಅಥವಾ ರಾಜತಂತ್ರ.

पेशवाज़, ಸ್ತ್ರೀ. ಸೂಳೆಯರು ನರ್ತನ

ಆಡುವಾಗ ಧರಿಸುವ ಲಂಗ, ಅಲಂಕಾರದ ಉಡುಪು.

पेशा, स्त्री. ವೃತ್ತಿ, ಉದ್ಯೋಗ, ಕೆಲಸ, ಕಾಯಕ, ಕಸಬು.

पेशानी, स्त्री. ಹಣೆ;ಹಣೆ ಬರಹ; ಭಾಗ್ಯ.

पेशाब, पु. ಮೂತ್ರ, ಉಚ್ಚೆ.

पेशाबख़ाना, पु. ಉಚ್ಚೆ ಹೊಯ್ಯುವ ಸ್ಥಳ, ಮೂತ್ರಿ.

पेशाब-बंद, पु. ಉಚ್ಚೆ ಕಟ್ಟುವಿಕೆ, ಮೂತ್ರಕೃಚ್ಛ್ರ)

पेशावर, पु. ಕಸಬುದಾರ, ಕೆಲಸಗಾರ

पेशी, स्त्री. ಮೊಕದ್ದಮೆಯು ನ್ಯಾಯಾಧಿಪತಿಯ ಮುಂದೆ ಬರುವಿಕೆ, ವಿಚಾರಣೆ, "ಹೀರಿಂಗು"; ಮುಂದೆ ಬರುವಿಕೆ; ಉಪಸ್ಥಿತಿ, ಹಾಜರಿ; ಮುಂಗಡ; ಚೀಲ, ಗವಸಣಿಗೆ, ಒರೆ.

पेशीन, वि. ಪೂರ್ವದ; ಮುಂದಿನ. पु. ಪ್ರಾತಃಕಾಲ, ಬೆಳಗ್ಗೆ, ಮುಂಜಾನೆ.

पेशीनगो, पु. ಭವಿಷ್ಯ ಹೇಳುವವ, ಆಗಮಿಕ.

पेशीनगोई, स्त्री. ಭವಿಷ್ಯ ಹೇಳುವಿಕೆ, ಭವಿಷ್ಯದ್ವಾಕ್ಯ.

पेश्तर, वि. =पेशतर.

पेहटा, पु. ಕಕ್ಕರಿಕೆ, ಮಿಣಿಕೆ ಹಣ್ಣು.

पैंचना, सक्रि. ಕೇರು, ತೂರು, ಒನೆಯು.

पैंचा, पु. ಸಾಲ, ಕಡ; ಮುಯ್ಯಿ.

पैंजन, पैंजनी, स्त्री. ಗೆಜ್ಜೆಯ ಸರ; ಗೊಲಸು, ರುಳಿ, ಪಾಡಗ, ಪೈಜಣ.

पैंट, पु. =पतलून.

पैंठ, स्त्री. ಸಂತೆ, ಅಂಗಡಿ; ಪ್ರವೇಶ; ದ್ವಾರ; ಹುಂಡಿಯ ದ್ವಿಪ್ರತಿ.

पैंड, पु. ಹೆಜ್ಜೆ; ದಾರಿ.

पैंडा, पु. ದಾರಿ, ಹಾದಿ; ಲಾಯ, ತಬೇಲಿ.

पैंतरा, पु. ಕಾಲಿನ ಚಲನೆ, ಗತ್ತು; ಪೇರಣಿ, ಜತಿ; ವರಸೆ.

पैंताना, पु. ಮಂಚದ ಕಾಲುಕಡೆ.

पैंतालीस, वि. ನಲವತ್ತೈದು.

पैंतीस, वि. ಮೂವತ್ತೈದು.

पैंसठ, वि. ಅರವತ್ತೈದು.

पै, पु. ಕಾಲು, ಪಾದ. अव्य. ಆದರೆ, ಪರಂತು. प्रत्य. ಮೇಲೆ.

पैक, पु. ದೂತ, ಹರಕಾರ.

पैकड़ा, पु. ಕಾಲುಸಂಕೋಲೆ.

पैकड़ी, स्त्री. ಕಾಲು ಸರಪಣಿ; ರುಳಿ.

पैकर, पु. ಆಕೃತಿ, ಆಕಾರ; ರೂಪ.

पैकान, स्त्री. ಅಂಬಿನ ಮೊನೆ.

पैकार, पु. ಚಿಲ್ಲರೆ ವ್ಯಾಪಾರಿ, ಕೋರಿಸೆಟ್ಟಿ. स्त्री. ಯುದ್ಧ, ಕದನ.

पैकी, पु. ಹುಕ್ಕಾವನ್ನು ಬಾಡಿಗೆಗೆ ಕೊಡುವವ.

पैख़ाना, पु. =पायख़ाना.

पैग़ंबर, पु. ಈಶ್ವರನ ದೂತ, ದೇವದೂತ; ಪೈಗಂಬರ, ನಬೀ.

पैग़ंबरी, वि. ಪೈಗಂಬರನಿಗೆಸಂಬಂಧಿಸಿದ

पैग़ाम, पु. ಸಂದೇಶ; ದೌತ್ಯ.

पैग़ार, पु. ನೇಗಿಲ ಸಾಲು; ಹಳ್ಳ.

पैगू, पु. ಒಂದು ಬಗೆ ಹಸುರು ಕಲ್ಲು.

पैज, स्त्री. ಪ್ರತಿಜ್ಞೆ, ಪ್ರಮಾಣ.

पैजामा, पु. =पायजामा.

पैज़ार, पु. ಪಾದರಕ್ಷೆ, ಜೋಡು, ಕೆರ,

ಎಕ್ಕಡ. जूती पैज़ार = ಎಕ್ಕಡದ ಏಟು; ಪರಸ್ಪರ ಜಗಳ.

पैठ, स्त्री. ಪ್ರವೇಶಿಸುವಿಕೆ, ಪ್ರವೇಶ.

पैठना, अक्रि. ಹೊಗು, ಪ್ರವೇಶಿಸು; ನುಸುಳು; ಧುಮುಕು.

पैठाना, पैठालना, सक्रि. ಹೊಗಿಸು; ಪ್ರವೇಶಮಾಡಿಸು; ನುಸುಳಿಸು.

पैठाव, पु. ಪ್ರವೇಶಿಸುವಿಕೆ; ಪ್ರವೇಶ.

पैड़ी, स्त्री. ಏಣಿ; ಸೋಪಾನ; ಮೆಟ್ಟಲು.

पैतरा, पु. = पैंतरा.

पैतला, वि. ಆಳವಿಲ್ಲದ, ಗಾಧ.

पैतृक, वि. ಪಿತೃಸಂಬಂಧವಾದ.

पैदल, क्रिवि. ಕಾಲು ನಡೆಯಾಗಿ, ಪಾದಚಾರಿಯಾಗಿ. पु. ಕಾಲುನಡಿಗೆ; ಪಾದಚಾರಿ; ಕಾಲಾಳು; ಪದಾತಿ.

पैदा, वि. ಜನಿಸಿದ; ಹುಟ್ಟಿದ; ಏರ್ಪಟ್ಟ; ಉಂಟಾದ. स्त्री. ಹುಟ್ಟುವಳಿ; ಲಾಭ; ಸಂಪಾದನೆ. पैदा होना = ಹುಟ್ಟು; ಉಂಟಾಗು; ಏರ್ಪಡು.

पैदाइश, स्त्री. ಜನ್ಮ, ಹುಟ್ಟು; ಉತ್ಪತ್ತಿ; ಸಂಪಾದನೆ, ಆಯ; ಲಾಭ

पैदाइशी, वि. ಜನ್ಮದ, ಹುಟ್ಟು(ಗುಣ); ಅಗರ್ಭ; ಸಹಜವಾದ.

पैदावर, पैदावार, पैदावारी, स्त्री. ಹುಟ್ಟುವಳಿ, ಉತ್ಪತ್ತಿ; ಫಸಲು; ಫಲ; ಲಾಭ

पैन, पु. ಸಣ್ಣ ಜಲಾಶಯ, ಹಳ್ಳ, ಕಾಲುವೆ

पैना, वि. ತೀಕ್ಷ್ಣವಾದ; ಕೂರಾದ, ಚೂಪಾದ; ಮೊನಚಾದ, ಹರಿತ. पु. ಮುಳ್ಳುಗೋಲು, ಅಂಕುಶ.

पैनाना, सक्रि. ಹರಿತಮಾಡು, ಮಸೆ.

पैनाला, पु. ನಳಿಗೆ, ಚರಂಡಿ, ಮೋಹರಿ.

पैमक, स्त्री. ಪಟ್ಟೆರೇಶಿಮೆ, ಕಿನಕಾಬು.

पैमा, स्त्री. ಅಳೆಯುವಿಕೆ; ಅಳೆಯುವವ.

पैमाइश, स्त्री. ಅಳೆಯುವಿಕೆ, ಪೈಮಾಯಿಷಿ.

पैमान, पु. ಅಳೆಯುವಿಕೆ; ಒಡಂಬಡಿಕೆ, ಒಪ್ಪಂದ, ಕರಾರು; ವಾಗ್ದಾನ, ಪ್ರತಿಜ್ಞೆ

पैमाना, पु. ಅಳೆಯುವ ಉಪಕರಣ, ಮಾನ; ಪ್ರಮಾಣ, ಪರಿಮಾಣ.

पैया, पु. ಪೊಳ್ಳುಕಾಳು, ಜೊಳ್ಳು; ಚಕ್ರ.

पैर, पु. ಕಾಲು; ಅಡಿ; ಹೆಜ್ಜೆ. पैर गाडी = ದ್ವಿಚಕ್ರಬಂಡಿ, ಕಾಲ್ಗಾಡಿ, "ಬೈಸಿಕಲ್ಲು".

पैरना, अक्रि. ಈಜು, ಈಜಾಡು.

पैरवी, स्त्री. ಅನುಸರಿಸುವಿಕೆ, ಅನುಗಮನ; ಹಿಂಬಾಲಿಸುವಿಕೆ; ಮುಂದುವರಿಸುವಿಕೆ, ಸವಣಿಸುವಿಕೆ; ಮುಂದಿನ ಕ್ರಮ ನಡೆಸುವಿಕೆ.

पैरवीकार, पु. ಅನುಸರಿಸುವವ; ಮುಂದಿನ ಕ್ರಮ ನಡೆಸುವವ.

पैरा, पु ಕಾಲಿಡುವಿಕೆ, ಪದಾರ್ಪಣ; ಏಣಿ; ಸೋಪಾನ.

पैराई, स्त्री. ಈಜುವಿಕೆ, ಈಜಾಟ.

पैराक, पैराकू, पु. ಈಜುವವ, ಈಜುಗಾರ.

पैराकी, स्त्री. ಈಜುಗಾರಿಕೆ.

पैराना, सक्रि. ಈಜಾಡಿಸು; ಈಜುಕಲಿಸು

पैराव, पु. ಈಜುವಷ್ಟು ಆಳ.

पैरावा, पु. ಸಾಗುವಳಿ, ಆರಂಬ.

पैरास्ता, वि. ಅಲಂಕೃತ, ಸಿಂಗರಿಸಿದ.

पैराहन, पु. ಹೊದಿಕೆ, ಆಚ್ಛಾದನ; ವಸ್ತ್ರ; ಜೂಲುಬಟ್ಟೆ.

पैरी, स्त्री. ಏಣಿ; ಸೋಪಾನ; ಕಾಲಿನ ಒಂದು ಆಭರಣ.

पैरो, पु. ಅನುಯಾಯಿ, ಶಿಷ್ಯ.

पैरोकार, पु. =पैरवीकार.

पैला, पु. पैली, स्त्री. ಧಾನ್ಯ ಅಳೆಯುವ ಪಾತ್ರೆ, ಕೊಳಗ; ಶ್ರಾವೆ.

पैवंद, पु. ತೇಪೆ, ಅಪ್ಪಿಗೆ; ಸೇರಿಸುವಿಕೆ, ಜಂಟಿ; ಕಸಿ ಮಾಡುವಿಕೆ. वि. ಜಂಟಿಸಿದ, ಸೇರಿಸಿದ.

पैवंदकार, वि. ತೇಪೆಹಾಕುವವ; ಜಂಟಿಸುವವ.

पैवंदी, वि. ತೇಪೆಹಾಕಿದ; ಸೇರಿಸಿದ, ಜಂಟಿಸಿದ; ಕಸಿ ಮಾಡಿದ (ಗಿಡ); ಸಂಕರ ಜಾತಿಯ.

पैवस्तगी, स्त्री. ಸೇರಿಕೆ, ಜಂಟಿ; ಸ್ನೇಹ.

पैवस्त, पैवस्ता, वि. ಮಿಳಿತವಾದ, ಸೇರಿದ; ಕಲೆತ, ಬೆರೆತ.

पैसना, अक्रि. ಪ್ರವೇಶಿಸು, ಹೊಗು.

पैसरा, पु. ಪ್ರಯತ್ನ; ಕಷ್ಟ; ರಗಳೆ.

पैसा, पु. ಕಾಲಾಣೆಯ ನಾಣ್ಯ, ಪೈಸಾ, ಬಿಲ್ಲೆ; ನೂರರು ಕಾಸು; ಹಣಕಾಸು, ಧನ [ನಾಣ್ಯಗಳ ಹಿಂದೀ ಹೆಸರುಗಳನ್ನು ಅನುಬಂಧದಲ್ಲಿಕೊಟ್ಟಿರುವನಾಣ್ಯಗಳ ಕೋಷ್ಟಕದಿಂದ ತಿಳಿಯಬಹುದು.]

पैसार, पु. ಹೊಗುವಿಕೆ, ಪ್ರವೇಶ.

पौंका, पु. ಒಂದು ಬಗೆ ಮಿಡಿತೆ; ಕೀಟ.

पोंगा, वि. ಪೊಳ್ಳು, ಟೊಳ್ಳು. पु. ಕೊಳವೆ, ನಳಿಗೆ; ಗೊಟ್ಟ; ದಡ್ಡ, ಪೆದ್ದ. पोंगा पंडित = ಪೆದ್ದಭಟ್ಟ, ಕೋಚು ಭಟ್ಟ; ಮಡ್ಡಿ ಸಾಂಬ್ರಾಣಿ.

पोंगी, स्त्री. ಚಿಕ್ಕ ನಳಿಗೆ; ಕೊಳಲು, ಪಿಳ್ಳಂಗೋವಿ; ಪುಂಗಿ ವಾದ್ಯ.

पोंछन, स्त्री. ಮೈ ಒರೆಸುವ ಬಟ್ಟೆ; ಕಸ; ಒರೆಸಿ ತೆಗೆದದ್ದು, ಉಜ್ಜಿ ತೆಗೆದದ್ದು.

पोंछना, सक्रि. ಒರೆಸು, ಸೀಟು; ತಿಕ್ಕು, ಉಜ್ಜು, ತೀಡು; ತೊಡೆ, ಪೂಸು. पु. ಉಜ್ಜುವ ವಸ್ತ್ರ; ಒರೆಸುವ ಬಟ್ಟೆ.

पोंटा, पु. ಸಿಂಬಳ, ಗೊಣ್ಣೆ.

पोआ, पु. ಹಾವಿನ ಮರಿ; ಒಂದು ಸೊಪ್ಪು.

पोआना, सक्रि. "पोना" का प्रे. रूप.

पोआर, पोआल, पु. ಒಣ ಹುಲ್ಲು.

पोइया, स्त्री. ನಾಗಾಲೋಟ, ದೌಡು.

पोइस, स्त्री. ನಾಗಾಲೋಟ, ದೌಡು. अव्य. ಜೋಕೆ, ಹುಷಾರ್, ಪರಾಕು!

पोई, स्त्री. ಬಸಲೆ ಸೊಪ್ಪು; ಕುದುರೆಯ ನಿಧಾನ ನಡಿಗೆ.

पोखर, पोखरा, पु. **पोखरी**, स्त्री. ಪುಷ್ಕರಣಿ, ಹೊಕ್ಕರಣೆ.

पोच, वि. ತುಚ್ಛ, ನಿಕೃಷ್ಟ, ಹೀನ.

पोज़बंद, पु. ಬಾಯಿ, ಮೂತಿ.

पोज़िश, स्त्री. ಕ್ಷಮಾಪಣೆ, ಮಾಫಿ.

पोट, स्त्री. ಮೂಟೆ, ಗಂಟು; ಹೊರೆ; ಭಾಂಗಿ; ರಾಶಿ, ಕುಪ್ಪೆ; ನಳಿಗೆ; ಬೆಳ್ಳುಳ್ಳಿ.

पोटड़ी, स्त्री. ಮಾವಿ ಚೀಲ, ಮಾಸು.

पोटना, सक्रि. ಶೇಖರಿಸು, ಒಟ್ಟುಗೂಡಿಸು; ಪುಸಲಾಯಿಸು; ಹೊರಳಾಡು.

पोटला, पु. ದೊಡ್ಡಪೊಟ್ಟಣ; ಭಾಂಗಿ.

पोटली, स्त्री. ಪೊಟ್ಟಣ; ಚಿಕ್ಕಗಂಟು.

पोटा, पु. पोटी, स्त्री. ಕಣ್ಣಿನ ಎವೆ; ಬೆರಳಿನ ತುದಿ; ಹೊಟ್ಟೆ, ಉದರ; ಪಿಳ್ಳೆ, ಮರಿ; ಗರಿಗಟ್ಟದ ಹಕ್ಕಿಮರಿ; ಸಾಮರ್ಥ್ಯ, ಯೋಗ್ಯತೆ, ಅಂತಸ್ತು; ಮನೆ ಸಾಮಾನು; ಸಿಂಬಳ, ಗೊಣ್ಣೆ.

पोढ़, पोढ़ा, वि. ದೃಢವಾದ; ಬಲಿಷ್ಠ; ಗಟ್ಟಿ; ದಟ್ಟ, ನಿಬಿಡ.

पोढ़ाई, स्त्री. ದೃಢತೆ; ಗಟ್ಟಿ; ನಿಬಿಡತೆ, ಸಾಂದ್ರತೆ.

पोढ़ाना, अक्रि. ದೃಢವಾಗು, ಗಟ್ಟಿಯಾಗು. सक्रि. ದೃಢಪಡಿಸು.

पोत, पु. ಮರಿ, ಪಿಳ್ಳೆ; ಕಂದು; ನೆಯ್ಗೆ, ಅಣಿ; ನಾವೆ, ಹಡಗು; ರೀತಿ, ವಿಧ, ಸ್ವಭಾವ; ಗುಣ; ಸರ್ತಿ, ಸರದಿ, ಒಂತು; ಜಮೀನಿನ ತೆರಿಗೆ, ಕಂದಾಯ; ಸಗಣಿ. स्त्री. ತುಳಸಿ ಮಣಿ, ಗಾಜಿನ ಮಣಿ

पोतदार, पु. ಕೋಶಾಧ್ಯಕ್ಷ. ಖಜಾಂಚಿ. ಖಜಾನದಾರ; ಸರಾಫ, ಪತ್ತಾರ.

पोतना, सक्रि. ಸವರು, ಬಳಿ; ಪೂಸು; ಸಾರಿಸು; ಮೆತ್ತು. पु. ಸಾರಿಸುವಬಟ್ಟೆ, ಬಳಿಯುವ ಬಟ್ಟೆ; ಕುಚ್ಚುಮಟ್ಟೆ.

पोतरा, पु. ಚಿಕ್ಕ ವಸ್ತ್ರ, ಪುಟಗೋಸಿ.

पोतला, पु. =परौठा.

पोता, पु. ಪೌತ್ರ, ಮೊಮ್ಮಗ; ಮರಿ; ನೌಕ; ತೆರಿಗೆ, ಕಂದಾಯ; ಅಂಡಕೋಶ; ಲೇಪ, ಮೆತ್ತನೆ. ಸಾರಣೆ; ಬಳಿಯುವ ವಸ್ತ್ರ; ಕುಚ್ಚುಮಟ್ಟೆ; ಮಣ್ಣುಗಾರೆ, ಗಚ್ಚು.

पोतिया, पु. ಸ್ನಾನದ ಪಂಚೆ, ಪಾನಿ ಪಂಚೆ; ಪುಟಗೋಸಿ; ಸರ್ತಿಯುವ; ಆಟದ ಸಾಮಾನು.

पोती, स्त्री. ಮೊಮ್ಮಗಳು, ಪೌತ್ರಿ; ಬಳಿಯುವಿಕೆ, ಸವರುವಿಕೆ, ಪೂಸುವಿಕೆ. लीपा पोती = ಸಾರಣೆ, ಸವರುವಿಕೆ; ಕಣ್ಣು ಒರೆಸುವಿಕೆ.

पोथ, स्त्री. ಬೆಳ್ಳುಳ್ಳಿಯ ಕೊನೆ; ಪುಸ್ತಕ; ಗಾಜಿನ ಮಣಿ.

पोथा, पु. ಪುಸ್ತಕ; ಕಾಗದದ ಕಟ್ಟು.

पोथी, स्त्री. ಪುಸ್ತಕ, ಹೊತ್ತಗೆ; ಪುರಾಣ.

पोदना, पु. ಒಂದು ಪಕ್ಷಿ; ಕುಳ್ಳ, ಗಿಡ್ಡ

पोद्दार, पु. =पोतदार.

पोना, सक्रि. ಹೋಳಿಗೆ ಅಥವಾ ರೊಟ್ಟಿ ತಟ್ಟು, ರೊಟ್ಟಿ ಸುಡು, ಬೇಯಿಸು; ಪೋಣಿಸು, ಕೋದು.

पोनी, स्त्री. ಹತ್ತಿಯ ತೊಳೆ; ಹಂಜಿ.

पोपता, पु. ಒಂದು ಬಗೆ ಹಣ್ಣು: ರೆಪ್ಪೆ, ಎವೆ.

पोपनी, स्त्री. ಸುಷಿರವಾದ್ಯ. ಮುಖವಾದ್ಯ; ಎಲೆ ಮೊದಲಾದುವುಗಳಿಂದ ಮಾಡಿದ ಶಿಲಿಪೆ.

पोपला, वि. ಹಲ್ಲುಗಳಿಲ್ಲದ, ಬೋಡು

पोपलाना, अक्रि. ಬೊಕ್ಕಬಾಯಾಗು, ಬೋಡು ಬಾಯಾಗು.

पोर, पोरी, स्त्री. ಗಣಿಕೆ, ಗಣಲು; ಬಿದಿರಿನ ಗಿಣ್ಣು; ಬೆನ್ನುಹುರಿ.

पोरा, पु. ಬೆರಳು; ತುಂಡು, ತುಣುಕು; ತೊಲೆ, ಜಂತಿ.

पोरुआ, पु. ಬೆರಳಿನ ಗಣಿಕೆ.

पोल, पु. ಬಾಗಿಲು, ದ್ವಾರ; ಮನೆಯ ಮುಂದಣ ಅಂಗಳ; ಪೈಸಾ; ಹಣ; ಮರಿ, ಪಿಳ್ಳೆ; ಶೂನ್ಯ, ಖಾಲಿ; ಟೊಳ್ಳು, ಪೊಳ್ಳು. पोल खुलना = ಪೊಳ್ಳುತನ ಬಯಲಾಗು, ಗುಟ್ಟು ರಟ್ಟಾಗು.

पोला, वि. ಖಾಲಿ; ಟೊಳ್ಳಾದ, ಪೊಳ್ಳು; ಗಟ್ಟಿಯಿಲ್ಲದ; ಮೆದುವಾದ; ರಂಧ್ರಮಯ.

पोलिया, पु. ದ್ವಾರಪಾಲಕ, ಪಡಿಯರ.

पोली, स्त्री. ಜೇನುಗೂಡು; ರಂಧ್ರಮಯವಾದ ವಸ್ತು, ತಾತಾತೂತು.

पोष, पु. ಬೆಳವಣಿಗೆ; ಸೌಖ್ಯ; ಸಮೃದ್ಧಿ.

पोषक वि. ಪೋಷಿಸುವವ, ಪೋಷಕ.

पोश, पु. ಉಡಿಗೆ, ತೊಡಿಗೆ

पोशाक, **पोशिश**, स्त्री. ಉಡಿಗೆ, ಉಡುಪು, ದುಸ್ತು, ಪೋಷಾಕು.

पोशीदगी, स्त्री. ಮುಚ್ಚು ಮರೆ; ಗೋಪ್ಯ, ರಹಸ್ಯ.

पोशीदा, वि. ವಸ್ತ್ರಧರಿಸಿದ; ಮುಚ್ಚಿದ; ಗುಟ್ಟಾದ, ಗುಪ್ತವಾದ. क्रिवि. ಗುಟ್ಟಾಗಿ, ಗೋಪ್ಯವಾಗಿ.

पोषना, **पोसना**, सक्रि. ಪೋಷಿಸು, ಸಾಕು, ಸಲಹು.

पोस्त, पु. ಚರ್ಮ; ಸಿಪ್ಪೆ; ತೊಗಟೆ; ಗಸಗಸೆಯ ಗಿಡ ಅಥವಾ ಕಾಯಿ; ಅಫೀಮು.

पोस्ता, पु. ಗಸಗಸೆ ಗಿಡ; ಒಡ್ಡು, ಕಟ್ಟೆ

पोस्ती, पु. ಅಫೀಮು ಸೇವಿಸುವವ, ಅಫೀಮುಖೋರ; ಸೋಮಾರಿ.

पोस्तीन, वि. ಚರ್ಮದ. पु. ಮೃಗಗಳ ಚರ್ಮದಿಂದ ಹೊಲಿದ ಅಂಗಿ; ಕೃಷ್ಣಾಜಿನದ ಅಂಗಿ; ಪುಸ್ತಕಕ್ಕೆ ರಟ್ಟು ಕಟ್ಟುವಾಗ ಒಳಗಡೆ ಅಂಟಿಸುವ ಗಟ್ಟಿ ಕಾಗದ; ಕುಂದು, ದೋಷ; ದೂರು, ಚಾಡಿ.

पोह, स्त्री. ಬೆಳಗು, ಮುಂಜಾನೆ.

पोहना, सक्रि. ಪೋಣಿಸು; ತುರುಕು; ಜಡಿ, ಕುಟ್ಟು; ಮೆತ್ತು; ರೊಟ್ಟಿ ತಟ್ಟು, ರೊಟ್ಟಿ ಸುಡು.

पोहा, पु. ಗೋಮಾಳದಲ್ಲಿ ಮೇಯುವ ದನಕರುಗಳು; ದನಕರು; ಹತ್ತಿಯ ತೊಳೆ.

पौंचा, पु. ಐದೂವರೆಯ ಮಗ್ಗಿ.

पौंडा, पु. ರಸದಾಳಿ ಕಬ್ಬು.

पौंरना, अक्रि. ಈಜು, ಈಜಾಡು.

पौ, स्त्री. ನೆತ್ತದಾಟದಲ್ಲಿ ಯಕ್ಕ; ದಾಯ; ದನಗಳಿಗೆ ನೀರು ಕುಡಿಸುವ ಸ್ಥಳ; ಪಾನೀಯಶಾಲೆ, ಅರವಟ್ಟಿಗೆ; ಸೂರ್ಯೋದಯದ ಬೆಳಕು, ಅರುಣೋದಯ. पौ फटना = ಬೆಳಕು ಹರಿ, ಅರುಣೋದಯವಾಗು. पौ बारह = ಒಳ್ಳೆಯ ಗರ; ಅದೃಷ್ಟ; ಜಯ.

पौआ, पु. = **पोचा**.

पौढ़ना, अक्रि. ತೂಗಾಡು; ಜೋಲಾಡು; ಮಲಗು, ಒರಗು, ಪವಡಿಸು.

पौढ़ाना, सक्रि. ಜೋಲಾಡಿಸು, ಅಲ್ಲಾಡಿಸು; ತೂಗಾಡಿಸು; ಮಲಗಿಸು.

पौद, स्त्री. ಚಿಕ್ಕ ಗಿಡ; ಸಸಿ, ನಾಟಿ; ನಡೆಯಲು ಹಾಸಿದ ವಸ್ತ್ರ, ನಡೆಮಡಿ.

पौदर, स्त्री. ಹೆಜ್ಜೆಯ ಜಾಡು; ಕಾಲು

ದಾರಿ, ಕಾಲುಮಾರ್ಗ.
पौदा, पौधा, पु. ಚಿಕ್ಕ ಮರ, ಗಿಡ.
पौधाघर, पु. ಅಗೆ ಅಥವಾ ಸಸಿಗಳನ್ನು ಬೆಳೆಸುವ ಜಾಗ, ಅಗೇಡಿ.
पौन, स्त्री. ಗಾಳಿ; ಉಸಿರು. वि. ಕಾಲು ಕಡಮೆ ಒಂದು, ಮುಕ್ಕಾಲು.
पौना, पु. ಜಾಲರಿ ಸೌಟು; ಸಟ್ಟುಗ; ಮುಕ್ಕಾಲು; ಮುಕ್ಕಾಲಿನ ಮಗ್ಗಿ.
पौनी, स्त्री. ಚಿಕ್ಕ ಜಾಲರಿ ಸೌಟು; ವಿವಾಹಾದಿಗಳಲ್ಲಿ ಇನಾಮು ಪಡೆಯುವ ನಾಪಿತ ಅಗಸ ಮೊದಲಾದವರು.
पौने, वि. ಕಾಲು ಕಡಮೆ; ಮುಕ್ಕಾಲು. पौने सात = ಕಾಲು ಕಡಮೆ ಏಳು, ಆರೂಮುಕ್ಕಾಲು; $6\frac{3}{4}$.
पौर, स्त्री. ಬಾಗಿಲು, ದ್ವಾರ.
पौरा, पु. ಕಾಲಿಡುವಿಕೆ, ಪದಾರ್ಪಣ; ಇಟ್ಟ ಕಾಲು.
पौरिया, पु. ದ್ವಾರಪಾಲಕ.
पौरी, पौली, स्त्री. ದ್ವಾರ, ಬಾಗಿಲು; ಸೋಪಾನ, ಮೆಟ್ಟಿಲು; ಮೆಟ್ಟು.
पौला, पु. ಪಾದರಕ್ಷೆ, ಹಾವುಗೆ.
पौवा, पु. ಕಾಲು ಸೇರು, ಪಾವು.
पौसरा, पौसला, पौह, प्याऊ, पु. ಅರವಟ್ಟಿಗೆ, ಪಾನೀಯಶಾಲೆ.
प्याज़, पु. ಈರುಳ್ಳಿ, ಉಳ್ಳಿಗೆಡ್ಡೆ, ನೀರುಳ್ಳಿ.
प्याज़ी, वि. ಈರುಳ್ಳಿಯಂಥ; ಈರುಳ್ಳಿಯ ಬಣ್ಣದ.
प्यादा, पु. ಕಾಲಾಳು; ಸಿಪಾಯಿ; ದೂತ; ಚದುರಂಗದ ಆಳು, ಪೇದೆ.
प्याना, प्यावना, सक्रि. ನೀರು ಕುಡಿಸು; ನೀರು ಕಟ್ಟು.
प्यार, पु. ಪ್ರೀತಿ, ಪ್ರೇಮ, ಲಲ್ಲೆ.
प्यारा, वि. ಪ್ರಿಯ, ಪ್ರೀತಿಯ; ಇಷ್ಟದ.
प्याला, पु. ಬಟ್ಟಲು, ಪೇಲೆ; ತುಪಾಕಿಯಲ್ಲಿ ಮದ್ದಿಡುವ ಬಟ್ಟಲು.
प्याली, स्त्री. ಚಿಕ್ಕ ಬಟ್ಟಲು, ಲೋಟ.
प्यास, स्त्री. ನೀರಡಿಕೆ, ಬಾಯಾರಿಕೆ, ದಾಹ; ಬಯಕೆ, ಗೀಳು, ಗೇಂದಿ.
प्यासा, वि. ನೀರಡಿಕೆಯುಳ್ಳ, ದಾಹವುಳ್ಳ, ಬಾಯಾರಿದ.
प्योसार, प्योसाल, पु. = पीहर.
प्रकट, वि. ಪ್ರಕಟವಾದ, ಹೊರಬಿದ್ದ.
प्रकार, पु. ಪ್ರಕಾರ; ವಿಧ; ಬಗೆ; ಭೇದ.
प्रकाश, पु. ಪ್ರಕಾಶ, ಬೆಳಕು; ಪ್ರಕಟಣೆ.
प्रकाशक, पु. ಪ್ರಕಟಿಸುವವ, ಪ್ರಕಾಶಕ.
प्रकाशन, पु. ಪ್ರಕಟಿಸುವಿಕೆ, ಪ್ರಕಟಣೆ.
प्रगट, वि. ಪ್ರಕಟವಾದ, ಹೊರಬಿದ್ದ.
प्रगटना, अक्रि. ಹೊರಬೀಳು, ಪ್ರಕಟವಾಗು.
प्रचलन, पु. ಚುರುಕು, ಚಟುವಟಿಕೆ; ಚಾಲ್ತಿ, ರೂಢಿ; ಪದ್ಧತಿ.
प्रचलित, वि. ಚಾಲ್ತಿಯಲ್ಲಿರುವ, ಪ್ರಚಲಿತ.
प्रचार, पु. ಚಾಲ್ತಿ; ಪ್ರಚುರ, ಪ್ರಚಾರ; ವರ್ತನೆ; ರೂಢಿ; ಹುಲ್ಲುಗಾವಲು.
प्रजा, स्त्री. ಪ್ರಜೆ; ಸಂತಾನ.
प्रणाम, पु. ನಮಸ್ಕಾರ, ವಂದನೆ.
प्रणाली, स्त्री. ಚರಂಡಿ; ಬಚ್ಚಲುಹರಿ; ಮಾರ್ಗ; ರೀತಿ; ವಿಧಾನ.

प्रताप, पु ಪ್ರತಾಪ; ವೈಭವ.

प्रति, अव्य. ಬದಲಾಗಿ, ಪ್ರತಿಯಾಗಿ; ಎದುರಾಗಿ; ಒಂದೊಂದು.

प्रतियोग, पु. ಸ್ಪರ್ಧೆ; ಮೇಲಾಟ.

प्रतियोगिता, स्त्री. ಸ್ಪರ್ಧೆ; ಮೇಲಾಟ

प्रतियोगी, पु. ವಿರೋಧಿ, ಎದುರಾಳಿ.

प्रतिष्ठा, स्त्री. ಮರ್ಯಾದೆ, ಗೌರವ, ಮಾನ; ಕೀರ್ತಿ; ಕೀರ್ತಿ ಪ್ರತಿಷ್ಠೆ.

प्रतिष्ठित, वि. ಮರ್ಯಾದಸ್ಥ, ಗೌರವಸ್ಥ; ಮಾನ್ಯ. ಸಜ್ಜನ.

प्रतीकार, पु. ಪರಿಹಾರ, ಪ್ರತೀಕಾರ

प्रतीक्षा, स्त्री. ಎದುರುನೋಡುವಿಕೆ, ನಿರೀಕ್ಷಣೆ.

प्रतीत, वि. ವೇದ್ಯ, ವಿದಿತ.

प्रतीति, स्त्री. ಭರವಸೆ, ನಂಬಿಕೆ; ವಿಶ್ವಾಸ

प्रत्येक, क्रिवि. ಒಂದೊಂದಾಗಿ, ಬಿಡಿಬಿಡಿಯಾಗಿ, ಭಿನ್ನಭಿನ್ನವಾಗಿ.

प्रथा, स्त्री. ಸಂಪ್ರದಾಯ, ರೂಢಿ.

प्रदर, पु. ಸ್ತ್ರೀಯರ ಒಂದು ರೋಗ, ಬಿಳಿಸೆರಗು.

प्रदीप, पु. ದೀಪ, ಬತ್ತಿ.

प्रधान, वि. ಪ್ರಧಾನವಾದ, ಮುಖ್ಯ. पु. ಮುಖ್ಯಸ್ಥ, ತಲೆಯಾಳು; ಅಗ್ರೇಸರ; ಸಭಾಪತಿ; ಪ್ರಧಾನಮಂತ್ರಿ.

प्रधानता, स्त्री. ಮುಖ್ಯತೆ; ಪ್ರಾಧಾನ್ಯ

प्रपंच, पु. ಜಗತ್ತು; ಜಗಜ್ಜಾಲ; ಮೋಸ

प्रपंची, वि. ಜಾಲಗಾರ; ಮೋಸಗಾರ

प्रफुलना, अक्रि. ಅರಳು, ವಿಕಸಿಸು.

प्रफुल्लित, वि. ವಿಕಸಿತವಾದ, ಅರಳಿದ.

प्रबंध, पु. ಕಟ್ಟು, ರಚನೆ; ಏರ್ಪಾಡು, ವ್ಯವಸ್ಥೆ.

प्रभा, स्त्री. ಹೊಳಪು, ಕಾಂತಿ, ಪ್ರಭೆ.

प्रभात, पु. ಬೆಳಗಿನಜಾವ, ಮುಂಜಾನೆ

प्रभाती, स्त्री. ಉದಯರಾಗ.

प्रभाव, पु. ಪ್ರಭಾವ, ಮಹಿಮೆ.

प्रमाण, पु. ರುಜುವಾತು, ತಾರ್ಕಣೆ; ಉದಾಹರಣೆ.

प्रमोद, पु. ಸಂತೋಷ, ಆನಂದ.

प्रयत्न, पु. ಯತ್ನ, ಪ್ರಯತ್ನ. प्रयत्नशील = ಪ್ರಯತ್ನಪಡುವ.

प्रलोभ, प्रलोभन, पु. ಆಶೆ ತೋರಿಸುವಿಕೆ, ಪ್ರಲೋಭನ.

प्रवास, पु. ಪರದೇಶದಲ್ಲಿರುವಿಕೆ, ಪ್ರವಾಸ.

प्रवाह, पु. ನೀರಿನ ಹರಿತ, ಪ್ರವಾಹ.

प्रविष्ट, वि. ಒಳಕ್ಕೆ ಸೇರಿಸಿದ; ಹೊಗಿಸಿದ. प्रविष्ट करना = ಒಳಕ್ಕೆಸೇರಿಸು

प्रवृत्त, वि. ಕೆಲಸದಲ್ಲಿ ತೊಡಗಿದ. प्रवृत्त होना = ತೊಡಗು, ಪ್ರವೃತ್ತಿಸು.

प्रवेश, पु. ಒಳಕ್ಕೆ ಸೇರುವಿಕೆ; ಹೊಗುವಿಕೆ; ಪ್ರವೇಶ.

प्रशंसन, पु. ಪ್ರಶಂಸಿಸುವಿಕೆ.

प्रशंसना, सक्रि. ಪ್ರಶಂಸಿಸು, ಹೊಗಳು

प्रशंसनीय, वि. ಹೊಗಳತಕ್ಕ, ಸ್ತುತ್ಯ.

प्रशंसा, स्त्री. ಪ್ರಶಂಸೆ, ಹೊಗಳಿಕೆ.

प्रशस्त, वि. ಉತ್ತಮವಾದ, ಪ್ರಶಸ್ತ.

प्रशस्ति, स्त्री. ಪ್ರಶಂಸೆ; ಉತ್ಕೃಷ್ಟತೆ; ಒಕ್ಕಣೆ.

प्रश्न, पु. ಪ್ರಶ್ನೆ, ಸವಾಲು.

प्रसन्न, वि. ಸಂತೋಷಿಸುವ, ಮುದಿತ.

प्रसन्नता, स्त्री. ಸಂತೋಷ

प्रसिद्धि, स्त्री. ಪ್ರಸಿದ್ಧಿ, ಹೆಸರುವಾಸಿ

प्रसूता, प्रसूतिका, स्त्री. ಬಾಣಂತಿ.

प्रसून, पु. ಪುಷ್ಪ, ಹೂ; ಹಣ್ಣು

प्रस्ताव, पु. ಪ್ರಸ್ತಾಪ; ಠರಾವಿನ ಸೂಚನೆ; ಠರಾವು, ಗೊತ್ತುವಳಿ.

प्रस्तावना, स्त्री. ಪ್ರಸ್ತಾವನೆ, ಪೀಠಿಕೆ.

प्रस्तावित, वि. ಪ್ರಸ್ತಾಪಿಸಿದ, ಸೂಚಿಸಿದ

प्रस्तुत, वि. ಸಿದ್ಧ, ತಯಾರು.

प्रहर, पु. ಪ್ರಹರ, ಪಹರೆ, ೩ ಗಂಟೆ.

प्रहरी, पु. ಪಹರೆಯುವನು, ಪ್ರಹರಿ.

प्रहसन, पु. ಹಾಸ್ಯ, ನಗಚಾಟಿಕೆ; ಹಾಸ್ಯರಸವುಳ್ಳ ಚಿಕ್ಕ ನಾಟಕ, ಹುಚ್ಚಾಟ, ಪ್ರಹಸನ.

प्रहार, पु. ಏಟು, ಹೊಡೆತ; ಪೆಟ್ಟು.

प्राण, पु. ಪ್ರಾಣ, ಜೀವ.

प्राप्त, वि. ಪ್ರಾಪ್ತವಾದ, ಲಭಿಸಿದ. प्राप्त होना = ಲಭಿಸು.

प्राप्ति, स्त्री. ಪಡೆಯುವಿಕೆ, ಹೊಂದುವಿಕೆ, ಪ್ರಾಪ್ತಿ.

प्रायद्वीप, पु. ಪರ್ಯಾಯದ್ವೀಪ, ದ್ವೀಪಕಲ್ಪ.

प्रार्थना, स्त्री. ಪ್ರಾರ್ಥನೆ, ಬಿನ್ನಹ.

प्रार्थना-पत्र, पु. ಅರ್ಜಿ, ಮನವಿ.

प्रिय, वि. ಪ್ರೀತಿಯ; ಪ್ರಿಯ; ಗಂಡ.

प्रीति, स्त्री. ಪ್ರೀತಿ, ಪ್ರಿಯ, ಪ್ರೇಮ.

प्रीतिभोज, पु. ಔತಣ

प्रेक्षक, पु. ನೋಡುವವ; ನೋಟಗಾರ.

प्रेम, पु. ಪ್ರೇಮ, ಪ್ರೀತಿ; ಅಭಿಮಾನ.

प्लीह, स्त्री. ಪ್ಲೀಹ, ಗುಲ್ಮ, ನಡ್ಡಿ.

फ

फंका, पु. ತುತ್ತು, ಕವಳ.

फंकार, वि. = फांकड़ा.

फंकी, स्त्री. ನುಂಗುವ ಔಷಧ; ತುತ್ತು.

फंग, पु. ಪಾಶ, ಕಟ್ಟು.

फंगा, पु. ಮಿಡತೆ.

फंद, पु. ಬಂಧನ, ಕಟ್ಟು; ಪಾಶ; ಬಲೆ; ಹಿಡಿತ; ಮೂಗುತಿಯ ತಂತಿ ಅಥವಾ ಉಂಗುರ; ಜಾಲ, ಮೋಸ; ತೊಡಕು

फंदना, अक्रि. ಕಟ್ಟುಬೀಳು, ಸಿಕ್ಕಿಕೊಳ್ಳು. सक्रि. ದಾಟು.

फंदलाना, सक्रि. ಬಲೆಯಲ್ಲಿ ಹಿಡಿ; ಕಟ್ಟು.

फंदवार, पु. ಬಲೆ ಬೀಸುವವ.

फंदा, पु. ಬಲೆ, ಕಣ್ಣುಬಲೆ; ಜಾಲ; ಕಲ್ಲಿ; ಪಾಶ; ಕಟ್ಟು; ತೊಡಕು; ಪೀಕಲಾಟ.

फंदाना, फंदियाना, सक्रि. ಬಲೆಯಲ್ಲಿ ಹಿಡಿ, ಸಿಕ್ಕಿಸು; ದಾಟಿಸು; ಹಾರಿಸು.

फसना, अक्रि. ಸಿಕ್ಕು, ಸಿಕ್ಕಿಕೊ; ಸಿಕ್ಕಿಬೀಳು; ಗಂಟುಬೀಳು; ಹೂತುಕೊ.

फंसाना, सक्रि. ಸಿಕ್ಕಿಸು, ಸಿಕ್ಕಿಬೀಳಿಸು.

फंसाव, पु. ಸಿಕ್ಕು, ಗುಂಜು; ತೊಡಕು.

फंसियारा, पु. ಸುಲಿಗೆಯುವ; ಗಲ್ಲಿಗೆ ಹಾಕುವವ, ಮಾರೆಕಾರ, ವಧಕಾರ.

फंसिहारा, पु. ಸಿಕ್ಕಿಸುವವ.

फ़क़, वि. ಬಿಳಿಯ, ಬಿಳುಪೇರಿದ.

फकड़ी, स्त्री. ಒರಟುತನ, ಒಡ್ಡು;

ಅವಮಾನ.

फ़क़त, वि. ಒಂಟಿ; ಮಾತ್ರ; ಬರಿ. पु. ಮುಕ್ತಾಯ, ಕೊನೆ.

फकिया, स्त्री. ಚೂರು; ಹೋಳು; ತೊಳೆ.

फ़क़ीर, पु. ಬಡವ, ಗರೀಬ; ಭಿಕ್ಷುಕ, ಭಿಕಾರಿ; ಮಹಮ್ಮದೀಯ ಸನ್ಯಾಸಿ, ಫಕೀರ.

फ़क़ीरन, फ़क़ीरनी, स्त्री. "फ़क़ीर" का स्त्री. रूप.

फ़क़ीराना, वि. ಫಕೀರರಂತಹ. पु ಫಕೀರರ ಪೋಷಣೆಗಾಗಿ ಬಿಡುವ ದತ್ತಿ.

फ़क़ीरी, स्त्री. ಭಿಕ್ಷುಕತನ, ಬಡತನ; ಫಕೀರನ ವೃತ್ತಿ.

फ़क्क, स्त्री. ಮುಕ್ತಿ, ಬಿಡುಗಡೆ.

फक्कड़, पु. ಬಂಡಾಟ; ಪೋಲಿಮಾತು; ಪುಂಡ, ಪೋಲಿ.

फक्कड़बाज़, फकोड़िया, पु. ಪೋಲಿ ಮಾತಾಡುವವ, ಪೋಲಿ

फक्किका, स्त्री. ಪುಂಡತನ; ಮೋಸ.

फ़क्र, पु. ದಾರಿದ್ರ್ಯ, ಬಡತನ; ಫಕೀರನ ವೃತ್ತಿ; ಅನಾಸಕ್ತಿ.

फ़ख़्र, फ़ख़, पु. ಗೌರವ; ಹೆಮ್ಮೆ; ಹೆಚ್ಚಳ; ವೈಭವ.

फगुआ, पु. ಹೋಳಿ ಹಬ್ಬ, ಕಾಮನ ಹಬ್ಬ; ಹೋಳಿ ಹಬ್ಬದ ಉಡುಗೊರೆ ಅಥವಾ ಹಾಡು; ಅಶ್ಲೀಲ ಗೀತಗಳು

फगुनहट, स्त्री. ಫಾಲ್ಗುನಮಾಸದ ಗಾಳಿ.

फगुहारा, पु. **फगुहारिन, फगुहारी**, स्त्री ಕಾಮನ ಹಬ್ಬದ ಆಟಪಾಟದಲ್ಲಿ ಭಾಗವಹಿಸುವವರು.

फ़जर, स्त्री. ಪ್ರಾತಃಕಾಲ, ಮುಂಜಾನೆ.

फ़ज़ल, पु. ಕೃಪೆ, ಅನುಗ್ರಹ; ಭಯಂಕರ ವಸ್ತು, ಗೊಗ್ಗಯ್ಯ, ಗುಮ್ಮ.

फ़ज़ीलत, स्त्री. ಶ್ರೇಷ್ಠತೆ, ಉತ್ಕೃಷ್ಟತೆ; ದಕ್ಷತೆ; ಪಾಂಡಿತ್ಯ.

फ़ज़ीहत, स्त्री. ನಾಚಿಕೆ; ಅವಮಾನ; ಮಾನಗೇಡು; ಫಜೀತಿ; ಕಲಂಕ; ಜಗಳ; ಕಚ್ಚಾಟ, ದುರವಸ್ಥೆ.

फ़ज़ूल, वि. ವ್ಯರ್ಥ, ನಿರರ್ಥಕ.

फ़ज़ूलख़र्च, वि. ಅಪವ್ಯಯ ಮಾಡುವವ, ದುಂದುಗಾರ, ದಂದರಹಾಳ.

फ़ज़ूलख़र्ची, स्त्री. ವ್ಯರ್ಥ ಖರ್ಚು.

फट, स्त्री. ಒಡಕು, ಬಿರುಕು; ಪಟಪಟ ಶಬ್ದ; ಮಿನಿಕೆಹಣ್ಣು.

फटक, पु. ಪಟಿಕ. क्रिवि. ಥಟ್ಟನೆ.

फटकन, स्त्री. ಹೊಟ್ಟು, ಉಬ್ಬಲು.

फटकना, अक्रि. ಸೇರು, ತಲಪು; ದೂರವಾಗು; ಒದ್ದಾಡು; ಪ್ರಯತ್ನಪಡು. सक्रि. ಜಾಡಿಸು, ಕೊಡವು; ಜಟಕಾಯಿಸು; ಕೇರು; ತೂರು; ಅರಳೆ ಎಕ್ಕು.

फटकनी, स्त्री. ಮೊರ.

फटका, पु. ಅರಳೆ ಎಕ್ಕುವ ಬಿಲ್ಲು; ಬರಿಯ ಪ್ರಾಸದ ಕವನ; ಬಾಗಿಲು.

फटकाना, सक्रि. ಎಸೆ, ಬಿಸಾಡು.

फटकार, स्त्री. ದೊಡ್ಡ ಚಾವಟಿ; ಜಡಿಯುವಿಕೆ, ಜಾಡಿಸುವಿಕೆ; ಗದರಿಕೆ, ಜಂಕಣೆ; ನಿಂದೆ, ತಿರಸ್ಕಾರ; ತಾಪ.

फटकारना, सक्रि. ಎಸೆ, ಬಿಸಾಡು; ಬಟ್ಟೆ ಒಗೆ; ಬಡಿ, ಜಡಿ; ಜಾಡಿಸು, ಜಟಕಾಯಿಸು, ಕೊಡವು; ಗದರಿಸು,

ಮಾಡಲಿಸು; ತಳ್ಳು, ಮಾರಿಬಿಡು.

फटकी, स्त्री. ಬಲೆ; ಬೋನು; ಬೇಟೆಗಾರನ ಚೀಲ.

फटना, अक्रि. ಒಡೆ; ಬಿರಿ, ಬಿರುಕು ಬಿಡು; ಹಿಸಿ; ಸೀಳು, ಅಣಿಸು; ಬಹಳ ನೋವಾಗು; ಬೇರೆಯಾಗು.

फटफटाना, सक्रि. ಒಟಗುಟ್ಟು; ಪಟಪಟ ಶಬ್ದಮಾಡು; ಕೈಯಾಡಿಸು, ಜಾಡಿಸು. अक्रि. ಪಟಪಟ ಶಬ್ದವಾಗು.

फटा, वि. ಬಿರಿದ; ಒಡೆದ; ಹರಿದ; ಸೀಳಿದ. पु. ಒಡಕು; ಬಿರುಕು.

फटाक, क्रिवि. ತಟ್ಟನೆ, ತಟಕ್ಕನೆ.

फटाका, पु. ಸಿಡಿಮದ್ದಿನ ಶಬ್ದ.

फटाना, सक्रि. ಒಡೆಸು; ಹರಿಸು; ಬಿರುಕು ಬೀಳಿಸು.

फटाव, पु. ಹರುಕು; ಬಿರುಕು; ಒಡಕು; ಬೇರೆಯಾಗುವಿಕೆ.

फटिक, पु. ಸ್ಫಟಿಕ.

फट्टा, पु. फट्टी, स्त्री. ಬಿದಿರಿನ ಸೀಳು, ದಬ್ಬೆ.

फड़, स्त्री. ಅಂಗಡಿ, ಮಂಡಿ; ಜೂಜಾಟ; ಆಟದ ಮರಸೆ; ಜೂಜಾಡುವ ಸ್ಥಳ; ಕಕ್ಷಿ, ಪಕ್ಷ; ತುಪಾಕಿಯ ಬಂಡಿ, ಫಿರಂಗಿಗಾಡಿ; ಗಾಡಿಯ ಮೂಕಿಮರ.

फड़क, फड़कन, स्त्री. ಅದರುವಿಕೆ, ದುಡಿತ, ಸ್ಫುರಣ.

फड़कना, अक्रि. ಅದರು, ದುಡಿ; ಬಡಿದುಕೊಳ್ಳು; ಚಟಗುಟ್ಟು, ಹಾರು; ಹಾತೊರೆ.

फड़काना, सक्रि. फड़कना का प्रे. रूप.

फड़काव, पु. ಆಡಂಬರ, ರೀವಿ.

फड़की, स्त्री. ತಡಿಕೆ, ನೆರಕೆ.

फड़फड़ाना, सक्रि. = फटफटाना.

फड़फड़ाहट, स्त्री. ರೆಕ್ಕೆ ಬಡಿದುಕೊಳ್ಳುವಿಕೆ, ಹಾರಾಟ.

फड़फड़िया, वि. ಹಾರುವ, ತೀವ್ರ; ಚುರುಕಾದ; ಜಂಭ ಕೊಚ್ಚುವವ.

फड़ाना, सक्रि. "फाड़ना" का प्रे. रूप.

फड़ाफड़ी, स्त्री. ಜಗಳ, ಕಚ್ಚಾಟ.

फड़बाज़, फड़ित, पु. ಜೂಜುಖೋರ, ಜೂದಾಳಿ; ಒಟಗುಟ್ಟುವವ, ಹರಟೆಮಲ್ಲ.

फड़िया, पु ಜೂಜುಮನೆಯ ಒಡೆಯ, ಜೂಜಿನ ಕಟ್ಟೆಯವ; ಚಿಲ್ಲರೆ ಸಾಮಾನುಗಳನ್ನು ಕೊಂಡು ಮಾರುವವ. स्त्री. ಲಂಗ, ಪಾವಡೆ; ಕೊಯಿಲ್ಲಿನ ಗುತ್ತಿಗೆದಾರ.

फड़ी, स्त्री. ಚಪ್ಪಡಿಕಲ್ಲು, ಹಾಸುಗಲ್ಲು; ಕಲ್ಲುಬಂಡೆ.

फड़ुआ, पु. ಗುದ್ದಲಿ, ಎಲೆಕೋಟು.

फड्डा, पु. ಶುಂಠಿಯ ಕೊನೆ; ಶಾಖೆ; ಜೋಳದ ಕಾಂಡ.

फ़तवा, पु. ಕುರಾನಿನ ಪ್ರಕಾರ ನ್ಯಾಯ ವಿಧಾನ, ಧರ್ಮ ವಿಧಾಯಕ.

फ़तह, स्त्री. ಜಯ, ಗೆಲುವು; ಸಿದ್ಧಿ.

फ़तहख़ान, पु. ವೀರ, ಕಡುಗಲಿ.

फ़तहगढ़, पु. ಜಯಸ್ತಂಭ.

फ़तहनामा, पु. ವಿಜಯವಾರ್ತೆಯ ಪತ್ರ; ಜಯ ಪತ್ರ.

फ़तहपेच, पु. ಪೇಟಾಸುತ್ತುವ ಒಂದು

ಬಗೆ; ಮುಕ್ಕಾವಿನ ಉದ್ದವಾದ ನಳಿಗೆ.

फ़तहमंद, फ़तहयाब, वि. ವಿಜಯಿಯಾ, ಜಯಶಾಲಿ.

फतिंगा, पु. **फतिंगी**, स्त्री. ಹಾರುವ ಹುಳು, ದೀಪದ ಹುಳು, ಪತಂಗ.

फ़तीलसोज़, पु. ದೀಪದ ಕಂಬ, ಸಮೆ.

फ़तीला, पु. ದೀಪದ ಬತ್ತಿ; ಸರಬತ್ತಿ, ಜಾವಿಗೆ ಹುರಿ; ಸುತ್ತು, ತಿರಿ.

फ़तूर, पु. ವಿಕಾರ, ದೋಷ; ಹಾನಿ; ಉಪದ್ರವ, ಉಪಟಳ; ರಗಳೆ.

फ़तूरिया, पु. ಉಪದ್ರವ ಮಾಡುವವ

फ़तूही, स्त्री. ತೋಳಿಲ್ಲದ ಅಂಗಿ, ಬಗಲಂಗಿ; ಲೂಟಿ ಮಾಡಿದ ಹಣ, ಸೂರೆ

फ़तेह, स्त्री. ವಿಜಯ, ಜಯ.

फदकना, अक्रि. ಕುಣಿ; ಉಕ್ಕು, ಕುದಿ.

फदफदाना अक्रि. ಉಕ್ಕಿಬರು, ಉಬ್ಬು

फन, पु. ಸರ್ಪದ ಹೆಡೆ, ಫಣ.

फ़न, पु. ಗುಣ, ಸ್ವಭಾವ; ವಿದ್ಯೆ, ಕಲೆ; ಶಾಸ್ತ್ರ; ಕೈಕೆಲಸ, ಕೈಮಾಟ; ಠಕ್ಕು, ಜಾಲ.

फनकना, अक्रि. ಗಾಳಿಗೆ ಅಲ್ಲಾಡು.

फनकार, स्त्री. ಬುಸುಗುಟ್ಟುವಿಕೆ.

फनगा, पु. ದೀಪದ ಹುಳು, ಪತಂಗ.

फनफनाना, अक्रि. ಬುಸುಗುಟ್ಟು, ಬುಸ್ಸೆನ್ನು

फनस, ಹಲಸಿನ ಹಣ್ಣು.

फ़ना, पु. ಭಂಗ; ನಾಶ; ವಿನಾಶ; ಹಾಳು; ಸಾವು.

फनी, स्त्री. ಪಾಶ; ಜಾಲ, ಬಲೆ.

फन्नी, स्त्री. ಕವಚ; ಬೆಣೆ, ಆಪು.

फफकना, अक्रि. ಅಂಕುರಿಸು; ಚಿಗುರು.

फफका, पु. ಕುರು, ಗುಳ್ಳೆ.

फफदना, अक्रि. ಕೀವುಗಟ್ಟು; ಕೊಳೆ, ಹಳಿ; ಉಕ್ಕು.

फप्पस, फफसा, वि. ಊದಿದ, ಉಬ್ಬಿದ; ಬೀಗಿದ. पु. ಮಣ್ಣಿನ ಪುಟ.

फफूँदना, अक्रि. ಬೂಜುಹಿಡಿ; ಮುಗ್ಗು.

फफूँदी, स्त्री. ಬೂಜು; ಮುಗ್ಗಲು; ಸೀರೆಯ ನಿರಿಗೆ, ನೀವಿ.

फफोला, पु. ಹೊಪ್ಪಳೆ, ಹುಗುಳು, ಬೊಬ್ಬೆ; ಗುಳ್ಳೆ, ಬುದ್ಬುದ.

फब, स्त्री. ಅಲಂಕರಣ, ಭೂಷಣ

फबकना, अक्रि. ಚಿಗುರು, ಕಳಕಳಿಸು.

फबता, वि. ಒಪ್ಪುವ; ಹಾಳತ; ತಕ್ಕ.

फबती, स्त्री. ಒಪ್ಪ, ಹಾಳತ; ಅಭರಣ; ಅಲಂಕಾರ; ಪರಿಹಾಸ; ಗೇಲಿ, ಕೊರಚಾಟ.

फबन, स्त्री. ಭೂಷಣ, ಒಪ್ಪ; ಅಲಂಕಾರ, ಸಿಂಗಾರ; ಉಡಿಗೆ, ಉಡುಪು; ಸೊಗಸು, ಅಂದ; ರಮಣೀಯತೆ.

फबना, अक्रि. ಹಾಳತವಾಗು; ಚಲೋವಾಗಿರು, ತರಗೊಳ್ಳು, ಒಪ್ಪು; ಶೋಭಿಸು, ಸೊಗಯಿಸು.

फबाना, सक्रि. ಒಪ್ಪವಾಗಿಸು, ಅಲಂಕರಿಸು.

फबीला, वि. ಒಪ್ಪುವ, ಶೋಭಿಸುವ, ಸೊಗಸಿನ.

फ़य्याज़, वि. ದಾನಶೀಲ, ಉದಾರ.

फ़य्याज़ी, स्त्री. ದಾನಶೀಲತೆ, ಔದಾರ್ಯ; ಧಾರಾಳ.

फरक, स्त्री. ಉಬ್ಬುವಿಕೆ, ಉಕ್ಕುವಿಕೆ. पु. ಡಾಲು, ಗುರಾಣಿ.

फ़रक़, पु. = फ़र्क़.

फरकन, स्त्री. ಅದುರುವಿಕೆ, ದುಡಿತ, ಹಾರುವಿಕೆ.

फरकना, अक्रि. ಅದುರು, ದುಡಿ; ಹಾರು; ಉಕ್ಕು, ಹೊಮ್ಮು.

फरका, पु. ಒಪ್ಪಾರು, ಚಾಟು ಚಪ್ಪರ; ತಡಿಕೆ.

फरकाना, सक्रि. ಹಾರಿಸು; ಅಲ್ಲಾಡಿಸು; ದೂರಮಾಡು; ಬಿಸಾಡು.

फरचा, वि. ಶುದ್ಧ, ನಿರ್ಮಲ; ಪರಿಷ್ಕಾರವಾದ. पु. ಮೋಡಗಳು ಚದುರಿ ಹೋಗುವಿಕೆ, ಆಕಾಶವು ನಿರ್ಮಲವಾಗುವಿಕೆ; ಹವಾಗುಣದ ಒಳ್ಳೆಯ ಸ್ಥಿತಿ; ತೀರ್ಮಾನ; ತೀರ್ಪು; ಬಿಡುಗಡೆ

फरचाई, स्त्री. ಶುದ್ಧತೆ, ನಿರ್ಮಲತೆ; ಹೊಳಪು; ಪ್ರಾಮಾಣಿಕತೆ, ಆರ್ಜವ

फरचाना, सक्रि. ಶುದ್ಧಮಾಡು, ಪರಿಷ್ಕರಿಸು; ಒರೆಸು; ತಿಕ್ಕು; ತೀರಿಸು; ತೀರ್ಪು ಹೇಳು.

फ़रज़ंद, पु. ಪುತ್ರ, ಮಗ.

फ़रज़ंदी, स्त्री. ತಂದೆತಾಯಿಯರೊಡನೆ ಮಗನಿಗಿರುವ ಸಂಬಂಧ

फ़रज़ीं, पु. ಮಂತ್ರಿ; ಚದುರಂಗದಲ್ಲಿ ರಾಣಿ, ಪರ್ಜಿ.

फ़रज़ींबंद, पु ಚದುರಂಗದಲ್ಲಿ ರಾಣಿಯಿಂದ ದೊರೆಯನ್ನು ಕಟ್ಟುವಿಕೆ.

फ़रद, स्त्री. = फ़र्द.

फरफंद, पु. ಠಕ್ಕು, ಜಾಲ; ತಂತ್ರ.

फरफंदी, वि. ಠಕ್ಕ; ತಂತ್ರಗಾರ; ಮೋಸಗಾರ.

फरफर, क्रिवि. ಸರಸರನೆ.

फरफराना, अक्रि. ನಡುಗು, ಅದುರು.

फरबही, स्त्री. ದಪ್ಪ, ಗಾತ್ರ.

फरबा, वि. ಬಲಿತ, ಕೊಬ್ಬಿದ.

फ़रमाँबरदार, पु. ಆಜ್ಞಾಧಾರಕ, ಆಜ್ಞಾಪಾಲಕ, ಆಜ್ಞಾನುವರ್ತಿ.

फ़रमाँबरदारी, स्त्री. ಆಜ್ಞೆಗೆ ಒಳಪಟ್ಟು ವರ್ತಿಸುವಿಕೆ, ಆಜ್ಞಾಪಾಲನೆ; ವಿಧೇಯತೆ.

फ़रमा, पु. ಚೌಕಟ್ಟು, ಸಾಚ, ಕರವಾಯಿ; ಪಡಿಯಚ್ಚು; ಅಚ್ಚಿನ ಫಾರಂ.

फ़रमाइश, स्त्री. ಅಪ್ಪಣೆ, ಅಣತಿ; ಸಾಮಾನು ಮಾಡಲು ಅಥವಾ ಕಳುಹಿಸಲು ಕೊಡುವ ಆಜ್ಞೆ, "ಆರ್ಡರು"; ಬೇಡಿಕೆ.

फ़रमाइशी, वि. ಆಜ್ಞೆ ಅಥವಾ ಆರ್ಡರು ಕೊಟ್ಟು ತಯಾರಿಸಿದ (ಸಾಮಾನು); ಫರಮಾಯಿಷಿ, ಉತ್ಕೃಷ್ಟವಾದ. फ़रमाइशी लगाना = ಜೋಡಿನಿಂದ ಚೆನ್ನಾಗಿ ಹೊಡೆ.

फ़रमान, पु. ಅಪ್ಪಣೆ; ರಾಜಾಜ್ಞೆ, ಅಣತಿ; ನಿರೂಪ, ಶ್ರೀಮುಖ; ಆದೇಶ.

फ़रमाना, सक्रि. ಆಜ್ಞಾಪಿಸು, ಆಜ್ಞೆ ಹೊರಡಿಸು; ಅಪ್ಪಣೆಕೊಡಿಸು, ಹೇಳು.

फ़रवरी, स्त्री. ಫೆಬ್ರುವರಿ ತಿಂಗಳು.

फरवा, स्त्री. ಅರಳು, ಪುರಿ, ಮಂಡಕ್ಕಿ.

फरसा, पु ಪರಶು, ಕೊಡಲಿ.

फ़रहंग, स्त्री. ವಿವೇಕ, ಜ್ಞಾನ; ಶಬ್ದ

ಕೋಶ, ನಿಘಂಟು; ಟೀಕೆ, ಟಿಪ್ಪಣಿ.
फ़रहत, स्त्री. ವಿನೋದ; ತಮಾಷೆ; ಮನೋರಂಜನೆ.
फ़रहत-बख़्श, वि. ಆನಂದದಾಯಕ, ಮನೋರಂಜಕ.
फरहद, पु. ಹಾಲವಾಣದ ಮರ.
फरहरना, अक्रि. ಅದುರು, ನಡುಗು; ಹಾರಾಡು.
फरहरा, पु. फरहरी, स्त्री. ಬಾವುಟ, ಪತಾಕೆ. वि. ಅರ್ಧ ಒಣಗಿದ; ಒಣಕಲು
फ़रहद, पु. ಬೆಟ್ಟ ತೋಡುವವ, ಸುರಂಗಕಾರ.
फ़राक, पु. ಬಯಲು, ಮೈದಾನ.
फ़राकत, वि. ವಿಸ್ತಾರವಾದ, ಬಯಲಾದ
फ़राख़, वि. ವಿಸ್ತೃತವಾದ, ವಿಶಾಲ; ಯಥೇಷ್ಟವಾದ, ಹೇರಳ.
फ़राख़ी, स्त्री. ವಿಸ್ತಾರ, ವೈಶಾಲ್ಯ; ಹೇರಳ, ಸಮೃದ್ಧಿ.
फ़राग़, पु. ವಿರಾಮ, ಪುರಸತ್ತು.
फ़राग़त, स्त्री. ಬಿಡುಗಡೆ, ವಿಮೋಚನ; ಅವಕಾಶ; ವಿರಾಮ, ಪುರಸತ್ತು; ಸುಖ, ಸೌಖ್ಯ; ನೆಮ್ಮದಿ; ಮಲಬಾಧೆಯನ್ನು ತೀರಿಸಿಕೊಳ್ಳುವಿಕೆ.
फ़राज़, वि. ಉಚ್ಚ; ಉನ್ನತವಾದ. स्त्री. ಔನ್ನತ್ಯ, ಎತ್ತರ.
फ़रामोश, वि. ವಿಸ್ಮೃತ, ಮರೆತ. स्त्री. ಮರೆಯುವಿಕೆ, ಮರೆವು; ಮಕ್ಕಳ ಒಂದು ಆಟ.
फ़रामोशी, स्त्री. ಮರೆವು, ವಿಸ್ಮೃತ.
फ़रार, पु. ಓಡಿಹೋಗುವಿಕೆ, ಪಲಾಯನ. वि. ಓಡಿಹೋದ, ಪಲಾಯಿತ; ಪರಾರಿ.
फ़रारी, वि. ಪರಾರಿ; ಪಲಾಯಿತ.
फ़रासीस, पु. ಫ್ರಾನ್ಸ್‌ದೇಶ; ಫ್ರಾನ್ಸ್ ದೇಶವಾಸಿ; ಕೆಂಪು ಬಣ್ಣದ ಚೀಟಿಬಟ್ಟೆ.
फ़राहम, वि. ಶೇಖರಿಸಿದ, ಸಂಗ್ರಹಿಸಿದ; ಕೂಡಿಟ್ಟ; ಗಳಿಸಿಟ್ಟ; ಒಟ್ಟಾದ.
फ़राहमी, स्त्री. ಸಂಗ್ರಹ, ಶೇಖರಣೆ.
फरिया, स्त्री. ಒಂದು ಬಗೆ ಲಂಗ.
फ़रिश्ता, पु. ದೇವದೂತ; ದೇವತೆ.
फरी, स्त्री. ಗುರಾಣಿ, ಡಾಲು.
फ़रीक़, पु. ಕ್ರಮ; ಪಾಲು; ವಿಭಾಗ; ವ್ಯತ್ಯಾಸ ತಿಳಿಯುವವ, ವಿರೋಧ ಮಾಡುವವ; ವಿರೋಧಿ, ಎದುರಾಳಿ; ಪ್ರತಿಪಕ್ಷದವ, ಕಕ್ಷಿ; ಪಂಗಡ. फ़रीक़ सानी = ಪ್ರತಿವಾದಿ. फ़रीक़ैन = ಉಭಯ ಪಕ್ಷದವರು, ವಾದಿಪ್ರತಿವಾದಿಗಳು.
फ़रीद, वि. ಅನುಪಮ, ಅಸದಳ.
फरुवक, पु. ವೀಳ್ಯದೆಲೆ ಪೆಟ್ಟಿಗೆ.
फरुवा, पु. ಮರದ ಪಾತ್ರೆ, ಮರಿಗೆ.
फरुहा, पु. फरुही, स्त्री. ಕೈಕೊಡಲಿ; ಗುದ್ದಲಿ, ಮಮಟಿ; ಕಡೆಗೋಲು.
फरेंदा, पु. फरेंदी, स्त्री. ಒಂದು ಬಗೆ ನೇರಳೆ ಹಣ್ಣು.
फरेफ़्तगी, स्त्री. ಮರುಳಾಗುವಿಕೆ, ಮುಗ್ಧತೆ; ಮೋಹ, ಮೋಹನ.
फ़रेफ़्ता, वि. ಮರುಳಾದ, ಮೋಹಿತ.
फ़रेब, पु. ಚಿತ್ತಾಕರ್ಷಣೆ; ಮೋಹಗೊಳಿಸುವಿಕೆ; ಮೋಸ, ಠಕ್ಕು; ತಂತ್ರ.
फ़रेबदिह, वि. ಮೋಸಗಾರ.

फ़रेबदिही, स्त्री. ಮೋಸ; ಅಪಹರಣ.

फ़रेबन्, क्रिवि. ಮೋಸದಿಂದ, ವಂಚಿಸಿ

फ़रेबिया, पु. ಮೋಸಗಾರ, ವಂಚಕ.

फ़रेबी, वि. ಮೋಸದ, ಠಕ್ಕಿನ. पु. ಮೋಸಗಾರ; ಠಕ್ಕ, ಕಪಟಿ.

फरेरा, पु. ಧ್ವಜ, ಬಾವುಟ, ಝುಂಡ

फरेरी, स्त्री. ಕಾಡು ಹಣ್ಣುಗಳು.

फ़रो, क्रिवि. ಕೆಳಗೆ, ಕೆಳಕ್ಕೆ. वि. ಕೆಳಗಾದ; ತಗ್ಗಿದ; ತಣಿದ.

फ़रोकश, वि. ಇಳಿದ, ತಂಗಿರುವ; ಬಿಡಾರ ಬಿಡುವ.

फ़रोख़्त, स्त्री. ಮಾರಾಟ; ವಿಕ್ರಯ, ಬಿಕರಿ

फ़रोग़, पु. ಪ್ರಕಾಶ, ಕಾಂತಿ, ಜ್ಯೋತಿ.

फ़रोतन, वि. ಕೀಳುತರದ, ದ್ರಾಬೆ; ಬಡ, ದರಿದ್ರ; ವಿನೀತ, ನಮ್ರ.

फ़रोतनी, स्त्री. ನಮ್ರತೆ, ವಿನಯ.

फ़रोद, पु. ಇಳಿಯುವಿಕೆ, ತಂಗುವಿಕೆ; ಜಮಾವಣೆ.

फ़रोमाया, वि. ನಗಣ್ಯ; ತುಚ್ಛ, ನಿಕೃಷ್ಟ

फ़रोश, पु. ಮಾರುವಿಕೆ, ಮಾರಾಟ. वि. ಮಾರುವವ, ವರ್ತಕ.

फ़रोशिंदा, पु. ಮಾರುವವ, ವರ್ತಕ.

फ़रोशी, स्त्री. ಮಾರುವಿಕೆ, ಮಾರಾಟ.

फ़र्क़ पु. ಬೇರೆಯಾಗುವಿಕೆ; ವ್ಯತ್ಯಾಸ, ಭೇದ; ಅಂತರ, ದೂರ; ಬೇರೆ; ಕೊರತೆ, ಕಡಮೆ; ದೋಷ, ದುರ್ಗುಣ.

फ़र्ज़, पु. ಭಗವದಾಜ್ಞೆ; ಕರ್ತವ್ಯ, ಧರ್ಮ; ಭಾವನೆ, ಕಲ್ಪನೆ. फ़र्ज़ करो कि=ಎಂದು ಭಾವಿಸಿಕೊ, ಅಂದುಕೊ.

फ़र्ज़न्, क्रिवि. ಭಾವನೆಯಾಗಿ, ಮಸಲಾ.

फ़र्ज़ानगी, स्त्री. ವಿವೇಕ, ಜ್ಞಾನ.

फ़र्ज़ाना, पु. ಜ್ಞಾನಿ, ವಿವೇಕಿ; ಪಂಡಿತ.

फ़र्ज़ी, वि. ಅಗತ್ಯವಾದ, ಕಡ್ಡಾಯವಾದ; ಕಲ್ಪನೆಯ, ಕಾಲ್ಪನಿಕವಾದ, ಮಸಲಾ; ಊಹೆಯ; ಹೆಸರಿಗೆ ಮಾತ್ರ ಇರುವ, "ನಾಮ್‌ಕಾವಾಸ್ತೆ".

फ़र्द, स्त्री. ಲೆಕ್ಕ; ಲೆಕ್ಕದಪುಸ್ತಕ, ಖಾತೆ; ಪಟ್ಟಿ, ತಪಶೀಲು, ಜಾಬಿತ; ಯಾದಿ; ಕಾಗದದ ಹಾಳೆ; ಸುಪ್ಪತ್ತಿಗೆ ಮೊದಲಾದುವುಗಳ ಮೇಲ್ಮಡಿಕೆ; ಒಂದು, ಒಂಟಿಶ್ಲೋಕ; ಒಬ್ಬನು. वि. ಒಂಟಿ. फ़र्द फ़र्द, फ़र्दन् फ़र्दन्=ಒಂದೊಂದಾಗಿ, ಬೇರೆಬೇರೆಯಾಗಿ.

फ़र्दा, क्रिवि. ನಾಳೆ.

फ़र्याद, स्त्री. ದೂರು, ಮೊರೆ, ಪುಕಾರು; ಫಿರ್ಯಾದು; ದಾವಾ; ಮೊರೆಯಿಡುವಿಕೆ.

फ़र्यादी, पु. ದೂರು ಕೊಡುವವ, ಫಿರ್ಯಾದಿದಾರ, ವಾದಿ.

फर्र, पु. ಆಡಂಬರ, ಭರಭರಾಟ.

फ़र्राटा, पु. ಓಟ; ಹಾಯುವಿಕೆ; ಧಾವಂತ; ವೇಗವಾಗಿ ಓಡುವಿಕೆ; ಗಾಳಿಯಲ್ಲಿ ಹಾರಾಡುವಿಕೆ.

फर्राटा, पु. ಬೊಂಬು; ಬಾವುಟ ಹಾರುವ ಶಬ್ದ; ವೇಗ.

फर्राना, अक्रि. ಹಾರು, ಹಾರಾಡು.

फर्रार, वि. ಓಡುವವ, ಓಡುಕುಳಿ.

फ़र्राश, पु. ಜಮಖಾನೆ ಹಾಸುವವ; ಗುಡಿಸುವ ಸೇವಕ; ದೇವದಾರು ಮರ.

फ़र्राशी, स्त्री. ಜಮಖಾನೆ ಹಾಸುವ ಕೆಲಸ ಅಥವಾ ಉದ್ಯೋಗ. वि. ಈ

ಕೆಲಸಕ್ಕೆ ಸಂಬಂಧಿಸಿದ.

फ़र्रुख़, वि. ಪ್ರಸನ್ನ; ಸಂತೋಷಿಸುವ; ಭಾಗ್ಯವಂತ.

फ़र्श, पु. ನೆಲ, ನೆಲಗಟ್ಟು, ನೆಲಗಚ್ಚು; ಹಾಸುವ ಬಟ್ಟೆ, ಜಾಜೀಮು; ತಿವಾಸಿ, ಜಮಖಾನೆ. मीर फ़र्श = ರತ್ನಗಂಬಳಿಗಳ ಮೇಲೆ ಅಂಚಿನಲ್ಲಿಡುವ ಭಾರದ ಗುಂಡುಗಳು.

फ़र्शख़ाना, पु. ಜಮಖಾನೆಗಳಿಡುವ ಮನೆ.

फ़र्शबंदी, स्त्री. ನೆಲಗಟ್ಟು, ಹರಸ್ಪಂದಿ.

फ़र्शी, वि. ನೆಲಕ್ಕೆ ಸಂಬಂಧಿಸಿದ; ಜಮಖಾನೆಯ; ಬುಡ ಚಪ್ಪಟೆಯಾದ. स्त्री. ಒಂದು ಬಗೆ ಚಿಕ್ಕ ಹುಕ್ಕಾ.

फ़र्सूदा, वि. ಉಟ್ಟು ಹಳೆಯದಾದ; ಜರ್ಜರಿತ.

फर्हत, स्त्री. ಸಂತೋಷ, ಆನಂದ; ವಿನೋದ.

फलंग, स्त्री. = फलांग.

फल, पु. ಕಾಯಿ, ಹಣ್ಣು, ಫಲ; ಬೆಳೆ, ಫಸಲು; ಫಲಿತಾಂಶ; ಲಾಭ; ಕತ್ತಿಯ ಅಲಗು, ಧಾರೆ.

फलक, पु. ಹಲಗೆ, ಮಣೆ; ತಗಡು; ಪದರ; ಮೇಲ್ಮೈ; ತಳ, ಅಡಿ; ಕಡಿ; ತಲೆ, ಗುರಾಣಿ, ಡಾಲು; ಓಲೆ, ಪತ್ರ.

फ़लक, पु. ಆಕಾಶ; ಸ್ವರ್ಗ.

फलकना, अक्रि. ಉಕ್ಕು, ಉಬ್ಬು; ತುಂಬಿ ತುಳುಕು.

फलका, पु. ಗುಳ್ಳೆ, ಹೊಪ್ಪಳೆ.

फलकी, पु. ಗುರಾಣಿಯವ.

फ़लकी, वि. ಆಕಾಶದ; ಸ್ವರ್ಗದ.

फलठा, पु. ಮೊಳಕೆ; ಚಿಗುರು.

फलत, स्त्री. ಫಲದಾಯಕತ್ವ.

फलद, वि. ಫಲ ಕೊಡುವ, ಫಲದಾಯಕ; ಫಲಕಾರಿ.

फलदार, वि. ಫಲವುಳ್ಳ; ಲಾಭಕರ.

फलन, पु. ಹುಟ್ಟುವಳಿ, ಉತ್ಪತ್ತಿ.

फलना, अक्रि. ಫಲಿಸು; ಕಾಯಿಬಿಡು, ಹಣ್ಣುಬಿಡು; ಕಾರ್ಯಸಿದ್ಧಿಯಾಗು; ಮೈಯೆಲ್ಲ ಚಿಕ್ಕ ಕುರುಗಳು ಏಳು, ಬೆಳೆ; ಮಾಗು. फलना फूलना = ಸುಖಸಂಪನ್ನನಾಗಿ ಬಾಳು.

फलया, पु. ಮೊಗ್ಗು; ಹೂ, ಪುಷ್ಪ.

फ़लसफ़ा, पु. ದರ್ಶನಶಾಸ್ತ್ರ.

फलसा, पु. ಬಾಗಿಲು, ಕದ.

फलहरी, स्त्री. ಹಣ್ಣುಹಂಪಲು.

फलहार, फलयार, पु. ಫಲಹಾರ.

फ़लाँ, वि. ಇಂಥಿಂಥ, ಫಲಾನ.

फलांग, स्त्री. ನಾಗಾಲೋಟ, ಜಿಗಿತ.

फलांगना, अक्रि. ನೆಗೆ, ಕುಣಿ, ಜಿಗಿ.

फला, वि. ಫಲಕಾರಿ; ಫಲ ಕೊಡುವ. पु. ಬಾಣದ ಅಗ್ರ, ಮೊನೆ.

फलाई, स्त्री. ಒಂದು ಬಗೆ ಮೀನು.

फ़लाकत, स्त्री. ಕೇಡು, ಅನಿಷ್ಟ; ಅವಮಾನ; ದುರದೃಷ್ಟ; ದುಸ್ಥಿತಿ.

फ़लाख़न, फ़लाख़्न, स्त्री. ಕವಣೆ.

फलाध्यक्ष, पु. ಹಾಲೆ ಮರ.

फलाना, सक्रि. ಫಲ ಕೊಡಿಸು; ಮಾಗಿಸು; ಫಲಕಾರಿಯಾಗಿ ಮಾಡು.

फ़लाना, वि. ಇಂಥಾಥ, ಫಲಾನ.

फ़लालैन, पु. ಒಂದು ಬಗೆ ಉಣ್ಣೆ ಬಟ್ಟೆ, "ಫ್ಲಾನಲ್".

फलाहार, पु. ಹಣ್ಣುಗಳ ಭೋಜನ, ಫಲಾಹಾರ.

फलित, पु. ಲಾಭಕರ; ಫಲವುಳ್ಳ.

फलिया, स्त्री. "फली" का लघु रूप.

फलियाना, अक्रि. ಕಾಯಿಬಿಡು, ಫಲಿಸು

फली, स्त्री. ಬೀಜಕೋಶ, ಶಿಂಬೆ, ಕಾಯಿ; ಅವರೆ ಮೊದಲಾದುವುಗಳ ಕಾಯಿ, ಶವಿ; ಕೋಡು, ಗೊಣಸು, ಕಣಿಕೆ; ಗುರಾಣಿ, ಡಾಲು, ಖೇಡೆಯ

फलीकश, पु. ಕೊಕ್ಕೆ, ದೋಟಿ.

फ़लीत, पु. =पलीता.

फलूआ, पु. ನೂಲು ಗಂಟು ಹಾಕಿ ಕಟ್ಟಿದ ಕರೆ, ಅಂಚು.

फ़व्वारा, पु. ಬುಗ್ಗೆ, ಊಟೆ, ಕಾರಂಜಿ; ಧಾರಾಯಂತ್ರ

फसकड़ा, पु. ಕಾಲುಗಳನ್ನು ಚಾಚಿ ಕೊಂಡು ಕೂಡುವಿಕೆ.

फसकना, अक्रि. ಇಳಿ, ಮುಳುಗು, ಕುಸಿ; ಸಡಿಲು; ಬಿರಿ, ಸೀಳು.

फसकाना, सक्रि. ಕುಸಿಯಿಸು; ಸೀಳು, ಹರಿ; ಸಡಿಲಿಸು.

फसकी, स्त्री. ಮೂಟೆಗೊಂದು ಹಿಡಿ ಧಾನ್ಯದಂತೆ ತೆರುವ ಸಂತೆಯ ಸುಂಕ.

फसड्डी, वि. ಹಿಂದುಬಿದ್ದ, ಹಿಂದುಳಿದ

फसना, अक्रि. =फंसना.

फसफसा, वि. ಸಡಿಲವಾದ. ಢೀಲಾದ

फ़सल, स्त्री. ಋತು, ತಕ್ಕ ಸಮಯ, ಅಮುಗ; ಬೆಳೆ, ಬೆಳಸು, ಪೈರು, ಫಸಲು; ಕೊಯ್ಯುವ ಕಾಲ, ಸುಗ್ಗಿ; ಪುಸ್ತಕದ ಒಂದು ಭಾಗ.

फ़सली, वि. ಋತು ಅಥವಾ ಬೆಳೆಗೆ ಸಂಬಂಧಿಸಿದ पु. ಅರಂಬಕ್ಕೆ ಸಂಬಂಧ ಪಟ್ಟ ವರ್ಷ, ಫಸಲಿ.

फ़साद, पु. ಜಗಳ, ಕಲಹ; ಫಿತೂರಿ, ಒಳಸಂಚು; ದಂಗೆ; ಧಾಂದಲೆ.

फ़सादी, वि. ಫಿತೂರಿ ನಡೆಸುವವ; ದಂಗೆಖೋರ; ಜಗಳಗಂಟ.

फ़साना, पु. =अफ़साना.

फसाना, फसारना, सक्रि. =फंसाना.

फसाव, फसावा, पु. ಸಿಕ್ಕಿಕೊಳ್ಳುವಿಕೆ; ಗೊಂದಲ.

फ़साहत, स्त्री. ಒಳ್ಳೆಯ ನುಡಿ, ವಾಕ್ಚಾತುರ್ಯ; ಭಾಷಣ ಕಲೆ, ಉಪನ್ಯಾಸ ಕಲೆ

फ़सील, स्त्री. ಗೋಡೆ, ಪ್ರಾಕಾರ.

फ़सीह, वि. ಚೆನ್ನಾಗಿ ಮಾತನಾಡುವವ, ಸುವಕ್ತಾ, ವಾಗ್ಮಿ; ಸಭ್ಯ, ಶಿಷ್ಟ.

फ़सूँ, पु. ಮಂತ್ರತಂತ್ರ, ಮಾಟ.

फ़स्द, स्त्री. ರಕ್ತನಾಳದ ಒಡಕು; ನರವನ್ನು ಸೀಳಿ ರಕ್ತ ತೆಗೆಯುವಿಕೆ.

फ़स्ल, स्त्री. =फ़सल.

फ़स्साद, पु. ನರಗಳನ್ನು ಸೀಳಿ ರಕ್ತ ತೆಗೆಯುವವ; ಶಸ್ತ್ರ ಚಿಕಿತ್ಸಕ.

फ़स्सादी, स्त्री. ನರವನ್ನು ಸೀಳಿ ರಕ್ತ ತೆಗೆಯುವ ಶಸ್ತ್ರಕ್ರಿಯೆ.

फ़हम, स्त्री. ಬುದ್ಧಿ; ತಿಳಿವಳಿಕೆ; ಜ್ಞಾನ.

फ़हमाइश, स्त्री. ತಿಳಿವಳಿಕೆ; ಎಚ್ಚರಿಕೆ; ಆದೇಶ; ಅಪ್ಪಣೆ; ತಾಕೀತು.

फ़हमीद, स्त्री. ತಿಳಿವಳಿಕೆ, ಗ್ರಹಣಶಕ್ತಿ

फ़हमीदा, वि. ತಿಳಿವಳಿಕಸ್ಥ; ತಿಳಿದವ.

फहरना, अक्रि. ಹಾರಾಡು; ಮಿಳಿರ್ದಾಡು.

फहराना, अक्रि. ಹಾರು; ತೂಗಾಡು; ರೆಕ್ಕೆ ಬಡಿ; ಮಿಳಿರ್ದಾಡು. सक्रि. ಹಾರಿಸು (ಬಾವುಟ).

फ़हवा, पु. ರೀತಿ, ಶೈಲಿ; ಅರ್ಥ, ತಾತ್ಪರ್ಯ.

फ़हश, वि. ಅಶ್ಲೀಲ, ಅಶಿಷ್ಟ.

फ़हीम, फ़हीमा, वि. ತಿಳಿವಳಿಕಸ್ಥ, ಜ್ಞಾನಿ.

फांक, फांकी, स्त्री. ಹೋಳು, ತುಂಡು; ತೊಳೆ; ಬಾಯಿತುಂಬ ಪುರಿ; ಚೂರ್ಣ; ಪುಡಿ.

फांकड़, फांकड़ा, वि. ಚಾಲಾಕಿನವ; ಚುರುಕಿನವ; ಉತ್ಸಾಹಿ; ಠೀವಿಯುಳ್ಳ; ಷೋಕಿಲಾಲ.

फांकना, सक्रि. ಮುಕ್ಕು, ನುಂಗು; ಕತ್ತರಿ, ಸೀಳು.

फांग, फांगी, स्त्री. ಒಂದು ಸೊಪ್ಪು.

फांडा, पु. ಧೋತ್ರ, ಲುಂಗಿ.

फांद, स्त्री. ಹಾರುವಿಕೆ, ಜಿಗಿತ. पु. ಸರಗುಣಿಕೆ; ಬಲೆ; ತೊಡಕು; ಸಿಕ್ಕು.

फांदना, अक्रि. ಹಾರು, ಜಿಗಿ. सक्रि. ದಾಟು; ಬಲೆಯಲ್ಲಿ ಹಿಡಿ, ಸಿಕ್ಕಿಸು.

फांदी, स्त्री. ಕಟ್ಟು, ಹೊರೆ.

फांफर, पु ಹರಕುಬಟ್ಟೆ; ಚಿಂದಿ; ತೂತು.

फांफी, स्त्री. ತೆಳುವಾದ ಪೊರೆ; ಹೊರಿಕೆ; ಕಣ್ಣಿನ ಪರೆ.

फांस, स्त्री. ಪಾಶ, ಕಟ್ಟು; ತೊಡಕು, ಬಲೆ, ಕಲ್ಲಿ; ಸಣ್ಣ ಸೀಳು, ಸಿಗುರು.

फांसना, सक्रि. ಸಿಕ್ಕಿಸು; ಬಲೆಯಲ್ಲಿ ಹಿಡಿ; ಕಟ್ಟು.

फांसा, पु. ಸರಗುಣಿಕೆ; ತೊಡಕು.

फांसी, स्त्री. ಸರಗುಣಿಕೆ, ಉರುಲು, ನೇಣು; ಫಾಸಿ ಸಜಾ, ಬಂಕೋಲೆ ಸಜಾ; ಪಾಶಿ, ಶೂಲ.

फ़ाइल, पु. ಮಾಡುವವ, ಕರ್ತ; ಕಾರಕ; ಕರ್ತೃವಾಚಕ ಶಬ್ದ.

फ़ाक़ा, पु. ಉಪವಾಸ, ಲಂಘನ; ದರ್ದು.

फ़ाक़ाकश, वि. ಬಡತನದಿಂದ ಉಪವಾಸವಿರುವವ, ಹೊಟ್ಟೆಗಿಲ್ಲದವ.

फ़ाक़ाकशी, स्त्री. ಹೊಟ್ಟೆಗಿಲ್ಲದೆ ಉಪವಾಸವಿರುವಿಕೆ; ಹೊಟ್ಟೆಗಿಲ್ಲದೆ ನಿರ್ವಹಿಸುವಿಕೆ, ಉಪವಾಸವನ್ನು ಸಹಿಸುವಿಕೆ

फाख़्तई, वि. ಪಾರಿವಾಳದ ಬಣ್ಣದ; ಬಾದಾಮಿ ಬಣ್ಣದ.

फ़ाख़्ता, पु. ಪಾರಿವಾಳ, ಬೆಳವ.

फाक, फाग, पु ಕಾಮನ ಹಬ್ಬ, ಹೋಳಿ; ಕಾಮನ ಹಬ್ಬದ ಆಟ ಪಾಟಗಳು; ಓಕಳಿಯಾಟ; ಗುಲಾಲು ಪುಡಿ.

फागुण, पु. ಫಾಲ್ಗುನ ಮಾಸ.

फ़ाज़िर, वि. ದುಷ್ಟ; ಪೋಲಿ, ಪಾಪಿ; ಲಂಪಟ.

फ़ाज़िल, वि. ಹೆಚ್ಚಾದ; ಮಿಗಿಲಾದ; ಅಧಿಕ. पु. ಪಂಡಿತ; ವಿದ್ಯಾವಂತ; ವ್ಯುತ್ಪನ್ನ.

फाट, पु. ಅಗಲ; ಭಾಗ, ಪಾಲು.

फाटक, पु ಹೆಬ್ಬಾಗಿಲು, ಅಗಸೆ; ದ್ವಾರಪಾಲಕ, ಕಾವಲುಗಾರ; ತಡೆ, ಅಡ್ಡಿ;

ಕೋರ್ಟಿನಲ್ಲಿ ವಾದಿ ಪ್ರತಿವಾದಿಗಳು ನಿಂತುಕೊಳ್ಳುವ ಸ್ಥಳ, ಪಂಜರ; ಸರಕಾರಿ ದೊಡ್ಡಿ; ಉಬ್ಬಲು, ಹೊಟ್ಟು, ಗೊಳಲಿ.

फाटक-दार, पु. ದ್ವಾರಪಾಲಕ, ಕಾವಲುಗಾರ.

फाटक-बंदी, स्त्री. ಸೆರೆ, ಕಾವಲು.

फाटका, पु. =सट्टा.

फाटना, अकि. =फटना.

फाड़, पु. ಬಿರುಕು; ಹರಕು; ಸೀಳು.

फाड़ना, सक्रि. ಹರಿ, ಸಿಗಿ; ಸೀಳು; ಒಡೆ

फाड़ा-फाड़ी, स्त्री. ಜಗಳ, ಕಚ್ಚಾಟ.

फ़ातिहा, **फ़ातेहा**, पु. ಕುರಾನಿನ ಮೊದಲನೆಯ ಅಧ್ಯಾಯ; ಸತ್ತವರ ಆತ್ಮಶಾಂತಿಗಾಗಿ ಮಾಡುವ ಪ್ರಾರ್ಥನೆ ದಾನಧರ್ಮ ಮೊದಲಾದುವು. फ़ातिहा पढ़ना = ಸತ್ತವರ ಆತ್ಮಶಾಂತಿಗೆ ಅವರ ಸಮಾಧಿಯ ಬಳಿ ಕುರಾನನ್ನು ಪಠಿಸು; ಚರಮಶ್ಲೋಕ ಪಠಿಸು; ನಿರಾಶನಾಗು

फ़ानी, वि. ಅನಿತ್ಯ, ನಶ್ವರ.

फ़ानूस, पु. ಗಾಜಿನ ದೀಪದ ಕಂಬ; ಗಾಜಿನ ದೀಪ, ಲಾಂದ್ರ, ಕಂದೀಲು; ಲಸ್ತರು, ಗುಳೋಪು.

फ़ाम, पु. ವರ್ಣ, ಬಣ್ಣ, ರಂಗು; ರೂಪ

फ़ायदा, पु. ಲಾಭ, ಫಾಯಿದೆ; ಪ್ರಯೋಜನ; ಹಿತ; ಫಲ, ಫಲಿತಾಂಶ; ಬಡ್ಡಿ.

फ़ायदामंद, वि. ಲಾಭಕಾರಿ, ಫಲಕಾರಿ; ಹಿತಕರ, ಪ್ರಯೋಜನಕರ.

फ़ाया, पु. ಮುಲಾಮಿನ ಪಟ್ಟಿ, ಪ್ಲಾಸ್ತ್ರಿ

फ़ारस, पु. ಪಾರಸೀಕ, ಪರ್ಷಿಯಾ.

फ़ारसी, स्त्री. ಪಾರಸೀಕ ಭಾಷೆ.

फारा, पु. ತುಂಡು, ಹೋಳು.

फ़ारिग़, वि. ನಿವೃತ್ತ; ಬಿಡುಗಡೆಯಾದ, ಖುಲಾಸೆಯಾದ.

फ़ारिख़ती, स्त्री. **फ़ारिग़ख़त**, पु. **फ़ारिग़ख़ती**, स्त्री. ಬಿಡುಗಡೆ ಪತ್ರ, ಪಾರಿಖತ್ತು, ಖುಲಾಸಪತ್ರ, ಖಂಡಪತ್ರ.

फाल, पु. ನೇಗಿಲಿನ ಮೊಳೆ, ಗುಳ; ತುಂಡು, ಹೋಳು; ಅಡಕೆ ಚೂರು; ಕುಣಿತ, ಜಿಗಿತ; ಹೆಜ್ಜೆ, ದಾಪು.

फ़ाल, स्त्री. ಭವಿಷ್ಯ ಹೇಳುವಿಕೆ, ಕಣಿ; ಶಕುನಶಾಸ್ತ್ರ.

फ़ालगो, पु ಭವಿಷ್ಯಜ್ಞ, ಕಣಿಗಾರ.

फ़ालतू, वि. ಹೆಚ್ಚಾದ, ಮಿಗಿಲಾದ; ಮಿಕ್ಕಿದ್ದು, ಉಳಿತಾಯ; ಮೇಲುವಾಸಿ

फ़ालसई, वि. ಊದಾಬಣ್ಣದ.

फ़ालसा, पु. ಒಂದು ಬಗೆ ಹಣ್ಣು.

फ़ालिज, पु. ಅರ್ಧಾಂಗವಾಯು, ಪಕ್ಷವಾತ, ಪಾರ್ಶ್ವವಾಯು; ಲಕ್ವಾ.

फ़ालूदा, पु. ಗೋಧಿಯ ತಂಬಿಟ್ಟು.

फाल्गुन, पु. ಫಾಲ್ಗುನ ಮಾಸ.

फाव, पु. ಕೊಸರು, ಕುಸುರಿ.

फावड़ा, पु. ಸಲಿಕೆ, ಮುಮುಟಿ.

फावड़ी, स्त्री. ಸಲಿಕೆ, ಎಲೆ ಗುದ್ದಲಿ; ಸನ್ಯಾಸಿಯ ದಂಡ; ಎರಡು ತುದಿಗಳಲ್ಲೂ ಪಾದವಿರುವ ದಂಡ ಅಥವಾ ಲಾಠಿ

फ़ाश, वि. ಪ್ರಕಟವಾದ; ಬಯಲಾದ; ಪ್ರಸಿದ್ಧ; ಸ್ಪಷ್ಟ.

फासिद, वि. ನೀಚ; ದುಷ್ಟ; ಪಾಪಿ;

ದೋಷಿ; ಅಪರಾಧಿ; ಖೋಡಿ, ಖೂಳ

फ़ासिला, पु. ದೂರ, ಫಾಸಲೆ; ಅಂತರ; ತೆರಪು.

फाहा, पु. = फ़ाया.

फ़ाहिश, वि. ಪ್ರಚಂಡ; ಪೋಲಿ; ಲಂಪಟ; ನಿರ್ಲಜ್ಜ.

फ़ाहिशा, स्त्री. ವ್ಯಭಿಚಾರಿಣಿ; ಸೂಳೆ.

फिंकना, अक्रि. ಎಸೆಯಲ್ಪಡು

फिंकाना, फिंकवाना, सक्रि. ಬಿಸಾಡಿಸು

फिंक, स्त्री. ಚಾವಟಿಯ ತುದಿ.

फ़िक़रा, पु. ವಾಕ್ಯ; ಅವಧಿ; ಮರಸುವ ಮಾತು, ಠಕ್ಕು; ಗೇಲಿ, ಕುಚೋದ್ಯ. फ़िक़रा गढ़ना या बनाना = ನೆವ ಹೇಳು, ಸಬೂಬು ಹೇಳು.

फ़िक़राबाज़, पु. ಮೋಸಗಾರ, ಠಕ್ಕ.

फ़िक़राबाज़ी, स्त्री. ಮೋಸಗಾರಿಕೆ, ಠಕ್ಕು.

फिकवाना, फिकाना, सक्रि ಬಿಸಾಡಿಸು

फिकारना, सक्रि ತಲೆಯನ್ನು ಬಿಚ್ಚು; ತಲೆಗೂದಲನ್ನು ಬಿಚ್ಚು

फिकवैया, फिकैत, पु. ಭರ್ಜಿ ಎಸೆಯುವವ.

फ़िक्र, स्त्री. ಚಿಂತೆ; ಯೋಚನೆ; ವಿಚಾರ

फ़िक्रमंद, वि. ಚಿಂತಾಮಗ್ನ; ಚಿಂತಿತ; ಚಿಂತಾಪರ, ವ್ಯಗ್ರ.

फ़िक्रमंदी, स्त्री. ಚಿಂತಾಮಗ್ನತೆ.

फ़िज़ा, स्त्री. ಮೈದಾನ; ಬಯಲು; ವಾತಾವರಣ.

फ़िज़ूँ. वि. ಹೆಚ್ಚು. ಅಧಿಕ.

फ़िज़ूल, वि. = फ़ज़ूल.

फिट, अव्य. ಥೂ, ಛೀ; ಧಿಕ್. स्त्री. ಬೈಗಳು, ನಿಂದೆ.

फिटकार, स्त्री. ಧಿಕ್ಕಾರ, ಬೈಗಳು.

फिटकारना, सक्रि. ಧಿಕ್ಕರಿಸು, ಬೈಯು

फिटकिरी, स्त्री. ಪಟಿಕ, ಪಟಿಕಾರ.

फिटन, स्त्री. ಕುದುರೆ ಸಾರೋಟ್.

फिटना, अक्रि. ಜಜ್ಜು; ಕಲಸಲ್ಪಡು; (ಹಾಲ) ತೀರು, ಚುಕ್ತಾ ಆಗು.

फिटाना, सक्रि. ಕಲಸು, ಚಾರಿಸು.

फिट्ट, वि. ತಿರಸ್ಕೃತ, ಧಿಕ್ಕರಿಸಲ್ಪಟ್ಟ.

फ़ितना, पु. ಜಗಳ, ಗಲಾಟೆ; ಫಿತೂರಿ; ದಂಗೆ; ಕಲಹ; ಆಪತ್ತು; ಅತ್ತರ್, ಪನ್ನೀರು. वि. ದುಷ್ಟ; ಗಲಾಟೆ ಖೋರ; ಉಪದ್ರವಿ.

फ़ितर, पु. ಪಾರಣೆ

फ़ितरत, स्त्री. ಸ್ವಭಾವ; ತಿಳಿವಳಿಕೆ; ಜ್ಞಾನ; ಜಾಣತನ; ತಂತ್ರ, ಒಳಸಂಚು; ಮಸಲತ್ತು; ಫಿತೂರಿ.

फ़ितरती, वि. ಸಹಜ, ಸ್ವಾಭಾವಿಕ; ಜಾಣ, ಚತುರ; ತಂತ್ರಗಾರ.

फ़ितूर, पु. = फ़तूर.

फ़िदविया, स्त्री. ದಾಸಿ, ಸೇವಕಿ.

फ़िदवी, वि. ಸ್ವಾಮಿಭಕ್ತ; ಭವದೀಯ, ತಮ್ಮ ವಿಧೇಯ. पु. ಸೇವಕ, ದಾಸ

फ़िदा, पु. ನಿವೇದನ; ಆತ್ಮಾರ್ಪಣೆ; ಭಕ್ತಿ

फ़िदाई, पु. ಆತ್ಮಾರ್ಪಣೆ ಮಾಡುವವ; ಭಕ್ತ, ಆಸಕ್ತ.

फ़िदिया, पु. ಬಿಡುಗಡೆ ಹಣ, ಓಲು; ದಂಡ.

फिनाना, सक्रि. ಕಲಸು, ಬೆರಸು.

फिनिया, स्त्री. ಕಿವಿಯ ಒಂದು ಆಭರಣ.

फ़िरंग, पु. ಯೂರೋಪ್ ಖಂಡ; ಫರಂಗಿ ರೋಗ, ಮೇಹರೋಗ.

फ़िरंगिस्तान, पु. ಬಿಳಿ ಜನರ ನಾಡು, ಯೂರೋಪ್.

फ़िरंगी, वि. ಫರಂಗಿಯಾದ. स्त्री. ಒಂದು ಬಗೆ ಕತ್ತಿ.

फिर, क्रिवि. ತಿರುಗಿ; ಪುನಃ; ಮತ್ತೆ; ಬಳಿಕ. फिर भी = ಮತ್ತೂ, ಆದಾಗ್ಯೂ.

फ़िरक़ा, पु. ಜಾತಿ, ಪಂಗಡ, ಕೋಮು; ಕೂಟ, ಮಂಡಲಿ; ವಾಕ್ಯ.

फ़िरक़ावार, वि. ಕೋಮುವಾರು.

फिरकी, स्त्री. ನೂಲಿನ ಅರಟೆ, ತಿಕಡಿ; ಕದುರು, ಬಟ್ಟೆ; ಗಿರುಗಟೆ, ಚೀರು ಬುಗುರಿ.

फिरत, पु. ಬಿಸಾಡಿದ ವಸ್ತು, ಕಸ; ತಿರುಗಿ ಬರುವುದಕ್ಕೆ ಕೂಲಿ ಅಥವಾ ಬಾಡಿಗೆ; ತಿರುಗಿ ಕೊಡುವ ಹಣ.

फिरता, पु. ತಿರುಗುವಿಕೆ, ಹಿಂತಿರುಗುವುದಕ್ಕೆ ಬಾಡಿಗೆ; ವಿಟನಿಗೆ ವೇಶ್ಯೆ ತಿರುಗಿ ಕೊಡುವ ಹಣ; ದಾಫರನಿಗೆ ಕೊಡುವ ದಲ್ಲಾಳಿ; ಪತ್ರಕ್ಕೆ ಜವಾಬು.

फिरती, स्त्री. ತಿರುಗುವಿಕೆ; ವಾಪಸ್ಸು, ಪರತ.

फ़िरदौस, पु. ತೋಟ, ಉದ್ಯಾನ; ಸ್ವರ್ಗ.

फिरना अक्रि. ತಿರುಗು; ಮರಳು; ಗುಡುಗಾಡು, ಅಲೆದಾಡು; ತಿರುಗಿ ಬೀಳು.

फिरनी, स्त्री. = फिरकी.

फ़िरनी, स्त्री. ಪಾಯಸ, ಪರಮಾನ್ನ.

फिरवैया, वि. ತಿರುಗುವವ, ಅಲೆವಾತ.

फिराई, स्त्री. ತಿರುಗುವಿಕೆ; ವಾಪಸು ಮಾಡುವಿಕೆ; ಪುನಃಸ್ಥಾಪನೆ.

फ़िराक़, पु. ವಿಯೋಗ, ವಿರಹ.

फिरवाना, फिराना, सक्रि. ತಿರುಗಿಸು, ಸುತ್ತಿಸು; ಹೊರಳಿಸು; ತಿರುವು.

फ़िरार, पु. = फ़रार.

फिराव, पु. ತಿರುಗುವಿಕೆ, ತಿರುಗಾಟ.

फ़िरासत, स्त्री. ತೀಕ್ಷ್ಣಬುದ್ಧಿ, ಅರಿವು.

फ़िरिश्ता, पु. = फ़रिश्ता.

फ़िलहाल, क्रिवि. ಪ್ರಸ್ತುತ, ಹಾಲಿ.

फ़िल्ली, स्त्री. ಕಣಕಾಲು, ಮೀನಖಂಡ.

फिश, अव्य. ಛೀ ! ಥೂ !

फिस, वि. ನಿಷ್ಪ್ರಯೋಜಕ; ನಿರರ್ಥಕ; ಏನೂ ಆಗದ. टाँय टाँय फिस = ಫಲಿತಾಂಶವೇನೂ ಇಲ್ಲದ್ದು, ಪೊಳ್ಳು ಭರಭರಾಟೆ.

फिसकना, फिसकाना, अक्रि. ಹುಸ್ಸೆನ್ನು.

फिसड्डी, वि. ಏನೂ ಮಾಡಲಾಗದವ, ಕೈಯಾಲಾಗದವ; ಹಿಂದುಳಿದವ.

फिसफिसाना, अक्रि. ಹಿಂಜರಿ, ನಸನಸೆ ಮಾಡು.

फिसलन, स्त्री. ಜಾರುವಿಕೆ, ಜಾರಿಕೆ; ಕೈತಪ್ಪು.

फिसलना, अक्रि. ಜಾರು, ಜಗುಳು, ಸರಿ; ನುಣುಚು; ತಪ್ಪು. वि. ಜಾರಿಕೆಯ, ಜಾರುವ.

फ़िसलहा, वि. ಜಾರುವ, ಜಾರಿಕೆಯ.

फिसलाना, सक्रि. ಜಾರಿಸು, ಸರಿಸು; ತಪ್ಪಿಸು.

फिसलाव, पु. फिसलाहट, स्त्री. ಜಾರುವಿಕೆ, ಜಾರಿಕೆ.

फ़िहरिस्त, स्त्री. = फ़ेहरिस्त.

फींचना, सक्रि. ಬಟ್ಟೆ ಒಗೆ; ಹಿಂಡು.

फ़ी, अव्य. ಒಂದಕ್ಕೆ, ತಲಾ. स्त्री. ಕುಂದು, ದೋಷ; ಸಂಚು.

फीका, वि. ನಿಸ್ಸಾರ, ಸಪ್ಪೆ.

फीकापन, पु. ನೀರಸತ್ವ, ಸಪ್ಪೆತನ.

फ़ीता, पु. ಲಾಡಿ, ನಾಡೆ, ನವಾರ; ಪಟ್ಟಿ

फ़ीरोज़, वि. ಜಯಶೀಲ, ಜಯಶಾಲಿ; ಭಾಗ್ಯಶಾಲಿ.

फ़ीरोज़ा, पु ಇಂದ್ರನೀಲ ಮಣಿ.

फ़ीरोज़ई, फ़ीरोज़ी, वि. ಇಂದ್ರನೀಲ ವರ್ಣದ.

फ़ील, पु. ಆನೆ, ಗಜ.

फ़ीलख़ाना, पु. ಆನೆ ಕರೋಹಟ್ಟಿ, ಗಜಶಾಲೆ.

फ़ीलपांव, फ़ीलपा, पु. ಆನೆಗಾಲು, ಹುತ್ತುಗಾಲು, ಒರಲುಗಾಲು.

फ़ीलपाया, पु. ಸ್ತಂಭ, ಕಂಬ.

फ़ीलवान, पु. ಆನೆ ನಡೆಸುವವ, ಮಾವಟಿಗ, ಮಾವುತ, ಜೋದ.

फीली, स्त्री. ಕಣಕಾಲು.

फुंकना, अक्रि. ಊದಲ್ಪಡು, ಭಸ್ಮವಾಗು. पु. ಊದುಗೊಳವಿ; ಮೂತ್ರಪಿಂಡ, ಮೂತ್ರಾಶಯ.

फुंकनी, स्त्री. ಊದುಗೊಳವಿ; ತಿದಿ.

फुंकारना, अक्रि. ಫೂತ್ಕಾರಮಾಡು.

फुंकवाना, फुंकाना, सक्रि. फूंकना का प्रे. रूप.

फुंकार, पु. ಬುಸುಗುಟ್ಟುವಿಕೆ, ಫೂತ್ಕಾರ

फुंकारना, अक्रि. ಬುಸುಗುಟ್ಟು, ಬುಸ್ಸೆನ್ನು.

फुंकारी, स्त्री. ಬುಸುಗುಟ್ಟುವಿಕೆ.

फुंगी, स्त्री. ಚಿಗುರು; ಮೊಗ್ಗು; ತೆನೆ.

फुंदना, पु. फुंदिया, स्त्री. ಕುಚ್ಚು, ಗೊಂಚಲು, ಗೊಂಡೆ, ಝುಲ್ಲರಿ.

फुंदी, स्त्री. ಗಂಟು, ಕಟ್ಟು; ಬೊಟ್ಟು, ತಿಲಕ.

फुंसी, स्त्री. ಗುಳ್ಳೆ, ಕುರು.

फुंहार, स्त्री. ಹನಿ, ತುಂತುರು.

फुंहारा, पु. = फूहारा.

फुकना, अक्रि. = फुंकना.

फ़ुग़ाँ, पु. ಅಳು, ವಿಲಾಪ; ಕೂಗಾಟ.

फुचड़ा, पु. ಬಟ್ಟೆಯ ಅಂಚಿನಲ್ಲಿ ನೇಯದೆ ಬಿಟ್ಟಿರುವ ಎಳೆಗಳು.

फुचारा, पु. ಅಸಭ್ಯವಾಗಿ ಅಥವಾ ಅಶ್ಲೀಲವಾಗಿ ಮಾತನಾಡುವವ; ಬಂಡ.

फ़ुज़ूल, वि. = फ़ज़ूल.

फुट, वि. ಹಳೆಯ; ಒಂಟಿ; ವಿಷಮ; ಇಜೋಡ್ತೆ; ಯಾವುದಕ್ಕೂ ಸೇರದ; ಬೇರೆಯಾದ. पु. ಒಂದು ಅಡಿ, ಫೂಟು

फुटकर, फुटकल, वि. ವಿಲಕ್ಷಣ, ವಿಷಮ; ಬೇರೆಬೇರೆ, ವಿವಿಧ; ಸಬ್ಲುಂಡ, ಚಿಲ್ಲರೆ.

फुटका, पु. ಗುಳ್ಳೆ, ಹೊಪ್ಪಳೆ.

फुटकी, स्त्री. ಚಿತ್ತು, ಕಲೆ, ಡಾಗು, ಕರೆ. वि. ಹಳೆಯ.

फुटहा, पु. ಹುರಿದ ಜೋಳ.

फुटेहरा, पु. ಹುರಿಗಡಲೆ.

फुट्टल, फुट्टैल, वि. = फुट.

फुड़वाना, सक्रि. फोड़ना का प्रे रूप.

फुड़िया, स्त्री. ಕಣ್ಣಿನ ಪರೆಯಲ್ಲಿ ಏಳುವ ಗುಳ್ಳೆ; ಕುರು, ಗುಳ್ಳೆ.

फुतकी, स्त्री. ಒಂದು ಪಕ್ಷಿ (=फुद्की).

फ़ुतूर, पु. = फ़तूर.

फुदकना, अक्रि. ಕುಣಿ; ಜಿಗಿ; ನೆಗೆ; ಕುಣಿದಾಡು.

फुदका, पु. फुदकी, स्त्री. ಕುಣಿತ; ಜಿಗಿತ; ಕುಪ್ಪಳಿಸುವಿಕೆ, ಒಂದು ಪಕ್ಷಿ

फुनगी, स्त्री. ಚಿಗುರು; ತೆನೆ; ತುದಿ.

फुन्नी, स्त्री. ಕುಚ್ಚು, ಗೊಂಚಲು; ಗಂಟು.

फुप्फुस, पु. ಶ್ವಾಸಕೋಶ, ಉಸಿರು ಚೀಲ, ಪುಪ್ಪುಸ, ತೊಳ್ಳೆ.

फुफंदी, स्त्री. ನವಾರ, ನೀವಿ.

फुफकार, पु. ಬುಸುಗುಟ್ಟುವಿಕೆ.

फुफकाना, फुफकारना, सक्रि. ಬುಸುಗುಟ್ಟು, ಬುಸ್ಸೆನ್ನು.

फुपा, फुप्पा, फुफा, पु. ತಂದೆಯ ಸೋದರಿಯ ಗಂಡ, ಸೋದರತ್ತೆಯ ಗಂಡ.

फुफिया, वि. ಸೋದರತ್ತೆಯಂತೆ ಸಂಬಂಧವುಳ್ಳ. फुफिया सास = ಗಂಡ ಅಥವಾ ಹೆಂಡತಿಯ ಸೋದರತ್ತೆ, ಮಾವನ ಸೋದರಿ.

फुफेरा, वि. ಸೋದರತ್ತೆಯ ಕಡೆಯ ಸಂಬಂಧದ. फुफेरा भाई = ಸೋದರತ್ತೆಯ ಮಗ, ಭಾವ.

फुर, वि. ಸತ್ಯ, ನಿಜ; ಸರಿ. स्त्री. ಪರ ಪರ ಶಬ್ದ.

फुरती, स्त्री. ತ್ವರೆ, ವೇಗ; ಲಾಘವ, ಚಳಕ; ಚಟುವಟಿಕೆ, ಲಗುಬಗೆ.

फुरतीला, वि. ವೇಗವಾದ; ಚುರುಕಾದ; ಲವಲವಿಕೆಯ, ಚಟುವಟಿಕೆಯ

फुरना, अक्रि. ಹೊರಡು, ಮೂಡು; ಹೊರಬೀಳು; ನಿಜವಾಗು.

फुरफुराना, अक्रि. ಗಾಳಿಗೆ ಅಲುಗಾಡು, ಹಾರಾಡು, ಅದರು. सक्रि. ರೆಕ್ಕೆ ಜಾಡಿಸು.

फरफुरी, फुरहरी, स्त्री. ಅದುರುವಿಕೆ, ಕಂಪನ, ನಡುಕ; ರೋಮಾಂಚ.

फुरसत, स्त्री. ವಿರಾಮ, ಸಾವಕಾಶ; ಬಿಡುವೊತ್ತು, ಪುರಸತ್ತು, ತೀರುಕಡೆ.

फुरेरी, स्त्री. ಔಷಧ ಹಚ್ಚಲು ತುದಿಯಲ್ಲಿ ಹತ್ತಿ ಸುತ್ತಿರುವ ಹೆಂಚು ಕಡ್ಡಿ; ರೋಮಾಂಚ, ನಿಲುಗೂದಲು; ನಡುಕ

फुलका, पु. फुलकी, स्त्री. ಬೊಬ್ಬೆ, ಚಿಕ್ಕ ಹೊಪ್ಪಳೆ; ತೆಳುವಾದ ಚಪಾತಿ, ದೋಸೆ, ಗೋಧಿರೊಟ್ಟಿ; ಮೆತ್ತಗಿರುವ ನೆಲ. वि. ಉಬ್ಬಿದ, ಬಾತುಕೊಂಡ; ಹಗುರವಾದ.

फुलकारना, सक्रि. ಹರವು, ವಿಸ್ತರಿರು

फुलकारी, स्त्री. ಹೂವಿನ ಕೆಲಸ, ಬುಟ್ಟಾ ಕೆಲಸ. वि. ಹೂಗೆಲಸದ, ಬೂಟಾ ಕೆಲಸ ಮಾಡಿದ; ಗೋಟು ಕಟ್ಟಿದ, ಅಂಚುಕಟ್ಟಿದ.

फुलचुही, स्त्री. ಒಂದು ಪಕ್ಷಿ.

फुलझड़ी, स्त्री. ಹೂ ಬಾಣ, ಕುಡಿಕೆ ಬಾಣ.

फुलफुला, वि. ರಂಧ್ರಮಯವಾದ; ಬಿರುಕು ಬಿಟ್ಟ; ಹೊಂದಿಕೆಯಿಲ್ಲದ.

फुलवर, पु. ಕಸೂತಿ ಕೆಲಸ ಮಾಡಿದ ಒಂದು ಬಗೆ ತೆಳುವಾದ ಬಟ್ಟೆ.

फुलवा, पु. ಒಂದು ಬಗೆ ಗೋಂದು.

फुलवाड़ी, फुलवारी, स्त्री. ಪುಷ್ಪವನ, ಹೂದೋಟ, ಉದ್ಯಾನ; ಮಕ್ಕಳು ಮರಿ.

फुलां, वि. ಇಂಥಿಂಥ, ಪಲಾಯನ.

फुलाना, सक्रि. ಉಬ್ಬೆತ್ತು, ಉಬ್ಬಿಸು; ಹಿಗ್ಗಿಸು; ಅರಳಿಸು.

फुलाव, पु. फुलावट, स्त्री. ಉಬ್ಬು, ಬೀಗು, ಉಬ್ಬಟೆ.

फुलासरा, पु. ಮುಖಸ್ತುತಿ, ಪುಸಲಾಯಿಸುವಿಕೆ.

फुलिया, पु. ಮೊಳೆಯ ತಲೆ, ಗುಬಟು; ಗುಬ್ಬಿ ಮೊಳೆ; ಮೂಗುತಿ, ಮುರು

फुलेल, पु. ಹೂಗಳಿಂದ ಪರಿಮಳ ಹೊಂದಿದ ತೈಲ.

फुलेहरा, पु. ತೋರಣ; ಗೋಚಲು

फुलौरी, स्त्री. ಒಂದು ಬಗೆ ಬೋಂಡ.

फुल्ल, वि. ವಿಕಸಿತವಾದ, ಅರಳಿದ.

फुल्ला, पु. ಕಣ್ಣಿನ ಹೂ, ಕಣ್ಣಿನ ಪರೆ; ಅರಳಿದ ವಸ್ತು, ಉಬ್ಬಿದ ವಸ್ತು; ಅರಳು, ಪುರಿ.

फुल्ली, स्त्री. ಸಣ್ಣ ಹೂವು; ಕಣ್ಣಿನ ಪರೆ, ಕಣ್ಣಿನ ಹೂ; ಮೂಗುತಿ; ಕಿವಿಮುರು.

फुवारा, पु. = फुहार.

फुस, फुसकी, स्त्री. ಮೃದು ಧ್ವನಿ; ಪುಸಪುಸ ಶಬ್ದ.

फुसकार, स्त्री. ಬುಸುಗುಟ್ಟುವಿಕೆ.

फुसड़ा, फुसरा, पु. ಹರಕು ಬಟ್ಟೆ, ಚಿಂದಿ; ಗಿಡಗಳ ನಾರು.

फुसफुस, स्त्री. ಪಿಸುಪಿಸು ಮಾತು, ಗುಸಗುಸು; ಪಿಸುಗುಟ್ಟುವಿಕೆ; ಸಡಿಲತೆ.

फुसका, फुसफुसा, वि. ಬೇಗನೆ ಮುರಿದು ಹೋಗುವ, ಪೆಡಸು; ಬಲವಿಲ್ಲದ.

फुसफुसाना, सक्रि. ಪಿಸುಪಿಸು ಮಾತಾಡು, ಪಿಸುಗುಟ್ಟು.

फुसफुसाहट, स्त्री. ಪಿಸುಪಿಸು ಮಾತು.

फुसलाऊ, वि. ಪುಸಲಾಯಿಸುವವ.

फुसलाना, सक्रि. ಪುಸಲಾಯಿಸು; ಗೋಲ್ ಮಾಡು; ಬುಲ್ಲವಿಸು.

फुसलाव, फुसलावा, पु. फुसलाहट, स्त्री. ಪುಸಲಾಯಿಸುವಿಕೆ, ಪುಸಲಾವಣೆ; ಬುಲ್ಲವಣೆ.

फुहार, पु. ಹನಿ, ತುಂತುರು, ಸೋನೆ.

फुहारा, वि. ಅಸಭ್ಯ; ಗಮಾರ; ಗಾಮೋಡು. पु. ಅಸಭ್ಯವಾಗಿ ಮಾತಾಡುವವ, ಒಡ್ಡೊಡ್ಡಾಗಿ ಮಾತನಾಡುವವ; ಹನಿ, ತುಂತುರು; ಧಾರಾಯಂತ್ರ

फुही, स्त्री. ಹನಿ, ತುಂತುರು.

फूं, स्त्री. ಚೀರುವುದು, ಬುಸ್ಸೆನ್ನುವಿಕೆ.

फूंक, स्त्री. ಊದುವಿಕೆ, ಉಸಿರುವಿಕೆ; ಬೆಂಕಿ ಊದುವಿಕೆ; ಬುಸುಗುಟ್ಟುವಿಕೆ.

झाड़ फूंक = ಮಂತ್ರ ಹಾಕುವಿಕೆ.

फूंकना, अक्रि. ಊದಲ್ಪಡು; ಉರಿ, ಸುಡು. सक्रि. ಊದು, ಉರುಬು,

ಉಸಿರು; ಉರಿಸು, ಸುಡು; ಮಂತ್ರ ಹಾಕು; ಶಂಖ ಊದು, ಪೂರಿಸು; ಸಿಕ್ಕಾಪಟ್ಟೆ ಖರ್ಚುಮಾಡು, ದುಂದು ಮಾಡು. फूंक फूंक के पांव धरना =ಬಹಳ ಜಾಗರೂಕತೆಯಿಂದ ನಡೆ, ಬಲು ಹುಷಾರಾಗಿ ವರ್ತಿಸು.

फूंका, पु. ಎಲ್ಲ ಹಾಲನ್ನೂ ಕರೆದು ತೆಗೆಯಲು ಹಸುವಿನ ಕೆಚ್ಚಲಿಗೆ ಔಷಧ ತುಂಬಿದ ನಳಿಗೆಯನ್ನಿಟ್ಟು ಊದುವಿಕೆ; ನಳಿಗೆ; ಗುಳ್ಳೆ, ಹೊಪ್ಪಳೆ.

फूंकारना, अक्रि. ಬುಸುಗುಟ್ಟು, ಮುಸುಗರಿ.

फूंद, स्त्री. =फुंदना.

फूंस, पु. =फूस.

फूकर, पु. ನಾಜೂಕಿನವ.

फूट, स्त्री. ಒಡೆಯುವಿಕೆ; ಬಿರುಕು, ಒಡಕು; ಕಲಹ; ಮತಭೇದ, ಭಿನ್ನಾಭಿಪ್ರಾಯ; ವೈಮನಸ್ಯ; ಬೇರೆಯಾಗುವಿಕೆ; ಕರಬೂಜು ಹಣ್ಣು.

फूटन, पु. ಕಲಹ, ಜಗಳ; ಮನಸ್ತಾಪ.

फूटना, अक्रि. ಒಡೆ, ಬಿರುಕು ಬಿಡು; ಬಿರಿ; ಮುರಿ; ಚದರಿಹೋಗು, ಅಗಲು; ಹಿಸಿ; ಮೂಡು; ಹೊರಡು; ಅಳು. फूट फूटकर रोना=ಬಿಕ್ಕಿ ಬಿಕ್ಕಿ ಅಳು.

फूटी, स्त्री. ಒಡಕು; ಭಿನ್ನಾಭಿಪ್ರಾಯ; ವಿರೋಧ.

फूफा, पु ಸೋದರತ್ತೆಯ ಗಂಡ.

फूफी, फूफू, स्त्री. ಸೋದರತ್ತೆ.

फूल, पु. ಪುಷ್ಪ, ಹೂವು; ಹೂಗೆಲಸ, ಬುಟ್ಟಾಕೆಲಸ; ಕುಚ್ಚು, ಗೊಂಚಲು; ಅಗ್ನಿಕಣ, ಕಿಡಿ; ಕುಷ್ಠದ ಚುಕ್ಕೆ, ಶ್ವೇತಕುಷ್ಠ; ಕಣ್ಣಿನ ಹೂ; ಉತ್ತಮವಾದ ನಾಟಿ ಸೇಂದಿ; ರಜಸ್ವಲೆಯಾಗುವಿಕೆ, ಮುಟ್ಟು; ಹೆಂಗಸರ ಒಂದು ರೋಗ, ಬಿಳಿಸೆರಗು; ಸುಟ್ಟ ಎಲುಬು, ಅಸ್ಥಿ; ಅಸ್ಥಿ ಸಂಚಯನ; ಕಂಚು. स्त्री. ಉಬ್ಬುವಿಕೆ, ಹಿಗ್ಗುವಿಕೆ; ಉಬ್ಬು, ಉಬ್ಬರ; ಹಿಗ್ಗು, ಆನಂದ.

फूलगोभी, स्त्री. ಕೋಸು ಹೂ.

फूलदान, पु. ಹೂವಿನ ಕುಚ್ಚಿಡುವ ಪಾತ್ರೆ, ಪುಷ್ಪದಾನಿ

फूलदार, वि. ಹೂಗಳುಳ್ಳ; ಬುಟ್ಟಾ ಕೆಲಸ ಮಾಡಿದ; ಹೂಗೆಲಸ ಮಾಡಿದ.

फूलना, अक्रि. ಪುಷ್ಪಿಸು, ಹೂ ಬಿಡು; ಹೂವಾಗು, ಅರಳು; ಉಬ್ಬು, ಬೀಗು; ಹಿಗ್ಗು, ಆನಂದಿಸು; ಸೌಖ್ಯವಾಗಿರು. फूलना फलना=ಹುಲುಸಾಗು, ಹೊರವಾಗು; ಸಮೃದ್ಧಿಹೊಂದು, ಏಳಿಗೆಗೆ ಬರು; ಅಭ್ಯುದಯವಾಗು.

फूला, वि. ಪುಷ್ಪಿಸಿದ, ಅರಳಿದ; ಉಬ್ಬಿದ; ಹಿಗ್ಗಿದ. फूले न समाना=ಹೊಟ್ಟೆಯಲ್ಲಿ ಹಿಡಿಸದಾಗು; ಹಿರಿ ಹಿರಿ ಹಿಗ್ಗು.

फूली, स्त्री. =फुल्ली.

फूस, पु. ಒಣ ಹುಲ್ಲು, ಹುಲ್ಲು ಕಡ್ಡಿ, ಕರಡ; ಬಲವಿಲ್ಲದ ವಸ್ತು.

फूसड़ा, पु. ಚಿಂದಿ; ಕಸ ಕಡ್ಡಿ.

फूसी, स्त्री. ಹೊಟ್ಟು, ಬೂಸ; ಕಸ.

फूहड़, फूहर, वि. ಅಶಿಕ್ಷಿತ, ಅಗಡು; ಎಗ್ಗ, ಗಾಂಪ, ಗಮಾರ; ಬಂಡ. स्त्री.

ಮುಗ್ಗಲಗೇಡಿ ಹೆಂಗಸು, ಹೊಲಸಿ.

फूहड़ाई, स्त्री. **फूहड़पन**, पु. ಅಗಡುತನ, ಎಗ್ಗತನ; ದಡ್ಡತನ; ಬಂಡತನ; ಅಸಭ್ಯತೆ.

फूहड़ा, वि. ಬಂಡ; ನಾಚಿಕೆಗೇಡಿ; ಎಗ್ಗ.

फूहा, पु. ಹತ್ತಿಯ ತೊಳೆ; ಹಂಜಿ; ಚಿಕ್ಕಮಕ್ಕಳಿಗೆ ಹಾಲೂಡಿಸಲು ಉಪಯೋಗಿಸುವ ಕೃತಕ ಮೊಲೆಯ ತುದಿ; ರಬ್ಬರಿನಿಂದಮಾಡಿದ ಮೊಲೆ ತೊಟ್ಟು.

फूहार, **फूही**, स्त्री. ಸೋನೆ ಮಳೆ.

फेंक, स्त्री. ಎಸಿಗೆ, ಒಗೆತ, ಬಿಸಾಡುವಿಕೆ.

फेंकना, सक्रि. ಎಸೆ, ಒಗೆ; ಬಿಸುಟು; ಬಿಸಾಡು; ಬೀರು; ಕೆಡವು; ಓಡಿಸು, ಹಾರಿಸು; ಸುರಿ; ಬಿತ್ತು.

फेंकवाना, सक्रि. फेंकना का प्रे. रूप.

फेंकाऊ, वि. ಬಿಸಾಡತಕ್ಕ; ಎಸೆಯತಕ್ಕ.

फेंकनैत, **फेंकैत**, वि. ಎಸೆಯುವವ; ಕುಸ್ತಿ ಮಾಡುವವ; ಆಟಗಾರ.

फेंट, स्त्री. ನಡು, ಸೊಂಟ; ನಡುಕಟ್ಟು, ಕಮರ್‌ಬಂದು; ಸುತ್ತು, ಮಡಿಕೆ; ಕಲಸುವಿಕೆ, ಟಿಪಾಯಿಸುವಿಕೆ. फेंट बांधना = ಟೊಂಕ ಕಟ್ಟು, ಕಟಿಬದ್ಧನಾಗು; ಸಿದ್ಧನಾಗು.

फेंटना, सक्रि. ಕಲಸು, ಚಾರಿಸು; ತೇಯು; ಟಿಪಾಯಿಸು.

फेंटा, पु. ನಡುಕಟ್ಟು, ನವಾರ; ಚಿಕ್ಕ ರುಮಾಲು, ಪೇಟಾ.

फेंटी, स्त्री. ನೂಲಿನ ಕಂಡು, ಕಂಡಿಕೆ.

फेंफना, पु. ಸಿಂಬಳ, ಗೊಣ್ಣೆ.

फेकरना, अक्रि. ತಲೆ ಬರಿದಾಗು; ಅಳು, ಗೋಳಿಡು.

फेन, **फेना**, पु. ಬುರುಗು, ನೊರೆ, ನಿಡಿ.

फेनाना, सक्रि. ನೊರೆಕಾರು, ನೊರೆಕಕ್ಕು.

फेनिल, वि. ನೊರೆಯುಳ್ಳ, ನಿಡಿಯುಳ್ಳ. पु. ಅಂಟವಾಳದ ಕಾಯಿ.

फेनी, स्त्री. ಒಂದು ಭಕ್ಷ್ಯ, ಫೇಣಿ.

फेनुस, पु. ಗಿಣ್ಣು ಹಾಲು.

फेफड़ा, पु. ಶ್ವಾಸಕೋಶ, ಉಸಿರಿನ ಚೀಲ, ಪುಪ್ಪುಸ, ತೊಳ್ಳೆ.

फेफड़ी, स्त्री. ಬತ್ತಿದ ತುಟಿ, ಒಣದುಟಿ.

फेर, पु. ತಿರುಗುವಿಕೆ, ಹಿಂತಿರುಗುವಿಕೆ, ಪರತ, ವಾಪಸು; ಸುತ್ತುವಿಕೆ; ಸುತ್ತು; ಮುರಿಗೆ; ತಿರವು, ಮುಡುಕು; ಮುರುದಲೆ; ವಕ್ರತೆ; ಬದಲಾವಣೆ, ಮಾರ್ಪಾಟು; ಪಲ್ಲಟ; ಸಂಕಟ, ಪೇಚಾಟ; ದಂದುಗ, ನೆವ; ಯುಕ್ತಿ; ಕಡಮೆ, ನಷ್ಟ; ದೆವ್ವ ಸೋಕು, ಗರ. हेर फेर = ಪರಿವರ್ತನೆ, ಬದಲಾವಣೆ.

फेरना, सक्रि. ತಿರುಗಿಸು; ಮಗುಚು; ಸುತ್ತಿಸು; ಮುರಿಗೆ ತಿರುವು, ನುಲಿ; ಹಿಂತಿರುಗಿಸು; ವಾಪಸು ಮಾಡು, ಪರತ ಮಾಡು; ಬದಲಾಯಿಸು; ಹೊರಳಿಸು; ಸವರು, ಬಳಿ, ತೊಡಸು; ಕುದುರೆಯನ್ನು ಪಳಗಿಸು.

फेरफार, पु. ಬದಲಾವಣೆ, ಪರಿವರ್ತನೆ, ಮಾರ್ಪಾಟು; ಅದಲು ಬದಲು; ಪಲ್ಲಟ; ತಿರುಗಂಚಿ ಮರಗಂಚಿ, ಕಸಕಲು.

फेरा, पु. ಸುತ್ತುವಿಕೆ, ಸುತ್ತು; ಸುತ್ತಾಟ; ಪರ್ಯಟನ, ಸಂಚಾರ; ಹಿಂತಿರುಗುವಿಕೆ; ಮಡಿಕೆ, ಪದರು. फेरा फिरना

=ಚಕ್ಕರ್ ಲಗಾಯಿಸು, ಚಕ್ಕರ್ ಹೊಡೆ, ಸುತ್ತುವರಿ. फेरा-फेरी= ಪರಿವರ್ತನೆ, ಬದಲಾವಣೆ; ಮುಂದಕ್ಕೂ ಹಿಂದಕ್ಕೂ ಹೋಗುವಿಕೆ.

फेराना, सक्रि.=फिराना.

फेरी, स्त्री. ಸುತ್ತುವಿಕೆ; ಪ್ರದಕ್ಷಿಣೆ; ಸಂಚಾರ; ಗಸ್ತು; ತಿರಿದುಂಬುವಿಕೆ; ತಿರುಕತನ.

फेरीदार, वि. ತಿರುಕ.

फेरीवाला, पु. ಮನೆಮನೆಗೂ ಸಾಮಾನುಗಳನ್ನು ಹೊತ್ತು ಮಾರುವವ, ಬೀದಿ ವ್ಯಾಪಾರಿ, ಕೋರಿ ಸೆಟ್ಟಿ.

फ़ेल, पु. ಕ್ರಿಯೆ; ಕಾರ್ಯ; ಕ್ರಿಯಾಪದ.

फेहरिस्त, स्त्री. ಸೂಚಿ, ಸೂಚಿ ಪತ್ರ; ಅನುಕ್ರಮಣಿಕೆ; ತಪ್ಸೀಲು, ಸರಕುಗಳ ಪಟ್ಟಿ; ಯಾದಿ.

फ़ैज़, पु. ಹಿತ; ಲಾಭ; ಉಪಕಾರ; ಕೃಪೆ; ಅನುಗ್ರಹ; ಔದಾರ್ಯ, ದಾನ.

फ़ैयाज़, पु.=फ़य्याज़.

फैलना, अक्रि. ಹರಡು, ಹರವು; ಚಾಚು; ಹಬ್ಬು, ಪಸರು; ವ್ಯಾಪಿಸು; ಪ್ರಚುರವಾಗು; ಹಠಹಿಡಿ, ಚಂಡಿಸು.

फ़ैलसूफ़, पु. ವಿದ್ವಾಂಸ; ಜಾಣ; ಠಕ್ಕ, ಮೋಸಗಾರ.

फ़ैलसूफ़ी, स्त्री. ಠಕ್ಕು; ಮೋಸ; ಬೂಟಾಟಿಕೆ.

फैलाना, सक्रि. ಚಾಚು, ನೀಡು; ಹರಡು, ಹರವು; ಹಬ್ಬಿಸು, ಪಸರಿಸು; ಬಡಾಯಿಸು, ಲಂಬಿಸು; ಚದರಿಸು; ಲೆಕ್ಕಮಾಡು, ಗುಣಿಸು; ಪ್ರಕಟಿಸು; ಪ್ರಚುರಪಡಿಸು.

फैलाव, **फैलावा**, पु. **फैलावट**, स्त्री. ವಿಸ್ತಾರ; ಹರವು; ಪ್ರಚುರತೆ; ಪ್ರಕಟಣೆ; ಹೇರಳ; ಲೆಕ್ಕಾಚಾರ.

फ़ैसला, पु. ತೀರ್ಪು, ನಿರ್ಣಯ; ತೀರ್ಮಾನ, ಫೈಸಲು, ನಿಕಾಲೆ; ಮುಗಿತ.

फोंक, स्त्री. ಬಾಣದ ಪುಂಖ.

फोक, पु. ಹೀದೆ, ಹಿಪ್ಪೆ; ಚರಟ.

फोकट, वि. ಉಚಿತವಾಗಿ ಸಿಗುವ, ಬಿಟ್ಟಿ, ಪುಗಸಟ್ಟೆ, ಪುಕ್ಕಟೆ.

फोकड़, पु. ಚರಟ; ಗಷ್ಟು, ರಾಡಿ; ಮಷ್ಟು; ಕಸಕಡ್ಡಿ, ತಿಪ್ಪೆ.

फोकला, वि. ಶೂನ್ಯ; ಖಾಲಿ; ಟೊಳ್ಳು.

फोड़ना, सक्रि. ಒಡೆ, ಮುರಿ; ಭೇದಿಸು; ಸೀಳು; ಒಡಕು ಹುಟ್ಟಿಸು; ಬಯಲಿಗೆ ತರು, ಹುಲುಬಿಸು.

फोड़नी, स्त्री. ಸೀಳುವ ಅಥವಾ ಭೇದಿಸುವ ಸಲಕರಣೆ.

फोड़ा, पु. ಕುರು, ಗುಳ್ಳೆ; ಬೊಬ್ಬೆ; ಹುಣ್ಣು.

फोड़िया, स्त्री. ಗುಳ್ಳೆ, ಕುರು.

फ़ोता, पु. ಜಮೀನಿನ ತೆರಿಗೆ, ಕಂದಾಯ; ವರಿ; ವಸೂಲಿ; ತೈಲಿ; ಕೋಶ.

फ़ोतादार, पु. ಕೋಶಾಧಿಕಾರಿ; ಖಜಾನ್ಚಿ; ಸಾಹುಕಾರ.

फोला, पु. ಹತ್ತಿಯ ಹಂಜಿ; ಹಂಜಿ ಬತ್ತಿ, ಪಂಜಿಕೆ; ಬೊಕ್ಕೆ, ಗುಳ್ಳೆ.

फ़ौक़, पु. ಶ್ರೇಷ್ಠ; ಉತ್ತಮ; ಉಚ್ಚ.

फ़ौज, स्त्री. ತಂಡ, ದಳ; ಪಡೆ, ಸೈನ್ಯ,

ದಂಡು, ಸೇನೆ; ರಾಣುವೆ.

फ़ौजदार, पु. ಸೇನಾಪತಿ, ದಳಪತಿ, ಪಡೆವಳ.

फ़ौजदारी, स्त्री. ಜಗಳ, ಅಳಿದಾಳಿ, ದೊಂಬಿ; "ಕ್ರಿಮಿನಲ್ ಕೋರ್ಟು"; "ಕ್ರಿಮಿನಲ್" ವ್ಯಾಜ್ಯ.

फ़ौजी, वि. ಸೇನೆಗೆ ಸಂಬಂಧಪಟ್ಟ, ದಂಡಿನ, ರಾಣುವೆಯ.

फ़ौत, स्त्री. ಮೃತ್ಯು, ಸಾವು; ನಷ್ಟ. वि. ಸತ್ತುಹೋದ, ಗತಿಸಿದ.

फ़ौती, वि. ಸತ್ತುಹೋದ, ಫೌತಿ.

फ़ौरन, क्रिवि. ತಕ್ಷಣ, ಕೂಡಲೆ.

फ़ौलाद, पु. ಲೋಹಸಾರ, ಉತ್ತಮ ಜಾತಿಯ ಉಕ್ಕು.

फ़ौलादी, वि. ಉಕ್ಕಿನ.

फ़ौवारा, पु. = फ़व्वारा.

ब

बंक, वि. ಬಾಗಿದ; ಡೊಂಕಾದ; ವಕ್ರ. पु. ಬಾಗು; ಡೊಂಕು; ವಕ್ರತೆ; ವಕ್ರಗೆರೆ, ವಿಶೇಷವಾಗಿ ಈ ವಕ್ರಗೆರೆ), (ಉದಾ:– ५) ಅಂದರೆ ೫ ರೂಪಾಯಿ); "ಬ್ಯಾಂಕು", ಹುಂಡಿಶಾಲೆ.

बंका, वि. ಬಾಗಿದ, ಡೊಂಕಾದ.

बंकाई, **बंकुरता**, स्त्री. ವಕ್ರತೆ; ಡೊಂಕು; ಬಾಗು.

बंग, स्त्री. ಬಂಗಿ

बंगड़ी, स्त्री. ಕೈ ಬಳೆ, ಕಡಗ.

बंगला, पु. ಬಂಗ್ಲೆ; ವಸಂತ ಮಹಲು; ಚಂದ್ರಶಾಲೆ; ಒಂದು ಬಗೆ ವೀಳೆಯದೆಲೆ स्त्री. ಬಂಗಾಳ; ಬಂಗಾಳಿ ಭಾಷೆ

बंगा, पु. ಬಿದಿರಿನ ಕೊಳವೆ; ಬಾವಿಯ ಉಪ್ಪುನೀರು.

बंगी, स्त्री. ಬೊಗರಿ.

बंचना, अक्रि. ಓದಲ್ಪಡು.

बंचवाना, **बंचाना**, सक्रि. ಓದಿಸು.

बंचाई, स्त्री. ಓದುವಿಕೆ, ವಾಚನ, ಪಠನ; ಓದುವುದಕ್ಕೆ ಅಥವಾ ವಾಚನಕ್ಕೆ ಕೊಡುವ ರುಸುಂ.

बंजर, पु. ಬರಡು ನೆಲ, ಬಂಜರು.

बंजारा, पु. ಸ್ಥಳದಿಂದ ಸ್ಥಳಕ್ಕೆ ಹೋಗಿ ದವಸ ಧಾನ್ಯ ಮಾರುವವ, ಬಣಜಿಗ.

बंजरिया, स्त्री. "बंजारा" का स्त्री. रूप.

बंजारी, स्त्री. ಬಣಜಿಗನ ಹೆಂಡತಿ, ಬಣಜಿಗಿತ್ತಿ; ಒಂದು ಬಗೆ ಗುಡಾರ.

बंजिन, स्त्री. ಗ್ರಾಮದ ಹತ್ತಿರವಿರುವ ಜಮೀನು.

बंझा, स्त्री. ವಂಧ್ಯಾ ಸ್ತ್ರೀ, ಬಂಜೆ.

बंझोटी, स्त्री. ಬಂಜೆತನವನ್ನುಂಟು ಮಾಡುವ ಔಷಧ; ಬಸಿರನ್ನು ತಡೆವ ಔಷಧ, ಗರ್ಭನಿರೋಧಕ ಔಷಧ.

बंटना, अक्रि. ವಿಂಗಡಿಸಲ್ಪಡು; ಹಂಚಲ್ಪಡು; ಪಾಲಾಗು, ಬಟವಾಡೆಯಾಗು.

बंटवाना, सक्रि. ಹಂಚಿಸು; ಬಟವಾಡೆ ಮಾಡಿಸು; ವಿನಿಯೋಗ ಮಾಡಿಸು.

बंटवारा, पु. ಪಾಲು, ಹಿಸ್ಸೆ; ಹಂಚುವಿಕೆ; ಹಂಚಿಕೆ, ಬಟವಾಡೆ.

बंटवैया, **बंटैत**, पु. ವಿಂಗಡಿಸುವವ,

ಪಾಲು ಮಾಡುವವ; ವಿಭಜಿಸುವವ; ಹಂಚುವವ, ಬಟವಾಡೆ ಮಾಡುವವ

बंटा, पु. **बंटी**, स्त्री. ಸಂಪುಟ, ಡಬ್ಬ, ಡಬ್ಬಿ

बंटाई, स्त्री. ಹಂಚುವಿಕೆ, ಹಂಚಿಕೆ; ಹಸಿಗೆ; ವಾರದ ಸಾಗುವಳಿ, ಬಟಾಯಿ.

बंटाना, सक्रि. ಹಂಚು; ಪಾಲುಮಾಡು; ಬಟವಾಡೆ ಮಾಡು; ಭಾಗ ವಹಿಸು. हाथ बंटाना = ಭಾಗವಹಿಸಿ ಸಹಾಯ ಮಾಡು, ಒತ್ತಾಸೆ ಮಾಡು.

बंडा, पु. ಒಂದು ಬಗೆ ಶಾವೆಗೆಡ್ಡೆ.

बंडी, स्त्री. ಒಳ ಅಂಗಿ, ಬನೀನು.

बंडेर, बंडेरी, स्त्री. ಛಾವಣಿಯ ಬೆಂಕಟ್ಟಿನ ತೊಲೆ, ಬೆಂತೊಲೆ.

बंडोहा, पु. ಸುಳಿಗಾಳಿ; ದೆವ್ವ; ಸೈತಾನ

बंद, पु. ಬಂಧ, ಕಟ್ಟು; ಗಂಟು; ಪಟ್ಟಿ; ನವಾರ; ಲಾಳಿ; ಅಣೆಕಟ್ಟು, ಕಟ್ಟೆ, ಏರಿ; ಶರೀರದ ಸಂಧಿಸ್ಥಾನ, ಗಣಿಕೆ; ಬಂಧನ; ಸೆರೆ; ಕೈಕೋಳ; ಕಾಗದದ ಉದ್ದವಾದ ಪಟ್ಟಿ. वि. ಕಟ್ಟಲ್ಪಟ್ಟ, ಬದ್ಧ; ಕಟ್ಟಾದ; ಮುಚ್ಚಿದ; ಮುಗಿದ; ಬಂದಾದ; ಖೈದಾದ; ಬಂಧನದಲ್ಲಿರುವ; ಸೆರೆಯಲ್ಲಿರುವ. बंद होना = ಮುಚ್ಚು; ಬಂದಾಗು; ನಿಂತುಹೋಗು; ಮುಗಿ.

बंदगी, स्त्री. ಈಶ್ವರ ವಂದನೆ; ಸೇವೆ, ಕೈಂಕರ್ಯ; ದಾಸ್ಯ; ನಮಸ್ಕಾರ; ವಂದನೆ; ಸಲಾಮು.

बंदगोभी, स्त्री. ಕೋಸುಗೆಡ್ಡೆ.

बंदन, पु. ಮುಖಕ್ಕೆ ಹಚ್ಚಿಕೊಳ್ಳುವ ಒಂದು ಬಗೆ ಚೂರ್ಣ, ಅಂಗಲೇಪನ.

बंदनवार, पु. ವಂದನಮಾಲೆ, ತೋರಣ

बंदना, अक्रि. ವಂದಿಸು, ನಮಸ್ಕರಿಸು.

बंदर, पु. ವಾನರ, ಕಪಿ, ಮಂಗ, ಕೋತಿ; ರೇವು, ಬಂದರು; ನಗರ, ಪಟ್ಟಣ; ದೊಡ್ಡ ಅಂಗಡಿ, ಮಂಡಿ.

बंदरखत, पु. ಮಾಯದಿರುವ ಹುಣ್ಣು, ನಾಡೀ ವ್ರಣ.

बंदरगाह, स्त्री. (पु.) ರೇವು, ಬಂದರು.

बंदरिया, बंदरी, स्त्री. ಹೆಣ್ಣು ಕಪಿ, ಹೆಣ್ಣು ಕೋತಿ.

बंदवान, पु. ಸೆರೆಮನೆಯ ಅಧಿಕಾರಿ, "ಜೈಲರ್".

बंदसाल, पु. ಬಂದೀಖಾನೆ, ಸೆರೆಮನೆ.

बंदह, बंदा, पु. ಅಡಿಯಾಳು, ಗುಲಾಮ; ದಾಸ, ಸೇವಕ.

बंदापरवर, पु. ತನ್ನ ಆಶ್ರಿತರನ್ನು ಕಾಪಾಡುವವನು.

बंदिया, स्त्री. ಜಡೆಬಿಲ್ಲೆ.

बंदिश, स्त्री. ಕಟ್ಟುವಿಕೆ, ಕಟ್ಟು; ಸುಳ್ಳು ಮಾತು; ಹೂಡುವಿಕೆ, ಹೂಟ; ಹಂಚಿಕೆ, ಯೋಜನೆ, ಹರುವು; ಸಂಚು.

बंदी, स्त्री. ಒಂದು ಆಭರಣ; ಚಿಕ್ಕಅಂಗಿ; ದಾಸಿ. पु. ವಂದಿ ಮಾಗಧ, ಕೀರ್ತನಕಾರ; ಸೆರೆಯಾಳು, ಬಂದೀವಾನ, ಕೈದಿ.

बंदीख़ाना, बंदीघर, पु. ಬಂದೀಖಾನೆ, ಸೆರೆಮನೆ, ಕಾರಾಗೃಹ, ತುರಂಗ, ಜೈಲು.

बंदीवान, पु. ಬಂದೀವಾನ, ಕೈದಿ, ಸೆರೆಯಾಳು.

बंदूक़, पु. ಬಂದೂಕು, ತುಪಾಕಿ.

बंदूक़ची, पु. ತುಪಾಕಿ ಹಾರಿಸುವವ.

बंदूहा, पु. ಸುಂಟರಗಾಳಿ, ತುಫಾನು.

बंदोइ, स्त्री. ದಾಸಿ, ಸೇವಕಿ.

बंदोबस्त, पु. ಕಟ್ಟು ಕಾವಲು; ಬಂದು ಕಟ್ಟು; ವ್ಯವಸ್ಥೆ; ವಿಲೇವಾರಿ; ಜಮೀನಿನ ಕಂದಾಯದ ನಿರ್ಧಾರ, ಮುಗುವಳಿ, ತೀರುವೆ; ಕಂದಾಯವನ್ನು ನಿರ್ಧರಿಸುವ ಸರ್ಕಾರಿ ಇಲಾಖೆ

बंध, पु. ಬಂಧನ, ಕಟ್ಟು; ಅಣೆಕಟ್ಟು; ಕಟ್ಟೆ, ಏರಿ; ಗ್ರಾಮದ ಎಲ್ಲೆ, ಗಡಿ; ಗಿರವಿ, ಅಡವು, ಒತ್ತೆ.

बंधक, पु. ಅಡವು, ಗಿರವಿ, ಒತ್ತೆ, ದೀಡು; ಈಡು, ಅಡಮಾನ; ಅಳ್ವೊತ್ತೆ, ಓಲು

बंधन, पु. ಕಟ್ಟುವಿಕೆ; ಕಟ್ಟು; ಬಂಧನ; ತಡೆ; ಸೆರೆ, ಕಾರಾಗೃಹ; ಶರೀರದ ಸಂಧಿ ಸ್ಥಾನ.

बंधना, अक्रि. ಕಟ್ಟಲ್ಪಡು; ಕಟ್ಟು ಬೀಳು; ಬದ್ಧನಾಗು. पु. ಕಟ್ಟುವ ದಾರ, ಪಾಶ.

बंधनी, स्त्री. ಕಟ್ಟು; ಪಾಶ; ಆವರಣ ಚಿಹ್ನೆ, ಕಂಸ.

बंधवाना, सक्रि. बांधना का प्रे. रूप.

बंधाई, स्त्री. ಕಟ್ಟುವಿಕೆ; ಪುಸ್ತಕವನ್ನು ಹೊಲಿದು ರಟ್ಟು ಕಟ್ಟುವಿಕೆ; ಬೈಂಡು ಮಾಡುವಿಕೆ; ಕಟ್ಟುವ ಕೂಲಿ; ಪುಸ್ತಕದ ರಟ್ಟು ಕಟ್ಟುವುದರ ಕೂಲಿ.

बंधान, पु. ನಿಯಮ; ಕಟ್ಟಳೆ; ಕಟ್ಟೆ; ವರ್ಷಾಶನ; ಪೆನ್ಷನ್, ಪಿಂಚಣಿ.

बंधाना, अक्रि. ಧರಿಸು; ಕಟ್ಟಿಸು; ಬಿಗಿಸು; ಬದ್ಧನಾಗಿಸು.

बंधानी, पु. ಕಲ್ಲು ಮೊದಲಾದುವನ್ನು ಹೊರುವವ; ಕೈದಿ, ಬಂದೀವಾನ; ಗುಂಡು ಹಾರಿಸುವವ.

बंधु, बंधेवा, पु. ಬಂಧು, ನೆಂಟ.

बंधुआ, पु. ಬಂದೀವಾನ, ಕೈದಿ.

बंधुक, पु. ಬಂದೀವಾನ, ಮಲ್ಲಿಗೆ.

बंधुता, स्त्री. **बंधुत्व**, पु. ಬಾಂಧವ್ಯ.

बंधूर, पु. ಧಾನ್ಯ ಕೊಳ್ಳುವಿಕೆ.

बंधेज, पु. ಕಟ್ಟಳೆ; ಕಟ್ಟು, ತಡೆ; ಪ್ರತಿಬಂಧ; ಗಟ್ಟಿ, ದೃಢತೆ; ಜಿಪುಣತನ.

बंपुलिस, स्त्री. ಸಾರ್ವಜನಿಕ ಕಕ್ಕಸು.

बंब, पु. ಸಿಡಿಮದ್ದಿನ ಗುಂಡು, ಬಾಂಬು; ಕಂದಾಯದ ಬಾಕಿದಾರ.

बंबा, पु. ಬಾವಿ; ನೀರೆಳೆವ ಯಂತ್ರ, ಜಲೋತ್ಥಾಪಕ, "ಪಂಪು", ಬುಗ್ಗೆ.

बंबाना, अक्रि. "ಅಂಬಾ" ಎಂದು ಕೂಗು (ಹಸುಗಳು).

बंबीठा, पु. ಹುತ್ತ, ವಲ್ಮೀಕ.

बंबू, पु. ಗಾಂಜಾ ಮೊದಲಾದುವನ್ನು ಸೇದಲು ಉಪಯೋಗಿಸುವ ಬೊಂಬಿನ ನಳಿಗೆ; ಬೊಂಬು.

बंस, पु. ವಂಶ; ಬಂಬು.

बंसी, स्त्री. ಪಿಳ್ಳಂಗೋವಿ, ಕೊಳಲು; ಮೀನು ಹಿಡಿಯುವ ಗಾಳ.

बक, पु. ಬಕ, ಕೊಕ್ಕರೆ. स्त्री. ಹರಟೆ, ಒದರಾಟ.

बकचा, पु. ಮೂಟೆ ಕಟ್ಟುವ ಬಟ್ಟೆ; ಚಿಕ್ಕ ಮೂಟೆ, ಭಾಂಗಿ.

बकझक, बकबक, स्त्री. ಲೊಡಲೊಡ ಮಾತಾಡುವಿಕೆ, ಒದರಾಟ, ಹರಟೆ.

बकतर, पु. ಯುದ್ಧ ಕವಚ, ಜಿಲಕತ್ತು.

बकतरी, वि. ಯುದ್ಧಕವಚ ಧರಿಸಿದವ.
बकना, अक्रि. ವಟವಟ ಮಾತಾಡು, ಒದರಾಡು, ಜರಚು; ಹರಟು, ಗಳಪು, ಬಡಬಡಿಸು.
बकबकाना, अक्रि. ಹರಟು, ಗಳಪು.
बक़र, पु. ಎತ್ತು; ಹೋರಿ.
बकरा, पु. ಗಂಡಾಡು, ಹೋತ.
बक़रा, स्त्री. ಗೋವು. ಹಸು, ಆಕಳು.
बकरी, स्त्री. ಆಡು, ಮೇಕೆ.
बक़रीद, पु. ಮುಸಲ್ಮಾನರ ಒಂದು ಹಬ್ಬ, ಬಕ್ರೀದ್ ಹಬ್ಬ.
बकला, पु. ತೊಗಟೆ, ಮರದ ಪಟ್ಟೆ, ತಿಗುಡು; ಸಿಪ್ಪೆ.
बकवाद, बकवास, स्त्री. ಸುಮ್ಮನೆ ಮಾತಾಡುವಿಕೆ, ಒದರಾಟ; ಹರಟೆ, ಪಟ್ಟಾಂಗ; ರಗಳೆ, ಗಜರಗಳೆ.
बकवादी, बकवासी, बकवाहा, पु. ಹರಟೆಗಾರ, ಗಳಪ, ವಾಚಾಲ.
बकसा, वि. ಒಗರಾದ, ತಿಕ್ತ.
बकसाहट, स्त्री. ಒಗರು, ತಿಕ್ತತೆ.
बकसुआ, पु. ಕೊಂಡಿ, ಬಕ್ಲೀಸು.
बका, स्त्री. ಅಳುವಿಕೆ; ವಿಲಾಪ.
बकाना, सक्रि. "बकना" का प्रे. रूप.
बकायन, पु. ಒಂದು ಮರ.
बक़ाया, पु. ಬಾಕಿ, ಶೇಷ, ಉಳಿತಾಯ.
बकारा, पु. ಮುಂದೆ ಹೋಗುವವ; ದೂತ; ಪ್ರಯಾಣಿಕ; ಬಾಯಿಂದ ಹೇಳಿ ಕಳುಹಿಸಿದ ವರ್ತಮಾನ.
बकारी, स्त्री. ಬಾಯಿ ಮಾತು.
बकावल, पु. ಅಡಿಗೆಯವ, ಬಾಣಸಿಗ.
बकावली, स्त्री. ಒಂದು ಬಗೆ ಹೂ.
बक़िया, स्त्री. ಚೂರಿ, ಚಾಕು.
बक़िया, पु. ಬಾಕಿ, ಶೇಷ.
बकुचा, पु. ಮೂಟೆ, ಗಂಟು.
बकुची, स्त्री. ಚಿಕ್ಕ ಮೂಟೆ, ಗಂಟು.
बकुल, पु. ಬಕುಲ ಮರ, ಪಗಡೆ ಮರ, ರಂಜ.
बकैयां, पु. ತೆವಳುವಿಕೆ.
बकोट, स्त्री. ಚಿವುರುವಿಕೆ, ಕೆದಕುವಿಕೆ.
बकोटना, अक्रि. ಚಿವುರು; ಕೆದಕು; ಚಿಗಟು.
बक़ौल, क्रिवि. ವಚನಕ್ಕನುಸಾರವಾಗಿ, ಮಾತಿನ ಮೇರೆಗೆ.
बक्कल, पु. = बकला.
बक़्क़ाल, पु. ಕಿರಾಣಿ ಅಂಗಡಿಯವ, ವರ್ತಕ.
बक़्क़ालिन, स्त्री. बक़्क़ाल का स्त्री. रूप.
बक्की, पु. ಹರಟೆಗಾರ, ವಾಚಾಲ, ಗಳಪ. स्त्री. ಒಂದು ಬಗೆ ಛತ್ತ.
बख, पु. ಪ್ರಪಂಚ, ಜಗತ್ತು.
बखर, पु. ಒಂದು ಬಗೆ ನೇಗಿಲು; ಗೃಹ, ಮನೆ, ಹಟ್ಟಿ; ಅಂಗಳ; ಕೊಟ್ಟಿಗೆ, ರೊಪ್ಪ, ದೊಡ್ಡಿ.
बख़रा, पु. ಭಾಗ, ಪಾಲು, ಹಿಸ್ಸೆ.
बखरिया, पु. ಮನೆಯವ, ಗೃಹಸ್ಥ.
बखरी, स्त्री. ಮನೆ; ಗುಡಿಸಲು, ಹಟ್ಟಿ, ಜೋಪಡಿ; ಹಗೇವು, ಕಣಜ.
बख़री, बख़ैत, पु. ಪಾಲುಗಾರ, ಹಿಸ್ಸೆದಾರ.
बखान, पु. ವರ್ಣನೆ; ವಿವರಣೆ.

बखानना, सक्रि. ವರ್ಣಿಸು, ಬಣ್ಣಿಸು; ಪ್ರಶಂಸಿಸು; ಜರೆ, ಏಡಿಸು.

बखार, पु. **बखारी**, स्त्री. ಉಗ್ರಾಣ, ಕಣಜ, ಪಗೇವು.

बखिया, पु. ಒಂದು ಬಗೆ ಹೊಲಿಗೆ, ಕವುದಿ ಹೊಲಿಗೆ.

बखियाना, सक्रि. ಹೊಲಿ, ಕವುದಿ ಹೊಲಿ

बखी, स्त्री. ಸೊಂಕುಳಿನ ಕೆಳಭಾಗ; ಪಾರ್ಶ್ವ, ಮಗ್ಗಲು.

बखीर, स्त्री. ಪರಮಾನ್ನ, ತುಯ್ಯಲ್.

बख़ील, वि. ಲೋಭಿ, ಕೃಪಣ, ಜುಗ್ಗ.

बख़ीली, स्त्री. ಜಿಪುಣತನ, ಕಾರ್ಪಣ್ಯ.

बख़ूबी, क्रिवि. ಚೆನ್ನಾಗಿ, ಸೊಗಸಾಗಿ.

बख़ूर, पु. ಸುವಾಸನೆ, ಪರಿಮಳ.

बखेड़ा, पु. ಜಗಳ, ತಂಟೆ; ದೊಂಬಿ; ರಗಳೆ; ಉಪದ್ರವ.

बखेड़िया, वि. ಜಗಳಗಂಟ, ತಂಟೆಖೋರ; ಉಪದ್ರವಿ.

बखेर, स्त्री. ಎಸೆಯುವಿಕೆ; ಚೆಲ್ಲುವಿಕೆ.

बखेरना, सक्रि. ಚೆಲ್ಲು; ಚದರಿಸು.

बख़ैर, क्रिवि. ಕ್ಷೇಮವಾಗಿ, ಕುಶಲವಾಗಿ.

बखोरना, सक्रि. ಹೂಡು, ಲಗಾಯಿಸು

बख़्त, पु. ಭಾಗ್ಯ, ಅದೃಷ್ಟ.

बख़्तर, पु. ಯುದ್ಧಕವಚ, ಜಿಲಕತ್ತು.

बख़्तावर, वि. ಅದೃಷ್ಟವಂತ, ಭಾಗ್ಯಶಾಲಿ.

बख़्श, पु. ದಾನ; ಕೊಡುವಿಕೆ; ಮಾಫಿ

बख़्शना, सक्रि. ದಯಪಾಲಿಸು, ಕರುಣಿಸು, ಕೊಡು; ಕ್ಷಮಿಸು, ಮನ್ನಿಸು.

बख़्शवाना, **बख़्शाना**, सक्रि. "**बख़्शना**" का प्रे. रूप.

बख़्शिश, स्त्री. ದಾನ, ದತ್ತಿ, ಕೊಡುಗೆ; ಬಹುಮಾನ, ಬಕ್ಷೀಸು, ಇನಾಮು; ಮಾಫಿ. ಕ್ಷಮೆ; ಔದಾರ್ಯ.

बख़्शी, स्त्री. ಕೊಡುವವ, ದಾತ; ಸಂಬಳ ಕೊಡುವ ಅಧಿಕಾರಿ; ಬಕ್ಷಿ.

बग, पु. ಕೊಕ್ಕರೆ, ಬಕಪಕ್ಷಿ.

बगई, स्त्री. ನಾಯಿ ತೊಣಚಿ.

बगछुट, **बगटुट**, क्रिवि. ಸರಸರನೆ, ಬಲು ವೇಗವಾಗಿ; ದುಡುಕಿನಿಂದ, ಅವಿಚಾರವಾಗಿ.

बगड़ा, पु. ದುಃಖ, ಕಷ್ಟ; ಠಕ್ಕು, ಮೋಸ.

बगड़िया, पु. ಠಕ್ಕ, ಮೋಸಗಾರ.

बगदना, अक्रि. ತಿರುಗು; ಬೆನ್ನು ತೋರಿಸಿ ಓಡು; ಹಾಳಾಗು, ಕೆಡು.

बगदाना, सक्रि. ತಿರುಗಿಸು; ಉರುಳಿಸು; ಸದೆ ಬಡಿ; ಹಾಳು ಮಾಡು; ಕೆಡಿಸು.

बगनी, स्त्री. ಒಂದು ಬಗೆ ಹುಲ್ಲು.

बगमेल, पु. ಸಮಸಮ ಮುಂದುವರಿಯುವಿಕೆ, ಎಣೆ.

बग़ायाती, स्त्री. ತೋಟಕ್ಕೆ ಅರ್ಹವಾದ ಜಮೀನು, ಬಾಗಾಯಿತು; ತೋಟದ ಫಸಲು; ತೋಟಗಳ ಮೇಲಿನ ತೆರಿಗೆ.

बगरना, अक्रि. ಹರಡು, ಚದರು.

बगराना, सक्रि. ಚೆಲ್ಲು, ಚದರಿಸು.

बग़ल, स्त्री. ಸೊಂಕುಳು, ಕಕ್ಷ; ತೆಕ್ಕೆ; ಪಾರ್ಶ್ವ, ಪಕ್ಕ; ಮಗ್ಗುಲು, ಬಗಲು, ಬಾಜು; ಅಂಗಿಯ ಕಂಕುಳು ಪಟ್ಟಿ.

बग़लबजाना = ಹರ್ಷಿಸು, ಸಂತೋಷಪಡು.

बग़लगीर, वि. ಪಕ್ಕದಲ್ಲಿರುವವ, ತಬ್ಬಿಕೊಳ್ಳುವವ; ಆಲಿಂಗಿಸುವವ.

बगलबंदी, स्त्री. ಒಂದು ಬಗೆ ಗುತ್ತವಾದ ಅಂಗಿ, ಬಗಲಂಗಿ.

बगला, पु. ಕೊಕ್ಕರೆ; ನಾರಾಯಣ ಪಕ್ಷಿ. बगला भगत = ಬಕ ವಿಡಂಬನ ಮಾಡುವವ; ಆಷಾಢಭೂತಿ; ಕಪಟ ಭಕ್ತಿಯುವ.

बगलाना, बगलियाना, अक्रि. ಪಕ್ಕಕ್ಕೆ ಸರಿ, ಮಗ್ಗುಲಿಗೆ ಹೋಗು. सक्रि. ಪಕ್ಕಕ್ಕೆ ಸರಿಸು, ಮಗ್ಗುಲಿಗೆ ಮಾಡು.

बग़ली, वि. ಪಕ್ಕದ, ಬಗಲಿನ, ಮಗ್ಗುಲಿನ. स्त्री. ಸೂಜಿ ದಾರ ಇವುಗಳಿಡುವ ಚೀಲ, ದರ್ಜಿಯವರ ಸಂಚಿ; ಅಂಗಿಯ ಕಂಕುಳು ಪಟ್ಟಿ.

बगहंस, पु. ಕಲಹಂಸ.

बगार, पु. ಕೊಟ್ಟಿಗೆ, ರೊಪ್ಪ, ದೊಡ್ಡಿ.

बगारना, अक्रि. ಹರಡಿಸು, ಚದರಿಸು

बग़ावत, स्त्री. ದಂಗೆ, ಬಂಡಾಯ, ರಾಜದ್ರೋಹ; ಅತ್ಯಾಚಾರ; ಲೂಟಿ.

बग़िया, बग़ीचा, पु. **बग़ीची**, स्त्री. ಉಪವನ, ಉದ್ಯಾನವನ, ನಂದನವನ; ತೋಟ.

बगुला, पु. = बगला.

बगूला, पु. ಸುಳಿಗಾಳಿ, ಚಕ್ರವಾತ.

बगेरी, स्त्री. ಒಂದು ಪಕ್ಷಿ.

बग़ैर, क्रिवि. ಅಲ್ಲದೆ, ಹೊರತಾಗಿ, ವಿನಾ, ರಹಿತ.

बग्घी, स्त्री. ಒಂದು ಬಗೆ ಕುದುರೆ ಗಾಡಿ, ಪೆಟ್ಟಿಗೆ ಗಾಡಿ; ಸಾರೋಟ್.

बघनहाँ, पु. **बघनहीं**, स्त्री. ಹುಲಿ ನಖ; ಒಂದು ಬಗೆ ಆಯುಧ; ಒಂದು ಆಭರಣ.

बघार, पु. ಒಗ್ಗರಣೆ.

बघारना, सक्रि. ಒಗ್ಗರಿಸು, ತಾಳಿಸು; ಅಧಿಕಪ್ರಸಂಗ ಮಾಡು.

बघी, स्त्री. ಕುರುಡು ನೊಣ.

बघेरी, स्त्री. = बगेरी.

बघेल, पु. ರಾಜಪೂತರ ಒಂದು ಜಾತಿ.

बघेला, पु. ಹುಲಿ ಮರಿ.

बच, पु. ವಚೆ, ಬಜೆ, ಉಗ್ರಗಂಧೆ.

बचकच, पु. (= कचबच) ಮಕ್ಕಳು ಮರಿ.

बचका, पु ಒಂದು ಪಣ್ಯಾರ.

बचकाना, वि. ಹುಡುಗರ, ಕಿರಿಯ. पु. ನಾಟ್ಯವಾಡುವ ಹುಡುಗ; ಮಕ್ಕಳ ಜೋಡು.

बचकानी, स्त्री ನಾಟ್ಯವಾಡುವ ಹುಡುಗಿ

बचत, स्त्री. ಉಳಿವು, ಉಳಿದದ್ದು, ಉಳಿತಾಯ; ಶೇಷ, ಬಾಕಿ; ಸಿಲ್ಕು; ಲಾಭ.

बचती, स्त्री. ಉಳಿತಾಯ; ಬಾಕಿ; ಮಿಗಿಲು, ಮಿಗತೆ.

बचन, पु. ವಚನ, ಮಾತು.

बचना, अक्रि. ಬಾಕಿಯಾಗು; ಮಿಗು; ಉಳಿ; ಬದುಕು; ತಪ್ಪಿಸಿಕೊಳ್ಳು; ದೂರವಾಗಿರು सक्रि. ವಚಿಸು, ಹೇಳು.

बचपन, पु. ಹುಡುಗತನ, ಬಾಲ್ಯ;

ಚಿಕ್ಕಂದು, ಹುಡುಗಂದು.

बचवैया, पु. ಕಾಪಾಡುವವ, ರಕ್ಷಕ.

बचाना, सक्रि. ಮಿಗಿಸು; ಉಳಿಸು; ಕಾಪಾಡು, ಕಾಯು; ಬದುಕಿಸು; ತಪ್ಪಿಸು, ಬಚಾಯಿಸು; ಬಚ್ಚು; ದೂರಮಾಡು.

बचापा, बचवा, पु. ಬಿಡುಗಡೆ, ಖುಲಾಸೆ.

बचाव, पु. ಉಳಿಯುವಿಕೆ, ಉಳಿವು, ಬಚಾವು; ಕಾಪು; ರಕ್ಷಣೆ; ಬಿಡುಗಡೆ

बची-खुची, वि. ಕಳೆದುಳಿದ, ಇದ್ದಬದ್ದ

बचैया, वि. ಬದುಕುವವ; ಉಳಿಯುವವ

बच्चा, पु. ಮಗು, ಕೂಸು, ಹಸುಳೆ, ಮರಿ.

बच्चादान, पु. ಗರ್ಭಾಶಯ.

बच्ची, स्त्री. ಹೆಣ್ಣು ಮಗು, ಮರಿ.

बच्चू, पु. ಮಗುವನ್ನು ಕರೆಯುವ ಮುದ್ದುಮಾತು, "ಮರಿ", "ಪುಟ್ಟಾರಿ"

बच्छ, पु. ವತ್ಸ, ಕಂದ, ಕರು.

बच्छा, बछड़ा, बछरा, पु. ಹಸುವಿನ ಕರು, ಕಂದಿ.

बछड़ी, स्त्री. ಹೆಣ್ಣು ಕರು, ಕಡಸು.

बछना, सक्रि. ಆಯು, ಚುನಾಯಿಸು

बछनाग, पु. ವತ್ಸನಾಭ, ಬಚನಾಗ.

बछवा, पु. ಕುದುರೆ ಮರಿ.

बछिया, स्त्री. ಹೆಣ್ಣು ಕರು, ಕಡಸು.
बछिया का ताऊ = ಎಮ್ಮೆ ತಮ್ಮ, ಅಣ್ಣಪ್ಪ.

बछेड़ा, बछेरा, पु. **बछेड़ी**, स्त्री. ಕುದುರೆ ಮರಿ.

बछोह, स्त्री. ಕೇರುವಿಕೆ; ತೂರುವಿಕೆ; ಸಾಣಿಸುವಿಕೆ.

बजंतरी, बजंत्री, बजंतर, बजत्तरी, पु. ವಾದ್ಯ ಬಾಜಿಸುವವ, ವಾದನಕಾರ.

बजट्टी, स्त्री. ಹೆಂಗಸರ ಒಂದು ಆಭರಣ.

बजड़ा, पु. ದೋಣಿ, ಓಡ.

बजना, अक्रि. ಶಬ್ದವಾಗು, ಧ್ವನಿಸು; (ಘಂಟೆ) ಬಡಿ, ಮೊಳಗು; ಪ್ರಕಟವಾಗು; ಹಠ ಹಿಡಿ, ಚಂಡಿಸು.

बजनियाँ, पु. (स्त्री.) = बजंत्री.

बजनी, स्त्री. ಜಗಳ; ದೊಂಬಿ.

बजबजाना, अक्रि. ಉಕ್ಕು, ಕುದಿ; ಹಳಸು, ಕೊಳೆ.

बजमारा, वि. ಸಿಡಿಲು ಬಡಿದವ.

बजर, बज्जर, वि. ಗಟ್ಟಿಯಾದ, ಬಲುಗಟ್ಟಿಯಾದ; ಕಲ್ಲಿನಂಥ, ವಜ್ರದಂಥ; ಕಷ್ಟತರವಾದ. पु. ವಜ್ರ; ವಜ್ರಾಘಾತ; ಸಿಡಿಲು.

बजरबट्टू, पु. ಒಂದು ಹಣ್ಣು. (ಇದರ ಬೀಜಗಳ ಮಾಲೆಯನ್ನು ಮಕ್ಕಳಿಗೆ ರಕ್ಷೆಯಾಗಿ ಉಪಯೋಗಿಸುತ್ತಾರೆ).

बजरा, पु. ದೋಣಿ, ಓಡ; ಜೋಳ.

बजरी, स्त्री. ಜೋಳದಲ್ಲಿ ಒಂದು ಬಗೆ, ಕಿರುಜೋಳ; ಇಟ್ಟಿಗೆ ಚೂರು, ಜಲ್ಲಿ; ಮರಳು.

बज़ाला, पु. ಹಾಸ್ಯ, ವಿನೋದ.

बजवाना, सक्रि. बजाना का प्रे. रूप.

बजवैया, पु. ಬಾರಿಸುವವ.

बजा, वि. ಉಚಿತ, ಯುಕ್ತ, ತಕ್ಕ; ಸರಿ.
बजा लाना = ಪರಿಪಾಲಿಸು, ನೆರವೇರಿಸು

बज़ा, पु. ಪಾಪ; ಅಪರಾಧ, ತಪ್ಪು.

बज़ाकार, पु. ತಪ್ಪಿತಸ್ಥ, ಅಪರಾಧಿ;

ಪಾಪಿ, ಪಾಪಿಷ್ಠ.

बज़ाज़, पु. ಜವಳಿ ವ್ಯಾಪಾರಿ, ಜವಳಿ ಕಾರ, ದೂಸಿಗ.

बज़ाज़ा, पु. ಜವಳಿ ಅಂಗಡಿ, ಜವಳಿ ಪೇಟೆ.

बज़ाज़िन, स्त्री. बज़ाज़ का स्त्री. रूप.

बज़ाज़ी, स्त्री. ಜವಳಿ ವ್ಯಾಪಾರ.

बजाना, सक्रि. ಬಡಿದು ಶಬ್ದ ಮಾಡು; ಬಾರಿಸು; ಬಾಜಿಸು, ನುಡಿಸು, ವಾದನ ಮಾಡು; ಮೊಳಗಿಸು; ನೆರವೇರಿಸು; ಪಾಲಿಸು; ನಡೆಸು.

बजाय, अव्य. ಸ್ಥಾನದಲ್ಲಿ; ಪ್ರತಿಯಾಗಿ, ಬದಲಾಗಿ.

बजिन्स, क्रिवि. ಹಾಗೆಯೇ, ತದ್ರೂಪ; ವಿವರವಾಗಿ.

बजुज़, क्रिवि. ಇದಲ್ಲದೆ, ಹೊರತಾಗಿ.

बजुल्ला, पु. ತೋಳುಬಂದಿ, ಅಂಗದ, ಕೇಯೂರ.

बजे, क्रिवि. (ಇಂಥಿಷ್ಟು) ಘಂಟೆಗೆ, ತಾಸಿಗೆ. ३ बजे = ಮೂರು ಘಂಟೆಗೆ.

बजर, **बज्र**, पु. ವಜ್ರ; ವಜ್ರಾಘಾತ, ಸಿಡಿಲು. बजर बहरा = ಬಲು ಕೆಪ್ಪ, ಕಿವುಡ ಅಂದರೆ ಕಿವುಡ, ಅತಿ ಕಿವುಡ.

बज़्ज़ाज़, पु. = बज़ाज़.

बज़्म, स्त्री. ಸಭೆ, ಸದಸ್ಸು; ಪಾನಗೋಷ್ಠಿ.

बझना, अक्रि. ಸಿಕ್ಕಿಕೊಳ್ಳು, ಸಿಕ್ಕು; ಕಟ್ಟುಬೀಳು.

बझाना, सक्रि. ಸಿಕ್ಕಿಸು, ಸಿಕ್ಕಿಬೀಳಿಸು.

बझाव, पु. **बझावट**, स्त्री. ಸಿಕ್ಕು, ಗೋಜು, ತೊಡಕು.

बट, पु. ವಟವೃಕ್ಷ; ವಡೆ; ಗುಂಡುಕಲ್ಲು; ಕವಡೆ; ತೂಕದ ಬಟ್ಟು; ದಾರದ ಸುಲಿಕೆ; ಮುರುಕು; ಹೆಣಿಗೆ; ಚರ್ಮದ ಸುಕ್ಕು, ವಲಿ; ಕರುಳು; ಬಾಟೆ, ಹಾದಿ; ಹಿಸ್ಸೆ, ಪಾಲು; ವಾರದ ಸಾಗುವಳಿ.

बटई, स्त्री. ಹೊಸೆಯುವಿಕೆ; ಸರಿಗೆ ಎಳೆಯುವಿಕೆ, ಲಾವ, ಲಾವಕ್ಕಿ.

बटखरा, पु. ತೂಕದ ಬಟ್ಟು.

बटन, पु. ಹೊಸೆಯುವಿಕೆ, ನುಲಿಕೆ; ಅಂಗಿಯ ಗುಂಡಿ; ಬಟನು.

बटना, सक्रि. ಹೊಸೆ, ನುಲಿಚು; ತಿರಿಚು, ತಿರುವು; ಹಂಚು; ಸಂಪಾದಿಸು; ಗಳಿಸು. अक्रि. ಹಂಚಲ್ಪಡು; ಅರೆಯಲ್ಪಡು; ಹೊಸೆಯಲ್ಪಡು. पु. ಲೇಪನ, ತೈಲ, ಲೇಪ; ನೂಲು ಹೊಸೆಯುವ ಯಂತ್ರ

बटनिया, पु. ಪಾಲುಗಾರ, ಹಿಸ್ಸೆದಾರ.

बटपार, **बटमार**, पु. ದಾರಿ ಬಡಕ, ದಾರಿಗಳ್ಳ.

बटपारी, **बटमारी**, स्त्री. ಹಾದಿಗಳ್ಳತನ, ದರೋಡೆ.

बटला, पु. ತಪ್ಪಲೆ, ಬೋಸಿ.

बटली, **बटलोई**, **बटलोही**, स्त्री. ತಪ್ಪಲೆ, ಬೋಸಿ, ಡಬರಿ.

बटवाना, सक्रि. ಹೊಸೆಯಿಸು; ಹಂಚಿಸು; ಪಾಲು ಮಾಡಿಸು.

बटवार, **बटवाल**, पु. ರಸ್ತೆಯ ತೆರಿಗೆ ವಸೂಲು ಮಾಡುವವ.

बटवारा, पु. = बंटवारा.

बटा, पु. ಉಂಡೆ; ಗೆಡ್ಡೆ; ಗುಂಡು; ಹಾದಿಹೋಕ; ಬಿದಿರಿನ ಡಬ್ಬಿ.

बटाई, स्त्री. ದಾರ ಹೊಸೆಯುವುದರ ಕೂಲಿ.

बटाऊ, पु ಹಾದಿಹೋಕ, ಪಥಿಕ; ದಾರಿಬಡಕ.

बटाना, अक्रि. ನಿಂತುಹೋಗು, ಬಂದಾಗು. सक्रि. = बंटाना.

बटिया, स्त्री. ಗುಂಡುಕಲ್ಲು; ತೂಕದ ಕಲ್ಲು, ಬಟ್ಟು; ಚಿಕ್ಕಬಾಟೆ, ಕಾಲುದಾರಿ.

बटुआ, पु. ಹಣದ ಚೀಲ, ತೈಲಿ; ದೊಡ್ಡ ಬೋಸಿ, ತಪ್ಪಲೆ.

बटुरना, अक्रि. ಮುದುರಿಕೊ; ಸೇರಿಕೊ; ಒಂದಾಗು; ಉಡುಗು, ಸೇದಿಕೊ.

बटैथ, पु. ಪಾಲುಗಾರ, ಹಿಸ್ಸೆದಾರ.

बटेर, स्त्री. ಲಾವಕ್ಕಿ, ಬುರಲಿ ಹಕ್ಕಿ

बटेस, पु. ರಸ್ತೆ, ದಾರಿ.

बटोर, पु. ಗುಂಪು; ಹಿಂಡು; ಸಮೂಹ; ರಾಶಿ.

बटोरन, पु. ಧಾನ್ಯವನ್ನು ಒಟ್ಟು ಸೇರಿಸುವಿಕೆ; ರಾಶಿ, ಕುಪ್ಪೆ.

बटोरना, सक्रि. ರಾಶಿಮಾಡು; ಒಟ್ಟುಗೂಡಿಸು, ಸಂಗ್ರಹಿಸು, ಶೇಖರಿಸು; ಬಾಚು; ಉಡುಗಿಸು; ಮುರುಟಿಸು.

बटोही, पु. ಹಾದಿಹೋಕ, ಮಾ[illegible]ಸ್ಥ.

बट्ट, पु. ಉಂಡೆ, ಗುಂಡು

बट्टा, पु. ಸೋಡಿ, ಉತ್ತಾರ; ಸೂಟು, ವಟ್ಟ; ಕಸರು; ಕಡಮೆ, ಕೊರಗು; ನಷ್ಟ; ಗುಂಡುಕಲ್ಲು; ಗುಂಡು; ಗಾರಡಿಕಾರನು ಚೀಲದಿಂದ ತೆಗೆದು ಪ್ರದರ್ಶಿಸುವ ಗೋಲಿಗಳು; ನಗನಟ್ಟುಡುವ ಪೆಟ್ಟಿಗೆ; ಸಂಪುಟ, ಕರಂಡ. **बट्टा लगाना** = ಕುಂದುಬೀಳು; ಕಳಂಕ ಹತ್ತು.

बट्टा-खाता, पु. ಹೋಕುಬಾಕಿ ಲೆಕ್ಕ.

बट्टा-ढाल, वि. ಸಮತಲವಾದ, ಸಪಾಟ, ಮಟ್ಟಸವಾದ.

बट्टी, स्त्री. ಮೇಣದ ಬತ್ತಿ; ಬಟ್ಟು; ಗುಂಡುಕಲ್ಲು; ಗೋಲಿ, ಗುಳಿಗೆ.

बट्टू, पु. ಒಂದು ಬಗೆ ಹುರುಳಿಕಾಯಿ, = बजरबट्टू.

बट्टेबाज़, पु. ಗಾರುಡಿಕಾರ, ಜಾಲಗಾರ

बड़, स्त्री. ಬಡಬಡಿಸುವಿಕೆ, ಒದರಾಟ.

बड़का, वि. ದೊಡ್ಡ, ಭಾರಿ.

बड़गांव, पु. ದೊಡ್ಡ ಊರು.

बड़पेटा, वि. ದೊಡ್ಡ ಹೊಟ್ಟೆಯುವ, ಲಂಬೋದರ; ತಿಂಡಿಬಾಕ; ಅತ್ಯಾಶೆಗಾರ.

बड़पना, **बड़प्पन**, पु. ದೊಡ್ಡತನ; ಹೆಚ್ಚುಗಾರಿಕೆ; ಹಿರಿಮೆ.

बड़बड़, स्त्री. ಲೊಡಲೊಡ ಮಾತು, ಒದರಾಟ; ಜರುಚುವಿಕೆ.

बड़बड़ाना, अक्रि. ಬಡಬಡಮಾತಾಡು, ಬಡಬಡಿಸು, ಒಟಗುಟ್ಟು; ಗೊಣಗು.

बड़बड़ाहट, स्त्री. ಒಟಗುಟ್ಟುವಿಕೆ, ಬಡಬಡಿಸುವಿಕೆ.

बड़बड़िया, पु. ಒಟಗುಟ್ಟುವವ.

बड़बेरी, स्त्री. ಕಾಡು ಎಲಚಿ ಹಣ್ಣು.

बड़बोल, **बड़बोला**, वि. ಬಡಬಡಿಸುವವ; ಮಾತುಬಡಕ; ವಾಚಾಳಿ.

बड़भागी, वि. ಭಾಗ್ಯವಂತ.

बड़वार, वि. ದೊಡ್ಡ.

बड़हल, पु. ಒಂದು ಹಣ್ಣು, ಲಕುಚ.

बड़हार, पु. ಮದುವೆಯಾದ ಬಳಿಕ ಬೀಗರ ಔತಣ.

बड़हेला, पु. ಕಾಡು ಹಂದಿ.

बड़ा, पु. ವಡೆ. वि. ದೊಡ್ಡ; ಹಿರಿಯ; ಶ್ರೇಷ್ಠ, ಗುರುತರ. बड़े बूढ़े = ಗುರು ಹಿರಿಯರು. बड़ा दिन = ಕ್ರಿಸ್ತ ಜಯಂತಿ, ಕ್ರಿಸ್‌ಮಸ್.

बड़ाई, स्त्री. ದೊಡ್ಡತನ; ಹಿರಿಮೆ; ಹೆಚ್ಚುಗಾರಿಕೆ; ಮಹತ್ವ; ಹೆಚ್ಚಳ, ದೊಡ್ಡಸ್ತಿಕೆ, ಬಡಾಯಿ.

बड़ाना, सक्रि. ಒಟಗುಟ್ಟು; ಗೊಣಗು; ಹುಚ್ಚು ಹುಚ್ಚಾಗಿ ಮಾತಾಡು, ಗರವಟಿಸು.

बड़ापन, बड़ापा, पु. ದೊಡ್ಡತನ.

बड़ी, स्त्री. ಸಂಡಿಗೆ.

बड़ेरा, पु. **बड़ेरी**, स्त्री. = बंड़ेरी.

बढ़ई, पु. ಮರಗೆಲಸದವನು, ಬಡಗಿ, ಸುತಾರ, ಆಚಾರಿ.

बढ़ईगीरी, स्त्री. ಬಡಗಿಯ ಕೆಲಸ.

बढ़ता, पु. **बढ़ती**, स्त्री. ವೃದ್ಧಿ; ಹೆಚ್ಚುವಳಿ, ಹೆಚ್ಚಳ; ಅಭಿವೃದ್ಧಿ. ಪುರೋವೃದ್ಧಿ.

बढ़इन, बढ़न, स्त्री. ಬಡಗಿಯ ಹೆಂಡತಿ.

बढ़ना, अक्रि. ದೊಡ್ಡದಾಗು; ಬೆಳೆ, ಹೆಚ್ಚು; ಬಲಿ; ವಿಸ್ತರಿಸು; ಉದ್ದವಾಗು; ಮುಂದುವರಿ; ಮೀರು. बढ़ चढ़ना = ಮಿಗಿಲಾಗು, ಮಿಂಚು.

बढ़नी, स्त्री. ಪೊರಕೆ, ಬರ್ಲು; ಆರಂಬದ ಖರ್ಚಿಗೆ ಕೊಡುವ ಮುಂಗಡ.

बढ़ा-चढ़ा, वि. ಶ್ರೇಷ್ಠವಾದ, ಉತ್ಕೃಷ್ಟವಾದ, ಉತ್ತಮವಾದ.

बढ़ाना, सक्रि. ದೊಡ್ಡದಾಗಿಸು; ಬೆಳಸು; ಹೆಚ್ಚಿಸು; ವಿಸ್ತರಿಸು; ವೃದ್ಧಿಸು; ಮುಂದುವರಿಸು; ನೀಡು; ದೀಪ ಆರಿಸು; ಅಂಗಡಿಯನ್ನು ಮುಚ್ಚು; ಮೇಜದ ಮೇಲಿನ ತಿಂಡಿಯ ತಟ್ಟೆ ಹಾಸಿದ ಬಟ್ಟೆ ಮೊದಲಾದುವುಗಳನ್ನು ತೆಗೆ.

बढ़ाव, पु. ವೃದ್ಧಿ, ಬೆಳವಣಿಗೆ; ಪೂರ.

बढ़ावा, पु. ಬಡಾವಣೆ; ಉತ್ತೇಜನ, ಪ್ರೋತ್ಸಾಹ; ಚಿತಾವಣೆ; ಅತ್ಯುಕ್ತಿ.

बढ़िया, वि. ಬೆಲೆಬಾಳುವ; ಪ್ರಶಸ್ತ, ತನಿ, ಮೇಲ್ತರದ, "ಪರಮಾಯಿಷಿ".

बढ़ियल, वि. ಹೆಚ್ಚಿಸುವ, ವೃದ್ಧಿಸುವ.

बढ़ियाल, पु. ಪೂರ, ಪ್ರಳಯ.

बढ़ैया, वि. ಹೆಚ್ಚಿಸುವವ.

बढ़ोतर, पु. **बढ़ोतरी**, स्त्री. ಹುಲುಸು; ಅಭ್ಯುದಯ; ಲಾಭ; ಬಡ್ಡಿ.

बतंगड़, पु. ಮಾತು ಜೋಡಿಸುವಿಕೆ; ಮಾತಿನ ವಿಸ್ತಾರ; ರಗಳೆ, ಹಗರಣ. बात का बतंगड़ करना = ಚಿಕ್ಕ ಮಾತಿಗೆ ದೊಡ್ಡ ಹಗರಣ ಎಬ್ಬಿಸು, ಅಲ್ಪ ವಿಷಯವನ್ನು ದೊಡ್ಡದಾಗಿ ಮಾಡು.

बत, पु. ಲೆಕ್ಕ ಅಥವಾ ಪಟ್ಟಿಯಲ್ಲಿ ಬೇರೆ ಬೇರೆ ಹೆಸರುಗಳನ್ನು ಬಿಡಿಸಿ ತೋರಿಸಲು ಹಾಕುವ ಗೆರೆಗಳು; ಹಡಗುಗಳನ್ನು ಹಾಳುಮಾಡುವ ಒಂದು ಹುಳು; ಬಾತು, ಬಾತು ಕೋಳಿ.

बतकहा, वि. ಮಾತುಗಾರ, ಮಾತಾಳಿ.

बतकही, स्त्री. ಮಾತುಕತೆ, ಸಂವಾದ.

बतक्कड़, वि. ಮಾತುಗಾರ, ವಾಚಾಳ;

ಹರಟೆವುಲ್ಲ
बतक, पु. **बतख़**, स्त्री. ಬಾತು, ಬಾತು ಕೋಳಿ.
बत-बढ़ाव, पु. ಮಾತು ಬೆಳಸುವಿಕೆ; ರಗಳೆ, ಜಗಳ.
बतर, स्त्री. ಉಕ್ಕೆಗೆ ತಕ್ಕ ಜಮೀನು.
बतरस, पु. ಮಾತಿನ ಸ್ವಾರಸ್ಯ; ಸಲ್ಲಾಪದ ಸವಿ.
बतराना, अक्रि. ಮಾತಾಡು, ಸಲ್ಲಾಪಿಸು.
बतरीक़, क्रिवि. ಮುಖಾಂತರ, ದ್ವಾರ, ಮೂಲಕ.
बतलाना, बताना, सक्रि. ತೋರಿಸು; ತಿಳಿಸು; ಹೇಳಿಕೊಡು; ನಿದರ್ಶಿಸು.
बतास, स्त्री. ಗಾಳಿ, ವಾಯು, ವಾತ.
बतासा, बताशा, बताशा-फेनी, पु. ಒಂದು ಮಿಠಾಯಿ, ಬತ್ತಾಸು; ಒಂದು ಬಗೆ ಪಟಾಕಿ; ನೀರುಗುಳ್ಳೆ, ಬುದ್ಬುದ.
बतिया, स्त्री. ಹೀಚು, ಮಿಡಿಗಾಯಿ, ಪೂಗಾಯಿ.
बतियाना, अक्रि. ಮಾತಾಡು, ಸಲ್ಲಾಪಿಸು.
बतियार, स्त्री. ಮಾತುಕತೆ.
बतू, पु. ಕಲಾಬತ್ತು, ಜರಿಗೆ
बतूनी, वि. ವಾಚಾಳಿ, ಹರಟೆವುಲ್ಲ
बतोला, वि. **बतोली**, स्त्री. ಸಣ್ಣ ಮಾತು; ಪರಿಹಾಸ, ಗೇಲಿ
बतौर, क्रिवि. ವಿಧವಾಗಿ, ತೆರನಾಗಿ.
बतौड़ी, बतौरी, स्त्री. ಬಾವು; ಅರ್ಬುದ.
बत्ताल, वि. ವ್ಯರ್ಥ, ನಿಷ್ಪ್ರಯೋಜಕ; ಸುಳ್ಳು, ಅಸತ್ಯ; ದಡ್ಡ.
बत्ती, स्त्री. ಬತ್ತಿ, ದೀಪದ ಬತ್ತಿ; ಮೇಣದ ಬತ್ತಿ; ಜಾವಿಗೆ ಹುರಿ; ಛಾವಣಿಗೆ ಹೊಚ್ಚುವ ಹುಲ್ಲಿನ ಕಟ್ಟು; ಒಂದು ಬಗೆ ಗುಡಾರ.
बत्तीस, वि. ಮೂವತ್ತೆರಡು.
बत्तीसा, पु. ಮೂವತ್ತೆರಡು ಮೂಲಿಕೆಗಳಿಂದ ತಯಾರಾದ ಒಂದು ಪೌಷ್ಟಿಕ ಔಷಧ.
बत्तीसी, स्त्री. ಮೂವತ್ತೆರಡು ವಸ್ತುಗಳ ಸಮೂಹ; ಮನುಷ್ಯನ (ಮೂವತ್ತೆರಡು) ಹಲ್ಲುಗಳು. बत्तीसी दिखाना = ಹಲ್ಲುಗಳನ್ನು ತೋರಿಸು; ನಗು; ಹಲ್ಲು ಕಿಸಿ
बथुआ, पु. ಚಕ್ರ್ಯೋತನ ಸೊಪ್ಪು.
बद, स्त्री. ತೊಡೆವಾಳ, ಮೇಹಗ್ರಂಥಿ; ಬದಲಿ, ಪ್ರತಿ. पु. ಹಂದಿ. वि. ಕೆಟ್ಟ, ದುಷ್ಟ; ಅಪ-.
बद्-अमली, वि. ದುಷ್ಟ ಶಾಸನ.
बद्-असल, वि. ಕೀಳು ಜಾತಿಯ; ನೀಚ; ಅಸಭ್ಯ, ಒಡ್ಡ.
बदकना, अक्रि. ಜರುಗು, ಸರಿ, ಸರಕು.
बद्-कार, वि. ಕುಕರ್ಮಿ, ದುರಾಚಾರಿ.
बद्-कारी, स्त्री. ದುರಾಚಾರ, ದುರ್ನಡತೆ
बद्-किरदार, वि. ಕೇಡು ಮಾಡುವವ.
बदक़िस्मत, वि. ಅದೃಷ್ಟಹೀನ.
बदक़िस्मती, स्त्री. ದುರದೃಷ್ಟ, ದೌರ್ಭಾಗ್ಯ.
बदख़्वाह, वि. ಹಿತಚಿಂತಕ.
बद्-गो, वि. ಕೆಟ್ಟ ಮಾತಾಡುವವ, ದುರ್ಭಾಷಿ; ಚಾಡಿಖೋರ.

बदगोई, स्त्री. ದುರ್ಭಾಷೆ; ನಿಂದೆ; ಚಾಡಿ.

बद-चाल, बद-चलन, वि. ದುರ್ಮಾರ್ಗಿ; ದುರಾಚಾರಿ; ಭ್ರಷ್ಟ; ಲಂಪಟ.

बद-चलनी, स्त्री. ದುರಾಚಾರ, ದುರ್ನಡತೆ; ವ್ಯಭಿಚಾರ.

बद-ज़ात, वि. ನೀಚ, ಅಧಮ.

बदतर, वि. ಇನ್ನೂ ಕೆಟ್ಟ, ದುಷ್ಟತರ.

बदतरीन, वि. ಎಲ್ಲಕ್ಕಿಂತಲೂ ಹೆಚ್ಚು ಕೆಟ್ಟದಾದ, ದುಷ್ಟತಮ.

बद-दुआ, स्त्री. ಶಾಪ.

बदन, पु. ಮುಖ; ಬಾಯಿ; ಶರೀರ, ದೇಹ; ಸ್ತ್ರೀಯರ ಜನನೇಂದ್ರಿಯ, ಯೋನಿ.

बद-नसीब, वि. ಹತಭಾಗ್ಯ, ಅದೃಷ್ಟ ಹೀನ, ಭಾಗ್ಯವಿಲ್ಲದವ.

बद-नसीबी, स्त्री. ದುರದೃಷ್ಟ, ದೌರ್ಭಾಗ್ಯ.

बदना, सक्रि. ಒಪ್ಪಿಕೊಳ್ಳು, ಅಂಗೀಕರಿಸು; ಮನ್ನಣೆ ಮಾಡು; ಸಂಕಲ್ಪಿಸು; ನಿರ್ಧರಿಸು; ಪಂಥ ಕಟ್ಟು, ಜೂಜು ಹಾಕು. भाग्य में बदा होना = ಹಣೆಯಲ್ಲಿ ಬರೆದಿರು.

बदनाम, वि. ಅಪಕೀರ್ತಿ ಪಡೆದವ; ಹೆಸರು ಕೆಟ್ಟವ; ದೂಷಿತನು.

बदनामी, स्त्री. ದುರ್ನಾಮ; ಅಪಖ್ಯಾತಿ, ಅಪಕೀರ್ತಿ; ದೂಷಣೆ.

बदनी, स्त्री. ಒಡಂಬಡಿಕೆ, ಒಪ್ಪಂದ; ಒಂದು ಬಗೆ ಕಂಬಳಕಾಯಿ.

बद-नियत, वि. ದುರಾಲೋಚನೆಯುಳ್ಳವ; ದುರುಳ.

बद-नीयती, स्त्री. ದುರಾಲೋಚನೆ.

बद-नुमा, वि. ಕುರೂಪಿ, ವಿಕಾರಿ.

बद-फ़ेल, वि. ಕುಕರ್ಮಿ, ದುರಾಚಾರಿ.

बद-बख़्त, वि. ದುರ್ಭಾಗ್ಯ.

बद-बख़्ती, स्त्री. ದೌರ್ಭಾಗ್ಯ.

बद-बू, स्त्री. ದುರ್ಗಂಧ, ನಾತ.

बदबूदार, वि. ನಾತಹೊಡೆವ, ನಾರುವ.

बद-मस्त, वि. ಮದೋನ್ಮತ್ತ; ವಿಷಯಲಂಪಟ, ವಿಷಯಾಸಕ್ತ. बद-मस्ती = ವಿಷಯಾಸಕ್ತತೆ, ವಿಷಯಲಂಪಟತೆ.

बदमाश, वि. ಅಪಾಪೋಲಿ, ಪೋಕರಿ; ಶೋಧ, ಲಂಡ, ಲುಚ್ಚ; ಖಳ, ಕೂಳ.

बदमाशी, स्त्री. ಪೋಲಿತನ, ಪೋಕರಿತನ; ಲುಚ್ಚತನ, ನೀಚತನ.

बदमिज़ाज, वि. ದುಷ್ಟಸ್ವಭಾವದ.

बदरंग, वि. ಬಣ್ಣಗೆಟ್ಟ, ಬಣ್ಣಗುಂದಿದ.

बदर, पु. ಎಲಚಿ ಹಣ್ಣು. ಬೋರೆ ಹಣ್ಣು; ಪೂರ್ಣಚಂದ್ರ. क्रिवि. ಹೊರಗೆ, ಹೊರಗಡೆ.

बदरक़ा, पु. ಜೊತೆಯಲ್ಲಿ ಪ್ರಯಾಣ ಮಾಡುವವ, ಸಹಯಾತ್ರಿ; ಔಷಧದ ಅನುಪಾನ.

बदरा, पु. ಮೇಘ, ಮೋಡ.

बदराह, पु. ದಾರಿ ತಪ್ಪಿದವ; ದುರ್ಮಾರ್ಗದಲ್ಲಿ ಹೋಗುವವ; ದುಷ್ಟ.

बदल, पु. ಬದಲಾವಣೆ; ಪರಿವರ್ತನೆ; ಬದಲಿ, ಪ್ರತಿ; ಬದಲು, ಸಾಟಿ; ಅದಲು ಬದಲು.

बदलई, ಸ್ತ್ರೀ. ಅದಲುಬದಲು, ಬದಲಾ ಬದಲಿ.

बदलना, अक्रि. ಬದಲಿಸು, ಬದಲಾಗು; ಮಾರ್ಪಡು. सक्रि. ಬದಲಾಯಿಸು; ಅದಲುಬದಲು ಮಾಡು; ಮಾರ್ಪಡಿಸು; ಬದಲಿಸು.

बदलवाना, सक्रि. "बदलना" का प्रे. रूप.

बदना, पु. ಬದಲು, ಬದಲಿ, ಪ್ರತಿ; ಪ್ರತಿಫಲ; ಈಡು, ಮುಯ್ಯಿ. बदला लेना = ಮುಯ್ಯಿಗೆ ಮುಯ್ಯಿ ತೆಗೆದುಕೊಳ್ಳು, ಸೇಡು ತೀರಿಸು.

बदलवाई, बदलाई, ಸ್ತ್ರೀ. ಬದಲಾಯಿಸುವುದಕ್ಕೆ ಕೂಡುವ ವಟ್ಟ.

बदलाना, सक्रि. ಬದಲಾಯಿಸು, ಮಾರ್ಪಡಿಸು.

बदली, ಸ್ತ್ರೀ. ಪರಿವರ್ತನೆ; ಬದಲಾವಣೆ; ಬದಲಿ; ಸ್ಥಾನಪರಿವರ್ತನ, ವರ್ಗ; ಸ್ಥಳಾಂತರ; ಮೇಘ, ಮೋಡ.

बदले, क्रिवि. ಪ್ರತಿಯಾಗಿ, ಬದಲಾಗಿ

बदलौबल, ಸ್ತ್ರೀ. ಅದಲು ಬದಲು, ಬದಲಾ ಬದಲಿ.

बद-शकल, वि. ಅಂದಗೆಟ್ಟ, ಕುರೂಪಿ.

बदसूरत, वि. ರೂಪಗೆಟ್ಟ, ಅಸಡ್ಡಾಳ.

बदस्तूर, क्रिवि. ಮಾಮೂಲಿನಂತೆ, ಯಥಾಪ್ರಕಾರ, ಎಂದಿನಂತೆ.

बदहज़मी, ಸ್ತ್ರೀ. ಅಜೀರ್ಣ.

बदहवास, वि. ಪ್ರಜ್ಞೆಗೆಟ್ಟ, ಎಚ್ಚರ ತಪ್ಪಿದ, ಮೂರ್ಛೆಹೊಂದಿದ.

बद-हवासी, ಸ್ತ್ರೀ. ಪ್ರಜ್ಞೆತಪ್ಪುವಿಕೆ, ಮೂರ್ಛೆ; ಹಮ್ಮು ದ.

बदहाल, क्रिवि. ದುಸ್ಥಿತಿಯಲ್ಲಿರುವ.

बद-हाली, ಸ್ತ್ರೀ. ದುಸ್ಥಿತಿ, ಅಪದೆಸೆ.

बदा, वि. ನೇಮಕವಾದ; ಹಣೆಯಲ್ಲಿ ಬರೆದಿರುವ. पु. ಹಣೆಬರಹ, ವಿಧಿ; ಭಾಗ್ಯ.

बदान, ಸ್ತ್ರೀ. ವಿಧಾಯ ಮಾಡುವಿಕೆ; ಪಂದ್ಯ.

बदाबदी, ಸ್ತ್ರೀ. ಪೈಪೋಟಿ, ಮೇಲಾಟ, ಪಂದ್ಯ. क्रिवि. ಪೋಟಿಯಿಂದ.

बदाम, पु. = बादाम.

बदाहत, ಸ್ತ್ರೀ. ಆಕಸ್ಮಿಕವಾದ ವಿಪತ್ತು, ಅವಘಡ.

बदी, ಸ್ತ್ರೀ. ಅಹಿತ, ಕೆಡಕು; ದುಷ್ಟತನ; ದೋಷ; ಕೃಷ್ಣ ಪಕ್ಷ, ಬಹುಳ ಪಕ್ಷ.

बदीह, वि. ಸ್ಪಷ್ಟವಾದ, ಸ್ಫುಟ.

बदीही, वि. ಪೂರ್ವಸಿದ್ಧತೆಯಿಲ್ಲದ, ಆಶು (ಭಾಷಣ).

बदौलत, ಸ್ತ್ರೀ. ಭಾಗ್ಯದಿಂದ, ದೆಸೆಯಿಂದ, ಮುಖಾಂತರ.

बद्दल, वि. ಮೇಘ, ಮೋಡ.

बद्ध, पु. ಕಟ್ಟಲ್ಪಟ್ಟ; ಕಟ್ಟು ಬಿದ್ದ, ಬದ್ಧ.

बद्धी, वि. ಕಟ್ಟುವ ದಾರ; ನವಾರ; ನಡುಕಟ್ಟು; ಒಂದು ಆಭರಣ.

बध, पु. ಕೊಲೆ, ವಧೆ, ನಾಶ.

बधना, सक्रि. ಕೊಲ್ಲು, ವಧೆಮಾಡು, ವಧಿಸು. पु. ಹೂಜಿ, ಗಡಿಗೆ, ಮೊಗೆ.

बधाई, ಸ್ತ್ರೀ ವೃದ್ಧಿ, ಅಭಿವೃದ್ಧಿ; ಮಂಗಳೋತ್ಸವ, ಮಂಗಳಗಾನ; ಅಭಿನಂದನೆ; ಉಪಾಯನ.

बधावा, पु. ಅಭಿನಂದನೆ; ಉಡುಗೊರೆ, ಉಪಾಯನ, ಕಾಣಿಕೆ.

बधिक, पु. ಕೊಲೆಗಾರ, ಕಟುಕ; ಬೇಡ, ವ್ಯಾಧ.

बधिया, पु. ಬೀಜ ಒಡೆದ ಪ್ರಾಣಿ, ಹಿಡವಮಾಡಿದ ಪಶು; ಎತ್ತು.

बधिर, वि. ಕಿವುಡ, ಕೆಪ್ಪ.

बधिरता, स्त्री. ಕಿವುಡತನ, ಕಿವುಡು.

बधू, स्त्री. ವಧೂ, ಪತ್ನಿ; ಸೊಸೆ.

बधूरा, पु. ಸುಳಿ ಗಾಳಿ.

बधैया, वि. ಮಂಗಳಗಾನ ಮಾಡುವವ

बन, पु. ವನ, ಕಾಡು, ಅರಣ್ಯ; ಅರಳೆ, ಹತ್ತಿ; ಹತ್ತಿಯ ಗಿಡ.

बनकर, पु. ವನಗಳ ಗುತ್ತಿಗೆ.

बनखंड, पु. ಅಡವಿ, ಕಾಡು.

बनखंडी, स्त्री. ಚಿಕ್ಕ ವನ, ಕಾಡು. पु. ಕಾಡಿನಲ್ಲಿ ವಾಸಮಾಡುವವ, ವನವಾಸಿ

बनचर, पु. ಕಾಡುಮೃಗ.

बनज, पु. ವಾಣಿಜ್ಯ, ವ್ಯಾಪಾರ; ಸರಕು.

बनजारा, पु. ದವಸಧಾನ್ಯ ಮಾರುವವ, ಬಣಜಿಗ; ವಣಿಜ.

बनझाऊ, पु. ಕೇಸರಿಕೆ ಮರ, ಸರವೆ ಮರ, ಚಬಕು ಮರ.

बनत, स्त्री. ರಚನೆ; ಅನುಕೂಲ್ಯ, ಕೈಗೂಡುವಿಕೆ; ಕಲಾಬತ್ತು, ಜರತಾರಿ; ಚಮಕಿ ಅಂಚು, ಗೋಟಾ.

बनता-बिगड़ता, पु. ಆಗುಹೋಗು; ಸಾಧಕ ಬಾಧಕ.

बनना, पु. ಮದವಣಿಗ. अक्रि. ಆಗು; ಆಗಿಬರು, ಕೈಗೂಡು; ಹೊಂದಿಬರು; ಸಿದ್ಧವಾಗು, ತಯಾರಾಗು; ರೂಪುಗೊಳ್ಳು; ಸರಿಯಾಗು; ಸರಿಬರು; ಹಾಸ್ಯಕ್ಕೆ ಗುರಿಯಾಗು. बनना ठनना = ಸುಸಜ್ಜಿತವಾಗು.

बनफ़शा, पु. ಊದಾಬಣ್ಣದ ಒಂದು ಹೂ.

बनफ़शी, पु. ಊದಾಬಣ್ಣದ.

बन-बिलाव, पु. ಕಾಡು ಬೆಕ್ಕು.

बनबेर, पु. **बनबेरी**, स्त्री. ಕಾಡು ಎಲಚಿ ಹಣ್ಣು.

बनभंटा, **बनहंटा**, पु. ಗುಳ್ಳದಕಾಯಿ

बनमानुस, पु. ಕಾಡುಮನುಷ್ಯ.

बनमाला, पु. ಹೂವಿನ ಮಾಲೆ.

बनर, पु. ಒಂದು ಬಗೆ ಅಸ್ತ್ರ.

बनरखा, पु. ವನವನ್ನು ಕಾಯುವವ.

बनरा, पु. ಮದವಣಿಗ, ವರ; ಮದುವೆಗಳಲ್ಲಿ ಹಾಡುವ ಒಂದು ಹಾಡು.

बनरी, स्त्री. ಮದವಣಗಿತ್ತಿ. ವಧು.

बनवाई, स्त्री. ಮಾಡಿಸುವುದರ ಖರ್ಚು ಅಥವಾ ಕೂಲಿ.

बनवाना, सक्रि. बनाना का प्रे. रूप.

बनवैया, पु. ಮಾಡುವವ, ತಯಾರಿಸುವವ.

बना, पु. ಮದವಣಿಗ, ಮದುವೆಗಂಡು, ವರ; ಒಂದು ಛಂದಸ್ಸು. वि. ಮಾಡಲ್ಪಟ್ಟ, ತಯಾರಾದ, ಉಕ್ಕೈಯಾದ (ಜಮೀನು). बना बनाया = ಸಂಸಿದ್ಧವಾದ, ತೀರಾದ. बना ठना = ಅಲಂಕೃತವಾದ, ಸಿಂಗರಿಸಿದ.

बनात, स्त्री. ಸಕಲಾತಿ ಬಟ್ಟೆ, ಬನಾತು.

बनाती, वि. ಸಕಲಾತಿ ಅಥವಾ ಬನಾತಿನಿಂದ ಮಾಡಿದ.

बनाना, सक्रि. ಮಾಡು; ಆಗಿಸು, ಆಗಮಾಡು; ತಯಾರಿಸು; ಕಟ್ಟು, ಸಿದ್ಧಪಡಿಸು; ಕಲ್ಪಿಸು; ಅಲಂಕರಿಸು; ಸರಿಪಡಿಸು; ರೇಗಾಡು, ಅಣಕಿಸು; ಗೇಲಿಮಾಡು; ನಟಿಸು. बाल बनाना = ಕ್ಷೌರಮಾಡು.

बनाम, अव्य. ಎದುರಾಗಿ, ವಿರೋಧವಾಗಿ.

बनाय, क्रिवि. ಚೆನ್ನಾಗಿ.

बनाव, स्त्री. ತಯಾರಿ; ಅಲಂಕಾರ; ಮಾಟ, ಯುಕ್ತಿ, ಹೊಂದಿಕೆ. बनाव चुनाव = ಸಿಂಗಾರ; ಠೀವಿ; ಸೊಬಗು.

बनावट, स्त्री. ರಚನೆ, ನಿರ್ಮಾಣ; ತಯಾರಿ; ಕಲ್ಪನೆ, ಸೃಷ್ಟನೆ; ಮಾಟ; ಆಡಂಬರ; ನಟನೆ.

बनावटी, वि. ಕಲ್ಪಿತ, ಸೃಷ್ಟನೆಯ; ಕೃತಕ, ಕೃತ್ರಿಮ.

बनावनहारा, पु. ಮಾಡುವವ; ನಿರ್ಮಿಸುವವ; ಸರಿಪಡಿಸುವವ.

बनावना, सक्रि. ಮಾಡು, ತಯಾರಿಸು

बनावरी, स्त्री. ತಯಾರಿ, ಸಿದ್ಧತೆ.

बनिज, पु. ವ್ಯಾಪಾರ; ಸರಕು.

बनिजारिन, बनिजारी, स्त्री. "बनजारा" का स्त्री. रूप.

बनिता, स्त्री. ವನಿತೆ, ಭಗಿನಿ, ಮಡದಿ.

बनिया, बनियाँ, पु. ವರ್ತಕ, ದಿನಸಿ ಅಂಗಡಿಯವ; ಬಣಜಿಗ, ವೈಶ್ಯ, ಸೆಟ್ಟಿ, ಕೋಮಟಿ.

बनियाइन, स्त्री. ಬಣಜಿಗಿತ್ತಿ; ಕೋಮಟಿಗಿತ್ತಿ; ಬನೀನು.

बनियाई, स्त्री. ವೈಶ್ಯನ ವೃತ್ತಿ; ಕೋಮಟಿತನ.

बनियानी, स्त्री. ವೈಶ್ಯ ಸ್ತ್ರೀ, ಕೋಮಟಿಗಿತ್ತಿ.

बनिस्बत, अव्य. ಹೋಲಿಸಿ ನೋಡಿದರೆ; ಅದರ ಮುಂದೆ, ತದಪೇಕ್ಷೆಯಾ.

बनिहार, पु. ಕೂಲಿಗಾರ, ಸಂಬಳಗಾರ.

बनी, स्त्री. ವನ; ತೋಟ; ಮದುವೆ ಹೆಣ್ಣು, ವಧು; ನಾಯಿಕೆ. पु. ಬಣಜಿಗ, ಸೆಟ್ಟಿ, ಕೋಮಟಿ.

बनीनी, स्त्री. ಬಣಜಿಗಿತ್ತಿ, ಕೋಮಟಿಗಿತ್ತಿ.

बनीर, पु. ಬೆತ್ತ, ಹಬ್ಬೆ.

बनेठी, स्त्री. ಎರಡು ತುದಿಯಲ್ಲೂ ಪಂಜುಗಳನ್ನು ಕಟ್ಟಿ ಬೀಸುವ ಲಾಠಿ ವರಸೆ.

बनेला, बनैला, वि. ಕಾಡಿನ, ವನ್ಯ.

बनौटी, वि. ಹತ್ತಿಯ ಹೂವಿನ ಬಣ್ಣದ, ನಸು ಹಳದಿ.

बनौरी, स्त्री. ಆನೆಕಲ್ಲು, ಆಲಿಕಲ್ಲು.

बन्ना, पु. ಮದವಣಿಗ.

बन्नी, स्त्री. ಮದವಣಿಗಿತ್ತಿ.

बन्हा, पु. ಮಂತ್ರವಾದಿ, ಮಾಟಗಾರ.

बन्हाई, स्त्री. ಮಾಟಗಾತಿ.

बपतिस्मा, पु. ಕ್ರೈಸ್ತರ "ಜ್ಞಾನಸ್ನಾನ", ಕ್ರೈಸ್ತಸ್ನಾನ.

बपमार, वि. ತಂದೆಯನ್ನು ಕೊಲ್ಲುವವ, ಪಿತೃಘಾತಕ.

बपुरा, वि. ದಿಕ್ಕಿಲ್ಲದವ, ಗರೀಬ.

बपौती, स्त्री. ಪಿತ್ರಾರ್ಜಿತ, ಪಿತೃಧನ.

बप्पा, पु. ತಂದೆ, ಅಪ್ಪ.

बफारा, पु. ಬಾಷ್ಪ, ಆವಿ, ಉಗಿ, ಹಬೆ; ಉಗಿಕಾವು, ಕುಂಭಶಾಕ.

बबर, पु. ಹೆಬ್ಬುಲಿ; ಸಿಂಹ.

बबरा-खेरी, स्त्री. ಜಗಳ, ಕಚ್ಚಾಟ.

बबरी, वि. ಸಿಂಹ ಅಥವಾ ಹುಲಿಯಂಥ; ಒರಟಾದ; ಹಿಂಸ್ರಕ. पु. ಕುದುರೆಯ ಕೇಸರವನ್ನು ಕತ್ತರಿಸುವವ. स्त्री. ಸುಳಿಗುರುಳು, ಅಲಕ.

बबुआ, पु. ಜಮೀನುದಾರ; ದೊಡ್ಡ ಮನುಷ್ಯ; ಮಗ.

बबुआइन, बबुई, स्त्री. ಜಮೀನುದಾರನಿ; ಮಗಳು.

बबुआना, वि. ಜಮೀನುದಾರರಂತಹ; ದೊಡ್ಡಮನುಷ್ಯರಂತಹ.

बबूल, पु. ಗೊಬ್ಬಳಿ, ಕರಿಜಾಲಿ.

बबूला, पु. ಚಕ್ರವಾತ, ಸುಳಿಗಾಳಿ; ಗುಳ್ಳೆ, ಬೊಬ್ಬೆ. आग बबूला होना = ಕೋಪಾವೇಶಗೊಳ್ಳು.

बबेसिया, स्त्री. ಹರಟೆ, ಒದರಾಟ.

बबेसी, स्त्री. ಮೊಳೆ ರೋಗ, ಮೂಲವ್ಯಾಧಿ.

बब्बी, स्त्री. ಚುಂಬನ, ಮುತ್ತು.

बभनी, स्त्री. ಕಣ್ಣು ಚಿಟ್ಟೆ, ಕಣ್ಣುಕುಟಿಕೆ; ಒಂದು ಬಗೆ ಹಲ್ಲಿ.

बभूत, स्त्री. ಬೂದಿ; ವಿಭೂತಿ.

बम, पु. ನೀರಿನ ಬುಗ್ಗೆ, ಊಟೆ; ಗಾಡಿಯ ಈಸುಮರ, ಈಚುಕೈ; ಒಂದು ಮೂರು; ಸಿಡಿಮದ್ದಿನ ಗುಂಡು, ಸಿಡಿಗುಂಡು; "ಬಾಂಬು"; ಶಿವನಾಮಸಂಕೀರ್ತನ, ಹರಹರ, ಹರೋಹರ.

बमकना, अक्रि. ಹಿಗ್ಗು, ಉಬ್ಬು; ಹೆಚ್ಚಳಿಸು; ಬಡಾಯಿ ಕೊಚ್ಚು.

बमन, पु. ವಮನ, ವಾಂತಿ.

बमना, सक्रि. ವಾಂತಿಮಾಡು, ಕಕ್ಕು.

बमनी, स्त्री. ಒಂದು ಬಗೆ ಹಲ್ಲಿ.

बमला, पु. ನೀರು ಉಕ್ಕಿಬರುವ ದ್ವಾರ.

बमनेटा, बमलेटा, पु. ಬ್ರಾಹ್ಮಣರ ಹುಡುಗ, "ಬೊಮ್ಮನ್".

बमूजिब, क्रिवि. ಅನುಸಾರವಾಗಿ, ಮೇರೆಗೆ. हुक्म बमूजिब = ಅಪ್ಪಣೆ ಮೇರೆಗೆ, "ಹುಕುಂ ಬಮೋಜಿಬ್".

बम्हनी, स्त्री. ಒಂದು ಬಗೆ ಹಲ್ಲಿ; ಕಣ್ಣು ಕುರು, ಕಣ್ಣು ಚಿಟ್ಟೆ.

बयँहथा, वि. ರೊಡ್ಡಗೈಯವ, ಎಡಚ.

बय, स्त्री. ಕ್ರಯ ವಿಕ್ರಯ, ಖರೀದಿ, ಬಿಕರಿ; ಪರಭಾರೆ; ವ್ಯಾಪಾರ. बय करना = ಮಾರು, ಬಿಕರಿಮಾಡು.

बयदार, वि. ಕೊಳ್ಳುವವ.

बयना, सक्रि. ಬೀಜ ಬಿತ್ತು; ವರ್ಣಿಸು, ಹೇಳು.

बय-नामा, पु. ಕ್ರಯಪತ್ರ.

बया, पु. ಗೀಜಗ; ಧಾನ್ಯ ಅಳೆಯುವವ.

बयाज़, स्त्री. ಬಿಳಿಯದು; ಕಾಗದದ ಹಾಳೆ; ಬರೆಯುವ ಪುಸ್ತಕ, ವಹಿ; ಖಾತೆ, ಖತಾವಣಿ; ಬಾಗಿಲು, ಕದ.

बयान, पु. ವರ್ಣನೆ, ವಿವರಣ; ವೃತ್ತಾಂತ; ವಾಜ್ಮೂಲ; ಸ್ಥಿತಿ. बयान करना = ವರ್ಣಿಸು, ಬಣ್ಣಿಸು.

बयाना, पु. ಮುಂಗಡ, ಸಂಚಕಾರ.

बयार, स्त्री. ವಾಯು, ಗಾಳಿ.

बयाबान, पु. ಮರುಭೂಮಿ; ಬೆಂಗಾಡು; ಗೊಂಡಾರಣ್ಯ.

बयाला, पु. ಜಾಳಾಂಧ್ರ; ಕಿಂಡಿ ಕಿಟಕಿ; ಜೇರುಗಂಡಿ.

बयालीस, वि. ನಲವತ್ತೆರಡು.

बयासी, वि. ಎಂಭತ್ತೆರಡು.

बर, पु. ವರಪ್ರಸಾದ, ವರ; ಮದುವೆ ಗಂಡು; ಅಳಿಯ. स्त्री. ವಕ್ಷಸ್ಥಳ, ಎದೆ; ಫಲ, ಹಣ್ಣು; ಹುಟ್ಟುವಳಿ, ಉತ್ಪತ್ತಿ; ಫಲಿತಾಂಶ. अव्य. ಮೇಲೆ; ಮೇಲಕ್ಕೆ. वि. ಮೇಲ್ತರದ, ಶ್ರೇಷ್ಠವಾದ; ಸಫಲವಾದ. बर आना=ಆಗು; ಸಫಲತೆ ಹೊಂದು; ದೂರವಾಗಿರು.

बर-अक्स, वि. ವ್ಯತಿರಿಕ್ತವಾದ, ಉಲ್ಟಾ

बर-आमद, वि. ಮೇಲೆ ಬಂದಿರುವ, ಹೊರಬಿದ್ದ; ಖರ್ಚು.

बरइन, स्त्री. "बरई" का स्त्री. ರೂಪ.

बरई, पु. ವೀಳ್ಯದೆಲೆ ಬೆಳೆವವ ಅಥವಾ ಮಾರುವವ, ಎಲೆಗಾರ, ತಂಬುಲಿಗ.

बरकंदाज़, पु. ತುಪಾಕಿ ಹಿಡಿದಿರುವ ಸೈನಿಕ, ತುಪಾಕಿಗಾರ; ಕಾವಲುಗಾರ.

बरकत, स्त्री. ಬಾಹುಲ್ಯ, ವೆಗ್ಗಳ; ಸಮೃದ್ಧಿ; ಲಾಭ; ಮುಕ್ತಾಯ; ಸಮಾಪ್ತಿ; ಕೃಪೆ, ಅನುಗ್ರಹ.

बरकती, वि. ಸಮೃದ್ಧ; ಕೃಪಾಪೋಷಿತ.

बरकना, अक्रि. ನಿವಾರಣೆಯಾಗು.

बर-क़रार, वि. ನೆಲಸಿರುವ; ದೃಢವಾದ, ಗಟ್ಟಿ; ಸ್ಥಾಪಿತವಾದ.

बरकाना, सक्रि. ನಿವಾರಿಸು.

बरखना, अक्रि. ಮಳೆ ಹುಯ್ಯು.

बरखा, स्त्री. ವರ್ಷಾಕಾಲ, ಮಳೆಗಾಲ.

बरख़ास्त, वि. ಮುಕ್ತಾಯವಾದ (ಸಭೆ), ವಿಸರ್ಜಿತ, ಬರಖಾಸ್ತು ಆದ; ತಳ್ಳಲ್ಪಟ್ಟ, ಉಚ್ಚಾಟಿತ.

बरख़ास्तगी, स्त्री. ಸಭೆಯ ಮುಕ್ತಾಯ, ವಿಸರ್ಜನೆ, ಬರಖಾಸ್ತು; ಉಚ್ಚಾಟನೆ.

बर-ख़िलाफ़, वि. ವಿರುದ್ಧ, ವ್ಯತಿರಿಕ್ತವಾದ. क्रिवि. ವಿರುದ್ಧವಾಗಿ, ವಿರೋಧವಾಗಿ, ಎದುರಾಗಿ.

बर-ख़ुर्द, बर-ख़ुर्दार, पु. ಹರ್ಷಿತ, ಪ್ರಸನ್ನ; ದೀರ್ಘಾಯುಸ್ಸು; ಸುಖಸಂತೋಷ; ಪುತ್ರ, ಮಗ.

बरगद, पु. ಆಲದ ಮರ.

बर-गश्तगी, स्त्री. ತಿರುಗುವಿಕೆ; ತಿರುಗಿ ಬೀಳುವಿಕೆ; ಧರ್ಮಚ್ಯುತಿ.

बर-गश्ता, वि. ಬದಲಾಯಿಸಿದ; ತಿರುಗಿದ; ದಂಗೆ ಎದ್ದ.

बरगा, पु. ದೂಲ, ಜಂತಿ.

बरच्छा, स्त्री. =बरोक.

बरछक, बरछा, पु. **बरछी**, स्त्री. ಭರ್ಜಿ, ಈಟಿ, ಸಬಳ, ಕುಂತ.

बरछी-बरदार, बरछैत, पु. ಸಬಳಿಗ, ಕೊಂತಕಾರ.

बर-ज़बाँ, वि. ಬಾಯಿಪಾಠ ಮಾಡಿದ, ಕಂಠಸ್ಥವಾದ.

बरजस्ता, बरजा, वि. ಸ್ಥಾನದ, ಸ್ಥಳದ; ನಿಜ; ಸತ್ಯ; ಸರಿ; ಪ್ರತ್ಯುತ್ಪನ್ನ, ಆಶು (ಭಾಷಣ).

बरज़ोर, वि. ಬಲಿಷ್ಠ, ಜೋರಿನವ.
बरज़ोरी, क्रिवि. ಜೋರಿನಿಂದ, ಬಲವಂತವಾಗಿ.
बरत, स्त्री. ದಾರ,ಹಗ್ಗ; ನೀರು ಸೇದುವ ಹಗ್ಗ;ಚಾರು, ಮಿಳಿ;ಪ್ರಯೋಗ,ಬಳಕೆ.
बरतन, पु. ಪಾತ್ರೆ, ಭಾಂಡ.
बरतना, अक्रि. ಧ್ಯಾನಿಸು, ಚಿಂತಿಸು; ವರ್ತಿಸು, ನಡಕೊಳ್ಳು. सक्रि. ಉಪಯೋಗಿಸು, ಪ್ರಯೋಗಿಸು, ಬಳಸು; ಹಂಚು. पु. ಹಳೆಯ ವಸ್ತ್ರಗಳು.
बरतर,वि. ಶ್ರೇಷ್ಠತರ; ಉಚ್ಚ; ಉತ್ತಮ
बरतरफ़, वि. ಒತ್ತಟ್ಟಿಗೆ ಆದ, ತಳ್ಳಿ ಪಡಿಯಾದ; ಕೆಲಸದಿಂದ ತಳ್ಳಲ್ಪಟ್ಟ, ಉಚ್ಚಾಟಿತ. स्त्री. ಉಚ್ಚಾಟನೆ, ವಿಸರ್ಜನೆ.
बरताना, सक्रि. ಉಪಯೋಗ ಮಾಡಿಸು, ಬಳಸಗೊಡು.
बरतानिया, स्त्री. ಬ್ರಿಟನ್ ದೇಶ, ಬ್ರಿಟಿಷ್ ದೇಶ.
बरतानी, वि. ಬ್ರಿಟಿಷ್ ದೇಶದವ.
बरताव, पु. ವರ್ತನೆ, ಚರ್ಯೆ, ನಡತೆ.
बरदा, वि. ಸೆರೆಯಾಳು; ಗುಲಾಮ.
बरदाना, अक्रि. = बरधाना.
बरदार, वि. ಅಗಲವಾದ, ಹೆಚ್ಚು ಪನ್ನಾ ಉಳ್ಳ (ಬಟ್ಟೆ); ಹೊರುವವ; ಒಯ್ಯುವವ; ಪಾಲಿಸುವವ.
बरदाश्त, स्त्री. ಹೊರುವಿಕೆ, ವಹಿಸುವಿಕೆ, ನಿರ್ವಹಣ; ಸಹಿಷ್ಣುತೆ; ಸಹನೆ, ಸೈರಣೆ; ಭಂಡಾರ. बरदाश्त करना = ಹೊರು; ವಹಿಸು; ತಾಳು; ಸೈರಿಸು
बरदी, स्त्री. ಭಾರ ಹೊರುವ ಎತ್ತುಗಳ ಹಿಂಡು.
बरदैत, पु. ವಂದಿ ಮಾಗಧ, ಚಾರಣ.
बरध, बरधा, पु. ಗೂಳಿ, ಹೋರಿ.
बरधाना, अक्रि. ಗಂಡು ಹೆಣ್ಣು (ಪಶುಗಳು) ಕೂಡು, (ಗೂಳಿ) ಹಾರು. सक्रि. ಗಂಡು ಹೆಣ್ಣು ಕೂಡಿಸು; ಗೂಳಿಗೆ ಬಿಡು.
बरना, सक्रि. ವರಿಸು, ಮದುವೆಯಾಗು; ನಿಯಮಿಸು, ಗೊತ್ತುಮಾಡು. अक्रि. ಉರಿ, ಸುಡು. पु. ಮರಿ, ಮಗು.
बरनी, स्त्री. ರೆಪ್ಪೆಯ ಕೂದಲು, ಎವೆ; ಆರಂಭದ ಖರ್ಚಿಗಾಗಿ ಕೊಡುವ ಮುಂಗಡ, ತಕಾವಿ.
बरपा, वि. ಕಾಲಿನ ಮೇಲಿರುವ; ಎದ್ದ, ಎದ್ದಿರುವ; ನೆಲೆಗೊಂಡ. झगड़ा बरपा होना = ಜಗಳ ಏಳು, ಜಗಳ ಹುಟ್ಟು.
बरफ़, स्त्री. = बर्फ़.
बरबर, स्त्री. ಒದರುವಿಕೆ, ಹರಟೆ.
बरबस, पु. ಬಲ; ಬಲಾತ್ಕಾರ; ಧೈರ್ಯ. क्रिवि. ಬಲವಂತವಾಗಿ, ಬಲಾತ್ಕಾರದಿಂದ.
बरबाद, वि. ಬಿಸಾಡಿದ; ಮಣ್ಣು ಪಾಲಾದ; ನಾಶವಾದ, ಹಾಳಾದ.
बरबादी, स्त्री. ನಾಶ, ಹಾಳು; ಧ್ವಂಸ.
बरमला, क्रिवि. ಬಹಿರಂಗವಾಗಿ, ರಾಜಾರೋಷವಾಗಿ.
बरमा, पु. ಬೈರಿಗೆ, ಹಿಡಿಸರಳು, ಬರಮಾ.
बरमाना, सक्रि. ಬೈರಿಗೆ ಹಿಡಿ, ತೂತು ಕೊರೆ.
बरमी, पु. ಬರ್ಮಾ ದೇಶ ವಾಸಿ.

वि. ಬರ್ಬರ್ದೇಶದ. ಸ್ತ್ರೀ. ಬರ್ಬರ್ದೇಶದ ಭಾಷೆ; ಸಣ್ಣ ಬೈಂಗೆ.

बरयार, बरयारा, वि. ದೃಢವಾದ, ಗಟ್ಟಿಯಾದ; ಉಗ್ರವಾದ.

बर-वक़्त, क्रिवि. ಸಕಾಲದಲ್ಲಿ, ತಕ್ಕ ಹೊತ್ತಿನಲ್ಲಿ, ಸುಸಮಯಕ್ಕೆ.

बरवट, स्त्री. ಗುಲ್ಮ, ಗುಲ್ಮರೋಗ.

बरवे, स्त्री. ಮಾತನಾಡುವಾಗ ಸ್ವರದ ತಗ್ಗು.

बरस, पु ವರ್ಷ, ಸಂವತ್ಸರ; ವರ್ಷಾ, ಮಳೆ; ಅಫೀಮಿನಿಂದಾದ ಒಂದು ಮಾದಕ ದ್ರವ್ಯ; ಶ್ವೇತಕುಷ್ಠ.

बरसगांठ, स्त्री. ಹುಟ್ಟಿದ ಹಬ್ಬ, ವರ್ಧಂತಿ, ಒಡ್ಡಂತಿ.

बरसना, अक्रि. ಮಳೆ ಸುರಿ, ಮಳೆ ಹೊಯ್ಯು, ವೃಷ್ಟಿಸು, ತೂರು.

बरसवां, वि. ವಾರ್ಷಿಕ, ಸಾಲಿಯಾನಾ

बरसा, पु. ಮಳೆಗಾಲ.

बरसाऊ, वि. ಮಳೆಹೊಯ್ಯುವ, ವೃಷ್ಟಿಸುವ.

बरसात, स्त्री. ವರ್ಷಾಕಾಲ, ಮಳೆಗಾಲ

बरसाती, वि. ವರ್ಷಾಕಾಲದ, ಮಳೆಗಾಲದ. पु. ಮಳೆಗಾಲ; ಮೇಣಗಪ್ಪಡ, ಮಳೆಯಂಗಿ, ದನ ಮತ್ತು ಕುದುರೆಗಳ ಒಂದು ರೋಗ.

बरसाना, सक्रि. ಮಳೆಸುರಿಸು, ತೂರು, ವರ್ಷಿಸು.

बरसी, स्त्री. ವರ್ಷಾಬ್ದಿಕ, ಶ್ರಾದ್ಧ.

बरसौड़ी, स्त्री. ವಾರ್ಷಿಕ ತೆರಿಗೆ.

बरसौहाँ, वि. ಸುರಿಸುವ.

बरहना, वि. ನಗ್ನ, ಬೆತ್ತಲೆಯಾದ.

बरहनी, स्त्री. ನಗ್ನತೆ, ಬೆತ್ತಲೆ.

बरहम, बरहम-दरहम, वि. ಗಡಿಬಿಡಿಯಾದ; ಗೋಜಲಾದ, ತೊಡಕಿನ; ತಲೆಕೆಳಕಾದ; ಕೆಟ್ಟುಹೋದ, ತೊಂದರೆಪಡುವ; ಕೋಪಗೊಂಡ, ಕುಪಿತ.

बरहमी, स्त्री. ಗಡಿಬಿಡಿ, ಗೊಂದಲ.

बरहा, पु. ಚಿಕ್ಕ ಕಾಲುವೆ, ನಾಲೆ; ಗೋಮಾಳ, ಹುಲ್ಲುಗಾವಲು; ಹಗ್ಗ, ಹೊರಜಿ; ಮಯೂರ, ನವಿಲು.

बरही, पु. ನವಿಲು; ಮುಳ್ಳುಹಂದಿ. स्त्री. ಮಗು ಹುಟ್ಟಿದ ಹನ್ನೆರಡನೆಯ ದಿವಸದ ಸಂಸ್ಕಾರ, ಪುಣ್ಯಾಹವಾಚನ; ಚಿಕ್ಕ ನಾಳ, ನಾಲೆ; ಹಗ್ಗ, ಹೊರಜಿ; ಕಟ್ಟಿಗೆಯ ಹೊರೆ.

बरा, पु. ವಡೆ; ತೋಳು ಬಂದಿ, ವಂಕಿ.

बराक, पु ಜಗಳ, ಯುದ್ಧ. वि. ದೀನ, ದಿಕ್ಕಿಲ್ಲದವ; ನೀಚ; ಶೋಚನೀಯ.

बराट, स्त्री. ಕವಡೆ.

बरात, स्त्री. ವಿವಾಹಕ್ಕೆ ಮೊದಲು ಆಗುವ ಮದವಣಿಗನ ಮೆರವಣಿಗೆ, ದಿಬ್ಬಣ; ವರಯಾತ್ರೆ.

बराती, पु. ದಿಬ್ಬಣದವರು, ದಿಬ್ಬಣಿಗ.

बरादर, पु. ಭ್ರಾತಾ, ಸೋದರ.

बराधना, सक्रि. ಹೋರಿಗೆ ಬಿಡು, ಗೂಳಿ ಹಾರಿಸು.

बराना, अक्रि. ಮಾಡದಿರು; ಗೊಡವೆಗೆ ಹೋಗದಿರು; ವರ್ಜಿಸು. सक्रि. ಅರಿಸು, ಚುನಾಯಿಸು, ಆಯು.

बराबर, वि. ಸರಿಯಾದ; ಸಮಾನವಾದ,

ಸರಿಸಮ; ಈಡಾದ, ಎಣೆಯಾದ, ಓರಗೆಯಾದ; ಸಮವಾದ, ಸಮತಲ, ಸಪಾಟ. क्रिवि. ಸಮವಾಗಿ; ಸರಿಯಾಗಿ; ಒಂದೇ ಸಮನೆ.

बराबरी, स्त्री. ಸಮಾನತೆ, ಸಾದೃಶ್ಯ, ಸಾಮ್ಯ; ಸಮತೆ, ಸರ್ಕಸಮ, ಈಡು, ಎಣೆ; ಓರಗೆ; ಎದುರು.

बरामद, वि. ಹೊರಕ್ಕೆ ಬಂದ; ಹುಲುಬಿದ, ಪತ್ತೆಯಾದ. स्त्री. ಹೊರಡುವಿಕೆ; ಉತ್ಪತ್ತಿ; ಹುಟ್ಟುವಳಿ, ವರಮಾನ; ಮೊಕ್ಕಲು, ಕರಾವಳಿ.

बरामदा, पु. ವಸಾರೆ, ಕೈಸಾಲೆ, ಜಗಲಿ, ವರಾಂಡ.

बराय, क्रिवि. ಓಸುಗ, ಓಸ್ಕರ. बराय नाम=ಹೆಸರಿಗೋಸ್ಕರ, ಹೆಸರಿಗೆಮಾತ್ರ

बरायन, पु. ಮದುವೆಯಲ್ಲಿ ಮದವಣಿಗನು ಧರಿಸುವ ಕಬ್ಬಿಣದ ಕೈ ಬಳೆ.

बरार, पु. ಮೊಕ್ಕಲು, ಪುಲಿನ, ಕರಾವಳಿ; ಒಂದು ತೆರಿಗೆ.

बरारा, पु. ದಾರ, ಹಗ್ಗ.

बराव, पु. ವರ್ಜಿಸುವಿಕೆ; ಸಂಯಮನ.

बरावर्द, पु. ಗಣನೆ, ಲೆಕ್ಕ; ಲೆಕ್ಕಾಚಾರ.

बराह, क्रिवि. ಮಾರ್ಗವಾಗಿ, ಮೂಲಕ, ಮುಖಾಂತರ.

बराह-करम, क्रिवि. ಕೃಪೆಯಿಟ್ಟು.

बरिया, वि. ಬಲಿಷ್ಠ. ಬಲಶಾಲಿ.

बरियाई, स्त्री. ಪ್ರಾಬಲ್ಯ. क्रिवि. ಬಲವಂತವಾಗಿ, ಬಲಾತ್ಕಾರದಿಂದ.

बरियारा, पु. ಕಾಡುಮೆಂತೆಯಸೊಪ್ಪು.

बरिक, पु. ಬೋಂಡ.

बरी, स्त्री. ಗುಳಿಗೆ, ಉಂಡೆ; ಸಂಡಿಗೆ; ಉದುಗೊರೆ. वि. ಬಿಡುಗಡೆ ಹೊಂದಿದ, ವಿಮುಕ್ತ.

बरूनी, स्त्री.=बरौनी.

बरेंडा, पु. ತೊಲೆ, ಬೆಂತೊಲೆ.

बरेखिया, पु. ವಿವಾಹ ನಿಷ್ಕರ್ಷೆ ಮಾಡಿಸುವವ, ಘಟಕ.

बरेखी, स्त्री. ತೋಳುಬಂದಿ; ವಿವಾಹಕ್ಕೆ ವರನನ್ನು ನೋಡುವಿಕೆ, ವರಾನ್ವೇಷಣೆ.

बरेजा, पु. ವೀಳ್ಯದೆಲೆಯ ತೋಟ.

बरेठन, स्त्री. ಅಗಸಗಿತ್ತಿ.

बरेठा, पु. ಅಗಸ, ಮಡಿವಾಳ.

बरोक, पु. ನಿಶ್ಚಿತಾರ್ಥದಲ್ಲಿ ವರನಿಗೆ ಕೊಡುವ ಫಲದಾನ.

बरोठा, पु. ಬಾಗಿಲು, ಮುಖಮಂಟಪ.

बरोह, स्त्री. ಆಲದ ಬಿಳಲು.

बरौनी, स्त्री. ರೆಪ್ಪೆಯ ಕೂದಲು, ಎವೆ.

बरौरी, स्त्री. ಸಂಡಿಗೆ.

बर्क़, स्त्री. ಮಿಂಚು, ವಿದ್ಯುತ್ತು. वि. ಚುರುಕಾದ, ತೀವ್ರ.

बर्ग, पु. ಎಲೆ.

बर्गश्ता, वि. ತಿರುಗಿಬಿದ್ದ.

बर्फ़, पु. ಹಿಮ, ಮಂಜು, ಮಂಜುಗಡ್ಡೆ, ನೀರ್ಗಲ್ಲು.

बर्फ़िस्तान, पु. ಮಂಜು ತುಂಬಿದ ಸ್ಥಳ, ಹಿಮಾಲಯ.

बर्फ़ी, स्त्री. ಒಂದು ಮಿಠಾಯಿ, ಬರ್ಫಿ.

बर्बर, पु. ಕಾಡು ಜನರು, ಅಸಭ್ಯ ಜನರು, वि. ಅಸಭ್ಯ, ಅನಾಗರಿಕ.

बर्राक़, वि. ಚುರುಕಾದ, ಚಟುವಟಿಕೆ

ಯುಳ್ಳ; ಮಿಂಚುವ, ಹೊಳೆಯುವ; ಚತುರ, ಗಟ್ಟಿಗ, ಪಟು.

बर्राना, अक्रि. ಕನವರಿಸು; ಹರಟು.

बर्राहट, स्त्री. ಕನವರಿಕೆ; ಹರಟೆ

बर्र, बर्रें, पु. ಕಣಜದ ಹುಳು, ಹೆದ್ದುಂಬಿ

बर्रै, स्त्री. ಕುಸುಂಬೆ ಗಿಡ.

बर्स, पु. ಕುಷ್ಠರೋಗ.

बलंद, वि. = बुलंद,

बल, पु. ಬಲ, ಶಕ್ತಿ; ಪಕ್ಕ, ಪಾರ್ಶ್ವ. ಸುತ್ತು, ಮುರಿಗೆ, ಮುರುಕು; ಡೊಂಕು; ಕೊರಗು, ಖೋತ. बल खाना = ವಕ್ರವಾಗು, ಡೊಂಕು ಬೀಳು.

बलकट, पु. ಬಾಡಿಗೆಯ ಮುಂಗಡ, ಸಂಚಕಾರ.

बलकना, अक्रि. ಕುದಿ, ಉಕ್ಕು; ಹಿಗ್ಗು; ತೊದಲು, ಉಗ್ಗು; ಅಳು; ತೆರೆ, ಬಿಚ್ಚು.

बलकाना, सक्रि. ಕುದಿಸು, ಉಕ್ಕಿಸು.

बलग़म, पु. ಕಫ, ಶ್ಲೇಷ್ಮ.

बलग़ामी, वि. ಶ್ಲೇಷ್ಮ ಸಂಬಂಧವಾದ.

बलतोड़, पु. ಕೂದಲು ಒಡೆಯುವುದರಿಂದಾಗುವ ಬಕ್ಕೆ, ಮೊಡವೆ.

बलद, पु. ಎತ್ತು; ದನದ ಹಿಂಡು.

बलदा, पु. ನಗರ, ಪಟ್ಟಣ.

बलदाऊ, पु. ದನಕರುಗಳನ್ನು ಅಟ್ಟುವವ; ಬಲದೇವ, ಬಲರಾಮ.

बलदाना, पु. ಹೊರಿ ಎತ್ತುಗಳ ಮೇಲಿನ ಸುಂಕ.

बलना, अक्रि. ಉರಿ, ಜ್ವಲಿಸು.

बलबलाना, अक्रि. ಉಕ್ಕು, ಕುದಿ; ಉದ್ವೇಗಗೊಳ್ಳು; ಬೆದೆಗೊಳ್ಳು; ಅರಚು, ಅಬ್ಬರಿಸು.

बलबलाहट, स्त्री. ಅರಚುವಿಕೆ, ಕೂಗಾಟ; ಬೆದೆಗೊಳ್ಳುವಿಕೆ, ಮಸ್ತಿ.

बलम, पु. ವಲ್ಲಭ, ಪ್ರಿಯ, ಇನಿಯ.

बलरांड, स्त्री. ಬಾಲ ವಿಧವೆ.

बलवा, पु. ದಂಗೆ, ವಿದ್ರೋಹ; ಧಾಂದಲೆ, ಗಲಭೆ

बलवाई, पु. ದಂಗೆಖೋರ, ವಿದ್ರೋಹಿ; ಗಲಭೆ ಮಾಡುವವ.

बला, स्त्री. ಸಂಕಟ; ಆಪತ್ತು, ವಿಪತ್ತು; ರೋಗ; ಪೀಡೆ, ಶನಿ; ಕಾಡುಮೆಂತೆಯ

बलाक, पु. ಬಕಪಕ್ಷಿ, ಕೊಕ್ಕರೆ.

बलाग़त, पु. ವಾಕ್ಪಟುತ್ವ; ಪ್ರೌಢತೆ.

बलात्कार, पु. ಬಲವಂತ, ಬಲಾತ್ಕಾರ.

बलादुर, पु. ಕೇರುಬೀಜ, ಭಲ್ಲಾತಕ.

बलाय, स्त्री. = बला.

बलाही, पु. ಚಮ್ಮಾರ, ಸಮಗಾರ.

बलि, बलिदान, पु. ಆಹುತಿ, ಬಲಿ, ಬಲಿದಾನ.

बलिहारना, सक्रि. ಬಲಿ ಕೊಡು.

बलिहारी, स्त्री. ಆಹುತಿ, ಬಲಿ; ಆತ್ಮಾರ್ಪಣೆ.

बलीद, वि. ದಡ್ಡ; ಪೆದ್ದ.

बलुका, वि. ಮರಳುಳ್ಳ, ಉಸುಬಿನ; ಬಿರುಸು.

बलूत, वि. ಒಂದು ಮರ, ಬಾನವೃಕ್ಷ.

बलूरना, सक्रि. ಕೆದುರು, ಪರಚು.

बलूला, पु. ನೀರುಗುಳ್ಳೆ.

बलेंडा, पु. ಸುಳಿಗಾಳಿ, ಸುಂಟರಗಾಳಿ;

ಚೆಂತೊಲೆ.

बले, क्रिवि. ಹೌದು; ಸರಿ; ಒಳ್ಳೆಯದು; ಬಲುಚೆನ್ನಾಗಿ.

बलैया, स्त्री. ಕಷ್ಟ; ರೋಗ; ಪೀಡೆ. बलैया लेना = ಪ್ರೇಮದಿಂದ ಇತರರ ಕಷ್ಟ ಅಥವಾ ದುಃಖವನ್ನು ತಾನು ವಹಿಸಿಕೊಳ್ಳು.

बल्कि, क्रिवि. ಆದರೆ; ಅಲ್ಲದೆ; ಇಲ್ಲವೆ; ನಿಜವಾಗಿ.

बल्लभ, वि. ಪ್ರಿಯ, ಪ್ರೀತಿಯ. पु. ಪತಿ; ಇನಿಯ; ಗೆಳೆಯ; ಯಜಮಾನ.

बल्लम, पु. ದೊಣ್ಣೆ, ದಂಡ; ಬೆಳ್ಳಿ ಕಟ್ಟಿಗೆ; ಈಟಿ, ಭರ್ಜಿ; ಸಬಳ.

बल्लमटेर, पु. "ವಾಲಂಟಿಯರ್", ಸ್ವಯಂಸೇವಕ.

बल्लम-बरदार, पु. ಬೆಳ್ಳಿ ಕಟ್ಟಿಗೆಯುವ, ದಂಡಧರ; ಭರ್ಜಿಯುವ, ಸಬಳಿಗ.

बल्ला, पु. ದೂಲ; ದೊಣ್ಣೆ; ದೋಣಿ ನಡೆಸುವ ಹುಟ್ಟು, ಜಲ್ಲೆ; ಚೆಂಡು ಹೊಡೆಯುವ "ಬ್ಯಾಟು", ದಾಂಡು.

बल्लाई, पु. ಗಿಡಮರಗಳನ್ನು ಸವರಿ ಗ್ರಾಮದ ಸರಹದ್ದನ್ನು ಸರಿಯಾಗಿ ನೋಡಿಕೊಳ್ಳುವ ಆಳು.

बल्ली, स्त्री. ಕೋಲು; ಜಲ್ಲೆ; ಬಳ್ಳಿ, ಲತೆ.

बवंडर, पु. ಸುಳಿಗಾಳಿ, ಸುಂಟರಗಾಳಿ.

बवना, अक्रि. ಚಲ್ಲು, ಚದರು. सक्रि. ಚಲ್ಲು, ಚದರಿಸು.

बवरना, अक्रि. = बौरना.

बवाई, स्त्री. ಚಳಿಯಿಂದ ಕೈಕಾಲು ಒಡೆಯುವುದು, ಕಾಲು ಹುಗುಳು.

बवाला, पु. ಆಪತ್ತು, ವಿಪತ್ತು.

बवासीर, स्त्री. ಮೊಳೆ ರೋಗ, ಮೂಲವ್ಯಾಧಿ.

बशर, पु. ಮನುಷ್ಯ, ಮಾನವ

बशरा, पु. ಮುಖಾಕೃತಿ, ಮುಖಭಂಗಿ.

बशरियत, स्त्री. ಮನುಷ್ಯತನ, ಮಾನವತೆ.

बशरी, वि. ಮನುಷ್ಯನ, ಮಾನವನ.

बशर्ते, क्रिवि. ನಿಬಂಧನೆಯ ಮೇಲೆ, ಷರತ್ತಿನ ಮೇಲೆ, ಕರಾರಿನ ಮೇಲೆ.

बशात, वि. ಅಗದ, ಅನಾರೋಗ್ಯಕರವಾದ; ಒಪ್ಪದ.

बशारत, स्त्री. ಶುಭ ಸಮಾಚಾರ.

बशीर, वि. ಶುಭ ಸಮಾಚಾರ ತರುವವ, ಸಂತೋಷದ ಸುದ್ದಿ ಹೇಳುವವ.

बशाशत, स्त्री. ಸಂತೋಷ, ಹರ್ಷ, ಖುಷಿ

बशौक़, क्रिवि ಖುಷಿಯಿಂದ, ಕುಶಾಲಾಗಿ

बश्शाश, वि. ಹರ್ಷಿತ, ಮುದಿತ; ನಗುಮೊಗದ, ಗೆಲುವಿನ

बसंत, स्त्री. ವಸಂತಋತು, ವಸಂತಕಾಲ; ವಸಂತನ ಹಬ್ಬ.

बसंती, वि. ವಸಂತಕಾಲದ; ನಸು ಹಳದೀ ಬಣ್ಣ.

बस, पु. ಅವಕಾಶ, ಸಂದರ್ಭ; ವಶ, ಸ್ವಾಧೀನ; ಹತೋಟಿ; ಶಕ್ತಿ. वि. ಸಾಕಷ್ಟು, ಪರ್ಯಾಪ್ತ; ಯಥೇಷ್ಟ. क्रिवि. ಸಾಕು, ಪರ್ಯಾಪ್ತ. बस करना = ಸಾಕುಮಾಡು, ನಿಲ್ಲಿಸು.

बसत, स्त्री. ವಾಸಸ್ಥಳ, ವಸತಿ; ಆಬಾದು ಜಮೀನು.

बसन, पु. ವಸ್ತ್ರ, ವಸನ; ಆಭೂಷಣ.

बसना, अक्रि. ವಾಸವಾಗಿರು, ವಾಸಿಸು; ಒಕ್ಕಲಿರು, ನೆಲಸು; ತಂಗು; ಜನಭರಿತವಾಗಿರು; ಪರಿಮಳಿಸು. पु. ಸುತ್ತುವ ಬಟ್ಟೆ, ಚೀಲ.

बसनी, स्त्री. ಚೀಲ, ತೈಲಿ.

बसर, पु. ನೋಡುವಿಕೆ; ಅರಿವು, ತಿಳಿವು; ಜೀವನೋಪಾಯ, ಕಾಲಕ್ಷೇಪ.

बसवार, पु. ಒಗ್ಗರಣೆ.

बसवास, पु. ವಾಸ, ನಿವಾಸ; ಮನೆ.

बसह, पु. ಬಸವ, ಹೋರಿ; ಎತ್ತು

बसा, स्त्री. ಕಣಜದ ಹುಳು, ಕಡಜ. वि. ಬಹಳ, ಹೆಚ್ಚು.

बसाना, सक्रि. ವಾಸಮಾಡಿಸು; ತಂಗಿಸು, ಇರಿಸು; ಒಕ್ಕಲಿರಿಸು; ವಸಾಹತು ಮಾಡು; ಜನಭರಿತ ಮಾಡು. अक्रि. ವಾಸಿಸು; ಪರಿಮಳಿಸು.

बसारत, स्त्री. ದೃಷ್ಟಿ, ಬೋಧ.

बसीगत, स्त्री. ವಾಸ, ನಿವಾಸ.

बसीठ, पु. ದೂತ, ಹರಕಾರ.

बसीठी, स्त्री. ದೂತಿ; ದೌತ್ಯ.

बसीत, वि. ಹರಡಿದ; ಸರಳವಾದ; ಸಾದಾ. पु. ಹೆಗ್ಗಡೆ, ಪಟೇಲ.

बसीना, पु. ಜೀವಿಸುವ ವಿಧ, ಬಾಳುವೆ

बसीरत, स्त्री. ತಿಳಿವಳಿಕೆ; ವಿವೇಕ.

बसूधा, स्त्री. ಜಗತ್ತು, ಪ್ರಪಂಚ.

बसूला, बसूली, स्त्री. ಬಾಚಿ.

बसेंद, पु. ತಿನ್ನುವ ಒಂದು ಬಗೆ ಗೆಡ್ಡೆ.

बसेंधा, वि. ನಾತದ, ನಾರುವ.

बसे, क्रिवि. ಹೆಚ್ಚಾಗಿ, ಹೇರಳವಾಗಿ.

बसेरा, वि. ವಾಸ ಮಾಡುವವ. पु. ಸಾಯಂಕಾಲ ಹಕ್ಕಿಗಳು ತಮ್ಮ ಗೂಡುಗಳಿಗೆ ಹಿಂತಿರುಗುವ ಹೊತ್ತು; ಹಕ್ಕಿಗಳು ರಾತ್ರಿ ಕುಳಿತುಕೊಳ್ಳುವ ಸ್ಥಳ; ರಾತ್ರಿ ತಂಗುವ ಸ್ಥಳ, ರಾತ್ರಿಯ ವಸತಿ; ಬಿಡಾರ, ತಂಗುವಿಕೆ. बसेरा करना = ರಾತ್ರಿಗೆ ತಂಗು; ವಾಸಿಸು.

बसेरी, वि. ವಾಸಿಸುವವ, ನಿವಾಸಿ.

बसोबास, पु. ವಾಸಸ್ಥಾನ, ನಿವಾಸ.

बसौंधी, स्त्री. ಕಾಯಿಸಿ ಗಟ್ಟಿಮಾಡಿದ ಹಾಲು, "ಬಾಸಂದಿ".

बस्त, वि. ಕಟ್ಟಲ್ಪಟ್ಟ, ಬದ್ಧ.

बस्तगी, स्त्री. ಕಟ್ಟುವಿಕೆ; ಮುದುರಿಕೊಳ್ಳುವಿಕೆ; ಮಲಬದ್ಧತೆ.

बस्ता, पु. ಪುಸ್ತಕಗಳನ್ನು ಕಟ್ಟುವ ವಸ್ತ್ರ; ದಫ್ತರನ್ನು ಕಟ್ಟುವ ಬಟ್ಟೆ; ಕಟ್ಟು. वि. ಕಟ್ಟು ಬಿದ್ದ; ಕಟ್ಟಲ್ಪಟ್ಟ, ಬದ್ಧ.

बस्तार, पु. ಕಟ್ಟು, ಕಂತೆ; ಕುಚ್ಚು.

बस्ती, स्त्री. ವಾಸಸ್ಥಾನ; ಗ್ರಾಮ.

बहंगी, स्त्री. ಅಡ್ಡೆ, ಕಾವಡಿ.

बहंगी-बरदार, वि. ಅಡ್ಡೆ ಹೊರುವವ, ಅಡ್ಡೆಕಾರ.

बहकना, अक्रि. ಅಲೆದಾಡು, ದಾರಿತಪ್ಪು; ಮೋಸಹೋಗು; ಮರುಳಾಗು, ಭ್ರಾಂತನಾಗು; ತೊಳಲು.

बहकाना, सक्रि. ಮೋಸಗೊಳಿಸು; ದಾರಿತಪ್ಪಿಸು; ವಶೀಕರಿಸು; ಆಟವುಟಿಸು; ಭ್ರಾಂತಿಗೊಳಿಸು; ತೊಳಲಿಸು; ಪುಸಲಾಯಿಸು.

बहकावट, स्त्री. ಮೋಸಗೊಳಿಸುವಿಕೆ,

ಅಟಮಟ; ಪುಸಲಾಯಿಸುವಿಕೆ.

बहकावा, पु. ಮೋಸ, ಅಟಮಟ; ಭ್ರಾಂತಿ, ಭ್ರಮೆ.

बहता, वि. ಓಡುವ, ಹರಿಯುವ. बहता पानी = ಹರಿಯುವ ನೀರು, ಹೊಳೆ.

बहत्तर, वि. ಎಪ್ಪತ್ತೆರಡು.

बहन, स्त्री. ಭಗಿನಿ, ಸೋದರಿ, ಅಕ್ಕ, ತಂಗಿ; ಪ್ರವಹಿಸುವಿಕೆ, ನೀರೋಟ.

बहना, अक्रि. ಪ್ರವಹಿಸು, ಹಾಯು, ಪ್ರವಾಹಿಸು; ಸೂಸು, ಹರಿ, ಓಡು; ತೇಲಿಕೊಂಡು ಹೋಗು.

बहनापा, पु. ಸೋದರಿಯ ಸಂಬಂಧ.

बहनेली, वि. ಅಕ್ಕತಂಗಿಯರಂತಹವಳು; ದತ್ತಕ ಸೋದರಿ.

बहनेऊ, बहनोई, पु. ಸೋದರಿಯ ಗಂಡ, ಭಾವ.

बहबूद, पु. ಒಳ್ಳೆಯದು, ಶುಭ.

बहम, क्रिवि. ಸಂಗಡ, ಸಹಿತ.

बहर, पु. ಸಮುದ್ರ; ಖಾರಿ, ಕೊಲ್ಲಿ. स्त्री. ಛಂದಸ್ಸು; ಸ್ವರಮೇಳ; ಪ್ರಾಸ; ಯುದ್ಧನಾವೆ; ಸ್ವರದ ಲಯ.

बहरहाल, क्रिवि. ಯಾವ ಪ್ರಕಾರವಾದರೂ, ಹ್ಯಾಗಾದರೂ, ಹ್ಯಾಗೂ.

बहरा, वि. ಕಿವುಡ, ಕೆಪ್ಪ, ಊಡಕ. पु. ಸ್ವತ್ತು; ಭಾಗ; ಭಾಗ್ಯ; ಲಾಭ.

बहरारू, पु. ಹೊಸದಾಗಿ ಐಶ್ವರ್ಯ ಹೊಂದಿದವ; ಹೊಸಬ, ಅಪರಿಚಿತ.

बहरिया, वि. ಹೊರಗಿನವ, ಅಪರಿಚಿತ.

बहरियाना, सक्रि. ಹೊರಗೆಡವು, ಹೊರಡಿಸು. अक्रि. ಹೊರಗೆಹೋಗು, ಹೊರಡು; ಬೇರೆಯಾಗು.

बहरी, वि. ಕಿವುಡಿ, ಕೆಪ್ಪಿ; ಸಮುದ್ರದ. स्त्री. ಒಂದು ಜಾತಿಯ ಗಿಡಗ.

बहल, स्त्री. ಗೋರಥ, ಎತ್ತಿನ ಗಾಡಿ.

बहलना, अक्रि. ಸಂತೋಷಿಸು, ವಿನೋದಿಸು; ಮನೋರಂಜನವಾಗು.

बहलाना, सक्रि. ಮನಸ್ಸನ್ನು ತಿರುಗಿಸು; ವಿನೋದಪಡಿಸು; ಮನೋರಂಜನವಾಗಿಸು, ಉಲ್ಲಾಸಪಡಿಸು.

बहलाव, पु. ಮನೋರಂಜನೆ, ಚಿತ್ತರಂಜನೆ; ಉಲ್ಲಾಸ, ಗಮ್ಮತ್ತು.

बहलिया, पु. ಹಕ್ಕಿ ಬೇಟೆಗಾರ.

बहली, स्त्री. ಗೋರಥ, ಎತ್ತಿನ ಗಾಡಿ.

बहस, स्त्री. ಚರ್ಚೆ, ವಾದ; ತರ್ಕ, ವಾದವಿವಾದ; ಪಂದ್ಯ, ಸ್ಪರ್ಧೆ; ಜಗಳ.

बहसना, सक्रि. ವಾದಿಸು, ಚರ್ಚಿಸು, ವಿವಾದಿಸು; ಪಂದ್ಯ ಕಟ್ಟು.

बहसा-बहसी, स्त्री. ವಾದವಿವಾದ, ವಾಗ್ವಾದ.

बहा, पु. ಮೌಲ್ಯ, ಬೆಲೆ.

बहादुर, वि. ವೀರ, ಶೂರ; ಪರಾಕ್ರಮಿ; ಎದೆಗಾರ, ಧೀರ.

बहादुराना, वि. ಶೂರರಂಥ.

बहादुरी, स्त्री. ಶೌರ್ಯ; ಪರಾಕ್ರಮ; ಸಾಹಸ.

बहाना, सक्रि. ಹಾಯಿಸು, ಹರಿಸು; ತೇಲಿಸು; ಸುರಿಸು पु. ನೆಪ, ವ್ಯಾಜ; ತೋದೆ, ಸಬೂಬು, ಸಬಬು, ಅಟಮಟ.

बहानेबाज़, बहानेसाज़, वि. ನೆಪ ಹೇಳುವವ; ಠಕ್ಕ, ಮೋಸಗಾರ.

बहार, स्त्री. ವಸಂತಕಾಲ; ಸುಗ್ಗಿ; ಸುಮ್ಮಾನ, ಮಜಾ, ಗಮ್ಮತ್ತು; ವಿನೋದ; ಯೌವನ, ಪ್ರಾಯ; ಅಂದ, ಸೊಬಗು; ಸೌಂದರ್ಯ, ಲಾವಣ್ಯ.

बहारी, वि. ವಸಂತಕಾಲದ; ಷೋಕಿನ; ಸೊಬಗಿನ.

बहाल, क्रिवि. ಯಥಾಸ್ಥಿತಿ; ಸ್ಪಷ್ಟವಾಗಿ; ಕುಶಾಲಾಗಿ, ಸುಖವಾಗಿ. बहाल करना = ಪೂರ್ವ ಸ್ಥಿತಿಯಲ್ಲಿರಿಸು; ಯಥಾಸ್ಥಾನದಲ್ಲಿಡು; ಸ್ವಸ್ಥಪಡಿಸು.

बहाली, स्त्री. ಪೂರ್ವಸ್ಥಿತಿಗೆ ಬರುವಿಕೆ, ಪುನಃಸ್ಥಾಪನೆ; ಕುಶಾಲು; ನೆಪ.

बहाव, पु. ಹರಿಯುವಿಕೆ; ಪ್ರವಾಹ, ಹರಿತ, ನೀರೋಟ, ಸೆಳವು; ನೆರೆ, ಪೂರ

बहिन, स्त्री. = बहन

बहियाँ, स्त्री. ತೋಳು, ಬಾಹು.

बहिरंग, क्रिवि. ಬಹಿರಂಗವಾಗಿ.

बहिला, वि. ಗೊಡ್ಡು, ಬರಡು.

बहिष्कार, पु. ಹೊರದೂಡುವಿಕೆ, ಬಹಿಷ್ಕಾರ.

बहिश्त, स्त्री. ಸ್ವರ್ಗ, ದೇವಲೋಕ.

बहिश्ती, वि. ದೇವಲೋಕದ, ಸ್ವರ್ಗದ.

बही, स्त्री. ಖಾತೆ ಪುಸ್ತಕ, ವಹಿ. बही खसरा, बही खाता = ಕಿರ್ದಿ ಪುಸ್ತಕ, ರೋಜು ಕಿರ್ದಿ.

बहीर, स्त्री. ಜನ ಸಮೂಹ; ದಂಡಿನ ಹಿಂದೆ ಹೋಗುವ ಸೈನಿಕರಲ್ಲದವರ ಗುಂಪು; ದಂಡಿನ ಉಪಕರಣ ಸಾಮಗ್ರಿಗಳು.

बहीरा, पु. ಸಣ್ಣ ಸಮುದ್ರ; ಸರೋವರ.

बहुंवा, पु. ಛಾವಣಿಯ ಅಡ್ಡದಬ್ಬೆ, ರೀಪು.

बहु, वि. ಬಹಳ, ಬಹು, ಬಲು.

बहुगुना, वि. ಹಲವುಪಟ್ಟು, ಅನೇಕಸಲ. पु. ಒಂದು ಬಗೆ ಪಾತ್ರೆ.

बहुटनी, स्त्री. ತೋಳುಬಂದಿ, ಅಂಗದ.

बहुत, वि. ಬಹಳ, ಬಹು; ಹಲವು. क्रिवि. ಬಹಳವಾಗಿ, ಹೇರಳವಾಗಿ.

बहुताई, बहुतात, बहुतायत, स्त्री. ಬಾಹುಲ್ಯ, ಆಧಿಕ್ಯ, ಹೇರಳ.

बहुतेरा, वि. ಬಹಳವಾದ, ಹೆಚ್ಚಾದ. क्रिवि. ಬಹಳವಾಗಿ.

बहुतेरे, वि. ಹಲವು, ಅನೇಕ.

बहुधा, क्रिवि. ಬಹುಶಃ, ಹೆಚ್ಚಾಗಿ.

बहुरंगा, वि. ವಿವಿಧ, ಪರಿಪರಿ.

बहुर, बहुरी, क्रिवि. ತಿರುಗಿ, ಪುನಃ, ಮತ್ತೆ.

बहुरना, अक्रि. ಹಿಂತಿರುಗು, ವಾಪಸು ಬರು.

बहुराना, सक्रि. ಹಿಂತಿರುಗಿಸು; ವಾಪಸು ಮಾಡು, ಪರತ ಮಾಡು.

बहुरिया, स्त्री. ಸೊಸೆ.

बहुरी, स्त्री. ಪುರಿ, ಅರಳು.

बहुरूप, पु. ಧರಿಸುವಿಕೆ; ವೇಷ.

बहुरूपिया, बहुरूपी, पु. ವೇಷಗಾರ, ವೇಷಧಾರಿ.

बहुल, वि. ಬಹಳ, ಹೆಚ್ಚು.

बहुली, स्त्री. ಏಲಕ್ಕಿ.

बहुलता, स्त्री. ಬಾಹುಲ್ಯ.

बहूंटा, पु. ತೋಳುಬಂದಿ, ಅಂಗದ.

बहूंटी, स्त्री. "बहूंटा" का लघु रूप.
बहू, स्त्री. ಸೊಸೆ, ವಧು; ಹೆಂಡತಿ.
बहूटी, स्त्री. "बहू" का लघु रूप.
बहेड़ा, पु. ತಾರೆ ಕಾಯಿ, ವಿಭೀತಕ.
बहेतू, वि. ಅಲೆದಾಡುವವ; ತಿರುಕ; ಪೋಲಿ.
बहेलिया, पु. ಹಕ್ಕಿ ಬೇಟೆಗಾರ, ಬೇಡ.
बहोरना, सक्रि. ವಾಪಸು ಮಾಡು, ಪರತ ಮಾಡು.
बहोरी, क्रिवि. ಮತ್ತೆ, ಪುನಃ.
बाँ, पु. ಹಸುವಿನ ಕೂಗು, "ಅಂಬಾ"; ಸಲ, ಸಾರಿ, ದಫ.
बांक, वि. ಬಾಗಿದ; ಡೊಂಕು, ಕೊಂಕಾದ; ಒಯ್ಯಾರದ. पु. ಡೊಂಕು, ಬಾಗು; ನದಿಯ ತಿರವು, ಮುಡುಕು. स्त्री. ತೋಳುಬಂದಿ, ವಂಕಿ; ಬಳೆ; ಕಮಾನು; ಕಠಾರಿ, ಬಾಕು; ಮುಂಚು.
बांकड़ी, स्त्री. ಕಲಾಬತ್ತಿನ ನವಾರ, ಗೋಟಾ, ನಕ್ಕಿ.
बांकना, सक्रि. ಬಾಗಿಸು, ಕೊಂಕಿಸು. अक्रि. ಬಾಗು, ಕೊಂಕು, ಉರುಗು.
बांकपन, पु. ಬಾಗು, ಡೊಂಕು; ಬೆಡಗು; ಸೊಬಗು; ಸೊಗಸು.
बांका, पु. ಮಚ್ಚುಕತ್ತಿ; ವಕ್ರವಾದ ಕಹಳೆ, ಮುರಿಗೊಂಬು. वि. ಬಾಗಿದ, ಡೊಂಕಾದ; ಸೊಗಸುಗಾರ; ಒಯ್ಯಾರದವ, ಜಂಭಗಾರ. बांका तिरछा = ಮೋಜುಗಾರ, ಷೋಕಿಲಾಲ.
बांकिया, स्त्री. ಕಹಳೆ, ಮುರಿಗೊಂಬು.
बांग, स्त्री. ಕೂಗು, ಕೂಗಾಟ; ಮಸೀದಿಯಲ್ಲಿ ನಮಾಜು ಮಾಡಲು ಕರೆವ ಕೂಗು; ನಮಾಜಿಗಾಗಿ ಮುಲ್ಲಾವಿನ ಕರೆ; ಕೋಳಿಯ ಬೆಳಗಿನ ಕೂಗು.
बांगर, पु. ನದಿಯ ದಡ; ಮೆಕ್ಕಲು, ಪುಲಿನ; ಮೇಲ್ಸೀಮೆ.
बांगा, पु. ಒಂದು ಬಗೆ ಹತ್ತಿ; ಹತ್ತಿಯ ಹೊಲ.
बांगुर, पु. ಬಲೆ, ಬೋನು.
बांचनहारा, पु. ಓದುವವ; ಪುರಾಣ ಓದುವವ; ಪುರಾಣಿಕ.
बांचना, सक्रि. ಓದು, ಪಠಿಸು.
बांझ, स्त्री. ವಂಧ್ಯಾ ಸ್ತ್ರೀ, ಬಂಜೆ.
बांट, स्त्री. ಹಂಚುವಿಕೆ, ಪಾಲು; ಬಟ್ಟು.
बांटना, सक्रि. ಪಾಲುಮಾಡು, ಹಂಚು, ವಿಂಗಡಿಸು; ಬಟವಾಡೆ ಮಾಡು, ವಿನಿಯೋಗಿಸು.
बांटा, पु. ಹಂಚುವಿಕೆ, ವಿಂಗಡಣೆ; ಪಾಲುಮಾಡುವಿಕೆ; ಪಾಲು, ಹಿಸ್ಸೆ. बांटा बांटी = ಹಂಚಿಕೊಳ್ಳುವಿಕೆ.
बांडा, वि. ಬಾಲವಿಲ್ಲದ.
बांडी, स्त्री. ಕೋಲು, ದೊಣ್ಣೆ; ಒಂದು ಬಗೆ ಉಡುಪು.
बांद, पु. ಸೇವಕ, ದಾಸ.
बांदर, पु. ಕಪಿ, ಕೋತಿ.
बांदा, पु. ಬಂದನಿಕೆ.
बांदी, स्त्री. ಸೇವಕಿ, ತೊತ್ತು.
बांध, पु. ಕಟ್ಟೆ, ಒಡ್ಡು, ಏರಿ.
बांधना, सक्रि. ಬಂಧಿಸು, ಕಟ್ಟು; ಬಿಗಿ; ಕಟ್ಟೆ ಕಟ್ಟು, ಒಡ್ಡು ಹಾಕು; ಕಟ್ಟು ಮಾಡು; ವಿಧಿಸು, ರಚಿಸು, ಕಲ್ಪಿಸು;

ರೂಪಿಸು; ಸಂಕಲ್ಪಿಸು; ನಿಶ್ಚಯಿಸು.
बांधनूं, पु. ಯೋಜನೆ, ಹಂಚಿಕೆ; ಕಲ್ಪನೆ; ಸೃಷ್ಟನೆ; ಬಣ್ಣಹಾಕುವುದಕ್ಕೆ ಬಟ್ಟೆಯ ಅಂಚುಗಳನ್ನು ಬಿಗಿದು ಕಟ್ಟುವ ಗಂಟು; ಚಾಡಿ; ಒಂದು ಬಗೆ ರೇಷ್ಮೆ ಬಟ್ಟೆ; ಗಿಳಿ.
बांबां, पु. ಒದರಾಟ, ಹರಟೆ.
बांबी, स्त्री. ವಲ್ಮೀಕ, ಹುತ್ತ; ಹಾವಿನ ಹುತ್ತ; ಅಂಚೆಯ ಪೆಟ್ಟಿಗೆ.
बांस, पु. ಬಿದಿರು, ಗಳ; ಗಣೆ, ಜಲ್ಲೆ; (ಸುಮಾರು ೧೦ ಅಡಿಗಳ) ಅಳತೆಯ ಕೋಲು; ಬೆನ್ನೆಲುಬು, ಪೃಷ್ಠವಂಶ.
बांस पर चढ़ना=ಅಪಖ್ಯಾತಿಹೊಂದು
बांसपूर, पु. ನಯವಾದ ಒಂದು ಬಗೆ ಬಟ್ಟೆ, ಚೀನಾ ದೇಶದ ಬಟ್ಟೆ.
बांसरी, बांसली, बांसुरी, स्त्री. ಪಿಳ್ಳಂಗೋವಿ, ವೇಣು, ಕೊಳಲು; ಸೊಂಟಕ್ಕೆ ಕಟ್ಟಿಕೊಳ್ಳುವ ಹಣದ ಚೀಲ, ಹಿಮ್ಮಣಿ ಚೀಲ.
बांसा, पु. ಮೂಗಿನಕಂಬ; ಪೃಷ್ಠವಂಶ
बांह, स्त्री. ಬಾಹು, ತೋಳು, ರಟ್ಟೆ; ಬಲ; ಬೆಂಬಲ; ನೆರವು, ಆಸರೆ; ಸಹಾಯಕ, ರಕ್ಷಕ; ಅಂಗಿಯ ತೋಳು; ಒಂದು ಕಸರತ್ತು.
बा, पु. ಸಲ, ಬಾರಿ वि. ಸಮೇತ, ಸಹಿತ.
बाइत्तिफ़ाक़, क्रिवि. ಒಮ್ಮತದಿಂದ.
बाइद, क्रिवि. ಬಹುದೂರದಲ್ಲಿ
बाइस, पु. ಕಾರಣ, ಹೇತು; ಕಾರಕ.
बाई, स्त्री. ವಾತ; ವಾತರೋಗ; ಹೆಂಗಸರಿಗೆ ಗೌರವಾರ್ಥದಲ್ಲಿ ಉಪಯೋಗಿಸುವ ಶಬ್ದ, ಅಮ್ಮ, ಅವ್ವ; ಸ್ತ್ರೀ, ಮಹಿಳೆ; ನರ್ತಕಿ; ಸೂಳೆ.
बाईस, वि. ಇಪ್ಪತ್ತೆರಡು.
बाईसी, स्त्री. ಇಪ್ಪತ್ತೆರಡರ ಸಮೂಹ; ೨೨ ಸಾವಿರ ಸೈನಿಕರ ದಳ.
बाउर, वि. ಹುಚ್ಚ; ದಡ್ಡ, ಪೆದ್ದ.
बाऊ, पु. ಗೊಗ್ಗಯ್ಯ, ಗುಮ್ಮ.
बाएँ, क्रिवि. ಎಡಗಡೆಗೆ, ಎಡಕ್ಕೆ.
बाक, पु. ಭಯ, ಅಂಜಿಕೆ; ವಾಕ್, ಮಾತು.
बाकचाल, वि. ವಾಚಾಲ, ಗಳಪ.
बाक़ला, पु. ಒಂದು ಬಗೆ ಅವರೆ.
बाक़ायदा, क्रिवि. ಕ್ರಮದಿಂದ, ಯಥಾಕ್ರಮ, ವಿಹಿತರೀತಿಯಲ್ಲಿ.
बाक़िर, पु. ವಿದ್ಯಾವಂತ; ಶ್ರೀಮಂತ.
बाक़ियात, स्त्री. ಬಾಕಿ, ನಿಲವು; ನಿಲ ಬಾಕಿ, ನಿಂದಾಯ.
बाक़ी, वि. ಉಳಿದಿರುವ; ಮಿಕ್ಕ; ಅವಶಿಷ್ಟ. स्त्री. ಮಿಕ್ಕದ್ದು; ಬಾಕಿ; ನಿಲವು, ಶೇಷ. अव्य. ಆದರೆ, ಪರಂತು.
बाक़ीदार, पु. ಬಾಕಿ ಕೊಡಬೇಕಾದವ, ಬಾಕಿದಾರ.
बाख, स्त्री. ಕೆಚ್ಚಲು.
बाखर, बाखल, पु. ಅಂಗಳ, ಪ್ರಾಂಗಣ; ಒಂದೇ ಆವರಣದೊಳಗಿರುವ ಹಲವು ಮನೆಗಳು, "ಲಾಯ", ವಟಾರ; ಮನೆ; ಮೈದಾನ, ಬಯಲು; ಹುಳಿಯಿಸುವುದಕ್ಕೆ ಹಾಕುವ ಔಷಧ.
बाखी, स्त्री. ಕಂಕುಳಿನ ಕೆಳಭಾಗ.
बाग, स्त्री. ಕಡಿವಾಣ, ಲಗಾಮು.

बाग़, पु. ವಾಟಿಕೆ, ತೋಟ, ಉದ್ಯಾನ. बाग़ बाग़ होना = ಹರ್ಷಿಸು, ಆನಂದಿಸು, ಸಂತೋಷಪಡಿಸು.

बागगीर, पु. ಠಾಸದಾರ, ಸಾಹಣಿ.

बागडोर, स्त्री. ಲಗಾಮು; ಮೂಗುದಾಣ; ಅಧಿಕಾರ ಸೂತ್ರ; ಅಂಕೆ, ಹತೋಟಿ.

बाग़बाड़ी, स्त्री. ಹೂದೋಟ; ಮದುವೆಗಳಲ್ಲಿ ಕಟ್ಟುವ ಬಾಳೆಯ ಕಂಬ ಮತ್ತು ಹೂ ಮೊದಲಾದವು; ಮಕ್ಕಳು ಮರಿ.

बाग़बान, पु. ತೋಟಗಾರ, ಮಾಲಿ, ತೋಟಿಗ, ಉದ್ಯಾನಪಾಲಕ.

बाग़बानी, स्त्री. ತೋಟಗಾರನ ಕೆಲಸ.

बागर, पु. ದಡ, ಏರಿ; ಎತ್ತರವಾದ ಪ್ರದೇಶ; ಮೇಲುಸೀಮೆ.

बागा, पु. ಅಂಗಿ, ಉಡುಪು; ಬಿರುದಿನ ಉಡುಪು.

बाग़ाती, स्त्री. ತೋಟದ ಜಮೀನು, ಬಾಗಾಯಿತು.

बाग़ी, स्त्री. ದಂಗೆಖೋರ, ಬಂಡಾಯಗಾರ; ದಂಗೆ, ಬಂಡಾಯ.

बाग़ीचा, पु. ಉಪವನ, ಕೈದೋಟ.

बाघंबर, पु. ಹುಲಿಯ ಚರ್ಮ; ವ್ಯಾಘ್ರಾಸನ.

बाघ, पु. ವ್ಯಾಘ್ರ, ಹುಲಿ.

बाघनी, बाघिन, स्त्री. ಹೆಣ್ಣುಹುಲಿ, ವ್ಯಾಘ್ರಿ.

बाघी, स्त्री. ತೊಡೆವಾಳ, ಮೇಹಗ್ರಂಥಿ

बाचा, स्त्री. ವಚನ, ಮಾತು.

बाछ, स्त्री. ಆಯುವಿಕೆ, ಆಯ್ಕೆ; ತುಟಿಗಳೆರಡೂ ಸೇರುವ ಮೂಲೆ, ಕಡೆಬಾಯಿ, ಕಟವಾಯಿ, ಸೃಕ್ವ. बाछें खिलना = ನಸುನಗು.

बाछा, पु. ಕರು, ಕಂದ.

बाज, पु. ತೆರಿಗೆ; ಕಂದಾಯ; ಸುಂಕ; ವಾದ್ಯ, ಬಾಜಾ; ವಾದ್ಯ ಬಾಜಿಸುವಿಕೆ

बाज़, पु. ಗಿಡಗ, ಡೇಗೆ. वि. ಕೆಲವು; ಕತಿಪಯ; ಕೊಂಚ. क्रिवि. ಹಿಂದೆ; ತಿರುಗಿ; ವಾಪಸು. बाज़ आना = ಹಿಂತಿರುಗು, ಹಿಮ್ಮೆಟ್ಟು; ಬಿಟ್ಟುಬಿಡು, ತೊರೆ. प्रत्य. ಕಾರಕಸೂಚಕ ಪ್ರತ್ಯಯ. ಉದಾ :– धोखेबाज़, कबूतरबाज़, रंडीबाज़.

बाज़गश्त, स्त्री. ಹಿಂತಿರುಗುವಿಕೆ.

बाजगुज़ार, वि. ಕಂದಾಯ ತೆರುವವ.

बाज़दावा, पु. ತನ್ನ ಹಕ್ಕನ್ನು ಬಿಟ್ಟುಬಿಡುವಿಕೆ, ಬಿಡುಗಡೆ.

बाजन, पु. ವಾದ್ಯ, ಬಾಜಾ.

बाजना, अक्रि. ಧ್ವನಿಯಾಗು; ವಾದನವಾಗು; ಮೊಳಗು; ತಗಲು.

बाजरा, पु. ಜೋಳ.

बाजा, पु. ಬಾಜಾ, ವಾದ್ಯ, बाजा गाजा = ಬಾಜಾ ಬಜಂತರಿ.

बाज़ाब्ता, क्रिवि. ವಿಧಿಪೂರ್ವಕ, ನಿಯಮಾನುಸಾರ.

बाज़ार, पु. ಅಂಗಡಿ ಬೀದಿ, ಪೇಟೆ; ಬಜಾರು; ಸಂತೆ.

बाज़ारी, बाज़ारू, वि. ಪೇಟೆಯ; ಬಜಾರಿನ; ಸಾಮಾನ್ಯದ, ಕೀಳು ತರದ

बाज़ी, स्त्री. ಆಟ; ಜೂಜಾಟ; ಪಂದ್ಯ,

ಪಣ, ಬಾಜಿ ಬಾज़ीलगाना = ಬಾಜಿಕಟ್ಟು

बाज़ीगर, पु. ಮಂತ್ರವಾದಿ, ಜಾಲಗಾರ; ಆಟಗಾರ; ಡೊಂಬರವ.

बाज़ीगरनी, स्त्री. ಮಾಟಗಾತಿ; ಡೊಂಬರಗಿತ್ತಿ.

बाज़ीगरी, स्त्री. ಮಾಟ, ಮಂತ್ರ; ಜಾಲ

बाज़ू, पु. ಬಾಹು, ತೋಳು; ರಟ್ಟೆ; ತೋಳುಬಂದಿ, ಅಂಗದ; ಕಿಟಕಿಯ ಪಡಕು; ಪಾರ್ಶ್ವ, ಪಕ್ಕ; ಬದಿ, ಕೆಲ; ಜೊತೆಗಾರ; ಸಹಾಯಕ; ಪಕ್ಷಿ ರೆಕ್ಕೆ.

बाज़ूबंद, पु. ತೋಳುಬಳೆ, ತೋಳುಬಂದಿ, ಅಂಗದ.

बाझना, अक्रि. = बझना.

बाट, पु. ದಾರಿ, ಬಾಟೆ, ಹಾದಿ; ತೂಕದ ಬಟ್ಟು, ಗುಂಡುಕಲ್ಲು.

बाट-छपाई, बाट-छप्पी, स्त्री. ತೂಕದ ಬಟ್ಟುಗಳಿಗೆ ಠಸ್ಸೆ ಹಾಕಲು ಕೊಡುವ ರುಸುಂ.

बाट-छाप, स्त्री. ತೂಕದ ಬಟ್ಟುಗಳಿಗೆ ಹಾಕುವ ಠಸ್ಸೆ.

बाटना, सक्रि. ಅರೆ, ಪುಡಿ.

बाटी, स्त्री. ಉಂಡೆ, ಮುದ್ದೆ; ಕೆಂಡದಲ್ಲಿ ಸುಟ್ಟ ರೊಟ್ಟಿ; ಅಗಲವಾದ ಬಟ್ಟಲು, ತಬರಿ; ವಾಸಸ್ಥಾನ; ಮನೆ.

बाड़ा, पु. ಬೇಲಿ ಹಾಕಿರುವ ಪ್ರದೇಶ, ಆವರಣ; ವಾಡಿ, ದೊಡ್ಡಿ.

बाड़ी, स्त्री. ತೋಟ, ನಂದನವನ; ಮನೆ; ಕಿಟಕಿ.

बाढ़, स्त्री. ವೃದ್ಧಿ, ಹುಲುಸು; ದಂಡಿ; ನೆರೆ, ಪೂರ; ನದಿಗಳ ಉಬ್ಬರ; ಪ್ರವಾಹ; ಅವಿರತವಾದ ಗುಂಡಿನ ಸುರಿಮಳೆ; ಕತ್ತಿಯ ಬಾಯಿ, ಅಲಗು, ಧಾರೆ; ಸಾಣೆ; ಬೇಲಿ.

बाढ़ना, अक्रि. = बढ़ना.

बाढ़ा, पु. ಹೆಚ್ಚು; ವೃದ್ಧಿ. बाढ़े से = ನಿಗದಿಯಾದ ಧಾರಣೆಗಿಂತ ಹೆಚ್ಚು, ಮಿಕ್ಕು, ಗೈರುಧಾರಣೆ.

बाढ़िया, पु. ಸಾಣೆ ಹಿಡಿಯುವವ.

बाढ़ी, स्त्री. ಬಹಳ ಹೆಚ್ಚಿನ ಬಡ್ಡಿಯ ದರ.

बाण, पु. ಬಾಣ, ಅಂಬು.

बात, पु. ವಾತ, ವಾಯು; ಸಂಧಿವಾತ. स्त्री. ಮಾತು, ವಚನ; ನುಡಿ; ಪ್ರಸ್ತಾಪ, ವಿಷಯ; ಪ್ರಸಂಗ, ಸಂಗತಿ.

बात-चीत, स्त्री. ಮಾತುಕತೆ, ಸಂಭಾಷಣೆ, ಸಲ್ಲಾಪ, ಸಂವಾದ.

बा-तमीज़, वि. ವಿವೇಕಿ; ತಿಳಿವಳಿಕಸ್ಥ.

बातिन, पु. ಒಳಗಿನ ಭಾಗ; ಅಂತರಂಗ, ಅಂತಃಕರಣ; ಹೃದಯ.

बातिल, वि. ಸುಳ್ಳು; ಅಸಂಗತ.

बाती, स्त्री. ದೀಪದ ಬತ್ತಿ, ಮೇಣದ ಬತ್ತಿ; ದೀಪ.

बातुल, वि. ಹುಚ್ಚ, ಮರುಳ.

बातूनिया, बातूनी, वि. ಮಾತುಗಾರ, ವಾಚಾಲ; ಹರಟೆ ಮಲ್ಲ

बाद, पु ವಾತ, ವಾಯು, ಗಾಳಿ; ವಾದ, ತರ್ಕ. वि. ಬೇರೆ; ಹೊರತು; ಬಿಟ್ಟ, ವಜಾಮಾಡಿದ; ಸೋದಿ, ಉತ್ತಾರ. क्रिवि. ಅನಂತರ, ತರುವಾಯ, ಬಳಿಕ.

बादकश, पु. ಊದುಗೊಳವಿ, ತಿದಿ.

बादबान, पु. ಹಡಗಿನ ಪಟ, ಹಾಯಿ,

ತೆರೆ ಚಾಪೆ.

बादर, वि. ಸಂತುಷ್ಟ, ಮುದಿತ.

बादरिया, पु. ಕೊಠಡಿಯೊಳಗೆ ಗಾಳಿಯ ಸಂಚಾರವನ್ನು ಹೆಚ್ಚಿಸಲು ಛಾವಣಿಯ ಹತ್ತಿರ ಇರಿಸಿದ ಕಿಟಕಿ.

बादल, पु. ಮೇಘ, ಮೋಡ, ಮುಗಿಲು

बादला, पु. ಜರತಾರಿ, ಸರಿಗೆ, ಕಿನಕಾಬು

बादली, स्त्री. ಬೆಳ್ಳಿ ಸರಿಗೆಯ ವಸ್ತ್ರ; ಮೋಡ ಕವಿದಿರುವಿಕೆ, ಮೋಡ.

बादशाह, पु. ಮಹಾರಾಜ, ಬಾದಷಹ; ದೊರೆ, ರಾಜ.

बादशाह-ज़ादा, पु. ಮಹಾರಾಜ ಕುಮಾರ.

बादशाह-ज़ादी, स्त्री. ಮಹಾರಾಜ ಕುಮಾರಿ.

बादशाहत, स्त्री. ಸಾಮ್ರಾಜ್ಯ, ರಾಜ್ಯ; ದೊರೆತನ, ಪ್ರಭುತ್ವ.

बादशाहाना, वि. ರಾಜನಂತಹ; ರಾಜನ ರೀತಿಯ.

बादशाही, स्त्री. ರಾಜ್ಯ, ದೊರೆತನ. वि. ಬಾದಷಹನ, ರಾಜನ; ರಾಜಯೋಗ್ಯವಾದ.

बादहवाई, क्रिवि. ನಿರುದ್ದೇಶವಾಗಿ, ಸುಮ್ಮನೆ.

बादा, पु. ಮದಿರೆ, ಮದ್ಯ, ಹೆಂಡ.

बादाम, पु. ಬಾದಾಮಿ

बादामी, वि. ಬಾದಾಮಿಯಂತಹ; ಬಾದಾಮಿ ಬಣ್ಣದ. पु. ಸಂಪುಟ, ಡಬ್ಬಿ; ಒಂದು ಪಕ್ಷಿ; ಬಾದಾಮಿ ಬಣ್ಣದ ಕುದುರೆ.

बादिया, पु. ಕಾಡು, ಅಡವಿ; ತಾಮ್ರದ ಬಟ್ಟಲು.

बादियान, स्त्री. ಸದಾಪ, ಸೋಂಪುಗಿಡ.

बादी, वि. ವಾಯುವಿನ; ವಾತಸಂಬಂಧವಾದ; ವಾತ ಪ್ರಕೃತಿಯ. स्त्री. ವಾತದೋಷ, ವಾತವಿಕಾರ. पु ವಾದಿಸುವವ, ವಾದಿ; ಮೊದಲು ಮಾಡುವವ; ಕರ್ತ, ಕಾರಕ.

बाध, पु. ಅಡ್ಡಿ, ತಡೆ; ಹುರಿ, ಹಗ್ಗ, ಅಸ್ತಿಯ ಪಾಲುಮಾಡುವಿಕೆ. ಪೋಡು; ಮೈದಾನ, ಬಯಲು; ಬೆಂಗಾಡು, ಮರುಭೂಮಿ.

बाधक, पु. ಅಡ್ಡಿ ಮಾಡುವವ.

बाधन, पु. ನೋವು; ತಡೆಯುವಿಕೆ.

बाधना, सक्रि. ತಡೆ, ಅಡ್ಡಿ ಮಾಡು; ಕಡಿ, ಕತ್ತರಿಸು.

बाधा, स्त्री. ತಡೆ, ಅಡಚಣೆ; ಬಾಧೆ.

बान, पु. ಬಾಣ, ಅಂಬು; ಭರ್ಜಿ, ಈಟಿ; ಕಾಂತಿ, ಕಳೆ; ಉಂಡೆ, ಗೋಳ. स्त्री. ರೂಪ; ಅಂದ; ಗುಣ, ಸ್ವಭಾವ; ವರ್ತನೆ; ಒಂದು ಬಗೆ ಬಾಣ ಬಿರುಸು, ಆಕಾಶಬಾಣ; ಅಲೆಯ ಉಬ್ಬು.

बानगी, स्त्री. ಮಾದರಿ, ಮಚ್ಚು; ನಮೂನೆ, ಮೋಸ್ತ್ರ.

बानबे, बानवे, वि. ತೊಂಭತ್ತೆರಡು.

बाना, पु. ಸ್ವರೂಪ, ಸ್ವಭಾವ; ತರಹ, ಮಾದರಿ; ಈಟಿ, ಸಬಳ; ನೆಯಿಗೆ; ನೆಯಿಗೆಯ ಹೊಕ್ಕು, ಅಡ್ಡೆಳೆ; ಗಾಳಿಪಟದ ದಾರ. सक्रि. ತೆರೆ, ಬಗಟು, ಹಿಗ್ಗಲಿಸು.

बानात, स्त्री. = बनात.

बानिक, स्त्री. ಸ್ವರೂಪ, ತರಹ.

बानिया, पु. = बनिया.

बानी, स्त्री. ವಾಣಿ, ವಚನ; ಪ್ರತಿಜ್ಞೆ; ಹರಕೆ; ಕಾಂತಿ, ಕಳೆ; ಬಂದಣಿಕೆ. पु. ಬಣಜಿಗ, ಕೋಮಟಿ; ಚಾಲಕ, ಪ್ರವರ್ತಕ; ಕಾರಕ, ಕರ್ತ; ಕೂಲಿ, ಮಜೂರಿ.

बानी-बोनी, स्त्री. ನೆಯಿಗೆಯ ಕೂಲಿ.

बानू, स्त्री. ರಾಣಿ; ದೊರೆಸಾನಿ; ಒಡತಿ, ಯಜಮಾನಿ; ಕುಲ ಸ್ತ್ರೀ, ಕುಲಾಂಗನೆ.

बानूसा, पु. बानूसी, स्त्री. ಒಂದು ಬಗೆ ಬಟ್ಟೆ.

बानैत, पु. ಸಬಳಿಗ, ಕೊಂತಕಾರ; ಬಾಣ ಎಸೆಯುವವ; ಸಿಪಾಯಿ.

बाप, पु. ತಂದೆ, ಅಪ್ಪ. बाप रे बाप = ಅಬ್ಬಬ್ಬ.

बापड़ा, बापरो, बापुरा, वि. ದಿಕ್ಕಿಲ್ಲದ, ಅಸಹಾಯ; ನೀಚ.

बापी, स्त्री. ದೊಡ್ಡ ಕೊಳ, ಪುಷ್ಕರಿಣಿ.

बापू, पु. ತಂದೆ, ಅಪ್ಪ; ದೊಡ್ಡ ಮನುಷ್ಯ; ರಾಯರು.

बाफ़, स्त्री. ಹಬೆ, ಉಗಿ, ಆವಿ.

बाफ़त, स्त्री. ನೆಯಿಗೆ.

बाफ़ता, वि. ನೆಯ್ದ. पु. ಒಂದು ಬಗೆ ರೇಷ್ಮೆ ಬಟ್ಟೆ.

बाब, पु. ಅಧ್ಯಾಯ, ಪರಿಚ್ಛೇದ; ಪ್ರಕರಣ; ಸಂಗತಿ, ವಿಷಯ; ಬಾಗಿಲು; ತೆರಿಗೆ, ಸುಂಕ.

बाबत, स्त्री. ವಿಷಯ, ಸಂಬಂಧ; ಲೆಕ್ಕ; ಬಾಬತು. क्रिवि. ವಿಷಯವಾಗಿ, ಬಗ್ಗೆ.

बाबर, पु. ಒಂದು ಮಿಠಾಯಿ.

बाबरची, पु. = बावर्ची.

बाबा, पु. ತಂದೆ, ಅಪ್ಪ; ಮುದುಕ; ಅಜ್ಜ; ಮಗು; ಸಾಧು, ಸಂತ. बाबा जान = ಪ್ರಿಯತಂದೆ; ಮುದ್ದುಮಗು.

बाबू, पु. ಮಹಾಶಯರು, ಘನವಂತರು; ಬುದ್ಧಿಯವರು, ರಾಯರು; ಮಗ, ಪುತ್ರ.

बाबूना, पु. ಒಂದು ಮರ.

बाभन, पु. ಬ್ರಾಹ್ಮಣ; ಒಂದು ಜಾತಿ.

बाम, पु. ಅಟ್ಟ, ಮಹಡಿ; ಬೆಳಗು, ಪ್ರಾತಃಕಾಲ; ಎಡಪಾರ್ಶ್ವ, ಎಡಗಡೆ; ವಿರೋಧಿ, ಶತ್ರು. स्त्री. ಒಂದು ಬಗೆ ಮೀನು.

बाम्हन, पु. ಬ್ರಾಹ್ಮಣ, ಹಾರವ.

बाम्हनी, स्त्री. ಬ್ರಾಹ್ಮಣಿ, ಹಾರವಿತಿ; ಕಣ್ಣುಬಟ್ಟೆ.

बायँ, वि. ಎಡಗಡೆಯ; ಗುರಿ ತಪ್ಪಿದ.

बायद, वि. ಸಮುಚಿತ, ಯುಕ್ತ.

बायन, पु. ಬಾಗಿನ; ಕಾಣಿಕೆ; ಮುಂಗಡ, ಸಂಚಕಾರ.

बायव, वि. ಬೇರೆ, ಭಿನ್ನ; ಪರಾಯಿ; ವಿಚಿತ್ರ.

बायवी, वि. ಬೇರೆಯ; ಹೊರಗಿನವ.

बायसूल, पु. ಪಕ್ಕಶೂಲೆ.

बायां, वि. ಎಡ, ಎಡಗಡೆಯ; ವಿರುದ್ಧ, ವಿಪರೀತ. पु. ಮಂದಸ್ವರ; ಎಡಗೈಯಿಂದ ಬಡಿಯುವ ತಬಲ.

बाया, पु. ಧಾನ್ಯ ಮಾರುವವ.

बायें, क्रिवि. ಎಡಕ್ಕೆ; ವಿರುದ್ಧವಾಗಿ.

बारंबार, क्रिवि. ಪದೇಪದೇ, ಪುನಃಪುನಃ

बार, स्त्री. ಹೊತ್ತು; ವೇಳೆ; ತಡ; ತಡವೆ, ಸಲ, ಬಾರಿ; ಅಂಚು. पु. ಬಾಗಿಲು, ದ್ವಾರ; ಬೇಲಿ, ಆವರಣ; ತಡೆ, ಅಡ್ಡಿ; ನಿರೋಧ; ನೀರು; ಮಗು; ವಾರದ ದಿನ, ವಾರ; ಭಾರ, ಹೊರೆ; ರಾಜಸಭೆ, ದರ್ಬಾರು; ನ್ಯಾಯಸಭೆ; ಅಪ್ಪಣೆ, ಅನುಮತಿ; ಫಲ; ಪ್ರವೇಶ; ಗರ್ಭ, ಬಸುರು; ಆವೃತ್ತಿ; ಒಮ್ಮೆ. बार बार =ಪದೇಪದೇ, ಪುನಃ ಪುನಃ.

बारकश, पु. ಗಾಡಿ, ವಾಹನ; ಒಯ್ಯುವವ; ಹೊರುವವ; ತಾಳ್ಮೆಯುಳ್ಳವ, ಸಹಿಷ್ಣು.

बारगह, बारगाह, स्त्री. ರಾಜದ್ವಾರ, ದರ್ಬಾರು; ಆಸ್ಥಾನ; ಗುಡಾರ, ಡೇರೆ.

बारगीर, पु. ಭಾರ ಹೊರುವವ, ಭಾರ ಹೊರುವ ಪ್ರಾಣಿ; ತನ್ನ ಸ್ವಂತ ಕುದುರೆಯಿಲ್ಲದ ರಾವುತ.

बारजा, पु. ಬಾಗಿಲಿನ ಮೇಲೆ ಮನೆಯ ಮುಂದುಗಡೆ ಚಾಚಿರುವ ಮಾಡ, ಚಾಟು ಮಾಳಿಗೆ, ಕೈಸಾಲೆ.

बारदाना, पु. ಸೈನ್ಯಕ್ಕೆ ಬೇಕಾದ ಆಹಾರ ಪದಾರ್ಥಗಳು; ವ್ಯಾಪಾರದ ಸರಕುಗಳನ್ನು ತುಂಬಿಸಿಡುವ ಪೆಟ್ಟಿಗೆ ಅಥವಾ ಚೀಲ; ಸೂಳೆಯರ ಪಾಯಿಜಾಮ.

बारना, सक्रि. ಬಿಟ್ಟು ಬಿಡು; ನಿವಾರಿಸು, ತಡೆ; ಉರಿಸು, ಹೊತ್ತಿಸು.

बारबर, पु. ಭಾರ ಹೊರುವಿಕೆ.

बारबरदार, पु. ಭಾರ ಹೊರುವವ.

बारबरदारी, स्त्री. ಭಾರ ಹೊರುವಿಕೆ, ಒಯ್ಯುವಿಕೆ; ಒಯ್ಯುವುದರ ಕೂಲಿ; ಭಾರ ಹೊರುವ ಪ್ರಾಣಿಗಳು.

बारवर, वि. ಫಲಕಾರಿ, ಫಲದಾಯಕ.

बारह, वि. ಹನ್ನೆರಡು. बारह कोशिश करना =ಸರ್ವ ಪ್ರಯತ್ನ ಮಾಡು.

बारहखड़ी, स्त्री. ಕಾಗುಣಿತ, ಬಳ್ಳಿಗಳು, ದ್ವಾದಶಾಕ್ಷರಿ.

बारहदरी, स्त्री. ಎಲ್ಲಾ ಕಡೆಯೂ ತೆರೆದಿರುವ ಮನೆ, ಮಂಟಪ.

बारहबान, पु. ಚೊಕ್ಕ ಬಂಗಾರ, ಅಪರಂಜಿ.

बारहबनी, वि. ಚೊಕ್ಕ; ಕುಂದಿಲ್ಲದ.

बारहमासा, पु. ಹನ್ನೆರಡೂ ತಿಂಗಳಿನ ವರ್ಣನೆಯ ಹಾಡು.

बारहमासी, वि. ಹನ್ನೆರಡು ತಿಂಗಳಲ್ಲೂ ಆಗುವ; ಹನ್ನೆರಡು ತಿಂಗಳಲ್ಲೂ ಪುಷ್ಪಿಸುವ ಅಥವಾ ಕಾಯಿ ಬಿಡುವ.

बारहसिंगा, पु. ಹನ್ನೆರಡು ಕೊಂಬುಳ್ಳ ಕಡವೆ, ದುಪ್ಪಿ.

बारहा, क्रिवि. ಹಲವುಬಾರಿ, ಪದೇಪದೇ.

बारहीं, स्त्री. =बरही.

बारा, पु. ಹುಡುಗ; ವಿಷಯ, ಸಂಗತಿ. बारे में =ವಿಷಯವಾಗಿ, ಕುರಿತು.

बारात, स्त्री. =बरात.

बारान, पु. ಮಳೆ, ವೃಷ್ಟಿ.

बारानी, वि. ಮಳೆಯ; ಮಳೆಗೆ ಸಂಬಂಧಪಟ್ಟ. स्त्री. ಮಳೆಯಿಂದ ಸಾಗುವಳಿಯಾಗುವ ಭೂಮಿ, ಖುಷ್ಕಿ, ಕಾಡಾರಂಬ; ಮಳೆಗೆ ಹೊದ್ದುಕೊಳ್ಳುವ ಮೇಣಗಪ್ಪಡ, ಮಳೆಯಂಗಿ.

बारावार, वि. ಫಲವುಳ್ಳ; ಫಲದಾಯಕ.

बारावारी, स्त्री. ಫಲದಾಯಕತ್ವ.

बारिश, स्त्री. ಮಳೆ, ವರ್ಷ, ವೃಷ್ಟಿ.

बारी, स्त्री. ಕಿಟಕಿ; ಮನೆ; ತೋಟ; ಬೇಲಿ; ದಡ, ಅರಗು, ಅಂಚು; ಅಲಗು; ಕಿವಿ ಮುರು; ಮೂಗುಬಟ್ಟು; ರೇವು, ಬಂದರು; ಹುಡುಗಿ, ಕನ್ಯೆ; ಸರದಿ, ಒಂತು; ಕಿತ್ತಾ, ಪರ್ಯಾಯ. पु. ಊಟದೆಲೆ ದೊನ್ನೆಗಳನ್ನು ಮಾರುವ ಒಂದು ಜಾತಿ; ಈಶ್ವರ, ಭಗವಂತ.

बारीक, वि. ನಯವಾದ, ಚಿನುಗು; ನುಣುಪು; ಸೂಕ್ಷ್ಮ, ಗೂಢ.

बारीकबीन, वि. ಸೂಕ್ಷ್ಮದರ್ಶಿ; ಬುದ್ಧಿವಂತ.

बारीकबीनी, वि. ಸೂಕ್ಷ್ಮದೃಷ್ಟಿ; ಬುದ್ಧಿವಂತಿಕೆ.

बारीकी, स्त्री. ನಯ; ಸೂಕ್ಷ್ಮ; ಗೂಢ.

बारीदार, वि. ಸರದಿಯ ಮೇಲೆ ಕೆಲಸ ಮಾಡುವವ, ಸರದಿಯವ.

बारू, पु. ಮಳಲು, ಉಸುಬು; ಮಗು.

बारूत, बारूद, स्त्री. ಸಿಡಿಮದ್ದು, ಈಡುಮದ್ದು, ಕರೇ ಮದ್ದು.

बारे, क्रिवि. ಕೊನೆಗೆ, ಕಡೆಗೆ.

बारेमें, ವಿಷಯವಾಗಿ, ಕುರಿತು, ಬಗ್ಗೆ.

बाल, स्त्री. ಧಾನ್ಯದ ಹೊಡೆ, ತೆನೆ; ಬಿರುಕು, ಬೀಟೆ; ರತ್ನಗಳಲ್ಲಿ ಒಂದು ದೋಷ. पु. ಬಾಲಕ, ಮಗು; ರೆಕ್ಕೆ, ಪುಕ್ಕ; ಕೂದಲು, ರೋಮ, ಕೇಶ; ಕಲ್ಲುಸಕ್ಕರೆಯನ್ನು ಹೆಪ್ಪುಗಟ್ಟಿಸುವ ದಾರ. बाल बांका न होना=ಕೂದಲು ಕೊಂಕದಿರು; ಸ್ವಲ್ಪವೂ ಹಾನಿ ತಗಲದಿರು. बाल बच्चे = ಮಕ್ಕಳು ಮರಿ.

बालक, पु. ಬಾಲಕ, ಹುಡುಗ.

बालकता, बालकताई, स्त्री. बालकपन, पु ಹುಡುಗತನ, ಬಾಲ್ಯ.

बालखोरा, पु. ತೀವುಳಿ, ಕೇಶಘ್ನ.

बालछड़, स्त्री. ಜಟಾಮಾಂಸಿ ಗಿಡ.

बालटा, पु. **बालटी**, स्त्री. ಹಿಡಿ ಹಾಕಿದ ಮರಿಗೆ, ಬಕೀಟು.

बालतोड़, पु. = बलतोड़.

बालना, सक्रि. ಉರಿಸು, ಹೊತ್ತಿಸು.

बालम, पु. ಒಂದು ಬಗೆ ಬಟ್ಟೆ; ಪ್ರಿಯ, ಇನಿಯ; ಪತಿ. बालम खीरा = ಮಿಣಿಕೆ ಹಣ್ಣು.

बाला, स्त्री. ಬಾಲೆ, ನಾರಿ, ಮಡದಿ; ಕೈಕಡಗ, ಬಳೆ. पु. ಕಿವಿ ಮುರು, ಒಂಟೆ, ಬಾವಲಿ. वि. ಮೇಲಿನ, ಮೇಲಾದ. बोल बाला=ಮೇಲುಗೈ, ಪ್ರಾಬಲ್ಯ; ಮಾನ್ಯತೆ, ಮನ್ನಣೆ.

बालाई, वि. ಮೇಲಿನ; ಹೆಚ್ಚಿನ; ಉಪರಿ. पु. ಮೇಲಿನ ವರಮಾನ, ಮೇಲಾಯ; ಹಾಲಿನ ಕೆನೆ; ಮೆರವಣಿಗೆಯ ಕುದುರೆ; ಹೆಚ್ಚಿನ ತೆರಿಗೆ.

बालाख़ाना, पु. ಮೇಲಿನ ಕೋಣೆ, ಪ್ರಗ್ರೀವ.

बालापोश, पु. ಮೇಲಿನ ಹೊದಿಕೆ.

बालाबर, पु. ಮೇಲು ಸೆರಗು.

बाला-बाला, क्रिवि. ಮೇಲೆ ಮೇಲೆ; ಗುಪ್ತವಾಗಿ, ಗುಟ್ಟಾಗಿ.

बालिका, स्त्री. ಬಾಲಿಕೆ, ಹುಡುಗಿ.

बालिग़, वि. ಪ್ರಾಯ ಬಂದವ, ಪ್ರಾಯ ಸಮರ್ಥ, ವಯಸ್ಕ; ಪ್ರಾಯದ.

बालिश, स्त्री. ತಲೆದಿಂಬು, ಕೌಳುಡೆ; ಉರಿಮೂತ್ರ.

बालिश्त, पु. ವಿತಸ್ತಿ, ಗೇಣು; ತಲೆದಿಂಬು.

बाली, स्त्री. ಕಿವಿಯ ಬಾವಲಿ; ಧಾನ್ಯದ ಹೊಡೆ, ತೆನೆ.

बालिन, पु. ತಲೆದಿಂಬು.

बालुआ, वि. ಮಳಲುಳ್ಳ, ಉಸುಬಿನ.

बालू, पु. ಮಳಲು, ಉಸುಬು.

बालूचर, पु. ಜಟಾಮಾಂಸಿ ಗಿಡ.

बालूचरी, स्त्री. ಒಂದು ಬಗೆ ಬಟ್ಟೆ.

बालूदानी, स्त्री. ಮಸಿಹೀರಲು ಬಳಸುವ ಮಳಲನ್ನಿಡುವ ಕುಡಿಕೆ, ರೇಜುದಾನಿ.

बालूशाही, स्त्री. ಒಂದು ಮಿಠಾಯಿ.

बाव, पु. ಗಾಳಿ; ವಾಯು, ವಾತ. बाव का रुख बताना = ಮೋಸಗೊಳಿಸು, ವಂಚಿಸು, ಹರವಂಚು ಮಾಡು. बाव बांधना = ಮುಖಸ್ತುತಿ ಅಥವಾ ವಿತಂಡಾವಾದದಿಂದ ಕೆಲಸ ಸಾಧಿಸಿಕೊಳ್ಳು.

बावगोला, पु. ವಾತಗುಲ್ಮ; ವಾತ, ವಾತ ಶರೀರ.

बावजूद, क्रिवि. ಆದಾಗ್ಯೂ, ತಥಾಪಿ.

बावझक, बावभक, पु. ಹರಟೆಗಾರ, ಗಳಪ; ಹರಟೆ.

बावटा, पु. ಧ್ವಜ, ಬಾವುಟ; ತೆರೆಚಾಪೆ.

बावड़ी, स्त्री. ಕೊಳ, ಬಾವಿ; ಹೊಂಡ

बावन, वि. ಐವತ್ತೆರಡು. बावन तोले पाव रत्ती = ಎಲ್ಲಾ ವಿಧದಲ್ಲೂ ಸರಿಯಾದ, ಬರಾಬರಿಯಾದ.

बावनी, स्त्री. ಐವತ್ತೆರಡರ ಸಮೂಹ; ಐವತ್ತೆರಡು ಪದ್ಯಗಳ ಕಾವ್ಯ; ಬಿತ್ತನೆಯ ಕಾಲ.

बावर, पु. ನಂಬಿಕೆ, ಭರವಸೆ. वि. ನಂಬಿಕೆಯುಳ್ಳ.

बावरा, वि. ಹುಚ್ಚ, ಪೆದ್ದ.

बावर्ची, पु. ಅಡಿಗೆಯವ, ಬಾಣಸಿ, ಕೂಳನಿಗಾರ, ಪರಿಚಾರಕ.

बावर्चीख़ाना, पु. ಅಡಿಗೆ ಮನೆ, ಪಾಕಶಾಲೆ.

बावला, वि. ಹುಚ್ಚ, ಮರುಳ; ಪೆದ್ದ.

बावलापन, पु. ಹುಚ್ಚು, ಹೇಕುಳಿ.

बावली, स्त्री. ಇಳಿಯುವ ಬಾವಿ, ಕೊಳ, ಹೊಕ್ಕರಣೆ; ಹುಚ್ಚಿ.

बावा, पु. ತಂದೆ.

बावैला, पु. ಭಯಧ್ವನಿ, ಆರ್ತನಾದ.

बाशह, बाशा, पु. ಒಂದು ಜಾತಿ ಗಿಡಗ.

बाशिंदा, वि. ವಾಸಮಾಡುವವ, ನಿವಾಸಿ.

बास, पु. ವಾಸ, ನಿವಾಸ, ವಾಸಸ್ಥಾನ; ವಾಸನೆ, ಗಂಧ; ವಸ್ತ್ರ.

बासठ, वि. ಅರವತ್ತೆರಡು.

बासन, पु. ಪಾತ್ರೆ, ಬೋಗಣಿ.

बासना, स्त्री. ವಾಸನೆ, ಗಂಧ; ಆಶೆ. सक्रि. ಪರಿಮಳಕೊಡು, ಗಂಧಹಚ್ಚು.

बासा, पु. ವಾಸಸ್ಥಳ, ಬಿಡಾರ; ವಸತಿಗೃಹ; ಖಾನಾವಳಿ, ಭೋಜನಶಾಲೆ.

बासिरा, पु. ದೃಷ್ಟಿ, ನೋಟ.

बासी, वि. ಹಳೆಯ, ತಂಗಳು. बासी

कढ़ी में उबाल आना = ಕಾಲ ಮೀರಿ ಹೋದಮೇಲೆ ಹಂಬಲ ಹುಟ್ಟು; ಮುಪ್ಪಿನಲ್ಲಿ ಷೋಕಿ ಮಾಡು. बासी मुंह = ಬೆಳಗಿನಿಂದ ಹೊಟ್ಟೆಗೆ ಏನೂ ಇಲ್ಲದಿರುವಿಕೆ.

बाहना, सक्रि. ತೆರೆ, ಬಿಚ್ಚು; ತೋರಿಸು; ಉಳು; ಬಾಚು, ಹಿಕ್ಕು; ದುಡಿ, ಪಾಡುಪಡು; ಹೊರು, ಒಯ್ಯು; ಎಸೆ, ಬಿಸುಟು, ಚಲಕು; ಚುಚ್ಚು, ಭೇದಿಸು; ಬಸುರು ಮಾಡು.

बाहम, क्रिवि. ಪರಸ್ಪರ, ಉಭಯತಃ. बाहम आना या पहुंचना = ಸಿಗು, ದೊರಕು, ದೊರೆ.

बाहमी, वि. ಪರಸ್ಪರವಾದ, ಉಭಯತ್ರ

बाहया, वि. ಲಜ್ಜಾಳು, ನಾಚಿಕೆಯುಳ್ಳ

बाहर, क्रिवि. ಹೊರಗೆ, ಹೊರಗಡೆ.

बाहरा, पु. ಕಪಿಲೆಯ ಬಾನೆ ಅಥವಾ ಏತದ ಬಾನೆಯಿಂದ ನೀರನ್ನು ಬಗ್ಗಿಸುವವ.

बाहरी, वि. ಹೊರಗಿನ, ಬಾಹ್ಯ, ಪರಕೀಯ; ಹೊರಗಿನವ.

बाहा, पु. ಕಾಲುವೆ; ಮೋರಿ.

बाहिर, वि. ಉತ್ತಮವಾದ, ಶ್ರೇಷ್ಠವಾದ; ತೆರೆದ, ಬಯಲಾದ; ಬಹಿರಂಗವಾದ. क्रिवि. ಹೊರಗೆ, ಹೊರಗಡೆ.

बाहु, स्त्री. ಬಾಹು, ಬುಜ.

बिंजन, पु. ವ್ಯಂಜನ, ಪಳದ್ಯ.

बिंद, स्त्री. बिंदा, पु. ಬಿಂದು, ಬೊಟ್ಟು

बिंदिया, स्त्री. ತಿಲಕ, ಬೊಟ್ಟು; ಹಣೆಬೊಟ್ಟು.

बिंदी, स्त्री. ಸೊನ್ನೆ; ಬಿಂದು; ಬೊಟ್ಟು; ಚುಕ್ಕೆ, ಚಿಕ್ಕೆ.

बिंदु. बिंदुका, पु. ಬಿಂದು, ಬೊಟ್ಟು.

बिंदुली, स्त्री. ಬೊಟ್ಟು, ತಿಲಕ.

बिआना, सक्रि. = बयाना.

बिकट, वि. ವಿಕಟವಾದ, ಕಷ್ಟವಾದ, ಭಾರಿ. पु. ಕಾವಲು, ಪಹರೆ.

बिकना, अक्रि. ಮಾರಲ್ಪಡು, ಮಾರು, ಬಿಕರಿಯಾಗು; ಗುಲಾಮನಾಗು, ಅಧೀನನಾಗು.

बिकल, वि. ವಿಕಲ, ವ್ಯಾಕುಲಪಡುವ.

बिकलाना, अक्रि. ಗಾಬರಿಗೊಳ್ಳು, ಚಡಪಡಿಸು, ದಿಗಿಲುಪಡು. सक्रि. ಗಾಬರಿ ಮಾಡು.

बिकवाना, सक्रि. ಮಾರಿಕೊಡು, ಮಾರಿಸು.

बिकसना, अक्रि. ವಿಕಸಿಸು, ಅರಳು.

बिकाऊ. वि. ಮಾರಾಟಕ್ಕಿರುವ, ಬಿಕರಿಗೆ ಸಿದ್ಧವಾದ; ಬಿಕರಿಯಾಗತಕ್ಕ.

बिकाना. सक्रि. ಮಾರು, ವಿಕ್ರಯಿಸು.

बिकारी. स्त्री. ರೂಪಾಯನ್ನು ಸೂಚಿಸುವ ವಕ್ರಗೆರೆ, ಉದಾ:- ५).

बिकाव, पु. बिक्री, स्त्री. ವಿಕ್ರಯ, ಮಾರಾಟ, ಬಿಕರಿ.

बिखरन, पु. ಚಲ್ಲಿದ ವಸ್ತು; ಎರಚಿದ ವಸ್ತು.

बिखरना, अक्रि. ಚದರು, ದಿಕ್ಕಾಪಾಲಾಗು; ಚಲ್ಲಾಪಿಲ್ಲಿಯಾಗು; ಕೆದರು.

बिखेरना, सक्रि. ಚದರಿಸು; ಈಡಾಡು, ಎರಚು; ಚಲ್ಲಾಪಿಲ್ಲಿ ಮಾಡು; ಬೀರು,

ಚೆಲ್ಲಾಡು.

बिगड़ना, अक्रि. ಕೆಡು, ಹಾಳಾಗು; ಹದಗೆಡು; ಬಿಗಡಾಯಿಸು; ರೇಗು, ಸಿಡುಗುಟ್ಟು; ಮನಸ್ತಾಪವಾಗು.

बिगड़ी, स्त्री. ಕೆಡಕು; ಮನಸ್ತಾಪ; ಯುದ್ಧ.

बिगड़ैल, वि. ಸಿಡುಕ, ಕೋಪಿಷ್ಠ.

बिगहा, पु.=बीघा.

बिगाड़, पु. ಕೆಡುವಿಕೆ; ಕೇಡು; ಕೆಡುಕು; ಅಬಂದರೆ; ಮನಸ್ತಾಪ, ವೈಮನಸ್ಯ

बिगाड़ना, सक्रि. ಕೆಡಿಸು; ಹದಗೆಡಿಸು; ಹಾಳುಮಾಡು, ಅಬಂದರೆ ಮಾಡು.

बिगाड़ू, वि. ಕೆಡಿಸುವವ; ಕಿಡಿಗೇಡಿ.

बिगाना, वि.=बेगाना.

बिगुल, पु. ತುತ್ತೂರಿ, ಕಹಳೆ.

बिगुलची, पु. ಕಹಳೆಕಾರ.

बिगूचन, स्त्री. ಪೇಚಾಟ, ಪೀಕಲಾಟ

बिगूचना, सक्रि. ಪೇಚಾಡು, ಅವಸ್ಥೆಪಡು. सक्रि. ಅಮುಕು, ದಬಾಯಿಸು

बिगोना, सक्रि. ಕೆಡಿಸು, ಹಾಳುಮಾಡು; ಬಚ್ಚಿಡು, ಮುಚ್ಚು; ಸತಾಯಿಸು, ಕಾಡು; ತೊಳಲಿಸು.

बिचऊ, वि. ಮಧ್ಯಸ್ಥ.

बिचक, पु. ಭಯ; ದಿಗಿಲು; ನಿರಾಶೆ.

बिचकना, सक्रि. ಭಯಪಡು; ಬೆದರು, ಹಿಂಜರಿ; ಓಡಿಹೋಗು; ನಿರಾಶನಾಗು

बिचकन्ना, पु. ಕಿವಿಯ ಒಂದು ಆಭರಣ

बिचकाना, सक्रि. ಆಶಾಭಂಗ ಮಾಡು, ನಿರಾಶೆಪಡಿಸು; ಬೆದರಿಸು, ಮುಖ ಸಿಂಡ್ರಿಸು; ಅಣಕಿಸು, ಜರೆ.

बिचरना, अक्रि. ವಿಹರಿಸು, ಅಡ್ಡಾಡು, ಸಂಚರಿಸು.

बिचलना, अक्रि. ವಿಚಲಿತನಾಗು, ಜಾರು; ಕದಲು, ಸಗ್ಗು; ಮಾತುತಪ್ಪು.

बिचला, वि. ಮಧ್ಯಮ, ನಡುವಣ; ನಡುತರದ.

बिचलाना, सक्रि. ಕದಲಿಸು, ಜಾರಿಸು.

बिचवान, बिचवानी, पु. ಮಧ್ಯಸ್ಥಗಾರ, ಪಂಚಾಯಿತ.

बिचार, पु. ಅಭಿಪ್ರಾಯ, ವಿಚಾರ.

बिचारना, सक्रि. ವಿಚಾರ ಮಾಡು, ಯೋಚಿಸು; ವಿಚಾರಿಸು.

बिचारा, वि.=बेचारा.

बिचाली, स्त्री. ಭತ್ತದ ಹುಲ್ಲು; ಕಡ್ಡಿ, ಸೊಪ್ಪು.

बिचाव, पु. ನಡುವೆ ಬರುವಿಕೆ; ಮಧ್ಯಸ್ಥ. बीच बिचाव=ಮಧ್ಯಸ್ತಿಕೆ.

बिचूरना, सक्रि. ಕೊಯ್ಯು, ಆಯು; ತೆರೆ, ಬಿಚ್ಚು; ಅಗಲಿಸು.

बिचौलिया, पु. ಮಧ್ಯಸ್ಥಗಾರ.

बिच्छू, पु. ಚೇಳು, ವೃಶ್ಚಿಕ; ಚೇಳಿನ ಕೊಂಡಿಯ ಗಿಡ.

बिछड़ना, अक्रि.=बिछुड़ना.

बिछना, अक्रि. ಹಾಸಲ್ಪಡು, ಹರಡು, ಹಬ್ಬು; ಅಗಲು; ಸರಿ.

बिछलना, अक्रि. ಬೇರೆಯಾಗು; ಸರಿ, ಜಾರು.

बिछवाना, सक्रि बिछाना का प्रे. रूप.

बिछाना, सक्रि. ಹಾಸು; ಹರಡು, ಹರವು; (ಬಲೆ) ಬೀಸು; ಮಲಗಿಸು.

बिछावन, पु. ಹಾಸಿಗೆ, ಹಾಸು, ಬಿಛಾನ.
बिछिया, स्त्री. ಕಾಲುಂಗುರ, ಪಿಲ್ಲಿ
बिछुआ, पु. ಕಾಲುಂಗುರ, ಪಿಲ್ಲಿ; ಒಂದು ಬಗೆ ಕಠಾರಿ, ಬಾಕು
बिछुड़न, स्त्री. ಅಗಲುವಿಕೆ, ಅಗಲಿಕೆ, ವಿಯೋಗ.
बिछुड़ना, अक्रि. ಬೇರೆಯಾಗು, ಅಗಲು.
बिछुड़ाना, सक्रि. ಅಗಲಿಸು, ಬೇರ್ಪಡಿಸು.
बिछुड़ाव, बिछोड़ा, बिछोह, पु. ಅಗಲಿಕೆ, ವಿಯೋಗ; ವಿರಹ.
बिछौना, पु. ಹಾಸಿಗೆ, ಬಿಛಾನ.
बिजकना, अक्रि. ಬೆಚ್ಚಿಬೀಳು; ದಿಗಿಲುಗೊಳ್ಳು
बिजना, पु. ಬೀಸಣಿಗೆ, ಬಿಜ್ಜಣಿಗೆ.
बिजबिजा, वि. ಗಿಜಿಗಿಜಿ, ಗಿಜಟಿ.
बिजली, स्त्री. ಮಿಂಚು, ವಿದ್ಯುತ್ತು; ಸಿಡಿಲು; ಒಂದು ಆಭರಣ; ಮಾವಿನ ಓಟೆಯೊಳಗಿನ ತಿರುಳು. वि. ಮಿಂಚುವ, ಹೊಳೆಯುವ; ಚಂಚಲವಾದ.
बिजाई, स्त्री. ಕಣದಲ್ಲಿ ಬಡವರಿಗೆ ಕೊಡುವ ಭತ್ತ.
बिजायठ, स्त्री. ತೋಳುಬಂದಿ, ಅಂಗದ
बिजार, पु. ಹೋರಿ; ಎತ್ತು.
बिजिया, स्त्री. ಬಂಗಿ.
बिजूका, बिजूखा, पु. ಗದ್ದೆ ಹೊಲಗಳಲ್ಲಿ ಪಕ್ಷಿಗಳನ್ನು ಬೆದರಿಸಲು ಇಟ್ಟಿರುವ ಮಡಕೆ ಅಥವಾ ಗೊಂಬೆ, ಬೆದರು, ಕಾಬೂಜಿ.
बिजौरा, पु. ಒಂದು ಬಗೆ ಮಾದಳದ ಹಣ್ಣು, ಬೀಜಪೂರ.
बिज्जू, पु. ಕಾಡು ಬೆಕ್ಕು.
बिझकना, अक्रि. ಬೆದರು, ಅಂಜು; ಬೆಚ್ಚಿಬೀಳು, ಸೆಡೆ.
बिझकाना, सक्रि. ಬೆದರಿಸು, ಹೆದರಿಸು.
बिझाना, सक्रि. ಬಲೆಯಲ್ಲಿ ಹಿಡಿ; ಸಿಕ್ಕಿಸು.
बिटना, सक्रि. ಚೆಲ್ಲು, ಚದರಿಸು.
बिटरना, अक्रि. ಕದಡು, ಕಲಕಾಡು.
बिटवा, पु. ಸಣ್ಣ ಮಗ, ಪುತ್ರ.
बिटाना, सक्रि. ಚೆಲ್ಲು, ಎರಚು.
बिटारना, सक्रि. ಕಲಕು, ಕದಡು.
बिटिया, स्त्री. ಸಣ್ಣ ಮಗಳು, ಹುಡುಗಿ.
बिटोना, सक्रि. ಚೆಲ್ಲು, ಎರಚು.
बिटौना, पु. ಪುಟ್ಟ ಮಗ, ಪುತ್ರ.
बिटौरा, पु. ಬೆರಣಿಯ ಕುಪ್ಪೆ.
बिटौरी, स्त्री. ವರ್ತಕರ ಮತ್ತು ಕಸಬುದಾರರ ಮೇಲೆ ವಿಧಿಸುವ ತೆರಿಗೆ, ಮೊಹತರ್ಫ.
बिठलाना, बिठाना, सक्रि. ಕುಳ್ಳಿರಿಸು, ಕೂಡಿಸು, ಕೂಡ್ರಿಸು, ಇರಿಸು.
बिड़ता, पु. ಶಕ್ತಿ, ಸಾಮರ್ಥ್ಯ; ಉದ್ದೇಶ.
बिड़र, वि. ಚದರಿದ, ಅಗಲಿದ.
बिड़रना, अक्रि. ಚದರು, ದಿಕ್ಕಾಪಾಲಾಗು; ಅಂಜಿ ಓಡು.
बिड़राना, बिड़ारना, सक्रि. ಓಡಿಸು, ಚದರಿಸು; ಹೆದರಿಸು, ತರುಬು.
बितना, पु. = बित्ता.
बितरना, सक्रि. ಹಂಚು, ವಿನಿಯೋಗಿಸು

बिताना, सक्रि. ಹೊತ್ತು ಕಳೆ, ಕಾಲ ಕಳೆ, ಕಾಲಾಯಾಪನೆ ಮಾಡು.

बित्तन, पु. ಚೋಟುದ್ದದವ.

बित्ता, पु. ಗೇಣು, ವಿತಸ್ತಿ.

बित्तिया, वि. ಚೋಟುದ್ದದ, ಕುಳ್ಳ.

बिथकना, अक्रि. ಆಯಾಸಪಡು, ಬಳಲು; ಚಮಕಿತನಾಗು; ಮೋಹಗೊಳ್ಳು.

बिथरना, अक्रि. ಚದರು; ಅಗಲು; ಹರಿ; ಬೀಳು.

बिथरवाना, सक्रि. "बिथारना" का प्रे. रूप.

बिथराना, बिथारना, सक्रि. ಚದರಿಸು, ಎರಚು.

बिद्अत, स्त्री. (ಮುಹಮ್ಮದೀಯ ಮತದಲ್ಲಿ) ಹೊಸ ಸಂಪ್ರದಾಯ; ದೋಷ; ಅಕ್ರಮ; ಅನ್ಯಾಯ; ಅತ್ಯಾಚಾರ; ಜಗಳ.

बिदकना, अक्रि. ಬಿರಿ, ಒಡೆ; ಸೀಳು; ಘಾಯವಾಗು.

बिदकाना, सक्रि. ಹರಿ; ಸೀಳು, ಸಿಗಿ; ಘಾಯಮಾಡು.

बिदर, पु. ಒಂದು ಬೆರಕೆ ಲೋಹ.

बिदा, स्त्री. = विदा.

बिदारन, पु. ಹರಿಯುವಿಕೆ, ಸೀಳುವಿಕೆ; ಒಡಕು; ಸೀಳು.

बिदारना, सक्रि. ಸೀಳು, ವಿದಾರಿಸು

बिदाहना, सक्रि. ಕುಂಟೆ ಹೊಡೆ, ಹಲುಬೆ ಹೊಡೆ.

बिदुराना, अक्रि. ನಸುನಗು, ಕಿರುನಗೆ ನಗು.

बिदुरानी, स्त्री. ಕಿರುನಗೆ, ಮಂದಹಾಸ.

बिदून, क्रिवि. ಹೊರತು, ವಿನಾ.

बिदेस, पु. ಅನ್ಯದೇಶ, ವಿದೇಶ.

बिदोई, स्त्री. ಲೋಹಗಳ ಬೆರಕೆ; ಸರಕುಗಳ ರವಾನೆ.

बिदोरना, सक्रि. ಗೇಲಿ ಮಾಡು, ರೋಡಾಡು

बिद्दत, स्त्री. = बिद्अत.

बिध, स्त्री. ವಿಧ, ಬಗೆ; ಜಮಾಖರ್ಚಿನ ಲೆಕ್ಕ. बिधमिलाना=ತಾಳೆ ನೋಡು.

बिधना, अक्रि. ತೂತು ಕೊರೆಯಲ್ಪಡು, ತೂತು ಬೀಳು.

बिधाना, सक्रि. ತೂತು ಕೊರೆ, ವೆಜ್ಜ ಹಾಕು.

बिन, अव्य. ಹೊರತು, ವಿನಾ. पु. ಮಗ, ಪುತ್ರ. महम्मद बिन तुगलक = ತುಗಲಕನ ಪುತ್ರ ಮುಹಮ್ಮದನು.

बिन-जाने, क्रिवि. ತಿಳಿಯದೆ, ಅರಿಯದೆ.

बिनती, स्त्री. ವಿನಂತಿ, ಪ್ರಾರ್ಥನೆ.

बिनन, स्त्री. ಆರಿಸುವಿಕೆ, ಆಯುವಿಕೆ; ಹೆಕ್ಕುವಿಕೆ; ಕಸಕಡ್ಡಿ.

बिनना, अक्रि. ಆಯಲ್ಪಡು; ಹೆಕ್ಕಲ್ಪಡು. सक्रि. ಆಯು, ಹೆಕ್ಕು; ಹೆಣೆ, ನೇಯು.

बिनवन, पु. ಚಕ್ಕೆ, ಚೂರು.

बिनवाई, स्त्री. ಹೆಕ್ಕುವುದಕ್ಕೆ ಅಥವಾ ಹೆಣೆಯುವುದಕ್ಕೆ ಕೊಡುವ ಕೂಲಿ.

बिना, अव्य. ಅಲ್ಲದೆ, ಹೊರತು, ವಿನಾ. स्त्री. ತಳಹದಿ; ಬುಡ, ಮೂಲ;

ಪ್ರಾರಂಭ, ಮೊದಲು

बिनाई, बिनावट, स्त्री. ಆಯುವಿಕೆ; ಹೆಕ್ಕುವಿಕೆ; ನೇಯುವಿಕೆ; ನೆಯಿಗೆ.

बिनाबर, क्रिवि. ಆದ್ದರಿಂದ, ಆದ ಕಾರಣ.

बिनास, पु. ವಿನಾಶ, ಹಾಳು; ಮೂಗಿನಲ್ಲಿ ರಕ್ತ ಸುರಿಯುವಿಕೆ.

बिनौला, पु. ಹತ್ತಿ ಬೀಜ.

बिनौली, स्त्री. ಆಲಿಕಲ್ಲು, ಆನೆಕಲ್ಲು.

बिफरना, अक्रि. ಜಗಳವಾಡು; ಹಣಗಾಡು; ಎದುರಿಸು; ವಿರೋಧಿಸು; ಸಿಡುಗುಟ್ಟು; ರೇಗು, ಕೋಪಗೊಳ್ಳು; ಮೇಲೆ ಬೀಳು, ತಿರುಗಿ ಬೀಳು; ನಾಶವಾಗು, ಹಾಳಾಗು; ಹಟಹಿಡಿ, ಚಂಡಿಸು.

बिबाई, स्त्री. = बिवाई.

बिमौट, स्त्री. ವಲ್ಮೀಕ, ಹುತ್ತ.

बिया, पु. ಬೀಜ, ಬೆದೆ, ಬಿತ್ತ. वि. ಎರಡನೆಯ, ಅನ್ಯ.

बियाबान, पु. ಬೆಂಗಾಡು, ಅರಗಾಡು; ಮರುಭೂಮಿ, ಮಳಲುಗಾಡು.

बियारी, बियालू, स्त्री. = ब्यालू.

बियाह, पु. = ब्याह.

बिरता, पु. ಶಕ್ತಿ; ಸಾಮರ್ಥ್ಯ.

बिरतिया, पु. ಕಾಯಂ ಗುತ್ತಿಗೆದಾರ.

बिरद, स्त्री. ಬಿರುದು, ಕೀರ್ತಿ.

बिरदैत, वि. ವಿಖ್ಯಾತ, ಸುಪ್ರಸಿದ್ಧ.

बिरनी, स्त्री. ಕಣಜದಹುಳು, ಹೆದ್ದುಂಬಿ.

बिरमना, अक्रि. ನಿಲ್ಲು; ತಡೆ; ವಿಶ್ರಮಿಸು; ಮೋಹಗೊಳ್ಳು; ವಶವಾಗು.

बिरमाना, सक्रि. ನಿಲ್ಲಿಸು, ತಡೆ; ಕಾಲಕಳೆ; ವಶಪಡಿಸು; ಪಳಗಿಸು.

बिरयाँ, वि. ಹುರಿದ, ಕರಿದ; ಸುಡುವ; ಉರಿಯುವ.

बिरवा, बिरवाँ, पु. ಮರ, ಗಿಡ.

बिरवाही, स्त्री. ತೋಟ; ತೋಪು.

बिरह, स्त्री. ಅಗಲಿಕೆ, ವಿರಹ.

बिरहा, पु. ಅಗಲಿಕೆ; ವಿರಹ; ವಿರಹಗೀತ; ಅಶ್ಲೀಲಗೀತ.

बिराजना, अक्रि. ವಿರಾಜಿಸು, ಮಂಡಿಸು; ನೆಮ್ಮದಿಯಾಗಿರು, ಸೌಖ್ಯವಾಗಿರು; ಯಶೋವಂತನಾಗು.

बिराजमान, वि. ಪ್ರಕಾಶಿಸುವ, ಶೋಭಿತ; ಸಭೆಯಲ್ಲಿ ಮಂಡಿಸಿದ.

बिरादर, पु. ಸಹೋದರ, ಸೋದರ.

बिरादराना, वि. ಸೋದರ ಭಾವದ.

बिरादरी, स्त्री. ಸೋದರ ಭಾವ, ಭ್ರಾತೃತ್ವ; ಬಂಧುವರ್ಗ, ಬಳಗ; ಸಮಾಜ.

बिराना, वि. ಅನ್ಯ; ಬೇರೆಯ; ಪರಕೀಯ. सक्रि. ಅಣಕಿಸು, ಏಳಿದ ಮಾಡು, ಚಿಡಾಯಿಸು.

बिरावना, सक्रि. ಅಣಕಿಸು, ಚಿಡಾಯಿಸು.

बिरियाँ, स्त्री. ಕಾಲ, ಹೊತ್ತು, ವೇಳೆ.

बिरियानी, स्त्री. ಮಾಂಸದ ಹುಗ್ಗಿ.

बिरोह, पु. = बिरहा.

बिर्रा, पु. ಕಡಲೆ ಮತ್ತು ಜವೆಗೋಧಿ ಬೆರೆಸಿ ಬಿತ್ತಿದ ಹೊಲ.

बिल, पु. ಬಿಲ, ದರಿ; ಗುದ್ದು, ಪೊಟರೆ; ಹುತ್ತ. उप. ಸಹಿತ ಅಥವಾ ಸಹ ಎಂಬರ್ಥ ಕೊಡುವ ಒಂದು ಅರಬ್ಬಿ

ಉಪಸರ್ಗ. ಉದಾ: बिलजब्र=ಬಲವಂತವಾಗಿ, ಬಲಾತ್ಕಾರದಿಂದ; बिलवफ़ा=ನಿಜವಾಗಿ, ಯಥಾರ್ಥವಾಗಿ.

बिलकना, अक्रि.=बिलखना.

बिलंब, पु. ವಿಳಂಬ, ತಡ.

बिलंबना, अक्रि. ತಡಮಾಡು, ವಿಳಂಬಮಾಡು, ವಿಲಂಬಿಸು, ತಳುವು.

बिलकुल, क्रिवि. ಸಂಪೂರ್ಣವಾಗಿ, ಶುದ್ಧಾಂಗವಾಗಿ, ಸುತರಾಂ, ಸರ್ವಥಾ

बिलखना, अक्रि. ಅಳು, ಹಲುಬು; ಗೋಳಿಡು, ಪ್ರಲಾಪಿಸು; ಶೋಕಿಸು; ಅಂಗಲಾಚು. सक्रि. ನೋಡು.

बिलखाना, सक्रि. ಗೋಳಾಡಿಸು, ಅಳಿಸು. अक्रि. ಅಳು.

बिलग, वि. ಬೇರೆ; ಭಿನ್ನ. पु. ವಿಭಿನ್ನತೆ

बिलगना, अक्रि. ಬೇರೆಯಾಗು; ಒಡೆ

बिलगाना, अक्रि. ಬೇರೆಯಾಗು. सक्रि. ಭಿನ್ನಮಾಡು; ಬೇರೆಮಾಡು; ಆಯು, ಹೆಕ್ಕು.

बिलगाव, पु. ಬೇರೆಯಾಗುವಿಕೆ, ಭೇದ

बिलचना, सक्रि. ಆಯು, ಹೆಕ್ಕು.

बिलटना, अक्रि. ಕೆಡು, ಹಾಳಾಗು.

बिलटी, स्त्री. ರೈಲು ಮೂಲಕ ಕಳುಹಿಸಿದ ಸರಕಿನ ರಸೀತಿ, ರೈಲ್ವೆ ರಸೀತಿ.

बिलनी, स्त्री. ಹೆದ್ದುಂಬಿ; ಕಣ್ಣುಕುರು, ಕಣ್ಣುಚಿಟ್ಟು, ಕಣ್ಣುಕುಟಿಕೆ.

बिलपना, अक्रि. ಅಳು, ಹಲುಬು.

बिलपाना, सक्रि. ಅಳಿಸು, ಗೋಳಾಡಿಸು

बिलफ़ेल, क्रिवि. ಈಗ, ಪ್ರಸ್ತುತ.

बिलबिलाना, अक्रि. ಮುಲುಗುಟ್ಟು, ದೇಕು, ಹರಿದಾಡು; ಗೋಳಾಡು, ನರಳು; ತಿಣುಕು, ಮುಲುಕು.

बिलमाना, सक्रि. ತಡೆ, ತಡೆಗಟ್ಟು.

बिलमुक्ता, वि. ನಿಶ್ಚಿತವಾದ; ವಚನಕ್ಕನುಸಾರ.

बिललाना, अक्रि. ಅಳು, ಹಲುಬು.

बिलल्ला, वि. ದಡ್ಡ. ಪೆದ್ದ, ಮಂಕ.

बिलवाना, सक्रि. ಹಾಳುಮಾಡು, ಕಳೆ.

बिलसना, अक्रि. ಆನಂದಿಸು, ಭೋಗಿಸು, ರಮಿಸು.

बिलस्त, स्त्री. ಗೇಣು, ವಿತಸ್ತಿ.

बिलहरा, पु. ವೀಳೆಯದೆಲೆಯ ಬುಟ್ಟಿ, ಅಡಪ; ಸೌಟು, ಸಟ್ಟುಗ.

बिलांद, स्त्री. ಗೇಣು, ಚೋಟು.

बिला, अव्य. ವಿನಾ, ಇಲ್ಲದೆ.

बिलाई, स्त्री. ಹೆಣ್ಣುಬೆಕ್ಕು; ಕಾಮಿ; ಹೆರೆಮಣೆ; ಪಾತಾಳಗರಡಿ, ಪಾತಾಳಭೇದಿ; ಅಗುಳಿ, ಲಾಳಮುಂಡಿಗೆ.

बिलाना, अक्रि. ಮಾಯವಾಗು, ಅಳಿ.

बिलाप, पु ಅಳು, ವಿಲಾಪ.

बिलापना, अक्रि. ಅಳು, ಹಲುಬು.

बिलार, **बिलाव**, पु. ಗಂಡು ಬೆಕ್ಕು.

बिलारी, स्त्री. ಹೆಣ್ಣು ಬೆಕ್ಕು, ಕಾಮಿ.

बिलास, पु. ಆನಂದ, ಸಂತೋಷ; ಮಜ, ಸುಖಭೋಗ.

बिलासना, अक्रि. ಭೋಗಿಸು, ರಮಿಸು, ಆನಂದಿಸು.

बिलासी, वि. ಸುಖಭೋಗ ಮಾಡುವವ; ಭೋಗಿ; ವಿಲಾಸಿ.

बिलूखा, पु. ಬಿರುಕು, ಬೀಟೆ.

बिलैया, स्त्री. = बिलाई.

बिलोकना, अक्रि. ನೋಡು, ಅವಲೋಕಿಸು.

बिलोड़ना, सक्रि. ಕಡೆ, ಮಥಿಸು; ಜಜ್ಜು

बिलोना, सक्रि. ಕಡೆ, ಮಥಿಸು; ಕಲಕು; ಸುರಿ, ಹೊಯ್ಯು

बिलोनी, स्त्री. ಕಡೆಗೋಲು, ಮಂತು

बिलौटा, पु. ಬೆಕ್ಕಿನಮರಿ; ಗಂಡುಬೆಕ್ಕು

बिल्ला, पु. ಗಂಡು ಬೆಕ್ಕು, ಬಾವುಗ; ತಗಡಿನ ಬಿಲ್ಲೆ; ಅಗಳಿ, ತಾಪಾಳು.

बिल्लाना, अक्रि. ಅಳು, ಗೋಳಿಡು.

बिल्ली, स्त्री. ಹೆಣ್ಣು ಬೆಕ್ಕು, ಕಾವು; ಕೊತ್ತಿ, ಚೀಲಿ; ಅಗುಳಿ; ತಾಪಾಳು.

बिल्लौर, पु. ಸ್ಫಟಿಕ, ಪಳಿಕ.

बिल्लौरी, वि. ಸ್ಫಟಿಕದಂಥ.

बिवराना, सक्रि. ಕೂದಲು ಬಿಡಿಸು, ಸಿಕ್ಕು ಬಿಡಿಸು.

बिवाई, स्त्री. ಕಾಲಿನ ಚರ್ಮ ಒಡೆಯುವ ರೋಗ, ವಿಪಾದಿಕೆ, ಕಾಲು ಹುಗುಳು, ಶೀತದ ಹುಣ್ಣು.

बिसन, पु. ಕೆಡುಕು; ದೋಷ, ಐಬು; ವಿಲಾಸ, ಕಾಮ.

बिसनी, पु. ಲಂಪಟ, ವಿಲಾಸಿ.

बिसबिसाना, अक्रि ತಳತಳನೆ ಉಕ್ಕು

बिसमिल, वि. ಘಾಯ ಹೊಂದಿದ, ನೊಂದ. पु. ಕೊಲ್ಲುವಿಕೆ, ವಧೆ; ಬಲಿ.

बिसमिल्लाह, पु. ದೇವರ ಹೆಸರಿನಲ್ಲಿ. बिसमिल्लाह करना = ಪ್ರಾರಂಭಿಸು, ಮೊದಲು ಮಾಡು.

बिसर, पु. ಮರೆಯುವಿಕೆ, ಮರೆವು.

बिसरना, अक्रि. ಮರೆತುಬಿಡು, ಮರೆ, ಮರಸು.

बिससना, सक्रि. ನಂಬು, ನೆಚ್ಚು.

बिसहा, वि. ವಿಷವುಳ್ಳ, ವಿಷದ.

बिसांध, बिसाँयंद, स्त्री. ಮುಗ್ಗಲು ನಾತ, ಗಬ್ಬುನಾತ, ಗವುಲು.

बिसांयंधा, वि. ಗಬ್ಬುನಾತದ.

बिसात, स्त्री. ಸ್ಥಿತಿಗತಿ, ನಿಲವು; ಹದನು; ಸಾಮರ್ಥ್ಯ, ಅಳವು, ಶಕ್ತಿ; ಉಪಪತ್ತಿ; ಬಂಡವಾಳ, ಆಸ್ತಿ; ಹಾಸಿಗೆ; ಜಮಖಾನೆ; ಹಾಸಂಗಿ, ಚದುರಂಗದ ಹಾಸು. वि. ಚಿಕ್ಕ; ಕಿರಿಯ; ಅಲ್ಪ.

बिसाती, पु. ಚಿಲ್ಲರೆ ವಸ್ತುಗಳ ವ್ಯಾಪಾರಿ, ಚಿಟ್ಟಿಗ, ಕೋರಿಶೆಟ್ಟಿ.

बिसान, पु. ಗಬ್ಬುನಾತ.

बिसाना, अक्रि. ಅಧಿಕಾರ ಸಲ್ಲು. सक्रि. ಕೊಂಡುಕೊಳ್ಳು.

बिसारत, स्त्री. = बिसात.

बिसारना, सक्रि. ಮರೆ, ಮರೆತುಬಿಡು

बिसाह, स्त्री. ಕೊಳ್ಳುವಿಕೆ, ಖರೀದಿ.

बिसाहना, सक्रि. ಕೊಂಡುಕೊಳ್ಳು, ಖರೀದಿ ಮಾಡು. पु. ಕೊಳ್ಳುವ ವಸ್ತು; ಕೊಳ್ಳುವಿಕೆ.

बिसाहनी, स्त्री. ಕೊಳ್ಳುವ ವಸ್ತು, ಸರಕು.

बिसूरना, अक्रि. ಶೋಕಿಸು, ಮರುಗು

बिसेखना, अक्रि. ವಿಶೇಷಿಸು.

बिस्त, बिस्तं, वि. ಇಪ್ಪತ್ತು.

बिस्तर, पु. ಹಾಸಿಗೆ, ಹಾಸು, ಬಿಛಾನ; ವಿಸ್ತಾರ, ಹರವು; ಹರವುವಿಕೆ.

बिस्तरना, अक्रि. ಹರಡು, ಹರವು. सक्रि. ಹರವು, ವಿಸ್ತರಿಸು.

बिस्तर-बंद, पु. ಹಾಸಿಗೆ ಕಟ್ಟುವ ಹಗ್ಗ, ಹಾಸಿಗೆಯ ಬಾರು.

बिस्तारना, सक्रि. ವಿಸ್ತರಿಸು, ಹರಡಿಸು.

बिस्तुइया, स्त्री. ಹಲ್ಲಿ, ಗೌಳಿ.

बिस्वांसी, स्त्री. ಜಮೀನಿನ ಒಂದು ಅಳತೆ, (ನೋಡಿ – बीघा).

बिस्वा, पु. ಇಪ್ಪತ್ತನೆಯ ಒಂದು ಭಾಗ; बीघा ವಿನ ಇಪ್ಪತ್ತನೆಯ ಒಂದು ಭಾಗ, ಒಂದೂಕಾಲು ಗುಂಟೆ.

बिस्वादार, पु. ಪಾಲುಗಾರ, ಹಿಸ್ಸೆದಾರ.

बिस्वास, पु. ನಂಬಿಕೆ, ನೆಚ್ಚಿಕೆ.

बिस्वासी, वि. ನಂಬಿಕೆಯುಳ್ಳ; ನಂಬಿಗಸ್ತ.

बिहंडना, सक्रि. ತುಂಡಿಸು, ಮುರಿ, ಒಡೆ.

बिहंसना, अक्रि. ನಸುನಗು.

बिहतर, वि. = बेहतर.

बिहन, पु. ಬೀಜ, ಬಿದೆ.

बिहनौर, स्त्री. ಸಸಿಮಡಿ, ಎಳಲು ಗದ್ದೆ; ಪಾಲನಾಕ್ಷೇತ್ರ.

बिहबूद, पु. बिहबूदी, स्त्री. ಸ್ವಾಸ್ಥ್ಯ, ಆರೋಗ್ಯ; ಒಳ್ಳೆಯದು; ಕ್ಷೇಮ.

बिहरना, अक्रि. ವಿಹರಿಸು, ಆನಂದಿಸು सक्रि. ಸೀಳು, ಬಿರಿ, ವಿದಾರಿಸು.

बिहरी, स्त्री. ಚಂದಾ, ವಂತಿಗೆ, ವರ್ಗಣಿ.

बिहाई, स्त्री. ಬೇತಾಳ, ಪೇತು, ದೆವ್ವ.

बिहान, पु. ಮುಂಜಾನೆ, ಬೆಳಗ್ಗೆ, ಹೊತ್ತಾರೆ; ಮರುದಿನ.

बिहाना, अक्रि. ಕಾಲ ಕಳೆ. सक्रि. ಕಾಲಯಾಪನ ಮಾಡು.

बिहार, बिहाल, पु. ವಿನೋದ, ವಿಹಾರ; ಆಟ.

बिहारी, बिहाली, पु. ಆಟಗಾರ; ವಿನೋದ ಪ್ರಿಯ; ಶ್ರೀಕೃಷ್ಣ.

बिहारना, अक्रि. ವಿಹರಿಸು, ಆನಂದಿಸು; ರಮಿಸು.

बिहिश्त, पु. = बहिश्त.

बिही, स्त्री. ಒಂದು ಬಗೆ ಸೀಬೆ ಹಣ್ಣು.

बिहोरना, अक्रि. = बिछुड़ना.

बींड, स्त्री. ರಾಶಿ; ಕಂತೆ.

बींडा, पु. ಹುಲ್ಲಿನ ಸಿವುಡು, ಸಿಂಬಿ, ಸುರುಳಿ.

बींडी, स्त्री. ಹೆಣಿಗೆ, ಹೆರಳು, ಜಡೆ.

बींधना, सक्रि. ವೇಧಿಸು, ಚುಚ್ಚು.

बी, स्त्री. = बीबी.

बीअड, स्त्री. ಸಸಿಮಡಿ, ನಾಟಿಗೆ ಗದ್ದೆ.

बीग, पु. **बीगिन,** स्त्री. ತೋಳ.

बीघा, पु. ಜಮೀನಿನ ಒಂದು ಅಳತೆ, ೨೫ ಗುಂಟೆ, ಬೀಘೆ. (ಜಮೀನಿನ ಅಳತೆಗಳ ಕೋಷ್ಟಕವನ್ನು ಅನುಬಂಧದಲ್ಲಿ ನೋಡಿ ತಿಳಿಯಬಹುದು).

बीच, पु. ಮಧ್ಯ, ನಡು; ಎಡೆ; ಅಂತರ; ಜಗಳ. क्रिवि. ಮಧ್ಯೆ, ನಡುವೆ; ಒಳಗೆ. बीच बिचाव = ಮಧ್ಯಸ್ತಿಕೆ, ಪಂಚಾಯಿತಿ. बीचों बीच = ನಟ್ಟನಡುವೆ.

बीज, पु. ಬೀಜ, ಬಿದೆ, ಬಿತ್ತ; ಮೂಲ.

बीजक, पु. ಸೂಚಿ, ಪಟ್ಟಿ, ಜಾಬಿತ; ಥೇಟಪಟ್ಟಿ; ಕ್ರಯಪಟ್ಟಿ, ಇನ್ವಾಯ್ಸ್,

ಕಬೀರ್ ದಾಸರ ಪದಗಳ ಸಂಗ್ರಹ.

बीजन, बीजना, पु. ಬೀಸಣಿಗೆ.

बीज-बंद. पु. ಕಾಡುಮೆಂತೆಯ ಸೊಪ್ಪು

बीजदार, बीजार, वि. ಬೀಜಗಳುಳ್ಳ, ಬಿತ್ತುಗಳುಳ್ಳ.

बीजा, वि. ದ್ವಿತೀಯ, ಎರಡನೆಯ.

बीजी, स्त्री. ಓಟೆ, ಗೊರಟು; ಓಟೆಯೊಳಗಿನ ತಿರುಳು; ಮುಂಗುಸಿ, ಕೀರ.

बीजू, वि. ಬೀಜ ಬಿತ್ತಿ ಬೆಳೆಯುವ.

बीझना, सक्रि. ಕೊಂಬಿನಿಂದ ನೆಲವನ್ನು ಅಗೆ, ತೋಡು.

बीट, बीठ, स्त्री. ಹಕ್ಕಿಗಳ ವಿಷ್ಠೆ.

बीटना, अक्रि ಚದರು, ಚಲ್ಲು.

बीठा, पु. ಸಿಂಬಿ, ಸುರುಳಿ, ಸಿವುಡು

बीड़, स्त्री. ರೂಪಾಯಿಗಳ ಸುರುಳಿ, ತೋಟೆ.

बीड़ा, पु. ವೀಳೆಯದೆಲೆಯ ಸುರುಳಿ; ಪಟ್ಟೀ ವೀಳ್ಯ. ಪಾರ್ಬೀಡಾ; ಕತ್ತಿಯ ಹಿಡಿ, ಮೋಪಳ. बीड़ा उठाना = ಕಾರ್ಯ ಸಾಧಿಸಲು ಕಂಕಣ ಕಟ್ಟಿಕೊಳ್ಳು, ಟೊಂಕಕಟ್ಟು.

बीड़ी, स्त्री. ವೀಳೆಯದೆಲೆಯ ಸುರುಳಿ; ರೂಪಾಯಿಗಳ ಸುರುಳಿ, ತೋಟೆ; ಹೊಗೆಸುತ್ತು, ಬೀಡಿ; ಹೆಂಗಸರು ತುಟಿಗೆ ಹಚ್ಚಿಕೊಳ್ಳುವ ಕೆಂಪು ಬಣ್ಣ, ತುಟಿಗೆಂಪು; ತಾಂಬೂಲರಾಗ.

बीतना, अक्रि. (ಕಾಲ) ಕಳೆಯು; ಕಳೆದು ಹೋಗು, ಮೀರು; ಗತಿಸು, ಸಲ್ಲು; ಜರಗು, ಸಾಗು; ಸಂಭವಿಸು, ಘಟಿಸು, ಒದಗು.

बीता, पु. ಗೇಣು.

बीथी, स्त्री. ಬೀದಿ; ಸಾಲು; ಬಯಲಾಟ.

बीन, स्त्री. ಒಂದು ವಾದ್ಯ, ವೀಣೆ.

बीनना, सक्रि. ಆಯು, ಹಕ್ಕಲಾಯು, ಬಾಕಲಾಯು; ಆರಿಸು, ಹೆಕ್ಕು; ಹೆಣೆ, ನೇಯು.

बीना, स्त्री. ಅಸ್ತಿಭಾರ, ಪಾಯ; ಬುಡ, ಮೂಲ; ಕಾರಣ; ಪ್ರಾರಂಭ, ಷುರು, ಮೊದಲು. वि. ಸರಿಯಾದ ದೃಷ್ಟಿಯುಳ್ಳ; ವಿವೇಕಿ; ಜಾಣ.

बीनाई, स्त्री. ದೃಷ್ಟಿ, ನೋಟ.

बीनी, स्त्री. ನಾಸಿಕೆ, ಮೂಗು.

बीफै, पु. ಗುರುವಾರ.

बीबी, स्त्री. ದೊರೆಸಾನಿ, ಕುಲಸ್ತ್ರೀ; ಹೆಂಡತಿ, ಪತ್ನಿ; ಹೆಂಗಸರಿಗೆ ಗೌರವಾರ್ಥದಲ್ಲಿ ಉಪಯೋಗಿಸುವ ಶಬ್ದ; "ಅಮ್ಮಾವರು".

बीम, पु. ಭಯ, ಹೆದರಿಕೆ.

बीमा, पु. ನಷ್ಟವಾದರೆ ಈಡು ಕೊಡಬೇಕೆಂಬ ಹೊಣೆಗಾರಿಕೆ, ಭದ್ರಪಡಿಸುವಿಕೆ; ವಿಮೆ, "ಇನ್ಶ್ಯೂರೆನ್ಸ್". जान बीमा = ಜೀವ ವಿಮೆ.

बीमादार, पु. ವಿಮೆದಾರ.

बीमार, वि. ಅಸ್ವಸ್ಥ; ವ್ಯಾಧಿಸ್ಥ, ರೋಗಿ.

बीमारदार, वि. ರೋಗಿಯ ಸೇವೆ ಶುಶ್ರೂಷೆ ಮಾಡುವವ.

बीमारदारी, स्त्री. ರೋಗಿಯ ಸೇವೆ ಶುಶ್ರೂಷೆ; ರೋಗಿಯ ಉಪಚಾರ.

बीमारी, स्त्री. ರೋಗ, ವ್ಯಾಧಿ, ಬೇನೆ; ಕಾಯಿಲೆ, ಜಡ್ಡು, ಕಸಾರಿಕೆ.

बीया, पु. ಬೀಜ, ಬೆದೆ, ಬಿತ್ತ.

बीर, पु. ಶೂರ; ವೀರ; ಸಹೋದರ, ಸೋದರ स्त्री. ಕಿವಿಯ ಓಲೆ, ಕರ್ಣಿಕೆ; ವೀರಶೃಂಖಲ, ತೋಡಾ; ಹುಲ್ಲುಗಾವಲು, ಗೋಮಾಳ.

बीरन, पु. ಜೊತೆಗಾರ, ಸೋದರ.

बीरबहूटी, स्त्री. ಬೆಟ್ಟ ಬೆನಕ, ಒನಕೆ ಬಂಡೆ ಹುಳು, ಕಪ್ಪರ ಹುಂಡಿ, ಕಪ್ಪರ ಚಿಟ್ಟೆ, ಉಪ್ಪಂಜಿಗ.

बीरा, पु. ಸುತ್ತುವೀಳೆಯ, ಪಟ್ಟೀವೀಳ್ಯ, ಬೀಡಾ; ದೇವರ ಪ್ರಸಾದ.

बीरी, स्त्री. ಪಟ್ಟೀ ವೀಳ್ಯ, ಬೀಡಾ; ಕಿವಿಯ ಓಲೆ, ಕರ್ಣಿಕೆ; ಹೆಂಗಸರು ತುಟಿಗೆ ಅಥವಾ ಹಲ್ಲುಗಳಿಗೆ ಹಚ್ಚಿಕೊಳ್ಳುವ ಕೆಂಪು ಬಣ್ಣ, ತುಟಿಗೆಂಪು; ತಾಂಬೂಲರಾಗ.

बीवी, स्त्री. ಪತ್ನಿ, ಹೆಂಡತಿ.

बीस, वि. ಇಪ್ಪತ್ತು.

बीसा, पु. ಇಪ್ಪತ್ತು ಉಗುರುಗಳುಳ್ಳ ನಾಯಿ.

बीसी, स्त्री. ಇಪ್ಪತ್ತರ ಸಮೂಹ; ವಿಂಶತಿ, ಬೀಸಿಗೆ; ಧಾನ್ಯ ಅಳೆಯುವ ಕೊಳಗ

बीहड़, वि. ತಗ್ಗುಮುಗ್ಗಾದ, ತರಕಲು, ಕರಡು, ಮುರುಡು, ಹಿಗ್ಗು ತಗ್ಗಾದ.

बुंद, स्त्री. ನೀರಿನ ತೊಟ್ಟು, ಹನಿ.

बुंदका, पु. **बुंदकी**, स्त्री. ಬೊಟ್ಟು; ಚಿಕ್ಕೆ; ಹನಿ.

बुंदा, पु. ಬೊಟ್ಟು; ತಿಲಕ; ಲೋಲಕು.

बुंदिया, स्त्री. ಬೂಂದೀ (ಭಕ್ಷ್ಯ)

बुआ, स्त्री. ಸೋದರತ್ತೆ.

बुआई, स्त्री. = **बोआई**.

बुक, स्त्री. ಬಿರುಸು ಮಾಡಿದ ಬಟ್ಟೆ.

बुक़चा, पु. ಮೂಟೆ, ಗಂಟು; ಹೊದಿಕೆ.

बुक़ची, स्त्री. ಚಿಕ್ಕ ಮೂಟೆ, ಗಂಟು; ಪೊಟ್ಟಣ; ಸೂಜಿ ದಾರವಿಡುವ ದರ್ಜಿಯರ ಚೀಲ.

बुकटा, पु. ಚಿಟಿಕೆ.

बुकना, सक्रि. ಪುಡಿಮಾಡು, ಬೀಸು.

बुकनी, स्त्री. ಪುಡಿ, ಹುಡಿ, ಚೂರ್ಣ.

बुकोटना, सक्रि. ಪರಚು; ಗೂರಾಡು.

बुक्का, पु. ಹಿಡಿ, ಮುಷ್ಟಿ; ಕೊಂಕುಗುರು; ಅಭ್ರಕಿನ ಜಿನುಗಾದ ಪುಡಿ.

बुक्की, स्त्री. ಹಿಡಿ, ಮುಷ್ಟಿ.

बुख़ार, पु. ಹಬೆ, ಆವಿ, ಉಗಿ; ಕಾವು, ತಾಪ; ಜ್ವರ; ಉದ್ರೇಕ; ಮಂಜು.

बुख़्ल, पु. ಜುಗ್ಗತನ, ಕಾರ್ಪಣ್ಯ; ಜಿಪುಣತೆ; ಸಂಕುಚಿತ ಮನಸ್ಸು.

बुग़ार, पु. ಕುಳಿ, ಹಳ್ಳ; ಆಳವಾದ ಘಾಯ.

बुग्गा, वि. ಹೆಡ್ಡ, ದಡ್ಡ; ಪೆದ್ದ; ಮಂಕ; ಬೆಪ್ಪ.

बुग़्ज, पु. ಮತ್ಸರ, ಮಾತ್ಸರ್ಯ; ದ್ವೇಷ.

बुज़, पु. ಆಡು.

बुज़दिल, वि. ಅಳ್ಳೆದೆಯವ, ಪುಕ್ಕ, ಹೇಡಿ

बुज़दिली, स्त्री. ಪುಕ್ಕತನ, ಅಳ್ಳೆದೆ.

बुज़ुर्ग, वि. ದೊಡ್ಡ, ಹಿರಿಯ. पु. ಹಿರಿಯರು, ವೃದ್ಧರು; ಪೂರ್ವಿಕರು.

बुज़ुर्गी, स्त्री. ಹಿರಿಯತನ, ಹಿರಿಮೆ; ವಾರ್ಧಕ್ಯ, ಮುಪ್ಪು.

बुझक्कड़, पु. ಸರ್ವಜ್ಞ; ಪಂಡಿತಂ

ಮನುಷ್ಯ, ಹೆಡ್ಡ.

बुझना, अक्रि. ಆರು, ತಣಿ; ಅಡಗು; ತಣ್ಣಗಾಗು; ನಂದು.

बुझाई, स्त्री. ಆರಿಸುವಿಕೆ, ತಣಿಸುವಿಕೆ; ಬುದ್ಧಿವಾದ ಹೇಳುವಿಕೆ; ಹಿತೋಕ್ತಿ.

बुझाना, सक्रि. ಆರಿಸು, ತಣಿಸು, ಅಡಗಿಸು; ನಂದಿಸು, ಸಮಾಧಾನ ಪಡಿಸು, ತಿಳಿಸು; ಒಗಟು ಹಾಕು; ಹೇಳಿಕೊಡು, ಬೋಧಿಸು. समझाना बुझाना = ಬುದ್ಧಿವಾದ ಹೇಳು, ಉಪದೇಶಿಸು.

बुझैल, वि. ಭಾರ ಹೊರುವ.

बुझौवल, स्त्री. ಒಗಟು, ಒಗಟಿ.

बुड़बुड़ाना, अक्रि. ವಟಗುಟ್ಟು, ಬಡಬಡಿಸು, ಗೊಣಗು.

बुड़ाना, सक्रि. = डुबाना.

बुड्ढा, वि. ವೃದ್ಧ, ಮುದುಕ.

बुड्ढी, स्त्री. ಮುದುಕಿ, ವೃದ್ಧೆ.

बुढ़ना, पु. ಕಲ್ಲುಹೂ, ಹಾವಸಿಗೆ.

बुढ़वा, वि. ವೃದ್ಧ, ಮುದುಕ.

बुढ़ाई, स्त्री. ವಾರ್ಧಕ್ಯ, ಮುಪ್ಪು.

बुढ़ाना, अक्रि. ಮುದಿಯಾಗು, ಮುಪ್ಪಾಗು.

बुढ़ापा, पु. **बुढ़ौती**, स्त्री. ಮುದಿತನ, ಮುಪ್ಪು, ವಾರ್ಧಕ್ಯ.

बुढ़िया, स्त्री. ಮುದುಕಿ, ವೃದ್ಧೆ.

बुत, पु. ಗುದ್ದು; ಮೂರ್ತಿ, ವಿಗ್ರಹ, ಪ್ರತಿಮೆ; ಪ್ರಿಯ, ಪ್ರೇಯಸಿ, ಪ್ರೇಮಿಕೆ

बुतख़ाना, पु. ಪ್ರತಿಮೆಯ ಮಂದಿರ.

बुत-तराश, बुत-साज़, वि. ವಿಗ್ರಹ ಕೆತ್ತುವವ, ಪ್ರತಿಮೆ ಮಾಡುವವ.

बुत-तराशी, बुत-साज़ी, स्त्री. ವಿಗ್ರಹ ಕೆತ್ತುವ ಕೆಲಸ ಅಥವಾ ಕಲೆ.

बुतना, अक्रि. ಆರು, ತಣಿ, ನಂದು.

बुत-परस्त, वि. ವಿಗ್ರಹಾರಾಧನೆ ಮಾಡುವವ, ಮೂರ್ತಿಪೂಜಕ.

बुत-परस्ती, स्त्री. ವಿಗ್ರಹಾರಾಧನೆ, ಮೂರ್ತಿ ಪೂಜೆ.

बुतलान, पु. ಹೆಮ್ಮೆ, ಗರ್ವ.

बुताना, अक्रि. ಆರು, ತಣಿ. सक्रि. ದೀಪ ಆರಿಸು, ತಣಿಸು, ನಂದಿಸು.

बुताम, पु. ಅಂಗಿಯ ಗುಂಡಿ, ಗುಬಟು.

बुत्ता, पु. ಮೋಸ, ಠಕ್ಕು, ದಂದುಗ, ನೆವ. दम बुत्ता = ಕಪಟ, ಬೂಟಾಟಿಕೆ.

बुदबुद, पु. ನೀರಿನ ಗುಳ್ಳೆ, ನೀರ್ಗುಳ್ಳೆ, ಬೊಬ್ಬುಳಿ; ಬುದ್ಬುದ; ಗುರುಳೆ.

बुदबुदाना, अक्रि. ವಟಗುಟ್ಟು, ಗೊಣಗು; ಪಿಸುಪಿಸುಮಾತಾಡು.

बुद्धि, स्त्री. ಬುದ್ಧಿ, ಅರಿವು, ವಿವೇಕ.

बुद्धिमता, बुद्धिमानी, स्त्री. ಬುದ್ಧಿವಂತಿಕೆ, ಜಾಣ್ಮೆ.

बुद्धू, वि. ದಡ್ಡ, ಹೆಡ್ಡ, ಮೂರ್ಖ, ಪೆದ್ದ, ಬೇಕೂಬ; ಬೆಪ್ಪುತಕ್ಕಡಿ.

बुधंगड़, पु. ಪೆದ್ದ, ಪೆಂಗ.

बुध, पु. ಜ್ಞಾನಿ; ಬುಧಗ್ರಹ; ಜಾಣ್ಮೆ.

बुधवार, पु. ಬುಧವಾರ.

बुन, पु. ಕಾಫಿ ಬೀಜ, ಬೂಂದು; ಮೂಲ, ಬುಡ.

बुनकड़, पु. ನೆಯಿಗೆಯವ.

बुनना, सक्रि. ನೇಯು, ಹೆಣೆ; ಅಲ್ಲು, ಮೆಡರು.

बुनाई, स्त्री. ನೇಯುವಿಕೆ, ಹೆಣೆಯುವಿಕೆ; ನೇಯುವುದರ ಕೂಲಿ.

बुनावट, स्त्री. ನೆಯಿಗೆ; ಹೆಣಿಗೆ.

बुनियाद, स्त्री. ಬುಡ, ತಳಹದಿ; ಮೂಲ, ಅಸಲು.

बुनियादी, वि. ಮೂಲಭೂತವಾದ.

बुबुकना, अक्रि. ಅಬ್ಬರಿಸು, ಅರಚು.

बुबुकारी, स्त्री. ಅಬ್ಬರ, ಬೊಬ್ಬೆ, ಅರಚುವಿಕೆ.

बुयाम, पु. ಜಾಡಿ.

बुरकना, सक्रि. ಚಿಮುಕಿಸು, ತೂರು; ಎರಚು, ತಳಿಯು; ತಕ್ಕಳಿಸು, ಚಿಮ್ಮಿಸು

बुरक़ा, पु. ಗೋಷಾ ಹೆಂಗಸರ ಉದ್ದವಾದ ಮುಸುಕು, ಬುರುಕಿ.

बुरला, पु. ಕಣಜದ ಹುಳು, ಕಡಜಿಗ

बुरहान, पु. ರುಜುವಾತು.

बुरा, वि. ಕೆಟ್ಟ; ನಿಕೃಷ್ಟ. बुरा भला कहना=ಬೈಯು, ಅನ್ನು. बुरा मानना =ಸಿಟ್ಟಾಗು, ಬಿಗಡಾಯಿಸು.

बुराई, स्त्री. ಕೆಡಕು; ಅನಿಷ್ಟ; ದುರ್ಗುಣ; ದೋಷ.

बुरादा, पु. ಹುಡಿ; ಚಕ್ಕೆ ಪುಡಿ, ರಂಪದ ಧೂಳು.

बुरूत, स्त्री. ಮೀಸೆ

बुर्ज, पु. ಕೋಟೆಯ ತೆನೆ, ಕೊತ್ತಳ, ಬುರುಜು; ಗೋಪುರದ ಕಲಶ; ನಕ್ಷತ್ರ ಮಂಡಲ, ರಾಶಿ.

बुर्जी, स्त्री. ಚಿಕ್ಕ ಬುರುಜು; ಸಣ್ಣ ಗೋಪುರ.

बुर्द, पु. ವರಮಾನ, ಹುಟ್ಟುವಳಿ; ಲಾಭ; ಪಂದ್ಯ, ಪಣ; ಚದುರಂಗದಾಟದಲ್ಲಿ ಎಲ್ಲಾ ಕಾಯಿಗಳೂ ಸತ್ತು ಹೋಗುವಿಕೆ.

बुर्दबार, वि. ತಾಳ್ಮೆಯುಳ್ಳ, ಸಹಿಷ್ಣು; ನಮ್ರ.

बुर्दबारी, स्त्री. ತಾಳ್ಮೆ, ಸಹಿಷ್ಣುತೆ, ಸಹನೆ; ನಮ್ರತೆ.

बुर्रा, वि. ದುಷ್ಟ, ಕೆಟ್ಟವ.

बुलंद, वि. ಘನವಾದ; ಉಚ್ಚ, ಉನ್ನತ; ಎತ್ತರವಾದ.

बुलंदी, स्त्री. ಉಚ್ಚ, ಔನ್ನತ್ಯ; ಘನತೆ.

बुलबुल, स्त्री. ಬುಲ್‌ಬುಲ್ ಪಕ್ಷಿ.

बुलबुला, पु. ಬೊಬ್ಬುಳಿ; ನೀರಿನಗುಳ್ಳೆ

बुलवाना, सक्रि. ಕರೆಕಳುಹಿಸು, ಕರೆಯಿಸು; ಹೇಳಿಸು; ಮಾತಾಡಿಸು.

बुलाक़, स्त्री. ಬುಲಾಕು.

बुलाकी, पु. ಕುದುರೆಯ ಒಂದು ಜಾತಿ.

बुलाना, सक्रि. ಕೂಗು, ಕರೆ; ಆಹ್ವಾನಿಸು; ಹೇಳಿಸು, ನುಡಿಯಿಸು.

बुलावा, पु. बुलाहट, स्त्री. ಕರೆ; ಆಹ್ವಾನ; ಬುಲಾವು.

बुल्ग़ियात, स्त्री. ಯೌವನ, ತಾರುಣ್ಯ

बुल्ला, पु. ನೀರಿನ ಗುಳ್ಳೆ, ಬೊಬ್ಬುಳಿ.

बुहतान, पु. ದೋಷಾರೋಪಣೆ; ದೂರು

बुहनी, स्त्री. =बोहनी.

बुहरी, स्त्री. ಪುರಿ, ಅರಳು.

बुहारन, स्त्री. ಕಸ, ತಿಪ್ಪೆ.

बुहारना, सक्रि. ಕಸ ಬಳಿ, ಗುಡಿಸು, ಉಡುಗು.

बुहारनी, बुहारी, स्त्री. ಪೊರಕೆ, ಬಲರ್ಗ

बुहारू, पु. ಗುಡಿಸುವವ.

बूंट, पु. = बूट.

बूंद, स्त्री. ತೊಟ್ಟು, ತಟಕು; ಬಿಂದು; ಹನಿ, ತುಂತುರು; ಚೀಟಿ ಬಟ್ಟೆ.

बूंदाबूंदी, स्त्री. ತುಂತುರು ಮಳೆ, ಜಿನುಗು ಮಳೆ.

बूंदी, स्त्री. ಬುಂದೀ (ಮಿಠಾಯಿ); ಹನಿ, ತುಂತುರು.

बू, स्त्री. ಗಂಧ, ವಾಸನೆ, ನಾತ.

बूआ, स्त्री. ಸೋದರತ್ತೆ; ಅಕ್ಕ. पु. ಪಕ್ಷಿ ಅಥವಾ ಮೃಗದ ನಖ, ಪಂಜ

बूकना, सक्रि. ಪುಡಿ ಮಾಡು, ಬೀಸು; ಚೂರ್ಣಿಸು, ನುರುಕು.

बूका, पु. ಚೂರ್ಣ, ಪುಡಿ.

बूचड़, पु. ಕಟುಕ, ಕಸಾಯಿ.

बूचना, अक्रि. ಬಗ್ಗಿಕೊ, ಕುಕ್ಕರಿಸು, ಕುಸಿ; ನೈಚ್ಯಮಾಡು, ಜಪ್ಪಿಸಿಕೊಳ್ಳು.

बूचा, वि. ಕಿವಿಯಿಲ್ಲದವ, ಕಿವಿಹರಕ.

बूजना, सक्रि. ಮೋಸಮಾಡು, ವಂಚಿಸು

बूज़ना, बूज़िना, पु. ಕಪಿ, ಕೋತಿ.

बूझ, स्त्री. ಬುದ್ಧಿ, ಅರಿವು; ಒಗಟೆ. बूझ बुझौवल = ಪ್ರಹೇಳಿಕೆ, ಒಗಟು.

बूझना, सक्रि. ಅರಿ, ತಿಳಿ; ಗ್ರಹಿಸು.

बूट, पु. ಕಡಲೆಗಿಡ; ಸೊಪ್ಪಿನ ಕಡಲೇಕಾಯಿ.

बूटा, पु. ಗಿಡ, ಬಳ್ಳಿ; ಹೂವಿನ ಕೆಲಸ, ಕಸೂತಿ, ಬುಟ್ಟಾ ಕೆಲಸ.

बूटी, स्त्री. ಗಿಡಮೂಲಿಕೆ, ಗಂಧ ಸರಕು; ಬಂಗಿ; ಹೂವಿನ ಕೆಲಸ, ಬುಟ್ಟಾ ಕೆಲಸ, ಕಸೂತಿ; ಇಸ್ಪೀಟು ಚೀಟಿನ ಅಥವಾ ದಾಳದ ಚುಕ್ಕೆಗಳು.

बूटेदार, वि. ಹೂವಿನ ಕೆಲಸಮಾಡಿದ, ಕಸೂತಿಮಾಡಿದ, ಬುಟ್ಟಾ ಕೆಲಸದ.

बूड़ना, अक्रि. = डूबना.

बूड़ा, पु. ಜಲ ಪ್ರವಾಹ, ಪೂರ.

बूड़ी, स्त्री. ಈಟಿಯ ಕೊನೆ, ಮೊನೆ.

बूढ़ा, वि. ಮುದಿ, ವೃದ್ಧ. पु. ಮುದುಕ.

बूढ़ी, स्त्री. ಮುದುಕಿ, ವೃದ್ಧೆ.

बूता, पु. ಬಲ, ಶಕ್ತಿ; ಸಾಮರ್ಥ್ಯ.

बूतीमार, पु. ಕೊಕ್ಕರೆ, ಬಕಪಕ್ಷಿ.

बूदोबाश, पु. ವಾಸಸ್ಥಾನ, ಬೀಡು.

बूबू, स्त्री. ಅಕ್ಕ; ಮಹಿಳೆ.

बूम, पु. ಗೂಬೆ, ಗೂಗೆ; ನೆಲ, ಭೂಮಿ.

बूर, स्त्री. ಉಬ್ಬಲು, ಹೊಟ್ಟು.

बूरा, पु. ಬೂರಾಸಕ್ಕರೆ; ಚೂರ್ಣ.

बूस्तां, पु. ಹೂದೋಟ, ಉದ್ಯಾನ.

बेंग, पु. ಕಪ್ಪೆ.

बेंट, बेंठ, पु. (स्त्री.) ಕತ್ತಿ ಕಠಾರಿಗಳ ಹಿಡಿಕೆ, ಮೋಹಳ; ಕಾವು, ಹಿಡಿ.

बेंड, स्त्री. ಆನಿಕೆ, ಊರೆ, ಆಧಾರ.

बेंडा, वि. ಸೊಟ್ಟಾದ, ವಕ್ರ.

बेंडी, स्त्री. ಜಡೆಹಾಕಿದ ಕೂದಲು, ಜಡೆ, ಹೆರಳು; ಕುಕ್ಕೆಯಿಂದ ಮೊಗೆದು ನೀರು ಹಾಯಿಸುವಿಕೆ.

बेंढना, सक्रि. ಹೆಣೆ, ಅಲ್ಲು, ಮೆಡರು.

बेंत, स्त्री. ಬೆತ್ತ, ಸೆಳೆ.

बेंदा, पु. ಬೊಟ್ಟು, ತಿಲಕ.

बेंदी, स्त्री. ತಿಲಕ, ಬೊಟ್ಟು; ಹಣೆಬೊಟ್ಟು; ಬಿಂದು, ಸೊನ್ನೆ.

बेंवड़ा, पु. ಅಗುಳಿ, ತಾಪಾಳು.

बे, अव्य. ಅರೆ, ಲೋ, ಎಲವೋ! ಅಭಾವಾರ್ಥ ಸೂಚಿಸುವ ಉಪಸರ್ಗ; ಉದಾ:- बेकार, बेशक, बेहद.

बे-अंदाज़, वि. ಅಪರಿಮಿತ.

बेअक़्ल, वि. ಬುದ್ಧಿಹೀನ, ಮೂರ್ಖ.

बे-अक़्ली, स्त्री. ಅವಿವೇಕ, ಅಜ್ಞಾನ.

बे-अदद, वि. ಲೆಕ್ಕವಿಲ್ಲದ, ಅಗಣ್ಯ.

बेअदब, वि. ಮರ್ಯಾದೆಗೆಟ್ಟ, ಉದ್ಧಟ.

बेअदबी, स्त्री. ಉದ್ಧಟತನ; ಅವಮರ್ಯಾದೆ.

बेअसल, वि. ಆಧಾರವಿಲ್ಲದ; ಸುಳ್ಳು

बेआब, वि. ಕಾಂತಿಹೀನ; ತುಚ್ಛ.

बे-इंतज़ामी, स्त्री. ತಕ್ಕ ಏರ್ಪಾಡಿಲ್ಲದಿರುವಿಕೆ, ಅವ್ಯವಸ್ಥೆ, ಗಲಿಬಿಲಿ.

बेइंसाफ़, वि. ಅನ್ಯಾಯಿ.

बेइंसाफ़ी, स्त्री. ಅನ್ಯಾಯ, ಅನೀತಿ

बे-इख़्तियार, क्रिवि. ವಿಧಿಯಿಲ್ಲದೆ, ವಿವಶವಾಗಿ.

बेइज़्ज़त, वि. ಮರ್ಯಾದೆಗೆಟ್ಟ, ಅಪಮಾನಿತ.

बेइज़्ज़ती, स्त्री. ಅವಮಾನ, ಅಗೌರವ.

बेईमान, वि. ಅಧರ್ಮಿ; ಅಪ್ರಮಾಣಿಕ; ಕಪಟಿ.

बेईमानी, स्त्री. ಅಪ್ರಮಾಣಿಕತೆ; ಮೋಸ

बे-एतबार, वि. ನಂಬಲಾಗದ; ನಂಬಿಕೆಗೆ ಯೋಗ್ಯವಲ್ಲದ, ವಿಶ್ವಾಸಾರ್ಹವಲ್ಲದ

बेक़दर, वि. ಗೌರವಹೀನ, ನಗಣ್ಯ.

बेक़दरी, स्त्री. ಅಗೌರವ, ಅನಾದರ.

बेक़रार, बेकल, वि. ನೆಮ್ಮದಿಯಿಲ್ಲದ, ಹಳವಳಿಸುವ; ಅಶಾಂತ.

बेक़रारी, बेकली, स्त्री. ಅಶಾಂತಿ, ಹಳವಂಡ, ಕಳವಳ.

बेकस, पु. ಹುಲ್ಲು. वि. ದಿಕ್ಕಿಲ್ಲದ, ವಿಧಿಯಿಲ್ಲದ; ಗತಿಗೆಟ್ಟ, ಅನಾಥ.

बेकसी, स्त्री. ವಿವಶತೆ

बेक़सूर, वि. ನಿರಪರಾಧಿ, ನಿರ್ದೋಷಿ.

बेकहा, वि. ಹೇಳಿದರೂ ಕೇಳದವನು.

बे-कही, वि. ಹೇಳದ, ಅನುಕ್ತ.

बे-काज, वि. ಕೆಲಸಕ್ಕೆ ಬಾರದ, ನಿರರ್ಥಕ

बे-क़ानून, क्रिवि. ಕಾನೂನಿಗೆ ವಿರುದ್ಧವಾಗಿ, ನಿಯಮವಿರೋಧವಾಗಿ.

बेक़ाबू, वि. ಅಂಕೆಯಿಲ್ಲದ, ವಿವಶ.

बेकाम, वि. ಕೆಲಸವಿಲ್ಲದ, ನಿರುದ್ಯೋಗಿ; ಕೆಲಸಕ್ಕೆ ಬಾರದ, ನಿರರ್ಥಕ.

बेक़ायदगी, स्त्री. ಅನೀತಿ, ಅಕ್ರಮ; ಅವ್ಯವಸ್ಥೆ.

बेक़ायदा, वि. ನಿಯಮ ವಿರುದ್ಧ, ಅಕ್ರಮ; ನಿಯಮವಿಲ್ಲದ, ಅನಿಯಮಿತ.

बेकार, वि. ಕೆಲಸವಿಲ್ಲದವ, ನಿರುದ್ಯೋಗಿ; ನಿರರ್ಥಕ, ವ್ಯರ್ಥ; ಸೋಮಾರಿ.

बेकारी, स्त्री. ನಿರುದ್ಯೋಗ; ವ್ಯರ್ಥ.

बेख़, पु. ಬುಡ; ಬೇರು; ಮೂಲ; ಅಸ್ತಿಭಾರ.

बेखटके, क्रिवि. ನಿರಾತಂಕವಾಗಿ, ನಿರಾಳವಾಗಿ

बेख़तर, वि. ಆಪತ್ತಿಲ್ಲದ, ಅಪಾಯವಿಲ್ಲದ; ಭದ್ರ, ಜೋಪಾನವಾದ.

बेख़बर, वि. ಅರಿಯದ; ಎಚ್ಚರವಿಲ್ಲದ; ಅಜಾಗರೂಕ.

बे-खबरी, स्त्री. ಅಜಾಗರೂಕತೆ; ಪರಾಕು

बे-खिला, वि. ಅರಳದಿರುವ, ಅವಿಕಸಿತ.

बेख़ौफ, वि. ಹೆದರದ, ನಿರ್ಭೀತ.

बेख़ौफ़ी, स्त्री. ನಿರ್ಭಯತೆ, ನಿರ್ಭಯ.

बेग, पु. ವೇಗ, ತ್ವರೆ; ಶ್ರೀಮಂತ, ಪ್ರಭು, ಅಮೀರ.

बेगनी, स्त्री. ಶ್ರೀಮಂತನ ಹೆಂಡತಿ.

बे-ग़म, वि. ನಿಶ್ಚಿಂತೆಯಾದ, ನೆಮ್ಮದಿಯ.

बेगम, स्त्री. ರಾಣಿ; ದೊರೆಸಾನಿ.

बेगरज़, वि. ದರ್ದಿಲ್ಲದ, ಅಗತ್ಯವಿಲ್ಲದವ.

बेगानगी, स्त्री. ಪರಿಚಯವಿಲ್ಲದಿರುವಿಕೆ, ಅಪರಿಚಿತಿ.

बेगाना, वि. ಅಪರಿಚಿತ; ಪರಕೀಯ, ಪರಾಯಿ.

बेगार, स्त्री. ಬಿಟ್ಟಿ, ಅಡಾಣಿ, ಬೇಗಾರಿ; ದಂಡಕ್ಕೆ ಮಾಡುವ ಕೆಲಸ.

बेगारी, पु. ಬಿಟ್ಟಿ ಕೆಲಸ ಮಾಡುವವ; ದಂಡಕ್ಕೆ ಕೆಲಸ ಮಾಡುವವ.

बेगाह, क्रिवि. ಅಕಾಲದಲ್ಲಿ.

बेगुनाह, वि. ನಿರ್ದೋಷಿ, ನಿರಪರಾಧಿ.

बे-गुनाही, स्त्री. ನಿರ್ದೋಷ, ನಿರಪರಾಧ

बे-ग़ौर, क्रिवि. ವಿಚಾರವಿಲ್ಲದೆ.

बेचना, सक्रि. ಮಾರು, ವಿಕ್ರಯಿಸು. बेच खाना = ಕಳಕೊಳ್ಳು.

बेचा-बेची, स्त्री. ಕೊಳ್ಳಾಟ ಮಾರಾಟ.

बेचारगी, स्त्री. ನಿರ್ಗತಿ; ದೈನ್ಯ; ನಿರಾಶ್ರಯ; ನಿರಾದರಣೆ.

बेचारा, वि. ನಿರ್ವಾಹವಿಲ್ಲದ, ಯತ್ನವಿಲ್ಲದ; ಗತಿಯಿಲ್ಲದ, ದಿಕ್ಕಿಲ್ಲದವ; ನಿಸ್ಸಹಾಯ, ನಿರ್ಗತಿಕ, ಬಡಪಾಯಿ.

बेचिराग़, वि. ಹಾಳುಬಿದ್ದ, ಪಾಳು; ಮಕ್ಕಳಿಲ್ಲದ.

बेची, स्त्री. ಹುಂಡಿ ಚೀಟಿಯ ಹಿಂಬದಿಯಲ್ಲಿ ಸಹಿ ಮಾಡುವುದು, ಪೇಚೆ.

बेचू, वि. ಮಾರುವವ.

बेचैन, वि. ನೆಮ್ಮದಿಯಿಲ್ಲದ, ಅಶಾಂತ, ಕಳವಳಗೊಂಡ.

बेचैनी, स्त्री. ಅಶಾಂತಿ, ಕಳವಳ, ಹಳವಂಡ, ಮಮ್ಮಲ, ದುಗುಡ.

बेचोबा, पु. ಕಂಬವಿಲ್ಲದ ಡೇರೆ, ಗುಡಾರ.

बेज़बान, वि. ಬಾಯಿಲ್ಲದವ, ಮೂಕ.

बेज़रूर, वि. ಅಗತ್ಯವಿಲ್ಲದ, ಅನವಶ್ಯಕ.

बेजा, वि. ಸ್ಥಾನಗೆಟ್ಟ; ಅಸಾಮಯಿಕ; ಅನುಚಿತ, ಹೊಲ್ಲದ, ಕೆಟ್ಟ.

बेजान, वि. ಪ್ರಾಣವಿಲ್ಲದ, ನಿರ್ಜೀವ; ಪ್ರಜ್ಞೆಯಿಲ್ಲದ; ಕಳೆಗುಂದಿದ, ನಿರ್ಬಲ.

बेज़ाब्ता, वि. ನಿಯಮವಿರುದ್ಧ.

बेज़ार, वि. ಸಿಟ್ಟಾದ; ವ್ಯಥಿತ.

बेज़ारी, स्त्री. ಸಿಟ್ಟು, ಕೋಪ.

बेजोड़, वि. ಎಣೆಯಿಲ್ಲದ, ಈಡಿಲ್ಲದ, ಸಾಟಿಯಿಲ್ಲದ, ಅಸದೃಶ.

बेझा, पु. ಲಕ್ಷ್ಯ, ಗುರಿ; ವೇಧ್ಯ.

बेटा, पु. ಮಗ, ಪುತ್ರ.

बेटी, स्त्री. ಮಗಳು, ಪುತ್ರಿ.

बेठन, पु. ಸುತ್ತಿ ಕಟ್ಟುವ ಬಟ್ಟೆ, ತಾಟು, ಕಟ್ಟುವಾಸ; ರಟ್ಟು.

बेठिकाने, बेठौर, वि. ನೆಲೆಗೆಟ್ಟ; ಗೊತ್ತು ಗುರಿಯಿಲ್ಲದ; ಅನಿಶ್ಚಿತ, ವ್ಯರ್ಥ.

बेड़, पु. ಗದ್ದೆ ಬದು; ಕಟ್ಟೆ, ಬೇಲಿ.

बेड़ना, सक्रि. = बेढ़ना.

बेडर, वि. ನಿರ್ಭಯನಾದ, ನಿರ್ಭೀತ; ಹೆದರಿಕೆಯಿಲ್ಲದವ.

बेड़ा, पु. ತೆಪ್ಪ, ಉಡುಪ, ತರಣಿ; ಆಳು, ನೌಕರ; ಸಮೂಹ. बेड़ा पार होना =ಸಂಕಟದಿಂದ ಪಾರಾಗು, ಕಡೆತೇರು.

बेड़ी, स्त्री. ಸಂಕೋಲೆ, ಕೈಕೋಳ, ಬೇಡಿ, ಹಾಕು ಬೇಡಿ; ನೀರು ಹಾಯಿಸುವ ಮಕ್ಕರಿ, ಹೆಡಿಗೆ.

बेडौल, वि. ಕುರೂಪ, ಅಂದಗೆಟ್ಟ, ವಿಕಾರವಾದ.

बेढंगा, वि. ಕ್ರಮತಪ್ಪಿದ; ತಾರುಮಾರು, ಯದ್ವಾತದ್ವ; ಅವಲಕ್ಷಣ.

बेढ़, पु. ವೇಷ್ಟಿಸುವಿಕೆ, ಮುತ್ತುವಿಕೆ; ನಾಶ, ಹಾಳು.

बेढ़ई, स्त्री. ಕರ್ಜಿಕಾಯಿ, ಕರಿಗಡುಬು.

बेढ़ना, सक्रि. ಬೇಲಿಹಾಕು; ವೇಷ್ಟಿಸು, ಆವರಿಸು; ದನಗಳನ್ನು ಸೇರಿಸಿ ಅಟ್ಟು; ದೊಡ್ಡಿಯೊಳಕ್ಕೆ ಸೇರಿಸು.

बेढब, वि. ಅಂದಗೆಟ್ಟ, ಅವಲಕ್ಷಣವಾದ. क्रिवि. ಅನುಚಿತವಾಗಿ, ಅವಲಕ್ಷಣವಾಗಿ.

बेढा, पु. ಕೈಕಡಗ, ಬಳೆ; ಬೇಲಿ, ಕಟಕಟೆ; ಮನೆಯ ಮುಂದಿನ ಆವರಣ.

बेत, स्त्री. ಬೆತ್ತ, ಸೆಳೆ. बेत लगाना = ಛಡಿ ಏಟು ಹೊಡೆ, ಸೆಳೆ.

बेतकल्लुफ़, वि. ಶಿಷ್ಟಾಚಾರವನ್ನು ಲಕ್ಷಿಸದವನು; ಯಥಾರ್ಥವಾದಿ; ನಿಷ್ಕಪಟ, ಸರಳ. क्रिवि. ಶಿಷ್ಟಾಚಾರವನ್ನು ಲಕ್ಷಿಸದೆ, ಖಡಾಖಡಿ; ನಿಸ್ಸಂಕೋಚವಾಗಿ.

बेतकान, क्रिवि. ಆಯಾಸವಿಲ್ಲದೆ

बेतना, अक्रि. ವಿದಿತವಾಗು, ಗೊತ್ತಾಗು

बेतमीज़, वि. ಅವಿವೇಕಿ; ಅಶಿಷ್ಟ.

बेतरह, क्रिवि. ಅನುಚಿತವಾಗಿ; ವಿಪರೀತವಾಗಿ; ಹೆಚ್ಚಾಗಿ, ಕಡಿದಾಗಿ.

बेतरीक़ा, वि. ನಿಯಮ ವಿರುದ್ಧವಾದ.

बेतहाशा, क्रिवि. ಆಲೋಚಿಸದೆ; ದುಡುಂಪ್ರವೇಶವಾಗಿ; ಅತಿವೇಗದಿಂದ, ತ್ವರೆಯಿಂದ.

बेताज, वि. ಕಿರೀಟವಿಲ್ಲದ.

बेताब, वि. ಅಶಕ್ತ, ನಿರ್ಬಲ; ನೆಮ್ಮದಿಯಿಲ್ಲದೆ; ದಿಗಿಲುಬಿದ್ದ.

बेतार, वि. ತಂತಿ ಇಲ್ಲದ. बेतार का तार = ಕಂಬಿಯಿಲ್ಲದ ತಂತಿವಾರ್ತೆ, ತಂತಿಯಿಲ್ಲದ ತಾರು, "ವೈರ್‌ಲೆಸ್".

बेताल, पु. ವಂದಿ ಮಾಗಧ; ಭೂತ, ಪ್ರೇತ; ಬೇತಾಳ. वि. (ಸ್ವರ) ಲಯವಿಲ್ಲದ; ಅಪಸ್ವರದ; ಹೊಂದಿಕೆಯಿಲ್ಲದ

बेतुका, वि. ಅಸಂಬದ್ಧ, ಹೊಂದಿಕೆಯಿಲ್ಲದ.

बेद, स्त्री. ಬೆತ್ತ, ಸೆಳೆ. बेद-बाफ़ = ಬೆತ್ತದ ಕೆಲಸ ಮಾಡುವವ.

बेदख़ल, वि. ಪದಚ್ಯುತ, ಬಹಿಷ್ಕೃತ. बे-दख़ल करना = ಸ್ವಾಧೀನವನ್ನು ಬಿಡಿಸು, ಹಿಡುವಳಿಯನ್ನು ಬಿಡಿಸು.

बेदख़ली, स्त्री. ಪದಚ್ಯುತಿ, ಬಹಿಷ್ಕರಣ

बेदम, वि. ಪ್ರಾಣವಿಲ್ಲದ, ನಿರ್ಜೀವ; ಸತ್ತುಹೋದ; ಶಿಥಿಲ.

बेदर्द, वि. ಕನಿಕರವಿಲ್ಲದವ, ಕಲ್ಲೆದೆಯವ, ನಿರ್ದಯ.

बेदर्दी, स्त्री. ಕ್ರೌರ್ಯ, ನಿರ್ದಯೆ.

बेदांत, पु. ವೇದಾಂತ. वि. ಹಲ್ಲುಗಳಿಲ್ಲದ; ಬೋಡು (ಬಾಯಿ).

बेदाग़, वि. ಕಳಂಕವಿಲ್ಲದ, ನಿರ್ಮಲ; ನಿರ್ದೋಷ; ಪರಿಶುದ್ಧ.

बेदाना, वि. ಬೀಜವಿಲ್ಲದ, ಬಿತ್ತವಿಲ್ಲದ. पु. ಕಾಬೂಲು ದಾಳಿಂಬೆ, ಬೇದಾಣ

बेदार, वि. ಎಚ್ಚರವಾದ, ಜಾಗರೂಕ.

बेदारी, स्त्री. ಎಚ್ಚರ, ಜಾಗೃತಿ.

बेदिल, वि. ಎದೆಗುಂದಿದ, ಧೈರ್ಯಗೆಟ್ಟ; ಹೃದಯವಿಲ್ಲದ; ಕಲ್ಲೆದೆಯ, ಕ್ರೂರ.

बेदिली, स्त्री. ಅಧೈರ್ಯ; ನಿರಾಶೆ; ಅತ್ಯಾಚಾರ.

बेदिन, वि. ಅಧರ್ಮಿ; ನಾಸ್ತಿಕ; ದುಷ್ಟ, ದುರುಳ.

बेध, पु. ರಂಧ್ರ, ದ್ವಾರ.

बेधड़क, क्रिवि. ನಿಸ್ಸಂಕೋಚವಾಗಿ, ಧಾರಾಳವಾಗಿ, ನಿಸ್ಸೂರಾಗಿ; ನಿರ್ಭಯವಾಗಿ; ನಿಶ್ಚಿಂತೆಯಾಗಿ. वि. ಸಂಕೋಚವಿಲ್ಲದ, ನಿರ್ಭೀತ.

बेधना, सक्रि. ತೂತುಕೊರೆ, ತೋಡು.

बेधिया, पु. ತೂತು ಕೊರೆಯುವವ; ಅಂಕುಶ.

बेन, पु. ವೇಣು, ಕೊಳಲು.

बेनज़ीर, वि. ಅನುಪಮ, ಈಡಿಲ್ಲದ.

बे-नवा, वि. ಬಡ, ನಿರ್ಧನ; ಬಡವ, ಗರೀಬ.

बे-नवाई, स्त्री. ದಾರಿದ್ರ್ಯ, ಬಡತನ; ಭಿಕ್ಷುಕತನ.

बेनसीब, वि. ಅದೃಷ್ಟವಿಲ್ಲದ, ಭಾಗ್ಯಹೀನ, ನಸೀಬಿಲ್ಲದ.

बेना, पु. ಬೀಸಣಿಗೆ; ಹೆಂಗಸರ ಒಂದು ಆಭರಣ, ಹಣೆಬೊಟ್ಟು.

बेनाम, वि. ಹೆಸರಿಲ್ಲದ, ಅನಾಮಧೇಯ; ನಿರ್ನಾಮ.

बेनिया, स्त्री. ಸಣ್ಣ ಬೀಸಣಿಗೆ.

बेनी, स्त्री. ವೇಣಿ, ಹೆರಳು, ಜಡೆ; ಬಾಗಿಲಿನ ಬಿರಡೆ, ಅಗುಳಿ.

बेपरदा, वि. ಮರೆಯಿಲ್ಲದ, ಆವರಣವಿಲ್ಲದ; ನಗ್ನ; ಬುರುಕಿಯಿಲ್ಲದ; ನಾಚಿಕೆಯಿಲ್ಲದ.

बेपरवा,**बेपरवाह**, वि. ಲಕ್ಷ್ಯವಿಲ್ಲದವ; ಧಾರಾಳ; ಸ್ವೇಚ್ಛಾಚಾರಿ.

बेपारिन, स्त्री. "बेपारी" का स्त्री. रूप.

बेपारी, पु. ವ್ಯಾಪಾರಿ, ವರ್ತಕ.

बेपीर, वि. ನಿರ್ದಯ, ಕ್ರೂರ.

बेपेंदी, वि. ಬುಡವಿಲ್ಲದ, ಅಂಡಿಲ್ಲದ. बेपेंदी का लोटा = ಅಂಡಿಲ್ಲದ ವೊಗೆ; ಚಂಚಲಚಿತ್ತದವನು

बे-फ़ायदगी, स्त्री ವಿಫಲತೆ; ನಿರರ್ಥಕತೆ

बेफ़ायदा, वि. ಪ್ರಯೋಜನವಿಲ್ಲದ, ವ್ಯರ್ಥ, ನಿರರ್ಥಕ; ವಿಫಲ.

बेफ़िक्र, वि. ಯೋಚಿಸದ, ನಿಶ್ಚಿಂತ.

बेफ़िक्री, स्त्री. ನಿಶ್ಚಿಂತೆ.

बेबस, वि. ವಿವಶ, ಅಸಮರ್ಥ.

बेबसी, स्त्री. ವಿವಶತೆ, ಅಸಮರ್ಥತೆ.

बेबाक, वि. ಭಯವಿಲ್ಲದ, ನಿರ್ಭೀತ.

बेबाक़, वि. ಸಂದಾಯವಾದ, ನಿಶ್ಶೇಷವಾದ, ಬೇಬಾಕಾದ, ತೀರಿದ.

बेबाक़ी, स्त्री. ಸಂದಾಯ, ಋಣ

ವುುಕ್ತ, ತೀರಿಕೆ.

बे-बुलाया, वि. ಆಹ್ವಾನವಿಲ್ಲದೆ ಬಂದ ವ, ಕರೆಯದವ.

बेभाव, वि. ಲೆಕ್ಕವಿಲ್ಲದ, ಅಪಾರ. बे भाव की पड़ना = ಚೆನ್ನಾಗಿ ಏಟು ಬೀಳು.

बेमज़ा, वि. ರುಚಿಯಿಲ್ಲದ, ಸಪ್ಪೆ; ಸ್ವಾರಸ್ಯವಿಲ್ಲದ.

बेमन, क्रिवि. ಮನಸ್ಸಿಲ್ಲದೆ, ದಂಡಕ್ಕೆ.

बेमानी, वि. ಅರ್ಥವಿಲ್ಲದ; ಅಪಾರ್ಥಕ; ನಿರರ್ಥಕ.

बेमालूम, क्रिवि. ತಿಳಿಯದ ಹಾಗೆ; ಗುಮ್ಮನೆ, ಸದ್ದಿಲ್ಲದೆ. वि. ತಿಳಿಯದ, ಅಪ್ರತೀತ.

बेमुरव्वत, वि. ಸೌಜನ್ಯವಿಲ್ಲದ; ನಿರ್ದಾಕ್ಷಿಣ್ಯವಾದ; ಪರಾಙ್ಮುಖ

बेमुरव्वती, स्त्री. ಸೌಜನ್ಯವಿಲ್ಲದಿರುವಿಕೆ, ನಿರ್ದಾಕ್ಷಿಣ್ಯ.

बेमेल, वि. ಸೇರಿಕೆಯಿಲ್ಲದ, ಹೊಂದಿಕೆಯಿಲ್ಲದ; ಅಸಂಗತ, ಅಸಂಬದ್ಧ; ಈಡಿಲ್ಲದ, ಎಣೆಯಿಲ್ಲದ.

बेमौक़ा, वि. ಸಮಯತಪ್ಪಿದ, ಅಕಾಲದ. पु. ಅಕಾಲ, ಅವೇಳೆ.

बेमौसिम, वि ಕಾಲತಪ್ಪಿದ, ಅಕಾಲದ

बेर, पु. ಬೋರೆಹಣ್ಣು, ಎಲಚಿ, ಬದರಿ. स्त्री. ವೇಳೆ, ಹೊತ್ತು, ಕಾಲ.

बेरजरी. स्त्री. ಕಾಡು ಎಲಚಿ ಹಣ್ಣು.

बेरस, वि. ರಸವಿಲ್ಲದ, ನೀರಸ, ಸಪ್ಪೆ.

बेरहम, वि. ಕನಿಕರವಿಲ್ಲದ, ನಿರ್ದಯ.

बे-रहमी, स्त्री. ನಿರ್ದಯತೆ, ಕಾಠಿಣ್ಯ.

बेरा, पु. ವೇಳೆ, ಹೊತ್ತು.

बेरी, स्त्री. ವೇಳೆ, ಹೊತ್ತು; ಎಲಚಿ ಹಣ್ಣು, ಬೋರೆಹಣ್ಣು.

बेरुख़-बेरुख़े, वि. ವಿಮುಖ, ಕುಪಿತ.

बेरुख़ाई, स्त्री. ವಿಮುಖತೆ.

बेरून, क्रिवि. ಹೊರಗಡೆ, ಹೊರಗೆ.

बेरूनी, वि. ಹೊರಗಡೆಯ, ಬಾಹ್ಯ.

बेरेशा, वि. ನಾರಿಲ್ಲದ.

बेरोक, बेरोकटोक, क्रिवि. ತಪ್ಪು ತಡೆಯಿಲ್ಲದೆ, ಅಡ್ಡಿಯಿಲ್ಲದೆ, ನಿರ್ವಿಘ್ನವಾಗಿ; ನಿಸ್ಸಂಕೋಚವಾಗಿ.

बेर्रा, पु. ಎರೆಯಪ್ಪ, ರೊಟ್ಟಿ, ವಡೆ.

बेल, पु. ಬಿಲ್ವಮರ; ಗುದ್ದಲಿ, ಪಿಕಾಸಿ, ಸಲಿಕೆ; ರಸ್ತೆಯಲ್ಲಿ ಗುರುತಿಗಾಗಿ ಹಾಕಿದ ಸುಣ್ಣದ ನೀರಿನ ಗೆರೆ. स्त्री. ಬಳ್ಳಿ, ಲತೆ, ಹಂಬು; ಸಂತಾನ, ಸಂತತಿ; ಬಟ್ಟೆ ಅಥವಾ ಗೋಡೆಯ ಮೇಲೆ ಹೂವಿನ ಕೆಲಸ, ಬುಟ್ಟಾ ಕೆಲಸ; ದೋಣಿ ನಡೆಸುವ ಹುಟ್ಟು, ಜಲ್ಲೆ; ಲಾಳಿ, ನಾಡೆ; ಹಬ್ಬಗಳಲ್ಲಿ ನರ್ತಕಿಯರಿಗೆ ಕೊಡುವ ಹಣ, ಇನಾಮು.

बेलक, पु. ಸಣ್ಣ ಗುದ್ದಲಿ; ಅಂಬಿನ ತುದಿ, ಮೊನೆ.

बेलचा, पु. ಗುದ್ದಲಿ, ಪಿಕಾಸಿ, ಸಲಿಕೆ.

बेलदार, पु. ಗುದ್ದಲಿ ಕೆಲಸ ಮಾಡುವವನು, ಮಣ್ಣೊಡ್ಡ.

बेलन, पु ಉರುಳುವ ದಿಂಡು, ಉರುಳಕ, ಉರುಳೆ, ಉರಣೆ; ಗಾಣದ ಕಣೆ; ಲಟ್ಟಣಿಗೆ, ಲತ್ತಿಗುಣಿ; ಗುಂಡು ಕಲ್ಲು; ವರ್ತುಲ ಸ್ತಂಭ; ಮರದ ಕೊಂಬೆ.

बेलना, सक्रि. ಲಟ್ಟಿಸು; ಪದರು ಪದರಾಗಿ ಮಾಡು; ಹರವು; ನೀರೆರಚು; ಹಾಳುಮಾಡು. पु. ಲಟ್ಟಣಿಗೆ, ಲತ್ತಿಗುಣಿ; ಹತ್ತಿ ಬೀಜ ಬಿಡಿಸುವ ಯಂತ್ರ.

बेलनी, स्त्री. ಲಟ್ಟಣಿಗೆ, ಲತ್ತಿಗುಣಿ; ಹತ್ತಿ ಬೀಜ ಬಿಡಿಸುವ ಯಂತ್ರ, ಕಿರಕುರಾಟೆ; ಚಿಕ್ಕ ಕೊಂಬೆ.

बेलबूटा, पु. ಗಿಡ ಬಳ್ಳಿಗಳು; ಕಸೂತಿಯ ಹೂ ಗಿಡಗಳು, ಬುಟ್ಟಾ ಕೆಲಸ

बेलहरा, पु. ಒಂದು ಬಗೆ ಬಟ್ಟೆ; ವೀಳೆಯದೆಲೆ ಇಡುವ ಬುಟ್ಟಿ.

बेलहरी, स्त्री. ವೀಳ್ಯದೆಲೆಯ ಬುಟ್ಟಿ.

बेला, पु. ವೇಳೆ, ಸಮಯ, ಹೊತ್ತು; ಬಟ್ಟಲು, ಕುಡಿಕೆ; ಮಲ್ಲಿಗೆ ಹೂ; ಒಂದು ಬಗೆ ಪಿಟೀಲು, ಕಾಮಾಕ್ಷಿ.

बेलाग, वि. ಅಲಾಯಿದಾ; ಶುದ್ಧ.

बेली, पु. ಸಂಗಾತಿ, ಜೊತೆಗಾರ.

बेलुत्फ़, वि. ಸ್ವಾರಸ್ಯವಿಲ್ಲದ, ನೀರಸ.

बेलौ, वि. ಎದೆಗುಂದಿದ, ಧೈರ್ಯಗುಂದಿದ.

बेलौस, वि. ಯಥಾರ್ಥ, ಸಾಚಾ.

बेवकूफ़, वि. ಜ್ಞಾನವಿಲ್ಲದವ, ಮೂರ್ಖ; ದಡ್ಡ, ಅವಿವೇಕಿ, ಬೇಕೂಬ.

बेवकूफ़ी, स्त्री. ಮೂರ್ಖತನ, ದಡ್ಡತನ, ಅವಿವೇಕ.

बेवक़्त, क्रिवि. ಅವೇಳೆಯಲ್ಲಿ.

बेवफ़ा, वि. ಕರ್ತವ್ಯಭ್ರಷ್ಟ; ವಿಶ್ವಾಸಘಾತಕ, ದ್ರೋಹಿ.

बेवफ़ाई, स्त्री. ವಿಶ್ವಾಸಘಾತ, ದ್ರೋಹ.

बेवरा, पु. = ब्योरा.

बेवा, स्त्री. ವಿಧವೆ, ವಿತಂತು; ರಂಡೆ.

बेश, वि. ಅಧಿಕ; ಹೆಚ್ಚು; ಶ್ರೇಷ್ಠ.

बे-शऊर, वि. ಕೆಲಸ ತಿಳಿಯದವ, ದಡ್ಡ; ಒರಟ, ಒಡ್ಡ.

बेशक, क्रिवि. ನಿಸ್ಸಂದೇಹವಾಗಿ, ಖಂಡಿತ

बेशक़ीमत, बेशक़ीमती, बेशबहा, वि. ಹೆಚ್ಚು ಬೆಲೆಯುಳ್ಳ, ಹಿರಿಯ ಬೆಲೆಯ, ಬಹುಮೂಲ್ಯವಾದ.

बेशतर, वि. ಹೆಚ್ಚು. क्रिवि. ಬಹುಶಃ.

बेशर्म, वि. ನಾಚಿಕೆಗೆಟ್ಟವ, ನಾಣಿಲಿ.

बेशर्मी, स्त्री. ನಾಚಿಕೆಗೇಡಿತನ, ನಾಣಿಲಿತನ.

बेशह, बेशा, पु. ಅಡವಿ, ಕಾಡು.

बेशी, स्त्री. ಆಧಿಕ್ಯ, ಹೆಚ್ಚು.

बेशुमार, वि. ಲೆಕ್ಕವಿಲ್ಲದ, ಅಗಣಿತ.

बेसन, पु. ಕಡಲೆ ಹಿಟ್ಟು.

बेसनी, वि. ಕಡಲೆ ಹಿಟ್ಟಿನ. स्त्री. ಕಡಲೆ ಹಿಟ್ಟಿನ ರೊಟ್ಟಿ.

बेसनौटी, स्त्री. ಕಡಲೆ ಹಿಟ್ಟಿನ ರೊಟ್ಟಿ.

बे-सबब, क्रिवि. ನಿಷ್ಕಾರಣ, ಅಕಾರಣ.

बेसब्र, बेसब्रा, वि. ತಾಳ್ಮೆಯಿಲ್ಲದ, ಸಹನೆಯಿಲ್ಲದ, ಆತುರಪಡುವ.

बे-सबरी, स्त्री. ಅವಸರ, ಆತುರ.

बेसर, पु. ಹೇಸರಗತ್ತೆ, ಅಶ್ವತರ; ಮೂಗುತಿ, ಬೇಸರಿ.

बेसरा, वि. ಠಾವಿಲ್ಲದ, ಆಶ್ರಯವಿಲ್ಲದ. पु. ಒಂದು ಬಗೆ ಗಿಡುಗ.

बेसवा, स्त्री. ವೇಶ್ಯೆ, ಸೂಳೆ.

बेसहारा, वि. ನೆರವಿಲ್ಲದ, ಆಶ್ರಯವಿಲ್ಲದವ, ಅನಾಶ್ರಿತ.

बेसाहना, सक्रि. ಕೊಂಡುಕೊಳ್ಳು.

बेसाहनी, स्त्री. ಕೊಂಡುಕೊಳ್ಳುವಿಕೆ.

बेसाहा, पु. ಕೊಂಡದ್ದು, ಸರಕು.

बे-सिफ़ारिश, क्रिवि. ಶಿಫಾರಸುಇಲ್ಲದ.

बे-सिलसिले, वि. ಕ್ರಮರಹಿತ.

बेसुध, वि. ಅರಿವಿಲ್ಲದ; ಪ್ರಜ್ಞೆಯಿಲ್ಲದ, ಎಚ್ಚರ ತಪ್ಪಿದ.

बेसुर, बेसुरा, वि. ಅಪಸ್ವರದ.

बे-सूद, क्रिवि. ಬಡ್ಡಿಯಿಲ್ಲದ; ಲಾಭವಿಲ್ಲದ; ಪ್ರಯೋಜನವಿಲ್ಲದ.

बेह, पु. ರಂಧ್ರ, ದ್ವಾರ. वि. ಒಳ್ಳೆಯ; ಉತ್ತಮ; ಶ್ರೇಷ್ಠ.

बेहड़, वि. =बीहड़.

बेहतर, वि. ಹೆಚ್ಚು ಒಳ್ಳೆಯ, ಉತ್ತಮತರ; ವಾಸಿ, ಲೇಸು. अव्य. ಒಳ್ಳೆಯದು, ಒಳ್ಳೆಯದಾಯಿತು !

बेहतरी, स्त्री. ಒಳ್ಳೆಯದು; ಹಿತ; ಕ್ಷೇಮ.

बेहतरीन, वि. ಎಲ್ಲಕ್ಕಿಂತ ಹೆಚ್ಚು ಒಳ್ಳೆಯದಾದ, ಸರ್ವೋತ್ತಮ.

बेहद, बेहद्द, वि. ಮೇರೆಯಿಲ್ಲದ, ಅಪರಿಮಿತ; ಅಪಾರ, ಮಟ್ಟಿಲ್ಲದ; ಅಗಣಿತ.

बेहन, पु. ಸಸಿ, ಅಗೆ, ನೇಜಿ.

बेहना, पु. ಅರಳೆ ಎಕ್ಕುವವ, ಪಿಂಜಾರ.

बेहबूद, स्त्री. ಒಳ್ಳೆಯದು, ಹಿತ.

बेहया, वि. ಲಜ್ಜೆಯಿಲ್ಲದವ, ನಾಣಿಲಿ.

बेहयाई, स्त्री. ನಿರ್ಲಜ್ಜೆ, ನಾಣಿಲಿತನ.

बेहर, बेहरा, वि. ಬೇರೆಯಾದ, ವಿಭಿನ್ನ.

बेहराना, अक्रि. ಹರಿ, ಹಿಸಿ, ಸೀಳು.

बेहरी, स्त्री. ಚಂದಾವಸೂಲಿ, ವರ್ಗಣಿ; ಕಿಸ್ತು; ಪುದುವಟ್ಟು.

बेहला, पु. ಹಣದ ಚೀಲ, ಥೈಲಿ

बेहाल, वि. ದೆಸೆಗೆಟ್ಟ, ವ್ಯಾಕುಲಪಡುವ.

बेहाली, स्त्री. ದುಸ್ಥಿತಿ; ವ್ಯಾಕುಲತೆ.

बे-हिसाब, वि. ಲೆಕ್ಕವಿಲ್ಲದ, ಅಸಂಖ್ಯ.

बे-हुरमत, वि. ಮಾನವಿಲ್ಲದ, ಮರ್ಯಾದೆಯಿಲ್ಲದ.

बेहूदगी, स्त्री. ಅಸಭ್ಯತೆ; ಒರಟುತನ.

बेहूदा, वि. ಅಸಭ್ಯ, ಒಡ್ಡ, ಒರಟು; ಗಾವೋದು; ದಡ್ಡ.

बेहैफ़, क्रिवि. ನಿಶ್ಚಿಂತೆಯಾಗಿ, ಹಾಯಾಗಿ.

बेहोश, वि. ಪ್ರಜ್ಞೆಯಿಲ್ಲದ, ಜ್ಞಾನತಪ್ಪಿದ, ಮೈಮರೆತ; ಮೂರ್ಛೆ ಹೋದ.

बेहोशी, स्त्री. ಜ್ಞಾನತಪ್ಪುವಿಕೆ, ಮೂರ್ಛೆ; ಮರವೆ, ಹವ್ಮದ, ಜೊಂಗುಳಿ.

बैंगन, पु. ಮುಳ್ಳುಗಾಯಿ, ಬದನೇ.

बैंगनी, बैंजनी, वि. ಬದನೇಕಾಯಿ ಬಣ್ಣದ, ರಕ್ತನೀಲ, ಜಾಂಬಳಿ, ಊದಾ.

बै, स्त्री. ನೆಯಿಗೆಯವರ ಕುಂಚ, ಕುಂಚಿಗೆ; ಮಾರಾಟ, ಬಿಕರಿ.

बैज़, पु. ಮೊಟ್ಟೆ, ತತ್ತಿ; ಅಂಡ; ಅಂಡಕೋಶ; ಸರಕಾರದ ಕಾಗದ ಪತ್ರಗಳಿಗೆ ಹಾಕುವ ಠಸ್ಸೆ, ಮೊಹರು.

बैज़ा, पु. ಸೂರ್ಯ; ಶ್ವೇತವರ್ಣ; ಬಿಳುಪು; ಮೊಟ್ಟೆ, ತತ್ತಿ; ಅಂಡ; ಅಂಡಕೋಶ.

बैज़ाना, पु. ಸರಕಾರಿ ಕಾಗದ ಪತ್ರಗಳಿಗೆ ಠಸ್ಸೆ ಹಾಕಲು ಕೊಡುವ ರುಸುಂ.

बैठक, स्त्री. ಕುಳಿತುಕೊಳ್ಳುವ ಸ್ಥಳ, ಹಜಾರ, ಪಡಸಾಲೆ; ವೇದಿಕೆ, ಜಗಲಿ;

ಪೀಠ, ಮಂದಾಸನ; ಸಭೆ ನೆರೆಯುವಿಕೆ, ಸದಸ್ಯರ ಕೂಟ, ಅಧಿವೇಶನ; ಕುಳಿತು ಕೊಳ್ಳುವಿಕೆ; ಊಟು ಬೈಸು, ಬೈಸಿಗೆ.

बैठक-ख़ाना, बैठका, पु. ಕುಳಿತು ಕೊಳ್ಳುವ ಕೋಣೆ, ಸದರು, ದಿವಾನ ಖಾನೆ, ಬೈಠಕಖಾನೆ.

बैठकी, स्त्री. ಕುಳಿತು ಏಳುವಿಕೆ, ಬೈಸಿಗೆ; ಊಟು ಬೈಸು, ಆಸನ; ಆಧಾರ; ದೀಪಾಧಾರ, ಸಮೆ.

बैठन, स्त्री. ಕುಳಿತುಕೊಳ್ಳುವಿಕೆ, ಕೂಡುವಳಿ; ಆಸನ.

बैठना, अक्रि. ಕೂತುಕೊ; ಸ್ಥಾಪಿತವಾಗು; ತಗಲು; ತಳ ಸೇರು, ಕುಸಿ; ಕುದುರು; (ಖರ್ಚು) ಬೀಳು; ಕೆಲಸವಿಲ್ಲದೆ ಕೂತಿರು, ಬಿದ್ದಿರು; ಉಪಪತ್ನಿಯಂತೆ ಒಬ್ಬನಲ್ಲಿ ವಾಸವಾಗಿರು; ಮೊಟ್ಟೆಗೆ ಕಾವು ಕೊಡಲು ಕೂರು.

बैठवाँ, वि. ಸಮವಾದ, ಚಪ್ಪಟೆಯಾದ.

बैठवाना, सक्रि. बैठना का प्रे. रूप.

बैठा, पु. ದೋಣಿಯ ಹುಟ್ಟು, ಜಳವೆ.

बैठाई, स्त्री. ಕೂಡುವಿಕೆ, ಅಧ್ಯಾಸನ.

बैठाना, बैठारना, बैठालना, सक्रि. ಕುಳ್ಳಿರಿಸು, ಕೂರಿಸು; ಸ್ಥಾಪಿಸು; ನೆಡು, ನಾಟು; ಇರಿಸು, ಮಡಗು; ಒಬ್ಬಳನ್ನು ಇಟ್ಟುಕೊಳ್ಳು.

बैढ़ना, सक्रि. ದನಗಳನ್ನು ದೊಡ್ಡಿಯೊಳಕ್ಕೆ ಸೇರಿಸು.

बैत, स्त्री. ಶ್ಲೋಕ, ದ್ವಿಪದಿ; ಕವನ. पु. ಗೃಹ, ಆಲಯ.

बैतरा, पु. ಒಂದು ಬಗೆ ಶುಂಠಿ.

बैद, बैद्य, पु. ವೈದ್ಯ, ಚಿಕಿತ್ಸಕ.

बैदक, बैदगी, स्त्री. ವೈದ್ಯನ ಕೆಲಸ ಅಥವಾ ಕಸಬು, ವೈದ್ಯಗಾರಿಕೆ.

बैदाई, स्त्री. ವೈದ್ಯನ ಕೆಲಸ, ವೈದ್ಯನ ವೃತ್ತಿ; ವೈದ್ಯನ ರುಸುಂ.

बैदिन, स्त्री. "बैद" का स्त्री. रूप.

बैन, पु. ವಾಣಿ, ಮಾತು. क्रिवि. ನಡುವೆ, ಮಧ್ಯೆ.

बैना, पु. ಮದುವೆ ಮುಂಜಿಗಳಲ್ಲಿ ನೆಂಟರಿಷ್ಟರಿಗೆ ಕಳುಹಿಸುವ ತಿಂಡಿ ಮೊದಲಾದುವು; ಬಾಗಿನ, ಉಡುಗೊರೆ.

बैर, पु. ವೈರ, ವಿರೋಧ; ಹಗೆತನ; ವೈಮನಸ್ಯ. बैर काढ़ना या निकालना =ಹಗೆ ತೀರಿಸಿಕೊಳ್ಳು, ಸೇಡು ತೀರಿಸು

बैरक़, पु. ಬಾವುಟ, ಧ್ವಜ.

बैरागन, बैरागिन, स्त्री. ಬೈರಾಗಿಣಿ; ಡೊಂಕು ತುದಿಯ ಸನ್ಯಾಸಿಗಳ ದಂಡ

बैरागा, पु. ಸನ್ಯಾಸಿಗಳ ದಂಡ, ತುದಿಯಲ್ಲಿ ಡೊಂಕಾದ ಕೋಲು.

बैरागी, पु. ಬೈರಾಗಿ, ವಿರಕ್ತ.

बैरन, बैरिन, स्त्री. **बैरी,** पु. ಶತ್ರು, ವಿರೋಧಿ, ಹಗೆ.

बैल, पु. ಎತ್ತು; ಹೋರಿ; ಹೆಡ್ಡ.

बैस, पु. ವಯಸ್ಸು, ಪ್ರಾಯ; ಕ್ಷತ್ರಿಯರ ಒಂದು ಜಾತಿ; ವೈಶ್ಯ ಜಾತಿ.

बैसक, पु. ಕಾಡಿನಲ್ಲಿ ದನಕರುಗಳನ್ನು ಮೇಯಿಸುವ ಸ್ಥಳ, ಹುಲ್ಲುಗಾವಲು; ಮೃತಪ್ರಾಯವಾದ ಪ್ರಾಣಿ; ಬಡಕಲು ದನ.

बैसना, अक्रि. ಕುಳಿತುಕೊ, ಕೂರು.

बैसर, स्त्री. ನೆಯ್ಗೆಯವರ ಕುಂಚ, ಕುಂಚಿಗೆ.

बैसांड, बैसांडू, वि. ಸೋಮಾರಿ, ಶೋಂಭೇರಿ, ಆಲಸ.

बैसाख, पु. ವೈಶಾಖ.

बैसाखा, पु. ಕುಂಟರ ಆನಿಕೆ ಕೋಲು, ಕಂಕುಳು ಕೋಲು; ಊರೆಗೋಲು.

बैसाखी, स्त्री. ವೈಶಾಖಮಾಸದ ಬೆಳೆ, ಹಯನು ಬೆಳೆ; ಕುಂಟರು ನಡೆಯುವಾಗ ಕಂಕುಳಲ್ಲಿಟ್ಟುಕೊಳ್ಳುವ ಆನಿಕೆ ಕೋಲು, ಕುಂಟುಗೋಲು, ಕಂಕುಳ ಕೋಲು.

बोंका, पु. ಹಾರುವ ಮಿಡತೆ.

बोंगा, वि. ದಡ್ಡ. ಮಂಕ, ಪೆದ್ದ.

बोंडी, स्त्री. =बौंडी.

बोआई, स्त्री. ಬೀಜ ಬಿತ್ತುವಿಕೆ, ಬಿತ್ತನೆ; ಬೀಜ ಬಿತ್ತಲು ಕೊಡುವ ಕೂಲಿ.

बोआना, अक्रि. ನಾತಹೊಡೆ, ನಾರು. सक्रि. ಬೀಜ ಬಿತ್ತಿಸು.

बोआरा, पु. ಬಿತ್ತನೆಯ ಕಾಲ.

बोइया, स्त्री. ಸಣ್ಣ ಮಕ್ಕರಿ, ಗೂಡೆ.

बोक, बोकरा, पु. =बकरा.

बोका, पु. ಮಕ್ಕರಿ, ಹೆಡಿಗೆ.

बोच, पु. ಮೊಸಳೆ, ನೆಗಳು.

बोचा, पु ಡೋಲಿ, ಮೇನ.

बोज, पु. ಕುದುರೆಯ ಒಂದು ಜಾತಿ.

बोज़ना, पु. =बूज़िना.

बोजा, पु. ಒಂದು ಬಗೆ ಹೆಂಡ.

बोझ, पु. ಭಾರ, ಹೊರೆ, ವಜನು.

बोझना, सक्रि. ಹೇರು, ಹೊರಿಸು.

बोझल, बोझिल, बोझैल, वि. ಭಾರವಾದ, ತೂಕವುಳ್ಳ; ಭಾರಿ, ದಿಣ್ಣ; ಹೊರೆಯಾದ.

बोझा, पु. ಭಾರ, ಹೊರೆ.

बोझिया, पु. ಭಾರ ಹೊರುವವ, ಹೊರೆಯಾಳು.

बोट, पु. ಮಿಡತೆ.

बोटा, पु. ಮರದ ದಿಮ್ಮಿ, ನಾಟ.

बोटी, स्त्री. ಮಾಂಸದ ತುಂಡು, ಕಂಡ, ಬಾಡು गिनी बोटी नापा शोरबा = ಎಣಿಸಿ ಅಳತೆ ಮಾಡಿದ; ಕೊಂಚ, ಸ್ವಲ್ಪ

बोड़ना, सक्रि. =डुबाना.

बोड़ा, पु. ಹೆಬ್ಬಾವು, ಅಜಗರ; ಒಂದು ಬಗೆ ಅವರೆಕಾಯಿ.

बोड़ी, स्त्री. ಕವಡೆ; ಕಾಸು, ಚಿಕ್ಕಾಸು; ಕಾಯಿ, ಬೀಜಕೋಶ, ಶಮಿ.

बोत, पु. ಕುದುರೆಯ ಒಂದು ಜಾತಿ.

बोतल, स्त्री. ಸೀಸೆ, ಕುಪ್ಪಿ, ಬುದ್ದಲಿ, ಬಾಟಲಿ.

बोताम, पु. =बुताम.

बोतू, पु. ಆಡು, ಹೋತ.

बोद्ली, स्त्री. ಐಬ್ರಾಸಿ ಹೆಂಗಸು.

बोद्दा, वि. ಧೈರ್ಯವಿಲ್ಲದವ; ಬಲವಿಲ್ಲದ, ಪೆಡಸು; ತಿಳಿಗೇಡಿ; ಸೋಮಾರಿ.

बोध, पु. ಜ್ಞಾನ, ತಿಳಿವಳಿಕೆ; ಆಶ್ವಾಸನ

बोधना, सक्रि. ಬೋಧಿಸು; ಪುಸಲಾಯಿಸು.

बोना, सक्रि. ಬೀಜ ಚೆಲ್ಲು, ಬೀಜ ಗಾಣಿಸು, ಬಿತ್ತು, ಬೀರು.

बोनी, स्त्री. ಬಿತ್ತನೆಯ ಕಾಲ; ಬಿತ್ತನೆ.

बोबा, पु. **बोबी**, स्त्री. ಮೊಲೆ, ಸ್ತನ, ಚೂಚುಕ, ಮನೆಯ ಮುಟ್ಟು, ಸಾಮಾನು, ಸರಂಜಾಮು.

बोय, स्त्री. ಗಂಧ, ವಾಸನೆ.

बोर, पु. ಚಿನ್ನ ಅಥವಾ ಬೆಳ್ಳಿಯ ಗುಂಡಿ, ಗುಬುಟು; ಮುಳುಗುವಿಕೆ, ನಿಮಜ್ಜನ. वि. ಆಳವಾದ.

बोरना, सक्रि. ಮುಳುಗಿಸು, ಅದ್ದು; ಬಣ್ಣದಲ್ಲಿ ಅದ್ದು, ಬಣ್ಣ ಕೊಡು.

बोरसी, स्त्री. ಅಗ್ಗಿಷ್ಟಿಕೆ, ಕುಂಪಟಿ.

बोरा, पु. ಗೋಣಿ ಚೀಲ, ಗೋಣಿ, ಕುನಿಕಿಲು; ಮುಳುಗುವಿಕೆ, ಗೋತ.

बोरिया, पु. ಚಾಪೆ; ಹಾಸಿಗೆ. बोरिया बधना उठाना = ಗಂಟು ಮೂಟೆ ಕಟ್ಟಿಕೊಂಡು ಹೊರಡು.

बोरी, स्त्री. ಗೋಣಿ, ಗೋಣಿ ಚೀಲ.

बोरो, पु. ಮಳೆ ಬಿಲ್ಲು, ಕಾಮನ ಬಿಲ್ಲು; ಒಂದು ಬಗೆ ಅಕ್ಕಿ.

बोल, पु. ರಕ್ತಬೋಳ, ಗಂಧರಸ; ಮೂತ್ರ, ಉಚ್ಚೆ; ಮಾತು, ನುಡಿ; ವಚನ, ಕಥನ; ಗೀತ, ಹಾಡು; ಹಾಡಿನ ಚರಣ; ವಾದ್ಯಗಳ ಧ್ವನಿ; ಗೇಲಿ, ಕೊರಚಾಟಿ. बोलबाला = ಮೇಲುಗೈ, ಪ್ರಾಬಲ್ಯ; ಮಾನ್ಯತೆ, ಮನ್ನಣೆ; ವೃದ್ಧಿ, ಇಜಾಫೆ.

बोलचाल, स्त्री. ಮಾತುಕತೆ; ಆಡು ಮಾತು, ನುಡಿವಳಿ; ಸರಸ, ಚಕ್ಕಂದ.

बोलता, वि. ಮಾತಾಡುವವ, ವಾಚಾಲ. पु. ವಾಕ್‌ಶಕ್ತಿ; ಆತ್ಮ, ಜೀವ.

बोलनहारा, पु. ಆತ್ಮ.

बोलना, सक्रि. ಮಾತಾಡು, ಸಂಭಾಷಿಸು; ಹೇಳು, ಅನ್ನು; ಉಲಿಯು, ಕೀಚು ಕೀಚೆನ್ನು, ಕೂಗು. बोलना चालना = ಮಾತುಕತೆ ಆಡು.

बोलवाना, सक्रि. ಮಾತಾಡಿಸು, ನುಡಿಸು

बोलसर, पु. ಒಂದು ಜಾತಿ ಕುದುರೆ; ಬಕುಳ ವೃಕ್ಷ, ರಂಜ.

बोलाचाली, स्त्री. = **बोलचाल**.

बोली, स्त्री. ಧ್ವನಿ, ಶಬ್ದ; ವಾಣಿ, ವಚನ; ಮಾತು, ಭಾಷೆ; ಗೇಲಿ, ಪರಿಹಾಸ, ಲೇವಡಿ; ಹರಾಜಿ(ಲಿಲಾವಿ) ನಲ್ಲಿ ಇಂತಿಷ್ಟು ಬೆಲೆಗೆಂದು ಕೇಳುವಿಕೆ ಅಥವಾ ಹೇಳುವಿಕೆ, ಬೆಲೆ ಕೂಗುವಿಕೆ, ಚಡಸವಾಲು, ವಾರು. बोली ठोली = ಎಗತಾಳಿ, ಕೊರಚಾಟಿ. बोली बोलना = ಗೇಲಿ ಮಾಡು, ಪರಿಹಾಸ ಮಾಡು; ಬೆಲೆ ಕೂಗು, ವಾರು ಕರೆ; ಹರಾಜು ಹಾಕು, ಲಿಲಾವು ಮಾಡು.

बोवना, सक्रि. ಬೀಜ ಚಲ್ಲು, ಬಿತ್ತು.

बोवाना, सक्रि. = **बोआना**.

बोसा, पु. ಚುಂಬನ, ಮುತ್ತು, ಉಮ್ಮು

बोसीदगी, स्त्री. ಕೊಳೆತುಹೋಗುವಿಕೆ, ಹಳಸುವಿಕೆ.

बोसीदा, वि. ಕೊಳೆತ, ಹಳಸಿದ.

बोस्तां, पु. ಹೂದೋಟ, ಪುಷ್ಪವಾಟಿಕೆ

बोह, स्त्री. ಮುಳುಗುವಿಕೆ, ಗೋತ.

बोहनी, स्त्री. ದಿವಸದ ಮೊದಲನೆಯ ಮಾರಾಟ, ಬೋಣಿ, ಬೋಣಿಗೆ.

बोहरा, पु. ಹಣದ ಲೇವಾದೇವಿ ಮಾಡುವವನು, ಸರಾಫ.

बोहारी, स्त्री. = बुहारी.

बौंड, स्त्री. ಬಳ್ಳಿ, ಲತೆ, ಹಂಬು.

बौंडना, अक्रि. ಬಳ್ಳಿವರಿ, ಹಂಬು.

बौंडियाना, सक्रि. ಹೊಸೆ, ತಿರಿಚು. अक्रि. ವಕ್ರವಕ್ರವಾಗಿ ಓಡು, ಡೊಂಕುಡೊಂಕಾಗಿ ಹರಿದುಹೋಗು.

बौंडी, स्त्री. ಮಿಡಿಗಾಯಿ, ಪೂಮಿಡಿ, ಹೀಚು; ಬೀಜಕೋಶ, ಶಮಿ; ಬಿಡಿಗಾಸು, ಚಿಕ್ಕಾಸು, ದಮ್ಮಡಿ.

बौंदा, पु. ಧಾನ್ಯದ ಹೊಡೆ, ತೆನೆ.

बौआना, अक्रि. ಹುಚ್ಚು ಹುಚ್ಚಾಗಿ ಹರಟು, ಜರಚು, ಕನವರಿಸು.

बौखल, वि. ಹುಚ್ಚ; ಮಂಕ, ಮರುಳ.

बौखलाना, अक्रि. ಭ್ರಾಂತನಾಗು; ಮರುಳಾಗು.

बौछाड़, बौछार, स्त्री. ಗಾಳಿಯ ಹೊಡೆತಕ್ಕೆ ಒಳಗೆ ಬೀಳುವ ಮಳೆ, ಇರಿಚಲು; ಮಳೆಯಂತೆ ಸುರಿಯುವಿಕೆ; ಗೇಲಿ, ಪರಿಹಾಸ.

बौड़हा, वि. ಹುಚ್ಚ, ಮರುಳ, ಬೆಪ್ಪ.

बौना, पु. ಕುಳ್ಳ, ಗಿಡ್ಡ. ಗುಜ್ಜಾರಿ.

बौनी, स्त्री. ಕುಳ್ಳಿ, ಗಿಡ್ಡಿ.

बौर, पु. ಮಾವಿನ ಹೀಚು; ಹೂ; ಬಳ್ಳಿ.

बौरना, अक्रि. ಹೀಚು ಬಿಡು.

बौरहा, बौरा, वि. ಹುಚ್ಚ, ಮರುಳ.

बौराना, अक्रि. ಹುಚ್ಚು ಹಿಡಿ, ಮಂಕಾಗು; ಹೂ ಬಿಡು; ಅರಳು. सक्रि. ಹುಚ್ಚು ಹಿಡಿಸು.

बौहड़ना, अक्रि. ತಿರುಗಿ ಬರು, ಹಿಂತಿರುಗು.

बौहित, पु. ಹಡಗು, ಜಹಜು.

ब्याज, पु. ಬಡ್ಡಿ, ಚುಂಗಡಿ.

ब्याजख़ोर, पु. ಬಡ್ಡಿಗೆ ಹಣ ಕೊಡುವವ, ಕುಸೀದಗಾರ.

ब्याजू, वि. ಬಡ್ಡಿಗೆ ಹಾಕಿದ (ಹಣ); ಅಸಲು.

ब्यान, पु. ಮರಿ ಹಾಕುವಿಕೆ, ಈತ.

ब्याना, सक्रि. ಮರಿ ಹಾಕು, ಈನು. पु. ಸಂಚಕಾರ, ಚಂಡವಾಳ.

ब्यारी, ब्यालू, स्त्री. ರಾತ್ರಿಯೂಟ.

ब्याह, पु. ವಿವಾಹ, ಲಗ್ನ, ಮದುವೆ.

ब्याहता, ब्याहा, वि. ಮದುವೆ ಮಾಡಿಕೊಂಡ, ಮದುವೆಯಾದ.

ब्याहना, सक्रि. ಮದುವೆಯಾಗು; ಮದುವೆ ಮಾಡಿಕೊಳ್ಳು; ಮದುವೆ ಮಾಡಿಸು.

ब्योंचना, अक्रि. ನರ ಹೊರಳು, ಉಳುಕು ಹಿಡಿ

ब्योंड़ा, पु. = पटैला.

ब्योंत, स्त्री. ತರಹ, ರೀತಿ, ಪರಿಜು; ಆಕೃತಿ; ಅಂಗಿ ಹೊಲಿಯಲು ಬಟ್ಟೆಯನ್ನು ಕತ್ತರಿಸುವಿಕೆ.

ब्योंतना, सक्रि. ಬಟ್ಟೆಯನ್ನು ಕತ್ತರಿಸು.

ब्योरन, स्त्री. ತಲೆ ಬಾಚುವಿಕೆ; ಬಾಚಿಕೊಳ್ಳುವ ತರಹ.

ब्योरना, सक्रि. ಬಾಚು, ಹಿಕ್ಕು.

ब्योरा, पु. ವಿವರ, ಮಾಹಿತಿ, ತಪಶೀಲು; ಪರುಟವಣೆ, ವೃತ್ತಾಂತ; ವ್ಯತ್ಯಾಸ; ಭೇದ.

ब्योरेवार, क्रिवि. ತಪ್ಸೀಲಾಗಿ, ವಿವರ

ವಾಗಿ; ಸ್ಪಷ್ಟವಾಗಿ.
ब्योहर, पु. ಬಡ್ಡಿಗೆ ಹಣ ಕೊಡುವಿಕೆ, ಲೇವಾದೇವಿ.
ब्योहरिया, पु. ಬಡ್ಡಿಗೆ ಹಣ ಕೊಡುವವ
ब्रज, पु. ಮಥುರಾ ಪಟ್ಟಣದ ಸುತ್ತಲೂ ಇರುವ ದೇಶ; ಈ ದೇಶದ ಭಾಷೆ, ವ್ರಜ ಭಾಷೆ.
ब्रत, पु. ವ್ರತ, ನೋಂಪಿ.
ब्राह्मन, पु. ಬ್ರಾಹ್ಮಣ, ಹಾರವ.
ब्राह्मणी, स्त्री. ಬ್ರಾಹ್ಮಣ ಸ್ತ್ರೀ, ಹಾರುವಿತಿ

भ

भंग, पु. ಒಡೆಯುವಿಕೆ, ಭಂಗ; ಬಂಗಿ ಸೊಪ್ಪು, ಡೊಂಕು. वि. ಒಡೆದ, ಭಂಗಪಡಿಸಿದ.
भंगड़, वि. ಬಂಗಿ ಸೇದುವವ.
भंगना, अक्रि. ಭಂಗವಾಗು, ಮುರಿ. सक्रि. ಭಂಗಮಾಡು, ಮುರಿಸು.
भंगरा, पु. ಒಂದು ಬಗೆ ಬಟ್ಟೆ.
भंगार, पु. ಹೊಂಡ, ಕುಣಿ, ಹಳ್ಳ; ಕಸಕಡ್ಡಿ.
भंगन, **भंगिन**, **भंगिनी**, स्त्री. भंगी का स्त्री. रूप.
भंगी, पु. ಬಂಗಿ ಸೇದುವವ; ಬೀದಿ ಬಳಿಯುವವ, ತೋಟಿ, ಝಾಡಮಾಲಿ, ಬಂಗಿ, ಜಲಗಾರ, ಒಡ್ಡ. स्त्री ವಿಭಜನೆ, ವಿಂಗಡಿಸುವಿಕೆ; ಮೋಸ; ಭಾವಭಂಗಿ, ಅಂಗವಿನ್ಯಾಸ.
भंगेड़ी, **भंगेरा**, **भंगेरी**, पु ಬಂಗಿ ಸೇದುವವ ಅಥವಾ ಮಾರುವವ.
भंजना, अक्रि. ಒಡೆ; ಮುರಿ, ಚಿಲ್ಲರೆಯಾಗು; ಮುರಿಸಲ್ಪಡು; ತಿರುಗು.
भंजाई, स्त्री. ಮಡಿಸುವಿಕೆ; ರೂಪಾಯಿಗೆ ಚಿಲ್ಲರೆ ಮುರಿಸುವಿಕೆ; ಮಡಿಸುವುದಕ್ಕೆ ಕೂಲಿ; ರೂಪಾಯಿ ಮುರಿಸಲು ಪಟ್ಟ.
भंजाना, सक्रि. ಒಡೆ, ಮುರಿ; ಚಿಲ್ಲರೆ ಮಾಡು, ಮುರಿಸು; ತಿರುಗಿಸು, ಮಡಿಸು
भंटा, पु. ಬದನೆಕಾಯಿ.
भंड, पु. ವಿದೂಷಕ, ಸಬ್ಬವಕಾರ.
भंडताल, **भंडतिल्ला**, पु. ಚಪ್ಪಾಳೆ ತಟ್ಟುತ್ತಾ ಮಾಡುವ ನರ್ತನ.
भंडना, सक्रि. ಒಡೆ, ಮುರಿ; ಕೆಡಿಸು.
भंडफोड़, पु. = भंडाफोड़.
भंडरिया, पु. ಹಸ್ತ ಸಾಮುದ್ರಿಕ ಹೇಳುವವ, ಹಸ್ತ ಸಾಮುದ್ರಿಕ. स्त्री. ಗೋಡೆಯಲ್ಲಿನ ಅಲಮಾರು, ಗೂಡು. वि. ಕಪಟಿ, ಠಕ್ಕ; ದುರುಳ.
भंडसार, **भंडसाल**, स्त्री. ಹಗೇವು, ಕಣಜ; ಅಂಬಾರಖಾನೆ, ಉಗ್ರಾಣ.
भंडा, पु. ಭಾಂಡ, ಮಡಕೆ, ಗಡಿಗೆ, ಗುಡಾಣ; ಗುಟ್ಟು. भंडा फूटना = ಗುಟ್ಟು ರಟ್ಟಾಗು, ರಹಸ್ಯ ಬಯಲಾಗು
भंडाफोड़, पु. ಗುಟ್ಟು ರಟ್ಟಾಗುವಿಕೆ, ರಹಸ್ಯವನ್ನು ಬಯಲಿಗೆ ತರುವುದು.
भंडाना, सक्रि. ಉಪದ್ರವ ಮಾಡು, ಸತಾಯಿಸು.
भंडार, पु. ಭಂಡಾರ, ಕೋಠಿ.
भंडारा, पु. ಸಂತರ್ಪಣೆ, ಸಮಾರಾಧನೆ

भंडारी, पु. ಭಂಡಾರಿ, ಉಗ್ರಾಣಿಕ.

भंडेरिया, भंडेला, पु. ಹಾಸ್ಯಗಾರ, ವಿದೂಷಕ, ವಿಕಟಕವಿ, ಸಬ್ಬವಕಾರ.

भंडेलन, स्त्री. भंडेला का स्त्री. रूप.

भंडैती, स्त्री. ವಿಕಟವಿನೋದ, ಸಬ್ಬವ, ಪರಿಹಾಸ.

भंडोआ, पु. ಅಶ್ಲೀಲಗೀತ, ಬಂಡು ಪದ, ಜಾವಳಿ.

भंपाना, सक्रि. "भांपना" का प्रे. रूप.

भंभाना, अक्रि. ಹಸುವಿನಂತೆ ಕೂಗು.

भंभारी, स्त्री. ಪಾತರಗಿತ್ತಿ ಹುಳು, ಪತಂಗದ ಹುಳು, ಬಣ್ಣದ ಚಿಟ್ಟೆ.

भंभोरना, सक्रि. ಕಡಿ, ಕಚ್ಚು.

भंवर, पु. ಭ್ರಮರ, ದುಂಬಿ; ತಿರುಗಣಿ ಮಡು, ಜಲಾವರ್ತ, ಸುಳಿ.

भंवरकली, स्त्री. ತಿರುಗಣಿ, ತಿರುಪು; ತಿರುಪು ಹೂ; ಕುತ್ತಿಗೆ ಪಟ್ಟಿ; ನೇಣು, ಕೊರಳ ಹುರಿ.

भंवरजाल, पु. ಸಂಸಾರ ಪಾಶ; ತಾಪ ತ್ರಯ; ಫಜೀತಿ.

भंवरभीख, स्त्री. ಮಾಧುರಿಕ.

भंवरी, स्त्री. ಜಲಾವರ್ತ, ಸುಳಿ; ಕೂದಲಿನ ಸುಳಿ; ಸುತ್ತುವಿಕೆ, ಸುಳಿದಾಟ; ಪ್ರದಕ್ಷಿಣೆ, ಸಪ್ತಪದಿ; ಬೀದಿ ತಿರುಗಿ ಮಾರಾಟ ಮಾಡುವಿಕೆ.

भंसना, अक्रि. ನೀರಿನಲ್ಲಿ ಬೀಳು.

भंसार, पु. ಅಗ್ಗಿಷ್ಟಿಗೆ.

भइया, पु. ಸಹೋದರ, ಸೋದರ.

भई, सक्रि. "होना" का भूत रूप.

भकसा, वि. ಒಗರಾದ, ಕಟು.

भकसी, स्त्री. ನೆಲಮಾಳಿಗೆಯ ಸೆರೆಮನೆ.

भकाऊं, पु. ಬೂಚಿ, ಗೊಗ್ಗಯ್ಯ, ಗುಮ್ಮ.

भकुआ, वि. ದಡ್ಡ, ಮೂರ್ಖ, ಪೆಚ್ಚು.

भकुआना, अक्रि. ಪೆಚ್ಚು ಬೀಳು, ಮಂಕಾಗು. सक्रि. ಪೆಚ್ಚು ಬೀಳಿಸು.

भकोसना, सक्रि. ಮುಕ್ಕಿ ತಿನ್ನು, ಗಿಡಿ.

भक्त, पु. ಉಪಾಸನೆ ಮಾಡುವವ; ಭಕ್ತ; ಸಾಧು.

भक्ति, स्त्री. ಭಕ್ತಿ, ಶ್ರದ್ಧೆ.

भखना, सक्रि. ಭಕ್ಷಿಸು, ತಿನ್ನು.

भगंदर, पु. ನಾಡೀವ್ರಣ, ಭಗಂದರ.

भगई, स्त्री. ಕೌಪೀನ, ಲಂಗೋಟಿ.

भगत, पु. ಭಕ್ತ; ಜೋಗಿ, ದಾಸಯ್ಯ. स्त्री. ವೇಷ, ಸೋಗು.

भगताई, स्त्री. ಭಕ್ತಿ, ಶ್ರದ್ಧೆ.

भगतिन, स्त्री. ಭಕ್ತಳು; ಜೋಗಿತಿ; ನಾಯಕಸಾನಿ, ದೇವದಾಸಿ.

भगतिया, पु. ನಾಯಕಸಾನಿಯ ಜಾತಿಯವ; ನರ್ತನಗಾರ; ಮೇಳಗಾರ.

भगदड़, भगदर, स्त्री. ಪಲಾಯನ, ಓಟ; ಶತ್ರುಭಯದಿಂದ ಊರು ಬಿಟ್ಟು ಬೇರೆ ಸ್ಥಳಕ್ಕೆ ಓಡುವಿಕೆ, ಊರನ್ನು ಖಾಲಿಮಾಡುವಿಕೆ, ಗುಳೆತೆಗೆಯುವಿಕೆ.

भगना, अक्रि. ಓಡು, ದೌಡು ಬಿಡು.

भगल, पु. ಮೋಸ; ಠಕ್ಕು; ಜಾಲ.

भगली, वि. ಠಕ್ಕಿನ; ಮೋಸದ; ಮೋಸಗಾರ; ಜಾಲಗಾರ.

भगवां, वि. ಕಾವಿ ಬಣ್ಣದ. पु. ಕಾವಿ ವಸ್ತ್ರ, ಕಾವಿ ಶಾಟಿ.

भगलिया, पु. ಠಕ್ಕಿನವ, ಜಾಲಗಾರ.

भगाड़, पु. ಭಾವಿಯು ಇಳಕಲು, ಭಾವಿಯು ಒಳದು.

भगाना, सक्रि. ಓಡಿಸು, ಅಟ್ಟು, ತರುಬು, ತೊಲಗಿಸು.

भगैत, भगोड़ा, भगोहां, भग्गू, वि. ಓಡುವವ, ಓಡುಕುಳಿ; ಪಲಾಯನ ಮಾಡುವವ, ಪಲಾಯಿತ.

भगोना, पु. ದೊಡ್ಡ ಡಬರಿ; ಅರಕಂಚಟ್ಟಿ

भगोनी, स्त्री. ಸಣ್ಣ ಡಬರಿ.

भग्गा, वि. ಓಡುವವ, ಓಡುಕುಳಿ; ಪಲಾಯಿತ; ಅಳ್ಳೆದೆಯುವ, ಪುಕ್ಕ.

भग्नावशेष, पु. ಹಾಳುಕೊಂಪೆ, ಪಾಳು

भचक, स्त्री. ಕುಂಟತನ, ಕುಂಟು. वि. ಬೆಚ್ಚಿಬಿದ್ದ, ಬೆರಗಾದ, ಚಕಿತನಾದ, ಸ್ತಬ್ಧ.

भचकना, अक्रि. ಕುಂಟುತ್ತ ನಡೆ, ಕುಂಟು; ಬೆಚ್ಚಿ ಬೀಳು, ಬೆರಗಾಗು, ಚಕಿತನಾಗು, ದಿಗಿಲುಭುಗಿಲಾಗು.

भजन, पु. ಭಜನೆ, ಸ್ತೋತ್ರ.

भजना, सक्रि. ಭಜಿಸು, ಸ್ತುತಿಸು; ಜಪಿಸು. अक्रि. ಓಡಿಹೋಗು; ತಲಪು

भजनीक, वि. ಭಜನೆ ಮಾಡುವವ, ಭಜಿಸುವವ.

भजाना, सक्रि. ಓಡಿಸು, ಸೋವು, ಅಟ್ಟು. अक्रि. ಓಡು.

भजियाउर, स्त्री. ಒಂದು ಕಲಸನ್ನ.

भट, पु. ಯೋಧ, ಭಟ. स्त्री. ಕುಲಿಮೆ; ಬಟ್ಟಿ; ಆವಿಗೆ.

भटई, स्त्री. ವಂದಿ ಮಾಗಧರ ವೃತ್ತಿ, ಹೊಗಳುಭಟ್ಟನ ಕೆಲಸ; ಹೊಗಳಿಕೆ, ಕೈವಾರ.

भटकटाई, भटकटैया, स्त्री. ಒಂದು ಮುಳ್ಳು ಗಿಡ, ಕಂಟಕಾರಿಕೆ.

भटकना, अक्रि. ಅಲೆ, ಅಲೆದಾಡು; ತಿರಿ, ತೊಳಲು; ಹೊಲಬು ತಪ್ಪು, ದಾರಿ ತಪ್ಪು.

भटका, वि. ದಾರಿ ತಪ್ಪಿದ.

भटकाना, सक्रि. ಅಲೆದಾಡಿಸು; ದಾರಿ ತಪ್ಪಿಸು; ಹೊಲಬು ತಪ್ಪಿಸು.

भटकावा, पु. ಅಲೆದಾಟ, ಅಲೆತ.

भटकैया, पु. ಅಲೆಯುವವ, ತಿರುಕ.

भटनास, स्त्री. ಒಂದು ತರಕಾರಿ.

भटभेरा, पु ಜಟಾಪಟಿ, ಜಗಳ; ಢಿಕ್ಕಿ; ಸಮಾಗಮ.

भटा, पु. ಗುಳ್ಳದ ಬದನೇಕಾಯಿ.

भटू, स्त्री. ಮಹಿಳೆ, ಅಮ್ಮಾವರು.

भट्ठा, पु. ಭಟ್ಟಿ, ಆವಿಗೆ; ಇಟ್ಟಿಗೆ ಗೂಡು

भट्ठी, स्त्री. ಒಲೆ, ಕುಲಿಮೆ; ಭಟ್ಟಿ; ಭಟ್ಟಿ ಇಳಿಸುವ ಸ್ಥಳ, ಭಟ್ಟಿ ಕಾರಖಾನೆ.

भठियाना, अक्रि. ನೀರು ಕಡಮೆಯಾಗು, ನೀರು ಇಳಿದುಹೋಗು; ಇಂಗು.

भठियार-खाना, पु. ಪ್ರಯಾಣಿಕರಿಗೆ ಊಟ ದೊರಕಿಸುವ ಸ್ಥಳ, ಬೋಜನ ಶಾಲೆ, ಖಾನಾವಳಿ.

भठियारा, पु. ಛತ್ರದವ, ಭೋಜನ ಶಾಲೆಯವ; ಅಡಿಗೆಯವ.

भठियारिन, भठियारी, स्त्री. ಅಡಿಗೆಯವಳು, ಬೋನಗಿತ್ತಿ, ಅಡಗೂಲಜ್ಜಿ

भठियाला, स्त्री. ಸೆಳೆತ, ಹೊಯಿಲು.

भड़ंबा, पु. ಆಡಂಬರ.

भड़क, स्त्री. ಹೊಳಪು, ಕಾಂತಿ; ಠೀವಿ, ಆಡಂಬರ; ಸೊಬಗು; ಅಂಜಿಕೆ, ಭಿಡೆ; ಉರಿ, ಜ್ವಾಲೆ.

भड़कदार, वि. ಆಡಂಬರದ, ಠೀವಿಯ.

भड़कना, अक्रि. ಜ್ವಲಿಸು, ಹೊಳೆ; ಬೆಚ್ಚು, ಬೆದರು; ರೇಗು, ಕೆರಳು.

भड़काना, सक्रि. ಉರಿಸು; ಹುರಿದುಂಬಿಸು; ಬೆದರಿಸು; ರೇಗಿಸು.

भड़की, स्त्री. ಬೆದರಿಕೆ, ಅಂಜಿಕೆ.

भड़कीला, वि. ಹೊಳೆಯುವ, ಥಳಥಳಿಸುವ; ಮೆರೆಯುವ, ಠೀವಿಯ.

भड़कैल, वि. ಅಂಜುವ, ಬೆಚ್ಚುವ; ಪಳಗಿಸದ, ತಿದ್ದದ, ವನ್ಯ.

भड़भड़, स्त्री. ಸಂದಣಿ, ಗದ್ದಲ.

भड़भड़ाना, अक्रि. ಗದ್ದಲಮಾಡು; ಛಟಛಟವೆನ್ನು; ಬಾತುಕೊ, ಉಬ್ಬು.

भड़भड़ाहट, स्त्री. ಬಾವು, ಬೀಗು

भड़भड़िया, वि. ಗದ್ದಲ ಮಾಡುವವ; ಮಾತುಗಾರ; ನಿಷ್ಕಪಟಿ.

भड़भांड, पु. ಒಂದು ಮುಳ್ಳು ಗಿಡ.

भड़भूंजन, स्त्री. भड़भूंजा का स्त्री. रूप.

भड़भूंजा, पु. ಕಾಳು ಹುರಿಯುವವ.

भड़रिया, पु. ಮಂತ್ರವಾದಿ.

भड़ाका, पु. ಸ್ಫೋಟನ, ಸಿಡಿತ.

भड़ाभड़, क्रिवि. ಛಟಛಟ ಶಬ್ದ ಮಾಡುತ್ತಾ.

भड़िहा, पु. ಕಳ್ಳ, ಚೋರ.

भड़ुआ, पु. ಲುಚ್ಚ, ಲಂಡ; ಭಡವ, ಕುಂಟಣಿಗ; ಹಿಮ್ಮೇಳದವ.

भड़ैत, वि. ಬಾಡಿಗೆದಾರ.

भडेरिया, भड्डर, भड्डरी, पु. ಹಸ್ತಸಾಮುದ್ರಿಕ ಹೇಳುವವ.

भतार, पु. ಭರ್ತೃ, ಗಂಡ, ಪತಿ.

भतीजा, पु. ಸಹೋದರನ ಮಗ.

भतीजी, स्त्री. ಸಹೋದರನ ಮಗಳು.

भत्ता, पु. ದಿನ ಭಕ್ಷ್ಯ, ಪಡಿ.

भद, भदभद, पु. ದಪದಪ ಶಬ್ದ.

भदई, स्त्री. ಭಾದ್ರಪದ ಮಾಸದಲ್ಲಿ ಕೊಯ್ಲಿಗೆ ಬರುವ ಬೆಳೆ.

भदभदाना, अक्रि. ಬಡಬಡ ಶಬ್ದ ಮಾಡು.

भदभदाहट, स्त्री. ಬಡಬಡ ಶಬ್ದ.

भदाक, भदाका, पु. ಬಡಬಡ ಶಬ್ದ, ಧಡಾಲೆನ್ನುವ ಶಬ್ದ.

भदेसल, भदेसी, वि. ಕುರೂಪಿ; ಕೊಬ್ಬಿದ.

भद्दा, वि. ಕುರೂಪ, ವಿಕಾರವಾದ; ಆಭಾಸವಾದ, ಅಂದಗೆಟ್ಟ; ಬೆಪ್ಪ.

भनक, स्त्री. ಗೊಣಗಾಟ; ಗುಜುಗುಜು.

भनभनाना, अक्रि. ಪಟಗುಟ್ಟು, ಗೊಣಗುಟ್ಟು; ಝೇಂಕರಿಸು, ಗುಂಯಿಗುಟ್ಟು.

भनभनाहट, स्त्री. ಝೇಂಕಾರ, ಗೊಣಗುಟ್ಟು.

भपाड़ा, पु. ಮೋಸ, ದಗ, ದಗಲು.

भपाना, अक्रि. ಉಗಿಯಿಂದ ಕಾಸಲ್ಪಡು

भपारा, पु. ಉಗಿ, ಹಬೆ, ಆವಿ.

भपोला, पु. ಗುಳ್ಳೆ, ಬೊಬ್ಬೆ.

भबक, स्त्री. ನಾತದ ಹೊಡೆತ; ಬೆಂಕಿಯ ಜ್ವಾಲೆ, ಉರಿ; ಸಿಡಿತ.

भबकना, अक्रि. ಉರಿ; ಕುದಿ. ಉಕ್ಕು; ಸಿಡಿ, ಹಿಸಿ; ರೇಗು, ಕನಲು; (ಕುದುರೆಯಂತೆ) ಜೋರಿನಿಂದ ಓಡು.

भबका, पु. ಬಕಯಂತ್ರ, ಭಟ್ಟಿ; ಕುಲಿಮೆಯಿಂದ ಬೀಸುವ ಗಾಳಿ.

भबकाना, सक्रि. ಹೊತ್ತಿಸು, ಉರಿಸು; ರೇಗಿಸು; ಕುದುರೆಯನ್ನು ಓಡಿಸು.

भबकी, स्त्री. ಕೋತಿ ಅಥವಾ ಬಳ್ಳುನರಿ ಕೋಪದಲ್ಲಿ ಮಾಡುವ ಶಬ್ದ; ಗದರಿಕೆ, ಗದರಿಸುವಿಕೆ. गीदड़ भबकी, बंदर भबकी = ಗೊಡ್ಡು ಬೆದರಿಕೆ.

भड़बड़, स्त्री ಸಂದಣಿ, ಗದ್ದಲ, ದೊಂದುಳಿ

भभकना, अक्रि. = भबकना.

भभकी, स्त्री. = भबकी.

भभर, स्त्री. ಭಯ, ದಿಗಿಲು, ಗಾಬರಿ.

भभरना, अक्रि. ಭಯಪಡು, ಅಂಜು.

भभराना, अक्रि. ಉಬ್ಬು; ಬೀಗು;

भभूका, पु. ಜ್ವಾಲೆ, ಉರಿ; ಸಿಡಿತ. वि. ಕಾದು ಕೆಂಪಗಾದ; ಹೊಳೆಯುವ.

भभूत, स्त्री. ವಿಭೂತಿ, ಭಸ್ಮ.

भय, पु. ಭಯ, ಅಂಜಿಕೆ; ದಿಗಿಲು.

भयवाद, पु. ಬಂಧು ಬಳಗ.

भया, सक्रि. "होना" का भूत रूप.

भयापा, पु. ಭ್ರಾತೃತ್ವ.

भयंकर, भयानक, भयावना, भयावह, पु. ಭಯಂಕರ, ಭೀಕರ, ಭೀತಿ ಜನಕ; ಘೋರ; ಕರಾಳ.

भयाहू, स्त्री ತಮ್ಮನ ಹೆಂಡತಿ, ನಾದಿನಿ.

भर, वि. ಪೂರ್ಣ, ಪೂರ್ತ; ಪೂರಾ, ತುಂಬ; ಇಡೀ, ಸಮಸ್ತ. क्रिवि. ಅದ ಮಟ್ಟಿಗೆ, ಅದಷ್ಟು. भर आना = ಭರ್ತಿಯಾಗು, ತುಂಬು. भर पाना = ಪೂರ್ತಿ ಹಣವನ್ನು ಪಡೆಕೊಳ್ಳು. भर पेट = ಹೊಟ್ಟೆ ತುಂಬು. भर सक = ಶಕ್ಯವಿದ್ದಷ್ಟು, ಕೈಯಲ್ಲಾದಷ್ಟು, ಕೂಡಿದ ಮಟ್ಟಿಗೆ.

भरक, पु. ವೃಕ್ಷವಾಟಿಕೆ, ತೋಪು.

भरकम, वि. ಭಾರಿ; ಗುರುತರವಾದ; ಮಹತ್ವದ.

भरकाना, सक्रि. ಸುಣ್ಣವನ್ನು ನೀರಿನಲ್ಲಿ ಹಾಕಿ ಅರಳಿಸು.

भरण, पु. ಪೋಷಣೆ, ಅರೈಕೆ.

भरत, पु. ಒಂದು ಮಿಶ್ರ ಲೋಹ, ಕಾಂಸ್ಯ, ಕಂಚು; ಕಂಚುಗಾರ.

भरता, पु. ಬದನೆಕಾಯನ್ನು ಸೀಳಿ ಮಸಾಲೆ ತುಂಬಿ ಮಾಡಿದ ಪಲ್ಯ, ತಾಳದ; ಬಜ್ಜಿ, ಮೊಸರು ಬಜ್ಜಿ.

भरतार, पु ಭರ್ತೃ, ಪತಿ, ಗಂಡ.

भरती, स्त्री. ಪೂರ್ತಿ; ತುಂಬುವಿಕೆ; ಭರ್ತಿ ಮಾಡುವಿಕೆ, ಭರ್ತಿ; ಸೈನ್ಯಕ್ಕೆ ಸೇರಿಸುವಿಕೆ.

भरद्दार, पु. ಹಡಗಿನಲ್ಲಿರುವ ಸರಕುಗಳನ್ನು ನೋಡಿಕೊಳ್ಳುವ ಗುಮಾಸ್ತ.

भरना, सक्रि. ಪೂರ್ತಿಮಾಡು; ತುಂಬು, ಭರ್ತಿಮಾಡು; ಕಾಗದ ಅಥವಾ ಪುಸ್ತಕದಲ್ಲಿ ಬರೆದಿಡು, ಭರಾಯಿಸು; ಹೇರು; ಮದ್ದು ತುಂಬು, ಬಾರು ಮಾಡು; ಪೂರೈಸು, ತೀರಿಸು; ಸೈರಿಸು, ಅನುಭವಿಸು; ನಿರ್ವಹಿಸು; ಗಾಯವನ್ನು ಮಾಯಿಸು. अक्रि. ಪೂರ್ತಿಯಾಗು;

ತೀರು; ತುಂಬು, ನೆರೆ; ಭರ್ತಿಯಾಗು; ಬಾರುಮಾಡಲ್ಪಡು; ಸಂದಾಯವಾಗು; ಗಾಯ ಮಾಯು; ಮೈ ತುಂಬು. पु. ತುಂಬುವಿಕೆ, ಭರ್ತಿ; ಸಾಲ, ಕಡ; ಲಂಚ.

भरनी, स्त्री. ನೆಯಿಗೆಯ ಹೊಕ್ಕು, ಅಡ್ಡೆಳೆ; ದಾರದ ಕಡ್ಡಿ, ಲಾಳಿ; ತುಂಬುವಿಕೆ.

भरपाई, क्रिवि. ಪೂರ್ತಿಯಾಗಿ ಹಣ ಪಡೆದುಕೊಳ್ಳುವಿಕೆ, ಸಂದಾಯ; ಸಂದಾಯದ ರಸೀತಿ, ಪಾವತಿ.

भरपूर, भरपूरन, वि. ಪರಿಪೂರ್ಣ, ಪೂರಿತ, ತುಂಬಿದ; ತುಂಬಿ ಸೂಸುವ. क्रिवि. ಪೂರ್ಣವಾಗಿ.

भरभराना, अक्रि. ರೋಮಾಂಚವಾಗು, ಗಾಬರಿಪಡು; ಉಬ್ಬು, ಬೀಗು.

भरभरिया, वि. ಗಾಬರಿ ಬೀಳುವವ.

भरभरी, स्त्री. ಬಾವು, ಬೀಗು.

भरम, पु. ಭ್ರಮೆ, ಭ್ರಾಂತಿ; ಸಂಶಯ; ಗುಟ್ಟು; ಮಾನ್ಯತೆ, ಪ್ರತಿಪತ್ತಿ.

भरमना, अक्रि. ಭ್ರಮಿಸು, ತೊಳಲು, ಅಲೆದಾಡು.

भरमाना, सक्रि. ಭ್ರಾಂತಗೊಳಿಸು, ತೊಳಲಿಸು; ಅಲೆದಾಡಿಸು. अक्रि. ಭ್ರಮಿಸು; ದಂಗು ಬೀಳು.

भरमार, स्त्री. ಅತಿ, ಹೇರಳ, ವಿಪರೀತ, ದಂಡಿ, ಹೇರಾಸಿ ಮಾರಾಸಿ, ಪುಷ್ಕಲ.

भरमीला, वि. ಸಂದೇಹಾಸ್ಪದವಾದ; ಸಂಶಯದ.

भरवाना, सक्रि. “भरना” का प्रे. रूप.

भरसक, क्रिवि. ಕೈಲಾದ ಮಟ್ಟಿಗೆ, ಅದಷ್ಟು, ಯಥಾಶಕ್ತಿ.

भरसाईं, भरसारी, स्त्री. ಒಲೆ, ಭಟ್ಟಿ.

भरा, वि. ಪೂರಿತ; ತುಂಬಿದ; ನೆರೆದ. भरापूरा = ಅದೃಷ್ಟವಂತ; ಸಮೃದ್ಧ; ಸಂಪನ್ನ; ಸ್ವಸ್ಥ.

भराई, स्त्री. ತುಂಬುವಿಕೆ; ಭರ್ತಿ ಮಾಡುವಿಕೆ; ಭರಾವಣೆ; ತುಂಬುವುದಕ್ಕೆ ಅಥವಾ ಹೇರುವುದಕ್ಕೆ ಕೊಡುವ ಕೂಲಿ.

भराना, सक्रि. ತುಂಬಿಸು; ಭರ್ತಿ ಮಾಡು; (ಹಕ್ಕಿಯ ಮರಿಗೆ) ಗುಟುಕು ಕೊಡು.

भराव, पु. ತುಂಬುವಿಕೆ; ಭರ್ತಿ; ನೆರತೆ.

भरावट, स्त्री. ತುಂಬುವಿಕೆ, ಭರ್ತಿ.

भरी, स्त्री. ಒಂದು ರೂಪಾಯಿನ ತೂಕ.

भरूहाना, अक्रि. ಗರ್ವಿಸು, ಹೆಮ್ಮೆಪಡು. सक्रि. ಮರುಳುಗೊಳಿಸು; ಪ್ರೇರಿಸು; ಚಿತಾವಣೆ ಮಾಡು.

भरेठा, पु ಕಮಾನು ಕಟ್ಟಲು ಇಟ್ಟಿಗೆ ತುಂಬಿಸುವ ಚೌಕಟ್ಟು; ದಾರವಂದದ ಪಟ್ಟಿ, ಕಮಾನಿನ ಅಣೆಕಲ್ಲು.

भरैया, वि. ತುಂಬುವವ; ರಕ್ಷಿಸುವವ.

भरोठा, पु. ಭಾರ, ಹೊರೆ.

भरोसा, पु. ಆಶ್ರಯ, ಆಸರೆ; ಅವಲಂಬನ; ಭರವಸೆ; ನೆಚ್ಚಿಕೆ, ನಂಬಿಕೆ.

भरौती, स्त्री. ಬಿಡುಗಡೆ, ವಿಮುಕ್ತಿ.

भर्रा, पु. ಭಯ, ಗಾಬರಿ, ದಿಗಿಲು.

भर्राटा, पु. ಭರಭರ ಶಬ್ದ; ಗಡಿಬಿಡಿ.

भर्राना, अक्रि. ಭರಭರ ಶಬ್ದವಾಗು.

भल, वि. ಒಳ್ಳೆಯ, ಶುಭ.

भलका, पु. ಮುಂಜಾನೆ, ನಸುಕು.

भलमनसत, भलमनसाहत, भलमनसी, स्त्री. ಸೌಜನ್ಯ; ಒಳ್ಳೆತನ; ಸಜ್ಜನತೆ; ದಾಕ್ಷಿಣ್ಯ.

भलमानस, भलमानुस, पु. ಗೌರವಸ್ಥ, ಸದ್ಗೃಹಸ್ಥ.

भला, वि. ಒಳ್ಳೆಯ; ಮೇಲುತರದ, ಉತ್ತಮ; ಶುಭ; ದಯಾಲು. अव्य. ಒಳ್ಳೆಯದು; ಭಲಾ, ಸೈ. पु. ಒಳ್ಳೆಯದು, ಹಿತ. भला चंगा = ಒಳ್ಳೆಯ ಸ್ಥಿತಿಯ; ಸ್ವಸ್ಥವಾದ. भला बुरा = ಸಾಧಕ ಬಾಧಕ, ಹಿತಾಹಿತ. भला बुरा कहना = ಬೈಯು, ಅನ್ನು. भला मानस = ಶೀಲವಂತ, ಸದ್ಗೃಹಸ್ಥ, ಕುಲೀನ.

भलाई, स्त्री. ಒಳ್ಳೆಯತನ; ಒಳ್ಳೆಯದು, ಒಳ್ಳಿತು; ಕ್ಷೇಮ; ಹಿತ.

भले, क्रिवि. ಚೆನ್ನಾಗಿ; ಪೂರ್ಣವಾಗಿ; ಉತ್ತಮವಾಗಿ. अव्य. ಭಲಾ, ಭಳಿರೆ, ವಹವಾ!

भलुआ, पु. ಗಂಡುಗೊಡಲಿ, ಪರಶು.

भवन, पु. ಸೌಧ, ಭವನ; ಮಂದಿರ.

भवां, स्त्री. ಸುತ್ತು, ಸುತ್ತಾಟ.

भवांना, सक्रि. ಸುತ್ತಿಸು, ತಿರುಗಿಸು.

भवितव्य, पु. ಕರ್ಮಗತಿ, ವಿಧಿ.

भवितव्यता, स्त्री. ಭವಿಷ್ಯ, ಆಗಾಮಿ; ವಿಧಿ, ಅದೃಷ್ಟ.

भसकना, अक्रि. ಬೀಳು; ಉದುರು; ಮಿತಿಗೆಟ್ಟು ತಿನ್ನು, ಗಿಡಿ, ಮುಕ್ಕು.

भसक्कड़, वि. ತಿಂಡಿಬಾಕ, ಹೊಟ್ಟೆಬಾಕ.

भसना, अक्रि. ಮುಳುಗಾಡು, ಈಜು.

भसभसा, वि. ಸಡಿಲಾದ, ಢೀಲಾದ; ಬಲವಿಲ್ಲದ, ನಿತ್ರಾಣ; ಮೆದುವಾದ, ಮೃದು.

भसम, पु. ಭಸ್ಮ, ಬೂದಿ.

भसमा, पु. ನರೆಗೂದಲನ್ನು ಕಪ್ಪಗೆ ಮಾಡುವ ಮದ್ದು, ಕೇಶಕಲ್ಪ.

भसान, पु. ಗಣಪತಿಯ ವಿಗ್ರಹ ಮೊದಲಾದುವನ್ನು ಹೊಳೆಯ ನೀರಿನಲ್ಲಿ ತೇಲಿಸಿಬಿಡುವಿಕೆ.

भसाना, सक्रि. ಗಣಪತಿಯ ವಿಗ್ರಹ ಮೊದಲಾದುವನ್ನು ಹೊಳೆಯಲ್ಲಿ ತೇಲಿಸಿ ಬಿಡು, ತೇಲಾಡಿಸು; ಈಜಾಡಿಸು.

भसींड, स्त्री. ತಾವರೆಯ ಬೇರು; ತಾವರೆಯ ದಂಟು, ಮೃಣಾಲ.

भसुर, पु. ಗಂಡನ ಅಣ್ಣ, ಮೈದುನ, ಭಾವ.

भस्म, पु. ಬೂದಿ, ಭಸ್ಮ.

भहराना, अक्रि. ಓಲಾಡು; ನಡುಗು; ತೂರಾಡು, ಮುರಿದು ಬೀಳು.

भांग, स्त्री. ಬಂಗಿಸೊಪ್ಪು, ಬಂಗಿ.

भांज, स्त्री. ಮಡಿಸುವಿಕೆ, ಮಡಿಪು; ನುಲಿಚುವಿಕೆ; ಚಿಲ್ಲರೆ ಮುರಿಸುವುದಕ್ಕೆ ಕೊಡುವ ವಟ್ಟ.

भांजना, सक्रि. ಹೊಸೆ, ನುಲಿಚು; ಮುರಿಗೆ ತಿರುವು, ತಿರುಗಿಸು; ಕಡೆಚಲು ಹಿಡಿ; ಮಡಿಸು; ಚಿಲ್ಲರೆ ಮುರಿಸು.

भांजी, स्त्री. ಚಾಡಿ, ದೂರು, ಪಿಶುನ, ಕೊಂಡೆಯ; ಅಡ್ಡಿ, ತಡೆ.

भांजीख़ोर, वि. ಚಾಡಿಕೋರ, ಪಿಶುನ.

भांटा, पु. ಬದನೆಯಕಾಯಿ.

भांड, पु. ವಿದೂಷಕ, ಸಬ್ಬವಕಾರ,

ಕೋಡಂಗಿ; ಮಡಕೆ, ಗಡಿಗೆ, ಭಾಂಡ.

भांडना, अक्रि. ಅಲೆದಾಡು, ತಿರಿ. सक्रि. ದೂರು, ದೂಷಿಸು, ಹಳಿ.

भांडा, पु. ಪಾತ್ರೆ, ಭಾಂಡೆ. भांडे भरना = ಪಶ್ಚಾತ್ತಾಪ ಪಡು.

भांडार, पु. ಭಂಡಾರ, ಕೋಠಿ; ಖಜಾನೆ.

भांडिन, स्त्री. ನಟಿ, ಪಾತರಗಿತ್ತಿ; ಹಾಸ್ಯಗಾತಿ.

भांडैती, स्त्री. ವೇಷ, ನಟನೆ; ನಕಲಿ.

भांत, भांति, स्त्री. ರೀತಿ, ತರಹ; ಪರಿ, ವಿಧ, ತೆರ; ಸ್ವಭಾವ; ಮಾದರಿ. भांति भांति = ವಿಧವಿಧ, ಪರಿಪರಿ, ವಿವಿಧ.

भांपना, सक्रि. ತಿಳಿದುಕೊಳ್ಳು, ಅರಿತುಕೊಳ್ಳು; ಊಹಿಸು.

भाँय भाँय, पु. ಶೂನ್ಯವಾಗಿರುವಿಕೆ, ಬಿವರ್ ಎನ್ನುವಿಕೆ, ಬಿಕೋ ಎನ್ನುವಿಕೆ.

भांवना, सक्रि. ಕೆತ್ತು; ಕಡೆಚಲು ಹಿಡಿ; ರೂಪುಗೊಳಿಸು.

भांवर, भांवरी, स्त्री. ಪರ್ಯಟನೆ; ಪ್ರದಕ್ಷಿಣೆ; ಸುತ್ತಾಟ; ಪರಿಚಲನೆ.

भाई, पु. ಸಹೋದರ, ಸೋದರ. भाई दूज = ಕಾರ್ತಿಕ ಶುಕ್ಲ ದ್ವಿತೀಯೆ.

भाईचारा, पु. **भाईबंदी**, स्त्री. ಸೋದರಭಾವ, ಭ್ರಾತೃಭಾವ, ಬಾಂಧವ್ಯ.

भाईबंद, पु. ಸೋದರರು; ನೆಂಟರು; ಬಂಧು ಬಳಗ.

भाकसी, स्त्री. ಆವಿಗೆ, ಕುಲಿಮೆ

भाखना, अक्रि. ಹೇಳು, ಮಾತಾಡು; ಕರೆ

भाखा, स्त्री. ಭಾಷೆ; ಹಿಂದೀ ಭಾಷೆ.

भाग, पु. ಭಾಗ, ಪಾಲು, ಹಿಸ್ಸೆ; ವಿಭಾಗ; ಭಾಗಾಕಾರ; ವಿಧಿ; ಭಾಗ್ಯ, ಅದೃಷ್ಟ. भाग में आना = ಪಾಲಿಗೆ ಬೀಳು. भाग जागना = ಭಾಗ್ಯೋದಯವಾಗು; ಅದೃಷ್ಟ ಖುಲಾಯಿಸು.

भागड़, स्त्री. ಓಡಿಹೋಗುವಿಕೆ; ವಲಸೆ ಹೋಗುವಿಕೆ; ಪಲಾಯನ.

भागना, अक्रि. ಓಡಿಹೋಗು; ಪಲಾಯನ ಮಾಡು; ತಪ್ಪಿಸಿಕೊಳ್ಳು.

भागव, पु. ವೈಶ್ಯರ ಒಂದು ಒಳ ಜಾತಿ.

भागवान, वि. ಭಾಗ್ಯವಾನ್, ಅದೃಷ್ಟವಂತ, ಪುಣ್ಯವಂತ; ಹಣವಂತ.

भागवानी, स्त्री. ಭಾಗ್ಯ, ಅದೃಷ್ಟ.

भागसी, स्त्री. ಕಾರಾಗೃಹ, ಸೆರೆಮನೆ.

भागाभाग, पु. ಓಟ, ದೌಡು.

भागा, क्रिवि. ಓಡುತ್ತಾ. भागा भागा = ಓಡೋಡುತ್ತ. भागा ले जाना = ಜೊತೆಗೆ ಓಡಿಸಿಕೊಂಡು ಹೋಗು; ಪರಸ್ತ್ರೀಯೊಡನೆ ಪಲಾಯನ ಮಾಡು.

भागी, वि. ಭಾಗಸ್ಥ, ಪಾಲುಗಾರ; ಭಾಗ್ಯವಂತ.

भागू, वि. ಓಡಿಹೋದವ; ಓಡುಕುಳಿ.

भाग्य, पु. ಭಾಗ್ಯ, ಅದೃಷ್ಟ.

भाजना, अक्रि. ಓಡು, ಪಲಾಯನ ಮಾಡು.

भाजी, स्त्री. ಕಾಯಿಪಲ್ಯ, ಹಸುರುವಾಣಿ, ತರಕಾರಿ, ಸೊಪ್ಪು; ಪಲ್ಯ; ಹಬ್ಬ ಹರಿದಿನಗಳಲ್ಲಿ ಇಷ್ಟಮಿತ್ರರಿಗೆ ಹಂಚುವ ತಿಂಡಿ ಮೊದಲಾದವು.

भाट, पु. ಚಾರಣ; ಸ್ತುತಿಪಾಠಕ; ಹೊಗಳು ಭಟ್ಟ.

भाटन, भाटिन, स्त्री. भाट का स्त्री. रूप.
भाटा, पु. ಸೆಳೆತ, ಹೊಯಿಲು; ಇಳಿತ; ಸಮುದ್ರದ ಇಳಿತ, ಇಳಿಗೆ.
भाड़, पु. ಹುರಿಯುವ ಒಲೆ, ಭಟ್ಟಿ; ಆವಿಗೆ. भाड़ में जाना = ಮಣ್ಣುಗೂಡು, ಹಾಳಾಗು.
भाड़ा, पु. ಬಾಡಿಗೆ, ನೋರು, ಹಾಸಲು.
भाड़ैती, पु. ಬಾಡಿಗೆದಾರ.
भात, पु. ಅನ್ನ; ಮದುವೆಯಲ್ಲಿ ಅನ್ನ ಓದಿಸಿಕೊಡುವ ಶಾಸ್ತ್ರ, ಅನ್ನಶಾಸ್ತ್ರ.
भाथा, पु. ಬತ್ತಳಿಕೆ; ತಿದಿ, ತಿತ್ತಿ.
भाथी, स्त्री. ತಿದಿ, ತಿತ್ತಿ.
भादों, पु. ಭಾದ್ರಪದ ಮಾಸ.
भान, पु. ಭಾವನೆ, ಭಾಸ; ತೋಚುವಿಕೆ; ಜ್ಞಾನ. भान होना = ಭಾಸವಾಗು; ಕಂಡುಬರು, ತೋರು.
भानजा, पु. ಸೋದರಿಯ ಮಗ, ಸೋದರಳಿಯ.
भानजी, स्त्री. ಸೋದರಿಯ ಮಗಳು, ಸೋದರ ಸೊಸೆ.
भानना, सक्रि. ಒಡೆ; ಮುರಿ; ತಿಳಿ.
भानमता, पु. ಗಾರುಡಿಗಾರ, ಡೊಂಬರವ
भानमती, स्त्री. ನಟಿ; ಗಾರುಡಿಗಾತಿ, ಡೊಂಬರಗಿತ್ತಿ.
भाना, अक्रि. ಸರಿದೋರು; ಒಪ್ಪು; ಸರಿಬೀಳು; ಪಸಂದಾಗು. सक्रि. ಹೊಳಪಿಸು, ಬೆಳಗಿಸು.
भाप, भाफ, स्त्री. ಬಾಷ್ಪ, ಹಬೆ, ಆವಿ, ಉಗಿ.
भापना, सक्रि. ಉಗಿಕೊಡು.
भाभी, स्त्री. ಅಣ್ಣನ ಹೆಂಡತಿ, ಅತ್ತಿಗೆ, ವಯಿನಿ, ವೈನಿ.
भार, पु. ಭಾರ, ಹೊರೆ; ವಜನು; ೨೦ ಪಂಚೇರಿನ ತೂಕ.
भारी, वि. ಭಾರವಾದ; ದಿಣ್ಣ, ಘನ; ಭಾರಿಯಾದ; ಗುರುತರ; ದೊಡ್ಡ; ದಪ್ಪ. भरी भरकम = ಬಲುದೊಡ್ಡ, ತೂಕವಾದ, ಮಹತ್ವದ.
भारीपन, पु. ಘನತೆ, ದೊಡ್ಡತನ.
भाल, पु. ಹಣೆ; ಅದೃಷ್ಟ; ಕರಡಿ; ಅಂಬಿನ ತುದಿ, ಮೊನೆ; ಈಟಿ, ಬರ್ಚಿ; ಭರ್ಜಿ.
भालना, सक्रि. ನೋಡು, ವಿಚಾರಿಸು. देखना भालना = ನೋಡಿಕೊಳ್ಳು, ಪರಾಂಬರಿಸು.
भाला, पु. ಈಟಿ, ಭಲ್ಲೆ, ಭರ್ಜಿ, ಸಬಳ.
भालाबरदार, भालैत, पु. ಸಬಳಿಗ, ಈಟಿಯುವ, ಈಟಿಗಾರ, ಬರ್ಚಿಯುವ.
भाली, स्त्री. ಶೂಲ, ಈಟಿ, ಭರ್ಜಿ.
भालुक, भालू, पु. ಕರಡಿ, ಭಲ್ಲೂಕ.
भाव, पु. ಭಾವ; ಇರವು; ಭಾವನೆ; ಕಿಮ್ಮತ್ತು, ಬೆಲೆ; ಧಾರಣೆ; ಮನೋಭಾವ; ಹಾವಭಾವ, ಅಭಿನಯ. भाव ताव = ಧಾರಣೆ.
भावज, स्त्री. = भाभी.
भावता, वि. ಪಸಂದಾದ, ಒಪ್ಪುವ; ಮೆಚ್ಚಿಕೆಯ; ಪ್ರಿಯ.
भावना, स्त्री. ಭಾವನೆ, ಕಲ್ಪನೆ; ವಿಚಾರ. अक्रि. ಒಪ್ಪು, ಪಸಂದಾಗು.
भावली, स्त्री. ಬೆಳೆಯ ಹಂಚಿಕೆ, ಹಸಿಗೆ; ವಾರದ ಸಾಗುವಳಿ, ಬಟಾಯಿ.

भावी, स्त्री. ಭವಿಷ್ಯ; ಅದೃಷ್ಟ.

भावुक, वि. ಭಾವಜ್ಞ, ಭಾವುಕ.

भावै, अव्य. ಇಷ್ಟಪಟ್ಟರೆ, ಬೇಕಾದರೆ

भाषा, स्त्री. ಭಾಷೆ, ಮಾತು; ಹಿಂದೀ ಭಾಷೆ.

भाषी, वि. ಭಾಷೆಯನ್ನು ಆಡುವವ.

भासना, अक्रि. ಭಾಸವಾಗು; ತೋರು; ಹೊಳೆಯು.

भिगाना, भिजाना, सक्रि. ನೆನೆಸು.

भिंडी, स्त्री. ಬೆಂಡೇಕಾಯಿ.

भिक्षा, भिच्छा, स्त्री. ಭಿಕ್ಷೆ. ತಿರುಪೆ.

भिखमंगा, पु. ಭಿಕ್ಷುಕ, ತಿರುಕ.

भिखमंगी, स्त्री. ಭಿಕ್ಷೆ ಬೇಡುವಿಕೆ.

भिखमंगिन, भिखारिणी, भिखारिन, स्त्री. ಭಿಕ್ಷುಕಿ, ಭಿಕಾರಿಣಿ.

भिखारी, पु. ಭಿಕ್ಷುಕ, ಭಿಕ್ಷೆಗಾರ, ಭಿಕಾರಿ, ತಿರುಕ.

भिगवाना, भिगाना, भिगोना, सक्रि. ತೋಯಿಸು, ನೆನೆಸು, ಉನಿಯುಹಾಕು

भिजवाना, सक्रि. ಕಳುಹಿಸಿಕೊಡು, ರವಾನೆ ಮಾಡಿಸು.

भिजाना, सक्रि. ತೋಯಿಸು, ನೆನೆಸು; ಕಳುಹಿಸಿಕೊಡು.

भिटानी, स्त्री. ಮೊಲೆತುದಿ, ಕುಚಾಗ್ರ.

भिटाई, स्त्री. ಉಡುಗೊರೆ, ಕಾಣಿಕೆ.

भिडंत, स्त्री. ಎದುರಿಸುವಿಕೆ; ಜಟಾಪಟಿ, ಜಗಳ; ಹಣಗಾಟಿ.

भिड़, स्त्री. ಕಣಜದ ಹುಳು, ಕಡಜ.

भिड़ना, अक्रि. ಸೇರು, ಕಲೆ; ಜಂಟಿ ಬೀಳು, ತೆಕ್ಕೆ ಮುಕ್ಕಿ ಬೀಳು; ಹೋರಾಡು, ಎದುರಿಸು.

भिड़ा, पु ತೋಳ.

भिड़ाना, सक्रि. ಸೇರಿಸು; ಜಂಟಿ ಮಾಡು; ತೆಕ್ಕೆ ಬೀಳಿಸು; ಪೋಟಿ ಕೊಡು; ಜಗಳಕ್ಕೆ ಬಿಡು; ಢಿಕ್ಕಿ ಹೊಡಿಸು.

भित, भित्ती, स्त्री. ಗೋಡೆ, ಭಿತ್ತಿ.

भितल्ला, पु. ಒಳಮಡಿಕೆ; ಒಳವಸ್ತ್ರ, ಅಸ್ತರು.

भिदना, अक्रि ಸೇರು, ಮಿಳಿತವಾಗು; ತೂತು ಬೀಳು; ಘಾಯ ಹೊಂದು.

भिनकना, अक्रि. ಗುಂಯಿಗುಟ್ಟು, ಝೇಂಕರಿಸು; ಮೊರೆ; ಮುಸುರು; ಚಿಟ್ಟು ಹಿಡಿ, ರೋಸು.

भिननाना, अक्रि. ತಲೆಚಿಟ್ಟು ಹಿಡಿ, ತಲೆ ತಿರುಗು

भिनभिनाना, अक्रि. ಗುಂಯಿಗುಟ್ಟು; ಝೇಂಕರಿಸು.

भिनभिनाहट, स्त्री. ಗುಂಯಿಗುಟ್ಟುವಿಕೆ, ಝೇಂಕಾರ, ಮೊರೆತ.

भिनसार, पु. ಪ್ರಾತಃಕಾಲ, ನಸುಕು.

भिन्न, वि. ಬೇರೆಯಾದ, ಭಿನ್ನವಾದ; ಭಿನ್ನ, ಅಪೂರ್ಣ (ಸಂಖ್ಯೆ).

भिन्नता, स्त्री. ಬೇರೆ, ವ್ಯತ್ಯಾಸ.

भिलनी, स्त्री. "भील" का स्त्री. रूप.

भिलावाँ, पु. ಕೇರು ಬೀಜ, ಭಲ್ಲಾತಕ, ಅಗ್ನಿಮುಖಿ.

भिल्ल, पु. ಭೀಲರು, ಬೇಡರು.

भिश्ती, पु. ನೀರು ಹೊರುವವ, ಜಲವಾಹಕ.

भींगना, अक्रि. ಒದ್ದೆಯಾಗು, ನೆನೆ.

भींचना, सक्रि. ಎಳೆ, ಬಿಗಿ; ಹಿಂಡು; ಅಮುಕು; (ಕಣ್ಣು) ಮುಚ್ಚು.

भींजना, अक्रि. ಒದ್ದೆಯಾಗು, ನೆನೆ; ಅಂಟಿಕೊಳ್ಳು; ಸ್ನಾನಮಾಡು.

भी, अव्य. ಕೂಡ, ಸಹ, ಸುದಾ.

भीक, भीख, स्त्री. ಭಿಕ್ಷೆ. ತಿರುಪೆ

भीगना, भीजना, अक्रि. ಒದ್ದೆಯಾಗು, ನೆನೆ. रात भीगना=ಚಲ್ಲಾಟ ಮತ್ತು ವಿನೋದದಲ್ಲಿರಾತ್ರಿಯುನ್ನುಕಳೆ

भीट, पु. ಕೆರೆಯ ಏರಿ, ಕಟ್ಟೆ.

भीटा, पु ಎತ್ತರವಾದ ನೆಲ, ದಿಣ್ಣೆ; ಏರಿ; ಮಕ್ಕಿ ಗದ್ದೆ; ವೀಳೆಯದೆಲೆ ತೋಟ; ಪಾಳುಬಿದ್ದ ಮನೆ, ಹಾಳು ಕೊಂಪೆ; ಕಾಡುಮೃಗಗಳ ಇಕ್ಕೆ, ಗುಹೆ.

भीड़, स्त्री. ಗುಂಪು, ದಟ್ಟಣೆ, ಸಂದಣಿ; ಜಂಗುಳಿ; ಒತ್ತರಿಕೆ, ತೊಂದರೆ; ಸಂಕಟ; ಇಕ್ಕಟ್ಟು.

भीड़ना, सक्रि. ಹಚ್ಚು; ಸವರು; ತಿಕ್ಕು

भीड़भड़क्का, पु. **भीड़भाड़,** स्त्री. ಗುಂಪು, ತಿಂತಿಣಿ; ನೂಕುನುಗ್ಗು.

भीड़ा, वि. ಇಕ್ಕಟ್ಟಾದ.

भीत, स्त्री. ಗೋಡೆ; ತೆರೆ, ಪರದೆ; ಹಾಳು, ಪಾಳು ಬಿದ್ದ ಮನೆ. वि. ಭಯಪಡುವ, ಅಂಜುವ.

भीतर, क्रिवि. ಒಳಗೆ, ಒಳಗಡೆ. पु. ಒಳಭಾಗ; ಅಂತಃಪುರ; ಅಂತಃಕರಣ.

भीतरिया, पु. ಮನೆಯೊಳಗಿನವ; ಮನೆಯ ಪೂಜಾರಿ; ಅಡಿಗೆಯವ; ಒಳಸಂಚುಗಾರ.

भीतरी, वि. ಒಳಗಿನ; ಒಳಗಡೆಯ; ಅಂತರ್ಯದ.

भीती, स्त्री. ಭೀತಿ, ಹೆದರಿಕೆ.

भीनना, अक्रि. ಸೇರು, ಮಿಳಿತವಾಗು.

भीना, पु. ಅಕ್ಕನ ಗಂಡ, ಭಾವ. वि. ತಣ್ಣಗಾದ, ತಂಪಾದ.

भीरु, वि. ಅಂಜುಕುಳಿ, ಪುಕ್ಕ, ಹಂದೆ; ಅಳ್ಳೆದೆಯುವ, ಪಿರಿಕಿ.

भीरुता, स्त्री. ಪುಕ್ಕತನ, ಅಳ್ಳೆದೆ.

भील, पु. ಭಿಲ್ಲರು, ಬೇಡರು.

भीलनी, स्त्री. भील का स्त्री. रूप.

भुंजाना, सक्रि. ಚಿಲ್ಲರೆ ಮಾಡಿಸು, ಮುರಿಸು, ಹುರಿಯಿಸು.

भुंडली, स्त्री. ಕಂಬಳಿ ಹುಳು.

भुआ, पु. ಚೂರು, ತುಣುಕು; ನೊರೆ.

भुँइहरा, भुइँवरा, पु. ನೆಲಮಾಳಿಗೆ.

भुकड़ी, स्त्री. ಮುಗ್ಗಲು, ಬೂಜು.

भुकना, अक्रि. ತೂತು ಬೀಳು; ಛೇದಿಸಲ್ಪಡು.

भुक्खड़, वि. ಹಸಿದವ; ಹೊಟ್ಟೆಬಾಕ.

भुखमरा, वि. ಹಸಿವಿನಿಂದ ಸಾಯುವವ

भुगतना, सक्रि. ಭೋಗಿಸು, ಅನುಭವಿಸು; ಸಹಿಸು, ತಾಳು. अक्रि. ಪೂರ್ತಿಯಾಗು; ತೀರು, ಮುಗಿ; ಪೂರೈಸು.

भुगतान, पु. ತೀರುವೆ, ತೀರಿಕೆ; ಚುಕ್ತಾಯ, ಸಂದಾಯ.

भुगताना, सक्रि. ಮುಗಿಸು, ಪೂರೈಸು, ತೀರಿಸು; ಚುಕಾಯಿಸು, ಸಲ್ಲಿಸು; ಅನುಭವಿಸಗೊಡು; ಕಷ್ಟ ಕೊಡು; ಶಿಕ್ಷೆ ಮಾಡು.

भुगना, पु. ಒಂದು ಬಗೆ ಚಿಟ್ಟೆ.

भुग्गा, वि. ದಡ್ಡ, ಬೆಪ್ಪ, ಮಂಕ.

भुच, वि. ಗಾಂಪ, ಒರಟ.

भुचकना, अक्रि. ಬೆಚ್ಚು, ಬೆರಗಾಗು.

भुचकाना, सक्रि. ವಿಸ್ಮಯಪಡಿಸು.

भुच्चड़, वि. ದಡ್ಡ, ಬೆಪ್ಪತಕ್ಕಡಿ.

भुज, पु. ತೋಳು, ತೋಳುಬಂದಿ; ಸರಳ ರೇಖಾಕೃತಿಯ ಒಂದು ಪಾರ್ಶ್ವದ ರೇಖೆ, ಬಾಹು (ರೇಖಾಗಣಿತ).

भुजना, पु. ಅರಳು; ಪುರಿ, ಬುರುಗಲು

भुजबंद, पु. ತೋಳುಬಂದಿ, ವಂಕಿ.

भुजा, स्त्री. ಬಾಹು, ತೋಳು.

भुजाली, स्त्री. ದೊಡ್ಡ ಚೂರಿ, ಕುಡುಗೋಲು; ಈಟಿ, ಭರ್ಜಿ, ಬರ್ಛಿ.

भुजिया, पु. ಕುಸಲಕ್ಕಿ, ಕುದುಪಲಕ್ಕಿ; ಪಲ್ಯ, ತಾಳದ.

भुजैटा भुजैल, पु. ಒಂದು ಪಕ್ಷಿ.

भुजौना, पु. ಅರಳು; ಪುರಿ, ಮಂಡಕ್ಕಿ; ಹುರಿಯುವುದರ ಕೂಲಿ; ಚಿಲ್ಲರೆ ಮುರಿಸುವುದಕ್ಕೆ ಕೊಡುವ ವಟ್ಟ.

भुट्टा, पु. ಜೋಳದ ತೆನೆ, ಹೊಡೆ; ಮುಸುಕಿನ ಜೋಳ, ಮಕ್ಕೆ ಜೋಳ; ಗೊನೆ, ಜೊಂಪೆ. वि. ಪುಟ್ಟ, ಪುಟಾಣಿ

भुतना, पु. **भुतनी**, स्त्री. ಮರಿ ಪಿಶಾಚಿ, ಪೇತ, ಹೇದೆ.

भुतियाना, अक्रि ಪಿಶಾಚಿಯಂತೆ ಆಡು

भुथरा, वि. ಹರಿತವಿಲ್ಲದ, ಮೊಂಡಾದ.

भुनक्कड़, वि. ಕಾಳು ಹುರಿಯುವವ.

भुनगा, पु. ಗುಂಗಾಡು, ಚಿಗಟ वि. ಅಶಕ್ತ, ನಿರ್ಬಲ.

भुनना, अक्रि. ಹುರಿಯಲ್ಪಡು; ಸುಡು; ಗಾರು, ಕಮರು; ನಾಣ್ಯ ಮುರಿಸಲ್ಪಡು, ಮುರಿ. सक्रि. ಹುರಿ; ಸುಡು, ಗಾರಿಸು; ಚಿಲ್ಲರೆಮಾಡಿಸು, ಮುರಿಸು.

भुनभुनाना, अक्रि. ಗುಂಯಿಗುಟ್ಟು, ಗೊಣಗು, ವಟಗುಟ್ಟು, ಬಡಬಡಿಸು.

भुनवाना, सक्रि भुनाना का प्रे. रूप; भूनना का प्रे. रूप.

भुनाई, स्त्री. ಕಾಳು ಹುರಿಯುವಿಕೆ; ಕಾಳು ಹುರಿಯಲು ಕೂಲಿ; ಮಾಂಸ ಸುಡುವುದಕ್ಕೆ ಕೊಡುವ ಕೂಲಿ; ಚಿಲ್ಲರೆ ಮುರಿಸಲು ಕೊಡುವ ತರಗು, ವಟ್ಟ.

भुनाना, सक्रि. ಚಿಲ್ಲರೆ ಮಾಡಿಸು, ಮುರಿಸು, ಮಾರುವೆ ಮಾಡು, ವಟಾಯಿಸು; ಕಾಳು ಹುರಿಯಿಸು, ಕಮರಿಸು

भुरकना, अक्रि. ಒಣಗು, ಬತ್ತು, ಗಾರು; ಮರೆತುಬಿಡು. सक्रि. ಚಿಮಿಕಿಸು, ತಕ್ಕಳಿಸು, ಎರಚು.

भुरकाना, सक्रि. ಹುಡಿಮಾಡು, ನುರುಕು; ಚಿಮುಕಿಸು, ತಕ್ಕಳಿಸು; ತೂರು, ಎರಚು, ಮರೆಸು.

भुरकुस, पु. ಚೂರ್ಣ, ಪುಡಿ, ಹುಡಿ; ಹೊಟ್ಟು. भुरकुस निकालना = ನುರುಕು; ಸಣ್ಣಿಸು, ಚೆನ್ನಾಗಿ ಹೊಡೆ, ಸದೆ ಬಡಿ.

भुरता, पु. ನುಜ್ಜುಗುಜ್ಜು; ತಾಳದ, ಪಲ್ಯ; ಭಜ್ಜಿ.

भुरभुरा, वि. ತರಿತರಿಯಾದ, ಗರಗು; ನುಗ್ಗಾದ. ನುರಿತ; ಮರಳು ಮರಳಾದ

भुरभुराना, सक्रि. ಪುಡಿ ಎರಚು, ಚಿಮಿಕಿಸು; ತೂರು, ತಕ್ಕಳಿಸು.

भुरवाना, भुराना, सक्रि. ಮರೆಸು; ಮರುಳುಗೊಳಿಸು, ಫುಸಲಾಯಿಸು.

भुलक्कड़, वि. ಮರೆಯುವವ, ಮರಕುಳಿ.

भुलवाना, सक्रि. ಮರೆಸು; ಮರುಳುಗೊಳಿಸು, ಟೊಣೆಯು; ಮಾತು ಮರೆಸು; ದಾರಿ ತಪ್ಪಿಸು.

भुलसना, अक्रि. ಸುಡು; ಹುರಪಳಿಸು, ಸೀಯು; ಕಮರು. सक्रि. ಸೀಯಿಸು, ಸುಡು; ಕಂದಿಸು.

भुलाऊ, वि. ಮರೆಸುವವ, ಠಕ್ಕ.

भुलाना, सक्रि. ಮರುಳುಗೊಳಿಸು; ದಾರಿ ತಪ್ಪಿಸು; ಮಾತು ಮರೆಸು. अक्रि. ಮರುಳಾಗು; ಮರೆ; ತೊಳಲು.

भुलावट, ಸ್ತ್ರೀ. ಮರವೆ, ವಿಸ್ಮರಣೆ.

भुलावा, पु. ಮೋಸ, ಠಕ್ಕು, ಡೊಳ್ಳಾಸ; ಮಾತು ಮರೆಸುವಿಕೆ; ಮರೆಸುವ ಮಾತು. भुलावा देना = ಮಾತು ಮರೆಸು; ಮೋಸಮಾಡು.

भुलैया, वि. ಮರೆಸುವವ.

भुलड़, वि. = भुलक्कड़.

भुवा, पु. ಹತ್ತಿ, ಅರಳೆ; ಚೂರು.

भुवाल, पु. ರಾಜನು, ದೊರೆ.

भुस, पु. ಸಿಪ್ಪೆ; ಹೊಟ್ಟು; ಬೂಸ.

भुसेरा, भुसौड़ा, पु. ಹೊಟ್ಟು ಬೂಸ ಮೊದಲಾದವುಗಳಿಡುವ ಸ್ಥಳ.

भूंकना, अक्रि. ಬೊಗಳು, ಗುರುಗುಟ್ಟು.

भूंचाल, भूकंप, पु. ಭೂಕಂಪ.

भूंजना, सक्रि. ಸುಡು, ಹುರಿ, ಗಾರಿಸು; ಅನುಭವಿಸು.

भूंजा, पु. ಹುರಿಗಾಳು; ಅರಳು; ಬುರುಗಲು; ಕಾಳು ಹುರಿಯುವವ.

भूंजी, ಸ್ತ್ರೀ. ಹುರಿಗಾಳು; ಅರಳು.

भूंसना, अक्रि. ಬೊಗಳು.

भूई, ಸ್ತ್ರೀ. ತುಣುಕು, ಚೂರು.

भूक, भख, ಸ್ತ್ರೀ. ಹಸಿವು, ಕ್ಷುಧೆ; ಗೀಳು. भूख लगना = ಹೊಟ್ಟೆ ಹಸಿ. भूखों मरना = ಹೊಟ್ಟೆಗಿಲ್ಲದೆ ಸಾಯು.

भूखा, वि. ಹಸಿದ, ಬುಭುಕ್ಷಿತ.

भूत, वि. ಕಳೆದುಹೋದ, ಗತ. पु. ಭೂತ, ಪ್ರೇತ, ದೆವ್ವ; ಭೂತಕಾಲ.

भूतना, पु. ಸಣ್ಣ ಭೂತ, ಮರಿ ಪಿಶಾಚಿ.

भूतनी, ಸ್ತ್ರೀ. ಹೆಣ್ಣು ಪಿಶಾಚಿ.

भूतलिया, ಸ್ತ್ರೀ. ಸುಂಟರಗಾಳಿ.

भूतहा, वि. ಭೂತಗಳ, ಪೈಶಾಚಿಕ; ಘೋರ; ಭೂತಸಂಚಾರವಿರುವ(ಮನೆ)

भूनना, सक्रि. ಹುರಿ; ಸುಡು, ಕಮರಿಸು; ಕರಿ, ಗಾರಿಸು.

भूना, पु. ಹುರಿಗಾಳು; ಅರಳು.

भूप, भूपाल, पु. ರಾಜ, ದೊರೆ, ಅರಸ.

भूभल, पु. ಬಿಸಿ ಬೂದಿ; ಕಾಸಿದ ಮಳಲು, ಮುಮ್ಮುರಿ.

भूमि, ಸ್ತ್ರೀ. ಪೃಥ್ವಿ, ಭೂಮಿ; ನೆಲ; ಜಮೀನು.

भूमिका, ಸ್ತ್ರೀ. ಭೂಮಿಕೆ, ಪೀಠಿಕೆ, ಮುನ್ನುಡಿ.

भूमिया, पु. ಭೂಮಿವಾಳ, ಭೂಸ್ವಾಮಿ, ಜಮೀನುದಾರ.

भूमिहर, पु. ಆರಂಬಗಾರ, ರೈತ.

भूर, ಸ್ತ್ರೀ. ಮರಳು ನೆಲ; ಔದಾರ್ಯ; ದಾನ ಧರ್ಮ.

भूरा, पु. ಕಂದು ಬಣ್ಣ, ಕಂದಿ; ಬೂರಾ ಸಕ್ಕರೆ. वि. ಕಂದುಬಣ್ಣದ, ಕಪಿಲ.

भूल, स्त्री. ವಿಸ್ಮರಣ, ಮರವು; ತಪ್ಪು, ದೋಷ; ತಪ್ಪಿತ, ಸ್ಖಾಲಿತ್ಯ. भूलचूक = ತಪ್ಪುನೆಪ್ಪು. भूल चूक कर = ಅಪ್ಪಿತಪ್ಪಿ. भूलचूक लेनीदेनी = ತಪ್ಪುನೆಪ್ಪುಗಳನ್ನು ಬಿಟ್ಟು.

भूलना, सक्रि. ಮರೆ, ಮರೆತುಬಿಡು; ತಪ್ಪುಮಾಡು, ತಪ್ಪು. अक्रि. ಮರೆತು ಹೋಗು, ತಪ್ಪಾಗು; ಮುಗ್ಧನಾಗು.

भूलभुलैयां, स्त्री. ಸುತ್ತುಸುತ್ತಾದ ದುರ್ಘಟಸ್ಥಾನ, ಚಕ್ರಭೀಮನಕೋಟೆ, ಚಕ್ರಬಂಧ; ಗೋಜಲು, ಸಿಕ್ಕು.

भूला-भटका, वि. ದಾರಿ ತಪ್ಪಿದ.

भूसा, पु. ಜೋಳದ ಕಡ್ಡಿ, ಹುಲ್ಲು; ಬಯಿ, ಬೂಸ.

भूसी, स्त्री. ಉಬ್ಬಲು, ಕೊಬ್ಬೊಟ್ಟು, ಗೊಳಲೆ, ಹೊಟ್ಟು.

भेंगा, वि. ಮಾಲುಗಣ್ಣಿನವ, ಮೆಳ್ಳೆಗಣ್ಣು, ಕೋಸುಗಣ್ಣು.

भेंट, स्त्री. ಭೇಟಿ, ಭೆಟ್ಟಿ, ಸಂದರ್ಶನ; ಸಂಧಿಸುವಿಕೆ; ಅರ್ಪಣೆ, ಕಾಣಿಕೆ; ಉಪಾಯನ, ಉಡುಗೊರೆ; ಸಂಭಾವನೆ. भेंट अंकवार = ಆಲಿಂಗನ; ಮಿಲನ

भेंटना, सक्रि. ಭೇಟಿ ಕೊಡು; ಭೇಟಿ ಮಾಡು, ಸಂದರ್ಶಿಸು; ತಬ್ಬಿಕೊಳ್ಳು.

भेक, पु. ಕಪ್ಪೆ.

भेख, पु. ವೇಷ, ಸೋಗು.

भेजना, सक्रि. ಕಳುಹು, ಕಳುಹಿಸು, ರವಾನಿಸು; ಅಟ್ಟು.

भेजवाना, सक्रि. भेजना का प्रे. रूप.

भेजा, पु. ಮಿದುಳು, ಮೇಧಸ್ಸು, ಮಸ್ತಿಷ್ಕ. भेजा खाना या चाटना = ಸುಮ್ಮನೆ ಚರ್ಚೆ ಮಾಡಿ ಪೀಡಿಸು.

भेड़, भेड़ी, स्त्री. ಕುರಿ.

भेड़ना, सक्रि. ಮುಚ್ಚು. ಬಂದುಮಾಡು

भेड़ा, पु. ಕುರಿ, ಟಗರು.

भेड़िया, पु. ತೋಳ, ವೃಕ. वि. ಕುರಿಯಂತಹ. भेड़िया धसान = ನುಗ್ಗುವ ಗುಂಪು; ಕುರಿಗಳ ಮಂದೆಯಂತೆ ಒಂದೇ ಕಡೆ ನುಗ್ಗುವಿಕೆ.

भेद, पु. ತೂತು ಕೊರೆಯುವಿಕೆ, ಭೇದಿಸುವಿಕೆ; ರಹಸ್ಯ, ಮರ್ಮ, ಗುಟ್ಟು; ಭೇದ, ವ್ಯತ್ಯಾಸ; ವಿಧ, ಬಗೆ.

भेदक, वि. ಭೇದಿಸುವವ, ಭೇದಕ; ಒಡಕು ಹುಟ್ಟಿಸುವವ; ಭೇದಿಯ (ಔಷಧ), ವಿರೇಚಕ.

भेदड़ी, स्त्री. ಕಾಯಿಸಿ ಗಟ್ಟಿಮಾಡಿಸಿದ ಹಾಲು, ಹಾಲುಗಿಣ್ಣು.

भेदन, पु. ಭೇದಿಸುವಿಕೆ, ಚುಚ್ಚುವಿಕೆ.

भेदना, सक्रि. ಭೇದಿಸು, ಛೇದಿಸು.

भेदिया, पु. ಗುಪ್ತಚಾರ, ಬೇಹುಗಾರ, ಪಾಳತಿಗಾರ, ಸಂಚುಗಾರ.

भेदी, पु. ಗೂಢಚಾರ. वि. ಭೇದಿಸುವವ

भेदीसार, पु. ಬೈರಿಗೆ, ಹಿಡಿಸರಳು.

भेदू, पु. ರಹಸ್ಯವನ್ನರಿತವ; ಗುಟ್ಟಾಗಿಡುವವ; ಗುಪ್ತಚಾರ.

भेन, स्त्री. ಸಹೋದರಿ.

भेना, सक्रि. ಅದ್ದು, ನೆನಸು.

भेरी, स्त्री. ಭೇರಿ, ನಗಾರಿ.

भेला, पु. ಎದುರಿಸುವಿಕೆ, ಭೇಟಿ, ಮುದ್ದೆ, ತೆರಳೆ; ಬೆಲ್ಲದ ಅಚ್ಚು.

भेली, स्त्री. ಉಂಡೆ, ಮುದ್ದೆ; ಬೆಲ್ಲದ ಅಚ್ಚು.

भेव, पु. ಮರ್ಮ, ಗುಟ್ಟು; ಸ್ವಭಾವ, ಸಹಜಗುಣ; ಬಾರಿ, ಸರದಿ.

भेवना, सक्रि. ಅದ್ದು, ನೆನಸು.

भेवा, वि. ನೆನೆದ, ಒದ್ದೆಯಾದ.

भेष, भेस, पु. ವೇಷ, ಸೋಗು.

भैंस, स्त्री. ಎಮ್ಮೆ; ಒಂದು ಮೀನು.

भैंसा, पु. ಎಮ್ಮೆ ಹೋರಿ, ಕೋಣ

भैंसादाद, भैंसियादाद, पु. ಒಂದು ಬಗೆ ದದ್ದು.

भैचक, वि. ಕಕ್ಕಬಿಕ್ಕಾದ, ಚಕಿತ.

भैड़ा, पु. ಕುಂಟೆ, ಹಲುಬೆ.

भैया, पु. ಭ್ರಾತಾ, ಸೋದರ.

भैयाचारी, स्त्री. भैयापा, पु. ಭ್ರಾತೃಭಾವ, ಸೋದರಭಾವ; ಮೈತ್ರಿ.

भैरो, पु. ಉದಯರಾಗ, ಉಪ್ಪವಡ.

भैहू, स्त्री. ತಮ್ಮನ ಹೆಂಡತಿ, ನಾದಿನಿ.

भोंक, पु. ಚುಚ್ಚುವಿಕೆ, ತಿವಿತ.

भोंकड़ा, वि. ದಪ್ಪ, ದಡುವ.

भोंकना, सक्रि. ಚುಚ್ಚು, ತಿವಿ, ಇರಿ.

भोंका-भोंकी, स्त्री. ಪರಸ್ಪರ ಇರಿಯುವಿಕೆ, ತಿವಿದಾಟ.

भोंघरा, पु. ಗವಿ, ಕಂದರ.

भोंडर, पु. ಅಭ್ರಕ; ಬಿಂಗಾರ.

भोंडा, वि. ಅಂದಗೆಟ್ಟ, ಕುರೂಪ, ಘೋರ

भोंथरा, भोंथा, वि. ಮಂದಮತಿ.

भोंदू, वि. ನಿಷ್ಕಪಟ, ಯಥಾರ್ಥ; ಭೋಳೆ; ದಡ್ಡ, ಪೆದ್ದ, ಬೆಪ್ಪ.

भोंपू, पु. ಕಹಳೆ, ತುತ್ತೂರಿ.

भोई, पु. ಪಲ್ಲಕ್ಕಿ ಹೊರುವವ, ಬೋಯಿ, ಹಮಾಲ; ಬಿಳೀ ಬೆಕ್ಕು.

भोकस, पु. ಮಂತ್ರವಾದಿ; ಮಾಟಗಾರ

भोकार, स्त्री. ವಿಲಾಪ, ಅಳುವು.

भोग, पु. ಭೋಗ, ಸುಖ; ಭೋಜನ, ಆರೋಗಣೆ; ನೈವೇದ್ಯ; ಬೈಗಳು. भोग लगाना = ಊಟಮಾಡು, ಊಟ ಹಾಕು; ನೈವೇದ್ಯ ಮಾಡು. भोग सुनाना = ಬೈಯು, ಅನ್ನು.

भोगना, अक्रि. ಭೋಗಿಸು; ನಲಿ; ಅನುಭವಿಸು; ಸಹಿಸು.

भोगबंधक, पु. ಅಡಮಾನ, ಭೋಗ್ಯ.

भोगली, स्त्री. ಮೂಗುತಿ; ಕಿವಿಯ ಓಲೆ; ತಿರುಪು.

भोगवना, अक्रि. ಭೋಗಿಸು.

भोगवाना, सक्रि. भोगाना, सक्रि. "भोगना" का प्रे. रूप.

भोगा, पु. ಮೋಸ, ಠಕ್ಕು; ದ್ರೋಹ.

भोगी, वि. ಆನಂದಿಸುವವ; ಭೋಗಿಸುವವ, ಭೋಗಿ; ಕುಶಾಲು(ಮನುಷ್ಯ).

भोज, पु. ಭೋಜನ; ಔತಣ, ಮೇಜವಾನಿ; ಭೋಜನ ಪದಾರ್ಥ.

भोजन, पु. ಭೋಜನ, ಆರೋಗಣೆ, ಊಟ.

भोजविद्या, स्त्री. ಇಂದ್ರಜಾಲ.

भोट, पु. ಭೂತಾನ ದೇಶ.

भोटिया, वि. ಭೂತಾನ ದೇಶದ.

भोडर, भोडल, पु. ಅಭ್ರಕ, ಬಿಂಗಾರ,

ಅಭ್ರಕದ ಪುಡಿ.

भोता, वि. ದಡ್ಡ, ಮಂಕ.

भोती, स्त्री. ಕೆಲಸ; ಧಾವಂತ, ಧಾವತಿ.

भोना, सक्रि. ಸೇರು; ಅಂಟಿಕೊಳ್ಳು; ಗಂಟುಬೀಳು.

भोपा, पु. ಕಹಳೆ; ತುತ್ತೂರಿ; ಜೋಗಿ.

भोभीरा, पु. ಪ್ರವಾಳ, ಹವಳ.

भोर, पु ಬೆಳಗಿನ ಜಾವ, ಪ್ರಾತಃಕಾಲ भोर होना = ಬೆಳಕು ಹರಿ; ಮುಗಿ, ಪೂರೈಸು; ಚೆನ್ನಾಗಿ ಏಟು ತಿನ್ನು.

भोरा, वि. = भोला.

भोराई, स्त्री. ಸರಳಸ್ವಭಾವ.

भोराना, अक्रि. ಮರುಳಾಗು. सक्रि. ಮರುಳುಗೊಳಿಸು.

भोला, वि. ಸರಳ, ನಿಷ್ಕಪಟ; ಸಾಧು, ಭೋಳೆ. भोला भाला = ಭೋಳೆ ಸ್ವಭಾವದ; ನಿಚ್ಚಟವಾದ, ಸಾಧುವಾದ; ಪೆದ್ದ, ಕಿಸವಾಯಿ.

भोलापन, पु. ನಿಷ್ಕಾಪಟ್ಯ, ನಿಚ್ಚಟ; ಸರಳ ಸ್ವಭಾವ.

भौं, स्त्री. = भौंह.

भौंकना, अक्रि. ಬೊಗಳು, ವಟಗುಟ್ಟು.

भौंचक्का, वि. ಕಕ್ಕಬಿಕ್ಕಾದ, ಬೆರಗಾದ; ಚಕಿತನಾದ, ಸ್ತಂಭೀಭೂತನಾದ.

भौंचक्कापन, पु. ಬೆರಗು, ಬೀಳುವೆ, ವಿಸ್ಮಯ, ದಿಗ್ಭ್ರಮೆ.

भौंचाल, पु. ಭೂಕಂಪ, ನೆಲಗುಡುಗು.

भौंतुवा, पु. ನೀರಿನಮೇಲೆ ಸುಳಿದಾಡುವ ಜಲಜಂತು; ಗಾಣದ ಎತ್ತು.

भौंर, पु. ತುಂಬಿ; ಜಲಾವರ್ತ, ಸುಳಿ.

भौंरा, पु. ತುಂಬಿ, ಭ್ರಮರ, ಹೆದ್ದುಂಬಿ; ಒಂದು ಆಟದ ಸಾಮಾನು, ಆಟಿಗೆ; ಉಯ್ಯಾಲೆಯ ದೂಲ; ಕುರುಬನ ನಾಯಿ; ನೆಲಮಾಳಿಗೆಯಲ್ಲಿರುವ ಸೆರೆಮನೆ, ನೆಲಮನೆ; ಹಗೇವು.

भौंराना, सक्रि. ಪ್ರದಕ್ಷಿಣೆ ಮಾಡಿಸು; ಸುತ್ತಿಸು. अक्रि. ತಿರುಗು, ಸುಳಿದಾಡು.

भौंरियाना, अक्रि. ತಿರುಗು, ಸುಳಿದಾಡು

भौंरी, स्त्री. ದುಂಬಿ; ಕುದುರೆಯ ಸುಳಿ; ನೀರಿನ ಸುಳಿ, ತಿರುಗಣಿಮಡು; ಪ್ರದಕ್ಷಿಣೆ; ಕೆಂಡದಲ್ಲಿ ಸುಟ್ಟ ರೊಟ್ಟಿ.

भौंह, स्त्री. ಹುಬ್ಬು, ಬಿಲ್ಲಿ, ಭ್ರೂ. भौंह चढ़ाना = ಹುಬ್ಬು ಗಂಟಿಕ್ಕು, ಸಿಂಡರಿಸು; ಕಿನಿಸು, ಕೆರಳು, ರೇಗು.

भौ, पु. ಭಯ, ಹೆದರಿಕೆ.

भौचक, भौचक्का, वि. ಬೆಚ್ಚಿಬಿದ್ದ, ಬೆರಗಾದ, ಕಕ್ಕಬಿಕ್ಕಾದ; ಚಕಿತ.

भौज, भौजाई, भौजी, स्त्री. ಅಣ್ಣನ ಹೆಂಡತಿ, ಅತ್ತಿಗೆ, ವಯಿನಿ, ವೈನಿ.

भौना, अक्रि. ತಿರುಗು, ಸುತ್ತಾಡು.

भौनास, पु. ಆನೆ ಕಟ್ಟುವ ಗೂಟ.

भौलिया, स्त्री. ಒಂದು ಬಗೆ ನೌಕ.

भौसा, पु. ಸಂದಣಿ, ದೊಂಬಿ, ಗಲಾಟೆ.

भ्रम, पु. ಸಂದೇಹ; ಭ್ರಾಂತಿ.

भ्रमण, पु. ಸಂಚಾರ, ತಿರುಗಾಟ.

भ्रमना, अक्रि. ಅಲೆದಾಡು, ತೊಳಲು; ದಾರಿ ತಪ್ಪು; ಭ್ರಮಿಸು.

भ्रमाना, सक्रि. ಸುತ್ತಿಸು, ಮರುಳುಗೊಳಿಸು.

भ्रू, स्त्री. ಭ್ರೂ, ಹುಬ್ಬು, ಬಿಲ್ಲಿ.

म

मंग, स्त्री. ಬೈತಲೆ

मंगता, पु. ಯಾಚಕ, ಭಿಕ್ಷುಕ.

मंगन, पु. ಬೇಡುವಿಕೆ, ಬೇಡಿಕೆ; ಭಿಕ್ಷುಕ. स्त्री. ಎರವಲು; ಸಾಲ, ಕಡ

मंगनी, स्त्री. ಎರವಲು, ಎರವು, ಕಡ; ವಿವಾಹ ನಿಶ್ಚಿತಾರ್ಥ, ವೀಳೆಯಶಾಸ್ತ್ರ, ವಾಚಾದತ್ತ मंगनी करना = ವಾಚಾದತ್ತ ಮಾಡು; ವರಿಸು.

मंगरा, पु ಬೆಂಕಟ್ಟು, ಮೊಗಡು.

मंगल, पु. ಮಂಗಳ, ಶುಭ; ಮಂಗಳವಾರ.

मंगवाना, सक्रि. मंगाना का प्रे. रूप.

मंगाना, सक्रि. ದೊರಕಿಸಿಕೊ, ತರಿಸಿಕೊಳ್ಳು; ವಾಚಾದತ್ತ ಮಾಡಿಸು.

मंगूला, पु. ಕುಚ್ಚು, ಗೊಂಡೆ.

मंगूस, पु. ಮುಂಗುಸಿ, ಕೀರ.

मंगेतर, वि. ವಾಚಾದತ್ತ ಮಾಡಲ್ಪಟ್ಟ; ವರಿಸಲ್ಪಟ್ಟ.

मंगौड़ी, स्त्री. ಬೇಳೆ ಹಿಟ್ಟಿನ ಉಂಡೆ

मंच, मंचक, पु. **मंचिया**, स्त्री. ಮಂಚ, ಪಲಂಗ; ಮಂದಾಸನ; ಪೀಠ, ವೇದಿಕೆ.

मंजन, पु. ಹಲ್ಲುಪುಡಿ, ದಂತಮಂಜನ.

मंजना, अक्रि. ಸ್ವಚ್ಛವಾಗು, ಚೊಕ್ಕಟವಾಗು; ಸಭ್ಯನಾಗು; ತರಪೇತಾಗು; ಪಳಗು, ತಿದ್ದು.

मंजनीक, पु. ಸಣ್ಣ ಕವಣೆ.

मंजाना, सक्रि. ಸ್ವಚ್ಛವಾಗಿಸು, ಬೆಳಗು; ಸಂಸ್ಕರಿಸು; ತಿದ್ದು, ಪಳಗಿಸು.

मंजार, पु. ಹೂವು; ಬೆಕ್ಕು.

मंज़िल, स्त्री. ಯಾತ್ರೆಯಲ್ಲಿ ತಂಗುವ ಸ್ಥಳ, ಟಪ್ಪಾ, ಮೆಟ್ಟು; ಒಂದು ದಿವಸದ ಪಯಣ, ಮಜಲು; ತಲಪಬೇಕಾದ ಸ್ಥಳ, ಗಮ್ಯಸ್ಥಾನ; ಮಹಡಿ, ಮಾಡಿ, ಉಪ್ಪರಿಗೆ; ಅಂತಸ್ತು, ಇಯತ್ತೆ; ಅಶ್ವಿನಿ ಮೊದಲಾದ ನಕ್ಷತ್ರಗಳು.

मंजीर, पु. ಕಾಲಂದುಗೆ, ರುಳಿ.

मंजीरा, पु. ಕಂಸತಾಳ, ಝುಲ್ಲರಿ.

मंज़ूर, वि. ನೋಡಿದ; ಒಪ್ಪಿತವಾದ, ಸ್ವೀಕೃತ; ಅಂಗೀಕೃತ, ಮಂಜೂರಾದ

मंज़ूरी, स्त्री. ಒಪ್ಪಿಗೆ, ಅಂಗೀಕಾರ; ಮಂಜೂರು, ಮಂಜೂರಾತಿ.

मंझ, पु. ಮಧ್ಯ, ನಡು.

मंझधार, स्त्री. ನಡುಹೊಳೆ.

मंझला, वि. ಮಧ್ಯಮ, ನಡುವಣ; ಎಡತರ, ನಡುಕಲ; ಎಡಚಿಲ್.

मंझा, वि. ಮಧ್ಯದ, ನಡುವಣ. पु. ನಡು, ಟೊಂಕ; ನಡುಗಡ್ಡೆ.

मंझार, क्रिवि. ಮಧ್ಯೆ, ನಡುವೆ.

मंझियार, वि. ಮಧ್ಯದ, ನಡುವಣ.

मंझोला, वि. ಮಧ್ಯಮ; ಎಡತರ, ನಡುತರ.

मंझोली, स्त्री. ಪ್ರಯಾಣದ ಸಣ್ಣ ಬಂಡಿ

मंटप, पु. ಮಂಟಪ, ಚಪ್ಪರ.

मंड, पु. ಅಂಬಲಿ, ಗಂಜಿ; ದೊರೆ.

मंडन, पु. ಭೂಷಣ, ಅಲಂಕಾರ;

ಸಮರ್ಥನೆ, ಪುಷ್ಟಿ.

मंडप, पु. ಮಂಟಪ, ಚೌಪಳಿಗೆ; ಮಂದಾಸನ; ಚಪ್ಪರ, ಹಂದರ.

मंडरना, अक्रि. ಕವಿದುಕೊಳ್ಳು.

मंडरा, पु. ಮಂಡಲ; ಬಳೆ; ಕಪಿಲೆಯ ಚಕ್ಕಳದ ಬಳೆ.

मंडराना, मंडलाना, अक्रि. ಕವಿದುಕೊಳ್ಳು; ಮಂಡಲಿಸು, ಸುಳಿದಾಡು, ಹಾವರುಹಾಕು; ಚಕ್ಕರುಲಗಾಯಿಸು, ಸುತ್ತುಹಾಕು; ಸುತ್ತಾಡು.

मंडल, पु ಮಂಡಲ, ವರ್ತುಲ;ಪರಿಧಿ; ವಟಾರ; ಕೂಟ, ಸಭೆ.

मंडलिया, पु. ಲಾಗ ಹೊಡೆಯುವ ಪಾರಿವಾಳ, ಗಿರೇಬಾಜ.

मंडली, स्त्री. ಕೂಟ,ಸಮಾಜ; ಮಂಡಲಿ

मंडवा, पु. ಚಪ್ಪರ, ಲತಾಮಂಟಪ; ಒಂದು ಧಾನ್ಯ.

मंडा, पु. ಒಂದು ಪಣ್ಯಾರ.

मंडार, पु. ಮಕ್ಕರಿ, ಗೂಡೆ, ಕುಕ್ಕೆ.

मंडियाना, अक्रि. ಗಂಜಿ ಬಳಿ.

मंडी, स्त्री. ಗಡಂಗು, ಮಂಡಿ, ಮಳಿಗೆ, ಹಸರ, ಭಂಡಸಾಲೆ

मंडुआ, पु. ಒಂದು ಧಾನ್ಯ.

मंडूर, पु. ತುಕ್ಕು

मंढवाना, सक्रि. ಮುಚ್ಚಿಸು, ಹೊಂದಿಸು

मंढा, पु. ಜೋಪಡಿ, ಗುಡಿಸಲು; ಮದುವೆಯ ಚಪ್ಪರ, ಹಂದರು.

मंढाना, सक्रि. ಗಂಜಿಸವರು, ಗಂಜಿಬಳಿ

मंढी, स्त्री. ಚಪ್ಪರ; ವಸಂತಮಂಟಪ.

मंत, पु. ಪರ್ಯಾಲೋಚನೆ, ಮಂತಣ

मंतक़, पु. ವಾದ, ತರ್ಕ; ಚರ್ಚೆ.

मंतक़ी, वि. ವಾದಮಾಡುವ, ವಾದದ. पु. ತರ್ಕಶಾಸ್ತ್ರ ಬಲ್ಲವ, ತಾರ್ಕಿಕ.

मंतव्य, पु. ಅಭಿಪ್ರಾಯ, ವಿಚಾರ, ಸಿದ್ಧಾಂತ.

मंतर, मंत्र, पु. ಮಂತ್ರ; ಅಭಿಚಾರ, ಶೂನ್ಯ;ಮಂತಣ, ಮಂತ್ರಾಲೋಚನೆ. मंत्र जंत्र = ಮಾಟ ಮಂತ್ರ, ಯಂತ್ರ ತಂತ್ರ. मंत्र जगाना, फूंकना या मारना = ಮಂತ್ರ ಹಾಕು.

मंत्रणा, स्त्री. ಪರ್ಯಾಲೋಚನೆ, ಮಂತಣ, ಸಲಹೆ.

मंत्रिणी, स्त्री. मंत्री का स्त्री. रूप.

मंत्रित्व, पु ಮಂತ್ರಿ ಅಥವಾ ಕಾರ್ಯದರ್ಶಿಯ ಪದವಿ, ಮಂತ್ರಿತನ.

मंत्री, पु. ಸಲಹೆ ಕೊಡುವವ, ಮಂತ್ರಿ, ಸಚಿವ, ಅಮಾತ್ಯ; ಕಾರ್ಯದರ್ಶಿ.

मंथन, पु. ಮಥಿಸುವಿಕೆ, ಕಡೆಯುವಿಕೆ; ಕಡೆಗೋಲು, ಮಂತು.

मंथना, सक्रि. ಮಥಿಸು, ಕಡೆ

मंथनी, स्त्री. ಮೊಸರು ಕಡೆವ ಪಾತ್ರೆ.

मंथर, वि. ಮಂದವಾದ, ಜಡ್ಡು. पु. ಒಂದು ಬಗೆ ಜ್ವರ; ಮಂತು.

मंथरता, स्त्री. ಮಂದಗತಿ; ನಿಧಾನಗತಿ; ನಿಧಾನ.

मंद, वि. ಮಂದ; ಕುಗ್ಗಿದ; ಬೆಲೆತಗ್ಗಿದ; ಸಡಿಲವಾದ; ಆಲಸ್ಯವುಳ್ಳ; ನಿಧಾನವಾದ; ಮಂದಮತಿ, ದಡ್ಡ. प्रत्य. ಉಳ್ಳ, -ವಂತ. ಉದಾ:- अक़्ल-मंद.

मंदक, पु. ಮರದ ಮೋಟು, ಬೊಡ್ಡೆ.

मंदा, वि. ನಿಧಾನವಾದ; ಮಂದವಾದ; ಕುಗ್ಗಿದ; ತಗ್ಗಿದ.

मंदिर, पु. ಗೃಹ; ಮಂದಿರ; ದೇವಸ್ಥಾನ

मंदी, स्त्री. ತಗ್ಗುವಿಕೆ; ವ್ಯಾಪಾರದ ಮಂದತ್ವ; ಮಂದಿ.

मंदील, पु. ಜರಿ ರುಮಾಲು, ಪೇಟ.

मंशा, पु. = मन्शा.

मंसब, पु. = मन्सब.

मंसूख, वि. = मन्सूख.

मआनी, पु. ಅರ್ಥ, ತಾತ್ಪರ್ಯ.

मआश, स्त्री. ಜೀವನೋಪಾಯ, ವೃತ್ತಿ

मकई, स्त्री. ಮುಸುಕಿನ ಜೋಳ.

मकड़ा, मकड़ी, पु. ಸೆಲದಿ, ಜೇಡನ ಹುಳು, ಜಾಡ.

मकड़ाना, अक्रि. ಕೊಂಕಿ ನಡೆ, ನಿಗ್ಗು ಜಗ್ಗಾಗಿ ನಡೆ, ಜಗ್ಗು ಹಾಕುತ್ತ ನಡೆ.

मकतब, पु. ಪಾಠಶಾಲೆ, ವಿದ್ಯಾಲಯ

मक़ता, पु. ಗಜಲಿನ ಕೊನೆಯ ಎರಡು ಚರಣ.

मक़तूब, वि. ಬರೆದ, ಲಿಖಿತ; ಅಂಟಿಸಿದ, ಹೊಲಿದ. पु. ಲೇಖ, ಪತ್ರ.

मक़तूल, वि. ಕೊಲ್ಲಲ್ಪಟ್ಟವ, ಆಹತ.

मक़दूर, पु. ಸಾಮರ್ಥ್ಯ, ಶಕ್ತಿ, ವಶ.

मकना, पु. ಹೊದಿಕೆ, ದುಪಟಿ.

मक़ना-तीस, पु. ಸೂಜಿಕಲ್ಲು.

मक़फ़ूल, वि. ಗಿರವಿ ಇಟ್ಟ, ಅಡವಿಟ್ಟ, ಒತ್ತೆಯಿಟ್ಟ, ದೀಡಿಟ್ಟ.

मक़बरा, पु. ಗೋರಿ, ಸಮಾಧಿ; ಸಮಾಧಿ ಮಂಟಪ, ದೂಪೆ.

मक़बूज़ा, वि. ಕೈವಶವಾದ, ಸ್ವಾಧೀನವಾದ.

मक़बूल, वि. ಅಂಗೀಕರಿಸಿದ, ಒಪ್ಪಿದ; ಪಸಂದಾದ, ಮೆಚ್ಚಿನ. पु. ಆರಿಸಿ ತೆಗೆದ ಮನುಷ್ಯ; ನಂಬಿಗಸ್ತನಾದ ಜೊತೆಗಾರ; ಪ್ರೇಮಿಕೆ.

मक़बूलियत, स्त्री. ಒಪ್ಪಿಕೆಯಾಗುವಿಕೆ, ಪಸಂದಾಗುವಿಕೆ; ಒಪ್ಪಿಕೆ.

मकर, पु. ಮೊಸಳೆ; ಮೋಸ, ಕಪಟ; ಠಕ್ಕು; ಥಳುಕು.

मकरतार, पु. ಸರಿಗೆ, ಜರತಾರಿ.

मकरा, पु. ಸೆಲದಿ, ಜಾಡ, ರಾಗಿ.

मकरी, स्त्री. ಹೆಣ್ಣು ಮೊಸಳೆ; ಕವಣೆ.

मक़रूज़, वि. ಕತ್ತರಿಸಿದ; ಸಾಲಕೊಟ್ಟ; ಸಾಲಗಾರ, ಋಣಬಾಧಿತ, ಋಣಿ.

मकरूह, वि. ಅಪವಿತ್ರ; ಕೆಟ್ಟ; ಹೊಲಸು.

मक़लूब, वि. ವ್ಯತ್ಯಸ್ತವಾದ, ತಿರುಗಿಸಿದ

मक़सद, पु. ಮನೋರಥ, ಅಭಿಪ್ರಾಯ, ಉದ್ದೇಶ.

मक़सदवर, वि. ಉದ್ದೇಶ ಪೂರ್ತಿಯಾದವ, ಸಫಲ ಮನೋರಥ.

मक़सूद, पु. ಉದ್ದಿಷ್ಟ, ಲಕ್ಷ್ಯ.

मक़सूम, पु. ಪಾಲು, ಭಾಗ; ಭಾಗ್ಯ, ವಿಧಿ; ಭಾಜ್ಯ (ಗಣಿತ).

मकाई, स्त्री. ಮಕ್ಕೆ ಜೋಳ, ಮುಸುಕಿನ ಜೋಳ, ಗೋಂಜೋಳ.

मकान, पु. ಮನೆ, ಗೃಹ; ವಾಸಸ್ಥಾನ, ನಿವಾಸ, ಬೀಡು.

मकानदार, पु. ಮನೆಯ ಒಡೆಯ, ಮನೆಯ ಸ್ವಂತಗಾರ; ಕಾವಲುಗಾರ.

मकुनी, मक़ूनी, स्त्री. ಕಡಲೆ ಹಿಟ್ಟಿನ

ರೊಟ್ಟಿ ಅಥವಾ ಕಡುಬು.

मक़ूला, पु. ಹೇಳಿಕೆ, ಗಾದೆ, ಸಾಮತಿ, ಉದ್ಧೃತವಾಕ್ಯ.

मको, पु. ಬುಡ್ಡೆ ಹಣ್ಣು.

मकोड़ा, पु. ದೊಡ್ಡ ಇರುವೆ; ಹುಳು, ಕೀಟ. कीड़े मकोड़े=ಹುಳ ಹುಪ್ಪಡಿ.

मकोय, पु. ಕಾಕಿ ಗಿಡ, ಕಾರೆ ಹಣ್ಣು.

मक्का, पु. ಮುಕ್ಕೆ ಜೋಳ, ಮುಸುಕಿನ ಜೋಳ, ಗೋಂಜೋಳ; ಮಕ್ಕಾ ಪಟ್ಟಣ.

मक्कार, वि. ಠಕ್ಕ; ಮೋಸಗಾರ; ಕಪಟಿ.

मक्कारी, स्त्री ಮೋಸ, ಮೋಸಗಾರಿಕೆ, ಬೂಟಾಟಿಕೆ; ಕಪಟ, ಠಕ್ಕು.

मक्खन, पु. ಬೆಣ್ಣೆ, ನವನೀತ.

मक्खनिया, पु. ಬೆಣ್ಣೆ ಮಾರುವವ.

मक्खी, मखी, स्त्री. ನೊಣ; ಜೇನು ನೊಣ; ತುಪಾಕಿಯ ಚೂಟಿ, ಕಣ್ಣು ಚೂಟಿ. मक्खी मारना = ನೊಣ ಹೊಡಿ; ಕೆಲಸವಿಲ್ಲದೆ ಕೂತಿರು; ವೃಥಾ ಕಾಲಕಳೆ.

मक्खीचूस, पु. ಪರಮಲೋಭಿ, ಅತಿ ಜಿಪುಣ.

मक्खीमार, पु. ಗಲೀಜು ಮನುಷ್ಯ, ಹೊಲಸಿನವ; ಸೋಮಾರಿ, ಶೋಂಭೇರಿ; ಮಕ್ಕಿಕಾಮಕ್ಕಿ ಬರೆಯುವವ.

मक्र, पु. ಒಳಸಂಚು; ಮೋಸ, ಠಕ್ಕು; ನೆಪ, ವ್ಯಾಜ.

मख़्ज़न, पु. ಭಂಡಾರ, ಉಗ್ರಾಣ; ಖಜಾನೆ; ಶಬ್ದಕೋಶ, ಶಬ್ದಸಂಗ್ರಹ

मखतूल, पु. ಕರಿಯ ರೇಷ್ಮೆ.

मख़्दूम, पु. ಒಡೆಯ, ಸ್ವಾಮಿ; ಪೂಜ್ಯ ವ್ಯಕ್ತಿ, ಮಹಮ್ಮದೀಯ ಧರ್ಮಾಧಿಕಾರಿ.

मखन, पु. ಬೆಣ್ಣೆ.

मखना, पु. ದಂತವಿಲ್ಲದ ಆನೆ; ಕೊಂಕುಗುರಿಲ್ಲದ ಹುಂಜ.

मखनिया, वि. ಬೆಣ್ಣೆ ತೆಗೆದ. पु. ಬೆಣ್ಣೆ ತೆಗೆಯುವವ ಅಥವಾ ಮಾರುವವ.

मख़मल, पु. ಒಂದು ಬಗೆ ನಯವಾದ ಬಟ್ಟೆ, ಮಖಮಲ್ಲು.

मख़मली, वि. ಮಖಮಲ್ಲಿನ; ಮಖಮಲ್ಲಿನಂತಹ; ಬಲು ನಯವಾದ.

मख़मसा, पु. ಬಿಕ್ಕಟ್ಟು, ಸಂದುಕಟ್ಟು.

मख़मूर, वि. ಮತ್ತನಾದ, ಅಮಲೇರಿದ.

मख़रज, पु. ಹೊರಡುವ ಜಾಗ, ಉದ್ಗಮ ಸ್ಥಾನ; ವ್ಯುತ್ಪತ್ತಿ, ನಿರುಕ್ತಿ; ಹೇಳುವಿಕೆ, ಉಕ್ತಿ; ಖರ್ಚು, ವ್ಯಯ.

मख़लसी, स्त्री. ಭದ್ರತೆ, ಜೋಪಾನ; ಸ್ವಾತಂತ್ರ್ಯ; ಬಿಡುಗಡೆ.

मख़लूक, वि. ರಚಿತವಾದ; ಸೃಷ್ಟಿಸಲ್ಪಟ್ಟ, ಸೃಷ್ಟ. स्त्री. ಸೃಷ್ಟಿತವಸ್ತು; ಜೀವರಾಶಿ; ಪ್ರಪಂಚ.

मख़लूत, वि. ಕಲಿತ, ಮಿಶ್ರಿತ, ಬೆರೆತ.

मख़सूस, वि. ವಿಶಿಷ್ಟ; ಸರಿ; ಖಾಸಗಿ.

मखाना, पु. = ताल-मखाना.

मख़ारिज, पु. ಖರ್ಚು, ಮುಟ್ಟುವಳಿ.

मख़ून, पु. ಚಿಗಟ, ಚಿಕ್ಕಾಡು.

मख़ोना, पु. ಒಂದು ಬಗೆ ಬಟ್ಟೆ.

मख़ौल, पु. ನಗಚಾಟಿಕೆ, ಗೇಲಿ.

मख़्फ़ी, वि. ಗುಟ್ಟಾದ, ಗುಪ್ತ.

मग, पु. ದಾರಿ, ಮಾರ್ಗ.

मग़ज, पु. = मग़्ज.

मगदल, पु. ಹೆಸರು ಬೇಳೆ ಲಾಡು.

मगन, वि. ಮಗ್ನ, ಮುಳುಗಿದ, ತಲ್ಲೀನ.

मग़फ़िरत. स्त्री. ಕ್ಷಮಾಪಣೆ, ಮಾಫು.

मग़फ़ूर, वि. ದಿವಂಗತ, ಸ್ವರ್ಗೀಯ.

मग़मूम, वि. ದುಃಖಾಕ್ರಾಂತ; ಶೋಕಾತರ, ದುಃಖಿತ.

मगर, पु. ಮೊಸಳೆ, ನೆಗಳು, ಚೊರ. अव्य. ಆದರೆ, ಪರಂತು. अगर मगर करना = ತರ್ಕ ವಿತರ್ಕ ಮಾಡು, ಹಿಂದು ಮುಂದು ನೋಡು.

मगरमच्छ, पु. ಮೊಸಳೆ; ಕುದುರೆ ಮುಸುಡಿ ನೆಗಳು, ಚೊರ.

मगरमस्त, वि. ಉಲ್ಲಾಸವುಳ್ಳ, ಕುಶಾಲಿನ.

मगरा, वि. ಗರ್ವವುಳ್ಳವ, ದುರಹಂಕಾರಿ; ಸಿಡುಕ; ಹಟಮಾರಿ, ಚಂಡಿ.

मगराई, **मगराही**, स्त्री. ಗರ್ವ; ದುರಹಂಕಾರ; ಹಟ, ಜಿದ್ದು.

मग़रिब, वि. ಪಶ್ಚಿಮ, ಪಡುವಲು; ಸೂರ್ಯಾಸ್ತ.

मग़रिबी, वि. ಪಶ್ಚಿಮದ, ಪಡುವಣ.

मगरी, स्त्री. ಛಾವಣಿಯ ಬೆಂಕಟ್ಟು, ಮೊಗಡು; ಹೆಂಚು.

मग़रूर, वि. ಗರ್ವಿಷ್ಠ, ಗರ್ವವುಳ್ಳ; ದುರಹಂಕಾರಿ.

मग़रूरी, स्त्री. ಗರ್ವ; ದುರಹಂಕಾರ; ಸೊಕ್ಕು.

मग़लूब, वि. ಜಯಿಸಲ್ಪಟ್ಟ, ವಿಜಿತ.

मगस, स्त्री. ನೊಣ.

मगसिर, पु ಮಾರ್ಗಶಿರ ಮಾಸ.

मग़्ज़, पु. ಮಿದುಳು, ಮಸ್ತಿಷ್ಕ, ಮೇದಸ್ಸು; ಬುರುಡೆ; ನೆಣ, ಮಜ್ಜೆ, ಕೊಬ್ಬು; ಸೊಕ್ಕು; ದುದ್ದ, ಕುಸುರಿ, ತಿರುಳು. मग़्ज़ खाना = ಪೀಡಿಸು, ಕಾಡು. मग़्ज पचाना या खाली करना = ಹುಚ್ಚು ಹುಚ್ಚಾಗಿ ಹರಟು, ಬುರುಡೆ ಹೊಡೆ.

मग़्ज़पच्ची, स्त्री. ಮಿದುಳು ಖರ್ಚು ಮಾಡಿ ಬಹಳ ಯೋಚಿಸುವಿಕೆ.

मग़्ज़रोशन, पु. "ಜ್ಞಾನಚೂರ್ಣ", ನಶ್ಯ, ನಾಸಿ ಪುಡಿ.

मग़्ज़ी, वि. ಮಿದುಳು ಸಂಬಂಧವಾದ. स्त्री. ಅಂಚು, ಗೋಟು, ಕರೆ.

मचक, स्त्री. ಒತ್ತಡ, ದುಡಿತ, ಅಳುಕುವಿಕೆ; ಕೀಲುನೋವು.

मचकना, अक्रि. ನೋವಾಗು; ದುಡಿ; ಅಳುಕು, ಕಿರ್ರೆನ್ನು, ಕಿರುಗುಟ್ಟು. सक्रि. ಒತ್ತರಿಸು, ಜಗ್ಗಿಸು, ಕಿರುಗುಟ್ಟಿಸು.

मचका, पु. ವ್ಯಾಪಾರದ ಮಂದ.

मचकाना, सक्रि. ಬಳುಕಿಸು; ಜಗ್ಗಿಸು; ರೆಪ್ಪೆ ಬಡಿ.

मचना, अक्रि. ಆಗು, ಮೂಡು, ಮುಸಗು; (ಗಲಾಟೆ) ಏಳು, ಹತ್ತಿಕೊಳ್ಳು; ಕಿರುಗುಟ್ಟು.

मचमच, स्त्री. ಕಿರುಗುಟ್ಟುವ ಶಬ್ದ.

मचमचाना, अक्रि. ಕಿರ್ರೆನ್ನು, ಕಿರುಗುಟ್ಟು.

मचल, स्त्री. ಛಲ, ಮೊಂಡಾಟ, ಚಂಡಿತನ

मचलना, अक्रि. ಛಲ ಹಿಡಿ, ಮೊಂಡ ಬೀಳು; ಚಂಡಿಸು, ಹಟ ಹಿಡಿ; ಸಿಡುಗುಟ್ಟು; ಅವಿಧೇಯನಾಗು.

मचला, वि. ಛಲವಾದಿ, ಚಂಡಿಖೋರ; ಮೊಂಡ, ಹಟಮಾರಿ; ಸಿಡುಕುಮೋರೆಯವ; ಅರಿಯದವನಂತೆ ನಟಿಸುವವ.

मचलाई, स्त्री. **मचलापन**, पु. ಹಟ ಹಿಡಿಯುವಿಕೆ, ಛಲ, ಮೊಂಡಾಟ; ಸಿಡುಕು.

मचलाना, अक्रि. ಓಕರಿಸು, ಉಬ್ಬಳಿಸು, ಕಕ್ಕಸ ಪಡು; ತಿಳಿಯದವನಂತೆ ನಟಿಸು; ಛಲ ಹಿಡಿ, ಚಂಡಿಸು. सक्रि. ಹಟ ಹಿಡಿಸು; ಮೊಂಡ ಬೀಳಿಸು.

मचलाहट, स्त्री. ಛಲ, ಮೊಂಡಾಟ, ಹಟ; ದುರಾಗ್ರಹ.

मचलाहा, वि. ಹಟಮಾರಿ, ಮೊಂಡ.

मचवा, पु. ದೋಣಿ, ಓಡ.

मचवाना, सक्रि. ಎಬ್ಬಿಸು, ಹತ್ತಿಸು.

मचान, पु ಅಟ್ಟ, ಮಂಚಿಕೆ; ಮಂಚ; ಸಾರಕಟ್ಟು, ಕಾಲಾವದಿ, ಸಾರವೆ.

मचाना, सक्रि. (ಗಲಾಟೆ) ಮಾಡು, ಎಬ್ಬಿಸು, ಮೂಡಿಸು.

मचामच, वि. ಅಡಚಿ ತುಂಬಿದ.

मचिया, स्त्री. ಸಣ್ಣ ಮಂಚ; ಕಾಲಟ್ಟು.

मचियाव, पु. ಜೇನುತುಪ್ಪ.

मचोड़ना, सक्रि. ನುಲಿಚು, ಹೊಸೆ.

मच्छ, पु. ಮೀನು, ಮತ್ಸ್ಯ.

मच्छड़, **मच्छर**, पु. ಸೊಳ್ಳೆ, ಮಶಕ. मच्छड़ की झूल = ಬಲು ಸಣ್ಣ ಅಥವಾ ಅತ್ಯಲ್ಪ ವಸ್ತು.

मच्छड़दानी, स्त्री. ಸೊಳ್ಳೆಗಳನ್ನು ಹಿಡಿವ ಬಲೆ; ಸೊಳ್ಳೆ ಪರದೆ.

मच्छी, स्त्री. ಮೀನು, ಮತ್ಸ್ಯ; ಚುಂಬನ.

मच्छीभवन, पु. ವಿಧವಿಧವಾದ ಮೀನುಗಳಿಟ್ಟಿರುವ ಸ್ಥಳ, ಮತ್ಸ್ಯಾಲಯ, ಮೀನುಬಂಗಲೆ, "ಮೀನುಕಾಲೇಜು".

मछंदर, पु. ಕೋತಿ, ಕಪಿ; ಇಲಿ; ಫಕೀರ, ದಾಸಯ್ಯ; ಮಂಕ.

मछ, पु. ದೊಡ್ಡ ಮೀನು.

मछरंगा, पु. ಮೀಂಚುಳ್ಳಿ, ಲಕುಮುಕಿ ಹಕ್ಕಿ.

मछरांद, स्त्री. ಮೀನಿನ ನಾತ.

मछली, स्त्री. ಮತ್ಸ್ಯ, ಮೀನು; ಲೋಲಾಕು.

मछवा, **मछुआ**, **मछेरा**, पु. ಬೆಸ್ತ, ಮೀನುಗಾರ, ಅಂಬಿಗ, ಮೊಗೇರ, ಗಂಗೆಮಗ.

मज, वि. ಹಣ್ಣಾದ, ಮಾಗಿದ.

मज़कूर, वि. ಹೇಳಿದ, ಪೂರ್ವೋಕ್ತ. पु. ಪ್ರಸ್ತಾಪ, ವಿವರಣೆ, ಮಜಕೂರು.

मज़कूरा, वि. ಮೇಲೆ ಹೇಳಿದ, ಉಪರೋಕ್ತ, ಮಜಕೂರು, ಸದರಿ.

मज़कूरी, पु. ಕೋರ್ಟಿನ ಸಮ್ಮನು ಅಥವಾ ಸರಕಾರದ ಅಜ್ಞಾಪತ್ರವನ್ನು ಜಾರಿ ಮಾಡುವವ.

मज़दूर, पु. ಕೆಲಸಗಾರ; ಕಾಮಾಟಿ; ಕೂಲಿಗಾರ; ಶ್ರಮಜೀವಿ, ಜೀತಗಾರ.

मज़दूरनी, **मज़दूरिन**, स्त्री. ಕೂಲಿಯವಳು, ಹೆಣ್ಣಾಳು.

मज़दूरी, स्त्री. ಕೂಲಿ ಕೆಲಸ, ಜೀತ;

ಕೂಲಿ, ಮಜೂರಿ, ರುಸುಂ.

मजनूँ, पु. ಉನ್ಮತ್ತ; ಹುಚ್ಚ; "ಲೈಲಾ" ಎಂಬ ರಮಣೀಯ ಮೇಲಿನ ಪ್ರೇಮದಿಂದ ಹುಚ್ಚು ಹಿಡಿದ ಒಬ್ಬ ಅರಬ್ಬಿ ಯುವಕ; ಪ್ರೇಮೋನ್ಮತ್ತ; ಪ್ರೇಮಾಸಕ್ತ, ಪ್ರೇಮಿ; ಒಂದು ಮರ. वि. ಬಲವಿಲ್ಲದವ, ನಿಶ್ಪ್ರಾಣಿ.

मज़बूत, वि. ದೃಢವಾದ, ಗಟ್ಟಿ; ಬಲವುಳ್ಳ, ಮಜಬೂತು, ಬಲವತ್ತರ.

मज़बूती, स्त्री. ದೃಢತೆ, ಸ್ಥೈರ್ಯ; ಬಲ, ಕಸುವು, ಪುಷ್ಟಿ.

मजबूर, वि. ನಿರ್ಬಂಧಕ್ಕೊಳಪಟ್ಟ; ಒತ್ತಾಯದ, ಕಡ್ಡಾಯದ; ನಿರ್ವಾಹವಿಲ್ಲದ, ವಿವಶ. मजबूर करना = ನಿರ್ಬಂಧಿಸು, ಬಲವಂತ ಮಾಡು.

मजबूरन्, क्रिवि. ನಿರ್ಬಂಧದಿಂದ, ಬಲವಂತದಿಂದ; ನಿರ್ವಾಹವಿಲ್ಲದೆ.

मजबूरी, स्त्री. ನಿರ್ಬಂಧ, ಒತ್ತಾಯ, ಕಡ್ಡಾಯ; ವಿವಶತೆ.

मजमा, पु. ಗುಂಪು; ಕೂಟ, ಸಭೆ; ರಾಶಿ.

मजमूआ, वि. ಒಟ್ಟಾದ, ಒಟ್ಟುಗೂಡಿದ. पु. ಸಮೂಹ, ಗಣ, ಸಮುದಾಯ; ಮೊತ್ತ; ನಿಯಮಾವಳಿ, ಕಾನೂನು, ಕಾಯಿದೆ; ಪರಿಮಳದ್ರವ್ಯ.

मज़मून, पु. ಸಂಗತಿ, ಪ್ರಸ್ತುತವಿಷಯ, ಪ್ರಕರಣ; ತಾತ್ಪರ್ಯ, ಆಶಯ; ನಿಬಂಧದ ವಸ್ತು, ಪ್ರಬಂಧ, ಲೇಖನ.

मज़रूआ, वि. ಕೃಷಿ ಮಾಡಿದ, ಸಾಗುವಳಿ (ಜಮೀನು).

मज़रूब, वि. ಗುಣ್ಯ (ಸಂಖ್ಯೆ).

मजरूह, वि. ಘಾಯ ಹೊಂದಿದ

मजलिस, स्त्री. ಸಭೆ, ಸದಸ್ಸು; ಪರಿಷತ್ತು, ಸಮಾಜ; ಮೇಳ, ನಟನ ಸಭೆ, ಕಛೇರಿ, ಸದರು.

मजलिसी, वि. ಸದಸ್ಯ, ಪಾರಿಷದ; ಸಭ್ಯ, ನಾಗರೀಕ.

मज़लूम, वि. ದಬ್ಬಾಳಿಕೆಗೆ ಅಥವಾ ಅತ್ಯಾಚಾರಕ್ಕೆ ಗುರಿಯಾದವ, ದಲಿತ.

मज़हब, पु. ಧರ್ಮ, ಮತ, ಮತಾಚಾರ

मज़हबी, वि. ಮತ ಸಂಬಂಧವಾದ, ಧಾರ್ಮಿಕ, ಮತಾಚಾರದ. पु. ಒಡ್ಡ, ಬಂಗಿ, ಝಾಡಮಾಲಿ.

मज़ा, पु. ರುಚಿ, ಸವಿ, ಸ್ವಾರಸ್ಯ; ಸುಖಾನುಭವ, ಮಜಾ; ಸಂತೋಷ, ಆನಂದ; ತಮಾಷೆ.

मज़ाक़, पु. ಆಸ್ವಾದನ, ರುಚಿ, ಸವಿ, ಸ್ವಾರಸ್ಯ; ಹಾಸ್ಯ, ನಗಚಾಟಿಕೆ, ಗೇಲಿ; ವಿನೋದ, ತಮಾಷೆ.

मज़ाक़न्, क्रिवि. ವಿನೋದಕ್ಕೆ, ತಮಾಷೆಗೆ.

मज़ाक़िया, वि. ಹಾಸ್ಯಗಾರ, ವಿನೋದಗಾರ.

मजाज़, वि. ಅಧಿಕಾರ ಯುಕ್ತ; ಅಧಿಕಾರಿ. पु. ಅಧಿಕಾರ, ಹಕ್ಕು; ರೂಪಕ, ಲಕ್ಷಣೆ.

मजाज़न्, क्रिवि. ಲಕ್ಷಣೆಯಿಂದ.

मजाज़ी, वि. ಲಾಕ್ಷಣಿಕ; ಮಾಯೆಯ, ಅನಿತ್ಯ.

मज़ामीन, पु. "मज़मून" का ब. रूप.

मज़ार, पु. ಗೋರಿ, ಸಮಾಧಿ; ಶವ

ವನ್ನು ಹೂಳುವ ಸ್ಥಳ, ಶವಾಗಾರ

मजाल, स्त्री. ಸ್ಥಳ, ಇಂಬು; ಅವಕಾಶ; ಶಕ್ತಿ, ಬಲ, ಸಾಮರ್ಥ್ಯ.

मजीठ, स्त्री. ಕೆಂಪು ಬಣ್ಣ ತೆಗೆಯುವ ಒಂದು ಗಿಡ, ಮಂಜಿಷ್ಟೆ, ರಕ್ತಾಂಗಿ, ಇಷ್ಟವಮಧುಕ.

मजीठी, वि. ಮಂಜಿಷ್ಟೆಯ, ಕೆಂಪು

मजीत, वि. ಹಳೆಯ, ಅಗ್ಗವಾದ.

मजीद, वि. ಪೂಜ್ಯ; ಗಣ್ಯ, ಮಾನ್ಯ. ಶ್ರೇಷ್ಠ.

मज़ीद, पु. ವೃದ್ಧಿ, ಅಧಿಕ್ಯ. वि. ವೃದ್ಧಿಯಾದ, ಅಧಿಕ.

मजीर, स्त्री. ಗೊನೆ, ಗೊಂಚಲು.

मजीरा, पु. ಕಂಸತಾಳ, ಕೈತಾಳ, ಝುಲ್ಲರಿ.

मजूर, पु. =**मज़दूर**.

मजूरी, स्त्री. =**मज़दूरी**.

मजूस, पु. ಅಗ್ನಿಪೂಜಕ, ಪಾರ್ಸಿ.

मज़ेदार, वि. ರುಚಿರ, ಸವಿಯಾದ; ಸ್ವಾರಸ್ಯವಾದ; ಸುಖಪ್ರದ, ಆನಂದಕರ; ಹಾಸ್ಯಕರವಾದ, ತಮಾಷೆಯ.

मज़ेदारी, स्त्री. ರುಚಿ, ಸವಿ; ಸ್ವಾರಸ್ಯ, ಆನಂದ; ವಿನೋದ.

मज्जा, स्त्री. ನೆಣ, ಕೆಚ್ಚು; ಮಜ್ಜೆ, ಮೇದಸ್ಸು; ಕೊಬ್ಬು, ಚರಬಿ.

मझ, पु. ನಡುವೆ, ಮಧ್ಯ.

मझधार, स्त्री. ನಡು ಹೊಳೆ.

मझला, वि. ಮಧ್ಯದ, ನಡುವಣ; ನಡುಕಲ; ಮಧ್ಯಸ್ಥ.

मझाना, सक्रि. ತುರುಕು, ನುಸುಳಿಸು. अक्रि. ಪ್ರವೇಶಿಸು; ನುಸುಳು.

मझार, पु. ನಡು, ಮಧ್ಯ

मझारी, क्रिवि. ನಡುವೆ, ಮಧ್ಯೆ.

मझियाना, अक्रि. ನಡುವೆ ಹೋಗು.

मझोला, वि. ಮಧ್ಯಮ, ಎಡತರ, ನಡುತರ.

मझोली, स्त्री. ಚಿಕ್ಕ ಗಾಡಿ, ಬಂಡಿ.

मट, पु. ಮಡಕೆ, ಗಡಿಗೆ.

मटक, मटकन, स्त्री. ಒಯ್ಯಾರದ ನಡಿಗೆ; ಒಯ್ಯಾರ, ಬೆಡಗು.

मटकना, अक्रि. ಜಗ್ಗು ಹಾಕುತ್ತ ನಡೆ, ನಿಕ್ಕುಳಿಸು; ಬಳುಕು; ಒಯ್ಯಾರ ಮಾಡು; ಕಣ್ಣುಹೊಡೆ पु. ಮಡಕೆ, ಕುಡಿಕೆ.

मटकनि, स्त्री. ಕುಲುಕು, ಕುಣಿತ, ಒಯ್ಯಾರ, ಬೆಡಗು.

मटका, पु. ಮಡಕೆ, ಘಟ.

मटकाना, सक्रि. ಮೈಯನ್ನು ಬಳುಕಿಸು, ಹಾವಭಾವ ತೋರಿಸು, ಬೆಡಗು ತೋರು; ಜಗ್ಗು ಹಾಕುತ್ತಾ ನಡೆಸು; ಕಣ್ಣು ಮಿಟಕಿಸು.

मटकी, स्त्री. ಸಣ್ಣ ಮಡಕೆ, ಕುಡಿಕೆ; ಆಟದ ಸಾಮಾನು; ಅಟಿಗೆ, ಕುಡಿಕೆ ಸಾಮಾನು; ಒಯ್ಯಾರ, ಬೆಡಗು; ಕಣ್ಣು ಹೊಡೆಯುವಿಕೆ.

मटकीला, वि. ಬಳಕುವ; ಒಯ್ಯಾರದ

मटकोठा, पु. ಮಣ್ಣಿನ ಮನೆ.

मटकौअल, स्त्री. ಮೈಯನ್ನು ಬಳುಕಿಸುವಿಕೆ, ಹಾವಭಾವ, ಬೆಡಗು.

मटक्को, स्त्री. ಒಯ್ಯಾರದ ನಡಿಗೆಯ

ವಳು, ಬೆಡಗಿನವಳು, ಬಿನ್ನಾಣಗಿತ್ತಿ.

मटमैला, वि. ಮಣ್ಣಿನ; ಮಣ್ಣಿನ ಬಣ್ಣದ, ಖಾಕಿ, ಮಸಕು ಬಣ್ಣದ.

मटर, पु. ಬಟಾಣಿ, ವಟಾಣಿಕಾಳು, ಬಟ್ಟಗಡಲೆ.

मटरगश्त, पु. ವಿರಾಮವಾಗಿ ತಿರುಗಾಡುವಿಕೆ, ಅಡ್ಡಾಟ, ವಿಹಾರ, ಗಾಳಿ ಸವಾರಿ.

मटरा, पु. ಒಂದು ಬಗೆ ಬಟಾಣಿ; ಒಂದು ಬಗೆ ರೇಷ್ಮೆ ಬಟ್ಟೆ.

मटरी, स्त्री. ಬಟಾಣಿ.

मटियल, वि. ಮಣ್ಣಿನ; ಮಣ್ಣಿನಿಂದಾದ; ಮಣ್ಣಿನ ಬಣ್ಣದ. पु. ಮಣ್ಣಿನ ಹೆಂಟೆ.

मटिया, वि. ಮಣ್ಣಿನ; ಮಣ್ಣುಳ್ಳ. मटिया फूस = ನಿಶ್ಶಕ್ತ, ಬಲಹೀನ. मटिया मेट = ಮಣ್ಣುಗೂಡಿದ, ಮಣ್ಣುಪಾಲಾದ, ಹಾಳು. मटिया मेट करना = ಮಣ್ಣು ಮುಕ್ಕಿಸು, ನೆಲಸಮ ಮಾಡು, ಗುಂಡಾಂತರ ಮಾಡು, ಹಾಳ್ಗೆಡಿಸು.

मटियाना, सक्रि. ಮಣ್ಣು ಹಾಕಿ ಉಜ್ಜು. ತೊಳೆ; ಮಣ್ಣು ಸವರು, ಮಣ್ಣು ಮೆತ್ತು; ಕಂಡೂ ಕಾಣದಂತಿರು, ಲಕ್ಷ್ಯ ಕೊಡದಿರು. अक्रि. ಮಣ್ಣಾಗು.

मटियार, वि. ಮಣ್ಣಿನಿಂದಾದ; ಮಣ್ಣಿನ. पु. ಜೇಡಿಮಣ್ಣಿನ ಭೂಮಿ.

मटियाला, वि. = मटमैला.

मटुका, पु. ಮಡಕೆ, ಕುಡಿಕೆ.

मट्टी, स्त्री. ಮಣ್ಣು, ಮಟ್ಟಿ.

मट्ठर, मट्ठा, वि. ಮಂದ, ನಿಧಾನವಾದ; ತಾಮಸದ, ಆಲಸ್ಯದ.

मट्ठा, मठा, पु. ಮಜ್ಜಿಗೆ, ಅಳೆ, ತಕ್ರ.

मठ, पु. ಮಠ, ಆಶ್ರಮ. मठ मारना = ಹಾಳು ಮಾಡು, ಕೆಡಿಸು.

मठधारी, पु. ಮಠಾಧಿಪತಿ, ಮಹಂತ.

मट्ठी, मठरी, स्त्री. ಸೀ ದೋಸೆ.

मठिया, मठी, स्त्री. ಚಿಕ್ಕ ಮಠ; ಕುಟಿ; ಕಡಗ, ಬಳೆ.

मठोरा, स्त्री. ಮೊಸರಿನ ಪಾತ್ರೆ; ಬಾನೆ.

मठौता, पु. ಮಣ್ಣಿನ ಕೊಟ್ಟು.

मड़ई, स्त्री. ಚಿಕ್ಕ ಮಂಟಪ, ಚಪ್ಪರ.

मड़क, स्त्री. ಒಳಗುಟ್ಟು, ಮರ್ಮ.

मड़वा, पु. ಚಪ್ಪರ, ಲತಾಮಂಟಪ.

मड़ार, पु. ಹೊಂಡ, ಕೊಳ.

मड़ियाना, सक्रि. ಗಂಜಿ ಬಳಿ.

मड़ुआ, पु. ಒಂದು ಧಾನ್ಯ.

मड़ैया, स्त्री. ಗುಡಿಸಲು, ಜೋಪಡಿ.

मढ़, वि. ಚಂಡಿಖೋರ, ಮೊಂಡ.

मढ़न, पु. ಗವಸಣಿಗೆ, ಅಸ್ತರು; ಮದ್ದಲೆಗೆ ಹೊದಿಸುವ ಚರ್ಮ.

मढ़ना, सक्रि. ಗವಸಣಿಗೆ ಹಾಕು, ವೇಷ್ಟಿಸು; ಮದ್ದಲೆಗೆ ಚರ್ಮ ಬಿಗಿದು ಕಟ್ಟು; ರಟ್ಟು ಕಟ್ಟು, ಮಡಾಯಿಸು, ತಲೆಗೆ ಕಟ್ಟು. अक्रि. ಮೂಡು, ಏಳು.

मढ़वाना, मढ़ाना, सक्रि. "मढ़ना" का प्रे. रूप.

मढ़ा, पु. ಗುಡಿಸಲು, ಪರ್ಣಕುಟಿ.

मढ़ाई, स्त्री. ಗವಸಣಿಗೆ ಹಾಕುವಿಕೆ; ಮಡಾಯಿಸುವಿಕೆ, ಮದ್ದಲೆಗೆ ಚರ್ಮ

ಕಟ್ಟುವಿಕೆ; ಈ ಕೆಲಸಗಳ ಕೂಲಿ.

मढ़ी, स्त्री. ಕುಟಿ, ಗುಡಿಸಲು, ಜೋಪಡಿ

मत, पु. ವಿಚಾರ; ಸಿದ್ಧಾಂತ, ತತ್ವ; ಧರ್ಮ; ಅಭಿಪ್ರಾಯ, ಆಶಯ; ಮತ, ಒಪ್ಪಿತ, "ಓಟು"; ಮದ, ಅಮಲು. स्त्री. ರೀತಿ, ವಿಧ; ಮತಿ, ಅರಿವು; ತಿಳಿವಳಿಕೆ. क्रिवि. ಬೇಡ, ಕೂಡದು.

मतदाता, पु. ಒಪ್ಪಿತ(=ಓಟು)ಕೊಡುವವ, "ಓಟರು", ಒಪ್ಪಿತಕಾರ, ಮತದಾತ, ಮತದಾರ.

मतया, पु ಒಂದು ಬಗೆ ಕಬ್ಬು. अक्रि. ಮತ್ತನಾಗು.

मतबख़, पु. ಅಡಿಗೆ ಮನೆ.

मतबा, पु. ಮುದ್ರಣಾಲಯ, ಅಚ್ಚುಕೂಟ, ಛಾಪಖಾನೆ.

मतबूआ, वि. ಚುನಾಯಿಸಿದ; ಆಯ್ದ; ಮೆಚ್ಚಿಸಿದ; ಮುದ್ರಿತ, ಅಚ್ಚಾದ.

मतराना, सक्रि. ಒಡಂಬಡಿಸು, ಒಪ್ಪಿಸು; ಒಪ್ಪಿಗೊಳಿಸು, ಬುಜ್ಜಯಿಸು.

मतरूक, वि. ಬಿಟ್ಟ, ತೊರೆದ, ತ್ಯಕ್ತ.

मतलब, पु. ಪ್ರಶ್ನೆ, ಬೇಡಿಕೆ; ಅಭಿಪ್ರಾಯ, ತಾತ್ಪರ್ಯ, ಆಶಯ; ಅರ್ಥ; ಸ್ವಾರ್ಥ; ಸ್ವಾರ್ಥಲಾಭ; ಗೊಡವೆ, ಸಂಬಂಧ; ಉದ್ದೇಶ, ಸಲುವು मतलब का यार= ಸ್ವಾರ್ಥಿ, ಸ್ವಾರ್ಥಪರ.

मतलबी, वि. ಸ್ವಾರ್ಥಪರ, ಗತ್ತುಗಾರ

मतला, पु. ನಕ್ಷತ್ರಗಳು ಉದಯವಾಗುವ ದಿಕ್ಕು, ಮೂಡಲು, ಪೂರ್ವ; ಗಜಲಿನ ಮೊದಲನೆಯ ಎರಡು ಚರಣ

मतलाना, सक्रि. ಓಕರಿಸು, ಉಬ್ಬಳಿಸು

मतलाहट, मतली, स्त्री. ಓಕರಿಕೆ, ಉಬ್ಬಳಿಕೆ.

मतलूब, वि. ಬೇಕಾದ; ಕೋರಿದ; ಉದ್ದಿಷ್ಟ. पु. ಆಶಯ, ಉದ್ದೇಶ.

मतवाला, वि. ಮದ ಹಿಡಿದವ, ಅಮಲೇರಿದ, ಮತ್ತನಾದ. पु. ದುರ್ಗದ ಮೇಲಿಂದ ಶತ್ರುಗಳ ಮೇಲೆ ಎಸೆಯುವ ದೊಡ್ಡ ಕಲ್ಲು; ಒಂದು ಆಟದ ಸಾಮಾನು, ಆಟಿಗೆ.

मता, पु. ಅಭಿಪ್ರಾಯ, ಸಮ್ಮತಿ. स्त्री. ಅಭಿವೃದ್ಧಿ; ಆದಿಕ್ಯ, ಪುಷ್ಕಲ; ಸೌಖ್ಯ ಪಡೆಯುವಿಕೆ; ಸಾಮಾನು, ಸರಕು.

मतानत, स्त्री. ದೃಢತೆ, ಘನತೆ; ಕೋಟೆ.

मतारी, स्त्री. ತಾಯಿ, ಅಮ್ಮ.

मतालबा, पु. ಬಾಧ್ಯತೆ, ಹಕ್ಕು.

मति, स्त्री. ಬುದ್ಧಿ, ಅರಿವು; ಒಪ್ಪಿತ, ಸಮ್ಮತಿ

मतीन, वि. ದೃಢವಾದ, ಗಟ್ಟಿ.

मतीरा, पु. ಕಲ್ಲಂಗಡಿ ಹಣ್ಣು.

मतीस, पु. ಒಂದು ವಾದ್ಯ.

मतेई, स्त्री. ಮಲತಾಯಿ, ಬಲತಾಯಿ

मत्त, वि. ಮತ್ತನಾದ, ಮದಿಸಿದ, ಅಮಲೇರಿದ; ಹುಚ್ಚು ಹಿಡಿದ.

मत्तता, स्त्री. ಉನ್ಮಾದ, ಮಸ್ತಿ.

मत्था, पु. ಹಣೆ.

मथन, पु. ಕಡೆಯುವಿಕೆ, ಮಥನ.

मथना, सक्रि. ಕಡೆ, ಮಥಿಸು; ನಾದು, ರುಬ್ಬು; ಮಸಗು; ನಾಶಮಾಡು; ಮನನ ಮಾಡು, ಚಿಂತನೆ ಮಾಡು.

मथनियां, स्त्री. ಮೊಸರಿನ ಗಡಿಗೆ.

मथनी, स्त्री. ಮೊಸರು ಕಡೆವ ಮಡಕೆ, ಮಂತಣಿ; ಕಡೆಯುವಿಕೆ, ಮಂಥನ; ಕಡೆಗೋಲು, ಮಂತದಂಡ, ಮಂತು.

मथानी, स्त्री. ಮಂಥದಂಡ, ಕಡೆಗೋಲು, ಮಂತು

मथौट, पु. ತಲೆತೆರಿಗೆ, ತಲೆಗಂದಾಯ.

मथौरा, पु. ಕೊಡೆ, ಸತ್ತಿಗೆ, ಉಜ್ಜುಗೊರಡು, ಹತ್ತಡಿ.

मद, पु. ಆನಂದ, ಉಲ್ಲಾಸ; ಮದ್ಯ, ಸೇಂದಿ; ಅಮಲು, ಮತ್ತು; ಮದ, ಸೊಕ್ಕು. स्त्री. (मद्द) ಇಲಾಖೆ, ಖಾತೆ, ವಿಭಾಗ; ಬಾಬ್ತು, ಮಜಕೂರು.

मदक, स्त्री. ಚಿಲಿಮೆಯಲ್ಲಿಟ್ಟು ಸೇದಲು ಉಪಯೋಗಿಸುವ ಅಫೀಮಿನ ಗುಳಿಗೆ; ಅಫೀಮು ಬೆರಸಿದ ಗುಡಾಕು.

मदकची, मदकबाज़, मदकी, पु. मदक ಸೇದುವವ

मदख़ल, पु. ಒಳಕ್ಕೆ ಹೋಗುವಿಕೆ, ಹೋಗುವಿಕೆ, ಪ್ರವೇಶ; ವರಮಾನ; ಆಯ; ಬರುವ ದಾರಿ; ಬಾಗಿಲು, ದ್ವಾರ; ಪ್ರವೇಶಿಸುವ ಹೊತ್ತು.

मदख़ूल, वि. ಒಳಹೊಕ್ಕ, ಪ್ರವಿಷ್ಟ.

मदख़ूला, स्त्री. ಪ್ರವೇಶಿಸಲ್ಪಡುವ ವಸ್ತು; ಭಗದ್ವಾರ, ಯೋನಿ; ಇಟ್ಟುಕೊಂಡವಳು, ಉಪಪತ್ನಿ.

मदद, स्त्री. ಸಹಾಯ, ಒತ್ತಾಸೆ, ನೆರವು. ಸಹಕಾರ; ಒತ್ತಾಳು, ಚೆಂಗೂಲಿ; ಕೂಲಿ, ಮಜೂರಿ.

मददगार, पु. ಒತ್ತಾಸೆಗಾರ, ಸಹಾಯಗಾರ, ಸಹಾಯಕ.

मदन, पु. ಮನ್ಮಥ; ಕಾಮ; ನಗರ, ಪಟ್ಟಣ; ರಾಜನಗರ.

मदफ़न, पु. ಶವಗಳನ್ನು ಹೂಳುವ ಸ್ಥಳ

मदफ़ून, वि. ಹೂತಿಟ್ಟ; ಮುಚ್ಚಿಟ್ಟ; ನೆಲದೊಳಗಿನ; ಬಿದ್ದಿರುವ.

मदमत्त, मदमस्त, वि. ಮತ್ತೇರಿದ, ಮದಿಸಿದ, ಅಮಲೇರಿದ.

मदरसा, पु. ಪಾಠಶಾಲೆ, ವಿದ್ಯಾಲಯ.

मदरसाना, वि. ವಿದ್ಯಾಲಯದ; ಪಾಠಶಾಲೆಯ.

मदह, स्त्री. ಪ್ರಶಂಸೆ, ಹೊಗಳಿಕೆ.

मदहोश, वि. ಮದಿಸಿದ, ಅಮಲೇರಿದ.

मदाख़िल, स्त्री. ಪ್ರವೇಶ; ವರಮಾನ.

मदाख़िलत, स्त्री. ಹಸ್ತಕ್ಷೇಪ; ಹಿಡುವಳಿ, ಸ್ವಾಧೀನ.

मदार, पु. ಎಕ್ಕದ ಗಿಡ; ಆನೆ; ಠಕ್ಕ; ದಾರಿ, ಮಾರ್ಗ; ಅಸ್ಥ; ತಿರುಗುವ ಅಥವಾ ಹಿಂತಿರುಗುವ ಸ್ಥಳ; ನಡು, ಮಧ್ಯ, ಕೇಂದ್ರ; ಪರಿಧಿ; ಅಚ್ಚು, ಅಚ್ಚುಮರ; ಆಧಾರ, ಆಶ್ರಯ. दार मदार = ಆಶ್ರಯ, ಬೆಂಬಲ.

मदारिन, स्त्री. मदारी का स्त्री. रूप.

मदारिया, मदारी, पु. ಕೋತಿ ಅಥವಾ ಕರಡಿ ಆಡಿಸುವವ; ಗಾರಡಿಗಾರ; ಡೊಂಬ; ಫಕೀರ.

मदिया, स्त्री. ಸ್ತ್ರೀ ಜಾತಿ.

मदिरा, स्त्री. ಮದ್ಯ, ಸೇಂದಿ.

मद्द, स्त्री. ಹರಡುವಿಕೆ, ಹರವು, ವಿಸ್ತಾರ; ಬೆಳೆಸುವಿಕೆ, ವಿಳಂಬ; ಪೂರ, ನೆರೆ. मद्दे-नज़र = ದೃಷ್ಟಿಯ ಹರವು; ಕ್ಷಿತಿಜ;

ಕೃಪಾದೃಷ್ಟಿ, ಕಟಾಕ್ಷ; ಪ್ರೋತ್ಸಾಹ; ಕಣ್ಣಮುಂದೆ; ದೃಷ್ಟಿಯಲ್ಲಿ. मद्दे-नज़र रखना = ದೃಷ್ಟಿಯಲ್ಲಿಡು, ಗಣನೆಗೆ ತಂದುಕೊಳ್ಳು.

मद्दा, वि. ಅಗ್ಗವಾದ.

मद्दाह, पु. ಪ್ರಶಂಸಿಸುವವ, ಹೊಗಳುವವ.

मद्दाही, स्त्री. ಪ್ರಶಂಸೆ, ಹೊಗಳಿಕೆ.

मद्दे, क्रिवि. ಬಾಬ್ತು, ಸಲುವಾಗಿ; ಬಗ್ಗೆ.

मद्धम, वि. ಮಂದ, ಬಲು ನಿಧಾನ; ನಡುತರ, ಎಡತರ; ಹಿಂದುಳಿದ. मद्धम पड़ जाना = ಮಂದ ಬೀಳು; ಕಳೆಗುಂದು; ಬಾಡು; ಹಿಂದುಳಿ; ಮೂಲೆಗೆ ಬೀಳು.

मद्य, पु. ಸೇಂದಿ, ಹೆಂಡ.

मद्यनिषेध, पु. ಮದ್ಯಪಾನ ನಿರೋಧ.

मधायंद, स्त्री. ವಾಸನೆ, ನಾತ.

मधु, पु. ಜೇನುತುಪ್ಪ; ಮಾಧುರ್ಯ.

मधुमक्खी, स्त्री. ಜೇನು ನೊಣ.

मधुर, वि. ಮಧುರವಾದ, ಸಿಹಿಯಾದ; ಇಂಪಾದ.

मधुरता, स्त्री. ಮಾಧುರ್ಯ, ಇಂಪು.

मधुरिमा, स्त्री. ಸಿಹಿ, ಸವಿ; ಸೌಂದರ್ಯ.

मध्य, पु. ಮಧ್ಯ, ನಡು.

मध्यस्थ, पु. ಮಧ್ಯಸ್ಥಗಾರ.

मध्यस्थता, स्त्री. ಮಧ್ಯಸ್ಥಿಕೆ.

मध्ये, क्रिवि. ನಡುವೆ, ಮಧ್ಯೆ; ಸಲುವಾಗಿ, ಬಾಬ್ತು, ಬಗ್ಗೆ.

मन, पु. ಮನಸ್ಸು, ಚಿತ್ತ; ಅಭಿಲಾಷೆ. ಇಚ್ಛೆ; ನಿಯತ್ತು; ೪೦ ಸೇರಿನ ತೂಕ, ಮಣ. मन अटकना या उलझना= ಮನಸ್ಸೋಲಿ, ಮೋಹಗೊಳ್ಳು, ಪ್ರೀತಿ ಹುಟ್ಟು. मन के लड्डू खाना=ಮನದೊಳಗೆ ಮಂಡಿಗೆ ಮಾಡಿಕೊಳ್ಳು, ಮನೋರಾಜ್ಯ ಮಾಡು. मन चलना = ಇಚ್ಛಿಸು, ಬಯಸು. मन मारना = ಮನವನ್ನು ಅಡಗಿಸು, ನಿಗ್ರಹಿಸು; ತಾಳು. मन ललचाना = ಬಯಸು, ಕೊಸರು, ಹಾತೊರೆ.

मनई, पु. ಮನುಷ್ಯ, ಮನುಜ.

मनकना, अक्रि. ಅಲುಗಾಡು, ಬಳುಕು.

मनका, पु. ಮಣಿ, ತುಲಸಿ ಮಣಿ; ರುದ್ರಾಕ್ಷಿ; ಹೆಗ್ಗತ್ತಿನ ಮಣಿ, ಹೆಡಕು. मनका ढलना = ಗೋಣು ಮುರಿದು ಬೀಳು; ಮರಣ ಕಂಠಗತವಾಗು.

मनकूला, वि. ಚಲನಾತ್ಮಕ, ಚರ, ಜಂಗಮ (ಸೊತ್ತು).

मनकूहा, स्त्री. ಮದುವೆಯಾದವಳು, ಧರ್ಮಪತ್ನಿ, ಹೆಂಡತಿ.

मन-गढंत, वि. ಕಲ್ಪನೆಯ, ಕಪೋಲ ಕಲ್ಪಿತ. पु. ಕಲ್ಪಿತ ಕಥನ, ಕಪೋಲ ಕಲ್ಪನೆ, ಕಟ್ಟು ಪುರಾಣ.

मनगढ़ा, वि. ಬಲಿಷ್ಠ, ಬಲಯುತ.

मनघटा, पु. ಬಾವಿಯ ಕೈಪಿಡಿ ಗೋಡೆ.

मनचला, वि. ಸಾಹಸಿ; ಧೀರ; ಉತ್ಸುಕ.

मनचली, स्त्री. ಉತ್ಸುಕತೆ, ಮುಂತುವರ್ಜಿ; ಧೀರತೆ; ಹುಚ್ಚು, ಪೈತ್ಯ.

मनचाहा, मनचीता, वि. ಇಚ್ಛಿಸಿದ, ಅಪೇಕ್ಷಿಸಿದ, ವಾಂಛಿತ, ಹಾರೈಸಿದ.

मनचाही, स्त्री. ಹಟ, ಮುಷ್ಕರ.

मनज़र, पु. ಮುಖ; ದೃಶ್ಯ, ನೋಟ.

मनत, स्त्री. ಒಪ್ಪಿಕೆ, ಅಂಗೀಕಾರ.

मनन, पु. ಮನನ, ಧ್ಯಾನ, ಚಿಂತನೆ.

मननाना, अक्रि ಝೇಂಕರಿಸು, ಮೊರೆ.

मनभाता, मनभाया, मनभावता, मनभावन, वि. ಮನ ಒಪ್ಪಿದ, ಪಸಂದಾದ, ರಮ್ಯ; ಮೆಚ್ಚಿನ; ಇನಿಯ.

मनमानता, मनमाना, वि. ಇಷ್ಟಪಡುವ, ಮನಸ್ಸು ಮೆಚ್ಚಿದ, ಪಸಂದಾದ, ಮನಸೋ ಇಚ್ಛೆ. ಮನಸ್ವಿ.

मनमानी, स्त्री. ಮನಸ್ಸಿನ ಇಚ್ಛೆ.

मनमारा, वि. ದುಃಖಿತ, ವ್ಯಥಿತ.

मनमुटाव, पु. ಮನಸ್ತಾಪ, ವೈಮನಸ್ಯ.

मनमोदक, पु. ಮನೋರಾಜ್ಯ.

मनमोहन, वि. ಮನಸ್ಸನ್ನೆಳೆಯುವ, ಮನಮೋಹಕ, ಚಿತ್ತಾಕರ್ಷಕ; ಪ್ರಿಯ, ಮುದ್ದು.

मनमौज, स्त्री. ಸ್ವೇಚ್ಛಾಚಾರ, ನಿರಂಕುಶತ್ವ.

मनमौजी, वि. ತನ್ನಿಷ್ಟದಂತೆ ನಡೆಯುವವ, ಸ್ವೇಚ್ಛಾಚಾರಿ, ಸ್ವಚ್ಛಂದ; ವಿನೋದಪ್ರಿಯ, ಕುಶಾಲಿನವ.

मनवाना, सक्रि. **मनाना** का प्रे. रूप.

मनशा, स्त्री. = **मन्शा**.

मनसना, सक्रि. ಮನಸ್ಸು ಮಾಡು, ಸಂಕಲ್ಪ ಮಾಡು.

मनसब, पु. = **मन्सब**.

मनसाना, सक्रि. ಮನಸ್ಸು ಮಾಡಿಸು, ಸಂಕಲ್ಪ ಮಾಡಿಸು. अक्रि. ಉಲ್ಲಾಸಪಡು, ಹರ್ಷಿಸು.

मनसूबा, पु. = **मन्सूबा**.

मनस्ताप, पु. ಮನೋವ್ಯಥೆ; ಪಶ್ಚಾತ್ತಾಪ.

मनहाई, स्त्री. ನಿಷೇಧ, ನಿರೋಧ.

मनहारी, वि. ಮನಮೋಹಕ.

मनहू, क्रिवि. = **मानो**.

मनहूस, वि. ಅಶುಭ, ಅಮಂಗಲ; ಅವಲಕ್ಷಣವಾದ; ಕಳೆಗುಂದಿದ; ಅದೃಷ್ಟಹೀನ.

मनहूसियत, मनहूसी, स्त्री. ಅಶುಭ; ಅಮಂಗಳ; ಅವಲಕ್ಷಣ; ದುರದೃಷ್ಟ.

मना, वि. ಮನ್ನಾ ಮಾಡಿದ, ನಿಷಿದ್ಧಪಡಿಸಿದ, ನಿರೋಧಿಸಿದ, ವರ್ಜಿತ. **मना करना** = ನಿಷೇಧಿಸು, ಮನ್ನಾ ಮಾಡು, ತಡೆ, ನಿರೋಧಿಸು.

मनाक, मनाग, वि. ಸ್ವಲ್ಪ, ಕೊಂಚ.

मनादी, स्त्री. = **मुनादी**.

मनाना, सक्रि. ಒಪ್ಪಿಸು, ಸಮಜಾಯಿಸು; ಸಮಾಧಾನ ಹೇಳು; ನಂಬಿಸು, ಅನುನಯಿಸು; ಒಪ್ಪಗೊಳಿಸು, ಒಡಂಬಡಿಸು; ಮೆಚ್ಚಿಸು; ಸ್ತುತಿಸು, ಕೊಂಡಾಡು; ಯೋಚಿಸು, ಚಿಂತಿಸು.

मनाही, स्त्री. ನಿಷೇಧ, ತಡೆ, ನಿರೋಧ.

मनिया, स्त्री. ಮಣಿ, ತುಲಸಿ ಮಣಿ; ಜಪಮಾಲೆ; ಕಂಠಿ.

मनिहार, पु. ಬಳೆ ಮಾಡುವವ ಅಥವಾ ಮಾರುವವ, ಬಳೆಗಾರ.

मनिहारिन, स्त्री **मनिहार** का स्त्री. रूप.

मनिहारी, स्त्री. ಬಳೆಗಾರನ ಕೆಲಸ, ಬಳೆಗಾರಿಕೆ; ಬಳೆಗಾತಿ.

मनी, स्त्री. ರೇತಸ್ಸು, ಶುಕ್ಲ, ವೀರ್ಯ; ಅಹಂಕಾರ, ಅಹಂಭಾವ.

मनुष्य, पु. ಮನುಷ್ಯ, ಮಾನವ, ಮಂದಿ

मनुहार, वि. ವಶೀಕರಿಸುವ, ಒಲಿಸಿಕೊಳ್ಳುವ, ಮನೋಹರ. स्त्री. ಒಲಿಸಿಕೊಳ್ಳುವಿಕೆ, ಅನುನಯ, ನಂಬಿಸುವಿಕೆ, ಸಂತೈಸುವಿಕೆ; ಪ್ರೀತಿ, ಅಭಿಮಾನ

मनो, क्रिवि. = **मानो**.

मनोकामना, स्त्री. ಇಚ್ಛೆ, ಹಾರೈಕೆ.

मनोनीत, वि. ಪಸಂದಾದ, ವರಯಿಸಿದ; ಆರಿಸಿದ, ಚುನಾಯಿಸಿದ. मनोनीत करना = ಚುನಾಯಿಸು.

मनोरथ, पु. ಇಷ್ಟ, ಮನೋರಥ; ಬಯಕೆ, ಹಾರೈಕೆ.

मनोरा, पु. ಕಾರ್ತಿಕ ಮಾಸದಲ್ಲಾಗುವ ದೀಪೋತ್ಸವ, ದೀಪಾವಳಿ.

मनोरमा, **मनोहर**, वि. ಸುಂದರ; ರಮ್ಯವಾದ; ಸೊಬಗಿನ.

मनोहरता, स्त्री. ಸೊಬಗು, ರಮ್ಯತೆ.

मनौआ, पु. ಸವಿ ಮಾತಿನಿಂದ ನಂಬಿಸುವಿಕೆ, ಮನವೊಲಿಸುವಿಕೆ, ಅನುನಯ ವಿನಯ.

मनौती, स्त्री. ಹೊಣೆ, ಒಪ್ಪಿಕೆ; ಹರಕೆ.

मनौवल, स्त्री. ವೈಮನಸ್ಯ, ಮನಸ್ತಾಪ

मन्नत, स्त्री. ಒಪ್ಪಿಕೆ, ಸ್ವೀಕೃತಿ; ವಾಗ್ದಾನ; ಹರಕೆ, ಪ್ರಾರ್ಥನೆ; ವ್ರತ. मन्नत मानना = ಹರಕೆ ಹೊರು.

मन्शा, स्त्री. ಇಚ್ಛೆ, ಅಭಿಲಾಷೆ; ಅಭಿಪ್ರಾಯ; ಆಶಯ; ಭಾವ, ಇಂಗಿತ

मन्सब, पु. ಪದ, ಪದವಿ; ಹುದ್ದೆ, ಅಂತಸ್ತು; ಕೆಲಸ, ಉದ್ಯೋಗ.

मन्सबदार, वि. ಪದವೀಧರ; ಹುದ್ದೇದಾರ, ಉದ್ಯೋಗಸ್ಥ; ಅಧಿಕಾರಿ.

मन्सूख, वि. ತೆಗೆದುಹಾಕಿದ, ತಳ್ಳುಪಡಿಯಾದ; ವಜಾಮಾಡಿದ, ರದ್ದು.

मन्सूखी, स्त्री. ತೆಗೆದುಹಾಕೋಣ, ತಳ್ಳುಪಡಿ; ವಜಾ, ರದ್ದು.

मन्सूब, वि. ಸೇರಿದ; ಸಂಬಂಧಿಸಿದ; ಸಂಬಂಧಪಟ್ಟ; ಅನ್ವಯಿಸುವ; ನೇಮಕವಾದ, ನಿಯುಕ್ತ.

मन्सूबा, पु. ಯುಕ್ತಿ, ಹಂಚಿಕೆ, ಹೂಟ; ನಿರ್ಧಾರ, ನಿಶ್ಚಯ, ಸಂಕಲ್ಪ.

मपत, स्त्री. ಅಳೆಯುವಿಕೆ, ಅಳತೆ.

मपना, अक्रि. ಅಳೆಯಲ್ಪಡು, ಅಳೆ.

मपवाना, **मपाना**, सक्रि. ಅಳಸು, ಅಳತೆ ಮಾಡಿಸು.

मपान, पु. ಅಳತೆ, ಪ್ರಮಾಣ.

मफ़ऊल, **मफूल**, वि. ಕೆಲಸ ಮಾಡಲ್ಪಟ್ಟ. पु. ಕರ್ಮ (ಪದ).

मफ़्तून, वि. ಮುಗ್ಧ, ಅನುರಕ್ತ; ಕಾಮೋನ್ಮತ್ತ.

ममता, स्त्री. ವಾತ್ಸಲ್ಯ, ಅಕ್ಕರೆ; ಅಭಿಮಾನ, ಮಮತೆ

ममाई, स्त्री. ಸೂಲಗಿತ್ತಿಯ ಕೆಲಸ.

ममानी, स्त्री. ಸೋದರಮಾವನ ಹೆಂಡತಿ

ममिया, वि. ಸೋದರಮಾವನ; ಸೋದರಮಾವನಂತೆ ಸಂಬಂಧವುಳ್ಳ. ममिया ससुर = ಗಂಡ ಅಥವಾ ಹೆಂಡತಿಯ ಸೋದರಮಾವ, ಮಾವನ ಭಾವಮೈದ.

ममियाना, अक्रि. ಕುರಿಯಂತೆ ಅರಚು, ಚೀತ್ಕರಿಸು.

ममीरा, पु. ಕಣ್ಣಿನ ಔಷಧದ ಮೂಲಿಕೆ

ममेरा, वि. ಸೋದರಮಾವನ; ಸೋದರಮಾವನ ಕಡೆಯ ಸಂಬಂಧದ. ममेरा भाई = ಸೋದರಮಾವನ ಮಗ.

ममोला, पु. ಖಂಜರೀಟ, ಗವುಜುಹಕ್ಕಿ, ದಾಸರಿ ಹಕ್ಕಿ.

मय, स्त्री. ಹೆಂಡ, ಸಾರಾಯಿ, ಸೇಂದಿ. अव्य. ಸಹಿತ, ಸಹ, ಸಮೇತ, ನಿಶಿ.

मयकश, वि. ಹೆಂಡಕುಡುಕ.

मयकशी, स्त्री. ಮದ್ಯಪಾನ.

मयख़ाना, पु. ಹೆಂಡದಂಗಡಿ. ಪಠಖಾನೆ

मयस्सर, वि. ಸಿಕ್ಕಿದ, ದೊರೆತ; ಲಬ್ಧ; ಪ್ರಾಪ್ತ, ಸಿಗುವ; ಲಭ್ಯ. मयस्सर होना = ಪ್ರಾಪ್ತವಾಗು, ಸಿಗು, ದೊರಕು.

मया, स्त्री. ದಯೆ, ಕನಿಕರ, ಎರಕ.

मयारी, स्त्री. ಉಯ್ಯಾಲೆಯ ದೂಲ.

मयी, स्त्री. ಹಲುಬೆ, ಕುಂಟೆ; ಏಣಿ.

मयूर, पु. **मयूरी**, स्त्री. ನವಿಲು.

मय्यत, स्त्री. ಹೆಣ, ಶವ.

मरक, पु. ಸೋಂಕುರೋಗ, ಮಾರಿ.

मरकचा, पु. ಛಾವಣಿಯ ಬೆಂಕಟ್ಟು.

मरकज़, पु. ಮಧ್ಯ ಬಿಂದು, ಕೇಂದ್ರ; ನಾಭಿ, ಮಧ್ಯ; ಕೇಂದ್ರಸ್ಥಾನ.

मरकना, अक्रि. ನಜ್ಜುಗುಜ್ಜಾಗು, ನಜುಗು, ನೆಗ್ಗು; ತಿರಿಚಿಕೊಳ್ಳು.

मरकाना, सक्रि. ಜಜ್ಜು, ಚಚ್ಚು; ತಿರಿಚು.

मरक़ूम, **मरकमा**, वि. ಬರೆದ, ಲಿಖಿತ, "ಮರ್ಕುಂ".

मरकहा, **मरखना**, **मरखहा**, वि. ಹೊಡೆಯುವ ಅಥವಾ ಬಡಿಯುವ ಸ್ವಭಾವವುಳ್ಳ; ಕೊಂಬುಗಳಿಂದ ಇರಿಯುವ (ದನ), ಇರಕುಳಿ.

मरगल, पु. ಹುರಿದ (ಮೀನು).

मरगूब, वि. ರುಚಿಕರ; ಸುಂದರ; ಉತ್ತಮ.

मरग़ोल, **मरग़ोला**, पु. ಗುಂಗುರು ಗೂದಲು, ಸುಳಿಗೂದಲು; ಸ್ವರಕಂಪನ, ಅಲಗು, ಪಲುಕು.

मरघट, पु. ಸುಡುಗಾಡು, ಮಸಣ.

मरज़, पु. = **मर्ज़**.

मरजादा, पु. ಮರ್ಯಾದೆ, ಮಾನ; ಗೌರವ.

मरजिया, वि. ಸತ್ತು ಬದುಕಿದವ, ಮೃತಪ್ರಾಯನಾದ. पु. ಸಮುದ್ರದಲ್ಲಿ ಮುಳುಗುವವ.

मरज़ी, स्त्री. = **मर्ज़ी**.

मरण, पु. ಮರಣ, ಸಾವು.

मरदना, सक्रि. ನಾದು, ಮರ್ದಿಸು; ಉಜ್ಜು, ತಿಕ್ಕು.

मरदनिया, पु. ಮರ್ದಿಸುವವ, ಮೈ ತಿಕ್ಕುವವ, ಎಣ್ಣೆ ಒತ್ತುವವ.

मरदूआ, पु. ಮನುಷ್ಯ; ಪಿಳ್ಳೆ.

मरदूद, वि. ತಿರಸ್ಕೃತ, ನೀಚ; ಜಾತಿಗೆಟ್ಟವ, ಜಾತಿಭ್ರಷ್ಟ; ಅಧರ್ಮಿ.

मरनहार, **मरनहारा**, वि. ಸಾಯುವವ; ನಶಿಸುವ, ನಶ್ವರ.

मरना, अक्रि. ಸಾಯು, ಹತನಾಗು, ಮಡಿ; ನಾಶವಾಗು, ಅಳಿ. मर कटना,

मर मिटना = ಕೊಂದಾಡಿ ಸಾಯು; ಸಾಯು, ಮಡಿ; ಪಾಡುಪಡು, ದುಡಿ. मर पचना = ಸತ್ತು ಸುಣ್ಣವಾಗು.

मरनी, स्त्री. ಮೃತ್ಯು, ಸಾವು; ಮೃತ್ಯುಶೋಕ; ಗಾಸಿ.

मरफ़ा, पु. ಡೋಲು, ಭೇರಿ.

मरभुक्खा, मरभूखा, वि. ಹೊಟ್ಟೆಗಿಲ್ಲದೆ ಸಾಯುವವ, ಹೊಟ್ಟೆಗಿಲ್ಲದವ; ಅತ್ಯಾಶೆಯುವ, ಕ್ಷುಧಾತುರ; ಹೊಟ್ಟೆಬಾಕ, ತಿಂಡಿಬಾಕ.

मरमर, पु. ಅಮೃತಶಿಲೆ, ಹಾಲುಗಲ್ಲು, ಸಂಗಮರಾರು ಕಲ್ಲು स्त्री. (पु.) ಮರಮರ ಶಬ್ದ, ಮೊರೆತ.

मरमराना, अक्रि. ಮರಮರ ಶಬ್ದ ಮಾಡು, ಚಟಚಟ ಅನ್ನು, ಮೊರೆ.

मरम्मत, स्त्री. ಮುರಿದದ್ದನ್ನು ಸರಿಪಡಿಸುವಿಕೆ, ಕೆಟ್ಟುಹೋದುದನ್ನು ನೇರ್ಪಡಿಸುವಿಕೆ; ಜೀರ್ಣೋದ್ಧಾರ, ಮರಮ್ಮತ್ತು; ದಾಗುದುಜಿ, ರಿಪೇರಿ, ದುರಸ್ತು; ಸುಧಾರಣೆ, ತಿದ್ದುವಿಕೆ.

मरम्मती, वि. ಮರಮ್ಮತ್ತು ಮಾಡಿದ, ಸರಿಪಡಿಸಿದ; ಮರಮ್ಮತ್ತು ಆಗಬೇಕಾದ; ಹರಿಮುರಿಯಾದ; ಕೆಟ್ಟಿರುವ.

मरवाना, सक्रि. ಸಾಯಿಸು; ಕೊಲ್ಲಿಸು; ಹೊಡೆಸು; ವ್ಯಾಜ್ಯವನ್ನು ತಳ್ಳುಪಡಿ ಮಾಡು.

मरसा, पु. ಒಂದು ಸೊಪ್ಪು.

मरसिया, स्त्री. ಶೋಕಗೀತೆ, ಅಳಲು ಹಾಡು, ಸಾವು ಹಾಡು; ಗೋಳು.

मरहट, स्त्री. ಕಾಡುಕೆಸರು, ವನಮುದ್ಗ.

मरहटा, मरहठा, पु. ಮಹಾರಾಷ್ಟ್ರದವ, ಮರಾಠಿಯವ, ಅರೆಯುವ.

मरहठिन. स्त्री. ಮರಾಠಿಯವಳು.

मरहठी, वि. ಮಹಾರಾಷ್ಟ್ರದ, ಮರಾಠಿಯ. स्त्री. ಮರಾಠಿ ಭಾಷೆ, ಅರೆಭಾಷೆ. मरहठी घिसघिस = ಗಲಿಬಿಲಿ; ಹಾವಳಿ, ಅಧ್ವಾನ.

मरहम, पु. ಲೇಪ; ಮುಲಾಮು; ಔಷಧದ ಪಟ್ಟು. मरहम पट्टी = ಮುಲಾಮು ಪಟ್ಟಿ, "ಪ್ಲಾಸ್ತ್ರ"; ಘಾಯಕ್ಕೆ ಮುಲಾಮು ಹಚ್ಚಿ ಕಟ್ಟುವಿಕೆ; ಸರಿಪಡಿಸುವಿಕೆ, ದಾಗುದುಜಿ, ರಿಪೇರಿ, ಮರಮ್ಮತ್ತು.

मरहमत, स्त्री. ದಯೆ, ಕೃಪೆ मरहमत करना = ದಯಪಾಲಿಸು, ಕೊಡು.

मरहला, पु. ಯಾತ್ರೆಯಲ್ಲಿ ತಂಗುವ ಸ್ಥಳ, ಟಪ್ಪೆ, ಮಜಲು; ಪಾಳೆಯ, ಮೊಕ್ಕಾಂ; ಮಹಡಿ, ಅಂತಸ್ತು; ದರ್ಜೆ, ಇಯತ್ತೆ; ತೋಪುಖಾನೆ, ಬತ್ತೇರಿ.

मरहून, वि. ಅಡವಿಟ್ಟ, ದೀಡಿಟ್ಟ.

मरहूम, वि. ಭಗವಂತನ ಕೃಪೆಗೆ ಪಾತ್ರನಾದವ, ದೈವಾನುಗ್ರಹ ಪಡೆದವ; ದಿವಂಗತ, ಸ್ವರ್ಗೀಯ.

मरात, स्त्री. ಹೆಂಗಸು, ಸ್ತ್ರೀ.

मरातिब, पु. ಪದ, ದರ್ಜೆ; ಅವಸ್ಥಾನ; ಅಂತಸ್ತು; ಮಹಡಿ; ಬಾವುಟ, ಧ್ವಜ.

मराना, सक्रि. ಕೊಲ್ಲಿಸು, ಸಾಯಿಸು.

मरायल, वि. ಏಟು ತಿಂದವ, ಪೆಟ್ಟು ತಿಂದವ. पु. ಪೆಟ್ಟು; ಹಾನಿ; ನಷ್ಟ.

मराळ, पु. ಹಂಸ; ಬಾತು.

मरियम, स्त्री. ಕನ್ಯೆ, ಕುಮಾರಿ.

मरियल, वि. ಅರ್ಧ ಸತ್ತ; ನಿರ್ಜೀವ; ನಿರ್ಬಲ, ಬಡಕಲ; ಸೋಮಾರಿ, ಅಲಸ.

मरी, स्त्री. ಸೋಂಕು ರೋಗ, ಮಾರಿ; ಪ್ಲೇಗು; ಅರಿಷ್ಟ, ಈತಿಬಾಧೆ.

मरीख़, पु. ಅಂಗಾರಕ, ಕುಜ.

मरीज़, वि. ಕಾಯಿಲೆಯಾದ, ರೋಗ ಗ್ರಸ್ತ; ವ್ಯಾಧಿಸ್ಥ, ರೋಗಿ.

मरु, पु. ಮರುಭೂಮಿ, ಮರಳುಗಾಡು.

मरुआ, पु. ಮರುಗ, ಮರುವಕ; ಛಾವಣಿಯ ಬೆಂಕಟ್ಟಿನ ತೊಲೆ, ಬೆಂತೊಲೆ; ಉಯ್ಯಾಲೆಯ ದೂಲ.

मरुभूमि, स्त्री. **मरुस्थल**, पु. ಮರುಭೂಮಿ, ಮಳಲುಗಾಡು.

मरोड़, पु. ಹೊಸೆಯುವಿಕೆ, ತಿರುವುವಿಕೆ; ಸುತ್ತು, ತಿರುವು; ಮುರಿಗೆ, ಮುಡುಕು; ನುಲಿಕೆ; ಹೊಟ್ಟೆ ಕಡತ, ಹೊಟ್ಟೆ ನುಲಿ; ಮರುಕ, ಹುರಿ; ಸೆಡೆತ, ಬಿಗುಮಾನ; ಸೆಡಕು, ಜಂಭ.

मरोड़ना, सक्रि. ತಿರುಗಿಸು, ತಿರುವು; ತಿರಿಚು, ಮುರಿಚು, ಮುರಿ; ಹುರಿ ಮಾಡು, ಹೊಸೆ; ನುಲಿ, ಹಿಂಡು; ಹಂಬಲಿಸು, ಹಾತೊರೆ; ನುಂಗು.

मरोड़फली, स्त्री. ಹೊಟ್ಟೆ ಕಡತಕ್ಕೆ ಔಷಧವಾಗುವ ಒಂದು ಬಿತ್ತ.

मरोड़ा, पु. ಮುರಿಗೆ, ತಿರುವು ಮುರುವು; ನುಲಿ; ಹೊಟ್ಟೆ ಕಡತ, ಹೊಟ್ಟೆ ನುಲಿ.

मरोड़ी, स्त्री. ಮುರಿಗೆ; ತಿರುವು ಮುರುವು. मरोड़ी करना = ಎಳದಾಡು.

मरोह, स्त्री. ಪ್ರೀತಿ; ಮರುಕ, ಕನಿಕರ.

मरोही, वि. ಕೃಪಾಲು, ದಯಾಲು.

मर्ग, पु. ಸ್ವರ್ಗಯಾತ್ರೆ, ಮರಣ.

मर्ज़, पु. ವ್ಯಾಧಿ, ರೋಗ, ಬೇನೆ; ಮಂದ, ಜಾಡ್ಯ; ದುರಭ್ಯಾಸ, ಚಟ, ದುರ್ವ್ಯಸನ.

मर्ज़ी, स्त्री. ಇಚ್ಛೆ, ಇಷ್ಟ; ಖುಷಿ, ಮರ್ಜಿ, ಚಿತ್ತ.

मर्तबा, पु. ಪದವಿ, ಹುದ್ದೆ; ಅಂತಸ್ತು, ದರ್ಜೆ; ತಡವೆ, ಸಾರ; ವೇಳೆ, ಸಂದರ್ಭ.

मर्तबान, पु. ಮಣ್ಣಿನ ಬರಣಿ, ಜಾಡಿ.

मर्द, पु. ಪುರುಷ, ಗಂಡಸು; ವೀರ; ಗಂಡು; ಗಂಡ.

मर्दकार, वि. ವೀರಪುರುಷ, ಆಕೆವಾಳ.

मर्दक, पु. ಸಣ್ಣ ಮನುಷ್ಯ; ನೀಚ, ಲುಚ್ಚ.

मर्दन, पु. ಉಜ್ಜುವಿಕೆ, ಮರ್ದನ.

मर्दानगी, **मर्दी**, स्त्री. ಗಂಡಸುತನ, ಪೌರುಷ; ಶೌರ್ಯ, ಸಾಹಸ.

मर्दाना, वि. ಪುರುಷನ, ಗಂಡು; ವೀರ, ಸಾಹಸಿ; ಮನೆಯಲ್ಲಿ ಗಂಡಸರಿರುವ ಸ್ಥಳ, ಗಂಡಸರು ಇರುವ ನಿಟ್ಟು.

मर्दानी, स्त्री. ವೀರನಾರಿ; ಧೀರಳು; ಗಂಡುಬೀರಿ.

मर्दुम, पु. ಮನುಷ್ಯ; ಮಂದಿ, ಜನ; ಪುರುಷ, ನರ. मर्दुम शुमारी = ಖಾನೇಶುಮಾರಿ, ಜನಗಣತಿ, ಜನಸಂಖ್ಯೆ.

मर्दुमक, स्त्री. ಕಣ್ಣುಪಾಪ, ಕನೀನಿಕೆ.

मर्दुमी, स्त्री. ಗಂಡಸುತನ, ಪೌರುಷ; ಮನುಷ್ಯತನ; ಔದಾರ್ಯ; ಸೌಜನ್ಯ.

मर्म, पु. ರಹಸ್ಯ, ಗುಟ್ಟು; ಗೂಢಾರ್ಥ; ಗುಪ್ತಸ್ಥಾನ; ಪ್ರಾಣಸ್ಥಾನ, ಹೃದಯ.

मर्म-भेदी, मर्म-स्पर्शी, वि. ಹೃದಯವನ್ನು ಚುಚ್ಚುವ, ಹೃದಯವಿದಾರಕ.

मर्याद, स्त्री. ಮರ್ಯಾದೆ; ರೀತಿ, ಸಂಪ್ರದಾಯ; ಬೀಗರ ಔತಣ.

मर्यादा, स्त्री. ಮರ್ಯಾದೆ, ಗೌರವ; ಮಾನ, ಮಟ್ಟು; ಮೇರೆ, ಗಡಿ; ದಡ; ಧರ್ಮ.

मलंग, पु. ಮುಸಲ್ಮಾನೀಯ ಸಂತ, ಯೋಗಿ; ದಾಂಡಿಗ, ದಡಿಯ.

मलंगी, पु. ತೊರೆಯ, ಉಪ್ಪಲಿಗ. स्त्री. ಒನಪುಗಾತಿ, ಬಿನ್ನಾಣಗಿತ್ತಿ.

मल, पु. ಮಲ; ಮೈಲಿಗೆ, ಕೊಳಕು.

मलऊन, वि. ಶಾಪಗ್ರಸ್ತ, ಪಾಪಿ; ಭ್ರಷ್ಟ

मलक, पु. ದೇವದೂತ, ದೇವತೆ

मलकना, अक्रि. ಜಗ್ಗು ಹಾಕುತ್ತ ನಡೆ.

मलका, पु. ತೀಕ್ಷ್ಣ ಬುದ್ಧಿ, ಮತಿ, ಪ್ರತಿಭೆ. स्त्री. ರಾಣಿ, ಪಟ್ಟದರಸಿ.

मलख़, पु. ಮಿಡಿತೆ, ಶಲಭ.

मलखंभ, मलखम, पु. ಗಾಣದ ಕಡೆ; ಕಸರತ್ತು ಮಾಡಲು ನೆಟ್ಟಿರುವ ಕಂಬ; ಕಂಬದ ಮೇಲೆ ಹತ್ತಿ ಇಳಿದು ಮಾಡುವ ಕಸರತ್ತು.

मलगजा, वि. ಜಜ್ಜಿದ, ನಜ್ಜುಗುಜ್ಜಾದ; ಬಜ್ಜಿಯಾದ. पु. ಬದನೇಕಾಯಿ ಬೋಂಡ, ಬಜ್ಜಿ.

मलगोबा, पु. ಕರುಳುಗಳು; ಹುಣ್ಣಿನಿಂದ ಬಸಿಯುವ ಕೊಳೆನೀರು, ಲಸಿಕೆ; ಮಲ, ಕೊಳೆ; ಕಸಕಡ್ಡಿ; ಒಂದು ವ್ಯಂಜನ.

मलती, स्त्री. ಒಕರಿಕೆ, ಉಬ್ಬಳಿಕೆ.

मलन, पु. ಉಜ್ಜುವಿಕೆ; ಹಿಸುಕುವಿಕೆ.

मलना, सक्रि. ತಿಕ್ಕು, ಉಜ್ಜು; ಸೀಟು, ಒರೆಸು; ಹಿಸುಕು; ನೀವು, ಮಾಲೀಸು ಮಾಡು; ಹೊಸಗು, ಹಿಂಡು. दलना मलना = ಉಜ್ಜು; ಇಡಿ, ಅರೆದು ಪುಡಿ ಮಾಡು.

मलबा, पु. ಕಸಕಡ್ಡಿ, ತಿಪ್ಪೆ; ಇಡಿದ ಗೋಡೆಯ ಇಟ್ಟಿಗೆ ಮಣ್ಣು ಆದಿ.

मलबूस, वि. ಧರಿಸಿದ. पु. ವಸ್ತ್ರ, ಬಟ್ಟೆ.

मलमल, स्त्री. ಮಲ್ಲುಬಟ್ಟೆ, ಮಾಲ್ಮಲ್

मलमला, वि. ಉಪ್ಪಾದ, ಕ್ಷಾರ; ದುಃಖಪಡುವ; ಪಶ್ಚಾತ್ತಾಪ ಪಡುವ.

मलमलाना, सक्रि. ತಿರುಗಿ ತಿರುಗಿ ಆಲಿಂಗನ ಮಾಡು, ತಬ್ಬಿಕೊಳ್ಳು; ಪಶ್ಚಾತ್ತಾಪ ಪಡು.

मलमेट, वि. = मलियामेट.

मलवाई, स्त्री. ಉಜ್ಜುವುದಕ್ಕೆ ಅಥವಾ ನೀವುವುದಕ್ಕೆ ಕೊಡುವ ಕೂಲಿ.

मलवाना, सक्रि. मलना का प्रे. रूप.

मलवैया, पु. ಉಜ್ಜುವವ, ತಿಕ್ಕುವವ, ಒರೆಸುವವ.

मलहम, पु. = मरहम.

मलाई, स्त्री. ಹಾಲಿನ ಕೆನೆ, ಮಲಾಯಿ; ಸಾರ; ಉಜ್ಜುವಿಕೆ, ತಿಕ್ಕುವಿಕೆ; ಕುದುರೆಯ ಕೂದಲನ್ನು ಉಜ್ಜುವಿಕೆ, ಮಾಲೀಸು; ಉಜ್ಜುವುದರ ಕೂಲಿ.

मलाका, स्त्री. ಕಾಮುಕಿ, ಒನಪುಗಾತಿ.

मलाना, सक्रि. ಉಜ್ಜಿಸು, ತಿಕ್ಕಿಸು; ಹುಡಿ ಮಾಡಿಸು, ಬೀಸಿಸು.

मलामत, स्त्री. ತೆಗಳಿಕೆ, ಜರಿಯುವಿಕೆ;

ನಿಂದೆ; ಅಪವಾದನೆ; ನಿಕೃಷ್ಟಾಂಶ लानत मलामत = ಜರೆದಾಟ, ನಿಂದೆ.
मलामती, वि. ನಿಂದ್ಯ, ನಿಕೃಷ್ಟ.
मलार, पु. ಮಳೆಗಾಲದಲ್ಲಿ ಹಾಡುವ ಗೀತ मलार गाना = ಹರ್ಷಚಿತ್ತನಾಗಿ ಹಾಡು
मलाल, पु. ಆಯಾಸ, ದಣಿವು; ದುಃಖ; ವಿಷಾದ, ವ್ಯಸನ; ಬೇಸರ, ಚಿಟ್ಟು.
मलावरोध, पु. ಮಲಬಂಧ, ಮಲ ಕಟ್ಟುವುದು, ಮಲಬದ್ಧತೆ.
मलाहत, स्त्री. ಅಂದ, ಲಾವಣ್ಯ.
मलिक, पु. ರಾಜನು; ಅಧಿಪತಿ.
मलिका, स्त्री. ಪಟ್ಟದರಸಿ, ರಾಣಿ.
मलिन, वि. ಕೊಳೆಯಾದ, ಮಲಿನ.
मलिनता, स्त्री. ಕೊಳಕು, ಮಾಲಿನ್ಯ.
मलिनाना, अक्रि. ಕೊಳಕಾಗು, ಮಲಿನವಾಗು.
मलिया, स्त्री. ಎಣ್ಣೆಯ ಬಟ್ಟಲು, ಕುಡಿಕೆ
मलियामेट, वि. ಹಾಳಾದ, ಮಣ್ಣು ಪಾಲಾದ, ಪಾಳು.
मलीदा, पु. ತುಪ್ಪ ಅಥವಾ ಹಾಲು ಸಕ್ಕರೆ ಬೆರಸಿದ ಪೂರಿಯ ಚೂರು, ಮಾಲೀದಿ; ನಯವಾದ ಉಣ್ಣೆ ಬಟ್ಟೆ. वि. ಉಜ್ಜಿದ, ತಿಕ್ಕಿದ.
मलीन, वि. ಕೊಳೆಯಾದ, ಮಲಿನ.
मलीह, वि. ಉಪ್ಪಾದ; ಲಾವಣ್ಯವುಳ್ಳ.
मलूक, वि. ಚೆಲುವಾದ, ಸುಂದರ.
मलूल, वि. ಶೋಕಿಸುವ, ದುಃಖಿತ.
मलेरंज, वि. ಐದು ವರ್ಷದ; ಹತ್ತು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ; ವಯಸ್ಸಾದ, ವೃದ್ಧ.
मलैया, पु. ಮಣ್ಣಿನ ಗಡಿಗೆ, ಕುಡಿಕೆ.
मलोला, पु. ದುಃಖ, ವ್ಯಥೆ; ವ್ಯಸನ, ದುಗುಡ; ಕಷ್ಟ; ಬಯಕೆ, ಗೀಳು.
मल्ल, पु. ಮಲ್ಲ, ಜಟ್ಟಿ, ಪೈಲವಾನ್.
मल्लार, पु. = मलार.
मल्लाह, पु. ಅಂಬಿಗ, ದೋಣಿಕಾರ, ನಾವಿಕ, ಮಾಲೀಮು; ತೊರೆಯು, ಉಪ್ಪಾರ.
मल्लाहिन, स्त्री. मल्लाह का स्त्री. रूप.
मल्लाही, वि. ಅಂಬಿಗನ, ನಾವಿಕರ. स्त्री. ನಾವಿಕನ ಕೆಲಸ; ದೋಣಿ ಬಾಡಿಗೆ, ನೋರು, ತರಪಣ್ಯ.
मल्हाना, **मल्हारना**, सक्रि. ತುಟಿ ಚಪ್ಪರಿಸು, ಮುದ್ದಾಡು, ಲಲ್ಲೆಗೈಯು.
मवाजिब, पु. ನಿಶ್ಚಿತಕಾಲದಲ್ಲಿ ದೊರೆಯುವ ನಿಯಮಿತವಾದ ವೊಬಲಗು; ಸಂಬಳ, ತಲಬು, ವೇತನ.
मवाद, पु. ತತ್ವಗಳು, ಸಾರ; ಗಲೀಜು; ಕೀವು.
मवास, पु. ಆಶ್ರಯಸ್ಥಾನ, ಆಶ್ರಯ; ಕೋಟೆ, ದುರ್ಗ.
मवाशी, **मवेशी**, स्त्री. ದನಕರು, ಚತುಷ್ಪದಿ, ಕಾಲ್ನಡೆ, ದನಗಂಟಿ, ಗೋಕಾಯಿ, ಜಾನುವಾರು.
मवेशीखाना, पु. ಕೊಟ್ಟಿಗೆ, ಹಟ್ಟಿ, ದೊಡ್ಡಿ, ರೊಪ್ಪ.
मशक, पु. ಮಶಕ, ಸೊಳ್ಳೆ. स्त्री. ನೀರು ತುಂಬುವ ಚರ್ಮದ ಚೀಲ ಬುದ್ದಲಿ, ಪಕಾಲಿ मशक हो जाना = ಸಂತೋಷದಿಂದ ಹಿಗ್ಗು, ಉಬ್ಬು.

मशक़्क़त, स्त्री. ಕಷ್ಟ, ಪಾಡು; ಪರಿಶ್ರಮ; ಪರಿಪಾಟಲಿ; ಧಾವತಿ, ಮೆಹನತ್ತು.

मशगला, पु. ವಿನೋದ, ಮನೋರಂಜನ.

मशग़ूल, वि. ಕಾರ್ಯನಿರತ; ತಲ್ಲೀನ, ನಿಮಗ್ನ.

मशरिक़, पु. ಪೂರ್ವ, ಮೂಡಲು.

मशरिक़ी, वि. ಪೂರ್ವದ, ಮೂಡಣ.

मशरू, पु. ಒಂದು ಬಗೆ ರೇಷ್ಮೆ ಬಟ್ಟೆ.

मशरूह, वि. ವ್ಯಾಖ್ಯಾನ ಮಾಡಿದ, ವಿವರಿಸಿದ; ಮೇಲೆ ಹೇಳಿದ, ಉಪರೋಕ್ತ.

मशवरा, मशविरा, पु. ಮಂತ್ರಾಲೋಚನೆ, ಮಂತಣ; ಮಸಲತ್ತು, ಫಿತೂರಿ.

मशहरी, स्त्री. = मसहरी.

मशहूर, वि. ವಿಖ್ಯಾತ, ಪ್ರಸಿದ್ಧ; ಪ್ರಕಟವಾದ, ಪ್ರಕಟಿಸಿದ.

मशाल, पु. ದೀವಟಿಗೆ, ಹಿಲಾಲು, ಪಂಜು, ಕಕ್ಕಡ, ಮಷಾಲು, ದೊಂದೆ.

मशालचिन, स्त्री. "मशालची" का स्त्री. रूप.

मशालची, पु. ಪಂಜುಗಾರ, ದೀವಟಿಗ.

मशीन, पु. ಯಂತ್ರ, ಯಂತ್ರೋಪಕರಣ.

मशीयत, स्त्री. ಬಯಕೆ; ಇಚ್ಛೆ; ಇಷ್ಟ.

मशूर, वि. ಮರುಳಾದ, ವಶೀಭೂತ.

मश्क़, स्त्री. ನೀರು ತುಂಬುವ ಚರ್ಮದ ಚೀಲ, ಬುದ್ದಲಿ, ಪಕಾಲಿ; ಈಜುಬುರುಡೆ, ಈಜುಗಾಯಿ.

मश्क़, पु. ಹೊಡೆಯುವಿಕೆ, ಬಡಿಯುವಿಕೆ; ಹರಿಯುವಿಕೆ, ಸೀಳುವಿಕೆ; ಬರೆಯುವಿಕೆ, ಬರಹ, ಲೇಖನ; ಮಾದರಿ, ನಮೂನೆ; ಅಭ್ಯಾಸ, ಪಾಠ, ರೂಢಿ.

मश्शाक़, वि. ಅಭ್ಯಾಸವುಳ್ಳವ; ದಕ್ಷ, ನಿಷ್ಣಾತ.

मश्शाक़ी, स्त्री. ಅಭ್ಯಾಸ, ಬಳಕೆ.

मश्शाता, मश्शाती, स्त्री. ಕೂದಲು ಬಾಚುವವಳು, ಚೇಟಿ, ತೊತ್ತು; ಮದುವೆ ಮಾಡಿಸುವ ಮಧ್ಯಸ್ಥಗಾತಿ.

मष, स्त्री. ನಿಶ್ಶಬ್ದತೆ, ಮೌನ. मष मारना = ಸುಮ್ಮನಿರು, ಮೌನತಾಳು.

मस, पु. ಸ್ಪರ್ಶ. स्त्री. ಮೀಸೆ ಮೊಳೆಯುವ ಮೊದಲು ತುಟಿಯ ಮೇಲಿರುವ ಕೂದಲು, ಎಳೆ ಮೀಸೆ, ಮೊಗರು ಮೀಸೆ, ಚಿಗುರು ಮೀಸೆ. मसें भींगना या भींजना = ಮೊಗರು ಮೀಸೆ ಹೊರಡು; ಪ್ರಾಯಕ್ಕೆ ಬರು.

मसक, पु. ಮಶಕ, ಸೊಳ್ಳೆ. स्त्री. ಸೀಳುವಿಕೆ, ಹರಿಯುವಿಕೆ; ಮುರಿಯುವಿಕೆ.

मसकन, पु. ಮನೆ, ಗೃಹ.

मसकना, अक्रि. ಹರಿ, ಸೀಳು, ಹಿಸಿ, ಬಿರಿ. सक्रि. ಹರಿ, ಸೀಳು; ತುಂಡಿಸು; ಒತ್ತು.

मसक़ला, पु. ಸಾಣೆ ಕಲ್ಲು; ಸಾಣೆ; ಸಾಣೆ ಹಿಡಿಯುವಿಕೆ.

मसका, पु. ಬೆಣ್ಣೆ; ಸುಣ್ಣ; ಹರಕು, ಸೀಳು; ಬಿರುಕು.

मसकाना, सक्रि. ಹರಿ, ಸೀಳು, ಸಿಗಿ.

मसकोरा, पु. ನಿದ್ರಿಸುವಾಗ ಮಗ್ಗುಲು ಬದಲಾಯಿಸುವಿಕೆ. मसकोरा मारना

= ಮಗ್ಗಲು ಬದಲಾಯಿಸು

मसख़रा, पु. ಹಾಸ್ಯಗಾರ, ವಿದೂಷಕ, ಸಬ್ಬವಕಾರ, ನಕಲಿಯವ.

मसख़रापन, पु. **मसख़री**, स्त्री. ಗೇಲಿ, ತಮಾಷೆ, ನಕಲಿ, ಪರಿಹಾಸ.

मसजिद, स्त्री. ಪ್ರಾರ್ಥನೆಯ ಸ್ಥಳ, ಮಸೀದಿ, ಪಳ್ಳಿ, ಮಶೀದೆ, ದರಗ.

मसदर, पु ಮೂಲಸ್ಥಾನ, ಉದ್ಗಮ; ಮೂಲಶಬ್ದ, ಧಾತು; ಕ್ರಿಯಾಪದದ ಭಾವಾರ್ಥ ರೂಪ.

मसनद, स्त्री. ದೊಡ್ಡದಿಂಬು, ಲೋಡು, ಕೌಳುಡೆ; ಮೆತ್ತೆಯ ಕುರ್ಚಿ, ಪಲ್ಲಂಗ; ಗದ್ದುಗೆ, ಗಾದಿ, ಪಟ್ಟವಣೆ; ಆಧಾರ

मसनद-नशीन, वि. ಸಿಂಹಾಸನಾರೂಢ; ಪಟ್ಟವನ್ನೇರಿದವ. पु. ದೊರೆ, ಅರಸ.

मसनदी, वि. ಸಿಂಹಾಸನದ.

मसनवी, स्त्री. ಒಂದು ಬಗೆ ಕವನ.

मसना, सक्रि. = **मसलना**.

मसमसाना, अक्रि. ಹೆದರಿಕೆಯಿಂದ ತನ್ನ ಅಭಿಪ್ರಾಯಗಳನ್ನು ಮುಚ್ಚಿಟ್ಟು ಕೊಂಡು ಬೆಲ್ಲದಂಥ ಮಾತನಾಡು.

मसमुंद, पु. ಧಕ್ಕಾಮುಕ್ಕಿ, ನುಗ್ಗಾಟ.

मसरफ़, पु. ಪ್ರಯೋಗ, ಬಳಕೆ, ಉಪಯೋಗ; ಖರ್ಚು, ವೆಚ್ಚ; ಬೆಲೆ.

मसरा, पु. ಕೆಳಕ್ಕೆ ತಳ್ಳುವಿಕೆ.

मसरूक़, वि. ಕದ್ದ, ಕಳುವಿನ(ಮಾಲು)

मसरूफ़, वि. ಬದಲಾಯಿಸಿದ, ವೆಚ್ಚವಾದ, ಖರ್ಚಾದ, ಬಳಸಿದ; ನಿರತ; ತಲ್ಲೀನ, ಕಾರ್ಯಮಗ್ನ.

मसरूर, वि. ಪ್ರಸನ್ನ, ಹರ್ಷಿತ.

मसरूरी, स्त्री. ಪ್ರಸನ್ನತೆ, ಹರ್ಷಚಿತ್ತ.

मसल, स्त्री. ಕತೆ; ಹೇಳಿಕೆ; ಗಾದೆ, ಸಾಮತಿ; ಲೋಕೋಕ್ತಿ; ದೃಷ್ಟಾಂತ; ಸ್ಥಾನ; ವಿಭಾಗ.

मसलन्, क्रिवि. ಉದಾಹರಣೆಗಾಗಿ, ದೃಷ್ಟಾಂತಕ್ಕೆ, ಉದಾಹರಣಾರ್ಥ; ಮಸಲಾ.

मसलना, सक्रि. ತಿಕ್ಕು, ಹೊಸಗು; ಹಿಂಡು, ಹಿಸುಕು; ನಾದು, ಮರ್ದಿಸು.

मसलहत, स्त्री. ಒಳ್ಳೆಯದು, ಕ್ಷೇಮ; ಒಳ್ಳೆಯ ಉಪಾಯ, ಯುಕ್ತಿ; ಸಲಹೆ; ಮಸಲತ್ತು.

मसला, पु. ಪ್ರತೀತಿ, ಮತ; ಸೂಕ್ತಿ; ವಿಚಾರಣೀಯ ವಿಷಯ, ಸಮಸ್ಯೆ.

मसलूब, वि. ಹಿಡಿಯಲ್ಪಟ್ಟ; ಕಸಿದುಕೊಳ್ಳಲ್ಪಟ್ಟ; ಲೂಟಮಾಡಿದ; ಶೂಲಕ್ಕೇರಿಸಿದ, ಗಲ್ಲಿಗೇರಿಸಿದ.

मसविदा, पु. ಕರಡು ಬರವಣಿಗೆ, ಕರಡು ಪ್ರತಿ, ಚಿತ್ತು ನಕಲು; ಕಾಯಿದೆಯ ಕರಡು, ಮಸೂದೆ; ಉಪಾಯ, ಹಂಚಿಕೆ, ಯುಕ್ತಿ.

मसहरी, स्त्री. ಸೊಳ್ಳೆ ಪರದೆ, ಸೊಳ್ಳೆ ತೆರೆ; ಸೊಳ್ಳೆ ಪರದೆ ಕಟ್ಟಿದ ಮಂಚ.

मसा, पु. ಸೊಳ್ಳೆ; ನರೋಲಿ, ಹಾಲುಣ್ಣೆ

मसान, पु. ಸ್ಮಶಾನ, ಮಸಣ, ಸುಡುಗಾಡು; ಪಿಶಾಚಿ, ದೆವ್ವ; ಕೈಕಾಲು ಸೆಳೆತ

मसाना, पु. ಮೂತ್ರಕೋಶ, ಉಚ್ಚೆ ಚೀಲ, ವಸ್ತಿ.

मसानिया, पु. ಸ್ಮಶಾನರಕ್ಷಕ; ದೆವ್ವ

ಬಿಡಿಸುವವ.

मसानी, स्त्री. ಪಿಶಾಚಿನಿ.

मसार, पु. ಮರಕತ, ಪಚ್ಚೆ.

मसालह, मसाला, पु. ಸಾಮಗ್ರಿ, ಸೋಪಸ್ಕರ, ಸಾಧನ; ಕಾರಣ ಸಾಮಗ್ರಿ, ಘಟಕಪದಾರ್ಥ; ಸಂಬಾರದ ಸಾಮಾನು, ಗರಂ ಮಸಾಲೆ, ಗಂಧ ಸರಕು; ಎಣ್ಣೆ, ತೈಲ; ಬಾಣಬಿರುಸು.

मसालेदार, वि. ಸಂಬಾರದ; ಕಾರದ.

मसि, मसी, स्त्री. ಮಸಿ, ಶಾಯಿ; ಕಾಡಿಕಪ್ಪು.

मसिदानी, स्त्री. ಮಸಿಬುರುಡೆ, ಶಾಯಿಕುಡಿಕೆ.

मसियाना, अक्रि. ಕುಂದು, ನೆರೆ.

मसीद, स्त्री. =मसजिद.

मसीन, पु. ಒಂದು ಬಗೆ ಹುರುಳಿ.

मसीना, पु. ಅಗಸೆ ಬೀಜ; ಜೋಳ.

मसीह, मसीहा, पु. ಏಸು ಕ್ರಿಸ್ತನು.

मसीही, वि. ಕ್ರಿಸ್ತನ, ಕ್ರೈಸ್ತ.

मसू, स्त्री. ಕಪ್ಪು, ತೊಂದರೆ.

मसूड़ा, पु. ವಸಡು, ಒಸಡು, ಞಗರು.

मसूर, पु. **मसूरा**, स्त्री. ಒಂದು ಬಗೆ ಬೇಳೆ, ಚಣಗಿ, ಚನ್ನಂಗಿ ಬೇಳೆ.

मसूरिका, मसूरी, स्त्री. ಮಸೂರಿಕೆ, ಸಿಡುಬು, ವೈಲಿ.

मसूस, मसूसन, मसोसन, स्त्री. ವ್ಯಥೆ; ಮರುಕ; ಸಂತಾಪ.

मसूसना, मसोसना, सक्रि. ಹಿಂಡು, ಹಿಸುಕು; ನುಲಿ, ತಿರಿಚು; ಅಡಗಿಸಿಡು. अक्रि. ವ್ಯಥೆಪಡು, ದುಃಖಿಸು, ಮರುಗು, ಕೊರಗು, ನೊಂದುಕೊಳ್ಳು.

मसेवरा, पु. ಮಾಂಸದ ವ್ಯಂಜನ.

मसौदा, पु. =मसविदा.

मस्त, वि. ಮದಿಸಿದ, ಅಮಲೇರಿದ, ಮತ್ತ; ಬೆದೆಗೊಂಡ; ಸೊಕ್ಕಿದ; ಕುಶಾಲಿನ, ಉಲ್ಲಾಸವುಳ್ಳ.

मस्तक, पु. ತಲೆ, ಮಸ್ತಕ; ಹಣೆ; ನೆತ್ತಿ.

मस्तगी, स्त्री. ಗೋಂದು, ಹಗಿನು.

मस्ताना, वि. ಮದೋನ್ಮತ್ತ, ಮದಿಸಿದ; ಮದದ, ಮತ್ತ; ಬೆದೆಗೊಂಡ. अक्रि. ಮತ್ತನಾಗು, ಮದಹತ್ತು; ನವೆಹತ್ತು; ತೀಟೆ ಹತ್ತು; ಬೆದೆಗೊಳ್ಳು. सक्रि. ಬೆದೆಗೊಳಿಸು.

मस्ती, स्त्री. ಮದ, ಮತ್ತು; ಸೊಕ್ಕು; ಮಸ್ತಿ, ಬೆದೆ, ಕಾಮೋದ್ದೀಪನ.

मस्तूद, वि. ಅದೃಷ್ಟವಂತ; ಸುಖಿ.

मस्तूर, वि. ಬರೆದ, ಲಿಖಿತ; ವರ್ಣಿಸಿದ; ಮೇಲೆ ಹೇಳಿದ, ಸದರಿ; ಗುಪ್ತ, ಮುಚ್ಚಿದ. स्त्री. ಮುಚ್ಚುಮರೆ, ಗುಪ್ತತೆ; ಸತೀತ್ವ; ಸಂಕೋಚ, ನಾಚಿಕೆ.

मस्तूरात, स्त्री. ಮಹಿಳೆಯರು, ವನಿತೆಯರು.

मस्तूल, पु. ಹಡಗಿನ ಪಟಸ್ತಂಭ, ಕೂವೆ ಮರ.

महंगा, वि. ಬೆಲೆಯೇರಿದ, ತಗ್ಗಾದ, ತುಟ್ಟಿ, ದುಬಾರಿ.

महंगाई, महंगी, स्त्री. ಬೆಲೆಯೇರುವಿಕೆ, ತಗ್ಗು, ತುಟ್ಟಿ; ಗೊಟ್ಟು, ಬರ; ಕತ್ವಾರ, ದುರ್ಭಿಕ್ಷ.

महंत, पु. ಮಠಾಧಿಪತಿ, ಮಹಂತ.

महतनी, स्त्री. ಮಠದ ಅಧಿಕಾರಿಣಿ, ಮಠಾಧ್ಯಕ್ಷೆ.

महताई, स्त्री. ಮಠಾಧಿಪತಿಯ ಕೆಲಸ ಅಥವಾ ಪದವಿ.

महक, स्त्री. ಸುಗಂಧ, ಪರಿಮಳ, ಕಂಪು, ಗಮಣ, ಸುವಾಸನೆ.

महकदार, वि. ಸುವಾಸನೆಯುಳ್ಳ.

महकना, अक्रि. ಪರಿಮಳಿಸು, ಮಗಮಗಿಸು.

महकमा, पु. ನ್ಯಾಯಸ್ಥಾನ, ಕಛೇರಿ; ವಿಭಾಗ, ಶಾಖೆ, ಖಾತೆ, ಇಲಾಖೆ.

महकान, स्त्री. ಸುವಾಸನೆ, ಪರಿಮಳ.

महकाना, सक्रि. ಸುಗಂಧ ಕೊಡು.

महकीला, वि. ಪರಿಮಳವುಳ್ಳ.

महकूम, वि. ಆಳಲ್ಪಟ್ಟ, ಶಾಸಿತ.

महज़, वि. ಶುದ್ಧ, ಬರಿಯ, ಮಾತ್ರ.

महजबीं, स्त्री. ಇಂದುಮುಖಿ.

महज़र, पु. ನಿರೂಪ; ಇಸ್ತಿಹಾರು ನಾಮೆ; ವರದಿ; ಮನವಿ, ಮಹಜರು.

महज़ूज़, वि. ಸಂತುಷ್ಟ, ಹರ್ಷಿತ.

महता, पु. ಮುಖಂಡ; ಗೌಡ, ಹೆಗ್ಗಡೆ; ಕಾರಕೂನ, ಶಾನುಭೋಗ. स्त्री. ಮಹತ್ವ, ಹಿರಿಮೆ.

महताब, पु. ಚಂದ್ರ; ಚಂದ್ರಿಕೆ, ಬೆಳದಿಂಗಳು; ಹಗಲುಬತ್ತಿ, ಮತಾಪು.

महताबी, वि. ಚಂದ್ರನ; ಬೆಳದಿಂಗಳಿನ; ಚಂದ್ರನಂತಹ. स्त्री. ಹಗಲುಬತ್ತಿ, ಮತಾಪು; ಚಂದ್ರಶಾಲೆ, ವಿಹಾರ ಮಂಟಪ; ಚಕ್ಕೋತದ ಹಣ್ಣು.

महतारी, स्त्री. ತಾಯಿ, ಅಮ್ಮ, ಅವ್ವ.

महती, स्त्री. ಮಹತ್ವ, ಹಿರಿಮೆ.

महतो, पु. = महता.

महत्व, पु. ಮಹತ್ವ, ಶ್ರೇಷ್ಠತೆ.

महदूद, वि. ಮೇರೆಹಾಕಿದ, ಪರಿಮಿತ; ಅರ್ಥನಿರ್ಣಯ ಮಾಡಿದ

महना, सक्रि. ತಡೆ, ಮಥಿಸು.

महफ़िल, स्त्री. ಸಭೆ, ಸದಸ್ಸು; ನಟನ ಸಭೆ, ಸದರು; ನಾಟ್ಯರಂಗ.

महफ़ूज़, वि. ಸುರಕ್ಷಿತವಾದ, ಭದ್ರ; ವಿನಾಯಿತಿ ಮಾಡಿದ; ಬಾಯಿಪಾಠ ಮಾಡಿದ, ಕಂಠಪಾಠ ಮಾಡಿದ.

महबत, स्त्री. = मुहब्बत.

महबूब, पु. ಪ್ರಿಯ, ಇನಿಯ.

महबूबा, पु. ಪ್ರಿಯೆ, ಇನಿಯಳು; ಸುಂದರಿ, ಚೆಲುವೆ.

महबूबाना, वि. ಪ್ರಿಯಳಂತಹ, ಪ್ರೇಮಿಕೆಯಂತಹ. पु. ಪ್ರೇಮಿಕೆ; ಪ್ರೇಮಿ.

महबूबियत, महबूबी, स्त्री. ಲಾವಣ್ಯ; ಸೊಬಗು; ರಮಣೀಯತೆ.

महबूस, वि. ಬಂದಾದ, ಮುಚ್ಚಿದ; ಬಂಧನದಲ್ಲಿರುವವ; ಸೆರೆಯಾಳು, ಕೈದಿ

महमंत, वि. ಮದ ಹಿಡಿದ, ಮತ್ತ.

महमह, क्रिवि. ಮಗಮಗಿಸುತ್ತ.

महमहा, वि. ಮಗಮಗಿಸುವ, ಸುಗಂಧಿತ

महमहाना, अक्रि. ಪರಿಮಳಿಸು, ಮಗಮಗಿಸು.

महमूद, वि. ಪ್ರಶಂಸಿತ; ಪ್ರಶಂಸನೀಯ

महमेज़, स्त्री. ಕುದುರೆಸವಾರರ ಹಿಮ್ಮಡಿ ಮುಳ್ಳು, ಮುಳ್ಳುಸಂಟಕ, ಮಮ್ರೋಜು

महर, पु. ಸ್ತ್ರೀಧನ, ತೆರವು; ಹೆಗ್ಗಡೆ,

ಜಮೀನುದಾರ, ಜಹಗೀರುದಾರ.

महरम, पु. ಮಿತ್ರ, ಸಖ; ಅಂತರಂಗ ಮಿತ್ರ, ಆಪ್ತ; (ಮುಹಮ್ಮದೀಯ) ಸ್ತ್ರೀಯರನ್ನು ಬುರುಕಿಯಿಲ್ಲದಿರುವಾಗ ನೋಡತಕ್ಕ ನಿಕಟ ಸಂಬಂಧದ ಗಂಡಸರು, (ತಂದೆ, ಚಿಕ್ಕಪ್ಪ, ಸೋದರಮಾವ, ಅಣ್ಣ ಮೊದಲಾದವರು); ಗುಟ್ಟನ್ನರಿತವ, ಮರ್ಮಜ್ಞ. स्त्री. ಸ್ತನಗಳನ್ನು ಮುಚ್ಚುವ (ಬಟ್ಟಲಿನ ಆಕಾರಕ್ಕೆ ಹೊಲಿದ)ರವಿಕೆಯ ಭಾಗ; ರವಿಕೆ, ಕುಪ್ಪಸ.

महरा, पु. ಮುಖಂಡ; ಪಲ್ಲಕ್ಕಿ ಹೊರುವವ, ಬೋಯಿ, ಹಮಾಲ.

महराज, पु. ಮಹಾರಾಜ, ದೊರೆ.

महराना, पु. ಜಮೀನುದಾರನ ನಿವಾಸ.

महराब, पु. = **मेहराब**.

महरि, स्त्री. ದೊರೆಸಾನಿ; ಯಜಮಾನಿ, ಒಡತಿ; ಒಂದು ಪಕ್ಷಿ

महरी, स्त्री. "महरा" का स्त्री. रूप.

महरूम, वि. ಇಲ್ಲದಿರುವ, ತಪ್ಪಿಸಿದ; ನಿಷೇಧಿಸಿದ; ರಹಿತ, ಅಭಾವದಲ್ಲಿರುವ; ನಿರ್ಭಾಗ್ಯ. महरूम रखना = ಇಲ್ಲದಂತೆ ಮಾಡು, ತಪ್ಪಿಸು.

महरेटा, पु. ಶ್ರೀಕೃಷ್ಣ.

महरेटी, स्त्री. ಕೃಷ್ಣಪ್ರಿಯೆ, ರಾಧೆ.

महल, पु. ಮನೆ, ಗೃಹ; ಅರಮನೆ, ಮಹಲು; ಸೌಧ, ಭವನ, ಹರ್ಮ್ಯ; ಅಂತಃಪುರ, ರಾಣಿವಾಸ; ರಾಣಿ, ಅರಸಿ; ಭೋಗಿನಿ, ಸಂದರ್ಭ, ಸಮಯ.

महलसरा, पु. ರಾಣಿವಾಸ, ಅಂತಃಪುರ; ಅಂತಃಪುರದ ಸೇವಕ.

महली, वि. ಅಂತಃಪುರದ. पु. ಅಂತಃಪುರದ ಸೇವಕ; ನಪುಂಸಕ, ಕೊಜ್ಜೆ.

महल्ला, पु. ನಗರದ ಒಂದು ಭಾಗ, ಮೊಹಲ್ಲ, ಕೇರಿ, "ವಾರ್ಡ್"; ಸೈನ್ಯ ಪರೀಕ್ಷೆ, ಅನೀಕದರ್ಶನ.

महल्लादार, पु. ಕೇರಿಯ ಮುಖ್ಯಸ್ಥ; ಝಾಡಮಾಲಿ, ಹಲಾಲಖೋರ.

महशर, पु. ಸಭೆ; ದೇವರ ಮುಂದೆ ಕರ್ಮ ವಿಚಾರಣೆಯ ದಿನ; ಪ್ರಳಯ.

महसिल, वि. ವಸೂಲು ಮಾಡುವವ.

महसूर, वि. ಮುತ್ತಲ್ಪಟ್ಟ, ಆವೃತ.

महसूल, पु. ತೆರಿಗೆ, ವರಿ, ಕರ; ಸಿದ್ಧಾಯ, ಕಂದಾಯ; ಸುಂಕ, ಹಾಸಲು; ನೋರು.

महसूलदार, वि. ಕಂದಾಯ ತೆರುವವ.

महसूली, वि. ತೆರಿಗೆ ಅಥವಾ ಹಾಸಲು ಕೊಡಬೇಕಾದ; ಕಂದಾಯ ಕೊಡತಕ್ಕ (ಜಮೀನು).

महसूस, वि. ಮನಗಂಡ, ಮಂದಟ್ಟಾದ; ಭಾವಗತ; ವೇದ್ಯ, ವಿದಿತ. महसूस करना = ಮನಗಾಣು, ತಿಳಿ; ಅನುಭವಿಸು.

महा, वि. ದೊಡ್ಡ; ಭಾರಿ; ಶ್ರೇಷ್ಠ. पु. ಮಜ್ಜಿಗೆ, ಅಳೆ, ತಕ್ರ.

महाकंद, पु. ಬೆಳ್ಳುಳ್ಳಿ; ಕುಂಟಗೆಣಸು.

महाई, स्त्री. ಮಥಿಸುವುದರ ಕೂಲಿ.

महाजन, पु. ದೊಡ್ಡ ಮನುಷ್ಯ; ಹಣವಂತ; ಲೇವಾದೇವಿ ಮಾಡುವವ, ಸಾಹುಕಾರ; ವರ್ತಕ, ವ್ಯಾಪಾರಸ್ಥ.

महाजनी, स्त्री. ಹಣಕಾಸಿನ ವ್ಯಾಪಾರ; ಲೇವಾದೇವಿ; ಸಾಹುಕಾರತನ; ಒಂದು ಬಗೆ ಮೋಡಿ ಅಕ್ಷರ.

महात्मा, पु. ಮಹಾತ್ಮ, ಮಹಾಪುರುಷ.

महामना, पु. ಸನ್ಮಾನ್ಯ, ಬ್ರಹ್ಮಶ್ರೀ.

महामाई, स्त्री. ದೊಡ್ಡಮ್ಮ, ಸಿಡುಬು.

महामारी, स्त्री. ಸೋಂಕುರೋಗ, ಅಂಟುಜಾಡ್ಯ, ಮಾರಿ.

महार, स्त्री. ಒಂಟೆಯ ಮೂಗುದಾರ; ಲಗಾಮು.

महारत, स्त्री. ಅಭ್ಯಾಸ; ನೈಪುಣ್ಯ.

महाराज, पु. ದೊಡ್ಡ ರಾಜ, ಮಹಾರಾಜ; ಅರಸ, ದೊರೆ; ಬ್ರಾಹ್ಮಣರಿಗೆ ಗೌರವಾರ್ಥದ ಶಬ್ದ; ಅಡಿಗೆ ಮಾಡುವ ಬ್ರಾಹ್ಮಣ, ಅಡಿಗೆ ಭಟ್ಟ.

महाराणा, पु. ರಾಜಪುತ್ರ ರಾಜರ ಬಿರುದು.

महाराणी, स्त्री. ಮಹಾರಾಣಿ, ಅರಸಿ

महाल, पु. ಮೊಹಲ್ಲ, ಪೇಟೆ, ಕೇರಿ; ಜಿಲ್ಲೆಯ ಒಂದು ವಿಭಾಗ, ಮಾಗಣೆ, ಮಹಾಲು; ಪಾಲು, ಹಿಸ್ಸೆ. वि. ಅಸಂಭವ, ಅಸಾಧ್ಯ.

महावट, स्त्री. ಮಾಘಮಾಸದ ಮಳೆ.

महावत, पु. ಆನೆ ನಡೆಸುವವ, ಮಾವುತ, ಮಾವಟಿಗ, ಜೋದ.

महावतनी, स्त्री. महावत का स्त्री. रूप.

महावर, पु. ಕೆಂಪರಗು, ಲಾಕ್ಷ; ಕಾಲುರಂಜಕ.

महावरा, पु. = मुहावरा.

महावरी, स्त्री. ಅರಗಿನ ಬಿಲ್ಲೆ

महाशय, पु. ಮಹಾಶಯ, ಮಹನೀಯ

महाशया, स्त्री. महाशय का स्त्री. रूप.

महियाउर, पु. ಬಕಾಳಭಾತು, ಮೊಸರನ್ನ, ದಧ್ಯೋದನ.

महिला, स्त्री. ಮಹಿಳೆ, ಕುಲಸ್ತ್ರೀ.

मही, स्त्री. ಭೂಮಿ, ದೇಶ. पु. ಮಜ್ಜಿಗೆ.

महीन, वि. ತೆಳ್ಳನೆಯ, ತೆಳು; ಜಿನುಗಾದ, ನುಣುಪಾದ; ಕೋಮಲ. पु. ರಾಜ, ದೊರೆ; ರಾಜಕುಮಾರ.

महीनपन, पु. ನುಣುಪು; ಸೂಕ್ಷ್ಮತೆ.

महीना, पु. ಮಾಸ, ತಿಂಗಳು, ಮಾಹೆ; ಮಾಸಾಶನ, ಸಂಬಳ, ತಲಬು; ರಜೋಧರ್ಮ, ಮುಟ್ಟು.

महुअर, पु. ಪುಂಗಿ ವಾದ್ಯ; ಮಾಟ, ಮೋಡಿ.

महुआ, पु ಹಿಪ್ಪೆಮರ, ಮಧೂಲ.

महेर, पु. ಜಗಳ, ಕಚ್ಚಾಟ

महेरा, पु. ಬಕಾಳ ಭಾತು, ದಧ್ಯೋದನ.

महेरी, स्त्री. ಮೊಸರನ್ನ, ಬಕಾಳ ಭಾತು; ರಾಗಿ ಮುದ್ದೆ. वि. ತಡೆಗಟ್ಟುವವ; ವಿಘ್ನ ತರುವವ.

महेला, पु. ಅರೆದ ಹುರುಳಿ ಕಾಳು.

महो, वि. ಮರೆತುಹೋದ; ಅಳಿಸಿದ; ತಲ್ಲೀನ, ನಿರತ.

महोछा, स्त्री. ದೊಡ್ಡ ಹಬ್ಬ; ಫಕೀರರ ಮರಣಾನಂತರ ಮಾಡುವ ಸಂತರ್ಪಣೆ.

महोत्सव, पु. ದೊಡ್ಡ ಜಾತ್ರೆ, ಮಹೋತ್ಸವ.

महोदय, पु. ಮಹಾಶಯ, ಸ್ವಾಮಿ.

महोदया, स्त्री. ಅಮ್ಮನವರು; ತಾಯಿ,

ಮಹಾತ್ಮ್ಯ.

महोला, पु. ನೆವ, ಸಬೂಬು; ಠಕ್ಕು, ಮೋಸ.

महोसा, पु. ಮುಚ್ಚು, ತಿಲಕ.

मां, स्त्री. ಅಮ್ಮ, ತಾಯಿ, ಮಾತೆ. मां जाया = ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ, ಸಗರ್ಭ್ಯ.

माई, स्त्री. ಸೋದರಮಾವನ ಹೆಂಡತಿ.

मांग, स्त्री. ಬೇಡುವಿಕೆ, ಯಾಚನೆ, ಮತಿ; ಬೇಡಿಕೆ, ಕೋರಿಕೆ; ಗಿರಾಕಿ, ಗ್ರಾಹಕ; ಬೈತಲೆ, ಪಾವಟಿ, ಸೀಮಂತ; ಹಡಗಿನ ಮುಂಭಾಗ, ಅಣಿಗೆ; ವಾಚಾದತ್ತ; ವಾಚಾದತ್ತ ಮಾಡಿರುವ ಕನ್ಯೆ. मांग पट्टी = ಸೀಮಂತಕರಣ; ಬಾಚುವಿಕೆ; ಸಿಂಗಾರ. मांग भरना = ಬೈತಲೆಗೆ ಅರಿಸಿನ ಕುಂಕುಮ ಹಚ್ಚು; ಬೈತಲೆಗೆ ಮುತ್ತಿನ ಸರ ಅಥವಾ ಬಾಸಿಂಗವನ್ನು ಕಟ್ಟು; ಒಬ್ಬಳನ್ನು ಮದುವೆಯಾಗು.

मांग-जली, स्त्री. ವಿಧವೆ, ರಂಡೆ.

मांग-टीका, पु. ಬೈತಲೆ ಬೊಟ್ಟು, ಪಾವಟಿ ಬಿಲ್ಲೆ.

मांगन. पु. ಬೇಡುವಿಕೆ, ಯಾಚನೆ.

मांगना, सक्रि. ಯಾಚಿಸು, ಬೇಡು; ಎರೆ, ಕೋರು; ಕೇಳು; ಎರವಲು ತೆಗೆದುಕೊ; ವರಿಸು. मांगना तांगना = ಯಾಚನೆಮಾಡು, ತಿರುಪೆಮಾಡು

मांगी, स्त्री. ಯಾಚನೆ, ಎರವಲು; ವಾಚಾದತ್ತ ಮಾಡಲ್ಪಟ್ಟ ಕನ್ಯೆ.

मांचना, अक्रि. ಪ್ರಚಲಿತವಾಗು.

मांचा, पु. = मंच.

मांज, स्त्री. ಕೀವು, ಲಸಿಕೆ.

मांजना, सक्रि. ಉಜ್ಜು, ತಿಕ್ಕು; ಬೆಳಗು; ಹೊಳಪಿಸು; ಸಂಸ್ಕರಿಸು; ಗಾಳಿಪಟದ ದಾರಕ್ಕೆ ಗಾಜಿನ ಪುಡಿ ಬೆರಸಿದ ಸರಿಯನ್ನು ಹಚ್ಚು, ಮಾಂಜ ಹಚ್ಚು.

मांजा, पु. ಮಳೆ ನೀರಿನ ನೊರೆ; ಮೆರುಗು, ಪಾಲಿಷ್.

मांझ, पु. ಅಂತರ; ಮಧ್ಯ, ನಡು. क्रिवि. ನಡುವೆ

मांझत, स्त्री. ಗೌರವ, ಘನತೆ.

मांझा, पु. ದ್ವೀಪ, ಕುದುರು, ನಡುಗಡ್ಡೆ; ಸಿರ್ಪೇಷ್; ಮರದ ಮೋಟು, ಬೊಡ್ಡೆ; ವಧೂವರರಿಗೆ ಕೊಡುವ ಹಳದೀ ವಸ್ತ್ರ; ಗಾಳಿ ಪಟದ ದಾರಕ್ಕೆ ಹಚ್ಚುವ ಗಾಜಿನ ಪುಡಿ ಬೆರೆತ ಸರಿ, ಮಾಂಜಾ, ಕುಯಿದಾರಕ್ಕೆ ಹಚ್ಚುವ ಸರಿ; ಮಂಚ.

मांझी, पु. ಅಂಬಿಗ, ನಾವಿಕ; ಮಧ್ಯಸ್ಥಗಾರ, ಪಂಚಾಯಿತ

मांट, पु. ಮಡಕೆ, ಕುಂಡ; ಮನೆಯ ಮಾಳಿಗೆ.

मांठ, पु. ಮಡಕೆ, ಗಡಿಗೆ.

मांड, पु. ಗಂಜಿ, ಅಂಬಲಿ.

मांडना, सक्रि. ನಾದು, ಅಪ್ಪಳಿಸು; ಕುಟ್ಟು; ತುಳಿ, ಒಕ್ಕು; ಸಜ್ಜುಗೊಳಿಸು, ಅಣಿಮಾಡು; ಸವರು, ಮೆತ್ತು, ಬಳಿ; (ಗಲಾಟೆ) ಮಾಡು, ಎಬ್ಬಿಸು.

मांडनी, स्त्री. ಅಂಚು, ಕರೆ.

मांडव, पु. ಮಂಟಪ, ಚಪ್ಪರ.

मांडा, पु. ಪರೆ, ಕಣ್ಣುಪರೆ, ಕಣ್ಣು

ಚಟ್ಟು; ಮಂಟಪ, ಚಪ್ಪರ; ಮೈದಾ ಹಿಟ್ಟಿನ ರೊಟ್ಟಿ, ದೋಸೆ; ಕಡಲೆ ಹಿಟ್ಟಿನ ಪೂರಿ.

मांडी, स्त्री. ಗಂಜಿ, ರಬ್ಬಳಿಗೆ, ಅಂಬಲಿ; ಹಿಟ್ಟಿನ ಸರಿ; ತೊಡೆ; ಮೊಣಕಾಲು, ಮಂಡಿ.

मांत, वि. ಉನ್ಮತ್ತ; ಕಳೆಗುಂದಿದ.

मांतना, अक्रि. ಉನ್ಮತ್ತನಾಗು.

मांद, वि. ಮಬ್ಬಾದ, ಮಂದವಾದ; ಬಳಲಿದ, ಕಂದಿದ. स्त्री. ತಿಪ್ಪೆಗುಂಡಿ; ಕಾಡುಮೃಗಗಳ ಇಕ್ಕೆ, ಹಣೆ, ಗವಿ; ಗುಹೆ, ಗಹ್ವರ.

मांदगी, स्त्री. ದೇಹಾಲಸ್ಯ; ಜಾಡ್ಯ.

मांदर, पु. ಒಂದು ವಾದ್ಯ.

मांदा, वि. ದೇಹಾಲಸ್ಯವುಳ್ಳ, ಜಡ್ಡು; ಆಯಾಸಗೊಂಡ; ಅಸ್ವಸ್ಥ; ಉಳಿದ.

मांपना, अक्रि. ಮೆತ್ತಗಾಗು.

मां-पना, पु. ಮಾತೃತ್ವ, ತಾಯ್ತನ.

मांयँ, क्रिवि. ಮಧ್ಯ, ನಡುವೆ.

मांस, पु. ಮಾಂಸ, ಆಮಿಷ.

मांसपेशी, स्त्री. ಮಾಂಸಪಿಂಡ.

मांसल, वि. ಮಾಂಸ ತುಂಬಿದ, ಕೊಬ್ಬಿದ.

मांहि, उप. ಒಳಗೆ, -ಲ್ಲಿ, ಪೈಕಿ.

मा, स्त्री. ತಾಯಿ, ಅಮ್ಮ; ಸ್ತ್ರೀ. मा-बाप = ತಂದೆ ತಾಯಿ.

माइँ, स्त्री. ಹೋಳಿಗೆ; ಹುಡುಗಿ

माइका, पु. = **मायका**.

माई, स्त्री. ತಾಯಿ, ಅಮ್ಮ. माई का लाल = ಮುದ್ದುಮಗ; ಪರಾಕ್ರಮಿ, ಕಡುಗಲಿ, ವೀರ.

माकंद, पु. ಮಾವಿನ ಕಾಯಿ.

माक़ूल, वि. ಬುದ್ಧಿಗೆ ಎಟಕುವ, ವಿವೇಕಯುಕ್ತವಾದ, ಸಮಂಜಸವಾದ; ಸರಿಯಾದ, ತರ್ಕ್ಯ; ಯೋಗ್ಯ, ಸಮುಚಿತ; ಒಪ್ಪವಾದ; ಪರರ ಮಾತಿನ ಸತ್ಯತೆಯನ್ನು ಮನಗಂಡು ಒಪ್ಪಿಕೊಳ್ಳುವವ; ವಿವೇಕಿ.

माख, पु. ಕೋಪ; ಅಹಂಕಾರ; ಅವಿವೇಕ; ಪಶ್ಚಾತ್ತಾಪ.

माखड़ा, पु. ಮಂಕ, ದಡ್ಡ; ಅವಿವೇಕಿ

माखता, पु. ಪಶ್ಚಾತ್ತಾಪ.

माखन, पु. ಬೆಣ್ಣೆ, ನವನೀತ. माखन चोर = ನವನೀತಚೋರ, ಬೆಣ್ಣೆಕಳ್ಳ; ಶ್ರೀಕೃಷ್ಣನ ಹೆಸರು.

माखना, अक्रि. ರೇಗು, ಸಿಟ್ಟಾಗು.

माखी, स्त्री. ನೊಣ; ಸೋನಾಮುಖಿ.

मागध, पु. ವಂದಿಮಾಗಧ, ಹೊಗಳುಭಟ್ಟ.

माघ, पु. ಮಾಘಮಾಸ; ಕೋಲುಮಲ್ಲಿಗೆ.

माघी, स्त्री. ಮಾಘಮಾಸದ ಹುಣ್ಣಿಮೆ. वि. ಮಾಘಮಾಸದ; ಮಾಘಮಾಸದಲ್ಲಾಗುವ.

माचा, पु. ಮಂಚ, ಕಾಲಟ್ಟ, ಮಂಚಿಕೆ.

माचातोड़, वि. ಸೋಮಾರಿ, ಆಲಸ.

माची, स्त्री. ಸಣ್ಣ ಮಂಚ, ಕಾಲಟ್ಟ; ಗಾಡಿಯ ಚಟ್ಟು; ಹಲಿವೆ, ಕುಂಟೆ.

माछ, पु. ಮೀನು.

माछर, पु. ಮೀನು; ಸೊಳ್ಳೆ.

माछी, स्त्री. ನೊಣ.
माजरा, पु. ಸಂಭವ, ಘಟನೆ; ಪ್ರಸಂಗ; ಸಂಗತಿ; ವೃತ್ತಾಂತ, ವಿದ್ಯಮಾನ; ಪರಿಸ್ಥಿತಿ.
माज़िया, क्रिवि. ಇನ್ನು ಮುಂದೆ, ಇನ್ನುಮೇಲೆ.
माज़िरत, स्त्री. ನೆವ, ನೆಪ, ವ್ಯಾಜ್ಯ.
माज़ी, वि. ಪೂರ್ವದ, ಭೂತಪೂರ್ವ, ಹಿಂದೆಇದ್ದ, ಮಾಜಿ. पु. ಭೂತಕಾಲ.
माजू, पु. ಅಳಲೆಕಾಯಿ, ತಾರೆಕಾಯಿ.
माजून, वि. ಕಲಿತ, ಬೆರತ. स्त्री. ಬಂಗೀ ಸೊಪ್ಪಿನಿಂದ ಮಾಡಿದ ಒಂದು ಸಿಹಿ ತಿಂಡಿ; ಬಂಗೀ ಲೇಹ್ಯ, ಮಾಜುಂ; ಲೇಪ, ಲೇಹ್ಯ, ಸೀಕರಣೆ
माजूफल, पु. ಮಾಚಿಕಾಯಿ, ಅಳಲೆ ಕಾಯಿ.
माज़ूर, वि. ಲಾಯಕ್ಕಿಲ್ಲದ, ಅಶಕ್ತ.
माजूल, वि. ತೊಲಗಿಸಿದ; ಉಚ್ಚಾಟಿತ.
माट, पु. ತೊಟ್ಟಿ, ಬಾನೆ, ಮರಿಗೆ; ದೊಡ್ಡ ಗಡಿಗೆ, ಕೀಲು.
माटी, स्त्री. ಭೂಮಿ; ಮಣ್ಣು; ಧೂಳು
माठ, पु ಒಂದು ಮಿಠಾಯಿ.
माठा, पु. ಮಜ್ಜಿಗೆ, ತಕ್ರ, ಅಳೆ. वि. ಮೊಂಡ, ಚಂಡಿಖೋರ; ಸೋಮಾರಿ.
माठू पु वि. ಹಾಸ್ಯಗಾರ, ಕೋಡಂಗಿ; ಕಪಿ
माड़ना, सक्रि. ಒಕ್ಕು, ಬಡಿ; ತುಳಿ; ಧರಿಸು; ಪೂಜಿಸು.
माड़ी, स्त्री. ಗಂಜಿ, ಅಂಬಲಿ.
माढ़ा, पु. ಮೇಲಿನ ಕೈಸಾಲೆ, ದಿಸಿಲು ಮಹಡಿ.
माणिक्य, पु. ಮಾಣಿಕ್ಯ, ಕೆಂಪು.
मात, स्त्री. ಮಾತೆ, ತಾಯಿ; ಸೋಲು, ಪರಾಜಯ, ಅಪಜಯ; ಚದುರಂಗ ದಾಟದಲ್ಲಿ ಕಟ್ಟು. वि ಸೋತುಹೋದ, ಪರಾಜಿತ. मात खाना = ಸೋಲು. मात करना = ಸೋಲಿಸು, ಮೀರಿಸು
मातना, अक्रि. ಮದವೇರು, ಮತ್ತನಾಗು; ಸೊಕ್ಕು; ಗರ್ವಗೊಳ್ಳು.
मातबर, वि. ವಿಶ್ವಾಸಾರ್ಹವಾದ, ನಂಬಿಗಸ್ಥ; ಸತ್ಯವಾದಿ.
मातबरी, स्त्री. ವಿಶ್ವಾಸಾರ್ಹತೆ.
मातम, पु. ಒಬ್ಬನ ಮರಣಕ್ಕಾಗಿ ಶೋಕಿಸುವಿಕೆ, ಶೋಕ, ಗೋಳಾಟ.
मातमख़ाना, पु ಶೋಕದ ಮನೆ.
मातमपुरसी, स्त्री. ಒಬ್ಬರ ನಿಧನಕ್ಕಾಗಿ ಅವರ ಸಂಬಂಧಿಕರಲ್ಲಿ ಸಂತಾಪವನ್ನು ಸೂಚಿಸುವಿಕೆ, ಉಪಚಾರ ಹೇಳುವಿಕೆ; ಸಂತಾಪಸೂಚನೆ.
मातमी, वि. ಶೋಕದ, ಶೋಕಮಯ.
मातल, वि. ಹೆಂಡ ಕುಡಿದ; ಮತ್ತನಾದ.
मातहत, वि. ಅಧೀನಸ್ಥ, ಆಶ್ರಿತ.
मातहती, स्त्री. ಅಧೀನ, ಅಧಿಕಾರ, ಮೇಲಾರೈಕೆ.
माता, स्त्री. ತಾಯಿ, ಮಾತೆ, ಅಮ್ಮ; ಸಿಡುಬು, ಮೈಲಿ. वि. ಮತ್ತನಾದ, ಮದಿಸಿದ; ಪ್ರಫುಲ್ಲ.
माती, वि. ಮತ್ತೇರಿದ, ಉನ್ಮತ್ತ.
मात्रा, स्त्री. ಮಾತ್ರೆ; ಪರಿಮಾಣ, ಮಿತಿ; ಒಂದು ಹೊತ್ತಿನ ಔಷಧ.
माथा, पु. ಹಣೆ, ನೊಸಲು; ಭಾವಣೆಯ

ಬೆಂಕಟ್ಟು, ಮೊಗಡು; ಹಡಗಿನ ಮುಂಭಾಗ, ಅಣಿಗೆ. माथा पच्ची करना = ವೃಥಾ ತರ್ಕವಿತರ್ಕ ಮಾಡು, ತಲೆ ಚಚ್ಚಿಕೊಳ್ಳು.

मादक, वि. ಮಾದಕ, ಮದಕಾರಿ, ಕೈಫ.

मादकता, स्त्री. ಕೈಫ, ಸುಂದು, ಮಸ್ತಿ.

मादन, पु. ಖನಿ, ಗಣಿ.

मादर, स्त्री. ತಾಯಿ, ಅಮ್ಮ.

मादरज़ाद, वि. ಅಜನ್ಮ, ಹುಟ್ಟಿನ; ಸಹೋದರ, ಸಗರ್ಭ; ದಿಗಂಬರ, ಬೆತ್ತಲೆ. मादरज़ाद नाबीना = ಹುಟ್ಟುಕುರುಡ.

मादरी, वि. ತಾಯಿಯ, ತಾಯಿಗೆ ಸಂಬಂಧಿಸಿದ. मादरी ज़बान = ಮಾತೃಭಾಷೆ, ತಾಯ್ನುಡಿ.

मादला, पु. ಚಿನ್ನದ ಒಂದು ಒಡವೆ.

मादा, मादीन, स्त्री. ಹೆಣ್ಣು (ಪ್ರಾಣಿ)

माद्दा, पु. ವಸ್ತು; ತತ್ವ, ಸಾರ; ಶಕ್ತಿ, ಸಾಮರ್ಥ್ಯ; ಕೀವು.

माधुरी, स्त्री. ಮಾಧುರ್ಯ; ಸೌಂದರ್ಯ; ಸೊಬಗು; ಮದ್ಯ, ಸೇಂದಿ; ಮಲ್ಲಿಗೆ

माध्यम, वि. ನಡುವಣ. पु. ಸಾಧನ.

माध्वी, स्त्री. ಸೇಂದಿ; ಮದ್ಯ.

मान, पु. ಅಳತೆ; ಪ್ರಮಾಣ; ಪರಿಮಾಣ; ಅಳವು; ಸಾಮರ್ಥ್ಯ; ಮಾನ; ಮರ್ಯಾದೆ; ಗೌರವ; ಮನ್ನಣೆ; ಗರ್ವ; ಬಿಂಕ; ತನ್ನ ಪ್ರಿಯನ ಮೇಲಿನ ಕೋಪ, ಖತಿ; ಕೋಪ, ಸಿಟ್ಟು. मान मनाना = ಸಿಟ್ಟಾದವರನ್ನು ಸಮಾಧಾನಪಡಿಸು; ಅನುನಯಿಸು, ಬೋಸರಿಸು.

मान-गुमान, पु. ಮರ್ಯಾದೆ, ಗೌರವ; ಗರ್ವ, ಜಂಭ.

मानता, स्त्री. = मन्नत.

मानना, सक्रि. ಮನ್ನಣೆಮಾಡು, ಮನ್ನಿಸು, ಗೌರವಿಸು; ಮಾನಿಸು; ಒಪ್ಪಿಕೊಳ್ಳು, ಒಪ್ಪು; ನಂಬು; ಸ್ವೀಕರಿಸು, ಸಮ್ಮತಿಸು; ಭಾವಿಸು; ಪರಿಗಣಿಸು, ಎಣಿಸು; ಹರಕೆ ಮಾಡು.

मान-पान, पु. ಮಾನಮರ್ಯಾದೆ; ಸ್ಥಾನಮಾನ.

मान-मंदिर, पु. ನಕ್ಷತ್ರ ಮತ್ತು ಗ್ರಹಗಳನ್ನು ನೋಡುವ ಸ್ಥಳ, ವೇಧಶಾಲೆ, ನಕ್ಷತ್ರಶಾಲೆ.

मान-मनौती, स्त्री. ಹರಕೆ, ಪ್ರಾರ್ಥನೆ, ರೇಗಾಟ ಮತ್ತು ಸಮಾಧಾನ.

मानवी, वि. ಮಾನವನ; ಅರ್ಥ ಅಥವಾ ತಾತ್ಪರ್ಯಕ್ಕೆ ಸಂಬಂಧಪಟ್ಟ; ಶಬ್ದಾರ್ಥದ. स्त्री. ನಾರಿ, ಸ್ತ್ರೀ.

मानवीय, वि. ಮನುಷ್ಯನ, ಮಾನವನ.

मानसिक, वि. ಮನಸ್ಸಿನ; ಮಾನಸಿಕ.

मानिंद, वि. ಸದೃಶ, ಸಮಾನವಾದ.

मानिक, पु. ಮಾಣಿಕ್ಯ, ಕೆಂಪು.

मानी, वि. ಗರ್ವಗೊಂಡ; ಬಿಗುಮಾನದ; ಕೋಪಗೊಂಡ. स्त्री. ಅರ್ಥ, ತಾತ್ಪರ್ಯ; ಅಭಿಪ್ರಾಯ; ಸಾರ, ಸತ್ವ.

मानुख, मानुष, मानुस, पु. ಮನುಷ್ಯ.

मानुसाई, स्त्री. ಮನುಷ್ಯತನ.

मानूस, वि. ಗೆಳೆಯ, ಪ್ರಿಯ.

माने, पु. ಅರ್ಥ, ತಾತ್ಪರ್ಯ. क्रिवि. ಅರ್ಥಾತ್, ಅಂದರೆ.

मानों, मानो, क्रिवि. ಹಾಗೆ, ಅಂತೆ, ಅನ್ನುವ ರೀತಿಯಲ್ಲಿ, ಎಂಬಂತೆ. पु. ಚೆಕ್ಕ್ಯ, ಚೀಲಿ.

माप, पु. ಅಳೆಯುವಿಕೆ, ಅಳತೆ; ಅಳತೆಯ ಕೋಲು; ಜಮೀನಿನ ಅಳತೆ, ಪೈಮಾಯಿಷಿ.

मापक, पु. ಅಳತೆ, ಪ್ರಮಾಣ; ಅಳತೆಯ ಕೋಲು; ಅಳೆಯುವವ

मापन, पु. ಅಳೆಯುವಿಕೆ, ಅಳತೆ

मापना, सक्रि. ಅಳೆ, ಅಳತೆ ಮಾಡು; ಪೈಮಾಯಿಷಿ ಮಾಡು. अक्रि. ಮತ್ತನಾಗು, ಅಮಲೇರು.

माफ़, वि. ಕ್ಷಮಿಸಿದ, ಮನ್ನಿಸಿದ; ಮಾಫು ಮಾಡಿದ; ಸೋಡಿ ಬಿಟ್ಟ. माफ़ करना=ಕ್ಷಮಿಸು, ಮನ್ನಿಸು; ಮಾಫು ಮಾಡು.

माफ़िक़, क्रिवि. ಅನುಸಾರವಾಗಿ, ಅನುಗುಣವಾಗಿ, ತಕ್ಕಂತೆ.

माफ़ी, स्त्री. ಕ್ಷಮಾಪಣೆ, ಮಾಫಿ; ಸೂಟಿ, ಸೋಡಿ; ಕಂದಾಯದ ಮಜಾ; ಜೋಡಿ ಜಮೀನು, ಇನಾಮತಿ ಜಮೀನು; ಮಾನ್ಯ, ಉಂಬಳಿ.

माफ़ीदार, पु. ಜೋಡಿದಾರ, ಇನಾಂದಾರ, ಉಂಬಳಿದಾರ, ಮಾನ್ಯಗಾರ

मामलत, स्त्री. ಸಂಗತಿ, ವಿಷಯ; ವ್ಯವಹಾರದ ಪ್ರಸಂಗ; ವಿವಾದಾಸ್ಪದವಾದ ವಿಷಯ.

मामला, पु. ಸಂಗತಿ, ವಿಷಯ; ಕಾರ್ಯ, ಜಂಬರ, ಉಸಾಬರಿ; ವಿವಾದಾಸ್ಪದವಾದ ವಿಷಯ; ವ್ಯವಹಾರ, ವ್ಯಾಜ್ಯ; ಮೊಕದ್ದಮೆ, ಖಟ್ಲೆ.

मामा, पु. ಸೋದರಮಾವ, ಮಾವ. स्त्री. ತಾಯಿ; ರೊಟ್ಟಿ ಸುಡುವವಳು; ಸೇವಕಿ, ತೊತ್ತು.

मामागरी, स्त्री. ಸೇವಕಿಯ ಕೆಲಸ.

मामी, स्त्री. ಸೋದರಮಾವನ ಹೆಂಡತಿ; ತನ್ನ ತಪ್ಪನ್ನು ಲಕ್ಷಿಸದಿರುವಿಕೆ. मामी पीना=ತನ್ನ ತಪ್ಪುಗಳನ್ನು ಗಮನಿಸದಿರು.

मामू, पु. ಸೋದರಮಾವ.

मामूर, वि. ಜನವಸತಿಯುಳ್ಳ, ಜನಭರಿತ; ವಸಾಹತು ಮಾಡಲ್ಪಟ್ಟ, ಒಕ್ಕಲಿರಿಸಿದ; ಆಬಾದು ಆದ, ಸಾಗು(ನೆಲ); ಕಳಕಳಿಸುವ; ಭರ್ತಿಯಾದ, ಭರಿತ, ತುಂಬಿದ; ಹೇರಳ.

मामूरी, स्त्री. ಜನವಸತಿ; ವಾಸ, ವಸ್ತಿ; ಜನಸಂಖ್ಯೆ; ಆಬಾದು, ಸಾಗುವಳಿ; ಸಮೃದ್ಧಿ, ಹುಲುಸು; ಆನಂದ, ಸುಖ; ಭರ್ತಿ, ಪೂರ್ಣತೆ, ನೆರತೆ.

मामूल, वि. ಮಾಡಿದ, ತಯಾರಿಸಿದ; ರೂಢಿಯ, ವಾಡಿಕೆಯ. पु. ಕೆಲಸಕಾರ್ಯ; ರೂಢಿ, ವಾಡಿಕೆ; ಪದ್ಧತಿ, ಮಾಮೂಲು, ಸಂಪ್ರದಾಯ; ವಾಡಿಕೆಯಾಗಿ ಕೊಡುವ ರುಸುಂ ಅಥವಾ ಇನಾಮು, ಮಾಮೂಲು ಹಣ.

मामूली, वि. ವಾಡಿಕೆಯಾದ, ರೂಢಿಯ; ಮಾಮೂಲಿನ; ಸರ್ವಸಾಧಾರಣವಾದ, ಸರ್ವಸಾಮಾನ್ಯ.

मामूलीपन, पु. ಸರ್ವಸಾಮಾನ್ಯತೆ.

माय, स्त्री. ಮಾತೆ, ತಾಯಿ, ಅಮ್ಮ.

मायका, पु. ಹುಟ್ಟುಮನೆ, ತವರುಮನೆ.

मायना, पु. = मानी.

मायल, वि. ಬಗ್ಗಿದ, ಪ್ರವೃತ್ತನಾದ; ಕಲೆತ, ಮಿಳಿತವಾದ, ಮಿಶ್ರಿತ.

माया, स्त्री. ಮಾಯೆ; ಜಾಲ; ಮೋಸ. पु. ಧನ; ಮೂಲಧನ, ಬಂಡವಾಳ; ಮೂಲ, ಬುಡ.

मायूब, वि. ಕೆಟ್ಟ, ದುಷ್ಟ.

मायूबी, स्त्री. ದುಷ್ಟತನ, ದುರುಳತನ.

मायूस, वि. ನಿರಾಶನಾದ, ಭಗ್ನಾಶ.

मायूसी, स्त्री. ನಿರಾಶೆ, ಆಶಾಭಂಗ.

मार, पु. ಸರ್ಪ, ಹಾವು. स्त्री. ಹೊಡೆಯುವಿಕೆ, ಹೊಡೆದಾಟ; ಹೊಡೆತ, ಬಡಿತ; ಏಟು; ಪೆಟ್ಟು. ದೆಬ್ಬೆ; ದಂಡನೆ; ತೊಂದರೆ, ಕಷ್ಟ; ಧಾವಿಸುವಿಕೆ, ಹಾಯುವಿಕೆ; ಯುದ್ಧ. ಕಾಳಗ; ಲೂಟಿ; ಸೂರೆ; ಫಿರಂಗಿಯ ಕೆಲಸ; ಕೋಟೆಯ ತೆನೆಯಲ್ಲಿ ಫಿರಂಗಿ ಇಡುವ ಸ್ಥಳ, ಜೇರುಗಂಡಿ; ಎರೆಮಣ್ಣು. मार खाना = ಪೆಟ್ಟು ತಿನ್ನು

मारक, वि. ಕೊಲ್ಲುವವ, ಹೊಡೆವವ.

मारका, पु. ಯುದ್ಧ, ಕಾಳಗ; ಮಹತ್ವದ ಸಂಗತಿ, ಭಾರಿ ವಿಷಯ.

मार-काट, स्त्री ಹೊಡೆದಾಟ, ಕಡಿದಾಟ, ಕೊಂದಾಟ; ಕಾದಾಟ, ಯುದ್ಧ.

मारग, पु. ಮಾರ್ಗ, ದಾರಿ.

मारगीर पु. ಹಾವಾಡಿಗ, ಲಾವಕ.

मार-तौल, स्त्री. ಸುತ್ತಿಗೆ, ಕೊಡತಿ.

मारनहारा, वि. ಹೊಡೆಯುವವ, ಕೊಲ್ಲುವವ.

मारना, सक्रि. ಬಡಿ, ಹೊಡೆ; ಜಡಿ; ಕುಟುಕು; ತಗುಲಿಸು; ಮುಕ್ಕು, ಚುಚ್ಚು; ಕೊಲ್ಲು, ಸಾಯಿಸು; ಎಸೆ, ಒಗೆ; ಬೀರು; ಹಾರಿಸು; ಅಡಗಿಸು; ತಡೆಗಟ್ಟು; ಚಲಾಯಿಸು; ಮಂತ್ರಹಾಕು, ಊದು.

मार-धाड़, **मार-पीट**, स्त्री. ಹೊಡೆದಾಟ, ಬಡಿದಾಟ, ಕಾದಾಟ.

मार-पेच, पु. ಠಕ್ಕು, ಬೂಟಾಟಿಕೆ.

मारफ़त, क्रिवि. ಮುಖಾಂತರ, ಮೂಲಕ, ದ್ವಾರಾ, ಮಾರಿಫತ್ತು. स्त्री. ಜ್ಞಾನ; ಬ್ರಹ್ಮಜ್ಞಾನ; ಸಾಧನೆ.

मारवाड़िन, स्त्री. ಮಾರ್ವಾಡಿ ಹೆಂಗಸು.

मारवाड़ी, स्त्री. ಮಾರ್ವಾಡಿಯವ.

मारा, वि. ಹೊಡೆಯಲ್ಪಟ್ಟ, ಬಡಿಯಲ್ಪಟ್ಟ; ಕೊಲ್ಲಲ್ಪಟ್ಟ; ಮುಳುಗಿಸಿದ (ಹಡಗು) मारा मारा फिरना = ಅಲೆದಾಡು, ತಾಟಾಡು, ತೊಳಲು, ತಿರಿ.

मारामार, स्त्री. ಹೊಡೆದಾಟ, ಜಗಳ, ಮಾರಾಮಾರಿ. क्रिवि. ಶೀಘ್ರವಾಗಿ, ತ್ವರೆಯಾಗಿ.

मारामारी, स्त्री. ಹೊಡೆದಾಟ, ಮಾರಾಮಾರಿ; ಜಗಳ; ಹೆಣಗಾಟ.

मारी, स्त्री. ಸೊಂಕುರೋಗ, ಅರಿಷ್ಟ.

मारू, वि. ಹೊಡೆಯುವವ, ಕೊಲ್ಲುವವ. पु. ರಣಗೀತೆ; ರಣಭೇರಿ; ದೊಡ್ಡ ನಗಾರಿ.

मारे. क्रिवि. ಒಸ್ಕರ, ದೆಸೆಯಿಂದ, ನಿಮಿತ್ತ

मार्ग. स्त्री. ಮಾರ್ಗ, ದಾರಿ, ಹಾದಿ.

मार्गव्यय, पु. ಹಾದಿಯ ವೆಚ್ಚ.

मार्गी, पु. ದಾರಿಕಾರ, ಹಾದಿಗ.

मार्फ़त, क्रिवि.; स्त्री. = मारफ़त.

माल, स्त्री. ಮಾಲೆ, ಹಾರ; ಚರಕದ ಕದುರನ್ನು ತಿರುಗಿಸುವ ದಾರ. पु. ಜಟ್ಟಿ, ಪೈಲ್ವಾನ್; ಧನ, ಸಂಪತ್ತು, ಸೊಮ್ಮು; ಒಡವೆ, ಮಾಲು, ಸರಕು, ಸಾಮಾನು, ಜಿನಸಿ; ವಸ್ತು, ಪದಾರ್ಥ; ಬೆಳೆ, ಫಸಲು; ಹುಟ್ಟುವಳಿ; ಕಂದಾಯದ ವರಮಾನ; ಸವಿಯೂಟ, ಮೃಷ್ಟಾನ್ನ; ಸಿಹಿತಿಂಡಿ; (ಗಣಿತದಲ್ಲಿ) ಸಂಖ್ಯೆಯ ವರ್ಗ, ದ್ವಿಘಾತ, ಚರಟ; ರಾಡಿ, ಗಸಿ; ನೀಲಿಬಣ್ಣ ತಯಾರಿಸುವವ. माल असबाब = ಸೊತ್ತು ಸ್ವತಂತ್ರ, ಸಾಮಾನು ಸರಂಜಾಮು.

मालकंगनी, स्त्री. ಒಂದು ಗಿಡ.

मालकिन, स्त्री. ಒಡತಿ, ಯಜಮಾನಿ.

मालकियत, स्त्री. ಒಡೆತನ, ಯಾಜಮಾನ್ಯ; ಸ್ವತ್ವ, ಸ್ವಾಮ್ಯ.

मालख़ाना, पु. ಭಂಡಾರ, ಕೋಠಿ; ಉಗ್ರಾಣ, ಗಡಂಗು.

मालगाड़ी, स्त्री. ಸಾಮಾನು ಒಯ್ಯುವ ರೈಲುಗಾಡಿ, "ಗುಡ್ಸ್" ಗಾಡಿ.

मालगुज़ार, पु. ತೆರಿಗೆ ಕೊಡುವವ, ಕಂದಾಯ ತೆರುವವ; ಜಮೀನುದಾರ.

मालगुज़ारी, स्त्री. ಕಂದಾಯ; ತೆರಿಗೆ; ತೀರ್ವೆ.

मालज़ादा, पु. ಸೂಳೆಯ ಮಗ; ಕುಂಟಣಿಗ.

मालज़ादी, स्त्री. ಸೂಳೆ, ವೇಶ್ಯೆ; ದಗಡಿ

मालज़ामिन, पु. ಜಾಮೀನುದಾರ, ಹೊಣೆಗಾರ.

मालज़ामिनी, स्त्री. ಹಣಕೊಡುವ ಹೊಣೆಗಾರಿಕೆ, ಜಾಮೀನು.

मालदार, मालधनी, वि. ಹಣಗಾರ, ಧನಿಕ; ಬಂಡವಾಳಗಾರ.

मालदारी, स्त्री. ಹಣವಂತಿಕೆ, ಧನಾಢ್ಯತೆ

मालन, स्त्री. माली का स्त्री. रूप.

मालपूआ, पु. ಹೋಳಿಗೆ.

मालमता, मालमुता, पु. ಆಸ್ತಿಪಾಸ್ತಿ, ಸೊತ್ತು, ಐವಜು.

मालमस्त, वि. ಹಣದ ಸೊಕ್ಕಿನ, ಧನಗರ್ವಿತ.

मालमस्ती, स्त्री. ಹಣದ ಸೊಕ್ಕು, ಧನ ಮದ.

मालवर, वि. ಹಣವಂತ, ಧನಿಕ.

माला, स्त्री. ಮಾಲೆ, ಹಾರ, ಸರ.

मालामाल, वि. ರಾಶಿಹಾಕಿದ, ಒಟ್ಟಯಿಸಿದ; ಹೇರಳ, ತುಂಬಿದ; ಸಂಪನ್ನ, ಸಮೃದ್ಧ.

मालिक, पु. ಈಶ್ವರ, ಭಗವಂತ; ಒಡೆಯ, ಸ್ವಾಮಿ; ದಣಿ, ಮಾಲೀಕ, ಯಜಮಾನ; ಪತಿ, ಗಂಡ; ತೋಟಗಾರ; ಹೂವಾಡಿಗ.

मालिका, स्त्री. ಚಿಕ್ಕ ಮಾಲೆ; ಅಧೀಶ್ವರಿ, ಒಡತಿ, ಯಜಮಾನಿ; ಹೆಂಡತಿ; ರಾಣಿ.

मालिकाना, पु. ಒಡೆತನ; ಸ್ವತ್ವ, ಸ್ವಾಮ್ಯ; ಜಮೀನುದಾರನಿಗೆ ಕೊಡುವ ಮಾಸಾಶನ. वि. ಒಡೆಯನ; ಧಣಿಯಂತಹ.

मालीकी, स्त्री. ಒಡೆತನ, ದಣಿತನ,

ಯಜಮಾನಿಕೆ; ಸ್ವತ್ವ, ಹಕ್ಕು.

मालिन, मालिनी, स्त्री. "माली" का स्त्री. रूप.

मालियत, स्त्री. ಐಶ್ವರ್ಯ, ಸಂಪತ್ತು; ಧನ; ಬಂಡವಾಳ; ಬೆಲೆ; ಬಹುಮೂಲ್ಯ ವಸ್ತು; ಕಂದಾಯ, ಕರ.

मालिश, स्त्री. ಉಜ್ಜುವುದು, ತಿಕ್ಕುವಿಕೆ; ಬೆಳಗಿಸುವಿಕೆ, ಮೆರುಗು ಕೊಡುವಿಕೆ; ನೀವುವಿಕೆ; ಮರ್ದನ, ಮಾಲೀಸು.

माली, पु. ತೋಟಗಾರ, ತೋಟಿಗ, ಮಾಲಿ वि. ಹಣಸಂಬಂಧವಾದ, ಆರ್ಥಿಕ; ಸರಕುಗಳ; ಧನಿಕ.

मालीदा, पु. = मलीदा.

मालूम, वि. ತಿಳಿದ, ಗೊತ್ತಾದ; ವೇದ್ಯವಾದ, ವಿದಿತ; ವಿಶದವಾದ, ಪ್ರಕಟ; ಪ್ರಸಿದ್ಧವಾದ. मालूम होना = ಗೊತ್ತಾಗು; ಕಾಣಿಸು; ಕಂಡುಬರು.

मावा, स्त्री. ಸತ್ವ, ಸಾರ, ರಸ; ಗಂಜಿ, ಅಂಬಲಿ; ಹಾಲುಗಿಣ್ಣು, ಹಾಲುಖೋವಾ; ಮೊಟ್ಟೆಯೊಳಗಿನ ಲೋಳೆ, ಜನೆ; ಉದುಗು ಹಾಕುವ ಪದಾರ್ಥ, ಜಾಂ.

माश, पु. ಮಾಷ, ಉದ್ದು.

माशा, पु. ಒಂದು ತೂಕ, ಮಾಶ; (ನೋಡಿ-सेर.) घड़ी में माशा घड़ी में तोला = ಹಣ್ಣೇಸೊಪ್ಪು ಬೇಯಿಸುವಷ್ಟರಲ್ಲಿ ಹದಿನೆಂಟು ಮನಸ್ಸು

माशूक़, पु. ಪ್ರಿಯ, ಪ್ರೀತಿಪಾತ್ರ, ನಲ್ಲ; ಪ್ರಿಯತಮ; ಪ್ರೇಮಿಕ.

माशूक़ा, स्त्री. ಪ್ರಿಯೆ, ಪ್ರಿಯತಮೆ.

माशूक़ाना, वि. ಪ್ರೇಮಿ ಅಥವಾ ಪ್ರೇಮಿಕೆಯಂತಹ; ಪ್ರಿಯ, ಪ್ರೇಮದ

माशूक़ी, स्त्री. ಪ್ರೇಮ; ಸೌಂದರ್ಯ;

माश्की, पु. ನೀರು ಹೊರುವವ.

मास, पु. ಮಾಸ, ತಿಂಗಳು, ಮಾಹೆ.

मासना, अक्रि. ಕಲೆ. सक्रि. ಕಲೆಸು.

मासिक, वि. ಮಾಸದ, ಮಾಸಕ್ಕೊಂದು ಸಲ ಆಗುವ. पु. ಮಾಸಪತ್ರಿಕೆ.

मासिवा, स्त्री. ಪ್ರಪಂಚ, ಸಂಸಾರ. क्रिवि. ಇದನ್ನು ಬಿಟ್ಟು, ಹೊರತು, ಸಿವಾಯಿ.

मासी, स्त्री. = मौसी.

मासूम, वि. ಸುರಕ್ಷಿತ; ನಿರ್ದೋಷ, ನಿರ್ಮಲ.

मासूमी, स्त्री. ನಿರ್ದೋಷತೆ, ನಿಷ್ಕಾಪಟ್ಯ

मास्टर, पु. ಉಪಾಧ್ಯಾಯ, ಶಿಕ್ಷಕ; "ಮೇಷ್ಟ್ರು", ಮಾಸ್ತರು, ಸಾಲಿ, ಶಿಕ್ಷಕೋದ್ಯೋಗಿ.

मास्टरिन, स्त्री. मास्टर का स्त्री. रूप.

मास्टरी, स्त्री. ಮೇಷ್ಟ್ರ ಕೆಲಸ, ಮಾಸ್ತರ ಕೆಲಸ; ಅಧ್ಯಾಪನ ವೃತ್ತಿ, ಶಿಕ್ಷಕೋದ್ಯೋಗ.

माह, पु. ಚಂದ್ರ, ತಿಂಗಳು; ಮಾಸ, ಮಾಹೆ.

माहगीर, पु. = माहीगीर.

माहजबीं, माहरू, स्त्री. ಚಂದ್ರನಂತಹ ಮುಖವುಳ್ಳವಳು, ಚಂದ್ರಮುಖಿ; ಸುಂದರಿ; ಚೆಲುವಿ; ಪ್ರಿಯೆ, ಪ್ರೇಮಿಕೆ

माहताब, पु. = महताब.

माहपार, माहपारा, पु. ಚೆಲುವ, ಸುಂದರ ಪುರುಷ; ಪ್ರೇಮಿಕ.

माहली, वि. ಅಂತಃಪುರದ ಸೇವಕ.
माहवार, क्रिवि. ಪ್ರತಿ ತಿಂಗಳಲ್ಲೂ, ಮಾಹೆವಾರಿ. वि. ಪ್ರತಿ ಮಾಸದ, ಮಾಸಿಕ, ಮಾಹೆಯಾನ. पु. ಮಾಸದ ಸಂಬಳ.
माहवारी, वि. ಪ್ರತಿಮಾಸದ
माहिं, क्रिवि. ಒಳಗೆ, -ಲ್ಲಿ.
माहियत, स्त्री ಸಾರ; ಸ್ವಭಾವ, ಪ್ರಕೃತಿ; ವಿವರ, ತಪಶೀಲು; ಸ್ಥಿತಿಗತಿ.
माहियाना, वि. ತಿಂಗಳಿನ, ಮಾಸಿಕ, ಮಾಹೆಯಾನ. पु. ಮಾಸದ ಸಂಬಳ.
माहिर, वि. ನಿಪುಣ, ಪಟು, ಪ್ರವೀಣ
माहिरी, स्त्री. ನೈಪುಣ್ಯ, ಪ್ರವೀಣತೆ.
माही, स्त्री. ಮೀನು, ಮತ್ಸ್ಯ. माही मरातिब = ಝುಂಡಾ, ಆಲವಟ್ಟ.
माही-ख़्वार, पु. ಬಕಪಕ್ಷಿ
माहीगीर, पु. ಅಂಬಿಗ, ಬೆಸ್ತ.
माहीफ़रोश, वि. ಮೀನು ಮಾರುವವ, ಮೀನುಗಾರ.
माहुर, पु. ವಿಷ, ನಂಜು.
मिंगनी, स्त्री. ಕುರಿಯ ಹಿಷ್ಕೆ, ಹಿಕ್ಕೆ.
मिक़, पु. ಮಲದ್ವಾರ, ಗುದ.
मिक़दार, स्त्री. ಪರಿಮಾಣ, ಪ್ರಮಾಣ; ಅಳತೆ, ಮಾನ, ಅಳವು; ದರ.
मिकनत, स्त्री. ಅಧಿಕಾರ, ಶಕ್ತಿ, ಬಲ.
मिक़्ना, पु. ಹೊದಿಕೆ, ದುಪ್ಪಟಿ; ಉದ್ದವಾದ ಬುರುಕಿ.
मिक़्नातीस, पु. ಲೋಹಚುಂಬಕ.
मिक़्राज़, स्त्री. ಕತ್ತರಿ.
मिचकना, अक्रि. ರೆಪ್ಪೆ ಬಡಿದುಕೊಳ್ಳು
मिचकाना, सक्रि. ರೆಪ್ಪೆ ಬಡಿ; ಕಣ್ಣು ಮಿಟುಕಿಸು, ಮಿಳಿಕಿಸು.
मिचकारना, सक्रि ಗಲಬರಿಸು, ತೊಳೆ.
मिचना, अक्रि. ಮುಚ್ಚು, ಮುಗಿ.
मिचराना, सक्रि. ಹಸಿವಿಲ್ಲದೆ ತಿನ್ನು.
मिचलाना, अक्रि. ಓಕರಿಸು, ಉಬ್ಬಳಿಸು
मिचली, स्त्री ಓಕರಿಕೆ, ಉಬ್ಬಳಿಕೆ.
मिचौलना, सक्रि. ಕಣ್ಣನ್ನು ಮುಚ್ಚು
मिचौली, स्त्री. ಮುಚ್ಚುವಿಕೆ.
मिज़मार, पु. ಕುದುರೆಪಂತದಮೈದಾನ
मिजमार, पु. ಧೂಪ, ಪರಿಮಳದ್ರವ್ಯದ ಹೊಗೆ; ಧೂಪಧಾನಿ.
मिज़राब, पु. ವೀಣೆ ಬಾರಿಸುವವರು ಬೆರಳಿಗೆ ಹಾಕಿಕೊಳ್ಳುವ ಉಂಗುರ.
मिजह, स्त्री. ಕಣ್ಣು ರೆಪ್ಪೆ
मिज़ाज़, पु. ಮಿಶ್ರ; ಸ್ವಭಾವ, ಪ್ರಕೃತಿ, ಗುಣ, ಮೈಗುಣ, ದೇಹಸ್ಥಿತಿ; ಮನೋಭಾವ; ಗರ್ವ, ಅಹಂಕಾರ. मिज़ाज आली, मिज़ाज शरीफ़ = ದೇಹಸ್ಥಿತಿ ಚೆನ್ನಾಗಿದೆಯಷ್ಟೆ; ಕ್ಷೇಮವೋ? मिज़ाज पूछना = ಕುಶಲಪ್ರಶ್ನೆ ಮಾಡು
मिज़ाजदान, पु. ಅಂತರಂಗ ಸ್ನೇಹಿತ.
मिज़ाजदार, वि. ಗರ್ವಿಷ್ಠ. ಅಹಂಕಾರಿ
मिज़ाजपुर्सी, स्त्री. ಕುಶಲಪ್ರಶ್ನೆ.
मिज़ाजी, वि. ಪ್ರಕೃತಿಗುಣದ; ಸಹಜವಾದ, ಸ್ವಾಭಾವಿಕವಾದ; ದುಃಸ್ವಭಾವದ; ಅಹಂಕಾರಿ, ಗರ್ವಿಷ್ಠ.
मिटना, अक्रि. ಅಳಿಸಿಹೋಗು, ನಷ್ಟವಾಗು; ಅಳಿ, ಬೀಯು; ತೊಲಗು; ಮಡಿ; ರದ್ದಾಗು; ಆರು, ತಣಿ; ನಂದು ;

ಮುರುಳಾಗು, ಮೋಹಗೊಳ್ಳು.

मिटाना, सक्रि. ಅಳಿಸು, ತೊಡೆ; ನಾಶ ಮಾಡು; ತೊಲಗಿಸು, ನೀಗು; ನಿವಾರಿಸು; ಅರಿಸು, ತಣಿಸು.

मिटिया, स्त्री. ಮಡಕೆ, ಗಡಿಗೆ.

मिट्टी, स्त्री. ನೆಲ; ಮಣ್ಣು; ಅರುಲು; ಧೂಳು; ದೇಹ; ಹೆಣ. मिट्टी देना = ಹೆಣವನ್ನು ಹೂಳು, ಒಪ್ಪಮಾಡು. मिट्टी का तेल = ಸೀಮೆಎಣ್ಣೆ, ಕಲ್ಲೆಣ್ಣೆ.

मिट्ठी, स्त्री. ಚುಂಬನ, ಮುತ್ತು.

मिट्ठू पु. ಗಿಲಕ; ಸವಿಮಾತಿನವ, ಮಧುರಭಾಷಿ, ಪ್ರಿಯವಾದಿ, ಗಿಳಿ अपने मुंह मियां मिट्ठू बनना = ಆತ್ಮ ಪ್ರಶಂಸೆ ಮಾಡಿಕೊಳ್ಳು, ಬಡಾಯಿಕೊಚ್ಚು.

मिठबोला, वि. ಮಧುರಭಾಷಿ, ಸವಿನುಡಿಯುವ.

मिठरी, स्त्री. ಒಂದು ಮಿಠಾಯಿ.

मिठलोना, वि. ಸ್ವಲ್ಪ ಉಪ್ಪು ಬೆರೆತ.

मिठाई, स्त्री. ಸಿಹಿ, ಮಾಧುರ್ಯ; ಸಿಹಿ ಪದಾರ್ಥ; ಸಿಹಿತಿಂಡಿ, ಮಿಠಾಯಿ.

मिठाला, पु. ಒದ್ದೆ, ಥಂಡಿ, ವಸ್ತ್ರ.

मिठास, स्त्री. ಸವಿ, ಮಾಧುರ್ಯ, ಸಿಹಿ, ಇಂಪು.

मिताई, स्त्री. ಸ್ನೇಹ, ಗೆಳೆತನ..

मितान, स्त्री. ಗೆಳತಿ, ಪ್ರಿಯೆ, ಪ್ರಣಯಿನಿ; ತನ್ನದೇ ಹೆಸರಿನ ಬೇರೊಬ್ಬ ಹೆಣ್ಣು.

मिति, स्त्री. ಮಿತಿ; ಗಡು, ಅವಧಿ; ಬೆಲೆ; ರುಜುವಾತು.

मिती, स्त्री. ತಿಥಿ; ತೇದಿ, ದಿವಸ; ಬಡ್ಡಿ; ವಟ್ಟ. मिती काटना = ಬಡ್ಡಿ ಕಟಾಯಿಸು, ವಟ್ಟ ತೆಗೆ मिती पुगाना या पूजना = ವಾಯಿದೆ ಪೂರೈಸು.

मितीकाटा, पु. ಹುಂಡಿಯು ಹಣವನ್ನು ಮುಂಗಡವಾಗಿ ಪಡೆಯಲು ಕೊಡುವ ವಟ್ಟ, ಹುಂಡಿಯ ಉತ್ತಾರ; ಕಳೆತ, ವಜಾ.

मित्र, पु. ಮಿತ್ರ, ಗೆಳೆಯ, ಸ್ನೇಹಿತ.

मित्रता, मित्राई, स्त्री. ಗೆಳೆತನ, ಮೈತ್ರಿ.

मित्रा, मित्राणी, स्त्री. ಗೆಳತಿ, ಸ್ನೇಹಿತಿ.

मिथुन, पु. ಜೋಡಿ, ಜೊತೆ; ಅವಳಿ ಮಕ್ಕಳು; ಮಿಥುನ ರಾಶಿ.

मिथ्या, वि. ಸುಳ್ಳು, ಹುಸಿ; ಅಪದ್ಧ.

मिनकना, अक्रि. ತಗ್ಗಿ ಮಾತನಾಡು.

मिनक़ार, स्त्री. ಪಕ್ಷಿಯ ಮೂಗು, ಕೊಕ್ಕು, ಚಂಚು; ಬೈಂಗೆ.

मिनक़ाश, पु. ಚಿಮುಟ.

मिनख़ार, स्त्री. ಮೂಗು, ಮೂಗಿನ ಹೊಳ್ಳೆ

मिनतका, पु. ನಡುಕಟ್ಟು.

मिनती, स्त्री. ವಿನಂತಿ, ಪ್ರಾರ್ಥನೆ.

मिनमिनाना, अक्रि. ಮೂಗಿನಿಂದ ಮಾತನಾಡು, ಗೊಣಗು.

मिनहा, वि. ಕಳೆದ, ವಜಾಹಾಕಿದ, ಮುರಿದುಕೊಂಡ, ಕಡಮೆ ಮಾಡಿದ.

मिनहाई, स्त्री. ಮುರಿದುಕೊಳ್ಳುವಿಕೆ, ವಜಾ; ಉತ್ತಾರ, ಕಳೆತ, ತಳ್ಳುಪಡಿ; ವಟ್ಟ.

मिन्नत, स्त्री ವಿನಂತಿ, ಪ್ರಾರ್ಥನೆ; ಬಿನ್ನಹ; ಬೇಡುದಲೆ, ಸೆರಗೊಡ್ಡಿ ಬೇಡುವಿಕೆ.

मिमियाना, अक्रि = ममियाना.

मियाँ, पु. ಮಹಾಶಯ, ಸಾಹೇಬ; ಒಡೆಯ; ಯಜಮಾನ; ಪತಿ, ಗಂಡ. मियाँ मिट्ठू = ಸವಿಮಾತಿನವ, ಮಧುರ ಭಾಷಿ; ಮೂರ್ಖ.

मियाद, स्त्री. ಅವಧಿ, ಮಾಯಿದೆ, ಗಡು, ಕಂತು; ಸಜಾ ವಿಧಿಸಿರುವ ಅವಧಿ

मियादी, वि. ಮಾಯಿದೆಯ; ಅವಧಿಯುಳ್ಳ. मियादी हुंडी = ಮಾಯಿದೆ ಹುಂಡಿ, ಗಡು ಹುಂಡಿ.

मियान, पु. ಮಧ್ಯ, ನಡು; ಸೊಂಟ, ಟೊಂಕ; ಖಡ್ಗಕೋಶ, ಒರೆ क्रिवि. ನಡುವೆ, ಮಧ್ಯೆ.

मियानगी, स्त्री. ಮಧ್ಯಸ್ಥಿಕೆ.

मियानतह, स्त्री. ಒಳವಸ್ತ್ರ, ಅಸ್ತರು.

मियानदार, वि. ಮಧ್ಯೆ ಇರುವ; ಮಧ್ಯಸ್ಥ; ಮಧ್ಯಸ್ಥಗಾರ; ಒರೆಯಲ್ಲಿರಿಸಿದ (ಕತ್ತಿ).

मियानबस्ता, वि. ಟೊಂಕ ಕಟ್ಟಿದ, ಕಟಿಬದ್ಧನಾದ; ಸಂಸಿದ್ಧವಾದ.

मियाना, वि. ಮಧ್ಯಮ ಆಕಾರದ; ಎಡತರ; ಸುಮಾರಾದ. पु. ಮಧ್ಯ, ಕೇಂದ್ರ; ಚಿಕ್ಕ ಪಲ್ಲಕ್ಕಿ, ಮೇನ; ಅಕ್ಷ, ಅಚ್ಚು; ಗಾಡಿಯ ಮೂಕಿಮರ.

मियानी, वि. ಮಧ್ಯದ, ನಡುವಣ. स्त्री. ಷರಾಯಿಯ ಕಾಲುಗಳೆರಡೂ ಸೇರುವ ಸ್ಥಳದಲ್ಲಿ ಹೊಲಿದಿರುವ ಮುಮ್ಮೂಲೆಯ ತೇಪೆ; ಬೀಸುವ ಕಲ್ಲಿನ ಗೂಟ.

मिरगी, स्त्री. ಅಪಸ್ಮಾರ, ಮಲನಾಗರು.

मिरचा, पु. ಮೆಣಸಿನ ಕಾಯಿ.

मिर्ज़ई, स्त्री. ಉದ್ದವಾದ ತೋಳುಗಳುಳ್ಳ ಅಂಗಿ, ಜಾಕೆಟ್ಟು.

मिरज़ा, पु. ಶ್ರೀಮಂತನ ಪುತ್ರ; ಅರಸು ಮಗ; ನವಾಬನ ಮಗ; ಒಂದು ಬಿರುದು.

मिरज़ाई, स्त्री. ಕುಲೀನತೆ, ಸಜ್ಜನತೆ; ಗರ್ವ, ಅಹಂಭಾವ.

मिर्च, स्त्री. ಮೆಣಸು; ಮೆಣಸಿನ ಕಾಯಿ; ಖಾರ. काली मिर्च, गोल मिर्च = ಕರಿ ಮೆಣಸು. लाल मिर्च = ಮೆಣಸಿನಕಾಯಿ

मिर्चा, पु. ಮೆಣಸಿನ ಕಾಯಿ.

मिल, स्त्री. ಮಿಲ್ಲು, ಯಂತ್ರಶಾಲೆ, ಕಾರ್ಖಾನೆ. क्रिवि. ಸೇರಿ, ಕೂಡಿ. मिल जुल = ಒಟ್ಟುಗೂಡಿ.

मिलन, पु. ಸಂಧಿಸುವಿಕೆ; ಸೇರುವಿಕೆ; ಸೇರಿಕೆ; ಹೊಂದಿಕೆ; ಮಿಳನ.

मिलनसार, वि. ಸ್ನೇಹವಾತ್ಸಲ್ಯವುಳ್ಳ; ಸೌಜನ್ಯವಾದ; ಹೊಂದಿಕೊಳ್ಳುವ ಸ್ವಭಾವದ.

मिलनसारी, स्त्री. ಹೊಂದಿಕೊಳ್ಳುವ ಸ್ವಭಾವ; ಸೌಹಾರ್ದ, ಸೌಜನ್ಯ.

मिलना, अक्रि. ಮಿಳಿತವಾಗು, ಸೇರಿಕೊಳ್ಳು; ಸೇರು, ಕಲೆ, ಬೆರೆ; ಕೂಡು; ಅಪ್ಪಿಕೊ, ತಬ್ಬಿಕೊ; ಆಲಿಂಗಿಸು; ಸಂಧಿಸು, ಭೇಟಿಮಾಡು; ಸಿಗು, ದೊರೆ; ಲಭಿಸು, ದೊರಕು; ಹೊಂದು; ತಾಳೆ ಬೀಳು; ಹೋಲು, ಒಪ್ಪು. मिलना जुलना = ಅನ್ಯೋನ್ಯದಿಂದ ಕಲೆ; ಹೊಂದಿಕೆಯಾಗಿರು; ಒಪ್ಪು, ಹೋಲು

मिलनी, स्त्री. ಒಂದು ಬಗೆ ವಿವಾಹ.
मिलवाना, स्त्री. ಸೇರಿಸುವಿಕೆ, ಕೂಡಿಸುವಿಕೆ; ಹೋಲಿಸುವಿಕೆ; ವಿವಾಹದಲ್ಲಿ ಬೀಗರಿಬ್ಬರೂ ತಬ್ಬಿಕೊಳ್ಳುವ ಸಂಪ್ರದಾಯ. सक्रि. मिलाना का प्रे. रूप.
मिलान, पु. ಸೇರಿಸುವಿಕೆ, ಬೆರಸುವಿಕೆ; ಹೋಲಿಕೆ; ತಾಳೆ ನೋಡುವಿಕೆ.
मिलाना, सक्रि. ಸೇರಿಸು; ಕಲಸು, ಬೆರಸು; ಜೊತೆಮಾಡು; ಒಟ್ಟುಗೂಡಿಸು; ಸರಿನೋಡು, ತಾಳೆನೋಡು; ಹೋಲಿಸು; ಸಂಧಿ ಮಾಡಿಸು, ಭೇಟಿ ಮಾಡಿಸು.
मिलानी, स्त्री. ಹೋಲಿಕೆ; ಸರಿಪಡಿಸುವಿಕೆ.
मिलाप, पु. ಸೇರಿಕೆ, ಹೊಂದಿಕೆ; ಒಗ್ಗಟ್ಟು, ಐಕ್ಯ, ಐಕಮತ್ಯ; ಸ್ನೇಹ; ಸಂಧಿ, ಭೇಟಿ; ಸಂಪರ್ಕ.
मिलापी, वि. ಹೊಂದಿಕೆಯಾದ, ಸ್ನೇಹಪರ.
मिलाव, मिलावट, स्त्री. ಮಿಶ್ರಣ; ಬೆರಕೆ, ಕಲಪಡ; ಸೇರಿಕೆ; ಹೊಂದಾವಣೆ; ಐಕ್ಯ, ಒಗ್ಗಟ್ಟು; ಸಂಧಿ, ಸಮಾಧಾನ.
मिलित, वि. ಬೆರೆತ, ಕಲೆತ, ಸೇರಿದ, ಸಮ್ಮಿಳಿತವಾದ.
मिलोना, सक्रि. ಸೇರಿಸು, ಕಲಸು; ಜೊತೆಮಾಡು; ಹಾಲು ಕರೆ.
मिलौनी, वि. ಕಲೆತ, ಬೆರೆತ स्त्री. ಬೆರಕೆ.
मिल्क, स्त्री. ಭೂಸ್ಥಿತಿ. ಜಹಗೀರು; ಆಸ್ತಿ.
मिल्कियत, स्त्री. ಜಹಗೀರು, ಇನಾಂ ಜಮೀನು; ಭೂಸ್ಥಿತಿ; ಆಸ್ತಿ; ಹಕ್ಕು; ಜಮೀನಿನ ಬಾಧ್ಯತೆ; ಸ್ವಾಧೀನ, ಹಿಡುವಳಿ.
मिल्की, पु. ಜಮೀನುದಾರ.
मिल्लत, स्त्री. ಮತ; ಧರ್ಮ; ಅನ್ಯೋನ್ಯ, ಸ್ನೇಹವಾತ್ಸಲ್ಯ.
मिश्र, वि. ಮಿಶ್ರಿತ; ಬೆರೆತ, ಕಲೆತ. पु. ಬ್ರಾಹ್ಮಣರ ಒಂದು ಬಿರುದು; ಪುರಾಣಿಕ; ಭಾಗವತರು; ಈಜಿಪ್ಟ್ ದೇಶ.
मिश्रण, पु. ಮಿಶ್ರಣ, ಬೆರಕೆ.
मिश्रित, वि. ಮಿಶ್ರಿತ, ಬೆರೆತ.
मिश्री, स्त्री. ಕಲ್ಲುಸಕ್ಕರೆ.
मिस, पु. ನೆವ, ವ್ಯಾಜ; ತಂತ್ರ; ತಾಮ್ರ.
मिसकीन, वि. ದೀನ; ದಿಕ್ಕಿಲ್ಲದವ, ಬಡ.
मिसकीनी, स्त्री. ದೈನ್ಯ; ಬಡತನ
मिसना, अक्रि. ಪುಡಿಪುಡಿಯಾಗು.
मिसरा, पु. ಬಾಗಿಲಿನ ಒಂದು ಕದ; ಶ್ಲೋಕದ ಒಂದು ಪಂಕ್ತಿ, ಶ್ಲೋಕಾರ್ಧ; ಬ್ರಾಹ್ಮಣರ ಒಂದು ಬಿರುದು, "ಮಿಶ್ರ".
मिसरी, स्त्री. ಕಲ್ಲುಸಕ್ಕರೆ.
मिसहा, पु. ನೆಪಹೇಳುವವ; ಮೋಸಗಾರ.
मिसाई, स्त्री. ಒಕ್ಕಣೆ, ಹುಲ್ಲೊಕ್ಕಲು.
मिसाल, स्त्री. ಉದಾಹರಣೆ; ದೃಷ್ಟಾಂತ; ಹೋಲಿಕೆ; ಉಪಮೆ; ಗಾದೆ, ಸಾಮತಿ.
मिसिर, पु. ಬ್ರಾಹ್ಮಣರ ಒಂದು ಬಿರುದು, "ಮಿಶ್ರ".
मिसरानी, मिसिराइन, स्त्री. मिसिर का स्त्री. रूप; ಅಡಿಗೆಯವಳು.

मिसिल, वि. ಸಮಾನ, ಸದೃಶ. स्त्री. ಕಾಗದ ಪತ್ರಗಳ ಕಟ್ಟು, "ಫೈಲ್".

मिसी, वि. ತಾಮ್ರದ

मिस्क़ला, पु. ಸಾಣೆಕಲ್ಲು.

मिस्तर, पु. ಝಾಡಮಾಲಿ; ಪೆಟ್ಟಣಿಗೆ, ದಮ್ಮಸ್ಸು; ಬರೆಯುವಾಗ ಒತ್ತಿಗೆ ಇಟ್ಟುಕೊಳ್ಳುವ ರಟ್ಟು, ಅಡಿವತ್ರಳೆ.

मिस्तरी, पु. ಕೆಲಸಗಾರ; ಮೇಸ್ತ್ರಿ; ಗಾರೆಕೆಲಸದವ, ತರಗಾರ; ಬಡಗಿ.

मिस्ता, पु. ಮೈದಾನ, ಬಯಲು.

मिस्मार, वि. ಹಾಳಾದ, ಧ್ವಂಸವಾದ पु. ಮೊಳೆ, ಗೂಟ.

मिस्सा, पु. ಗೋಧಿ ಕಡಲೆ ಮತ್ತು ಬಟಾಣಿ ಇವುಗಳ ಬೆರಕೆ.

मिस्सी, स्त्री. ಹೆಂಗಸರು ಅಲಂಕಾರಕ್ಕಾಗಿ ಹಲ್ಲುಗಳಿಗೆ ಹಚ್ಚಿಕೊಳ್ಳುವ ಒಂದು ಬಗೆ ಲೇಪ, ಹಲ್ಲುಗೆಂಪು, ಓರಣ. मिस्सी काजल = ಸಿಂಗಾರ.

मिह, वि. ದೊಡ್ಡ; ನಾಯಕ.

मिहनत, स्त्री. = मेहनत.

मिहाद, पु. ಮಂಚ, ಪಲಂಗ.

मिहाना, अक्रि. ಒದ್ದೆಯಾಗು.

मिहिर, पु. ಸೂರ್ಯ; ಚಂದ್ರ; ಮೇಘ, ಮೋಡ; ವಾಯು, ಗಾಳಿ.

मिहीन, वि. ನುಣುಪಾದ, ಸೂಕ್ಷ್ಮವಾದ; ತೆಳುವಾದ.

मिहीनदोज़, पु. ಹೊಲಿಗೆಯವ, ದರ್ಜಿ

मींगी, स्त्री. ತಿರುಳು, ಕುಸುರಿ; ಕೆಚ್ಚು, ಚೇಗು.

मींजना, मींडना, सक्रि. ತಿಕ್ಕು, ಉಜ್ಜು; ಬೆಳಗು; ಹಿಸುಕು.

मीआद, स्त्री. = मियाद.

मीच, स्त्री. ಮೃತ್ಯು, ಸಾವು; ಅಳಿವು.

मीचना, सक्रि. ಕಣ್ಣು ಮುಚ್ಚು.

मीज़ान, पु. ತಕ್ಕಡಿ, ತ್ರಾಸು; ತುಲಾರಾಶಿ; ಕೂಡುವಿಕೆ; ಒಟ್ಟು, ಜುಮ್ಲ, ಬೇರೀಜು, ಏಕೂನು.

मीज़ू, पु. ಮಸೂರು ಬೀಜ.

मीठा, वि. ಸಿಹಿಯಾದ, ಮಧುರ; ಸವಿ, ರುಚಿಕರ; ಪ್ರಿಯ, ಪಸಂದಾದ; ಸರ್ವಸಾಧಾರಣವಾದ; ಎಡವಟ್ಟು; ಮಂದಬುದ್ಧಿ; ನಪುಂಸಕ. पु. ಸಿಹಿಪದಾರ್ಥ; ಬೆಲ್ಲ; ಸಿಹಿ. मीठा तेल = ಒಳ್ಳೆ ಎಣ್ಣೆ

मीठिया, मीठी, स्त्री. ಚುಂಬನ.

मीत, पु. ಮಿತ್ರ, ಸ್ನೇಹಿತ; ಪ್ರಿಯ.

मीता, पु. ತಂಬಿಗೆ, ಗಲಂತಿಕೆ, ಬಟ್ಟಲು

मीन, पु. ಮೀನು; ಮೀನರಾಶಿ. मीन मेख निकालना = ಮೀನ ಮೇಷ ನೋಡು; ವಿಮರ್ಶಿಸು, ಟೀಕಿಸು.

मीना, पु. ರಾಜಪುತ್ರಸ್ಥಾನದ (ಕಳ್ಳತನ, ದರೋಡೆ ಮಾಡುವ) ಒಂದು ಜಾತಿ; ದರೋಡೆಗಾರ, ಡಕಾಯಿತ; ದೇವಲೋಕ, ಸ್ವರ್ಗ; ನೀಲ ಆಕಾಶ; ನೀಲಮಣಿ; ನೀಲಿ; ಪಿಂಗಾಣಿ, ಮಿನಾಯಿ; ಚಿನ್ನದ ಮೇಲೆ ಮಾಡುವ ಬಣ್ಣದ ಕೆಲಸ; ಸೇಂದಿಯ ಗಾಜಿನ ಪಾತ್ರೆ. मीना बाज़ार = ವಿಚಿತ್ರ ಸಾಮಾನುಗಳ ಅಂಗಡಿ ಅಥವಾ ಸಂತೆ.

मीनाकार, पु. ಮೀನಾಯಿ ಹಾಕುವವ.

मीनाकारी, स्त्री. ಮಿನಾಯಿ ಕೆಲಸ.

मीनार, स्त्री ಸ್ತಂಭಾಕಾರದಗೋಪುರ, ಕುಂದ, ಗೋಪುರ ಸ್ತಂಭ.

मीर, पु. ಮುಖಂಡ, ನಾಯಕ; ಮುಖ್ಯಸ್ಥ; ಆಚಾರ್ಯರು; ಇಸ್ಪೀಟಿನಲ್ಲಿ ರಾಜ. मीर फर्श = ರತ್ನಗಂಬಳಿಯ ಮೇಲೆ ಅಂಚಿನಲ್ಲಿ ಇಟ್ಟಿರುವ ಭಾರದ ಗುಂಡುಗಳು. मीर मजलिस=ಸಭಾಪತಿ, ಸಭಾನೇತೃ, ಸಭಾಧ್ಯಕ್ಷ.

मीरास, स्त्री. ಪಿತ್ರಾರ್ಜಿತ ಸೊತ್ತು, ದಾಯ; ವಂಶಪರಂಪರೆಯಾಗಿ ಬಂದ ಹಕ್ಕು ಬಾಧ್ಯತೆ, ಮಿರಾಸಿ.

मीरासी, वि. ವಂಶಪರಂಪರೆಯಾಗಿ ಬಂದ ಹಕ್ಕುಬಾಧ್ಯತೆಗೆಸಂಬಂಧಪಟ್ಟ, ಮಿರಾಸಿನ. पु. ಮುಹಮ್ಮದೀಯ ದಾಸಯ್ಯ, ಅಥವಾ ಲಾವಣಿಗಾರ

मील, पु. ೧೭೬೦ ಗಜ, ಮೈಲು. स्त्री. ರಕ್ತ ತೆಗೆಯುವ ಸಣ್ಣ ಶಸ್ತ್ರ, ವೇಧನಿ; ಸೂಜಿ; ದಬ್ಬಣ.

मीलन, पु. ಮುಚ್ಚುವಿಕೆ.

मीश, पु. ಪೋಟಿ, ಸ್ಪರ್ಧೆ; ಹಗೆ, ದ್ವೇಷ, ಮೋಸ, ವಂಚನೆ; ಠಕ್ಕು; ನೆಪ.

मीशी, स्त्री. ಒಂದು ಬಗೆ ಚಕ್ಕಳ.

मीसना, सक्रि. ಅರೆ, ಇಡಿ, ಬೀಸು.

मुंगरा, पु. ಕೊಡತಿ, ಮುದ್ಗರ; ಕಾರಾಬುಂದೀ.

मुंगरी, स्त्री. ಚಿಕ್ಕ ಕೊಡತಿ.

मुंगेर, वि. ಹಟಮಾರಿ, ಚಂಡಿ.

मुंगौरी, स्त्री. ಹೆಸರುಬೇಳೆ ಸಂಡಿಗೆ.

मुंछ-मुंडा, वि. ಮೀಸೆ ಬೋಳಿಸಿಕೊಂಡವ.

मुंछैला, वि. ಮೀಸೆಯುಳ್ಳವ.

मुंड. पु. ತಲೆ, ಮುಂಡ, ಕಪಾಲ; ಬೋಳುತಲೆ; ಮರದ ಮೋಟು, ಬೊಡ್ಡ.

मुंडचीरा, पु. ತಲೆಯನ್ನೊಡೆದುಕೊಳ್ಳುವೆನೆಂದು ಹೆದರಿಸಿ ಭಿಕ್ಷೆ ಬೇಡುವವ; ಕಡ್ಡಾಯಗಾರ; ಸುಲಕೊಳ್ಳುವವ.

मुंडन, पु. ಮುಂಡನ, ಕ್ಷೌರ; ಚೌಲ.

मुंडना, अक्रि. ಕ್ಷೌರವಾಗು, ಹಜಾಮತ್ತಾಗು.

मुंडला, वि. ಬೋಳಿಸಿದ.

मुंडवाना, सक्रि. ಕ್ಷೌರಮಾಡಿಸಿದ.

मुंडा, वि. ಬೋಳಿಸಿದ, ಮುಂಡ; ಬೋಳು; ಮೊಂಡ, ಮೋಟು(ಮರ). पु. ಎಕ್ಕಡ, ಮೆಟ್ಟು; ಮೋಡಿ ಬರಹ.

मुंडाई, स्त्री. ಕ್ಷೌರಮಾಡುವಿಕೆ, ಹಜಾಮತ್ತು; ಕ್ಷೌರದ ಕೂಲಿ.

मुंडाना, सक्रि. ಕ್ಷೌರಮಾಡು, ಹಜಾಮತ್ತು ಮಾಡು, ಬೋಳಿಸು.

मुंडासा, पु. ಮುಂಡಾಸು, ಪೇಟ.

मुंडित, वि. ಬೋಳಿಸಲ್ಪಟ್ಟ, ಮುಂಡಿತ.

मुंडिया, पु ಶಿರಸ್ಸು, ತಲೆ; ಸನ್ಯಾಸಿ.

मुंडी, स्त्री. ಮುಂಡೆ, ಬೋಳಿ; ಒಂದು ವನಸ್ಪತಿ; ತಲೆ; ಶಿಖರ, ತುದಿ. पु. ಕ್ಷೌರಕ, ನಾಪಿತ, ಕೆಲಸಿಗ.

मुंडीसा, पु. ತಲೆಯ ಕಡೆ.

मुंडेरा, पु. **मुंडेर, मुंडेरी,** स्त्री. ಗೋಡೆಯ ಅಗ್ರ, ಕುಂಬೆ, ಅಳುವೇರಿ.

मुंतक्रिल, वि. = मुन्तक्रिल.

मुंदना, अक्रि. ಮುದುರಿಕೊಳ್ಳು, ಮುಗಿ; ಬಂದಾಗು, ಮುಚ್ಚು.

मुंदरा, पु. ಕಿವಿಯ ಕುಂಡಲಿ.
मुंदरिया, मुंदरी, स्त्री. ಉಂಗುರ.
मुंह, पु. ಮುಖ, ಮೊಗ; ಮುಖಭಾವ; ಮೂತಿ, ಮೋರೆ; ಬಾಯಿ; ದ್ವಾರ.
मुंह की खाना = ಅವಮಾನ ಹೊಂದು
मुंह बनाना = ಅಣಕಿಸು. मुंह मारना = ಬಾಯಿಗೆ ಹಾಕು, ಲಂಚ ಕೊಡು.
मुंहचंग, पु. ಮೋರ್ಛಿಂಗ್ (ವಾದ್ಯ).
मुंहचोर, वि. ಪುಕ್ಕ, ಪಿರಿಕಿ; ಮನೆಯಲ್ಲೇ ಬಿದ್ದಿರುವವ.
मुंह-छुआई, स्त्री. ಒಣ ಉಪಚಾರದ ಮಾತು.
मुंहज़बानी, वि. ಬಾಯಿಮಾತಿನ; ಬಾಯಿಪಾಠದ, ಕಂಠಸ್ಥ.
मुंहज़ोर, वि. ಬಾಯಿಬಡುಕ, ಗಡಸು ಮಾತಿನವ; ಗಡುಸಿನ, ಬಿರುಸಿನ; ದುಡುಕಿನವ; ಹಟಮಾರಿ.
मुंहज़ोरी, स्त्री. ದುಡುಕು; ಹಟ.
मुंहटोपा, पु. 'ಬಾಯಿಕುಲಾವಿ', ಲಂಚ
मुंहड़ा, पु. ಮುಖ, ಮೂತಿ; ಬಾಯಿ.
मुंहतोड़, वि. ಮುಖ ಮುರಿಯುವ (ಜವಾಬು)
मुंहदिखाई, स्त्री. ಮದುವೆಯನಂತರ ಗಂಡಿನ ಕಡೆಯವರು ವಧುವನ್ನು ಮೊತ್ತಮೊದಲು ನೋಡುವ ಸಂಪ್ರದಾಯ, ಮುಖ ನೋಡುವ ಶಾಸ್ತ್ರ: ವಧುವನ್ನು ನೋಡುವಾಗ ಕೊಡುವ ಉಡುಗೊರೆ.
मुंहदेखनी, स्त्री. ವಧುವನ್ನು ಮೊತ್ತ ಮೊದಲು ನೋಡುವಿಕೆ.
मुंहदेखा, वि. ಮುಖ ದಾಕ್ಷಿಣ್ಯದ (ಕೆಲಸ).
मुंहनाल, स्त्री. ಹುಕ್ಕಾವಿನ ಬಾಯಿ.
मुंह-फट, वि. ಕೆಟ್ಟನಾಲಗೆಯುಳ್ಳ, ಕೆಟ್ಟ ಬಾಯಿನವ; ಹರಟೆಮಲ್ಲ; ನಿರ್ಭಯನಾದವ.
मुंहबोला, वि. ಹೆಸರಿನ; ಹೆಸರುಳ್ಳ.
मुंहबोला भाई = ದತ್ತಕ ಸೋದರ; ಸೋದರನೆಂದು ಹೆಸರು ಕೊಟ್ಟು ಕರೆಯುವವ; ಪರಮಮಿತ್ರ, ಅಪ್ತಸ್ನೇಹಿತ
मुंहभराई, स्त्री. ಬಾಯಿ ತುಂಬಿಸುವುದು; ಲಂಚ.
मुंहमांगा, वि. ಬೇಡಿದ, ಕೋರಿದ.
मुंहामुंह, क्रिवि. ತುಂಬಿದ, ಪೂರ್ಣ; ಇದಿರಿನಲ್ಲಿ, ರೂಬರೂಬು, ಮೊಖಾ.
मुंहासा, पु. ಮೊಡವೆ, ಮುಡಿಬಕ್ಕೆ, ಮುಡಿಮೆ, ಮುದ್ದಣ.
मुअज़्ज़न, पु. ಮುಸಲ್ಮಾನರನ್ನು ನಮಾಜಿಗೆ ಮಸೀದಿಗೆ ಕರೆವ ಮುಲ್ಲಾ.
मुअजम, वि. ದೊಡ್ಡ, ಹಿರಿಯ.
मुअत्तल, वि. ಖಾಲಿ; ನಿವೃತ್ತನಾದ.
मुअन्नस, पु. ಸ್ತ್ರೀಲಿಂಗ.
मुअम्मा, पु. ಗೂಢಸಂಗತಿ, ಮರ್ಮ; ಒಗಟು; ಕಠಿಣ ಕೆಲಸ, ಸಮಸ್ಯೆ.
मुअल्लिफ़, पु. ಸಂಪಾದಕ, ರಚಯಿತ.
मुअल्लिम, पु. ಅಧ್ಯಾಪಕ, ಶಿಕ್ಷಕ.
मुअल्लिमा, स्त्री. ಅಧ್ಯಾಪಿಕೆ, ಶಿಕ್ಷಕಿ.
मुअल्लिमी, स्त्री. ಅಧ್ಯಾಪನ; ಶಿಕ್ಷಣವೃತ್ತಿ
मुअस्सर, वि. ಗುಣಕಾರಿ.
मुआना, अक्रि. ಸಾಯು, ಮಡಿ,

मुआफ़, वि. = माफ़.
मुआमिला, पु. = मामला.
मुआयना, पु. ಮೇಲ್ವಿಚಾರಣೆ; ಉಸ್ತುವಾರಿ; ದೃಷ್ಟಿ, ನೋಟ.
मुआलजा, पु. ಔಷಧೋಪಚಾರ, ಇಲಾಜು, ವೈದ್ಯಚಿಕಿತ್ಸೆ.
मुआलिज, पु. ಚಿಕಿತ್ಸಕ.
मुआवज़ा, पु. ಪ್ರತಿಫಲ, ಸಂಭಾವನೆ; ಮುಯ್ಯಿ; ಪರಿವರ್ತನೆ.
मुआहिदा, पु ಪ್ರತಿಜ್ಞೆ, ಕರಾರು.
मुई, स्त्री. ತಾಯಿ.
मुकटा, पु. ಮುಗುಟ.
मुक़तदा, पु. ಆಚಾರ್ಯ, ಗುರು.
मुक़तदी, पु. ಅನುಕರಣ ಮಾಡುವವ, ಹಿಂಬಾಲಿಸುವವ; ಶಿಷ್ಯ.
मुक़तदीर, वि. ಶಕ್ತಿವಂತ, ಬಲಿಷ್ಠ.
मुक़तफ़ी, वि. ತೃಪ್ತನಾದ, ಸಂತುಷ್ಟ; ಪೂರ್ತಿಯಾದ, ಪರ್ಯಾಪ್ತ.
मुक़त्ता, वि. ಅಚ್ಚುಕಟ್ಟಾದ, ಚೊಕ್ಕಟ.
मुक़द्दम, वि. ಪೂರ್ವದ; ಮುಂದಿನ; ಸನಾತನ; ಪ್ರಧಾನ. पु. ಮುಂದಾಳು.
मुक़द्दमा, मुक़द्दमा, पु. ಮೊಕದ್ದಮೆ, ಖಟ್ಲೆ; ದಾವಾ, ವ್ಯಾಜ್ಯ; ಪೀಠಿಕೆ, ಭೂಮಿಕೆ.
मुक़द्दमाबाज़, मुक़द्दमेबाज़, पु. ವ್ಯಾಜ್ಯವಾಡುವವ.
मुक़द्दमेबाज़ी, स्त्री. ವ್ಯಾಜ್ಯವಾಡುವಿಕೆ; ವಿವಾದ.
मुकद्दर, वि. ಕದಡಿದ, ಕಲಕು; ಅಸಂತುಷ್ಟ; ವ್ಯಥಿತ.
मुक़द्दर, पु. ಭಾಗ್ಯ, ನಿಯತಿ, ವಿಧಿ.
मुक़द्दस, वि. ಪವಿತ್ರವಾದ, ಪಾವನ.
मुकम्मल, वि. ಪೂರ್ಣ, ಸಂಪೂರ್ಣವಾಗಿ ಅಳವಡಿಸಿದ; ಪೂರೈಸಿದ, ಸಮಾಪ್ತ.
मुकरना, अक्रि. ಕೊಟ್ಟ ಮಾತನ್ನು ಮೀರು; ಅಲ್ಲವೆನ್ನು, ಅಪಲಪಿಸು; ನಿರಾಕರಿಸು.
मुकरनी, मुकरी, स्त्री. ಕವನವಿಶೇಷ.
मुकर्रम, वि. ಗೌರವವುಳ್ಳ, ಮಾನ್ಯ.
मुकर्रर, क्रिवि. ಮತ್ತೊಮ್ಮೆ, ಪುನಶ್ಚ. मुकर्रर शिकर्रर = ಎರಡನೇ ಸಾರಿ ಮೂರನೇ ಸಾರಿ; ಪದೇ ಪದೇ, ಪುನಃ ಪುನಃ.
मुक़र्रर, वि. ನಿಶ್ಚಿತ, ಗೊತ್ತಾದ; ನಿಗದಿ ಮಾಡಿದ, ನಿಯತ, ನೇಮಕವಾದ, ನಿಯುಕ್ತ; ನಿತ್ಯವಾದ, ಶಾಶ್ವತ.
मुक़र्ररा, वि. ನಿಗದಿಯಾದ (ಭಾಗ). पु. ನಿಗದಿಯಾದ ವೇತನ, ಮಾಸಾಶನ.
मुक़र्ररी, स्त्री. ನಿಗದಿ, ನಿರ್ಧಾರಣ; ನಿಯುಕ್ತಿ, ನಿಯೋಗ, ನೇಮಣೂಕಿ.
मुकलावा, पु. = गौना.
मुक़व्वी, वि. ಬಲಕಾರಕ, ಪೌಷ್ಟಿಕ.
मुक़स्सर, वि. ಒಡೆದ, ಮುರಿದ; ತುಂಡುಳ್ಳ; ಅಪೂರ್ಣ.
मुक़ाबला, पु. ಮುಖಾಮುಖಿ, ಭೇಟಿ, ಮೊಕಾಬಿಲೆ; ಮಾರೊಡ್ಡುವಿಕೆ, ಎದುರಾಟ; ಹೋರಾಟ; ವಿರೋಧ, ಪ್ರತಿಭಟನೆ; ಸಾಮ್ಯ, ಈಡು; ಹೋಲಿಕೆ; ತುಲನೆ; ಪರೀಕ್ಷೆ, ಪರಿಶೀಲನೆ.

मुक़ाबिल, क्रिवि. ಸಮ್ಮುಖದಲ್ಲಿ, ಎದುರಿನಲ್ಲಿ. पु. ಎದುರಾಳಿ, ಪ್ರತಿಸ್ಪರ್ಧಿ, ವಿರೋಧಿ.

मुक़ाम, पु. ನಿಲ್ಲುವ ಸ್ಥಳ, ನೆಲೆ; ತಂಗುವ ಸ್ಥಳ, ಬಿಡದಿ, ಬಿಡಾರ; ಬೀಡು; ಮೊಕ್ಕಾಂ; ತಂಗುವಿಕೆ, ಅವಸ್ಥಾನ; ನಿವಾಸ; ಸಂದರ್ಭ, ಎಡೆ; ವೀಣೆಯ ಗಮಕಣಿಗೆ

मुकातबत, स्त्री. ಪತ್ರವ್ಯವಹಾರ.

मुक़ामी, वि. ಸ್ಥಳೀಯ, ಸ್ಥಾನೀಯ.

मुकियाना, सक्रि. ಗುಮ್ಮು, ಗುದ್ದು.

मुक़्री, पु. ವಾಂತಿ ಉಂಟುಮಾಡುವ ಔಷಧ, ವಮನಕಾರಿ ಔಷಧ.

मुक़ीम, वि. ತಂಗುವವ, ಇರುವವ; ನಿವಾಸಿ. पु. ಠರಗುಗಾರ, ದಲ್ಲಾಳಿ.

मुकुट, पु. ಕಿರೀಟ, ಮುಕುಟ.

मुकुर, पु. ದರ್ಪಣ, ಕನ್ನಡಿ; ಮೊಗ್ಗು.

मुकुल, पु. ಮೊಗ್ಗು, ಮುಗುಳು.

मुकुलित, वि. ಅರಳಿದ; ವಿಕಸಿಸಿದ.

मुक्का, पु. ಗುದ್ದು, ಗುಮ್ಮು, ಮುಷ್ಟಿ.

मुक्कियाना, सक्रि. ಮುಷ್ಟಿಯಿಂದ ಹೊಡೆ, ಗುದ್ದು, ಗುಮ್ಮು; ಹಿಟ್ಟನ್ನು ನಾದು; ಹಿಸಕು.

मुक्की, स्त्री. ಮುಷ್ಟಿ; ಗುದ್ದು, ಗುಮ್ಮು; ಮುಷ್ಟಿಯುದ್ಧ. ಗುದ್ದಾಟ; ಮುಷ್ಟಿಯಿಂದ ಹಿಸಕುವಿಕೆ.

मुक्केबाज़, वि. ಗುದ್ದಾಡುವವ.

मुक्केबाज़ी, स्त्री. ಮುಷ್ಟಿಯುದ್ಧ.

मुक्त, वि. ಬಿಡುಗಡೆಯಾದ.

मुक्ति, स्त्री. ಮುಕ್ತಿ, ಬಿಡುಗಡೆ.

मुख, पु. ಮುಖ; ಮೂತಿ, ಮೋರೆ; ಬಾಯಿ; ದ್ವಾರ.

मुख़ड़ा, पु. ಮುಖ, ಮೂತಿ, ಮುಸುಡಿ; ಬಾಯಿ.

मुख़न्नस, वि. ನಪುಂಸಕ; ನಪುಂಸಕಲಿಂಗ

मुख़बिर, वि. ಸುದ್ದಿ ಹೇಳುವವ, ದೂತ; ಗೂಢಚಾರ.

मुख़बिरी, स्त्री. ಗುಪ್ತರೀತಿಯಲ್ಲಿ ವಿಚಾರಿಸುವಿಕೆ, ಬೇಹು; ಗುಪ್ತಚಾರನ ಕೆಲಸ.

मुख़म्मस, वि. ಐದರಷ್ಟು, ಐದುಮಡಿ; ಐದು ಮೂಲೆಗಳುಳ್ಳ. पु. ಐದು ಕೋನಗಳ ಕ್ಷೇತ್ರ; ಐದು ಚರಣಗಳ ಕವಿತೆ, ಪಂಚಪದಿ.

मुख़लिस, वि. ಶುದ್ಧವಾದ, ಅಪ್ಪಟ; ನಿಜವಾದ, ಯಥಾರ್ಥ. पु. ಸ್ನೇಹಿತ.

मुख़लिसाना, क्रिवि. ಯಥಾರ್ಥವಾಗಿ; ಸ್ನೇಹಭಾವದಲ್ಲಿ.

मुख़लिसी, स्त्री. ಮುಕ್ತಿ, ಬಿಡುಗಡೆ.

मुख़ातिब, वि. ಮಾತನಾಡಿಸಲ್ಪಡುವವ, ಸಂಬೋಧಿತ; ಬಿರುದಾಂಕಿತ; ಹೆಸರುಳ್ಳ, ನಾಮಾಂಕಿತ; ಮಾತಾಡುವವ, ಸಂಬೋಧಿಸುವವ. मुख़ातिब होना = ಸಂಬೋಧಿಸು पु. ಮಧ್ಯಮ ಪುರುಷ (ವ್ಯಾಕರಣ).

मुखा, पु ಛಾವಣಿಯ ಬೆಂತೊಲೆ.

मुखानी, स्त्री. ರೂಪ, ಆಕೃತಿ.

मुखारा, वि. ಕೆಟ್ಟ ಬಾಯಿಯುವ, ಕೆಟ್ಟ ನಾಲಗೆಯುವ.

मुख़ालफ़त, स्त्री. ಎದುರಿಸುವಿಕೆ, ವಿರೋಧ; ಪ್ರತಿಭಟನೆ; ಮತಭೇದ,

ಭಿನ್ನಾಭಿಪ್ರಾಯ.

मुख़ालिफ़, वि. ವಿರುದ್ಧವಾದ; ಎದುರಾಳಿ, ವಿರೋಧಿ.

मुखिया, वि. ಮುಖಂಡ, ಅಗ್ರೇಸರ.

मुखिरी, स्त्री. ಮೊಗ್ಗು, ಮುಗುಳು.

मुख़िल, वि. ದೊಂಬಿ ಎಬ್ಬಿಸುವವ, ಗಲಾಟೆಖೋರ.

मुखी, स्त्री. ಒಂದು ಬಗೆ ಪಾರಿವಾಳ.

मुखेरा, पु. ಮೂತಿ, ಮೋರೆ.

मुख़्तफ़ी, वि. ಗುಟ್ಟಾದ, ಗುಪ್ತ.

मुख़्तलिफ़, वि. ಬೇರೆ, ಭಿನ್ನ; ಅನೇಕ, ಬೇರೆಬೇರೆ; ಬಗೆಬಗೆಯ, ವಿವಿಧ.

मुख़्तसर, वि. ಸಂಕ್ಷಿಪ್ತ, ಲಘು; ಅಲ್ಪ, ಕಿರಿಯ. पु. ಸಾರಾಂಶ, ಅಡಕ.

मुख़्तसरन्, क्रिवि. ಸಂಕ್ಷೇಪವಾಗಿ.

मुख़्तार, पु. ಸ್ವತಂತ್ರ ಪುರುಷ; ಪ್ರತಿನಿಧಿ, ಪ್ರತಿಹಸ್ತಕ, ಏಜಂಟು, ಮೋಕ್ತಿಯಾರ್.

मुख़्तारकार, पु. ಏಜಂಟು, ಕಾರಭಾರಿ.

मुख़्तारनामा, पु. ಅಧಿಕಾರ ಪತ್ರ, ಮೊಕ್ತಿಯಾರನಾಮೆ, ವಕಾಲತು.

मुख़्तारी, स्त्री. ಮೊಕ್ತಿಯಾರನ ಕೆಲಸ; ಪ್ರಾತಿನಿಧ್ಯ; ಸ್ವಾತಂತ್ರ್ಯ.

मुख्य, वि. ಮುಖ್ಯ, ಪ್ರಧಾನ.

मुख्यता, स्त्री. ಪ್ರಾಮುಖ್ಯ, ಪ್ರಾಧಾನ್ಯ.

मुग, पु. ಅಗ್ನಿಪೂಜಕ; ಸೇಂದಿ ಅಂಗಡಿಯವ.

मुगदर, पु. ಗದೆ; ಕೊಡತಿ, ಬಡಿಗೆ; ಮುಗದರ.

मुग़न्नी, पु. ಸಂಗೀತಗಾರ.

मुग़ल, पु. ಮುಸಲ್ಮಾನರ ಒಂದು ಜಾತಿ, ಮೊಗಲರು. मुग़ल पठान = ಹುಲಿಕಲ್ಲಿನಾಟ.

मुग़लई, मुग़लाई, वि. ಮೊಗಲರ, ಮೊಗಲಾಯಿ.

मुग़लक़, वि. ಗೂಢವಾದ, ಕ್ಲಿಷ್ಟವಾದ; ಕಷ್ಟತರವಾದ.

मुग़लज़ात, स्त्री. ಬೈಗಳು, ನಿಂದೆ.

मुग़लानी, स्त्री. ಮೊಗಲರ ಸ್ತ್ರೀ; ದಾಸಿ, ಸೇವಕಿ; ಹೊಲಿಗೆಯವಳು.

मुग़ालता, पु. ಮೋಸ, ಠಕ್ಕು; ಭ್ರಮೆ.

मुग्ध, वि. ಚೆಲುವಿನ, ಸುಂದರ; ವಿವೇಕಶೂನ್ಯ, ಬೆಪ್ಪಾದ.

मुग्धता, स्त्री. ಚೆಲುವು, ಸೌಂದರ್ಯ, ಅಂದ; ಬೆಪ್ಪು; ಮುಗ್ಧತೆ.

मुचंग, पु. ಮೊರ್ಛಿಂಗು.

मुचकाना, सक्रि. ತಿರುಚು, ಹೊಸೆ.

मुचलका, पु. ದಸ್ತಾವೇಜು, ಕರಾರುಪತ್ರ; ಒಪ್ಪಂದ; ಜಾಮೀನು ಪತ್ರ; ಮುಚ್ಚಳಿಕೆ.

मुचलाना, सक्रि. ಮುಚ್ಚಿಸು.

मुचाना, सक्रि. ಮುಚ್ಚು; ಮುಚ್ಚಿಸು.

मुचीना, पु. ಚಿಮುಟ, ಚಿನುಟ.

मुच्चा, पु. ಮಾಂಸದ ದೊಡ್ಡ ಚೂರು.

मुछंदर, पु. ಉದ್ದ ಮೀಸೆಯವ; ಕಪಿ; ಕಪಿರಾಯ, ದಡ್ಡ; ಜೋಗಿ.

मुज़क्कर, पु. ಪುಲ್ಲಿಂಗ.

मुज़फ़्फ़र, वि. ವಿಜಯಿ; ಶ್ರೇಷ್ಠ.

मुजमल, वि. ಸಂಕ್ಷಿಪ್ತ; ಅಡಕ; ಕ್ರೋಡೀಕರಿಸಿದ.

मुजरा, पु. ಪ್ರಚಲಿತವಾದದ್ದು; ತಳ್ಳುಪಡಿ, ಉತ್ತಾರ; ವಜಾ, ವಟ್ಟ; ನಮಸ್ಕಾರ, ಪ್ರಣಾಮ; ಮುಜರೆ, ಓಲಗ; ಪುರಸ್ಕಾರ; ನಾಯಕಸಾನಿಯ ಸಂಗೀತ ಕಛೇರಿ.

मुजराई, पु. ಉತ್ತಾರ; ವಜಾ, ವಟ್ಟ; ಮುಜರೆ ಮಾಡುವವ, ಓಲಗಕಾರ; ಸೇವಾರ್ಥಿ.

मुजरिम, पु. ಅಪಾದಿತ, ಅಪರಾಧಿ.

मुजर्रद, वि. ಕೇವಲ, ಬರಿಯ; ಒಬ್ಬಂಟಿಗ; ಅವಿವಾಹಿತ, ಬ್ರಹ್ಮಚಾರಿ.

मुजर्रब, वि. ಅಜಮಾಯಿಷಿ ಮಾಡಿದ; ಪರೀಕ್ಷಿಸಿದ; ಅನುಭವವುಳ್ಳ; ಅರಿತುನುರಿತ.

मुज़ादला, पु. ಜಗಳ, ವಿರೋಧ.

मुज़ाफ़, वि. ಸೇರಿದ, ಸಂಬದ್ಧ.

मुज़ायक़ा. पु. ಚಿಂತೆ; ಕಷ್ಟ; ಬಡತನ.

मुज़ारा, वि. ಸಮಾನ, ಸದೃಶ.

मुज़ारी, पु. ಕೃಷಿಕ, ರೈತ.

मुजाऊसत, स्त्री. ಸಭೆ, ಕೂಟ, ಅಧಿವೇಶನ.

मुजावर, पु ಗೋರಿಗೆಸೇರಿದಪೂಜಾರಿ; ನೆರೆಯುವ.

मुजहमत, स्त्री. ತಡೆಗಟ್ಟುವಿಕೆ, ಅಡಚಣೆ

मुज़ाहिम, वि. ತಡೆಗಟ್ಟುವ, ತಡೆವ.

मुज़िर, वि. ಹಾನಿಕರ, ಕೆಟ್ಟ

मुज़तर, वि. ಶಾಂತಿಯಿಲ್ಲದ.

मुझ, सर्व. 'मैं' ಶಬ್ದಕ್ಕೆ ವಿಭಕ್ತಿ ಸೇರುವಾಗ ಆಗುವ ರೂಪ.

मुझे, सर्व. ನನ್ನನ್ನು; ನನಗೆ.

मुटकना, वि. ಪುಟ್ಟ; ಪುಟಾಣಿ.

मुटका, पु. ಮಗುಟ.

मुटरी, स्त्री. ಗಂಟು, ಮೂಟೆ.

मुटल्ला, वि. ದಪ್ಪವಾದ, ಗಡುತರ.

मुटाई, स्त्री. **मुटापा**, पु. ಪುಷ್ಟಿ, ಗಾತ್ರ; ದಪ್ಪ; ಕೊಬ್ಬು.

मुटाना, अक्रि. ದಪ್ಪವಾಗು, ಕೊಬ್ಬು.

मुटासा, वि. ಪ್ರತಿಷ್ಠೆಯುವ, ಅಹಂಕಾರಿ

मुटिया, पु. ಭಾರ ಹೊರುವವ.

मुट्ठा, पु. ದೊಡ್ಡ ಹಿಡಿ; ಗಂಟು, ಕಟ್ಟು, ಪಿಂಡಿ.

मुट्ठी, स्त्री. ಮುಷ್ಟಿ, ಹಿಡಿ; ಹಿಡಿತ. मुट्ठी गरम करना = ಲಂಚ ಕೊಡು.

मुठभेड़, स्त्री. ಸಂಧಿಸುವಿಕೆ; ತೆಕ್ಕೆಬೀಳುವಿಕೆ; ಜಗಳ, ಹೋರಾಟ

मुठमर्द, वि. ಬಲಿಷ್ಠ; ದಾಂಡಿಗ; ಪೋಕರಿ

मुठमर्दी, स्त्री. ಬಲ; ಬಲಾತ್ಕಾರ.

मुठिया, स्त्री. ಹಿಡಿಕೆ, ಕಾವು, ಹಿಡಿ; ಅರಳೆ ಎಕ್ಕುವ ಕೋಲು ಅಥವಾ ಕುಡುಪು; ಭಿಕ್ಷುಕನಿಗೆ ಹಿಡಿ ಅಕ್ಕಿ ಹಾಕುವಿಕೆ.

मुठियाना, सक्रि. ಹಿಡಿ, ತುಡುಕು, ಹಿಡಿದುಕೊಳ್ಳು.

मुड़ना, अक्रि. ಬಾಗು, ಮಣಿ; ತಿರುವು, ತಿರುಗು; ಮುರಿಗೆಯಾಗು, ಹೊರಳು; ಕ್ಷೌರವಾಗು, ಹಜಾಮತ್ತಾಗು.

मुड़वाना, सक्रि. "मूड़ना" का प्रे. रूप.

मुड़वारी, स्त्री. ಗೋಡೆಯ ತುದಿ, ಕುಂಟೆ; ತಲೆ ಕಡೆ.

मुड़हर, पु. ತಲೆ ಸೆರಗು.

मुड़ाना, पु. ಕ್ಷೌರ ಮಾಡಿಸು.

मुड़ाव, पु. ಮುರಿವು, ಮುಡುಕು; ತಿರುವು, ಮುರುದಲೆ.

मुड़िया, पु. ಸನ್ಯಾಸಿ. स्त्री. ತಲೆ; ಮೋಡಿ ಅಕ್ಷರ.

मुड्ढ, पु. ಪಟೇಲ, ಹೆಗ್ಗಡೆ.

मुड्ढा, पु. ಹೆಗಲು.

मुड्ढी, स्त्री. ದಿಮ್ಮಿ, ನಾಟ.

मुढियाना, अक्रि. ಬಾಗು; ತಿರುಚಿಕೊ.

मुतअज्जिब, वि. ವಿಸ್ಮಿತ, ಚಕಿತ.

मुतअल्लिक़, वि. ಅವಲಂಬಿತ; ಸೇರಿದ, ಸಂಬಂಧವುಳ್ಳ, ಸಂಬದ್ಧ. क्रिवि. ಸಂಬಂಧವಾಗಿ, ಕುರಿತು.

मुतअल्लिफ़, वि. ಪರಿಚಿತ, ಬಳಕೆಯುಳ್ಳ.

मुतअल्लिम, वि. ಓದಿಸಿದ, ಕಲಿಸಿದ; ಓದಿದವ, ಓದಾಳಿ, ಪಂಡಿತ; ಗುರು, ಉಪಾಧ್ಯಾಯ.

मुतक्का, पु. ಕೈಹಿಡಿ ಗೋಡೆ; ಕಂಬ; ಸ್ತಂಭಾಕಾರದ ಗೋಪುರ.

मुतनजिम, पु. ಜ್ಯೋತಿಷ್ಯ.

मुतनफ़्फ़िर, वि. ಅಸಹ್ಯ.

मुतना, पु. ಉಚ್ಚೆಬುರುಕ.

मुतफ़न्नी, वि. ಚತುರ, ಠಕ್ಕ.

मुतफ़र्रिक़, वि. ಬೇರೆಯಾದ, ಪೃಥಕ್.

मुतफ़र्रिक़ात, स्त्री. ವಿವಿಧ, ಸಬ್ಲುಂಡ; ಚಿಲ್ಲರೆ ವಸ್ತುಗಳು.

मुतफ़क्किर, **मुतफ़िक्क**, वि. ಚಿಂತಿತ.

मुतबन्ना, पु. ದತ್ತಕ ಪುತ್ರ, ಸ್ವೀಕಾರ ಪುತ್ರ.

मुतबर, वि. ನಂಬಿಕೆಯ, ವಿಶ್ವಾಸಾರ್ಹ; ಯಥಾರ್ಥ, ಸತ್ಯವಾದ; ಗಣ್ಯ, ಮಾನ್ಯ

मुतबरी, स्त्री. ನಂಬಿಗಸ್ತಿಕೆ, ವಿಶ್ವಾಸಾರ್ಹತೆ; ಮಾನ್ಯತೆ; ಗೌರವ.

मुतमइन, वि. ಸಂತುಷ್ಟ, ತೃಪ್ತ.

मुतमाद, वि. ನಂಬಿಗಸ್ತ, ನಾಣ್ಯಸ್ಥ; ಪ್ರಾಮಾಣಿಕ.

मुतरजिम, पु. ಭಾಷಾಂತರಕಾರ, ಅನುವಾದಕರ್ತ.

मुतलक़, क्रिवि. ಲವಲೇಶವೂ, ಸ್ವಲ್ಪವೂ. वि. ಸಂಪೂರ್ಣ, ಅಡೀ, ಪೂರಾ; ಧಾರಾಳವಾದ.

मुतवातिर, वि. ಒಂದರ ಹಿಂದೆ ಒಂದಾಗಿ ಬರುವ, ಅನುಕ್ರಮವಾದ.

मुतसद्दी, पु. ಬರಹಗಾರ, ಕಾರಕೂನ, ಗುಮಾಸ್ತ, ಮುತ್ಸದ್ದಿ; ವಿರೋಧ.

मुताना, सक्रि. ಉಚ್ಚೆ ಹೊಯ್ಯಿಸು.

मुताबिक़, वि. ಅನುಸಾರವಾದ, ತಕ್ಕ, ಅನುಗುಣವಾದ. क्रिवि. ಅನುಗುಣವಾಗಿ, ಮೇರೆಗೆ, ತಕ್ಕಂತೆ

मुतालआ, पु. ಯೋಚನೆ, ವಿಚಾರ, ಚಿಂತನೆ; ಪಠನ, ವ್ಯಾಸಂಗ.

मुतालबा, पु. ಕೇಳುವಿಕೆ; ವಸೂಲು ಬಾಕಿ.

मुतास, स्त्री. ಜಲಬಾಧೆ, ಲಘುಶಂಕೆ.

मुताह, स्त्री. ಕೂಡುವಳಿ, ಕೂಡಿಕೆ.

मुत्तफ़िक़, वि. ಒಪ್ಪಿಕೆಯುಳ್ಳ, ಸಮ್ಮತಿಸುವ; ಒಮ್ಮತವಾದ, ಏಕಮುಖ.

मुथरा, वि. ಮಂಕ; ಮದಡ.

मुदगर, पु. = मुगदर.

मुदब्बिर, पु. ವ್ಯವಸ್ಥಾಪಕ, ಆಡಳಿತಗಾರ; ರಾಜ್ಯಾಡಳಿತಗಾರ; ಅಮಾತ್ಯ,

ಸಚಿವ, ಮಂತ್ರಿ.

मुद्दब्बिरी, स्त्री. ವ್ಯವಸ್ಥೆ, ಆಡಳಿತ; ಕಟ್ಟುಕಟ್ಟಳೆ.

मुदर्रिस, पु. ಅಧ್ಯಾಪಕ, ಶಿಕ್ಷಕ.

मुदर्रिसी, स्त्री. ಅಧ್ಯಾಪನ; ಅಧ್ಯಾಪಕ ವೃತ್ತಿ, ಶಿಕ್ಷಣವೃತ್ತಿ.

मुदाख़िलत, स्त्री. ಹಸ್ತಕ್ಷೇಪ.

मुदाम, क्रिवि. ಸದಾ, ನಿರಂತರವಾಗಿ.

मुदामी, वि. ನಿರಂತರವಾದ, ನಿತ್ಯ.

मुदित, वि. ಮುದಿತ, ಹರ್ಷಿತ.

मुद्दआ, पु. ಇಷ್ಟ, ಇಚ್ಛೆ, ಅಭಿಪ್ರಾಯ, ತಾತ್ಪರ್ಯ; ಕೇಳುವ ಮಾಲು.

मुद्दइया, स्त्री. "मुद्दई" का स्त्री. रूप.

मुद्दई, पु. ತನ್ನ ಹಕ್ಕನ್ನು ಕೇಳುವವ, ದಾವೆದಾರ; ಫಿರ್ಯಾದಿದಾರ, ವಾದಿ; ಶತ್ರು.

मुद्दत, स्त्री. ಕಾಲ, ಬಹುಕಾಲ; ಅಂತರ, ಎಡೆ; ಕಾಲಾಂತರ. मुद्दत से = ಲಾಗಾಯಿತ್ತಿನಿಂದ.

मुद्दालेह, पु. ಪ್ರತಿವಾದಿ, ಪ್ರತಿಪಕ್ಷದವ

मुद्रण, पु. ಮುದ್ರಿಸುವಿಕೆ; ಅಚ್ಚು ಮಾಡುವಿಕೆ, ಮುದ್ರಣ.

मुद्रा, स्त्री. ಮುದ್ರೆ, ಮೊಹರು; ಉಂಗುರ; ನಾಣ್ಯ.

मुद्रित, वि. ಮುದ್ರಿಸಲ್ಪಟ್ಟ, ಅಚ್ಚು ಮಾಡಿದ, ಮುದ್ರಿತ.

मुनक़श, वि. ಕೆತ್ತಿದ; ಮುದ್ರಿಸಿದ.

मुनक्का, पु. ದೊಡ್ಡ ದ್ವೀಪದ್ರಾಕ್ಷಿ

मुनगा, पु. ನುಗ್ಗೆಕಾಯಿ.

मुनजिम, पु. ಜೋತಿಷ್ಯ, ಜೋಯಿಸ

मुनफ़रिद, वि. ಏಕ, ಒಂಟಿ.

मुनफ़सिल, वि. ಬಿಡಿಸಿದ, ಬೇರೆಯಾದ

मुनहनी, वि. ಡೊಂಕಾದ, ವಕ್ರ; ಅಶಕ್ತ

मुनहसिर, वि. ಅವಲಂಬಿತ, ಆಶ್ರಿತ.

मुनाज़ग़ा, पु. ಜಗಳ; ವಾಗ್ವಾದ.

मुनाजात, स्त्री. ಪ್ರಾರ್ಥನೆ, ಬೇಡಿಕೆ, ವಿನಂತಿ.

मुनाज़ात, स्त्री. ಜಗಳ, ಕಚ್ಚಾಟ

मुनादी, स्त्री. ಘೋಷಣೆ, ಸಾರುವಿಕೆ; ಡಂಗುರ, ದಂಡೋರೆ; ಸಾರುವವ, ಘೋಷಣೆ ಮಾಡುವವ. मुनादी करना = ಸಾರು, ಘೋಷಿಸು, ಪ್ರಕಟಿಸು

मुनाफ़ा, पु. ಲಾಭ, ನಫೆ; ಫಾಯಿದೆ.

मुनासिब, वि. ಯೋಗ್ಯ, ಯುಕ್ತ; ಉಚಿತ, ಯಥೋಚಿತ; ತಕ್ಕ; ಸೂಕ್ತ.

मुनासिबत, स्त्री. ಸಂಬಂಧ, ಸಂಬದ್ಧತೆ; ಸಾದೃಶ್ಯ, ಹೋಲಿಕೆ; ಯುಕ್ತತೆ, ಔಚಿತ್ಯ.

मुनि, पु. ಋಷಿ, ಮುನಿ.

मुनियां, स्त्री. ಒಂದು ಪಕ್ಷಿ.

मुनीब, मुनीम, पु. ಸಹಾಯಕ, ಉಪಕಾರಿ; ಗುಮಾಸ್ತ, ಕಾರ್ಯಸ್ಥ, ಕಾರಕೂನ, ಕುಲಕರ್ಣಿ.

मुन्तक़िल, वि. ಸಾಗಿಸಿದ, ಒಯ್ದ; ಸ್ಥಳಾಂತರ ಹೊಂದಿದ.

मुन्तख़ाब, वि. ಆರಿಸಿದ, ಆಯ್ದ.

मुन्तज़िम, वि. ವ್ಯವಸ್ಥೆಗೊಳಿಸಿದ, ಅಣಿಮಾಡಿದ; ಕ್ರಮಪಡಿಸಿದ. पु. ವ್ಯವಸ್ಥಾಪಕ.

मुन्तज़िर, वि. ನಿರೀಕ್ಷಿಸುವ, ಎದುರು

ನೋಡುತ್ತಿರುವ.

मुन्तखिब़, वि. ಸರಿಯಾದ; ತಕ್ಕ.

मुन्तशिर, वि. ಹರವಿದ; ಚದರಿದ.

मुन्तहा, वि. ಮುಗಿಸಿದ, ಪೂರ್ತಿಯಾದ. पु. ಕೊನೆ, ಮುಕ್ತಾಯ.

मुन्ना. पु. ಮುದ್ದು ಮಗು,'ಬಂಗಾರ'.

मुन्शी, पु. ಬರೆಹಗಾರ, ಲೇಖಕ; ಗುಮಾಸ್ತ.

मुन्सरिम, पु. ವ್ಯವಸ್ಥಾಪಕ, ಆಡಳಿತಗಾರ

मुन्सलिक़, वि. ಸೇರಿಸಿದ, ಜಂಟಿಸಿದ, ಲಗತ್ತಿಸಿದ.

मुन्सिफ़, पु. ನ್ಯಾಯ ಮಾಡುವವ, ನ್ಯಾಯಕರ್ತ, ನ್ಯಾಯಾಧಿಕಾರಿ.

मुन्सिफ़ी, स्त्री. ನ್ಯಾಯ, ನ್ಯಾಯಾಧಿಕಾರಿಯ ಕೆಲಸ ಅಥವಾ ಕಛೇರಿ.

मुफ़लिस, वि. ದರಿದ್ರ, ಬಡವ.

मुफ़लिसी, वि. ದಾರಿದ್ರ್ಯ, ಬಡತನ.

मुफ़सिद, वि. ಜಗಳಗಂಟ; ತಂಟೆಖೋರ.

मुफ़स्सल, वि. ಬೇರೆಬೇರೆಯಾದ; ವಿವರವಾದ; ವಿಸ್ತೃತವಾದ. पु. ರಾಜನಗರವನ್ನು ಬಿಟ್ಟು ಪ್ರಾಂತ್ಯದ ಉಳಿದ ಸ್ಥಳಗಳು, ಗ್ರಾಮಾಂತರ.

मुफ़ाजात, स्त्री. ಅನಿರೀಕ್ಷಿತವಾದ, ಆಕಸ್ಮಿಕವಾದ.

मुफ़ारक़त, स्त्री. ಬೇರೆಯಾಗುವಿಕೆ, ಅಗಲಿಕೆ.

मुफ़ासला, पु. ದೂರ, ಫಾಸಲೆ.

मुफ़ीद, वि. ಲಾಭಕರ; ಪ್ರಯೋಜನಕರ; ಸಾರ್ಥಕ.

मुफ़्त, वि. ಧರ್ಮಾರ್ಥ,ಪುಕ್ಕಟೆ,ಬಿಟ್ಟಿ, ಪುಗಸಟ್ಟೆ, ಉಚಿತ क्रिवि. ವ್ಯರ್ಥವಾಗಿ

मुफ़्त-ख़ोर, पु. ಬಿಟ್ಟಿ ಊಟ ಮಾಡುವವ; ಕೆಲಸವೇನೂ ಮಾಡದೆ ಪರಾವಲಂಬನದಿಂದ ಜೀವಿಸುವವ; ಕೂತುಂಬುವವ, ಉಂಡಾಡಿ; ಸೋಮಾರಿ.

मुफ़्तरी, वि. ದುರುಳ, ತುಂಟ; ಸುಳ್ಳ.

मुफ़्ती, पु. ಧರ್ಮಾಧಿಕಾರಿ. वि. ಬಿಟ್ಟಿ, ಪುಗಸಟ್ಟೆ.

मुबलग़, पु. ಮೊಬಲಗು.

मुबहम, वि. ಮರೆಯಾದ; ಗೂಢ; ರಹಸ್ಯ.

मुबादला, पु. ಪರಿವರ್ತನೆ, ಮಾರುವೆ; ಸಾಟಿವ್ಯಾಪಾರ; ಪ್ರತೀಕಾರ,

मुबारक, वि. ಶುಭ, ಮಂಗಳಪ್ರದ. अव्य. ಶುಭಮಸ್ತು, ಸ್ವಸ್ತಿ.

मुबारकबाद, स्त्री. ಅಭಿನಂದನೆ, ಸ್ವಸ್ತಿವಾಚನ; ಸ್ವಸ್ತಿ.

मुबारकबादी, स्त्री. ಸೋಬಾನೆ; ಸ್ವಸ್ತಿವಾಚನ;ಶುಭಾಗಮನ;ಸುಖಾಗಮನ.

मुबारकी, स्त्री. ಸ್ವಸ್ತಿವಾಚನ.

मुबालिग़ा, पु.ಪರಿಶ್ರಮ, ಮೆಹನತ್ತು; ಅತ್ಯುಕ್ತಿ.

मुबाहिसा, पु. ಚರ್ಚೆ, ವಾಕ್ಯಾರ್ಥ.

मुब्तदा, स्त्री. ಪ್ರಾರಂಭ, ಶುರು.

मुब्तला, वि. ಸಿಕ್ಕಿಬಿದ್ದ, ಸಿಕ್ಕಿಕೊಂಡ; ಸಿಲುಕಿದ; ಮರುಳಾದ.

मुब्तदी, वि. ಕಲಿಕೆಯವ, ಹೊಸಬ.

मुमकिन, वि. ಸಂಭಾವ್ಯ, ಸಾಧ್ಯ.

मुमताज़, वि. ಆಯ್ದ, ಆರಿಸಿದ; ಶ್ರೇಷ್ಠ, ಮಾನ್ಯ.

मुमाखी, स्त्री. ಜೇನು ನೊಣ, ಜೇನು ತುಂಬಿ.

मुमानियत, स्त्री. ವರ್ಜನೆ; ನಿಷೇಧ, ನಿರೋಧ.

मुमानी, स्त्री. ಸೋದರಮಾವನ ಹೆಂಡತಿ

मुम्तहन, वि. ಪರೀಕ್ಷಾರ್ಥಿ.

मुम्तहिन, पु. ಪರೀಕ್ಷಣ; ಪರೀಕ್ಷಕ.

मुयस्सर, वि. ದೊರೆಯುವ, ಸಿಗುವ, ಪ್ರಾಪ್ಯ.

मुरंडा, पु. ಗೋಧಿಯ ಉಂಡು, ಲಡ್ಡು. वि. ಒಣಗಿದ, ಬಾಡಿದ; ಮಡಿಸಿದ.

मुर, क्रिवि. ತಿರುಗಿ, ಪುನಃ.

मुरई, स्त्री. ಮೂಲಂಗಿ.

मुरक, स्त्री. ಬಾಗುವಿಕೆ, ಬಾಗು, ತಿರುವು.

मुरकना, अक्रि. ಬಾಗು, ತಿರುಗು; ತಿರುಚಿಕೊಳ್ಳು, ಮುರಿ; ನಷ್ಟವಾಗು.

मुरकाना, सक्रि. ಬಗ್ಗಿಸು, ತಿರುಗಿಸು; ತಿರುಚು, ಹೊಸೆ; ಪೋಲುಮಾಡು.

मुरकी, स्त्री. ಹತ್ತಕಡಕು, ಒಂಟಿ.

मुरक्कब, वि. ಸೇರಿದ, ಮಿಶ್ರಿತ. पु. ಕೂಡುನುಡಿ, ಸಮಾಸಪದ.

मुरग़ा, पु. ಕೋಳಿ, ಹುಂಜ.

मुरग़ाबी, स्त्री. ನೀರುಕೋಳಿ.

मुरग़ी, स्त्री. ಕೋಳಿ, ಹೇಂಟೆ.

मुरचंग, पु. ಮೋರ್ಛಿಂಗ್ (ವಾದ್ಯ).

मुरचहा, वि. ತುಕ್ಕು ಹಿಡಿದ.

मुरछना, अक्रि. ಮೂರ್ಛೆ ಹೋಗು.

मुरझन, पु. ಬಾಡುವಿಕೆ, ಬಳಲುವಿಕೆ.

मुरझाना, अक्रि. ಬಾಡು, ಬಳಲು; ಕಂದು; ಸೊರಗು.

मुरत्तिब, पु. ಕ್ರಮಪಡಿಸುವವ, ಅಣಿ ಮಾಡುವವ; ಪತ್ರಿಕೆಯ ಸಂಪಾದಕ.

मुरदनी, वि. ಸಾಯುವ, ಸಾಯುವಂಥ. स्त्री. ಶೋಕ; ಸಾವು; ಕರ್ಮಾಂತರ, ಅಂತ್ಯೇಷ್ಟಿ.

मुरदा, वि. ಸತ್ತುಹೋದ, ನಿರ್ಜೀವ, ಮೃತ. पु. ಹೆಣ, ಶವ.

मुरदार, वि. ಸತ್ತು ಹೋದ, ಮೃತಪಟ್ಟ; ನಿರ್ಜೀವ; ಅಪವಿತ್ರ. पु. ಹೆಣ, ಶವ.

मुरदासंख, पु. ಮುರದಾರಸಿಂಗಿ.

मुरब्बा, पु. ಮುರಬ್ಬ, ರಸಾಯನ; ಸಕ್ಕರೆ ಪಾಕ, ಅವಲೇಹ. वि. ಚ ಚ್ಚೌಕವಾದ, ಚದುರ. मुरब्बा बैठना = ಚಪ್ಪಳಕಾಲು ಹಾಕಿ ಕೂಡು.

मुरब्बासाज़, पु. ಮುರಬ್ಬ ಮಾಡುವವ.

मुरब्बी, पु. ಪೋಷಕ, ಸಂರಕ್ಷಕ.

मुरम, पु. ಒಂದು ಬಗೆ ಗರಸು ನೆಲ.

मुरमुरा, पु. ಗರಗು, ಗರಗಾಗಿರುವಿಕೆ; ಪುರಿ, ಅರಳು.

मुरमुराना, अक्रि. ಚಟಚಟನೆ ಮುರಿ.

मुरमुरी हड्डी, स्त्री. ಮೃದುವಾದ ಅಸ್ಥಿ, ಕೋಮಲಾಸ್ಥಿ.

मुरला, वि. ಹಲ್ಲಿಲ್ಲದ, ಬೋಡು. पु. ನವಿಲು.

मुरली, स्त्री. ಪಿಳ್ಳಂಗೋವಿ, ಮುರಳಿ.

मुरवा, पु. ಕಾಲಿನ ಹರಡು, ಗುಲ್ಫ, ಅಡಿಗಣ್ಣು.

मुरव्वज, वि. ಚಲಾವಣೆಯಲ್ಲಿರುವ,

ಜಾರಿಯಲ್ಲಿರುವ.

मुरव्वत, स्त्री. ದಯೆ, ದಾಕ್ಷಿಣ್ಯ; ಔದಾರ್ಯ; ಶೀಲ, ಸೌಜನ್ಯ.

मुरशिद, पु. ಧರ್ಮೋಪದೇಶಕ, ಗುರು

मुरशिदी, स्त्री. ಧರ್ಮೋಪದೇಶ.

मुरसल, वि. ಕಳುಹಿಸಲ್ಪಟ್ಟ; ಕಳುಹಿಸಲ್ಪಟ್ಟವ, ದೂತ; ರಾಯಭಾರಿ.

मुरसला, पु. ಪತ್ರ, ನಿರೂಪ.

मुरसलाबंद, पु. ಕಂಠಸರದ ಕೊಳಿಕೆ, ಕೊಂಡಿ.

मुरस्सा, वि. ರತ್ನಖಚಿತ, ರತ್ನಪಡಿ.

मुरहरी, स्त्री. ಗೋಕರ್ಣ.

मुरहा, वि. ಅನಾಥ, ತಬ್ಬಲಿ; ದುರುಳ. पु. ಮುರಿಗೆ, ನುಲಿಕೆ, ನವಿಲು

मुरही, स्त्री. ಮುರಿಗೆ, ನುಲಿಕೆ.

मुराई, **मुराऊ**, पु. ಕಾಯಿಪಲ್ಯ ಮಾರುವವ.

मुराड़ा, पु. ಉರಿವ ಕಟ್ಟಿಗೆ, ಕೊಳ್ಳಿ.

मुराद, स्त्री. ಆಶೆ, ಇಚ್ಛೆ; ಹಾರೈಕೆ; ವರದಾನ; ಅಭಿಪ್ರಾಯ, ಆಶಯ.

मुरादी, वि. ಇಚ್ಛಿಸಿದ, ಬಯಸಿದ; ಇಷ್ಟಾನುಸಾರವಾದ; ಬೇರೆ ಅರ್ಥ, ಗೌಣವಾದ ಅರ್ಥ; ಚಿಲ್ಲರೆ ಹಣ.

मुराफ़ा, पु. ಮೇಲ್ಪಟ್ಟವರಿಗೆ ಅರಿಕೆ ಮಾಡಿಕೊಳ್ಳುವಿಕೆ, ಅರ್ಜಿ, 'ಅಪೀಲು'

मुराफ़ी, पु. ಮೇಲ್ಪಟ್ಟ ಕೋರ್ಟಿಗೆ ಅಪೀಲು ಮಾಡುವವ, ಅಪೀಲುದಾರ

मुरीद, पु. ಶಿಷ್ಯ, ಅನುಯಾಯಿ.

मुरेठा, पु. ಪೇಟ, ರುಮಾಲು, ಪಾಗು.

मुरेला, पु. ನವಿಲುಮರಿ; ನವಿಲು.

मुरौवत, स्त्री. = मुरव्वत.

मुर्ग़, पु. ಕೋಳಿ, ಹುಂಜ; ಪಕ್ಷಿ.

मुर्ग़ा, पु. = मुरग़ा.

मुर्रा, पु. ಹೊಟ್ಟೆ ಕಡತ, ಹೊಟ್ಟೆ ನುಲಿ; ಹೊಟ್ಟೆ ಕಡತಕ್ಕೆ ಔಷಧವಾದ ಒಂದು ಬಿತ್ತು; ಪಟಾಕಿ, ಮದ್ದಿನ ಬಾಣ.

मुर्री, स्त्री. ಹೊಸೆಯುವಿಕೆ, ತಿರುಚುವಿಕೆ; ತಿರಿ, ಬತ್ತಿ.

मुलकना, अक्रि. ಕಣ್ಣುಗಳಿಂದ ಸಂತೋಷವನ್ನು ಪ್ರಕಟಿಸು.

मुल, पु. ಸಾರಾಯಿ, ಮದ್ಯ, ಸುರೆ. क्रिवि. ಕೊನೆಗೆ; ಸಂಕ್ಷೇಪವಾಗಿ; ಕೊನೆಯ ಪಕ್ಷ; ಆದರೂ.

मुलज़िम, वि. ಆಪಾದಿತ, ಅಪರಾಧಿ.

मुलह्ठी, स्त्री. ಅತಿಮಧುರ.

मुलन, क्रिवि. ಪೂರ್ಣವಾಗಿ, ಪೂರ್ತಿ; ಸುತರಾಂ.

मुलना, पु. ಮಹಮ್ಮದೀಯ ಪಂಡಿತ.

मुलव्वब, वि. ತುಂಬಿ ತುಳುಕುವ, ಸೂಸಿ ಹರಿಯುವ.

मुलम्मा, पु. ಬಂಗಾರದ ಮುಲಾಮು, ಚಿನ್ನದ ಒಪ್ಪ, ಸೊನ್ನಾರ, ಗಿಲೀಟು.

मुलमची, **मुलम्मागर**, **मुलम्मा-साज़**, पु. ಬಂಗಾರದ ಮುಲಾಮು ಕೊಡುವವ, ಗಿಲೀಟು ಮಾಡುವವ.

मुलहटी, स्त्री. ಅತಿಮಧುರ.

मुलाई, स्त्री. ಬೆಲೆ ಕಟ್ಟುವಿಕೆ, ಮದಿಪು.

मुलाक़ात, स्त्री. ಭೇಟಿ, ಸಂದರ್ಶನ; ಭೆಟ್ಟಿ; ಸೇರಿಕೆ, ಹೊಂದಿಕೆ, ಅನ್ಯೋನ್ಯ.

मुलाक़ाती, पु. ದರ್ಶಕ; ದರ್ಶನಾರ್ಥಿ;

ಪರಿಚಿತಸ್ಥ; ಗೆಳೆಯ.

मुलाक़ी, पु. ಸೇರಿಕೆ, ಮಿಳನ; ಭೇಟಿ ಮಾಡುವವ, ಭೇಟಿಗಾರ, ದರ್ಶಕ.

मुलाज़िम, पु. ಸೇವಕ, ನೌಕರ.

मुलाज़िमत, स्त्री. ಪರಿಶ್ರಮ; ಸೇವೆ, ನೌಕರಿ, ಚಾಕರಿ.

मुलाज़िमी, स्त्री. ಸೇವೆ, ಚಾಕರಿ.

मुलाना, सक्रि. ಬೆಲೆ ಕಟ್ಟು; ಬೇರ ಮಾಡು, ಚೌಕಾಸಿ ಮಾಡು.

मुलायम, वि. ಮೆದುವಾದ, ಮೆತ್ತನೆಯ; ನಮ್ರ, ನಯ; ಮೆಲುವಾದ, ಕೋಮಲ

मुलायमत, मुलायमियत, मुलायमी, स्त्री. ಮೆದು, ನಮ್ರತೆ; ಮೆಲುವು, ಕೋಮಲತೆ.

मुलाहज़ा, पु. ನೋಡುವಿಕೆ; ಗಮನಿಸುವಿಕೆ, ಲಕ್ಷ್ಯ; ದಾಕ್ಷಿಣ್ಯ, ಭಿಡೆ; ಅನುಗ್ರಹ, ರಿಯಾಯಿತಿ.

मुलेठी, स्त्री. ಅತಿಮಧುರ.

मुलैयन, वि. ಮೃದುವಿರೇಚಕ(ಔಷಧ)

मुल्क, पु. ದೇಶ, ಸೀಮೆ, ನಾಡು; ರಾಷ್ಟ್ರ

मुल्कदारी, स्त्री. ರಾಜ್ಯಭಾರ, ರಾಜ್ಯಾಡಳಿತ.

मुल्करानी, स्त्री. ಆಳಿಕೆ, ಶಾಸನ.

मुल्की, वि. ನಾಡಿನ, ದೇಶೀಯ; ರಾಷ್ಟ್ರೀಯ. पु. ನಾಡು ಜನ, ದೇಶಸ್ಥ.

मुल्तजा, पु. ಆಶ್ರಯಸ್ಥಾನ; ನೆರವು, ಆಶ್ರಯ; ರಕ್ಷಕ.

मुल्तमिस, पु. ಪ್ರಾರ್ಥಿಸುವವ.

मुल्तवी, वि. ಬಗ್ಗಿದ, ವಕ್ರ; ನಿಲ್ಲಿಸಿಟ್ಟ, ನಿಲಕಡೆ ಮಾಡಿದ, ಮುಂದಕ್ಕೆ ಹಾಕಿದ, ಮುಂದುವರಿದ, ಮಾನಸಿಕ ಮಾಡಿದ.

मुल्ला, पु. ಮಹಮ್ಮದೀಯ ಪಂಡಿತ, ಮೌಲ್ವಿ, ಮುಲ್ಲಾ; ಪಕ್ಷಿಗಳನ್ನು ಹಿಡಿತರಲು ಪಳಗಿಸಿದ ಹೆಣ್ಣು ಪಕ್ಷಿ. ತೋಹಿನ ಪಕ್ಷಿ. ದೀಹ; ವೇಷಧಾರಿ.

मुल्लानी, स्त्री. "मुल्ला" का स्त्री. रूप.

मुवक्किल, पु. ವಕೀಲರ ಕಕ್ಷಿಗಾರ, ಕಕ್ಷಿದಾರ; ಸಂರಕ್ಷಕ.

मुवना, अक्रि. ಸಾಯು; ನಶಿಸು.

मुवा, वि. ಸತ್ತ; ನಿರ್ಜೀವ; ಅಧಮ.

मुवाफ़िक़, वि. = माफ़िक़.

मुवाफ़िक़त, स्त्री. ಹೊಂದಿಕೆ, ಹೊಂದಾವಣೆ.

मुशज्जर, वि. ಬುಟ್ಟಾ ಕೆಲಸಮಾಡಿದ.

मुशब्बा, वि. ಸಮಾನ, ಸದೃಶ. पु. ಉಪಮಾನ.

मुशब्बा-बिह, पु. ಉಪಮೇಯ.

मुशाबहत, स्त्री. ಸಮಾನತೆ, ಸಾಮ್ಯ; ಹೋಲಿಕೆ, ಸಾದೃಶ್ಯ.

मुशाबिह, पु. ಹೋಲಿಕೆ, ಉಪಮೆ.

मुशायरा, पु. ಕವಿಗಳ ಕೂಟ, ಸಾಹಿತ್ಯಗೋಷ್ಠಿ, ಕವಿಸಮ್ಮೇಳನ.

मुशारिक, पु. ಪಾಲುಗಾರ, ಹಿಸ್ಸೆದಾರ.

मुशाहदा, पु. ನೋಡುವಿಕೆ, ದರ್ಶನ.

मुशाहरा, पु. ಸಂಬಳ, ತಲಬು.

मुशाहिद, वि. ನೋಡುವವ, ದರ್ಶಕ.

मुशीर, पु. ಮಂತ್ರಿ, ಸಚಿವ.

मुश्क, पु. ಕಸ್ತೂರಿ. स्त्री. ತೋಳು, ಬಾಹು. मुश्कें कसना या बांधना = ಹಿಂಗಟ್ಟು ಮುರಿ ಕಟ್ಟು, ಹೆಡಮುರಿಗೆ

ಕಟ್ಟು, ಚಿನ್ನ್ಮಾರಿಕಟ್ಟು, ಮುಷ್ಟಿಕಟ್ಟು.
मुश्कनाफ़ा, पु. ಮೃಗನಾಭಿ.
मुश्क-फ़ाम, वि. ಕಪ್ಪಾದ, ಕರಿಯ.
पु. ಪ್ರೇಮಿಕೆಯ ಅಲಕ.
मुश्कबिलाई, स्त्री. ಪುನುಗು ಬೆಕ್ಕು.
मुश्क़ाब, स्त्री. ತಟ್ಟೆ.
मुश्किल, वि. ಕಷ್ಟವಾದ, ಕಠಿಣ, ದುಸ್ತರ
स्त्री. ಕಷ್ಟ, ತೊಂದರೆ, ಸಂಕಟ.
मुश्की, वि. ಕಸ್ತೂರಿಯ ಬಣ್ಣದ.
मुश्कीन, वि. ಕಸ್ತೂರಿಯ.
मुश्त, पु. ಮುಷ್ಟಿ, ಹಿಡಿ, ಗುದ್ದು.
एक मुश्त = ಒಂದೇ ಮುಷ್ಟಿಯಲ್ಲಿ,
ಒಟ್ಟಿಗೆ, ಒಮ್ಮೆಲೆ.
मुश्तज़न, पु. ಮುಷ್ಟಿಯುದ್ಧ ಮಾಡು
ವವ, ಮಲ್ಲ, ಜಟ್ಟಿ.
मुश्तरक, वि. ಸಾಮಾನ್ಯವಾದ, ಹು
ದುವಿನ, ಒಟ್ಟಿನ.
मुश्तरका, वि. ಊರೊಟ್ಟಿನ, ಹುದು
ವಿನ, ಮುದ್ದತದ.
मुश्तरी, पु. ಕೊಳ್ಳುವವ, ಗಿರಾಕಿ;
ಗುರು ಗ್ರಹ, ಬೃಹಸ್ಪತಿ.
मुश्तहर, वि. ಪ್ರಕಟವಾದ, ಬಯಲಾದ
मुश्ताक़, वि. ಇಚ್ಛುಕ, ಅಸಕ್ತ.
मुष्ट. पु. ಮುಷ್ಟಿ; ಕಳ್ಳತನ, ಚೌರ್ಯ.
मुष्टंड, मुष्टंडा, मुस्टंडा, वि. ಬಲಿಷ್ಠ,
ದೃಢಕಾಯ; ಮಜಬೂತಾದವ, ಕಟ್ಟು
ಮಸ್ತಾದವ, ದಾಂಡಿಗ; ಬಲಿತವ.
मुष्टि, स्त्री. ಮುಷ್ಟಿ, ಹಿಡಿ; ಗುದ್ದು.
मुसकराना, मुसकुराना, अक्रि. ಕಿರು
ನಗೆ ನಗು, ಮುಗುಳು ನಗೆ ನಗು.
मुसकराहट, मुसकुराहट, मुसकान,
मुसक्यान, स्त्री. ಮುಗುಳು ನಗೆ,
ಮೆಲು ನಗೆ, ಕಿರುನಗೆ, ನಸುನಗೆ.
मुसकिर, वि. ಮದವನ್ನುಂಟುಮಾ
ಡುವ, ಮಾದಕ.
मुसक्किन, पु. ಆಶ್ವಾಸನಪಡಿಸುವವ;
ನೋವನ್ನು ಹೋಗಲಾಡಿಸುವ ಔಷಧ,
ವೇದನಹಾರಿ.
मुसद्दस, वि. ಆರು ವಸ್ತುಗಳುಳ್ಳ;
ಷಟ್ಕೋಣ. पु. ಆರು ಚರಣಗಳ
ಪದ್ಯ, ಷಟ್ಪದಿ.
मुसना, अक्रि. ಕಳವಾಗು.
मुसन्नफ़, पु. ರಚನೆ, ಕೃತಿ.
मुसन्ना, पु. ದಸ್ತಾವೇಜಿನ ನಕಲು,
ಎದುರು ಚೀಟು, ದ್ವಿಪ್ರತಿ; ರಸೀತಿ
ಯ ಇಮ್ಮಡಿ ನಕಲು, ಅನುಪ್ರತಿ;
"ಡ್ಯೂಪ್ಲಿಕೇಟ್"; ಮರು ರಸೀತಿ.
मुसन्निफ़, पु. ಗ್ರಂಥಕಾರ, ರಚಯಿತ.
मुसफ़्फ़ा, वि. ಶುದ್ಧ, ಶುಭ್ರ.
मुसफ़्फ़ी, पु. ಶುದ್ಧಿಮಾಡುವವ
मुसब्बर, स्त्री. ಕತ್ತಾಳೆ, ಲೋಳೆಸರ.
मुसमसाना, अक्रि. = **मसमसाना**.
मुसमीर, वि. ಫಲವತ್ತಾದ; ಫಲಕಾರಿ.
मुसम्मम, वि. ಗೊತ್ತಾದ, ನಿಗದಿಯಾದ
मुसम्मा, वि. ಹೆಸರುಳ್ಳ, ನಾಮಕ.
मुसम्मात, वि. ಹೆಸರಿನವಳು. स्त्री.
ಸ್ತ್ರೀ, ಹೆಂಗಸು; ಶ್ರೀಮತಿ.
मुसरिफ़, वि. ದುಂದುಗಾರ.
मुसल्‌मान, पु. ಮಹಮ್ಮದೀಯ
ಮತದವ, ಮುಸಲ್ಮಾನ.

मुसलमानी, वि. ಮಹಮ್ಮದೀಯರ, ಮುಸಲ್ಮಾನರ. स्त्री. ಮುಸಲ್ಮಾನರ ಧರ್ಮ; ಶಿಶ್ನದ ಮುಂಭಾಗದ ಚರ್ಮವನ್ನು ಕತ್ತರಿಸುವ ಮುಸಲ್ಮಾನರ ಒಂದು ಸಂಸ್ಕಾರ, ಸುನ್ನತಿ, ಖತನಾ, ಪರಿಕರ್ತನ; ಮುಸಲ್ಮಾನರ ಸ್ತ್ರೀ.

मुसलमीन, पु. ಮುಸಲ್ಮಾನರು.

मुसलसल, वि. ಪೋಣಿಸಿದ; ಅನುಕ್ರಮವಾದ.

मुसलिम, वि. ಮಹಮ್ಮದೀಯಮತಸ್ಥ

मुसल्लम, वि. ಸುರಕ್ಷಿತ; ಅಖಂಡ; ಸಂಪೂರ್ಣ; ಸುಪರ್ದುಮಾಡಿದ; ಸ್ವೀಕೃತ.

मुसल्लस, वि. ಮುಮ್ಮೂಲೆಯ. पु. ತ್ರಿಕೋಣ; ಮೂರರ ಸಮೂಹ; ಮೂರು ಚರಣಗಳ ಪದ್ಯ, ತ್ರಿಪದಿ.

मुसल्लसी, वि. ತ್ರಿಕೋಣಾಕಾರದ.

मुसल्लह, वि. ಆಯುಧಧಾರಿ.

मुसल्ला, पु. ನಮಾಜು ಮಾಡುವಾಗ ಹಾಸುವ ಬಟ್ಟೆ ಅಥವಾ ಚಾಪೆ.

मुसव्विर, पु. ಚಿತ್ರಗಾರ; ಶಿಲ್ಪಿ.

मुसव्विरी, स्त्री. ಚಿತ್ರಕಲೆ; ಶಿಲ್ಪಕಲೆ.

मुसाना, सक्रि. "मूसना" का प्रे. रूप.

मुसाफ़िर, पु. ಪ್ರಯಾಣಿಕ, ಯಾತ್ರಿಕ.

मुसाफ़िर-ख़ाना, पु. ಯಾತ್ರಿಕರು ತಂಗುವ ಸ್ಥಳ, ಧರ್ಮಶಾಲೆ, ಮುಸಾಫರಿ ಬಂಗಲೆ, ಮುಸಾಫರ ಖಾನೆ.

मुसाफ़िरत, मुसाफ़िरी, स्त्री. ಯಾತ್ರೆ, ಪ್ರವಾಸ, ಸಂಚಾರ, ಪ್ರಯಾಣ.

मुसावात, स्त्री. ಸಮಾನತೆ, ಸಾಮ್ಯ; ಸಮೀಕರಣ.

मुसावी, वि. ಸಮವಾದ, ಸಮ, ಸಮಾನ.

मुसाहबत, मुसाहिबी, स्त्री. ಸಂಗ, ಒಡನಾಟ; ಒಡನಾಡಿತನ.

मुसाहिब, पु. ಅರಸುಮಕ್ಕಳ ಅಥವಾ ಶ್ರೀಮಂತರ ಜತೆಯಲ್ಲಿರುವವ, ನರ್ಮಸಚಿವ, ಪಾರ್ಷದ; ಸಂಗಡಿಗ.

मुसीबत, स्त्री. ಕಷ್ಟ, ತೊಂದರೆ; ಸಂಕಷ್ಟ; ವಿಪತ್ತು, ಇಕ್ಕಟ್ಟು.

मुसुंड, मुस्टंडा, वि. ಕಟ್ಟುಮಸ್ತಾದ, ದಾಂಡಿಗ, ದಡಿಯ, ಪುಂಡ.

मुसुंडापन, पु. ಕಟ್ಟುಮಸ್ತು; ದಾಂಡಿಗತನ.

मुस्कयान, पु ಮುಗುಳುನಗೆ.

मुस्कयाना, अक्रि. ನಸುನಗು.

मुस्तक़बिल, पु. ಭವಿಷ್ಯ; ಭವಿಷ್ಯಕಾಲ.

मुस्तक़िल, वि. ಅಚಲ, ದೃಢ; ಸರಿ; ವಿಶೇಷ.

मुस्तनद, वि. ಪ್ರಾಮಾಣಿಕ, ಪ್ರಾಮಾಣ್ಯವಾದ; ಅಪ್ಪಟ.

मुस्तफ़ा, वि. ಶುದ್ಧ, ನಿರ್ಮಲ.

मुस्तफ़ी, वि. ಅಯ್ದ, ಆರಿಸಿದ; ಚುನಾಯಿಸಿದ, ಚುನಾಯಿತ.

मुस्तफ़ीद, वि. ಲಾಭವನ್ನಪೇಕ್ಷಿಸುವವ; ಲಾಭಕರ, ಪ್ರಯೋಜನಕಾರಿ.

मुस्तसना, वि. ಬೇರೆಮಾಡಿದ; ಬಹಿಷ್ಕೃತ; ಶ್ಲಾಘ್ಯ; ಉತ್ಕೃಷ್ಟವಾದ.

मुस्तैद, वि. ಸಿದ್ಧ, ತತ್ಪರ, ಸನ್ನದ್ಧ; ಚಟುವಟಿಕೆಯುಳ್ಳ, ಚುರುಕಾದ.

मुस्तैदी, स्त्री. ಸಿದ್ಧತೆ, ಸನ್ನಾಹ; ಯೋಗ್ಯತೆ; ಚಟುವಟಿಕೆ, ಚುರುಕು.

मुस्तौजिब, वि. ತಕ್ಕ, ಯೋಗ್ಯ, ಅರ್ಹ. पु. ಕರ್ತ; ಕಾರಣಕರ್ತ.

मुस्तौफ़ी, स्त्री. ಲೆಕ್ಕ ಪರಿಶೋಧಕ, ಲೆಕ್ಕಾಚಾರಸ್ಥ, ತನಿಖೆದಾರ.

मुहकम, वि. ದೃಢವಾದ, ಗಟ್ಟಿ; ಬೇಲಿ ಹಾಕಿದ, ಆವರಿಸಲ್ಪಟ್ಟ.

मुहकमा, पु. = महकमा.

मुहजब, वि. ಸಭ್ಯ, ಶಿಷ್ಟ.

मुहताज, वि. ಅಗತ್ಯದ; ಬಡ, ದರಿದ್ರ; ಕುಂದುಳ್ಳ, ಕೊರತೆಯು. पु. ಬಡವ, ದರಿದ್ರ; ಯಾಚಕ, ಭಿಕ್ಷುಕ.

मुहताज-ख़ाना, पु. ಧರ್ಮಸತ್ರ; ಅನಾಥಾಲಯ.

मुहताजगी, मुहताजी, स्त्री. ಬಡತನ; ದಾರಿದ್ರ್ಯ, ಬಡಸ್ತಿಕೆ, ಅಭಾವ; ಅಗತ್ಯ

मुहब्बत, स्त्री. ಪ್ರೇಮ, ಪ್ರೀತಿ; ಆಸಕ್ತಿ; ಸ್ನೇಹ.

मुहमिल, वि. ಅರ್ಥವಿಲ್ಲದ; ಬಳಕೆಯಲ್ಲಿಲ್ಲದ; ಉದ್ದೇಶವಿಲ್ಲದ.

मुहम्मद, पु. ಮಹಮ್ಮದ್ ಪೈಗಂಬರ

मुहर, स्त्री. = मोहर.

मुहरी, स्त्री. = मोहरी.

मुहर्रम, वि. ನಿಷೇಧಿಸಿದ, ನಿಷಿದ್ಧ; ಪವಿತ್ರವಾದ, ಪುನೀತ; ದೊಡ್ಡ, ಶ್ರೇಷ್ಠ. पु. ಮೊಹರಂ ಹಬ್ಬ, ಅಲಾಬಿ ಹಬ್ಬ; ಬಾಬಯ್ಯನ ಹಬ್ಬ, ಶೋಕ.

मुहर्रमी, वि. ಮೊಹರಮ್ಮಿನ; ಅಳು ಮೋರೆಯ.

मुहर्रिक, पु. ಸಂಚಾಲಕ, ನಾಯಕ.

मुहर्रिर, पु. ಲೇಖಕ, ಬರೆಹಗಾರ.

मुहर्रिरी, स्त्री. ಲೇಖಕನಕೆಲಸ ಅಥವಾ ಉದ್ಯೋಗ; ಲೇಖಕತನ.

मुहलत, स्त्री. ತಡ, ವಿಳಂಬ; ಸಾವಕಾಶ, ಪುರಸತ್ತು.

मुहलिक, वि. ಅಪಾಯಕರ; ಪ್ರಾಣಾಂತಕ.

मुहल्ला, पु. = महल्ला.

मुहसिन, वि. ಒಳ್ಳೆಯವ, ಸಜ್ಜನ.

मुहसिल, पु. ಕಂದಾಯ ವಸೂಲು ಮಾಡುವವ; ಆಳು, ಪೇದೆ.

मुहाना, पु. ಮುಖ, ಮೂತಿ; ನದಿಗಳ ಸಂಗಮಸ್ಥಾನ, ಕೂಡಲು; ಕೂಡು ರಸ್ತೆ, ಮುರುದಲೆ; ಜಲಸಂಧಿ.

मुहाफ़ज़त, स्त्री. ಸಂರಕ್ಷಣೆ, ಪಾಲನೆ.

मुहाफा, पु. ಒಂದು ಬಗೆ ಪಲ್ಲಕ್ಕಿ.

मुहाफ़िज़, वि. ಸಂರಕ್ಷಕ, ಪಾಲಕ; ಕಾವಲುಗಾರ.

मुहाबा, पु. ಪಕ್ಷಪಾತ, ಪಾರಪಕ್ಷ; ಆದರ, ಮನ್ನಣೆ; ಗೌರವ; ಸ್ನೇಹ; ಜಾಗರೂಕತೆ, ಜೋಪಾನ.

मुहार, स्त्री. ಒಂಟೆಯ ಮೂಗುದಾರ.

मुहारबा, पु. ಜಗಳ, ಯುದ್ಧ.

मुहाल, पु.; वि. = महाल.

मुहाला, पु. ಆನೆಯ ಕೋರೆಹಲ್ಲಿನ ಅಣಸು, ಬಳೆ.

मुहावरा, मुहाविरा, पु. ರೂಢಿ, ಬಳಕೆ; ಸಂಭಾಷಣೆ; ಭಾಷಾರೂಢಿ. ಹಿಡಿನುಡಿ, ಭಾಷಾಸಂಪ್ರದಾಯ, ಪಡೆನುಡಿ.

मुहासा, पु. = मुंहासा.

मुहासिब, पु. ಗಣಿತಜ್ಞ, ಗಣಕ; ಲೆಕ್ಕ

ಪರಿಶೋಧಕ, ಲೆಕ್ಕ ಪರೀಕ್ಷಕ.
मुहासिबा, पु. ಲೆಕ್ಕ, ಲೆಕ್ಕಾಚಾರ.
मुहासिरा, पु. ಮುತ್ತಿಗೆ, ಗೇರಾಯಿಸುವಿಕೆ.
मुहासिल, पु. ವಸೂಲಿ ಹಣ, ಆಯ; ವಸೂಲಿ ಮಾಡುವವ.
मुहिब्ब, पु. ಪ್ರೇಮಿ; ಗೆಳೆಯ.
मुहिम्म, स्त्री. ಯುದ್ಧ, ದಾಳಿ. वि ದೊಡ್ಡ, ಭಾರಿ; ಜರೂರಾದ, ಅಗತ್ಯದ
मुहिम्मी, स्त्री. ಅಗತ್ಯವಾದ ಕಾರ್ಯ, ಜರೂರು ಕೆಲಸ.
मुहीत, पु. ಸುತ್ತಳತೆ, ಪರಿಧಿ.
मुहीब, वि. ಭಯಂಕರ, ಭೀಕರ.
मुहुर, क्रिवि. ಪುನಃ; ಪದೇಪದೇ.
मुहूर, पु. = महर.
मूंकी, स्त्री. ಗುದ್ದು, ಗುಮ್ಮು.
मूंगा, स्त्री. ಹೆಸರುಕಾಳು.
मूंगची, स्त्री. ಹೆಸರು ಬೇಳೆ ಸಂಡಿಗೆ.
मूंगफली, स्त्री. ನೆಲಗಡಲೆ, ಬೇರುಗಡಲೆ, ಕಡಲೆಕಾಯಿ, ಶೇಂಗಾ.
मूंगरी, स्त्री. ಹೆಸರುಬೇಳೆ ಸಂಡಿಗೆ.
मूंगा, पु. ಪ್ರವಾಳ, ಹವಳ.
मूंगिया, वि. ಹವಳದ; ಹವಳದಂಥ.
मूंछ, स्त्री. ಮೀಸೆ मूंछ पर ताव देना = ಮೀಸೆ ತಿರುವು, ಮೀಸೆ ಹೊಸೆ.
मूंज, स्त्री. ಮುಂಜಿ ಗಿಡ, ನೊದೆ.
मूंड, पु. **मूंडी**, स्त्री. ತಲೆ, ಶಿರಸ್ಸು.
मूंडन, पु. ಮುಂಡನ, ಕ್ಷೌರ; ಚೌಲ.
मूंडना, सक्रि. ಮುಂಡನ ಮಾಡು, ಕ್ಷೌರ ಮಾಡು, ಬೋಳಿಸು.
मूंढा, पु. ಹೆಗಲು; ಮುಕ್ಕಾಲು ಮಣೆ.
मूंदना, सक्रि. ಮುಚ್ಚು, ಬಂದುಮಾಡು; ಆಚ್ಛಾದಿಸು, ಹೊಚ್ಚು.
मूक, वि. ಮೂಕ, ಮೂಗ; ಬಡ.
मूका, पु. ಗವಾಕ್ಷ; ಗುದ್ದು.
मूगा, पु. ಒಂದು ಬಗೆ ರೇಷ್ಮೆ ಬಟ್ಟೆ.
मूछ, स्त्री. ಮೀಸೆ; ಬಡಾಯಿ, ಬಡಿವಾರ.
मूजिद, पु. ಪ್ರವರ್ತಕ; ರಚಯಿತ.
मूजिब, पु. ಕಾರಣ, ಹೇತು.
मूज़ी, वि. ಪೀಡಿಸುವವ, ದುಷ್ಟ.
मूठ, स्त्री. ಮುಷ್ಟಿ, ಹಿಡಿತ; ಪಟ್ಟು, ಹಿಡಿ; ಹಿಡಿಕೆ, ಕಾವು, ಕೈಪಿಡಿ; ಮಂತ್ರ, ಮಾಟ, ಪಂಥ; ಜೂಜಾಟ.
मूठा, पु. ಹಿಡಿ, ಕೈಪಿಡಿ; ಹಿಡಿಕೆ, ಕಾವು.
मूठी, स्त्री. ಮುಷ್ಟಿ, ಹಿಡಿ; ಹಿಡಿಕೆ.
मूढ़, वि. ಮೂಢ, ದಡ್ಡ, ಬೆಪ್ಪ.
मूढ़ता, स्त्री. ದಡ್ಡತನ, ಮೂಢತನ.
मूत, पु. ಮೂತ್ರ, ಉಚ್ಚೆ, ಕಾಲ್ಮಡಿ.
मूतना, अक्रि. ಉಚ್ಚೆ ಹೊಯ್ಯು, ಮೂತ್ರಿಸು, ಕಾಲು ಮಡಿಸು.
मूना, अक्रि. = मुवना.
मूनिस, वि. ಆಶ್ವಾಸನ ಕೊಡುವ. पु. ಜೊತೆಗಾರ, ಗೆಳೆಯ; ಆಪ್ತ ಸ್ನೇಹಿತ.
मूमिन, पु ದೇವರಲ್ಲಿ ನಂಬಿಕೆಯುಳ್ಳವ, ಆಸ್ತಿಕ.
मूरत, स्त्री. ಮೂರ್ತಿ, ಪ್ರತಿಮೆ.
मूरख, **मूर्ख**, वि. ಮೂರ್ಖ, ದಡ್ಡ.
मूर्खता, स्त्री. ಮೂರ್ಖತನ
मूर्च्छन, पु. ಮೂರ್ಛೆ ಹೋಗುವಿಕೆ.
मूर्च्छना, अक्रि. ಮೂರ್ಛೆ ಹೋಗು.

मूर्छा, स्त्री. ಮೂರ್ಛೆ, ಹಮ್ಮುದ.

मूर्त्ति, स्त्री. ಮೂರ್ತಿ, ಪ್ರತಿಮೆ.

मूल, पु. ಮೂಲ, ಬೇರು; ಬುಡ; ಪ್ರಾರಂಭ; ಉದ್ಗಮ, ಉತ್ಪತ್ತಿ; ಮೂಲಧನ, ಅಸಲು, ಬಂಡವಾಳ.

मूलिका, स्त्री. ಮೂಲಿಕೆ, ಬೇರು.

मूली, स्त्री. ಮುಲ್ಲಂಗಿ; ಮೂಲಿಕೆ; ಬೇರು.

मूल्य, पु. ಮೌಲ್ಯ, ಬೆಲೆ, ಕಿಮ್ಮತ್ತು.

मूल्यांकन, पु. ಬೆಲೆಕಟ್ಟುವಿಕೆ, ಮದಿಪು.

मूस, पु. ಇಲಿ, ಮೂಷಕ.

मूसदानी, स्त्री. ಇಲಿ ಬೋನು.

मूसन, पु. ಕಳವು, ಚೋರಿ.

मूसना, सक्रि. ಕದಿ, ಎಗರಿಸು.

मूसल, पु. ಒನಕೆ; ದೊಣ್ಣೆ, ಲಾಠಿ.

मूसलधार, मूसलाधार, पु. ಭಾರಿ ಮಳೆ, ಜೋರುಮಳೆ. क्रिवि. ಮುಸಲ ಧಾರೆಯಾಗಿ, ಧಾರಾಸಂಪಾತವಾಗಿ. मूसलाधार बरसन=ಧಾರಾಸಂಪಾತ ಬರು, ಧಾರೆಯಿಟ್ಟು ಸುರಿ, ಭಾರಿ ಮಳೆ ಹೊಯ್ಯು.

मूसला, पु. ಕಾಂಡ, ದಂಟು.

मूसली, स्त्री. ತಾಯಿಬೇರು, ನೆಲಬೇರು.

मूसा, पु. ಇಲಿ; ಒಬ್ಬ ಪೈಗಂಬರ.

मूसी, पु. ಮೃತಿಪತ್ರ ಬರೆದಿಟ್ಟವ.

मूसीक़ी, स्त्री. ಗಾಂಧರ್ವ ವಿದ್ಯೆ, ಗಾಯನಕಲೆ, ಸಂಗೀತ.

मूसेदान, पु. मूसेदानी, स्त्री. ಇಲಿ ಬೋನು.

मृग, पु. ಮೃಗ, ಪಶು; ಜಿಂಕೆ.

मृगछाला, पु. ಕೃಷ್ಣಾಜಿನ, ಕಡಾಸು.

मृगछौना, पु. ಜಿಂಕೆ ಮರಿ.

मृगनयनी, मृगनैनी, स्त्री. ಜಿಂಕೆಯಂತಹ ಕಣ್ಣುಳ್ಳವಳು, ಹರಿಣಾಕ್ಷಿ.

मृगया, स्त्री. ಬೇಟೆ, ಶಿಕಾರಿ.

मृगी, स्त्री. ಹೆಣ್ಣು ಜಿಂಕೆ.

मृत, वि. ಸತ್ತ, ಮೃತಪಟ್ಟ.

मृतक, पु. ಹೆಣ, ಶವ.

मृत्यु, स्त्री. ಮೃತ್ಯು, ಸಾವು.

मृदंग, पु. ಮೃದಂಗ, ಮದ್ದಲೆ; ದೀಪಕ್ಕೆ ಹಾಕುವ ಗಾಜಿನ ಮರೆ, ಷೇಡು.

मृदंगिया, पु. ಮದ್ದಲೆಗಾರ.

मृदु, वि. ಮೃದುವಾದ, ಮೆದು.

मृदुता, स्त्री. ಮೃದುತ್ವ, ಮೆಲ್ಪು.

में, प्रत्य. ಒಳಗೆ, -ಲ್ಲಿ, -ಒಳು. में से = ಪೈಕಿ.

मेंकना, अक्रि. ಕುರಿಯಂತೆ ಬೆಕ್ಕರಿಸು.

मेंगनी, स्त्री. ವಿಷ್ಠೆ, ಹಿಕ್ಕೆ; ಲದ್ದಿ.

मेंड, स्त्री. ಮಿಟ್ಟೆ, ಮೇಡು; ಒಡ್ಡು, ತೆವರು; ಬದು, ಬಾಂದು.

मेंडबंदी, स्त्री. ಚಕ್ಕುಬಂದಿ

मेंडा, पु. ಬಾವಿಯ ಕೈಪಿಡಿ ಗೋಡೆ, ಬಾವಿಯ ಸುತ್ತುಗೋಡೆ.

मेंडियाना, सक्रि. ಸುತ್ತುಗಟ್ಟು, ಅಂಚು ಕಟ್ಟು.

मेंडक, मेंढक, पु. मेंढकी, स्त्री. ಕಪ್ಪೆ. मेंढकी को ज़ुकाम होना = ಜಂಭದಿಂದ ತಾನು ಬಹಳ ದೊಡ್ಡವನೆಂದು ಅಂದುಕೊಳ್ಳು.

मेंढा, पु. ಗಂಡಾಡು, ಹೋತ.

में-में, स्त्री. ಕುರಿಯಂತೆ ಅರಚು,

ಬಿಸ್ಕರಿಸು.

मेंह, पु. ಮೇಘ, ಮುಗಿಲು; ಮಳೆ.

मेंहदी, स्त्री. ಗೋರಂಟಿ, ಮದರಂಗಿ; ಒಂದು ಮದುವೆ ಶಾಸ್ತ್ರ.

मेख, पु. ಮೇಷ, ಆಡು.

मेख़, पु. ಗೂಟ, ಗುಂಟೆ; ಮೇಕು, ಬೆಣೆ, ಆಪು; ಮೊಳೆ.

मेख़चू, मेख़चो, पु. ಕೊಡತಿ.

मेखला, स्त्री. ನಡುಕಟ್ಟು; ಡಾಬು, ಒಡ್ಯಾಣ.

मेगम, पु. ಶ್ವೇತಕುಷ್ಠ, ತೊನ್ನು.

मेघ, पु. ಮೇಘ, ಮುಗಿಲು.

मेघडंबर, पु. ಮೇಘದ ಗರ್ಜನೆ, ಗುಡುಗು, ದೊಡ್ಡ ಡೇರೆ, ಶಾಮಿಯಾನ.

मेचक, वि. ಕಪ್ಪಾದ, ಕರಿಯ. पु. ಕಪ್ಪು; ಹೊಗೆ.

मेचकताई, स्त्री. ಕಪ್ಪು; ಕತ್ತಲೆ.

मेज़, स्त्री. ಮೇಜು, ಫಲಕ, ಮಣೆ.

मेज़बान, पु. ಆತಿಥ್ಯ ಮಾಡುವವ, ಅತಿಥಿಯನ್ನು ಸತ್ಕರಿಸುವವ.

मेज़बानी, स्त्री. ಅತಿಥಿ ಸತ್ಕಾರ.

मेजा, मेझुका, पु. ಕಪ್ಪೆ.

मेझरा, पु. ಜವೆಗೋಧಿ ಮತ್ತು ಕಡಲೆಯ ಮಿಶ್ರಣ.

मेट, पु. ಮಡಕೆ, ಗಡಿಗೆ.

मेटक, मेटनहारा, वि. ಅಳಿಸುವವ, ದೂರ ಮಾಡುವವ.

मेटना, सक्रि. ದೂರಮಾಡು; ಅಳಿಸು, ತೊಡಸು; ನಿವಾರಿಸು, ನೀಗಿಸು.

मेटिया, मेटी, स्त्री. ಚಿಕ್ಕಮಡಕೆ, ಕುಡಿಕೆ

मेड़, पु. = मेंड.

मेडरा, पु. मेडरी, स्त्री. ಉಬ್ಬಾದ ಅಂಚು, ಎತ್ತರವಾದ ಅಂಚು.

मेडिया, स्त्री. ಕುಟಿ, ಗುಡಿಸಲು.

मेढ़ा, पु. ಟಗರು, ಆಡು. टेढ़ा मेढ़ा = ಅಂಕುಡೊಂಕಾದ.

मेढ़ासिंगी, स्त्री. ಅಜಶೃಂಗಿ, ಕುರುಟಿಗೆ

मेढ़ी, स्त्री. ಮೇಕೆ; ವೇಣಿ, ಹೆಳಲು.

मेथी, स्त्री. ಮೆಂತೆಯ, ಮೆಂತ್ಯ.

मेथौरी, स्त्री. ಮೆಂತೆಯದ ಸಂಡಿಗೆ.

मेद, पु. ಕೊಬ್ಬು, ಮೇದಸ್ಸು; ದಪ್ಪ.

मेदा, पु. ಹೊಟ್ಟೆ, ಉದರ; ಜಠರ.

मेदिनी, स्त्री. ಭೂಮಿ; ಭೂಸ್ಥಿತಿ.

मेध, पु. ಯಜ್ಞ, ಯಾಗ.

मेधुकी, पु. ನಾಯಕ, ದಳಪತಿ.

मेना, सक्रि. ನಾದಿದ ಹಿಟ್ಟಿಗೆ ಎಣ್ಣೆ ಅಥವಾ ತುಪ್ಪ ಸೇರಿಸು. पु. ಮೇನ, ಡೋಲಿ.

मेम, स्त्री. ಫರಂಗಿ ಹೆಂಗಸು, 'ಮೇಡಂ'; ಆಸ್ಪೀಟಾಟದ ರಾಣಿ. मेम साहब = ದೊರೆಸಾನಿ.

मेमना, पु. ಕುರಿಮರಿ.

मेमार, पु. ಇಟ್ಟಿಗೆ ಕೆಲಸದವ, ಉಪ್ಪಾರ, ತರಗಾರ, ಪಲಗಂಡ, ಕಾಮಾಟಿಗ.

मेमारी, स्त्री. ತರಗಾರನ ಕೆಲಸ; ಗಾರೆ ಕೆಲಸ

मेमियानी, स्त्री. ತಿಣುಕುವಿಕೆ, ಮುಲುಕುವಿಕೆ; ತಿಣುಕಾಟ.

मेयार, पु. ಪರೀಕ್ಷೆ, ನಿಕಷ.

मेरा, मेरी, सर्व. ನನ್ನ, ನನ್ನದು.

मेरुक, पु. ಒಂದು ಬಗೆ ಧೂಪ.

मेल, पु. ಸಂಬಂಧ, ಸಂಪರ್ಕ; ಸೇರಿಕೆ; ಒಪ್ಪಂದ; ಹೊಂದಿಕೆ; ಸಾಮರಸ್ಯ; ಐಕಮತ್ಯ; ಸ್ನೇಹ, ಸಲಿಗೆ, ಹೋಲಿಕೆ, ಸಾಮ್ಯ; ತರಹ, ರೀತಿ, ಬಗೆ; ಮಿಶ್ರಣ, ಮಿಳನ. मेल जोल = ಓರಗೆ, ಸಲಿಗೆ, ಹೊಂದಿಕೆ. मेल मिलाप = ಅನ್ಯೋನ್ಯ, ಬಳಕೆ, ಸಲಿಗೆ,

मेलन, पु. ಮಿಳನ, ಕೂಡಿಕೆ.

मेलना, सक्रि. ತುರುಕು, ಅಡಚು; ಸೇರಿಸು. अक्रि. ಒಟ್ಟುಗೂಡು.

मेला, पु. ಗುಂಪು, ಸಂದಣಿ; ಕೂಟ; ಜಾತ್ರೆ, ಮೇಳ, ಪರಿಷೆ; ಸನ್ಯಾಸಿಗಳ ಸಭೆ. मेला ठेला = ಉತ್ಸವ, ಜಾತ್ರೆ.

मेलाना, सक्रि. = मिलाना.

मेली, वि. ಸ್ನೇಹಪರ, ಸಲಿಗೆಯುವ. पु. ಸ್ನೇಹಿತ, ಗೆಳೆಯ; ಭಾಗಸ್ಥ.

मेलहना, अक्रि. ತಳಮಳಿಸು.

मेवड़ी, स्त्री. ಸಿಂದುವಾರ; ನಿರ್ಗುಂಡಿ.

मेवा, पु. ಒಣಗಿದ ಹಣ್ಣು, ಹಣ್ಣು ಹಂಪಲು, ಮೋಣ.

मेवाटी स्त्री. ಒಂದು ಪಕ್ವಾರ.

मेओ, मेवाती, पु. ಕಳ್ಳತನಕ್ಕೆ ಹೆಸರು ವಾಸಿಯಾದ ಒಂದು ಜಾತಿ ಜನರು.

मेवादार, वि. ಫಲವುಳ್ಳ, ಫಲಭರಿತ

मेवा-फ़रोश, पु. ಹಣ್ಣು ಮಾರುವವ.

मेहंदी, स्त्री. = मेंहदी.

मेह, पु. ಮೇಘ, ಮುಗಿಲು, ಮೋಡ; ಮಳೆ; ಮೇಹರೋಗ.

मेहतर, पु. ಝಾಡಮಾಲಿ, ಒಡ್ಡ, ಬಂಗಿ; ತೋಟಿ, ಹಲಾಲಖೋರ; ನಾಯಕ, ಯಜಮಾನ; ಮುಖಂಡ.

मेहतरानी, स्त्री. मेहतर का स्त्री. रूप.

मेहनत, स्त्री. ಪರಿಶ್ರಮ, ಪ್ರಯಾಸ; ಮೆಹನತ್ತು, ಧಾವತಿ; ನಿಗಾ, ಗಮನ; ಅಭ್ಯಾಸ; ಕಸರತ್ತು. मेहनत मज़दूरी = ದಿನವಹಿ ಕೂಲಿ; ಕೂಲಿನಾಲಿ.

मेहनताना, पु. ಶ್ರಮದಕ್ಷಿಣೆ, ಪಾರಿಶ್ರಮಿಕ; ಪುರಸ್ಕಾರ, ರುಸುಂ.

मेहनती, वि. ದುಡಿಯುವವ, ಉದ್ಯಮಿ; ಕಷ್ಟಾಲು, ಪಾಡುಪಡುವವ; ಶ್ರಮಪಟ್ಟವ. पु. ಕೂಲಿಗಾರ.

मेहना, पु. ಕೊರಚಾಟ, ವ್ಯಂಗೋಕ್ತಿ; ಸುಡುನುಡಿ.

मेहबस, पु. ಕಸೂತಿ ಮಾಡಿದ ಗವಸಣಿಗೆ,

मेहमान, पु. ಅತಿಥಿ, ಅಭ್ಯಾಗತ, ಔತಣಿಗ, ಬಿದ್ದಣಿಗ; ಅಳಿಯ.

मेहमानदार, पु. ಅತಿಥ್ಯ ಮಾಡುವವ.

मेहमानदारी, स्त्री ಅತಿಥ್ಯ, ಅತಿಥಿ ಸತ್ಕಾರ.

मेहमानी, स्त्री. ಅತಿಥಿಯಾಗಿ ಇರೋಣ; ಆತಿಥ್ಯ, ಅತಿಥಿಸತ್ಕಾರ; ಔತಣ.

मेहमीज़, स्त्री. ರಿಕಾಬು, ಅಂಕವಡಿ.

मेहर, पु. ಸೂರ್ಯ, ರವಿ स्त्री. ಕೃಪೆ, ದಯೆ, ಕನಿಕರ; ಕುಲಾಂಗನೆ.

मेहरबान, वि. ದಯಾಳು, ಕೃಪಾಳು.

मेहरबानी, स्त्री. ದಯೆ, ಅನುಗ್ರಹ, ಕೃಪೆ.

मेहरा, पु. ಹೆಣ್ಣಿಗ, ನಪುಂಸಕ.

मेहराब, स्त्री. ಅರಸರು ಕುಳಿತುಕೊಳ್ಳುವ ಸ್ಥಳ; ಎಲ್ಲಕ್ಕಿಂತ ಎತ್ತರವಾದ ಕುಳಿತುಕೊಳ್ಳುವ ಸ್ಥಳ; ರಾಜನ ಏಕಾಂತ ಸ್ಥಾನ; ಗೋಡೆಯಲ್ಲಿನ ಗೂಡು, ಮಾಡ; ಬಾಗಿಲಿನ ಕಮಾನು.

मेहरारू, मेहरी, स्त्री. ಸ್ತ್ರೀ, ಮಡದಿ; ಪತ್ನಿ, ಹೆಂಡತಿ.

मेहवर, पु. ಅಕ್ಷ, ಅಚ್ಚು.

मैं, सर्व. ನಾನು.

मै, स्त्री.; क्रिवि. = मय.

मैका, पु. = मायका.

मैत्री, स्त्री. ಸ್ನೇಹ, ಮೈತ್ರಿ.

मैदा, पु. ನುಣ್ಣಗಾದ ಹಿಟ್ಟು, ಪಿಷ್ಟ.

मैदान, पु. ಸಮಪ್ರದೇಶ, ಪಾತಳಿ; ಬಯಲು, ಮಾಳ, ಮೈದಾನ; ಹೊಲ; ಯುದ್ಧಕ್ಷೇತ್ರ; ಬಟ್ಟೆಯ ನಡುಭಾಗ, ಒಡಲು.

मैनफल, पु. ಒಂದು ಹಣ್ಣು.

मैनसिल, स्त्री. ರಕ್ತಧಾತು, ಮನಶಿಲೆ

मैना, पु. ಗೊರವಂಕ, ಮೈನ.

मैयर, स्त्री. ಸ್ತ್ರೀ, ಹೆಂಗಸು.

मैया, स्त्री. ತಾಯಿ, ಮಾತೆ, ಅಮ್ಮ.

मैल, स्त्री. ಕೊಳೆ, ಕೊಳಕು; ಮಾಲಿನ್ಯ; ತುಕ್ಕು; ವ್ಯಥೆ.

मैलख़ोरा, वि. ಮಾಸಿದರೂ ಬೇಗನೆ ಕೊಳೆ ಕಾಣದಿರುವ (ಬಣ್ಣ).

मैला, पु. ಕೊಳೆ; ಕೊಳಕು, ಗಲೀಜು. वि. ಕೊಳೆಯಾದ, ಕೊಳಕಾದ; ಮಾಸಿದ, ಮಲಿನ; ಹೊಲಸು. मैला कुचैला = ಕೊಳಕು ಬಟ್ಟೆಯುವ, ಗಲೀಜಿನ.

मैलापन, पु. ಕೊಳಕು, ಗಲೀಜು

मोंढा, पु. ಬೆತ್ತದ ಕುರ್ಚಿ; ಪೀಠ, ಅಡ್ಡಣೆ; ಹೆಗಲು; ಡುಬ್ಬ, ಗೂನು; ಕಂಕುಳಿನ ಕೆಳಭಾಗದಲ್ಲಿ ಹಾಕುವ ಅಂಗಿಯ ತೇಪೆ; ಕಬ್ಬಿನ ಮೊಳಕೆ.

मोइया, पु. ದಾರದ ಉಂಡೆ, ಕಂಡಿಕೆ.

मोकला, वि. ಸಡಿಲ, ಡೀಲಾದ; ವಿಮುಕ್ತ, ಸ್ವತಂತ್ರ; ಬಿಚ್ಚಿದ, ತೆರೆದ; ಬೇರೆ, ಪ್ರತ್ಯೇಕ; ಅರಳಿದ, ವಿಕಸಿಸಿದ; ಹರ್ಷಿತ, ಗೆಲುವಿನ; ಸಾಕಷ್ಟು; ಹೇರಳ.

मोक्ष, पु. ಬಿಡುಗಡೆ; ಮೋಕ್ಷ.

मोखा, पु. ಗವಾಕ್ಷ, ಕಂಡಿ; ರಂಧ್ರ.

मोगरा, पु. ಬೆಂಕಟ್ಟಿನ ತೊಲೆ, ಬೆಂತೊಲೆ, ಮೊಗಡು; ಕೊಡತಿ, ಬಡಿಮಣೆ; ದುಂಡುಮಲ್ಲಿಗೆ, ಏಳು ಸುತ್ತಿನ ಮಲ್ಲಿಗೆ; ಒಂದು ತರಕಾರಿ.

मोगरी, स्त्री. ಸಣ್ಣ ಕೊಡತಿ.

मोच, स्त्री. ನರ ತೊಡಕುವುದು, ಉಳುಕು; ಮುರುಕು, ಹುರಿ. पु. ಬಾಳೆಗಿಡ.

मोचन, पु. ಬಿಡುಗಡೆ, ಖುಲಾಸೆ; ಮುಕ್ತಿ, ವಿಮೋಚನೆ; ಕ್ಷಮೆ, ಕ್ಷಮಾಪಣೆ. स्त्री. "मोची" का स्त्री. रूप.

मोचना, सक्रि. ಬಿಡು, ಬಿಚ್ಚು; ಬಿಡುಗಡೆ ಮಾಡು; ಬಿಡಿಸು; ಉದುರಿಸು, ಸುರಿ. पु. ಕೂದಲನ್ನು ಕೀಳುವ ಆಯುಧ; ಚಿಮುಟ.

मोचनी, स्त्री. ಸಣ್ಣ ಚಿಮುಟ.

मोचरस, पु. ಬೂರುಗದ ಗೋಂದು.

मोचा, पु. ಬಾಳೆ ಗಿಡ.

मोची, पु. ಮೊಚ್ಚಿಗ, ಮೋಚಿ; ಸಮ

ಗಾರ, ಚಮ್ಮಾರ; ಮಾದಿಗ.

मोछ, स्त्री. = मूंछ.

मोज़ा, पु. ಕಾಲುಚೀಲ, ಮೇಜೋಡು; ಕಣಕಾಲು, ಕುದುರೆ ಎಲುಬು, ಮೀನಖಂಡ.

मोट, स्त्री. ಗಂಟು, ಮೂಟೆ; ಮನ ಮುದ್ಗ, ಕಾಡು ಹೆಸರು, ಮಡಕೆ; ಚರ್ಮದ ಬಾನಿ, ಏತದ ಬಾನೆ, ಕಪಿಲೆಯ ಬಾನೆ, ಮಟ್ಟೆ.

मोटकी, स्त्री. ಗುದ್ದಲಿ, ಪಿಕಾಸಿ.

मोटरा, मोटरी, स्त्री. ಮೂಟೆ.

मोटा, वि. ದಪ್ಪ, ಸ್ಥೂಲ; ಕೊಬ್ಬಿದ; ದುಬ್ಬ, ಗಾತ್ರವಾದ; ಮಂದವಾದ, ಗಟ್ಟಿಯಾದ; ತೋರ, ಭಾರಿ. मोटा ताज़ा = ಗಟ್ಟಿಮುಟ್ಟಾದ, ಕಟ್ಟುಮಸ್ತಾದ; ಕೊಬ್ಬಿದ, ದಪ್ಪ ದಢೂತಿ.

मोटाई, स्त्री. ದಪ್ಪ, ಗಾತ್ರ, ದುಬ್ಬು; ಕುಚೇಷ್ಟೆ, ಪ್ರತಿಷ್ಠೆ.

मोटाना, अक्रि. ದಪ್ಪವಾಗು, ಬಲಿ; ಕೊಬ್ಬು; ಮೈ ತುಂಬು; ಉಬ್ಬು. सक्रि. ದಪ್ಪವಾಗಿಸು; ಕೊಬ್ಬಿಸು.

मोटापन, मोटापा, पु. ದಪ್ಪ, ಗಾತ್ರ.

मोटिया, पु. ಒರಟು ಬಟ್ಟೆ, ಗಾಢಾ ಬಟ್ಟೆ; ಮೂಟೆ ಹೊರುವವ, ಹೊರೆಯಾಳು.

मोठ, स्त्री. = मोट.

मोठस, वि. ಮೌನವಾದ.

मोड़, पु. ತಿರುಗುವಿಕೆ, ಸುತ್ತು; ಮುರಿ; ಮಡಿಕೆ; ತಿರುಗುವ ಸ್ಥಳ, ತಿರುವು; ಮುರುದಲೆ, ಮುಡುಕು; ಉಳುಕು.

मोड़ना, सक्रि. ತಿರುಗಿಸು, ತಿರುವು; ಮಡಿಸು, ಮುದುರು, ಮಡಿಚು; ಮನಸೆಗೆಡಿಸು, ಮೊಂಡ ಮಾಡು.

मोढ़ा, पु. = मोंढा.

मोतदिल, वि. ಮಿತಶೀಲ, ಮಿತವಾದಿ.

मोतबर, वि. ವಿಶ್ವಾಸಾರ್ಹವಾದ, ವಿಶ್ವಸನೀಯ, ವಿಶ್ವಸ್ತ.

मोतिया, पु. ಮಲ್ಲಿಗೆ; ಜಾಜಿ; ಸರಿಗೆ, ಜರತಾರಿ. वि. ಮುತ್ತಿನಂಥ, ಮುತ್ತಿನ ಬಣ್ಣದ; ಗುಲಾಬಿ ಬಣ್ಣದ.

मोतियाबिंद, पु. ಕಣ್ಣಿನ ಪರೆ, ಪಟಲ, ಮೋತಿ ಬಿಂದು.

मोती, स्त्री. ಮುಕ್ತಾಫಲ, ಮುತ್ತು. स्त्री. ಮುತ್ತಿನ ಬಾವಲಿ.

मोतीचूर, पु. ಹೊಳೆಯುವ ಕಣ್ಣು; ಗುಂಜಾಲಾಡು.

मोतीझिरा, पु. ಮಂಥಜ್ವರ, ದಡಾರ.

मोतीसिरी, स्त्री. ಮುತ್ತಿನ ಕಂಠಿ.

मोथरा, पु. ದಬ್ಬೆ, ಚಕ್ಕೆ, ಸಿಗುರು. वि. ಮೊಂಡಾದ, ಮಸಗೆಟ್ಟ, ಬಡ್ಡು.

मोथा, पु. = नागरमोथा.

मोद, पु. ಆನಂದ, ಹರ್ಷ.

मोदना, अक्रि. ಆನಂದಿಸು, ಹರ್ಷಿಸು. सक्रि. ಸಂತೋಷಗೊಳಿಸು.

मोदिन, मोदिनी, स्त्री. मोदीಯ ಪತ್ನಿ; ದಿನಸಿ ಅಂಗಡಿಯವಳು.

मोदी, पु. ದಿನಸಿ ಅಂಗಡಿಯವ, ಜಿನಸಿ ವ್ಯಾಪಾರಿ; ಶೆಟ್ಟಿ; ಉಗ್ರಾಣಿಕ.

मोदीख़ाना, पु. ಉಗ್ರಾಣ, ಮೋದೀಖಾನೆ.

मोधुक, पु. ಬೆಸ್ತ, ಅಂಬಿಗ.

मोघू, वि. ನಿಷ್ಕಪಟಿ; ದಡ್ಡ; ಪೆದ್ದ, ಬೆಪ್ಪ.

मोन, पु. ಬುಟ್ಟಿ, ಗೂಡೆ.

मोना, सक्रि. ನೆನಸು, ಉನಿಯುಹಾಕು. पु. ಬುಟ್ಟಿ, ಗೂಡೆ, ಮಕ್ಕರಿ.

मोनी, स्त्री. ತುದಿ, ಕೊನೆ; ಅಂಚು, ದಡ.

मोम, पु. ಮೇಣ, ಮಯಣ.

मोमगर, पु. ಮೇಣದಕೆಲಸಮಾಡುವವ

मोमजामा, पु. ಮೇಣಗಪ್ಪಡ.

मोम-दिल, वि. ಕರಗುವ ಮನಸ್ಸಿನವ; ಕರುಣಾಳು.

मोमबत्ती, स्त्री. ಮೇಣದ ಬತ್ತಿ.

मोमिन, पु. ಮಹಮ್ಮದೀಯ ನೆಯ್ಗೆಯವ.

मोमिया, पु. ಮೇಣದ ಬೊಂಬೆ.

मोमियाई, स्त्री. ಮೇಣದ ಬೊಂಬೆ; ಒಂದು ಔಷಧ; ಕೃತಕ ಶಿಲಾಜಿತು. मोमियाई निकालना = ಚೆನ್ನಾಗಿ ಹೊಡೆ, ಎಣ್ಣೆಗಾಯಿ ಮಾಡು.

मोमी, वि. ಮೇಣದ; ಮೇಣದಂಥಾ.

मोयन, पु. ನಾದಿದ ಹಿಟ್ಟಿಗೆ ತುಪ್ಪ ಅಥವಾ ಎಣ್ಣೆ ಕಲಸುವಿಕೆ; (ರೊಟ್ಟಿಗೆ) ತುಪ್ಪ ಸವರುವಿಕೆ. मोयन देना = (ಚಪಾತಿ ಅಥವಾ ರೊಟ್ಟಿಗೆ) ತುಪ್ಪ ಸವರು.

मोर, पु. ಮಯೂರ, ನವಿಲು; ತುಕ್ಕು. स्त्री. ಇರುವೆ. मोर मलख = ಅಗಣಿತ, ಅಸಂಖ್ಯಾತ.

मोरचंग, पु. ಮೋರ್ಛಿಂಗ್ (ವಾದ್ಯ).

मोरचन्द्रिका, स्त्री. ನವಿಲುಗರಿಯ ಕಣ್ಣು

मोरचा, पु. ತುಕ್ಕು, ಜಂಗು, ಕಿಟ್ಟ; ಇರುವೆ; ಕಂದಕ; ಅಗಳತೆ; ಕಂಡಿಗಳಿರುವ ಕೋಟೆಗೋಡೆ, ಆಳುವೇರಿ; ಕೋಟೆ ಕಾಯುವ ಸೈನಿಕರು ನಿಲ್ಲುವ ಆಯಕಟ್ಟಿನಸ್ಥಳ, ಕೊತ್ತಳ, ಬತ್ತೇರಿ.

मोरचाबंदी, स्त्री. ಕಂದಕ ಅಗೆಯುವಿಕೆ, ಕೋಟೆ ಬಲಕಾಯಿಸುವಿಕೆ.

मोरछल, पु. ನವಿಲುಗರಿಯ ಚಾಮರ.

मोरन, सक्रि. ಸಕ್ಕರೆ ಕಲಸಿದ ಮೊಸರು.

मोरना, स्त्री. ಕಡೆ, ಮಥಿಸು.

मोरनी, स्त्री. ಹೆಣ್ಣು ನವಿಲು; ಗೂಟ.

मोरपंख, पु. ನವಿಲುಗರಿ, ಪೀಲಿ.

मोरपंखी, स्त्री. ನವಿಲಿನ ಆಕಾರದ ಅಲಂಕೃತವಾದ ದೋಣಿ. पु. ನವಿಲುಗರಿಯ ಬಣ್ಣದ.

मोरमुकुट, पु. ನವಿಲುಗರಿಯ ಕಿರೀಟ.

मोरा, सर्व. = **मेरा**.

मोरी, स्त्री. ಮೊಹರಿ, ಬಚ್ಚಲು, ಚರಂಡಿ; ತೂಬು, ದ್ವಾರ; ಹೆಣ್ಣು ನವಿಲು.

मोल, पु. ಕೊಂಡುಕೊಳ್ಳುವಿಕೆ, ಖರೀದಿ; ಬೆಲೆ. ಕ್ರಯ; ಮೌಲ್ಯ, ಕಿಮ್ಮತ್ತು. मोल चाल = ಚೌಕಾಸಿ, ವ್ಯಾಪಾರ, ಬೇರ. मोल तोल = ಬೆಲೆ ಕಟ್ಟುವಿಕೆ; ಮದಿಪು; ಬೆಲೆ. मोल लेना = ಖರೀದಿ ಮಾಡು, ಕೊಂಡುಕೊಳ್ಳು.

मोलाना, सक्रि. ಬೇರ ಮಾಡು.

मोसना, सक्रि. ಕದಿ. ಕಳ್ಳತನ ಮಾಡು.

मोह, पु. ಭ್ರಮೆ, ಭ್ರಾಂತಿ; ಮೂರ್ಛೆ; ಮರುಳು; ಮೋಹ; ಪ್ರೀತಿ, ಪ್ರೇಮ.

मोहड़ा, पु. ತಪ್ಪಲೆಯ ಬಾಯಿ, ಕಂಠ;

ಮುಖ, ಮೂತಿ.

मोहन, वि. ವಶೀಕರಿಸುವ, ಚಿತ್ತಾಕರ್ಷಕ, ಮನಮೋಹಕ. पु. ಮೋಹಗೊಳಿಸುವವ; ಪ್ರೇಮಿ, ಇನಿಯ; ಮೋಹನ, ಶ್ರೀಕೃಷ್ಣ; ಒಂದು ಮಿಠಾಯಿ

मोहन-भोग, पु ಒಂದು ಮಿಠಾಯಿ, ಮೋಹನ್ ಹಲ್ವ; ಒಂದು ಬಗೆ ಮಾವಿನ ಹಣ್ಣು.

मोहना, अक्रि. ಮೋಹಿಸು, ಮೋಹಗೊಳ್ಳು; ಮರುಳಾಗು; ಮೂರ್ಛಿತನಾಗು. सक्रि. ಮೋಹಗೊಳಿಸು, ವಶೀಕರಿಸು; ಮನಸ್ಸನ್ನು ಸೂರೆಗೊಳ್ಳು, ಮರುಳು ಮಾಡು; ಮೂರ್ಛಿತನಾಗು.

मोहनी, स्त्री. ಮೋಹಗೊಳಿಸುವ ಸ್ತ್ರೀ, ಮೋಹಿನಿ; ವೇಶ್ಯೆ; ವಶೀಕರಣ ಮಂತ್ರ; ಮಾಯೆ.

मोहर, स्त्री. ಠಸ್ಸೆ, ಮೊಹರು, ಅಚ್ಚು, ಮುದ್ರೆ; ಉಂಡಿಗೆ; ಚಿನ್ನದ ನಾಣ್ಯ, ಮೋಹರ. मोहर लगाना = ಮೊಹರು ಮಾಡು; ಮುದ್ರೆಯೊತ್ತು.

मोहरा, पु. ಪಾತ್ರೆಯ ಬಾಯಿ, ಮುಖ; ದಳಮುಖ, ಮುಂದಳ, ಚೂಣಿ; ಸೇನೆಯ ದಾಳಿ, ಆಕ್ರಮಣ, ಹಲ್ಲಾ; ತೂಬು, ನಳಿಗೆ; ರವಿಕೆಯ ನವಾರು; ಚದುರಂಗದ ಕಾಯಿ; ಪಡಿಯಚ್ಚು; ಬಟ್ಟಿನಯಮಾಡುವ ಯಂತ್ರ; ಉಜ್ಜುಗಲ್ಲು; ಒಂದು ವಿಷ ಮೂಲಿಕೆ; ಪ್ರತಿವಿಷ, ವಿಷಮುರಕ, ಮುರಿವು, ಕಟ್ಟುಮುದ್ದು; ಬೆನ್ನುಹುರಿ, ಪೃಷ್ಠವಂಶ; ಮಿರುಗು, ಒಪ್ಪ.

मोहरादार, वि. ಮಿರುಗುವ; ನುಣುಪಾದ.

मोहरी, स्त्री. ಪಾತ್ರೆಯ ಚಿಕ್ಕ ಬಾಯಿ; ಅಂಗಿಯ ತೋಳು ಅಥವಾ ಷರಾಯಿಯ ಕಾಲುಗಳು; ತೂಬು, ಮೊಹರಿ, ಬಚ್ಚಲು, ಚರಂಡಿ.

मोहार, पु. ದ್ವಾರ, ಮುಖ.

मोहि, सर्व. ನನಗೆ; ನನ್ನನ್ನು.

मोहित, वि. ಮೂರ್ಛಿತ; ಭ್ರಾಂತ; ಮರುಳಾದ, ಮೋಹಗೊಂಡ. मोहित होना = ಮೋಹಿತನಾಗು, ಮೋಹಗೊಳ್ಳು.

मोहिनी, स्त्री. ಮರಳುಗೊಳಿಸುವವಳು; ಮೋಹಿನಿ; ಒಲುಮೆ; ಮಲ್ಲಿಗೆ.

मोही, वि. ಮೋಹಗೊಳಿಸುವ.

मौंगी, स्त्री. ಮೌನ.

मौंडा, पु. ಹುಡುಗ, ಹೈದ.

मौ, स्त्री. ಯೌವನ, ಪ್ರಾಯ; ಮನಸ್ಸು, ಚಿತ್ತ; ಜೇನುತುಪ್ಪ.

मौका, पु. ಅಜ್ಜ.

मौक़ा, पु. ಅಪಘಾತದ ಸ್ಥಳ, ಅವಘಡದ ಜಾಗ; ಸ್ಥಳ, ಜಾಗ; ಸಂದರ್ಭ, ಪ್ರಮೇಯ; ಮೋಕು; ತಕ್ಕ ವೇಳೆ, ಹೊತ್ತು. मौक़ा ताकना = ಹೊತ್ತು ಸಾಧಿಸು, ಸಮಯ ಕಾಯು.

मौक़ूफ़, वि. ನಿಂತಿರುವ, ಆತಿರುವ, ಅವಲಂಬಿತ; ನಿಲ್ಲಿಸಿದ, ನಿಂತುಹೋದ, ಬಂದಾದ; ಮುಂದಕ್ಕೆ ತಳ್ಳಿದ, ಮಾ

ನಸಿಕ ಮಾಡಿದ; ಕೆಲಸದಿಂದ ತೆಗೆದು ಹಾಕಿದ, ಉಚ್ಚಾಟಿತ; ಬರತರಫು ಮಾಡಿದ, ತಳ್ಳುಪಡಿಯಾದ; ರದ್ದಾದ.

मौकूफ़ी, स्त्री. ನಿಲ್ಲಿಸಿಡುವಿಕೆ, ಮಾನಸಿಕ; ಬರತರಫು; ತಳ್ಳುಪಡಿ; ರದ್ದು, ಉಚ್ಚಾಟನ; ಅವಲಂಬನ.

मौख, पु. ಒಂದು ಸಂಬಾರ ದ್ರವ್ಯ.

मौखिक, वि. ಮುಖದ, ಬಾಯಿಮಾತಿನ.

मौज, स्त्री. ಅಲೆ, ತರಂಗ; ಉತ್ಸಾಹ; ಹುಮ್ಮಸ್ಸು; ಉಲ್ಲಾಸ, ಗೆಲುವು; ಮಜ; ಮೋಜು, ಷೋಕು.

मौज़ा, पु. ಹಳ್ಳಿ, ಗ್ರಾಮ, ಮವುಜೆ.

मौजी, वि. ಮೋಜುಗಾರ, ಷೋಕಿಲಾಲ; ಉಲ್ಲಾಸಿ, ಕುಶಾಲಿನವ.

मौजूद, वि. ಇರುವ, ಹಾಜರಿರುವ, ವರ್ತಮಾನ; ಪ್ರಸ್ತುತ, ಸಿದ್ಧವಾದ.

मौजूदगी, स्त्री. ಹಾಜರಿ, ಉಪಸ್ಥಿತಿ

मौजूदा, वि. ಈಗಿನ, ಪ್ರಸ್ತುತದ; ಸದ್ಯದ, ವರ್ತಮಾನದ.

मौजून, वि. ತೂಕಮಾಡಿದ; ಸರಿಮಾಡಿದ.

मौत, स्त्री. ಮೃತ್ಯು, ಸಾವು, ಮರಣ
मौत के घाट उतारना = ಕೊಂದು ಹಾಕು, ಸಾಯಿಸು.

मौताद, स्त्री. ಪರಿಮಾಣ, ಪ್ರಮಾಣ; ಔಷಧದ ಪ್ರಮಾಣ, ಒಂದು ಹೊತ್ತಿನ ಔಷಧ; ಗುಟ್ಟಿ, ಗುಟುಕು.

मौन, पु. ಮೌನ, ಮೂಗುವಟ್ಟಿಗೆ.

मौना, पु. ಜಾಡಿ, ಬುಟ್ಟಿ.

मौनी, स्त्री. ಚಿಕ್ಕ ಮಕ್ಕರಿ, ಬುಟ್ಟಿ. वि. ಮೌನವಾಗಿರು, ಮೌನಿ.

मौर, पु. ಕಂಠ, ಕುತ್ತಿಗೆ; ಮಾವಿನ ಹೂ; ವಿವಾಹದಲ್ಲಿ ಹಣೆಗೆ ಧರಿಸುವ ಪಟ್ಟಿ, ಮದವಣಿಗನ ಕಿರೀಟ, ಬಾಸಿಂಗ, ಭಾಳಪಟ್ಟಿ.

मौराना, अक्रि. ಹೂ ಬಿಡು.

मौरी, स्त्री. ಮದುವೆ ಹೆಣ್ಣಿನ ಬಾಸಿಂಗ, ಭಾಳಪಟ್ಟಿ.

मौरूसी, स्त्री. ಪಿತ್ರಾರ್ಜಿತ, ಪೈತೃಕ.

मौलना, अक्रि. ಹೂ ಬಿಡು, ಅರಳು; ಒಡೆದು ಹೋಗು (ಬಳೆ).

मौलवी, पु. ಪರ್ಷಿಯನ್ - ಅರಬ್ಬಿ ಭಾಷಾ ಪಂಡಿತ; ಮೌಲ್ವಿ; ವಿದ್ವಾಂಸ.

मौलसिरी, स्त्री. ಬಕುಳ ಮರ, ರಂಜ, ಪಗಡೆ ಮರ.

मौला, पु. ಈಶ್ವರ, ಸ್ವಾಮಿ, ಒಡೆಯ.

मौलाना, पु. ಮಹಮ್ಮದೀಯ ಗುರು, ಆಚಾರ್ಯ; ಪಂಡಿತ.

मौलि, स्त्री. ಜುಟ್ಟು; ಜಡೆ; ಕಿರೀಟ.

मौलूद, वि. ಹುಟ್ಟಿದ, ಜನಿತ. पु. ಮಹಮ್ಮದನ ಜಯಂತಿ.

मौसा, मौसिया, पु. ತಾಯಿಯ ಸೋದರಿಯ ಗಂಡ.

मौसिम, पु. ಋತು, ಅವುಗ; ತಕ್ಕ ಕಾಲ, ತತಿ, ತರುಣ.

मौसिमी, वि. ಋತು ಸಂಬಂಧವಾದ, ಕಾಲಾನುಗುಣವಾದ; ತಕ್ಕ ಕಾಲದ.

मौसी, स्त्री. ತಾಯಿಯ ಸೋದರಿ.

मौसूफ़, वि. ವರ್ಣಿತ, ವಿಖ್ಯಾತ.

मौसूम, वि. ಗುರುತು ಹಾಕಿದ; ರುಜು

ಹಾಕಿದ; ಮೇಲೆ ಹೇಳಿದ, ಸದರಿ.

मौसूल, वि. ಸೇರಿದ, ಜಂಟಿಸಿದ. पु. ತೆಂಗೆ, ಮಹಸೂಲು.

मौसेरा, वि. ತಾಯಿಯ ಸೋದರಿಯ ಕಡೆಯ ಸಂಬಂಧದ. मौसेरा भाई = ತಾಯಿಯ ಸೋದರಿಯ ಮಗ, ತಾಯಿ ಮಾವಿ ಸೋದರ.

म्याँवँ, स्त्री. ಬೆಕ್ಕಿನ ಕೂಗು, "ಮ್ಯಾಂ".

म्याद, स्त्री. = मियाद.

म्यान, पु. = मियान.

य

यंत्र, पु. ಯಂತ್ರ; ಆಯುಧ; ತಾಯಿತಿ, ಕಾಪು, ರಕ್ಷೆ.

यंत्रणा, स्त्री. ಕಷ್ಟ, ಯಾತನೆ.

यंत्रालय, पु. ಯಂತ್ರಗಳನ್ನು ಮಾಡುವ ಅಥವಾ ಮಾರುವ ಸ್ಥಳ; ಯಂತ್ರಗಳು ಕೆಲಸಮಾಡುವ ಸ್ಥಳ; ಯಂತ್ರಾಲಯ.

यंत्री, वि. ಯಂತ್ರ ಸಂಬಂಧವಾದ; ಯಂತ್ರದ; ಯಾಂತ್ರಿಕ; ಯಂತ್ರ ನಡಿಸುವವ; ಯಂತ್ರಗಾರ.

यकंग, वि. ಒಬ್ಬಂಟಿಗ; ಒಂಟಿ.

यक, वि. ಒಂದು; ಒಂಟಿ.

यक-क़लम, वि. ಎಲ್ಲವೂ, ಸಮಸ್ತ. क्रिवि. ಒಂದೇ ಸಲ; ಏಕಾಏಕಿ.

यक-चोबा, पु. ಒಂದೇ ಕಂಬದ (ಡೇರೆ)

यक-ज़बां, वि. ಒಂದೇ ಮಾತನ್ನು ಹೇಳುವ; ಒಂದೇ ಅಭಿಪ್ರಾಯದ.

यक-ज़बानी, स्त्री. ಒಂದೇ ಅಭಿಪ್ರಾಯ

यक-जा, क्रिवि. ಒಂದೇ ಸ್ಥಳದಲ್ಲಿ ಸೇರಿದ, ಕೂಡಿದ, ಏಕತ್ರಿತ.

यक-ज़ात, वि. ಒಂದೇ ಜಾತಿಯ, ಸಜಾತೀಯ.

यक-जान, वि. ಒಂದೇ ಪ್ರಾಣವುಳ್ಳ; ಪ್ರಾಣಸ್ನೇಹಿತ.

यकता, वि. ಅದ್ವಿತೀಯ, ಅನ್ಯಾದೃಶ.

यकताई, स्त्री. ಅದ್ವಿತೀಯತೆ; ಏಕತೆ.

यक-दिल, वि. ಒಂದೇ ಮನಸ್ಸಿನ; ಒಮ್ಮತದ.

यक-दिली, स्त्री. ಒಮ್ಮತ, ಒಮ್ಮನಸ್ಸು, ಐಕ್ಯ.

यकबयक, यकबारगी, यकायक, क्रिवि. ಅಕಸ್ಮಾತ್ತಾಗಿ, ತಟಕ್ಕನೆ, ಏಕಾಏಕಿ.

यक-मुश्त, क्रिवि. ಒಂದೇ ಸಾರಿ, ಒಮ್ಮೆಲೆ, ಒಟ್ಟಾಗಿ.

यक-रंग, वि. ಒಂದೇ ಬಣ್ಣದ; ಒಂದೇ ತರಹದ; ನಿಷ್ಕಪಟ.

यक-रंगी, स्त्री. ಒಂದೇ ಸ್ವಭಾವ.

यक-लख़्त, वि. = यक-क़लम.

यक-शंबा, पु. ಭಾನುವಾರ, ಆದಿತ್ಯವಾರ.

यक-सर, वि. ಸಮಸ್ತ, ಇಡೀ.

यकसां, वि. ಒಂದೇ ಸಮಾನದ, ಸಮಾನವಾದ; ಸಮ.

यकसानियत, स्त्री. ಏಕರೂಪತೆ, ಸಮಾನತೆ; ಸಾದೃಶ್ಯ.

यक-सू, वि. ನಿಗದಿಯಾದ, ನಿಯತ.
यक़ीन, पु. ನಂಬಿಕೆ, ಭರವಸೆ, ನೆಚ್ಚಿಕೆ; ಖಾತ್ರಿ, ದಿಟ.
यक़ीनन्, क्रिवि. ಖಾತ್ರಿಯಾಗಿ, ದಿಟವಾಗಿ.
यक़ीनी, वि. ನೆಚ್ಚಿಕೆಯ, ಖಾತ್ರಿಯ.
यक्का, वि.; पु. =एक्का.
यक्ष, पु. ಯಕ್ಷ.
यक्ष्मा, पु. ಕ್ಷಯರೋಗ.
यक्षी, स्त्री. ಯಕ್ಷಿಣಿ; ಯಕ್ಷಿಣಿ ವಿದ್ಯೆ, ಮಾಟ. पु. ಯಕ್ಷಿಣಿಗಾರ.
यख़, स्त्री. ಮಂಜುಗಡ್ಡೆ, ನೀರ್ಗಲ್ಲು
यख़नी, स्त्री. ಮಾಂಸದ ಪಳದ್ಯ.
यगान, वि. ಒಂದು; ಒಂಟಿ.
यगानगत, यगानगी, स्त्री. ಐಕ್ಯ; ಐಕಮತ್ಯ; ಬಾಂಧವ್ಯ.
यगाना, वि. ಆತ್ಮೀಯ, ಸ್ವಕೀಯ; ಸ್ವಜನ, ಬಂಧು; ಸೋದರ; ಅನುಪಮ; ಒಂಟಿ.
यग़मा, पु. ದರೋಡೆಗಾರ, ಡಕಾಯಿತ.
यजमान, पु. ಯಜ್ಞ ಮಾಡುವವ; ದಾನ ದಕ್ಷಿಣೆ ಕೊಡುವವ; ಗೃಹಸ್ಥ.
यज्ञोपवीत, पु. ಯಜ್ಞೋಪವೀತ, ಜನಿವಾರ.
यतीम, पु. ತಬ್ಬಲಿ, ಅನಾಥ.
यतीमख़ाना, पु. ಅನಾಥಾಲಯ.
यतीमी, स्त्री. ಅನಾಥನ.
यत्न, पु. ಯತ್ನ; ಉಪಾಯ.
यद, स्त्री. ಹಸ್ತ, ಕೈ; ಹಿಡಿ, ಕಾವು; ಸಹಾಯ, ಒತ್ತಾಸೆ; ರಕ್ಷಣೆ; ಪ್ರಯೋಜನ; ಬಲ, ಶಕ್ತಿ.
यदि, क्रिवि. ಒಂದು ವೇಳೆ, ಅದಲ್ಲಿ.
यदुराई, यदुराज, पु. ಶ್ರೀಕೃಷ್ಣ.
यद्यपि, क्रिवि. ಅದರೂ, ಆದಾಗ್ಯೂ.
यबूसत, स्त्री. ಒಣಕಲು, ಶುಷ್ಕತೆ.
यवन, पु. ಯೂನಾನ್ ದೇಶದವ, ಗ್ರೀಸ್ ದೇಶವಾಸಿ; ಮುಹಮ್ಮದೀಯ; ಯವನ; ಮ್ಲೇಚ್ಛ.
यवनिका, स्त्री. ಯವನಿಕೆ, ಪರದೆ.
यश, पु. ಯಶಸ್ಸು, ಖ್ಯಾತಿ; ಕೀರ್ತಿ.
यशब, यशम, पु. ತಾಯಿತಿಯಾಗಿಧರಿಸುವ ಒಂದು ಬಗೆ ಪಚ್ಚೆ ಕಲ್ಲಿನ ಬಿಲ್ಲೆ.
यह, सर्व. ಇವನು, ಇವಳು, ಇದು.
यहां, क्रिवि. ಇಲ್ಲಿ, ಬಳಿ. मेरे यहां =ನನ್ನಲ್ಲಿ, ನನ್ನಬಳಿ.
यहीं, क्रिवि. ಇಲ್ಲೇ, ಇಲ್ಲಿಯೇ.
यही, सर्व. ಇವನೇ, ಇವಳೇ, ಇದೇ.
यहूदी, पु. ಯಹೂದ್ಯರು.
यां, क्रिवि. =यहां.
या, क्रिवि. ಅಥವಾ, ಇಲ್ಲವೆ, ಯಾ. सर्व. ಇದು. अव्य. ಎಲೈ, ಹೇ! या खुदा, या रब =ಎಲೈ ಭಗವಂತನೆ !
याकूत, पु. ಕೆಂಪು, ಮಾಣಿಕ್ಯ.
याग, पु. ಯಾಗ, ಯಜ್ಞ.
याचक, वि. ಯಾಚಿಸುವವ; ಯಾಚಕ.
याचना, स्त्री. ಯಾಚನೆ; ಬೇಡಿಕೆ. सक्रि. ಯಾಚಿಸು, ಬೇಡು.
याचित, वि. ಯಾಚಿಸಿದ, ಯಾಚಿತವಾದ
यातना, स्त्री. ವೇದನೆ, ಯಾತನೆ.
याता, स्त्री. ಓರಗಿತ್ತಿ, ನೆಗೆಣ್ಣಿ.

यात्रा, स्त्री. ಯಾತ್ರೆ, ಪಯಣ.
यात्रावाल, पु. ಯಾತ್ರಿಕರಿಗೆ ದೇವರ ದರ್ಶನ ಮಾಡಿಸುವವ, ಪೂಜಾರಿ.
यात्री, पु. ಯಾತ್ರಿಕ, ಪ್ರಯಾಣಿಕ.
याद, स्त्री. ನೆನಪು, ಜ್ಞಾಪಕ, ಸ್ಮರಣೆ, ಸ್ಮೃತಿ, ನೆನವರಿಕೆ. याद करना = ಸ್ಮರಿಸು, ನೆನಪಿಕೊಳ್ಳು.
यादगार, स्त्री. ಸ್ಮೃತಿಚಿಹ್ನೆ, ಸ್ಮಾರಕ; ಯಾದಿ.
यादगारी, स्त्री. ಸ್ಮೃತಿಚಿಹ್ನೆ, ಸ್ಮಾರಕ.
याददाश्त, स्त्री. ಸ್ಮರಣಶಕ್ತಿ, ನೆನಪು; ಜ್ಞಾಪಕಕ್ಕಾಗಿ ಬರೆದಿಟ್ಟುಕೊಂಡದ್ದು, ಯಾದಾಸ್ತು, ಯಾದಿ; ನೆನವರಿಕೆ.
याद-फ़रामोश, पु. ಒಂದು ಆಟ.
यादावरी, स्त्री. ಜ್ಞಾಪಿಸಿಕೊಳ್ಳುವಿಕೆ.
यान, पु. ವಾಹನ, ಯಾನ.
यानी, याने, क्रिवि. ಅಂದರೆ, ಅರ್ಥಾತ್.
याफ़्त, स्त्री. ಪಡೆಯುವಿಕೆ, ಹೊಂದುವಿಕೆ; ಸಂಪಾದನೆ, ರುಸುಂ; ಲಂಚ.
याफ़्तनी, स्त्री. ಪಡೆಯಬೇಕಾದ್ದು; ಪಡೆಯತಕ್ಕದ್ದು.
याफ़्ता, वि. ಹೊಂದಿದ, ಪಡೆದ. सज़ा याफ़्ता=ದಂಡನೆಹೊಂದಿದವ तालीम याफ़्ता=ಶಿಕ್ಷಣ ಹೊಂದಿದವ, ಶಿಕ್ಷಿತ.
याबू, पु. ಕುದುರೆ ತಟ್ಟು, ಟಾಕಣ.
यार, पु. ಮಿತ್ರ, ಗೆಳೆಯ; ಪ್ರಿಯ, ಇನಿಯ; ಜಾರಪತಿ, ಮಿಂಡಗಾರ.
यारनी, स्त्री. ಸ್ನೇಹಿತೆ; ಪ್ರೇಮಿಕೆ.
यार-बाश, वि. ಸ್ನೇಹದ, ಸ್ನೇಹಭಾವದ; ವಿಲಾಸಿ, ಕಾಮುಕ.
यार-बाशी, स्त्री. ಸ್ನೇಹಭಾವ, ಮೈತ್ರಿ; ವಿಲಾಸ.
यारा, पु. ಬಲ; ಶಕ್ತಿ; ಸಾಹಸ.
याराई, स्त्री. ಶಕ್ತಿ; ಸಾಮರ್ಥ್ಯ.
याराना, पु. ಗೆಳೆತನ, ಸ್ನೇಹ; ಪ್ರೀತಿ; ಪ್ರೇಮ, ಪ್ರಣಯ; ಸ್ನೇಹಿತ, ಮಿತ್ರ. वि. ಸ್ನೇಹದ; ಸ್ನೇಹಭಾವದ, ಮಿತ್ರನಂತಹ. क्रिवि. ಮಿತ್ರನಂತೆ.
यारी, स्त्री. ಸ್ನೇಹ; ಪ್ರೀತಿ; ಅನುಚಿತ ಪ್ರೇಮ; ಸಹಾಯ.
यारीबाश, पु. ಕಾಮುಕ, ರಸಿಕ.
याल, स्त्री. ಕತ್ತು, ಕುತ್ತಿಗೆ; ಕುದುರೆ ಅಥವಾ ಸಿಂಹದ ಕುತ್ತಿಗೆಯ ಕೂದಲು, ಕೇಸರ, ಜೂಗು.
यावर, वि. ಸಹಾಯಕ, ಒತ್ತಾಸೆಗಾರ.
यावरी, स्त्री. ಸಹಾಯ, ಒತ್ತಾಸೆ.
यावा, पु. ಅಸಂಬದ್ಧ ಪ್ರಲಾಪ.
यास, स्त्री. ನಿರಾಶೆ, ಭಯ.
यासमन, पु. ಮಲ್ಲಿಗೆ; ಮಲ್ಲೆ.
युक्त, वि. ಸೇರಿದ; ಸಹಿತ; ತಕ್ಕ; ಯುಕ್ತ.
युक्ति, स्त्री. ಸೇರಿಕೆ; ಹೊಂದಾವಣೆ; ಉಪಾಯ, ಯುಕ್ತಿ.
युग, पु. ಯುಗ, ಕಾಲ; ಜೋಡಿ.
युद्ध, पु. ಯುದ್ಧ, ಕದನ; ಜಗಳ.
युद्धपोत, पु. ಯುದ್ಧ ಹಡಗು.
युवती, स्त्री. ಯುವತಿ, ತರುಣಿ.
युवक, युवा, पु. ಯುವಕ, ತರುಣ.
यूं, क्रिवि. = यों.
यूनान, पु. ಯವನ ದೇಶ.
यूनानी, वि. ಯೂನಾನ್ ದೇಶದ,

ಗ್ರೀಕ್ ದೇಶದ. स्त्री. ಯೂನಾನ್ ದೇಶದ ಭಾಷೆ; ಯೂನಾನಿ ವೈದ್ಯ ಶಾಸ್ತ್ರ.

यूरिश, स्त्री. ಆಕ್ರಮಣ, ದಾಳಿ.

ये, सर्व. ಇವರು, ಇವು.

यों, क्रिवि. ಹೀಗೆ, ಇಂತು. यों ही = ಹೀಗೆಯೇ, ಹಾಗೇನೆ, ಸುಮ್ಮನೆ.

योग, पु. ಸೇರುವಿಕೆ; ಸಂಯೋಗ; ಯೋಗ, ದೆಶೆ; ಯೋಗಾಭ್ಯಾಸ; ಕೂಡುವಿಕೆ; ಸಂಕಲನ; ಒಟ್ಟು, ಜುಮ್ಲ.

योगफल, पु. ಕೂಡಿದ ಒಟ್ಟು, ಜುಮ್ಲ.

योग्यता, स्त्री. ಯೋಗ್ಯತೆ, ಅರ್ಹತೆ, ಸಾಮರ್ಥ್ಯ.

योजक, वि. ಸೇರಿಸುವವ.

योजन, पु. ಸೇರುವಿಕೆ, ಸಂಯೋಗ.

योजना, स्त्री. ಸೇರಿಸುವಿಕೆ; ರಚನೆ; ಹೂಟ, ಹಂಚಿಕೆ; ಯೋಜನೆ.

योद्धा, पु. ಯೋಧ, ಭಟ, ಕಾದಾಳು.

यौम, पु. ದಿನ, ದಿವಸ.

यौमिया, वि. ದಿನವಹಿ, ದೈನಿಕ. पु. ದಿನಭತ್ಯ, ಪಡಿ.

यौवन, पु. ಯೌವನ, ಪ್ರಾಯ.

र

रंक, पु. ಅತ್ಯಾಸೆಯುವ; ಕೃಪಣ; ಬಡವ; ದರಿದ್ರ, ಭಿಕಾರಿ.

रंकु, पु. ಚಿಗರಿ, ಸಾರಗ.

रंग, पु. ತವರ, ಬಣ್ಣ, ವರ್ಣ, ರಂಗು; ಗುಣ, ಸ್ವಭಾವ; ಕಳೆ, ಕಾಂತಿ; ಗೆಲುವು, ಉಲ್ಲಾಸ; ಆನಂದ, ಮಜಾ; ಆಡುವ ಸ್ಥಳ, ನಾಟ್ಯರಂಗ; ಅನುರಾಗ; ಮುಖಭಾವ; ರೀತಿ, ಬಗೆ, ವಿಧ; ಸ್ಥಿತಿ. रंग डालना = ಬಣ್ಣ ಬೀರು. रंग मारना = ಗೆಲ್ಲು. रंग रलना = ಮಜಾಮಾಡು.

रंग-ढंग, पु. ಮಾದರಿ, ತರಹ; ವಿಧ, ಬಗೆ; ತೀರು, ಲಕ್ಷಣ; ತೋರಾಣಿಕೆ, ತೋರಿಕೆ, ವೇಷಭೂಷ.

रंगत, स्त्री. ಬಣ್ಣ, ವರ್ಣ, ರಂಗು; ರೂಪ, ಲಕ್ಷಣ; ಬಣ್ಣ ಕೊಡುವ ಬಟ್ಟೆ.

रंगतरा, पु. ದೊಡ್ಡ ಕಿತ್ತಳೆ ಹಣ್ಣು.

रंगना, सक्रि. ಬಣ್ಣ ಕೊಡು, ರಂಗಾಯಿಸು; ಬಣ್ಣ ಕಟ್ಟು; ಒಲಿಸಿಕೊಳ್ಳು. अक्रि. ಆಸಕ್ತನಾಗು, ಪ್ರೀತಿಸು.

रंगबरंग, रंगारंग, वि. ಬಣ್ಣಬಣ್ಣದ, ನಾನಾಬಣ್ಣದ, ಪರಿಪರಿ; ಚಿತ್ರವಿಚಿತ್ರ.

रंग-भंग, पु. ವಿಲಾಸ ಪ್ರಿಯತೆ; ಕಾಮುಕತೆ; ಉಲ್ಲಾಸ, ವಿನೋದ; ಕ್ರೀಡೆಯ ಮಧ್ಯೆ ವಿಘ್ನ.

रंग-भरिया, पु. ಬಣ್ಣ ಹಾಕುವವ; ಬಣ್ಣಗಾರ.

रंग-भूमि, रंग-शाला, स्त्री. ಆಟದ ಸ್ಥಳ, ಅಖಾಡಾ; ವಿನೋದದ ಸ್ಥಳ, ನಾಟ್ಯರಂಗ; ನಾಟಕಶಾಲೆ, ರಂಗಶಾಲೆ

रंगमहल, पु. ವಿಲಾಸಭವನ.

रंगरलिया, रंगरली, स्त्री. रंगरस, पु. ವಿಲಾಸ, ಕ್ರೀಡೆ; ಮಜಾ.

रंग-रस, पु. ವಿಲಾಸ, ವಿಲಾಸಕೇಳಿ.

रंगरसिया, वि. ವಿಲಾಸಿ, ರಸಿಕ.

रंगरूट, पु. ಹೊಸದಾಗಿ ಸೈನ್ಯಕ್ಕೆ ಸೇರಿದ ಸಿಪಾಯಿ; ರಿಕ್ರೂಟ್; ಹೊಸಬ, ಕಲಿಕೆಯವ.

रंग-रूप, पु. ಬಣ್ಣ; ರೂಪ, ಸ್ವರೂಪ; ಸ್ವಭಾವ, ಗುಣ.

रंगरेज़, पु. ರಂಗಾರೆಯುವ, ಬಣ್ಣಗಾರ.

रंगरेज़िन, स्त्री. ರಂಗಾರೆಯುವಳು.

रंगवाई, स्त्री. ಬಣ್ಣ ಕೊಡುವಿಕೆ; ಬಣ್ಣ ಕೊಡುವ ಕೂಲಿ.

रंगवाना, सक्रि. ಬಣ್ಣ ಹಾಕಿಸು.

रंगवैया, **रंगसाज़**, पु. ಬಣ್ಣ ಹಾಕುವವ; ರಂಗಾರೆಯುವ, ಬಣ್ಣಗಾರ; ನೀಲಿಗಾರ.

रंगाई, स्त्री. ಬಣ್ಣ ಹಾಕುವಿಕೆ; ಬಣ್ಣದ ಕೆಲಸ; ಬಣ್ಣ ಹಾಕಲು ಕೊಡುವ ಕೂಲಿ

रंगाना, सक्रि. ಬಣ್ಣ ಹಾಕಿಸು; ನಾಚಿಕೆಯಿಂದ ಬಣ್ಣವೇರುವಂತೆ ಮಾಡು.

रंगारा, पु. ರಂಗಾರೆಯುವ, ಬಣ್ಣಗಾರ.

रंगावट, स्त्री. ಬಣ್ಣ ಹಾಕುವಿಕೆ.

रंगी, वि. ಉಲ್ಲಾಸಿ; ಮೋಜಿನವ; ಆಸಕ್ತ; ಬಣ್ಣ ಕೊಡುವವ. स्त्री. ಬಣ್ಣದ ವಸ್ತ್ರ.

रंगीत, पु. ಒಂದು ಬಗೆ ಗಿಡಗ.

रंगीन, पु. ಬಣ್ಣ ಹಾಕಿದ, ಬಣ್ಣದ; ವಿವಿಧ ಬಣ್ಣದ; ಲಕ್ಷಣವಾದ; ಉಲ್ಲಾಸಿ; ವಿಲಾಸಪ್ರಿಯ, ವಿಲಾಸಿ.

रंगीनी, स्त्री. ಬಣ್ಣ ಉಳ್ಳದ್ದಾಗಿರುವಿಕೆ; ಠೀವಿ, ಸೊಬಗು; ವೈವಿಧ್ಯ.

रंगीला, वि. ಹೊಳೆಯುವ; ಉಲ್ಲಾಸಗಾರ; ವಿಲಾಸಿ; ಕಾಮುಕ; ಷೋಕಿನವ; ರಸಿಕ; ಅನುರಕ್ತ.

रंज, पु. ಶೋಕ; ದುಗುಡ, ವ್ಯಸನ; ವಿಷಾದ, ವ್ಯಥೆ; ಸಂಕಟ; ಕಷ್ಟ.

रंजक, पु. ತುಪಾಕಿಯ ಕಿವಿಯಲ್ಲಿ ಹಾಕುವ ಮದ್ದು, ತುಪಾಕಿ ಹತ್ತಿಸಲು ಉಪಯೋಗಿಸುವ ಮದ್ದು, ರಂಜಕದ ಮದ್ದು; ರಂಜಕದ ಬತ್ತಿ. रंजक चाट जाना = ತುಪಾಕಿಯ ಗುಂಡು ಹಾರದೆ ರಂಜಕದ ಮದ್ದು ಮಾತ್ರ ಉರಿದುಹೋಗು; ಪ್ರಯತ್ನ ಮಾಡಿಯೂ ಕೆಲಸ ಕೈಗೂಡದೆ ಹೋಗು.

रंजक-कश, वि. ಶೋಕವನ್ನು ಸಹಿಸುವವ.

रंजक-कशी, स्त्री. ಶೋಕವನ್ನು ಸಹಿಸುವಿಕೆ.

रंजकदान, पु. ತುಪಾಕಿಯಲ್ಲಿ ರಂಜಕದ ಮದ್ದಿಡುವ ಬಟ್ಟಲು, ರಂಜಕ, ತುಪಾಕಿಯ ಕಿವಿ.

रंजन, पु. ಬಣ್ಣ ಕೊಡುವಿಕೆ; ಬಣ್ಣ ಕೊಡುವವ; ಪ್ರೇಮ ಅಥವಾ ಕಾಮವನ್ನು ಕೆರಳಿಸುವ; ಕಾಮೋದ್ದೀಪಕ; ವಿನೋದಗೊಳಿಸುವವ; ಶ್ರೀಗಂಧ.

रंजनी, स्त्री. ಕಾಮೋದ್ದೀಪನ ಮಾಡುವವಳು, ಕಾಮಿನಿ.

रंजित, वि. ಬಣ್ಣ ಕೊಟ್ಟ; ಮನಸ್ಸು ಕರಗಿದ; ಮನವೊಲಿದ, ಸುಪ್ರಸನ್ನ.

रंजिश, स्त्री. ವಿಷಾದ, ವ್ಯಾಕುಲತೆ; ವ್ಯಸನ; ಮನಸ್ತಾಪ, ವೈಮನಸ್ಯ; ಸಿಟ್ಟು, ಅಸಮಾಧಾನ.

रंजीदगी, स्त्री. ಶೋಕ, ವ್ಯಥೆ; ತೊಂದರೆ, ಸಂಕಟ; ಸಿಟ್ಟು; ಕಾಟ

रंजीदा, वि. ವ್ಯಸನಪಡುವ; ದುಃಖಾಕ್ರಾಂತ, ಶೋಕಾರ್ತ; ಸಿಟ್ಟಾದ, ಕುಪಿತ.

रंजूर, वि. ಶೋಕಿತ; ವ್ಯಥಿತ; ದುಃಖಿತ; ಅಸ್ವಸ್ಥ; ಬಲಹೀನ.

रंजूरी, स्त्री. ಕಷ್ಟ; ರೋಗ, ಅಸ್ವಸ್ಥತೆ

रंझना, अक्रि. ಉದಯವಾಗು, ವಿಕಸಿಸು, ಊರ್ಜಿತವಾಗು, ಬೇರೂರು; (ಕಾಯಿಲೆ) ದೀರ್ಘಕಾಲದ್ದಾಗು.

रंडसाला, पु. ವಿಧವೆಯ ವಸ್ತ್ರ.

रंडा, स्त्री. ವಿಧವೆ, ರಂಡೆ, ವಿತಂತು; ಸೂಳೆಬೊಟ್ಟು ಗಿಡ.

रंडापा, पु. ವೈಧವ್ಯ, ರಂಡೆತನ.

रंडिया, स्त्री. ವಿಧವೆ, ರಂಡೆ; ನೀಚ ಸ್ತ್ರೀ

रंडी, स्त्री. ವೇಶ್ಯೆ, ಸೂಳೆ. रंडी मुंडी =ಸೂಳೆ, ಗುಡಸೆಟ್ಟಿ.

रंडीबाज़, वि. ವೇಶ್ಯಾಗಾಮಿ, ಸೂಳೆಗಾರ.

रंडीबाज़ी, स्त्री. ಸೂಳೆಗಾರಿಕೆ, ವೇಶ್ಯಾಗಮನ.

रंडुआ, वि. ಹೆಂಡತಿ ಸತ್ತವ, ವಿಧುರ.

रंद, पु. ರಂಧ್ರ, ತೂತು; ಗವಾಕ್ಷಿ, ಬೆಳಕಂಡಿ; ಕಿಂಡಿ, ಜೇರುಗಂಡಿ.

रंदना, सक्रि. ಹತ್ತರಿ ಹೊಡೆ, ಹೆರೆ.

रंदा, पु. ಉಜ್ಜುಗೊರಡು; ಹತ್ತರಿ, ತೋಪಡೆ, ಕೀಸುಳಿ.

रंधन, पु. ಬೇಯಿಸುವಿಕೆ, ಅಡಿಗೆ.

रंधना, अक्रि. ಬೇಯು. सक्रि. ಅಡು, ಬೇಯಿಸು.

रंधनैया, पु. ಅಡಿಗೆಯವ.

रंबा, पु. ಜಿಂಕೆ.

रंभा, पु. ಗುದ್ದಲಿ, ಸಲಿಕೆ. स्त्री. ರಂಭೆ; ಅಪ್ಸರಸ್ತ್ರೀ; ಸೂಳೆ; ಆನಂದ; ಬಾಳೆ.

रंभति, स्त्री. ಮೊರೆ, ದೂರು.

रंभाना, अक्रि. =बंबाना.

रंहट, पु. ರಾಟೆ, ರಾಟ್ನ.

रअय्यत, स्त्री. ಪ್ರಜೆ; ರೈತ, ಕೃಷಿಕ.

रई, स्त्री. ಕಡೆಗೋಲು, ಮಂತು; ರವೆ, ನುಚ್ಚು; ಚೂರ್ಣ.

रईस, पु. ಜಹಗೀರುದಾರ; ಶ್ರೀಮಂತ; ಮುಖಂಡ, ನಾಯಕ.

रक, स्त्री. ಪಂಕ್ತಿ; ಕೋಷ.

रकछ, पु. ಸೊಪ್ಪಿನ ಪಕೋಡ.

रक़बा, पु. ಬೇಲಿ, ಆವರಣ; ಗ್ರಾಮಕ್ಕೆ ಸೇರಿದ ಪ್ರದೇಶ; ಸುತ್ತುಮುತ್ತಲಿನ ಪ್ರದೇಶ, ಬಯಲು; ವಿಸ್ತೀರ್ಣ, ಸಲೆ, ಕ್ಷೇತ್ರಫಲ.

रक़म, स्त्री. ಬರಹ, ಅಕ್ಷರ; ಮುದ್ರೆ, ಠಸ್ಸೆ; ಸಂಖ್ಯೆ, ಅಂಕ; ಧನ, ಹಣ; ಮೊಬಲಗು; ಬಾಬತು; ಬಾಬು; ಬಗೆ, ರಖಮು, ತರಹ; ಒಡವೆ, ದಾಗೀನು, ನಗ; ಧೂರ್ತ, ದುರುಳ.

रक़मवार, क्रिवि. ವಿವರವಾಗಿ.

रक़मी, वि. ಬರೆದ, ಲಿಖಿತ; ದಾಖಲೆಯಾದ.

रकात, स्त्री. ನಮಾಜು ಮಾಡುವಾಗ ತಲೆ ಬಾಗಿಸುವಿಕೆ.

रकाब, स्त्री. ಕುದುರೆ ಸವಾರನು

ಕಾಲಿಟ್ಟು ಕೊಳ್ಳುವ ಬಳೆ, ಅಂಗವಡಿ, ಆಕೋಲೆ, ರಿಕಾಬು.

रकाबदार, पु ಮಿಠಾಯಿ ಮಾರುವವ, ಹಲವಾಯಿ; ಅಡಿಗೆಯವ, ಕುಶನಿಗಾರ, "ಬಟ್ಲರ್"; ಕುದುರೆಯವ, ಕಾಸದಾರ, ಸಾಹಣಿ.

रकाबा, पु. ದೊಡ್ಡ ತಟ್ಟೆ, ತಾಂಬಾಣ.

रकाबी, स्त्री. ತಟ್ಟೆ, ಪರಾತ, ತಬಕ.

रकीक, वि. ನಿರ್ಬಲ, ಅಶಕ್ತ.

रक़ीक़, वि. ತೆಳುವಾದ, ಅಳ್ಳಕ; ನಯವಾದ, ಮೃದು; ನಮ್ರ. पु. ಕಾಯುವವ; ರಕ್ಷಕ; ಪೋಟಿಯವ, ಪ್ರತಿಸ್ಪರ್ಧಿ; ಹೆಂಚು.

रक़ीब, पु. ತನ್ನ ಪ್ರಿಯಳ ಮತ್ತೊಬ್ಬ ಪ್ರೇಮಿ, ಸಪತ್ನ; ಪ್ರತಿಸ್ಪರ್ಧಿ.

रक़ीमा, पु. ಕಾಗದ, ಪತ್ರ.

रकूब, पु. ವಾಹನ.

रक्स, पु. ಉತ್ತರ, ಜವಾಬು.

रक्कास, पु. ನಾಟ್ಯಗಾರ.

रक्त, पु. ರಕ್ತ, ನೆತ್ತರು; ಕೆಂಪು ಬಣ್ಣ.

रक्तता, स्त्री. ರಕ್ತವರ್ಣ, ರಕ್ತತೆ.

रक्षक, वि. ಕಾಯುವವ, ಕಾಪಾಡುವವ, ರಕ್ಷಕ.

रक्षा, स्त्री. ಕಾಪಾಡುವಿಕೆ; ಕಾಯುವಿಕೆ; ರಕ್ಷಣೆ; ಸಹಾಯ; ಆಶ್ರಯ; ರಕ್ಷೆ; ತಾಯಿತ; ಬೂದಿ.

रक्षा बंधन, पु. ರಕ್ಷೆ ಕಟ್ಟುವಿಕೆ, ಕಾಪು; ಜನಿವಾರದ ಹಬ್ಬ, ಉಪಾಕರ್ಮ, ಶ್ರಾವಣಿ.

रक़्स, पु. ನಾಟ್ಯ, ಕುಣಿತ.

रखना, सक्रि. ಇಡು, ಇಕ್ಕು; ಇರಿಸು, ಮಡಗು; ಹಾಕು; ಕಾಯು, ಕಾಪಾಡು; ಉಳಿಸಿಡು; ಇಟ್ಟುಕೊಳ್ಳು.

रख़ना, पु. ತೂತು, ರಂಧ್ರ; ಕಿಂಡಿ; ಬಿರುಕು; ತಡೆ.

रख़नादार, वि. ಬಿರುಕು ಬಿಟ್ಟ; ಮುರಿದ

रखनी, स्त्री. = **रखेली**.

रख़म, पु. ಬಿಳಿಯ ಹದ್ದು; ಬಕಪಕ್ಷಿ.

रख-रखाव, पु. ಕಾಪಾಡುವಿಕೆ, ರಕ್ಷಣೆ

रखवाई, स्त्री. ಇಡುವಿಕೆ, ಇರಿಸುವಿಕೆ; ಕಾಯುವಿಕೆ; ಕಾವಲು; ಕಾಯುವುದರ ಕೂಲಿ, ಕಾವಲುಗಾರನ ಕೂಲಿ.

रखवाना, सक्रि. रखना का प्रे. रूप.

रखवार, **रखवाला**, पु. ಕಾಪಾಡುವವ, ರಕ್ಷಕ; ಕಾಯುವವ, ಕಾವಲುಗಾರ.

रखवाली, स्त्री. ಕಾಪಾಡುವಿಕೆ, ರಕ್ಷಣೆ; ಆರೈಕೆ; ಕಾಯುವಿಕೆ, ಕಾವಲು, ಪಹರೆ

रखवैया, पु. = **रखैया**.

रखाई, स्त्री. = **रखवाई**.

रखाना, सक्रि. ಇಡಿಸು, ಇಕ್ಕಿಸು; ಹಾಕಿಸು, ಮಡಗಿಸು; ಒಪ್ಪಿಸು. अक्रि. ಕಾಯು, ಕಾವಲಿರು.

रखिया, पु. ಕಾಪಾಡುವವ, ಸಂರಕ್ಷಕ.

रखी, स्त्री. ಹುಲ್ಲಿನ ಮೆದೆ, ಬಣವೆ.

रखेल, स्त्री. ಆಕ್ರಮಣ, ದಾಳಿ.

रखेली, स्त्री. ಇಟ್ಟುಕೊಂಡವಳು, ಉಪಪತ್ನಿ; ರಖಾವುದಾರಳು.

रखैया, पु. ಕಾಪಾಡುವವ, ರಕ್ಷಕ.

रख़्त, पु. ಸಾಮಾನು; ಮಾಲು, ಸರಕು; ಬಟ್ಟೆ ಬರೆ; ಆಸ್ತಿಪಾಸ್ತಿ. रख़्त बांधना

= ಸಾಮಾನುಗಳನ್ನು ಕಟ್ಟು; ಹೊರಡು.

रख़्न, पु. ವಿಘ್ನ, ಅಡಚಣೆ.

रख़्श, पु. ಬೆಳಕು, ಪ್ರಕಾಶ; ಹೊಳಪು, ಕಾಂತಿ; ಕುದುರೆ.

रख़्शंदगी, स्त्री. ಹೊಳಪು, ಕಾಂತಿ.

रख़्शंदा, **रख़्शां**, वि. ಹೊಳೆವ, ಕಾಂತಿಯುಕ್ತ; ಮಿಂಚುವ.

रग, स्त्री. ರಕ್ತನಾಳ, ಸಿರೆ; ನಾಡಿ; ನಾರು.

रग-ज़न, पु. ಸಿರೆಯನ್ನು ಸೀಳಿ ರಕ್ತ ತೆಗೆಯುವವ, ಶಸ್ತ್ರವೈದ್ಯ.

रगड़, स्त्री. ಉಜ್ಜುವಿಕೆ, ತಿಕ್ಕುವಿಕೆ; ತಿಕ್ಕಾಟ, ಸಂಘರ್ಷಣ; ಉಜ್ಜಿದ ಗುರುತು, ಕಲೆ; ಸವೆದುಹೋಗುವಿಕೆ.

रगड़ना, सक्रि. ಉಜ್ಜು, ತಿಕ್ಕು; ಒರೆಸು; ಮಸೆ, ತೀಡು; ತೇಯು, ಅರೆ. अक्रि. ಸವೆಯು; ದುಡಿ.

रगड़वाना, सक्रि. रगड़ना का प्रे. रूप.

रगड़ा, पु. ಉಜ್ಜುವಿಕೆ, ತಿಕ್ಕುವಿಕೆ; ತಿಕ್ಕಾಟ, ಘರ್ಷಣ; ದುಡಿಯುವಿಕೆ, ಪರಿಶ್ರಮ; ಹೆಣಗಾಟ, ರಗಳೆ; ಜಗಳ; ಕುಡಿಕಪ್ಪು, ಕಾಡಿಗೆ.

रगड़ी, वि. ರಗಳೆಯುವ.

रगना, अक्रि. ಅನುರಕ್ತನಾಗು, ಪ್ರೀತಿಸು

रग-पट्ठा, पु. ದೇಹದ ಅಂಗಾಂಗಗಳು.

रग़बत, स्त्री. ಆಶೆ; ಇಚ್ಛೆ; ಬಯಕೆ; ಪ್ರೀತಿ.

रगरेशा, पु. ಎಲೆಯ ನಾಡಿ, ಪತ್ರನಾಡಿಕೆ; ಶರೀರದ ಅಂಗಾಂಗಗಳು; ಒಳಗಿನ ಮರ್ಮಗಳು; ಸ್ವಭಾವ; ಗುಣ.

रगाना, अक्रि. ಮೌನವಾಗಿರು, ಸುಮ್ಮನಿರು. सक्रि. ಸುಮ್ಮನಾಗಿಸು.

रगेद, पु. ಅಟ್ಟುವಿಕೆ, ತರುಬುವಿಕೆ.

रगेदना, सक्रि. ಅಟ್ಟು, ತರುಬು.

रच, पु. ರಚನೆ; ರೂಪು; ಕೈಮಾಟ.

रचक, पु. ರಚಿಸುವವ; ಸೃಷ್ಟಿಕರ್ತ; ರಚಯಿತ.

रचना, स्त्री. ರಚನೆ, ಕೃತಿ; ನಿರ್ಮಾಣ, ತಯಾರಿ. सक्रि. ರಚಿಸು, ನಿರ್ಮಿಸು; ಬರೆ; ಸೃಷ್ಟಿಸು, ಕಲ್ಪಿಸು; ತಯಾರಿಸು; ಸಜ್ಜುಗೊಳಿಸು; ಅಣಿಮಾಡು; ರೂಢಿಸು. अक्रि. ಬಣ್ಣವೇರು; ಗೋರಂಟಿ ಅಥವಾ ಅರಗಿನ ಬಣ್ಣ ಹತ್ತು; ಅನುರಾಗ ಹುಟ್ಟು; ರಚಿಸಲ್ಪಡು, ರಚಿತವಾಗು; ರೂಢಿಯಾಗು; ಪರಿಮಳ ಕೊಡಲ್ಪಡು.

रचवाना, सक्रि. "रचना" का प्रे. रूप.

रचाना, सक्रि. ರಚನೆ ಮಾಡಿಸು; ತಯಾರು ಮಾಡಿಸು; ನಡೆಯಿಸು; ಅಲಂಕರಿಸು; ಬಣ್ಣಹಚ್ಚಿಸು; ಮದರಂಗಿ ಹಚ್ಚಿಸು; ಆನಂದಿಸು, ಮಜಾಮಾಡು.

रचावट, स्त्री. ತಯಾರಿ, ರಚನೆ.

रचित, वि. ಮಾಡಲ್ಪಟ್ಟ, ರಚಿತವಾದ.

रज, पु. ಧೂಳು, ದುಂಬು; ಮಳಲು; ಪುಷ್ಪರಾಗ; ರಜೋಧರ್ಮ, ಮುಟ್ಟು; ಕಾಮ.

रज़, स्त्री. ದ್ರಾಕ್ಷಿ; ದ್ರಾಕ್ಷಿಯ ತೋಟ; ಯುದ್ಧ.

रजत, वि. ಬಿಳಿಯ, ಶ್ವೇತ. पु. ಬೆಳ್ಳಿ.

रजना, स्त्री. ರಾಳ, ಗುಗ್ಗುಲ. सक्रि. ಬಣ್ಣ ಕಟ್ಟು, ಬಣ್ಣ ಹಾಕು. अक्रि. ಬಣ್ಣವೇರು; ಹೊಳೆ; ತೃಪ್ತನಾಗು, ತಣಿ

रजनी, स्त्री. ರಾತ್ರಿ, ಇರುಳು; ಅರಿಸಿನ; ನೀಲಿಗಿಡ; ಅರಗು.

रजपूत, पु. ರಾಜಪುತ್ರನು, ಕ್ಷತ್ರಿಯು.

रजपूती, स्त्री. ಕ್ಷತ್ರಿಯತನ, ಕ್ಷಾತ್ರ; ಶೌರ್ಯ.

रजबहा, पु. ದೊಡ್ಡ ನಾಲೆ; ಹೆಗ್ಗಾಲುವೆ.

रजवाड़ा, पु. ರಾಜನ ನಾಡು; ದೇಶೀಯ ಸಂಸ್ಥಾನ.

लपेटन, स्त्री. ಮಡಿಸುವಿಕೆ; ಮಡಿಕೆ; ಸುತ್ತು; ಸುಳಿಕೆ; ಸಿಕ್ಕು, ತೊಡಕು. पु. ಸುತ್ತುವ ವಸ್ತು; ನೆಯ್ದ ಬಟ್ಟೆ ಸುತ್ತುವ ಮಗ್ಗದ ಉರುಳೆ, ಕುಂಟೆ; ಸುತ್ತಿ ಕಟ್ಟುವ ಬಟ್ಟೆ, ಕಟ್ಟುವಾಸ; ಗುಂಡಿ, ಗುಬುಟು; ಕಾಲಿಗೆ ಸಿಕ್ಕಿಕೊಳ್ಳುವ ವಸ್ತು, ತೊಡಕು.

लपेटना, सक्रि. ಸುತ್ತು, ಗುಂಡಾಳಿಸು; ಮಡಿಸು, ಮುದುರು; ಗಂಟು ಕಟ್ಟು; ಸುರುಳಿ ಸುತ್ತು; ಹಿಡಿದುಕೊಳ್ಳು, ತೊಡರು; ಸಿಕ್ಕಿಬೀಳಿಸು.

लपेटवाँ, वि. ಸುತ್ತಿದ; ಮಡಿಸಿದ; (ಚಿನ್ನದ ರೇಕು) ಮಡಾಯಿಸಿದ; ಮುಚ್ಚಿದ; ಗೂಢ.

लपोड़ा, पु. ಮುಖಸ್ತುತಿ ಮಾಡುವವ

लप्पड़, पु. ಕಪಾಲದೇಟು, ತಪರಾಕು.

लप्पा, पु. ಪಟ್ಟಿರೇಷ್ಮೆ, ಕಿನಕಾಬು.

लफग, लफंगा, पु ಲಂಪಟ, ದುರಾಚಾರಿ; ಪುಂಡ; ಜಂಭಗಾರ, ಬಡಾಯಿಖೋರ.

लफंगिया, पु. ಒಣ ಜಂಬ ಹೊಡೆಯುವವ, ಒಣಹೆಮ್ಮೆಗಾರ; ಲಂಪಟ, ಪುಂಡ

लफ़, पु. ಸುತ್ತುವಿಕೆ, ಮಡಿಸುವಿಕೆ; ಕಟ್ಟುವಿಕೆ, ಸೇರಿಸುವಿಕೆ; ಮಿಶ್ರಣ.

लफ़ना, अक्रि. ಬಳುಕು, ಬಾಗು; ನೆಗೆ, ಜಿಗಿ.

लफ़ीफ़, वि. ಮಡಿಸಿದ, ಸುತ್ತಿದ. स्त्री. ಗುಂಪು, ಸಂದಣಿ.

लफ़्ज़, पु. ಮಾತು, ಶಬ್ದ, ಸೊಲ್ಲು.

लफ़्ज़न्, क्रिवि. ಶಬ್ದಾರ್ಥದ ಪ್ರಕಾರ, ಅಕ್ಷರಶಃ; ಸ್ಪಷ್ಟವಾಗಿ, ಖಂಡಿತವಾಗಿ.

लफ़्ज़ी, वि. ಶಬ್ದ ಸಂಬಂಧವಾದ, ಶಬ್ದದ; ಶಾಬ್ದಿಕ. लफ़्ज़ी मानी = ಶಬ್ದಾರ್ಥ.

लफ़्फ़ाज़, वि. ಮಾತುಗಾರ; ವಾಚಾಲ.

लफ़्फ़ाज़ी, स्त्री. ವಾಚಾಲತೆ.

लब, पु. ತುಟಿ, ಅಧರ; ತುದಿ. ಅಂಚು; ಬದಿ, ತಟ, ತೀರ; ಶಿಖರ. लब बस्ता = ತುಟಿಗಳನ್ನು ಮುಚ್ಚಿದ; ಮೌನವಾದ. लब-ओ-लहजा = ಮಾತುಕತೆ, ಸಂಭಾಷಣೆ; ಧ್ವನಿ, ಸ್ವರ; ಉಚ್ಚಾರಣವಿಧ.

लबखू, पु. ತನ್ನ ತುಟಿಗಳನ್ನು ಕಚ್ಚುವವ; ಕೆಟ್ಟ ಸ್ವಭಾವದವ.

लबझना, अक्रि. ಸಿಕ್ಕಿಬೀಳು, ತೊಡಕಾಗು.

लबड़खंदा, पु. ತುಂಟ ಹುಡುಗ.

लबड़-धोंधों, स्त्री. ಕೂಗಾಡುವಿಕೆ, ಲಬೋ ಲಬೋ; ಗದ್ದಲ, ಗಡಿಬಿಡಿ; ಅವಾಂತರ; ಮೋಸ, ದಬಾದುಬಿ.

लबड़ना, अक्रि. ಸುಳ್ಳುಹೇಳು, ಬುರುಡೆ ಬಿಡು; ಹುಚ್ಚುಹುಚ್ಚಾಗಿ ಆಡು.

लबड़सबड़, पु. ಒಣ ಹರಟೆ, ಗಜರಗಳೆ

लबड़ा, लबरा, वि. ಸುಳ್ಳು ಹೇಳುವವ; ಸುಳ್ಳ, ಸುಳ್ಳುಗಾರ.

लबदा, स्त्री. ದೊರಕುವಿಕೆ, ಪ್ರಾಪ್ತಿ.

लबदार, वि. ಅಂಟಿನ, ಜಿಗಟಾದ.

लबना, पु. लबनी, स्त्री. ಹೆಂಡ

ಇಳಿಸುವ ಮಡಕೆ.

लबरघट्टा, वि. ಸಿಡುಮೋರೆಯ; ಸೆಡಕಿನ

लबरेज़, वि. ತುಂಬಿ ತುಳುಕುವ, ಸೂಸಿ ಹರಿಯುವ.

लबरेज़ी, स्त्री. ತುಂಬಿ ತುಳುಕುವಿಕೆ; ಆಧಿಕ್ಯ.

लबलबा, पु. ಹೊಟ್ಟೆಯಲ್ಲಿನ ಮೇದೋಜ್ಜೀರಕ ರಸಾಶಯ, ಸ್ವೇತರಸಾಶಯ. वि. ಅಂಟಿನ, ಜಿಗಟಾದ.

लबलोस, वि. ಚಿತ್ರಲೆಯಾದ; ನಾಚಿಕೆಗೆಟ್ಟ, ನಿರ್ಲಜ್ಜ. स्त्री. ಮುಖಸ್ತುತಿ.

लबाड़ना, सक्रि. ಲೂಟಿ ಮಾಡು, ಸುಲಿ; ಹಾಳು ಮಾಡು, ಕೆಡಿಸು.

लबाड़िया, वि. = लबाड़.

लबादा, पु ಸಡಿಲವಾದ ಅಂಗಿ, ದೊಗಲೆ; ಅಂಗರೇಖು; ಹೊದಿಕೆ; ಮಳೆಯಂಗಿ.

लबाड़, लबार, वि. ಸುಳ್ಳು ಹೇಳುವವ, ಸುಳ್ಳುಗಾರ; ಬುರುಡೆ ಬಿಡುವವ; ಠಕ್ಕ.

लबारी, स्त्री. ಸುಳ್ಳು ಮಾತು, ಬುರುಡೆ. वि. ಸುಳ್ಳಾದ; ಚಾಡಿಖೋರ.

लबालब, वि. ತುಂಬಿತುಳುಕುವ, ಸೂಸುವ, ಸೂಸುವಷ್ಟು. क्रिवि. ತುಂಬಿ ತುಳುಕುವಷ್ಟು.

लबी, पु. ಕಾಯಿಸಿದ ಕಬ್ಬಿನ ರಸ.

लबेदा, पु लबेदी स्त्री ದೊಣ್ಣೆ. ಕೋಲು

लब्ध, वि. ಹೊಂದಿದ, ಪಡೆದ, ಪ್ರಾಪ್ತ.

लब्धप्रतिष्ठ, वि. ಗೌರವಸ್ಥ, ಮಾನ್ಯ.

लब्धि, स्त्री. ಪಡೆಯುವಿಕೆ, ಪ್ರಾಪ್ತಿ.

लभेरा, पु. = लिसोड़ा.

लभ्य, वि. ಸಿಗುವ, ದೊರೆವ, ಪ್ರಾಪ್ಯ; ದೊರೆಯತಕ್ಕ, ಪ್ರಾಪ್ಯವಾಗತಕ್ಕ.

लमकना, अक्रि. ಬೇಗನೆ ನಡೆ, ಧಾವಿಸು. पु. ಇಲಿ; ಮೊಲ.

लमकाना, सक्रि. ಕೈಯೊಡ್ಡು, ನೀಡು.

लमछड़, वि. ಉದ್ದವಾದ. पु. ಉದ್ದವಾದ ಕೋಲು; ಉದ್ದನೆಯ ತುಪಾಕಿ.

लमछड़ा, वि. ಉದ್ದವಾದ, ನೀಳ.

लमटंगा, वि. ಉದ್ದವಾದ ಕಾಲುಗಳುಳ್ಳ; ಉದ್ದನೆಯ ಕಾಲಿನವ, ನಿಡುಗಾಲಿನವ.

लमडोर, स्त्री. ಉದ್ದವಾದ ದಾರ; ಮೀನು ಹಿಡಿಯುವ ಗಾಳದ ದಾರ; ಉದ್ದವಾದ ರೆಕ್ಕೆಯ ಒಂದು ಪಕ್ಷಿ.

लमतडंग, वि. ಬಹು ಉದ್ದವಾದ, ಬಹಳ ಎತ್ತರವಾದ. पु. ಮರಗಾಲು, ಊರುಗೋಲು; ಕೊಕ್ಕರೆ.

लमतड़ंगा, वि. ಎತ್ತರವಾದ, ಆಜಾನುಬಾಹು; ಗಟ್ಟಿಮುಟ್ಟಾದವ, ಮೋಟಾಗಿ ಬೆಳೆದವ.

लमधी, पु. ಸಂಬಂಧಿಕನ ತಂದೆ, ಬೀಗನ ತಂದೆ.

लमधेक, वि. = लंब.

लमहा, पु. ಕ್ಷಣ; ನಿಮಿಷ; ಮೊಲ.

लमाना, अक्रि. ದೂರವಾಗು. सक्रि. ದೂರಮಾಡು, ನೀಗಿಸು.

लय, पु. ಸ್ವರ; ಸ್ವರಮೇಳ, ಲಯ; ಮುಳುಗುವಿಕೆ.

लयारी, पु. ತೋಳ, ವೃಕ.

लर, पु. ಅಳತೆಯ ಕೋಲು; ಎಳೆ; ಲಡಿ.

लरज़ना, अक्रि. ನಡುಗು, ಕಂಪಿಸು.

लरज़ा, पु. ನಡುಕ, ತತ್ತರ; ಅದುರು ಬೆದರು; ಕಂಪನೆ; ಕಂಪಜ್ವರ; ಭೂಕಂಪ.

लरज़ाँ, वि. ನಡುಗುವ, ಕಂಪಿಸುವ.

लरज़ाना, सक्रि. ನಡುಗಿಸು, ತತ್ತರ ಗುಟ್ಟಿಸು.

लरज़िश, स्त्री. ನಡುಗಾಟ, ಕಂಪನೆ.

लर्च्छा, पु. ದಾರದ ಕಂಡು, ಕಂಡಿಕೆ.

ललक, स्त्री. ಉಕ್ಕು; ಉತ್ಸಾಹ, ಲವ ಲವಿಕೆ, ಹುಮ್ಮಸ್ಸು; ಬಯಕೆ, ಹಂಬಲ, ಗೀಳು.

ललकना, सक्रि. ಬಯಸು, ಹಂಬಲಿಸು, ಲವಲವಿಸು, ಹಾತೊರೆ; ಎರಗು, ಮೇಲ್ಬಾಯು.

ललकाना, सक्रि. ಹಂಬಲ ಹುಟ್ಟಿಸು; ಜಗಳ ಹುಟ್ಟಿಸು; ಛೂಬಿಡು.

ललकार, स्त्री. ಜಗಳಕ್ಕೆ ಕರೆಯುವಿಕೆ, ಆಹವ, ಆಕರಣೆ, ಕೋಹಾಟ; ಹುಂಕಾರ, ಕೂಗಾಟ

ललकारना, सक्रि. ಯುದ್ಧಕ್ಕೆ ಕರೆ, ಜಗಳಕ್ಕೆ ಕೂಗು; ಬಾಹು ಅಪ್ಫಳಿಸು; ಸೂಳುಗರೆ, ಕೂಗಾಡು.

ललचना, अक्रि. ಆಸೆಪಡು; ಮೋಹ ಗೊಳ್ಳು; ಹಾತೊರೆ.

ललचाना, सक्रि. ಆಶೆಗೊಳಿಸು, ಹಂಬಲ ಹುಟ್ಟಿಸು; ಮೋಹಗೊಳಿಸು, ಮರುಳು ಮಾಡು; ಆಶೆ ತೋರಿಸು. अक्रि. ಆಸೆ ಪಡು; ಮೋಹಗೊಳ್ಳು; ಹಾತೊರೆ.

ललचौहाँ, वि. ಆಸೆಪಡುವ, ಮೋಹ ಗೊಂಡ.

ललन, पु. ಆಟ, ಕ್ರೀಡೆ; ಸಂತೋಷ, ವಿನೋದ; ಹುಡುಗ, ಬಾಲಕ.

ललना, स्त्री. ತರುಣಿ, ನಾರಿ; ಪತ್ನಿ.

ललवा, पु. ಬಾಲಕ, ಹುಡುಗ.

लला, पु. ಮುದ್ದುಮಗ; ಪ್ರಿಯ.

ललाइन, स्त्री. ಕಾಯಸ್ಥ ಜಾತಿಯ ಹೆಂಗಸರ ಪಟ್ಟದ ಹೆಸರು, 'ಬಾಯಿ', ಅಮ್ಮ

ललाई, स्त्री. ಕೆಂಬಣ್ಣ, ಕೆಂಪು.

ललाट, पु. ಹಣೆ, ಲಲಾಟ; ಹಣೆಬರಹ, ವಿಧಿ.

ललाटिका, स्त्री. ಹಣೆ ಬೊಟ್ಟು.

ललाना, अक्रि. ಬಯಸು, ಹಾತೊರೆ.

ललाम, वि. ಕೆಂಪಾದ; ಸುಂದರವಾದ, ರಮಣೀಯ; ಶ್ರೇಷ್ಠವಾದ. पु. ಚಿಹ್ನೆ, ಗುರುತು; ರತ್ನ; ಆಭರಣ.

ललामी, स्त्री. ಕೆಂಪು ಬಣ್ಣ; ಕಿವಿಯ ಒಂದು ಆಭರಣ.

ललित, वि. ಸುಂದರವಾದ; ಮನೋಹರವಾದ.

ललितिया, स्त्री. ರಮಣೀಯತೆ, ಸೌಂದರ್ಯ; ಪ್ರೀತಿ, ಪ್ರೇಮ; ಲಾಲಿತ್ಯ.

ललियाना, सक्रि. ಬೇಡು, ಅಂಗಲಾಚು; ಬುಲ್ಲವಿಸು. अक्रि. ಕೆಂಪಾಗು; ಕೆಂಪೇರು.

ललौहाँ, वि. ಕೆಂಪು ಮಿಶ್ರವಾದ.

लल्ला, लल्लू, पु. ಮುದ್ದು ಮಗ; ಪ್ರಿಯ.

लल्ली, लल्ली, स्त्री. ಮುದ್ದಿನ ಹುಡುಗಿ.

लल्लो, स्त्री. ನಾಲಗೆ, ಜಿಹ್ವೆ; ಹಂಬಲ.

लल्लो-चप्पो, लल्लो-पत्तो, स्त्री. ಬೆಣ್ಣೆ ಹಚ್ಚಿದ ಮಾತು, ನಯವಾದ ಮಾತು;

ಗೋಲ್ಡ ಮಾಡುವ ಮಾತು, ಮುಖ ಸ್ತುತಿ.

लवंग, पु. ಲವಂಗ, ಶೀಬು.

लवंद, वि. ಸ್ವತಂತ್ರ; ಅವಿವೇಕಿ; ದಡ್ಡ; ಸೋಮಾರಿ, ಆಲಸ; ಬಡವ, ಗರೀಬ ಪು. ಯೋಧ, ಭಟ; ಜೀವದ ಆಸೆ ತೊರೆದು ಸಾಹಸ ಕೆಲಸ ಮಾಡುವವ; ನಾಡೋಡಿ.

लवन, पु. ಕೊಯ್ಯುವಿಕೆ, ಕೊಯ್ಲು.

लवना, सक्रि. ಕೊಯ್ಯು, ಕಟಾಯಿಸು. वि. ಉಪ್ಪಾದ, ಲವಣಯುಕ್ತ; ಲಾವಣ್ಯಪೂರ್ಣ, ಸುಂದರವಾದ. स्त्री. ಕಾಂತಿ, ಕಳೆ; ಲಾವಣ್ಯ, ಸೌಂದರ್ಯ.

लवनी, स्त्री. ಕೊಯಿಲು, ಕಟಾವು; ಕೊಯ್ಯಲು ಕೊಡುವ ಕೂಲಿ, ಕಂಬಳ; ಬೆಣ್ಣೆ.

लवर, स्त्री. ಉರಿಯ ನಾಲಗೆ, ಜ್ವಾಲೆ.

लवरा, पु. ದನದ ಕರು, ಕಂದು.

लवा, पु. ಲಾಜ, ಅರಳು, ಪುರಿ; ಲಾವಕ್ಕಿ, ಲಾವ.

लवाई, स्त्री. ಕೊಯಿಲು. ಕಟಾವು; ಕೊಯ್ಯಲು ಕೊಡುವ ಕೂಲಿ; ಕರು ಹಾಕಿದ ಹಸು, ಕಂದಿ.

लवाक, पु. ಕುಡುಗೋಲು.

लवाज़िमा, पु. ಪರಿವಾರ; ಉಪಕರಣ ಸಾಮಗ್ರಿಗಳು; ಆವಶ್ಯಕ ವಸ್ತುಗಳು, ಲವಾಜಮೆ.

लवाज़िमात, पु. ಸಾಮಗ್ರಿ, ಸೋಪಸ್ಕರ

लवारा, पु. ಹಸುವಿನ ಕರು.

लवासी, वि. ಹರಟೆಗಾರ.

लविंद, वि.; पु. = लवंद.

लश्कर, पु. ಸೈನ್ಯ, ದಂಡು, ಪಡೆ; ತಂಡ, ಹಿಂಡು; ದಂಡಿಳಿಯುವ ಸ್ಥಳ, ಬೀಡು, ಪಾಳೆಯ, ಹಡಗಿನ ಕೆಲಸಗಾರ, ಕಲಾಸಿ, ಲಷ್ಕರು. लश्कर कशी = ದಂಡು ಕೂಡಿಸುವಿಕೆ; ದಂಡೆತ್ತುವಿಕೆ.

लश्करगाह, स्त्री. ದಂಡಿಳಿಯುವ ಸ್ಥಳ, ಪಾಳೆಯ, ಬೀಡು; ಲಷ್ಕರು.

लश्कर-पस, पु. ಸೇನೆಯ ಹಿಂಭಾಗ, ಹಿಂದಳ.

लश्कर-पेश, पु. ಸೇನೆಯ ಮುಂಭಾಗ, ಮುಂದಳ, ಚೂಣಿ.

लश्करी, वि. ಸೈನ್ಯಕ್ಕೆ ಸಂಬಂಧಪಟ್ಟ, ದಂಡಿನ; ರಾಣುವೆಯ. पु. ಸಿಪಾಯಿ; ಸೈನ್ಯಾಧಿಕಾರಿ. स्त्री. ಕಲಾಸಿಯವರ ಭಾಷೆ; ದಂಡಿನಭಾಷೆ; ಉರ್ದು ಭಾಷೆ.

लश्टम-पश्टम, क्रिवि. ಬಹು ಪ್ರಯಾಸದಿಂದ, ಬಲು ಕಷ್ಟದಿಂದ; ಹಾಗೂ ಹೀಗೂ, ಕಸಿವಿಸಿಮಾಡಿ; ಯದ್ವಾತದ್ವಾ.

लस, पु. ಅಂಟುವಿಕೆ; ಅಂಟು, ಸರಿ; ಜಿಗಟು.

लसकना, अक्रि. ಜಿಗಟಾಗು, ಅಂಟಾಗು.

लसत, वि. ಒಪ್ಪುವ; ಶೋಭಿಸುವ.

लसदार, वि. ಅಂಟಿನ, ಜಿಗಟಾದ.

लसना, सक्रि. ಅಂಟಿಸು, ಚಿಗಟಾಯಿಸು. अक्रि. ಅಂಟು; ಅಂಟಿಕೊ; ಮೆತ್ತಿಕೊ; ಶೋಭಿಸು, ಸೊಗಯಿಸು; ರಾರಾಜಿಸು.

लसम, वि. ದೂಷಿತ, ನಿಕೃಷ್ಟ.

लसलसा, वि. ಜಿಗಟಾದ, ಅಂಟಿನ.

लसलसाना, अक्रि. ಜಿಗಟಾಗು, ಅಂಟು.
लसलसाहट, स्त्री. ಅಂಟು ಅಂಟಾಗಿರುವಿಕೆ, ಜಿಗಟು.
लसित, वि. ನೋಡಿದ, ದೃಷ್ಟ; ಪ್ರತ್ಯಕ್ಷ
लसियाना, अक्रि. ಅಂಟು, ಅಂಟಿಕೊ; ಶೋಭಿಸು, ಸೊಗಯಿಸು.
लसी, स्त्री. ಅಂಟು, ಜಿಗಟು; ಅಂಟುವಿಕೆ, ಹತ್ತುವಿಕೆ; ಸಂಯೋಗ, ಸುಸಂಧಿ; ಸೇರಿಕೆ; ನೀರು ಬೆರೆತ ಹಾಲು; ಮೊಸರಿನ ಪರಬತ್ತು, ಸಕ್ಕರೆ ಮಜ್ಜಿಗೆ
लसीला, वि. ಜಿಗಟಾದ, ಅಂಟುವ; ಅಂದವಾದ, ಸೊಗಸಾದ.
लसोड़ा, पु. =लिसोड़ा.
लस्टम-पस्टम, क्रिवि=लश्टम-पश्टम
लस्सान, वि. ಮಾತುಗಾರ, ವಾಚಾಲ
लस्सानी, स्त्री. ವಾಚಾಲತೆ; ವಾಕ್ಪಟುತ್ವ
लस्सी, स्त्री. ಅಂಟು, ಜಿಗಟು, ನೀರು ಬೆರೆಸಿದ ಹಾಲು; ಮಜ್ಜಿಗೆ, ತಕ್ರ; ಸಕ್ಕರೆ ಹಾಕಿದ ಮಜ್ಜಿಗೆ, ಮೊಸರಿನ ಪರಬತ್ತು; ಘಾಯದಿಂದ ಸೋರುವ ನೀರು ಬೆರೆತ ರಕ್ತ; ಸೋರುವ ಘಾಯ
लहँगा, पु. ಲಂಗ, ಪಾವಡೆ.
लहँज, पु. ಬಟ್ಟೆ ಒಗೆಯುವ ಕಲ್ಲು, ಅಗಸನ ಕಲ್ಲು.
लहँजा, पु. ಅನಾಹುತ, ಅನರ್ಥ.
लहँड़ा, पु (ಎಮ್ಮೆಯ) ಹಿಂಡು, ಮಂದೆ
लहक, स्त्री. ಹೊಳಪು, ತೊಳಗು ಬೆಳಗು; ಕಾಂತಿ; ಬಳುಕುವಿಕೆ, ಅಲುಗಾಡುವಿಕೆ
लहकना, अक्रि. ಹೊಳೆ, ಮಿಂಚು, ಜಗಜಗಿಸು; ಧಗಧಗಿಸು; ಬಳುಕು, ಅಲುಗಾಡು; ತೂರಾಡು, ತೊನೆಯು; ಗಟ್ಟಿಯಾಗಿ ಮಾತನಾಡು.
लहकाना, सक्रि. ಹೊಳಪಿಸು, ಮಿಂಚಿಸು; ಉರಿಹತ್ತಿಸು; ಉಲಿ, ಕಲೆ.
लहकारना, सक्रि. ಹೊಳಪಿಸು; ಉರಿಸು; ಚಪ್ಪರಿಸಿ ಅಟ್ಟು.
लहकावट, स्त्री. ತೊಳಗು ಬೆಳಗು, ಹೊಳಪು; ಉರಿ, ಜ್ವಾಲೆ.
लहकीला, वि. ಹೊಳೆವ, ಮಿಂಚುವ.
लहकौर, पु. ವಿವಾಹದಲ್ಲಿ ವಧುವರರು ಹಾಲು ಅನ್ನ ಊಟಮಾಡುವ ಒಂದು ಸಂಪ್ರದಾಯ, ಹಾಲನ್ನದ ಶಾಸ್ತ್ರ.
लहजा, पु. ನಾಲಗೆ; ಧ್ವನಿ; ಸ್ವರ; ನಾದ.
लहज़ा, पु ಕ್ಷಣ, ನಿಮಿಷ; ನೋಟ.
लहद, स्त्री. ಗೋರಿ, ಸಮಾಧಿ.
लहनदार, पु. ಲೇಣೆದಾರ; ಸಾಹುಕಾರ.
लहना, सक्रि. ಹೊಂದು, ಪಡೆ अक्रि. ಸೇರು, ಕೂಡು; ಪ್ರಾಪ್ತವಾಗು; ಜೊತೆಯಾಗು पु. ಭಾಗ್ಯ, ಅದೃಷ್ಟ; ನಫೆ, ಆದಾಯ; ಬರಬೇಕಾದ ಹಣ, ಲೇಣೆ.
लहनी, स्त्री. ಭಾಗ್ಯ, ಅದೃಷ್ಟ; ಪ್ರಾಪ್ತಿ; ಪ್ರಾರಬ್ಧ.
लहबर, पु. ನಿಲುವಂಗಿ, ಝುಗೆ; ಬಾವುಟ, ಪತಾಕೆ; ಅರಗಿಣಿ, ಗಿಳಿ.
लहम, पु. ಮಾಂಸ, ಬಾಡು, ಆಮಿಷ.
लहमा, पु. ಕ್ಷಣ, ನಿಮಿಷ.
लहर, स्त्री. ಅಲೆ, ತೆರೆ, ತರಂಗ; ಉಕ್ಕು, ಏಳಿ, ಹುಮ್ಮಸ್ಸು, ಉತ್ಸಾಹ; ಮಜ, ಉಲ್ಲಾಸ, ಮೋಜು; ರೋಗದ ಜೋರು; ಮೂರ್ಛೆಯ ಹೊಡೆತ, ಬವಳಿ;

ಹಾವು ಕಡಿದು ವಿಷವೇರುವಿಕೆ; ತೆರೆ ತೆರೆಯಾಗಿ ಬಟ್ಟೆಯಲ್ಲಿರುವ ಗೀರು; ಗಾಳಿಯ ಬಡಿತ; ವಕ್ರಗತಿ, ಕುಟಿಲ ಗತಿ; ಗಂಗೆದೊಗಲು. लहर बहर= ಸುಖಸಂತೋಷ; ಏಳಿಗೆ, ಅಭ್ಯುದಯ; ಯೌವನ; ಕೀರ್ತಿ.

लहरदार, वि. ವಕ್ರವಾದ, ಡೊಂಕಾದ.

लहरना, अक्रि. =लहराना.

लहर-पटोर, पु. ಗೀರಿನ ರೇಷ್ಮೆ ಬಟ್ಟೆ.

लहरा, पु. ಅಲೆ, ತರಂಗ; ಉಲ್ಲಾಸ, ಮಜ, ಖುಷಿ; ಸ್ವರಕಂಪನ, ಅಲುಗು, ಗಿರಿಕಿ, ಲಹರಿ. लहरा बजाना=ಜೋರಿನಿಂದ ಚೆನ್ನಾಗಿ ಹೊಡೆ, ಎಕ್ಕಡದೇಟು ಬಿಗಿ. लहरा लगाना = ಸುಮ್ಮನೆ ಆಶೆ ತೋರಿಸು; ಕಾಡು, ಸತಾಯಿಸು.

लहराना, अक्रि. ಅಲ್ಲಾಡು, ಅಲುಗಾಡು; ಅಲೆ ಹೊಡೆ; ಓಲಾಡು, ಹೊಯಿದಾಡು, ಬಳುಕು; ಖುಷಿ ಹುಟ್ಟು; ಹಾತೊರೆ; ಜ್ವಾಲೆ ಏಳು, ಜ್ವಲಿಸು; ಶೋಭಿಸು सक्रि. ಅಲುಗಾಡಿಸು, ಓಲಾಡಿಸು; ಸುತ್ತಿಸು; ಆಶೆ ತೋರಿಸು

लहरिया, वि. ಹೊಯಿದಾಡುವ; ಡೊಂಕುಡೊಂಕಾದ. पु. ಡೊಂಕಾದ ಗೆರೆ; ಡೊಂಕು ಗೆರೆಗಳ ಬಟ್ಟೆ, ಡೋರಿಯ ಸೀರೆ. स्त्री. ಅಲೆ, ತರಂಗ.

लहरी, स्त्री. ಅಲೆ, ತರಂಗ. वि. ಚಂಚಲ ಚಿತ್ತದವ; ಮೋಜುಗಾರ; ಉಲ್ಲಾಸಿ.

लहरीला, वि. ಅಲೆ ಅಲೆಯಾದ; ತರಂಗಗಳುಳ್ಳ.

लहर्रा, पु. ಜೋಳ.

लहलहा, वि. ತೆರೆತೆರೆಯಾದ; ಹುಲುಸಾದ, ಸಮೃದ್ಧ; ಪ್ರಫುಲ್ಲ.

लहलहाना, अक्रि. ಹುಲುಸಾಗಿ ಬೆಳೆ; ಕಳಕಳಿಸು; ಹೊರವಾಗು; ಚಿಗುರು, ಕೊನರು; ಏಳಿಗೆಗೆ ಬರು; ಮೆರೆಯು; ತೂಗಾಡು, ತೊನೆ.

लहलहाहट, स्त्री. ಹುಲುಸು; ಸಮೃದ್ಧಿ; ಏಳಿಗೆ; ಅಲುಗಾಡುವಿಕೆ; ತೊನೆಯುವಿಕೆ

लहलही, स्त्री. ಗಟ್ಟಿ ಮಣ್ಣು.

लहलोट, पु. ಮೋಸಗಾರ; ತೆಗೆದುಕೊಂಡ ಸಾಲವನ್ನು ತೀರಿಸದೆ ಇರುವವ

लहसन, **लहसुन**, पु. ಬೆಳ್ಳುಳ್ಳಿ, ಲಶುನ; ಕೆಂಪು ಮಚ್ಚೆ, ಚಿಬ್ಬು.

लहसनी, **लहसनिया**, **लहसुनिया**, पु. ವೈಢೂರ್ಯ.

लहाछेह, पु. ಕುಣಿತದಲ್ಲಿ ತೀವ್ರ ಗತಿ, ಲಘು ದ್ರುತ.

लहालोट, वि. ಆನಂದಿಸುವ, ನಲಿದಾಡುವ; ಮೋಹಿತ, ಮುಗ್ಧ.

लहासी, स्त्री. ದಾರ, ಹಗ್ಗ.

लहीम, वि. ಮಾಂಸಲ; ಕೊಬ್ಬಿದ.

लहुरा, वि. ಚಿಕ್ಕ, ಕಿರಿಯ.

लहू, पु. ರಕ್ತ, ನೆತ್ತರು. लहू टपकना = ಕುಷ್ಠರೋಗ ಹಿಡಿ. लहू के घूंट पीना = ಕಷ್ಟಗಳನ್ನು ಬಹಳ ತಾಳ್ಮೆಯಿಂದ ಸಹಿಸು लहू पानी एक करना = ಪಾಡುಪಟ್ಟು ಕೆಲಸಮಾಡು, ದುಡಿ

लहू-लुहान, वि. ರಕ್ತ ಸುರಿವ; ರಕ್ತಮಯವಾದ; ರಕ್ತದ ಕಲೆಯುಳ್ಳ.

लहेरा, पु. ಅರಗಿನ ಬಣ್ಣ ಕಟ್ಟುವವ.

लांक, स्त्री. ಸೊಂಟ, ಟೊಂಕ, ನಡು; ಹೊಟ್ಟು, ಉಬ್ಬಲು; ಜಿಗುರಂಟು.

लांग, स्त्री. ಕಚ್ಚೆ, ಹಿಂಗಚ್ಚೆ. लांग खुलना = ಭಯಪಡು; ದಿಗಿಲುಬೀಳು.

लांगल, पु. ನೇಗಿಲು, ರಂಟೆ, ಏರು.

लांघना, सक्रि. ದಾಟು, ಲಂಘಿಸು; ಮೀರು, ಉಲ್ಲಂಘಿಸು.

लांच, स्त्री. ಲಂಚ; ಪರಿದಾನ.

लांडा, वि. ಬಾಲವಿಲ್ಲದ.

लांप, स्त्री. ನೆಗೆತ, ಜಿಗಿತ.

ला, उप. ಅಭಾವಸೂಚಕ ಉಪಸರ್ಗ, ಉದಾ:- लाइंतहा = ಕೊನೆಯಿಲ್ಲದ, ಅನಂತ.

लाइ, स्त्री. ಲಾಜ, ಛತ್ತ ದ ಅರಳು; ಚಾಡಿ, ದೂರು. लाइ लुतरी = ತಳ್ಳಿ, ಚಾಡಿ.

ला-इलाज, वि. ವಾಸಿಯಾಗದ, ಅಪರಿಹಾರ್ಯ, ಅನಿವಾರ್ಯ.

ला-इल्म, वि. ತಿಳಿಯದ; ಅರಿವಿಲ್ಲದ, ಅಜ್ಞಾನಿ; ಅವಿದ್ಯಾವಂತ.

ला-इल्मी, स्त्री. ತಿಳುವಳಿಕೆ ಇಲ್ಲದಿರುವಿಕೆ; ಅಜ್ಞಾನ.

लाक, पु. ಹರಿವಾಣ, ತಟ್ಟೆ; ಅವೆ.

ला-कलाम, क्रिवि. ಮಾತಿಲ್ಲದೆ; ಅಗತ್ಯವಾಗಿ; ನಿಸ್ಸಂದೇಹವಾಗಿ.

लाख, पु. ಲಕ್ಷ, ನೂರು ಸಾವಿರ. स्त्री. ಅರಗು, ಲಾಕ್ಷೆ; ಅರಗಿನ ಹುಳು.

लाखना, सक्रि. ಅರಗು ಹಚ್ಚು.

लाखा, पु. ಕೆಂಪರಗು.

ला-खिराज, वि. ತೆರಿಗೆಯಿಲ್ಲದ, ಕಂದಾಯವಿಲ್ಲದ.

लाखी, वि. ಅರಗಿನ; ಅರಗಿನ ಬಣ್ಣದ. स्त्री. ಅರಗಿನ ಬಣ್ಣ.

लाखों, वि. ಲಕ್ಷಾಂತರ, ಲಕ್ಷಗಟ್ಟಲೆ. लाखों में = ಬಹಿರಂಗವಾಗಿ.

लाग, स्त्री. ಸಂಪರ್ಕ, ಸೇರಿಕೆ; ಪ್ರೀತಿ, ಪ್ರೇಮ; ಆಸಕ್ತಿ; ತತ್ಪರತೆ; ಯುಕ್ತಿ, ಉಪಾಯ; ವೇಷ, ಸೋಗು; ಸ್ಪರ್ಧೆ; ಪೈಪೋಟಿ, ಮೇಲಾಟ; ವಿರೋಧ, ಹಗೆ; ಮಾಟ, ಮಂತ್ರ; ಗುಟ್ಟು, ರಹಸ್ಯ; ಕಂದಾಯ, ತೆರಿಗೆ; ನೃತ್ಯ, ಕುಣಿತ; ಹಬ್ಬದ ಕಾಲದಲ್ಲಿ ನೌಕರರಿಗೆ ಮಾಮೂಲಾಗಿ ಕೊಡುವ ಬಹುಮಾನ, ಇನಾಮು. लाग लगाना = ಪ್ರೀತಿ ಹುಟ್ಟು; ಆಸಕ್ತನಾಗು. क्रिवि. ತನಕ, ವರೆಗೆ.

लाग-डांट, स्त्री. ವಿರೋಧ, ಹಗೆ; ಹುರುಡು, ಪೋಟಾಪೋಟಿ; ಕುಣಿತ.

लागत, स्त्री. ಲಾಗುವದು, ಲಾಗೋದು, ತಗಲುಪಡಿ; ಖರ್ಚು.

लाग़र, वि. ಬಡಕಲ, ನರಕಲ.

लाग़री, स्त्री. ಬಡಕಲು, ದೌರ್ಬಲ್ಯ.

लाग-लपेट, स्त्री. ಗುಂಬತನ; ಮೋಸ; ದ್ರೋಹ.

लागि, क्रिवि. ವರೆಗೆ, ತನಕ.

लागी, स्त्री. ಗುರುತು, ಚಿಹ್ನೆ; ಸ್ನೇಹ; ಪ್ರೀತಿ, ಪ್ರೇಮ.

लागू, वि. ಇಚ್ಛಿಸುವ; ಸಂಬಂಧಿಸುವ; ಸಲ್ಲುವ, ಅನ್ವಯಿಸುವ. लागू होना = ಹಿಂಬಾಲಿಸು; ತತ್ಪರನಾಗು; ಅನ್ವಯಿಸು, ಸಲ್ಲು.

लागे, अव्य. ಓಸ್ಕರ, -ಗೆ.

लाघव, पु. ಲಘುತ್ವ, ಲಾಘವ; ಕಡಮೆ; ಕೊರತೆ; ಅನಾಯಾಸ; ಕೈಚಳಕ, ಚುರುಕು; ಆರೋಗ್ಯ.

लाचार, वि. ನಿರ್ವಾಹವಿಲ್ಲದ; ಗತಿಯಿಲ್ಲದ; ಬಡಪಾಯಿ; ನಿರ್ಬಲ; ಕಡ್ಡಾಯದ क्रिवि. ನಿರ್ವಾಹವಿಲ್ಲದೆ, ಯತ್ನವಿಲ್ಲದೆ; ಅನಿವಾರ್ಯವಾಗಿ; ದಿಕ್ಕಿಲ್ಲದೆ

लाचारी, स्त्री. ಅಶಕ್ತತೆ, ವಿವಶತೆ; ನಿರಾಶ್ರಯ; ಬಡತನ; ನಿರ್ಬಂಧ, ಕಡ್ಡಾಯ.

लाज, स्त्री. ನಾಚಿಕೆ, ಸಿಗ್ಗು, ಲಜ್ಜೆ; ಮಾನ. लाज रखना=ಮಾನವನ್ನು ಸಂರಕ್ಷಿಸು, ಮಾನಕಾಯು.

लाजना, अक्रि. ಲಜ್ಜಿಸು, ನಾಚು.

लाजवंत, **लाजवान**, वि. ಲಜ್ಜಾಲು; ಮಾನಿ.

लाजवंती, स्त्री. ಮುಟ್ಟಿದರೆ ಮುನಿ, ನಾಚಿಕೆ ಬಳ್ಳಿ.

लाजवर्द, पु. ಒಂದು ಬಗೆ ರತ್ನ.

ला-जवाब, वि. ಜವಾಬು ಕೊಡಲಾಗದ, ಉತ್ತರವಿಲ್ಲದ; ನಿರುತ್ತರ, ಮೌನ; ಈಡಿಲ್ಲದ, ಸಾಟಿಯಿಲ್ಲದ, ಅನುಪಮ

ला-ज़वाल, वि. ನಾಶವಿಲ್ಲದ, ಅಳಿವಿಲ್ಲದ

लाज़िम, पु. ಅವಶ್ಯಕತೆ, ಅಗತ್ಯ. वि. ಅಗತ್ಯವಾದ, ಆವಶ್ಯಕ; ಅತ್ಯಾವಶ್ಯಕವಾದ, ಜರೂರಾದ; ತಕ್ಕ, ಯೋಗ್ಯ.

लाज़िमा, स्त्री. ಅವಶ್ಯತ್ವ.

लाज़िमी, वि. ಕಡ್ಡಾಯವಾದ, ಅನಿವಾರ್ಯ, ಅಶ್ಯಗತ್ಯವಾದ.

लासा, पु. ಜಿಗಟು, ಅಂಟು.

लाट, स्त्री. ದೊಡ್ಡ ಸ್ತಂಭ, ಕಂಬ; ಸ್ತೂಪ. पु. ಮಾಂಡಲಿಕ, ಕ್ಷತ್ರಪ; ಲಾರ್ಡ್, ಗವರ್ನರು.

लाटा, पु. ಕೂಳು, ಅಂಬಲಿ.

लाटी, स्त्री. ಬಾಯಿ ಒಣಗುವಿಕೆ, ಹಾದರಗಿತ್ತಿ.

लाठ, स्त्री. ಸ್ತಂಭ, ಸ್ತೂಪ; ದೊಣ್ಣೆ, ದಡಿ; ಜಳವೆ; ಒನಕೆ; ಗಾಣದ ಕಣೆ.

लाठा, पु. ದೊಣ್ಣೆ; ಕೋಲು; ೧೦ ಅಡಿಯ ಅಳತೆಯ ಕೋಲು. लाठा लाठी =ದೊಣ್ಣೆಗಳಿಂದ ಹೊಡೆದಾಟ, ಕೋಲಾಕೋಲಿ.

लाठी, स्त्री. ದೊಣ್ಣೆ, ಲಾಠಿ; ದಡಿ, ಬಡಿಗೆ; ಡಾಣೆ, ಕೋಲು. लाठी पाठी =ಕೋಲಾಕೋಲಿ, ಬಡಿದಾಟ.

लाड़, पु. ಲಲ್ಲೆ, ಮುದ್ದಾಟ; ಪ್ರೀತಿ. लाड़-चाव, लाड़ प्यार = ಲಲ್ಲೈಸುವಿಕೆ, ಅಲ್ಲಿಬಿಲ್ಲಿ, ಮುದ್ದಾಟ, ಲಾಲನೆ. लाड़ बावला = ಹುಚ್ಚ, ಪೆದ್ದ.

लाड़-लड़ैता, **लाड़ला**, वि. ಮುದ್ದಾಡುವ; ಅತಿಪ್ರಿಯ, ಮುದ್ದು; ಅಚ್ಚುಮೆಚ್ಚಿನ

लाड़ा, पु. ನೀಲಿ ಗಿಡ.

लाड़ो, स्त्री. ಪ್ರೀತಿಯ, ಮುದ್ದು (ಹುಡುಗಿ); ಪ್ರಿಯೆ; ಹೆಂಡತಿ, ಪತ್ನಿ.

लात, स्त्री. ಕಾಲು, ಪಾದ; ಪಾದಪ್ರಹಾರ, ಒದೆ, ಲತ್ತೆ. लात मारना = ಒದೆ, ಲತ್ತೆ ಹೊಡೆ.

लाद, स्त्री. ಹೇರುವಿಕೆ, ಹೇರು; ಹೊಟ್ಟೆ, ಕರುಳು.

लादना, सक्रि. ಹೇರು, ಹೊರಿಸು; ಪೇರಿಸು; ಭಾರ ತುಂಬು; ಹೇರಿಸು.

लाद-फांद, स्त्री. ಹೇರುವಿಕೆ; ಮೂಟೆ ಕಟ್ಟುವಿಕೆ.

लादवा, वि. ಅಪರಿಹಾರ್ಯ, ನಿರುಪಾಯ

लादावा, वि. ಅಧಿಕಾರವಿಲ್ಲದ, ಹಕ್ಕಿಲ್ಲದ; ಹಕ್ಕನ್ನು ತೊರೆದ. पु. ಹಕ್ಕನ್ನು ತೊರೆದವ; ಬಿಡುಗಡೆ ಪತ್ರ.

लादिया, पु. ಹೇರುವವ.

लादी, स्त्री. ಹೊರೆ; (ಅಗಸನ) ಮೂಟೆ

लादू, वि. ಭಾರ ಹೊರುವ (ಪ್ರಾಣಿ)

लान, स्त्री. ಬೈಯುವಿಕೆ; ನಿಂದೆ. लान तान = ನಿಂದೆ, ಬೈಗಳು; ಶಾಪ.

लानत, स्त्री. ಬೈಗಳು; ನಿಂದೆ; ತೆಗಳಿಕೆ; ಅಭಿಶಾಪ. लानत भेजना = ಧಿಕ್ಕರಿಸು; ಹತ್ತಿರ ಹೋಗದಿರು; ವರ್ಜಿಸು. लानत मलामत = ಜರೆದಾಟ, ನಿಂದೆ, ಹಳಿವು. ಬೈಗಳು.

लानती, वि. ನಿಂದಿತ, ಶಾಪಗ್ರಸ್ತ.

लाना, सक्रि. ತರು; ಕರೆತರು; ತೆಗೆದುಕೊಂಡು ಬರು; ಬೆಂಕಿಹಾಕು, ಸುಡು.

लापता, वि. ಪತ್ತೆಯಿಲ್ಲದ; ಕಳೆದು ಹೋದ; ಮರೆಯಾದ.

लापरवा, लापरवाह, वि. ನಿಶ್ಚಿಂತ, ಅಜಾಗರೂಕ, ಪರಿವೆಯಿಲ್ಲದ.

लापरवाही, स्त्री. ನಿಶ್ಚಿಂತತೆ, ಅಜಾಗರೂಕತೆ.

लापसी, स्त्री. = **लपसी**.

लाफ़, पु. ಬಡಾಯಿ, ಬಡಿವಾರ; ಜಂಭ, ಡೌಲು; ಆತ್ಮಪ್ರಶಂಸೆ.

लाफ़ज़न, पु. ಬಡಿವಾರ ಹೇಳುವವ, ಬಡಾಯಿಖೋರ, ಜಂಭಗಾರ.

लाफ़ज़नी, स्त्री. ಬಡಿವಾರ ಹೇಳುವಿಕೆ, ಬಡಾಯಿ ಕೊಚ್ಚುವಿಕೆ.

लाफना, अक्रि. ಕುಣಿ, ನೆಗೆ, ಜಿಗಿ.

लाबत, स्त्री. ಗೊಂಬೆ, ಬೊಂಬೆ; ಪುತ್ಥಳಿ; ಆಟದ ಗೊಂಬೆ, ಆಟಿಗೆ.

लाभ, पु. ಲಾಭ, ನಫೆ; ಫಾಯಿದೆ; ಹಿತ

लाभकारिता, स्त्री. ಲಾಭಕರವಾಗಿರುವಿಕೆ, ಲಾಭಕರ.

लाभकारी, लाभजनक, लाभदायक, वि. ಲಾಭಕರವಾದ, ಪ್ರಯೋಜನಕರ

लाभालाभ, पु. ಲಾಭನಷ್ಟ.

लाम, स्त्री. ಸುತ್ತು, ಸುಳಿ, ಸಾಲು, ಪಂಕ್ತಿ; ಸೇನೆ, ಪಡೆ; ಹಿಂಡು; ತಂಡ.

लाम-काफ़, पु. ಬೈದಾಟ, ಡಕಾರ ಮಕಾರ; ಹಕಾರ ತುಕಾರವಾಗಿ ಬೈಯುವಿಕೆ.

लामज, पु. ಲಾವಂಚ.

ला-मज़हब, वि. ಅಧರ್ಮಿ; ಧರ್ಮಭ್ರಷ್ಟ; ನಾಸ್ತಿಕ.

लायक़, वि. ತಕ್ಕ, ಉಚಿತ, ಉಪಯುಕ್ತ; ಅರ್ಹ, ಯೋಗ್ಯ, ಲಾಯಕ್ಕಾದ; ಸಮರ್ಥ; ಗುಣಿ; ಕುಲೀನ, ಉತ್ತಮ.

लायक़ी, स्त्री. ಯೋಗ್ಯತೆ, ಅರ್ಹತೆ, ಲಾಯಕ್ಕು.

लायन, वि. ಡೊಂಕಾದ, ವಕ್ರ.

लार, पु. ಜೊಲ್ಲು, ಉಗುಳು, ಲಾಲಾಜಲ, ಲೋಳೆ; ಅಂಟು, ಸರಿ; ಪಂಕ್ತಿ, ಸಾಲು. क्रिवि. ಹಿಂದೆ, ಸಂಗಡ.

लाल, वि. ಕೆಂಪಾದ; ಕೆಂಪೇರಿದ; ಮುದ್ದು, ಪ್ರಿಯ. पु. ಲಲ್ಲೆ, ಮುದ್ದಾಟ; ಮುದ್ದುಮಗು, ಕಂದ; ಮಾಣಿಕ್ಯ; ಪದ್ಮರಾಗ; ಒಂದು ಪಕ್ಷಿ. लाल बुझक्कड़ = ಎಲ್ಲ ತಿಳಿದವನೆಂದು ಭಾವಿಸುವವ, "ಸರ್ವಜ್ಞಮೂರ್ತಿ", ಪಂಡಿತಂಮನ್ಯ; ಪೆದ್ದ. लाल पीला होना = ಕೋಪದಿಂದ ಕೆಂಪೇರು, (ಕಣ್ಣು) ಕೆಂಗಲಿಸು.

लालच, पु. ಅತ್ಯಾಶೆ; ಹಂಬಲ; ಲೋಲುಪ್ತಿ, ಲೋಭ. लालच देना = ಆಶೆ ತೋರಿಸು

लालचहा, लालची, वि. ಆಶೆಬುರುಕ; ಹಂಬಲಿಸುವವ; ಲೋಲುಪ, ಲೋಭಿ

लालटेन, स्त्री. ಲಾಂದ್ರ, ಕಂದೀಲು, ಲಾಟೀನು.

लालड़ी, स्त्री. ಕೃತಕ ಪದ್ಮರಾಗ, ಅಡಿಗೆ ಕಲ್ಲು; ಕೆಂಪು ಬಣ್ಣ; ಕಿರಿಯ ಲಾಲ ಪಕ್ಷಿ

लालन, पु. ಮುದ್ದಾಡುವಿಕೆ, ಲಾಲನೆ; ಪ್ರಿಯ. लालन पालन = ಲಾಲನೆ ಪಾಲನೆ.

लाल-मिर्च, स्त्री. ಮೆಣಸಿನಕಾಯಿ.

लालसा, स्त्री. ಆಶೆ, ಬಯಕೆ, ಲಾಲಸೆ; ಗೀಳು, ಹಂಬಲ.

लालसित, लालसी, वि. ಆಶೆಪಡುವವ, ಉತ್ಸುಕ.

लाला, पु. ಕಾಯಸ್ಥ ಜಾತಿಯವರ ಬಿರುದು; ಗೌರವಾರ್ಥದ ಶಬ್ದ, ದೇವರು, ರಾಯರು; ಕಸಕಸೆಯ ಕೆಂಪು ಹೂವು; ನಾನಾ ಬಣ್ಣದ ಒಂದು ಬಗೆ ಹೂ; ಕಾಂತಿ; ಹೊಳಪು; ಮುಕ್ತಾಫಲ, ಮುತ್ತು. स्त्री. ಲಾಲಾಜಲ, ಉಗುಳು, ಜೊಲ್ಲು. वि. ಕೆಂಬಣ್ಣದ, ಕೆಂಪು.

लालायित, वि. ಲವಲವಿಸುವ, ಬಯಸುವ, ಹಂಬಲಿಸುವ. लालायित होना = ಲವಲವಿಸು, ಹಂಬಲಿಸು.

लालित, वि. ಲಾಲಿಸಿದ, ಪಾಲಿತ.

लालिमा, स्त्री. ಕೆಂಬಣ್ಣ, ಕೆಂಪು.

लाली, स्त्री. ಕೆಂಬಣ್ಣ, ರಕ್ತತೆ, ಕೆಂಪು; ಮಾನ, ಮರ್ಯಾದೆ; ಮುದ್ದು ಹುಡುಗಿ.

लाले, पु. ಅಭಿಲಾಷೆ; ಲವಲವಿಕೆ, ಹಂಬಲ. लाले पड़ना = ಅಪ್ರಾಪ್ಯವಾಗು; ಅರಿದಾಗು. जान के लाले पड़ना = ಪ್ರಾಣಕ್ಕೆ ಅಪಾಯ ಬರು.

लाल्हा, पु. = मरसा.

लाव, पु. ಹಗ್ಗ, ಹೊರಜಿ. स्त्री. ಸೇನೆ, ದಂಡು; ತುಪಾಕಿ; ಸೇನೆ ಸಾಮಾನು. लाव लश्कर = ದಂಡುದಾಳಿ, ದಲಬಲ

लावक, पु. ಲಾವಕ ಪಕ್ಷಿ, ಲಾವಕ್ಕಿ.

लावड़, पु. ಕಾಕಂಬಿ, ಜೋನಿ ಬೆಲ್ಲ.

लावण्य, पु. ಸೌಂದರ್ಯ, ಸೊಬಗು, ಲಾವಣ್ಯ.

लावदार, पु. ತುಪಾಕಿಯವ, ಗುಂಡು ಹಾರಿಸುವವ.

लावन, स्त्री. ರುಚಿ, ಸವಿ; ಬಟ್ಟೆಯ ಸೆರಗು

लावना, सकि. = लाना.

लावनी, स्त्री. ಲಾವಣಿ; ಕೊಯ್ಲು; ಸುಗ್ಗಿ.

लाव लाव, पु. ಅತ್ಯಾಶೆ, ಲೋಭ.

लावल्द, वि. ಮಕ್ಕಳಿಲ್ಲದ, ಅಪುತ್ರ.

लावसाव, पु. ಆದಾಯ, ಲಾಭ, ನಫೆ.

लावा, पु. ಲಾವಕ ಪಕ್ಷಿ, ಲಾವಕ್ಕಿ; ಅರಳು, ಪುರಿ; ಚಿಣ್ಣಿಕೋಲಾಟ.

लावारिस, वि. ವಾರಸುದಾರನಿಲ್ಲದ; ಮಕ್ಕಳುಮರಿಯಿಲ್ಲದ.

लावारिसी, स्त्री. ವಾರಸುದಾರನಿಲ್ಲದ ಸೊತ್ತು; ಅನಾಥತನ.

लावा-लुतरा, पु. ಚಾಡಿಖೋರ.

लाबू, पु. ಕುಂಬಳ ಕಾಯಿ.

लाश, पु. ಹೆಣ, ಶವ, ಕಳೇಬರ.

लास, पु. ಒಯ್ಯಾರ, ಬೆಡಗು; ಬಳು ಕಾಟ; ಒಂದು ಬಗೆ ಕುಣಿತ.

लासक, स्त्री. ನಾಟ್ಯಗಾರ, ನರ್ತನಕಾರ; ನಟ.

लासका, स्त्री. ನಾಟ್ಯಗಾತಿ; ಪಾತರಗಿತ್ತಿ.

लासा, पु. ಅಂಟು, ಸರಿ; ಗೋಂದು, ಬಂಕೆ; ಪಕ್ಷಿಗಳನ್ನು ಹಿಡಿಯಲು ಬಳ ಸುವ ಸರಿ; ಗಿಡದ ಹಾಲು, ಸೊನೆ.

लासानी, वि. ಅದ್ವಿತೀಯ, ಅಸದೃಶ

लास्य, पु. = लास.

लाह, स्त्री. ಅರಗು; ಹೊಳಪು, ಕಾಂತಿ. पु. ಲಾಭ; ಒಂದು ಬಗೆ ತೆಳು ಬಟ್ಟೆ.

लाहक, स्त्री. ಹೊಳಪು, ಕಾಂತಿ; ಜ್ವಾಲೆ.

लाहब, पु. ಅಗ್ನಿಜ್ವಾಲೆ, ಉರಿ; ಕೆಂಪು ಬಣ್ಣ, ಕೆಂಪು; ಹಾರುವಿಕೆ, ಹಾರಾಟ.

लाहा, पु. ಲಾಭ, ನಫೆ; ಒಂದು ಬಗೆ ಎಣ್ಣೆ ಬೀಜ.

लाहासिल, वि. ನಿಷ್ಫಲ, ನಿರರ್ಥಕ; ಅನಾವಶ್ಯಕ.

लाहिक़, पु. ಎಟಕುವಿಕೆ, ಎಟಕು; ಸಂಬಂಧ, ಸೇರಿಕೆ; ಪರಿಶಿಷ್ಟ, ಪುರವಣಿ.

लाहिक़ा, पु. ಪ್ರತ್ಯಯ.

लाही, वि. ಅರಗಿನ, ಅರಗಿನ ಬಣ್ಣದ. स्त्री. ಅರಗು; ಒಂದು ಬಗೆ ಹುಳು; ತೆಳುವಾದ ರೇಷ್ಮೆ ಬಟ್ಟೆ.

लाहौल, पु. ದೆವ್ವ ಬಿಡಿಸಲು ಉಚ್ಚರಿಸುವ लाहौल वला क़ूवत इल्ला बिल्लाह ಎಂಬ ಕುರಾನಿನ ವಾಕ್ಯದ ಮೊದಲು ಶಬ್ದ. (ಈ ವಾಕ್ಯದ ಅರ್ಥ-ಭಗವಂತ ನಿಗಲ್ಲದೆ ಬೇರೆ ಯಾರಿಗೂ ಶಕ್ತಿಯಿಲ್ಲ, ಬಲವಿಲ್ಲ) लाहौल पढ़ना या भेजना = ಭೂತಪ್ರೇತ ಅಥವಾ ದೆವ್ವಗಳನ್ನು ಬಿಡಿಸಲು ಕುರಾನಿನ लाहौल ಎಂಬ ವಾಕ್ಯವನ್ನು ಪಠಿಸು; ಮಂತ್ರಪಠಿಸು.

लिंग, पु. ಚಿಹ್ನೆ; ಗುರುತು; ಲಿಂಗ, ಶಿವಲಿಂಗ.

लिंगन, पु. ತಬ್ಬಿಕೊಳ್ಳುವಿಕೆ, ಆಲಿಂಗನ

लिए, अव्य. ಚತುರ್ಥಿ ವಿಭಕ್ತಿ ಪ್ರತ್ಯಯ, -ಗೆ, -ಗಾಗಿ, ಓಸ್ಕರ.

लिक्खड़, वि. ಬಹಳ ಬರೆಯುವವ.

लिखंत, पु. ಬರವಣಿಗೆ; ಬರಹ; ಭಾಗ್ಯ, ನಿಯಾಮತು.

लिखत, स्त्री. ಬರಹ; ಲೇಖ; ಪತ್ರ; ದಸ್ತಾವೇಜು. लिखत पढ़त = ಕಾಗದ ಪತ್ರ, ಪತ್ರ ವ್ಯವಹಾರ.

लिखतम, पु. ಪತ್ರ, ದಸ್ತಾವೇಜು.

लिखन, पु. ಬರೆಯುವಿಕೆ; ಲೇಖ; ಬರಹ; ಹಣೆಬರಹ, ವಿಧಿ.

लिखना, सक्रि. ಬರೆ, ಲಿಖಿಸು; ಲೇಖನ ಗೊಳಿಸು; ಗ್ರಂಥ ರಚಿಸು. लिखना पढ़ना = ಓದು, ವಿದ್ಯೆ ಕಲಿ; ವಿದ್ಯಾ

ಭ್ಯಾಸ ಮಾಡು.

लिखनी, स्त्री. ಲೇಖನಿ.

लिखवाना, सक्रि. ಬರೆಸು, ಬರೆಯಿಸು.

लिखा, वि. ಬರೆದ, ಲಿಖಿತ. पु. ಹಣೆ ಬರಹ, ವಿಧಿ. लिखा-पढ़ा = ಓದಿದವ, ವಿದ್ಯಾವಂತ. लिखा-पढ़ी = ಪತ್ರವ್ಯವಹಾರ, ಕಾಗದ ಪತ್ರ.

लिखाई, स्त्री. ಲೇಖನ, ಬರೆಹ; ಲೇಖನ ಬರೆಯುವಿಕೆ, ಲೇಖನ ಕಲೆ; ಬರವಣಿಗೆ; ಬರೆಯಲು ಕೊಡುವ ಕೂಲಿ, ಲೇಖಕನ ರುಸುಂ.

लिखाना, सक्रि. ಬರೆಸು, ಬರೆಯಿಸು; ಬರೆಯಲು ಕಲಿಸು.

लिखाव, पु. लिखावट, स्त्री. ಲೇಖ; ಬರೆಯುವಿಕೆ, ಬರವಣಿಗೆ; ಬರೆಯುವ ರೀತಿ, ಬರಹ.

लिखित, वि. ಬರೆದ, ಲಿಖಿತ; ಬರೆದಿಟ್ಟ.

लिखेरा, पु. ಬರೆಹಗಾರ, ಲೇಖಕ.

लिजलिजी, वि. ಜಿಗಟಾದ, ಅಂಟಾದ

लिझड़ी, स्त्री. ಗರ್ಭವೇಷ್ಟನ, ಮಾವಿ ಚೀಲ, ಮಾಸು.

लिटाना, सक्रि. ಮಲಗಿಸು; ಒರಗಿಸು.

लिट्ट, पु. लिट्टी, स्त्री. ಕೆಂಡದಲ್ಲಿ ಸುಟ್ಟ ದಪ್ಪ ರೊಟ್ಟಿ, ಮುದ್ದೆ ರೊಟ್ಟಿ.

लिड़ार, पु. ನರಿ, ಶೃಗಾಲ, ಬಳ್ಳು. वि. ಅಳ್ಳೆದೆಯವ, ಪುಕ್ಕ, ಹೇಡಿ.

लितड़ा, पु. ಹಳೆಯ ಜೋಡು.

लिथड़ना, अक्रि. ಕೆಸರು ಮೆತ್ತಿಕೊ, ಮಣ್ಣು ಮೆತ್ತಿಕೊಳ್ಳು; ಕೊಳೆಯಾಗು.

लिथाड़ना, सक्रि. ಕೆಸರಿನಲ್ಲಿ ಅದ್ದು; ಕೊಳೆಮಾಡು.

लिपटंत, स्त्री. ತಬ್ಬಿಕೊಳ್ಳುವಿಕೆ, ಆಲಿಂಗನ; ಕುಸ್ತಿ.

लिपटना, अक्रि. ಅಂಟು; ಅಪ್ಪಿಕೊ, ತಬ್ಬಿಕೊಳ್ಳು; ಕುಸ್ತಿ ಮಾಡು.

लिपटाना, सक्रि. ಅಂಟಿಸು; ಜಿಗಟಾಯಿಸು; ತಬ್ಬು, ಆಲಿಂಗಿಸು; ಮಡಿಸು.

लिपटाव, पु. ಅಂಟುವಿಕೆ, ಅಂಟು.

लिपड़ा, पु. ಬಟ್ಟೆ, ವಸ್ತ್ರ वि. ಜಿಗಟಾದ, ಅಂಟಾದ.

लिपड़ी, स्त्री. ಹಳೆಯ ಪೇಟ, ಚಿಂದಿ.

लिपना, अक्रि. ಸವರಲ್ಪಡು; ಮೆತ್ತಲ್ಪಡು, ಬಳಿಯಲ್ಪಡು; ತೊಡೆಯಲ್ಪಡು.

लिपवाना, सक्रि. लीपना का प्रे. रूप.

लिपा, वि. (ಸಗಣಿಯಿಂದ) ಸಾರಿಸಿದ. लिपा पुता = ಶುಭ್ರ, ಶುಚಿಯಾದ.

लिपाई, स्त्री. ಸವರುವಿಕೆ, ಬಳಿಯುವಿಕೆ; ಮೆತ್ತುವಿಕೆ, ಮೆತ್ತನೆ, ಸಾರಣೆ; ಬಳಿಯಲು ಅಥವಾ ತೊಡೆಸಲು ಕೊಡುವ ಕೂಲಿ.

लिपाना, सक्रि. ಸವರು, ಮೆತ್ತು; ಸುಣ್ಣ ಬಳಿ, ತೊಡೆಸು; ಸಾರಿಸು.

लिपि, स्त्री. ಲಿಪಿ; ಅಕ್ಷರ; ಬರಹ.

लिफ़ाफ़ा, पु. ಕಾಗದದ ಚೀಲ, ಲಕೋಟೆ, "ಕವರು"; ಗವುಸು, ಗವಸಣಿಗೆ; ಬಾಹ್ಯಾಡಂಬರ, ಗಿಲೀಟು, ಥಳುಕು. लिफ़ाफ़ा खुलना = ಗುಟ್ಟು ರಟ್ಟಾಗು.

लिफ़ाफ़िया, वि. ಆಡಂಬರದವ; ಗಿಲೀಟಿನವ, ಥಳುಕಿನವ.

लिबड़ी, स्त्री. ಬಟ್ಟೆ, ವಸ್ತ್ರ. लिबड़ी

बारदाना = ಸಾಮಾನು ಸರಂಜಾಮು.

लिबना, पु. ಹೆಂಚು; ಇಟ್ಟಿಗೆ, ಇಟ್ಟಂಗಿ.

लिबलिबा, वि. ಅಂಟು ಅಂಟಾದ, ಜಿಗಟಾದ. पु. ಮೇದೋಜ್ಜೀರಕ ರಸಾಶಯ.

लिबलिबी, स्त्री. ಬಂದೂಕದ ಕಮಾನು ಅಥವಾ ಸ್ಪ್ರಿಂಗ್.

लिबाब, पु. ಚತುರರು, ಜಾಣರು.

लिबास, पु. ಉಡಿಗೆ, ತೊಡಿಗೆ, ಉಡುಪು; ಪೋಷಾಕು.

लिबासी, वि. ವೇಷದ; ತೋರಿಕೆಯ.

लिडबा, पु. ಏಟು; ಗುದ್ದು; ತಪರಾಕು.

लिम, पु. ಸಾಮರಸ್ಯ; ಸೌಹಾರ್ದ; ಶಾಂತಿ. स्त्री. ನಿಂದೆ; ಅಪವಾದ; ಅಪದೂರು.

लियाक़त, स्त्री. ಅರ್ಹತೆ; ಯೋಗ್ಯತೆ; ದಕ್ಷತೆ, ನೈಪುಣ್ಯ; ಸಾಮರ್ಥ್ಯ.

लिये, अव्य. ಚತುರ್ಥಿ ವಿಭಕ್ತಿ ಪ್ರತ್ಯಯ, -ಗೆ, -ಗಾಗಿ, -ಓಸ್ಕರ. लाल लिये सफ़ेद = ಕೆಂಪಿನ ಮೇಲೆ ಬಿಳುಪು.

लिलयाना, लिलाना, अक्रि. ಹಂಬಲಿಸು, ಬಯಸು, ಹಾತೊರೆ. सक्रि. ನುಂಗಿಸು.

लिलाट, लिलार, स्त्री. ಹಣೆ, ನೊಸಲು; ಹಣೆ ಬರಹ, ವಿಧಿ.

लिलोही, वि. ಲೋಲುಪ, ಲೋಭಿ.

लिल्लाह, अव्य. ಅಲ್ಲಾವಿನ ಹೆಸರಿನಲ್ಲಿ, ದೇವರ ಹೆಸರಿನಲ್ಲಿ, ದೇವರಿಗಾಗಿ.

लिल्लाही, वि. ಅನಾಥ. अव्य. ಭಗವಂತನ ಹೆಸರಿನಲ್ಲಿ, ದೇವರ ಹೆಸರಿನಲ್ಲಿ

लिल्ली, वि. 'नीली' ಶಬ್ದದ ರೂಪಾಂತರ. लिल्ली घोड़ी = ವೇಷಗಾರರ ಕಾಗದದ ಕುದುರೆ. लिल्ली घोड़ी बनाना = ವಿಲಕ್ಷಣವಾಗಿ ಸಿಂಗರಿಸು.

लिवाना, सक्रि. ತೆಗೆದುಕೊಂಡು ಬರು; ಕರೆತರು; ತರಿಸು; ಒಯ್ಯು.

लिवाल, लिवैया, पु. ಕೊಳ್ಳುವವ, ಖರೀದಿದಾರ; ತೆಗೆದುಕೊಳ್ಳುವವ.

लिसना, अक्रि. ಕೆಸರಿನಲ್ಲಿ ಮೆತ್ತಿಕೊ; ಅಂಟಿಕೊ; ಮೆತ್ತಿಕೊ.

लिसोड़ा, पु. ಚೊಂಕೆಕಾಯಿ ಗಿಡ; ಚಳ್ಳೆ ಹಣ್ಣು.

लिहाज़, पु. ಲಕ್ಷ್ಯ; ನಿಗಾ, ಗಮನ; ಮನ್ನಣೆ, ಸಡ್ಡೆ; ದಾಕ್ಷಿಣ್ಯ; ಆದರ; ಮರ್ಯಾದೆ; ಮಾನ; ಲಜ್ಜೆ; ಬಾಂಧವ್ಯ; ಸಂಬಂಧ.

लिहाज़ा, क्रिवि. ಈ ಕಾರಣದಿಂದ; ಆದುದರಿಂದ.

लिहाड़ा, वि. ಕ್ಷುದ್ರ, ನೀಚ; ಅಧಮ, ಹೀನ; ಕೆಟ್ಟ. पु. ಹಣಕೊಡದಿರುವವ.

लिहाड़ी, स्त्री. ನಿಂದೆ; ಹೀನಾಯ.

लिहाफ़, पु. ಒಳಗೆ ಹತ್ತಿ ಕೊಟ್ಟು ಹೊಲಿದ ಹೊದಿಕೆ, ಹೊದಿಯುವ ರಜಾಯಿ; ಕವುದಿ, ಲೇಪು; ಮಂಚದ ಮೇಲೆ ಹೊದಿಸುವ ಬಟ್ಟೆ.

लीक, स्त्री. ಗೀರು, ಗೆರೆ; ಸಂದುಗೆರೆ, ಪರಿಖೆ; ಜಾಡು, ದಾರಿ; ಸಂಪ್ರದಾಯ, ರೂಢಿ; ಮರ್ಯಾದೆ, ಗಣನೆ, ಲಾಂಛನ. लीक पीटना = ಹಳೆಯ ಪದ್ಧತಿಗಳನ್ನೇ ಅನುಸರಿಸು.

लीख, पु. ಹೇನಿನ ತತ್ತಿ; ಸೀರು, ಈರು, ಈಬಿ.

लीचड़, वि. ಸೋಮಾರಿ; ಲೋಭಿ, ಜಿಪುಣ, ಜುಗ್ಗ.

लीची, स्त्री. ಒಂದು ಹಣ್ಣು.

लीझी, वि. ನೀರಸ, ಸ್ವಾರಸ್ಯವಿಲ್ಲದ. स्त्री. ಗಸಿ, ರಾಡಿ, ಬಗ್ಗಡ.

लीद, स्त्री. ಲಂಡ, ಲದ್ದಿ.

लीन, वि. ಹಿಡಿಯಲ್ಪಟ್ಟ; ಮುಳುಗಿದ, ಲೀನವಾದ.

लीनत, स्त्री. ನುಣುಪು; ಮೆಲ್ಪು.

लीना, पु. ಒಂದು ಬಗೆ ಖರ್ಜೂರ.

लीपड़ी, स्त्री. ಹರಕು ಟೋಪಿ; ಚಿಂದಿ.

लीपन, स्त्री. ಮೆತ್ತುವಿಕೆ, ಬಳಿಯುವಿಕೆ, ಮೆತ್ತನೆ; ಸಾರಣೆ; ಗಾರೆ, ಲೆಪ್ಪ.

लीपना, सक्रि. ಮೆತ್ತು, ಬಳಿ; ಸಾರಿಸು, ಸುಣ್ಣ ತೊಡೆಸು; ಲೆಪ್ಪ ಹಾಕು.

लीपा-पोती, स्त्री. ಗಾರೆ ಮೆತ್ತಿ ಸುಣ್ಣ ತೊಡೆಸುವಿಕೆ, ಗಿಲಾವು ಮಾಡುವಿಕೆ

लीबड़, पु. ಕಣ್ಣು ಪಿಚ್ಚು, ಪಿಸುರು, ಪಿಳ್ಳು, ಚಿಬುರು.

लीम, पु. ಶಾಂತಿ; ಸಾಮರಸ್ಯ.

लीमू, पु. ನಿಂಬೆ ಹಣ್ಣು.

लीर, स्त्री. ಬಟ್ಟೆಯ ಚೂರು, ಚಿಂದಿ

लील, पु. ನೀಲಿ ಗಿಡ. वि. ನೀಲವಾದ.

लीलना, सक्रि. ನುಂಗು, ಕಬಳಿಸು.

लीला, वि. ನೀಲಿ ಬಣ್ಣದ, ನೀಲ. स्त्री. ಲೀಲೆ, ಕ್ರೀಡೆ, ಆಟ; ದಶಾವತಾರದ ಆಟ, ಬಯಲಾಟ, ಯಕ್ಷಗಾನ.

लुंगरा, वि. ಉಪ್ಪಾದ, ಚೌಳು.

लुंगाड़ा, पु. ಪೋಲಿ, ಪುಂಡ.

लुंगी, स्त्री. ದಟ್ಟಿ, ಲುಂಗಿ; ಕೆಂಪು ಬಟ್ಟೆ.

लुंचन, पु. ಜಿಗುಟುವಿಕೆ; ಚಿವುಟುವಿಕೆ; ಕೀಳುವಿಕೆ.

लुंजा, वि. ಕುಂಟ, ಮುರವ, ಹೆಳವ.

लुंड, पु. ರುಂಡ, ಕಬಂಧ. लुंड मुंड = ಬೋಳಾದ; ಬೆತ್ತಲೆಯಾದ.

लुंडा, वि. ರೆಕ್ಕೆ ಉದುರಿ ಹೋದ, ರೆಕ್ಕೆಯಿಲ್ಲದ (ಪಕ್ಷಿ); ಬಾಲವಿಲ್ಲದ.

लुंढाना, सक्रि. ಚೆಲ್ಲು, ಸುರಿ.

लुंढियाना, सक्रि. ದಾರ ಹೊಸೆ.

लुंतक, पु. ಒಂದು ಬಗೆ ಕಹಿ ಸೊಪ್ಪು.

लुंदा, पु. ಉಂಡೆ, ಮುದ್ದೆ; ದಾರದ ಉಂಡೆ.

लुआठा, पु. लुआठी, स्त्री. ಉರಿವ ಕಟ್ಟಿಗೆ, ಕೊಳ್ಳಿ, ಕೊರಕೊಳ್ಳಿ.

लुआब, पु. ಅಂಟು, ಸರಿ, ಜಿಗಟು; ಉಗುಳು, ಲಾಲಾಜಲ.

लुआबदार, वि. ಜಿಗಟಾದ, ಅಂಟಾದ.

लुक, पु. ಉಲ್ಕಾಪಾತ; ಜ್ವಾಲೆ; ಹೊಳಪು, ಮೆರುಗು; ವಾರ್ನಿಷ್.

लुक़ंदरा, वि. ಪೋಲಿ, ಪುಂಡ.

लुकठ, पु. लुकठी, स्त्री. ಉರಿವ ಕಟ್ಟಿಗೆ, ಕೊಳ್ಳಿ.

लुकता, पु. ನರಿ.

लुकनत, स्त्री. ಉಗ್ಗುವಿಕೆ, ತೊದಲುವಿಕೆ.

लुकना, अक्रि. ಮರೆಯಾಗು, ಅಡಗಿಕೊಳ್ಳು; ಹುದುಗು, ಅವಿತುಕೊಳ್ಳು; ಸುಟ್ಟುಹೋಗು, ಸೀದುಹೋಗು.

लुक़मा, पु. ತುತ್ತು, ಕವಳ, ಗ್ರಾಸ.

लुकाठ, पु. ಅರಗಿನ ಬಳೆ, ಕಂಕಣ.

लुका-छिपी, लुकौवल, स्त्री. ಕಣ್ಣು ಮುಚ್ಚಿಯಾಟ, ಕಣ್ಣುಮುಚ್ಚಾಲಾಟ

लुकाना, सक्रि. ಹುದುಗಿಸು, ಬಚ್ಚಿಡು, ಮುಚ್ಚಿಡು. अक्रि. ಅವಿತುಕೊಳ್ಳು, ಹುದುಗು.

लुकेठा, पु. ಉರಿವ ಕಟ್ಟಿಗೆ, ಕೊಳ್ಳಿ.

लुग़ज़, पु. ಗೂಢೋಕ್ತಿ, ಒಗಟು.

लुगड़ा, पु. ಹೊದಿಕೆ, ಹಚ್ಚಡ.

लुग़त, पु. ಭಾಷೆ, ನುಡಿ. स्त्री. ಶಬ್ದ, ಪದ; ಶಬ್ದಮಂಜರಿ; ಶಬ್ದಕೋಶ, ನಿಘಂಟು.

लुगदा, पु. लुगदी, स्त्री. ಮುದ್ದೆ, ಉಂಡೆ, ತೆರಳೆ, ಪಿಂಡ.

लुगरा, पु. लुगरी, स्त्री. ವಸ್ತ್ರ, ಹೊದಿಕೆ, ಹಚ್ಚಡ.

लुगाई, स्त्री. ಹೆಂಗಸು, ಸ್ತ್ರೀ; ಹೆಂಡತಿ. लुगाई करना = ಕೂಡುವಳಿ ಮಾಡಿಕೊಳ್ಳು, ಉಡಿಕೆ ಮಾಡಿಕೊಳ್ಳು.

लुग़ात, स्त्री. ಶಬ್ದಗಳು; ಶಬ್ದಕೋಶ, ನಿಘಂಟು.

लुगी, स्त्री. ಹಳೆಯ ಬಟ್ಟೆ, ಲಂಗ ಅಥವಾ ಚೂರು.

लुगा, पु. ವಸ್ತ್ರ, ಹಚ್ಚಡ.

लुग़वी, वि. ಶಬ್ದದ, ಶಾಬ್ದಿಕ. लुग़वी मानी = ಶಬ್ದಾರ್ಥ.

लुच्च, वि. ಬರಿಯ, ಅಪ್ಪಟ; ಬೆತ್ತಲೆ.

लुचई, स्त्री. ತೆಳುವಾದ ಪೂರಿ.

लुचपन, लुच्चापन, पु. ನೀಚತನ, ಪುಂಡತನ.

लुचरा, पु. ಜೇಡನ ಹುಳು, ಜಾಡ.

लुच्चा, वि. ದುರಾಚಾರಿ, ಲುಚ್ಚ; ಪುಂಡ, ಪೋಕರಿ. लुच्चे लुंगाड़े = ಕಾಕಪೋಕರು, ಪುಂಡರು ಪೋಲಿಗಳು.

लुजलुजा, वि. ಮೆದುವಾದ, ಅಜಿಗಿಜಿ; ನಿರ್ಬಲ.

लुज्जा, पु. ನೀರಿನ ಆಧಿಕ್ಯ, ಪೂರ; ಆಳ; ಸಮುದ್ರದ ಮಧ್ಯ.

लुटंत, स्त्री. ಲೂಟಿ, ಕೊಳ್ಳೆ, ಸೂರೆ.

लुटकना, अक्रि. = लटकना.

लुटना, अक्रि. ಲೂಟಿಮಾಡಲ್ಪಡು, ಕೊಳ್ಳೆಹೋಗು; ಸೂರೆಯಾಗು; ಪೋಲಾಗು, ಹಾಳಾಗು.

लुटपुटा, वि. = लटपटा.

लुटवाना, सक्रि. ಲೂಟಿಮಾಡಿಸು, ಸೂರೆಹೋಗಿಸು.

लुटवैया, वि. ಲೂಟಿಗಾರ; ದುಂದುಗಾರ

लुभाई, स्त्री. ಲೂಟಿಮಾಡುವಿಕೆ, ಲೂಟಿ, ಸೂರೆ.

लुटाऊ, वि. ಸೂರೆ ಮಾಡುವವ, ದುಂದುಗಾರ, ದಂದರಹಾಳ.

लुटाना, सक्रि. ಲೂಟಿಮಾಡಿಸು, ಕೊಳ್ಳೆಹೊಡೆಸು, ಲುಟಾಯಿಸು; ಸೂರೆ ಮಾಡಿಸು; ದುಂದುವೆಚ್ಚ ಮಾಡಿಸು; ಹೊರಳಿಸು, ಹೊರಳಾಡಿಸು.

लुटिया, स्त्री. ಚಿಕ್ಕ ತಂಬಿಗೆ, ಚೆಂಬು. लुटिया डूबना = ಕೊಳ್ಳೆಹೋಗು; ನಷ್ಟವಾಗು.

लुटेरा, पु. ಸೂರೆಮಾಡುವವ, ಲೂಟಿಗಾರ, ಸುಲಿಗೆಕಾರ; ದುಂದುಗಾರ.

लुट्स, स्त्री. ಲೂಟಿ, ಸೂರೆ; ಧ್ವಂಸ.

लुठना, अक्रि. ಹೊರಳಾಡು.

लुड़का, लुरका, पु. ಕಿವಿಯ ಬಾವಲಿ.

लुड़बुड़ा, वि. ದುಡುಕಿನ; ಅವಿವೇಕದ; ಪರರ ಕೆಲಸದಲ್ಲಿ ತಲೆಹಾಕುವವ.

लुढ़कना, लुढ़ना, अक्रि. ಉರುಳು, ಹೊರಳು; ಉಂಟಾಡು, ಹೊರಳಾಡು; ಉರುಳಿ ನೆಲಕ್ಕೆ ಬೀಳು; ಚೆಲ್ಲು.

लुढ़काना, लुढ़ाना, सक्रि. ಉರುಳಿಸು; ಹೊರಳಿಸು, ಉರುಡಿಸು; ಚೆಲ್ಲು

लुढ़िया, स्त्री. ಉರುಳುಕಲ್ಲು, ಗುಂಡುಕಲ್ಲು.

लुढ़ियाना, सक्रि. ಅಂಚು ಮಡಿಚಿ ಹೊಲಿ, ತಿಬ್ಬಿ ಹೊಲಿ.

लुतरा, वि. ಸುಳ್ಳಾದ; ಸುಳ್ಳು ಹೇಳುವವ, ಸುಳ್ಳುಗಾರ; ಬಾಯಿಬಡುಕ, ಒದರು ಬಾಯಿಯವ. पु. ಮುಖಸ್ತುತಿ ಮಾಡುವವ; ಚಾಡಿಖೋರ, ಪಿಶುನ; ಕಿಡಿಗೇಡಿ, ತುಂಟ.

लुतरापन, पु. ಮುಖಸ್ತುತಿ; ಚಾಡಿಖೋರತನ, ಪೈಶುನ್ಯ; ಚಾಡಿ; ಕಿತಾಪತಿ; ದೋಸ, ಪಿತ್ತಲಾಟ.

लुत्ती, स्त्री. ಕೊಳ್ಳಿ, ಕೊರೆಕೊಳ್ಳಿ.

लुत्फ़, पु. ದಯೆ; ಕೃಪೆ, ಅನುಗ್ರಹ; ಅಂದ, ಸೊಗಸು; ಸ್ವಾರಸ್ಯ; ವಿನೋದ, ಮನೋರಂಜನೆ.

लुनना, सक्रि. ಕೊಯ್ಯು, ಕಟಾಯಿಸು.

लुनेरा, पु. ಕೊಯ್ಯುವವ, ಕೊಯ್ಗಾರ

लुपकी, स्त्री. ಭಯ; ದಿಗಿಲು, ಗಾಬರಿ.

लुपना, अक्रि. = लुकना.

लुपरी, स्त्री. ಗಂಜಿ, ಅಂಬಲಿ.

लुपलुप, पु. ಲೊಚಗುಟ್ಟುವಿಕೆ; ಎದೆಯ ಬಡಿತ, ಹೃದಯಸ್ಫುರಣ.

लुप्त, वि. ಮರೆಯಾದ; ಕಳೆದುಹೋದ; ಲುಪ್ತ.

लुबदी, स्त्री. "ಪೋಲ್ಟೀಸು", ಕೂಳುಸರಿ

लुब, लुब्ब, पु. ಸಾರ, ಸತ್ವ; ತತ್ವ. लुब-लुबाब = ಸಾರಾಂಶ.

लुब्ध, वि. ಲೋಭಿ; ಅತ್ಯಾಶೆಯುಳ್ಳ.

लुब्धक, पु. ಲೋಭಿ, ಕೃಪಣ.

लुभाना, अक्रि. ಮೆಚ್ಚು, ಆಶೆಪಡು; ಮೋಹಗೊಳ್ಳು, ಮರುಳಾಗು. सक्रि. ಮೆಚ್ಚಿಸು, ಆಶೆಹುಟ್ಟಿಸು; ಆಶೆ ತೋರಿಸು; ಮೆಚ್ಚುವಮಾಡು, ಮೋಹಗೊಳಿಸು, ಮರುಳುಮಾಡು.

लुभाव, पु. ವಿಲೋಭನ, ಮೋಹನೆ; ಮೆಚ್ಚು, ಆಕರ್ಷಣೆ.

लुभावना, वि. ಮೋಹಗೊಳಿಸುವ, ಮನಮೋಹಕ; ಆಕರ್ಷಕ.

लुरकी, स्त्री. ಕಿವಿಮುರು, ಒಂಟಿ.

लुरना, अक्रि. ಬಳುಕು, ಓಲಾಡು; ಧುಮುಕು

लुरी, स्त्री. ಕರುಹಾಕಿದ ಹಸು, ಕಂದಿ.

लुहंडा, पु. ಕಬ್ಬಿಣದ ಬಾನೆ.

लुहना, अक्रि. = लुभाना.

लुहब, पु. ಹೊಗೆಯಿಲ್ಲದ ಬೆಂಕಿಯ ಜ್ವಾಲೆ; ಉರಿ; ಕಾವು.

लुहरा, वि. ಕಿರಿಯ; ಸಣ್ಣ, ಚಿಕ್ಕ.

लुहांगी, पु. ಕಬ್ಬಿಣದ ದೊಣ್ಣೆ.

लुहान, वि. ರಕ್ತದ; ರಕ್ತಮಯವಾದ.

लुहार, पु. ಲೋಹಕಾರ, ಕಮ್ಮಾರ.

लुहारिन, स्त्री. ಕಮ್ಮಾರತಿ.

लुहारी, स्त्री. ಕಮ್ಮಾರತಿ; ಕಮ್ಮಾರನ ಕೆಲಸ.

लू, स्त्री. ಉಷ್ಣವಾಯು, ಬಿಸುಗಾಳಿ; ಝುಳ, ಧಗೆ.

लूक, स्त्री. ಅಗ್ನಿಯ ನಾಲಗೆ, ಜ್ವಾಲೆ; ಉರಿವ ಕಟ್ಟಿಗೆ, ಕೊರೆಕೊಳ್ಳಿ; ಉಷ್ಣವಾಯು, ಬಿಸುಗಾಳಿ; ಝುಳ; ಉಲ್ಕೆ

लूकट, वि. ಅರ್ಧ ಉರಿದ.

लूकटी, स्त्री. ಉರಿವ ಕಟ್ಟಿಗೆ, ಕೊರೆಕೊಳ್ಳಿ; ನರಿ.

लूकना, अक्रि. ಸುಡು, ಹುರಪಳಿಸು; ನೋಡು, ಈಕ್ಷಿಸು.

लूका, पु. लूकी, स्त्री. ಉರಿ, ಜ್ವಾಲೆ; ಕಿಡಿ; ಉರಿವ ಕಟ್ಟಿಗೆ, ಕೊಳ್ಳಿ.

लूगा, पु. ಬಟ್ಟೆ, ಹೊದಿಕೆ.

लूची, स्त्री. ತೆಳುವಾದ ಪೂರಿ.

लूट, स्त्री. ಕೊಳ್ಳೆ, ಕೋಳು, ಲೂಟಿ, ಸೂರೆ. लूटपाट, लूटमार, लूटखसोट, लूटालूट = ಸೂರೆ, ಲೂಟಾಲೂಟಿ, ದಳದುಳ.

लूटक, पु. ಸುಲಿಗೆಕಾರ, ಲೂಟಿಗಾರ.

लूटना, सक्रि. ಸುಲಕೊಳ್ಳು, ಕೊಳ್ಳೆ ಹೊಡೆ; ದೋಚಿಕೊಳ್ಳು, ಲೂಟಿಮಾಡು, ಸೂರೆಗೊಳ್ಳು; ಮೋಹಗೊಳಿಸು

लूत, स्त्री. ಜೇಡನ ಹುಳು, ಜಾಡ; ಒಂದು ಚರ್ಮ ರೋಗ.

लूता, स्त्री. ಜೇಡನ ಹುಳು, ಜಾಡ, ನೆಲದಿ; ಉರಿವ ಕಟ್ಟಿಗೆ, ಕೊಳ್ಳಿ.

लून, पु. ಉಪ್ಪು, ಲವಣ. वि. ಕತ್ತರಿಸಿದ; ಕಡಿದುಹಾಕಿದ; ಘಾಯಗೊಂಡ.

लूनना, सक्रि. ಕೊಯ್ಯು, ಕಟಾಯಿಸು

लूनिया, वि. ಉಪ್ಪಾದ, ಉಪ್ಪು ಬೆರತ; ಚವುಳು. पु. ಉಪ್ಪಲಿಗ, ತೊರೆಯ; ಬಚ್ಚಲೆಸೊಪ್ಪು, ನುಚ್ಚುಗೋಳಿಸೊಪ್ಪು.

लूनी, स्त्री. ಗೋಡೆಯಿಂದ ಉದುರುವ ಚವುಳುಮಣ್ಣು, ಉಪ್ಪುಮಣ್ಣು; ಬೆಣ್ಣೆ

लूमना, अक्रि. ಜೋಲಾಡು, ನೇತಾಡು.

लूला, वि. ಕೈಯಿಲ್ಲದವ, ಮೊಂಡ, ಹೆಳವ, ಕುಂಟ. लूला लंगड़ा = ಕುಂಟ ಮುರವ.

लूली, स्त्री. ನರ್ತಕಿ, ಪಾತರಗಿತ್ತಿ.

लूलू, पु. ಭೂತ; ಗೊಗ್ಗಯ್ಯ, ಗುಮ್ಮ, ಬೂಚಿ; ದಡ್ಡ, ಮೂಢ; ಹುಚ್ಚು; ಮುಕ್ತಾಫಲ, ಮುತ್ತು.

लूह, लूहर, स्त्री. = लू.

लेंड, स्त्री. ಮಲ, ವಿಷ್ಠೆ.

लेंडी, स्त्री. ನಾಯಿ; ಹೆಣದತ್ತ; ಪುಕ್ಕ, ಹೇಡಿ; ಬತ್ತಿಯಂತೆ ಬೀಳುವ ಮಲ; ಹಿಕ್ಕೆ, ವಿಷ್ಠೆ. लेंडी तर होना = ಹಿಗ್ಗು; ಹೆಮ್ಮೆಪಡು.

लेंडरा, पु. ಅಳ್ಳೆದೆಯುವ, ಪುಕ್ಕ; ತನ್ನ ಮೊದಲನೆಯ ಗಂಡನಿಗೆ ಹುಟ್ಟಿದ ಮಗ.

लेंहड़, लेंहड़ा, पु. ಮಂದೆ, ಹಿಂಡು.

ले, अव्य. ಮೊದಲುಗೊಂಡು. क्रिवि. ತನಕ, ವರೆಗೆ.

लेई, स्त्री. ಲೇಹ್ಯ, ಚಟ್ನಿ; ಅಂಬಲಿ, ಕೂಳು; ಗಂಜಿ, ಸರಿ; ಸುಣ್ಣದ ಗಚ್ಚು

लेऊ, वि. ತೆಗೆದುಕೊಳ್ಳುವವ.

लेकिन, अव्य. ಆದರೆ, ಪರಂತು.

लेख, पु. ಲೇಖ, ಲೇಖನ; ಬರಹ, ಬರವಣಿಗೆ; ಲೆಕ್ಕ, ಲೆಕ್ಕಾಚಾರ.

लेखक, पु. ಲೇಖಕ, ಬರಹಗಾರ.

लेखकी, स्त्री. ಲೇಖಕನ ಕೆಲಸ.

लेखना, सक्रि. ಬರೆ; ಕೆತ್ತು, ಕೊರೆ; ಲೆಕ್ಕಿಸು; ಎಣಿಸು; ವಿಚಾರಮಾಡು.

लेखनी, स्त्री. ಲೇಖನಿ. ಪೇನಾ.

लेखा, स्त्री. ರೇಖೆ, ಗೆರೆ; ಲೇಖೆ. पु. ಗಣನೆ, ಎಣಿಕೆ; ಲೆಕ್ಕ; ಲೆಕ್ಕಾಚಾರ; ದಸ್ತಾವೇಜು. लेखा जोखा = ಲೆಕ್ಕಾಚಾರ लेखा बही = ಲೆಕ್ಕದ ಪುಸ್ತಕ, ಖಾತೆಕಿರ್ದಿ. लेखा डेवढ़ करना = ಲೆಕ್ಕ ತೀರಿಸು, ಫೈಸಲುಮಾಡು.

लेज़म, स्त्री. ಕಸರತ್ತು ಮಾಡಲು ಬಳಸುವ ಗೆಜ್ಜೆ ಕಟ್ಟಿದ ಬಿಲ್ಲು, "ಲೇಜಿಂ".

लेजुर, लेजुरी, स्त्री. ಹಗ್ಗ, ಹುರಿ.

लेट, पु. ಗಾರೆ, ಗಚ್ಚು.

लेटना, अक्रि. ಮಲಗು, ಶಯನಿಸು; ಒರಗು; ಪವಡಿಸು.

लेटाना, सक्रि. ಮಲಗಿಸು, ಒರಗಿಸು.

लेढ़ी, स्त्री. ಒಂದು ಪಕ್ಷಿ

लेन, पु ತೆಗೆದುಕೊಳ್ಳುವಿಕೆ, ಪರಿಗ್ರಹ; ಬರಬೇಕಾದ ಹಣ, ಲೇಣೆ.

लेनदार, पु ಹಣ ಪಡೆಯಬೇಕಾದವ, ಲೇಣೆದಾರ.

लेन देन, पु. ಕೊಡುವುದು ತೆಗೆಯುವುದು, ಕೊಳ್ಳುಕೊಡೆ; ಆದಾನ ಪ್ರದಾನ, ಲೇಣೆ ದೇಣೆ, ಲೇವಾದೇವಿ; ವ್ಯಾಪಾರ.

लेनहार, वि. ತೆಗೆದುಕೊಳ್ಳುವವ.

लेना, सक्रि. ಕೊಳ್ಳು, ತೆಗೆದು-ಕೊಳ್ಳು; ತೆಗೆ, ಪರಿಗ್ರಹಿಸು; ಇಸುಕೊಳ್ಳು; ಪಡೆ, ಹೊಂದು; ಹಿಡಿ, ಎತ್ತು, ವಹಿಸು, ಸ್ವೀಕರಿಸು; ಧರಿಸು, ತಳೆ, (ರೂಪ)ತಾಳು. ले दे करना = ತಕರಾರು ಮಾಡು.

लेनिया-देनिया, स्त्री. ಭಾಗ್ಯ, ಅದೃಷ್ಟ; ವಿಧಿ.

लेप, पु. ಲೇಪ; ಮುಲಾಮು.

लेपना, सक्रि. ಸವರು; ಲೇಪಿಸು; ಬಳಿ.

ले-पालक, पु. ದತ್ತ ಪುತ್ರ; ಸಾಕುಮಗ.

लेरुआ, लेरू, पु. ಕರು, ಕಂದಿ.

लेला, पु. ಕುರಿಮರಿ.

लेव, पु. ಲೇಪ; ಒಲೆಯ ಮೇಲಿಡುವ ಪಾತ್ರೆಗಳ ಬುಡಕ್ಕೆ ಬಳಿಯುವ ಬೂದಿ; ಮಣ್ಣುಗಾರೆ, ಗಚ್ಚು. लेव चढ़ना = ಮೆತ್ತಲ್ಪಡು; ಕೊಬ್ಬು.

लेवा, पु. ಮಣ್ಣುಗಾರೆ, ಕಲಸುಮಣ್ಣು; ಗಚ್ಚು, ಗಾರೆ; ಲೇಪ; ಒಲೆಯ ಮೇಲಿಡುವ ಪಾತ್ರೆಗಳ ಬುಡಕ್ಕೆ ಬಳಿವ ಬೂದಿ वि. ತೆಗೆದುಕೊಳ್ಳುವ, ಎತ್ತುವವ. नाम लेवा = ಹೆಸರೆತ್ತುವವ; ವಂಶಸ್ಥ; ವಾರಸುದಾರ.

लेवादेई, स्त्री. ಕೊಳ್ಳುಕೊಡೆ, ಲೇಣೆ ದೇಣೆ, ಲೇವಾದೇವಿ.

लेवा-बेची, स्त्री. ಕ್ರಯ ವಿಕ್ರಯ, ಖರೀದಿ ಬಿಕರಿ, ಕೊಳ್ಳಾಟ ಮಾರಾಟ.

लेवार, पु. ಮಣ್ಣುಗಾರೆ.

लेवाल, लेवैया, पु. ಕೊಳ್ಳುವವ.

लेवास, पु. ಗಾರೆ, ಗಚ್ಚು.

लेस, पु. ಅಂಟು, ಸರಿ, ಜಿಗಟು; ಸಂಬಂಧ; ಲೇಪಿಸುವಿಕೆ, ಸಾರಣೆ; ಕಿರಿಯುತನ

लेसना, सक्रि. ಉರಿಸು, ಲೇಪಿಸು, ಬಳಿ; ಸಾರಣೆ ಮಾಡು, ಸಾರಿಸು; ಪೂಸು; ತೊಡಸು; ಹಚ್ಚು, ಚಿಗಟಾಯಿಸು; ಚಾಡಿ ಹೇಳು.

लेहन, पु. ನೆಕ್ಕುವಿಕೆ.

लेहना, पु. ಬಾಕಿಯ ಹಣ, ಲೇಣೆ, ಗೋಮಾಳ; ಮೇವು.

लेहरा, वि. ಕೊಳೆಯಾದ, ಕೊಳಕಾದ

लेहाज़, लेहाज़ा, क्रिवि. ಅದುದರಿಂದ, ಅತಃ.

लेही, स्त्री. ಸರಿ, ಕೂಳುಸರಿ; ಬಂಡವಾಳ, ಮೂಲಧನ.

लेहू, पु. ರಕ್ತ, ನೆತ್ತರು.

लैस, वि. ಸನ್ನದ್ಧವಾದ, ತಯಾರು, ಸಿದ್ಧ. पु. ಅಂಬು, ಬಾಣ; ಹುಳಿರಸ, ಕಾಡಿ; ಅಂಚು, ಗೋಟು; ಜರತಾರಿ, ಸರಿಗೆ, ಜರಿ, ನಿರಾಜಿ; ಕಲಾಬತ್ತು.

लौं, अव्य. ವರೆಗೆ, ಗಂಟ, ತನಕ.

लौंदा, पु. ಮುದ್ದೆ, ತೆರಳೆ, ಉಂಡೆ.

लो, अव्य. ಇಗೋ! ಇದಿಗೋ!

लोई, स्त्री. ರೊಟ್ಟಿಯ ಹಿಟ್ಟಿನ ಬಿಲ್ಲೆ, ಕಣಕದ ಬಿಲ್ಲೆ; ಕಳೆ, ಕಾಂತಿ; ಮಾನ; ನಯವಾದ ಕಂಬಳಿ, ಬುರಣೀಸು, ಬೂರ್ನಿಸು.

लोकंदा, पु. ಹೆಣ್ಣನ್ನು ಅತ್ತೆ ಮನೆಗೆ ಕಳುಹಿಸುವಾಗ ಜೊತೆಯಲ್ಲಿ ಒಬ್ಬ ದಾಸಿಯನ್ನು ಕಳುಹಿಸುವಿಕೆ.

लोकंदी, स्त्री. ಅತ್ತೆ ಮನೆಗೆ ಹೋಗುವ ಹೆಣ್ಣಿನ ಜೊತೆಯಲ್ಲಿ ಹೋಗುವ ದಾಸಿ, ತೊತ್ತು.

लोक, पु. ಲೋಕ, ಜಗತ್ತು; ಜನ.

लोकन, पु. ನೋಟ, ದೃಷ್ಟಿ.

लोकना, सक्रि. ಹಿಡಿ, ಬಾತ್ತಿ ಹಿಡಿ, ಪುಟಹಿಡಿ, "ಕ್ಯಾಚ್" ಹಿಡಿ; ಹಾರಿಸಿಕೊ

लोकनिया, वि. ಕಾಣುವ, ದೃಶ್ಯ, ಪ್ರಕಟ

लोकनी, स्त्री. ದಾಸಿ, ಸೇವಕಿ, ಚೇಟಿ

लोकाचार, पु. ಜನಗಳ ಪದ್ಧತಿ, ಲೋಕಾಚಾರ.

लोकाठ, पु. ಒಂದು ಬಗೆ ಹಣ್ಣು.

लोकाना, सक्रि. ಹಾರಿಸು, ಬಿಸಾಡು.

लोकोक्ति, स्त्री. ನಾಡಗಾದೆ, ಗಾದೆ, ಲೋಕೋಕ್ತಿ.

लोखड़ी, स्त्री. ನರಿ, ಬಳ್ಳು.

लोख़ार, पु. ಯಂತ್ರ, ಆಯುಧ, ಕೈದು; ಉಪಕರಣ; ಕಬ್ಬಿಣದ ಸಾಮಾನು.

लोग, पु. ಮನುಷ್ಯ, ಜನ, ಮಂದಿ, ಲೋಗ. लोग बाग = ದೊಡ್ಡವರು ಚಿಕ್ಕವರು, ಎಲ್ಲರೂ. लोग हंसाई = ಜನಗಳ ಅಪಹಾಸ್ಯ, ಅವಮಾನ. लोग लुगाई = ಗಂಡಸರು ಹೆಂಗಸರು.

लोगाई, स्त्री. ಸ್ತ್ರೀ; ಹೆಂಡತಿ, ಪತ್ನಿ.

लोग़वी, वि. = लुग़वी.

लोच, स्त्री. ಬಾಗುವಿಕೆ, ಬಳುಕುವಿಕೆ; ಕೋಮಲತೆ, ಮೃದು; ಇಂಪು, ಮಾಧುರ್ಯ; ಹಿಟ್ಟು, ಪಿಷ್ಟ; ಅಂಟು, ಸರಿ; ಜಿಗಟು. पु. ಅಭಿಲಾಷೆ.

लोचदार, वि. ಹಿಟ್ಟುಳ್ಳ; ಹಿಟ್ಟಿನ;

ಮೃದುವಾದ, ಕೋಮಲ; ಪಸಂದಾದ

लोचन, पु. ಕಣ್ಣು, ನೇತ್ರ.

लोचना, सक्रि. ಹೊಳಗಿಸು, ಬೆಳಗಿಸು; ರುಚಿ ಹುಟ್ಟಿಸು, ಆಶೆ ಹುಟ್ಟಿಸು. अक्रि. ಆಶೆಪಡು, ಹಂಬಲಿಸು, ಹಾತೊರೆ; ಶೋಭಿಸು, ರಾರಾಜಿಸು.

लोचक,लोचा, पु. ರಾಗಿಮುದ್ದೆ, ತೆರಳೆ; ಮಾಂಸದ ತುಂಡು.

लोट, पु. ಇಳಕಲು, ಇಳಿಜಾರು स्त्री. ಎದೆಗೂ ಕಿಬ್ಬೊಟ್ಟೆಗೂ ಮಧ್ಯೆ ಮೂರು ಮಡಿಕೆಗಳಾಗಿರುವ ಚರ್ಮ, ತ್ರಿವಳಿ; ಹುಂಡಿ ಕಾಗದ, ನೋಟು, ಲೋಟು; ಉರುಳುವಿಕೆ, ಹೊರಳಾಡುವಿಕೆ. लोट पोट = ಹೊರಳಾಡುವ; ಮುಗ್ಧನಾದ, ಮರುಳಾದ.

लोटन, पु ಹೊರಳಾಡುವಿಕೆ; ಹೊರಳಾಡುವ ಪಾರಿವಾಳ, ಗಿರೇಬಾಜ; ಪೊದೆ, ಪೊದರು; ನೊರಜುಗಲ್ಲು.

लोटना, अक्रि. ಹುರುಳು, ಹೊರಳಾಡು; ಬೋರಲ ಬೀಳು; ಚಡಪಡಿಸು, ಒದ್ದಾಡು; ಮುಲುಗು; ಮುಗ್ಧನಾಗು, ಬೆರಗಾಗು

लोटपाटा, पु. ವಧೂವರರಿಬ್ಬರೂ ಹಸೆಯಲ್ಲಿ ಸ್ಥಾನ ಬದಲಾಯಿಸುವಿಕೆ; ಬದಲಾವಣೆ, ಮಾರ್ಪಾಟು.

लोटा, पु. ತಂಬಿಗೆ, ಚೆಂಬು; ಗಡಿಗೆ, ಸಣ್ಣ ಮಡಕೆ. लोटा उठाना=ಒಬ್ಬರ ಸೇವೆ ಶುಶ್ರೂಷೆ ಮಾಡು.

लोटाना, सक्रि. ಉರುಳಿಸು, ಹೊರಳಿಸು; ಕೆಡವು

लोटिया, स्त्री. ಚಿಕ್ಕ ತಂಬಿಗೆ.

लोड़ना, अक्रि. ಅಗತ್ಯ ಬೀಳು.

लोढ़, स्त्री. ಆಶೆ, ಬಯಕೆ, ಹಂಬಲ.

लोढ़ना, पु. ಉದುರುಕಾಳು, ಹಕ್ಕಲು. सक्रि. ಆಯು, ಹೆಕ್ಕು, ಆರಿಸು; ಹತ್ತಿ ಬೀಜ ಬಿಡಿಸು, ಎಕ್ಕು; ಅಂಚು ಮಾಡಿಸಿ ಹೊಲಿ, ತಿದ್ದಿ ಹೊಲಿ; ಬಯಸು.

लोढ़ा, पु. **लोढ़िया**, स्त्री. ಅಸೆಯ ಕಲ್ಲಿನ ಮೇಲೆ ಅರೆಯುವ ಗುಂಡು ಕಲ್ಲು, ಉರುಳು ಕಲ್ಲು.

लोढ़ा-ढाल, वि. ಧ್ವಂಸವಾದ, ಚಟ್ಟಾದ

लोढ़ी, स्त्री. ಬಟ್ಟೆಯ ಅಂಚು; ಹತ್ತಿ ಬೀಜ ಬಿಡಿಸುವ ರಾಟೆ, ಕಿರಕು ರಾಟೆ.

लोथ, स्त्री. ಹೆಣ, ಶವ; ಕಳೇಬರ.

लोथड़ा,पु **लोथड़ी**,स्त्री. ಮಾಂಸಪಿಂಡ

लोथा, पु. ಚೀಲ, ಗೋಣಿ ಚೀಲ.

लोथी, स्त्री. ದೊಣ್ಣೆ, ಲಾಠಿ, ದಡಿ.

लोधी, लोधा, पु. ಅರಂಬದ ಕೆಲಸ ಮಾಡುವ ಪರಾಣರ ಒಂದು ಜಾತಿ; ಒಕ್ಕಲಿಗ, ಬೇಸಾಯಗಾರ.

लोन, पु. ಲವಣ, ಉಪ್ಪು.

लोना, वि. ಉಪ್ಪಾದ; ಉಪ್ಪುನೆಲ; ಲಾವಣ್ಯವುಳ್ಳ. पु. ಮಣ್ಣುಗೋಡೆಯಿಂದ ಮಣ್ಣುದುರುವಿಕೆ; ಉದುರಿದ ಮಣ್ಣು; ಚವುಳುಮಣ್ಣು; ನುಚ್ಚುಗೋಳಿ ಸೊಪ್ಪು. स्त्री. ಮಾಟಗಾತಿ. सक्रि: ಕೊಯ್ಯು, ಕಟಾಯಿಸು.

लोनाई, लोना-पन, पु. ಉಪ್ಪುತನ; ಲಾವಣ್ಯ.

लोनार, पु. ಉಪ್ಪಿನಕಟ್ಟೆ, ಉಪ್ಪುಮಡಿ

लोनिया, पु. ಉಪ್ಪಲಿಗ, ತೊರೆಯ.

लोनी, स्त्री. ಬಚ್ಚಲೆ ಸೊಪ್ಪು, ನುಚ್ಚುಗೋಳಿ ಸೊಪ್ಪು. वि. ಉಪ್ಪಾದ. लोनी मिट्टी=ಉಪ್ಪುಮಣ್ಣು, ಚೌಳು ಮಣ್ಣು.

लोप, पु. ಲೋಪ, ಮರೆಯಾಗುವಿಕೆ.

लोपड़ी, स्त्री. ಮುದ್ದೆ; "ಪೋಲ್ಪೀಸು".

लोवा, स्त्री. ನರಿ, ಬಳ್ಳು.

लोबान, पु. ಧೂಪ, ಕುಂದುರು, ಲೋಬಾನ, ಸೀಮೆ ಸಾಂಬ್ರಾಣಿ.

लोबिया, पु. ಒಂದು ಬಗೆ ಅವರೆಕಾಯಿ.

लोभ, पु. ಅತ್ಯಾಶೆ, ಲೋಭ.

लोभना, अक्रि. ಲೋಭಗೊಳ್ಳು, ಮರುಳಾಗು.

लोभी, वि. ಅತ್ಯಾಸೆಪಡುವವ, ಲೋಭಿ.

लोम, पु. ಮೈಗೂದಲು, ರೋಮ; ಬೊಚ್ಚು, ತುಪ್ಪಳ; ಕಾವಲುಗಾರ, ಪಹರೆಯುವ; ನರಿ.

लोमड़ी, स्त्री. ಕುಣಿ ನರಿ, ಕಂಕನರಿ.

लोर, वि. ಡೋಲಾಯಮಾನ; ಓಲಾಡುವ; ಚಂಚಲ. पु. ಕಂಬನಿ, ಬಿಂದು; ಲೋಲಕು; ಚಳತುಂಬು.

लोरी, स्त्री. ಜೋಗುಳ, ತಾರಮ್ಮಯ್ಯನ ಪದ, ತೊಟ್ಟಿಲ ತ್ರುವ್ವಿ, ಲಾಲಿ. लोरी देना=ಜೋಗುಳ ಹಾಡು.

लोलक, पु. ಲೋಲಕು, ಜುಮುಕಿ, ಚಳತುಂಬು.

लोलकी, स्त्री. ಕಿವಿಯ ಆಲೆ, ತಮ್ಮೆ; ಸಣ್ಣ ಲೋಲಕು.

लोलना, सक्रि. ಅಲ್ಲಾಡಿಸು, ತೂಗಾಡಿಸು

लोवा, पु. ನರಿ, ಕುಣಿನರಿ.

लोहंडा, पु. लोहंडी, स्त्री. ಕಬ್ಬಿಣದ ಬಾನೆ; ಕಬ್ಬಿಣದ ಹಂಡೆ.

लोह, पु. ಲೋಹ; ಕಬ್ಬಿಣ.

लोहज, पु. ಕಂಚು.

लोहसार, पु. ಉಕ್ಕು; ಉಕ್ಕಿನ ಸರಪಣಿ.

लोहा, पु. ಲೋಹ, ಕಬ್ಬಿಣ; ಅಸ್ತ್ರಶಸ್ತ್ರ. लोहा बनाना=ಕತ್ತಿ ಹಿಡಿದು ಯುದ್ಧಮಾಡು. लोहा मानना=ಕತ್ತಿಗೆ ಬಾಗು, ಅಧೀನನಾಗು. लोहा लोटना=ಗುರಿ ತಪ್ಪಿಹೋಗು; ನಿರಾಶನಾಗು; ಅದೃಷ್ಟಹೀನನಾಗು. लोहे का चना=ಕಬ್ಬಿಣದ ಕಡಲೆ; ಬಹಳ ಕಠಿಣವಾದ ವಿಷಯ.

लोहाना, अक्रि. ಕಬ್ಬಿಣದಂತೆ ಆಗು.

लोहार, पु. ಲೋಹಕಾರ, ಕಮ್ಮಾರ.

लोहारनी, **लोहारिन**, स्त्री. ಕಮ್ಮಾರತಿ

लोहारी, स्त्री. ಕಮ್ಮಾರತಿ; ಕಮ್ಮಾರನ ಕೆಲಸ.

लोहांग, **लोहा-लट्ठ**, पु. ಕಬ್ಬಿಣದ ತುದಿಯುಳ್ಳ ಲಾಠಿ; ಕಬ್ಬಿಣದ ಕೋಲು

लोहिया, पु. ಕಬ್ಬಿಣ; ಕಬ್ಬಿಣದ ಸಾಮಾನು ಮಾರುವವ; ಕೆಂಚ ಬಣ್ಣದ ಎತ್ತು. वि. ಕಬ್ಬಿಣದ.

लोही, स्त्री. ತುತ್ತು, ಕವಳ; ರೊಟ್ಟಿ; ರೇಷ್ಮೆ ಬಟ್ಟೆ; ಅರುಣೋದಯ, ನಸುಕು; ಕೆಂಪು ಬಣ್ಣ; ಪ್ರಕಾಶ; ಕಾಂತಿ; ಮಾನ, ಗೌರವ.

लोहू, पु.=लहू.

लौं, अव्य. ತನಕ, ವರೆಗೆ.

लौंकना, अक्रि. ಹೊಳೆ, ಮಿಂಚು;

ಗೋಚರಿಸು, ಕಂಡುಬರು.

लौंग, पु. ಲವಂಗ, ಕೀಲು; ಕಿವಿ ಮುರು; ಮೂಗುತಿ.

लौंगड़ा, पु. ಲವಂಗದಿಂದ ತಯಾರಾದ ಔಷಧ.

लौंगदानी, स्त्री. ಲವಂಗದಾನಿ.

लौंजी, स्त्री. ಮಾವಿನಕಾಯಿ ಉಪ್ಪಿನಕಾಯಿ.

लौंडा, पु. ಹುಡುಗ, ಪೋರ, ಹೈದ; ಕೆಲಸ ಮಾಡುವ ಹುಡುಗ; ಆಳುಮಗ.

लौंडिया, लौंडी, स्त्री. ಹುಡುಗಿ, ಪೋರಿ; ದಾಸಿ, ಲವುಂಡಿ.

लौंडेबाज़, पु. ಬಾಲಕರನ್ನು ಮೈಥುನ ಮಾಡುವವ, ಗುದ ಮೈಥುನ ಮಾಡುವವ, ಪುಂಮೈಥುನ ಮಾಡುವವ.

लौंद, पु. ಅಧಿಕಮಾಸ, ಮಲಮಾಸ. लौंद का वर्ष=ಅಧಿಕ ದಿನದ ವರ್ಷ, ೩೬೬ ದಿನಗಳ ವರ್ಷ.

लौ, स्त्री. ಉರಿಯ ನಾಲಗೆ, ದೀಪದ ಶಿಖೆ; ಚಿತ್ತವೃತ್ತಿ; ಇಚ್ಛೆ, ಪ್ರೀತಿ; ಕಿವಿಯ ಅಲೆ, ತಮ್ಮೆ. लौ लगाना =ಚಿತ್ತೈಸು, ಚಿತ್ತವಿಡು.

लौआ, पु. ಸೋರೆಕಾಯಿ.

लौकना, अक्रि. ಗೋಚರಿಸು; ತೋರು; ಹೊಳೆ. सक्रि. ನೋಡು; ಬುತ್ತಿ ಹಿಡಿ.

लौका, पु. ಪ್ರಕಾಶ; ಸೋರೆಕಾಯಿ

लौकी, स्त्री. ಸೋರೆಕಾಯಿ, ಅಲಾಬು.

लौज़, पु. ಬಾದಾಮಿ; ಒಂದು ಮಿಠಾಯಿ.

लौट, स्त्री. ಹಿಂತಿರುಗುವಿಕೆ, ವಾಪಸು, ಪರತ. लौट पौट=ತಿರುಗು ಮುರುಗು.

लौटना, अक्रि. ತಿರುಗು; ಹಿಂತಿರುಗು; ಪರತ ಬರು; ವಾಪಸು ಬರು.

लौटाना, लौटालना, सक्रि. ತಿರುಗಿಸು, ಹಿಂತಿರುಗಿಸು; ವಾಪಸು ಮಾಡು, ಪರತ ಮಾಡು; ಪಲ್ಲಟಿಸು.

लौठा, पु. ಯುವಕ, ತರುಣ; ಒರಟ.

लौन, पु. ಬಣ್ಣ; ರೂಪ; ಜಾತಿ, ವಿಧ.

लौना, सक्रि. ಕೊಯ್ಯು, ಕಟಾಯಿಸು.

लौनी, स्त्री. ಕೊಯಿಲು, ಕಟಾವು; ಕೊಯ್ಯಲು ಕೊಡುವ ಕೂಲಿ.

लौम. पु. ದೋಷಾರೋಪಣೆ, ಆಪಾದನೆ.

लौल, स्त्री. ಕಿವಿಯ ಅಲೆ, ತಮ್ಮೆ.

लौह, पु. ಲೋಹ, ಕಬ್ಬಿಣ; ಹಲಗೆ, ಮೇಜು.

लौहार, पु. ಪರವಶತೆ, ಪಾರವಶ್ಯ.

ल्यारी, स्त्री. ತೋಳ.

व

वंक, वि. ವಕ್ರ, ಡೊಂಕು.

वंचक, वि. ವಂಚಿಸುವವ, ಮೋಸಗಾರ, ವಂಚಕ.

वंचना, स्त्री. ವಂಚನೆ, ಮೋಸ. सक्रि. ವಂಚಿಸು; ಓದು, ಪಠಿಸು.

वंडा, वि. ಮೊಂಡ, ಮೋಟು.

वंदन, पु **वंदना**, स्त्री. ವಂದನೆ; ಸ್ತುತಿ.

वंदनीय, वि. ವಂದಿಸಲು ಯೋಗ್ಯವಾದ

वंदित, वि. ವಂದಿಸಿದ, ವಂದಿತ.

वंदीजन, पु. ಸ್ತುತಿಪಾಠಕ, ವಂದಿ

ಮಾಗಧ, ಹೊಗಳು ಭಟ್ಟ.
वंश, पु. ವಂಶ; ಬಿದಿರು; ಕೊಳಲು.
वंशज, पु. ವಂಶೀಯರು; ಸಂತಾನ
वंशी, स्त्री. ಪಿಳ್ಳಂಗೋವಿ, ಕೊಳಲು
वंशीधर, पु. ಕೊಳಲಿನವ; ಶ್ರೀಕೃಷ್ಣ.
वंशीय, वि. ವಂಶದಲ್ಲಿ ಹುಟ್ಟಿದ, ವಂಶಸ್ಥ, ವಂಶೀಯ.
व, अव्य. ಮತ್ತು, ಹಾಗೂ.
वक़अत, स्त्री. ತೂಕ; ಮಾನ, ಗೌರವ; ಶಕ್ತಿ.
वकालत, स्त्री. ರಾಯಭಾರ, ದೌತ್ಯ; ನಿಯೋಗ; ಬೇರೊಬ್ಬನ ಪರವಾಗಿ ವಾದಿಸುವಿಕೆ, ಪಕ್ಷಗಟ್ಟಿ ಮಾತಾಡುವಿಕೆ, ವಕೀಲಿ, ವಕಾಲತ್ತು; ವಕೀಲರ (ಲಾಯರ) ಕೆಲಸ ಅಥವಾ ಕಸಬು, ವಕೀಲವೃತ್ತಿ, ಲಾಯರಿ.
वकालतन्, क्रिवि. ನಿಯೋಗದಿಂದ, ನಿಯೋಗಿಸಲ್ಪಟ್ಟು.
वकालतनामा, पु. ವಕಾಲತ್ತು ಕೊಡುವ ಅಧಿಕಾರಪತ್ರ, ವಕಾಲತ್ತುನಾಮೆ
वकील, पु. ದೂತ, ರಾಯಭಾರಿ; ನಿಯೋಗಿ, ಪ್ರತಿನಿಧಿ; ಪಕ್ಷಗಟ್ಟಿ ಮಾತಾಡುವವ, ಪಕ್ಷವಾದ ಮಾಡುವವ; ಪರಾರ್ಥವಾದಿ; ವಕೀಲ, ಲಾಯರು.
वकीली, स्त्री. ವಕೀಲನ ಕೆಲಸ; ವಕಾಲತ್ತು, ವಕೀಲಿ.
वक़ूफ़, पु. ಜ್ಞಾನ, ಬುದ್ಧಿ; ವಿವೇಕ; ತಿಳಿವಳಿಕೆ; ದಕ್ಷತೆ वि. ದಡ್ಡ; ಅವಿವೇಕಿ.
वक़्त, पु. ಸಮಯ, ಕಾಲ; ಹೊತ್ತು; ವೇಳೆ; ಸಂದರ್ಭ; ಸಾವಕಾಶ. वक़्त पर=ಹೊತ್ತಿಗೆ ಸರಿಯಾಗಿ, ಸಕಾಲಕ್ಕೆ.
वक़्तन् फ़-वक़्तन्, क्रिवि. ಸಮಯ ಸಮಯಕ್ಕೂ, ಆಗಾಗ್ಗೆ
वक्ता, पु. ಭಾಷಣಕಾರ, ಉಪನ್ಯಾಸಕ; ವಾಗ್ಮಿ.
वक्तृता, स्त्री वक्तृत्व, पु. ವಾಕ್ಪಟುತ್ವ; ಭಾಷಣ, ಪ್ರಸಂಗ, ಉಪನ್ಯಾಸ.
वक़्फ़, पु. ಧರ್ಮಾರ್ಥವಾಗಿ ಕೊಟ್ಟ ಹಣ, ಧರ್ಮಸೊತ್ತು; ದಾನ ಬರ ಕೊಟ್ಟ ಆಸ್ತಿ, ದತ್ತಿ.
वक़्फ़नामा, पु. ದಾನಶಾಸನ.
वक़्फ़ा, पु. ತಡ, ತಾಮಸ, ವಿಳಂಬ; ಅಂತರ, ಸಾವಕಾಶ.
वक़्र पु. ಮಾನ, ಮರ್ಯಾದೆ; ಗೌರವ.
वग़ैरह, अव्य. ಇತ್ಯಾದಿ, ಮುಂತಾದ, ಪ್ರಭೃತಿ, ವಗೈರೆ.
वचन, पु. ವಚನ; ಮಾತು; ಭಾಷೆ.
वज़न, पु. ಭಾರ, ಹೊರೆ, ವಜ್ಜೆ, ತೂಕ; ಶಬ್ದದ ಮಾತ್ರೆ; ಛಂದಸ್ಸು
वज़नी, वि. ಭಾರವಾದ, ತೂಕವುಳ್ಳ.
वजह, स्त्री. ಕಾರಣ, ಹೇತು; ನಿಮಿತ್ತ; ಬಗೆ, ರೀತಿ; ವೇತನ, ಸಂಬಳ.
वजा, पु. ನೋವು, ಬೇನೆ; ರೋಗ.
वज़ा, स्त्री. ರಚನೆ, ಮೈಕಟ್ಟು, ರೂಪ; ತರಹ, ರೀತಿ; ಸ್ಥಿತಿ, ಸ್ಥಿತಿಗತಿ; ನಡತೆ, ವರ್ತನೆ; ತಳ್ಳುಪಡಿ, ವಜಾ; ವಟ್ಟ, ಕಳೆತ
वज़ादार, वि. ರೂಪವಂತ, ಚೆಲುವ; ಠೀವಿಯುವ, ಷೋಕಿನವ.
वज़ादारी, स्त्री. ರೀತಿ; ತರಹ; ಠೀವಿ; ಷೋಕಿ; ಸೊಬಗು.

वज़ारत, स्त्री. ಮಂತ್ರಿತನ; ದಿವಾನಗಿರಿ.

वजाहत, स्त्री. ಸ್ಥಾನಮಾನ; ಅಂತಸ್ತು; ಸೌಂದರ್ಯ, ಕಾಂತಿ.

वज़ीफ़ा, पु. ವಿದ್ಯಾರ್ಥಿ ವೇತನ, "ಸ್ಕಾಲರ್‌ಷಿಪ್"; ಮಾಸಾಶನ, ಪಿಂಚಣಿ; ಮಂತ್ರಪಠನ, ಜಪ.

वज़ीर, पु. ಮಂತ್ರಿ, ಅಮಾತ್ಯ; ದಿವಾನ, ವಜೀರ; ಚದುರಂಗದ ರಾಣಿ.

वज़ीरी, स्त्री. ಮಂತ್ರಿಯ ಕೆಲಸ, ಮಂತ್ರಿತನ, ದಿವಾನಗಿರಿ. पु. ಒಂದು ಜಾತಿ ಕುದುರೆ.

वजीह, वि. ಗೌರವಸ್ಥ, ಸಂಭಾವಿತ; ಸುಂದರ, ಚೆಲುವಾದ.

वज़ू, पु. ಪ್ರಕ್ಷಾಲನ, ಶೌಚ.

वजूद, पु. ಕಾರ್ಯಸಿದ್ಧಿ; ದೇಹ, ಮೈ; ಅಸ್ತಿತ್ವ, ಇರುವಿಕೆ, ಇರವು. बा-वजूद = ಇದ್ದರೂ, ಆದಾಗ್ಯೂ.

वज्द, पु. ತನ್ಮಯಸ್ಥಿತಿ, ಪರವಶತೆ; ಮೈಮರೆಯುವಿಕೆ, ಪಾರವಶ್ಯ

वज्र, वि. ಗಟ್ಟಿಯಾದ; ಕಠಿಣವಾದ; ಕಠೋರ. पु. ವಜ್ರಾಯುಧ; ಸಿಡಿಲು; ವಜ್ರ.

वज्रपात, पु. ಸಿಡಿಲಿನ ಬಡಿತ.

वट, पु. ಆಲದ ಮರ

वटी, स्त्री. ದಾರ; ಸರ; ಮಣಿ.

वतन, पु. ಜನ್ಮಭೂಮಿ, ತಾಯಿನಾಡು; ಸ್ವದೇಶ; ವಾಸಸ್ಥಾನ.

वतनी, वि. ದೇಶೀಯ, ಸ್ವದೇಶದ, ನಾಡಿನ.

वत्स, पु. ವತ್ಸ, ಕಂದ, ಕರ.

वदन, पु. ಮುಖ; ಬಾಯಿ.

वदाना, सक्रि. ಒದರು, ಬಡಬಡಿಸು.

वदीयत, स्त्री. ಅಮಾನತ್ತು, ನ್ಯಾಸ.

वध, पु. ಕೊಲ್ಲುವಿಕೆ, ವಧೆ.

वधू, स्त्री. ಸೊಸೆ; ಪತ್ನಿ.

वन, पु. ಕಾಡು, ವನ, ಅಡವಿ.

वनवासी, पु. ಕಾಡಿನಲ್ಲಿ ವಾಸಮಾಡುವವ; ತಪಸ್ವಿ.

वनस्पति, स्त्री. ಮರ, ಗಿಡ, ವನಸ್ಪತಿ.

वनिता, स्त्री. ಸ್ತ್ರೀ, ಮಹಿಳೆ; ಹೆಂಡತಿ.

वनैला, वन्य, वि. ಕಾಡಿನ; ಹಿಂಸ್ರಕ.

वफ़ा, पु. ಮಾತನ್ನು ನೆರವೇರಿಸುವಿಕೆ; ಕರ್ತವ್ಯಪಾಲನೆ; ಪ್ರಾಮಾಣಿಕತೆ, ಯಥಾರ್ಥತೆ; ಸಜ್ಜನತೆ; ಪರ್ಯಾಪ್ತಿ.

वफ़ाई, स्त्री. ಪ್ರಾಮಾಣಿಕತೆ; ಸ್ವಾಮಿನಿಷ್ಠೆ; ಯಥಾರ್ಥತೆ.

वफ़ात, स्त्री. ಮೃತ್ಯು, ಸಾವು.

वफ़ादार, वि. ಕರ್ತವ್ಯನಿಷ್ಠ; ಪ್ರಾಮಾಣಿಕ; ಸ್ವಾಮಿನಿಷ್ಠ.

वफ़ादारी, स्त्री. ಕರ್ತವ್ಯನಿಷ್ಠೆ, ಆರ್ಜವ.

वबा, स्त्री. ಸಾಂಕ್ರಾಮಿಕ ರೋಗ, ಸೋಕುರೋಗ; ಮಾರಿ, "ಪ್ಲೇಗು".

वबाल, पु. ಭಾರ, ಹೊರೆ; ವಿಪತ್ತು, ಅನರ್ಥ; ಕಾಟ, ಪೀಡೆ; ದೇವರ ಕಾಟ.

वमन, पु. ವಮನ, ವಾಂತಿ.

वयः, वयस्, स्त्री. ವಯಸ್ಸು.

वयस्क, वि. ವಯಸ್ಸಾದವ, ವಯಸ್ಕ.

वर, पु. ವರ; ವರದಾನ. वि. ಶ್ರೇಷ್ಠ.

वरक़, पु. ಎಲೆ, ಪತ್ರ; ಹಾಳೆ; ಪುಟ, ಪೇಜು, ಪಾನು; ಬಂಗಾರದ ವರಕು,

ಠೀಕು.

वरग़लाना, सक्रि. ಮರುಳು ಮಾಡು; ಪುಸಲಾಯಿಸು; ಠಕ್ಕಿಸು.

वरज़िश, स्त्री. ರೂಢಿ. ಬಳಕೆ, ವಾಡಿಕೆ; ಅಭ್ಯಾಸ; ವ್ಯಾಯಾಮ; ಕಸರತ್ತು.

वरदान, पु. ವರ, ವರಪ್ರಸಾದ.

वरदी, वि. ಗುಲಾಬಿಯ; ಗುಲಾಬಿ ಬಣ್ಣದ. स्त्री. ಸಿಪಾಯಿಗಳ ಉಡುಪು; ಒಂದೇ ಬಗೆಯ ಪೋಷಾಕು, ಜತೆ ಗಟ್ಟಿನ ವಸ್ತ್ರ, ಸಮವಸ್ತ್ರ, ದುಸ್ತು.

वरना, अव्य. ಇಲ್ಲವೆ, ಇಲ್ಲದಿದ್ದರೆ, ಅನ್ಯಥಾ.

वरम, पु. ಉಬ್ಬು, ಬಾವು, ಬೀಗು. वरम जिगर = ಪ್ಲೀಹರೋಗ.

वरल, पु. ಕಣಜದ ಹುಳು.

वरे, क्रिवि. ಈ ಕಡೆ, ಈಚೆ.

वर्ग, पु. ವರ್ಗ, ತರಗತಿ; ಕೋಮು.

वर्ण, पु. ವರ್ಣ, ಬಣ್ಣ.

वर्णन, पु. ಹೇಳುವಿಕೆ, ವರ್ಣನೆ.

वर्णित, वि. ವರ್ಣಿಸಲ್ಪಟ್ಟ, ವರ್ಣಿತ.

वर्द, पु. ಗುಲಾಬಿ ಹೂ, ರೋಜಾ.

वर्म, पु. ಕವಚ; ಬಾವು, ಬೀಗು.

वर्ष, पु. ವರ್ಷ, ಸಂವತ್ಸರ, ಸಾಲು. वर्षों = ವರ್ಷಗಟ್ಟಲೆ, ವರ್ಷಾಂತರ.

वर्षगांठ, स्त्री. ಜಯಂತಿ, ವರ್ಧಂತಿ.

वलवला, पु. ಗದ್ದಲ, ಸಂದಣಿ; ಜೋರು, ಆವೇಶ; ಉತ್ಸಾಹ, ಹುಮ್ಮಸ್ಸು

वला, क्रिवि. ಹತ್ತಿರ, ಬಳಿ.

वलायत, स्त्री. ಸ್ವಾಧೀನ; ಅಧಿಕಾರ; ಆಳಿಕೆ, ಶಾಸನ; ಸಂರಕ್ಷಣೆ, ಪಾಲನೆ; ದೇಶ, ನಾಡು; ಪರದೇಶ, ಸೀಮೆ; ಸ್ನೇಹ; ಭವಿಷ್ಯ ಹೇಳುವಿಕೆ, ಕಣಿ.

वली, पु. ಒಡೆಯ, ಸ್ವಾಮಿ; ಅರಸ; ಶಾಸಕ; ಸಂರಕ್ಷಕ; ಸಾಧು, ಸಂತ; ಸ್ನೇಹಿತ; ಸಹಾಯಕ.

वलेकिन, क्रिवि. = लेकिन.

वल्द, पु. ಮಗ, ಪುತ್ರ. जवाहर वल्द मोतीलाल = ಜವಹರ್, ಮೋತೀಲಾಲರ ಪುತ್ರ.

वल्दियत, स्त्री. ತಂದೆಯ ಹೆಸರು; ಪ್ರವರ; ಕುಟುಂಬ; ಕುಲಗೋತ್ರ.

वल्लाह, अव्य. ದೇವರಾಣೆ; ಶಹಬಾಸ್ !

वश, पु. ವಶ, ಅಧಿಕಾರ; ಹತೋಟಿ, ಅಂಕೆ

वसअत, स्त्री. ವಿಸ್ತಾರ; ಹರವು; ವಿಸ್ತೀರ್ಣ, ಕ್ಷೇತ್ರಫಲ; ಸಾಮರ್ಥ್ಯ, ಶಕ್ತಿ, ಅಳವು; ಅವಕಾಶ, ಇಂಬು, ಆಸ್ಪದ.

वसत, पु. ಮಧ್ಯ, ನಡು. वि. ನಡುವಣ, ಮಧ್ಯದ; ನಡುತರದ; ಒಳ್ಳೆಯ; ಉತ್ತಮ; ಸರಿಯಾದ; ಸಂಪನ್ನ.

वसति, स्त्री. ಮನೆ; ವಾಸಸ್ಥಾನ; ವಸತಿ.

वसवास, पु. ವಿಲೋಭನ; ಮತಿಭ್ರಮಣ; ಸಂದೇಹ, ಶಂಕೆ.

वसवासी, वि. ಸಂದೇಹದ; ಶಂಕಾಸ್ಪದ; ಸಂದೇಹಪಡುವ, ನಸನಸೆ.

वसा, पु. ವಸೆ, ನೆಣ, ಚರಬಿ.

वसीक़ा, पु. ಒಬ್ಬನು ತನ್ನ ವಾರಸುದಾರರಿಗೆ ಬಡ್ಡಿ ಸಲ್ಲಲೆಂದು ಸರಕಾರದಲ್ಲ ಠೇವಣಿಯಿಟ್ಟ ಹಣ; ಈ ಹಣದ ಮೇಲಿನ ಬಡ್ಡಿ; ಸಾಲಪತ್ರ, ಬಾಂಡು.

वसीठ, पु. ದೂತ, ಹರಿಕಾರ.

वसीयत, स्त्री. ಅಪ್ಪಣೆ, ಆಜ್ಞೆ; ವಶ, ಸುಪರ್ದು; ಸಾಯುವವನ ಆಸ್ತಿಯ ವಿಲೆವಾರಿ, ಮರಣಶಾಸನ, ಉಯಿಲು

वसीयतनामा, पु. ಮೃತಿಪತ್ರ, ಮರಣಶಾಸನ, ಉಯಿಲು, ವೀಲು.

वसीला, पु. ಸಂಬಂಧ, ಆಧಾರ; ಆಶ್ರಯ, ನೆರವು; ಹೇತು; ಸಾಧನ

वसूल, वि. ದೊರೆತ, ಪ್ರಾಪ್ತ; ಪಾವತಿಯಾದ. पु. ಪಾವತಿ, ಸಂದಾಯ; ವಸೂಲು.

वसूलना, सक्रि. ವಸೂಲಿ ಮಾಡು; ಶೇಖರಿಸು, ಸಂಗ್ರಹಿಸು.

वसूलयाबी, स्त्री. ವಸೂಲು ಮಾಡುವಿಕೆ; ವಸೂಲಿ.

वसूली, स्त्री. ವಸೊಲಿ, ಪಾವತಿ; ವಸೂಲಾಗತಕ್ಕ ಹಣ, ವಸೂಲಾತಿ.

वस्त, पु. = वसत.

वस्तु, स्त्री. ವಸ್ತು, ಪದಾರ್ಥ.

वस्फ़, पु. ಪ್ರಶಂಸೆ, ಹೊಗಳಿಕೆ; ವಿವರಣೆ; ವೈಶಿಷ್ಟ್ಯ, ಗುಣ.

वस्फ़ी, वि. ವರ್ಣನಾತ್ಮಕ; ಗುಣಾತ್ಮಕ.

वस्मा, पु. ನರೆಗೂದಲನ್ನು ಕಪ್ಪಗೆ ಮಾಡುವ ಔಷಧ, ಕೇಶಕಲ್ಪ; ಲೇಪ, ತೈಲ; ಚಿನ್ನದ ವರಕು ಒತ್ತಿದ ಅಚ್ಚಿನ ಬಟ್ಟೆ.

वस्ल, पु. ಸೇರಿಕೆ, ಮಿಲನ; ಭೇಟಿ, ಸಂದರ್ಶನ; ಸಂಧಿ, ಸಮಾಗಮ.

वस्ली, वि. ಸೇರಿಸುವ, ಸಂಬಂಧಿಸುವ. पु. ರಟ್ಟಿನ ಕಾಗದ, ರಟ್ಟು; ಅಡಿವತ್ತಳೆ.

वह, सर्व. ಅವನು, ಅವಳು, ಅದು.

वहदत, स्त्री. ಏಕ, ಏಕತ್ವ.

वहम, पु. ಊಹಾಪೋಹ, ಕಲ್ಪನೆ; ಭ್ರಾಂತಿಭಾವ, ಮಿಥ್ಯಾಭ್ರಮೆ; ಶಂಕೆ, ಸಂಶಯ.

वहमी, वि. ಸಂದೇಹಪಡುವವ, ಸಂಶಯಾತ್ಮ; ಭ್ರಮೆಯ, ಭ್ರಾಂತಿಯ.

वहल, पु. ಕೆಸರು, ಬದಿ, ಬುರುದೆ.

वहला, पु. ಧಾಳಿ, ಹಲ್ಲಾ, ಆಕ್ರಮಣ.

वहश, पु. ಕಾಡುಮೃಗ.

वहशत, स्त्री. ಮರುಭೂಮಿ; ನಿರ್ಜನ ಸ್ಥಾನ; ಏಕಾಂತ; ಒರಟುತನ; ಅನಾಗರಿಕತೆ, ಅಸಭ್ಯತೆ; ಹುಚ್ಚು; ಆತುರ, ಕಾತರತೆ; ಭಯ, ಗಿಲಿ, ಗಾಬರಿ.

वहशी, वि. ಒರಟಾದ, ಜಾಂಗಲ; ಅಸಭ್ಯ, ಅಶಿಷ್ಟ; ಭಯಂಕರ; ಭಯಭೀತ.

वहाँ, क्रिवि. ಅಲ್ಲಿ.

वहिब, वि. ಉದಾರಿ, ಧಾರಾಳಿ.

वहीं, क्रिवि. ಅಲ್ಲೇ, ಅಲ್ಲಿಯೇ.

वही, सर्व. ಅವನೇ, ಅವಳೇ, ಅದೇ. स्त्री. ಭಗವತ್ಪ್ರೇರಣೆ; ಆಕಾಶವಾಣಿ, ದೇವವಾಣಿ.

वहीद, वि. ಸಾಟಿಯಿಲ್ಲದ, ಅನುಪಮ.

वां, क्रिवि. ಅಲ್ಲಿ

वा, अव्य. ಅಥವಾ, ಇಲ್ಲವೆ, ಯಾ.

वाइज़, पु. ಧರ್ಮಗುರು; ಉಪದೇಶಕ.

वाक़ई, वि. ಯಥಾರ್ಥ, ವಾಸ್ತವ, ನಿಜ; ಸರಿ. अव्य. ಯಥಾರ್ಥವಾಗಿ, ನಿಜವಾಗಿ.

वाक़या, वाक़िया, पु. ಒದಗಿದ ಪ್ರಸಂಗ, ಸಂಭವ; ಘಟನೆ, ಸಂಗತಿ.

वाक़ा, वि. ಸಂಭವಿಸುವ, ಆಗುವ; ಇರುವ, ಸ್ಥಿತ.

वाक़िफ़, वि. ಪರಿಚಿತ; ತಿಳಿದವ; ಅಭಿಜ್ಞ.

वाक़िफ़कार, वि. ಅರಿತವ, ಅನುಭವಸ್ಥ

वाक़िफ़कारी, स्त्री. ತಿಳಿವಳಿಕೆ; ಅನುಭವ

वाक़िफ़ियत, स्त्री. ತಿಳಿವಳಿಕೆ, ಪರಿಚಯ; ಅನುಭವ.

वाक़िफ़ी, स्त्री. ಮೊಗವರಿಕೆ, ಪರಿಚಯ.

वाक्, पु. ಮಾತು; ನುಡಿ; ವಾಕ್ಯ.

वाक्-चातुरी, स्त्री. ವಾಕ್ಚಾತುರ್ಯ.

वाचक, वि. ಹೇಳುವ, ಸೂಚಿಸುವ. पु. ಹೇಳುವವ; ಓದುವವ.

वाचा, स्त्री. ಮಾತು; ಶಪಥ.

वाचाल, वि. ಮಾತುಗಾರ, ವಾಚಾಲ.

वाज़, पु. ಧರ್ಮೋಪದೇಶ; ಶಿಕ್ಷಣ; ಉಪನ್ಯಾಸ.

वाजिब, वि. ಉಚಿತ, ತಕ್ಕ, ಯೋಗ್ಯ; ಅವಶ್ಯಕ. पु. ಸಂಬಳ, ವೇತನ.

वाजिबी, वि. ಅಗತ್ಯವಾದ, ಆವಶ್ಯಕ; ತಕ್ಕ; ಯೋಗ್ಯ. स्त्री. ಆವಶ್ಯಕತೆ, ಅಗತ್ಯ; ಸಂಬಳ, ವೇತನ.

वाजिह, वि. ಪ್ರಕಟವಾದ, ವಿಶದ; ವಿದಿತ.

वाटिका, स्त्री. ತೋಟ, ಉದ್ಯಾನವನ.

वाटिया, स्त्री. ಕೊಯಿಲು ಕತ್ತಿ, ಕುಡುಗೋಲು.

वाटी, स्त्री. ಮನೆ; ಉದ್ಯಾನ.

वाद, पु. ವಾದ, ಚರ್ಚೆ.

वादा, पु. ವಚನ, ಮಾತು; ಪ್ರತಿಜ್ಞೆ, ವಾಗ್ದಾನ; ಒಪ್ಪಂದ, ಕರಾರು; ಗಡು, ವಾಯಿದೆ, ಅವಧಿ; ಸಾರಾಯಿ, ಸೇಂದಿ

वादी, पु. ಫಿರ್ಯಾದಿ, ವಾದಿ. स्त्री. ಕಣಿವೆ, ಘಟ್ಟ; ತಪ್ಪಲು, ಕಿಬ್ಬಿ; ಮರುಭೂಮಿ; ನದಿಯ ಪಾತ್ರ.

वानर, पु. ಕೋತಿ, ಕಪಿ.

वानरी, स्त्री. ಹೆಣ್ಣುಕಪಿ.

वापस, क्रिवि. ಹಿಂದೆ, ತರುವಾಯ, ಅನಂತರ; ತಿರುಗಿ, ಪುನಃ; ವಾಪಸು, ಪರತ. वापस आना = ತಿರುಗಿ ಬರು; ವಾಪಸು ಬರು, ಪರತ ಬರು.

वापसी, वि. ತಿರುಗಿ ಬರುವ, ವಾಪಸು ಬರುವ, ಪರತ ಆದ; ಹಿಂತಿರುಗಿ ಬರುವ. स्त्री. ಹಿಂತಿರುಗುವಿಕೆ, ವಾಪಸು, ಪರತ.

वाम, पु. ಸಾಲ, ಕಡ; ಸಾಲ ಕೊಡುವಿಕೆ; ಸಾಲ ತೆಗೆಯುವಿಕೆ; ಹಣದ ಲೇವಾದೇವಿ; ಬಣ್ಣ, ರಂಗು.

वार, पु. ಹೊಡೆತ, ಏಟು; ಧಕ್ಕೆ; ಕಡಿತ; ಘಾಯ; ಆಕ್ರಮಣ, ಧಾಳಿ. स्त्री. ತಡ; ಹೊತ್ತು; ಪುರಸತ್ತು. क्रिवि. ನದಿಯ ಈ ದಡದಲ್ಲಿ; ಇತ್ತ.

वारदात, स्त्री. ದುರ್ಘಟನೆ, ಅವಘಡ, ಅಪಘಾತ; ಗಲಭೆ, ಕಲಹ, ದೊಂಬಿ.

वारना, सक्रि. ಸುತ್ತು, ಗೇರಾಯಿಸು, ಬಳಸು; ಅರ್ಪಣೆ ಮಾಡು, ಅರ್ಪಿಸು. पु. ಅರ್ಪಣೆ, ಬಲಿ; ಆತ್ಮಾರ್ಪಣೆ.

वार-फेर, वारा-फेरा, पु. **वारी-फेरी**, स्त्री. ಬಲಿ, ಆತ್ಮಾರ್ಪಣೆ; ಇಳಿ ತೆಗೆಯುವಿಕೆ, ನಿವಾಳಿ.

वारा, पु. ಉಳಿತಾಯ, ಮಿತವ್ಯಯ; ಅಗ್ಗ; ಲಾಭ, ಆದಾಯ; ಅನುಗ್ರಹ; ಅದೃಷ್ಟ, ಭಾಗ್ಯ. वि. ಮಿತವ್ಯಯದ;

ಅಗ್ಗವಾದ, ಸೋವಿ. वारा न्यारा = ಇತ್ಯರ್ಥ, ನಿಷ್ಕರ್ಷೆ, ಫೈಸಲು.

वारिद, पु. ಉಪಸ್ಥಿತಿ, ಹಾಜರಿ; ಬರುವಿಕೆ, ಆಗಮನ, ಬರವು वारिद सारिद = ಬರುವವರು ಹೋಗುವವರು; ಅತಿಥಿ; ಅಭ್ಯಾಗತ; ಯಾತ್ರಿಕ.

वारिस, पु. ಉತ್ತರಾಧಿಕಾರಿ, ವಾರಸುದಾರ; ಯಜಮಾನ, ಒಡೆಯ; ಸಂರಕ್ಷಕ

वारिसी, स्त्री. ವಾರಸುದಾರನಿಗೆ ಬಂದ ಸೊತ್ತು; ಕಾಣಾಚಿ.

वाला, प्रत्य. ಉಳ್ಳ, ಇರುವ, -ಕಾರ, -ಗಾರ. ಉದಾ:- पैसेवाला, पासवाला, जानेवाला, मैसूरवाला.

वालिद, पु. ತಂದೆ. ತಾಯಿ वालिदैन= ಇಬ್ಬರು ಪಿತೃಗಳು, ತಂದೆತಾಯಿಗಳು.

वालिदा, स्त्री. ತಾಯಿ, ಮಾತೆ.

वावैला, पु. ಅಳು; ಕೂಗಾಟ, ಗದ್ದಲ

वासिक़, वि. ದೃಢವಾದ, ಗಟ್ಟಿಯಾದ; ಅಗತ್ಯವಾದ, ಕಡ್ಡಾಯವಾದ; ನಿಶ್ಚಯವಾದ, ಖಾತ್ರಿಯಾದ.

वासिल, वि. ಕೂಡಿದ ಸೇರಿದ; ದೊರಕುವ; ವಸೂಲಾದ; ಪಾವತಿಯಾದ. वासिल बाक़ी = ವಸೂಲು ಬಾಕಿ.

वास्ता, पु. ಮಧ್ಯಸ್ಥಗಾರ; ದಲ್ಲಾಳಿ, ತರಗುಗಾರ; ಸಾಧನ, ಮುಖಾಂತರ; ಬಾಂಧವ್ಯ, ನೆಂಟತನ; ಸಲುವು, ಹೇತು; ಸಂಬಂಧ, ಪರಸ್ಪರ ವ್ಯವಹಾರ; ಸಂಪರ್ಕ; ಗೊಡವೆ.

वास्ती, स्त्री. ಲಾಳದ ಕಡ್ಡಿ; ಲೆಕ್ಕಣಿಕೆ.

वास्ते, क्रिवि. ಸಲುವಾಗಿ, ದೆಸೆಯಿಂದ, ಬಗ್ಗೆ.

वाह, अव्य. ಭಲಾ! ಶಹಬಾಸ್! ವಹವಾ! ಪೊತುರೆ! ಭಾಪುರೆ!; ಛೀ! ಥತ್!; ಹಾ, ಹಾಯ್! वाह वाह करना = ಹೊಗಳು, ಕೊಂಡಾಡು.

वाहक, पु. ಹೊರುವವ; ಒಯ್ಯುವವ; ಹೊರೆಯಾಳು.

वाहन, पु. ಸವಾರಿಯ ಬಂಡಿ; ವಾಹನ, ಯಾನ.

वाहवाही, स्त्री. ಹೊಗಳಿಕೆ, ಕೊಂಡಾಟ, ಶಾಬಾಸಗಿರಿ.

वाहिद, वि. ಏಕ, ಒಂಟಿ पु. ಈಶ್ವರ; ಒಂದು; ಏಕವಚನ (ವ್ಯಾಕರಣ).

वाहियात, वि. ವ್ಯರ್ಥವಾದ, ನಿರರ್ಥಕ; ಕೆಟ್ಟ, ತುಚ್ಛ.

वाही, वि. ಸೋಮಾರಿ; ಮುರಿದ; ಶಿಥಿಲವಾದ; ನಿರ್ಬಲ; ಕೆಲಸಕ್ಕೆ ಬಾರದ, ನಿಷ್ಪ್ರಯೋಜಕ; ದಡ್ಡ; ಲುಚ್ಚ, ಪುಂಡ; ಹುಚ್ಚ.

वाही-तबाही, वि. ಅಶಿಷ್ಟ, ಒರಟ; ದುಷ್ಟ; ಪುಂಡ, ಪೋಲಿ; ಗೊತ್ತುಗುರಿಯಿಲ್ಲದ, ಅಸಂಬದ್ಧ; ಹಾಳಾದ. स्त्री. ಅಸಂಬದ್ಧಮಾತು, ಬೈಗಳು; ಬಂಡು ಮಾತು.

विकट, वि. ದೊಡ್ಡ, ಭಾರಿ; ಭಯಂಕರ.

विकराल, वि. ಭಯಂಕರ, ಭೀಕರ, ಕರಾಳ.

विकल, वि. ಕುಂದುಳ್ಳ; ಗಡಿಬಿಡಿಯಾದ; ಅಶಾಂತ; ಖಿನ್ನ, ವ್ಯಥಿತ.

विकलाना, अक्रि. ವ್ಯಾಕುಲಪಡು.

विकसना, अक्रि. ವಿಕಸಿಸು, ಅರಳು.

विकसित, वि. ಅರಳಿದ, ವಿಕಸಿಸಿದ.

विक्रय, पु. ಬಿಕರಿ, ಮಾರಾಟ.

विक्रयी, विक्रेता, पु. ಮಾರುವವ, ಮಾರಾಟಗಾರ. पुस्तक विक्रेता = ಪುಸ್ತಕ ವ್ಯಾಪಾರಿ.

विख्यात, वि. ಖ್ಯಾತಿಹೊಂದಿದ.

विख्याति, स्त्री. ಖ್ಯಾತಿ, ಪ್ರಸಿದ್ಧಿ.

विगलित, वि. ಬಿದ್ದುಹೋದ; ಚ್ಯುತ; ಕೆಟ್ಟುಹೋದ.

विघ्न, पु. ವಿಘ್ನ, ಅಡಚಣೆ.

विचरना, अक्रि. ಓಡಾಡು, ವಿಹರಿಸು.

विचलना, अक्रि. ಪದಚ್ಯುತನಾಗು; ತಪ್ಪು; ಗಾಬರಿಗೊಳ್ಳು.

विचलाना, सक्रि. ಗಾಬರಿಪಡಿಸು.

विचार, पु. ವಿಚಾರ; ವಿಚಾರಣೆ; ಯೋಚನೆ.

विचारना, सक्रि. ವಿಚಾರ ಮಾಡು; ವಿಚಾರಣೆ ಮಾಡು; ವಿಚಾರಿಸು.

विचारशील, वि. ವಿಚಾರಪರ.

विछोह, स्त्री. ವಿಯೋಗ, ಅಗಲಿಕೆ.

विजय, पु. (स्त्री.) ವಿಜಯ, ಜಯ, ಗೆಲುವು

विजयी, वि. ಜಯಶಾಲಿ.

विजातीय, वि. ಬೇರೆ ಜಾತಿಯ.

विज़ारत, स्त्री. = वज़ारत.

विज्ञप्ति, स्त्री. ವಿಜ್ಞಾಪನೆ, ಅರಿಕೆ; ಪ್ರಕಟಣೆ, ನಿರೂಪ.

विज्ञान, पु. ವಿಜ್ಞಾನ, ಶಾಸ್ತ್ರ.

विज्ञापन, पु. ಪ್ರಕಟಣೆ; ಜಾಹಿರಾತು.

विडंबना, स्त्री. ಅಣಕಿಸುವಿಕೆ; ಗೇಲಿ; ಪರಿಹಾಸ.

विड़रना, अक्रि. ಚದರು, ಓಡು.

विड़राना, सक्रि. ಚದರಿಸು; ಎರಚು, ಈಡಾಡು; ಹಾಳುಮಾಡು; ಓಡಿಸು.

वितान, पु. ಮೇಲ್ಕಟ್ಟು, ಉಲ್ಲಡ.

विथकना, अक्रि. ಆಯಾಸಗೊಳ್ಳು.

विदरना, अक्रि ಒಡೆ, ಬಿರಿ; ಸೀಳು.

विदा, स्त्री. ಹೊರಡುವಿಕೆ, ಪ್ರಸ್ಥಾನ; ಬೀಳ್ಕೊಳ್ಳುವಿಕೆ, ಹೊರಡಲು - ಅನುಮತಿ. विदा होना = ಬೀಳ್ಕೊಳ್ಳು; ಹೊರಡು, ಅಗಲು.

विदाई, स्त्री. ಅಗಲುವಿಕೆ; ಹೊರಡಲು ಅಪ್ಪಣೆ, ಅನುಮತಿ; ಬೀಳ್ಕೊಳ್ಳುವಿಕೆ, ಸೆಲವು; ಬೀಳ್ಕೊಳ್ಳುವಾಗ ಕೊಡುವ ಹಣ. वि. ಬೀಳ್ಕೊಳ್ಳುವ.

विदारना, सक्रि. ಒಡೆ, ಸೀಳು, ಸಿಗಿ.

विदित, वि. ತಿಳಿದ, ವಿದಿತ.

विदूषना, सक्रि. ದೂಷಿಸು, ದೂರು.

विदेश, पु. ಬೇರೆ ದೇಶ, ವಿದೇಶ, ಪರದೇಶ.

विदेशी, वि. ಪರದೇಶದ, ವಿದೇಶಿ.

विद्यमान, वि. ಇರುವ; ಉಪಸ್ಥಿತ, ಹಾಜರಿರುವ. विद्यमान होना = ಇರು; ಹಾಜರಿರು.

विद्यमानता, स्त्री. ಇರುವಿಕೆ, ಹಾಜರಿ, ಉಪಸ್ಥಿತಿ.

विद्यार्थिनी, स्त्री. विद्यार्थी, पु. ವಿದ್ಯೆ ಕಲಿಯುವವರು; ಶಿಷ್ಯರು.

विद्रोह, पु. ಎದುರು ಬೀಳುವಿಕೆ,

ವಿದ್ರೋಹ, ದಂಗೆ, ಬಂಡಾಯ.
विद्वत्ता, स्त्री. ಪಾಂಡಿತ್ಯ. ವಿದ್ವತ್ತು.
विद्वेष, पु. ದ್ವೇಷ, ಹಗೆತನ, ಶತ್ರುತ್ವ.
विधना, सक्रि. ಹೊಂದು, ಪಡೆ. स्त्री. ಪ್ರಾಪ್ತಿ, ಭಾಗ್ಯ.
विधवा, स्त्री. ವಿಧವೆ, ವಿತಂತು.
विधवापन, पु ವೈಧವ್ಯ.
विधान, पु. ಏರ್ಪಾಟು; ಪದ್ಧತಿ, ರೀತಿ.
विधि, स्त्री. ಏರ್ಪಾಟು, ವ್ಯವಸ್ಥೆ; ವಿಧಿ; ವಿಧಾನ, ಕ್ರಮ; ರೀತಿ, ಬಗೆ, ತರಹ.
विन, सर्व = उन.
विनती, स्त्री. ವಿನಂತಿ, ಪ್ರಾರ್ಥನೆ.
विनय, पु. ನಯ; ವಿನಯ; ನಮ್ರತೆ.
विना, अव्य. ಹೊರತು, ಸಿವಾಯಿ, ಬಿಟ್ಟು, ವಿನಾ.
विनाश, पु. ನಾಶ, ಹಾಳು.
विनीत, वि. ವಿನಯವುಳ್ಳ, ನಮ್ರ.
विनोद, पु. ಆಟ; ವಿನೋದ; ಹಾಸ್ಯ.
विनोदी, वि. ವಿನೋದಗಾರ.
विपत्ति, स्त्री. ಕಷ್ಟ, ವಿಪತ್ತು; ಸಂಕಟ.
विपदा, स्त्री. ವಿಪತ್ತು, ಅನಾಹುತ.
विपरीत, वि. ವಿರುದ್ಧ; ತಲೆ ಕೆಳಗಾದ; ವಿಪರೀತ.
विफल, वि. ನಿಷ್ಫಲ.
विभक्त, वि. ವಿಂಗಡಿಸಿದ; ಹಂಚಿದ
विभक्ति, स्त्री. ವಿಂಗಡನೆ; ಹಂಚಿಕೆ; ನಾಮಪದಗಳ ವಿಭಕ್ತಿ.
विभाग, पु. ಪಾಲು, ವಿಭಾಗ; ಇಲಾಖೆ
विभेदना, सक्रि. ಭೇದಿಸು, ಚುಚ್ಚು.
विमर्श, पु. ಪರೀಕ್ಷೆ; ವಿಮರ್ಶೆ.
विमाता, स्त्री. ಮಲತಾಯಿ, ವಿಮಾತೆ
विमान, पु. ವಿಮಾನ, ಆಕಾಶಯಾನ.
विमुक्त, वि. ಬಿಡುಗಡೆ ಹೊಂದಿದ, ವಿಮುಕ್ತ.
विमुक्ति, स्त्री. ಬಿಡುಗಡೆ, ವಿಮುಕ್ತಿ.
विमुख, वि. ಪರಾಙ್ಮುಖ; ವಿಮುಖ
विमुखता, स्त्री. ಪರಾಙ್ಮುಖತೆ.
विमूढ़, वि. ವಿವೇಕಶೂನ್ಯವಾದ
विमोचन, पु. ವಿಮೋಚನೆ, ಮುಕ್ತಿ.
वियोग, पु. ಅಗಲಿಕೆ, ವಿಯೋಗ.
वियोगी, वि. ಅಗಲಿದವ, ವಿರಹಿ.
विरमना, अक्रि ರಮಿಸು; ವಿಶ್ರಮಿಸು; ತಂಗು.
विरह, पु. ಅಗಲಿಕೆ, ವಿಯೋಗ, ವಿರಹ
विराजना, अक्रि. ಶೋಭಿಸು, ರಾರಾಜಿಸು, ಸೊಗಯಿಸು; ಮಂಡಿಸು; ವಿರಾಜಿಸು.
विराजमान, वि. ಶೋಭಿಸುವ, ವಿರಾಜಿಸುವ. विराजमान होना = ವಿರಾಜಿಸು, ರಾರಾಜಿಸು, ಮಂಡಿಸು.
विराम, पु. ವಿರಾಮ, ವಿಶ್ರಾಂತಿ.
विरासत, स्त्री. ಪಿತ್ರಾರ್ಜಿತ ಸೊತ್ತು, ಕಾಣಾಚಿ.
विरोध, पु. ವಿರೋಧ, ಎದುರು.
विलंब, पु. ತಡ. ವಿಳಂಬ, ವಿಲಂಬನ.
विलंबना, अक्रि. ವಿಳಂಬಮಾಡು, ತಡಮಾಡು; ನೇತಾಡು
विलादत, स्त्री. ಪ್ರಸವ, ಹೆರಿಗೆ.
विलाप, पु. ವಿಲಾಪ, ಅಳುವಿಕೆ.
विलापना, अक्रि. ಅಳು, ವಿಲಾಪಿಸು.

विलायत, पु. ಪರದೇಶ, ದೇಶಾಂತರ; ಸೀಮೆ, ವಿಲಾಯತು; ಈರಾನ್ ದೇಶ, ಪರ್ಷಿಯಾದೇಶ; ದೇಶಾವರ.

विलायती, वि. ವಿದೇಶದ, ಸೀಮೆಯ. स्त्री. ಒಂದು ಬಗೆ ಸಣ್ಣ ಕತ್ತಿ.

विलास, पु. ಆನಂದ, ಮನೋರಂಜನೆ; ಹಾವಭಾವ, ಪ್ರೇಮವಿಲಾಸ.

विलासी, वि. ಸುಖಾಭಿಲಾಷಿ; ರಸಿಕ; ಕಾಮುಕ.

विलोकना, सक्रि. ನೋಡು, ಈಕ್ಷಿಸು.

विवरण, पु. ವಿವರ; ವೃತ್ತಾಂತ; ವರ್ಣನೆ.

विवाह, पु. ವಿವಾಹ, ಮದುವೆ, ಲಗ್ನ.

विवाहना, सक्रि. = ब्याहना.

विवाहित, वि. ವಿವಾಹವಾದ, ಮದುವೆಯಾದ.

विशारद, पु. ಪಂಡಿತ, ಕೋವಿದ.

विशाल, वि. ವಿಸ್ತೃತವಾದ, ವಿಶಾಲ.

विशिष्ट, वि. ಸಮಗ್ರ, ಇಡೀ.

विशेष, पु. ವಿಶೇಷ, ಹೆಚ್ಚು.

विशेषता, स्त्री. ವಿಶೇಷ, ವೈಶಿಷ್ಟ್ಯ.

विश्रांति, स्त्री. ವಿಶ್ರಾಂತಿ, ವಿರಾಮ.

विश्वसनीय, विश्वस्त, वि. ವಿಶ್ವಾಸಾರ್ಹವಾದ, ನಂಬಿಕೆಯುಳ್ಳ.

विश्वास, पु. ನಂಬಿಕೆ, ನೆಚ್ಚಿಕೆ.

विष, पु. ವಿಷ, ನಂಜು.

विषधर, पु. ಹಾವು.

विषय, पु. ವಿಷಯ, ಸಂಗತಿ.

विषयक, वि. ವಿಷಯವಾದ, ಸಂಬಂಧವಾದ.

विषहा, विषैला, वि. ವಿಷವುಳ್ಳ.

विसाल, पु. ಭೇಟಿ; ಕೂಡಿಕೆ, ಸೇರಿಕೆ; ನಾಯಕ ನಾಯಕಿಯರ ಮಿಲನ, ಸಮಾಗಮ; ಮೃತ್ಯು, ಸಾವು.

विस्तार, पु. ವಿಸ್ತಾರ, ಹರವು.

विस्तारना, सक्रि. ಹರಡಿಸು, ವಿಸ್ತರಿಸು.

विस्मय, पु. ಆಶ್ಚರ್ಯ, ವಿಸ್ಮಯ.

विहरना, अक्रि. ತಿರುಗಾಡು, ವಿಹರಿಸು.

विहार, पु. ತಿರುಗಾಡುವಿಕೆ, ವಿಹಾರ; ಬೌದ್ಧರ ಮಠ, ಸಂಘಾರಾಮ.

वीर, पु. ವೀರ, ಗಂಡುಗಲಿ. स्त्री. ಸ್ತ್ರೀ, ಮಹಿಳೆ.

वीरता, स्त्री. ವೀರತನ, ಶೌರ್ಯ.

वीरान, वि. ನಿರ್ಜನ(ಸ್ಥಾನ), ತಳಪಟ, ಬೆಂಗಾಡಾದ; ಹಾಳು.

वीराना, पु. ಹಾಳು; ನಿರ್ಜನ ಸ್ಥಾನ, ನಿರ್ಮಾನುಷ ಸ್ಥಳ; ಏಕಾಂತ.

वीरानी, स्त्री. ನಾಶ, ಹಾಳು.

वे, सर्व. ಅವರು, ಅವು.

वेग, पु. ವೇಗ, ತೀವ್ರತೆ.

वेतन, पु. ಸಂಬಳ, ತಲಬು, ವೇತನ.

वेतन-भोगी, पु. ಸಂಬಳ ಪಡೆಯುವವ, ಸಂಬಳಗಾರ.

वेदना, स्त्री. ಪೀಡೆ, ವೇದನೆ.

वेदी, स्त्री. ಅಟ್ಟಲು, ವೇದಿಕೆ, ಹಸೆ.

वेधना, सक्रि. ಚುಚ್ಚು, ಕೊರೆ.

वेधशाला, स्त्री. ನಕ್ಷತ್ರಗಳನ್ನು ನೋಡುವ ಯಂತ್ರಶಾಲೆ, ನಕ್ಷತ್ರಶಾಲೆ.

वेला, स्त्री. ಸಮಯ, ಹೊತ್ತು, ವೇಳೆ.

वेश, वेष, पु. ವೇಷ, ಕೋಲ,

ಸೋಗು; ಅಲಂಕಾರ; ರೂಪ.

वैंछना, सक्रि. ಸುಲಿ, ಎಡೆ, ಉರಿಚು.

वैद्य, पु. ವೈದ್ಯ, ಚಿಕಿತ್ಸಕ.

वैद्यक, पु ವೈದ್ಯಶಾಸ್ತ್ರ.

वैर, पु. ವೈರ, ವಿರೋಧ, ಹಗೆತನ.

वैसा, वि. ಅಂತಹ, ಆ ಬಗೆಯ. क्रिवि. ಹಾಗೆ, ತಥಾ.

वैसे, क्रिवि. ಹಾಗೆ, ಸುಮ್ಮನೆ; ಪುಕ್ಕಟೆ

वोल्लाह, पु. ಒಂದು ಜಾತಿ ಕುದುರೆ.

व्यक्ति, पु. ಒಬ್ಬಮನುಷ್ಯ, ಆಸಂ, ವ್ಯಕ್ತಿ

व्यय, पु. ಖರ್ಚು, ವೆಚ್ಚ.

व्यवस्था, स्त्री. ವ್ಯವಸ್ಥೆ, ಏರ್ಪಾಟು.

व्याख्या, स्त्री. ಅರ್ಥವಿವರಣೆ, ವ್ಯಾಖ್ಯೆ

व्याख्यान, पु. ಭಾಷಣ, ಉಪನ್ಯಾಸ.

व्याज, पु. ಬಡ್ಡಿ; ವ್ಯಾಜ, ನೆಪ.

व्यापना, सक्रि. ವ್ಯಾಪಿಸು, ಹರವು.

व्यापार, पु. ಕೆಲಸ, ವ್ಯಾಪಾರ.

व्यास, पु. ಪುರಾಣ ಹೇಳುವವ; ಪುರಾಣೀಕ, ಭಾಗವತರು, ರಾಮಾಯಣ ಶಾಸ್ತ್ರೀ.

श

शंकना, अक्रि. ಶಂಕಿಸು; ಹೆದರು.

सुरसुरी, स्त्री. ಮುಲುಗುಟ್ಟುವಿಕೆ, ದೇಕುವಿಕೆ; ನವೆ; ಧಾನ್ಯದ ಹುಳು.
सुरही, स्त्री. ಕವಡೆಯಾಟ, ಜೂಜಾಟ.
सुरा, स्त्री. ಸುರೆ, ಮದ್ಯ; ಕುಡಿಯುವ ಬಟ್ಟಲು, ಸುರಾಪಾತ್ರ.
सुराई, स्त्री. ಶೌರ್ಯ, ವೀರತನ.
सुराग़, पु. ಜಾಡು, ಪತ್ತೆ; ತುಬ್ಬು, ಸುಳುವು; ಸೋವು, ಒಳಗುಟ್ಟು.
सुराग़ी, पु. ಪತ್ತೆ ಹಚ್ಚುವವ, ಪತ್ತೆದಾರ, ತುಬ್ಬುಗಾರ.
सुरात, स्त्री. ಉದ್ದವಾದ ಕತ್ತಿ.
सुराही, स्त्री. ನೀರಿನ ಪಂಚಪಾತ್ರೆ; ಉದ್ದವಾದ ಕಂಠವುಳ್ಳ ಕಂದಿಗೆ.
सुराहीदार, वि. सुराही ಯ ಆಕಾರದ ಉದ್ದವಾದ ಕಂಠವುಳ್ಳ.

सुरीला, वि. ಒಳ್ಳೆಯ ಸ್ವರ ಅಥವಾ ಕಂಠವುಳ್ಳ, ಸುಸ್ವರದ; ಇಂಪಾದ, ಮಧುರ.

सुरूप, वि. ಒಳ್ಳೆಯ ರೂಪದ, ಸುಂದರವಾದ, ಚೆಲುವಿನ, ಅಂದವಾದ.

सुरूर, पु. ಆನಂದ, ಸಂತೋಷ; ಸ್ವಲ್ಪವಾಗಿ ಮತ್ತೇರುವಿಕೆ, ತುಸ ಅಮಲು.

सुरेतना, सक्रि. ಹಕ್ಕಲಾಯು, ಬಾಕಲಾಯು.

सुरेथ, पु. ಶಿಂಶುಮಾರ, ಕಡಲುಹಂದಿ

सुरैत, सुरैतिन, स्त्री. ಇಟ್ಟುಕೊಂಡವಳು, ಭೋಗಿನಿ, ಉಪಪತ್ನಿ, ಬಂಗಾರದವಳು.

सुरैया, पु. ಕೃತ್ತಿಕಾ ನಕ್ಷತ್ರ.

सुर्ख़, वि. ಕೆಂಬಣ್ಣದ, ಕೆಂಪು. पु. ಕೆಂಪು ಬಣ್ಣ, ಕೆಂಪು.

सुर्ख़रू, वि. ಕಾಂತಿಯುಳ್ಳ, ಕಳೆಯೇರಿದ; ಗೆಲುವಿನ; ಯಶಸ್ವಿ, ಗೌರವಸ್ಥ.

सुर्ख़रूई, स्त्री. ಕಾಂತಿ, ಕಳೆ, ಯಶಸ್ಸು.

सुर्ख़ाब, पु. ಚಕ್ರವಾಕ ಪಕ್ಷಿ सुर्ख़ाब का पर लगना = ಗೌರವ ಹೆಚ್ಚು. ಮಾನೋನ್ನತಿಯಾಗು

सुर्ख़ी, स्त्री. ಕೆಂಪು ಬಣ್ಣ, ಕೆಂಪು; ಕೆಂಪು ಶಾಯಿ; ಶಿರೋಲೇಖ, ಶೀರ್ಷಕ, ತಲೆಬರಹ; ಇಟ್ಟಿಗೆಯ ಪುಡಿ, ಸುರ್ಖಿ, ಕಂಕರೆ

सुर्त, स्त्री. ವಿಚಾರ; ಜ್ಞಾಪಕ, ಸ್ಮರಣೆ

सुर्ता, वि. ಬುದ್ಧಿವಂತ, ಜಾಣ.

सुलग, क्रिवि. ಹತ್ತಿರ, ಬಳಿ, ಸಮೀಪ

सुलगना, अक्रि. ಉರಿ, ಹೊತ್ತಿಕೊಳ್ಳು; ಕತ್ತು, ಉರಿಗೊಳ್ಳು; ಹೊಗೆ ಅಥವಾ ಜ್ವಾಲೆ ಇಲ್ಲದೆ ಉರಿ.

सुलगाना, सक्रि. ಉರಿಸು, ಹೊತ್ತಿಸು; ಕತ್ತಿಸು; ಉದ್ದೀಪಿಸು, ಕೆರಳಿಸು.

सुलच्छन, पु. ಒಳ್ಳೆಯ ಲಕ್ಷಣ, ಸುಲಕ್ಷಣ, ಅಭಿವೃದ್ಧಿಗೆ ಬರತಕ್ಕ ಸೂಚನೆ.

सुलझन, स्त्री. ಸಮಸ್ಯೆ ಬಿಡಿಸುವಿಕೆ; ಬಗೆ ಹರಿಸುವಿಕೆ; ಪರಿಹಾರ.

सुलझना, अक्रि. ಬಿಡಿಸಲ್ಪಡು, ಬಿಚ್ಚು; ಬಗೆ ಹರಿ; ಕೊಸರಿಕೊಳ್ಳು.

सुलझाना, सक्रि. ಸಿಕ್ಕು ಬಿಡಿಸು; ಸಮಸ್ಯೆ ಬಿಡಿಸು, ಬಿಚ್ಚು; ಬಗೆ ಹರಿಸು.

सुलझाव, पु. = सुलझन.

सुलटा, वि. ನೇರವಾದ, ನೆಟ್ಟಗಾದ.

सुलफ, वि. ಬಾಗುವ, ಬಳುಕುವ; ಕೋಮಲವಾದ

सुलफ़ा, पु. ಹುಕ್ಕಾದಲ್ಲಿಟ್ಟು ಸೇದುವ ಹೊಗೆಸೊಪ್ಪಿನ ಗುಳಿಗೆ, ಗುಡಾಕು.

सुलवाना, सक्रि. सुलाना का प्रे. रूप.

सुलह, स्त्री. ಸ್ನೇಹ, ಮೈತ್ರಿ, ಸಖ್ಯ; ರಾಜಿ; ಸಂಧಿ, ಸಮಾಧಾನ, ಕೌಲು.

सुलहनामा, पु. ರಾಜಿಪತ್ರ, ಸಂಧಿಪತ್ರ.

सुलहा, पु. ಪುಣ್ಯವಂತರು; ಜ್ಞಾನಿಗಳು.

सुलही, स्त्री. ಹದಿನಾರು ಕವಡೆಗಳಿಂದ ಆಡುವ ಒಂದು ಆಟ.

सुलूक, पु. = सलूक.

सुलाना, सक्रि. ಮಲಗಿಸು, ಒರಗಿಸು; ಕೊಲ್ಲು, ಸಾಯಿಸು.

सुलेमानी, पु. ಗೋಮೇಧಿಕ.

सुल्तान, पु. ಚಕ್ರವರ್ತಿ; ರಾಜ, ಅರಸ.

सुल्ताना, स्त्री. ಚಕ್ರವರ್ತಿನಿ. सुल्ताना

चंपा = ಪುನ್ನಾಗ. ಸುರಹೊನ್ನೆ.

सुलतानी, स्त्री. ರಾಜ್ಯ; ರಾಜ್ಯಭಾರ; ರೇಷ್ಮೆ ಬಟ್ಟೆ. वि. ರಾಜರ; ರಾಜಯೋಗ್ಯ; ಕೆಂಪು ಬಣ್ಣದ.

सुलब, पु. ಬೆನ್ನೆಲುಬು, ಬೆನ್ನುಮೂಳೆ.

सुवक्ता, पु. ಚೆನ್ನಾಗಿ ಮಾತನಾಡುವವ, ಸುಭಾಷಿ; ವಾಕ್ಪಟು, ವಾಗ್ಮಿ.

सुवम, वि. ಮೂರನೆಯ. पु. ಸತ್ತ ಮೂರನೆಯ ದಿವಸದ ಸಂಸ್ಕಾರ.

सुविधा, स्त्री. = सुभीता.

सुवाफ़, पु. ನಾಶ; ಪ್ರಾಣಾಂತಕ ವ್ಯಾಧಿ.

सुवास, पु. ಸುವಾಸನೆ, ಸುಗಂಧ.

सुवैया, वि. ನಿದ್ರಿಸುವವ.

सुस, स्त्री. ಸೋದರಿ.

सुसकना, सुसकारना, सक्रि. = सिसकना.

सुसज्जित, वि. ಅಲಂಕರಿಸಲ್ಪಟ್ಟ; ಸಿದ್ಧಪಡಿಸಿದ; ಸೊಗಯಿಸುವ. सुसज्जित करना = ಅಂದವಾಗಿ ಅಲಂಕರಿಸು; ಸಜ್ಜುಗೊಳಿಸು, ಸಿದ್ಧಪಡಿಸು.

सुसना, पु. = चौपतिया.

सुसमझ, स्त्री. ಒಳ್ಳೆಯ ತಿಳಿವಳಿಕೆ; ಬುದ್ಧಿ.

सुसर, सुसरा, पु. ಮಾವ.

सुसरी, स्त्री. ಅತ್ತೆ. (ಒಂದು ಬಗೆ ಬಯ್ದಾಟ.

सुसा, स्त्री. ಸೋದರಿ. पु. ಒಂದು ಪಕ್ಷಿ.

सुसाना, अक्रि. = सिसकना.

सुस्त, वि. ಸೋಮಾರಿ, ಆಲಸ; ಮುದಡ; ಮಂದ, ನಿರ್ಬಲ, ಅಶಕ್ತ; ಬಳಲಿದ, ದಣಿದ, ಸುಸ್ತಾದ.

सुस्ताना, अक्रि. ದಣಿವಾರಿಸು, ತಳಾರಿಸು, ವಿಶ್ರಮಿಸು, ಸುಧಾರಿಸಿಕೊಳ್ಳು.

सुस्ती, स्त्री. ಆಲಸ್ಯ, ಪಾಲುಗಾರಿಕೆ; ಮುದಡು; ಸುಸ್ತು, ಜಾಡ್ಯ, ತಾಮಸ.

सुस्वाद, वि. ಒಳ್ಳೆಯರುಚಿಯ; ರುಚಿರ.

सुहंगा, वि. ಅಗ್ಗವಾದ.

सुहता, वि. ಮನೋಹರ, ರಮ್ಯ.

सुहबत, स्त्री. = सोहबत.

सुहरना, सक्रि. ಎಳೆ, ಸೆಳೆ.

सुहाग, पु. ಸೌಭಾಗ್ಯ; ಮಾಂಗಲ್ಯ, ಮುತ್ತೈದೆತನ; ಶುಭ, ಮಂಗಳ; ಮಂಗಳ ವಸ್ತ್ರ; ಮಂಗಳಗಾನ; ಅರಿಸಿನ ಕುಂಕುಮ; ಮಜ, ಸುಖ.

सुहागन, सुहागिन, स्त्री. ಸೌಭಾಗ್ಯವತಿ; ಸುಮಾಂಗಲಿ, ಮುತ್ತೈದೆ.

सुहाग-भरी, स्त्री. ಪ್ರಿಯ (ಪತ್ನಿ).

सुहागा, पु. ಬಿಳಿಗಾರ, ಬಿಳಗಾರ.

सुहागी, स्त्री. ಪುಣ್ಯವಂತೆ, ಪುಣ್ಯಾದ್ಗಿತ್ತಿ.

सुहाता, वि. ನೊಚ್ಚಗಿರುವ, ರಮ್ಯವಾದ; ಬೆಚ್ಚಗಿರುವ.

सुहाना, अक्रि. ಶೋಭಿಸು; ಒಪ್ಪು, ರಾರಾಜಿಸು, ಸೊಗಯಿಸು. वि. ಸೊಗಸಾದ, ಒಪ್ಪುವ.

सुहारी, स्त्री. ಸಾದಾ ಪೂರಿ.

सुहाल, पु. सुहाली, स्त्री. ಕಜ್ಜಾಯ, ಪಣ್ಯಾರ.

सुहावना, वि. ಪಸಂದಾದ, ಒಪ್ಪುವ; ಸೊಬಗಿನ; ಸೊಗಸಾದ; ಸುಂದರ.

सुहावनी, स्त्री. ಮನೋಹರತೆ,

ರಮ್ಯತೆ; ಸೊಬಗು; ಮೋಹನಾಂಗಿ.
सुहृद्, वि. ಸ್ನೇಹಿತ, ಮಿತ್ರ.
सुहेला, वि. ಸೊಗಸಾದ, ಸುಂದರ, ಸುಖಪ್ರದ पु. ಮಂಗಳಗೀತ, ಸ್ತುತಿ.
सूँगरा, पु. ಎಮ್ಮೆ ಕರು.
सूँगा, पु. ಭಗ್ನದ ಮಣಿ, ಭಗಾಂಕುರ.
सूँघ, स्त्री. ಮೂಸುವಿಕೆ, ಅಘ್ರಾಣ.
सूँघना, सक्रि. ಮೂಸು, ಆಘ್ರಾಣಿಸು.
सूँघन, सूँघनी, स्त्री. ನಶ್ಯ, ನಶ್ಯಪುಡಿ.
सूँघा, पु. ಮೂಸಿನೋಡುವವ; ಗೂಢ ಚಾರ; ಬೇಟೆನಾಯಿ.
सूँट, स्त्री. ನಿಶ್ಶಬ್ದತೆ, ಮೌನ.
सूँड, स्त्री. ಸೊಂಡ, ಸೊಂಡಿಲು.
सूँड़ा, पु. ಅಂದುಹುಳು, ನುಸಿ.
सूँडी, पु. ಹೆಂಡ ಮಾರುವವ, ಶೌಂಡಿಕ. स्त्री. ಅಂದುಹುಳು, ನುಸಿ.
सूँस, सूइँस, स्त्री. ಶಿಂಶುಮಾರ, ಕಡಲು ಹಂದಿ.
सू, स्त्री. ದಿಕ್ಕು, ಪಕ್ಕ, ಕಡೆ सू-ब-सू =ಎಲ್ಲಾ ಕಡೆಯಲ್ಲೂ.
सूअर, पु. ಹಂದಿ.
सूअरनी, सूअरी, स्त्री. ಹೆಣ್ಣುಹಂದಿ
सूआ, पु. ಗಿಳಿ; ದಬ್ಬಣ; ಊಬು.
सूई, स्त्री. ಸೂಜಿ; ಮುಳ್ಳು; ಮೊಳಕೆ; ಹೆಣ್ಣು ಗಿಣಿ.
सूकवा, पु. ಒಂದು ಬಗೆ ಬೇಳೆ.
सूक़, पु. ಅಂಗಡಿ, ಪೇಟೆ.
सूका, पु. सूकी, स्त्री. ನಾಲ್ಕಾಣೆಯ ನಾಣ್ಯ, ಪಾವಲಿ.
सूखना, अक्रि. ಒಣಗು, ಬತ್ತು; ಇಮರು, ಇಂಗು; ಶೋಷಿಸು; ತಾರು; ಸೊರಗು, ಬಡವಾಗು.
सूखा, वि. ಒಣಗಿದ, ಬತ್ತಿದ; ತಾರಿದ; ಸೊರಗಿದ; ಬಡವಾದ; ಖುಷ್ಕಿ (ಜಮೀನು). पु. ಅನಾವೃಷ್ಟಿ; ಬರ; ಗೊಟ್ಟು; ದೇಹ ಶೋಷಣೆ (ರೋಗ).
सूगा, पु. ಗಿಳಿ, ಗಿಣಿ, ಶುಕ.
सूचना, पु. ಸೂಚನೆ; ವಿಜ್ಞಾಪನೆ; ಪ್ರಕಟಣೆ. सक्रि. ಸೂಚಿಸು.
सूचित, वि. ಸೂಚಿಸಿದ.
सूची, स्त्री. ಸೂಚಿ, ಸೂಚಿಪತ್ರ.
सूचीपत्र, पु. ಸೂಚಿ, ಪಟ್ಟಿ.
सूज, सूजन, स्त्री. ಉಬ್ಬುವಿಕೆ, ಊದು; ಬಾವು, ಬೀಗು, ಊತ.
सूजना, अक्रि. ಉಬ್ಬು, ಊದಿಕೊಳ್ಳು; ಬಾಯು, ಬಾತುಕೊಳ್ಳು, ಬೀಗು.
सूजनी, स्त्री. ಹಚ್ಚಡ, ರಜಾಯಿ.
सूजा, पु ದೊಡ್ಡಸೂಜಿ. ದಬ್ಬಳ; ಬೈರಿಗೆ.
सूज़ाक, पु ಮೇಹರೋಗ, ಪ್ರಮೇಹ.
सूजी. स्त्री ಗೋಧಿಯ ನುಚ್ಚು, ರವೆ, ಸಜ್ಜಿಗೆ; ಸೂಜಿ पु. ದರ್ಜಿ, ಸಿಂಪಿಗ.
सूझ, स्त्री. ತೋರುವಿಕೆ, ಮನವರಿಕೆ; ಅರಿವು; ದೃಷ್ಟಿ; ಕಲ್ಪನೆ.
सूझना, अक्रि. ತೋರು, ತೋಚು; ಮನಸ್ಸಿಗೆ ತಟ್ಟು, ಹೊಳೆ, ಸ್ಫುರಿಸು.
सूझ-बूझ, स्त्री. ಅರಿವು, ಬುದ್ಧಿ.
सूटा, पु. ಬಂಗಿ ಅಥವಾ ಹುಕ್ಕಾವಿನ ಹೊಗೆಯನ್ನು ಜೋರಾಗಿ ಸೇದುವಿಕೆ.
सूत, पु. ನೂಲು, ದಾರ; ಎಳೆ, ಸೂತ್ರ; ಕಂಬಿ, ತಂತಿ; ಸಾಲು, ವರಸೆ, ಶ್ರೇಣಿ;

ಬಳ್ಳಿಯ ಕುಡಿ, ಹಂಬು.

सूतक, पु. ಸೂತಕ, ಪುರುಡು.

सूतना, सक्रि. ಕೊತ್ತು, ಸುಗಿ; (ಕತ್ತಿ) ಹಿರಿ; ಹೊರಕ್ಕೆ ನೀರು ಚಲ್ಲು. अक्रि. ನಿದ್ರಿಸು; ಮಲಗು, ವಿಶ್ರಮಿಸು; ಹಳೆಯದಾಗು, ಜೀರ್ಣವಾಗು.

सूतिका, स्त्री. ಬಾಣಂತಿ.

सूतिकाघर, पु. ಹೆಂಗೆ ಮನೆ.

सूती, वि. ಹತ್ತಿ ನೂಲಿನ, ನೂಲಿಂದಾದ; ಹತ್ತಿ (ಬಟ್ಟೆ).

सूथन, स्त्री. ಷರಾಯಿ, ಇಜಾರು.

सूथनी, स्त्री. ಸೂಳೆಯ ಪಾಯಿಜಾಮೆ, ಷರಾಯಿ, ಇಜಾರು; ಒಂದು ಗೆಣಸು.

सूद, पु. ಲಾಭ. ನಫೆ; ಆದಾಯ; ಬಡ್ಡಿ; ಚುಂಗಡಿ, ಕುಸೀದ. सूद दर सूद = ಬಡ್ಡಿಗೆಬಡ್ಡಿ, ಚಕ್ರಬಡ್ಡಿ, ಮಾರ್ಬಡ್ಡಿ.

सूदख़ोर, पु. ಕುಸೀದಗಾರ, ಬಡ್ಡಿಕಾರ.

सूदख़ोरी, स्त्री. ಕುಸೀದವೃತ್ತಿ.

सूदना, सक्रि. ನಾಶಮಾಡು.

सूदमंद, वि. ಲಾಭಕರ, ಪ್ರಯೋಜನಕರ

सूदमंदी, स्त्री. ಲಾಭದಾಯಕತ್ವ

सूदी, वि. ಬಡ್ಡಿಗೆ ಹಾಕಿದ (ಹಣ)

सूधना, अक्रि ಸತ್ಯವಾಗು, ಸಿದ್ಧವಾಗು.

सूधा, वि. =सीधा.

सूना, वि. ನಿರ್ಜನ; ಶೂನ್ಯ; ಖಾಲಿ.

सूनापन, स्त्री. ನಿಶ್ಶಬ್ದತೆ, ಮೌನ

सूप, पु. ಬೇಳೆಯ ಕಟ್ಟು, ಸಾರು; ಮೊರ.

सूफ़, पु. ಉಣ್ಣೆ, ತುಪ್ಪಟ, ಬೊಚ್ಚು, ಕಂಬಳಿ, ಧಾವಳಿ; ಮಸಿ ಕುಡಿಕೆಯೊಳಗೆ ಹಾಕಿರುವ ಬಟ್ಟೆಯ ಚೂರು.

सूफ़ियाना, वि. सूफ़ीಯರ; ಸೂಫಿಯರಂತಹ; ಸರಳವಾದ, ಸಾದಾ.

सूफ़ी, पु. ಕಂಬಳಿ ಧರಿಸಿದವ, ಮುಸಲ್ಮಾನರ ಒಂದು ಪಂಗಡ, (ಮುಸಲ್ಮಾನರಲ್ಲಿ) ವೇದಾಂತಿ; ಮಿತಾಹಾರಿ. वि. ಉಣ್ಣೆಯ.

सूबर, वि. ಬೆರಕೆಯಾದ.

सूबरा, पु. ಬೆರಕೆ ಬಂಗಾರ.

सूबा, पु. ದೇಶದ ಒಂದು ವಿಭಾಗ, ಪ್ರಾಂತ, ಅಧಿಪತ್ಯ; ಪ್ರದೇಶ; ಪ್ರಾಂತೀಯ ಶಾಸಕ.

सूबेदार, पु. ಪ್ರಾಂತೀಯ ಶಾಸಕ; ಸೈನ್ಯದ ಒಬ್ಬ ಉದ್ಯೋಗಸ್ಥ; ಸುಬೇದಾರ.

सूबेदारी. स्त्री. ಸುಬೇದಾರನ ಕೆಲಸ.

सूम, पु. ಜಿಪುಣ, ಕೃಪಣ, ಲೋಭಿ.

सूमपना, पु. ಕಾರ್ಪಣ್ಯ. ಜಿಪುಣತನ.

सूर, पु. ಸೂರ್ಯ, ನೇಸರು, ಶೂರ, ವೀರ; ಅಂಧ, ಕುರುಡ. वि. ವಿದ್ಯಾವಂತ; ಬುದ್ಧಿವಂತ. स्त्री. ಕಹಳೆ, ಕೊಂಬು; ಪ್ರತೀಕಾರ, ಮುಯ್ಯಿ.

सूरज, पु. ಸೂರ್ಯ, ನೇಸರು.

सूरजमुखी, पु. ಸೂರ್ಯಕಾಂತಿ ಹೂ; ಒಂದು ಬಗೆ ಬಾಣ ಬಿರುಸು.

सूरत, स्त्री. ಮುಖ, ಮೋರೆ; ಮುಖಭಂಗಿ, ಚಹರೆ; ರೂಪ, ಆಕೃತಿ; ಕಳೆ; ರೀತಿ, ತರಹ.

सूरन, पु. ಸ್ವರ್ಣಗೆಡ್ಡೆ, ಸೂರಣಗೆಡ್ಡೆ.

सूरमा, वि. ಶೂರ, ವೀರ, ಕಲಿ.

सूरा, पु. ಕುರಾನಿನ ಅಧ್ಯಾಯ.

सूराख़, पु. ತೂತು; ದ್ವಾರ, ರಂಧ್ರ.

सूर्य, पु. ರವಿ, ಸೂರ್ಯ, ನೇಸರು.

सूल, पु. ಶೂಲ, ಈಟಿ; ಮುಳ್ಳು; ಚುಚ್ಚುವ ನೋವು, ಕೊಡತ, ಶೂಲೆ; ಹೊಟ್ಟೆಶೂಲೆ; ಸ್ಥಿತಿಗತಿ.

सूलना, सक्रि. ಶೂಲದಿಂದ ಚುಚ್ಚು, ತಿವಿ. अक्रि. ನೋವಾಗು.

सूली, स्त्री. ಶೂಲ, ಗಲ್ಲುಮರ. सूली देना = ಶೂಲಕ್ಕೇರಿಸು, ಗಲ್ಲಿಗೆಹಾಕು.

सूसी, स्त्री. ಗೆರೆಗಳುಳ್ಳ ಬಟ್ಟೆ, ಪಟ್ಟೆವಳಿ ಬಟ್ಟೆ, ಸೂಸಿ ಬಟ್ಟೆ.

सूहा, वि. ಕುಂಕುಮ ವರ್ಣದ, ರಕ್ತ ವರ್ಣದ पु. ಕುಂಕುಮ ವರ್ಣ.

सृजना, सक्रि. ಸೃಷ್ಟಿಸು, ತಯಾರಿಸು.

सृष्टि, स्त्री. ಸೃಷ್ಟಿ; ರಚನೆ.

सेंक, स्त्री. ಸುಡುವಿಕೆ, ಹುರಿಯುವಿಕೆ; ಕಾವು, ಶಾಖ.

सेंकना, सक्रि. ಸುಡು, ಹುರಿ; ಕಾವು ಕೊಡು, ಶಾಖ ಕೊಡು. धूप सेंकना = ಬಿಸಿಲು ಕಾಯು.

सेंगर, पु. ಒಂದು ತರಕಾರಿ.

सेंगरी, स्त्री. ಬೀಜಕೋಶ, ತಳಲು.

सेंठा, पु. ಲಾಳದ ಕಡ್ಡಿ; ಗಲಗು.

सेंत, सेंतमेंत, स्त्री. ಉಚಿತ, ಪುಕ್ಕಟೆ, ಪುಗಸಟ್ಟೆ, ಬಿಟ್ಟಿ.

सेंतना, सक्रि. ಅಣಿಮಾಡು, ಹವಣಿಸು; ಜೊತೆಮಾಡು, ಶೇಖರಿಸು; ಗಳಿಸು.

सेंथी, स्त्री. ಈಟಿ, ಸಬಳ, ಭರ್ಜಿ.

सेंदना, सक्रि. ನೀರುಹಾಯಿಸು; ಬಿಸಿ ನೀರಿನ ಒತ್ತಡ ಕೊಡು.

सेंदुर, पु. = सिंदूर.

सेंध, स्त्री. ಸುರಂಗ, ಕನ್ನ.

सेंधना, सक्रि. ಸುರಂಗ ಕೊರೆ, ಕನ್ನ ಹಾಕು.

सेंधा, पु. ಸೈಂಧವ ಲವಣ.

सेंधिया, पु. ಕನ್ನ ಹಾಕುವವ, ಕಳ್ಳ.

सेंधी, स्त्री. ಹೆಂಡ, ಕಳ್ಳು, ಸೇಂದಿ.

सेंहुड़, पु. ಕಳ್ಳಿಗಿಡ

से, प्रत्य. ತೃತೀಯಾ ಮತ್ತು ಪಂಚಮೀ ವಿಭಕ್ತಿ ಪ್ರತ್ಯಯ; ಒಡನೆ, ಕೂಡ, ಸಂಗಡ; ಇಂದ, ದೆಸೆಯಿಂದ; ಅದಕ್ಕಿಂತ; ಮೊದಲುಗೊಂಡು आपसे = ನಿಮ್ಮ ಸಂಗಡ. उस दिन से = ಆ ದಿವಸ ಮೊದಲುಗೊಂಡು.

सेग़ा, पु. = सीग़ा.

सेज, स्त्री. ಹಾಸಿಗೆ, ಸೆಜ್ಜೆ. पु. ಈಟಿ, ಭರ್ಜಿ, ಸಬಳ.

सेज-बंद, पु. ಮಂಚದ ನವಾರ.

सेझना, अक्रि. ದೂರವಾಗು.

सेटना, सक्रि. ತಿಳಿ, ಮನ್ನಿಸು.

सेठ, पु. ದೊಡ್ಡ ವ್ಯಾಪಾರಸ್ಥ. ಶ್ರೇಷ್ಠಿ, ಸೇಠ್; ಸಾಹುಕಾರ, ಸಾವಕಾರ. सेठ साहूकार = ಶ್ರೀಮಂತ, ಸಾಹುಕಾರ, ಧನಿಕ.

सेठन, स्त्री. ಕುಂಚ, "ಬ್ರಷ್".

सेठानी, स्त्री. "सेठ" का स्त्री. रूप.

सेठिया, वि. ಸೇಠಿನ, ಸಾಹುಕಾರನ; ಸೇಠಿನಂಥಹ. सेठिया लोग = ಸೇಠಿನವರು; ಧನಿಕರು.

सेत, वि. ಶ್ವೇತ, ಬಿಳಿಯ. पु. ಸೇತುವೆ.

सेतना, सक्रि. ಛದ್ರಪಡಿಸು; ಜೋಪಾನ

ವಾಗಿರಿಸು; ಕಾಯು.

सेथिया, पु. ನೇತ್ರವೈದ್ಯ.

सेदना, सकि. ಬಿಸಿಮಾಡು, ಕಾವು ಕೊಡು; ಬೆವರಿಸು

सेन, पु. ಗಿಡುಗ; ಹದ್ದು.

सेना, स्त्री. ಸೇನೆ, ಸೈನ್ಯ, ಪಡೆ, ದಳ. सकि. ಶುಶ್ರೂಷೆ ಮಾಡು, ಊಳಿಗ ಮಾಡು; ಆರಾಧಿಸು, ಪೂಜಿಸು; ಕೋಳಿ ಹಾಕು; ಮೊಟ್ಟೆಗೆ ಕಾವು ಕೊಡು, ಮರಿಮಾಡು, ಹೊದಗಿಸು.

सेनिका, स्त्री. ಗಿಡುಗ, ಡೇಗೆ.

सेनी, स्त्री. ತಟ್ಟೆ, ತಬಕು, ತಳಿಗೆ; ಏಣಿ.

सेब, पु. ಸೇವುಹಣ್ಣು, ಸೇಬು; ನೀರು ಹಾಯಿಸುವಿಕೆ, ನೀರಾವರಿ; ನೀರಿನ ಬಾನಿ, ಬಕೀಟು. सेब-ए-ग़ब ग़ब = ಗದ್ದ, ಚಿಬುಕ.

सेम, पु. ಹುರುಳಿಕಾಯಿ, ಬೀನಿಸ್.

सेमर, **सेमल**, पु. ಎಲವ ಮರ, ಬೂರುಗ; ದೂದಿ ಹತ್ತಿ, ಬೂರಲ ಅರಳೆ.

सेर, वि. ತುಂಬಿದ; ತೃಪ್ತ. पु. ಒಂದು ಬಗೆ ಭತ್ತ; ೮೦ ರೂಪಾಯಿಯ ತೂಕ, ಒಂದು ಸೇರು. (ತೂಕಗಳ ಹಿಂದೀ ಹೆಸರುಗಳನ್ನು ಅನುಬಂಧದಲ್ಲಿರುವ ಕೋಷ್ಟಕದಿಂದ ತಿಳಿಯಬಹುದು)

सेरा, पु. ಮಂಚದ ಪಟ್ಟಿ; ನೀರು ಹಾಯಿಸಿದ ಜಮೀನು.

सेराना, सकि. ತೇಲಾಡಿಸು, ತೇಲಿಸಿಬಿಡು; ರವಾನಿಸು; ತಣ್ಣಗಾಗಿಸು, ತಣಿಸು; ಹೆಚ್ಚಿಸು. अकि. ತಣ್ಣಗಾಗು, ತಣಿ; ತೃಪ್ತಿ ಹೊಂದು.

सेराब, वि. ನೀರು ತುಂಬಿದ, ನೀರು ಹಾಯಿಸಿದ; ತೃಪ್ತ; ಹೊಸ.

सेरी, स्त्री. ತೃಪ್ತಿ, ತಣಿವು; ನೆರತೆ.

सेरुआ, **सेरू**, पु. ಮಂಚದ ಪಟ್ಟಿ.

सेल, पु. ಈಟಿ, ಬರ್ಛಿ, ಭರ್ಜಿ. स्त्री: ಮಾಲೆ, ಹಾರ.

सेलखड़ी, स्त्री. ಸೀಮೆಸುಣ್ಣ, ಖಡಿಕೆ.

सेलहा, पु. ಅಂಗವಸ್ತ್ರ, ವಲ್ಲಿ.

सेला, पु ಅಂಗವಸ್ತ್ರ, ಶಲ್ಯ, ಶಲ್ಲೆ, ವಲ್ಲಿ; ತಲೆಪಾಗು, ಪೇಟ; ಒಂದು ಬಗೆ ಅಕ್ಕಿ; ಸಿಂಹ.

सेलिया, पु. ಒಂದು ಬಗೆ ಕುದುರೆ.

सेली, स्त्री ಈಟಿ, ಸಬಳ; ಜೋಮಾಲೆ; ಶಲ್ಯ, ಅಂಗವಸ್ತ್ರ; ನಡುಕಟ್ಟು; ದಾರ.

सेवई, स्त्री. ಸೇವಿಗೆ, ಸಾವಿಗೆ.

सेवंती, स्त्री. ಬಿಳಿಯ ಗುಲಾಬಿ.

सेव, पु. ಸೇವು(ಖಾದ್ಯ); ಸೇವುಹಣ್ಣು, ಸೇಬು; ಸ್ವಲ್ಪವಾಗಿ ಉಳುವಿಕೆ.

सेवक, पु. ಸೇವಕ, ಆಳು, ಊಳಿಗದವ, ನೌಕರ.

सेवकाई, स्त्री. ಸೇವಕತನ, ಸೇವಕವೃತ್ತಿ; ಊಳಿಗ, ಸೇವೆ.

सेवड़ा, पु. (ಹಿಟ್ಟಿನ) ಸೇವು; ಗಾರಡಿಗಾರ.

सेवन, पु. ಪರಿಚರ್ಯೆ, ಸೇವೆ; ಉಪಾಸನೆ.

सेवना, सकि. = सेना.

सेवरा, पु. ಅರ್ಧ ಸುಟ್ಟ ಮಡಕೆ.

सेवा, स्त्री. ಸೇವೆ, ಕೈಂಕರ್ಯ, ನೌಕರಿ, ಚಾಕರಿ; ಆರಾಧನೆ, ಪೂಜೆ. सेवा

टहल=ಸೇವೆ, ಶುಶ್ರೂಷೆ, ಚಟ್ಟೋಳಗ.

सेवा में = ಸಾನ್ನಿಧ್ಯದಲ್ಲಿ, ಸಮ್ಮುಖ

सेवा-बंदगी, ಸ್ತ್ರೀ. ಆರಾಧನೆ, ಪೂಜೆ.

सेवारी, ಸ್ತ್ರೀ. ಒಂದು ತರದ ಸಕ್ಕರೆ.

सेविका, ಸ್ತ್ರೀ. ಸೇವಕಿ, ದಾಸಿ.

सेवैयां, ಸ್ತ್ರೀ. ಸೇವಿಗೆ, ಶಾವಿಗೆ, ಸಾವಿಗೆ.

सेसर, पु. ಬಿಲ್ಲನ್ನು ಹಿಡಿಯುವ ಭಾಗ; ಇಸ್ಪೀಟಾಟ; ಜಾಲ, ಠಕ್ಕು.

सेह, वि. ಮೂರನೆಯ.

सेहत, ಸ್ತ್ರೀ. ಆರೋಗ್ಯ; ರೋಗಮುಕ್ತಿ, ಸ್ವಸ್ಥತೆ; ಸೌಖ್ಯ; ಶುದ್ಧಿ.

सेहतख़ाना, पु. ಕಕ್ಕಸು, ಮೂತ್ರಿ.

सेहथना, सक्रि. ಕೊಡವು, ಝಾಡಿಸು.

सेहर, पु. ಜಾಲ, ಮಾಟ.

सेहरा, पु. ಮುತ್ತಿನ ದಂಡೆ; ಬಾಸಿಂಗ; ಮದುವೆಯ ಹಾಡು; ಮೀನಿನ ಪರೆ

सेहरा-बंधाई, ಸ್ತ್ರೀ. ಮದವಣಿಗನ ತಲೆಗೆ ಬಾಸಿಂಗವನ್ನು ಕಟ್ಟಲು ಭಾವಮೈದುನನಿಗೆ ಕೊಡುವ ಸಂಭಾವನೆ.

सेहशंबा, पु. ಮಂಗಳವಾರ.

सेही, ಸ್ತ್ರೀ. ಮುಳ್ಳುಹಂದಿ, ಏದು, ಕಣೆ.

सेहुंड, पु. ಕಳ್ಳಿಗಿಡ, ಸೀಹುಂಡ.

सेहुआ, पु. ಕಜ್ಜಿ, ದದ್ದು, ಹುರುಕು.

सैंत, वि. ಬಿಟ್ಟಿ, ಪುಕ್ಕಟೆ, ಉಚಿತ.

सैंतना, सक्रि. ಹವಣಿಸು, ಜೊತೆಮಾಡು; ಗೋರು; ಶೇಖರಿಸು; ಗಳಿಸು.

सैंतालीस, वि. ನಲವತ್ತೇಳು.

सैंतात्र, पु. ಹವಣು, ಅಣಿಮಾಡುವಿಕೆ

सैंती, ಸ್ತ್ರೀ. ಈಟಿ, ಬರ್ಛಿ, ಸಬಳ.

सैंतीस, वि. ಮೂವತ್ತೇಳು.

सै, वि. ನೂರು. ಸ್ತ್ರೀ. ಸಫಲತೆ, ಏಳಿಗೆ.

सैकड़ा, पु. ನೂರು, ಶತ. क्रिवि. ನೂರಕ್ಕೆ, ಪ್ರತಿಶತ, ಶೇಕಡಾ. सैकड़ों = ನೂರಾರು.

सैक़ल, पु. ಸಾಣೆ ಹಿಡಿಯುವಿಕೆ; ಸಾಣೆ.

सैक़लगर, पु. ಸಾಣೆ ಹಿಡಿಯುವವ.

सैक़ली, वि. ಸಾಣೆ ಹಿಡಿದ; ಬೆಳಗಿಸಿದ.

सैद, पु. ಬೇಟೆಯಾಡುವಿಕೆ, ಆಖೇಟ, ಶಿಕಾರಿ, ಬೇಟೆ; ಬೇಟೆಯ ಮೃಗ.

सैदगाह, ಸ್ತ್ರೀ. ಬೇಟೆಯ ಸ್ಥಳ.

सैदी, वि. ಬೇಟೆಯಾಡುವವ; ಶತ್ರು.

सैन, ಸ್ತ್ರೀ. ಸಂಕೇತ, ಇಷಾರೆ, ಇಂಗಿತ, ಸನ್ನೆ; ಚಿಹ್ನೆ, ಗುರುತು; ಶಯನ; ನಿದ್ರೆ; ಹಾಸಿಗೆ, ಶಯ್ಯೆ.

सैनासैनी, ಸ್ತ್ರೀ. ಪರಸ್ಪರ ಸಂಕೇತ ಮಾಡಿಕೊಳ್ಳುವಿಕೆ.

सैनिक, पु. ದಂಡಾಳು, ಸಿಪಾಯಿ, ಯೋಧ.

सैनी, ಸ್ತ್ರೀ. ಏಣಿ, ನಿಚ್ಚಣಿಕೆ.

सैनू, पु. = नैनू.

सैन्य, ಸ್ತ್ರೀ. ಸೇನೆ, ಸೈನ್ಯ, ದಂಡು.

सैफ़, ಸ್ತ್ರೀ. ಕತ್ತಿ, ಖಡ್ಗ.

सैफ़ी, वि. ವಕ್ರವಾದ, ಡೊಂಕಾದ. ಸ್ತ್ರೀ. ಶಾಪ; ಮಾಟ, ಶೂನ್ಯ; ಜಪಮಾಲೆ.

सैयद, पु. ಯಜಮಾನ, ಒಡೆಯ; ರಾಜಕುಮಾರ; ಹುಸೇನಿನ ವಂಶಸ್ಥರು; ಮುಸಲ್ಮಾನರ ನಾಲ್ಕು ಪ್ರಭೇದಗಳಲ್ಲೊಂದು, ಸೈಯದ್.

सैयां, पु. ಪತಿ, ಗಂಡ; ಪ್ರಣಯಿ, ಪ್ರಿಯ; ಮಿಂಡ.

सैयाद, पु. ಬೇಟೆಗಾರ, ವ್ಯಾಧ.
सैयादी, स्त्री. ಬೇಟೆಯಾಡುವಿಕೆ, ಬೇಟೆ, ಶಿಕಾರಿ.
सैयार, पु. ಪ್ರಯಾಣಿಕ, ಪ್ರವಾಸಿ.
सैयारा, पु. ಗ್ರಹಗಳು.
सैयाल, वि. ವೇಗದಿಂದ ಹರಿಯುವ, ಪ್ರವಹಿಸುವ.
सैयाह, पु. ಭೂಪ್ರದಕ್ಷಿಣೆ ಮಾಡುವವ.
सैयाही, स्त्री. ಭೂಪ್ರದಕ್ಷಿಣೆ, ಸಮುದ್ರಯಾತ್ರೆ.
सैर, स्त्री. ತಿರುಗಾಟ, ಸಂಚಾರ; ಪರ್ಯಟನ; ವಿಹಾರ; ವಿನೋದ; ತಮಾಷೆ. सैर सपाटा = ತಿರುಗಾಟ, ಅಡ್ಡಾಟ. सैर करना = ವಿಹರಿಸು, ಅಡ್ಡಾಡು; ತಮಾಷೆನೋಡು; ಪುಸ್ತಕವನ್ನು ಪಠಿಸು
सैराफ़, सैराफ़ी, पु. ಚಿನಿವಾರ; ಸರಾಫ; ಪೋತದಾರ, ವಂಚಕ.
सैल, स्त्री. ಸಂಚಾರ; ವಿಹಾರ; ನೆರೆ, ಪೂರ; ಪ್ರವಾಹ, ಹೊಯಿಲು.
सैलान, पु. ಸಂಚಾರ; ವಿಹಾರ.
सैलानी, पु. ತಿರುಗಾಡುವವ, ವಿಹರಿಸುವವ; ವಿನೋದ ಸಂಚಾರಿ.
सैलाब, पु. ಜಲಪ್ರವಾಹ, ನೆರೆ, ಪೂರ.
सैलाबी, वि. ಜಲಪ್ರವಾಹದ. स्त्री. ಒದ್ದೆ, ತೇವ.
सैसांस, स्त्री. ಮುಚ್ಚಂಜೆ.
सैहरन, स्त्री. ಸೈರಣೆ, ಸಹನೆ, ಸಹಿಷ್ಣುತೆ
सैहरनी, वि. ಸೈರಣೆಯುಳ್ಳವ, ಸಹಿಷ್ಣು.
सौं, स्त्री. ಶಪಥ.
सौंटा, पु. ದೊಣ್ಣೆ, ಬೊಣಸೆ, ಗುದಿಗೆ, ದಡಿ, ಸೋಟಾ. सौंटा-बरदार = ದಂಡಧರ, ಕಟ್ಟಿಗೆಯುವ.
सौंटी, स्त्री ಚಿಕ್ಕ ದೊಣ್ಣೆ, ಕೋಲು.
सौंठ, स्त्री. ಶುಂಠಿ. पु. ಜಿಪುಣ.
सौंठिया, सौंठी, सौंठू, वि. ಕೃಪಣ, ಜಿಪುಣ.
सौंठौरा, पु. ಶುಂಠಿ ಲೇಹ್ಯ.
सौंधना, सक्रि. ಬಟ್ಟೆಗಳನ್ನು ಚವುಳು ಮಣ್ಣುಹಾಕಿ ತೊಳೆ; ಬೆರಸು, ಕಲಸು.
सौंधा, वि. ಹೊಸ ಮಡಕೆಯಲ್ಲಿ ನೀರು ತುಂಬುವಾಗ ಬರುವಂತಹ ವಾಸನೆಯು; ಕರಿದ ವಡೆಯ ವಾಸನೆಯುಳ್ಳ. पु. ಸುಗಂಧ, ಪರಿಮಳ.
सौंधाना, सक्रि. ಪರಿಮಳ ಕೊಡು.
सौंधाहट, स्त्री. ಮಗಮಗಿಸುವಿಕೆ, ಪರಿಮಳ.
सौंधी, स्त्री. ಚವುಳು ಮಣ್ಣು.
सौंपना, सक्रि. = सौंपना.
सौंह, स्त्री. ಶಪಥ.
सो, सर्व. ಅವನು, ಅವಳು, ಅದು. अव्य. ಆದುದರಿಂದ, ಅತಃ.
सोअर, पु. = सौरी.
सोआ, पु. ಸದಗುಪ್ಪೆ, ಸಬ್ಬಸಿಗೆ.
सोई, सर्व. ಅವನೇ, ಅವಳೇ, ಅದೇ.
सोख, स्त्री. ಹೀರುವಿಕೆ, ಶೋಷಣ.
सोखना, सक्रि. ಹೀರು; ಇಂಗಿಸು, ಆವರಿಸು; ಒಣಗಿಸು, ಶೋಷಿಸು
सोख़्त, वि. ಉರಿದ, ಸುಟ್ಟುಹೋದ. स्त्री. ಉರಿ, ಉರಿತ.
सोख़्तगी, वि. ಉರಿಸತಕ್ಕ; ಸುಡತಕ್ಕ.

सोख़्ता, पु. ಮಸಿ ಹೀರುವ ಕಾಗದ, ಒತ್ತುಬರಡು, "ಬ್ಲಾಟಿಂಗು". वि. ಉರಿದ, ಸುಟ್ಟ; ಸೊಂದ.

सोग, पु. ಶೋಕ, ವ್ಯಸನ; ಅಳು.

सोगी, वि. ಶೋಕಿಸುವವ; ಶೋಕಾರ್ತ.

सोच, पु. ಯೋಚನೆ, ಚಿಂತೆ; ಎಣಿಕೆ, ವಿಚಾರ; ಪರಿಭಾವನೆ; ಪಶ್ಚಾತ್ತಾಪ. सोच विचार = ವಿವೇಚನೆ. ಪರ್ಯಾಲೋಚನೆ; ಎಚ್ಚರಿಕೆ.

सोचना, सक्रि. ಯೋಚಿಸು, ಎಣಿಸು; ನೆನೆ, ಬಗೆ; ಚಿಂತಿಸು, ಪಶ್ಚಾತ್ತಾಪಪಡು. सोचना साचना = ಯೋಚನೆ ಮಾಡು.

सोचाना, सक्रि. ಯೋಚನೆಮಾಡಿಸು.

सोज, वि. ಹತ್ತಿರ; ನೇರವಾದ, ಋಜು

सोज़, स्त्री. ಬಾವು, ಬೀಗು; ಉರಿ, ಉರಿತ; ತಾಪ; ಕಾಟ.

सोज़न, पु. ಸೂಜಿ, ಮುಳ್ಳು.

सोज़नाक, वि. ನೋಯುವ, ಉರಿವ.

सोज़नी, स्त्री. ಹಚ್ಚಡ, ಹೊದಿಕೆ; ಕಂಥೆ; ಅಲಂಕಾರದ ಹೊಲಿಗೆ.

सोज़ां, वि. ಉರಿಯುವ, ದಹಿಸುವ.

सोज़ा, पु. ಕುರು.

सोज़ाक, पु. ಮೇಹಸ್ರಾವ, ಪ್ರಮೇಹ

सोज़िश, स्त्री. ಬಾವು. ಊತ, ಬೀಗು; ಉರಿ; ನೋವು.

सोज़ी, स्त्री. ದಳ್ಳುರಿ.

सोझ, सोझा, वि. ನೇರವಾದ, ನೆಟ್ಟಗಿರುವ, ಸರಳವಾದ.

सोझाई, स्त्री. ನೇರ್ಪು, ಆರ್ಜವ.

सोढ़ना, सक्रि. ಪುನರಾಲೋಚಿಸು.

सोढ़र, वि. ಹೆಡ್ಡ, ಪೆದ್ದ, ಮಂಕ.

सोत, सोता, पु. ಸ್ರೋತ, ನೀರಿನ ಝರಿ; ಬುಗ್ಗೆ, ಊಟೆ; ಹೊನಲು, ತೊರೆ.

सोथ, स्त्री. ಬಾವು, ಬೀಗು, ಊತ.

सोद्र, पु. ಸಹೋದರ, ಸೋದರ.

सोद्रा, सोद्री, स्त्री. ಸೋದರಿ.

सोध, स्त्री. ಶುದ್ಧಿ; ತಿದ್ದುವಿಕೆ; ಪವಿತ್ರತೆ.

सोधन, पु. ಶೋಧನೆ, ಹುಡುಕಾಟ; ಚುಕ್ತಾಯ.

सोधना, सक्रि. ಶೋಧಿಸು, ಹುಡುಕು; ಶುದ್ಧಿಮಾಡು, ಶುದ್ಧೀಕರಿಸು; ಸರಿಪಡಿಸು, ತಿದ್ದು; ನಿಶ್ಚಯಿಸು; (ಸಾಲ) ತೀರಿಸು.

सोधाना, सक्रि. सोधना का प्रे. रूप.

सोन, पु. ಒಂದು ಪಕ್ಷಿ; ಒಂದು ಹೂ; ಒಂದು ನದಿ, ಶೋಣ ನದಿ.

सोनचिड़ी, स्त्री ಖಂಜನಪಕ್ಷಿ. ಗವುಜುಹಕ್ಕಿ.

सोनजूही, स्त्री. ಹಳದಿ ಜಾಜಿ.

सोनहरा, सोनहला, वि =सुनहला.

सोनहा, पु. ಕಾಡುನಾಯಿ.

सोनहार, पु. ಒಂದು ಪಕ್ಷಿ.

सोना, अक्रि. ನಿದ್ರೆಮಾಡು, ನಿದ್ರಿಸು; ಜೋಮುಹಿಡಿ, ಮರಗಟ್ಟು. स्त्री. ಒಂದು ಬಗೆ ಮೀನು. पु. ಸ್ವರ್ಣ, ಬಂಗಾರ, ಹೊನ್ನು, ಚಿನ್ನ; ಒಂದು ಮರ. सोना-चांदी = ಚಿನ್ನ ಬೆಳ್ಳಿ; ಹಣಕಾಸು; ಐಶ್ವರ್ಯ.

सोनागेरू, पु. ಬಂಗಾರದ ಬಣವೆಗಳಿಗೆ

ಬಳಿಯಲು ಉಪಯೋಗಿಸುವ ಒಂದು ಬಗೆ ಕಾವಿ, ಸೊನ್ನಗಾವಿ.

सोनामक्खी, सोनामुखी, स्त्री. ನೆಲಾವರಿಕೆ, ಸೋನಾಮುಖಿ.

सोनार, पु. = सुनार.

सोनिया, सोनी, पु. ಚಿನ್ನದ ಧೂಳು ಬೆರೆತ ಮಣ್ಣಿನಿಂದ ಚಿನ್ನ ತೆಗೆಯುವವ, ಜಲಗಾರ.

सोपत, स्त्री. ಅನುಕೂಲ್ಯ. ಸೌಕರ್ಯ.

सोपान, पु. ಸೋಪಾನ, ಏಣಿ, ಮೆಟ್ಟಿಲು

सोफ़ता, स्त्री. ಏಕಾಂತಸ್ಥಳ; ವಿರಾಮ.

सोफ़ी, पु. = सूफ़ी.

सोभना, अक्रि. ಶೋಭಿಸು, ಒಪ್ಪು

सोभा, स्त्री. ಶೋಭಿಸುವಿಕೆ, ಪ್ರಭೆ; ಹೊಳಪು, ಕಾಂತಿ; ಆಭರಣ; ಉಡಿಗೆ.

सोमवार, पु. ಸೋಮವಾರ, ಇಂದುವಾರ.

सोमवारी, स्त्री. ಅಮಾಸೋಮವಾರ

सोया, पु. ಶತಗುಪ್ಪೆ, ಸಬ್ಬಸಿಗೆ.

सोरठा, पु. ಒಂದು ಛಂದಸ್ಸು.

सोरनी, स्त्री. ಪರಕೆ, ಬಲುರ್ಗ, ಹಿಡಿಲು

सोलह, वि. ಷೋಡಶ, ಹದಿನಾರು.

सोलहवां, वि. ಹದಿನಾರನೆಯ. पु. ಜೋಡು, ಮೆಟ್ಟು, ಎಕ್ಕಡ.

सोलही, स्त्री. ಹದಿನಾರು ಕವಡೆಯ ಆಟ; ಜೂಜಾಟ, ಜುಗಾರಾಟ.

सोला, पु. ಒಂದು ಮರ.

सोवत, वि. ನಿದ್ರಿಸುವ, ನಿದ್ರಿತ

सोवन, पु. ನಿದ್ರಿಸುವಿಕೆ, ನಿದ್ದೆ.

सोवाना, सक्रि. ಮಲಗಿಸು.

सोसन, पु. ಕುಮುದ, ನೈದಿಲೆ.

सोसना, सक्रि. ಸಹಿಸು; ಅನುಭವಿಸು.

सोसनी, वि. ನೀಲಿಬಣ್ಣದ, ನೀಲಿ.

सोह, स्त्री. ಲಾವಣ್ಯ, ಚೆಲುವು; ಅಲಂಕಾರ, ಭೂಷಣ; ಉಡಿಗೆ.

सोहगी, स्त्री. ವಿವಾಹದಲ್ಲಿ ಹೆಣ್ಣಿಗೆ ವಸ್ತ್ರಾದಿಗಳನ್ನು ಓದಿಸಿ ಕೊಡುವ ಶಾಸ್ತ್ರ; ಮಂಗಳ ವಸ್ತುಗಳು.

सोहन, वि. ಸುಂದರವಾದ; ಶೋಭಿಸುವ; ಸೊಗಸಾದ. पु. ಸುಂದರ ಪುರುಷ, ಚೆಲುವ, ಚೆನ್ನಿಗ; ಸ್ನೇಹಿತ. स्त्री. ಒಂದು ಪಕ್ಷಿ; ಅರ; ಸಾಣೆಕಲ್ಲು; ಒಂದು ತರಹ ಹಲ್ವಾ.

सोहन पपड़ी, स्त्री. **सोहन हलवा,** पु. ಒಂದು ಮಿಠಾಯಿ, ಸೋಹನ್ ಹಲ್ವಾ.

सोहना, अक्रि. ಶೋಭಿಸು, ಸೊಗಯಿಸು; ಚಂದಗಾಣು, ಒಪ್ಪು. सक्रि. ಕಳೆ ಕೀಳು, ಹರಗು. वि. ಸುಂದರವಾದ, ಸೊಗಸಾದ.

सोहनी, स्त्री. ಪೊರಕೆ, ಬಲುರ್ಗ, ಹಿಡಿಲು; ಒಂದು ರಾಗ.

सोहबत, स्त्री. ಸಹವಾಸ, ಒಡನಾಟ; ಸಮಾಗಮ, ಸಂಭೋಗ.

सोहबती, वि. ಸಂಗಾತಿ, ಒಡನಾಡಿ.

सोहर, वि. ಸುಂದರ; ಮನೋಹರ; ಶುಭ; ಮಂಗಳ.

सोहला, पु. ಜೋಗುಳ; ಮಂಗಳಗೀತೆ.

सोहा, वि. ಚೆಲುವಿನ, ಸೊಗಸಿನ.

सोहाई, स्त्री. ಕಳೆ ಕೀಳುವಿಕೆ, ಹರಗುವಿಕೆ; ಕಳೆ ಕೀಳಲು ಕೊಡುವ ಕೂಲಿ.

सोहाग, पु. = सुहाग.

सोहागा, पु. ಗದ್ದೆ ಹರಗುವ ಸಲಿಕೆ, ಕುಂಟೆ; ಬಿಳುಗಾರ, ಬಿಳಗಾರ.

सोहाना, अक्रि. ಶೋಭಿಸು, ಸೊಗಯಿಸು; ಪಸಂದಾಗು; ಒಪ್ಪು.

सोहारी, स्त्री. ಪೂರಿ.

सोहावना, वि. = सुहावना.

सौं, पु. ಒಳ್ಳೆಯ ಶಕುನ, ಶುಭ ಶಕುನ; ಶಪಥ.

सौंघा, वि. ಒಳ್ಳೆಯ, ಉತ್ತಮ.

सौंचना, सक्रि. ಶೌಚಮಾಡು.

सौंड, सौंडा, पु. ಹೊದಿಕೆ, ಹಚ್ಚಡ.

सौंदन, स्त्री. ಚವುಳು ಮಣ್ಣಿನ ನೀರಿನಲ್ಲಿ ಬಟ್ಟೆಗಳನ್ನು ತೊಳೆಯುವಿಕೆ.

सौंदना, सक्रि. ಕಲಸು, ಬೆರಸು, ಸೇರಿಸು.

सौंध, स्त्री. ಸುಗಂಧ, ಪರಿಮಳ.

सौंधना, सक्रि. = सोंधना.

सौंधाना, सक्रि. ಪರಿಮಳ ಕೊಡು.

सौंप, स्त्री. ಒಪ್ಪಿಸುವಿಕೆ, ಸುಪರ್ದು.

सौंपना, सक्रि. ಒಪ್ಪಿಸು, ವಹಿಸುಕೊಡು, ಸುಪರ್ದು ಮಾಡು.

सौंफ, स्त्री. ಶತಪುಷ್ಪ, ಸೋಪುಗಿಡ.

सौंराई, स्त्री. ಕಪ್ಪು, ಶ್ಯಾಮಲವರ್ಣ.

सौंरा, पु. ಕರಿಯ ವಸ್ತು; ಕುಡಿಕಪ್ಪು

सौंही, स्त्री. ಆಯುಧ, ಕೈದು.

सौ, वि. ನೂರು. सौगुना = ನೂರು ಪಾಲು, ನೂರು ಮಡಿ.

सौकन, स्त्री. ಸವತಿ.

सौगंद, स्त्री. ಶಪಥ, ಆಣೆ.

सौगंध, पु. ಸುಗಂಧ, ಪರಿಮಳ.

सौग़ात, स्त्री. ಅಪರೂಪದ ವಸ್ತು, ಅಪೂರ್ವ ವಸ್ತು; ಇಷ್ಟಮಿತ್ರರಿಗೆ ಉಪಾಯನ ಕೊಡಲು ಪರದೇಶದಿಂದ ತಂದ ಅಪೂರ್ವ ವಸ್ತು; ಉಪಾಯನ, ಉಪಹಾರ, ಉಡುಗೊರೆ.

सौग़ाती, वि. ಉಪಾಯನ ಕೊಡತಕ್ಕ; ಅಪರೂಪದ (ವಸ್ತು).

सौघा, वि. ಬೆಲೆ ಇಳಿದ, ಅಗ್ಗವಾದ.

सौच, पु. ಶೌಚ; ಶುದ್ಧಿ; ಪವಿತ್ರತೆ.

सौज, स्त्री. ಉಪಕರಣ, ಸೋಪಸ್ಕರ.

सौजा, पु. ಬೇಟೆಯ ಮೃಗ, ಬೇಟೆ.

सौत, स्त्री. ಸಪತ್ನಿ, ಸವತಿ; ಅವಳ ಮಕ್ಕಳು; ಶಬ್ದ; ಕೂಗು, ಕರೆ.

सौतन, सौतिन, स्त्री. ಸವತಿ.

सौतापा, पु. ಸವತಿತನ; ಸವತಿಯರ ದ್ವೇಷ.

सौतिया, वि. ಸವತಿಯ. सौतिया डाह = ಸವತಿಯರ ಪರಸ್ಪರ ದ್ವೇಷ; ಅಸೂಯೆ.

सौती, वि. ದ್ವೇಷವುಳ್ಳ, ಅಸೂಯೆ ಪಡುವ.

सौतेला, वि. ಸವತಿಯ, ಸಪತ್ನಿಯ; ಸಪತ್ನಿಯ ಸಂಬಂಧದ. सौतेला भाई = ಮಲ ತಮ್ಮ. सौतेला बाप = ಮಲ ತಂದೆ. सौतेली मां = ಮಲ ತಾಯಿ, ಬಲತಾಯಿ.

सौदा, पु. ಪಿತ್ತ; ಹುಚ್ಚು, ಪೈತ್ಯ; ಗೀಳು; ಪ್ರೇಮ; ವ್ಯಾಪಾರ, ಬೇರ; ವ್ಯಾಪಾರದ ಮಾಲು, ಸರಕು. सौदा सूत = ವ್ಯಾಪಾರ ಸಾಪಾರ. सौदा

सुलफ़ = ಸರಕು; ಬೇಪಾರ ಸಾಪಾರ.

सौदाई, वि. ಹುಚ್ಚು. ಉನ್ಮತ್ತ.

सौदागर, पु. ವ್ಯಾಪಾರಗಾರ, ವ್ಯಾಪಾರಿ, ವರ್ತಕ.

सौदागरी, स्त्री. ವ್ಯಾಪಾರ, ವಾಣಿಜ್ಯ; ವ್ಯಾಪಾರದ ಮಾಲು, ಸರಕು.

सौनिक, पु. ಬೇಟೆಗಾರ, ಬೇಡ; ಕಟುಕ.

सौनिया, पु. ಭವಿಷ್ಯ ಹೇಳುವವ.

सौम, पु. ಉಪವಾಸ, ಲಂಘನ.

सौर, स्त्री. ಹೊದಿಕೆ, ಹಚ್ಚಡ; ಒಂದು ಬಗೆ ಮೀನು; ಹೆರಿಗೆ ಮನೆ. वि. ಸೂರ್ಯನ, ಸೌರ.

सौरभ, पु. ಸುವಾಸನೆ, ಪರಿಮಳ; ಸೌಂದರ್ಯ, ಲಾವಣ್ಯ; ಖ್ಯಾತಿ.

सौरी, स्त्री. ಸೂತಿಕಾಗೃಹ, ಹೆರಿಗೆ ಮನೆ; ಒಂದು ಬಗೆ ಮೀನು.

सौहँ, स्त्री. ಶಪಥ, ಆಣೆ.

सौहीं, क्रिवि. ಎದುರಿಗೆ, ಸಮ್ಮುಖ.

स्तन, पु. ಸ್ತನ, ಮೊಲೆ.

स्तेज़ा, पु. ಜಗಳ; ವಾಗ್ವಾದ; ತಕರಾರು.

स्तुति, स्त्री. स्तोत्र, पु. ಪ್ರಶಂಸೆ, ಹೊಗಳಿಕೆ; ಸ್ತುತಿ, ಭಜನೆ.

स्त्री, स्त्री. ಹೆಂಗಸು, ಸ್ತ್ರೀ; ಹೆಂಡತಿ

स्थगित, वि. ನಿಲ್ಲಿಸಲ್ಪಟ್ಟ, ಮಾನಸಿಕ ಮಾಡಿದ, ಮುಂದಕ್ಕೆ ತಳ್ಳಿದ. स्थगित करना = ನಿಲ್ಲಿಸಿಡು.

स्थल, पु. ಭೂಮಿ, ಒಣನೆಲ; ಸ್ಥಳ, ಜಾಗ; ಮನೆ, ಬೀಡು; ಸ್ಥಿತಿ.

स्थान, पु. ಸ್ಥಾನ, ತಾಣ, ಜಾಗ, ಸ್ಥಳ.

स्थानापन्न, पु. ಬದಲಿ ಕೆಲಸ ನೋಡುವವ, ಹಂಗಾಮಿ.

स्थानी, वि. ಶಾಶ್ವತ, ನಿರಂತರ, ಕಾಯಂ.

स्थानीय, वि. ಸ್ಥಳದ, ಸ್ಥಳೀಯ.

स्थापना, स्त्री. ಸ್ಥಾಪನೆ. सक्रि. ಸ್ಥಾಪಿಸು; ನೆಡು, ನಾಟು.

स्थिति, स्त्री. ಸ್ಥಿತಿ, ಇರುವಿಕೆ.

स्नान, पु. ಸ್ನಾನ, ಮೀಹ.

स्नानघर, पु. ಸ್ನಾನದಮನೆ, ನೀರುಮನೆ

स्नेह, पु. ಸ್ನೇಹ, ಪ್ರೀತಿ.

स्नेही, पु. ಸ್ನೇಹಿತ, ಮಿತ್ರ; ಪ್ರಿಯ.

स्पर्द्धा, स्त्री. ಅಸೂಯೆ, ದ್ವೇಷ; ಹುರುಡು, ಪೋಟಾಪೋಟಿ.

स्पष्ट, वि. ಸ್ಪಷ್ಟವಾದ, ವಿಶದವಾದ.

स्फूर्ति, स्त्री. ಹುರುಪು, ಸ್ಫೂರ್ತಿ.

स्यान, पु. ಜಾಣತನ; ಚತುರತೆ; ತಂತ್ರ.

स्याना, वि. ಚತುರ, ಜಾಣ, ಗಟ್ಟಿಗ; ವಯಸ್ಸಾದವ, ಬಲಿತವ. पु. ಮಂತ್ರವಾದಿ, ಮಾಟಗಾರ.

स्यापा, पु. ಒಬ್ಬನ ಸಾವಿಗಾಗಿ ಹೆಂಗಸರು ಒಟ್ಟುಗೂಡಿ ಪ್ರತಿದಿನವೂ ಅಳುವಿಕೆ; ಗೋಳಾಟ, ಅಳಲು.

स्यार, पु = सियार.

स्याह, वि. ಕಪ್ಪಾದ, ಕರಿಯ.

स्याहा, पु. ಜಮಾಖರ್ಚಿನ ಪುಸ್ತಕ.

स्याही, स्त्री. ಕಪ್ಪು, ಶಾಯಿ, ಮಸಿ.

स्याहीचट, स्याहीसोख़, स्त्री. ಮಸಿ ಹೀರುವ ಕಾಗದ, ಒತ್ತು ಖರಡು, "ಬ್ಲಾಟಿಂಗು".

स्रवना, अक्रि. ಸ್ರವಿಸು, ಒಸರು.

स्वकीय, वि. ತನ್ನ. ಸ್ವಂತ.

स्वगत, क्रिवि. ತನಗೆ ತಾನೆ, ಆತ್ಮಗತ.
स्वच्छंद, वि. ಸ್ವತಂತ್ರ, ಮನಸ್ವಿ.
स्वतंत्र, वि. ಸ್ವತಂತ್ರವಾದ.
स्वतंत्रता, स्त्री. ಸ್ವತಂತ್ರತೆ, ಸ್ವಾತಂತ್ರ್ಯ.
स्वयं, सर्व. ತಾನಾಗಿಯೇ, ಸ್ವಯಂ.
स्वर, पु. ಸ್ವರ; ಧ್ವನಿ.
स्वरूप, पु. ಸ್ವರೂಪ, ಆಕಾರ.
स्वर्ग, पु. ಸ್ವರ್ಗ, ದೇವಲೋಕ.
स्वर्गवासी, वि. ಮೃತ, ದಿವಂಗತ.
स्वर्गीय, वि. ಸ್ವರ್ಗದ; ತೀರಿಹೋದ, ದಿವಂಗತ.
स्वांग, पु. ವೇಷ, ಸೋಗು; ನಕಲಿ.
स्वांगिन, स्त्री. ವೇಷಗಾತಿ, ನಟಿ.
स्वांगी, पु. ವೇಷಗಾರ, ನಕಲಿಯವ.
स्वागत, पु. ಸ್ವಾಗತ, ಸುಖಾಗಮನ.
स्वाद, पु. ರುಚಿ, ಸವಿ.
स्वार्थ, पु. ತನ್ನ ಹಿತ, ಸ್ವಾರ್ಥ. स्वार्थ लेना = ಮುತುವರ್ಜಿ ತೋರಿಸು, ಅಕ್ಕರೆಗೊಳ್ಳು.
स्वास्थ्य, पु. ಆರೋಗ್ಯ. ಸ್ವಾಸ್ಥ್ಯ.
स्वाहा, पु. ಸ್ವಾಹಾ.
स्वीकार, पु. ಒಪ್ಪಿಗೆ, ಅಂಗೀಕಾರ; ಸ್ವೀಕಾರ
स्वीकृत, वि. ಒಪ್ಪಿಗೆಯಾದ, ಅಂಗೀಕೃತ; ಸ್ವೀಕೃತ. स्वीकृत होना = ಸ್ವೀಕರಿಸಲ್ಪಡು.
स्वीकृति, स्त्री. ಒಪ್ಪಿಗೆ, ಅಂಗೀಕಾರ; ಸಮ್ಮತಿ.

ह

हंकड़ना, हंकरना, अक्रि. ಕೂಗು, ಗರ್ಜಿಸು.
हंकवा, पु. ಕೂಗುಗಳಿಂದ ಅಟ್ಟಿ ಹುಲಿಯನ್ನು ಹಿಡಿಯುವ ಒಂದು ಬಗೆ
हंकवाना, सक्रि. ಕೂಗಿಸು, ಅಟ್ಟಿಸು.
हंका, पु. ಕೂಗುವಿಕೆ, ಹುಂಕಾರ.
हंकाई, पु. ಅಟ್ಟುವುದರ ಕೂಲಿ; ಗಾಡಿ ಹೊಡೆಯುವುದರ ಕೂಲಿ.
हंकाटा, पु. ಕೂಗು, ಕರೆ; ಶಬ್ದ.
हंकाना, सक्रि. ಕೂಗು, ಚಪ್ಪರಿಸು; ಅಟ್ಟು, ಹೊಡೆ, ತರುಬು, ಓಡಿಸು
हंकार, स्त्री. ಕೂಗುವಿಕೆ, ಕೂಗು; ಭೋರಿಡುವಿಕೆ, ಹುಂಕಾರ, ಜಂಕಣೆ.
हंकारना, सक्रि. ಕೂಗು, ಕರೆ; ಚಪ್ಪರಿಸು; ಅಟ್ಟು, ತರುಬು; (ಗಾಡಿ)ಹೊಡೆ अक्रि. ಕೂಗಾಡು. ಅಬ್ಬರಿಸು.
हंकारा, पु. ಕೂಗುವಿಕೆ, ಕರೆ; ಹುಂಕಾರ.
हंकारी, पु. ಕರೆಯುವವ; ದೂತ. स्त्री. ಅಹಂಕಾರ.
हंकालना, सक्रि. ಅಟ್ಟು, ತರುಬು.
हंग, पु. ತಿಳುವಳಿಕೆ; ಅರಿವು, ಬುದ್ಧಿ; ಅಧಿಕಾರ; ಅಂತಸ್ತು, ಘನತೆ; ವಿಚಾರ, ಅಭಿಪ್ರಾಯ; ಶಕ್ತಿ; ಸಾಮರ್ಥ್ಯ, ಯೋಗ್ಯತೆ.
हंगाम, पु. ಋತು, ಕಾಲ; ಸಭೆ, ಸದಸ್ಸು.
हंगामा, पु. ಸಭೆ; ಕೂಟ; ಗುಂಪು; ಗಲಭೆ, ಗಲಾಟೆ; ಜಗಳ, ಕಲಹ; ಉಪದ್ರವ, ಉಪಟಳ; ಅವಾಂತರ; ಗದ

ಬಿಡಿ; ಧಾಳಿ.

हंगामी, वि. ಪ್ರಾಪಂಚಿಕ, ಲೌಕಿಕ; ತಾತ್ಕಾಲಿಕ.

हंजरा, पु. ಗಂಟಲು, ಕಂಠನಾಳ.

हंजार, पु. ಮಟ್ಟಪಲಗೆ; ಮಾರ್ಗ; ಪಥ; ಸಂಪ್ರದಾಯ.

हंटर, स्त्री. ಬಾರುಕೋಲು, ಚಾವಟಿ, ಚಬುಕು.

हंडना, अक्रि. ತಿರುಗಾಡು, ಅಲೆಯು.

हंडा, पु. ಹಂಡೆ; ಕಡಾಯಿ, ಕೊಪ್ಪರಿಗೆ; ಹೊಂಡ; ಒಂದು ಬಗೆ ಹುಲ್ಲು.

हंडाना, सक्रि. ತಿರುಗಿಸು, ಸುತ್ತಿಸು, ಬಳಸು; ಅವಮಾನ ಪಡಿಸು.

हंडिया, **हंडी**, स्त्री. ಕೊಪ್ಪರಿಗೆ, ಬಾನೆ; ಗಾಜಿನ ಬಾನೆ; ರುಚಿ, ಸವಿ

हंफनी, स्त्री. ಏದುವಿಕೆ, ಮೇಲುಸಿರು

हंफाना, सक्रि. ಏದುವಂತೆ ಮಾಡು.

हंफैल, वि. ಮೇಲುಸಿರು ಬಿಡುವ.

हंस, पु. ಹಂಸ; ನಗು, ಹಾಸ. हंस मुख, हंस मुंह = ಹಸನ್ಮುಖದ, ನಗುಮೊಗದ.

हंसन, स्त्री. ನಗುವಿಕೆ, ನಗೆ.

हंसना, अक्रि. ನಗು, ನಗೆಯಾಡು; ಪರಿಹಾಸ ಮಾಡು, ಗೇಲಿಮಾಡು.

हंसली, स्त्री. ಕುತ್ತಿಗೆಯ ಕೆಳಗಣ ಎಲುಬು, ಜತ್ರು, ಹೆಡಕು; ಕುತ್ತಿಗೆಯ ಒಂದು ಆಭರಣ, ಅಸಲಿ; ಪಕ್ಷಿಗಳ ಕಂಠದಲ್ಲಿರುವ ವರ್ಕಲ.

हंसाई, स्त्री. ನಗೆ, ನಗಚಾಟಿಕೆ; ಗೇಲಿ.

हंसाऊ, वि. ಹಾಸ್ಯಾಸ್ಪದವಾದ.

हंसाना, सक्रि. ನಗಿಸು; ಆನಂದಪಡಿಸು.

हंसनी, **हंसिन**, **हंसिनी**, **हंसी**, स्त्री. ಹೆಣ್ಣು ಹಂಸ.

हंसिया, स्त्री. हंसुआ, पु. ಕೊಯಿಲು ಕತ್ತಿ, ಕುಡುಗೋಲು.

हंसी, स्त्री. ನಗೆ, ನಗಚಾಟಿಕೆ, ಹಾಸ್ಯ; ಪರಿಹಾಸ, ಗೇಲಿ; ವಿನೋದ. हंसी ठट्ठा, हंसी दिल्लगी, हंसी मज़ाक = ಚಕ್ಕಂದ, ನಗಚಾಟಿಕೆ, ತಮಾಷೆ. हंसी खुशी = ಸುಖಸಂತೋಷ; ಖುಷಿ; ಸಂತೋಷದಿಂದ, ಖುಷಿಯಾಗಿ.

हंसोड़, पु. ಹಾಸ್ಯಗಾರ, ಸಬ್ಬವಕಾರ; ಕುಚೋದ್ಯಗಾರ; ನಗೆಗಾರ.

हंसोड़ना, अक्रि. ನಗು; ಪರಿಹಾಸ ಮಾಡು.

हंसोड़पन, **हंसोड़पना**, पु. ತಮಾಷೆ, ಪರಿಹಾಸ, ಗೇಲಿ.

हंसौवा, पु. ಹಾಸ್ಯಕ್ಕೆ ಗುರಿಯಾದವ, ನಗೆಗೇಡಿ, ನಗಪಾಟಲ.

हई, स्त्री. ಆಶ್ಚರ್ಯ, ವಿಸ್ಮಯ.

हक़, वि. ನಿಜವಾದ, ಸತ್ಯವಾದ; ನ್ಯಾಯವಾದ; ಯುಕ್ತವಾದ. पु. ಸ್ವತ್ವ, ಅಧಿಕಾರ; ಬಾಧ್ಯತೆ, ಹಕ್ಕು; ಕರ್ತವ್ಯ; ಲಾಭ, ನಫೆ; ನಿಜವಾದ ಮಾತು; ನ್ಯಾಯ; ಸತ್ಯ; ಭಗವಂತ, ಈಶ್ವರ.

हक़दार, पु. ಬಾಧ್ಯಸ್ಥ, ಹಕ್ಕುದಾರ.

हकबकाना, अक्रि. ಕಕ್ಕಾಬಿಕ್ಕಿಯಾಗು; ಬೆಚ್ಚಿ ಬೆರಗಾಗು; ಚಕಿತನಾಗು.

हकम, पु. ಮಧ್ಯಸ್ಥ; ಮಧ್ಯಸ್ಥಗಾರ.

हकला, **हकलाहा**, वि. ಉಗ್ಗುವವ,

ತೊದಲ, ನತ್ತಿಬಾಯಿ.

हकलाना, अक्रि. ತೊದಲು, ಉಗ್ಗು, ಎಬಡಿಸು, ಗುಕ್ಕಿ ಮಾತಾಡು, ನತ್ತಿ ಮಾತಾಡು.

हकलापन, पु. **हकलाहट**, स्त्री. ತೊದಲುವಿಕೆ, ಉಗ್ಗುವಿಕೆ, ಗುಕ್ಕಿ ಮಾತಾಡುವಿಕೆ.

हकारना, सक्रि. ಕೂಗು, ಅಟ್ಟು.

हक़ीक़त, स्त्री. ಸತ್ವ, ಸಾರ; ಸತ್ಯತೆ, ನಿಜ ವರ್ತಮಾನ; ಕಥೆ; ವಾಸ್ತವ, ನಿಜ; ಯಥಾರ್ಥ.

हक़ीक़तन्, क्रिवि. ಯಥಾರ್ಥವಾಗಿ, ನಿಜವಾಗಿ.

हक़ीक़ी, वि. ನಿಜವಾದ, ಯಥಾರ್ಥವಾದ; ಮುಖ್ಯವಾದ; ಸ್ವಂತ

हकीम, पु. ವಿದ್ವಾನ್, ಪಂಡಿತ; ವೈದ್ಯ, ಹಕೀಮು.

हकीमी, स्त्री. ವೈದ್ಯಶಾಸ್ತ್ರ; ವೈದ್ಯವೃತ್ತಿ.

हक़ीर, वि. ತುಚ್ಛ, ನಿಕೃಷ್ಟ; ನಿರ್ಬಲ.

हक़ीरी, स्त्री. ನಿಕೃಷ್ಟತೆ, ಹೀನತೆ

हक्क, पु. ಕೆರೆಯುವಿಕೆ, ಹೆರೆಯುವಿಕೆ.

हक्काक, पु. ರತ್ನದ ಕೆಲಸ ಮಾಡುವವ

हक्का-बक्का, वि. ಬೆಚ್ಚಿಬಿದ್ದ, ಬೆರಗಾದ; ಚಕಿತನಾದ; ಕಕ್ಕಾಬಿಕ್ಕಿಯಾದ, ಕಕ್ಕುಬಿಕ್ಕಾದ.

हक्की, स्त्री. ಹೆರೆಯುವ ಚಾಕು.

हगंडा, वि. ಮಲದಿಂದ ಹೊಲಸಾದ; ಗಲೀಜಾದ.

हगना, अक्रि. ಹೇಲು, ಹಿತ್ತಲಿಗೆ ಹೋಗು.

हगाना, सक्रि. ಹೇಲುವಂತೆ ಮಾಡು.

हगास, स्त्री. ಹಿತ್ತಲಿಗೆ ಬರುವಿಕೆ, ಭೇದಿ; ಶೀತಭೇದಿ.

हचकना, अक्रि. ಧಕ್ಕೆತಗಲು, ಪೆಟ್ಟಾಗು; ತಾಟಾಡು, ತಟ್ಟಾಡು.

हचका, **हचकोला**, पु ಧಕ್ಕೆ, ಪೆಟ್ಟು; ತಾಟಾಡುವಿಕೆ, ತಾಟಾಟ.

हचर-मचर, पु. ಜಗಳ; ನೆಪ.

हज, पु. ಮಕ್ಕಾನಗರಕ್ಕೆ ತೀರ್ಥಯಾತ್ರೆ.

हज़, पु. ಅದೃಷ್ಟ, ಭಾಗ್ಯ; ಶುಭ; ಆನಂದ, ಹರ್ಷ; ಖುಷಿ; ಭಾಗ, ಪಾಲು.

हज़म, पु. ಒಡಿಸುವಿಕೆ, ಹಿಮ್ಮೆಟ್ಟಿಸುವಿಕೆ; ಅರಗುವಿಕೆ, ಜೀರ್ಣ; ಭಪಾವಣೆ. वि. ಜೀರ್ಣವಾದ, ದಕ್ಕಿಸಿಕೊಂಡ.

हजम, स्त्री. ದಪ್ಪ; ಎತ್ತರ, ಆಕಾರ; ದಾಳಿ, ಆಕ್ರಮಣ.

हजर, पु. ಶಿಲೆ, ಕಲ್ಲು; ನಿರೋಧ.

हज़रत, स्त्री. ಸಾನ್ನಿಧ್ಯ, ಸನ್ನಿಧಾನ; ಘನತೆ. पु. ಘನವಂತ, ಮಹಾಶಯ, ಮಾನನೀಯ.

हज़ल, पु. ಪರಿಹಾಸ, ಗೇಲಿ.

हजला, पु. ಗವುಜುಹಕ್ಕಿ; ಪರದೆ, ತೆರೆ; ಮದುವೆಯ ಹಸೆ.

हजामत, स्त्री. ಕ್ಷೌರ, ಆಯುಷ್ಕರ್ಮ, ಹಜಾಮತ್ತು, ಭದ್ರಾಕರಣ; ಕ್ಷೌರಕನ ಕೆಲಸ, ಉದ್ಯೋಗ; ಕ್ಷೌರದ ಕೂಲಿ.

हज़ार, पु ಬುಲ್‌ಬುಲ್ ಪಕ್ಷಿ. वि. ಸಾವಿರ, ಸಹಸ್ರ; ಅನೇಕ.

हज़ार-दास्तां, पु. ಇಂಪಾಗಿ ಹಾಡುವ ಒಂದು ಪಕ್ಷಿ.

हज़ारह, हज़ारा, वि ಸಹಸ್ರ ದಳ. पु. ಸಾವಿರದ ಸಮೂಹ; ಕರ್ಣಕುಂಡಲ ಹೂ; ನೀರಿನ ಹನಿ; ಧಾರಾಯಂತ್ರ; ಒಂದು ಬಗೆ ಬಾಣ ಬಿರುಸು.

हज़ारी, पु. ಸಾವಿರ ಸಿಪಾಯಿಗಳ ನಾಯಕ; ಸರದಾರ; ವರ್ಣಸಂಕರ. हज़ारी बज़ारी = ಬಡವರು ಭಾಗ್ಯವಂತರು.

हजो, स्त्री. ನಿಂದೆ; ವಿಡಂಬನ.

हजोड़ा, पु. ವಿಡಂಬನಕಾರ.

हज्जाज, वि. ದಬ್ಬಾಳಿಕೆಯವ, ಜುಲುಂ ಮಾಡುವವ, ಕ್ರೂರಶಾಸಕ.

हज्जाम, पु. ಕ್ಷೌರಕ, ನಾಯಿಂದ, ನಾಪಿತ, ಕೆಲಸಿಗ, ಹಜಾಮು.

हज्जामिन, हज्जामिनी, स्त्री. हज्जाम का स्त्री. रूप.

हज़्ज़ाल, पु. ಹಾಸ್ಯಗಾರ, ವಿದೂಷಕ.

हट, पु. ಅಡ್ಡಿ, ತಡೆ. अव्य. ಛೀ, ತೊಲಗು.

हटक, स्त्री. ತಡೆಯುವಿಕೆ, ಅಟ್ಟುವಿಕೆ.

हटकन, स्त्री. ಅಟ್ಟುವಿಕೆ; ದನಕರುಗಳನ್ನು ಅಟ್ಟುವ ಕೋಲು.

हटकना, अक्रि. ನಿಲ್ಲು; ಬೆಚ್ಚು; ಓಡು; ಹಿಮ್ಮೆಟ್ಟು.

हटकाना, सक्रि. ನಿಲ್ಲಿಸು, ತಡೆ; ಬೆಚ್ಚಿಸು; ಓಡಿಸು; ಅಟ್ಟು, ತರುಬು.

हटका-हटकी, स्त्री. ಹಿಮ್ಮೆಟ್ಟಿಸುವಿಕೆ, ಅಟ್ಟುವಿಕೆ.

हटतार, पु. ಹರತಾಳ. स्त्री. ಮಾಲೆ ಕಟ್ಟುವ ದಾರ.

हटना, अक्रि. ಅಗಲು; ಸರಿ, ಸರಕು; ಜರುಗು, ಜಾರು; ಹಿಮ್ಮೆಟ್ಟು, ಹಿಂಜರಿ; ಜುಣುಗು; ತೊಲಗು, ನೀಗು.

हटवा, पु. ಅಂಗಡಿಯವ; ಧಾನ್ಯವನ್ನಳೆಯುವವ.

हटवाई, स्त्री. ಮಾರಾಟ, ವ್ಯಾಪಾರ; ಅಳೆಯುವ ಕೆಲಸ; ಧಾನ್ಯಗಳನ್ನಳೆಯಲು ಕೂಲಿ.

हटवाना, सक्रि. ಸರಿಸು; ಜರುಗಿಸು; ಹಿಮ್ಮೆಟ್ಟಿಸು, ನೂಕು.

हटवार, पु. ಅಂಗಡಿಯವ.

हटाऊ, वि. ಸರಿದಿರುವ, ಜಾರಿದ; ದೂರವಾಗಿರುವ; ನೀಚ, ನಿಕೃಷ್ಟ.

हटाना, सक्रि. ಸರಿಸು; ಜರುಗಿಸು; ತೊಲಗಿಸು, ನೀಗಿಸು; ನೂಕು; ದೂರ ಮಾಡು; ಪ್ರತ್ಯೇಕಿಸು; ಹಿಮ್ಮೆಟ್ಟಿಸು, ಹಿಂದೂಡು; ತರುಬು.

हटाव, पु. ಸರಿಯುವಿಕೆ; ಹಿಮ್ಮೆಟ್ಟುವಿಕೆ.

हटिया, स्त्री. हट्ट, पु. ಅಂಗಡಿ, ಪೇಟೆ; ಸಂತೆ.

हट्ट, पु. ದೊಡ್ಡ ಕೊಡತಿ.

हट्टा-कट्टा, हट्टा-बट्टा, वि. ಗಟ್ಟಿಮುಟ್ಟಾದ, ಲಟ್ಟಮುಟ್ಟ, ಕಟ್ಟುಮಸ್ತಾದ; ಗಡುತರ, ತೋರ.

हट्टी, स्त्री. ಅಂಗಡಿ, ಪೇಟೆ; ಹಿಂಡು, ಮಂದೆ.

हठ, पु. ಹಠ, ಮುಷ್ಕರ; ಚಂಡಿತನ, ಮೊಂಡಾಟ; ದೃಢಪ್ರತಿಜ್ಞೆ; ಬಲಾತ್ಕಾರ, ಬಲವಂತ; ಸಿಟ್ಟು.

हठधर्मी, पु. ಹಟಮಾರಿ, ಮೊಂಡ.

हठना, अक्रि. ಹಟ ಹಿಡಿ, ಮುಷ್ಕರ ಹಿಡಿ, ಪಟ್ಟುಹಿಡಿ; ಚಂಡಿಸು, ಮೊಂಡ

ಶನ ಮಾಡು.

हठात्, क्रिवि. ಹಠಾತ್ತಾಗಿ, ತಟಕ್ಕನೆ; ಅಕಸ್ಮಾತ್ತಾಗಿ; ಬಲಾತ್ಕಾರದಿಂದ.

हठी, वि. ಹಟಮಾರಿ; ಚಂಡಿಖೋರ.

हठीला, वि. ಚಂಡಿಖೋರ, ಮೊಂಡ; ಹಟಮಾರಿ; ದೃಢ ಪ್ರತಿಜ್ಞೆಯವ.

हड़ंगा, पु. ನಾಶ, ಹಾಳು

हड़, पु. ಮೂಳೆ, ಎಲುಬು, ಅಸ್ಥಿ. स्त्री. ಅಳಲೆಕಾಯಿ; ಅಳಲೆಕಾಯಿಯ ಆಕಾರದ ಲೋಲಕು.

हड़कंप, पु. ದೊಂದುಳಿ, ಧಾಂದಲೆ; ಗದ್ದಲ, ಗಲಭೆ; ಅಳಿದಾಳಿ, ಅಲ್ಲೋಲ ಕಲ್ಲೋಲ

हड़क, स्त्री. ದಾಹ; ಗೀಳು, ಹಂಬಲ.

हड़कना, अक्रि. ಹಂಬಲಿಸು, ಹಾತೊರೆ.

हड़काना, सक्रि. ಹಂಬಲ ಹುಟ್ಟಿಸು; ಅಗಲಿಸು.

हड़गीला, पु. ದೊಡ್ಡ ಕೊಕ್ಕರೆ.

हड़जोड़, हड़जोड़ा, पु. ಸಂಗರವಳ್ಳಿ; ಮೂಳೆಗಳನ್ನು ಸರಿಪಡಿಸುವವ.

हड़ताल, स्त्री. ಅತೃಪ್ತಿಯನ್ನು ಸೂಚಿಸಲು ಒಕ್ಕಟ್ಟಿನಿಂದ ಅಂಗಡಿಗಳನ್ನು ಮುಚ್ಚುವಿಕೆ, ಹರತಾಳ.

हड़ना, अक्रि. ತೂಕ ಮಾಡಲ್ಪಡು, ತೂಗು. सक्रि. ಪೇರು ಕಟ್ಟು.

हड़प, पु. ನುಂಗುವಿಕೆ, ಗಬಕ್, ಗಡಪು. हड़प लेना=ದಕ್ಕಿಸಿಕೊಳ್ಳು; ಮಿಂಗು.

हड़पना, सक्रि. ನುಂಗು, ಮಿಂಗು; ಜೀರ್ಣಿಸಿಕೊಳ್ಳು; ದಕ್ಕಿಸಿಕೊಳ್ಳು.

हड़फूटन, पु. ಎಲುಬಿನಲ್ಲಿನ ನೋವು.

हड़बड़, स्त्री. ಲಗುಬಗೆ, ಸಡಗರ, ಸಂಭ್ರಮ; ಆತುರ, ತ್ವರೆ.

हड़बड़ाना, अक्रि. ಆತುರಪಡು, ತ್ವರೆ ಮಾಡು; ತಡಬಡಿಸು. सक्रि. ಅವಸರಪಡಿಸು, ಆತುರಪಡಿಸು; ತ್ವರೆಮಾಡಿಸು

हड़बड़िया, वि. ಆತುರಪಡುವವ; ತರಾತುರಿ ಮಾಡುವವ, ತ್ವರೆಗಾರ; ದುಡುಕಿನವ.

हड़बड़ी, स्त्री. ಲಗುಬಗೆ, ಆತುರ; ಅವಸರ, ತರಾತುರಿ; ತ್ವರೆ, ಭರ; ಗಡಿಬಿಡಿ.

हड़बोंग, पु. =हरबोंग.

हड़वार, पु. ಎಲುಬುಗಳನ್ನಿಡುವ ಸ್ಥಳ, ಅಸ್ಥಿಸಂಚಯನ ಗೃಹ.

हड़हड़ाना, सक्रि. ಅವಸರಪಡಿಸು, ಆತುರಪಡಿಸು, ತ್ವರೆಮಾಡಿಸು.

हड़हड़ाहट, सक्रि. ಹಡಹಡ ಶಬ್ದ.

हड़हड़ी, स्त्री. ಅವಸರ; ತರಾತುರಿ; ಗುಂಪು.

हड़ा, पु. ಅರಾಟಬಾಣ.

हड़ावरी, हड़ावल, स्त्री. ಎಲುಬಿನ ಗೂಡು, ಅಸ್ಥಿಪಂಜರ; ಎಲುಬಿನ ಹಾರ.

हड्डा, पु. ಕಣಜದ ಹುಳು, ಕಣಜ, ಹೆದ್ದುಂಬಿ; ಎಲುಬು, ಅಸ್ಥಿ, ಮೂಳೆ; ಕುದುರೆಯ ಮೊಣಕಾಲಿನ ಬಾವು, ಕೀಲುಮುಂಡಿ.

हड्डियाना, अक्रि. ಎಲುಬಾಗು; ಗಂಟಾಗು.

हड्डी, स्त्री. ಎಲುಬು, ಅಸ್ಥಿ; ಕಟ್ಟು, ಚೀಗು.

हड्डीला, वि. ಎಲುಬಿನ; ಗಟ್ಟಿಯಾದ.
हतक, स्त्री. ಅವಮಾನ, ಅಗೌರವ; ಅನಾದರ, ಅವಜ್ಞೆ.
हतना, सक्रि. ವಧೆ ಮಾಡು, ಕೊಲ್ಲು; ಹೊಡೆ; ಸಾಯಿಸು.
हतभागा, हतभागी, हतभाग्य, वि. ನಿರ್ಭಾಗ್ಯ, ಭಾಗ್ಯಹೀನ.
हतवाना, हताना, सक्रि. ಕೊಲ್ಲಿಸು; ಸಾಯಿಸು.
हताश, वि. ನಿರಾಶನಾದ, ಹತಾಶ, ಭಗ್ನಾಶ.
हताशा, स्त्री. ನಿರಾಶೆ, ಆಶಾಭಂಗ.
हताहत, वि. ಹತನಾದ.
हतेड़ी, स्त्री. =हथेली
हतेड़ी-बतेड़ी, स्त्री. ಗುಡುಕಟ್ಟ, ಸೂಳೆ.
हत्था, पु. ಹಿಡಿ, ಹಿಡಿಕೆ, ಕಾವು; ನೀರು ಹಾಯಿಸುವ ಮರದ ತಟ್ಟೆ; ಬಾಳೆಯ ಗೊನೆ, ಜೊಂಪೆ.
हत्थी, स्त्री. ಹಿಡಿ, ಹಿಡಿಕೆ, ಕೈಪಿಡಿ; ಕಾವು. ಮೋಹಳ.
हत्थे, क्रिवि. ಕೈಯಲ್ಲಿ.
हत्या, स्त्री. ವಧೆ, ಕೊಲೆ, ಖೂನಿ; ಜಂಜಡ, ಜಗಳ.
हत्याई, स्त्री. ಬಲಾತ್ಕಾರ; ಕೊಲೆ.
हत्याकांड, पु. ಕೊಲೆ, ನರಹತ್ಯೆ.
हत्यारा, पु. ಕೊಲೆಗಾರ.
हत्यारिन, स्त्री. ಕೊಲೆಪಾತಕಿ.
हत्यारी, स्त्री. ಕೊಲೆಪಾತಕಿ, ಕೊಲೆ.
हथ-उधार, पु. ಕೈಗಡ, ಮೂಬದಲ ಸಾಲ.
हथ-उधारू, वि. ಕೈಗಡವಾಗಿ ಕೊಟ್ಟ (ಹಣ), ಮೂಬದಲು.
हथकंडा, पु. ಹಸ್ತಲಾಘವ, ಕೈಚಳಕ, ಚಾಕಚಕ್ಯ; ಚಮತ್ಕಾರ, ಕೈಮಾಟ.
हथकड़ा, पु. ಕೈಬಳೆ; ಕೈಕೋಳ.
हथकड़ी, स्त्री. ಕೈಕೋಳ, ಸಂಕೋಲೆ, ಬೇಡಿ; ಕೈಪಿಡಿ, ಹಿಡಿಕೆ.
हथखोड़, पु. ಕೈಕೋಳ, ಬೇಡಿ.
हथचक्की, स्त्री. ಸಣ್ಣ ಬೀಸುವ ಕಲ್ಲು.
हथचल, वि. ಚತುರ, ತಂತ್ರಗಾರ.
हथ-चिट्ठा, पु. ಕೈಕಾಗದ, ರಸೀದಿ.
हथछुट, वि. ಹೊಡೆಯುವವ, ಬಡಿಯುವವ.
हथझोंका, पु. ಕೈಗಾಡಿ, ಕೈಬಂಡಿ.
हथनाल, पु. ಆನೆಯ ಮೇಲೆ ಒಯ್ಯುವ ಸಣ್ಣ ಫಿರಂಗಿ.
हथनी, स्त्री. ಹೆಣ್ಣಾನೆ, ಪಿಡಿಯಾನೆ.
हथफूल, पु. ಮಣಿಕಟ್ಟಿನಲ್ಲಿ ಧರಿಸುವ ಸರಪಳಿ; ಒಂದು ಬಗೆ ಬಾಣಬಿರುಸು.
हथफेर, पु. ನೇವರಿಸುವಿಕೆ, ಕೈಯಾಡುವಿಕೆ; ಕೈಚಳಕ; ಕೈಗಡ, ಹೊರಳೆ; ತಾರತಕ್ಕಡಿ.
हथबंधा, वि. ಕೈಗಳನ್ನು ಕಟ್ಟಿದ; ಕೈಕೋಳ ಹಾಕಿದ.
हथ-बल, पु. ಹಸ್ತಬಲ; ಶಕ್ತಿ; ಠಕ್ಯ, ದಗಲುಬಾಜಿ.
हथ-मारू, पु. ಕದಿಯುವವ, ಕೈಗಡಕ.
हथ-रस, पु. ಹಸ್ತಮೈಥುನ, ಮುಷ್ಟಿಮೈಥುನ
हथरी, स्त्री. ಹಿಡಿಕೆ, ಹಿಡಿ, ಕಾವು.

हथल, पु.=हथेली.

हथ-लपक, पु. ಕಳ್ಳ; ಸುಲಿಗೆಗಾರ.

हथलेवा, पु. ಮದುವೆ ಹೆಣ್ಣಿನ ಕೈಯನ್ನು ಮದವಣಿಗನು ತನ್ನ ಕೈಯಲ್ಲಿ ಹಿಡಿದುಕೊಳ್ಳುವಿಕೆ, ಪಾಣಿಗ್ರಹಣ.

हथवांस, पु. ದೋಣಿ ನಡೆಸುವ ಸಲಕರಣೆ, ಹುಟ್ಟು, ಜಳವೆ; ಚುಕ್ಕಾಣಿ.

हथसंकर, हथसांकर, पु. ಮಣಿಕಟ್ಟಿನಲ್ಲಿ ಧರಿಸುವ ಸರಪಣಿ, ಕೈ ಸರಪಣಿ

हथसार, हथसाल, स्त्री. ಗಜಶಾಲೆ.

हथा, पु. ನೀರು ಎರಚುವ ಮುಟ್ಟು; ಹಿಡಿ, ಹಿಡಿಕೆ, ಕಾವು, ಕೈಪಿಡಿ.

हथाई, स्त्री. ಸಭೆ, ಕೂಟ.

हथिनी, स्त्री. ಹೆಣ್ಣಾನೆ, ಪಿಡಿಯಾನೆ

हथिया, पु. ಹಸ್ತನಕ್ಷತ್ರ; ಸಣ್ಣ ಕೈ. ಕಿರುಗೈ; ಸಣ್ಣ ಹಿಡಿಕೆ, ಕಾವು.

हथियाई, स्त्री. ಅನೆತನ.

हथियाना, सक्रि. ಕೈಮಾಡು; ಹಿಡಿ, ಹಿಡಿದ-ಕೊಳ್ಳು, ತುಡುಕು; ಆಕ್ರಮಿಸು; ಅಪಹರಿಸು.

हथियार, पु. ಉಪಕರಣ, ಸಲಕರಣೆ; ಮುಟ್ಟು, ಹತ್ಯಾರು, ಆಯುಧ; ಶಸ್ತ್ರ, ಕೈದು.

हथियारबंद, वि. ಆಯುಧ ಹಿಡಿದವ, ಶಸ್ತ್ರಧಾರಿ, ಕೈದುಕಾರ.

हथिसाल, स्त्री. ಗಜಶಾಲೆ.

हथी, स्त्री. ಕುದುರೆಯ ಮೈ ಉಜ್ಜುವ ಕುಂಚ, ಮಾಲೀಸು ಮಾಡುವ ಕುಂಚ; ಸಣ್ಣ ಹಿಡಿ.

हथीली, स्त्री. ನೇಗಿಲ ಹಿಡಿ.

हथे-बाज़, हथेला, पु. ಕದಿಯುವವ, ಕೈಗಡಕ; ಕಳ್ಳ.

हथेली, स्त्री. ಕರತಲ, ಅಂಗೈ. ಅಡಿಗೈ.

हथेव, पु. ಸುತ್ತಿಗೆ, ಕೊಡತಿ.

हथौटी, स्त्री. ಹಸ್ತಕೌಶಲ, ಕೈಚಳಕ, ಚಾತುರ್ಯ; ಜಾಣತನ. वि. ಚತುರ.

हथौड़ा, पु. ಚಮಟಿಗೆ. ಸುತ್ತಿಗೆ, ಕೊಡತಿ

हथौड़ियाना, सक्रि. ಸುತ್ತಿಗೆಯಿಂದ ಹೊಡೆ

हथौड़ी, स्त्री. ಚಿಕ್ಕ ಕೊಡತಿ, ಸುತ್ತಿಗೆ.

हद, हद्द, स्त्री. ಎಲ್ಲೆ, ಮೇರೆ, ಹದ್ದು, ಗಡಿ; ಮಿತಿ, ಮಟ್ಟು; ಪರಮಾವಧಿ, ನಿಲುಕು; ತಡೆ, ಅಡಚಣೆ, ವಿಘ್ನ; ಅಗಲಿಕೆ. हद बांधना=ಮಿತಿಗಟ್ಟು; ವ್ಯವಸ್ಥೆಮಾಡು हद से ज़्यादा=ಮಟ್ಟುಮೀರಿ.

हदफ़, पु. ಗುರಿ, ಲಕ್ಷ್ಯ.

हदबंदी, स्त्री. ಎಲ್ಲೆ, ಎಲ್ಲೆ ಕಟ್ಟುವಿಕೆ; ಮೇರೆ ಕಲ್ಲು, ಬಾಂದು ಕಲ್ಲು.

हद्द-बस्त, स्त्री. ಎಲ್ಲೆಕಟ್ಟುವಿಕೆ, ಮೇರೆ.

हदरत, स्त्री. ಭೂಕಂಪ, ನೆಲನಡುಗು.

हदरना, अक्रि. ನಡುಗು, ಕಂಪಿಸು.

हदराना, सक्रि. ನಡುಗಿಸು; ಅಲುಗಿಸು.

हदस, पु. ಹೊಸ ಸಂಗತಿ; ನವೀನತೆ; ಅಶುದ್ಧ; ಕೊಳಕು; ಘಟನೆ.

हद्दिया, पु. ಕಾಣಿಕೆ; ಉಪಾಯನ; ಸಂಭಾವನೆ; ಗುರುದಕ್ಷಿಣೆ.

हदियाना, अक्रि. ಭಯಪಡು, ಅಂಜು; ನಡುಗು; ಹಿಂಜರಿ.

हदियाहट, स्त्री. ಪುಕ್ಕತನ, ಅಳ್ಳೆದೆ;

ಸಂಕೋಚ, ಲಜ್ಜೆ.

हदियाहा, वि. ಅಳ್ಳೆದೆಯುವ, ಪುಕ್ಕಲು; ಅಂಜುಬುರುಕ, ಸಂಕೋಚಿ, ಲಜ್ಜಾಳು

हदीद, पु. ಕಬ್ಬಿಣ; ಶಿರಸ್ತ್ರಾಣ.

हदीस, स्त्री. ಚರಿತ್ರೆ; ಸಂಪ್ರದಾಯ; ವಾರ್ತಾಲಾಪ, ಕಥನ, ವಚನ; ಮಹಮ್ಮದ್ ಪೈಗಂಬರನ ವಚನಗಳ ಸಂಗ್ರಹ. हदीस होना = ಪ್ರಕಟವಾಗು, ಹೊರಬೀಳು.

हनना, सक्रि. ಕೊಲ್ಲು, ಹೊಡೆ; ವಧೆಮಾಡು. अक्रि. ಮಾತನಾಡು.

हनवाना, सक्रि. ಕೊಲ್ಲಿಸು.

हनोज़, क्रिवि. ಈಗ, ಈವರೆಗೆ, ಇನ್ನು.

हप, पु. ನುಂಗುವಿಕೆ, ಗಡಪು. हप कर जाना = ಗಡಪು ಮಾಡು.

हपकना, सक्रि. ನುಂಗಿಬಿಡು, ಗಡಪು ಮಾಡು.

हपझप, क्रिवि. ಕೂಡಲೆ, ತಟಕ್ಕನೆ

हपरना, सक्रि. ಕಬಳಿಸು, ಮುಕ್ಕಿತಿನ್ನು

हप्पा, पु. ಕವಳ; ತುತ್ತು; ಲಂಚ.

हप्पू, पु. ಹೊಟ್ಟೆಬಾಕ; ಆಶೆಬುರುಕ; ಅಫೀಮು.

हफ़ई, वि. ಚತುರ; ಚುರುಕಿನವ.

हफहफाना, अक्रि. ಮೇಲುಸಿರು ಬಿಡು, ಏದು, ತೇಕು.

हफ़्त, वि. ಸಪ್ತ, ಏಳು. पु. ಕೂಟ, ಸಭೆ; ಸಮೂಹ, ಸಮುದಾಯ. हफ़्त-ओ हश्त = ವ್ಯರ್ಥ ಹರಟೆ, ಜಲ್ಪ; ವೈರ, ವಿರೋಧ.

हफ़्त-रंगी, वि. ತಂತ್ರಗಾರ, ಚತುರ.

हफ़्त हज़ारी, स्त्री. ಏಳು ಸಾವಿರ ಸೈನಿಕರ ಮೇಲಣ ಅಧಿಕಾರ. पु. ಏಳು ಸಾವಿರ ದಂಡಾಳುಗಳ ನಾಯಕ.

हफ़्ता, पु. ಸಪ್ತಾಹ, ವಾರ; ಶನಿವಾರ.

हफ़्ताद, वि. ಎಪ್ಪತ್ತು.

हफ़्तुम, वि. ಸಪ್ತಮ, ಏಳನೆಯ.

हफ़्ते, पु. ಏಳರ ಸಮೂಹ. हफ़्ते का दिन = ವಾರದ ಏಳನೆಯ ದಿವಸ, ಶನಿವಾರ. हफ़्ते जड़ना = ಕುಸ್ತಿಯಲ್ಲಿ ಕೈಗೆ ಕೈ ಬಿಗಿದು ಕಟ್ಟು.

हबकना, अक्रि. ಬಾಯಿ ಬಿಡು. सक्रि. ಹಲ್ಲಿನಿಂದ ಕಡಿ, ಕಚ್ಚು.

हबड़ा, वि. ಕುರೂಪದ, ವಿಕಾರವಾದ.

हबर-दबर, हबर-हबर, क्रिवि. ಅವಸರವಾಗಿ, ತ್ವರೆಯಿಂದ, ತರಾತುರಿ.

हबराना, अक्रि. ಆತುರಪಡು, ತ್ವರೆಮಾಡು.

हबश, पु. ಅಬಿಸಿನಿಯಾ ದೇಶ; ಅಬಿಸಿನಿಯಾ ದೇಶದವ, ಹಬಶಿ, ಶಿದ್ದಿ.

हबशन, हबशिन, स्त्री. "हबशी" का स्त्री. रूप.

हबशी, वि. ಅಬಿಸಿನಿಯಾ ದೇಶದ. पु. ಅಬಿಸೀನಿಯಾ ದೇಶದವ, ಹಬಸಿ; ನೀಗ್ರೋ ಜಾತಿಯವ.

हबाब, पु. ನೀರಿನ ಗುಳ್ಳೆ, ಬುದ್ಬುದ.

हबीब, वि. ಪ್ರಿಯ; ಮಿತ್ರ, ಗೆಳೆಯ.

हब्ड़ा, पु. ಸುಲಿಗೆಕಾರ, ಲೂಟಿಗಾರ; ಗೊಗ್ಗಯ್ಯ, ಗುಮ್ಮ.

हब्ब, स्त्री. ಧಾನ್ಯ, ಕಾಳು; ಹರಳು; ಕಾಯಿ.

हब्बा, पु. ಅಣು, ಕಣ; ಗುಳಿಗೆ.

हब्बा डब्बा, पु. ನಾಯಿ ಕೆಮ್ಮು.

हब्स, पु. ಬಂಧನ, ಸೆರೆ; ಕೈದಿ, ಸೆರೆಯಾಳು; ದಡ, ಅಂಚು; ಕೆರೆ, ಕೊಳ.

हब्स-ए-दवाम = ಗಡೀಪಾರು, ಕರಿನೀರಿನ ಶಿಕ್ಷೆ.

हम, सर्व. ನಾವು अव्य. ಸಮ, ಸಹ, ಸದೃಶ; ಉಭಯತಃ, ಪರಸ್ಪರ.

हम-उम्र, वि. ಒಂದೇ ವಯಸ್ಸಿನ, ಸಮವಯಸ್ಕ.

हम-कलाम, पु. ವಾರ್ತಾಲಾಪ; ಸಂಪರ್ಕ.

हम-कार, वि. ಜತೆಯಲ್ಲಿ ಕೆಲಸ ಮಾಡುವವ, ಸಹಕಾರ್ಮಿಕ; ಸ್ವಾರ್ಥಪರ.

हम-किनार, वि. ಆಲಿಂಗನ ಮಾಡುವವ.

हम-किनारी, स्त्री. ಆಲಿಂಗನ, ತಬ್ಬು.

हम-ख़याल, वि. ಒಂದೇ ಅಭಿಪ್ರಾಯಗಳುಳ್ಳವ.

हम-ख़ाना, वि. ಜತೆಯಲ್ಲಿ ವಾಸ ಮಾಡುವವ, ಸಹನಿವಾಸಿ; ಜತೆಗಾರ; ಗಂಡಹೆಂಡತಿ.

हम-चश्म, वि. ಸಮ; ಸಮಾನಸ್ಥ; ಪ್ರತಿಸ್ಪರ್ಧಿ.

हम-चश्मी, स्त्री. ಸಮಾನತೆ; ಸ್ಪರ್ಧೆ.

हम-जमाअत, पु. ಒಂದೇ ತರಗತಿಯವ; ಸಹಪಾಠಿ, ಒಡನೋದಿ, ಸಹಾಧ್ಯಾಯಿ.

हम-जवार, वि. ನೆರೆಹೊರೆಯವ.

हम-ज़ात, वि. ಸಜಾತೀಯ.

हम-ज़ाद, वि. ಒಡಹುಟ್ಟಿದ, ಸಹಜಾತ; ಅವಳಿ; ಸಮಕಾಲೀನ; ಜತೆಗಾರ, ಒಡನಾಡಿ; ಮಿತ್ರ, ಗೆಳೆಯ.

हम-जिन्स, वि. ಒಂದೇ ತರಹದ, ಒಂದೇ ಸ್ವಭಾವದ.

हम-जुल्फ़, पु. ಷಡ್ಡಕ, ಸಡ್ಡಕ.

हमजोली, पु. (स्त्री.) ಸಂಗಾತಿ, ಜೊತೆಗಾರ, ಒಡನಾಡಿ; ಓರಗೆಯವ, ಸಮವಯಸ್ಕ.

हमता, वि. ಸಮಾನ.

हमताई, स्त्री. ಸಮಾನತೆ.

हमदम, पु. ಘನಿಷ್ಠ ಮಿತ್ರ, ಗೆಳೆಯ, ಆಪ್ತ; ಪತ್ನಿ.

हम-दमी, स्त्री. ಘನಿಷ್ಠತೆ, ಸಲಿಗೆ.

हमदर्द, पु. ಸಹಾನುಭೂತಿಯುಳ್ಳವ.

हमदर्दी, स्त्री. ಸಹಾನುಭೂತಿ, ಸಹವೇದನೆ; ಕನಿಕರ.

हम-दस्त, वि. ಸಮಾನ ಬಲವುಳ್ಳವ; ಸಮಾನ ಅಂತಸ್ತಿನವ; ಜತೆಗಾರ.

हम-दस्त होना = ದೊರಕು, ಸಿಗು, ಪ್ರಾಪ್ತವಾಗು.

हम-दिल, वि. ಒಮ್ಮತದ; ಸಹಾನುಭೂತಿಯುಳ್ಳ; ಪ್ರೀತಿಸುವ, ಅಭಿಮಾನವುಳ್ಳ.

हम-दिली, स्त्री. ಒಮ್ಮತ; ಸಹಾನುಭೂತಿ; ಅಭಿಮಾನ.

हम-नवाला, वि. ಒಂದೇ ಕಡೆ ಉಂಡು ಬೆಳೆದವರು, ಸಹಭೋಜಿ; ಘನಿಷ್ಠ ಮಿತ್ರ.

हमनशीन, वि. ಜೊತೆಗಾರ, ಒಡನಾಡಿ.

हमनाम, वि. ಒಂದೇ ಹೆಸರುಳ್ಳವ,

ಸನಾಮಕ, ಒಪ್ಪೆಸರಿನವ

हम-पाया, पु. ಸಮಾನಸ್ಕಂಧ; ಸಮಾನಸ್ಥ.

हम-पेशा, वि. ಒಂದೇ ಕಸಬಿನವ, ಸಹೋದ್ಯೋಗಿ.

हम-प्याला, वि. ಜತೆಯಲ್ಲೇ ಕುಡಿಯುವವ, ಸಹಪಾಯಿ; ಘನಿಷ್ಠ ಸ್ನೇಹಿತ.

हम-बज़्म, वि. ಒಂದೇ ಪಂಕ್ತಿಯಲ್ಲಿ ಊಟಮಾಡುವವ, ಸಪಾಂಕ್ತೇಯ, ಸಹಭೋಜಿ; ಜತೆಗಾರ, ಸ್ನೇಹಿತ.

हम-बिस्तर, वि. ಒಂದೇ ಹಾಸಿಗೆಯಲ್ಲಿ ಮಲಗುವವರು, ಸಹಶಾಯಿ; ದಂಪತಿ

हम-बिस्तरी, स्त्री. ಒಂದೇ ಹಾಸಿಗೆಯಲ್ಲಿ ಮಲಗುವಿಕೆ, ಸಹಶಯನ; ಒಗತನ; ಸಂಭೋಗ, ಮೈಥುನ

हम-मज़हब, वि. ಒಂದೇ ಮತಾಚಾರದವ, ಸಹಧರ್ಮಿ.

हम-माने, वि. ಒಂದೇ ಅರ್ಥವುಳ್ಳ, ಪರ್ಯಾಯವಾಚಿ.

हम-रकाब, वि. ಅನುಯಾಯಿ, ಸೇವಕ.

हम-राज़, वि. ಪರಸ್ಪರ ರಹಸ್ಯವನ್ನು ತಿಳಿದವರು; ಸ್ನೇಹಿತ, ಗೆಳೆಯ; ಪತ್ನಿ, ಹೆಂಡತಿ.

हम-राह, वि. ಜತೆಯಲ್ಲಿ ಬರುವವ; ಸಹಯಾತ್ರಿ. क्रिवि. ಜೊತೆಯಲ್ಲಿ.

हम-राही, पु. ಸಹಚರ, ಜೊತೆಗಾರ. स्त्री. ಜತೆಯಲ್ಲಿ ಪ್ರಯಾಣಮಾಡುವಿಕೆ.

हमल, पु. ಭಾರ; ಗರ್ಭ, ಬಸುರು; ಹಣ್ಣು, ಫಲ; ಮೇಷರಾಶಿ.

हमला, पु. ದಂಡಯಾತ್ರೆ; ಧಾಳಿ, ಆಕ್ರಮಣ; ಮೇಲ್ಬೀಳುವಿಕೆ, ಎರಗುವಿಕೆ; ಹೊಡೆತ, ಖಂಡನೆ; ಬಿರುಗಾಳಿ.

हम-वज़न, वि. ಒಂದೇ ತೂಕವುಳ್ಳ; ಒಂದೇ ಛಂದಸ್ಸಿನ.

हम-वतन, वि. ಸ್ವದೇಶದ, ಸ್ವದೇಶಿ.

हम-वतनी, स्त्री. ಒಂದೇ ದೇಶದ್ದು; ಸ್ವದೇಶತನ.

हम-वार, वि. ಸಮತಲವಾದ, ಸಪಾಟ, ಮಟ್ಟಸ; ಹಲಚಿ, ಚಪ್ಪಟೆ; ನುಣುಪಾದ; ಸರಿಯಾದ.

हमवारा, क्रिवि. ಯಾವಾಗಲೂ, ಸದಾ.

हमशीर, वि. ಸಹಜಾತ; ಸಹೋದರ ಸಹೋದರಿ.

हम-शीरा, स्त्री. ಸಹೋದರಿ, ಸಹಭವೆ.

हम-सबक़, वि. ಸಹಾಧ್ಯಾಯಿ, ಸಹಪಾಠಿ, ಒಡನೋದಿ.

हमसर, वि. ಜೊತೆಯವ, ಓರಗೆಯವ, ಸಮಾನಸ್ಥ.

हमसरी, स्त्री. ಈಡು, ಜೋಡು; ಸ್ಪರ್ಧೆ.

हमसाज़, वि. ಮಿತ್ರ, ಜೊತೆಗಾರ.

हमसाज़ी, स्त्री. ಜತೆಗಾರಿಕೆ; ಹೊಂದಿಕೆ.

हमसायगी, स्त्री. ಅಕ್ಕಪಕ್ಕ, ನೆರೆಹೊರೆ.

हमसाया, पु. ಪಕ್ಕದವ, ನೆರೆಯವ.

हमसायी, स्त्री. ನೆರೆಯವಳು.

हमसिन, वि. ಸಮವಯಸ್ಕ.

हमहमी, स्त्री. ಸ್ವಾರ್ಥಪರತೆ.

हमा, वि. ಪೂರಾ, ಸಮಸ್ತ; ಸರ್ವ. हमाशुमा = ಒಬ್ಬೊಬ್ಬರೂ, ಪ್ರತಿಯೊಬ್ಬರೂ.

हमातन, क्रिवि. ತನುಮನದಿಂದ, ಪೂರ್ಣ ಮನಸ್ಸಿನಿಂದ.

हमातम, स्त्री. ಈಡು; ಹುರುಡು, ಪೋಟಿ

हमादां, वि. ಸರ್ವಜ್ಞ; ಭಗವಂತ.

हमाम-दस्ता, पु. ಒರಳು, ಕಲ್ಪತ್ತು.

हमायल, स्त्री. ಹೆಗಲಿನ ಮೇಲೆ ಧರಿಸುವ ತೊಗಲಿನ ಪಟ್ಟಿ, ಕತ್ತಿಯ ಬಾರು; ಕೊರಳಿನಲ್ಲಿ ಧರಿಸುವ ವಸ್ತು; ಹಾರ, ಕಂಠಮಾಲೆ; ಕಾಸಿನ ಸರ; ತಾಯಿತಿಯಂತೆ ಕಂಠದಲ್ಲಿ ಧರಿಸುವ ಕುರಾನಿನ ಸಣ್ಣ ಪುಸ್ತಕ.

हमारा, सर्व. ನಮ್ಮ.

हमाल, वि. ಸಮಾನ, ಸದೃಶ. पु. ಸಮಾನಸ್ಥ; ಜತೆಗಾರ; ಸ್ನೇಹಿತ.

हमाहमी, स्त्री. ಸ್ವಾರ್ಥಪರತೆ; ಅಹಂಕಾರ.

हमीं, सर्व. ನಾವುಮಾತ್ರ; ನಾವೇ पु. ಚಿಂತೆ; ಕಾತರತೆ, ದುಃಖ, ಶೋಕ.

हमीज़, वि. ತೀಕ್ಷ್ಣವಾದ; ಚೂಪಾದ.

हमीयत, स्त्री. ಸಹಾಯ, ಒತ್ತಾಸೆ; ಅಭಿಲಾಷೆ, ಗೀಳು; ಉತ್ಸಾಹ, ಮುತುವರ್ಜಿ.

हमून, पु. ಬಯಲು, ಮೈದಾನ; ಮರಳುಗಾಡು, ಮರುಭೂಮಿ

हमें, सर्व. ನಮಗೆ, ನಮ್ಮನ್ನು.

हमेल, स्त्री. ಕಾಸಿನ ಸರ, ಸಿಕ್ಕರ ಕಂಠಮಾಲೆ.

हमेव, पु. ಜಂಭ; ಅಹಂಕಾರ; ಗರ್ವ.

हमेशगी, स्त्री. ನಿತ್ಯತೆ, ಸದೈವತ್ವ.

हमेशा, क्रिवि. ಯಾವಾಗಲೂ, ಸದಾ, ನಿತ್ಯ; ಸತತ, ಸರ್ವದಾ, ಹಮೇಷಾ.

हम्द, स्त्री. ಸ್ತೋತ್ರ, ಸ್ತುತಿ; ಕೈವಾರ; ದೇವಸ್ತುತಿ; ರಾಜಸ್ತುತಿ.

हम्माम, पु. ಸ್ನಾನ, ವಿಹಾರ; ಬಿಸಿನೀರಿನ ಸ್ನಾನ; ಸ್ನಾನಗೃಹ, ನೀರುಮನೆ. हम्माम की लुंगी = ಸರ್ವಸಾಮಾನ್ಯವಾದುದು; ಉಚಿತ, ಪುಕ್ಕಟೆ.

हम्माल, पु. ಭಾರ ಹೊರುವವ, ಕೂಲಿಯವ, ಹಮಾಲ, ಹೊರೆಯಾಳು; ಬೋಯಿ.

हम्माला, स्त्री. हम्माल का स्त्री. रूप.

हया, स्त्री. ಲಜ್ಜೆ, ನಾಚಿಕೆ, ನಾಣ್; ಭಿಡೆ, ಸಿಗ್ಗು, ಸಂಕೋಚ.

हयात, स्त्री. ಜೀವನ, ಬಾಳು.

हयादार, वि. ಲಜ್ಜೆಪಡುವವ, ಲಜ್ಜಾಳು; ಸಂಕೋಚಿ.

हर, पु. ನೇಗಿಲು; ಅಪಹರಿಸುವವ; ಕಳ್ಳ; ಕತ್ತೆ. वि. ಒಬ್ಬೊಬ್ಬ, ಒಂದೊಂದು, ಪ್ರತಿ. हर एक, हर यक = ಪ್ರತಿಯೊಂದು, ಪ್ರತಿಯೊಬ್ಬ. हर कहीं = ಎಲ್ಲೆಲ್ಲೂ.

हरकत, स्त्री. ಗತಿ, ಚಲನೆ; ಕಾರ್ಯ, ಪ್ರಯತ್ನ; ಚೇಷ್ಟೆ, ತುಂಟತನ; ಅಡ್ಡಿ.

हरकना, अक्रि. ಬಯಸು, ಹಾತೊರೆ; ದುಃಖಿಸು, ಮರುಗು; ದೂರವಾಗಿರು; ಬೀಳು; ನಿರುತ್ಸಾಹಿತನಾಗು, ಉತ್ಸಾಹಗೆಡು.

हरका, पु. ಅಳುಬಿಳೆ, ಗೋಳಾಟ.

हरकाना, सक्रि. ತಡು, ಸೀಯಿಸು; ನಿಲ್ಲಿಸು, ನಿಷೇಧಿಸು.

हरकारा, पु. ಓಲೆಕಾರ, ಹರಿಕಾರ; ಅಂಚೆಯವ, ಪತ್ರವಾಹಕ; ದೂತ; ಬೇಹುಕಾರ.

हरकारी, वि. ಎಲ್ಲಾ ಕೆಲಸಗಳನ್ನೂ ಮಾಡುವವ.

हरख, पु. ಹರ್ಷ, ಆನಂದ.

हरखना, अक्रि. ಹರ್ಷಿಸು, ಆನಂದಿಸು.

हरखाना, अक्रि. ಹರ್ಷಿಸು. सक्रि. ಸಂತೋಷಗೊಳಿಸು, ಹಿಗ್ಗಿಸು.

हरगाह, क्रिवि. ಆದ್ದರಿಂದ, ಆದಕಾರಣ; ಎಲ್ಲೆಲ್ಲೂ, ಯಾವಾಗಲೂ.

हरगिज़, क्रिवि. ಎಂದಿಗೂ, ಸುತರಾಂ.

हरगुनी, वि. ಚತುರ, ಸಮರ್ಥ.

हरघड़ी, क्रिवि. ಕ್ಷಣಕ್ಷಣಕ್ಕೆ; ಯಾವಾಗಲೂ, ಸದಾ.

हरचंद, क्रिवि. ಎಷ್ಟೋ, ಅನೇಕ; ಆದರೂ, ಆದಾಗ್ಯೂ, ಯದ್ಯಪಿ.

हरचू, क्रिवि. ಪ್ರತಿಯೊಬ್ಬರೂ; ಯಾವುದಾದರೂ.

हरज, हरजा, पु. ಅಡ್ಡಿ, ತಡೆ, ವಿಘ್ನ; ನಷ್ಟ, ಹಾನಿ.

हरजाई, वि. ಎಲ್ಲ ಕಡೆಯೂ ತಿರುಗಾಡುವವ; ಅಲೆಯುವವ, ಪೋಲಿ. स्त्री. ಹಾದರಗಿತ್ತಿ, ಬೊಡ್ಡಿ, ಪುಂಶ್ಚಲಿ

हरजाना, पु. ನಷ್ಟ ತುಂಬುವಿಕೆ, ನಷ್ಟಭರ್ತಿ, ಪರಿಹಾರ ದ್ರವ್ಯ, ಲಗ್ಗ.

हरजोड़ा, हरझोड़ा, पु. ಮಂಗರವಳ್ಳಿ.

हरता, वि. ಮನಸೋತ; ಮುರುಳಾದ. पु. ಕಳ್ಳ; ಲೂಟಿಗಾರ; ಲೂಟಿ, ಕೊಳ್ಳೆ

हरताल, पु. ಹರಿದಳ, ಹರತಾಳ.

हर-दम, क्रिवि. ಪ್ರತಿಕ್ಷಣವೂ; ಸದಾ.

हरदा, पु. ಎತ್ತು; ಉಳುವ ಎತ್ತು.

हर-देगी-चमचा, पु. ಪರಾನ್ನಪುಷ್ಟ, ಪರಾವಲಂಬಿ

हर-दो, वि. ಎರಡೂ.

हरना, पु. ಜಿಂಕೆ, ಕಡವೆ. सक्रि. ಹಿಡಿದುಕೊಳ್ಳು; ಎಳೆ; ಎತ್ತಿಕೊಂಡು ಹೋಗು, ಅಪಹರಿಸು; ಬೇರೆಮಾಡು, ನಿವಾರಿಸು; ಮೋಹಗೊಳಿಸು.

हरनी, स्त्री. ಹೆಣ್ಣು ಜಿಂಕೆ.

हरनौटा, पु. ಜಿಂಕೆಮರಿ, ಚಿಗರಿಮರಿ.

हरफ़, पु. ಅಂಚು, ಕರೆ; ಬೆಟ್ಟ; ವಕ್ರವಾದ ಲೆಕ್ಕಣಿಕೆ; ಅಕ್ಷರ; ಕಳಂಕ.

हर-फ़न-मौला, पु. ಸರ್ವಶಾಸ್ತ್ರ ಪಾರಂಗತ, ಸಕಲ ಕಲಾ ಪಂಡಿತ.

हरफा-रेवड़ी, स्त्री. ಕಮರಿಕೆ ಹಣ್ಣಿನಂತಹ ಒಂದು ಹಣ್ಣು, ಲವಲಿ.

हरवारना, अक्रि. =हड़बड़ाना.

हरबा, पु. ಬಾಣ; ಆಯುಧ, ಶಸ್ತ್ರ, ಕೈದು.

हरबोंग, वि. ಗಾಂಪ, ಗಾವಿಲ, ದಡ್ಡ. पु. ಅನ್ಯಾಯ; ಅವಾಂತರ; ಉಪದ್ರವ.

हरम, पु. ಅಂತಃಪುರ. स्त्री. ಇನಿಯಳು; ಭೋಗಿನಿ, ಉಪಪತ್ನಿ; ಹೆಂಡತಿ; ದಾಸಿ.

हरमज़दगी, स्त्री. ದುಷ್ಟತನ.

हरमसरा, पु. ರಾಣಿವಾಸ, ಅಂತಃಪುರ.

हरमुष्टा, वि. ಗಟ್ಟಿಮುಟ್ಟಾದ, ಕಾಯಪುಷ್ಟ; ದಡಿಯ, ದಾಂಡಿಗ.

हरमुष्टी, स्त्री. ದಪ್ಪ, ಕಾಯಪುಷ್ಟಿ; ಬಲ.

हरवली, स्त्री. ಸೈನ್ಯಾಧಿಪತ್ಯ.

हरवा, पु. ಒಂದು ಪಕ್ಷಿ.

हरवाना, अक्रि. ಅಶುರಪಡು, ಅವಸರಪಡು. पु. ಸೋಲಿಸು.
हरवाहा, पु. ಕೃಷೀವಲ, ರೈತ.
हरवैया, पु. ಸೋಲುವವ.
हरषना, अक्रि ಹರ್ಷಿಸು, ಆನಂದಿಸು.
हरषाना, अक्रि. ಹರ್ಷಿಸು, ಸಂತೋಷಗೊಳ್ಳು. सक्रि. ಹರ್ಷಗೊಳಿಸು, ಸಂತೋಷಪಡಿಸು.
हरसिंगार, पु. ಪಾರಿಜಾತ.
हरस, स्त्री. ಆನಂದ, ಹರ್ಷ, ಖುಷಿ.
हरसा, पु. ಗಂಧದ ಕಲ್ಲು.
हरसोत, स्त्री. ನೇಗಿಲು; ಮೊಟ್ಟಮೊದಲು ಉಳುವಿಕೆ, ಹೊನ್ನೇರು.
हरहमेशा, क्रिवि. ಸದಾ ಸರ್ವಕಾಲ, ಯಾವಾಗಲೂ, ಎಂದೆಂದಿಗೂ.
हरहर, पु. ಹರಹರ; ಶಿವನ ಹೆಸರು; ಮರಾಠರ ರಣಘೋಷ.
हरहाई, वि. ತುಂಟ, ಪೋಲಿ (ದನ)
हरा, वि. ಹಸುರಾದ, ಹರಿತ; ಹಚ್ಚಗಿರುವ. ಪಚ್ಚೆ; ಹೊಸದಾದ; ಹಸಿಯುದಾದ हरा भरा = ಸೊಂಪಾದ, ಹೊರವಾದ, ಕಳಕಳಿಸುವ; ಫಲವತ್ತಾದ.
हराई, स्त्री. ಹಸುರು, ಪಚ್ಚೆ; ಹೊಸದು; ಸೋಲುವಿಕೆ, ಸೋಲು; ಉಳುವಿಕೆ. हराई जिताई करना = ಗೋಳಾಡಿಸು, ಸತಾಯಿಸು; ನಷ್ಟಪಡಿಸು.
हरादी, वि. ಶಬ್ದಮಾಡುವ.
हराना, सक्रि. ಸೋಲಿಸು, ಅಪಜಯಪಡಿಸು, ಪರಾಭವಿಸು; ನಷ್ಟಪಡಿಸು
हरापन, पु. ಹಸುರು, ಪಚ್ಚೆ; ಹೊಸತು.
हराम, वि. ಪವಿತ್ರ; ನಿಷಿದ್ಧವಾದ; ದೂಷಿತ, ಅನುಚಿತ. पु. ಧರ್ಮವಿರುದ್ಧ ಕೆಲಸ; ಅನಾಚಾರ, ಅಧರ್ಮ; ಪಾಪ; ದುರಾಚಾರ; ವ್ಯಭಿಚಾರ, ಹಾದರ.
हरामकार, पु. ವ್ಯಭಿಚಾರಿ; ಲಂಪಟ.
हरामकारी, स्त्री. ವ್ಯಭಿಚಾರ, ಹಾದರ.
हरामख़ोर, वि. ಪಾಪಾರ್ಜನೆಯಿಂದ ಜೀವಿಸುವವ; ಲಂಚಖೋರ, ಉಂಡಾಡಿ.
हरामख़ोरी, स्त्री. ಪಾಪಾರ್ಜನೆ; ಅಪ್ರಾಮಾಣಿಕತೆ.
हरामज़ादगी, स्त्री. ದುಷ್ಟತನ, ಪಟಿಂಗತನ.
हरामज़ादा, पु. ಹಾದರದ ಮಗ, ಜಾರಪುತ್ರ; ವರ್ಣಸಂಕರ; ಪಟಿಂಗ.
हरामज़ादी, स्त्री. ಜಾರಪುತ್ರಿ.
हराम-गूदा, हराम-मग़ज़, पु. ಬೆನ್ನೆಲುಬಿನ ಮಜ್ಜೆ.
हरामी, वि. ಹಾದರದಿಂದ ಹುಟ್ಟಿದ, ಜಾರಜ; ಪಟಿಂಗ; ದುಷ್ಟ; ಅಕ್ರಮದ. हराम का पिल्ला = ಬೊಡ್ಡಿಮಗ, ಜಾರಜ
हरारत, स्त्री. ಧಗೆ, ಬೇಗೆ, ಹರಾರತ್ತು; ತಾಪ, ಲಘುಜ್ವರ; ಕೋಪ.
हरारा, पु. ಕಂಪನ, ಆವೇಶ, ಹುರುಪು.
हरावल, पु. ಅಗ್ರಬಲ, ಅಗ್ರಸೇನೆ, ಮುಂದಳ, ಮುಂಗುಂಡಿ, ಚೂಣಿ.
हरास, पु. = हिरास.
हरी, पु. ಹರಿ, ವಿಷ್ಣು.
हरिजन, पु. ವಿಷ್ಣುಭಕ್ತ; ಹರಿದಾಸ.

हरित, वि. ಹಸುರಾದ, ಹರಿತ; ಹಚ್ಚಗಿರುವ. पु. ಪಚ್ಚೆ, ಮರಕತ.

हरिन, पु. **हरिनी**, स्त्री. ಜಿಂಕೆ, ಚಿಗರಿ, ಹರಿಣ, ಹುಲ್ಲೆ.

हरियल, पु. ಹಸುರು ಪಾರಿವಾಳ.

हरिया, पु. ಪೂಜಾರಿ, ತಮ್ಮಡಿ; ಹಸುರು ಪಾರಿವಾಳ; ಉಳುವವ, ಕೃಷಿವಲ.

हरियाना, अक्रि. ಹಸುರಾಗು.

हरियाई, **हरियाली**, स्त्री. ಹಸುರು, ಹಚ್ಚಗಿರುವಿಕೆ; ಪೈರು ಪಚ್ಚೆ; ಹುಲ್ಲು ಮೈದಾನ.

हरियावल, स्त्री. ಹುಲ್ಲುಮೈದಾನ.

हरिशयनी, स्त्री. ಶಯನೇಕಾದಶಿ.

हरिस, पु. ನೇಗಿಲ ಈಸು, ಹಲದಂಡ.

हरीतकी, स्त्री. ಅಳಲೆಕಾಯಿ.

हरीफ़, वि. ಪಾಲುಗಾರ; ವಿರೋಧಿ. ಪ್ರತಿಸ್ಪರ್ಧಿ, ಚತುರ.

हरीफ़ी, स्त्री. ವಿರೋಧ, ವೈರ; ತಂತ್ರ; ಮೋಸ.

हरीरा, पु. ಹಣ್ಣಿನ ಪಾಯಸ. वि. ಹಸುರಾದ, ಹಚ್ಚಗಿರುವ.

हरीरी, स्त्री. ರೇಷ್ಮೆಬಟ್ಟೆ. वि. ಉತ್ತಮ.

हरीला, वि. ಹಸುರಾದ, ಹಚ್ಚಗಿರುವ. पु. ಓಡಿಹೋದವ, ಓಡಕುಳಿ, ಪಲಾಯಿತ; ಪುಕ್ಕ, ಹೇಡಿ.

हरीस, वि. ಹೊಟ್ಟೆಬಾಕ, ತಿಂಡಿಬಾಕ. पु. ಅನುಕರಣ ಮಾಡುವವ.

हरुआ, वि. ಹಗುರವಾದ, ಲಘು.

हरुआई, स्त्री. ಹಗುರತನ; ಚಟುವಟಿಕೆ.

हरुआना, अक्रि. ಹಗುರವಾಗು.

हरूफ़, पु. ಅಕ್ಷರಗಳು.

हरे, क्रिवि. ಮೆತ್ತಗೆ, ನಿಧಾನವಾಗಿ.

हरेर, वि. ಹಚ್ಚಗಿರುವ; ಹಸುರಾದ.

हरेरी, स्त्री. ಹಸುರು; ಪೈರುಪಚ್ಚೆ.

हरेवा, पु. ಹಸುರು ಗಿಳಿ.

हरैया, वि. ಎಳೆದುಕೊಂಡು ಹೋಗುವವ; ಸಾಗಿಸುವವ; ಅಪಹರಿಸುವವ.

हरौटी, स्त्री. ದೊಣ್ಣೆ, ದಂಡ, ಕೋಲು.

हरौल, पु. = हरावल.

हर्ज़, पु. ವಿಘ್ನ, ಅಡ್ಡಿ, ಅಡಚಣೆ; ಕುಂದಕ, ನಷ್ಟ, ಹಾನಿ. हर्ज़ मर्ज़ = ತೊಡಕು, ಕಷ್ಟನಷ್ಟ.

हर्ता, **हर्त्तार**, पु. ಅಪಹರಿಸುವವ; ನಷ್ಟಪಡಿಸುವವ.

हर्फ़, पु. ಅಕ್ಷರ; ಅವ್ಯಯ.

हर्फ़न्, क्रिवि. ಅಕ್ಷರಶಃ.

हर्रा, पु. ಅಳಲೆಕಾಯಿ.

हर्रे, पु. ಅಳಲೆಕಾಯಿ; ನಾಯಕಮಣಿ.

हर्ष, पु. ಹರ್ಷ, ಸಂತೋಷ.

हर्षना, अक्रि. ಹರ್ಷಿಸು, ಆನಂದಿಸು.

हर्षाना, सक्रि. ಹರ್ಷಗೊಳಿಸು. अक्रि. ಹರ್ಷಿಸು, ಸಂತೋಷಗೊಳ್ಳು.

हर्स, पु. ಬಿತ್ತುವಿಕೆ, ಬಿತ್ತನೆ; ಉಳುವಿಕೆ.

हल, पु. ನೇಗಿಲು, ಆರು; ಅರಿಯುವಿಕೆ; ಕರಗಿಸುವಿಕೆ; ಸಮಸ್ಯೆ ಬಿಡಿಸುವಿಕೆ. हल करना = ಕರಗಿಸು; ಬಿಚ್ಚು; ಸಮಸ್ಯೆ ಬಿಡಿಸು; ಉತ್ತರ ಕಂಡುಹಿಡಿ; ಬಗೆಹರಿಸು. हल चलना = ಉಳಲ್ಪಡು

हलकंप, पु. ಗದ್ದಲ, ಹಗರಣ.

हलक़, पु. ಗಂಟಲುನಾಳ, ಕಂಠ.

हलक़ पर छुरी चलाना = ಸತಾಯಿಸು, ಗೋಳು ಹುಯ್ಕೊಳ್ಳು; ತಗಾದೆ ಮಾಡು, ಪರಾತ ಮಾಡು.

हलकई, स्त्री. ಲಘುತ್ವ, ಹಗುರತನ.

हलकना, अक्रि. ತುಳುಕು; ಮಿಸುಕಾಡು, ಅಲುಗಾಡು; ಹೊಳೆಯು.

हलका, वि. ಲಘು, ಹಗುರ; ಲೇಸಾದ; ನಸು; ಅಲ್ಪ; ನೀಚ, ತುಚ್ಛ. हलका रंग = ನಸುಬಣ್ಣ, ಹೂ ಬಣ್ಣ. हलका फुलका = ಹಗುರವಾದ ಹೂವಿನಂತಹ; ಬಲು ಲೇಸಾದ.

हलक़ा, पु. ವೃತ್ತ, ವರ್ತುಲ; ಮಂಡಲ, ಮಂಡಲಿ; ಚಕ್ರ, ವಲಯ; ಗೊಣಸು, ಕೊಳಕೆ; ಹಿಂಡು.

हलक़ाई, स्त्री. ಹಗುರತನ; ನೀಚತನ.

हलक़ा-ज़न, पु. ಬಾಗಿಲು ತಟ್ಟುವಿಕೆ

हलकान, वि. = हैरान.

हलकाना, अक्रि. ಲಘುವಾಗು, ಹಗುರವಾಗು; ಕಡಮೆಯಾಗು. सक्रि. ಅಲುಗಿಸು; ಅಲೆ ಎಬ್ಬಿಸು; ಕಡಮೆ ಮಾಡು.

हलकारा, पु. = हरकारा.

हलक़ी, वि. ಕಂಠದ, ಕಂಠ್ಯ.

हलकोरना, सक्रि. ಒಟ್ಟುಗೂಡಿಸು, ಶೇಖರಿಸು; ಅಲೆ ಎಬ್ಬಿಸು.

हलकोरा, पु. ಅಲೆ, ತರಂಗ.

हलगी, क्रिवि. ಮೆತ್ತಗೆ, ನಿಧಾನವಾಗಿ

हलचल, स्त्री. ಗಾಬರಿ; ಸಡಗರ; ಗಲಾಟೆ, ಗದ್ದಲ; ಅಲ್ಲೋಲಕಲ್ಲೋಲ, ಚಳುವಳಿ.

हलदहात, स्त्री. ವಧೂವರರಿಗೆ ಅರಿಸಿನ ಹಚ್ಚುವ ಒಂದು ಶಾಸ್ತ್ರ; ಅರಿಸಿನಶಾಸ್ತ್ರ

हलदिया, वि. ಅರಿಸಿನದ, ಹಳದಿ. पु. ಅರಿಸಿನ ಕಾಮಾಲೆ; ಒಂದು ವಿಷ.

हलदी, स्त्री. ಅರಿಸಿನ, ಹರಿದ್ರಾ; ಅರಿಸಿನದ ಕೊನೆ. हलदी लगी न फिटकिरी = ಏನೂ ಖರ್ಚಿಲ್ಲದೆ; ಅನಾಯಾಸವಾಗಿ.

हलधर, पु. ಬಲರಾಮ.

हलन, स्त्री. ಅಲುಗಾಡುವಿಕೆ, ಚಲನೆ.

हलना, अक्रि. ಅಲುಗಾಡು; ಹೊಗು; ನುಸುಳು.

हलपना, अक्रि. ನಡುಗು; ತಳಮಳಿಸು

हलफ़, पु. ಶಪಥ, ಆಣೆ, ಪ್ರತಿಜ್ಞೆ. हलफ़ उठाना = ಆಣೆಯಿಡು.

हलफ़न्, क्रिवि. ಆಣೆಯಾಗಿ, ಪ್ರಮಾಣವಾಗಿ.

हलफ़-नामा, पु. ಪ್ರತಿಜ್ಞಾಪತ್ರ.

हलफल, पु. ಅಚ್ಚುಮೆಚ್ಚು; ಅವಸರ.

हलफा, पु. ತಲ್ಲಣ, ಎದೆಗುದಿ, ಗಾಬರಿ.

हलफ़िया, वि. ಪ್ರಮಾಣವಾದ, ಪ್ರಮಾಣ ಪೂರ್ವಕವಾದ. हलफ़िया बयान = ಪ್ರಮಾಣ ಪೂರ್ವಕವಾದ ವಾಙ್ಮೂಲ.

हलबल, हलबलाहट, स्त्री. ಗಡಿಬಿಡಿ; ಗದ್ದಲ; ಗಲಾಟೆ; ಅವಸರ.

हलबलाना, अक्रि. ತಲ್ಲಣಿಸು, ಗಾಬರಿಗೊಳ್ಳು; ಆತುರಪಡು.

हलभल, पु. ಸಹಾಯ; ಗಡಿಬಿಡಿ. हलभल करना = ಸಹಾಯಮಾಡು.

हलभलिया, पु. ಗಡಿಬಿಡಿ ಮಾಡುವವ; ಸಹಾಯ ಮಾಡುವವ.

हलरा, पु. ಅಲೆ, ತರಂಗ.

हलराना, सक्रि. ಮುದ್ದಾಡು, (ಮಗುವನ್ನು) ಆಡಿಸು; ಅಲ್ಲಾಡಿಸು.

हलवा, पु. ಹಲ್ವ; ಮೆದುವಾಗಿಯೂ ಸಿಹಿಯಾಗಿಯೂ ಇರುವ ಪದಾರ್ಥ (ಹಣ್ಣು ಮೊದಲಾದವು) हलवा निकालना = ಚೆನ್ನಾಗಿ ಹೊಡೆ

हलवाइन, हलवायन, स्त्री. हलवाई का स्त्री. रूप.

हलवाई, पु. ಮಿಠಾಯಿ ಮಾಡುವವ ಅಥವಾ ಮಾರುವವ, ಮಿಠಾಯಿಗಾರ.

हलवान, पु. ಕುರಿಮರಿ; ಆಡಿನಮರಿ.

हलवाह, हलवाहा, पु. ಸೇದ್ಯಗಾರ, ಕೃಷಿಕ, ಕೃಷಿವಲ, ರೈತ, ಆರಂಬಗಾರ.

हलवाही, स्त्री. ಆರಂಬ, ಸಾಗುವಳಿ; ಉಳುವವನಿಗೆ ರೈತನು ಕೊಡುವ ಸಾಲ.

हलस, स्त्री. ನೇಗಿಲ ಈಸು, ಹಲದಂಡ.

हलहलाना, सक्रि. ಅಲ್ಲಾಡಿಸು; ಕುಲುಕು; ಹಂದಾಡಿಸು. अक्रि. ನಡುಗು, ಕಂಪಿಸು; ಅಲ್ಲಾಡು.

हलहलाहट, स्त्री. ನಡುಗುವಿಕೆ; ಜ್ವರದಿಂದ ನಡುಗುವಿಕೆ.

हलहली, स्त्री. ಕಾಹಿಲೆ; ಛಳಿಜ್ವರ.

हलाई, स्त्री. ಉಳುಮೆ, ಸಾಗುವಳಿ.

हलाक, वि. ಹತನಾದ पु. ವಧೆ; ಸಾವು.

हलाकत, स्त्री. ವಧೆ, ಸಾವು; ನಾಶ.

हलाकान, वि. ವ್ಯಗ್ರ, ಕಂಗೆಟ್ಟ.

हलाकानी, स्त्री. ವ್ಯಗ್ರತೆ, ಕಂಗೆಡಿಕೆ

हलाकू, वि. ಕೊಲ್ಲುವ; ಹೊಡೆಯುವ.

हलाल, वि. (ಮುಸಲ್ಮಾನರಿಗೆ) ಧರ್ಮಸಮ್ಮತವಾದ; ಕಾನೂನಿನ ಪ್ರಕಾರದ; ನ್ಯಾಯವಾದ; ಸ್ವತಂತ್ರ; ಭೋಜನಕ್ಕೆ ಅರ್ಹ, ಭೋಜನ ಯೋಗ್ಯ, ಖಾದ್ಯ; ಶಾಸ್ತ್ರ ರೀತ್ಯಾ ಕೊಂದ (ಪ್ರಾಣಿ); ತನ್ನ ಪತಿಯ ಮರಣಾನಂತರ ೧೩೦ ದಿನಗಳವರೆಗೆ (ಮುಸಲ್ಮಾನರ ಸಂಪ್ರದಾಯದ ಪ್ರಕಾರ) ಬೇರೆ ಮದುವೆಯಾಗಲು ಅನರ್ಹಳಾದ (ಸ್ತ್ರೀ). हलाल करना = ಕಾನೂನಿನಂತೆ ಕ್ರಮಪಡಿಸು; ಶಾಸ್ತ್ರದ ಪ್ರಕಾರ ಆಗಿಸು; ಕಾನೂನು ಅಥವಾ ಶಾಸ್ತ್ರ ರೀತ್ಯಾ ಒಂದು ಪ್ರಾಣಿಯನ್ನು ವಧೆಮಾಡು; ಇಟ್ಟುಕೊಂಡವಳನ್ನು ಮದುವೆಯಾಗು

हलालख़ोर, पु. ನ್ಯಾಯ ರೀತಿಯಲ್ಲಿ ಸಂಪಾದಿಸುವವ; ಪಾಡುಪಟ್ಟು ಕೆಲಸ ಮಾಡಿ ಧರ್ಮರೀತಿಯಲ್ಲಿ ಸಂಪಾದನೆ ಮಾಡುವವ; ಭಂಗಿ, ಜಲಗಾರ, ಹಲಾಲಖೋರ, ಒಡ್ಡ.

हलालख़ोरिन, हलालख़ोरी, स्त्री. "हलालख़ोर" का स्त्री. रूप.

हलावत, स्त्री. ಸಿಹಿ, ಮಾಧುರ್ಯ; ರುಚಿ, ಸವಿ; ಆನಂದ, ಮಜ; ನವೀನತೆ; ಸ್ಥಿತಿ; ಬಲ, ಶಕ್ತಿ

हलाहल, पु. ವಿಷ, ನಂಜು, ಹಾಲಾಹಲ.

हलिया, पु. ಮಂದೆ, ಹಿಂಡು.

हलियक, हलियाग, स्त्री. ಉಳುವವನಿಗೆ ಕೂಲಿ, ಉಕ್ಕೆಯ ಕೂಲಿ.

हलियाना, अक्रि. ಓಕರಿಸು, ಉಬ್ಬಳಿಸು

हलिसा, पु. ಹುಟ್ಟು, ಜನ್ಮ; ಜನನ.
हली, स्त्री. ಬುದ್ಧಾಣ; ನೇಗಿಲು ಹೊಡೆಯುವವ, ಉಳುವವ; ರೈತ.
हलीम, वि. ಸಾತ್ವಿಕವಾದ, ಸಾಧು; ಸಹಿಷ್ಣು.
हलीमी, स्त्री. ಸಹನೆ; ಸಹಿಷ್ಣುತೆ; ಕೃಪೆ; ದಯೆ; ಸಾತ್ವಿಕತೆ, ನಮ್ರತೆ.
हलुवा, पु. = हलवा.
हलोरना, सक्रि. ಅಲೆ ಎಬ್ಬಿಸು, ಮಥಿಸು; ಕೇರು, ಸಾಣಿಸು; ಗೋರು, ಶೇಖರಿಸು.
हलोरा, पु. ಅಲೆ, ತರಂಗ.
हल्ला, पु. ಕೂಗಾಟ, ಗದ್ದಲ, ಗುಲ್ಲು, ಹಲ್ಲಾ; ಧಾಳಿ, ಆಕ್ರಮಣ. हल्ला-कल्ला, हल्ला-गुल्ला = ರಂಪರಾದ್ಧಾಂತ.
हवलदार, पु. ಸೈನ್ಯದ ಒಬ್ಬ ಉದ್ಯೋಗಸ್ಥ.
हवस, स्त्री. ಆಶೆ, ಬಯಕೆ, ಗೀಳು.
हवा, स्त्री. ಗಾಳಿ, ವಾಯು; ಹವ, ವಾತಾವರಣ; ಭೂತ, ದೆವ್ವ; ಖ್ಯಾತಿ, ಕೀರ್ತಿ; ಅಭಿಮಾನ; ಪ್ರತೀತಿ, ನಂಬಿಕೆ; ಆಶೆ, ಹಂಬಲ, ಗೀಳು.
हवाई, वि. ಗಾಳಿಯ; ವಾಯುವಿನ; ಆಕಾಶದ; ಕಲ್ಪಿತವಾದ. हवाई महल = ಗಾಳಿಗೋಪುರ, ಮನೋರಾಜ್ಯ, ಅಲಜಾಲ. हवाई जहाज = ಆಕಾಶ ಹಡಗು, ವಿಮಾನ. स्त्री. ಒಂದು ಬಗೆ ಬಾಣಬಿರುಸು, ಆಕಾಶಬಾಣ. मुंह पर हवाइयां उडना = ವಿವರ್ಣನಾಗು, ಕಳೆಗುಂದು, ಮುಖ ಬಿಳಿಚಿಕೊಳ್ಳು.

हवाखोरी, स्त्री. ಗಾಳಿ ಸಂಚಾರ, ವಿಹಾರ, ಅಡ್ಡಾಟ.
हवाज़दगी, स्त्री. ವಾತರೋಗ.
हवादार, वि. ಗಾಳಿಯುಳ್ಳ, ವಾಯುಸಂಚಾರವುಳ್ಳ, ಗಾಳಿಯಾಡುವ; ಹಿತೈಷಿ; ಪ್ರಿಯ. पु ತೆರೆದಿರುವ ಪಲ್ಲಕ್ಕಿ.
हवादारी, स्त्री. ಪ್ರೀತಿ, ಅಭಿಮಾನ.
हवाबाज़, पु. ಆಕಾಶ ವಿಮಾನ ನಡೆಸುವವ, ವಿಮಾನ ಸಾರಥಿ.
हवान, पु. ತಿರಸ್ಕಾರ, ಧಿಕ್ಕಾರ; ನಯ, ನಮ್ರತೆ, ಮೃದುತ್ವ; ಸಂಕಟ.
हवाना, अक्रि. ಅರಚು, ಕಿರಿಚು.
हवारी, पु. ಶ್ವೇತಾಂಗದವ, ಗೌರಾಂಗ; ಅಗಸ, ಮಡಿವಾಳ; ಸ್ನೇಹಿತ; ಜತೆಗಾರ, ಸಂಗಾತಿ.
हवाल, पु. = अहवाल.
हवालदार, पु. = हवलदार.
हवाला, पु. ಉದಾಹರಿಸುವಿಕೆ, ಬದಲಾಯಿಸುವಿಕೆ; ಉರಿಯುವಿಕೆ; ಸೂಚಿಸುವಿಕೆ; ಉದ್ಧೃತ ವಾಕ್ಯ, ಆಧಾರ ವಾಕ್ಯ; ಸಂಬಂಧ, ಒಪ್ಪಿಸುವಿಕೆ; ವಶ, ಸುಪರ್ದು, ಹವಾಲೆ किसीके हवाले करना = ಒಬ್ಬರ ವಶಕ್ಕೆ ಒಪ್ಪಿಸು, ಸುಪರ್ದು ಮಾಡು.
हवालात, स्त्री. ವಿಚಾರಣೆಗೆ ಮುಂಚೆ ಬಂಧನದಲ್ಲಿರಿಸುವಿಕೆ, ಕಾವಲು, ಪಹರೆ; ಮೊಹಸಲೆ, ಸೆರೆ; ಸೆರೆಮನೆ.
हवालादार, पु. ಸಿಪಾಯಿ; ಹೆಡ್ ಕಾನ್‌ಸ್ಟೇಬಲ್.
हवाली, स्त्री. ಸುತ್ತಲಿರುವ ಪ್ರದೇಶ;

ಹೊರವಳಯ.

हवास, पु. ಇಂದ್ರಿಯ, ಪಂಚೇಂದ್ರಿಯ; ಸಂವೇದನೆ, ಪ್ರಜ್ಞೆ, ಜ್ಞಾನ.

हवासिल, पु. ಹೊಟ್ಟೆ, ಉದರ; ಉಗ್ರಾಣ, ಗಡಂಗು.

हवासी, वि. ಪಟಿಂಗ, ಲಂಪಟ.

हविस, पु. ಹವನ, ಹವಿಸ್ಸು; ಆಹುತಿ.

हवेली, स्त्री. ಉಪ್ಪರಿಗೆ, ಹರ್ಮ್ಯ, ಸೌಧ; ಮನೆ; ಮನೆಯಾಳ, ಪತ್ನಿ.

हशमत, स्त्री. ಗೌರವ, ಮಹತ್ವ; ವೈಭವ, ಪೆಂಪು; ಐಶ್ವರ್ಯ, ದೌಲತ್ತು.

हशर, **हश्र**, पु. ದೇವರ ಮುಂದೆ ಕರ್ಮವಿಚಾರಣೆಯ ದಿನ; ಪರಿಣಾಮ; ಪ್ರಳಯ, ಅನಾಹುತ; ಗಲಾಟೆ; ಗೋಳು; ಕೂಟ, ಗುಂಪು.

हशरी, वि. ಭಯಂಕರ, ಭೀಕರ.

हश्त, वि. ಅಷ್ಟ, ಎಂಟು.

हश्व, पु. ತುಂಬುವಿಕೆ, ಭರ್ತಿ; ಕಸಕಡ್ಡಿ; ಕೆಳಗಿನ ದರ್ಜೆಯ ಜನರು.

हश्वा. पु. ಕಚಡಾ, ಕಸಕಡ್ಡಿ.

हसद, स्त्री ಅಸೂಯೆ, ದ್ವೇಷ, ಹಗೆ; ಆಶೆ, ಆಕಾಂಕ್ಷೆ.

हसदी, वि. ಅಸೂಯೆಪಡುವವ, ದ್ವೇಷಿ.

हसन, वि. ಒಳ್ಳೆಯ, ಉತ್ತಮ, ಹಸನಾದ. पु. ಒಳ್ಳೆಯದು; ಉತ್ಕೃಷ್ಟತೆ; ಸೌಂದರ್ಯ; ನಗುವಿಕೆ, ನಗೆ, ಪರಿಹಾಸ.

हसब, पु. ಪರಿಮಾಣ; ಸ್ಥಿತಿ; ತರಹ, ರೀತಿ; ಮತ, ಮತಾಚಾರ; ಮಾತೃವಂಶ; ಕುಲ. हसब-ओ-नसब = ಕುಲಗೋತ್ರ, ಪ್ರವರ.

हसरत, स्त्री. ದುಃಖ; ವ್ಯಸನ; ಬಯಕೆ; ಹಂಬಲ, ಗೀಳು.

हसीन, वि. ಸುಂದರ, ಚೆಲುವ; ರೂಪವತಿ, ಸುಂದರಿ. ಚೆಲುವಿ; ಅಗಮ್ಯ, ದುರ್ಗಮ; ಬಲಕಾಯಿಸಿದ (ಕೋಟೆ); ದೃಢವಾದ.

हस्त, वि. ಇರುವ, ವರ್ತಮಾನ. पु. ಕೈ, ಹಸ್ತ.

हस्तगत, वि. ಕೈಸೇರಿದ, ಪ್ರಾಪ್ತ.

हस्ता, पु. ಕೈ, ಹಸ್ತ; ಆನೆಯ ಸೊಂಡಿಲು.

हस्ती, पु. ಆನೆ. स्त्री. ಇರವು, ಇರುವಿಕೆ, ಅಸ್ತಿತ್ವ; ಜೀವಾಳ, ಪ್ರಾಣ; ಐಶ್ವರ್ಯ, ಸಂಪತ್ತು; ಯೋಗ್ಯತೆ; ದಕ್ಷತೆ; ಪ್ರಪಂಚ, ಜಗತ್ತು.

हस्तिया, वि. ಹಸ್ತದ, ಕೈಯಿನ; ಸೊಂಡಲಿನ.

हस्ब, क्रिवि. ಅನುಸಾರವಾಗಿ, ಮೇರೆಗೆ; ಅನುಗುಣವಾಗಿ. हस्बे ज़ैल = ಕೆಳಗೆ ಕಂಡಂತೆ, ಕೆಳಗೆ ಹೇಳಿರುವ ರೀತಿಯಲ್ಲಿ. हस्बे दस्तूर = ನಿಯಮಕ್ಕನುಸಾರವಾಗಿ, ಯಥಾನಿಯಮ, ಯಥಾವಿಧಿ.

हस्र, पु. ಕೊನೆ, ಮುಕ್ತಾಯ; ಮುತ್ತುಗಟ್ಟುವಿಕೆ, ಮುತ್ತುವಿಕೆ, ಮುತ್ತಿಗೆ; ಆಶ್ರಯ, ಅವಲಂಬನ; ನಂಬಿಕೆ, ಭರವಸೆ; ಸಂಖ್ಯೆ, ಎಣಿಕೆ.

हहर, स्त्री. ನಡುಕ; ಕಂಪನ; ಭಯ

हहरना, अक्रि. ನಡುಗು, ತತ್ತರಗುಟ್ಟು, ಕಂಪಿಸು; ಬೆಚ್ಚು, ಬೆರಗಾಗು.

हहराना, अक्रि. ನಡುಗು, ಕಂಪಿಸು; ಹೆದರು. सक्रि. ನಡುಗಿಸು, ಹೆದರಿಸು.

हहा, स्त्री. ನಗುವಿಕೆ; ದೈನ್ಯ, ಗೋಗರೆಯುವಿಕೆ; ಹಾಹಾಕಾರ.

हां, अव्य. ಹೌದು, ಅಹುದು, ಹಾಂ, ಹೂ, ಸ್ಯ. क्रिवि. ಇಲ್ಲಿ; ಹತ್ತಿರ, ಬಳಿ.

हांक, स्त्री. ಕರೆಯುವಿಕೆ, ಕೂಗುವಿಕೆ; ಚಪ್ಪರಣೆ; ಅಟ್ಟುವಿಕೆ, ತರುಬುವಿಕೆ. हांक पुकार = ಕೂಗಾಟ, ಬೊಬ್ಬೆ.

हांकना, सक्रि. ಕೂಗು, ಕರೆ; ಜಗಳಕ್ಕೆ ಕರೆ, ಹೂಂಕರಿಸು; ಬೊಬ್ಬೆ ಹಾಕು; ಹೇಳು, ಅನ್ನು; ಚಪ್ಪರಿಸು; ಅಟ್ಟು, ತರುಬು, ಸೋವು, ಓಡಿಸು; (ಜಂಭ) ಹೊಡೆ, ಕೊಚ್ಚು; (ಬೀಸಣಿಗೆ) ಬೀಸು.

हांका, पु. ಅಟ್ಟುವಿಕೆ, ತರುಬುವಿಕೆ.

हांकाहांक, स्त्री ಗದ್ದಲ, ಗಲಭೆ; ಬೊಬ್ಬೆ; ಕೂಗಾಟ; ಅಟ್ಟುವಿಕೆ, ತರುಬುವಿಕೆ.

हांकी, स्त्री. ಶಾವಿಗೆ ಒರಳು.

हांगर, पु. ಮೊಸಳೆ, ನೆಗಳು.

हांगा, पु. ಬಲಾತ್ಕಾರ, ಬಲವಂತ; ಶಕ್ತಿ, ಬಲ.

हांगी, स्त्री. ಬಟ್ಟೆಯಿಂದಾದ ಒಂದರಿ; ಹೂಗುಟ್ಟುವಿಕೆ, ಒಪ್ಪಿಕೆ.

हांडना, अक्रि. ತಿರುಗಾಡು; ಅಲೆಯು; ತೊಳಲು.

हांडी, स्त्री. ಕೊಪ್ಪರಿಗೆ, ಬಾನೆ; ಮಡಕೆ.

हांपना, हांफना, अक्रि. ಉಸುರಿಗೆ ಬಾಯಿ ಬಿಡು, ಮೇಲುಸಿರು ಬಿಡು; ತೇಕು, ಏದು, ಉಗರಿಸು; ತಿಕ್ಕುಮುಕ್ಕಾಡು.

हांफा, पु. ಏದುವಿಕೆ, ಮೇಲುಸಿರು.

हांसल, पु. ಕೆಂಬಣ್ಣದ ಕುದುರೆ.

हांसी, स्त्री. ನಗೆ; ಪರಿಹಾಸ, ಗೇಲಿ.

हा, अव्य. ಹಾ! ಅಹಹ!

हाई, स्त्री. ಸ್ಥಿತಿ; ಬಗೆ, ತರಹ.

हाऊ, पु. ಗೊಗ್ಗಯ್ಯ, ಗುಮ್ಮ, ಬೂಚಿ.

हाकिम, पु ನ್ಯಾಯಾಧೀಶ, ನ್ಯಾಯಾಧಿಕಾರಿ; ಅಧಿಕಾರಿ, ಅಧಿಕಾರಸ್ಥ; ಮೇಲ್ಪಟ್ಟ ಅಧಿಕಾರಿ; ಸಾಹೇಬ; ಯಜಮಾನ, ಒಡೆಯ; ಆಳುವವ, ಶಾಸಕ, ದೊರೆ.

हाकिमाना, वि. ನ್ಯಾಯಸ್ಥಾನದ; ನ್ಯಾಯಾಧೀಶನ; ಅಧಿಕಾರಯುತ; ಯಜಮಾನನಂತಹ

हाकिमी, स्त्री. ಆಳಿಕೆ, ಶಾಸನ; ಅಧಿಕಾರ. वि. ಆಳುವವನ, ಅಧಿಕಾರದ.

हाजत, स्त्री. ಕಾವಲು, ಪಹರೆ, ಬಂಧನ, ಮೊಹಸಲೆ; ಇಚ್ಛೆ: ಬಯಕೆ; ಭರವಸೆ; ಅವಶ್ಯಕತೆ, ಅಗತ್ಯ, ದರದು; ಮಲಬಾಧೆ; ಜಲಬಾಧೆ.

हाजतमंद, वि. ಅಗತ್ಯವುಳ್ಳವ, ದರದು ಉಳ್ಳವ.

हाजतमंदी, स्त्री. ಅವಶ್ಯಕತೆ, ದರದು.

हाजत-रवाई, स्त्री. ಅವಶ್ಯಕತೆಯ ಪೂರ್ತಿ; ಆಹಾರದ ವ್ಯವಸ್ಥೆ.

हाजती, वि. ಅವಶ್ಯಕತೆ ಉಳ್ಳವ, ಅಗತ್ಯಪಡುವವ. स्त्री. ಕಕ್ಕಸು ತಂಬಿಗೆ.

हाज़मा, पु. ಅರಗುವಿಕೆ. ಜೀರ್ಣ.

हाजिक़, वि. ಬುದ್ಧಿವಂತ, ವಿವೇಕಿ.

हाजिज़, पु. ತಡೆ, ಅಡ್ಡಿ.

हाजिब, पु. ದ್ವಾರಪಾಲಕ, ಪಡಿಯರ; ಸಚಿವ, ಅಮಾತ್ಯ; ಪರದೆ, ತೆರೆ.
हाज़िम, वि. ಜೀರ್ಣಿಸುವ, ಜೀರ್ಣಕಾರಿ
हाज़िमा, स्त्री. ಜೀರ್ಣಶಕ್ತಿ.
हाज़िर, वि. ಮುಂದೆ ಇರುವ, ಎದುರಿಗಿರುವ; ಉಪಸ್ಥಿತ, ಹಾಜರಿರುವ; ಸಿದ್ಧವಾದ. हाज़िर जवाब = ತಕ್ಷಣ ಉತ್ತರ ಕೊಡಬಲ್ಲವ, ಪ್ರತ್ಯುತ್ಪನ್ನ ಮತಿ, ಚಮರ್ಣ.
हाज़िर-जवाबी, स्त्री. ತಕ್ಷಣ ಉತ್ತರ ಕೊಡುವಿಕೆ.
हाज़िरात, स्त्री. ಮಾಟ, ಯಕ್ಷಿಣಿ.
हाज़िरी, स्त्री. ಮುಂದೆ ಇರುವಿಕೆ, ಉಪಸ್ಥಿತಿ, ಹಾಜರಿ; ಹಾಜರಿ ಪುಸ್ತಕ; ಬೆಳಗಿನ ಊಟ.
हाजी, पु. ಮಕ್ಕಾ ನಗರಕ್ಕೆ ತೀರ್ಥಯಾತ್ರೆ ಹೋಗಿಬಂದವ.
हाट, स्त्री. ಅಂಗಡಿ; ಸಂತೆ; ಜಾತ್ರೆ.
हाटक, पु. ಬಂಗಾರ, ಚಿನ್ನ.
हाड़, स्त्री. ಎಲುಬು, ಅಸ್ಥಿ; ಕುಲ.
हाता, पु. ಆವರಿಸಿದ ಸ್ಥಳ, ಬೇಲಿ ಹಾಕಿದ ಪ್ರದೇಶ; ಅಂಗಳ; ಪ್ರಾಂತ, ಗಡಿ. वि. ಬೇರೆಯಾದ, ತೊರೆದ.
हाताद़ार, वि. ಮರ್ಯಾದೆಗೆಟ್ಟ.
हातिफ़, पु. ಗಟ್ಟಿಯಾಗಿ ಕೂಗುವವ; ಸ್ತುತಿ ಮಾಡುವವ; ದೇವತೆ; ದೇವವಾಣಿ, ಅಶರೀರಿ.
हातिम, वि. ನಿಪುಣ, ಗಟ್ಟಿಗ, ಪಕ್ಕಾ; ದಾನಶೀಲ, ದಾನಿ, ಕೊಡಗೈ.
हाथ, पु. ಹಸ್ತ, ಕರ, ಕೈ; ಮೊಳ; ಕೈವಶ; ಕೈವಾಡ; ಮರಸಿ, ಪಟ್ಟು. हाथ कानों पर रखना = ಅಲ್ಲವೆನ್ನು, ಪೂರ್ಣವಾಗಿ ನಿರಾಕರಿಸು; ಆಶ್ಚರ್ಯಗೊಳ್ಳು, ವಿಸ್ಮಿತನಾಗು. हाथ झूठा होना = ಕೈ ಕೊಳೆಯಾಗು ಅಥವಾ ಅಪವಿತ್ರವಾಗು; ಕೈ ಸೇದಿಹೋಗು; ಕೈಗಳ ಬಲ ಕುಗ್ಗಿಹೋಗು. हाथ धोना = ಕೈ ತೊಳೆದುಬಿಡು, ತೊರೆ; ನಿರಾಶನಾಗು. हाथ पांव टूटना = ನೋವಾಗು, ನೋಯು. हाथ पांव मारना = ದೇಕು, ತೆವಳು; ಒದ್ದಾಡು, ಪ್ರಯಾಸಪಡು; ಈಜಾಡು. हाथ बंटाना = ಭಾಗವಹಿಸಿ ಸಹಾಯ ಮಾಡು, ಒತ್ತಾಸೆ ಮಾಡು हाथ लगना = ಕೈಸೇರು; ಕೈಯಾಡು, ಕೈತಗಲು; ಶುರುವಾಗು. हाथों हाथ = ಬೇಗ ಬೇಗನೆ, ಜಲ್ದಿ ಜಲ್ದಿ. हाथों हाथ बिकना = ಬೇಗ ಅಥವಾ ತಕ್ಷಣ ಬಿಕರಿಯಾಗು हाथों हाथ लेना = ಬಹಳವಾಗಿ ಆದರಿಸು. आड़े हाथों लेना = ತರಾಟೆಗೆ ತೆಗೆದುಕೊಳ್ಳು, ಅಮರಿಸು, ಹಂಗಿಸು.
हाथ-झुलाई, स्त्री. ಸೂರೆ, ಲೂಟಿ.
हाथपान, हाथफूल, पु. ಮುಂಗೈಯಲ್ಲಿ ಧರಿಸುವ ಒಂದು ಆಭರಣ.
हाथ-फेर, स्त्री. ಹೊರಳೆ, ಸಾಲ.
हाथा, पु. ಹಿಡಿ, ವಶ, ಪಟ್ಟು; ಅರಿಸಿನ ಹಚ್ಚಿದ ಕೈ ಬೆರಳಿನ ಗುರುತು.
हाथाजोड़ी, स्त्री. ಒಂದು ಮೂಲಿಕೆ.
हाथापाई, हाथाबांही, स्त्री. ಕೈ ಕೈ

ಹತ್ತುವಿಕೆ, ಮಾರಾಮಾರಿ, ಲಟಾಪಟಿ; ಹೊಡೆದಾಟ, ಗುದ್ದಾಟ, ಜಗಳ.

हाथी, पु. ಹಸ್ತಿ, ಗಜ, ಆನೆ. स्त्री. ಊರೆ, ಆಧಾರ.

हाथीख़ाना, पु. ಗಜಶಾಲೆ.

हाथीदांत, पु. ಆನೆದಂತ, ಜಂತ.

हाथीनाळ, स्त्री. ಆನೆಯ ಮೇಲೆ ಹೇರುವ ಫಿರಂಗಿ, ಸಣ್ಣ ಫಿರಂಗಿ.

हाथी पांव, पु. ಆನೆಗಾಲು, ಒರಲೆಗಾಲು.

हाथीवान, पु. ಮಾವಟಿಗ, ಜೋದ.

हादिस, वि. ಹೊಸ, ನವೀನ.

हादिसा, पु. ಹೊಸದು; ಸಂಭವ, ಪ್ರಸಂಗ; ದುರ್ಘಟನೆ, ಅನಘಾಡ, ಅಪಘಾತ.

हादी, पु. ಉಪದೇಶಕ; ಮಾರ್ಗದರ್ಶಿ; ಮುಖಂಡ, ಪುಢಾರಿ, ನಾಯಕ.

हानि, स्त्री. ಹಾನಿ, ನಷ್ಟ, ಅನಿಷ್ಟ.

हापड़, वि. ಹೊಟ್ಟೆಬಾಕ, ತಿಂಡಿಬಾಕ.

हापना, अक्रि. = हांफना.

हापर, स्त्री. ಕಬ್ಬಿನ ಸಸಿ ಮಡಿ.

हाफ़िज़, पु. ರಕ್ಷಕ, ಕಾಪಾಡುವವ; ಕುರಾನನ್ನು ಕಂಠಸ್ಥ ಮಾಡಿದವ, "ಕುರಾನ್ ಘನಪಾಠಿ". वि. ಸ್ಮರಣಶಕ್ತಿಯುಳ್ಳವ, ಒಳ್ಳೆಯ ಜ್ಞಾಪಕವುಳ್ಳವ.

हाफ़िज़ा, पु. ಸ್ಮರಣಶಕ್ತಿ, ಜ್ಞಾಪಕಶಕ್ತಿ.

हाफ़िज़ी, स्त्री. ಒಳ್ಳೆಯ ಜ್ಞಾಪಕ.

हामिद, पु. हामिदा, स्त्री. ಪ್ರಶಂಸನೀಯ, ಸ್ತುತ್ಯ; ದೇವರನ್ನು ಸ್ತುತಿಸುವವರು.

हामिल, पु. ಹೊರುವವ, ಒಯ್ಯುವವ; ಸೂಳೆಯ ಮಗ, ಬೊಡ್ಡಿಮಗ. वि. ಗರ್ಭವತಿಯಾದ.

हामिला, स्त्री. ಗರ್ಭವತಿ, ಬಸುರಿ.

हामी, वि. ರಕ್ಷಕ; ಸಹಾಯಕ, ಒತ್ತಾಸೆಗಾರ. स्त्री. ಭರವಸೆ; ಉತ್ತರವಾದ; ಹೊಣೆ; ಒಪ್ಪಿಕೊಳ್ಳುವಿಕೆ, ಒಪ್ಪಿಕೆ, ಸ್ವೀಕಾರ. हामी भरना = ಒಪ್ಪಿಕೊಳ್ಳು, ಹೊಗಟ್ಟು; ಹೊಣೆಯಾಗು.

हाय, अव्य. ಹಾ! ಹಾಯ್! स्त्री. ಕಷ್ಟ, ದುಃಖ; ಹಾಹಾಕಾರ; ನಿಟ್ಟುಸಿರು. हाय दैया = ನಿಟ್ಟುಸಿರು. हाय तोबा = ಅಳು, ಗೋಳಾಟ. हाय मारना = ನಿಟ್ಟುಸಿರು ಬಿಡು, ನಿಡುಸುಯ್ಯು.

हायन, पु. ವರ್ಷ, ಸಂವತ್ಸರ.

हायल, वि. ಮಧ್ಯೆಬರುವ, ತಡೆಯುವ.

हार, पु. ಹಾರ, ಮಾಲೆ; ಹೂ ಮಾಲೆ; ದನಗಳ ಮಂದೆ; ಹುಲ್ಲು ಗಾವಲು, ಗೋಮಾಳ; ಮಾಡುವವ, ಕರ್ತ. स्त्री. ಪರಾಜಯ, ಅಪಜಯ, ಸೋಲು; ವಿಫಲತೆ; ನಷ್ಟ; ಆಯಾಸ. हार खाना = ಅಪಜಯ ಹೊಂದು, ಸೋಲು. हार मानना = ತನ್ನ ಪರಾಜಯವನ್ನು ಒಪ್ಪಿಕೊಳ್ಳು, ಸೋತುಹೋಗು; ತಲೆಬಾಗಿಸು; ನಿರಾಶನಾಗಿ ಕೈಬಿಡು, ತ್ಯಜಿಸು

हारजीत, स्त्री. ಗೆಲುವು ಸೋಲು, ಜೂಜು; ಜೂಜಾಟ, ಜುಗಾರಾಟ.

हारना, अक्रि. ಅಪಜಯ ಹೊಂದು,

ಸೋಲು; ವಿಫಲವಾಗು; ಬಲಗುಂದು; ದಣಿಯು. सक्रि. ಸೋಲು; ಕಳೆದು ಕೊಳ್ಳು; ತೊರೆ, ತ್ಯಜಿಸು.

हारा, पु. ಹಾರ, ಮಾಲೆ; ಮಣಿಮ್ಣ ಒಲೆ. प्रत्य. ಮಾಡುವವ, -ಕಾರ. ಉದಾ:– मेटनहारा = ಅಳಿಸುವವ.

हारिज, पु. ಅಡಚಣೆ ಮಾಡುವವ; ಅಡ್ಡಿ; ತಡೆ. हारिज होना = ಅಡಚಣೆಯಾಗು, ಅಡ್ಡಿಯಾಗು.

हारिल, पु. ಒಂದು ಜಾತಿ ಪಕ್ಷಿ.

हारू, वि. ಸೋಲುವವ; ಸೋತವ, ಕಳಕೊಂಡವ.

हार्दिक, वि. ಹೃದಯದ, ಹೃತ್ಪೂರ್ವಕವಾದ

हाल, स्त्री. ಅಲುಗುವಿಕೆ, ಕಂಪನ; ಚಕ್ರದ ಪಟ್ಟಿ, ಗಾಲಿಯ ಕಟ್ಟು, ಹಳಿ, ನೇಮಿ. पु. ಸ್ಥಿತಿ, ಇರವು; ನೆಲೆ, ನೆಲವು, ಪರಿಸ್ಥಿತಿ; ಒಳ್ಳೆಯ ಸ್ಥಿತಿ, ದೆಶೆ; ವರ್ತಮಾನಕಾಲ, ಸಾಂಪ್ರತ; ವಿದ್ಯಮಾನ, ವೃತ್ತಾಂತ, ವಿವರ; ಭಗವಂತನಲ್ಲಿ ತಲ್ಲೀನತೆ, ಪರವಶತೆ. वि. ವರ್ತಮಾನ, ಈಗಿನ, ಪ್ರಸ್ತುತ. क्रिवि. ಈಗ; ಸದ್ಯ, ಬೇಗನೆ. हाल में = ಸದ್ಯದಲ್ಲಿ, ಸದ್ಯಕ್ಕೆ, ಹಾಲಿ. हाल बे-हाल = ದುಸ್ಥಿತಿ, ಅಪದೆಶೆ.

हालगोला, पु. ಚೆಂಡು; ಗೋಲಿ.

हालडोल, पु. ಅಲುಗಾಟ, ಚಲನೆ; ಚಳುವಳಿ; ಅಲ್ಲೋಲ ಕಲ್ಲೋಲ.

हालत, स्त्री. ಸ್ಥಿತಿ, ಪರಿಸ್ಥಿತಿ; ಪಾಡು; ಸ್ವಭಾವ.

हालर, पु. ಚಲನೆ; ಕಂಪನ.

हालरा, पु. (ಮಕ್ಕಳನ್ನು) ಆಡಿಸುವಿಕೆ; ಜೋಲಾಟ.

हालांकि, अव्य. ಆದಾಗ್ಯೂ, ಯದ್ಯಪಿ.

हाला, पु. ಚಂದ್ರನ ಸುತ್ತಲೂ ಮಂಡಲ. स्त्री. ಸುರೆ, ಸಾರಾಯಿ.

हालाडोला, पु. ಅದುರುವಿಕೆ; ಭೂಕಂಪ

हालात, स्त्री. ಸ್ಥಿತಿಗತಿ; ವಿದ್ಯಮಾನ.

हालिक, वि. ನಾಶಕ, ನಾಶಕಾರಿ.

हालिम, पु. ಒಂದು ತರಕಾರಿ. वि. ಮೃದು, ಮೆತ್ತಗಿರುವ.

हाली, वि. ನವೀನ ಕಾಲದ; ಈಗಿನ; ಚಾಲ್ತಿಯಲ್ಲಿರುವ. क्रिवि. ಶೀಘ್ರವಾಗಿ, ಜಲ್ದಿ. पु. ಆರಂಬಗಾರ, ರೈತ, ಜೀತಗಾರ; ಆಳುಕಾಳು. स्त्री. ಹೆಂಡತಿಯ ತಂಗಿ, ನಾದಿನಿ.

हाव, पु. ಒಯ್ಯಾರ, ಬೆಡಗು. स्त्री. ಕೂಗು, ಕರೆ. हाव हाव = ಕೂಗಾಟ; ಆಗಹ್ಯ; ಬೇಡಿಕೆ.

हावन, पु. ಕಲ್ಪತ್ತು, ಒರಳು.

हावन-दस्ता, पु. ಕಲ್ಪತ್ತಿನ ಸಣ್ಣ ಒನಕೆ; ಕಲ್ಪತ್ತು ಮತ್ತು ಒನಕೆ.

हाव-भाव, पु. ಬೆಡಗು, ಒಯ್ಯಾರ, ಹಾವಭಾವ, ಬೀಟನೋಟ.

हाविया, पु. ನರಕ; ಪಾತಾಲ; ಕತ್ತಲೆಯ ಸ್ಥಳ.

हावी, वि. ಶೀಖರಿಸುವ, ಒಟ್ಟುಗೂಡಿಸುವ; ಸೇರಿಸುವ; ಸುತ್ತುಗಟ್ಟುವವ; ಹಿಡಿತದಲ್ಲಿಡುವವ; ಮೇಲುಗೈಯಾದ; ದಕ್ಷ, ನಿಪುಣ. पु. ಹಿಡಿತ, ಪಟ್ಟು.

(किसी पर) हावी होना=ಒಬ್ಬನನ್ನು ತನ್ನ ಪೂರ್ಣ ವಶದಲ್ಲಿಟ್ಟುಕೊಳ್ಳು, ತನ್ನ ಹತೋಟಿಯಲ್ಲಿಟ್ಟುಕೊಳ್ಳು; ಮೇಲುಗೈಯಾಗು.

हाशा, क्रिवि. ವಿನಹ, ಹೊರತು, ಸಿವಾಯಿ.

हाशिया, पु. ಅಂಚು, ಕರೆ; ಬದಿ, ದಡ, ಅರಗು; ಕಾಗದದ ಮೇಲೆ ಬರೆಯುವಾಗ ಅಂಚಿನಲ್ಲಿ ಬಿಡುವ ಖಾಲಿ ಜಾಗ, "ಮಾರ್ಜಿನ್ನು"; ಮಾರ್ಜಿನ್ನಲ್ಲಿ ಬರೆದ ಟಿಪ್ಪಣಿ, ಪಕ್ಕಟಿಪ್ಪಣಿ; ಸೇನೆ, ಪಡೆ.

हाशियादार, वि. ಅಂಚುಳ್ಳ, "ಮಾರ್ಜಿನ್ನು" ಉಳ್ಳ; ಪಕ್ಕಟಿಪ್ಪಣಿಯುಳ್ಳ.

हास, पु. ನಗುವಿಕೆ, ನಗೆ; ಪರಿಹಾಸ.

हासिद, वि. ಅಸೂಯೆಪಡುವವ, ಶತ್ರು.

हासिल, वि. ಸಿಗುವ; ಲಭ್ಯ; ದೊರೆತ, ಪ್ರಾಪ್ತ, ಲಬ್ಧ. पु. ಸಂಪ್ರಾಪ್ತಿ; (ಗಣಿತದಲ್ಲಿ) ಫಲ, ಲಬ್ಧಾಂಕ; ಫಲಿತಾಂಶ; ಉತ್ಪತ್ತಿ, ಹುಟ್ಟುವಳಿ; ಲಾಭ; ವರಮಾನ; ಉದ್ದೇಶ.

हास्य, पु. ಹಾಸ್ಯ, ನಗಚಾಟಿಕೆ.

हाहा, पु. ನಗುವಿಕೆ, ಹಲ್ಲು ಗಿಂಜುವಿಕೆ, ಗೋಗರೆಯುವಿಕೆ; ಮುಖಸ್ತುತಿ. हाहा जीजी = ಗೋಗರೆಯುವಾಗ ಹೇಳುವ ಶಬ್ದ, ದಮ್ಮಯ್ಯ.

हाहाकार, पु. ಅಳಲು, ಗೋಳಾಟ; ಕೂಗಾಟ.

हाही, स्त्री. ಬೇಡುವಿಕೆ, ಗೋಗರೆಯುವಿಕೆ.

हाहू, पु. ಗದ್ದಲ, ಕೋಲಾಹಲ.

हाहूबेर, पु. ಕಾಡು ಎಲಚಿ ಹಣ್ಣು.

हिकरना, अक्रि. ಕೆನೆಯು, ಕಿರಿಚು.

हिकार, पु. ಹಸುವಿನ ಕೂಗು.

हिंगु, पु. ಹಿಂಗು, ಬಾಹ್ಲೀಕ.

हिंगोट, पु. ಹೊಂಗೆ ಮರ.

हिंडन, पु. ತಿರುಗುವಿಕೆ, ತಿರುಗಾಟ.

हिंडोलना, हिंडोला, पु. ತೂಗುಮಣೆ, ಉಯ್ಯಾಲೆ, ತೂಗಾಲೆ, ಹಿಂದೋಲ; ತೊಟ್ಟಿಲು; ರಾಟವಾಳ.

हिंद, पु. ಹಿಂದುಸ್ತಾನ, ಭಾರತ ದೇಶ.

हिंदवाना, पु. ಕರಬೂಜು ಹಣ್ಣು.

हिंदवी, स्त्री. ಹಿಂದೀ ಭಾಷೆ.

हिंदसा, पु. ಅಂಕ, ಸಂಖ್ಯೆ; ಎಣಿಕೆ; ಲೆಕ್ಕ, ಗಣಿತ.

हिंदी, वि. ಹಿಂದುಸ್ತಾನದ, ಭಾರತ ದೇಶದ, ಭಾರತೀಯ; ಹಿಂದಿಯ. स्त्री. ಹಿಂದುಸ್ಥಾನದ ಭಾಷೆ, ಹಿಂದೀ.

हिंदुआना, पु. ಹಿಂದುಗಳ ದೇಶ, ಹಿಂದುಸ್ಥಾನ वि. ಹಿಂದುಗಳ; ಹಿಂದುಸ್ಥಾನದ, ಭಾರತ ದೇಶದ.

हिंदुस्तान, हिंदुस्थान, पु. ಹಿಂದುಗಳ ದೇಶ, ಹಿಂದುಸ್ಥಾನ, ಭಾರತ ದೇಶ; ಉತ್ತರ ಹಿಂದುಸ್ಥಾನ

हिंदुस्तानी, हिंदुस्थानी, वि. ಹಿಂದುಸ್ಥಾನದ; ಹಿಂದುಸ್ಥಾನವಾಸಿ. स्त्री. ಹಿಂದುಸ್ಥಾನದ ಭಾಷೆ, ಹಿಂದೀ ಅಥವಾ ಹಿಂದುಸ್ತಾನಿ ಭಾಷೆ.

हिंदू, पु. ಹಿಂದು, ಹಿಂದು ಮತಸ್ಥ.

हिंदूनी, स्त्री. ಹಿಂದು ಸ್ತ್ರೀ.

हिंदोस्तान, पु. = हिंदुस्तान.

हिंस, स्त्री. ಕೆನೆಯುವಿಕೆ, ಕಿಚಕಿಲು.

हिंसा, स्त्री. ಹಿಂಸೆ; ವಧೆ; ಕೊಲೆ

हिंस्र, वि. ಕೊಲ್ಲುವ, ಭಯಂಕರ.

हिकमत, स्त्री. ಜ್ಞಾನ, ವಿವೇಕ; ವಿದ್ಯೆ; ಕಲಾಕೌಶಲ್ಯ; ನೈಪುಣ್ಯ; ಜಾಣತನ; ಚಮತ್ಕಾರ; ಯುಕ್ತಿ; ಸಾಧನ; ವೈದ್ಯನ ಕೆಲಸ, ವೈದ್ಯವೃತ್ತಿ.

हिकमती, वि. ನಿಪುಣ; ಚತುರ; ಜಾಣ.

हिकायत, स्त्री. ಕತೆ; ಕಥಾನಕ; ಚರಿತ್ರೆ.

हिक़ारत, स्त्री. ತಿರಸ್ಕಾರ, ಧಿಕ್ಕಾರ.

हिक्का, पु. ಬಿಕ್ಕಳಿಕೆ, ಹಿಕ್ಕೆ, ಎಕ್ಕುಡು.

हिचक, स्त्री. ಹಿಂಜರಿಯುವಿಕೆ.

हिचकना, हिचकिचाना, अक्रि. ಹಿಂತೆಗೆ, ಹಿಮ್ಮೆಟ್ಟು; ತಡಬಡಿಸು; ಸಂದೇಹಪಡು.

हिचकाना, सक्रि. ದೂಡು; ಕೀಳು; ಜಗ್ಗು; ಅಲ್ಲಾಡಿಸು.

हिचकिची, स्त्री. ಹಿಂಜರಿಯುವಿಕೆ; ಸಂದೇಹ, ಬಿಕ್ಕಳಿಕೆ.

हिचकी, स्त्री. ಬಿಕ್ಕಳಿಕೆ, ಹಿಕ್ಕೆ, ಎಕ್ಕುಡು.

हिचकोला, पु. ಅಲ್ಲಾಡುವಿಕೆ, ತಾಟಾಡುವಿಕೆ; ಅದುರುವಿಕೆ, ಕುಲುಕಾಟ.

हिचर मचर, पु. ಹಿಂತೆಗೆಯುವಿಕೆ; ಹಿಂಜರಿಯುವಿಕೆ; ನೆಪ, ವ್ಯಾಜ.

हिजड़ा, पु. ನಪುಂಸಕ, ಕೊಜ್ಜೆ, ಷಂಡ.

हिजरत, स्त्री. ಅಗಲಿಕೆ, ವಿಯೋಗ; ಹೋಗುವಿಕೆ, ನಿರ್ಗಮನ; ಓಡಿಹೋಗುವಿಕೆ, ಪಲಾಯನ; ದೇಶತ್ಯಾಗ.

हिजरी, पु. ಮಕ್ಕಾ ನಗರವನ್ನು ತೊರೆದು ಮುಹಮ್ಮದ್ ಪೈಗಂಬರನು ೧೫-೭-೬೨೨ ರಲ್ಲಿ ಮದೀನಾ ಪಟ್ಟಣಕ್ಕೆ ಹೋದದ್ದು; ಸದರಿ ತಾರೀಖಿನಿಂದ ಮೊದಲಾಗುವ ಶಕ, ಮುಹಮ್ಮದೀಯ ಶಕಾಬ್ದ, ಹಿಜರಿ ಶಕ.

हिजाब, पु. ತೆರೆ, ಪರದೆ, ಬುರುಕಿ; ಮರೆ; ಲಜ್ಜೆ, ನಾಚಿಕೆ, ಸಂಕೋಚ; ರಾತ್ರಿ.

हिज्जे, पु (ಬರೆಯುವಾಗ) ಅಕ್ಷರ ಕೂಡಿಸುವುದು, ಅಕ್ಷರ ವಿನ್ಯಾಸ, ಕಾಗುಣಿತ.

हिज्र, पु. ಅಗಲುವಿಕೆ, ವಿಯೋಗ.

हित, पु. ಹಿತ, ಉಪಕಾರ; ಪ್ರೀತಿ.

हितकारी, वि. ಹಿತಕರವಾದ.

हिताई, स्त्री. ಬಾಂಧವ್ಯ, ನೆಂಟತನ.

हिताना, अक्रि. ಹಿತವಾಗು, ಹಿತವಾಗಿರು

हितावह, वि. ಹಿತಕರವಾದ.

हिती, हितू, हितैषी, हितेच्छु, वि. ಹಿತವನ್ನು ಬಯಸುವವ, ಹಿತೈಷಿ.

हिदायत, स्त्री. ಉಪದೇಶ, ಬೋಧನೆ; ಹಿತವಾದ, ಬುದ್ಧಿವಾದ; ಆದೇಶ.

हिद्दत, स्त्री. ತೀಕ್ಷ್ಣತೆ, ಚುರುಕು; ತುದಿ, ಅಲಗು; ಉಗ್ರತೆ, ತೀವ್ರತೆ; ಕಡುದು, ಒತ್ತರ.

हिनहिनाना, अक्रि. ಕೆನೆಯು, ಕಿಳಿರು.

हिनहिनाहट, स्त्री. ಕೆನೆಯುವಿಕೆ, ಕಿಚಕಿಲು

हिना, स्त्री. ಗೋರಂಟಿ, ಮದರಂಗಿ.

हिनाई, वि. ಗೋರಂಟಿ ಹಚ್ಚಿದ; ಮದರಂಗಿಯ ಬಣ್ಣದ, ಕೆಂಪು

हिन्दी, स्त्री. = हिंदी.

हिफ़ाज़त, स्त्री ಸಂರಕ್ಷಣೆ, ಕಾಪಾಡುವಿಕೆ;

ಜೋಪಾನ; ಭದ್ರತೆ; ಪರಾಂಬರಿಕೆ.

हिफ़्ज़, स्त्री. ಜ್ಞಾಪಕ, ಸ್ಮರಣೆ क्रिवि. ಬಾಯಿಪಾಠವಾಗಿ, ಕಂಠಸ್ಥ.

हिबा, पु. ಪುರಸ್ಕಾರ, ದಾನ.

हिबादार, पु. ಪುರಸ್ಕಾರ ಪಡೆಯುವವ; ದಾನ ತೆಗೆದುಕೊಳ್ಳುವವ.

हिबानामा, पु. ದಾನಪತ್ರ.

हिम, पु. ಮಂಜು, ಇಬ್ಬನಿ, ಹಿಮ.

हिमयानी, स्त्री. ಹಿಮ್ಮಣಿ ಚೀಲ.

हिमाक़त, स्त्री. ದಡ್ಡತನ, ಹೆಡ್ಡು; ಜಂಭ

हिमामदस्ता, पु. =हावनदस्ता.

हिमायत, स्त्री. ಒತ್ತಾಸೆ, ಸಹಾಯ; ಆಸರೆ, ಬೆಂಬಲ; ಸಮರ್ಥನೆ

हिमायती, वि. ಸಮರ್ಥಕ, ಸಹಾಯಕ.

हिम्मत, स्त्री. ಮನಸ್ಸು, ಯೋಚನೆ, ವಿಚಾರ; ಆಶೆ, ಬಯಕೆ; ಸಂಕಲ್ಪ, ನಿಶ್ಚಯ; ಧೈರ್ಯ, ಎದೆಗಾರಿಕೆ, ಛಾತಿ; ಸಾಹಸ; ಪರಾಕ್ರಮ.

हिम्मतवर, हिम्मती, वि. ಸಾಹಸಿ, ಎದೆಗಾರ, ಧೈರ್ಯಶಾಲಿ.

हिय, हियरा, पु. ಎದೆ; ವಕ್ಷಸ್ಥಳ.

हिया, पु. ಹೃದಯ; ಮನಸ್ಸು; ಜೀವ; ಎದೆ; ವಕ್ಷಸ್ಥಳ.

हियाई, वि. ಉತ್ಸಾಹವುಳ್ಳ, ಹುಮ್ಮಸ್ಸುಳ್ಳ.

हियाव, पु. ಉತ್ಸಾಹ, ಹುಮ್ಮಸ್ಸು; ಹುರುಪು, ಸಾಹಸ.

हिरकना, अक्रि. ಸೇರು, ಅಂಟಿಕೊಳ್ಳು

हिरकाना, सक्रि. ಸೇರಿಸು, ಜಂಟಿಸು.

हिरन, पु. हिरनी, स्त्री. ಜಿಂಕೆ, ಚಿಗರಿ, ಹುಲ್ಲೆ. ಎರಲೆ. हिरन हो जाना= ಬಲು ವೇಗವಾಗಿ ಓಡಿಹೋಗು.

हिरनौटा, पु. ಜಿಂಕೆ ಮರಿ.

हिरफ़त, स्त्री. ಹಸ್ತಕೌಶಲ್ಯ, ಕೈಮಾಟ, ಕಲಾಕೌಶಲ್ಯ; ನೈಪುಣ್ಯ; ಜಾಣ್ಮೆ; ಸಾಮರ್ಥ್ಯ; ಚಾತುರ್ಯ; ಠಕ್ಕು.

हिरफ़त-बाज़, वि. ಠಕ್ಕ, ಮೋಸಗಾರ.

हिरमज़ी, स्त्री. ಕೆಮ್ಮಣ್ಣು.

हिराना, अक्रि. ಕಳೆದುಹೋಗು; ಅಳಿ, ನಷ್ಟವಾಗು; ಚಕಿತನಾಗು. सक्रि. ಕಳಕೊಳ್ಳು; ಮರೆತುಬಿಡು.

हिरार, वि. ಹಸಿಯದಾದ, ಹೊಸ.

हिरावल, पु. =हरावल.

हिरास, स्त्री. ಭೀತಿ, ಭಯ; ಶಂಕೆ, ನಿರಾಶೆ; ಗಡಿಬಿಡಿ; ವಿಸ್ಮಯ.

हिरासत, स्त्री. ರಕ್ಷಣೆ; ಪಹರೆ, ಸೆರೆ, ಕಾವಲು.

हिरासां, वि. ನಿರಾಶ, ಭಗ್ನಾಶ; ಭಯಂಕರ, ಭೀಕರ; ಅಂಜಿದ, ಹೆದರಿದ, ಭೀತ.

हिरासानी, स्त्री. ನಿರಾಶೆ; ಭೀಕರತೆ.

हिरौंजी, स्त्री. ಕೆಮ್ಮಣ್ಣು.

हिर्की, स्त्री. ಯುಕ್ತಿ, ಹಂಚಿಕೆ, ಹೂಟ.

हिर्स, स्त्री. ಆಶೆ, ಬಯಕೆ; ಅತ್ಯಾಶೆ, ಲೋಭ; ದುರಾಶೆ; ಮೋಲಾಟ, ಪೋಟಿ

हिर्सहा, वि. ಅತ್ಯಾಸೆಪಡುವವ; ಲೋಭಿ.

हिर्सा-हिर्सी, क्रिवि. ಅತ್ಯಾಸೆಯಿಂದ, ಲೋಭದಿಂದ.

हिर्सी, वि. ಆಶೆಬುರುಕ, ಲೋಭಿ.

हिलकना, अक्रि. ನರಳು, ಮುಲುಕು.

हिलकोर, हिलकोरा, पु. ತರಂಗ, ಅಲೆ.

ಅಲ್ಲಕಲ್ಲೋಲ, ಚಳುವಳಿ; ಏರಿಳಿತ

हिलकोरना, अक्रि. ಕೂಡಿಸು, ಸೇರಿಸು; ಅಲ್ಲಾಡಿಸು; ಹೊಯಿದಾಡಿಸು.

हिलग, स्त्री. ಸೇರಿಕೆ, ಸಂಬಂಧ, ಸ್ನೇಹ

हिलगना, अक्रि. ಸೇರು, ಅಂಟಿಕೊ; ಸಿಕ್ಕಿಕೊಳ್ಳು; ಮೋಹಿತವಾಗು; ಜಂಟಿ ಬೀಳು; ಹೆಣಗಾಡು; ನೇತಾಡು.

हिलगाना, सक्रि. ಸೇರಿಸು; ಸಿಕ್ಕಿಸು; ತೂಗಹಾಕು; ಜಂಟಿ ಮಾಡು.

हिलन, स्त्री. ಅಲುಗಾಟ, ಚಲನೆ.

हिलना, अक्रि. ಅಲುಗು, ಅಲ್ಲಾಡು; ಸರಿ; ಬಳುಕು, ನಡುಗು; ತೊನೆಯು; ಈಜು; ಪಳಗು. हिलना डुलना = ಅಲುಗಾಡು, ಸುಳಿದಾಡು; ತೊನೆದಾಡು; ಬಾಗು ಬಳುಕು. हिलना मिलना = ಹೊಂದಿಕೊ, ಹೊಂದಿಕೆಯಿಂದಿರು.

हिलसा, स्त्री. ಒಂದು ಬಗೆ ಮೀನು.

हिला, वि. ಪಳಗಿಸಿದ, ಒಗ್ಗಿಸಿದ.

हिलान, पु. ಅಲುಗಾಡುವಿಕೆ; ಕಂಪನ; ನಡುಕ; ಚಲನೆ.

हिलाना, सक्रि. ಅಲುಗಿಸು; ಅಲ್ಲಾಡಿಸು; ಬೀಸು, ಗಲ್ಲಿಸು; ಬಳುಕಿಸು, ಕುಲುಕು; ಸರಿಸು; ನಡುಗಿಸು; ಈಜಾಡಿಸು; ಪ್ರೀತಿ ಹುಟ್ಟಿಸು; ಪಳಗಿಸು; ಒಗ್ಗಿಸು

हिलाल, पु. ಬಿದಿಗೆ ಚಂದ್ರ.

हिलोर, हिलोरा, पु. ಅಲೆ, ತರಂಗ.

हिलोरना, सक्रि. ಅಲೆ ಎಬ್ಬಿಸು.

हिलोल, हिल्लोल, पु. ಅಲೆ, ತರಂಗ.

हिल्म, पु. ನಮ್ರತೆ, ಮೃದುತ್ವ.

हिवर, पु. ಹಿಮ, ಮಂಜು.

हिसका, पु. ಪೈಪೋಟಿ, ಮೇಲಾಟ, ಸ್ಪರ್ಧೆ; ಕಚ್ಚಾಟ; ಅಸೂಯೆ, ಮತ್ಸರ.

हिसका-हिसकी, हिसकी, स्त्री. ಪೈಪೋಟಿ, ಮೇಲಾಟ, ಪೋಟಾಪೋಟಿ.

हिसाब, पु. ಎಣಿಕೆ, ಲೆಕ್ಕ; ಲೆಕ್ಕಾಚಾರ; ಗಣಿತ; ದರ, ಧಾರಣೆ; ಸ್ಥಿತಿ, ರೀತಿ. हिसाब किताब = ಲೆಕ್ಕಪಕ್ಕ, ಲೆಕ್ಕಾಚಾರ.

हिसाब-दां, पु. ಲೆಕ್ಕ ತಿಳಿದವ, ಲೆಕ್ಕಿಗ.

हिसाब-देह, वि. ಲೆಕ್ಕ ಕೊಡತಕ್ಕ, ಜವಾಬ್ದಾರಿಯುಳ್ಳ.

हिसाब-नवीस, पु. ಲೆಕ್ಕ ಬರೆಯುವವ, ಕರಣಿಕ, ಕಾರಕೂನ.

हिसाबी, वि. ಲೆಕ್ಕದ, ಲೆಕ್ಕಾಚಾರದ; ಲೆಕ್ಕಮಾಡಿದ. पु. ಲೆಕ್ಕಾಚಾರಸ್ಥ; ಕರಣಿಕ, ಲೆಕ್ಕಿಗ.

हिसार, पु. ಕೋಟೆ, ದುರ್ಗ; ಬೇಲಿ; ಪೌಳಿ; ಕೋಟೆಯ ಪ್ರಾಕಾರ, ಸುತ್ತಾಲೆ.

हिस, हिस्स, पु. ಅರಿವು, ತಿಳಿವು, ಪ್ರಜ್ಞೆ; ವಿಚಾರ, ಯೋಚನೆ.

हिस्सा, पु. ಭಾಗ, ಅಂಶ; ಖಂಡ, ಅಂಗ. ವಿಭಾಗ; ಹಿಸ್ಸೆ, ಪಾಲು; ತರಗತಿ, ದರ್ಜೆ.

हिस्सादार, हिस्सेदार, वि. ಭಾಗಸ್ಥ, ಪಾಲುದಾರ, ಹಿಸ್ಸೆದಾರ.

हिस्सेदारी, स्त्री. ಪಾಲುಗಾರಿಕೆ; ಪಾಲುಮಾಡುವಿಕೆ, ವಿಭಜನೆ.

हिहिनाना, अक्रि. ಕೆನೆಯು, ಕಿಳಿರು.

हींग, स्त्री. ಹಿಂಗು.

हींस, स्त्री. ಕೆನೆಯುವಿಕೆ, ಹಿಚಿಹಿಲು.

हींसना, अक्रि. ಹೇಕರಿಸು, ಹೇಷಿಸು, ಕೆನೆಯು, ಕಿಳಿರು, ಅರಚು.

ही, अव्य. ತಾನೆ, ಅಷ್ಟೆ; ಒಡನೆಯೇ. आते ही=ಬಂದ ಒಡನೆಯೇ, ಬರುತ್ತಲೇ. आप आयेंगे ही=ತಾವು ಬರುವರಷ್ಟೆ, ಬರುತ್ತೀರಿ ತಾನೆ. चाहिये ही =ಬೇಕೇಬೇಕು. आना ही चाहिये =ಬರಲೇಬೇಕು. एक ही काम = ಒಂದೇ ಕೆಲಸ.

हीक, स्त्री. ಬಿಕ್ಕಳಿಕೆ, ಉವ್ವಳಿಕೆ; ರೇಜಿಗೆ, ಜುಗುಪ್ಸೆ.

हीजड़ा, पु. ನಪುಂಸಕ, ಷಂಡ; ಕೊಜ್ಜೆ, ಗಂಡಕ, ಸೂಗ.

हीठना, अक्रि. ತಲಪು, ಮುಟ್ಟು; ಸಾರು, ಸೇರು, ಅಯ್ದು.

हीन, वि. ಇಲ್ಲವಾದ, ರಹಿತ; ತೊರೆದ; ನಿಕೃಷ್ಟ, ಹೀನ. पु. ಸಮಯ, ಕಾಲ. हीन-हयात = ಜೀವನಕಾಲ, ಜೀವಮಾನ.

हीनता, स्त्री. ಹೀನತೆ; ನ್ಯೂನತೆ, ಕೊರತೆ.

हीर, पु. ಸತ್ವ, ಸಾರ; ಸಾರಾಂಶ, ತಿರುಳು; ಚೇಗು, ಕೆಚ್ಚು, ಹುರುಳು; ಕಸುವು, ವೀರ್ಯ. वि. ಶುದ್ಧ, ಅಪ್ಪಟ.

हीरक, हीरा, पु. ವಜ್ರ, ಹೀರ; ಸಿಡಿಲು. हीरा-कसीस=ಅನ್ನಭೇದಿ, ಹಿರೇಕಸ

हीराना, सक्रि (ಗದ್ದೆಗೆ) ದನಕರುಗಳ ಗೊಬ್ಬರ ಹಾಕು.

हीरामन, पु. ಹೊಂಬಣ್ಣದ ಗಿಳಿ.

हीरावल, पु. ಹೊದಿಕೆ, ಹಚ್ಚಡ.

हील, पु. ಮಣ್ಣು; ಗೊಬ್ಬರ.

हीला, पु. ತಂತ್ರ; ನೆವನ, ಸಬೂಬು, ನೆವ; ಠಕ್ಕು. हीला हवाला=ದಂದನೆ, ತೋದೆ; ಕುಂಟು ನೆಪ; ಮೋಸ.

हीलागर, हीला-बाज़, हीला-साज़, पु. ತಂತ್ರಗಾರ; ಮೋಸಗಾರ, ಠಕ್ಕ.

हीलागरी, हीलाबाज़ी, हीलासाज़ी, स्त्री. ಠಕ್ಕು; ಮೋಸ; ತಟವಟ.

हीही, स्त्री. ಹೀ ಹೀ ಅನ್ನುತ್ತ ನಗುವಿಕೆ

हुं, स्त्री. ಹೂಗುಟ್ಟುವಿಕೆ, ಹಾಂ.

हुंकार, पु. ಹುಂಕಾರ, ಕೂಗುವಿಕೆ; ಧ್ವನಿ.

हुंकारना, अक्रि. ಹೂಂಕರಿಸು, ಕೂಗು; ಗರ್ಜಿಸು, ಅರಚು.

हुंकारी, स्त्री. ಹೂಗುಟ್ಟುವಿಕೆ; ಒಪ್ಪಿಕೆ; ಸ್ವೀಕಾರ, ರೂಪಾಯನ್ನು ಸೂಚಿಸುವ ವಕ್ರಗೆರೆ, [५) = ೫ ರೂಪಾಯಿ.].

हुंडार, पु. ತೋಳ, ವೃಕ.

हुंडावन, पु. ಹುಂಡಿಗೆ ಕೊಡುವ ವಟ್ಟ.

हुंडी, स्त्री. ಹುಂಡಿ ಕಾಗದ, ಹುಂಡಿ; ಕಂತಿನ ಲೇವಾದೇವಿ. हुंडी सकारना =ಹುಂಡಿಯ ಹಣ ಕೊಡಲು ಒಪ್ಪಿಕೊ.

हुंडैत, पु. ಹುಂಡಿಕಾರ; ಗುತ್ತಿಗೆದಾರ, ಕಂಟ್ರಾಕ್ಟುದಾರ.

हुआना, सक्रि. ಹೂಳಿಡು, ಅರಚು.

हुकूमत, स्त्री. ಆಳಿಕೆ, ಶಾಸನ; ದೊರೆತನ; ಪ್ರಭುತ್ವ; ಸರಕಾರ; ಪ್ರಾಜಾಪತ್ಯ; ಅಧಿಕಾರ. हुकूमत चलाना =ಅಧಿಕಾರ ಚಲಾಯಿಸು.

हुक़ा, पु. ಹೊಗೆಸೊಪ್ಪನ್ನು ಸೇದುವ

ನಳಿಗೆ, ಹುಕ್ಕಾ; ಸಣ್ಣ ಪೆಟ್ಟಿಗೆ.

हुक़ा-पानी, पु. ಒಬ್ಬನು ಮುಟ್ಟಿದ ನೀರು ಹುಕ್ಕಾ ಮೊದಲಾದುವುಗಳನ್ನು ಪರಿಗ್ರಹಿಸುವಿಕೆ; ಸಂಬಂಧ. हुक़ा पानी बंद करना = ಅಪಾಂಕ್ತೇಯ ಮಾಡು, ಬಹಿಷ್ಕಾರ ಹಾಕು

हुक़ा-बरदार, पु. ಹುಕ್ಕವನ್ನು ಹೊತ್ತಿಸಿ ಸಿದ್ಧಪಡಿಸುವ ಆಳು.

हुक़ा-बाज़, पु. ಗಾರುಡಿಗಾರ; ಹುಕ್ಕಾ ಸೇದುವವ.

हुक्काम, पु. ಅಧಿಕಾರಿಗಳು

हुकम, पु. ಆಜ್ಞೆ. ಅಪ್ಪಣೆ, ಅಣತಿ, ಹುಕುಂ; ತೀರ್ಪು; ಅಧಿಕಾರ, ಶಾಸನ; ಇಸ್ಪೀಟಾಟದಲ್ಲಿ "ತುರುಪು".

हुकमनामा, पु. ಆಜ್ಞಾಪತ್ರ, ತಾಕೀದಿ.

हुकमबरदार, वि ಆಜ್ಞಾಕಾರಿ, ಆಜ್ಞಾಧಾರಕ; ಸೇವಕ.

हुकमबरदारी, स्त्री. ಆಜ್ಞಾಧಾರಣೆ, ಆಜ್ಞಾಪಾಲನೆ.

हुकमरानी, स्त्री. ಆಳಿಕೆ, ಶಾಸನ.

हुकमी, वि. ಆಜ್ಞಾಪಕ; ಅಗತ್ಯದ, ಜರೂರಾದ; ನಿಷ್ಫಲವಾಗದ, ತಪ್ಪದ; ಖಂಡಿತವಾದ, ಖಾತ್ರಿಯಾದ.

हुजरा, पु. ಕೋಣೆ. ಕೊಠಡಿ; ಗುಡಿಸಲು.

हुजूम, पु. ಗುಂಪು, ದಟ್ಟಣೆ, ಸಂದಣಿ.

हुज़ूर, पु. ಸಾನ್ನಿಧ್ಯ, ಸನ್ನಿಧಾನ; ದೊಡ್ಡವರನ್ನು ಸಂಬೋಧಿಸುವ ಶಬ್ದ, ಹುಜೂರು.

हुज़ूरी, पु. ದೊಡ್ಡವರ ಸನ್ನಿಧಾನದಲ್ಲಿ ಕೆಲಸ ಮಾಡುವವ; ಖಾಸಾ ಸೇವಕ; ದರ್ಬಾರಿ वि. ಸನ್ನಿಧಾನದ; ಹುಜೂರಿನ

हुज्जत, स्त्री. ತರ್ಕ, ವಾದ, ಚರ್ಚೆ; ಕಾರಣ, ಹೇತು; ನೆಪ, ವ್ಯಾಜ

हुज्जती, वि. ತರ್ಕಿಸುವವ, ವಾದಿಸುವವ, ತಾರ್ಕಿಕ.

हुड़क, स्त्री. ಇಚ್ಛೆ, ಅಭಿಲಾಷೆ; ಮರುಕ.

हुड़कना, अक्रि. ದುಃಖಪಡು, ದುಃಖಿಸು; ಮರುಗು, ಹಲುಬು.

हुड़का, पु. ಹಲುಬುವಿಕೆ, ಕೊರಗಣೆ; ಅಗುಳಿ, ತಾಪಾಳು.

हुड़काना. सक्रि. ದುಃಖಪಡಿಸು; ಹಲುಬಿಸು; ಕೊರಗಿಸು; ನಿರುತ್ಸಾಹಪಡಿಸು.

हुड़दंग, पु. ಉಪಟಳ, ಧಾಂದಲೆ, ಗಲಾಟೆ.

हुड़दंगा, वि. ಉಪಟಳದ, ಗಲಾಟೆಯ.

हुड़ुक, पु. ಹೆಂಡಕುಡುಕ; ಅಮಲೇರಿದವ; ಕಬ್ಬಿಣದ ದೊಣ್ಣೆ; ಸಣ್ಣ ಢಕ್ಕೆ; ಹುಲಿಯ ಗರ್ಜನೆ.

हुड़हुड़ी, स्त्री. ಬಿಲ್ಲಿನ ಟೇಂಕಾರ.

हुड्डई, स्त्री. ಬಂಡಾಟ; ಅಶ್ಲೀಲತೆ.

हुडक्क, पु. ಢಕ್ಕೆ, ಡಮರು.

हुदकारना, सक्रि. ಎಬ್ಬಿಸು, ಎತ್ತಿಕಟ್ಟು; ಪ್ರೇರೇಪಿಸು.

हुदना, अक्रि. ನಿಂತುಹೋಗು, ಅಡ್ಡಿಯಾಗು.

हुदहुद, पु. ಮರಕುಟಿಕನ ಹಕ್ಕಿ, ಬಡಗಿ ಹಕ್ಕಿ

हुद्दातुद्दी, हुद्दाहुद्दी, स्त्री. ಪರಸ್ಪರ ಬೆದರಿಸುವಿಕೆ.

हुन, पु. ಸ್ವರ್ಣ, ಹೊನ್ನು.

हुनकना, अक्रि. ಬಿಕ್ಕಿ ಬಿಕ್ಕಿ ಅಳು; ವಿಲಾಪಿಸು.

हुनर, पु. ಕೈಗಾರಿಕೆ, ಶಿಲ್ಪವಿದ್ಯೆ; ಕಲೆ, ಕೌಶಲ; ಚಾತುರ್ಯ, ಚಮತ್ಕಾರ; ಗುಣ; ವೈಶಿಷ್ಟ್ಯ.

हुनरमंद, हुनरवर, वि. ಕಲಾಕುಶಲ, ಚತುರ; ಉತ್ತಮ, ಉತ್ಕೃಷ್ಟ.

हुनरमंदी, स्त्री. ಕಲಾಕುಶಲತೆ; ದಕ್ಷತೆ

हुबाब, स्त्री. ಗುಳ್ಳೆ, ಬುದ್ಬುದ.

हुबाबी, वि. ಬುದ್ಬುದದಂತಹ; ಅಸ್ಥಿರ; ನಿರ್ಬಲ.

हुब्ब, पु. ಪ್ರೇಮ, ಪ್ರೀತಿ; ಖುಷಿ.

हुमकना, हुमगना, अक्रि. ಕುಣಿ; ಹಾರಾಡು, ಒದ್ದಾಡು; ಕಾಲೆತ್ತು; ಹೆಜ್ಜೆಯಿಡಲು ಯತ್ನಿಸು.

हुमचना, अक्रि. ತುಳಿ. ಮೆಟ್ಟು.

हुमा, स्त्री. ಒಂದು ಪಕ್ಷಿ.

हुमेला, पु. ಕಾಸಿನ ಸರ, ಕಾಸಿನ ಹಾರ.

हुर, स्त्री. ಪಕ್ಷಿಗಳು ಹಾರುವ ಶಬ್ದ. हुर हो जाना = ಹಾರಿಹೋಗು; ಮರೆಯಾಗು, ಮಾಯವಾಗು.

हुरगुंडा, पु. ಒಂದು ತರಕಾರಿ.

हुरदंगा, पु. ಉಪದ್ರವ ಮಾಡುವವ, ಉಪದ್ರವಿ, ಗಲಾಟೆಖೋರ.

हुरदंगी, स्त्री. ಉಪದ್ರವ, ಗಲಾಟೆ.

हुरना, सक्रि. ಬಡಿ, ಪೆಟ್ಟು, ಜಡಿ.

हुरमत, स्त्री. ಮಾನ, ಮರ್ಯಾದೆ; ಘನತೆ, ಅಂತಸ್ತು; ಪಾತಿವ್ರತ್ಯ. हुरमत बहा = ಮಾನನಷ್ಟಕ್ಕೆ ಪರಿಹಾರ.

हुरला, वि. ಹಳೆಯ; ಮುದಿ.

हुरहुर, पु. ನಾಯಿಬೇಳೆ ಗಿಡ, ಸಬ್ಜೆ ಬೀಜ.

हुरुकनी, स्त्री. ಪಾತರಗಿತ್ತಿ, ಸೂಳೆ.

हुरूफ़, पु. ಅಕ್ಷರಗಳು, ವರ್ಣಮಾಲೆ.

हुर्सा, पु. ಗಂಧ ಅರೆಯುವ ಕಲ್ಲು; ಲಟ್ಟಣಿಗೆ ಮಣೆ.

हुलकना, अक्रि. ವಾಂತಿ ಮಾಡು, ಓಕರಿಸು.

हुलकारना, सक्रि. ಪ್ರೇರೇಪಿಸು, ಉಬ್ಬಿಸು; ಛೂ ಬಿಡು.

हुलकी, स्त्री. ರೋಗ, ಬೇನೆ, ಮಾರಿ.

हुलसना, अक्रि. ಆನಂದಿಸು, ನಲಿದಾಡು; ಉತ್ಸಾಹಗೊಳ್ಳು, ಹಿಗ್ಗು, ಉಕ್ಕು.

हुलसाना, अक्रि. ಆನಂದಿಸು, ಹಿಗ್ಗು; ನಲಿದಾಡು. सक्रि. ನಲಿದಾಡಿಸು, ಹಿಗ್ಗಿಸು.

हुलसी, स्त्री ಉಲ್ಲಾಸ; ಮಜ, ಗೆಲುವು; ಉತ್ಸಾಹ.

हुलहुल, पु. ಒಂದು ತರಕಾರಿ.

हुलास, पु. ಉಲ್ಲಾಸ; ಮಜ, ಗೆಲವು; ಉತ್ಸಾಹ; ಉಕ್ಕುವಿಕೆ, ಹಿಗ್ಗುವಿಕೆ. स्त्री. ನಸ್ಯ, ನಾಸಿಕಾಚೂರ್ಣ.

हुलिया, हुल्या, पु. ರೂಪ; ಮುಖಭಾವ; ಆಕೃತಿ; ತಲೆ ತಪ್ಪಿಸಿಕೊಂಡವನ ರೂಪವರ್ಣನೆ, ಚಹರೆ ಪಟ್ಟಿ.

हुलिया-नामा, पु. (ಆಸಾಮಿಯ) ಚಹರೆ ಪಟ್ಟಿ.

हुलुक, पु. ವಾಂತಿ, ಓಕರಿಕೆ, ವಮನ.

हुल्लड़, पु. ಗದ್ದಲ, ಗಲಾಟೆ, ರಗಳೆ; ಉಪದ್ರವ, ಧಾಂದಲೆ; ಕೋಲಾಹಲ, ಅಲ್ಲೋಲ ಕಲ್ಲೋಲ; ಚಳುವಳಿ.

हुश्त, अव्य. ಹೋಗು, ತೊಲಗು, ಛೂ

हुश्त-मुश्त, स्त्री ಜಗಳ; ಮಲ್ಲಯುದ್ಧ. ಕುಸ್ತಿ.

हुस्न, पु. ಸೌಂದರ್ಯ, ಚೆಲುವು, ಲಾವಣ್ಯ; ಅಂದ; ಉತ್ಕೃಷ್ಟತೆ. हुस्न परस्त = ಸೌಂದರ್ಯೋಪಾಸಕ.

हूं, अव्य. ಹೂಂ, ಆಗಲಿ. क्रि. ಇದ್ದೇನೆ.

हूंकना, अक्रि. ದುಃಖಿಸು; ಮರುಗು, ಕೊರಗು; ಹೂಂಕರಿಸು, ಗರ್ಜಿಸು.

हूंठा, पु. ಮೂರುವರೆಯ ಮಗ್ಗಿ.

हूंस, स्त्री. ಅಸೂಯೆ, ಹೊಟ್ಟೆಕಿಚ್ಚು; ದೃಷ್ಟಿದೋಷ; ಧಿಕ್ಕಾರ, ನಿಂದೆ.

हूंसना, अक्रि ಅಸೂಯೆಪಡು; ಆಶೆಪಡು, ಮೋಹಗೊಳ್ಳು. सक्रि. ದೃಷ್ಟಿ ಹಾಕು; ನಿಂದಿಸು; ಶಪಿಸು.

हूं-हट, हूं-हां, पु. ಗದ್ದಲ, ಗಲಭೆ.

हू, अव्य. ಕೂಡ, ಸಹ

हूक, स्त्री. ನೋವು; ಶೂಲೆ, ಕೊಡತ; ವೇದನೆ; ಸಂತಾಪ; ದುಃಖ.

हूकना, अक्रि. ನೋಯು, ನೋವಾಗು; ದುಡಿಯು, ಕೊಡೆಯು, ಚುಚ್ಚು.

हूचना, सक्रि. ತಪ್ಪುಮಾಡು.

हूटना, अक्रि. ತಿರುಗು, ಸರಿ.

हूठा, पु. ಹೆಬ್ಬೆಟ್ಟು ತೋರಿಸುವಿಕೆ; ಬಂಡಾಟ; ಅಭಾಸವಾದ ಕೈಸನ್ನೆ.

हूत, स्त्री. ಮೀನು, ಮತ್ಸ್ಯ; ಮೀನರಾಶಿ

हूदह, पु. ಇರಿತ, ತಿವಿತ.

हू-ब-हू, क्रिवि. ಇದ್ದದಿದ್ದ ಹಾಗೆ, ಅದೇ ಪ್ರಕಾರವಾಗಿ, ತದ್ರೂಪವಾಗಿ. ಥೇಟು.

हूर, स्त्री. ಅಪ್ಸರೆ, ದೇವಾಂಗನೆ; ಚೆಲುವಿ, ಸುಂದರಿ.

हूरिस्तान, पु. = परिस्तान.

हूल, स्त्री. ಇರಿಯುವಿಕೆ, ತಿವಿಯುವಿಕೆ; ಇರಿತ; ಚುಚ್ಚುವಿಕೆ; ನೋವು, ಕೊಡತ; ಕೋಲಾಹಲ, ಗದ್ದಲ, ಅಬ್ಬರ; ಆಕ್ರಮಣ, ದಾಳಿ.

हूलड़, पु. ಗದ್ದಲ, ಗಲಭೆ, ಗಲಾಟೆ.

हूलना, सक्रि. ಇರಿ, ತಿವಿ; ಚುಚ್ಚು; ಒತ್ತು, ನೂಕು, ದೂಡು.

हूला, पु. ಇರಿಯುವಿಕೆ, ಇರಿತ.

हूश, वि. ಅಸಭ್ಯ, ಹೆಡ್ಡ.

हूह, हूहा, पु. ಗದ್ದಲ, ಕೋಲಾಹಲ; ಅರ್ಭಟ, ಆಡಂಬರ.

हूहू, पु. ಹೀಕಾರ, ಕೂಗು, ಅಬ್ಬರ; ಉರಿಯುವ ಶಬ್ದ.

हृदय, पु. ಹೃದಯ, ಎದೆ.

हृष्ट-पुष्ट, वि. ಗಟ್ಟಿಮುಟ್ಟಾದ.

हेंगा, पु. ಹಲುಬೆ, ಕುಂಟೆ.

हेंगाना, अक्रि. ಕುಂಟೆ ಹೊಡೆ.

हे, अव्य. ಸಂಬೋಧನ ಶಬ್ದ, ಹೇ!

हेकड़, वि. ಗಡುತರ; ಗಟ್ಟಿಮುಟ್ಟಾದ, ಕಟ್ಟುಮಸ್ತಾದ; ಬಲಿಷ್ಠ, ಪ್ರಚಂಡ, ದಿಟ್ಟ.

हेकड़ी, स्त्री. ದಿಟ್ಟತನ; ಕಟ್ಟುಮಸ್ತು; ಬಲ; ಬಲವಂತ, ಬಲಾತ್ಕಾರ.

हेच, वि. ತುಚ್ಛ, ನಿಕೃಷ್ಟ; ಜಳ್ಳು.

हेठ, क्रिवि. ಕೆಳಗೆ; ಬಗ್ಗಿರುವ.

हेठा, वि. ನೀಚ; ಕೀಳಾದ; ಕೀಳು ಮಟ್ಟದ. पु. ತಡೆ, ಅಡ್ಡಿ, ಅಡಚಣೆ.

हेठी, स्त्री. ನೀಚತನ; ಕೀಳುತನ;

ಅವಮಾನ

हेड़ा, पु. ಮಾಂಸ, ಬಾಡು.

हेड़ी, पु. ಬೇಟೆಗಾರ.

हेत, हतु, पु. ಹೇತು, ಕಾರಣ; ವಾದ, ತರ್ಕ; ಸಂಬಂಧ; ಪ್ರೀತಿ.

हेय, वि. ಬಿಡತಕ್ಕ; ಹೇಯವಾದ, ನೀಚ.

हेर, स्त्री. ಹುಡುಕಾಟ, ಶೋಧನೆ.

हेरना, सक्रि. ಹುಡುಕು, ಬೆದಕು; ಅರಸು, ಶೋಧಿಸು; ನೋಡು, ಪರೀಕ್ಷಿಸು.

हेरना फेरना, सक्रि. ಬದಲಾಯಿಸು, ಪರಿವರ್ತನೆ ಮಾಡು.

हेर-फेर, पु. ತಿರುಗುವಿಕೆ, ತಿರುವು; ಸುತ್ತು, ಬಳಸು; ಬದಲಾವಣೆ, ಪರಿವರ್ತನೆ; ಮಾರ್ಪಾಡು; ವ್ಯತ್ಯಾಸ.

हेरवाना, सक्रि. ಕಳೆದುಕೊಳ್ಳು; ಹುಡುಕಿಸು.

हेराना, अक्रि. ಕಳೆದುಹೋಗು; ಅಳಿದುಹೋಗು; ಹಾಳಾಗು; ಮೈಮರೆ. सक्रि. ಹುಡುಕಿಸು; ಶೋಧನೆ ಮಾಡಿಸು.

हेरा-फेरी, स्त्री. ಬದಲಾವಣೆ; ಪರಿವರ್ತನೆ, ಮಾರ್ಪಾಟು; ತಿರುಗಂಟಿ ಮುರುಗಂಟಿ, ಕಿತ್ತಾಪತ್ತಿ.

हेरी, स्त्री. ಕೂಗುವಿಕೆ, ಕೂಗಾಟ.

हेल, पु. ರೊಚ್ಚೆ, ರೋತೆ; ಗೊಬ್ಬರ; ಗೊಬ್ಬರದ ಹೇರು; ಕುಕ್ಕೆ ತುಂಬ.

हेलना, अक्रि. ಆಟವಾಡು; ಚಕ್ಕಂದವಾಡು; ನುಸುಳು, ಹೊಗು; ಈಜು, ಈಜಾಡು. सक्रि. ಧಿಕ್ಕರಿಸು, ತುಚ್ಛೀಕರಿಸು, ಹೀಗಳೆ.

हेल-मेल, पु. ಸೇರಿಕೆ, ಹೊಂದಿಕೆ; ಸಲಿಗೆ; ಪರಿಚಿತಿ; ಮಹಿವಾಟು.

हेला, स्त्री. ತಿರಸ್ಕಾರ, ಧಿಕ್ಕಾರ; ಆಟ; ಚಕ್ಕಂದ, ಸರಸ; ಪ್ರೇಮ; ಕೇಲಿ; ಹಾವಭಾವ, ವಿಲಾಸ. पु. ತಳ್ಳುವಿಕೆ, ದೂಡುವಿಕೆ, ನೂಕುವಿಕೆ; ಕೂಗು, ಹುಂಕಾರ; ಧಾಳಿ, ಆಕ್ರಮಣ; ಝಾಡಮಾಲಿ, ಬಂಗಿ, ಹಲಾಲಖೋರ.

हेलिन, स्त्री. ಝಾಡಮಾಲಿ ಹೆಂಗಸು.

हेली, स्त्री. ಸಖಿ, ಗೆಳತಿ.

हैं, क्रि. ಇದ್ದಾರೆ, ಇದ್ದೇವೆ, ಇದ್ದೀರಿ. हैं हैं = ಏನು; ಏನು ಹೇಳುತ್ತೀ.

है, क्रि. ಇದ್ದಾನೆ, ಇದ್ದಾಳೆ, ಇದೆ.

हैक, पु. ಕುದುರೆ, ಅಶ್ವ.

हैकल, स्त्री. ರೂಪ; ಕಾಸಿನ ಹಾರ, ಕಾಸಿನ ಸರ; ತಾಯಿತಿ, ರಕ್ಷೆ; ದೇವಸ್ಥಾನ, ಮಂದಿರ.

हैज़, पु. ರಜೋದರ್ಶನ, ಮಾಸಿಕ ಧರ್ಮ, ಹೊಲೆ, ಮುಟ್ಟು.

हैज़ा, पु. ವಾಂತಿಭೇದಿ, ವಿಷೂಚಿಕೆ, ಮಾಂಕಾ, ಪಟಕಿ.

हैज़ी, वि. ಜಾರಜ; ದುಷ್ಟ, ಪೋಲಿ.

हैत, पु. ಗೋಡೆ; ಬೇಲಿ.

हैदर, पु. ಸಿಂಹ.

हैफ़, पु. ಅನ್ಯಾಯ; ಕನಿಕರ, ಕರುಣೆ. अव्य. ದುಃಖ, ಹಾಹಾ, ಅಯ್ಯೋ ಪಾಪ !

हैफ़ी, स्त्री. ದುಃಖ, ವಿಷಾದ, ವ್ಯಸನ.

हैबत, स्त्री. ಭಯ, ಹೆದರಿಕೆ, ಭೀತಿ; ಕಾಠಿಣ್ಯ, ಕಡುದು; ಅಂತಸ್ತು, ಘನತೆ.

हैबतनाक, वि. ಭಯಂಕರ, ಭೀಕರ,

ಕರಾಳ.

हैयत, ಸ್ತ್ರೀ. ಮುಖ, ಮೋರೆ; ಚಹರೆ; ಗುಣ; ತರಹ, ರೀತಿ; ಜ್ಯೋತಿರ್ವಿ ಜ್ಞಾನ.

हैरत, ಸ್ತ್ರೀ. ಆಶ್ಚರ್ಯ, ವಿಸ್ಮಯ, ಬೆರಗು.

हैरत-ज़दा, वि. ಬೆರಗಾದ, ಚಕಿತನಾದ

हैरती, वि. ವಿಸ್ಮಿತ, ಚಕಿತ.

हैरान, वि. ಬೆಚ್ಚಿಬಿದ್ದ, ಬೆರಗಾದ; ಚಕಿತ; ಕಕ್ಕಾಬಿಕ್ಕಾದ; ಗಾಬರಿಗೊಂಡ, ವ್ಯಗ್ರ; ಕಂಗೆಟ್ಟ, ಪೀಚಾಡುವ. हैरान होना = ಬೆಗಡುಗೊಳ್ಳು, ಬೆರಗಾಗು, ತಳಮಳಗುಟ್ಟು; ಕಂಗೆಡು.

हैरानी, ಸ್ತ್ರೀ. ವಿಸ್ಮಯ, ಬೆರಗು; ವ್ಯಗ್ರತೆ; ಗಾಬರಿ, ತಳಮಳ.

हैलाज, पु. ಜನನಕಾಲ.

हैवान, पु. ಮೃಗ; ಪಶು; ಮೂರ್ಖ.

हैवानियत, ಸ್ತ್ರೀ. ಪಶುತ್ವ; ಮೃಗತ್ವ; ಕ್ರೌರ್ಯ.

हैवानी, वि. ಪಶುವಿನ, ಮೃಗದ; ಪಶುಪ್ರಾಯದ, ಕ್ರೂರ.

हैस-बैस, ಸ್ತ್ರೀ. ಗಡಿಬಿಡಿ, ಗಾಬರಿ; ತಳಮಳ; ತೊಂದರೆ.

हैसियत, ಸ್ತ್ರೀ. ಯೋಗ್ಯತೆ, ಸಾಮರ್ಥ್ಯ; ಶಕ್ತಿ, ಅಳವು; ಅಂತಸ್ತು, ದರ್ಜೆ; ಗೌರವ; ಗುಣ; ಧನ, ಐಶ್ವರ್ಯ.

हों, अक्रि. ಇರಬಹುದು, ಆಗಬಹುದು

होंकना, अक्रि. ಏದು, ತೇಕು.

होंठ, पु. ತುಟಿ, ಅಧರ. होंठ हिलाना = ಮಾತನಾಡು.

होंठी, ಸ್ತ್ರೀ. ಕುದುರೆಯ ಬಾಯಿ ಕಡಾಣಿ, ಕಡಿವಾಳ.

होई, ಸ್ತ್ರೀ. ಪೂಜೆ.

होड़, ಸ್ತ್ರೀ. ಪಂತ, ಪಣ, ಪಂದ್ಯ; ಮೇಲಾಟ, ಪೋಟಾಪೋಟಿ, ಹುರುಡು.

होड़ल, पु. ಅಭ್ರಕ, ಬಿಂಗಾರ.

होड़ाबादी, होड़ाहोड़ी, ಸ್ತ್ರೀ. ಪೈಪೋಟಿ, ಮೇಲಾಟ; ಹುರುಡು; ಪಂದ್ಯ, ಪಂತ.

होत, ಸ್ತ್ರೀ. ಸಂಪನ್ನತೆ, ಪೆಂಪು; ಶಕ್ತಿ, ಸಾಮರ್ಥ್ಯ.

होतब, होतव्य, पु. **होतव्यता**, ಸ್ತ್ರೀ. ಭವಿಷ್ಯ, ಅದೃಷ್ಟ, ನಿಯಾಮತು.

होनहार, वि. ಆಗುವ, ಆಗತಕ್ಕ; ಏಳಿಗೆಗೆ ಬರುವ; ಮುಂದಕ್ಕೆ ಬರುವ; ಭಾವಿ. पु. ಆಗತಕ್ಕದ್ದು, ಭವಿಷ್ಯ.

होना, अक्रि. ಆಗು; ಇರು; ಉಂಟಾಗು; ಜರುಗು; ನೆರವೇರು; ಸಂಭವಿಸು. होना हवाना = ಆಗು, ಉಂಟಾಗು.

होनी, ಸ್ತ್ರೀ. ಆಗುವಿಕೆ; ಉತ್ಪತ್ತಿ; ಆಗತಕ್ಕದ್ದು; ಭವಿಷ್ಯ.

होम, पु. ಹೋಮ; ಬಲಿ; ಆಹುತಿ.

होमना, सक्रि. ಹೋಮ ಮಾಡು; ಬಲಿ ಕೊಡು.

होरसा, पु. ಗಂಧದ ಕಲ್ಲು; ಲಟ್ಟಣೆ ಮಣೆ

होरहा, होरा, पु. ಕಡಲೆ, ಕಡಲೆಕಾಳು.

होरिल, पु. ಶಿಶು, ಕೂಸು.

होरी, ಸ್ತ್ರೀ. ಹೋಳಿ ಹಬ್ಬ.

होला, ಸ್ತ್ರೀ. ಹೋಳಿ ಹಬ್ಬ, ಕಾಮನ ಹಬ್ಬ. पु. ಸಿಕ್ಖರ ಕಾಮನ ಹಬ್ಬ; ಕಡಲೆಕಾಳು; ಹುರಿಗಡಲೆ.

होलिका, स्त्री. ಹೋಳಿ ಹಬ್ಬ, ಕಾಮನ ಹಬ್ಬ; ಕಾಮನ ಹಬ್ಬದಲ್ಲಿ ಉರಿಸುವ ಕಟ್ಟಿಗೆ ಅದಿ; ಕಾಮದಹನ.

होली, स्त्री. ಹೋಳಿ ಹಬ್ಬ, ಕಾಮನ ಹಬ್ಬ; ಕಾಮನ ಹಬ್ಬದಲ್ಲಿ ಉರಿಸುವ ಕಟ್ಟಿಗೆ ಅದಿ; ಕಾಮದಹನ; ಕಾಮನ ಹಬ್ಬದ ಹಾಡು; ಓಕಳಿಯಾಟ.

होश, पु. ಬುದ್ಧಿ, ವಿವೇಕ; ಅರಿವು, ಜ್ಞಾನ, ಪ್ರಜ್ಞೆ, ಎಚ್ಚರ; ಸ್ಮರಣೆ; ಮನಸ್ಸು; ಆತ್ಮ; ಸಾವು; ನಾಶ. होश हवास = ಪ್ರಜ್ಞೆ, ಚೇತರಣೆ.

होश-मंद, वि. ವಿವೇಕಿ, ಬುದ್ಧಿವಂತ

होश-मंदी, स्त्री. ತಿಳಿವಳಿಕೆ; ಬುದ್ಧಿವಂತಿಕೆ.

होशियार, वि. ಬುದ್ಧಿವಂತ, ವಿವೇಕಿ; ಚತುರ; ಜಾಗರೂಕ, ಹುಷಾರಾದವ अव्य. ಹುಷಾರು, ಜೋಕೆ, ಎಚ್ಚರಿಕೆ!

होशियारी, स्त्री. ಎಚ್ಚರಿಕೆ, ಜೋಕೆ, ಜತನ; ಹುಷಾರಿ; ವಿವೇಕ; ಜ್ಞಾನ

हो-हल्ला, पु = हल्ला.

हौंकना, सक्रि. ಊದು.

हौंस, स्त्री. ಆಶೆ, ಹಂಬಲ; ಕಾಮ; ಆಕಾಂಕ್ಷೆ; ಔತ್ಸುಕ್ಯ; ಹುಮ್ಮಸ್ಸು, ಉತ್ಸಾಹ; ಅಸೂಯೆ, ದ್ವೇಷ.

हौंसना, अक्रि. ಆಶೆಪಡು.

हौंसा, पु. ಆಶೆ; ಲೋಭ; ಅಸೂಯೆ.

हौंसी, स्त्री. ಆಸೆಯುಳ್ಳವ; ಅಭಿಲಾಷಿ; ಲೋಭಿ

हौआ, पु. ಗೊಗ್ಗಯ್ಯ, ಗುಮ್ಮ, ಬೂಚಿ.

हौका, हौकापन, पु. ಅತ್ಯಾಶೆ; ಹೊಟ್ಟೆಬಾಕತನ

हौज़, हौद, पु. ನೀರಿನ ತೊಟ್ಟಿ, ಹೌದ, ಕೇಲು; ನೀರಿನ ಬುಗ್ಗೆ.

हौदा, पु. ಅಂಬಾರಿ, ಹೌದಾ.

हौज़ा, पु. ಭಾಗ, ಪಾಲು, ಹಿಸ್ಸೆ; ನಡು, ಮಧ್ಯ. स्त्री. ದನಕರುಗಳಿಗೆ ನೀರು ಕುಡಿಸುವ ತೊಟ್ಟಿ, ಕೇಲು, ಬಕೀಟು, ಚರಣಿಗೆ.

हौदी, स्त्री. = हौज़ा.

हौड़ा, हौरा, पु. ಗದ್ದಲ, ಕೋಲಾಹಲ.

हौल, पु. ಭಯ, ಅಂಜಿಕೆ, ಅಳುಕು; ಬಲ, ಶಕ್ತಿ; ವರ್ಷ, ಸಂವತ್ಸರ.

हौलदिल, पु. ಎದೆ ಬಡಿದುಕೊಳ್ಳುವಿಕೆ, ಗಾಬರಿಗೆ ಹಾರುವಿಕೆ, ಹೃದಯಸ್ಪಂದನ. वि. ಅಂಜಿದ, ಭಯಭೀತ.

हौलदिला, वि. ಅಳ್ಳೆದೆಯವ, ಅಂಜುಕುಳಿ.

हौलदिली, स्त्री. = नादली.

हौलनाक, वि. ಭಯಾನಕ, ಭಯಂಕರ.

हौलनाकी, स्त्री. ಭಯ, ಭೀತಿ.

हौला, वि. = हलका.

हौली, स्त्री. ಸಾರಾಯಿ ತಯಾರಿಸುವ ಅಥವಾ ಮಾರುವ ಸ್ಥಳ, ಸೇಂದಿ ಅಂಗಡಿ, ಪಡಖಾನೆ.

हौलू, वि. ಅಂಜುಕುಳಿ, ಪುಕ್ಕಿ.

हौले, क्रिवि. ಮೆತ್ತಗೆ, ನಿಧಾನವಾಗಿ. हौले हौले = ಮೆತ್ತಮೆತ್ತಗೆ.

हौवा, पु. ಗೊಗ್ಗಯ್ಯ, ಗುಮ್ಮ, ಬೂಚಿ. स्त्री. ಸೃಷ್ಟಿಯ ಆದಿ ಸ್ತ್ರೀ; ಈವೆ.

हौस, स्त्री. = हौंस.

हौसला, पु. ಹೊಟ್ಟೆ; ಆಕಾಂಕ್ಷೆ; ಆಶೆ; ಹಂಬಲ, ಗೀಳು; ಉತ್ಸಾಹ, ಹುಮ್ಮಸ್ಸು, ಉಲ್ಲಾಸ. हौसला निकालना = ತನ್ನ ಅಭೀಷ್ಟವನ್ನು ಪೂರ್ತಿಮಾಡಿಕೊಳ್ಳು; ಯಥಾಶಕ್ತಿ ಮಾಡು, ಕೈಲಾದಷ್ಟು ಮಾಡು.

हौसलादार, वि. ಸಾಮರ್ಥ್ಯವುಳ್ಳ; ವಿಶಾಲವಾದ.

हौसलादारी, स्त्री. ಸಾಮರ್ಥ್ಯ, ಅಳವು

हौसलामंद, वि. ಉತ್ಸಾಹಿ, ಉತ್ಸುಕ; ಆಕಾಂಕ್ಷಿ.

ಅನುಬಂಧ—೧

ನಾಣ್ಯಗಳ ಕೋಷ್ಟಕ

2 अद्धी =1 दमड़ी
2 दमड़ी =1 छदाम
2 छदाम =1 अधेला
2 अधेला =1 पैसा
4 पैसा =1 आना
16 आना =1 रुपया
....
3 पाई =1 पैसा
6 पाई =1 अधन्ना
2 पाई =1 ದುಗ್ಗಾಣಿ, (ತಾರ).

ಜಮೀನಿನ ಅಳತೆ

20 अनवांसी =1 कचवांसी
20 कचवांसी =1 बिस्वांसी
(धूर; गठवांसी)
20 बिस्वांसी =1 बिस्वा (गट्ठा)
20 बिस्वे =1 बीघा
8 बीघे =5 एकड़
(1 बीघा = 25 ಗುಂಟೆ)

ತೂಕಗಳ ಕೋಷ್ಟಕ

8 खसखस =1 चावल
8 चावल =1 रत्ती
8 रत्ती =1 माशा
12 माशा =1 तोला
5 तोला =1 छटांक
4 छटांक =1 पाव
4 पाव =1 सेर
=80 ರೂಪಾಯಿ ತೂಕ
5 सेर =1 पन्सेरी
8 पन्सेरी =1 मन
....
2 पाव =1 अध-सेरा
× × ×
(ಮುಂಬಾಯಿ ಪ್ರಾಂತ್ಯದಲ್ಲಿ)
4 धान =1 रत्तिका (रत्ती)
8 रत्तिका =1 माशा
4 माशा =1 टंक
72 टंक =1 सेर
40 सेर =1 मन
20 मन =1 कांदी

ಅನುಬಂಧ–೨

ಗ್ರಂಥಸೂಚಿ - Bibliography

संक्षिप्त हिन्दी शब्द सागर : रामचन्द्र वर्मा

हिन्दी मुहावरा कोष : जम्बुनाथन

उर्दू-हिन्दी कोष : जम्बुनाथन

देवनागरी उर्दू-हिन्दी कोश : रामचन्द्र वर्मा

हिन्दी व्याकरण : कामता प्रसाद गुरु

सरल हिन्दी व्याकरण : जम्बुनाथन

Students' Practical Dictionary : *Ram Narain Lal*

Twentieth Century Hindi-English Dictionary : *Jatindranath Sen*

A Kannada-English Dictionary : *Rev. F. Kittel*

The Crown English Canarese Dictionary : *Christanuja Watsa*

Mysore University English-Kannada Dictionary

A Kisamwar Dictionary of Kanarese Words : *Ullal Narasinga Rao*

English - Kannada Dictionary : *Siddalaghatta Rama Rao*

Students' Modern Concise Dictionary : *Koppa & Bharadwaj*

The New Royal Dictionary : (Hindustani-English)

ಶಾಲಾ ನಿಘಂಟು : *Rev. F. Ziegler*

ನಾನಾರ್ಥ ನಿಘಂಟು : *Basel Mission Press*

ಅನುಬಂಧ – ೩

ಹಿಂದೀ ಗಾದೆಗಳು

अंधा क्या चाहे दो आंख = (1) ಕುರುಡ ಕೇಳುವುದು ಎರಡು ಕಣ್ಣು. (2) ಕುರುಡನಿಗೇನು ಬೇಕಾಗಿದೆ ಎರಡು ಕಣ್ಣು.

अंधेरी नगरी चौपट राजा, टके सेर भाजी, टके सेर खाजा = ಕುಚೋದ್ಯದ ಅರಸನಿಗೆ ಕುಲಗೇಡಿ ಪ್ರಧಾನಿ

अंधों में काना सरदार = (1) ಕುರುಡರೊಳಗೆ ಮೆಳ್ಳನೇ ಶ್ರೇಷ್ಠ. (2) ಹಾಳೂರಿಗೆ ಉಳಿದವನೇ ಗೌಡ. (3) ಯಾರೂ ಇಲ್ಲದ ಊರಿಗೆ ಅಗಸ ಮಾಳಿಯೇ ಮುತ್ತೈದೆ.

अढ़ाई चावल की खिचड़ी अलग पकाना = ಬೆಕ್ಕಿನ ಬಿಡಾರ ಬೇರೆ.

अधजल गगरी छलकत जाय = ಅಲ್ಪ ವಿದ್ಯಾ ಮಹಾ ಗರ್ವಿ.

अधेला न दे, अधेली दे = ಒಂದು ಹತ್ತು ಕೊಡ, ಎರಡು ಹತ್ತು ಕೊಡುತ್ತಾನೆ

अपना वही जो आवे काम = ಸಮಯಕ್ಕೊದವನೆ ನೆಂಟ, ಕೆಲಸಕ್ಕೊದಗಿದವನೇ ಬಂಟ.

अपना ही सोना खोटा तो परखैया का क्या दोष = ನಮ್ಮ ಚಿನ್ನ ಚೆನ್ನಾಗಿದ್ದರೆ ಅಕ್ಕಸಾಲಿಗನೇನು ಮಾಡಿಯಾನು ?

अपनी करनी पार उतरनी = ಮಾಡಿದ್ದುಣ್ಣೋ ಮಹಾರಾಯ.

अपनी नाक कटे तो कटे दूसरे का सगुन तो बिगड़े = ತನ್ನ ಮೂಗು ಹೋದರೂ ಇನ್ನೊಬ್ಬರಿಗೆ ಅಪಶಕುನ ತೋರಿಸುತ್ತಾನೆ.

अपने मरे बिन स्वर्ग किसने देखा है = ತಾನು ಸಾಯಬೇಕು, ಸ್ವರ್ಗ ಪಡೆಯಬೇಕು.

अपने स्वार्थ को गधा चरावे = ಕಾರ್ಯವಾಸಿ ಕತ್ತೆ ಕಾಲುಕಟ್ಟು.

अब पछताने से क्या होत जब चिड़ियां चुग गईं खेत = (1) ಅಟ್ಟ ಮೇಲೆ ಒಲೆ ಉರಿಯಿತು, ಕೆಟ್ಟ ಮೇಲೆ ಬುದ್ಧಿ ಬಂತು. (2) ಕೋಟೆ ಹೋದ ಮೇಲೆ ಪಹರೆ ಕಾದರು.

अ[illegible]ख़ामोशी नीम-रज़ा = ಮೌನಂ ಸಮ್ಮತಿ ಲಕ್ಷಣಂ.

अशर्फ़ियां लुटें, कोयलों पर छाप = (1) ಮೊದೆ ಸೂರೆಯಾಗುತ್ತದೆ, ಹಿಡಿ ಹುಲ್ಲಿಗೆ ಒದ್ದಾಡುತ್ತಾನೆ (2) ಕೋಟೆ ಬಾಗಿಲಲ್ಲಿ ಹೋಗುವುದು ಕಾಣ, ಸೂಜಿಕಣ್ಣಿನಲ್ಲಿ ಹೋಗುವುದು ನೋಡುತ್ತಾನೆ.

आंखों के अंधे नाम नयनसुख = (1) ಹೆಸರು ಕ್ಷೀರಸಾಗರಭಟ್ಟ, ಮನೆ

ಯಲ್ಲಿ ಮಜ್ಜಿಗೆ ನೀರಿಗೆ ಗತಿಯಿಲ್ಲ. (2) ನೋಡಿದರೆ ಕುರುಡಿ, ಹೆಸರು ಚನ್ನಕ್ಕ. (3) ಹೆಸರು ಕೇಳಿದರೆ ಸುಂದರಿ, ಮುಖ ನೋಡಿದರೆ ಬಂದರಿ

आई तो ईद-बरात, न आई तो जुमेरात = ಕಾಸು ಇದ್ದರೆ ಕೊಡೆಯಾಲ, ಇಲ್ಲದಿದ್ದರೆ ನಡೆ ಆಲ!

आ बला, गले लगा = ಬೀದಿಯಲ್ಲಿ ಹೋಗುವ ಮಾರಮ್ಮ, ಮನೆಯಲ್ಲಿ ಹೊಕ್ಕು ಹೋಗಮ್ಮ.

आग लगने पर कुआं खोदना = ಮನೆಗೆ ಬೆಂಕಿ ಹತ್ತಿದಾಗ ಬಾವಿ ಕಡಿಯಲಿಕ್ಕೆ ಹೋದರು.

आग लगते झोपड़ा जो निकला सो लाभ = (1) ಬೆಂದ ಮನೆಗೆ ಹಿರಿದದ್ದೇ ಲಾಭ. (2) ಹುಚ್ಚುಮುಂಡೆ ಮದುವೆಯಲ್ಲಿ ಉಂಡವನೇ ಜಾಣ.

आगे कुआं, पीछे खाई = (1) ಮುಂದೆ ಹೋದರೆ ಬಾವಿ, ಹಿಂದೆ ಹೋದರೆ ಕೆರೆ (2) ಅತ್ತ ದರಿ, ಇತ್ತ ಪುಲಿ.

आधा तीतर, आधा बटेर = ಇತೋ ಭ್ರಷ್ಟಸ್ತತೋ ಭ್ರಷ್ಟಃ.

आप डूबे और को भी ले डूबे = ತಿಗಳ ತಾನು ಕೆಡುತ್ತಾ ಏಳು ನೆರೆ ಕೆಡಿಸಿದ.

आप भला तो जग भला = ಬಾಯಿ ಒಳ್ಳೇದಾದರೆ ಊರು ಒಳ್ಳೇದು.

आप मरे बिना स्वर्ग नहीं मिलता = ತಾನು ಸಾಯಬೇಕು, ಸ್ವರ್ಗ ಪಡೆಯಬೇಕು.

आप हारे बहू को मारे = ಅತ್ತೆ ಮೇಲಿನ ಕೋಪ ಕೊತ್ತಿ ಮೇಲೆ.

आप ही मिया मंगते, द्वार खड़े दरवेश = (1) ತರಗು ತಿನ್ನುವವನ ಮನೆಯಲ್ಲಿ ಹಪ್ಪಳ ಬೇಡುವನೊಬ್ಬ. (2) ಏಕಾದಶಿಯ ಮನೆಗೆ ಶಿವರಾತ್ರಿಯು ಔತಣಕ್ಕೆ ಬಂದಹಾಗೆ.

आम के आम, गुठलियों के दाम = (1) ಲಾಟಿಗೆ ಲಾಟು, ಹೊಳೆ ದಾಟು (2) ಗಂಟೂ ಉಳಿದು, ನಂಟೂ ಉಳಿಯುವುದು.

आम खाने से मतलब कि पेड़ गिनने से = ಸೀಮಾದರೇನು ನಾಮಾದರೇನು, ಬಾವಿಯಲ್ಲಿ ನೀರು ಬಂದರೆ ಸರಿ.

आमों की कमाई नीबू में गंवाई (1) ಹಾದರದಲ್ಲಿ ಬಂತು ಹುಯಿಲಿನಲ್ಲಿ ಹೋಯಿತು. (2) ಅವಾಂತರದಲ್ಲಿ ಸಿಕ್ಕಿದ ಕಂದುರೆ ದೇಶಾಂತರ ಓಡಿಹೋಯಿತು. (3) ಅನ್ಯಾಯದಲ್ಲಿ ಸಂಪಾದಿಸಿದ್ದು ಅಸಡ್ಡಾಳಾಗಿ ಹೋಯಿತು.

आसमान का थूका मुंह पर आता है = ಸೂರ್ಯನ ಮೇಲೆ ಸುರೆ ಚಲ್ಲಿದರೆ ಮೋರೆ ಮೇಲೆ ಬೀಳುವುದು.

आसमान से गिरा, खजूर में अटका = (1) ಕೈಗೆ ಬಂದರೂ ಬಾಯಿಗೆ ಬರಲಿಲ್ಲ. (2) ತುತ್ತು ಕೈಗೆ ಬಂದರೂ ಮತ್ತೆ ಬಾಯಿಗಿಲ್ಲ.

उंगली दे तो पहुंचा पकड़ना = (1) ಬೆರಳು ತೋರಿಸಿದರೆ ಕೈ ನುಂಗುತ್ತಾನೆ. (2) ಇತ್ತ ಬಾ ಅಂದರೆ ಹೆಗಲ ಮೇಲೆ ಹತ್ತಿಕೊಂಡ.

उधार का खाना फूस का तापना = ಹುಲ್ಲಿನ ಉರಿ, ಕನಸಿನ ಸಿರಿ ನಿಲ್ಲದು

उलटी बांस बरेली को = ಬೆಟ್ಟಕ್ಕೆ ಕಲ್ಲು ಹೊತ್ತ ಹಾಗೆ.

ऊंचे चढ़के देखा तो घर घर यही लेखा = ಎಲ್ಲರ ಮನೆಯ ದೋಸೆಯೂ ತೂತೆ.

ऊंट के मुंह में जीरा = ರಾವಣನ ಹೊಟ್ಟೆಗೆ ಅರಕಾಸಿನ ಮಜ್ಜಿಗೆ.

एक को छोड़ दो को धावे, ऐसा डूबे कि थाह न पावे = ಅತಿಯಾಸೆ ಗತಿ ಕೆಡಿಸಿತು.

एक चुप सौ को हरावे = (1) ಮೌನಂ ಸರ್ವತ್ರ ಸಾಧನಂ. (2) ಮಾತು ಬಂದಾಗ ನೋತುಹೋದವನೇ ಜಾಣ.

एक तवे की रोटी क्या मोटी क्या छोटी = ಕಬ್ಬು ಕೊನೆಯಿಂದ ಮೆದ್ದರೂ ಬುಡದಿಂದ ಮೆದ್ದರೂ ಸವಿಯೊಂದೇ.

एक तो करेला कडुआ, दूसरे नीम चढ़ा = ಅರೆಮರುಳನಿಗೆ ಮರುಳು ನಾಯಿ ಕಚ್ಚಿದಂತೆ.

एक नारी जब दो से फंसी जैसे सत्तर वैसे अस्सी = ಎರಡು ದೇವರ ನಂಬಿ ಕುರುಡ ದಾಸ ಕೆಟ್ಟ.

एक हाथ से ताली नहीं बजती = ಎರಡು ಕೈ ಸೇರಿದರೆ ಚಪ್ಪಾಳೆ.

ओखली में सर दिया तो (धमकों) मूसलों से क्या है डर = ಒರಳು ಕಲ್ಲಿಗೆ ತಲೆಯನ್ನು ಕೊಟ್ಟು ಮೇಲೆ ಒನಕೆ ಪೆಟ್ಟಿಗೆ ಅಂಜುವುದೇಕೆ ?

ओलती का पानी मोगरे पर नहीं चढ़ता = ನೀರು ಹಳ್ಳಕ್ಕೆ ಹೋದೀತೇ ಹೊರತು ದಿನ್ನೆಗೆ ಹೋದೀತೇ ?

ओस के चाटे प्यास नहीं बुझती = (1) ತುಂತುರು ಮಳೆಯಿಂದ ತೂಬಿನ ಕೆರೆ ತುಂಬೀತೆ? (2) ಎಂಜಲು ತಿಂದರೆ ಹೊಟ್ಟೆ ತುಂಬುವುದಿಲ್ಲ. (3) ಬೊಟ್ಟು ಸೀಪಿದರೆ ಹೊಟ್ಟೆ ತುಂಬೀತೇ

(कंगाली) मुफ़लिसी में आटा गीला = (1) ದುರ್ಭಿಕ್ಷದಲ್ಲಿ ಅಧಿಕಮಾಸ ಬಂದ ಹಾಗೆ (2) ಬರಗಾಲದಲ್ಲಿ ಅಧಿಕಮಾಸ ಬಂದಹಾಗೆ.

कबीरदास की उलटी बानी बरसे कामर भीजे पानी = ಕೊಂಕಣ ಸುತ್ತಿ ಮೈಲಾರಕ್ಕೆ ಹೋದಹಾಗೆ

कभी घी घना, कभी मुट्ठी भर चना, कभी वह भी मना = ಇದ್ದರೆ ಹಿರಿಯಕ್ಕ, ಇಲ್ಲದಿದ್ದರೆ ತಿರಿಯಕ್ಕ.

कभी नाव गाड़ी पर, कभी गाड़ी नाव पर = ಕಾಯಿಗೆ ಎಲೆ ಮರೆ, ಎಲೆಗೆ ಕಾಯಿ ಮರೆ.

कमबख़्त गये हाट, न मिला तराजू, न मिले बाट = (1) ನೀಗುವವನಿಗೆ ಭಾಗ ಸಿಕ್ಕಿದರೂ ಭೋಗಕ್ಕೆ ಬಾರದು.

(2) ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲುದ್ದ ನೀರು.

करे दाढ़ीवाला, पकड़ा जाय मूंछों-वाला = (1) ಹಂದಿಯುವರು ಹಾದರ ಮಾಡಿದರೆ ತಮಟೆಯುವರು ದಂಡ ತೆತ್ತರು. (2) ಬಸರೂರಿನವರು ಹಾದರ ಮಾಡಿದರೆ ಕುಮಟೆಯುವರು ದಂಡ ತೆರಬೇಕಂತೆ. (3) ಡೆಂಕಣಿ ಕೋಟೆಯುವನು ತಪ್ಪು ಮಾಡಿದರೆ ದಣಾಯಕನ ಕೋಟೆಯುವನನ್ನು ಗಲ್ಲಿಗೇರಿಸಿದರು. (4) ಹಣ್ಣು ತಿಂದವನು ತಪ್ಪಿಸಿಕೊಂಡ, ಸಿಪ್ಪೆ ತಿಂದವನು ಸಿಕ್ಕಿಕೊಂಡ. (5) ಎತ್ತಿಗೆ ಚಳಿಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರು.

कहां राजा भोज कहां भोजवा तेली = (1) ಸೇಕ ರಾವುತ ಎಲ್ಲಿ, ಗೋಕುಲಾಷ್ಟಮಿ ಎಲ್ಲಿ? (2) ನಾಯಿಯೆತ್ತ? ನಾಕಲೋಕವೆತ್ತ?

कहें तो मां मारी जाय, न कहें तो बाप कुत्ता खाय = ಹೇಳಿದರೆ ತಾಯಿ ಸಾಯುತ್ತಾಳೆ, ಹೇಳದಿದ್ದರೆ ತಂದೆ ನಾಯಿ ತಿನ್ನುತ್ತಾನೆ

कहे खेत की, सुने खलियान की = ಉಂಡೆಯೋನೋ ಗುಂಡ ಅಂದರೆ ಮುಂಡಾಸು ಮೂವತ್ತು ಮೊಳ ಅಂದ

क़ाज़ी दुबले क्यों शहर के अंदेशे से = ಹುರುಳಿ ಕಟ್ಟಿಗೆ ಬಂದವಗೆ ಕುದುರೆ ಬೆಲೆ ಯಾಕೆ?

कानी के ब्याह में सौ जोखें = ಮುಂಡೆ ಮದುವೆಗೆ ಮೂವತ್ತು ವಿಘ್ನ

काबुल में गदहे नहीं होते? = ಊರಿದ್ದ ಕಡೆ ಹೊಲಗೇರಿ.

काम का न काज का, दुश्मन अनाज का = ಉಂಬೊಕ್ಕೆ ಉಡೊಕ್ಕೆ ಅಣ್ಣಪ್ಪ.

किसी का घर जले कोई तापे = ಸೂಳೆ ಮನೆಗೆ ಬೆಂಕಿ ಬಿದ್ದರೆ ಪುಂಡಗಾರ ಅಂಡು ಕಾಸಿದ.

कुत्ते की दुम हज़ार बरस गाड़ी, फिर भी टेढ़ी की टेढ़ी रही = ನಾಯಿಯು ಬಾಲ ನಳಿಗೆಯಲ್ಲಿ ಹಾಕಿದರೆ ಡೊಂಕು ಬಿಟ್ಟೀತೆ?

कोठेवाला सेवे, छप्परवाला सोवे = ಆನೆ ತಿಂಬೋದು ಸೊಪ್ಪು, ಇರುವೆ ತಿಂಬೋದು ಸಕ್ಕರೆ.

कौआ चला हंस की चाल, अपनी चाल भी भूल गया = ಹಂಸದ ಹಾಗೆ ನಡೆಯಲಿಕ್ಕೆ ಹೋಗಿ, ಗುಬ್ಬಿ ಕುಪ್ಪಳಿಸಿ ಬಿದ್ದ ಹಾಗೆ

कौड़ी नहीं हो पास, तो मेला लगे उदास = ಕೈಯಲ್ಲಿ ಕಾಸಿಲ್ಲ, ಸಂತೆಯವನಿಗೂ ನನಗೂ ಮಾತಿಲ್ಲ.

खलील खां ने फ़ाख़्ता मार ली = ಬಾಳೆ ಗಿಡ ಕಡಿಯುವುದಕ್ಕೆ ನನ್ನ ಮಗ ಗೂಳಿಯ ಹಾಗೆ.

खाली बनिया क्या करे इस कोठी का धान उस कोठी में करे = (1) ಕೆಲಸವಿಲ್ಲದ ಬಡಗಿ ಮಕ್ಕಳ ಕುಂಡೆ ಕೆತ್ತಿದ. (2) ಕೆಲಸವಿಲ್ಲದ ಶಾನುಭೋಗ ಹಳೆಯ ಕಡತ ಹುಡು

ಕಿದ. (3) ಕೆಲಸವಿಲ್ಲದ ಕುಂಬಾರ ಮಕ್ಕಳ ಕುಂಡೆ ತಟ್ಟಿದ (4) ಶೆಟ್ಟಿಗೆ ಏನು ಕೆಲಸ ಅಂದರೆ ಅಳೆಯುವುದು ಸುರಿಯುವುದು.

खेत खाय गदहा, मार खाय जुलहा = ಬಸರೂರಿನವರು ಹಾದರ ಮಾಡಿದರೆ ಕುಮಟೆಯವರು ದಂಡ ತೆರಬೇಕಂತೆ.

खोदा पहाड़ और निकली चुहिया = ಬೆಟ್ಟ ಅಗೆದು ಇಲಿ ಹಿಡಿದ ಹಾಗೆ.

खोंगई कुतिया, मखमली झूल = ತೆಂಗಿನ ಮರಕ್ಕೆ ಪಟ್ಟೆ ಸೀರೆ ಕಟ್ಟಿದ ಹಾಗೆ.

गये कटक, रहे अटक = ತೀರ್ಥಕ್ಕೆ ಹೋಗಿ ಹೋರಾಟ ಮಾಡಿಕೊಂಡ

गये थे नमाज़ बख़्शाने, रोज़े गले पड़े = (1) ಪುರಾಣಕ್ಕೆ ಹೋಗಿ ಪ್ರಾಣ ಸಂಕಟ ಬಂತು. (2) ಸಿವಾಳಿ ಮಾಡೋದಕ್ಕೆ ಹೋಗಿ ದಿವಾಳಿಯಾದ.

गये थे हरिभजन को, ओटन लगे कपास = (1) ನೋಟಕ್ಕೆ ಹೋಗಿ, ಊಟ ಬಿಟ್ಟು, ಕಾಟ ತಂದುಕೊಂಡ. (2) ತೀರ್ಥಕ್ಕೆ ಹೋಗಿ ಹೋರಾಟ ಮಾಡಿಕೊಂಡ.

ग़रीब की लुगाई, सब की भौजाई = ಬಡವನ ಹೆಂಡತಿ ಊರಿಗೆಲ್ಲ ಅತ್ತಿಗೆ

गालवाला जीते, मालवाला हारे = (1) ಬಾಯಿದ್ದರೆ ಮಗ ಬದುಕ್ಯಾನು. (2) ಬಾಯುಳ್ಳವನು ಬರದಲ್ಲಿ ಬದುಕಿದ.

गुड़ दिये मरे तो विष क्यों दें = ನೀರು ಕೊಟ್ಟರೆ ಸಾಯುವವನಿಗೆ ವಿಷ ಕೊಡುವುದು ಯಾಕೆ ?

गेहूं के साथ घुन पिसना = ಕಡಲೆ ಸಂಗಡ ರಾಗಿ ಕೂಡಿ ಹುರಿದ ಹಾಗೆ.

घड़ी में माशा, घड़ी में तोला = ಹಣ್ಣುಸೊಪ್ಪು ಬೇಯಿಸುವುದರಲ್ಲಿ ಹದಿನೆಂಟು ಮನಸ್ಸು.

घर की मुर्गी दाल बराबर = ಹಿತ್ತಲ ಗಿಡ ಮದ್ದಲ್ಲ, ಮಕ್ಕಳ ಮಾತು ನಿಜವಲ್ಲ.

घर का जोगी जोगड़ा, आन गांव का सिद्ध = ಹಿತ್ತಲು ಗಿಡ ಮದ್ದಲ್ಲ.

घर पर फूस नहीं नाम धनपत = ದುಡ್ಡಿಲ್ಲ ಕಾಸಿಲ್ಲ, ಹೆಸರು ಸಂಪತ್ತಯ್ಯಂಗಾರ್.

घी का लड्डू टेढ़ा भी भला = ಕಬ್ಬು ಡೊಂಕಾದರೆ ಸವಿ ಡೊಂಕೇ ?

चट मंगनी, पट ब्याह = ಚುಟಿಕೆಯಲ್ಲಿ ಚಪ್ಪರ.

चलनी में दुहे, कर्मों को दोष दे = ಅಂಗಳದಲ್ಲಿ ಹೇತು, ಮಂಗಳ ಕಷ್ಟ ಅಂದಹಾಗೆ

चींटी को जो मौत आती है तो पर निकलते हैं = (1) ಕೇಡು ಬರುವ ಕಾಲಕ್ಕೆ ಕೂಡುವುದು ದುರ್ಬುದ್ಧಿ. (2) ವಿನಾಶಕಾಲೆ ವಿಪರೀತ ಬುದ್ಧಿ.

चोर का गवाह गिरहकटा = ಜೇನಗಾರನಿಗೆ ಸಿಕಲಿಗಾರ ಸಾಕ್ಷಿ.

चोर का मन बुकचे में = ಮಾರಿಯ

ಕಣ್ಣು ಹೋಕನ ಮೇಲೆ

चोर की दाढ़ी में तिनका = (1) ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿದ. (2) ಕಳ್ಳನ ಮನಸ್ಸು ಹುಳ್ಳಹುಳ್ಳಗೆ.

चोर के घर छिछोर = ಕಳ್ಳರಲ್ಲಿ ಕಡುಕಳ್ಳರು ಹೊಕ್ಕಹಾಗೆ.

चोर चोर मौसेरे भैया = ಕಳ್ಳಕಳ್ಳಗೆ ನಂಟು, ಹುಳಿ ಮೆಣಸಿಗೆ ನಂಟು.

चौबे छब्बे होने गये, दूबे ही रह गये = (1) ಬಂಡನ ಸ್ನೇಹಮಾಡಿ ಇದ್ದ ಬಂಡ ಕಳಕೊಂಡ. (2) ಮಕ್ಕಳಿಲ್ಲವೆಂದು ಮೈಲಾರಕ್ಕೆ ಹೋದರೆ ಮೈಯೆಲ್ಲಾ ಇಳಿದು ಹೋಯಿತು. (3) ಇದ್ದದ್ದೂ ಹೋಯಿತು ಮದ್ದಿನ ಗುಣ.

छः महीने की मेमियानी, एक बच्चा बियानी = ಪರ್ವತ ಅರವತ್ತು ದಿನ ಪ್ರಸವವೇದನೆ ಪಟ್ಟು ಕಡೆಗೆ ಚುಂಡಿಲಿ ಹೆತ್ತಿತಂತೆ.

छछूंदर के सिर में चमेली का तेल = ಗಂಧದ ಕೊರಡು ಸಮಗಾರನಲ್ಲಿ ಬಿದ್ದಹಾಗೆ.

छत पर फूस नहीं, ड्योढ़ी पर नाच = (1) ಬಂಡವಾಳವಿಲ್ಲದ ಬಡಾಯಿ. (2) ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು. (3) ಕುಡಿಯುವುದು ಅಂಬಲಿ ಮುಕ್ಕಳಿಸುವುದು ಪನ್ನೀರು.

जब नाचने निकली तो घूंघट क्या = ಕುಣಿಯುವಾಗ ಮುಸುಕೇಕೆ ?

जहां गुड़ होगा, वहां मक्खियां आयेंगी = ಬೆಲ್ಲವಿದ್ದ ಕಡೆ ನೊಣ, ದಡ ನಾಲ್ಕಕ್ಕೆ ಮಣ.

जहां न पहुंचे रवि, वहां पहुंचे कवि = ರವಿ ಕಾಣದ್ದು, ಕವಿ ಕಾಣುವನು.

जागे सो पावे, सोवे सो खोवे = ಮಾಡಿದವ ಉಂಡಾನು, ಮಲಗಿದವ ಕೆಟ್ಟಾನು.

जान बची लाखों पाये = ಬೀಸುವ ದೊಣ್ಣೆ ತಪ್ಪಿದರೆ ಸಾವಿರ ಆಯುಸ್ಸು.

जितना गुड़ डालोगे उतना ही मीठा होगा = ಬೆಲ್ಲ ಹಾಕಿದಷ್ಟು ಪಾಯಸ ಸಿಹಿ.

जिस पत्तल में खाना उसी में छेद करना = (1) ಅನ್ನ ಇಕ್ಕಿದ ಮನೆಗೆ ಕನ್ನ ಇಕ್ಕಿದ ಹಾಗೆ. (2) ಉಂಡ ಮನೆಗೆ ಎರಡು ಬಗೆಯುವುದು.

जिसकी लाठी उसकी भैंस = ಬಲವಿದ್ದರೆ ನೆಲ.

जैसा दाम, वैसा काम = (1) ಮಜ್ಜಿಗೆಗೆ ತಕ್ಕ ರಾಮಾಯಣ ಹೇಳಿದ. (2) ಕಾಸಿಗೆ ತಕ್ಕ ಕಜ್ಜಾಯ.

जैसा देस, वैसा भेस = ವೇಷಕ್ಕೆ ತಕ್ಕ ಹಾಸ್ಯ, ದೇಶಕ್ಕೆ ತಕ್ಕ ಭಾಷೆ.

जैसा पीवे पानी वैसी बोले बानी = ಕುಲಕ್ಕೆ ತಕ್ಕ ಬುದ್ಧಿ, ಆಹಾರಕ್ಕೆ ತಕ್ಕ ಬುದ್ಧಿ.

जैसा सूत वैसी फेटी, जैसी मां वैसी बेटी = ತಾಯಂತೆ ಮಕ್ಕಳು,

ನೂಲಿನಂತೆ ಸೀರೆ.

जैसी जाकी भावना, तैसी ताकी सिद्धि = ಮನಸ್ಸಿನಂತೆ ಮಹಾದೇವ.

जैसे गंगा नहाये, वैसे फल पाये = ಮಾಡಿದ್ದುಣ್ಣೋ ಮಹಾರಾಯ.

जैसे तेरी तिलचावरी, वैसे मेरे गीत = (1) ಮಜ್ಜಿಗೆಗೆ ತಕ್ಕ ರಾಮಾಯಣ ಹೇಳಿದ (2) ರಾಸಿಗೆ ತಕ್ಕ ಕಜ್ಜಾಯ.

झटपट की घानी आधा तेल आधा पानी = ಅವಸರಕ್ಕೆ ಮೂರು ಮೊಳ ನೇದ ಹಾಗೆ.

झोपड़ी में रहे महलों का स्वप्न देखे = ತಿಪ್ಪೆ ಮೇಲೆ ಮಲಗಿ ಉಪ್ಪರಿಗೆ ಕನಸು ಕಂಡ.

टके की बुढ़िया, नौ टका मुड़ाई; दमड़ी की बुढ़िया, टका सिर मुड़ाई = (1) ಅಸಲು ಹಾಗ, ಕೂಲಿ ಮುಪ್ಪಾಗ. (2) ದುಗ್ಗಾಣಿ ಮುಂಡೆಗೆ ದುಡ್ಡು ಕೊಟ್ಟು ತಲೆ ಬೋಳಿಸಿದಹಾಗೆ

टांय टांय फिस = ಅಬ್ಬರ ಹೆಚ್ಚು, ಆದಾಯ ಕಡಮೆ.

टीके का काम फीका = ಅಳು ಮಾಡಿದ ಕೆಲಸ ಹಾಳು.

डूबा वंश कबीर का जो उपजा पूत कमाल = ಕುಲಕ್ಕೆ ಮೃತ್ಯು, ಕೊಡಲಿ ಕಾವು

ढाक के सदा तीन पात = ಅರುಗಾಲ ಮಳೆ ಹೊಯ್ದರೂ ಮುತ್ತುಗಕ್ಕೆ ಮೂರೇ ಎಲೆ.

तन्दुरुस्ति हज़ार न्यामत है = ಆರೋಗ್ಯವೇ ಭಾಗ್ಯ.

तबेले की बला बन्दर के सिर = (1) ಹಾಸಿದವಳು ಯಾರೆಂದರೆ ಮಾಸಿದ ಬಟ್ಟೆಯವಳು. (2) ಅನಿಷ್ಟಕ್ಕೆ ಶನೀಶ್ವರ ಗುರಿ.

ताक पर बैठे उल्लू, मांगे भर भर चुल्लू = ಚೇಳಿಗೆ ಪಾರುಪತ್ಯ ಕೊಟ್ಟರೆ ಜಾವಕ್ಕೊಂದಾವರ್ತಿ ಮುಟ್ಟಿಸಿತು

तीन कनौजिया तेरह चूल्हा = ಅರಾಳು, ಮೂರು ಫಾಡು.

तीन त्रिकट, महा विकट = ಒಬ್ಬರಿದ್ದರೆ ಏಕಾಂತ, ಮೂವರಿದ್ದರೆ ಲೋಕಾಂತ.

तुम डार डार, हम पात पात = ನೀವು ನಾಗಲೋಕದವರಾದರೆ ನಾವು ನಾಕಲೋಕದವರು.

दबनी सो हारसी, यही मियां की फारसी = (1) ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು. (2) ಸಾದ ಎತ್ತಿಗೆ ಎರಡು ಹೇರು.

दमड़ी की घोड़ी छः पन्सेरी दाना = ಹಾಗದ ಕೋಳಿ ಮುಪ್ಪಾಗದ ಮೇವು ತಿಂತು.

दमड़ी की हांडी गयी, कुत्ते की जात तो पहचानी गयी = ಮಗ ಸೋತರೂ ಜೂಜಿನ ಒಳವು ಕಲಿತ.

दस नकटों में नाकवाला नक्कू = ಬತ್ತಲೆ ಸೀಮೆಯಲ್ಲಿ ಬಟ್ಟೆಯನ್ನುಟ್ಟ

ವನೇ ಹುಚ್ಚು.

दाता दे, भंडारी का पेट फटे = ದೇವರು ವರ ಕೊಟ್ಟರೂ ಪೂಜಾರಿ ವರ ಕೊಡ.

दाल भात में मूसलचंद = ಶಿವಪೂಜೆಯಲ್ಲಿ ಕರಡಿ ಬಂದಹಾಗೆ.

दिल लगा गधी से तो परी क्या चीज़ है = ಹೆತ್ತವರಿಗೆ ಹೆಗ್ಗಣ ಮುದ್ದು, ಕೂಡಿದವರಿಗೆ ಕೋಡಗ ಮುದ್ದು.

दुविधा में दोऊ गये, माया मिली न राम = (1) ಎರಡು ದೇವರು ನಂಬಿ ಕುರುಡು ದಾಸಯ್ಯ ಕೆಟ್ಟ. (2) ಹಿಂದಿನ ಮನೆಯು ಕೋರಾನ್ನ ಹೋಯಿತು, ಮುಂದಿನ ಮನೆಯು ಭಿಕ್ಷಾನ್ನ ಹೋಯಿತು. (3) ಎರಡು ಕಣ ಕಾದು ದಾಸಯ್ಯ ಕೆಟ್ಟ

दूर के ढोल सुहावने = ದೂರದ ಬೆಟ್ಟ ನುಣ್ಣಗೆ.

दूल्हा को पत्तल नहीं, बजनिये को थाली = ಹನುಮಂತರಾಯ ಹಗ್ಗ ತಿಂದರೆ ಪೂಜಾರಯ್ಯ ಶಾವಿಗೆ ಬಯಸಿದನಂತೆ.

देवी मदार का कौन साथ = ಗೋಕುಲಾಷ್ಟಮಿಗೂ ಹುಸೇನಸಾಬರಿಗೂ ಏನು ಸಂಬಂಧ ?

दो मुल्ला में मुर्गी हराम = ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು.

दोनों दीन से गये पांडे, हलुआ मिली न मांडे = ಹಿಂದಿನ ಮನೆಯು ಕೋರಾನ್ನ ಹೋಯಿತು, ಮುಂದಿನ ಮನೆಯು ಭಿಕ್ಷಾನ್ನ ಹೋಯಿತು.

धोती के भीतर सब नंगे = (1) ಊರಿದ್ದ ಕಡೆ ಹೊಲಗೇರಿ. (2) ಎಲ್ಲರ ಮನೆಯ ದೋಸೆಯೂ ತೂತೇ

धोबिन पर बस न चले, गधैया के कान उमेठे = ಅತ್ತೆಯ ಮೇಲಿನ ಕೋಪ ಕೊತ್ತಿಯ ಮೇಲೆ

धोबी रोवे धुलाई को, मियां रोवे कपड़ों को = (1) ಹಣದವರು ಹಣಕ್ಕೆ ಅತ್ತರೆ ಕೊರವ ದುಡ್ಡಿಗೆ ಅತ್ತ. (2) ಅಜ್ಜಿಗೆ ಅರಿವೆ ಚಿಂತೆ, ಮಗಳಿಗೆ ಮಿಂಡನ ಚಿಂತೆ.

नंगी क्या नहायेगी, क्या निचोड़ेगी = ಹಿಂಡಕ್ಕೆ ಬಗೆಯಿಲ್ಲದವನು ದಂಡವೇನು ಕೊಟ್ಟಾನು ?

नकटी के सामने नाक पकड़ना = ಮೂಗನೆದುರಿಗೆ ಮೂಗು ತುರಿಸಿ ಕೊಂಡಹಾಗೆ

नदी में रहकर मगर से वैर = ಇದ್ದೂರಿಗೆ ಹಗೆಸಲ್ಲ, ಕದ್ದುಕೊಂಬುವರ ನೆರೆಸಲ್ಲ.

नया मुसल्ला अल्लाह ही अल्लाह पुकारे = ಹೊಸ ಅಗಸ ಗೋಣಿ ಎತ್ತೆತ್ತಿ ಒಗೆದ.

नाई की बारात में जने जने ठाकुर = ಎಲ್ಲರೂ ಪಲ್ಲಕ್ಕಿಯಲ್ಲಿ ಕೂತರೆ ಹೊರೆಯೋರು ಯಾರು ?

नाच न जाने आंगन टेढ़ा = (1)

ಕುಣಿಯಲಿಕ್ಕೆ ತಿಳಿಯದಿದ್ದರೆ ಅಂಗಳ ಓರೆ ಎಂಬಂತೆ (2) ಕುಣಿಯಲಾರದ ಸೂಳೆ ನೆಲ ಡೊಂಕೆಂದಳು.

नाचने निकली तो घूंघट काहे का = ಕುಣಿಯುವುದಕ್ಕೆ ಹೊರಟ ಮೇಲೆ ಮುಸುಕೇಕೆ ?

नातिन सिखावे आजी को कि बारह ड्योढ़े आठ = (1) ಅರು ಹೆತ್ತವಳಿಗೆ ಮೂರು ಹೆತ್ತವಳು ಮುಲುಕು ಕಲಿಸಿದಳಂತೆ. (2) ಅಜ್ಜಿಗೆ ಮೊಮ್ಮಗ ಆಕಳಿಕೆ ಕಲಿಸಿದನಂತೆ. (3) ತಾತನಿಗೆ ಮೊಮ್ಮಗ ಕೆಮ್ಮು ಕಲಿಸಿದನಂತೆ.

नौ सो चूहे खाके बिल्ली चली हज को = (1) ಸೂಳೆ ಮುದ್ಯಾಗಿ ಶೀಲ ಹಿಡುಕೊಂಡಂತೆ. (2) ಸೂಳೆ ಮುದ್ಯಾಗಿ ಗೊರವಿತಿಯಾದಳು.

पढ़े न लिखे नाम विद्यासागर = ವಿದ್ಯೆಯಿಲ್ಲ ಬುದ್ಧಿಯಿಲ್ಲ, ಹೆಸರು ಸರಸ್ವತಮ್ಮ.

पराये धन पर लक्ष्मीनारायण = (1) ಅತ್ತೆಯ ತುರುಬು ಸೊಸೆಗೆ ದಾನ. (2) ಅಗಸರ ಕತ್ತೆ ದೊಂಬರಿಗೆ ತ್ಯಾಗ.

पहाड़ खोदके चूहा पकड़ना = ಬೆಟ್ಟ ಅಗೆದು ಇಲಿ ಹಿಡಿದ ಹಾಗೆ.

पांडे जी पछताओगे वही चने की खाओगे = ಅದೇ ಉಂಡೇನು, ಕಡ ತಿನಿ.

*पासा पड़े तो दांव, हाकिम करे सो न्याव = (1) ದೊಡ್ಡವನಾಡಿದ್ದೇ ಆಟ, ಬಡವನಾಡಿದ್ದೇ ಬಂಡಾಟ. (2) ಪುಣ್ಯವಂತ ಹಾಡಿದ್ದೇ ರಾಗ, ವೈದ್ಯ ಹೇಳಿದ್ದೇ ರೋಗ (3) ಅತ್ತೆ ಒಡೆದ ಮಡಕೆಗೆ ಬೆಲೆಯಿಲ್ಲ.

फिसल पड़े कि हर गंगा = (1) ಸಂಕ ಮುರಿದಲ್ಲೇ ಸ್ನಾನ, ಗ್ರಹಚಾರ ಹಿಡಿದಲ್ಲೇ ದಾನ. (2) ದೊಂಬ ಬಿದ್ದ, ಇದು ಒಂದು ಲಾಗ ಅಂದ (3) ಜಟ್ಟಿ ಜಾರಿ ಬಿದ್ದರೆ ಅದೂ ಒಂದು ವರಸೆ.

फुई फुई करके तालाब भरता है (1) ಹನಿಗೂಡಿದರೆ ಹಳ್ಳ, ತೆನೆಗೂಡಿದರೆ ಭತ್ತ. (2) ಹಲವು ಹಳ್ಳ ಕೂಡಿ ಒಂದು ಹೊಳೆಯಾಯಿತು.

फूल नहीं पंखड़ी हो सही = ಹೂವಿಡುವ ಕಡೆ ಎಸಳು.

बंदर का हाल मुछंदर जाने = ಕಳ್ಳನ ಗುಟ್ಟು ಕಳ್ಳನೇ ಬಲ್ಲ.

बंदर की आशनाई, घर में आग लगाई = (1) ಅಲ್ಪ ಸಂಗ ಅಭಿಮಾನ ಭಂಗ. (2) ಬುದ್ಧಿಯಿಲ್ಲದವನ ಸ್ನೇಹ ಇದ್ದ ಮಾನಕ್ಕೆ ಹಾನಿ.

बंदर के हाथ आइना = ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ.

बंदर क्या जाने अदरक का स्वाद = (1) ಕತ್ತೆ ಮೊಸರನ್ನದ ರುಚಿಬಲ್ಲುದೇ? (2) ಕತ್ತೆ ಬಲ್ಲುದೆ ಹೊತ್ತ ಕಸ್ತೂರಿಯ ಪರಿಮಳವ ?

बकरी जान से गयी, खानेवाले को मज़ा न आया = ವ್ರತ ಕೆಟ್ಟರೂ

ಸುಖವಿಲ್ಲ.

बगल में लड़का, शहर में ढिंढोरा =(1) ಕರುವ ಕಂಕುಳಹೊತ್ತುಕೊಂಡು ಊರೆಲ್ಲ ಹುಡುಕಿದ. (2) ಕಂಕುಳಲ್ಲಿ ಮಗು ಎತ್ತಿಕೊಂಡು ಊರೆಲ್ಲ ಹುಡುಕಿದರು.

बज़ाज़ की गठरी का झींगुर मालिक = ಹೇಳಿ ಬೀಗಿಗೆ ದೊಣ್ಣಪ್ಪನಾಯಕನ ಅಪ್ಪಣೆಯೇ ?

बड़े आदमी ने दारू खाई तो कहा सादा मिज़ाज़, गरीब ने दाल खाई तो कहा कंगाल है = ದೊಡ್ಡವನುಂಡರೆ ಮದ್ದು, ಬಡವನುಂಡರೆ ಹೇಸಿಗೆ

बड़े बड़े हाथी तो बह गये, गधहा पूछे केतना पानी = (1) ಎಂತೆಂತಾ ದೇವರಿಗೆಲ್ಲಾ ಅಂತರಾಟ, ಕಾಲ್ಭೈರಕ ದೇವರಿಗೆ ಕೈಲಾಸವೇ? (2) ಎಂತೆಂತವರು ಅಂತೇ ಹೋದವರು, ಸಂಕ್ರಾಂತಿ ಬಂದು ಹುಳಿದೋಸೆ ಬೇಡಿತು.

बत्तीस दांतों में जीभ = ಹಲ್ಲುಗಳ ನಡುವೆ ನಾಲಿಗೆ ಸಿಕ್ಕಿರುವ ಹಾಗೆ

बन गये कि लाला जी और बिगड़ गये तो चूतिया = ಬದುಕಿದರೆ ಬಡಾ ಸಾಬ್, ಕೆಟ್ಟರೆ ಫಕೀರ್ ದಾಸ್.

बनिया का बेटा कुछ देख ही के गिरता है = ಲಾಭವಿಲ್ಲದ ಶೆಟ್ಟಿ ಹಳ್ಳಿಗೆ ಹೋಗ.

बनिये की सलाम बेगरज नहीं होती = ಲಾಭವಿಲ್ಲದ ಶೆಟ್ಟಿ ಹಳ್ಳಿಗೆ ಹೋಗ.

बहती गंगा धो ले पांव =(1) ಗಾಳಿ ಬಂದಾಗ ತೂರಿಕೊ (2) ಹಾಲಿದ್ದಾಗಲೇ ಹಬ್ಬಮಾಡು

बांबी में हाथ तू डाल, मंत्र मैं पढ़ूं = ಕಂಡವರ ಮಕ್ಕಳನ್ನು ಬಾವಿಯಲ್ಲಿ ದೂಡಿ ಆಳ ನೋಡಿದ ಹಾಗೆ.

बाढ़ ही जब खेत को खाय, तब रखवाली कौन करे = ಬೇಲಿಯೆದ್ದು ಹೊಲ ಮೇಯುವಾಗ್ಯೆ ಕಾಯುವವರು ಯಾರು ?

बाप भला न भैया, सब से भला रुपैया = ದುಡ್ಡಿದ್ದವನೆ ದೊಡ್ಡಪ್ಪ.

बाप ही मारे और बाप ही बाप पुकारे = ಅಪ್ಪ ಹೊಡೆದರೆ ಅಪ್ಪ ಅಪ್ಪ ಅಂತಲೇ ಅಳುತ್ತೆ.

बिच्छू का मंतर न जाने, सांप के बिल में हाथ डाले = ಚೇಳಿನ ಮಂತ್ರವನ್ನರಿಯದವ ಹಾವಿನ ಹುತ್ತಕ್ಕೆ ಕೈ ಹಾಕಿದ ಹಾಗೆ

बिना दबाये तिलों में से तेल नहीं निकलता = ತಾಗದೆ ಬಾಗದು, ಬಿಸಿಯಾಗದೆ ಬೆಣ್ಣೆ ಕರಗದು.

बिल्ली का खेल, चूहों की मौत = (1) ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ. (2) ಬೀಳಿಗೆ ಚಂಗಾಟ, ಇಲಿಗೆ ಪ್ರಾಣಸಂಕಟ.

बिल्ली के भाग से छींका टूटा = ನೆಲುವು ಹರಿದು ಬೆಕ್ಕಿನ ಮುಂದೆ ಬಿದ್ದ ಹಾಗೆ.

बूंद बूंद करके तालाब भरता है = ಹನಿಗೂಡಿದರೆ ಹಳ್ಳ.

बैल का बैल गया, नौ हाथ का पगहा लेता गया = ಎತ್ತಿಗೆ ಎತ್ತೂ ಹೋಯಿತು, ಕವುದಿಗೆ ಕವುದಿಯೂ ಹೋಯಿತು.

बैल न कूदा कूदी गौन, यह तमाशा देखे कौन = ಎತ್ತು ಹಾರುವುದಕ್ಕೆ ಮುಂಚೆ ಗೋಣಿ ಹಾರಿತು.

ब्याह हुआ नहीं, गौने का झगड़ा = ಅಸಲಿಗೆ ಮೋಸ, ಬಡ್ಡಿಗೆ ಗುದ್ದಾಟ

भागते भूत की लंगोटी ही सही = ಬೆಂದ ಮನೆಗೆ ಹಿರಿದದ್ದೇ ಲಾಭ

भावज की थैली और सर्राफ़ा करे देवरा = ಅತ್ತೆಯ ತುರುಬು ಮಾವಗೆ ದಾನ

भैंस के आगे बीन बजाये = ಕೋಣನ ಮುಂದೆ ಕಿನ್ನರಿ ಬಾರಿಸಿದಹಾಗೆ.

भोग भाग छत्तीस राग = ಬೆಲ್ಲದ ದೇವಗೆ ಅಲ್ಲೇ ನೈವೇದ್ಯ.

मंगनी की चाद्दर, ता पर पचास की आद्दर = ಎರವಿನ ಚಿನ್ನ ಧರಿಸಿ ತಾನೂ ಅರಸಿ ಎಂದಳು.

मंगनी के बैल के दांत नहीं देखते = (1) ಧರ್ಮಕ್ಕೆ ಕೊಟ್ಟ ಎಮ್ಮೆ ಹಲ್ಲು ಹಿಡಿದು ನೋಡಿದ. (2) ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿ ನೋಡಿದ.

मथरा मदारी का क्या साथ = ಗುಲಾಂ ಸಾದಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ?

मन के लड्डुओं से भूख नहीं मिटती = ಬರಹದಲ್ಲಿದ್ದ ಕಂ ಮಂ ಹಾಕೀತೇ ?

मन चंगा तो कठौती में गंगा = ಮನಸ್ಸಿನಂತೆ ಮಹಾದೇವ.

मरज़ बढ़ता गया, ज्यों ज्यों दवा की = ಇದ್ದದ್ದೂ ಹೋಯಿತು ಮದ್ದಿನ ಗುಣ.

मरी भैंस का दूध गाढ़ा = ಸತ್ತ ಎಮ್ಮೆಗೆ ಹಾಲು ಹೆಚ್ಚು.

मरे पर सौ दुर्रे = ತೋಳ ಗುಂಡಿಗೆ ಬಿದ್ದರೆ ಅಳಿಗೊಂದು ಕಲ್ಲು.

मांगे भीख, पूछे गांव की जमा = ನಡೆಯೋದು ಕಾಲ್ನಡೆ, ಮಾತು ಪಾಲಕಿಯ ಮೇಲೆ.

मान न मान, मैं तेरा मेहमान = ಅತ್ತು ಕರೆದು ಔತಣಕ್ಕೆ ಹೇಳಿಸಿಕೊಂಡನು.

मियां की दौड़ मसजिद तक = ದೊರೆಯುತನಕ ದೂರು, ಹೊಳೆಯ ತನಕ ಓಟ.

मियां गुड़ बराबर = [जितनी आमदनी उतना खर्च =] ಅಜ್ಜ ನೂತದ್ದೆಲ್ಲಾ ಅಜ್ಜನ ಉಡದಾರಕ್ಕಾಯಿತು.

मुंह में रामराम, बगल में छुरी = (1) ಬಾಯಿಯಲ್ಲಿ ಬಸಪ್ಪ, ಹೊಟ್ಟೆಯಲ್ಲಿ ವಿಷಪ್ಪ. (2) ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ.

यार का गुस्सा भतार के ऊपर = ಅತ್ತೆಯ ಮೇಲಿನ ಕೋಪ ಕೊತ್ತಿಯ ಮೇಲೆ.

रंडी किसकी जोरू और भडुआ किसका साला = (1) ಸೂಳೆ ಯಾರಿಗೆ ಹೆಂಡತಿ, ದೊರೆ ಯಾರಿಗೆ ಅಪ್ಪ. (2) ಅರಸು ಯಾರಿಗೆ ಅಪ್ಪ, ಸೂಳೆ ಯಾರಿಗೆ ಅವ್ವ ?

रख पत रखा पत = ಮಾನ ಕೊಟ್ಟು ಮರ್ಯಾದೆ ತಕ್ಕೊಳ್ಳಬೇಕು.

रस्सी जल गयी, पर ऐंठन न गयी = ಹಗ್ಗ ಸುಟ್ಟರೆ ಹುರಿ ಹೋದೀತೇ ?

राजा किसके पाहुने, और योगी किसके मीत = ಅರಸು ಯಾರಿಗೆ ಅಪ್ಪ, ಸೂಳೆ ಯಾರಿಗೆ ಅವ್ವ ?

राम के न रहीम के = ಅತ್ತ ಗಂಡಗೆ ಅಲ್ಲ. ಇತ್ತ ಮಿಂಡಗೆ ಅಲ್ಲ.

रोग का घर खांसी [और लड़ाई का घर हांसी] = ಉಗುಳಿ ಉಗುಳಿ ರೋಗ, (ಬೊಗಳಿ ಬೊಗಳಿ ರಾಗ)

लगा तो तीर नहीं तो तुक्का = ಗೆದ್ದರೆ ಆಡುವುದಕ್ಕೆ ಬಂದಿದ್ದೆವು. ಸೋತರೆ ನೋಡುವುದಕ್ಕೆ ಬಂದಿದ್ದೆವು ಎಂಬಂತೆ.

लड़के को जब भेड़िया ले गया तब टट्टी बांधी = ಅಟ್ಟ ಮೇಲೆ ಒಲೆ ಉರಿಯಿತು, ಕೆಟ್ಟ ಮೇಲೆ ಬುದ್ಧಿ ಬಂತು.

लेने के देने पड़े = (1) ಪುಣ್ಯಕ್ಕೆ ಹೋದರೆ ಪಾಪ ಬಂತು. (2) ಮಾಡುವುದಕ್ಕೆ ಹೋಗಿ ಮಾಡಿಸಿಕೊಂಡ.

लौंडी बनकर कमाना और बीबी बनकर खाना = ಆಳಾಗಿ ದುಡಿದು ಅರಸಾಗಿ ಉಣ್ಣಬೇಕು.

वक्त पड़े पर जानिये को बैरी को मीत = ಸಮಯಕ್ಕಾದವನೇ ನೆಂಟ, ಕೆಲಸಕ್ಕೊದಗಿದವನೇ ಬಂಟ

वही जोरू का भाई, वही साला = ಅಳಿಯನಲ್ಲ. ಮಗಳ ಗಂಡ.

वही फूल जो महेश चढ़े = (1) ಶಂಖದಲ್ಲಿ ಬಂದದ್ದೇ ತೀರ್ಥ. (2) ಆನೆ ಮೆಟ್ಟಿದ್ದೆ ಸದ್ದು, ಸೆಟ್ಟಿ ಬಿಟ್ಟಿದ್ದೆ ಪಟ್ಟಣ.

विधि का लिखा को मेटनहारा = ನೊಸಲಿನ ಬರಹ ಬಸಲೆಯಿಂದ ಒರೆಸಬಹುದೇ ?

शेख क्या जाने साबुन का भाव = ಅಜಕಾರನ ಮನೆಯ ತೊತ್ತು ನಾಣ್ಯ ನೋಟವ ಬಲ್ಲಳೇ ?

सदा ढाक के तीन पात = ಅರುಗಾಲ ಮಳೆ ಹೊಯ್ದರೂ ಮುತ್ತುಗಕ್ಕೆ ಮೂರೇ ಎಲೆ.

सब पीर छूट गये, पकड़ी गयी बीबी नूर = ಹಣ್ಣು ತಿಂದವನು ನುಣುಚಿಕೊಂಡ, ಸಿಪ್ಪೆ ತಿಂದವನು ಸಿಕ್ಕಿಕೊಂಡ.

सब रामायण पढ़ गये, सीता केकी जोय = ಬೆಳಗಾನ ರಾಮಾಯಣ ಕೇಳಿ ರಾಮನಿಗೆ ಸೀತೆ ಏನಾಗಬೇಕೆಂದ.

सयाने का गू तीन जगह = ಜಾಣ